॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೧೫

ಭೀಷ್ಮಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿಷಡ್ಗುರುಶಾರ್ದೂಲರ

ಲಕ್ಷಾಲಂಕಾರದೊಂದಿಗೆ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಕೃಪೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ಪಿ. ಎಸ್. ಶೇಷಗಿರಿ ಆಚಾರ್ಯ, ಮೈಸೂರು.

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರೆ

ಶ್ರೀಪಲಿಮಾರು ಮಠ, ಉಡುಪಿ.

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೧೫

ಭೀಷ್ಮಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜಗುರುಸಾರ್ವಭೌಮರ

ಲಕ್ಷಾಲಂಕಾರದೊಂದಿಗೆ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ಪಿ. ಎಸ್. ಶೇಷಗಿರಿ ಆಚಾರ್ಯ, ಮೈಸೂರು.

ಪ್ರಕಾಶಕರು :

ತತ್ತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರಿ

ಶ್ರೀಪಲಿಮಾರು ಮಠ, ಉಡುಪಿ.

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೧೫

ಭೀಷ್ಮಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷಾಲಂಕಾರದೊಂದಿಗೆ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ಪಿ. ಎಸ್. ಶೇಷಗಿರಿ ಆಚಾರ್ಯ, ಮೈಸೂರು.

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ಭೀಷ್ಮಪರ್ವ-ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಈ ಕೃತಿಯು ತೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತನಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀ ಶ್ರೀವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣಗೊಂಡಿತು.

ಭೀಷ್ಮಪರ್ವ - ಭಾಗ ೧೫

© ತತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN: 978-93-81807-72-9

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	XII + 632 = 634
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 425/-**
ಅನುವಾದಕರು	-	ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು.
ಪ್ರಕಾಶಕರು	-	ತತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಸಂಸ್ಕೃತ ಶ್ಲೋಕ ಲಿಪ್ಯಂತರ	-	ಶ್ರೀ ಸುಬ್ಬಣ್ಣ ಬೆಂಗಳೂರು
ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ	-	ಎಂ. ಶರತ್ ಚಂದ್ರ, ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಮೈಸೂರು. ಮೊ : 7899779255
ಮುದ್ರಕರು	-	ಪವನ್ ಪ್ರಿಂಟರ್ಸ್, ಬೆಂಗಳೂರು: 9686489131
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.

ಪಾಹಿಪ್ಪ್ರಕೃಷ್ಣ ಮಮ ದೇಹಿ ಕರಾವಲಂಬಮ್



ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್

ಶ್ರೀಮದ್ಭಾದಿರಾಜಕೇಸರಿಭ್ಯೋ ನಮಃ



ವಿದ್ಯಾಮಾನ್ಯಾನ್ಯೇನುಮಃ

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ-೧೫

ಭೀಷ್ಮಪರ್ವ

ಪುಟ ಸಂ.

61. ಪಾಂಡವರ ಜಯವನ್ನು ಕುರಿತು ಕಾರಣವನ್ನು ಕೇಳುವ ಧೃತರಾಷ್ಟ್ರನಿಗೆ ಸಂಜಯನಿಂದ ಉತ್ತರ ದಾನ. ಬ್ರಹ್ಮದೇವರಿಂದ ಹರಿಯ ಪ್ರಾರ್ಥನೆ 1

62. ಬ್ರಹ್ಮದೇವರಿಗೆ ಹರಿಯಿಂದ ಅನುಗ್ರಹ ವಚನ. ದೇವತೆಗಳಿಗೆ ಬ್ರಹ್ಮದೇವರಿಂದ ತಮ್ಮ ಮತ್ತು ಹರಿಯ ಸಂವಾದದ ವಿವರಣೆ. ಭೀಷ್ಮರಿಂದ ದುರ್ಯೋಧನನಿಗೆ ಅದರ ಉಪದೇಶ. 17

63. ಭೀಷ್ಮರಿಂದ ದುರ್ಯೋಧನನನ್ನು ಕುರಿತು ಕೃಷ್ಣನ ಮಹಿಮೆಯ ಉಪದೇಶ 26

64., ಭೀಷ್ಮರಿಂದ ಕೃಷ್ಣನ ಮಹಿಮೆಯನ್ನು ವರ್ಣಿಸಿ ಪಾಂಡವರ ಜೊತೆಯಲ್ಲಿ ಸಂಧಾನ ಮಾಡಿಕೊಳ್ಳುವಂತೆ ದುರ್ಯೋಧನನಿಗೆ ಒತ್ತಾಯ 32

65. ಐದನೆಯ ದಿವಸದ ಯುದ್ಧ ಪ್ರಾರಂಭ 36

66. ಐದನೆಯ ದಿವಸದ ಯುದ್ಧದ ಅನುವೃತ್ತಿ 44

67. ಐದನೆಯ ದಿವಸದ ಯುದ್ಧದ ಅನುವೃತ್ತಿ 50

68. ಯುದ್ಧದ ಅನುವೃತ್ತಿ. ಭೀಷ್ಮಾದಿಗಳ ಪ್ರತಾಪ 58

69. ಭೀಮ-ಅಶ್ವತ್ಥಾಮಾದಿಗಳ ಯುದ್ಧ 65

70. ಭೂರಿಶ್ರವನಿಂದ ಸಾತ್ಯಕಿಯ ಹತ್ತು ಪುತ್ರರ ವಧೆ. ಭೀಷ್ಮರಿಂದ ಸೈನ್ಯಾವಹಾರ 74

71. ಆರನೆಯ ದಿವಸದ ಯುದ್ಧದ ಪ್ರಾರಂಭ. ಧೃಷ್ಟದ್ಯುಮ್ನನಿಂದ ಮಕರವ್ಯೂಹದ ಮತ್ತು ಭೀಷ್ಮರಿಂದ ಕ್ರೌಂಚವ್ಯೂಹದ ರಚನೆ. ದ್ರೋಣರ ಪರಾಕ್ರಮ 82

72. ತನ್ನ ಸೈನ್ಯದ ನಾಶವನ್ನು ಕೇಳಿ ಧೃತರಾಷ್ಟ್ರನ ಗೋಳಾಟ 89

73. ಭೀಮಸೇನನ ಪರಾಕ್ರಮ ಮತ್ತು ದ್ರೋಣರ ಪ್ರತಿಕ್ರಿಯೆ 95

74. ಭೀಮಸೇನನ ಪರಾಕ್ರಮ 113

75. ಭೀಮಸೇನನ ಮತ್ತು ದ್ರೌಪದಿಯ ಪುತ್ರರ ಪರಾಕ್ರಮ
ಭೀಷ್ಮರಿಂದ ಸೈನ್ಯಾವಹಾರ 120

76. ರಾತ್ರಿಯಲ್ಲಿ ಶಿಬಿರದಲ್ಲಿ ಭೀಷ್ಮ-ದುರ್ಯೋಧನ ಸಂವಾದ.
ಪುನಃ ಏಳನೆಯ ದಿವಸ ಯುದ್ಧಕ್ಕಾಗಿ ಸನ್ನಾಹ 134

77. ಭೀಷ್ಮರಿಂದ ದುರ್ಯೋಧನನಿಗೆ ಆಶ್ವಾಸನೆ. ಏಳನೆಯ ದಿವಸದ
ಯುದ್ಧದ ಆರಂಭ. ಭೀಷ್ಮರಿಂದ ಮಂಡಲವ್ಯೂಹದ ಮತ್ತು
ಯುಧಿಷ್ಠಿರನಿಂದ ವಜ್ರ ವ್ಯೂಹದ ರಚನೆ 139

78. ಧೃಷ್ಟದ್ಯುಮ್ನ-ಭೀಮಸೇನರ ಪರಾಕ್ರಮ 148

79. ಇರಾವಂತನ ಮತ್ತು ಭಗದತ್ತನ ಪರಾಕ್ರಮ.
ನಕುಲ-ಸಹದೇವರಿಂದ ಶಲ್ಯನ ಪರಾಭವ 160

80. ಯುಧಿಷ್ಠಿರನ ಪರಾಕ್ರಮ. ಕೃಪ-ಚೇಕಿತಾನನ ಯುದ್ಧ.
ಅಭಿಮನ್ಯುವಿನ ಪರಾಕ್ರಮ 171

81. ಪಾಂಡವರ ಜೊತೆಯಲ್ಲಿ ಭೀಷ್ಮರ ಯುದ್ಧ.
ಶಿಖಂಡಿಯನ್ನು ಕುರಿತು ಯುಧಿಷ್ಠಿರನ ಉಗ್ರವಚನಗಳು.
ಶಿಖಂಡಿಯ ಮತ್ತು ಭೀಮಸೇನನ ಪರಾಕ್ರಮ 182

82. ಭೀಷ್ಮ-ಯುಧಿಷ್ಠಿರಾದಿಗಳ ಯುದ್ಧ.
ಸಪ್ತಮ ದಿವಸದ ಯುದ್ಧ ವಿರಾಮ 195

83. ಎಂಟನೆಯ ದಿನದ ಯುದ್ಧದ ಪ್ರಾರಂಭ.
ಶೃಂಗಾಟಕ ವ್ಯೂಹದ ರಚನೆ 213

84. ಭೀಷ್ಮರನ್ನು ಸೋಲಿಸಿದ ಭೀಮಸೇನನಿಂದ ಧೃತರಾಷ್ಟ್ರನ
ಎಂಟು ಪುತ್ರರ ವಧೆ. ಭೀಷ್ಮರನ್ನು ಕುರಿತು ದುರ್ಯೋಧನನ
ಕ್ರೂರ ವಚನಗಳು ಮತ್ತು ಭೀಷ್ಮರ ಸತ್ಯವಾದ ಮಾತುಗಳು 221

85. ಮಧ್ಯಾಹ್ನದ ಯುದ್ಧದಲ್ಲಿ ಎರಡು ಪಕ್ಷಗಳಲ್ಲಿಯೂ ಸೈನ್ಯದ ದೊಡ್ಡ ಕ್ಷಯ 230

86. ಅಲಂಬುಸನಿಂದ ಇರಾವಂತನ ವಧೆ 240

87. ಇರಾವಂತನು ಹತನಾದುದನ್ನು ನೋಡಿ ಘಟೋತ್ಕಚನ ಕ್ರೋಧ.
ಭಯಂಕರನಾದ ಅವನ ಕಡೆಗೆ ದುರ್ಯೋಧನನ ಗಮನ 260

88. ಘಟೋತ್ಕಚನ ಪರಾಕ್ರಮ 266

89. ಅನೇಕ ವೀರರೊಡನೆ ಘಟೋತ್ಕಚನ ಯುದ್ಧ.
ಕ್ಲೇಶಕ್ಕೆ ಒಳಗಾದ ಅವನ ಸಹಾಯಕ್ಕಾಗಿ ಭೀಮಸೇನನ ಆಗಮನ 277

90. ಘಟೋತ್ಕಚನಿಗೆ ಹೆದರಿ ಕೌರವ ಸೇನೆಯ ಪಲಾಯನ 285

91. ಘಟೋತ್ಕಚನಿಂದ ಪರಾಜಯವನ್ನು ಹೊಂದಿದ ದುರ್ಯೋಧನನಿಂದ
ಭಗದತ್ತನ ಪ್ರೇಷಣ. ಭಗದತ್ತ-ಘಟೋತ್ಕಚರ ಯುದ್ಧ 295

92. ವಿಷಣ್ಣನಾದ ಅರ್ಜುನನಿಂದ ಪುನಃ ಯುದ್ಧದಲ್ಲಿ ಪರಾಕ್ರಮ ಪ್ರದರ್ಶನ.
ಭೀಮಸೇನನ ಪರಾಕ್ರಮ. ರಣರಂಗದ ವರ್ಣನೆ ಮತ್ತು
ಎಂಟನೆಯ ದಿವಸದ ಸೈನ್ಯಾವಹಾರ 311

93. ಕರ್ಣಾದಿಗಳ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಿ
ಭೀಷ್ಮರನ್ನು ಕುರಿತು ದುರ್ಯೋಧನನ ಉಗ್ರವಚನಗಳು 326

94. ಭೀಷ್ಮರ ಪ್ರತಿಜ್ಞೆ 335

95. ದುರ್ಯೋಧನನಿಂದ ದುಶ್ಶಾಸನನನ್ನು ಕುರಿತು
ಸೈನ್ಯವನ್ನು ಯೋಜಿಸುವಂತೆ ಆದೇಶ 340

96. ಒಂಬತ್ತನೆಯ ದಿವಸದ ಯುದ್ಧದ ಪ್ರಾರಂಭ.
ಭೀಷ್ಮರಿಂದ ಸರ್ವತೋಭದ್ರ ವ್ಯೂಹದ ಮತ್ತು
ಪಾಂಡವರಿಂದ ಪ್ರತಿವ್ಯೂಹದ ರಚನೆ 346

97. ಅಭಿಮನ್ಯುವಿನ ಪರಾಕ್ರಮ.
ಅಲಂಬುಸನ ಜೊತೆಯಲ್ಲಿ ಅವನ ಯುದ್ಧ 353

98. ಅಭಿಮನ್ಯುವಿನಿಂದ ಅಲಂಬುಸನ ಪರಾಜಯ.
ಅಭಿಮನ್ಯುವಿನ ಪರಾಕ್ರಮ. ಸಾತ್ಯಕಿಯಿಂದ ದ್ರೋಣರ ಪರಾಜಯ 365

99. ದ್ರೋಣಾರ್ಜುನರ ಯುದ್ಧ.
ಭೀಮಸೇನನಿಂದ ಗದೆಯಿಂದ ಗಜಸೇನೆಯ ಮರ್ದನ 377

100. ಭೀಷ್ಮಾರ್ಜುನರ ಯುದ್ಧ 385

101. ದ್ರೋಣಾರ್ಜುನರ ಮತ್ತು ಭೀಷ್ಮ-ಸಾತ್ಯಕಿಗಳ ಯುದ್ಧ 394

102. ಭೀಷ್ಮರ ಸಹಾಯಕ್ಕಾಗಿ ದುರ್ಯೋಧನನಿಂದ ದುಶ್ಶಾಸನನ ಪ್ರೇಷಣ. ಪಾಂಡವರಿಂದ ಕೌರವರ ಅಶ್ವಾರೋಹಿಗಳ ವಿನಾಶ. ಶಲ್ಯ ಮತ್ತು ಪಾಂಡವರ ಯುದ್ಧ 402

103. ಯುದ್ಧದಲ್ಲಿ ಭೀಷ್ಮರ ಪ್ರತಾಪ. ಕೋಪಗೊಂಡ ಕೃಷ್ಣನಿಂದ ರಥದಿಂದ ಇಳಿದು ಭೀಷ್ಮರ ರಥದ ಕಡೆಗೆ ಓಟ. ಅರ್ಜುನನಿಂದ ಸಮಾಧಾನ ಮಾಡಿ ಹಿಂದಕ್ಕೆ ಕರೆತರುವಿಕೆ. ಅರ್ಜುನನಿಗೆ ಯುಧಿಷ್ಠಿರನ ಆದೇಶ. ಎರಡೂ ಸೈನ್ಯಗಳ ಆಯಾಸ 411

104. ಭೀಷ್ಮರ ಪ್ರತಾಪವನ್ನು ನೋಡಿ ಯುಧಿಷ್ಠಿರನಿಂದ ಕೃಷ್ಣನ ಮುಂದೆ ಪ್ರಲಾಪ. ಕೃಷ್ಣನ ಸಮಾಧಾನ ವಚನ. ಭೀಷ್ಮರ ಬಳಿಗೆ ಹೋಗಿ ಅವರ ವಧೋಪಾಯ ಪ್ರಶ್ನೆ. ಶಿಖಂಡಿಯನ್ನು ಮುಂದೆ ಮಾಡಿಕೊಂಡು ಯುದ್ಧ ಮಾಡುವಂತೆ ಅವರ ಸಲಹೆ 428

105. ಹತ್ತನೆಯ ದಿವಸದ ಯುದ್ಧದ ಪ್ರಾರಂಭ. ಭೀಷ್ಮರ ಪ್ರತಾಪ. ಶಿಖಂಡಿಯನ್ನು ಮುಂದೆ ಮಾಡಿಕೊಂಡು ರಣರಂಗದಲ್ಲಿ ಅರ್ಜುನನ ಪ್ರವೇಶ 458

106. ಹತ್ತನೆಯ ದಿವಸದ ಯುದ್ಧ, ಭೀಷ್ಮರ ಪ್ರತಾಪ 469

107. ಪಾಂಡವರಿಂದ ಮತ್ತು ಎಲ್ಲಾ ಮಹಾರಥರಿಂದ ಭೀಷ್ಮರ ಕಡೆಗೆ ಧಾವನ 478

108. ಅಲಂಬುಸಾದಿಗಳ ಜೊತೆಯಲ್ಲಿ ಸಾತ್ಯಕಿ ಮೊದಲಾದವ ಯುದ್ಧ. ಭೀಷ್ಮರ ರಥದ ಸಮೀಪದಲ್ಲಿ ಅರ್ಜುನ-ದುಶ್ಶಾಸನರ ಯುದ್ಧ 487

109. ದುರ್ನಿಮಿತ್ತಗಳನ್ನು ನೋಡಿ ದ್ರೋಣರಿಂದ ಅಶ್ವತ್ಥಾಮರ ಪ್ರಚೋದನೆ 499

110. ಭೀಮಸೇನನ ಪರಾಕ್ರಮ 507

111. ಕೌರವರ ಜೊತೆಯಲ್ಲಿ ಭೀಮಾರ್ಜುನರ ಯುದ್ಧ 517

112. ಭೀಷ್ಮರಿಗೆ ಯುದ್ಧದಲ್ಲಿ ನಿರ್ವೇದ. ಯುಧಿಷ್ಠಿರನನ್ನು ಕುರಿತು ಅದರ ಸೂಚನೆ. ಘೋರವಾದ ಯುದ್ಧ 526

113. ಘೋರ ಯುದ್ಧದಲ್ಲಿ ಭೀಷ್ಮರ ಪ್ರತಾಪ 535

114. ಅರ್ಜುನ ಮತ್ತು ಭೀಷ್ಮರ ಪರಾಕ್ರಮ 551

115. ಭೀಷ್ಮರ ಮತ್ತು ಅರ್ಜುನನ ಪ್ರತಾಪ. ಪಾಂಡವಸೇನೆಯಿಂದ
ಸಮಗ್ರವಾಗಿ ಭೀಷ್ಮರ ಕಡೆಗೆ ಅಭಿಧಾವನೆ 564

116. ಭೀಷ್ಮರ ಪಾತ 574

117. ಅರ್ಜುನನಿಂದ ಭೀಷ್ಮರಿಗೆ ತಲೆದಿಂಬಿನ ವ್ಯವಸ್ಥೆ.
ಭೀಷ್ಮರಿಂದ ಅರ್ಜುನನ ಪ್ರಶಂಸೆ 598

118. ಅರ್ಜುನನಿಂದ ಬಾಯಾರಿದ ಭೀಷ್ಮರಿಗೆ ಜಲದಾನ.
ಪಾಂಡವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಳ್ಳುವಂತೆ
ದುರ್ಯೋಧನನಿಗೆ ಭೀಷ್ಮರ ಉಪದೇಶ 612

119. ಭೀಷ್ಮ-ಕರ್ಣ ಸಮಾಗಮ ಮತ್ತು ಸಂವಾದ 624

★ ★ ★ ★ ★

ಮಹಾಭಾರತ - ಭೀಷ್ಮಪರ್ವ

ಅರವತ್ತೊಂದನೆಯ ಅಧ್ಯಾಯ

ಪಾಂಡವರ ಜಯವನ್ನು ಕುರಿತು ಕಾರಣವನ್ನು ಕೇಳುವ ಧೃತರಾಷ್ಟ್ರನಿಗೆ ಸಂಜಯನಿಂದ ಉತ್ತರ ದಾನ. ಬ್ರಹ್ಮದೇವರಿಂದ ಹರಿಯ ಪ್ರಾರ್ಥನೆ.

ಧೃತರಾಷ್ಟ್ರಃ

ಭಯಂ ಮೇ ಸುಮಹಜ್ಜಾತಂ ವಿಷ್ಠಯಶ್ಚೈವ ಸಂಜಯ ।
ಶ್ರುತ್ವಾ ಪಾಂಡುಕುಮಾರಾಣಾಂ ಕರ್ಮ ದೇವೈಃ ಸುದುಷ್ಕರಮ್ ॥೧॥

ಧೃತರಾಷ್ಟ್ರ ಎಲೈ ಸಂಜಯನೇ, ದೇವತೆಗಳಿಂದಲೂ ಸಾಧ್ಯವಾಗದಂತಹ ಪಾಂಡುಕುಮಾರರ ದುಷ್ಕರಕರ್ಮವನ್ನು ಕೇಳಿ ನನಗೆ ದೊಡ್ಡ ಭಯವೂ ಮತ್ತು ಆಶ್ಚರ್ಯವೂ ಉಂಟಾಗಿದೆ.

ಪುತ್ರಾಣಾಂ ಚ ಪರಾಭಾವಂ ಶ್ರುತ್ವಾ ಸಂಜಯ ಸರ್ವಶಃ ।
ಚಿಂತಾ ಮೇ ಮಹತೀ ಸೂತ ಭವಿಷ್ಯತಿ ಕಥಂ ತ್ವಿತಿ ॥೨॥

ಎಲೈ ಸಂಜಯನೇ, ನನ್ನ ಪುತ್ರರ ಸರ್ವಪ್ರಕಾರವಾದ ಪರಾಭವವನ್ನು ಕೇಳಿ ಎಲೈ ಸೂತನೇ, ನನಗೆ ಮುಂದೆ ಏನಾಗುವುದು ಎಂಬ ದೊಡ್ಡ ಚಿಂತೆ ಉಂಟಾಗಿದೆ.

ಧ್ರುವಂ ವಿದುರವಾಕ್ಯಾನಿ ಧಕ್ಷ್ಯಂತಿ ಹೃದಯಂ ಮಮ ।
ಯಥಾ ಹಿ ದೃಶ್ಯತೇ ಸರ್ವಂ ದೈವಯೋಗೇನ ಸಂಜಯ ॥೩॥

ಎಲೈ ಸಂಜಯನೇ, ದೈವಯೋಗದಿಂದ ನಡೆಯುತ್ತಿರುವುದೆಲ್ಲವನ್ನೂ ನೋಡಿದರೆ ವಿದುರನು ಆಡಿದ ಮಾತುಗಳು ನನ್ನ ಹೃದಯವನ್ನು ನಿಶ್ಚಯವಾಗಿ ಸುಡುವವು.

ಯತ್ರ ಭೀಷ್ಮಮುಖಾನ್ ಶೂರಾನಸ್ತ್ರಜ್ಞಾನ್ ಯೋಧಸತ್ತಮಾನ್ ।
ಪಾಂಡವಾನಾಮನೀಕಾನಿ ಯೋಧಯಂತಿ ಪ್ರಹಾರಿಣಃ ॥೪॥

ಕೇನಾವಧ್ಯಾ ಮಹಾತ್ಮಾನಃ ಪಾಂಡುಪುತ್ರಾ ಮಹಾಬಲಾಃ ।
ಕೇನ ದತ್ತವರಾಸ್ತಾತ ಕಿಂವಾ ಜ್ಞಾನಂ ವಿದಂತಿ ತೇ ।
ಯೇನ ಕ್ಷಯಂ ನ ಗಚ್ಛಂತಿ ದಿವಿ ತಾರಾಗಣಾ ಇವ ॥೫॥

ಎಲ್ಲಿ ಪ್ರಹಾರ ಮಾಡುವವರಲ್ಲಿ ಶ್ರೇಷ್ಠರಾದ ಭೀಷ್ಮರೇ ಮೊದಲಾದ ಶೂರರು, ಅಸ್ತ್ರಜ್ಞರು ಮತ್ತು ಯೋಧಶ್ರೇಷ್ಠರು ಪಾಂಡವರನ್ನು ಮತ್ತು ಪಾಂಡವರ ಸೈನ್ಯಗಳನ್ನು ಶೂರರು ಪ್ರಹಾರ ಮಾಡುತ್ತಿದ್ದಾರೆಯೋ ಅದರಲ್ಲಿ ಮಹಾಬಲರೂ, ಮಹಾತ್ಮರೂ ಆದ ಪಾಂಡುಪುತ್ರರು ಯಾವ ಕಾರಣದಿಂದ ಅವಧ್ಯರಾಗಿದ್ದಾರೆ? ಪ್ರೀತಿಪಾತ್ರನೇ, ಅವರಿಗೆ ಯಾರು ವರವನ್ನು ನೀಡಿದ್ದಾರೆ ಅಥವಾ ಆಕಾಶದಲ್ಲಿರುವ ತಾರಾಗಣದಂತೆ ನಾಶವನ್ನು ಹೊಂದಿಸಲಾರದಂತಹ ಯಾವ ಜ್ಞಾನವನ್ನು ಅವರು ಸಂಪಾದಿಸಿದ್ದಾರೆ?

ಪುನಃಪುನರ್ನ ಮೃಷ್ಯಾಮಿ ಹತಂ ಸೈನ್ಯಂ ಸ್ಮ ಪಾಂಡವೈಃ ।
ಮಯ್ಯೇವ ದಂಡಃ ಪತತಿ ದೈವಾತ್ ಪರಮದಾರುಣಃ ॥೬॥

ಪಾಂಡವರಿಂದ ಪುನಃ ಪುನಃ ನನ್ನ ಸೈನ್ಯವು ಹತವಾಗುವುದನ್ನು ಕೇಳಿ ನಾನು ಸಹಿಸಲಾರೆ. ದೈವವು ನನ್ನ ಮೇಲೆಯೇ ಪರಮಘೋರವಾದ ದಂಡವನ್ನು ಪ್ರಯೋಗಿಸುತ್ತಿದೆ.

ಯಥಾವಧ್ಯಾಃ ಪಾಂಡುಸುತಾ ಯಥಾ ವಧ್ಯಾಶ್ಚ ಮೇ ಸುತಾಃ ।
ಏತನ್ಮೇ ಸರ್ವಮಾಚಕ್ಷ್ವ ಯಥಾತತ್ತ್ವೇನ ಸಂಜಯ ॥೭॥

ಎಲೈ ಸಂಜಯನೇ, ಪಾಂಡವರು ಏಕೆ ಅವಧ್ಯರಾಗಿದ್ದಾರೆ? ನನ್ನ ಪುತ್ರರು ಏಕೆ ವಧ್ಯರಾಗಿದ್ದಾರೆ? ಇದರ ಸತ್ಯಾಂಶವನ್ನು ಕೇಳುತ್ತಿರುವ ನನಗೆ ನೀನು ಎಲ್ಲವನ್ನೂ ಹೇಳು.

ನ ಹಿ ಪಾರಂ ಪ್ರಪಶ್ಯಾಮಿ ದುಃಖಸ್ಯಾಸ್ಯ ಕಥಂಚನ ।
ಸಮುದ್ರಸ್ಯೇವ ಮಹತೋ ಭುಜಾಭ್ಯಾಂ ಪ್ರತರನ್ ನರಃ ॥೮॥

ದೊಡ್ಡ ಸಮುದ್ರವನ್ನು ಭುಜಗಳಿಂದಲೇ ದಾಟಲು ಹೊರಡುವ ಮನುಷ್ಯನಂತೆ ನಾನು ಈ ನನ್ನ ದುಃಖಕ್ಕೆ ಒಂದು ಕೊನೆಯನ್ನೇ ಕಾಣುತ್ತಿಲ್ಲ.

ಪುತ್ರಾಣಾಂ ವ್ಯಸನಂ ಮನ್ಯೇ ಧ್ರುವಂ ಪ್ರಾಪ್ತಂ ಸುದಾರುಣಮ್ ।
ಘಾತಯಿಷ್ಯತಿ ಮೇ ಪುತ್ರಾನ್ ಸರ್ವಾನ್ ಭೀಮೋ ನ ಸಂಶಯಃ ॥೯॥

ನನ್ನ ಮಕ್ಕಳಿಗೆ ಘೋರವಾದ ವ್ಯಸನವು ನಿಶ್ಚಿತವಾಗಿ ಬಂದಿದೆಯೆಂದು ನಾನು ತಿಳಿಯುತ್ತೇನೆ. ಭೀಮನು ನನ್ನ ಎಲ್ಲಾ ಪುತ್ರರನ್ನೂ ಸಂಹರಿಸುವನು. ಇದರಲ್ಲಿ ಸಂಶಯವಿಲ್ಲ.

ನ ಹಿ ಪಶ್ಯಾಮಿ ತಂ ವೀರಂ ಯೋ ಮೇ ರಕ್ಷೇತ್ ಸುತಾನ್ ರಣೇ ।
ಧ್ರುವಂ ವಿನಾಶಃ ಸಮರೇ ಪುತ್ರಾಣಾಂ ಮಮ ಸಂಜಯ ॥೧೦॥

ಯುದ್ಧದಲ್ಲಿ ನನ್ನ ಪುತ್ರರನ್ನು ಭೀಮನಿಂದ ರಕ್ಷಿಸಬಹುದಾದ ಯಾವ ವೀರನನ್ನೂ ನಾನು ಕಾಣುತ್ತಿಲ್ಲ. ಎಲೈ ಸಂಜಯನೇ, ಯುದ್ಧದಲ್ಲಿ ನನ್ನ ಪುತ್ರರ ವಿನಾಶವು ನಿಶ್ಚಿತವಾದುದು.

ತಸ್ಮಾನ್ಮೇ ಕಾರಣಂ ಸೂತ ಯುಕ್ತಂ ಚೈವ ವಿಶೇಷತಃ ।
ಪೃಚ್ಛತೋಽದ್ಯ ಯಥಾತತ್ತ್ವಂ ಸರ್ವಮಾಖ್ಯಾತುಮರ್ಹಸಿ ॥೧೧॥

ಆದ್ದರಿಂದಲೇ ಎಲೈ ಸೂತನೇ, ಈ ವಿಷಯದಲ್ಲಿ ಕಾರಣವನ್ನೂ ಮತ್ತು ವಿಶೇಷವಾಗಿ ಯುಕ್ತಿಯನ್ನು ಕೇಳುತ್ತಿರುವ ನನಗೆ ಈ ದಿನ ಎಲ್ಲಾ ಸತ್ಯಸಂಗತಿಯನ್ನೂ ಹೇಳುವವನಾಗು.

ದುರ್ಯೋಧನೋಽಪಿ ಯಚ್ಛಕ್ತೋ ದೃಷ್ಟ್ವಾ ಸ್ವಾನ್ ವಿಮುಖಾನ್ ರಣೇ ।
ಭೀಷ್ಮದ್ರೋಣೌ ಕೃಪಶ್ಚೈವ ಸೌಬಲೇಯೋ ಜಯದ್ರಥಃ ।
ದ್ರೌಣಿರ್ವಾಪಿ ಮಹೇಷ್ವಾಸೋ ವಿಕರ್ಣೋ ವಾ ಮಹಾಬಲಃ ॥೧೨॥

ತನ್ನವರು ಯುದ್ಧವಿಮುಖರಾದುದನ್ನು ನೋಡಿ ದುರ್ಯೋಧನನು ಏನು ಮಾಡಿದನು? ಭೀಷ್ಮ-ದ್ರೋಣರು, ಕೃಪರು, ಶಕುನಿ, ಜಯದ್ರಥ, ಮಹಾಧನುರ್ಧಾರಿಗಳಾದ ಅಶ್ವತ್ಥಾಮರು ಅಥವಾ ಮಹಾಬಲನಾದ ವಿಕರ್ಣನಾಗಲೀ ಏನು ಮಾಡಿದರು?

ನಿಶ್ಚಯೋ ವಾಪಿ ಕಸ್ತೇಷಾಂ ತದಾ ಹ್ಯಾಸೀನ್ಮಹಾತ್ಮನಾಮ್ ।
ವಿಮುಖೇಷು ಮಹಾಪ್ರಾಜ್ಞ ಮಮ ಪುತ್ರೇಷು ಸಂಜಯ ॥೧೩॥

ಎಲೈ ಸಂಜಯನೇ, ಮಹಾಪ್ರಾಜ್ಞನೇ, ನನ್ನ ಪುತ್ರರು ಯುದ್ಧದಿಂದ ವಿಮುಖರಾದಾಗ ಮಹಾತ್ಮರಾದ ಅವರ (ಭೀಷ್ಮಾದಿಗಳ) ನಿರ್ಧಾರವಾದರೂ ಏನಾಗಿದ್ದಿತು?

ಸಂಜಯಃ

ಶೃಣು ರಾಜನ್ನವಹಿತಃ ಶ್ರುತ್ವಾ ಚೈವಾವಧಾರಯ ।
ನೈವ ಮಂತ್ರಕೃತಂ ಕಿಂಚಿನ್ನೈವ ಮಾಯಾಂ ತಥಾವಿಧಾಮ್ ।
ನ ವೈ ವಿಭೀಷಿಕಾಂ ಕಾಂಚಿದ್ ರಾಜನ್ ಕುರ್ವಂತಿ ಪಾಂಡವಾಃ ॥೧೪॥

ಸಂಜಯ– ರಾಜನೇ, ಸಾವಧಾನ ಮನಸ್ಸಿನಿಂದ ಕೇಳು ಮತ್ತು ಕೇಳಿದುದನ್ನು ಮನಸ್ಸಿನಲ್ಲಿ ಗಟ್ಟಿಯಾಗಿ ಧರಿಸು. ಎಲೈ ರಾಜನೇ, ಪಾಂಡವರು ಯಾವ ಮಂತ್ರವನ್ನಾಗಲೀ ಅಥವಾ ಅಂತಹ ಯಾವ ಮಾಯೆಯನ್ನಾಗಲೀ ಅಥವಾ ಹೆದರಿಸುವ ಯಾವುದಾದರೂ ಉಪಾಯವನ್ನಾಗಲೀ ಮಾಡುವುದಿಲ್ಲ.

ಯುಧ್ಯಂತಿ ತೇ ಯಥಾನ್ಯಾಯಂ ಶಕ್ತಿಮಂತಶ್ಚ ಸಂಯುಗೇ ।
ಧರ್ಮೇಣ ಸರ್ವಕಾರ್ಯಾಣಿ ಕೀರ್ತಿತಾನೀತಿ ಭಾರತ ।
ಆರಭಂತೇ ಸದಾ ಪಾರ್ಥಾಃ ಪ್ರಾರ್ಥಯಾನಾ ಮಹದ್ಯಶಃ ॥೧೫॥

ನ್ಯಾಯಪೂರ್ವಕವಾಗಿ ಅವರು ಯುದ್ಧವನ್ನು ಮಾಡುತ್ತಾರೆ. ಅವರಿಗೆ ಯುದ್ಧವನ್ನು ಮಾಡುವ ಸಾಮರ್ಥ್ಯವಿದೆ. ಕ್ಷತ್ರಿಯರಿಗೆ ಹೇಳಲ್ಪಟ್ಟ ಎಲ್ಲ ಕಾರ್ಯಗಳನ್ನೂ ಎಲೈ ಭಾರತನೇ, ಆ ಪಾಂಡವರು ಮಹಾಕೀರ್ತಿಯನ್ನು ಆಶಿಸುತ್ತಾ ಯಾವಾಗಲೂ ಧರ್ಮದಿಂದಲೇ ಆರಂಭಿಸುತ್ತಾರೆ.

ನ ತೇ ಯುದ್ಧಾನ್ನಿವರ್ತಂತೇ ಧರ್ಮೋಪೇತಾ ಮಹಾಬಲಾಃ ।
ಶ್ರಿಯಾ ಪರಮಯಾ ಯುಕ್ತಾ ಯತೋ ಧರ್ಮಸ್ತತೋ ಜಯಃ ।
ತೇನಾವಧ್ಯಾ ರಣೇ ಪಾರ್ಥಾ ಜಯಯುಕ್ತಾಶ್ಚ ಪಾರ್ಥಿವ ॥೧೬॥

ಮಹಾಬಲರೂ, ಧರ್ಮನಿಷ್ಠರೂ ಆದ ಅವರು ಯುದ್ಧದಿಂದ ಹಿಂದಿರುಗುವುದಿಲ್ಲ. ಅವರು ಬಹಳ ಕಾಂತಿಯಿಂದ ಕೂಡಿದ್ದಾರೆ. ಎಲ್ಲಿ ಧರ್ಮವಿದೆಯೋ ಅಲ್ಲಿ ಜಯವಾಗುತ್ತದೆ. ಎಲೈ ರಾಜನೇ, ಆದ್ದರಿಂದ ಯುದ್ಧದಲ್ಲಿ ಪಾಂಡವರು ಅವಧ್ಯರಾಗಿದ್ದಾರೆ ಮತ್ತು ಜಯದಿಂದ ಕೂಡಿದ್ದಾರೆ.

ತವ ಪುತ್ರಾ ದುರಾತ್ಮಾನಃ ಪಾಪೇಷ್ವಭಿರತಾಃ ಸದಾ ।
ನಿಷ್ಕ್ರಿಯಾ ಹೀನಕರ್ಮಾಣಸ್ತೇನ ಹೀಯಂತಿ ಸಂಯುಗೇ ॥೧೭॥

ನಿನ್ನ ಮಕ್ಕಳಾದರೂ ಯಾವಾಗಲೂ ದುರಾತ್ಮರು, ಪಾಪಕರ್ಮಗಳಲ್ಲಿ ಆಸಕ್ತರಾದವರು, ನಿಷ್ಕ್ರಿಯವಾದಿಗಳು, ನೀಚಕರ್ಮವನ್ನು ಎಸಗುವವರು. ಆ ಕಾರಣದಿಂದ ಯುದ್ಧದಲ್ಲಿ ನಾಶವನ್ನು ಹೊಂದುತ್ತಿದ್ದಾರೆ.

ಸುಬಹೂನಿ ನೃಶಂಸಾನಿ ಪುತ್ರೈಸ್ತವ ಜನೇಶ್ವರ ।
ನಿಕೃತಾನೀಹ ಪಾಂಡೂನಾಂ ನೀಚೈರಿವ ಯಥಾ ನರೈಃ ॥೧೮॥

ಎಲೈ ರಾಜನೇ, ನಿನ್ನ ಮಕ್ಕಳು ಪಾಂಡುಪುತ್ರರಿಗೆ ನೀಚಜನರಿಗೆ ಯೋಗ್ಯವಾದ ರೀತಿಯಲ್ಲಿ ಅನೇಕ ಅನ್ಯಾಯಗಳನ್ನು ಮತ್ತು ಮೋಸಗಳನ್ನು ಮಾಡಿದ್ದಾರೆ.

ಸರ್ವಂ ಚ ತದನಾದೃತ್ಯ ಪುತ್ರಾಣಾಂ ತವ ಕಿಲ್ಬಿಷಮ್ ।
ಸಾಪಹ್ನವಾಃ ಸದೈವಾಸನ್ ಪಾಂಡವಾಃ ಪಾಂಡುಪೂರ್ವಜ ।
ನ ಚೈನಾನ್ ಬಹು ಮನ್ಯಂತೇ ಪುತ್ರಾಸ್ತವ ವಿಶಾಂಪತೇ ॥೧೯॥

ಎಲೈ ಪಾಂಡುವಿನ ಅಣ್ಣನೇ, ಪಾಂಡವರಾದರೂ ನಿನ್ನ ಮಕ್ಕಳ ಎಲ್ಲ ಅಪಚಾರಗಳನ್ನೂ ಗಣನೆಗೆ ತಂದುಕೊಳ್ಳದೆ ಅವನ್ನು ಯಾವಾಗಲೂ ಮನಸ್ಸಿನಲ್ಲಿ ನಿರಾಕರಿಸಿದ್ದಾರೆ. ರಾಜನೇ, ಅಂತಹ ಪಾಂಡವರನ್ನು ನಿನ್ನ ಪುತ್ರರು ಗೌರವಿಸುವುದಿಲ್ಲ.

ತಸ್ಯ ಪಾಪಸ್ಯ ಸತತಂ ಕ್ರಿಯಮಾಣಸ್ಯ ಕರ್ಮಣಃ ।
ಸಂಪ್ರಾಪ್ತಂ ಸುಮಹದ್ ಘೋರಂ ಫಲಂ ಕಿಂಪಾಕಸನ್ನಿಭಮ್ ।
ಸ ತದ್ ಭುಂಕ್ಷ್ವ ಮಹಾರಾಜ ಸಪುತ್ರಃ ಸಸುಹೃಜ್ಜನಃ ॥೨೦॥

ಸತತವಾಗಿ ಮಾಡಿದ ಆ ಪಾಪಕರ್ಮಗಳ ಮಹಾಘೋರವಾದ ಫಲವು ಈಗ ಪ್ರಾಪ್ತವಾಗಿದೆ. ತಿನ್ನುವಾಗ ರುಚಿಕರವೂ, ಪರಿಣಾಮದಲ್ಲಿ ಬುದ್ಧಿನಾಶಕವೂ ಆದ ತೊಂಡೆಯ ಹಣ್ಣಿನಂತಿರುವ ಅವರ ದುಷ್ಕರ್ಮದ ಘೋರವಾದ ಫಲಗಳನ್ನು ಎಲೈ ಮಹಾರಾಜನೇ, ನೀನು ಪುತ್ರ ಮತ್ತು ಸುಹೃಜ್ಜನರೊಡನೆ ಅನುಭವಿಸುವವನಾಗು.

ನಾವಬುಧ್ಯಸಿ ಯದ್ ರಾಜನ್ ವಾರ್ಯಮಾಣಃ ಸುಹೃಜ್ಜನೈಃ ।
ವಿದುರೇಣಾಥ ಭೀಷ್ಮೇಣ ದ್ರೋಣೇನ ಚ ಮಹಾತ್ಮನಾ ॥೨೧॥

ಎಲೈ ರಾಜನೇ, ಸುಹೃಜ್ಜನರು, ವಿದುರನು, ಭೀಷ್ಮರು, ಮಹಾತ್ಮರಾದ ದ್ರೋಣರು ಹೇಳುತ್ತಿದ್ದರೂ ನೀನು ಅದನ್ನು ತಿಳಿಯುತ್ತಿಲ್ಲ.

ತಥಾ ಮಯಾ ಚಾಪ್ಯಶಕ್ಯದ್ ವಾರ್ಯಮಾಣೋ ನ ಗೃಹ್ಣಸಿ ।
ವಾಕ್ಯಂ ಹಿತಂ ಚ ಪಥ್ಯಂ ಚ ಮರ್ತ್ಯಃ ಪಥ್ಯಮಿವೌಷಧಮ್ ।
ಪುತ್ರಾಣಾಂ ಮತಮಾಸ್ಥಾಯ ಜಿತಾನ್ ಮನ್ಯಸಿ ಪಾಂಡವಾನ್ ॥೨೨॥

ಹಾಗೆಯೇ ನಾನೂ ಸಹ ಅನೇಕ ಬಾರಿ ಎಚ್ಚರಿಸಿದರೂ, ಮನುಷ್ಯನು ಪಥ್ಯವಾದ ಔಷಧಿಯನ್ನು ನಿರಾಕರಿಸುವಂತೆ ನನ್ನ ಹಿತವೂ ಮತ್ತು ಪಥ್ಯವೂ ಆದ ಮಾತುಗಳನ್ನು ನೀನು ಸ್ವೀಕರಿಸುತ್ತಿಲ್ಲ. ನಿನ್ನ ಪುತ್ರರ ಅಭಿಪ್ರಾಯವನ್ನು ನಂಬಿ ಪಾಂಡವರು ಸೋಲುತ್ತಾರೆ ಎಂದು ತಿಳಿದಿದ್ದೀಯ.

ಶೃಣು ಭೂಯೋ ಯಥಾತತ್ತ್ವಂ ಯಸ್ಮಾಂ ತ್ವಂ ಪರಿಪೃಚ್ಛಸಿ ।
ಕಾರಣಂ ಭರತಶ್ರೇಷ್ಠ ಪಾಂಡವಾನಾಂ ಜಯಂ ಪ್ರತಿ ।
ತತ್ ತೇಽಹಂ ಕಥಯಿಷ್ಯಾಮಿ ಯಥಾಶ್ರುತಮರಿಂದಮ ॥೨೩॥

ಎಲೈ ಭರತಶ್ರೇಷ್ಠನೇ, ಪಾಂಡವರ ಜಯವನ್ನು ಕುರಿತು ಕಾರಣವನ್ನು ನೀನು ನನ್ನನ್ನು ಕೇಳುತ್ತಿದ್ದೀಯಷ್ಟೆ! ಎಲೈ ಅರಿಂದಮನೇ, ನಾನು ಕೇಳಿದಂತೆ ಅದನ್ನು ನಿನಗೆ ಹೇಳುವೆನು. ಅದನ್ನು ಕೇಳುವವನಾಗು.

ದುರ್ಯೋಧನೇನ ಸಂಪೃಷ್ಟ ಏತಮರ್ಥಂ ಪಿತಾಮಹಃ ।
ದೃಷ್ಟ್ವಾ ಭ್ರಾತೄನ್ ರಣೇ ಸರ್ವಾನ್ ನಿರ್ಜಿತಾನ್ ಸುಮಹಾರಥಾನ್॥

ಅತ್ಯಂತ ಶ್ರೇಷ್ಠ ಮಹಾರಥರಾದ ತನ್ನ ತಮ್ಮಂದಿರು ಯುದ್ಧದಲ್ಲಿ ಪರಾಭವಗೊಂಡುದನ್ನು ನೋಡಿ ಇದೇ ಪ್ರಶ್ನೆಯನ್ನು ಭೀಷ್ಮರನ್ನು ಕುರಿತು ದುರ್ಯೋಧನನು ಮಾಡಿದನು.

ಶೋಕಸಮ್ಮೂಢಹೃದಯೋ ನಿಶಾಕಾಲೇ ಸ್ಮ ಕೌರವಃ ।
ಪಿತಾಮಹಂ ಮಹಾಪ್ರಾಜ್ಞಂ ವಿನಯೇನೋಪಗಮ್ಯ ಹ ।
ಯದಬ್ರವೀತ್ ಸುತಸ್ತೇऽಸೌ ತನ್ಮೇ ಶೃಣು ಜನೇಶ್ವರ ॥೨೫॥

ಎಲೈ ಜನೇಶ್ವರನೇ, ತಮ್ಮಂದಿರ ವಧೆಯಿಂದ ಉಂಟಾದ ಶೋಕದಿಂದ ತುಂಬಿದ ಹೃದಯವುಳ್ಳವನಾಗಿ ರಾತ್ರಿಯ ಸಮಯದಲ್ಲಿ ಕೌರವನಾದ ದುರ್ಯೋಧನನು ಪಿತಾಮಹರೂ, ಮಹಾಪ್ರಾಜ್ಞರೂ ಆದ ಭೀಷ್ಮರನ್ನು ಸಮೀಪಿಸಿ ವಿನಯದಿಂದ ಏನನ್ನು ಹೇಳಿದನೋ ಅದನ್ನು ನಾನು ಹೇಳುವೆನು, ಕೇಳು.

ದುರ್ಯೋಧನಃ

ತ್ವಂ ಚ ದ್ರೋಣಶ್ಚ ಶಲ್ಯಶ್ಚ ಕೃಪೋ ದ್ರೌಣಿಸ್ತಥೈವ ಚ ।
ಕೃತವರ್ಮಾ ಚ ಹಾರ್ದಿಕ್ಯಃ ಕಾಂಬೋಜಶ್ಚ ಸುದಕ್ಷಿಣಃ ॥೨೬॥

ಭೂರಿಶ್ರವಾ ವಿಕರ್ಣಶ್ಚ ಭಗದತ್ತಶ್ಚ ವೀರ್ಯವಾನ್ ।
ಮಹಾರಥಾಃ ಸಮಾಖ್ಯಾತಾಃ ಕುಲಪುತ್ರಾಸ್ತನುತ್ಯಜಃ ॥೨೭॥

ತ್ರಯಾಣಾಮಪಿ ಲೋಕಾನಾಂ ಪರ್ಯಾಪ್ತಾ ಇತಿ ಮೇ ಮತಿಃ ।
ಪಾಂಡವಾನಾಂ ಸಮಸ್ತಾಶ್ಚ ನ ತಿಷ್ಠಂತಿ ಪರಾಕ್ರಮೇ ॥೨೮॥

ದುರ್ಯೋಧನ– ನೀವು, ದ್ರೋಣರು, ಶಲ್ಯ, ಕೃಪರು, ಹಾಗೆಯೇ ಅಶ್ವತ್ಥಾಮರು, ಹಾರ್ದಿಕ್ಯನಾದ ಕೃತವರ್ಮ, ಕಾಂಬೋಜ ದೇಶದ ಸುದಕ್ಷಿಣ, ಭೂರಿಶ್ರವ, ವಿಕರ್ಣ, ಪರಾಕ್ರಮಶಾಲಿಯಾದ ಭಗದತ್ತ ಇವರೆಲ್ಲರೂ ಕುಲಪುತ್ರರು, ಶರೀರತ್ಯಾಗವನ್ನು ಮಾಡಲು ಹಿಂಜರಿಯದವರು, ಪ್ರಸಿದ್ಧರಾದ ಮಹಾರಥರು, ಇವರು ಮೂರು

ಲೋಕಗಳನ್ನು ಗೆಲ್ಲಲು ಸಮರ್ಥರಾದವರು ಎಂದು ನನ್ನ ಅಭಿಪ್ರಾಯ. ಆದರೆ ಎಲ್ಲರೂ ಸೇರಿದರೂ ಪಾಂಡವರ ಪರಾಕ್ರಮದ ಮುಂದೆ ನಿಲ್ಲುತ್ತಿಲ್ಲ.

ತತ್ರ ಮೇ ಸಂಶಯೋ ಜಾತಸ್ತನ್ಮಾಚಕ್ಷ್ವ ಪೃಚ್ಛತಃ ।
ಯಂ ಸಮಾಶ್ರಿತ್ಯ ಕೌಂತೇಯಾ ಜಯಂತ್ಯಸ್ಮಾನ್ ಪದೇಪದೇ ॥೨೯॥

ನನಗೆ ಅದರಲ್ಲಿ ಸಂಶಯವುಂಟಾಗಿದೆ. ಅದನ್ನು ಕೇಳುತ್ತಿರುವ ನನಗೆ ಉತ್ತರವನ್ನು ಹೇಳಿ. ಎಲೈ ಕೌಂತೇಯರಾದ ಭೀಷ್ಮರೇ, ಯಾವ ಬಲವನ್ನು ಅವಲಂಬಿಸಿ ಪಾಂಡವರು ಪುನಃ ಪುನಃ ನಮ್ಮನ್ನು ಜಯಿಸುತ್ತಿದ್ದಾರೆ?

ಭೀಷ್ಮಃ

ಶೃಣು ರಾಜನ್ ವಚೋ ಮಹ್ಯಂ ಯತ್ತ್ವಾಂ ವಕ್ಷ್ಯಾಮಿ ಕೌರವ ।
ಬಹುಶಶ್ಚ ಮಮೋಕ್ತೋಽಸಿ ನ ಚ ಮೇ ತತ್ ತ್ವಯಾ ಕೃತಮ್ ॥೩೦॥

ಭೀಷ್ಮ- ಎಲೈ ರಾಜನೇ, ಕೌರವನೇ, ನಾನು ಆಡುವ ಮಾತುಗಳನ್ನು ನೀನು ಕೇಳು. ನಾನು ಅನೇಕ ಬಾರಿ ನಿನಗೆ ಹೇಳಿದ್ದೇನೆ. ಆದರೆ ನೀನು ನನ್ನ ಮಾತುಗಳನ್ನು ನಡೆಸಿಕೊಡಲಿಲ್ಲ.

ಕ್ರಿಯತಾಂ ಪಾಂಡವೈಃ ಸಾರ್ಧಂ ಶಮೋ ಭರತಸತ್ತಮ ।
ಏತತ್ ಕ್ಷಮಮಹಂ ಮನ್ಯೇ ಪೃಥಿವ್ಯಾಸ್ತವ ಚಾಭಿಭೋ ॥೩೧॥

ಎಲೈ ಭರತಶ್ರೇಷ್ಠನೇ, ಪಾಂಡವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೋ. ಇದನ್ನು ಮಾಡಲು ಸಾಧ್ಯ . ಎಲೈ ಶತ್ರುಸಂಹಾರಕನೇ, ಇದು ನಿನಗೂ ಮತ್ತು ಎಲ್ಲ ಭೂಮಿಗೂ ಹಿತವೆಂದು ನಾನು ಭಾವಿಸುತ್ತೇನೆ.

ಭುಂಜೇಮಾಂ ಪೃಥಿವೀಂ ರಾಜನ್ ಭ್ರಾತೃಭಿಃ ಸಹಿತಃ ಸುಖೀ ।
ದುರ್ಹೃದಸ್ತಾಪಯನ್ ಸರ್ವಾನ್ ನಂದಯಂಶ್ಚಾಪಿ ಬಾಂಧವಾನ್ ॥

ಎಲೈ ರಾಜನೇ, ಶತ್ರುಗಳ ಮನಸ್ಸಿಗೆ ತಾಪವನ್ನು ಉಂಟುಮಾಡುತ್ತಾ, ಬಂಧುಗಳಿಗೆ ಸಂತೋಷವನ್ನು ಉಂಟುಮಾಡುತ್ತಾ , ಸಹೋದರರಿಂದ ಸಹಿತನಾಗಿ ಸುಖದಿಂದ ಈ ಭೂಮಿಯನ್ನು ಅನುಭವಿಸುವವನಾಗು.

ನ ಚ ಮೇ ಕ್ರೋಶತಸ್ತಾತ ಶ್ರುತವಾನಸಿ ವೈ ಪುರಾ ।
ತದಿದಂ ಸಮನುಪ್ರಾಪ್ತಂ ಯತ್ ಪಾಂಡೂನವಮನ್ಯಸೇ ॥೩೩॥

ಎಲೈ ಪ್ರೀತಿಪಾತ್ರನೇ, ನಾನು ಹಿಂದೆ ಎಷ್ಟು ಕಿರುಚಿದರೂ ನೀನು ನನ್ನ ಮಾತನ್ನು ಕೇಳಲಿಲ್ಲ.ನೀನು ಪಾಂಡವರಿಗೆ ಮಾಡಿದ ಅವಮಾನದ ಈ ಫಲವು ಈಗ ಪ್ರಾಪ್ತವಾಗಿದೆ.

ಯಶ್ಚ ಹೇತುರವಧ್ಯತ್ವೇ ತೇಷಾಮಕ್ಲಿಷ್ಟಕರ್ಮಣಾಮ್ ।
ತಂ ಶೃಣುಷ್ವ ಮಹಾರಾಜ ಮಮ ಕೀರ್ತಯತಃ ಪ್ರಭೋ ॥೩೪॥

ಎಲೈ ಮಹಾರಾಜನೇ, ಎಲೈ ಪ್ರಭುವೇ, ಅನಾಯಾಸವಾಗಿ ಕಾರ್ಯವನ್ನು ಮಾಡುವ ಅವರ ಅವಧ್ಯತ್ವವನ್ನು ಕುರಿತು ಕಾರಣವನ್ನು ಕೇಳುತ್ತಿದ್ದೀಯಷ್ಟೆ! ಅದನ್ನು ಹೇಳುವೆನು, ಕೇಳು.

ನಾಸ್ತಿ ಲೋಕೇಷು ತದ್ ಭೂತಂ ಭವಿತಾ ನೋ ಭವಿಷ್ಯತಿ ।
ಯೋ ಜಯೇತ್ ಪಾಂಡವಾನ್ ಸಂಖೇ ಪಾಲಿತಾನ್ ಶಾರ್ಙ್ಗಧನ್ವನಾ ॥

ಶಾರ್ಙ್ಗಧನುರ್ಧಾರಿಯಾದ ಕೃಷ್ಣನಿಂದ ರಕ್ಷಿತರಾದ ಪಾಂಡವರನ್ನು ಯುದ್ಧದಲ್ಲಿ ಜಯಿಸಬಲ್ಲ ಯಾವ ವ್ಯಕ್ತಿಯೂ ಲೋಕದಲ್ಲಿ ಹಿಂದೆ ಇರಲಿಲ್ಲ, ಈಗ ಇಲ್ಲ ಮತ್ತು ಮುಂದೆ ಬರುವುದಿಲ್ಲ.

ಯತ್ ತು ಮೇ ಕಥಿತಂ ತಾತ ಮುನಿಭಿರ್ಭಾವಿತಾತ್ಮಭಿಃ ।
ಪುರಾಣಗೀತಂ ಧರ್ಮಜ್ಞ ತಚ್ಛೃಣುಷ್ವ ಯಥಾತಥಮ್ ॥೩೬॥

ಎಲೈ ಪ್ರೀತಿಪಾತ್ರನೇ, ಪರಿಶುದ್ಧ ಮನಸ್ಸುಳ್ಳ ಋಷಿಗಳು ನನಗೆ ಹೇಳಿದ ಪ್ರಾಚೀನವಾದ, ಸತ್ಯವಾದ ಗೀತೆಯೊಂದನ್ನು ಎಲೈ ಧರ್ಮಜ್ಞನೇ ಕೇಳುವವನಾಗು.

ಪುರಾ ಕಿಲ ಸುರಾಃ ಸರ್ವೇ ಋಷಯಶ್ಚ ಸಮಾಗತಾಃ ।
ಪಿತಾಮಹಮುಪಾಸೇದುಃ ಪರ್ವತೇ ಗಂಧಮಾದನೇ ॥೩೭॥

ಹಿಂದೆ ಎಲ್ಲ ದೇವತೆಗಳು ಮತ್ತು ಋಷಿಗಳು ಸೇರಿ ಗಂಧಮಾದನ ಪರ್ವತದಲ್ಲಿ ಪಿತಾಮಹರಾದ ಬ್ರಹ್ಮದೇವರ ಬಳಿಗೆ ಹೋದರಷ್ಟೆ!

ಮಧ್ಯೇ ತೇಷಾಂ ಸಮಾಸೀನಃ ಪ್ರಜಾಪತಿರಪಶ್ಯತ ।
ವಿಮಾನಂ ಜಾಜ್ವಲದ್ ಭಾಸಾ ಸ್ಥಿತಂ ಪ್ರವರಮಂಬರೇ ॥೩೮॥

ಅವರ ಮಧ್ಯದಲ್ಲಿ ಕುಳಿತಿದ್ದ ಪ್ರಜಾಪತಿಗಳಾದ ಬ್ರಹ್ಮದೇವರು ತನ್ನ ಕಾಂತಿಯಿಂದ ಬೆಳಗುತ್ತಿದ್ದ ಒಂದು ವಿಮಾನವು ಆಕಾಶದಲ್ಲಿ ನಿಂತಿರುವುದನ್ನು ನೋಡಿದರು.

ಧ್ಯಾನೇನಾವೇದ್ಯ ತಂ ಬ್ರಹ್ಮಾ ಕೃತ್ವಾ ಚ ನಿಯತೋಽಂಜಲಿಮ್ ।
ನಮಶ್ಚಕಾರ ಹೃಷ್ಟಾತ್ಮಾ ಪರಮಂ ಪರಮೇಶ್ವರಮ್ ॥೩೯॥

ಬ್ರಹ್ಮದೇವರು ತಮ್ಮ ಧ್ಯಾನದಿಂದ ವಿಮಾನದಲ್ಲಿರುವವರು ಯಾರೆಂದು ತಿಳಿದು ವಾಜ್‌ನಿಯಮವುಳ್ಳವರಾಗಿ ಸಂತೋಷಗೊಂಡು ವಿಮಾನದಲ್ಲಿದ್ದ ಸರ್ವೇಶ್ವರನಾದ ಹರಿಗೆ ಕೈಗಳನ್ನು ಮುಗಿದು ನಮಸ್ಕಾರವನ್ನು ಮಾಡಿದರು.

ಋಷಯಸ್ತ್ವಥ ದೇವಾಶ್ಚ ದೃಷ್ಟ್ವಾ ಬ್ರಹ್ಮಾಣಮುತ್ಥಿತಮ್ ।
ಸ್ಥಿತಾಃ ಪ್ರಾಂಜಲಯಃ ಸರ್ವೇ ಪಶ್ಯಂತೋ ಮಹದದ್ಭುತಮ್ ॥೪೦॥

ಋಷಿಗಳೂ ಮತ್ತು ದೇವತೆಗಳೂ ಆಗ ಬ್ರಹ್ಮದೇವರು ಎದ್ದುನಿಂತುದನ್ನು ನೋಡಿ ತಾವೆಲ್ಲರೂ ಎದ್ದುನಿಂತು, ಕೈಗಳನ್ನು ಮುಗಿದು ಆ ದೊಡ್ಡ ಅದ್ಭುತವನ್ನು ನೋಡುತ್ತಾ ನಿಂತರು.

ಯಥಾವಚ್ಚ ತಮಭ್ಯರ್ಚ್ಯ ಬ್ರಹ್ಮಾ ಬ್ರಹ್ಮವಿದಾಂ ವರಃ ।
ಜಗಾದ ಜಗತಃ ಸ್ರಷ್ಟಾ ಪರಂ ಪರಮಧರ್ಮವಿತ್ ॥೪೧॥

ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರಾದ, ಪರಮಧರ್ಮಜ್ಞರಾದ, ಜಗತ್ಸೃಷ್ಟಿಕರ್ತರಾದ ಬ್ರಹ್ಮದೇವರು ಯಥಾಯೋಗ್ಯವಾಗಿ ಅವರನ್ನು ಪೂಜಿಸಿ ಮಾತನಾಡಿದರು.

ವಿಶ್ವಾವಸುರ್ವಿಶ್ವಮೂರ್ತಿರ್ವಿಶ್ವೇಶೋ
ವಿಷ್ವಕ್ಸೇನೋ ವಿಶ್ವಕರ್ಮಾ ವಶೀ ಚ ।
ವಿಶ್ವೇಶ್ವರೋ ವಾಸುದೇವೋಽಸಿ ತಸ್ಮಾದ್
ಯೋಗಾತ್ಮಾನಂ ದೈವತಂ ತ್ವಾಮುಪೈಮಿ ॥೪೨॥

ನೀನು ವಿಶ್ವಕ್ಕೆ ಆವಾಸಸ್ಥಾನನಾದವನು, ವಿಶ್ವವನ್ನೇ ಪ್ರತಿಮೆಯಾಗಿ ಉಳ್ಳವನು, ವಿಶ್ವಕ್ಕೆ ಪತಿಯಾದವನು, ಎಲ್ಲ ಕಡೆಯಲ್ಲಿಯೂ ನಿನ್ನ ಭಕ್ತರ ಸೈನ್ಯವನ್ನು ಹೊಂದಿದವನು, ಎಲ್ಲ ಕಾರ್ಯಗಳನ್ನೂ ಮಾಡುವವನು ಮತ್ತು ಸರ್ವವಶಿ. ನೀನೇ ವಿಶ್ವೇಶ್ವರನಾದ ವಾಸುದೇವನಾಗಿದ್ದೀಯೆ. ವಿಶ್ವರ್ಯಾತ್ಮಕವಾದ ಶರೀರವುಳ್ಳ ಪರಮದೇವತೆಯಾದ ನಿನಗೆ ನಾನು ಶರಣಾಗತನಾಗಿದ್ದೇನೆ.

ಜಯ ವಿಶ್ವ ಮಹಾದೇವ ಜಯ ಲೋಕಹಿತೇ ರತ ।
ಜಯ ಯೋಗೀಶ್ವರ ವಿಭೋ ಜಯ ಯೋಗಪರಾವರ ॥೪೩॥

ವಿಶ್ವನಾಮಕ ಪರಮಾತ್ಮನೇ, ಮಹಾದೇವನೇ, ನಿನಗೆ ಜಯವಾಗಲಿ. ಲೋಕಹಿತದಲ್ಲಿ ಆಸಕ್ತನಾದವನೇ ನಿನಗೆ ಜಯವಾಗಲಿ. ವಿಭುವೇ, ಯೋಗೀಶ್ವರನೇ, ನಿನಗೆ ಜಯವಾಗಲಿ. ಯೋಗಗಳ ಉಚ್ಚನೀಚಗಳನ್ನು ತಿಳಿದವನೇ, ನಿನಗೆ ಜಯವಾಗಲಿ.

ಪದ್ಮಗರ್ಭ ವಿಶಾಲಾಕ್ಷ ಜಯ ಲೋಕೇಶ್ವರೇಶ್ವರ ।
ಭೂತಭವ್ಯಭವನ್ನಾಥ ಜಯ ಸೌಮ್ಯಾತ್ಮಜಾತ್ಮಜ ॥೪೪॥

ಪದ್ಮದಳದಂತೆ ವಿಶಾಲವಾದ ನೇತ್ರವುಳ್ಳವನೇ, ಲೋಕೇಶ್ವರರಾದ ದೇವತೆಗಳಿಗೆ ಈಶ್ವರನಾದವನೇ ನಿನಗೆ ಜಯವಾಗಲಿ. ಭೂತ-ವರ್ತಮಾನ-ಭವಿಷ್ಯದ್ ಜಗತ್ತುಗಳಿಗೆ ಒಡೆಯನಾದವನೇ, ಚಂದ್ರವಂಶದಲ್ಲಿ ಜನಿಸಿದ ವಸುದೇವನಿಂದ ಅಭವ್ಯನಾದವನೇ ನಿನಗೆ ಜಯವಾಗಲಿ.

ಅಸಂಖ್ಯೇಯಗುಣಾಜೇಯ ಜಯ ಸರ್ವಪರಾಯಣ ।
ನಾರಾಯಣ ಸುದುಷ್ಪಾರ ಜಯ ಶಾರ್ಙ್ಗಧನುರ್ಧರ ॥೪೫॥

ಅಸಂಖ್ಯೇಯವಾದ ಗುಣವುಳ್ಳವನೇ, ಯಾರಿಂದಲೂ ಜಯಿಸಲ್ಪಡದವನೇ, ಸರ್ವರಿಗೂ ಪರಮಾಶ್ರಯನಾದವನೇ ನಿನಗೆ ಜಯವಾಗಲಿ. ಯಾರಿಂದಲೂ ಮೀರಲು ಸಾಧ್ಯವಾಗದ ನಾರಾಯಣನೇ ಶಾರ್ಙ್ಗಧನುರ್ಧಾರಿಯೇ ನಿನಗೆ ಜಯವಾಗಲಿ.

ಸರ್ವಗುಹ್ಯಗುಣೋಪೇತ ವಿಶ್ವಮೂರ್ತೇ ನಿರಾಮಯ ।
ವಿಶ್ವೇಶ್ವರ ಮಹಾಬಾಹೋ ಜಯ ಲೋಕಾರ್ಥತತ್ಪರ ॥೪೬॥

ಸರ್ವರಿಗೂ ಅವ್ಯಕ್ತವಾದ ಗುಣಗಳಿಂದ ಕೂಡಿದವನೇ, ವಿಶ್ವಮೂರ್ತಿಯೇ, ದೋಷದೂರನೇ, ವಿಶ್ವೇಶ್ವರನೇ, ಮಹಾಬಾಹುವೇ, ಲೋಕಕ್ಕೆ ಹಿತವನ್ನು ಮಾಡುವ ಆಸಕ್ತಿಯುಳ್ಳವನೇ ನಿನಗೆ ಜಯವಾಗಲಿ.

ಮಹೋರಗ ವರಾಹಾದ್ಯ ಹರಿಕೇಶ ವಿಭೋ ಜಯ ।
ಹರಿವಾಸ ವಿಶಾಮೀಶ ವಿಶ್ವಾವಾಸಾಮಿತಾವ್ಯಯ ॥೪೭॥

ಮಹೋರಗ ಶ್ರೇಷ್ಠವಾದ ಶೇಷನಿಂದ ಅಯನಾದವನೇ (ಎಂದರೆ ಶೇಷಶಾಯಿಯೇ), ಪಾಪಸಂಹಾರಕವಾದ ಕೇಶವಾದಿ ಅವಯವವುಳ್ಳವನೇ, ವ್ಯಾಪ್ತನಾದವನೇ, ಹರಿವಾಸನೇ, ಪ್ರಜೆಗಳಿಗೆ ಒಡೆಯನೇ, ಜಗತ್ತನ್ನು ಧರಿಸಿದವನೇ, ಅಪರಿಮಿತನೇ, ನಾಶರಹಿತನೇ, ನಿನಗೆ ಜಯವಾಗಲಿ.

ವ್ಯಕ್ತಾವ್ಯಕ್ತಾಮಿತಸ್ಥಾನ ನಿಯತೇಂದ್ರಿಯ ಸೇಂದ್ರಿಯ ।
ಅಸಂಖ್ಯೇಯಾತ್ಮಭಾವಜ್ಞ ಜಯ ಗಂಭೀರ ಕಾಮದ ॥೪೮॥

ಯಾವಾಗಲೂ ಅವ್ಯಕ್ತ ಸ್ವಭಾವದವನಾದರೂ ನಿನ್ನ ಇಚ್ಛೆಯಿಂದಲೇ ವ್ಯಕ್ತನಾಗುವವನೇ, ಅನಂತಾನಂತ ಅಧಿಷ್ಠಾನ ಸ್ಥಾನವುಳ್ಳವನೇ, ಇಂದ್ರಿಯಗಳನ್ನು ಹೊಂದಿದವನೇ, ಎಲ್ಲ ಇಂದ್ರಿಯಗಳನ್ನು ಜಯಿಸಿದವನೇ, ಸಂಖ್ಯೆ ಇಲ್ಲದ ಜೀವರ ಪ್ರತಿಯೊಬ್ಬರ ಅಭಿಪ್ರಾಯವನ್ನು ತಿಳಿದವನೇ, ಮನಸ್ಸಿನಲ್ಲಿರುವ ಇನ್ನೊಬ್ಬರಿಗೆ ಗೊತ್ತಾಗದ ಕಾಮಗಳನ್ನು ಪೂರೈಸುವವನೇ ನಿನಗೆ ಜಯವಾಗಲಿ.

ಅನಂತ ವಿದಿತಪ್ರಜ್ಞ ನಿತ್ಯಂ ಭೂತವಿಭಾವನ ।
ಕೃತಕಾರ್ಯ ಕೃತಪ್ರಜ್ಞ ಧರ್ಮಜ್ಞ ವಿಜಯಾಜಯ ॥೪೯॥

ಅನಂತನಾದವನೇ, ಪ್ರಖ್ಯಾತವಾದ ಪ್ರಜ್ಞೆಯುಳ್ಳವನೇ, ಯಾವಾಗಲೂ ಜೀವ ಜಡರನ್ನು ಸೃಷ್ಟಿಸುವವನೇ, ಸಂಕಲ್ಪಿಸಿದ ಕಾರ್ಯವನ್ನು ಪೂರ್ಣವಾಗಿ ಮಾಡುವವನೇ, ಕುಶಲವಾದ ಪ್ರಜ್ಞೆಯುಳ್ಳವನೇ, ಧರ್ಮಜ್ಞನೇ, ಯಾವಾಗಲೂ ಜಯಶೀಲನಾದವನೇ, ಯಾರಿಗೂ ಸೋಲದವನೇ ನಿನಗೆ ಜಯವಾಗಲಿ.

ಗುಹ್ಯಾತ್ಮನ್ ಸರ್ವಭೂತಾತ್ಮನ್ ಸ್ಫುಟಸಂಭೂತಸಂಭವ ।
ಭೂತಾರ್ಥತತ್ತ್ವ ಲೋಕೇಶ ಜಯ ಭೂತವಿಭಾವನ ॥೫೦॥

ಅವ್ಯಕ್ತ ಸ್ವಭಾವದವನೇ, ಸರ್ವಜೀವಾಂತರ್ಯಾಮಿಯೇ, ಸ್ಪಷ್ಟವಾದ ಜನ್ಮವುಳ್ಳವರಿಗೆ ಎಲ್ಲರಿಗೂ ಕಾರಣನಾದವನೇ, ಶ್ರೇಷ್ಠವಾದ ಪ್ರಮೇಯನಾದವನೇ, ಲೋಕೇಶನಾದವನೇ, ಸೃಷ್ಟಿಕರ್ತನಾದವನೇ ನಿನಗೆ ಜಯವಾಗಲಿ.

ಆತ್ಮಯೋನೇ ಮಹಾಭಾಗ ಕಲ್ಪಸಂಕ್ಷೇಪತತ್ಪರ ।
ಉದ್ಭವನ ಮನೋದ್ಭವ ಜಯ ಬ್ರಹ್ಮಜನಪ್ರಿಯ ॥೫೧॥

ನಿನ್ನ ಇಚ್ಛೆಯಿಂದಲೇ ನಿನ್ನಿಂದಲೇ ಜನಿಸುವವನೇ, ಮಹಾನುಭಾವನೇ, ಕಲ್ಪಾಂತದಲ್ಲಿ ಲೋಕವನ್ನು ಸಂಹಾರ ಮಾಡುವುದರಲ್ಲಿ ಆಸಕ್ತನಾದವನೇ, ಪುನಃ ಜಗತ್ತನ್ನು ಸೃಷ್ಟಿಸುವವನೇ, ಮನಸ್ಸಿಗೆ ಹರ್ಷವನ್ನು ಕೊಡುವವನೇ, ಭಗವದ್ಭಕ್ತರಿಗೆ ಪ್ರಿಯನಾದವನೇ ನಿನಗೆ ಜಯವಾಗಲಿ.

ನಿಸರ್ಗಸರ್ಗಾಭಿರತ ಕಾಮೇಶ ಪರಮೇಶ್ವರ ।
ಅಮೃತೋದ್ಭವ ಸದ್ಭಾವ ಯುಗಾಗ್ನೇ ವಿಜಯಪ್ರದ ॥೫೨॥

ಬ್ರಹ್ಮಾಂಡದ ಒಳಗಿನ ಮತ್ತು ಹೊರಗಿನ ಸೃಷ್ಟಿಯಲ್ಲಿ ನಿರತನಾದವನೇ, ಎಲ್ಲ ಆಸೆಗಳನ್ನು ಪೂರೈಸುವವನೇ, ಪರಮೇಶ್ವರನೇ, ಅಮೃತೋತ್ಪತ್ತಿಗೆ ಕಾರಣನಾದವನೇ, ಯುಗದ ಆದಿಯಲ್ಲಿ ಎಲ್ಲ ವಸ್ತುಗಳ ಉತ್ಪಾದಕನಾದವನೇ, ವಿಜಯಪ್ರದನಾದವನೇ ನಿನಗೆ ಜಯವಾಗಲಿ.

ಪ್ರಜಾಪತಿಪತೇ ದೇವ ಪದ್ಮನಾಭ ಮಹಾಬಲ ।
ಆತ್ಮಭೂತ ಮಹಾಭೂತ ಕರ್ಮಾತ್ಮನ್ ಜಯ ಕರ್ಮದ ॥೫೩॥

ಪ್ರಜಾಪತಿಗಳಿಗೆ ಪತಿಯಾದವನೇ, ದೇವನೇ, ಪದ್ಮನಾಭನೇ, ಮಹಾಬಲನೇ, ಸ್ವತಂತ್ರನೇ, ಮಹಾಭೂತನೇ, ಕರ್ಮಸ್ವಾಮಿಯೇ, ಕರ್ಮಗಳ ಫಲದಾಯಕನೇ ನಿನಗೆ ಜಯವಾಗಲಿ.

ಪಾದೌ ತವ ಧರಾ ದೇವೀ ದಿಶೋ ಬಾಹುರ್ದಿವಂ ಶಿರಃ ।
ಮೂರ್ತಿಸ್ತೇಽಹಂ ಸುರಾಃ ಕಾಯಶ್ಚಂದ್ರಾದಿತ್ಯೌ ಚ ಚಕ್ಷುಷೀ ॥೫೪॥

ಭೂದೇವಿಯೇ ನಿನ್ನ ಪಾದಗಳು; ದಿಕ್ಕುಗಳು ನಿನ್ನ ಬಾಹುಗಳು; ದ್ಯುಲೋಕವು ನಿನ್ನ ಶಿರಸ್ಸು, ನಾನು ನಿನ್ನ ಪ್ರತಿಮೆ, ದೇವತೆಗಳು ನಿನ್ನ ಕಾಯದಿಂದ ಜನಿಸಿದವರು, ಸೂರ್ಯ-ಚಂದ್ರರು ನಿನ್ನ ಕಣ್ಣುಗಳು.

ಬಲಂ ತಪಶ್ಚ ಸತ್ಯಂ ಚ ಧರ್ಮಕಾಮಾತ್ಮಜಂ ತವ ।
ತೇಜೋऽಗ್ನಿಃ ಪವನಃ ಶ್ವಾಸ ಆಪಸ್ತೇ ಸ್ವೇದಸಂಭವಾಃ ॥೫೫॥

ಬಲ, ತಪಸ್ಸು, ಸತ್ಯ, ಧರ್ಮ, ಕಾಮಗಳು ನಿನ್ನ ಶರೀರದಿಂದ ಜನಿಸಿದವುಗಳು. ಅಗ್ನಿಯು ನಿನ್ನ ತೇಜಸ್ಸು, ವಾಯುವು ನಿನ್ನ ಶ್ವಾಸ, ಜಲವು ನಿನ್ನ ಬೆವರಿನಿಂದ ಉಂಟಾದುದು.

ಅಶ್ವಿನೌ ಶ್ರವಣೌ ನಿತ್ಯಂ ದೇವೀ ಜಿಹ್ವಾ ಸರಸ್ವತೀ ।
ವೇದಾಃ ಸಂಸ್ಕಾರನಿಷ್ಠಾ ಹಿ ತ್ವಯೀದಂ ಜಗದಾಶ್ರಿತಮ್ ॥೫೬॥

ಅಶ್ವಿನೀದೇವತೆಗಳು ನಿನ್ನ ಶ್ರೋತ್ರವನ್ನು ಯಾವಾಗಲೂ ಆಶ್ರಯಿಸಿದ್ದಾರೆ. ಸರಸ್ವತೀ ದೇವಿಯು ನಿನ್ನ ಜಿಹ್ವೆ. ವೇದಗಳು ನಿನ್ನ ಮನಸ್ಸಿನ ಸಂಸ್ಕಾರದಲ್ಲಿವೆ. ಈ ಜಗತ್ತೆಲ್ಲವೂ ನಿನ್ನನ್ನು ಆಶ್ರಯಿಸಿದೆ.

ನ ಸಂಖ್ಯಾಂ ನ ಪರೀಮಾಣಂ ನ ತೇಜೋ ನ ಪರಾಕ್ರಮಮ್ ।
ನ ಬಲಂ ಯೋಗಯೋಗೀಶ ಜಾನೀಮಸ್ತೇ ನ ಸಂಭವಮ್ ॥೫೭॥

ನಿನ್ನ ರೂಪಗಳ ಸಂಖ್ಯೆಯಾಗಲೀ, ಪರಿಮಾಣವಾಗಲೀ, ಸಾಮರ್ಥ್ಯ-ಪರಾಕ್ರಮವಾಗಲೀ, ಬಲವಾಗಲೀ, ನಿನ್ನ ಉತ್ಪತ್ತಿಯಾಗಲೀ, ಯೋಗೀಶನೇ ನಾವು ಯಾರೂ ತಿಳಿದಿಲ್ಲ.

ತ್ವದ್ಭಕ್ತಿನಿರತಾ ದೇವ ನಿಯಮೈಸ್ತ್ವಾ ಸಮಾಹಿತಾಃ ।
ಅರ್ಚಯಾಮಃ ಸದಾ ವಿಷ್ಣೋ ಪರಮೇಶಂ ಮಹೇಶ್ವರಮ್ ॥೫೮॥

ಎಲೈ ದೇವನೇ, ನಿನ್ನ ಭಕ್ತಿಯಲ್ಲಿಯೇ ನಿರತರಾಗಿ, ಒಳ್ಳೆಯ ನಿಯಮಗಳನ್ನು ಹೊಂದಿದವರಾಗಿ ಎಲೈ ವಿಷ್ಣುವೇ, ಪರಮೇಶ್ವರನೂ, ಮಹೇಶ್ವರನೂ ಆದ ನಿನ್ನನ್ನು ನಾವು ಯಾವಾಗಲೂ ಪೂಜಿಸುತ್ತೇವೆ.

ಋಷಯೋ ದೇವಗಂಧರ್ವಾ ಯಕ್ಷರಾಕ್ಷಸಪನ್ನಗಾಃ ।
ಪಿಶಾಚಾ ಮಾನುಷಾಶ್ಚೈವ ಮೃಗಪಕ್ಷಿಸರೀಸೃಪಾಃ ॥೫೯॥

ಏವಮಾದಿ ಮಯಾ ಸೃಷ್ಟಂ ಪೃಥಿವ್ಯಾಂ ತತ್ತ್ವಪಾದಜಮ್ ।
ಪದ್ಮನಾಭ ವಿಶಾಲಾಕ್ಷ ಕೃಷ್ಣ ದುಃಸ್ವಪ್ನನಾಶನ ॥೬೦॥

ಎಲೈ ಪದ್ಮನಾಭನೇ, ವಿಶಾಲಾಕ್ಷನೇ, ಕೃಷ್ಣನೇ, ದುಃಸ್ವಪ್ನವಿನಾಶನನೇ, ನಿನ್ನ ಅನುಗ್ರಹದಿಂದ ನಾನು ಭೂಮಿಯಲ್ಲಿ ಋಷಿಗಳು, ದೇವತೆಗಳು, ಗಂಧರ್ವರು, ಯಕ್ಷ-ರಾಕ್ಷಸ-ಪನ್ನಗಗಳು, ಪಿಶಾಚಿಗಳು, ಮನುಷ್ಯರು, ಮೃಗಪಕ್ಷಿಗಳು, ಸರೀಸೃಪಗಳು ಇವೇ ಮೊದಲಾದ ಅನೇಕ ಪ್ರಾಣಿಗಳನ್ನು ಸೃಷ್ಟಿಸಿದ್ದೇನೆ.

ತ್ವಂ ಗತಿಃ ಸರ್ವಭೂತಾನಾಂ ತ್ವಂ ನೇತಾ ತ್ವಂ ಜಗನ್ಮುಖಮ್ ।
ತತ್ತ್ವಪಾದೇನ ದೇವೇಶ ಸುಖಿನೋ ವಿಬುಧಾಃ ಸದಾ ॥೬೧॥

ಎಲ್ಲ ಭೂತಗಳಿಗೂ ನೀನೇ ಗತಿಯಾದವನು. ನೀನೇ ನಾಯಕನಾದವನು. ನೀನೇ ಜಗತ್ತಿನಲ್ಲಿ ಪ್ರಧಾನನಾದವನು. ಎಲೈ ದೇವೇಶನೇ, ನಿನ್ನ ಅನುಗ್ರಹದಿಂದ ದೇವತೆಗಳಾದ ನಾವು ಯಾವಾಗಲೂ ಸಂತೋಷದಿಂದಿದ್ದೇವೆ.

ಪೃಥಿವೀ ನಿರ್ಭಯಾ ದೇವ ತತ್ತ್ವಪಾದಾದ್ ಸದಾಭವತ್ ।
ತಸ್ಮಾದ್ ಭವ ವಿಶಾಲಾಕ್ಷ ಯದುವಂಶವಿವರ್ಧನಃ ॥೬೨॥

ಧರ್ಮಸಂಸ್ಥಾಪನಾರ್ಥಾಯ ದೈತೇಯಾನಾಂ ವಧಾಯ ಚ ।
ಜಗತೋ ಧಾರಣಾರ್ಥಾಯ ವಿಜ್ಞಾಪ್ಯಂ ಕುರು ಮೇ ಪ್ರಭೋ ॥೬೩॥

ಎಲೈ ದೇವನೇ, ನಿನ್ನ ಅನುಗ್ರಹದಿಂದ ಭೂಮಿಯು ಯಾವಾಗಲೂ ನಿರ್ಭಯವಾಗಿದೆ. ದೇವನೇ, ವಿಶಾಲಾಕ್ಷನೇ, ಯದುವಂಶವಿವರ್ಧನನೇ, ಆದ್ದರಿಂದ ಧರ್ಮಸಂಸ್ಥಾಪನೆಯನ್ನು ಮಾಡಲು ದೈತ್ಯರ ವಧೆಯನ್ನು ಮಾಡಿ ಜಗತ್ತನ್ನು ರಕ್ಷಿಸಲು ಪ್ರಭುವೇ ನನ್ನ ಈ ವಿಜ್ಞಾಪನೆಯನ್ನು ಆಲಿಸು.

ಯದೇತತ್ ಪರಮಂ ಗುಹ್ಯಂ ತತ್ತ್ವಪಾದಮಯಂ ವಿಭೋ ।
ವಾಸುದೇವ ತದೇತತ್ ತೇ ಮಯೋದ್ಗೀತಂ ಯಥಾತಥಮ್ ॥೬೪॥

ಯಾವ ಈ ಅತ್ಯಂತ ಅವ್ಯಕ್ತವಾದ ಮತ್ತು ಶ್ರೇಷ್ಠವಾದ ನಿನ್ನ ಅನುಗ್ರಹದಿಂದಲೇ ಜನಿಸಿದ ವಾಸುದೇವರೂಪವಿದೆಯೋ ಅದನ್ನು ನಾನು ಯಥಾರ್ಥವಾಗಿ ಪ್ರಶಂಸಿಸಿ ಗಾನವನ್ನು ಮಾಡಿದ್ದೇನೆ.

ಸೃಷ್ಟ್ವಾ ಸಂಕರ್ಷಣಂ ದೇವಂ ಸ್ವಯಮಾತ್ಮಾನಮಾತ್ಮನಾ ।
ಕೃಷ್ಣ ತ್ವಮಾತ್ಮನಾಸ್ರಾಕ್ಷೀಃ ಪ್ರದ್ಯುಮ್ನಂ ಚಾತ್ಮಸಂಭವಮ್ ॥೬೫॥

ಎಲೈ ಕೃಷ್ಣನೇ, ನೀನು ಸ್ವತಃ ಆ ವಾಸುದೇವರೂಪದಿಂದ ಸಂಕರ್ಷಣ ರೂಪವನ್ನು ಸೃಷ್ಟಿ ಮಾಡಿ ಅನಂತರ ಹಿಂದಿನಿಂದಲೇ ಜನಿಸಿದ್ದ ಸಂಕರ್ಷಣ ರೂಪದಿಂದ ಪ್ರದ್ಯುಮ್ನನ ರೂಪವನ್ನು ಸೃಷ್ಟಿಸಿದ್ದೀಯೆ.

ಪ್ರದ್ಯುಮ್ನಾದ್ಭವನಿರುದ್ಧಂ ತ್ವಂ ಯಂ ವಿದುರ್ವಿಷ್ಣುಮವ್ಯಯಮ್ ।
ಅನಿರುದ್ಧೋಽಸೃಜನ್ಮಾಂ ವೈ ಬ್ರಹ್ಮಾಣಂ ಲೋಕಧಾರಿಣಮ್ ॥೬೬॥

ಪ್ರದ್ಯುಮ್ನರೂಪದಿಂದ ಅನಿರುದ್ಧ ರೂಪವನ್ನು ಸೃಷ್ಟಿಸಿದ್ದೀಯೆ. ಆ ಅನಿರುದ್ಧ ರೂಪವನ್ನು ಶಾಶ್ವತವಾದ ವಿಷ್ಣುರೂಪವೆಂದು ಜ್ಞಾನಿಗಳು ತಿಳಿದಿದ್ದಾರೆ. ಲೋಕಧಾರಕನಾದ ಬ್ರಹ್ಮನಾದ ನನ್ನನ್ನು ನೀನು ಅನಿರುದ್ಧ ರೂಪದಿಂದ ಸೃಷ್ಟಿಸಿದ್ದೀಯೆ.

ವಾಸುದೇವಮಯಃ ಸೋಽಹಂ ತ್ವಯೈವಾಸ್ಮಿ ವಿನಿರ್ಮಿತಃ ।
ವಿಭಜ್ಯ ಭಾಗಶೋಽಽತ್ಮಾನಂ ವ್ರಜ ಮಾನುಷತಾಂ ವಿಭೋ ॥೬೭॥

ವಾಸುದೇವ ಪ್ರಧಾನನಾದ (ವಾಸುದೇವನ ಪ್ರಧಾನ ಉಪಾಸಕನಾದ) ನಾನು ನಿನ್ನಿಂದಲೇ ಸೃಷ್ಟಿಸಲ್ಪಟ್ಟಿದ್ದೇನೆ. ಎಲೈ ವಿಭುವೇ, ನಿನ್ನನ್ನು ನೀನು ಅಂಶರೂಪವಾಗಿ ವಿಭಾಗಿಸಿ ಮನುಷ್ಯಲೋಕಕ್ಕೆ ಹೋಗುವವನಾಗು.

ತತ್ರಾಸುರವಧಂ ಕೃತ್ವಾ ಸರ್ವಲೋಕಸುಖಾಯ ವೈ ।
ಧರ್ಮಂ ಸ್ಥಾಪ್ಯ ಯಶಃ ಪ್ರಾಪ್ಯ ಯೋಗಂ ಪ್ರಾಪ್ಸ್ಯಸಿ ತತ್ತ್ವತಃ ॥೬೮॥

ಅಲ್ಲಿ ಸರ್ವಲೋಕದ ಸುಖಕ್ಕಾಗಿ ಅಸುರವಧೆಯನ್ನು ಮಾಡಿ, ಧರ್ಮ ಸಂಸ್ಥಾಪನೆಯನ್ನು ಮಾಡಿ, ಅಪಾರವಾದ ಕೀರ್ತಿಯನ್ನು ಪಡೆದು ಮೂಲರೂಪದ ಸಮಾಗಮವನ್ನು ಸತ್ಯವಾಗಿ ಹೊಂದುವಿ.

ತ್ವಾಂ ಹಿ ಬ್ರಹ್ಮರ್ಷಯೋ ಲೋಕೇ ದೇವಾಶ್ಚಾಮಿತವಿಕ್ರಮ ।
ತೈಸ್ತೈಶ್ಚ ನಾಮಭಿರ್ಭಕ್ತಾ ಗಾಯಂತಿ ಪರಮಾತ್ಮಕಮ್ ॥೬೯॥

ಎಲೈ ಅಮಿತವಿಕ್ರಮನೇ, ಲೋಕದಲ್ಲಿ ನಿನ್ನ ಭಕ್ತರಾದ ಬ್ರಹ್ಮರ್ಷಿಗಳು ಮತ್ತು ದೇವತೆಗಳು ಪರಮಾತ್ಮನಾದ ನಿನ್ನನ್ನು ಅನೇಕ ನಾಮಗಳಿಂದ ಗಾನವನ್ನು ಮಾಡುತ್ತಾರೆ.

ಸ್ಥಿತಾಶ್ಚ ಸರ್ವೇ ತ್ವಯಿ ಭೂತಸಂಘಾಃ
ಕೃತ್ವಾऽऽಶ್ರಯಂ ತ್ವಾಂ ವರದಂ ಸುಬಾಹೋ ।
ಅನಾದಿಮಧ್ಯಾಂತಮಪಾರಯೋಗಂ
ಲೋಕಸ್ಯ ಸೇತುಂ ಪ್ರವದಂತಿ ವಿಪ್ರಾಃ ॥೭೦॥

ಎಲೈ ಸುಬಾಹುವೇ, ವರಪ್ರದನಾದ ನಿನ್ನನ್ನು ಆಶ್ರಯಿಸಿ ಎಲ್ಲ ಪ್ರಾಣಿಸಮೂಹಗಳು ನಿನ್ನಲ್ಲಿಯೇ ನೆಲೆಸಿವೆ. ಆದಿಮಧ್ಯಾಂತಶೂನ್ಯನೂ ಪಾರವಿಲ್ಲದ ಯೋಗಶಕ್ತಿಯುಳ್ಳವನೂ ಆದ ನಿನ್ನನ್ನು ಬ್ರಾಹ್ಮಣರು ಲೋಕವನ್ನು ಧರಿಸುವ ಸೇತುವೆಂದು ಹೇಳುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಏಕಷಷ್ಟಿತಮೋऽಧ್ಯಾಯಃ ॥

॥ ಭೀಷ್ಮವಧಪರ್ವಣಿ ಏಕವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಅರವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೆರಡನೆಯ ಅಧ್ಯಾಯ

ಬ್ರಹ್ಮದೇವರಿಗೆ ಹರಿಯಿಂದ ಅನುಗ್ರಹ ವಚನ. ದೇವತೆಗಳಿಗೆ ಬ್ರಹ್ಮದೇವರಿಂದ ತಮ್ಮ ಮತ್ತು ಹರಿಯ ಸಂವಾದದ ವಿವರಣೆ. ಭೀಷ್ಮರಿಂದ ದುರ್ಯೋಧನನಿಗೆ ಅದರ ಉಪದೇಶ.

ಭೀಷ್ಮಃ

ತತಃ ಸ ಭಗವಾನ್ ದೇವೋ ಲೋಕಾನಾಂ ಪರಮೇಶ್ವರಃ ।
ಬ್ರಹ್ಮಾಣಂ ಪ್ರತ್ಯುವಾಚೇದಂ ಸ್ನಿಗ್ಧಗಂಭೀರಯಾ ಗಿರಾ ॥೧॥

ಭೀಷ್ಮ- ಅನಂತರ ಲೋಕಗಳಿಗೆ ಒಡೆಯನಾದ ದೇವದೇವನಾದ ಭಗವಂತನು ತನ್ನಮೇಘ ಗಂಭೀರವಾಣಿಯಿಂದ ಬ್ರಹ್ಮದೇವರನ್ನು ಕುರಿತು ಹೀಗೆ ಮಾತನಾಡಿದನು.

ವಿದಿತಂ ತಾತ ಯೋಗಾನ್ಮೇ ಸರ್ವಮೇತತ್ ತವೇಪ್ಸಿತಮ್ ।
ತಥಾ ತದ್ ಭವಿತೇತ್ಯುಕ್ತ್ವಾ ತತ್ರೈವಾಂತರಧೀಯತ ॥೨॥

ಪ್ರೀತಿಪಾತ್ರನೇ, ನನ್ನ ಯೋಗಶಕ್ತಿಯಿಂದ ನಾನು ಎಲ್ಲವನ್ನೂ ತಿಳಿದಿದ್ದೇನೆ. ನಿನ್ನ ಅಭೀಷ್ಟವೆಲ್ಲವೂ ನೀನು ನೆನೆಸಿದಂತೆಯೇ ಆಗುವುದು ಎಂದು ಹೇಳಿ ಅಂತರ್ಧಾನವನ್ನು ಹೊಂದಿದನು.

ತತೋ ದೇವರ್ಷಿಗಂಧರ್ವಾ ವಿಸ್ಮಯಂ ಪರಮಂ ಗತಾಃ ।
ಕೌತೂಹಲಪರಾಃ ಸರ್ವೇ ಪಿತಾಮಹಮಥಾಬ್ರುವನ್ ॥೩॥

ಆಗ ದೇವರ್ಷಿ-ಗಂಧರ್ವರೆಲ್ಲರೂ ಬಹಳ ವಿಸ್ಮಯವನ್ನು ಹೊಂದಿದರು. ಎಲ್ಲರೂ ಕುತೂಹಲದಿಂದ ಕೂಡಿದವರಾಗಿ ಪಿತಾಮಹರಾದ ಬ್ರಹ್ಮದೇವರನ್ನು ಕುರಿತು ಹೀಗೆ ಕೇಳಿದರು.

ಕೋ ನ್ವಯಂ ಯೋ ಭಗವತಾ ಪ್ರಣಮ್ಯ ವಿನಯಾದ್ ವಿಭೋ ।
ವಾಗ್ಭಿಃ ಸ್ತುತೋ ವರಿಷ್ಠಾಭಿಃ ಶ್ರೋತುಮಿಚ್ಛಾಮ ತಂ ವಯಮ್ ॥೪॥

ಪ್ರಭುಗಳೇ, ಪೂಜ್ಯರಾದ ನೀವು ವಿನಯದಿಂದ ನಮಸ್ಕರಿಸಿ ಶ್ರೇಷ್ಠವಾದ ವಾಣಿಯಿಂದ ಸ್ತುತಿಸಿದ ವ್ಯಕ್ತಿಯು ಯಾರು? ನಾವು ಅವನನ್ನು ಕೇಳಿ ತಿಳಿದುಕೊಳ್ಳಲು ಬಯಸುತ್ತೇವೆ.

ಏವಮುಕ್ತಸ್ತು ಭಗವಾನ್ ಪ್ರತ್ಯುವಾಚ ಪಿತಾಮಹಃ ।
ದೇವಬ್ರಹ್ಮರ್ಷಿಗಂಧರ್ವಾನ್ ಸರ್ವಾನ್ ಮಧುರಯಾ ಗಿರಾ ॥೫॥

ಹೀಗೆ ಕೇಳಲ್ಪಟ್ಟ ಪೂಜ್ಯರಾದ ಬ್ರಹ್ಮದೇವರು ಮಧುರವಾದ ತಮ್ಮ ವಾಣಿಯಿಂದ ದೇವರ್ಷಿ-ಗಂಧರ್ವರೆಲ್ಲರಿಗೂ ಉತ್ತರವನ್ನು ನೀಡಿದರು.

ಯತ್ತತ್ಪರಂ ಭವಿಷ್ಯಂ ಚ ಭವಿತವ್ಯಂ ಚ ಯತ್ಪರಮ್ ।
ಭೂತಾತ್ಮಾ ಯಃ ಪ್ರಭುಶ್ಚೈವ ಬ್ರಹ್ಮ ಯಚ್ಚ ಪರಂ ಪದಮ್ ॥೬॥

ತೇನಾಸ್ಮಿ ಕೃತಸಂವಾದಃ ಪ್ರಸನ್ನೇನ ಸುರರ್ಷಭಾಃ ।
ಜಗತೋಽನುಗ್ರಹಾರ್ಥಾಯ ಯಾಚತೋ ಮೇ ಜಗತ್ಪತಿಃ ॥೭॥

ಮಾನುಷಂ ಲೋಕಮಾತಿಷ್ಠ ವಾಸುದೇವ ಇತಿ ಶ್ರುತಃ ।
ಅಸುರಾಣಾಂ ವಧಾರ್ಥಾಯ ಸಂಭವಸ್ವ ಮಹೀತಲೇ ॥೮॥

ಯಾವುದು ಭವಿಷ್ಯಕಾಲದ ಶ್ರೇಷ್ಠವಸ್ತುವೋ, ಯಾವುದು ವರ್ತಮಾನ ಕಾಲದಲ್ಲಿ ಸರ್ವಶ್ರೇಷ್ಠವೋ, ಯಾವುದು ಭೂತಕಾಲದಲ್ಲಿ ಸರ್ವಶ್ರೇಷ್ಠವೋ ಅಂತಹ ಯಾವನನ್ನು ಪ್ರಭುವೆಂದೂ, ಬ್ರಹ್ಮನೆಂದೂ, ಪರಮಪದವೆಂದೂ ಕರೆಯುತ್ತಾರೆಯೋ ಅಂತಹ ಪ್ರಸನ್ನನಾದ ಭಗವಂತನಾದ ವಿಷ್ಣುವಿನ ಜೊತೆಯಲ್ಲಿ ನಾನು ಸಂವಾದವನ್ನು ಮಾಡಿದೆ. ಎಲೈ ಸುರಶ್ರೇಷ್ಠರೇ, ಜಗತ್ಪತಿಯಾದ ಅವನನ್ನು ನಾನು ಜಗತ್ತಿಗೆ ಅನುಗ್ರಹವನ್ನು ಮಾಡಬೇಕೆಂದು ಪ್ರಾರ್ಥಿಸಿದೆ. ಅಸುರರ ವಧೆಗಾಗಿ ವಾಸುದೇವ ಎಂಬ ಹೆಸರಿನಿಂದ ಮನುಷ್ಯಲೋಕದಲ್ಲಿ ಮನುಷ್ಯನ ಶರೀರವನ್ನು ಹೊಂದಿದವನಂತೆ ಭೂತಳದಲ್ಲಿ ಅವತರಿಸು ಎಂದು ನಾನು ಪ್ರಾರ್ಥಿಸಿದೆ.

ಸಂಗ್ರಾಮೇ ನಿಹತಾ ಯೇ ತೇ ದೈತ್ಯದಾನವರಾಕ್ಷಸಾಃ ।
ತ ಇಮೇ ನೃಷು ಸಂಭೂತಾ ಘೋರರೂಪಾ ಮಹಾಬಲಾಃ ॥೯॥

ತೇಷಾಂ ವಧಾರ್ಥಂ ಭಗವಾನ್ ನರೇಣ ಸಹಿತೋ ವಶೀ ।
ಮಾನುಷೀಂ ಯೋನಿಮಾಸ್ಥಾಯ ಚರಿಷ್ಯತಿ ಮಹೀತಲೇ ॥೧೦॥

ಅವನ ಜೊತೆಯಲ್ಲಿ ಯುದ್ಧದಲ್ಲಿ ಹತರಾದ ಈ ದೈತ್ಯ-ದಾನವ- ರಾಕ್ಷಸರೆಲ್ಲರೂ ಭೂಮಿಯಲ್ಲಿ ಘೋರರೂಪವುಳ್ಳವರೂ, ಮಹಾಬಲಿಷ್ಠರೂ ಆದ ಮನುಷ್ಯರಾಗಿ ಜನಿಸಿದ್ದಾರೆ. ಅವರ ವಧೆಯನ್ನು ಮಾಡುವ ಸಲುವಾಗಿ ಭಗವಂತನೂ, ಸ್ವತಂತ್ರನೂ ಆದ ಅವನು ನರನ ಜೊತೆಯಲ್ಲಿ ಮನುಷ್ಯಯೋನಿಯಲ್ಲಿ ಅವತರಿಸಿ ಭೂತಳದಲ್ಲಿ ಸಂಚರಿಸುವನು.

ನರನಾರಾಯಣೌ ಯೌ ತೌ ಪುರಾಣಾವೃಷಿಸತ್ತಮೌ ।

ಪ್ರಾಚೀನರಾದ ಋಷಿಶ್ರೇಷ್ಠರಾದ ಯಾವ ನರ-ನಾರಾಯಣರಿದ್ದಾರೆಯೋ ಅಮಿತಪರಾಕ್ರಮಿಗಳಾದ ಅವರೇ ಮನುಷ್ಯಲೋಕದಲ್ಲಿ ಒಟ್ಟಿಗೆ ಜನಿಸಿದ್ದಾರೆ.

ಅಜೇಯೌ ಸಮರೇ ಯತ್ತೌ ಸಹಿತಾವಮರೈರಪಿ ।
ಮೂಢಾಸ್ತೌ ನ ಜಾನಂತಿ ನರನಾರಾಯಣಾವೃಷೀ ॥೧೨॥

ಪ್ರಯತ್ನಶೀಲರಾದ ಅವರು ಜೊತೆಯಲ್ಲಿರುವಾಗ ಯುದ್ಧದಲ್ಲಿ ದೇವತೆಗಳಿಂದಲೂ ಅವರನ್ನು ಜಯಿಸಲು ಸಾಧ್ಯವಿಲ್ಲ. ಮೂಢರಾದ ಮನುಷ್ಯಾದಿಗಳು ಅವರನ್ನು ನರ-ನಾರಾಯಣ ಋಷಿಗಳು ಎಂದು ತಿಳಿಯುವುದಿಲ್ಲ.

ತಸ್ಯಾಹಮಾತ್ಮಜೋ ಬ್ರಹ್ಮಾ ಸರ್ವಸ್ಯ ಜಗತಃ ಪತಿಃ ।
ವಾಸುದೇವೋऽರ್ಚನೀಯೋ ವಃ ಸರ್ವಲೋಕಮಹೇಶ್ವರಃ ॥೧೩॥

ಸರ್ವಜಗತ್ತಿಗೆ ಒಡೆಯನಾದ ಬ್ರಹ್ಮನಾದ ನಾನು ವಾಸುದೇವನ ಪುತ್ರನಾಗಿದ್ದೇನೆ. ಅಂತಹ ಸರ್ವಲೋಕ ಮಹೇಶ್ವರನಾದ ವಾಸುದೇವನು ನಿಮ್ಮಿಂದ ಪೂಜಿಸಲ್ಪಡಬೇಕು.

ತಥಾ ಮನುಷ್ಯೋऽಯಮಿತಿ ಕದಾಚಿತ್ ಸುರಸತ್ತಮಾಃ ।
ನಾವಜ್ಞೇಯೋ ಮಹಾವೀರ್ಯಃ ಶಂಖಿಚಕ್ರಗದಾಧರಃ ॥೧೪॥

ಎಲೈ ದೇವತೆಗಳಲ್ಲಿ ಶ್ರೇಷ್ಠರೇ, ಮಹಾಪರಾಕ್ರಮಿಯೂ, ಶಂಖ-ಚಕ್ರ-ಗದಾಧಾರಿಯೂ ಆದ ಅವನನ್ನು ಮನುಷ್ಯನೆಂದು ತಿಳಿದು ಎಂದೂ ಅವಮಾನ ಮಾಡಬಾರದು.

ಏತತ್ಪರಮಕಂ ಗುಹ್ಯಮೇತತ್ಪರಮಕಂ ಪದಮ್ ।
ಏತತ್ಪರಮಕಂ ಬ್ರಹ್ಮ ಏತತ್ಪರಮಕಂ ಯಶಃ ॥೧೫॥

ಅವನೇ ಪರಮಾವ್ಯಕ್ತನಾದವನು; ಅವನೇ ಪರಮಪ್ರಾಪ್ಯನಾದವನು; ಅವನೇ ಪರಬ್ರಹ್ಮನಾದವನು; ಅವನೇ ಸರ್ವೋತ್ತಮ ಮಹಿಮೆಯುಳ್ಳವನು.

ಏತದಕ್ಷರಮವ್ಯಕ್ತಮೇತತ್ಸ್ಯಾಚ್ಛಾಶ್ವತಂ ಮಹತ್ ।
ಏತತ್ಪುರುಷಸಂಜ್ಞಂ ವೈ ಗೀಯತೇ ಜ್ಞಾಯತೇ ನ ಚ ॥೧೬॥

ಅವನೇ ಅಕ್ಷರನಾದವನು (ನಾಶವಿಲ್ಲದವನು); ಅವ್ಯಕ್ತನಾದವನು; ಶಾಶ್ವತನಾದವನು; ದೊಡ್ಡ ವಸ್ತುವಾದವನು; ಅವನನ್ನು ಪುರುಷನೆಂದು ಕರೆಯುತ್ತಾರೆ; ಅವನ ಮಹಿಮೆಯನ್ನು ಜ್ಞಾನಿಗಳು ಹಾಡುತ್ತಾರೆ; ಯಾರೂ ಅವನನ್ನು ಪೂರ್ಣವಾಗಿ ತಿಳಿಯುವುದಿಲ್ಲ.

ಏತತ್ಪರಮಕಂ ತೇಜ ಏತತ್ಪರಮಕಂ ಸುಖಮ್ ।
ಏತತ್ಪರಮಕಂ ಸತ್ಯಂ ಕೀರ್ತಿತಂ ವಿಶ್ವಕರ್ಮಣಾ ॥೧೭॥

ಅವನೇ ಪರಮ ತೇಜೋರೂಪನಾದವನು; ಅವನೇ ನಿರವಧಿಕ ಸುಖರೂಪನಾದವನು; ಅವನೇ ಪರಮಸತ್ಯನಾದವನು ಎಂದು ವಿಶ್ವಕರ್ಮನಿಂದ ಸ್ತೋತ್ರ ಮಾಡಲ್ಪಟ್ಟಿದ್ದಾನೆ (ವಿಶ್ವಕರ್ಮಸೂಕ್ತದಲ್ಲಿ ಸ್ತೋತ್ರ ಮಾಡಲ್ಪಟ್ಟಿದ್ದಾನೆ).

ತಸ್ಮಾತ್ಸರ್ವೈಃ ಸುರೈಃ ಸೇಂದ್ರೈರ್ಲೋಕೈಶ್ಚಾಮಿತವಿಕ್ರಮಃ ।
ನಾವಜ್ಞೇಯೋ ವಾಸುದೇವೋ ಮಾನುಷೋಽಯಮಿತಿ ಪ್ರಭುಃ ॥೧೮॥

ಆದ್ದರಿಂದ ಪ್ರಭುವಾದ ಅವನನ್ನು ಮನುಷ್ಯನೆಂದು ತಿಳಿದು ಇಂದ್ರನಿಂದ ಸಹಿತರಾದ ಯಾವ ದೇವತೆಗಳಾಗಲೀ ಅಥವಾ ಉಳಿದ ಜನರಾಗಲೀ ಅಮಿತವಿಕ್ರಮನಾದ ಆ ವಾಸುದೇವನನ್ನು ಅವಮಾನ ಮಾಡಬಾರದು.

ಯಶ್ಚ ಮಾನುಷಮಾತ್ರೋಽಯಮಿತಿ ಬ್ರೂಯಾತ್ ಸುಮಂದಧೀಃ ।
ಹೃಷೀಕೇಶಮವಜ್ಞಾನಾತ್ ತಮಾಹುಃ ಪುರುಷಾಧಮಮ್ ॥೧೯॥

ಅತ್ಯಂತ ಮಂದಬುದ್ಧಿಯುಳ್ಳ ಯಾವನು ಕೃಷ್ಣನನ್ನು ಕೇವಲ ಮನುಷ್ಯನೆಂದು ಹೇಳುತ್ತಾನೆಯೋ, ಕೃಷ್ಣನನ್ನು ಅವಮಾನ ಮಾಡುವ ಅವನನ್ನು ಜ್ಞಾನಿಗಳು ಪುರುಷಾಧಮನೆಂದು ಕರೆಯುತ್ತಾರೆ.

ಯೋಗಿನಂ ತಂ ಮಹಾತ್ಮಾನಂ ಪ್ರವಿಷ್ಟಂ ಮಾನುಷೀಂ ತನುಮ್ ।
ಅವಮನ್ಯೇದ್ ವಾಸುದೇವಂ ತಮಾಹುಸ್ತಾಮಸಂ ಜನಾಃ ॥೨೦॥

ಯಾವನು ಮನುಷ್ಯಶರೀರವನ್ನು ಪ್ರವೇಶಿಸಿದ ಮಹಾತ್ಮನಾದ ಯೋಗಿಯಾದ ವಾಸುದೇವನನ್ನು ಅವಮಾನ ಮಾಡುತ್ತಾನೆಯೋ ಅವನನ್ನು ಜ್ಞಾನಿಜನರು ತಾಮಸನೆಂದು ಕರೆಯುತ್ತಾರೆ.

ದೇವಂ ಚರಾಚರಾತ್ಮಾನಂ ಶ್ರೀವತ್ಸಾಂಕಂ ಸುವರ್ಚಸಮ್ ।
ಪದ್ಮನಾಭಂ ನ ಜಾನಾತಿ ತಮಾಹುಸ್ತಾಮಸಂ ಜನಾಃ ॥೨೧॥

ಯಾವನು ಚರಾಚರಗಳಲ್ಲಿ ವ್ಯಾಪ್ತನಾದ, ಒಳ್ಳೆಯ ಕಾಂತಿಯನ್ನು ಹೊಂದಿದ ಶ್ರೀವತ್ಸಾಂಕನಾದ ಪದ್ಮನಾಭ ದೇವನನ್ನು ತಿಳಿಯುವುದಿಲ್ಲವೋ ಅವನನ್ನು ಜ್ಞಾನಿಗಳು ತಾಮಸನೆಂದು ಹೇಳುತ್ತಾರೆ.

ಕಿರೀಟಕೌಸ್ತುಭಧರಂ ಮಿತ್ರಾಣಾಮಭಯಂಕರಮ್ ।
ಅವಜಾನನ್ ಮಹಾತ್ಮಾನಂ ಘೋರೇ ತಮಸಿ ಮಜ್ಜತಿ ॥೨೨॥

ಕಿರೀಟಕೌಸ್ತುಭಧಾರಿಯಾದ, ಭಕ್ತರಿಗೆ ಅಭಯಂಕರನಾದ ಮಹಾತ್ಮನಾದ ಅವನನ್ನು ಅವಮಾನ ಮಾಡುವವನು ಘೋರವಾದ ತಮಸ್ಸಿನಲ್ಲಿ ಮುಳುಗುತ್ತಾನೆ.

ಏವಂ ವಿದಿತ್ವಾ ತತ್ತ್ವಾರ್ಥಂ ಲೋಕಾನಾಮೀಶ್ವರೇಶ್ವರಃ ।
ವಾಸುದೇವೋ ನಮಸ್ಕಾರ್ಯಃ ಸರ್ವಲೋಕೈಃ ಸುರೋತ್ತಮಾಃ ॥೨೩॥

ಎಲೈ ಸುರಶ್ರೇಷ್ಠರೇ, ಹೀಗೆ ತತ್ತ್ವವನ್ನು ತಿಳಿದು ಸರ್ವಲೋಕೇಶ್ವರೇಶ್ವರನಾದ ವಾಸುದೇವನನ್ನು ಎಲ್ಲ ಜೀವರೂ ನಮಸ್ಕರಿಸಬೇಕು.

ಏವಮುಕ್ತ್ವಾ ಸ ಭಗವಾನ್ ಸರ್ವಾನ್ ದೇವಗಣಾನ್ ಪುರಾ ।
ವಿಸೃಜ್ಯ ಸರ್ವಲೋಕಾತ್ಮಾ ಜಗಾಮ ಭವನಂ ಸ್ವಕಮ್ ॥೨೪॥

ಸರ್ವಲೋಕಪ್ರಭುವಾದ, ಪೂಜ್ಯರಾದ ಆ ಬ್ರಹ್ಮದೇವರು ಎಲ್ಲ ದೇವ ಸಮೂಹವನ್ನು ಕುರಿತು ಈ ರೀತಿಯಾಗಿ ಹೇಳಿ ಅವರನ್ನು ಕಳುಹಿಸಿಕೊಟ್ಟು ತಮ್ಮ ಮನೆಗೆ ಹೋದರು.

ತತೋ ದೇವಾಃ ಸಗಂಧರ್ವಾ ಮುನಯೋಽಪ್ಸರಸೋಽಪಿ ಚ ।
ಕಥಾಂ ತಾಂ ಬ್ರಹ್ಮಣಾ ಗೀತಾಂ ಶ್ರುತ್ವಾ ಪ್ರೀತಾ ದಿವಂ ಯಯುಃ॥೨೫॥

ಆಗ ಗಂಧರ್ವರಿಂದ ಸಹಿತರಾದ ದೇವತೆಗಳು, ಋಷಿಗಳು, ಅಪ್ಸರೆಯರೆಲ್ಲರೂ ಬ್ರಹ್ಮದೇವರು ಹೇಳಿದ ಆ ಕಥೆಯನ್ನು ಕೇಳಿ ಸಂತೋಷಗೊಂಡು ಸ್ವರ್ಗಕ್ಕೆ ಹೋದರು.

ಏತಚ್ಛ್ರುತಂ ಮಯಾ ತಾತ ಋಷೀಣಾಂ ಭಾವಿತಾತ್ಮನಾಮ್ ।
ವಾಸುದೇವಂ ಕಥಯತಾಂ ಸಮವಾಯೇ ಪುರಾತನಮ್ ॥೨೬॥

ಎಲೈ ಪ್ರೀತಿಪಾತ್ರನೇ, ಪರಿಶುದ್ಧ ಮನಸ್ಸುಳ್ಳ ವಾಸುದೇವನ ಮಹಿಮೆಯನ್ನು ಹೇಳುವ ಋಷಿಗಳ ಗುಂಪಿನಲ್ಲಿ ನಾನು ಈ ಪುರಾತನವಾದ ವಾಸುದೇವನ ಮಹಿಮೆಯನ್ನು ಕೇಳಿದ್ದೇನೆ.

ಜಾಮದಗ್ನ್ಯಸ್ಯ ರಾಮಸ್ಯ ಮಾರ್ಕಂಡೇಯಸ್ಯ ಧೀಮತಃ ।
ವ್ಯಾಸನಾರದಯೋಶ್ಚಾಪಿ ಶ್ರುತಂ ಶ್ರುತವಿಶಾರದ ॥೨೭॥

ಎಲೈ ಶ್ರವಣ ಮಾಡುವುದರಲ್ಲಿ ವಿಶಾರದನಾದವನೇ, ನಾನು ಇದನ್ನು ಜಮದಗ್ನಿ ಪುತ್ರರಾದ ಪರಶುರಾಮರಿಂದಲೂ, ಮೇಧಾವಿಗಳಾದ ಮಾರ್ಕಂಡೇಯರಿಂದಲೂ, ವ್ಯಾಸ-ನಾರದರಿಂದಲೂ ಸಹ ಕೇಳಿದ್ದೇನೆ.

ಏತಮರ್ಥಂ ಚ ವಿಜ್ಞಾಯ ಶ್ರುತ್ವಾ ಚ ಪ್ರಭುಮವ್ಯಯಮ್ ।
ವಾಸುದೇವಂ ಮಹಾತ್ಮಾನಂ ಲೋಕಾನಾಮೀಶ್ವರೇಶ್ವರಮ್ ॥೨೮॥

ಯಸ್ಯಾಸಾವಾತ್ಮಜೋ ಬ್ರಹ್ಮಾ ಸರ್ವಸ್ಯ ಜಗತಃ ಪಿತಾ ।
ಕಥಂ ನ ವಾಸುದೇವೋಽಯಮರ್ಚ್ಯೋಽಭ್ಯರ್ಚ್ಯಶ್ಚ ಮಾನವೈಃ ॥೨೯॥

ಈ ಕಥೆಯನ್ನು ಕೇಳಿದ ಮೇಲೆ ಸರ್ವಜಗತ್ಪ್ರಭುವಾದ ಬ್ರಹ್ಮದೇವರು ಯಾವನ ಪುತ್ರನೋ ಅಂತಹ ಪ್ರಭುವೂ, ಶಾಶ್ವತನೂ, ಮಹಾತ್ಮನೂ, ಲೋಕಗಳ ಒಡೆಯರಿಗೆ ಒಡೆಯನಾದವನೂ ಆದ ವಾಸುದೇವನನ್ನು ತಿಳಿದು ಯಾವ ಮನುಷ್ಯನು ತಾನೇ ಅವನನ್ನು ಅರ್ಚಿಸಲಾರ ಮತ್ತು ಪೂಜಿಸಲಾರ?

ವಾರಿತೋಽಸಿ ಪುರಾ ತಾತ ಮುನಿಭಿರ್ವೇದಪಾರಗೈಃ ।
ಮಾ ಗಚ್ಛ ಸಂಯುಗಂ ತೇನ ವಾಸುದೇವೇನ ಧೀಮತಾ ।
ಮಾ ಪಾಂಡವೈಃ ಸಾರ್ಧಮಿತಿ ತಚ್ಚ ಮೋಹಾನ್ನ ಬುಧ್ಯಸೇ ॥೩೦॥

ಎಲೈ ಪ್ರೀತಿಪಾತ್ರನೇ, ವೇದಪಾರಂಗತರಾದ ಋಷಿಗಳು ನಿನ್ನನ್ನು ಹಿಂದೆಯೇ, ಮೇಧಾವಿಯಾದ ವಾಸುದೇವನ ಜೊತೆಯಲ್ಲಿ ಯುದ್ಧವನ್ನು ಮಾಡಬೇಡ, ಪಾಂಡವರ

ಜೊತೆಯಲ್ಲಿಯೂ ಯುದ್ಧವನ್ನು ಮಾಡಬೇಡ ಎಂದು ತಡೆದಿದ್ದಾರೆ. ಆದರೆ ಮೋಹದಿಂದ ನೀನು ಅವರ ಮಾತುಗಳನ್ನು ತಿಳಿಯುತ್ತಿಲ್ಲ.

ಮನ್ಯೇ ತ್ವಾಂ ರಾಕ್ಷಸಂ ಕ್ರೂರಂ ತಥಾ ಚಾಸಿ ತಮೋವೃತಃ ।
ಯಸ್ಮಾದ್ ದ್ವಿಷಸಿ ಗೋವಿಂದಂ ಪಾಂಡವಂ ಚ ಧನಂಜಯಮ್ ।
ನರನಾರಾಯಣೌ ದೇವೌ ನಾನ್ಯೋ ದ್ವಿಷ್ಯಾದ್ಧಿ ಮಾನವಃ ॥೩೧॥

ನರ-ನಾರಾಯಣರಾದ ದೇವತೆಗಳಾದ ಗೋವಿಂದನನ್ನು ಮತ್ತು ಪಾಂಡವನಾದ ಅರ್ಜುನನನ್ನು ದ್ವೇಷ ಮಾಡುವುದರಿಂದ ನೀನು ತಮೋಗುಣದಿಂದ ಆವೃತನಾದ ಕ್ರೂರನಾದ ರಾಕ್ಷಸನೆಂದು ನಾನು ಭಾವಿಸುತ್ತೇನೆ. ಯಾವ ಮನುಷ್ಯನೂ ಅವರಿಬ್ಬರನ್ನು ದ್ವೇಷ ಮಾಡಲಾರ.

ತಸ್ಮಾದ್ ಬ್ರವೀಮಿ ತೇ ರಾಜನ್ನೇಷ ವೈ ಶಾಶ್ವತೋऽವ್ಯಯಃ ।
ಸರ್ವಲೋಕಮಯೋ ನಿತ್ಯಃ ಶಾಸ್ತಾ ಧಾತಾ ಧರೋ ಧ್ರುವಃ ॥೩೨॥

ರಾಜನೇ, ಆದ್ದರಿಂದ ನಿನಗೆ ಹೇಳುತ್ತಿದ್ದೇನೆ. ಈ ಕೃಷ್ಣನು ಶಾಶ್ವತನಾದವನು; ಸರ್ವವಿಧವಾದ ನಾಶರಹಿತನಾದವನು; ಸುರಲೋಕಪ್ರಧಾನನಾದವನು; ನಿತ್ಯನಾದವನು; ಸರ್ವಲೋಕವನ್ನು ಶಾಸನ ಮಾಡುವವನು; ಎಲ್ಲಲೋಕಗಳಿಗೂ ಕಲ್ಯಾಣ ಮಾಡುವವನು; ಸರ್ವಾಧಾರನಾದವನು ಮತ್ತು ಧ್ರುವನಾದವನು.

ಲೋಕಾನ್ ಧಾರಯತೇ ಯಶ್ಚಿಂಶ್ಚರಾಚರಗುರುಃ ಪ್ರಭುಃ ।
ಯೋದ್ಧಾ ಜಯಶ್ಚ ಜೇತಾ ಚ ಸರ್ವಪ್ರಕೃತಿರೀಶ್ವರಃ ॥೩೩॥

ಅವನು ಮೂರುಲೋಕಗಳನ್ನೂ ಧರಿಸಿದವನು; ಚರಾಚರ ಗುರುವಾದವನು; ಪ್ರಭುವಾದವನು; ಯುದ್ಧವನ್ನು ಮಾಡುವವನು ಜಯ ಮತ್ತು ಜಯಶೀಲನಾದವನು ಎಲ್ಲವೂ ಅವನ ಅಧೀನವಾದವುಗಳು; ಅವನು ಎಲ್ಲರಿಗೂ ಮೂಲಕಾರಣನಾದವನು. ಅವನು ಈಶ್ವರನಾದವನು.

ರಾಜನ್ ಸತ್ತ್ವಮಯೋ ಹ್ಯೇಷ ತಮೋರಾಗವಿವರ್ಜಿತಃ ।
ಯತಃ ಕೃಷ್ಣಸ್ತತೋ ಧರ್ಮೋ ಯತೋ ಧರ್ಮಸ್ತತೋ ಜಯಃ ॥೩೪॥

ಎಲೈ ರಾಜನೇ, ಅವನು ನಿರ್ದೋಷ ಗುಣಪರಿಪೂರ್ಣನಾದವನು; ತಮಸ್ಸು ಮತ್ತು ರಾಗಾದಿಗಳಿಂದ ವರ್ಜಿತನಾದವನು. ಎಲ್ಲಿ ಕೃಷ್ಣನಿದ್ದಾನೆಯೋ ಅಲ್ಲಿ ಧರ್ಮವಿದೆ. ಎಲ್ಲಿ ಧರ್ಮವಿದೆಯೋ ಅಲ್ಲಿ ಜಯವಿದೆ.

ತಸ್ಯ ಮಾಹಾತ್ಮ್ಯಯೋಗೇನ ಯೋಗೇನಾತ್ಮನ ಏವ ಚ ।
ಧೃತಾಃ ಪಾಂಡುಸುತಾ ರಾಜನ್ ಜಯಶ್ಚೈಷಾಂ ಭವಿಷ್ಯತಿ ॥೩೫॥

ಎಲೈ ರಾಜನೇ, ಕೃಷ್ಣನ ಮಹಿಮೆಯ ಸಾಮರ್ಥ್ಯದಿಂದ ಮತ್ತು ತಮ್ಮ ಯೋಗಬಲದಿಂದಲೂ ಪಾಂಡುಸುತರು ಬದುಕಿದ್ದಾರೆ. ಅವರಿಗೆ ಜಯವುಂಟಾಗುವುದು.

ಶ್ರೇಯೋಯುಕ್ತಾಂ ಸದಾ ಬುದ್ಧಿಂ ಪಾಂಡವಾನಾಂ ದಧಾತಿ ಯಃ ।
ಬಲಂ ಚೈವ ರಣೇ ನಿತ್ಯಂ ಭಯೇಭ್ಯಶ್ಚೈವ ರಕ್ಷತಿ ॥೩೬॥

ಸ ಏಷ ಶಾಶ್ವತೋ ದೇವಃ ಸರ್ವಗುಹ್ಯಮಯಃ ಶಿವಃ ।
ವಾಸುದೇವ ಇತಿ ಜ್ಞೇಯೋ ಯಸ್ಮಾಂ ಪೃಚ್ಛಸಿ ಭಾರತ ॥೩೭॥

ಎಲೈ ಭಾರತನೇ, ಯಾವನು ಪಾಂಡವರಿಗೆ ಯಾವಾಗಲೂ ಶ್ರೇಯಸ್ಸಿಗೆ ಅನುಸಾರಿಯಾದ ಬುದ್ಧಿಯನ್ನು ಕೊಡುತ್ತಾನೆಯೋ, ಯುದ್ಧದಲ್ಲಿ ಬಲವನ್ನು ಕೊಡುತ್ತಾನೆಯೋ ಮತ್ತು ಯಾವಾಗಲೂ ಎಲ್ಲ ಭಯಗಳಿಂದಲೂ ರಕ್ಷಿಸುತ್ತಾನೆಯೋ ಅವನೇ ಈ ಮಂಗಳಪ್ರದನಾದ, ಸರ್ವರಹಸ್ಯಮಯನಾದ, ಶಾಶ್ವತನಾದ, ದೇವನಾದ ವಾಸುದೇವನೆಂದು ತಿಳಿ ಎಂದು ನಿನ್ನ ಪ್ರಶ್ನೆಗೆ ಉತ್ತರವನ್ನು ಹೇಳುತ್ತಿದ್ದೇನೆ.

ಬ್ರಾಹ್ಮಣೈಃ ಕ್ಷತ್ರಿಯೈರ್ವೈಶ್ಯೈಃ ಶೂದ್ರೈಶ್ಚ ಕೃತಲಕ್ಷಣೈಃ ।
ಸೇವ್ಯತೇಽಭ್ಯರ್ಚ್ಯತೇ ಚೈವ ನಿತ್ಯಯುಕ್ತೈಃ ಸ್ವಕರ್ಮಭಿಃ ॥೩೮॥

ಅವನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಂದಲೂ, ಚಕ್ರ-ಶಂಖಾದಿಗಳನ್ನು ಧರಿಸಿದ ಶೂದ್ರರಿಂದಲೂ ತಮ್ಮ ಸ್ವಕರ್ಮದಿಂದ ನಿತ್ಯವೂ ಧ್ಯಾನಿಸಿ ಸೇವಿಸಲ್ಪಡುತ್ತಾನೆ ಮತ್ತು ಪೂಜಿಸಲ್ಪಡುತ್ತಾನೆ.

ದ್ವಾಪರಸ್ಯ ಯುಗಸ್ಯಾಂತೇ ಆದೌ ಕಲಿಯುಗಸ್ಯ ಚ ।
ಸಾತ್ವತಂ ವಿಧಿಮಾಸ್ಥಾಯ ಗೀತಃ ಸಂಕರ್ಷಣೇನ ಯಃ ॥೩೯॥

ದ್ವಾಪರಯುಗದ ಅಂತ್ಯದಲ್ಲಿ ಮತ್ತು ಕಲಿಯುಗದ ಆದಿಯಲ್ಲಿ ಶೇಷದೇವರು ಸಾತ್ವತವಿಧಿಯಂತೆ ಪಂಚರಾತ್ರಾಗಮವನ್ನು ರಚಿಸಿ ಅವನ ಮಹಿಮೆಯನ್ನು ಕೊಂಡಾಡಿದ್ದಾರೆ.

ಸ ಏಷ ಸರ್ವಾಸುರಮರ್ತ್ಯಲೋಕಂ
ಸಮುದ್ರಕ್ಷ್ಮಾಂತರಿತಾಃ ಪುರೀಶ್ಚ ।
ಯುಗೇ ಯುಗೇ ಮಾನುಷಂ ಚೈವ ವಾಸಂ
ಪುನಃ ಪುನಃ ಸೃಜತೇ ವಾಸುದೇವಃ ॥೪೦॥

ಅಂತಹ ಈ ವಾಸುದೇವನೇ ಪ್ರತಿಯುಗಗಳಲ್ಲಿಯೂ ಎಲ್ಲಾ ರಾಕ್ಷಸ-ಮರ್ತ್ಯರನ್ನು ಸಮುದ್ರದ ಮಜಲುಗಳಿಂದ ಅಂತರಿತವಾದ ಪಟ್ಟಣಗಳನ್ನು ಮನುಷ್ಯ ನಿವಾಸ ಸ್ಥಾನಗಳನ್ನು ಪುನಃ ಪುನಃ ಸೃಷ್ಟಿಮಾಡುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ದ್ವಿಷಷ್ಟಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ದ್ವಾಪಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಅರವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ಮೂರನೆಯ ಅಧ್ಯಾಯ

ಭೀಷ್ಮರಿಂದ ದುರ್ಯೋಧನನನ್ನು ಕುರಿತು ಕೃಷ್ಣನ ಮಹಿಮೆಯ ಉಪದೇಶ.

ದುರ್ಯೋಧನಃ

ವಾಸುದೇವೋ ಮಹದ್ಭೂತಂ ಸರ್ವಲೋಕೇಷು ಕಥ್ಯತೇ ।
ತಸ್ಯಾಗಮಂ ಪ್ರತಿಷ್ಠಾಂ ಚ ಜ್ಞಾತುಮಿಚ್ಛೇ ಪಿತಾಮಹ ॥೧॥

ದುರ್ಯೋಧನ– ವಾಸುದೇವನು ದೊಡ್ಡವಸ್ತುವೆಂದು ಎಲ್ಲ ಲೋಕಗಳಲ್ಲಿಯೂ ಹೇಳಲ್ಪಡುತ್ತದೆ. ಪಿತಾಮಹರೇ, ಅವನ ಆಗಮನ ಕ್ರಮವನ್ನು ಮತ್ತು ಸ್ಥಿತಿಯನ್ನು ನಾನು ಕೇಳಲು ಬಯಸುತ್ತೇನೆ.

ಭೀಷ್ಮಃ

ವಾಸುದೇವೋ ಮಹದ್ಭೂತಂ ಸಂಭೂತಂ ಸಹ ದೈವತೈಃ ।
ನ ಪರಂ ಪುಂಡರೀಕಾಕ್ಷಾದ್ ದೃಶ್ಯತೇ ಭರತರ್ಷಭ ।
ಮಾರ್ಕಂಡೇಯಶ್ಚ ಗೋವಿಂದಂ ಕಥಯತ್ಯದ್ಭುತಂ ಮಹತ್ ॥೨॥

ಭೀಷ್ಮ– ವಾಸುದೇವನು ಶ್ರೇಷ್ಠವಾದ ವಸ್ತು. ದೇವತೆಗಳ ಜೊತೆಯಲ್ಲಿ ಅವತರಿಸಿದ್ದಾನೆ. ಎಲೈ ಭರತಶ್ರೇಷ್ಠನೇ, ಪುಂಡರೀಕಾಕ್ಷನಿಗಿಂತ ಶ್ರೇಷ್ಠವಾದ ವಸ್ತುವು ಯಾವುದೂ ಕಾಣುವುದಿಲ್ಲ. ಮಾರ್ಕಂಡೇಯರೂ ಸಹ ಆ ಗೋವಿಂದನನ್ನು ಅದ್ಭುತವಾದ ಮಹಾವಸ್ತುವೆಂದು ಹೇಳುತ್ತಾರೆ.

ಸರ್ವಭೂತಾನಿ ಭೂತಾತ್ಮಾ ಮಹಾತ್ಮಾ ಪುರುಷೋತ್ತಮಃ ।
ಆಪೋ ವಾಯುಶ್ಚ ತೇಜಶ್ಚ ತ್ರಯಮೇತದಕಲ್ಪಯತ್ ॥೩॥

ಸರ್ವಜೀವಾಂತರ್ಯಾಮಿಯೂ, ಮಹಾತ್ಮನೂ ಆದ ಪುರುಷೋತ್ತಮನು ಎಲ್ಲ ಜೀವರನ್ನೂ, ಜಲ-ವಾಯು-ಅಗ್ನಿ ಈ ಮೂರನ್ನೂ ಸೃಷ್ಟಿಸಿದನು.

ಸ ಸೃಷ್ಟ್ವಾ ಪೃಥಿವೀಂ ದೇವಃ ಸರ್ವಲೋಕೇಶ್ವರಃ ಪ್ರಭುಃ ।
ಅಪ್ಸು ವೈ ಶಯನಂ ಚಕ್ರೇ ಮಹಾತ್ಮಾ ಪುರುಷೋತ್ತಮಃ ।
ಸರ್ವತೋಯಮಯೋ ದೇವೋ ಯೋಗಾತ್ ಸುಷ್ವಾಪ ತತ್ರ ಹ ॥೪॥

ಸರ್ವಲೋಕೇಶ್ವರನಾದ ಪ್ರಭುವಾದ ಆ ದೇವನು ಪೃಥಿವಿಯನ್ನು ಸೃಷ್ಟಿಸಿ ಅಲ್ಲಿ ಮಹಾತ್ಮನಾದ ಪುರುಷೋತ್ತಮನಾದ ಅವನು ನೀರಿನಲ್ಲಿ ಶಯನವನ್ನು ಮಾಡಿದನು. ಎಲ್ಲ ಜಲಗಳಿಗಿಂತಲೂ ಪ್ರಧಾನನಾದ ಆ ದೇವನು ಜಲದಲ್ಲಿ ಯೋಗನಿದ್ರೆಯನ್ನು ಮಾಡಿದನು.

ಮುಖತಃ ಸೋಽಗ್ನಿಮಸೃಜತ್ ಪ್ರಾಣಾದ್ ವಾಯುಮಥಾಪಿ ಚ ।
ಸರಸ್ವತೀಂ ಚ ವೇದಾಂಶ್ಚ ಮನಸಃ ಸಸೃಜೇಽಚ್ಯುತಃ ॥೫॥

ಅವನು ಮುಖದಿಂದ ಅಗ್ನಿಯನ್ನು ಮತ್ತು ಪ್ರಾಣದಿಂದ ವಾಯುವನ್ನು ಸೃಷ್ಟಿಸಿದನು. ಅಚ್ಯುತನಾದ ಅವನು ತನ್ನ ಮನಸ್ಸಿನಿಂದಲೇ ಸರಸ್ವತಿಯನ್ನು ಮತ್ತು ವೇದಗಳನ್ನು ಸೃಷ್ಟಿಸಿದನು.

ಏಷ ಲೋಕಾನ್ ಸಸರ್ಜಾದೌ ದೇವಾಂಶ್ಚರ್ಷಿಗಣೈಃ ಸಹ ।
ಅಮೃತಂ ಚೈವ ಮೃತ್ಯುಂ ಚ ಪ್ರಜಾನಾಂ ಪ್ರಭವೋऽವ್ಯಯಃ ॥೬॥

ಇವನೇ ಮೊದಲು ದೇವರ್ಷಿಗಣಗಳ ಸಹಿತವಾಗಿ ಲೋಕಗಳನ್ನು ಸೃಷ್ಟಿಸಿದನು. ಎಲ್ಲ ಜೀವರ ಜನಕನಾದ ಅವ್ಯಯನಾದ ಇವನೇ ಅಮೃತವನ್ನು ಮತ್ತು ಮೃತ್ಯುವನ್ನು ಎಂದರೆ ಮೋಕ್ಷಸಾಧನವನ್ನು ಮತ್ತು ನರಕಸಾಧನವನ್ನು ಸೃಷ್ಟಿಸಿದನು.

ಏಷ ಧರ್ಮಶ್ಚ ಧರ್ಮಜ್ಞೋ ವರದಃ ಸರ್ವಕಾಮದಃ ।
ಏಷ ಕರ್ತಾ ಚ ಕಾರ್ಯಂ ಚ ಪೂರ್ವದೇವಃ ಸ್ವಯಂಪ್ರಭುಃ ॥೭॥

ಲೋಕಧಾರಕನಾದುದರಿಂದ ಇವನೇ ಧರ್ಮನೆನಿಸುವನು. ಇವನು ಧರ್ಮವನ್ನು ತಿಳಿದವನು, ವರಗಳನ್ನು ಕೊಡುವವನು ಮತ್ತು ಸರ್ವಾಭೀಷ್ಟಪ್ರದನಾದವನು. ಇವನು ಸ್ವತಂತ್ರನಾಗಿ ಎಲ್ಲವನ್ನೂ ಮಾಡುವವನು, ಕಾರ್ಯಗಳಲ್ಲಿಯೂ ಇರುವವನು. ಪ್ರಭುವಾದ ಇವನು ಎಲ್ಲ ದೇವತೆಗಳಿಗಿಂತಲೂ ಮೊದಲು ಸ್ವತಃ ಇರುವವನು.

ಭೂತಂ ಭವ್ಯಂ ಭವಿಷ್ಯಚ್ಚ ಪೂರ್ವಮೇತದಕಲ್ಪಯತ್ ।
ಉಭೇ ಸಂಧ್ಯೇ ದಿಶಃ ಖಂ ಚ ನಿಯಮಂ ಚ ಜನಾರ್ದನಃ ॥೮॥

ಇವನು ಭೂತ, ಭವಿಷ್ಯತ್, ವರ್ತಮಾನಕಾಲಗಳ ಅಭಿಮಾನಿದೇವತೆಗಳನ್ನು ಮೊದಲು ಸೃಷ್ಟಿಸಿದನು. ಜನಾರ್ದನನಾದ ಇವನು ಎರಡು ಸಂಧ್ಯಾಕಾಲಗಳನ್ನೂ, ದಿಕ್ಕುಗಳನ್ನೂ, ಅಂತರಿಕ್ಷವನ್ನೂ ಮತ್ತು ನಿಯಮವನ್ನೂ ಸೃಷ್ಟಿಸಿದನು.

ಋಷೀಂಶ್ಚೈವ ಹಿ ಗೋವಿಂದಸ್ತಪಶ್ಚೈವಾನುಕಲ್ಪಯತ್ ।
ಸ್ರಷ್ಟಾರಂ ಜಗತಶ್ಚಾಪಿ ಮಹಾತ್ಮಾ ಪ್ರಭುರವ್ಯಯಃ ॥೯॥

ಮಹಾತ್ಮನೂ, ಅವ್ಯಯನೂ, ಪ್ರಭುವೂ ಆದ ಗೋವಿಂದನು ಋಷಿಗಳನ್ನೂ ಮತ್ತು ಅನಂತ ತಪಸ್ಸುಗಳನ್ನೂ ಸೃಷ್ಟಿಸಿದನು. ಜಗತ್ತಿಗೆ ಸೃಷ್ಟಿಕರ್ತನಾದ ಬ್ರಹ್ಮನನ್ನೂ ಸೃಷ್ಟಿಸಿದನು.

ಅಗ್ರಜಂ ಸರ್ವಭೂತಾನಾಂ ಸಂಕರ್ಷಣಮಕಲ್ಪಯತ್ ।
ಶೇಷಂ ಚಾಕಲ್ಪಯದ್ ದೇವಮನಂತಮಿತಿ ಯಂ ವಿದುಃ ॥೧೦॥

ಯೋ ಧಾರಯತಿ ಭೂತಾನಿ ಧರಾಂ ಚೇಮಾಂ ಸಪರ್ವತಾಮ್ ।
ಧ್ಯಾನಯೋಗೇನ ವಿಪ್ರಾಶ್ಚ ತಂ ವದಂತಿ ಮಹೌಜಸಮ್ ॥೧೧॥

ಯಾವ ಶೇಷನು ಪರ್ವತಸಹಿತವಾದ ಈ ಭೂಮಿಯನ್ನು ತನ್ನ ಶಿರಸ್ಸಿನಲ್ಲಿ ಧರಿಸಿದ್ದಾನೆಯೋ, ಯಾವನನ್ನು ವಿಪ್ರರು ಧ್ಯಾನಯೋಗದಿಂದ ನೋಡಿ ಮಹಾಸಾಮರ್ಥ್ಯವುಳ್ಳವನೆಂದು ಹೇಳುತ್ತಾರೆಯೋ, ಯಾವ ದೇವನನ್ನು ಅನಂತ ಎಂದು ಕರೆಯುತ್ತಾರೆಯೋ ಅಂತಹ ಶೇಷನನ್ನು ಸಂಕರ್ಷಣನನ್ನಾಗಿ ತನ್ನ ಅಣ್ಣನನ್ನಾಗಿ ಸೃಷ್ಟಿಸಿದನು.

ಕರ್ಣಸ್ರೋತೋದ್ಭವಂ ಚಾಪಿ ಮಧುಂ ನಾಮ ಮಹಾಸುರಮ್ ।
ತಮುಗ್ರಮುಗ್ರಕರ್ಮಾಣಮುಗ್ರಾಂ ಬುದ್ಧಿಂ ಸಮಾಸ್ಥಿತಮ್ ।
ಬ್ರಹ್ಮಣೋಽಪಚಿತಿಂ ಕುರ್ವನ್ ಜಘಾನ ಪುರುಷೋತ್ತಮಃ ॥೧೨॥

ಉಗ್ರಬುದ್ಧಿಯನ್ನು ಆಶ್ರಯಿಸಿ, ಉಗ್ರವಾದ ಕರ್ಮವನ್ನು ಮಾಡುವ ತನ್ನ ಕರ್ಣಗಳಿಂದ ಉತ್ಪನ್ನನಾದ ಮಧು ಎಂಬ ಹೆಸರಿನ ಮಹಾರಾಕ್ಷಸನನ್ನು ಪುರುಷೋತ್ತಮನಾದ ಅವನು ಬ್ರಹ್ಮದೇವರ ಮಾತನ್ನು ಗೌರವಿಸುತ್ತಾ ಸಂಹರಿಸಿದನು.

ತಸ್ಯ ತಾತ ವಧಾದೇವ ದೇವದಾನವಮಾನವಾಃ ।
ಮಧುಸೂದನಮಿತ್ಯಾಹುರೃಷಯಶ್ಚ ಜನಾರ್ದನಮ್ ।
ವರಾಹಶ್ಚೈವ ಸಿಂಹಶ್ಚ ತ್ರಿವಿಕ್ರಮಗತಿಃ ಪ್ರಭುಃ ॥೧೩॥

ಎಲೈ ಪ್ರೀತಿಪಾತ್ರನೇ, ಆ ಮಧುವನ್ನು ಸಂಹರಿಸಿದ ಕಾರಣದಿಂದಲೇ ದೇವ-ದಾನವ-ಮಾನವರು ಮತ್ತು ಋಷಿಗಳು ಜನಾರ್ದನನನ್ನು ಮಧುಸೂದನನೆಂದು ಕರೆಯುತ್ತಾರೆ. ಪ್ರಭುವಾದ ಅವನು ವರಾಹಾವತಾರವನ್ನು, ನರಸಿಂಹಾವತಾರವನ್ನು ಮತ್ತು ತ್ರಿವಿಕ್ರಮ ಅವತಾರವನ್ನು ತಾಳಿದನು.

ಏಷ ಮಾತಾ ಪಿತಾ ಚೈವ ಸರ್ವೇಷಾಂ ಪ್ರಾಣಿನಾಂ ಹರಿಃ ।
ಪರಂ ಹಿ ಪುಂಡರೀಕಾಕ್ಷಾನ್ನ ಭೂತಂ ನ ಭವಿಷ್ಯತಿ ॥೧೪॥

ಹರಿಯಾದ ಇವನು ಎಲ್ಲ ಪ್ರಾಣಿಗಳಿಗೂ ತಂದೆಯೂ ಮತ್ತು ತಾಯಿಯೂ ಆಗಿದ್ದಾನೆ. ಪುಂಡರೀಕಾಕ್ಷನಿಗಿಂತ ಶ್ರೇಷ್ಠವಾದ ವಸ್ತುವು ಹಿಂದೆ ಇರಲಿಲ್ಲ ಮತ್ತು ಮುಂದೆ ಉಂಟಾಗುವುದಿಲ್ಲ.

ಮುಖತೋऽಸೃಜದ್ ಬ್ರಾಹ್ಮಣಾನ್ ಬಾಹುಭ್ಯಾಂ ಕ್ಷತ್ರಿಯಾಂಸ್ತಥಾ ।
ವೈಶ್ಯಾಂಶ್ಚಾಪ್ಯೂರುತೋ ರಾಜನ್ ಶೂದ್ರಾನ್ ಪದ್ಭ್ಯಾಂ ತಥೈವ ಚ ।
ತಪಸಾ ನಿಯತೋ ದೇವೋ ನಿಧಾನಂ ಸರ್ವದೇಹಿನಾಮ್ ॥೧೫॥

ಎಲೈ ರಾಜನೇ, ಅವನು ಮುಖದಿಂದ ಬ್ರಾಹ್ಮಣರನ್ನು, ಬಾಹುಗಳಿಂದ ಕ್ಷತ್ರಿಯರನ್ನು, ತೊಡೆಗಳಿಂದ ವೈಶ್ಯರನ್ನು, ಹಾಗೆಯೇ ಪಾದದಿಂದ ಶೂದ್ರರನ್ನು ಸೃಷ್ಟಿಸಿದನು. ಜ್ಞಾನಾತ್ಮಕವಾದ ತಪಸ್ಸಿನಿಂದ ಯಾವಾಗಲೂ ಕೂಡಿದ ದೇವನು ಹಾಗೆ ಸೃಷ್ಟಿಯನ್ನು ಮಾಡಿ ಎಲ್ಲ ಜೀವರಿಗೂ ಆಶ್ರಯನಾದನು.

ಬ್ರಹ್ಮಭೂತಮಮಾವಾಸ್ಯಾಂ ಪೌರ್ಣಮಾಸ್ಯಾಂ ತಥೈವ ಚ ।
ಯೋಗಭೂತಂ ಪರಿಚರನ್ ಕೇಶವಂ ಮಹದಾಪ್ನುಯಾತ್ ॥೧೬॥

ಅಮಾವಾಸ್ಯೆಯಂದು ಅವನು ಬ್ರಾಹ್ಮಣರಿಂದ ಆರಾಧ್ಯನಾದವನು. ಪೌರ್ಣಮಾಸ್ಯದಂದು ಕೇಶವನನ್ನು ಆರಾಧಿಸುವ ಯೋಗಿಗಳು ದೊಡ್ಡ ಶುಭಫಲವನ್ನು ಹೊಂದುತ್ತಾರೆ (ಲಕ್ಷಾಲಂಕಾರ).

ಕೇಶವಃ ಪರಮಂ ತೇಜಃ ಸರ್ವಲೋಕಪಿತಾಮಹಃ ।
ಏವಮಾಹುರ್ಮಹರ್ಷೀಣೇಶಂ ಮುನಯೋ ವೈ ನರಾಧಿಪ ॥೧೭॥

ಕೇಶವನು ಪರಮತೇಜೋರೂಪನಾದವನು. ಸರ್ವಲೋಕಕ್ಕೆ ಪಿತಾಮಹನಾದವನು. ಎಲೈ ರಾಜನೇ, ಋಷಿಗಳು ಹೃಷೀಕೇಶನನ್ನು ಈ ರೀತಿಯಾಗಿ ಹೇಳುತ್ತಾರೆ.

ಏವಮೇನಂ ವಿಜಾನೀಹಿ ಆಚಾರ್ಯಂ ಪಿತರಂ ಗುರುಮ್ ।
ಕೃತ್ಸ್ನೋ ಯಸ್ಯ ಹ್ಯಯಂ ದೇವ ಲೋಕಾಸ್ತ್ರೇನಾಕ್ಷಯಾ ಜಿತಾಃ ॥೧೮॥

ಆದ್ದರಿಂದ ನೀನೂ ಸಹ ಇವನನ್ನು ಆಚಾರ್ಯನೆಂದೂ, ತಂದೆ ಎಂದೂ, ಗುರುವೆಂದೂ ತಿಳಿ. ಯಾವನಿಗೆ ಕೃಷ್ಣನು ಪ್ರಸನ್ನನಾಗುತ್ತಾನೆಯೋ ಅವನು ಅಕ್ಷಯಲೋಕವನ್ನು ಗಳಿಸುತ್ತಾನೆ.

ಯಶ್ಚೈವೈನಂ ಭಯಸ್ಥಾನೇ ಕೇಶವಂ ಶರಣಂ ವ್ರಜೇತ್ ।
ಸದಾ ನರಃ ಪಠಂಶ್ಚೈದಂ ಸ್ಮೃಮಾನ್ ಸ ಸುಖೀ ಭವೇತ್ ॥೧೯॥

ಯಾವ ಮನುಷ್ಯನು ತನಗೆ ಭಯವುಂಟಾದಾಗ ಕೇಶವನಿಗೆ ಶರಣಾಗುವನೋ ಮತ್ತು ಯಾವನು ನಾನು ಹೇಳುತ್ತಿರುವ ಈ ಮಹಿಮೆಯ ಸ್ತೋತ್ರವನ್ನು ಪಠಿಸುತ್ತಾನೆಯೋ ಅವನು ಸುಖವನ್ನು ಹೊಂದುವನು.

ಯೇ ಚ ಕೃಷ್ಣಂ ಪ್ರಪದ್ಯಂತೇ ತೇ ನ ಮುಹ್ಯಂತಿ ಮಾನವಾಃ ।
ಭಯೇ ಮಹತಿ ಯೇ ಮಗ್ನಾಃ ಪಾತಿ ನಿತ್ಯಂ ಜನಾರ್ದನಃ ॥೨೦॥

ಯಾವ ಮಾನವರು ಕೃಷ್ಣನಿಗೆ ಶರಣಾಗತರಾಗುತ್ತಾರೆಯೋ ಅವರು ಮೋಹಕ್ಕೆ ಒಳಗಾಗುವುದಿಲ್ಲ. ಯಾರು ದೊಡ್ಡ ಭಯದಲ್ಲಿ ಮುಳುಗಿದ್ದಾರೆಯೋ ಅವರನ್ನೂ ಜನಾರ್ದನನು ಯಾವಾಗಲೂ ರಕ್ಷಿಸುತ್ತಾನೆ.

ಏತದ್ ಯುಧಿಷ್ಠಿರೋ ಜ್ಞಾತ್ವಾ ಯಾಥಾತಥ್ಯೇನ ಭಾರತ ।
ಸರ್ವಾತ್ಮನಾ ಮಹಾತ್ಮಾನಂ ಕೇಶವಂ ಜಗದೀಶ್ವರಮ್ ।
ಪ್ರಪನ್ನಃ ಶರಣಂ ರಾಜನ್ ಯೋಗಾನಾಮೀಶ್ವರಂ ಪ್ರಭುಮ್ ॥೨೧॥

ಎಲೈ ಭಾರತನೇ, ರಾಜನೇ, ಈ ಸತ್ಯಾಂಶವನ್ನು ಯುಧಿಷ್ಠಿರನು ಚೆನ್ನಾಗಿ ತಿಳಿದು ಮಹಾತ್ಮನೂ, ಜಗದೀಶ್ವರನೂ, ಯೋಗೀಶ್ವರನೂ, ಪ್ರಭುವೂ ಆದ ಕೇಶವನನ್ನು ಸರ್ವಪ್ರಕಾರಗಳಿಂದಲೂ ಶರಣು ಹೊಂದಿದ್ದಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ತ್ರಿಷಷ್ಟಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ತ್ರಯೋವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಅರವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ನಾಲ್ಕನೆಯ ಅಧ್ಯಾಯ

ಭೀಷ್ಮರಿಂದ ಕೃಷ್ಣನ ಮಹಿಮೆಯನ್ನು ವರ್ಣಿಸಿ, ಪಾಂಡವರ ಜೊತೆಯಲ್ಲಿ ಸಂಧಾನ ಮಾಡಿಕೊಳ್ಳುವಂತೆ ದುರ್ಯೋಧನನಿಗೆ ಒತ್ತಾಯ.

ಭೀಷ್ಮಃ

ಸ್ತವಂ ವೈ ಬ್ರಹ್ಮಸಂಯುಕ್ತಂ ಶೃಣು ಕೃಷ್ಣಸ್ಯ ಭಾರತ ।
ಶೃಣು ಚೇದಂ ಮಹಾರಾಜ ಬ್ರಹ್ಮಭೂತಸ್ತವಂ ಮಮ ।
ಬ್ರಹ್ಮರ್ಷಿಭಿಶ್ಚ ದೇವೈಶ್ಚ ಯಃ ಪುರಾ ಕಥಿತೋ ಭುವಿ ॥೧॥

ಭೀಷ್ಮ- ಎಲೈ ಭಾರತನೇ, ಮಹಾರಾಜನೇ, ಬ್ರಹ್ಮದೇವರು ಮಾಡಿದಂತಹ ಕೃಷ್ಣನ ಈ ಸ್ತೋತ್ರವನ್ನು ಕೇಳುವವನಾಗು. ಇದು ಹಿಂದೆ ಭೂಮಿಯಲ್ಲಿ ಬ್ರಹ್ಮರ್ಷಿಗಳಿಂದಲೂ ಮತ್ತು ದೇವರ್ಷಿಗಳಿಂದಲೂ ಹೇಳಲ್ಪಟ್ಟದೆ.

ಸಾಧ್ಯಾನಾಮಪಿ ದೇವಾನಾಂ ದೇವದೇವೇಶ್ವರಃ ಪ್ರಭುಃ ।
ಲೋಕಭಾವನಭಾವಜ್ಞ ಇತಿ ತ್ವಾಂ ನಾರದೋऽಬ್ರವೀತ್ ।
ಭೂತಂ ಭವ್ಯಂ ಭವಿಷ್ಯಂ ಚ ಮಾರ್ಕಂಡೇಯೋऽಭ್ಯುವಾಚ ಹ ॥೨॥

ಸಾಧ್ಯಗಣದ ದೇವತೆಗಳಿಗೂ ಇವನು ದೇವದೇವೇಶ್ವರನಾದ ಪ್ರಭು, ಲೋಕವನ್ನು ಉತ್ಪತ್ತಿ ಮಾಡುವವನು ಮತ್ತು ಸರ್ವಜೀವರ ಅಭಿಪ್ರಾಯವನ್ನು ತಿಳಿದವನು ಎಂದು ನಾರದರು ಹೇಳಿದರು (ಎಂದು ಬ್ರಹ್ಮದೇವರು ದೇವರನ್ನು ಸ್ತೋತ್ರ ಮಾಡಿದರು ಎಂದು ಸರ್ವತ್ರ ಇಟ್ಟುಕೊಳ್ಳಬೇಕು). ಭೂತ-ವರ್ತಮಾನ-ಭವಿಷ್ಯವೆಲ್ಲವೂ ನಿನ್ನ ಅಧೀನವೆಂದು ಮಾರ್ಕಂಡೇಯರು ಹೇಳಿದರಷ್ಟೆ!

ಯಜ್ಞಾನಾಂ ಚೈವ ಯಜ್ಞಂ ತ್ವಾಂ ತಪಶ್ಚ ತಪಸಾಮಪಿ ।
ದೇವಾನಾಮಪಿ ದೇವಂ ಚ ತ್ವಾಮಾಹ ಭಗವಾನ್ ಭೃಗುಃ ।
ಪುರಾಣೇ ಭೈರವಂ ರೂಪಂ ವಿಷ್ಣೋ ಭೂತಪತೇತಿ ವೈ ॥೩॥

ವಾಸುದೇವೋ ವಸೂನಾಂ ತ್ವಂ ಶಕ್ರಂ ಸ್ಥಾಪಯಿತಾ ತಥಾ ।
ದೇವದೇವೋऽಸಿ ದೇವಾನಾಮಿತಿ ದ್ವೈಪಾಯನೋऽಬ್ರವೀತ್ ॥೪॥

ನೀನು ಯಜ್ಞಗಳಲ್ಲಿ ಯಜ್ಞನೆಂದೂ, ತಪಸ್ಸುಗಳಲ್ಲಿ ತಪಸ್ಸೆಂದೂ, ದೇವತೆಗಳಲ್ಲಿ ದೇವನೆಂದೂ ಪೂಜ್ಯರಾದ ಭೃಗುಗಳು ಹೇಳಿದರು. ಎಲೈ ವಿಷ್ಣುವೇ, ದ್ವೈಪಾಯನರು ಪುರಾಣಗಳಲ್ಲಿ ಭಯಂಕರವಾದ ರೂಪವನ್ನು ಧರಿಸುವವನೆಂದೂ, ಭೂತಪತಿ ಎಂದೂ, ವಸುಗಳನ್ನು ಮತ್ತು ಇಂದ್ರನನ್ನು ತಮ್ಮ ತಮ್ಮ ಸ್ಥಾನಗಳಲ್ಲಿ ಸ್ಥಾಪಿಸಿದ ವಾಸುದೇವನೆಂದೂ, ದೇವತೆಗಳಿಗೂ ದೇವದೇವನೆಂದೂ ಹೇಳಿದರು.

ಪೂರ್ವೇ ಪ್ರಜಾನಿಸರ್ಗೇಷು ದಕ್ಷಮಾಹುಃ ಪ್ರಜಾಪತಿಮ್ ।
ಸ್ರಷ್ಟಾರಂ ಸರ್ವಭೂತಾನಾಮಂಗಿರಾಸ್ತ್ವಾಂ ತತೋಽಬ್ರವೀತ್ ॥೫॥

ಪೂರ್ವಕಾಲದಲ್ಲಿ ಪ್ರಜಾ ಸೃಷ್ಟಿ ಸಂದರ್ಭದಲ್ಲಿ ಎಲ್ಲ ಪ್ರಜೆಗಳನ್ನು ಸೃಷ್ಟಿಮಾಡಿದ ಪ್ರಜಾಪತಿಯಾದ ದಕ್ಷನೆಂದು ಅಂಗಿರಸರು ನನಗೆ ಹೇಳಿದರು (ದಕ್ಷನಲ್ಲಿದ್ದು ದಕ್ಷನಾಮಕನಾಗಿ ಪ್ರಜೆಗಳನ್ನು ಸೃಷ್ಟಿಮಾಡುವವನು ಎಂದು ಅಭಿಪ್ರಾಯ).

ಅವ್ಯಕ್ತಂ ತೇ ಶರೀರೋತ್ಥಂ ವ್ಯಕ್ತಂ ತೇ ಮನಸಿ ಸ್ಥಿತಮ್ ।
ದೇವಾ ವಾಕ್ಸಂಭವಾಶ್ಚೇತಿ ದೇವಲಸ್ತ್ವಸಿತೋಽಬ್ರವೀತ್ ॥೬॥

ಅವ್ಯಕ್ತವಾದ ಸ್ವರ್ಗಾದಿಗಳು ನಿನ್ನ ಶರೀರದಿಂದ ಜನ್ಯವಾದವುಗಳು. ವ್ಯಕ್ತವಾದ ಜ್ಞಾನವು ನಿನ್ನ ಮನಸ್ಸನ್ನು ಆಶ್ರಯಿಸಿದೆ. ದೇವತೆಗಳೆಲ್ಲರೂ ನಿನ್ನ ವಾಗಿಂದ್ರಿಯದಿಂದ ಜನಿಸಿದವರು ಎಂದು ದೇವಲರು ಮತ್ತು ಅಸಿತರು ಹೇಳಿದರು.

ಶಿರಸಾ ತೇ ದಿವಂ ವ್ಯಾಪ್ತಂ ಬಾಹುಭ್ಯಾಂ ಪೃಥಿವೀ ಧೃತಾ ।
ಜಠರಂ ತೇ ತ್ರಯೋ ಲೋಕಾಃ ಪುರುಷೋಽಸಿ ಸನಾತನಃ ॥೭॥

ದ್ಯುಲೋಕವು ನಿನ್ನ ಶಿರಸ್ಸಿನಿಂದ ವ್ಯಾಪ್ತವಾಗಿದೆ. ನಿನ್ನ ಬಾಹುಗಳಿಂದ ಭೂಲೋಕವು ಧರಿಸಲ್ಪಟ್ಟಿದೆ. ನಿನ್ನ ಜಠರವು ಮೂರುಲೋಕಗಳಿಗೂ ಆಶ್ರಯವಾಗಿದೆ. ನೀನು ಷಡ್ಗುಣಸಂಪನ್ನನಾದ ವೇದಪ್ರತಿಪಾದ್ಯನಾದ ಪುರುಷನಾಗಿದ್ದೀಯೆ.

ಏವಂ ತ್ವಾಮಭಿಜಾನಂತಿ ತಪಸಾ ಭಾವಿತಾ ನರಾಃ ।
ಆತ್ಮದರ್ಶನತೃಪ್ತಾನಾಮೃಷೀಣಾಂ ಚಾಪಿ ಸತ್ತಮಃ ॥೮॥

ಹೀಗೆ ತಪಸ್ಸಿನಿಂದ ಪರಿಶುದ್ಧರಾದ ಮಾನವರು ನಿನ್ನನ್ನು ತಿಳಿಯುತ್ತಾರೆ. ಅಂತರ್ಯಾಮಿಯ ದರ್ಶನದಿಂದ ತೃಪ್ತರಾದ ಋಷಿಗಳ ದೃಷ್ಟಿಯಲ್ಲಿ ನೀನು ಸರ್ವಶ್ರೇಷ್ಠನಾದವನು.

ರಾಜರ್ಷೀಣಾಮುದಾರಾಣಾಮಾಹವೇಷ್ವನಿವರ್ತಿನಾಮ್ ।
ಸರ್ವಧರ್ಮಪ್ರಧಾನಾನಾಂ ತ್ವಂ ಗತಿರ್ಮಧುಸೂದನ ॥೯॥

ಎಲೈ ಮಧುಸೂದನನೇ, ಯುದ್ಧದಲ್ಲಿ ಹಿಂದಿರುಗದಿರುವ, ಸರ್ವಧರ್ಮಗಳನ್ನು ಪ್ರಧಾನವಾಗಿ ಆಚರಿಸುವ ಉದಾರವಾದ ರಾಜರ್ಷಿಗಳಿಗೆ ನೀನೇ ಗತಿಯಾದವನು.

ಇತಿ ನಿತ್ಯಂ ಯೋಗವಿದ್ಭಿರ್ಭಗವಾನ್ ಪುರುಷೋತ್ತಮಃ ।
ಸನತ್ಕುಮಾರಪ್ರಮುಖೈಃ ಸ್ತೂಯತೇऽಭ್ಯರ್ಚ್ಯತೇ ಹರಿಃ ॥೧೦॥

ಎಲೈ ದುರ್ಯೋಧನನೇ, ಹೀಗೆ ಭಗವಂತನಾದ ಪುರುಷೋತ್ತಮನು, ಯೋಗಾರೂಢರಾದ ಸನತ್ಕುಮಾರ ಮೊದಲಾದ ಯೋಗಿಗಳಿಂದ ಹರಿಯು ಯಾವಾಗಲೂ ಸ್ತೋತ್ರ ಮಾಡಲ್ಪಡುತ್ತಾನೆ ಮತ್ತು ಪೂಜಿಸಲ್ಪಡುತ್ತಾನೆ.

ಏಷ ತೇ ವಿಸ್ತರಸ್ತಾತ ಸಂಕ್ಷೇಪಶ್ಚ ಪ್ರಕೀರ್ತಿತಃ ।
ಕೇಶವಸ್ಯ ಯಥಾತತ್ತ್ವಂ ಸುಪ್ರೀತೋ ಭವ ಕೇಶವೇ ॥೧೧॥

ಪ್ರೀತಿಪಾತ್ರನೇ, ಕೇಶವನ ಯಥಾರ್ಥವಾದ ಮಹಿಮೆಯನ್ನು ಸಂಕ್ಷೇಪವಾಗಿಯೂ ಮತ್ತು ವಿಸ್ತಾರವಾಗಿಯೂ ಹೇಳಿದ್ದೇನೆ. ಅವನ ವಿಷಯದಲ್ಲಿ ಪ್ರಸನ್ನವಾದ ಮನಸ್ಸನ್ನು ಉಳ್ಳವನಾಗು.

ಸಂಜಯಃ

ಪುಣ್ಯಂ ಶ್ರುತ್ವೈತದಾಖ್ಯಾನಂ ಮಹಾರಾಜ ಸುತಸ್ತವ ।
ಕೇಶವಂ ಬಹು ಮೇನೇ ಸ ಪಾಂಡವಾಂಶ್ಚ ಮಹಾರಥಾನ್ ॥೧೨॥

ಸಂಜಯ– ಎಲೈ ಮಹಾರಾಜನೇ, ಈ ಪವಿತ್ರವಾದ ಸಂವಾದವನ್ನು ಕೇಳಿ ನಿನ್ನ ಪುತ್ರನು ಕೇಶವನಲ್ಲಿ ಬಹುಮಾನವನ್ನು ಹೊಂದಿ ಮಹಾರಥರಾದ ಪಾಂಡವರಲ್ಲಿಯೂ ಬಹುಮಾನವನ್ನು (ಗೌರವ) ಹೊಂದಿದನು.

ತಮಬ್ರವೀನ್ಮಹಾರಾಜ ಭೀಷ್ಮಃ ಶಾಂತನವಃ ಪುನಃ ।
ಮಾಹಾತ್ಮ್ಯಂ ತೇ ಶ್ರುತಂ ರಾಜನ್‌ಕೇಶವಸ್ಯ ಮಹಾತ್ಮನಃ ॥೧೩॥

ನರಸ್ಯ ಚ ಯಥಾತತ್ತ್ವಂ ಯನ್ಮಾಂ ತ್ವಂ ಪರಿಪೃಚ್ಚಸಿ ।
ಯದರ್ಥಂ ನೃಷು ಸಂಭೂತೌ ನರನಾರಾಯಣಾವುಭೌ ॥೧೪॥

ಅವಧ್ಯೌ ಚ ಯಥಾ ವೀರೌ ಸಂಯುಗೇಷ್ವಪರಾಜಿತೌ ।
ಯಥಾ ಚ ಪಾಂಡವಾ ರಾಜನ್ನಗಮ್ಯಾ ಯುಧಿ ಕಸ್ಯಚಿತ್ ॥೧೫॥

ಪ್ರೀತಿಮಾನ್ ಹಿ ದೃಢಂ ಕೃಷ್ಣಃ ಪಾಂಡವೇಷು ಯಶಸ್ವಿಷು ।
ತಸ್ಮಾದ್ ಬ್ರವೀಮಿ ರಾಜೇಂದ್ರ ಶಮೋ ಭವತು ಪಾಂಡವೈಃ ॥೧೬॥

ಎಲೈ ಮಹಾರಾಜನೇ, ಶಂತನು ಪುತ್ರರಾದ ಭೀಷ್ಮರು ಅವನನ್ನು ಕುರಿತು ಪುನಃ ರಾಜನೇ, ಮಹಾತ್ಮನಾದ ಕೇಶವನ ಮಹಿಮೆಯನ್ನು ನೀನು ಕೇಳಿದ್ದೀಯೆ. ನೀನು ಕೇಳಿದ ಪ್ರಶ್ನೆಗೆ ಉತ್ತರವಾಗಿ ನರನ ಸತ್ಯವಾದ ಮಹಿಮೆಯನ್ನು ಹೇಳಿದ್ದೇನೆ. ನರ-ನಾರಾಯಣರಾದ ಅವರಿಬ್ಬರೂ ಭೂಲೋಕದಲ್ಲಿ ಯಾವ ಉದ್ದೇಶದಿಂದ ಅವತರಿಸಿದರೆಂದೂ, ಯುದ್ಧದಲ್ಲಿ ಅಪರಾಜಿತರಾದ ಅವರು ಹೇಗೆ ಯುದ್ಧದಲ್ಲಿ ಅವಧ್ಯರಾಗಿದ್ದಾರೆಂಬುದನ್ನೂ ಮತ್ತು ಪಾಂಡವರು ಯುದ್ಧದಲ್ಲಿ ಯಾರಿಂದಲೂ ಹೇಗೆ ಸಮೀಪಿಸಲ್ಪಡುವುದಿಲ್ಲ ಎಂಬ ವಿಷಯವನ್ನೂ ಮತ್ತು ಕೃಷ್ಣನು ಕೀರ್ತಿಶಾಲಿಗಳಾದ ಪಾಂಡವರಲ್ಲಿ ಎಂತಹ ದೃಢವಾದ ಪ್ರೀತಿಯುಳ್ಳವನಾಗಿದ್ದಾನೆಂದೂ ಹೇಳಿದ್ದೇನೆ. ಆದ್ದರಿಂದ ರಾಜನೇ, ಇನ್ನೊಮ್ಮೆ ಹೇಳುತ್ತಿದ್ದೇನೆ. ಪಾಂಡವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೋ.

ಪೃಥಿವೀಂ ಭುಂಕ್ಷ್ವ ಸಹಿತೋ ಭ್ರಾತೃಭಿರ್ಬಲಿಭಿರ್ವಶೀ ।
ನರನಾರಾಯಣೌ ದೇವಾವವಜ್ಞಾಯ ನಶಿಷ್ಯಸಿ ॥೧೭॥

ಬಲಿಷ್ಠರಾದ ಸಹೋದರರಿಂದ ಕೂಡಿ ಅವರನ್ನು ವಶಮಾಡಿಕೊಂಡು ಪೃಥಿವಿಯನ್ನು ಭೋಗಿಸು. ದೇವತೆಗಳಾದ ನರ-ನಾರಾಯಣರನ್ನು ಅವಮಾನ ಮಾಡಿದರೆ ನೀನು ನಾಶವನ್ನು ಹೊಂದುವಿ.

ಏವಮುಕ್ತ್ವಾ ತವ ಪಿತಾ ತೂಷ್ಣೀಮಾಸೀದ್ ವಿಶಾಂಪತೇ ।
ವ್ಯಸರ್ಜಯಚ್ಚ ರಾಜಾನಂ ಶಯನಂ ಚ ವಿವೇಶ ಹ ॥೧೮॥

ಎಲೈ ರಾಜನೇ, ಹೀಗೆ ಮಾತನಾಡಿ ನಿನ್ನ ತಂದೆಯು ಮೌನವಹಿಸಿದನು. ರಾಜನನ್ನು ಕಳುಹಿಸಿಕೊಟ್ಟು ತನ್ನ ಶಯನವನ್ನು ಪ್ರವೇಶಿಸಿದನು.

ರಾಜಾऽಪಿ ಶಿಬಿರಂ ಪ್ರಾಯಾತ್ ಪ್ರಣಿಪತ್ಯ ಮಹಾತ್ಮನೇ ।
ಶಿಶ್ಯೇ ಚ ಶಯನೇ ಶುಭ್ರೇ ತಾಂ ರಾತ್ರಿಂ ಭರತರ್ಷಭ ॥೧೯॥

ಎಲೈ ಭರತಶ್ರೇಷ್ಠನೇ, ರಾಜನೂ ಸಹ ಮಹಾತ್ಮನಾದ ಕೃಷ್ಣನಿಗೆ ನಮಸ್ಕಾರವನ್ನು ಮಾಡಿ ತನ್ನ ಶಿಬಿರಕ್ಕೆ ಹೋಗಿ ತನ್ನ ಶುಭ್ರವಾದ ಶಯನದಲ್ಲಿ ಆ ರಾತ್ರಿಯನ್ನು ಕಳೆದನು (ಡಂಭದಿಂದ ಕೃಷ್ಣನಿಗೆ ನಮಸ್ಕಾರ ಮಾಡಿದನೆಂದು ಆಚಾರ್ಯರು ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಹೇಳಿದ್ದಾರೆ).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಚತುಃಷಷ್ಟಿತಮೋऽಧ್ಯಾಯಃ ॥

॥ ಭೀಷ್ಮವಧಪರ್ವಣಿ ಚತುರ್ವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಅರವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೈದನೆಯ ಅಧ್ಯಾಯ

ಐದನೆಯ ದಿವಸದ ಯುದ್ಧ ಪ್ರಾರಂಭ.

ಸಂಜಯಃ

ವ್ಯುಷಿತಾಯಾಂ ಚ ಶರ್ವರ್ಯಾಮುದಿತೇ ಚ ದಿವಾಕರೇ ।
ಉಭೇ ಸೇನೇ ಮಹಾರಾಜ ಯುದ್ಧಾಯೈವ ಸಮೀಯತುಃ ॥೧॥

ಸಂಜಯ– ಎಲೈ ಮಹಾರಾಜನೇ, ಆ ರಾತ್ರಿಯು ಕಳೆದು ಸೂರ್ಯೋದಯವಾಗುತ್ತಿರಲು ಎರಡು ಸೈನ್ಯಗಳೂ ಯುದ್ಧಕ್ಕೇ ಸನ್ನದ್ಧವಾದವು.

ಆಧೃಷ್ಯಾವಂಶ್ಯ ಸಂಕ್ರುದ್ಧಾ ಪರಸ್ಪರಜಿಗೀಷವಃ ।
ತೇ ಸರ್ವೇ ಸಹಿತಾ ಯುದ್ಧೇ ಸಮಾಲೋಕ್ಯ ಪರಸ್ಪರಮ್ ॥೨॥

ಅವರೆಲ್ಲರೂ ಯುದ್ಧದಲ್ಲಿ ಸಮಾಗತರಾಗಿ ಒಬ್ಬರನ್ನೊಬ್ಬರು ನೋಡಿ ಪರಸ್ಪರವಾಗಿ ಗೆಲ್ಲುವ ಆಸೆಯನ್ನು ಹೊಂದಿ ಕ್ರೋಧದಿಂದ ಓಡಾಡಿದರು.

ಪಾಂಡವಾ ಧಾರ್ತರಾಷ್ಟ್ರಾಶ್ಚ ರಾಜನ್ ದುರ್ಮಂತ್ರಿತೇ ತವ ।
ವ್ಯೂಹೌ ಚ ವ್ಯೂಹ್ಯ ಸಂರಬ್ಧಾಃ ಸಂಪ್ರಯುದ್ಧಾಃ ಪ್ರಹಾರಿಣಃ ॥೩॥

ಎಲೈ ರಾಜನೇ, ನಿನ್ನ ದುರ್ಮಂತ್ರದ ಕಾರಣದಿಂದಾಗಿ ಪಾಂಡವರು ಮತ್ತು ದುರ್ಯೋಧನಾದಿಗಳು ವ್ಯೂಹಗಳನ್ನು ರಚಿಸಿ ಕೋಪದಿಂದ ಒಬ್ಬರನ್ನೊಬ್ಬರು ಪ್ರಹಾರ ಮಾಡುತ್ತಾ ಯುದ್ಧವನ್ನು ಮಾಡಿದರು.

ಅರಕ್ಷನ್ ಮಕರವ್ಯೂಹಂ ಭೀಷ್ಮೋ ರಾಜನ್ ಸಮಂತತಃ ।
ಅಜಾತಶತ್ರುಃ ಶತ್ರೂಣಾಂ ಮನಾಂಸಿ ಸಮಕಂಪಯತ್ ।
ಶ್ಯೇನವದ್ ವ್ಯೂಹ್ಯ ತಂ ವ್ಯೂಹಂ ಧೌಮ್ಯಸ್ಯ ವಚನಾತ್ ಸ್ವಯಮ್ ॥

ಎಲೈ ರಾಜನೇ, ಭೀಷ್ಮರು ಮಕರವ್ಯೂಹವನ್ನು ರಚಿಸಿ ಅದನ್ನು ಎಲ್ಲಕಡೆಗಳಿಂದಲೂ ರಕ್ಷಿಸಿದರು. ಅಜಾತಶತ್ರುವಾದರೂ ಧೌಮ್ಯರ ವಚನದಂತೆ ಸ್ವತಃ ಶ್ಯೇನ ವ್ಯೂಹವನ್ನು ರಚಿಸಿ ಶತ್ರುಗಳ ಮನಸ್ಸನ್ನು ಅಲುಗಾಡಿಸಿದನು.

ಸ ಹಿ ತಸ್ಯ ಸುವಿಜ್ಞಾತ ಅಗ್ನಿಚಿತ್ಯೇಷು ಭಾರತ ।
ಮಕರಸ್ತು ಮಹಾವ್ಯೂಹಸ್ತವ ಪುತ್ರಸ್ಯ ಧೀಮತಃ ॥೫॥

ಎಲೈ ಭಾರತನೇ, ಅಗ್ನಿಚಯನ ಸಂದರ್ಭದಲ್ಲಿ ರಚಿಸಲ್ಪಡುವ ಶ್ಯೇನಾಕಾರವು ಅವನಿಗೆ ಬಹಳ ಪರಿಚಿತವಾಗಿದ್ದಿತು. ಮೇಧಾವಿಯಾದ ನಿನ್ನ ಮಗನ ವ್ಯೂಹವು ದೊಡ್ಡ ಮಕರವ್ಯೂಹವಾಗಿದ್ದಿತು.

ಸ್ವಯಂ ಸರ್ವೇಣ ಸೈನ್ಯೇನ ದ್ರೋಣೇನಾನುಮತಸ್ತದಾ ।
ಯಥಾವ್ಯೂಹಂ ಶಾಂತನವಃ ಸೋಽನ್ವವರ್ತತ ತತ್ಸುನಃ ॥೬॥

ದ್ರೋಣರ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಿ ಭೀಷ್ಮರು ಸರ್ವಸೈನ್ಯದಿಂದ ಆ ವ್ಯೂಹವನ್ನು ರಚಿಸಿ ವ್ಯೂಹದ ಸರಿಯಾದ ಸ್ಥಾನದಲ್ಲಿ ಅವರು ನಿಂತರು.

ಸ ನಿರ್ಯಯೌ ರಥಾನೀಕಂ ಪಿತಾ ದೇವವ್ರತಸ್ತವ ।
ಮಹತಾ ರಥವಂಶೇನ ಸಂವೃತೋ ರಥಿನಾಂ ವರಃ ॥೭॥

ನಿನ್ನ ತಂದೆಯಾದ, ರಥಿಕರಲ್ಲಿ ಶ್ರೇಷ್ಠರಾದ ದೇವವ್ರತರು ದೊಡ್ಡ ರಥ ಸಮೂಹದಿಂದ ಕೂಡಿದವರಾಗಿ ಪಾಂಡವರ ರಥ ಸಮೂಹದ ಮೇಲೆ ಎರಗಿದರು.

ಇತರೇತರಮನ್ವೀಯುರ್ಯಥಾಭಾಗಮಮೃತಾಃ ।
ರಥಿನಃ ಪತ್ತಯಶ್ಚೈವ ದಂತಿನಃ ಸಾದಿನಸ್ತಥಾ ॥೮॥

ರಥಿಕರು, ಪದಾತಿಗಳು, ಗಜಾರೋಹಿಗಳು ಮತ್ತು ಅಶ್ವಾರೋಹಿಗಳು ವ್ಯೂಹಗಳ ತಮ್ಮ ತಮ್ಮ ಭಾಗಗಳಲ್ಲಿ ನಿಂತು ಶತ್ರುಗಳ ಮೇಲೆ ಪರಸ್ಪರವಾಗಿ ಎರಗಿದರು.

ತಾನ್ ದೃಷ್ಟ್ವಾ ಪ್ರೋದ್ಯತಾನ್ ಸಂಖ್ಯೇ ಪಾಂಡವಾಶ್ಚ ಯಶಸ್ವಿನಃ ।
ಶ್ಯೇನೇನ ವ್ಯೂಹರಾಜೇನ ತೇನಾಜಯ್ಯೇನ ಸಂಯುಗೇ ॥೯॥

ಅತೋಭತ ಮುಖೇ ತಸ್ಯ ಭೀಮಸೇನೋ ಮಹಾಬಲಃ ।
ನೇತ್ರೇ ಶಿಖಂಡೀ ದುರ್ಧರ್ಷೋ ಧೃಷ್ಟದ್ಯುಮ್ನಶ್ಚ ಪಾರ್ಷತಃ ॥೧೦॥

ಶೀರ್ಷಂ ತಸ್ಯಾಭವದ್ ವೀರಃ ಸಾತ್ಯಕಿಃ ಸತ್ಯವಿಕ್ರಮಃ ।
ವಿಧುನ್ವನ್ ಗಾಂಡಿವಂ ಜಾಷ್ಣೋ ಗ್ರೀವಾಯಾಮಭವತ್ ತದಾ ॥೧೧॥

ಅವರು ಯುದ್ಧದಲ್ಲಿ ಉದ್ಯುಕ್ತರಾದುದನ್ನು ನೋಡಿ ಯಶಸ್ವಿಗಳಾದ ಪಾಂಡವರೂ ಸಹ ಜಯಿಸಲು ಅಸಾಧ್ಯವಾದ ಶ್ರೇಷ್ಠವಾದ ಶ್ಯೇನವ್ಯೂಹವನ್ನು ರಚಿಸಿ ಯುದ್ಧಕ್ಕೆ ನಿಂತರು. ಮಹಾಬಲನಾದ ಭೀಮಸೇನನು ಅದರ ಮುಖಭಾಗದಲ್ಲಿ ಶೋಭಿಸಿದನು. ಸೋಲಿಸಲು ಅಸಾಧ್ಯನಾದ ಶಿಖಂಡಿಯೂ ಮತ್ತು ಧೃಷ್ಟದ್ಯುಮ್ನನೂ ಶ್ಯೇನದ ಕಣ್ಣುಗಳಾಗಿದ್ದರು. ಸತ್ಯವಿಕ್ರಮನೂ, ವೀರನೂ ಆದ ಸಾತ್ಯಕಿಯು ಆ ವ್ಯೂಹದ ಶಿರಸ್ಸಿನ ಸ್ಥಾನದಲ್ಲಿದ್ದನು. ಅರ್ಜುನನು ತನ್ನ ಗಾಂಡೀವ ಧನುಸ್ಸನ್ನು ಕಂಪಿಸುತ್ತಾ ಕತ್ತಿನ ಭಾಗದಲ್ಲಿ ಇದ್ದನು.

ಅಕ್ಷೌಹಿಣ್ಯಾ ಸಮಗ್ರಾ ಯಾ ವಾಮಪಕ್ಷೋಽಭವತ್ ತದಾ ।
ಮಹಾತ್ಮಾ ದ್ರುಪದಃ ಶ್ರೀಮಾನ್ ಸಹ ಪುತ್ರೇಣ ಸಂಯುಗೇ ॥೧೨॥

ದಕ್ಷಿಣಶ್ಚಾಭವತ್ ಪಕ್ಷಃ ಕೈಕೇಯೋಽಕ್ಷೋಹಿಣೀಪತಿಃ ।
ಧೃಷ್ಟತೋ ದ್ರೌಪದೇಯಾಶ್ಚ ಸೌಭದ್ರಶ್ಚಾಪಿ ವೀರ್ಯವಾನ್ ॥೧೩॥

ಮಹಾತ್ಮನೂ, ಸಂಪದ್ಯುಕ್ತನೂ ಆದ ದ್ರುಪದನು ತನ್ನ ಪುತ್ರನಾದ ಧೃಷ್ಟದ್ಯುಮ್ನನಿಂದ ಕೂಡಿಕೊಂಡು ಒಂದು ಅಕ್ಷೋಹಿಣಿ ಸೈನ್ಯದ ಜೊತೆಯಲ್ಲಿ ಶ್ಯೇನದ ವಾಮಪಕ್ಷದ ಸ್ಥಾನದಲ್ಲಿದ್ದನು. ಒಂದು ಅಕ್ಷೋಹಿಣಿ ಸೈನ್ಯದ ಜೊತೆಯಲ್ಲಿ ಕೇಕಯ ರಾಜನು ವ್ಯೂಹದ ದಕ್ಷಿಣ ಪಕ್ಷವಾಗಿದ್ದನು. ಶ್ಯೇನದ ಹಿಂಭಾಗದಲ್ಲಿ ದ್ರೌಪದಿಯ ಐವರು ಪುತ್ರರು ಮತ್ತು ಪರಾಕ್ರಮಶಾಲಿಯಾದ ಅಭಿಮನ್ಯುವು ಇದ್ದರು.

ಪುಚ್ಛೇ ಸಮಭವತ್ ಶ್ರೀಮಾನ್ ಸ್ವಯಂ ರಾಜಾ ಯುಧಿಷ್ಠಿರಃ ।
ಭ್ರಾತೃಭ್ಯಾಂ ಸಹಿತೋ ಧೀಮಾನ್ ಯಮಾಭ್ಯಾಂ ಚಾರುವಿಕ್ರಮಃ॥೧೪॥

ಸಂಪದ್ಯುಕ್ತನೂ, ಮೇಧಾವಿಯೂ, ಒಳ್ಳೆಯ ಪರಾಕ್ರಮಶಾಲಿಯೂ ಆದ ರಾಜನಾದ ಯುಧಿಷ್ಠಿರನು ನಕುಲ-ಸಹದೇವರಿಂದ ಸಹಿತನಾಗಿ ಶ್ಯೇನದ ಪುಚ್ಛ ಭಾಗದಲ್ಲಿದ್ದನು.

ಪ್ರವಿಶ್ಯ ತು ರಣೇ ಭೀಮೋ ಮಕರಂ ಮುಖತಸ್ತದಾ ।
ಭೀಷ್ಮಮಾಸಾದ್ಯ ಸಂಗ್ರಾಮೇ ಭಾದಯಾಮಾಸ ಸಾಯಕೈಃ ॥೧೫॥

ಭೀಮಸೇನನು ಮಕರವ್ಯೂಹವನ್ನು ಅದರ ಮುಖದಿಂದ ಪ್ರವೇಶಿಸಿ ರಣರಂಗದಲ್ಲಿ ಭೀಷ್ಮರನ್ನು ಸಮೀಪಿಸಿ ಬಾಣಗಳಿಂದ ಅವರನ್ನು ಮುಚ್ಚಿದನು.

ತತೋ ಭೀಷ್ಮೋ ಮಹಾಸ್ತ್ರಾಣಿ ಪಾತಯಾಮಾಸ ಭಾರತ ।
ಮೋಹಯನ್ ಪಾಂಡುಪುತ್ರಾಣಾಂ ವ್ಯೂಢಂ ಸೈನ್ಯಂ ಮಹಾಹವೇ ॥

ಎಲೈ ಭಾರತನೇ, ಆಗ ಭೀಷ್ಮರು ದೊಡ್ಡ ಯುದ್ಧದಲ್ಲಿ ವ್ಯೂಹಗೊಂಡ ಪಾಂಡವರ ಸೈನ್ಯವನ್ನು ಮರುಳುಗೊಳಿಸುತ್ತಾ ಅದರ ಮೇಲೆ ಮಹಾಸ್ತ್ರಗಳನ್ನು ಪ್ರಯೋಗಿಸಿದರು.

ಸಮುಹ್ಯತಿ ತದಾ ಸೈನ್ಯೇ ತ್ವರಮಾಣೋ ಧನಂಜಯಃ ।
ಭೀಷ್ಮಂ ಶರಸಹಸ್ರೇಣ ವಿವ್ಯಾಧ ರಣಮೂರ್ಧನಿ ॥೧೭॥

ಪರಿಸಂವಾರ್ಯ ಚಾಸ್ತ್ರಾಣಿ ಭೀಷ್ಮಮುಕ್ತಾನಿ ಸಂಯುಗೇ ।
ಸ್ವೇನಾನೀಕೇನ ಹೃಷ್ಟೇನ ಯುದ್ಧಾಯ ಸಮವಸ್ಥಿತಃ ॥೧೮॥

ತನ್ನ ಸೈನ್ಯವು ಸಮ್ಮೋಹಕ್ಕೆ ಒಳಗಾಗುತ್ತಿರಲು ಅರ್ಜುನನು ಶೀಘ್ರವಾಗಿ ಭೀಷ್ಮರನ್ನು ಶ್ರೇಷ್ಠವಾದ ರಣದಲ್ಲಿ ಒಂದು ಸಹಸ್ರ ಬಾಣಗಳಿಂದ ಪೀಡಿಸಿದನು. ಭೀಷ್ಮರು ಪ್ರಯೋಗಿಸಿದ ಅಸ್ತ್ರಗಳನ್ನು ನಿವಾರಿಸಿ ಸಂತೋಷಗೊಂಡ ತಮ್ಮ ಸೈನ್ಯದ ಜೊತೆಯಲ್ಲಿ ಯುದ್ಧಕ್ಕೆ ನಿಂತನು.

ತತೋ ದುರ್ಯೋಧನೋ ರಾಜಾ ಭಾರದ್ವಾಜಮಭಾಷತ ।
ಪೂರ್ವಂ ದೃಷ್ಟ್ವಾ ವಧಂ ಘೋರಂ ಬಲಸ್ಯ ಬಲಿನಾಂ ವರಃ ।
ಭ್ರಾತೄಣಾಂ ಚ ವಧಂ ಯುದ್ಧೇ ಸ್ಮರಮಾಣೋ ಮಹಾರಥಃ ॥೧೯॥

ಆಗ ಹಿಂದಿನ ದಿವಸ ಉಂಟಾದ ತನ್ನ ಸೈನ್ಯದ ಮತ್ತು ತಮ್ಮಂದಿರ ಘೋರವಾದ ವಧೆಯನ್ನು ಸ್ಮರಿಸಿಕೊಳ್ಳುತ್ತಾ ಬಲಿಷ್ಠರಲ್ಲಿ ಶ್ರೇಷ್ಠನೂ, ಮಹಾರಥನೂ ಆದ ದುರ್ಯೋಧನ ರಾಜನು ದ್ರೋಣರ ಜೊತೆಯಲ್ಲಿ ಮಾತನಾಡಿದನು.

ಆಚಾರ್ಯ ಸತತಂ ತ್ವಂ ಹಿ ಹಿತಕಾಮೋ ಮಮಾನಘ ।
ವಯಂ ಹಿ ತ್ವಾಂ ಸಮಾಶ್ರಿತ್ಯ ಭೀಷ್ಮಂ ಚೈವ ಪಿತಾಮಹಮ್ ॥೨೦॥

ದೇವಾನಪಿ ರಣೇ ಜೇತುಂ ಪ್ರಾರ್ಥಯಾಮೋ ನ ಸಂಶಯಃ ।
ಕಿಮು ಪಾಂಡುಸುತಾನ್ ಯುದ್ಧೇ ಹೀನವೀರ್ಯಪರಾಕ್ರಮಾನ್ ।
ಸ ತಥಾ ಕುರು ಭದ್ರಂ ತೇ ಯಥಾ ವಧ್ಯಂತಿ ಪಾಂಡವಾಃ ॥೨೧॥

ದೋಷದೂರರಾದ ಆಚಾರ್ಯರೇ, ನೀವು ಯಾವಾಗಲೂ ನನ್ನ ಹಿತದಲ್ಲಿಯೇ ಆಸಕ್ತರಾಗಿದ್ದೀರಿ. ನಾವಾದರೂ ನಿಮ್ಮನ್ನು ಮತ್ತು ಪಿತಾಮಹರಾದ ಭೀಷ್ಮರನ್ನು ಆಶ್ರಯಿಸಿ ದೇವತೆಗಳನ್ನೂ ಯುದ್ಧದಲ್ಲಿ ಜಯಿಸಲು ಬಯಸುತ್ತೇವೆ. ಇದರಲ್ಲಿ ಸಂಶಯವಿಲ್ಲ. ಹೀಗಿರುವಾಗ ದುರ್ಬಲರೂ, ಪರಾಕ್ರಮಹೀನರೂ ಆದ ಪಾಂಡವರನ್ನು ಗೆಲ್ಲುವುದು ಯಾವ ದೊಡ್ಡ ವಿಷಯ? ನಿಮಗೆ ಮಂಗಳವಾಗಲಿ. ಪಾಂಡವರು ವಧಿಸಲ್ಪಡುವಂತೆ ಯುದ್ಧವನ್ನು ಮಾಡಿ.

ಏವಮುಕ್ತಸ್ತತೋ ದ್ರೋಣಸ್ತವ ಪುತ್ರೇಣ ಮಾರಿಷ ।
ಅಭಿಸತ್ ಪಾಂಡವಾನೀಕಂ ಪ್ರೇಕ್ಷಮಾಣಸ್ಯ ಸಾತ್ಯಕೇಃ ॥೨೨॥

ಎಲೈ ಪೂಜ್ಯನೇ, ನಿನ್ನ ಪುತ್ರನಿಂದ ಹೀಗೆ ಹೇಳಲ್ಪಟ್ಟ ದ್ರೋಣರು ಸಾತ್ಯಕಿಯು ನೋಡುತ್ತಿರುವಂತೆಯೇ ಪಾಂಡವರ ಸೈನ್ಯವನ್ನು ಭೇದಿಸಿದರು.

ಸಾತ್ಯಕಿಸ್ತು ತದಾ ದ್ರೋಣಂ ವಾರಯಾಮಾಸ ಭಾರತ ।
ತತಃ ಪ್ರವವೃತೇ ಯುದ್ಧಂ ತುಮುಲಂ ಲೋಮಹರ್ಷಣಮ್ ॥೨೩॥

ಎಲೈ ಭಾರತನೇ, ಆಗ ಸಾತ್ಯಕಿಯಾದರೂ ದ್ರೋಣರನ್ನು ತಡೆದನು. ಅನಂತರ ಅವರಿಗೆ ರೋಮಾಂಚಕಾರಿಯಾದ, ತೀವ್ರವಾದ ಯುದ್ಧವು ಜರುಗಿತು.

ಶೈನೇಯಂ ತು ರಣೇ ಕ್ರುದ್ಧೋ ಭಾರದ್ವಾಜಃ ಪ್ರತಾಪವಾನ್ ।
ಅವಿಧ್ಯನ್ನಿಶಿತೈರ್ಬಾಣೈರ್ಜತ್ರುದೇಶೇ ಹಸನ್ನಿವ ॥೨೪॥

ಪ್ರತಾಪಶಾಲಿಗಳಾದ ದ್ರೋಣರು ಯುದ್ಧದಲ್ಲಿ ಕ್ರುದ್ಧರಾಗಿ ನಗುವವರಂತೆ ಅನಾಯಾಸವಾಗಿ ಸಾತ್ಯಕಿಯನ್ನು ಭುಜಸಂಧಿದೇಶದಲ್ಲಿ ಹರಿತವಾದ ಬಾಣಗಳಿಂದ ಹೊಡೆದರು.

ಭೀಮಸೇನಸ್ತತಃ ಕ್ರುದ್ಧೋ ಭಾರದ್ವಾಜಮವಿಧ್ಯತ ।
ಸಂರಕ್ಷನ್ ಸಾತ್ಯಕಿಂ ರಾಜನ್ ದ್ರೋಣಾಚ್ಛಸ್ತ್ರಭೃತಾಂ ವರಾತ್ ॥೨೫॥

ಎಲೈ ರಾಜನೇ, ಆಗ ಭೀಮಸೇನನು ಬಹಳ ಕೋಪಗೊಂಡು ಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ ದ್ರೋಣರಿಂದ ಸಾತ್ಯಕಿಯನ್ನು ರಕ್ಷಿಸುವವನಾಗಿ ದ್ರೋಣರ ಮೇಲೆ ಬಾಣ ಪ್ರಯೋಗವನ್ನು ಮಾಡಿದನು.

ತತೋ ದ್ರೋಣಶ್ಚ ಭೀಷ್ಮಶ್ಚ ತಥಾ ಶಲ್ಯಶ್ಚ ಮಾರಿಷ ।
ಭೀಮಸೇನಂ ರಣೇ ಕ್ರುದ್ಧಾಃ ಛಾದಯಾಂಚಕ್ರಿರೇ ಶರೈಃ ॥೨೬॥

ಎಲೈ ಪೂಜ್ಯನೇ, ಆಗ ದ್ರೋಣರು, ಭೀಷ್ಮರು ಮತ್ತು ಶಲ್ಯನು ಯುದ್ಧದಲ್ಲಿ ಕ್ರುದ್ಧರಾಗಿ ಭೀಮಸೇನನನ್ನು ತಾವು ಪ್ರಯೋಗಿಸಿದ ಬಾಣಗಳಿಂದ ಮುಚ್ಚಿದರು.

ತತ್ರಾಭಿಮನ್ಯುಃ ಸಂಕ್ರುದ್ಧೋ ದ್ರೌಪದೇಯಾಶ್ಚ ಮಾರಿಷ ।
ವಿವ್ಯಧುರ್ನಿಶಿತೈರ್ಬಾಣೈಃ ಸರ್ವಾಂಸ್ತಾನುದ್ಯತಾಯುಧಾನ್ ॥೨೭॥

ಎಲೈ ಪೂಜ್ಯನೇ, ಆಗ ಬಹಳ ಕೋಪಗೊಂಡ ಅಭಿಮನ್ಯುವು ಮತ್ತು ದ್ರೌಪದಿಯ ಪುತ್ರರು ಹರಿತವಾದ ಬಾಣಗಳಿಂದ ಆಯುಧವನ್ನು ಎತ್ತಿಹಿಡಿದ ಅವರೆಲ್ಲರನ್ನೂ ಏಡಿಸಿದರು.

ಭೀಷ್ಮದ್ರೋಣೌ ಚ ಸಂತ್ರುದ್ಧಾವಾಪತಂತೌ ಮಹಾಬಲೌ ।
ಶ್ರುತ್ವಾದ್ಯಯೌ ಶಿಖಂಡೀ ತು ಮಹೇಷ್ವಾಸೋ ಮಹಾಹವೇ ॥೨೮॥

ಕೋಪಗೊಂಡು ಮೇಲೆರಗುತ್ತಿದ್ದ ಮಹಾಬಲಿಷ್ಠರಾದ ಭೀಷ್ಮ-ದ್ರೋಣರನ್ನು ಕುರಿತು ಮಹಾಧನುರ್ಧಾರಿಯಾದ ಶಿಖಂಡಿಯು ಆ ದೊಡ್ಡ ಯುದ್ಧದಲ್ಲಿ ಅಭಿಮುಖವಾಗಿ ಎರಗಿದನು.

ಪ್ರಗೃಹ್ಯ ಬಲವದ್ ವೀರೋ ಧನುರ್ಜಲದನಿಸ್ವನಮ್ ।
ಅಭ್ಯವರ್ಷಚ್ಛರೈಸ್ತೂರ್ಣಂ ಧಾದಯಾನೋ ದಿವಾಕರಮ್ ॥೨೯॥

ವೀರನಾದ ಅವನು ಮೇಘಘೋಷದಂತೆ ಘೋಷವನ್ನು ಮಾಡುತ್ತಿದ್ದ ದೃಢವಾದ ಧನುಸ್ಸನ್ನು ತೆಗೆದುಕೊಂಡು ಶೀಘ್ರವಾಗಿ ತನ್ನ ಬಾಣ ಪ್ರಯೋಗಗಳಿಂದ ಸೂರ್ಯ ಪ್ರಕಾಶವನ್ನೇ ಮುಚ್ಚಿದನು.

ಶಿಖಂಡಿನಂ ಸಮಾಸಾದ್ಯ ಭರತಾನಾಂ ಪಿತಾಮಹಃ ।
ಅವರ್ಜಯತ ಸಂಗ್ರಾಮೇ ಸ್ತ್ರೀತ್ವಂ ತಸ್ಯಾನುಸಂಸ್ಮರನ್ ॥೩೦॥

ಶಿಖಂಡಿಯು ಸಮೀಪಿಸುತ್ತಿರಲು ಭರತರ ಪಿತಾಮಹರಾದ ಭೀಷ್ಮರು ಅವನು ಮೊದಲು ಸ್ತ್ರೀಯಾಗಿದ್ದವನು ಎಂದು ಸ್ಮರಿಸಿ ಅವನನ್ನು ತ್ಯಜಿಸಿದರು.

ತತೋ ದ್ರೋಣೋ ಮಹಾರಾಜ ಅಭ್ಯದ್ರವತ ತಂ ರಣೇ ।
ರಕ್ಷಮಾಣಸ್ತತೋ ಭೀಷ್ಮಂ ತವ ಪುತ್ರೇಣ ಚೋದಿತಃ ॥೩೧॥

ಎಲೈ ಮಹಾರಾಜನೇ, ಆಗ ದ್ರೋಣರು ರಣರಂಗದಲ್ಲಿ ನಿನ್ನ ಪುತ್ರನಿಂದ ಪ್ರೇರಿತರಾಗಿ ಭೀಷ್ಮರನ್ನು ರಕ್ಷಿಸುತ್ತಾ ಅವನ ಮೇಲೆ ಎರಗಿದರು.

ಶಿಖಂಡೀ ತು ಸಮಾಸಾದ್ಯ ದ್ರೋಣಂ ಶಸ್ತ್ರಭೃತಾಂ ವರಮ್ ।
ಅವರ್ಜಯತ ಸಂಗ್ರಾಮೇ ಯುಗಾಂತಾಗ್ನಿಮಿವೋಲ್ಬಣಮ್ ॥೩೨॥

ಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ ದ್ರೋಣರು ತನ್ನ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಿರಲು ಉಲ್ಬಣವಾದ ಯುಗಾಂತಾಗ್ನಿಯನ್ನು ಪರಿತ್ಯಜಿಸಿದಂತೆ ಶಿಖಂಡಿಯು ಅವರನ್ನು ಪರಿತ್ಯಜಿಸಿದನು.

ತತೋ ಬಲೇನ ಮಹತಾ ಪುತ್ರಸ್ತವ ವಿಶಾಂಪತೇ ।
ಜುಗೋಪ ಭೀಷ್ಮಮಾಸಾದ್ಯ ಪ್ರಾರ್ಥಯಾನೋ ಮಹದ್ಯಶಃ ॥೩೩॥

ಎಲೈ ರಾಜನೇ, ಶಿಖಂಡಿಯು ದೂರಸರಿದ ಮೇಲೆ ದೊಡ್ಡ ಸೈನ್ಯದಿಂದ ಕೂಡಿದವನಾಗಿ ನಿನ್ನ ಪುತ್ರನು ದೊಡ್ಡ ಕೀರ್ತಿಯನ್ನು ಪಡೆಯಲು ಬಯಸುತ್ತಾ ಭೀಷ್ಮರ ಸಮೀಪಕ್ಕೆ ಬಂದು ಅವರನ್ನು ರಕ್ಷಿಸಿದನು.

ತಥೈವ ಪಾಂಡವಾ ರಾಜನ್ ಪುರಸ್ಕೃತ್ಯ ಧನಂಜಯಮ್ ।
ಭೀಷ್ಮಮೇವಾಭ್ಯವರ್ತಂತ ಜಯೇ ಕೃತ್ವಾ ದೃಢಾಂ ಮತಿಮ್ ॥೩೪॥

ಎಲೈ ರಾಜನೇ, ಹಾಗೆಯೇ ಪಾಂಡವರು ಅರ್ಜುನನನ್ನು ಮುಂದೆ ಮಾಡಿಕೊಂಡು ಜಯವನ್ನು ಸಂಪಾದಿಸುವ ದೃಢ ನಿಶ್ಚಯವನ್ನು ಹೊಂದಿ ಭೀಷ್ಮರ ಮೇಲೆಯೇ ಎರಗಿದರು.

ತದ್ಯುದ್ಧಮಭವದ್ ಘೋರಂ ದೇವಾನಾಂ ದಾನವೈರಿವ ।
ಜಯಂ ಚ ಕಾಂಕ್ಷತಾಂ ನಿತ್ಯಂ ಯಶಶ್ಚ ಪರಮಾದ್ಭುತಮ್ ॥೩೫॥

ಯಾವಾಗಲೂ ಜಯವನ್ನು ಮತ್ತು ಪರಮಾದ್ಭುತವಾದ ಕೀರ್ತಿಯನ್ನು ಬಯಸುವ ಅವರಿಬ್ಬರಿಗೆ ದೇವ-ದಾನವರಿಗೆ ನಡೆದಂತೆ ಘೋರವಾದ ಯುದ್ಧವು ನಡೆಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಪಂಚಷಷ್ಟಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಪಂಚವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಅರವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯ - ೨೫ನೇ ಅಧ್ಯಾಯ

ಭೀಷ್ಮಮಗ್ರೇ ನಿಧಾಯೈವ ಯಯೌ ಯುದ್ಧಾಯ ದಂಶಿತಃ ।
ತತ್ರಾऽಸೀದ್ ಯುದ್ಧಮತುಲಂ ಭೀಮಭೀಷ್ಮಾನುಯಾಯಿನಾಮ್ ।
ಪಾಂಡವಾನಾಂ ಕುರೂಣಾಂ ಚ ಶೂರಾಣಾಮನಿವರ್ತಿನಾಮ್ ॥೫೯॥

ಭೀಷ್ಮರನ್ನೇ ಮುಂದಿಟ್ಟುಕೊಂಡು ಕವಚಗಳನ್ನು ಧರಿಸಿ ದುರ್ಯೋಧನನು ಯುದ್ಧಕ್ಕೆ ಹೊರಟನು. ಆಗ ಭೀಮ-ಭೀಷ್ಮರ ಅನುಯಾಯಿಗಳಾದ ಯುದ್ಧಕ್ಕೆ ಬೆನ್ನು ಹಾಕದ ಶೂರರಾದ ಪಾಂಡವರಿಗೂ ಕೌರವರಿಗೂ ಬಲು ದೊಡ್ಡ ಕಾಳಗ ನಡೆಯಿತು.

★ ★ ★ ★ ★

ಅರವತ್ತಾರನೆಯ ಅಧ್ಯಾಯ

ಐದನೆಯ ದಿವಸದ ಯುದ್ಧದ ಅನುವೃತ್ತಿ

ಸಂಜಯಃ

ಅಕರೋತ್ ತುಮುಲಂ ಯುದ್ಧಂ ಭೀಷ್ಮಃ ಶಾಂತನವಸ್ತದಾ ।
ಭೀಮಸೇನಭಯಾದಿಚ್ಛನ್ ಪುತ್ರಾಂಸ್ತಾರಯಿತುಂ ತವ ॥೧॥

ಸಂಜಯ– ಶಂತನುಪುತ್ರರಾದ ಭೀಷ್ಮರು ನಿನ್ನ ಪುತ್ರರನ್ನು ಭೀಮಸೇನನ ಭಯದಿಂದ ರಕ್ಷಿಸಲು ಇಚ್ಛಿಸಿ ತೀವ್ರವಾದ ಯುದ್ಧವನ್ನು ಮಾಡಿದರು.

ಪೂರ್ವಾಹ್ಣೇ ತನ್ಮಹಾರೌದ್ರಂ ರಾಜ್ಞಾಂ ಯುದ್ಧಮವರ್ತತ ।
ಕುರೂಣಾಂ ಪಾಂಡವಾನಾಂ ಚ ಮುಖ್ಯಶೂರವಿನಾಶನಮ್ ॥೨॥

ಕೌರವರ ಮತ್ತು ಪಾಂಡವರ ಮುಖ್ಯರಾದ ಶೂರರನ್ನು ವಿನಾಶ ಮಾಡುವ ಆ ಅತಿಭಯಂಕರವಾದ ರಾಜರ ಯುದ್ಧವು ಪ್ರಾತಃಕಾಲದಲ್ಲಿ ನಡೆಯಿತು.

ತಸ್ಮಿನ್ನಾಕುಲಸಂಗ್ರಾಮೇ ವರ್ತಮಾನೇ ಮಹಾಭಯೇ ।
ಅಭವತ್ ತುಮುಲಃ ಶಬ್ದಃ ಸಂಸ್ಪರ್ಶನ್ ಗಗನಂ ಮಹತ್ ॥೩॥

ಆ ತೀವ್ರವೂ ಮತ್ತು ಮಹಾಭಯಂಕರವೂ ಆದ ಯುದ್ಧದಲ್ಲಿ ತೀವ್ರವಾದ ಶಬ್ದ ಉಂಟಾಗಿ ಆ ದೊಡ್ಡ ಶಬ್ದವು ಆಕಾಶವನ್ನು ಮುಟ್ಟುತ್ತಿದ್ದಿತು.

ನದದ್ಭಿಶ್ಚ ಮಹಾನಾಗೈರ್ಹೇಷಮಾಣೈಶ್ಚ ವಾಜಿಭಿಃ ।
ಭೇರೀಶಂಖನಿನಾದೈಶ್ಚ ತುಮುಲಃ ಸಮಪದ್ಯತ ॥೪॥

ಗರ್ಜಿಸುತ್ತಿದ್ದ ಮಹಾಗಜಗಳಿಂದಲೂ, ಹೇಷಾರವವನ್ನು ಮಾಡುತ್ತಿದ್ದ ಅಶ್ವಗಳಿಂದಲೂ, ಭೇರೀ-ಶಂಖನಿನಾದಗಳಿಂದಲೂ ಆ ತೀವ್ರವಾದ ಶಬ್ದವು ಉಂಟಾಯಿತು.

ಯುಯುತ್ಸವಸ್ತೇ ವಿಕ್ರಾಂತಾ ವಿಜಯಾಯ ಮಹಾಬಲಾಃ ।
ಅನ್ಯೋನ್ಯಮಭಿಗರ್ಜಂತೋ ಗೋಷ್ಠೇಷ್ವಿವ ಮಹರ್ಷಭಾಃ ॥೫॥

ಮಹಾಬಲಿಷ್ಠರೂ, ವಿಜಯವನ್ನು ಸಂಪಾದಿಸಲು ಪರಾಕ್ರಮವನ್ನು ತೋರಿಸುತ್ತಿದ್ದವರೂ ಆದ ಉಭಯ ಸೈನ್ಯದ ಯೋಧರು ಕೊಟ್ಟಗೆಯಲ್ಲಿರುವ ಗೂಳಿಗಳಂತೆ ಪರಸ್ಪರವಾಗಿ ಗರ್ಜಿಸುತ್ತಾ ಯುದ್ಧಮಾಡಲು ಬಯಸಿದರು.

ಶಿರಸಾಂ ಪಾತ್ಯಮಾನಾನಾಂ ಸಮರೇ ನಿಶಿತೈಃ ಶರೈಃ ।
ಅಶ್ಮವೃಷ್ಟಿರಿವಾಕಾಶೇ ಬಭೂವ ಭರತರ್ಷಭ ॥೬॥

ಎಲೈ ಭರತಶ್ರೇಷ್ಠನೇ, ಬಾಣಗಳಿಂದ ಕತ್ತರಿಸಲ್ಪಟ್ಟು ಕೆಳಗೆ ಬೀಳುವ ಶಿರಸ್ಸುಗಳು ಆಕಾಶದಿಂದ ಬೀಳುವ ಕಲ್ಲಿನ ಮಳೆಯಂತೆ ತೋರುತ್ತಿದ್ದವು.

ಕುಂಡಲೋಷ್ಣೀಷಧಾರೀಣಿ ಜಾತರೂಪೋಜ್ಜ್ವಲಾನಿ ಚ ।
ಪತಿತಾನಿ ಸ್ಮ ದೃಶ್ಯಂತೇ ಶಿರಾಂಸಿ ಭರತರ್ಷಭ ॥೭॥

ಎಲೈ ಭರತಶ್ರೇಷ್ಠನೇ, ಕರ್ಣ-ಕುಂಡಲಗಳನ್ನು ಮತ್ತು ರುಮಾಲುಗಳನ್ನು ಧರಿಸಿದ, ಸುವರ್ಣಾಲಂಕೃತವಾದ ಶಿರಸ್ಸುಗಳು ಅಲ್ಲಲ್ಲಿ ಬಿದ್ದಿರುವುದು ಕಂಡುಬರುತ್ತಿದ್ದಿತು.

ವಿಶಿಖೋನ್ಮಥಿತೈರ್ಗಾತ್ರೈರ್ಬಾಹುಭಿಶ್ಚ ಸಕಾರ್ಮುಕೈಃ ।
ಸಹಸ್ತಾಭರಣೈಶ್ಚಾನ್ಯೈ ರಭವಚ್ಚಾದಿತಾ ಮಹೀ ॥೮॥

ಬಾಣಗಳಿಂದ ಕತ್ತರಿಸಲ್ಪಟ್ಟ ಶರೀರಗಳಿಂದಲೂ, ಧನುಸ್ಸನ್ನು ಹಿಡಿದ ಬಾಹುಗಳಿಂದಲೂ, ಹಸ್ತಾಭರಣಗಳಿಂದ ಕೂಡಿದ ಹಸ್ತಗಳಿಂದಲೂ ಮತ್ತು ಉಳಿದ ಕತ್ತರಿಸಲ್ಪಟ್ಟ ಅವಯವಗಳಿಂದಲೂ ಭೂಮಿಯು ತುಂಬಿಹೋಯಿತು.

ಕವಚೋಷ್ಣೀಷೈರಾಸ್ತೈಶ್ಚ ಸಮಲಂಕೃತೈಃ ।
ಮುಖೈಶ್ಚ ಚಂದ್ರಸಂಕಾಶೈ ರಕ್ತಾಂತನಯನೈಃ ಶುಭೈಃ ॥೯॥

ಗಜಾಶ್ವಮನುಷ್ಯಾಣಾಂ ಸರ್ವಗಾತ್ರೈಶ್ಚ ಭೂಪತೇ ।
ಆಸೀತ್ಪೂರ್ಣಾ ಸಮಾಕೀರ್ಣಾ ಮುಹೂರ್ತೇನ ಮಹೀಂಧರಾ ॥೧೦॥

ಕವಚವನ್ನು ಧರಿಸಿದ ಮಧ್ಯಶರೀರಗಳಿಂದಲೂ, ಚೆನ್ನಾಗಿ ಅಲಂಕೃತವಾದ ಹಸ್ತಗಳಿಂದಲೂ, ರಕ್ತಾಂತವಾದ ಕಣ್ಣುಗಳುಳ್ಳ ಚಂದ್ರನಂತಿರುವ ಶುಭವಾದ ಮುಖಗಳಿಂದಲೂ, ಗಜಾಶ್ವಮನುಷ್ಯರ ಸರ್ವದೇಹಗಳಿಂದಲೂ ಒಂದು ಮುಹೂರ್ತದಲ್ಲಿ ಭೂಮಿಯು ಎಲ್ಲಾ ಕಡೆಗಳಲ್ಲಿಯೂ ತುಂಬಿಹೋಯಿತು.

ರೋಮೇಷ್ಟಿಶ್ಚ ತುಮುಲೈಃ ಶಸ್ತ್ರವಿದ್ಯುಚ್ಛತೈಃ ।
ಆಯುಧಾನಾಂ ಚ ನಿರ್ಘೋಷಃ ಸ್ವನಯಿತ್ನುಸಮೋऽಭವತ್ ॥೧೧॥

ಧೂಳುಗಳಿಂದ ಉಂಟಾದ ತೀವ್ರವಾದ ಮೋಡಗಳಿಂದ ಕೂಡಿದ ಶಸ್ತ್ರದ ಹೊಳಪು ಎಂಬ ಮಿಂಚುಗಳಿಂದ ಕೂಡಿದ ಪ್ರಯೋಗಿಸಲ್ಪಡುವ ಆಯುಧಗಳ ಘೋಷವು ಸಿಡಿಲಿನ ನಾದಕ್ಕೆ ಸಮಾನವಾಗಿದ್ದಿತು.

ಸ ಸಂಪ್ರಹಾರಸ್ತುಮುಲಃ ಕಟುಕಃ ಶೋಣಿತೋದಕಃ ।
ಪ್ರಾವರ್ತತ ಕುರೂಣಾಂ ಚ ಪಾಂಡವಾನಾಂ ಚ ಭಾರತ ॥೧೨॥

ಎಲೈ ಭಾರತನೇ, ಕೌರವರಿಗೂ ಮತ್ತು ಪಾಂಡವರಿಗೂ ರಕ್ತೋದಕದಿಂದ ಕೂಡಿದ ಬಹಳ ಕಟುವೂ ಮತ್ತು ತೀವ್ರವೂ ಆದ ಆ ಹೊಡೆದಾಟವು ಜರುಗಿತು.

ತಸ್ಮಿನ್ ಮಹಾಭಯೇ ಘೋರೇ ತುಮುಲೇ ರೋಮಹರ್ಷಣೇ ।
ಪರಸ್ಪರಂ ಶರವರ್ಷಾಣಿ ಕ್ಷಿಪಂತಿ ಯುದ್ಧದುರ್ಮದಾಃ ॥೧೩॥

ರೋಮಾಂಚಕಾರಿಯೂ, ತೀವ್ರವೂ, ಘೋರವೂ ಮತ್ತು ಮಹಾಭಯಂಕರವೂ ಆದ ಯುದ್ಧವು ನಡೆಯುತ್ತಿರಲು ಯುದ್ಧ ದುರ್ಮದರಾದ ಕ್ಷತ್ರಿಯರು ಪರಸ್ಪರವಾಗಿ ಬಾಣಗಳ ಮಳೆಯನ್ನು ಸುರಿಸಿದರು.

ಕ್ರೋಶಂತಿ ಕುಂಜರಾಸ್ತತ್ರ ಶರವರ್ಷಪ್ರತಾಪಿತಾಃ ।
ತಾವಕಾನಾಂ ಪರೇಷಾಂ ಚ ಸಂಯುಗೇ ಭರತೋತ್ತಮ ॥೧೪॥

ಎಲೈ ಭರತಶ್ರೇಷ್ಠನೇ, ಬಾಣಗಳ ಹೊಡೆತಕ್ಕೆ ಸಿಲುಕಿದ ನಿನ್ನವರ ಮತ್ತು ಶತ್ರುಗಳಾದ ಪಾಂಡವರ ಗಜಗಳು ಯುದ್ಧದಲ್ಲಿ ನೋವಿನ ಗರ್ಜನೆಯನ್ನು ಮಾಡುತ್ತಿದ್ದವು.

ಸಂರಬ್ಧಾನಾಂ ಚ ವೀರಾಣಾಂ ಧೀರಾಣಾಮಮಿತೌಜಸಾಮ್ ।
ಧನುರ್ಜ್ಯಾತಳಶಬ್ದೇನ ನ ಪ್ರಾಜ್ಞಾಯತ ಕಿಂಚನ ॥೧೫॥

ಅಮಿತಪರಾಕ್ರಮಿಗಳಾದ, ಕೋಪಗೊಂಡ ವೀರರ ಧನುಸ್ಸಿನ ಹೆದೆಯ ಘೋಷಗಳಿಂದಲೂ, ಅಸ್ತ್ರಗಳ ಶಬ್ದಗಳಿಂದಲೂ ಕೂಡಿದ ಆ ರಣರಂಗದಲ್ಲಿ ಏನೂ ತಿಳಿಯುತ್ತಿರಲಿಲ್ಲ.

ಉತ್ಥಿತೇಷು ಕಬಂಧೇಷು ಸರ್ವತಃ ಶೋಣಿತೋದಕೇ ।
ಸಮರೇ ಪರ್ಯಧಾವಂತ ನೃಪಾ ರಿಪುವಧೋದ್ಯತಾಃ ॥೧೬॥

ಶರಶಕ್ತಿಗದಾಭಿಶ್ಚ ಖಡ್ಗೈಶ್ಚಾಮಿತತೇಜಸಃ ।
ನಿಜಘ್ನುಃ ಸಮರೇ ಶೂರಾಸ್ತೇಽನ್ಯೋನ್ಯಂ ಚ ಪರಂತಪ ॥೧೭॥

ರಕ್ತಮಯವಾದ ಉದಕವನ್ನು ಹೊಂದಿದ ಆ ರಣರಂಗದಲ್ಲಿ ಶಿರಸ್ಸಿಲ್ಲದ ದೇಹಗಳು ಎಲ್ಲ ಕಡೆಗಳಲ್ಲಿಯೂ ಏಳುತ್ತಿರಲು, ಶತ್ರುವಧೆಯಲ್ಲಿಯೇ ನಿರತರಾದ ಅಮಿತ ಪರಾಕ್ರಮಿಗಳಾದ ರಾಜರು ಕೈಯಲ್ಲಿ ಶರಶಕ್ತಿಗದೆಗಳನ್ನು, ಖಡ್ಗಗಳನ್ನು ಹಿಡಿದು ಒಬ್ಬರ ಮೇಲೊಬ್ಬರು ಧಾವಿಸಿದರು. ಎಲೈ ಪರಂತಪನೇ, ಶೂರರಾದ ಅವರು ಯುದ್ಧದಲ್ಲಿ ಪರಸ್ಪರವಾಗಿ ಸಂಹಾರವನ್ನು ಮಾಡಿದರು.

ಬಭ್ರಮುಃ ಕುಂಜರಾಶ್ಚಾತ್ರ ಶರೈರ್ವಿದ್ಧಾ ನಿರಂಕುಶಾಃ ।
ಅಶ್ವಾಶ್ಚ ಪರ್ಯಧಾವಂತ ಹತಾರೋಹಾ ದಿಶೋ ದಶ ॥೧೮॥

ಗಜಾರೋಹಿಗಳನ್ನು ಕಳೆದುಕೊಂಡು ನಿರಂಕುಶಗಳಾದ ಗಜಗಳು ಬಾಣಗಳಿಂದ ಪೀಡಿತವಾಗಿ ಅಲ್ಲಲ್ಲಿ ತಿರುಗಾಡಿದವು. ಅಶ್ವಗಳಾದರೂ ಅಶ್ವಾರೋಹಿಗಳನ್ನು ಕಳೆದುಕೊಂಡು ಎಲ್ಲ ದಿಕ್ಕುಗಳಲ್ಲಿಯೂ ಓಡಿದವು.

ಉತ್ಪತ್ಯ ನಿಪತಂತ್ಯನ್ಯೇ ಶರಘಾತಪ್ರಪೀಡಿತಾಃ ।
ತಾವಕಾನಾಂ ಪರೇಷಾಂ ಚ ಯೋಧಾನಾಂ ಭರತರ್ಷಭ ॥೧೯॥

ಬಾಹೂನಾಮುತ್ತಮಾಂಗಾನಾಂ ಕಾರ್ಮುಕಾಣಾಂ ತಥೈವ ಚ ।
ಗದಾನಾಂ ಪರಿಘಾಣಾಂ ಚ ಹಸ್ತಾನಾಂ ಚೋರುಭಿಃ ಸಹ ॥೨೦॥

ಪಾದಾನಾಂ ಭೂಷಣಾನಾಂ ಚ ಕೇಯೂರಾಣಾಂ ಚ ಸಂಘಶಃ ।
ರಾಶಯಃ ಸ್ಮ ಪ್ರದೃಶ್ಯಂತೇ ಭೀಷ್ಮಭೀಮಪರಾಕ್ರಮೇ ॥೨೧॥

ಇನ್ನು ಕೆಲವು ಯೋಧರು ಬಾಣಪ್ರಯೋಗಗಳಿಂದ ಚೆನ್ನಾಗಿ ಪೀಡಿತರಾಗಿ ಮೇಲೆ ಹಾರಿ ಕೆಳಗೆ ಬೀಳುತ್ತಿದ್ದರು. ಎಲೈ ಭರತಶ್ರೇಷ್ಠನೇ, ಭೀಷ್ಮರ ಮತ್ತು ಭೀಮನ ಪರಾಕ್ರಮದಿಂದ ಕೂಡಿದ ಆ ಯುದ್ಧದಲ್ಲಿ ನಿನ್ನ ಮತ್ತು ಶತ್ರುಯೋಧರ ಕತ್ತರಿಸಲ್ಪಟ್ಟ ಬಾಹುಗಳ, ಶಿರಸ್ಸುಗಳ, ಧನುಸ್ಸುಗಳ, ಗದೆಗಳ, ಪರಿಘಗಳ, ಹಸ್ತಗಳ, ತೊಡೆಗಳ, ಪಾದಗಳ, ಭೂಷಣಗಳ, ಕೇಯೂರಗಳ ಸಮೂಹಗಳ ರಾಶಿಗಳು ಅಲ್ಲಲ್ಲಿ ಕಂಡುಬರುತ್ತಿದ್ದವು.

ಅಶ್ವಾನಾಂ ಕುಂಜರಾಣಾಂ ಚ ರಥಾನಾಂ ಚಾತಿವರ್ತತಾಮ್ ।
ಸಂಘಾತಾಃ ಸ್ಮ ಪ್ರದೃಶ್ಯಂತೇ ತತ್ರ ತತ್ರ ವಿಶಾಂಪತೇ ॥೨೨॥

ಎಲೈ ರಾಜನೇ, ಮೃತವಾದ ಅಶ್ವಗಳ, ಗಜಗಳ, ಹಿಂದಿರುಗದಿರುವ ರಥಗಳ ಸಮೂಹಗಳು ಅಲ್ಲಲ್ಲಿ ಕಂಡುಬರುತ್ತಿದ್ದವು.

ಗದಾಭಿರಸಿಭಿಃ ಪ್ರಾಸೈರ್ಬಾಣೈಶ್ಚ ನತಪರ್ವಭಿಃ ।
ಜಘ್ನುಃ ಪರಸ್ಪರಂ ತತ್ರ ಕ್ಷತ್ರಿಯಾಃ ಕಾಲಚೋದಿತಾಃ ॥೨೩॥

ಕಾಲಪ್ರೇರಿತರಾದ ಕ್ಷತ್ರಿಯರು ಅಲ್ಲಿ ಗದೆಗಳಿಂದಲೂ, ಖಡ್ಗಗಳಿಂದಲೂ, ಪ್ರಾಸಗಳಿಂದಲೂ, ಬಾಗಿದ ತುದಿಯುಳ್ಳ ಬಾಣಗಳಿಂದಲೂ ಪರಸ್ಪರವಾಗಿ ಹೊಡೆದಾಡಿದರು.

ಅಪರೇ ಬಾಹುಭಿರ್ವೀರಾ ನಿಯುದ್ಧಕುಶಲಾ ಯುಧಿ ।
ಬಹುಧಾ ಸಮಸಜ್ಜಂತ ಆಯಸೈಃ ಪರಿಘೈರಿವ ॥೨೪॥

ಬಾಹುಯುದ್ಧ ಕುಶಲರಾದ ಬೇರೆ ವೀರರು ರಣರಂಗದಲ್ಲಿ ಕಬ್ಬಿಣದ ಒನಕೆಗೆ ಸದೃಶವಾದ ತಮ್ಮ ಬಾಹುಗಳಿಂದ ಪರಸ್ಪರವಾಗಿ ಬಾಹುಯುದ್ಧದಲ್ಲಿ ಅನೇಕ ರೀತಿಯಲ್ಲಿ ತೊಡಗಿದರು.

ಮುಷ್ಟಿಭಿರ್ಜಾನುಭಿಶ್ಚೈವ ತಳೈಶ್ಚೈವ ವಿಶಾಂಪತೇ ।
ಅನ್ಯೋನ್ಯಂ ಜಘ್ನಿರೇ ವೀರಾಸ್ತಾವಕಾಃ ಪಾಂಡವೈಃ ಸಹ ॥೨೫॥

ಎಲೈ ರಾಜನೇ, ನಿನ್ನವರು ಮತ್ತು ಪಾಂಡವರು ಮುಷ್ಟಿಗಳಿಂದಲೂ, ಮಂಡಿಗಳಿಂದಲೂ, ಅಂಗೈಗಳಿಂದಲೂ ಪರಸ್ಪರವಾಗಿ ಹೊಡೆದಾಡಿದರು.

ಪತಿತೈಃ ಪಾತ್ಯಮಾನೈಶ್ಚ ವಿಚೇಷ್ಟದ್ಭಿಶ್ಚ ಭೂತಳೇ ।
ಘೋರಮಾಯೋಧನಂ ಜಜ್ಞೇ ತತ್ರತತ್ರ ಜನೇಶ್ವರ ॥೨೬॥

ನೆಲದ ಮೇಲೆ ಬಿದ್ದಿದ್ದ ಮತ್ತು ಬದ್ದು ಹೊರಳಾಡುತ್ತಿದ್ದ ಯೋಧರಿಂದ ಎಲೈ ರಾಜನೇ, ಆ ರಣರಂಗವು ಘೋರವಾಗಿ ಕಾಣುತ್ತಿದ್ದಿತು.

ವಿರಥಾ ರಥಿನಶ್ಚಾತ್ರ ನಿಸ್ತ್ರಿಂಶವರಧಾರಿಣಃ ।
ಅನ್ಯೋನ್ಯಮಭಿಧಾವಂತ ಪರಸ್ಪರವಧೈಷಿಣಃ ॥೨೭॥

ರಥಿಕರು ರಥಗಳನ್ನು ಕಳೆದುಕೊಂಡು ಶ್ರೇಷ್ಠವಾದ ಖಡ್ಗಗಳನ್ನು ಹಿಡಿದು ಪರಸ್ಪರ ವಧೆಯನ್ನು ಬಯಸಿ, ಪರಸ್ಪರವಾಗಿ ಎರಗುತ್ತಿದ್ದರು.

ತತೋ ದುರ್ಯೋಧನೋ ರಾಜಾ ಕಳಿಂಗೈರ್ಬಹುಭಿರ್ವೃತಃ ।
ಪುರಸ್ಕೃತ್ಯ ರಣೇ ಭೀಷ್ಮಂ ಪಾಂಡವಾನಭ್ಯವರ್ತತ ॥೨೮॥

ಆಗ ರಾಜನಾದ ದುರ್ಯೋಧನನು ಅನೇಕ ಕಳಿಂಗ ಯೋಧರಿಂದ ಪರಿವೃತನಾಗಿ ಭೀಷ್ಮರನ್ನು ಮುಂದೆ ಮಾಡಿಕೊಂಡು ಪಾಂಡವರ ಕಡೆಗೆ ಸಾಗಿದನು.

ತಥೈವ ಪಾಂಡವಾಃ ಸರ್ವೇ ಪರಿವಾರ್ಯ ವೃಕೋದರಮ್ ।
ಭೀಷ್ಮಮಭ್ಯದ್ರವನ್ ಕ್ರುದ್ಧಾ ರಣೇ ರಭಸವಾಹನಾಃ ॥೨೯॥

ಹಾಗೆಯೇ, ವೇಗಶಾಲಿಯಾದ ವಾಹನಗಳುಳ್ಳ ಪಾಂಡವರು ಭೀಮಸೇನನನ್ನು ಸುತ್ತುವರಿದು ಕ್ರುದ್ಧರಾಗಿ ಭೀಷ್ಮರ ಕಡೆಗೆ ಸಾಗಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸ್ಕ್ಯಾಂ
ಭೀಷ್ಮಪರ್ವಣಿ ಷಟ್‌ಷಷ್ಟಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಷಡಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಅರವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಬಾಹೂನಾಮುತ್ತಮಾಂಗಾನಾಂ ಕಾರ್ಮುಕಾಣಾಂ ತಥೈವ ಚ ।
ಗದಾನಾಂ ಪರಿಘಾಣಾಂ ಚ ಹಸ್ತಾನಾಂ ಚೋರುಭಿಃ ಸಹ ॥೨೦॥

ಪಾದಾನಾಂ ಭೂಷಣಾನಾಂ ಚ ಕೇಯೂರಾಣಾಂ ಚ ಸಂಘಶಃ ।
ರಾಶಯಃ ಸ್ಮ ಪ್ರದೃಶ್ಯಂತೇ ಭೀಷ್ಮಭೀಮಪರಾಕ್ರಮೇ ॥೨೧॥

ಇನ್ನು ಕೆಲವು ಯೋಧರು ಬಾಣಪ್ರಯೋಗಗಳಿಂದ ಚೆನ್ನಾಗಿ ಪೀಡಿತರಾಗಿ ಮೇಲೆ ಹಾರಿ ಕೆಳಗೆ ಬೀಳುತ್ತಿದ್ದರು. ಎಲೈ ಭರತಶ್ರೇಷ್ಠನೇ, ಭೀಷ್ಮರ ಮತ್ತು ಭೀಮನ ಪರಾಕ್ರಮದಿಂದ ಕೂಡಿದ ಆ ಯುದ್ಧದಲ್ಲಿ ನಿನ್ನ ಮತ್ತು ಶತ್ರುಯೋಧರ ಕತ್ತರಿಸಲ್ಪಟ್ಟ ಬಾಹುಗಳ, ಶಿರಸ್ಸುಗಳ, ಧನುಸ್ಸುಗಳ, ಗದೆಗಳ, ಪರಿಘಗಳ, ಹಸ್ತಗಳ, ತೊಡೆಗಳ, ಪಾದಗಳ, ಭೂಷಣಗಳ, ಕೇಯೂರಗಳ ಸಮೂಹಗಳ ರಾಶಿಗಳು ಅಲ್ಲಲ್ಲಿ ಕಂಡುಬರುತ್ತಿದ್ದವು.

ಅಶ್ವಾನಾಂ ಕುಂಜರಾಣಾಂ ಚ ರಥಾನಾಂ ಚಾತಿವರ್ತತಾಮ್ ।
ಸಂಘಾತಾಃ ಸ್ಮ ಪ್ರದೃಶ್ಯಂತೇ ತತ್ರ ತತ್ರ ವಿಶಾಂಪತೇ ॥೨೨॥

ಎಲೈ ರಾಜನೇ, ಮೃತವಾದ ಅಶ್ವಗಳ, ಗಜಗಳ, ಹಿಂದಿರುಗದಿರುವ ರಥಗಳ ಸಮೂಹಗಳು ಅಲ್ಲಲ್ಲಿ ಕಂಡುಬರುತ್ತಿದ್ದವು.

ಗದಾಭಿರಸಿಭಿಃ ಪ್ರಾಸೈರ್ಬಾಣೈಶ್ಚ ನತಪರ್ವಭಿಃ ।
ಜಘ್ನುಃ ಪರಸ್ಪರಂ ತತ್ರ ಕ್ಷತ್ರಿಯಾಃ ಕಾಲಚೋದಿತಾಃ ॥೨೩॥

ಕಾಲಪ್ರೇರಿತರಾದ ಕ್ಷತ್ರಿಯರು ಅಲ್ಲಿ ಗದೆಗಳಿಂದಲೂ, ಖಡ್ಗಗಳಿಂದಲೂ, ಪ್ರಾಸಗಳಿಂದಲೂ, ಬಾಗಿದ ತುದಿಯುಳ್ಳ ಬಾಣಗಳಿಂದಲೂ ಪರಸ್ಪರವಾಗಿ ಹೊಡೆದಾಡಿದರು.

ಅಪರೇ ಬಾಹುಭಿರ್ವೀರಾ ನಿಯುದ್ಧಕುಶಲಾ ಯುಧಿ ।
ಬಹುಧಾ ಸಮಸಜ್ಜಂತ ಆಯಸೈಃ ಪರಿಘೈರಿವ ॥೨೪॥

ಬಾಹುಯುದ್ಧ ಕುಶಲರಾದ ಬೇರೆ ವೀರರು ರಣರಂಗದಲ್ಲಿ ಕಬ್ಬಿಣದ ಒನಕೆಗೆ ಸದೃಶವಾದ ತಮ್ಮ ಬಾಹುಗಳಿಂದ ಪರಸ್ಪರವಾಗಿ ಬಾಹುಯುದ್ಧದಲ್ಲಿ ಅನೇಕ ರೀತಿಯಲ್ಲಿ ತೊಡಗಿದರು.

ಮುಷ್ಟಿಭಿರ್ಬಾನುಭಿಶ್ಚೈವ ತಳೈಶ್ಚೈವ ವಿಶಾಂಪತೇ ।
ಅನ್ಯೋನ್ಯಂ ಜಘ್ನಿರೇ ವೀರಾಸ್ತಾವಕಾಃ ಪಾಂಡವೈಃ ಸಹ ॥೨೫॥

ಎಲೈ ರಾಜನೇ, ನಿನ್ನವರು ಮತ್ತು ಪಾಂಡವರು ಮುಷ್ಟಿಗಳಿಂದಲೂ, ಮಂಡಿಗಳಿಂದಲೂ, ಅಂಗೈಗಳಿಂದಲೂ ಪರಸ್ಪರವಾಗಿ ಹೊಡೆದಾಡಿದರು.

ಪತಿತೈಃ ಪಾತ್ಯಮಾನೈಶ್ಚ ವಿಚೇಷ್ಟದ್ಭಿಶ್ಚ ಭೂತಳೇ ।
ಘೋರಮಾಯೋಧನಂ ಜಜ್ಞೇ ತತ್ರತತ್ರ ಜನೇಶ್ವರ ॥೨೬॥

ನೆಲದ ಮೇಲೆ ಬಿದ್ದಿದ್ದ ಮತ್ತು ಬಿದ್ದು ಹೊರಳಾಡುತ್ತಿದ್ದ ಯೋಧರಿಂದ ಎಲೈ ರಾಜನೇ, ಆ ರಣರಂಗವು ಘೋರವಾಗಿ ಕಾಣುತ್ತಿದ್ದಿತು.

ವಿರಥಾ ರಥಿನಶ್ಚಾತ್ರ ನಿಸ್ತ್ರಿಂಶವರಧಾರಿಣಃ ।
ಅನ್ಯೋನ್ಯಮಭಿಧಾವಂತ ಪರಸ್ಪರವಧೈಷಿಣಃ ॥೨೭॥

ರಥಿಕರು ರಥಗಳನ್ನು ಕಳೆದುಕೊಂಡು ಶ್ರೇಷ್ಠವಾದ ಖಡ್ಗಗಳನ್ನು ಹಿಡಿದು ಪರಸ್ಪರ ವಧೆಯನ್ನು ಬಯಸಿ, ಪರಸ್ಪರವಾಗಿ ಎರಗುತ್ತಿದ್ದರು.

ತತೋ ದುರ್ಯೋಧನೋ ರಾಜಾ ಕಳಿಂಗೈರ್ಬಹುಭಿರ್ವೃತಃ ।
ಪುರಸೃತ್ಯ ರಣೇ ಭೀಷ್ಮಂ ಪಾಂಡವಾನಭ್ಯವರ್ತತ ॥೨೮॥

ಆಗ ರಾಜನಾದ ದುರ್ಯೋಧನನು ಅನೇಕ ಕಳಿಂಗ ಯೋಧರಿಂದ ಪರಿವೃತನಾಗಿ ಭೀಷ್ಮರನ್ನು ಮುಂದೆ ಮಾಡಿಕೊಂಡು ಪಾಂಡವರ ಕಡೆಗೆ ಸಾಗಿದನು.

ತಥೈವ ಪಾಂಡವಾಃ ಸರ್ವೇ ಪರಿವಾರ್ಯ ವೃಕೋದರಮ್ ।
ಭೀಷ್ಮಮಭ್ಯದ್ರವನ್ ಕ್ರುದ್ಧಾ ರಣೇ ರಭಸವಾಹನಾಃ ॥೨೯॥

ಹಾಗೆಯೇ, ವೇಗಶಾಲಿಯಾದ ವಾಹನಗಳುಳ್ಳ ಪಾಂಡವರು ಭೀಮಸೇನನನ್ನು ಸುತ್ತುವರಿದು ಕ್ರುದ್ಧರಾಗಿ ಭೀಷ್ಮರ ಕಡೆಗೆ ಸಾಗಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಷಟ್‌ಷಷ್ಟಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಷಡ್‌ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಆರವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೇಳನೆಯ ಅಧ್ಯಾಯ

ಐದನೆಯ ದಿವಸದ ಯುದ್ಧದ ಅನುವೃತ್ತಿ.

ಸಂಜಯಃ

ದೃಷ್ಟ್ವಾ ಭೀಷ್ಮೇಣ ಸಂಸಕ್ತಾನ್ ಭ್ರಾತೃನನ್ಯಾಂಶ್ಚ ಪಾರ್ಥಿವಾನ್ ।
ತಮಭ್ಯಧಾವದ್ ಗಾಂಗೇಯಮುದ್ಯತಾಸ್ತ್ರೋ ಧನಂಜಯಃ ॥೧॥

ಸಂಜಯ– ತನ್ನ ಸಹೋದರರು ಮತ್ತು ಉಳಿದ ರಾಜರು ಭೀಷ್ಮರ ಜೊತೆಯಲ್ಲಿ ಸೆಣಸುತ್ತಿರುವುದನ್ನು ನೋಡಿದ ಅರ್ಜುನನು ಕೈಯಲ್ಲಿ ಅಸ್ತ್ರವನ್ನು ಎತ್ತಿಹಿಡಿದು ಭೀಷ್ಮರ ಕಡೆಗೆ ಓಡಿದನು.

ಪಾಂಚಜನ್ಯಸ್ಯ ನಿರ್ಘೋಷಂ ಧನುಷೋ ಗಾಂಡಿವಸ್ಯ ಚ ।
ಧ್ವಜಂ ಚ ದೃಷ್ಟ್ವಾ ಪಾರ್ಥಸ್ಯ ಸರ್ವಾನ್ನೋ ಭಯಮಾವಿಶತ್ ॥೨॥

ಪಾಂಚಜನ್ಯ ಶಂಖ ಘೋಷವನ್ನೂ, ಗಾಂಡೀವ ಧನುಸ್ಸಿನ ಘೋಷವನ್ನೂ ಮತ್ತು ಅರ್ಜುನನ ಧ್ವಜವನ್ನೂ ನೋಡಿದ ನಮ್ಮೆಲ್ಲರಿಗೂ ಭಯವುಂಟಾಯಿತು.

ಅಸಜ್ಜಮಾನಂ ವೃಕ್ಷೇಷು ಧೂಮಕೇತುಮಿವೋತ್ಥಿತಮ್ ।
ಬಹುವರ್ಣಂ ಚ ಚಿತ್ರಂ ಚ ದಿವ್ಯಂ ವಾನರಲಕ್ಷಣಮ್ ।
ಅಪಶ್ಯಾಮ ಮಹಾರಾಜ ಧ್ವಜಂ ಗಾಂಡಿವಧನ್ವನಃ ॥೩॥

ಎಲೈ ಮಹಾರಾಜನೇ, ಮರಗಳಲ್ಲಿ ಎಲ್ಲೂ ಸಿಲುಕಿ ಹಾಕಿಕೊಳ್ಳದ ಧೂಮಕೇತುವಿನಂತೆ ಮೇಲಿದ್ದ ಅನೇಕ ವರ್ಣಗಳಿಂದ ಕೂಡಿದ ವಿಚಿತ್ರವೂ, ದಿವ್ಯವೂ ಆದ, ವಾನರಲಕ್ಷಣದಿಂದ ಕೂಡಿದ ಅರ್ಜುನನ ಧ್ವಜವನ್ನು ನಾವು ನೋಡಿದೆವು.

ವಿದ್ಯುತಂ ಮೇಘಮಧ್ಯಸ್ಥಾಂ ಭ್ರಾಜಮಾನಾಮಿವಾಂಬರೇ ।
ದದೃಶುರ್ಗಾಂಡಿವಂ ಯೋಧಾ ರುಗ್ಣಶೃಷ್ಮಂ ಮಹಾರಥೇ ॥೪॥

ಅವನ ದೊಡ್ಡ ರಥದಲ್ಲಿ ಸುವರ್ಣಮಯವಾದ ಹಿಂಭಾಗವಿದ್ದ ಆ ಗಾಂಡೀವ ಧನುಸ್ಸು ಆಕಾಶದಲ್ಲಿ ಮೇಘಗಳ ಮಧ್ಯದಲ್ಲಿರುವ ಮಿಂಚಿನಂತೆ ಹೊಳೆಯುವುದನ್ನು ಯೋಧರು ನೋಡಿದರು.

ಅಶುಶ್ರುಮ ಭೃಶಂ ಚಾಸ್ಯ ಶಕ್ರಸ್ಯೇವಾಭಿಗರ್ಜತಃ ।
ಸುಘೋರಂ ತಳಯೋಃ ಶಬ್ದಂ ನಿಘ್ನತಸ್ತವ ವಾಹಿನೀಮ್ ॥೫॥

ನಿನ್ನ ಸೈನ್ಯವನ್ನು ಸಂಹರಿಸುವ ಅವನ ಘೋರವಾದ ಹಸ್ತತಳ ಘೋಷವು ಇಂದ್ರನ ಗರ್ಜನೆಯಂತಿದ್ದುದನ್ನು ನಾವು ಚೆನ್ನಾಗಿ ಕೇಳಿದೆವು.

ಚಂಡವಾತೋ ಯಥಾ ಮೇಘಃ ಸವಿದ್ಯುತ್‌ಸ್ತನಯಿತ್ನುಮಾನ್ ।
ದಿಶಃ ಸಂಪ್ಲಾವಯನ್ ಸರ್ವಾಃ ಶರವರ್ಷೈಃ ಸಮಂತತಃ ॥೬॥

ಅಭ್ಯಧಾವತ ಗಾಂಗೇಯಂ ಭೈರವಾಸ್ತ್ರೋ ಧನಂಜಯಃ ।
ದಿಶಂ ಪ್ರಾಚೀಂ ಪ್ರತೀಚೀಂ ಚ ನ ಜಾನೀಮೋಽಸ್ತ್ರಮೋಹಿತಾಃ ॥೭॥

ಮಿಂಚು ಮತ್ತು ಸಿಡಿಲುಗಳಿಂದ ಕೂಡಿದ, ಚಂಡವಾತ ಪ್ರೇರಿತವಾದ ಮೇಘವು ಎಲ್ಲ ದಿಕ್ಕುಗಳನ್ನೂ ಮಳೆಯಿಂದ ಕೊಚ್ಚಿ ಹಾಕಿದಂತೆ ಭಯಂಕರವಾದ ಅಸ್ತ್ರವುಳ್ಳ ಅರ್ಜುನನು ಭೀಷ್ಮರ ಕಡೆಗೆ ಧಾವಿಸಿದನು. ಅರ್ಜುನನ ಅಸ್ತ್ರದಿಂದ ಮೋಹಿತರಾದ ನಾವು ಪೂರ್ವದಿಕ್ಕನ್ನಾಗಲೀ, ಪಶ್ಚಿಮದಿಕ್ಕನ್ನಾಗಲೀ ತಿಳಿಯಲಿಲ್ಲ.

ಕಾಂದಿಗ್ಭೂತಾಃ ಶ್ರಾಂತಪತ್ರಾ ಹತಾಸ್ತ್ರಾ ಹತಚೇತಸಃ ।
ಅನ್ಯೋನ್ಯಮಭಿಸಂಶ್ಲಿಷ್ಯ ಯೋಧಾಸ್ತೇ ಭರತರ್ಷಭ ॥೮॥

ಭೀಷ್ಮಮೇವಾಭಿಲೀಯಂತ ಸಹ ಸರ್ವೈಸ್ತವಾತ್ಮಜೈಃ ।
ತೇಷಾಮಾರ್ತಾಯನಮಭೂದ್ ಭೀಷ್ಮಃ ಶಂತನವೋ ರಣೇ ॥೯॥

ಎಲೈ ಭರತರ್ಷಭನೇ, ಆ ಯೋಧರೆಲ್ಲರೂ ಇದು ಯಾವ ದಿಕ್ಕೆಂದು ತಿಳಿಯದೆ ಭ್ರಾಂತರಾಗಿ ತಮ್ಮ ಅಸ್ತ್ರಗಳನ್ನು ಕಳೆದುಕೊಂಡು, ತಮ್ಮ ಧೈರ್ಯವನ್ನೂ ಕಳೆದುಕೊಂಡು ಪರಸ್ಪರವಾಗಿ ಆಲಿಂಗಿಸಿ ನಿನ್ನ ಪುತ್ರರ ಜೊತೆಯಲ್ಲಿ ಭೀಷ್ಮರ ಬಳಿಯಲ್ಲಿಯೇ ಅಡಗಿಕೊಂಡರು. ಆರ್ತರಾದ ಅವರಿಗೆ ಶಂತನು ಪುತ್ರರಾದ ಭೀಷ್ಮರು ರಣರಂಗದಲ್ಲಿ ಆಶ್ರಯರಾದರು.

ಸಮುದ್ವತಂತ ವಿತ್ರಸ್ತಾ ರಥೇಭ್ಯೋ ರಥಿನಸ್ತದಾ ।
ಸಾದಿನಶ್ಚಾಶ್ವಪೃಷ್ಠೇಭ್ಯೋ ಭೂಮೌ ಚಾಪಿ ಪದಾತಯಃ ॥೧೦॥

ಹೆದರಿದ ರಥಿಕರು ರಥಗಳಿಂದಲೂ, ಅಶ್ವಾರೋಹಿಗಳು ಅಶ್ವಗಳಿಂದಲೂ, ಪದಾತಿಗಳು ಭೂಮಿಯಲ್ಲಿಯೂ ಹಾರಿ ಕೆಳಗೆ ಬಿದ್ದರು.

ಶ್ರುತ್ವಾ ಗಾಂಡೀವನಿರ್ಘೋಷಂ ವಿಸೃಜ್ಯಂತಮಿವಾಶನೇಃ ।
ಸರ್ವಸೈನ್ಯಾನಿ ಭೀತಾನಿ ವ್ಯವಲೀಯಂತ ಭಾರತ ॥೧೧॥

ಎಲೈ ಭಾರತನೇ, ಸಿಡಿಲಿನ ಆರ್ಭಟದಂತಿದ್ದ ಗಾಂಡೀವ ಧನುಸ್ಸಿನ ಘೋಷವನ್ನು ಕೇಳಿ ನಿನ್ನ ಎಲ್ಲಾ ಸೈನ್ಯಗಳು ಭಯದಿಂದ ಅಡಗಿಕೊಂಡವು.

ಅಥ ಕಾಂಬೋಜಮುಖ್ಯೈಸ್ತು ಬೃಹದ್ಭಿಃ ಶೀಘ್ರಗಾಮಿಭಿಃ ।
ಗೋಪಾನಾಂ ಬಹುಸಾಹಸ್ರೈರ್ಬಲೈರ್ಗೋವಾಸನೋ ವೃತಃ ॥೧೨॥

ಆಗ ಶೀಘ್ರಗಾಮಿಗಳಾದ ಕಾಂಬೋಜ ದೇಶದ ಅಶ್ವಗಳಿಂದಲೂ, ಅನೇಕ ಸಹಸ್ರ ಗೋಪರ ಬಲದಿಂದಲೂ ಗೋವಾಸನ ರಾಜನು ಪರಿವೃತನಾದನು.

ಮದ್ರಸೌವೀರಗಾಂಧಾರೈಸ್ತ್ರಿಗರ್ತೈಶ್ಚ ವಿಶಾಂಪತೇ ।
ಸರ್ವಕಾಳಿಂಗಮುಖ್ಯೈಶ್ಚ ಕಳಿಂಗಾಧಿಪತಿರ್ವೃತಃ ॥೧೩॥

ಎಲೈ ರಾಜನೇ, ಕಳಿಂಗರಾಜನು ಮದ್ರ-ಸೌವೀರ-ಗಾಂಧಾರ-ತ್ರಿಗರ್ತ ಸೈನ್ಯಗಳಿಂದಲೂ, ಕಳಿಂಗ ದೇಶದ ಮುಖ್ಯಯೋಧರಿಂದಲೂ ಪರಿವೃತನಾದನು.

ನಾಗಾ ನರಗಣೌಘಾಶ್ಚ ದುಃಶಾಸನಪುರಃಸರಾಃ ।
ಜಯದ್ರಥಶ್ಚ ನೃಪತಿಃ ಸಹಿತಃ ಸರ್ವರಾಜಭಿಃ ॥೧೪॥

ಹಯಾರೋಹವರಾಶ್ಚೈವ ತವ ಪುತ್ರೇಣ ಚೋದಿತಾಃ ।
ಚತುರ್ದಶಸಹಸ್ರಾಣಿ ಸೌಬಲಂ ಪರ್ಯವಾರಯನ್ ॥೧೫॥

ಗಜಗಳು, ಯೋಧಸಮೂಹಗಳು, ಅನೇಕ ರಾಜರಿಂದ ಸಹಿತನಾದ ಜಯದ್ರಥ ರಾಜ ಇವರು ದುಶ್ಶಾಸನನ ಮುಂಭಾಗದಲ್ಲಿದ್ದರು. ನಿನ್ನ ಪುತ್ರನಿಂದ ಪ್ರೇರಿತರಾದ ಹದಿನಾಲ್ಕು ಸಾವಿರ ಅಶ್ವಾರೋಹಿಗಳು ಶಕುನಿಯನ್ನು ಸುತ್ತುವರಿದಿದ್ದರು.

ತತಸ್ತೇ ಸಹಿತಾಃ ಸರ್ವೇ ವಿಭಕ್ತರಥವಾಹನಾಃ ।
ಪಾಂಡವಾನ್ ಸಮರೇ ಜಗ್ಮುಸ್ತಾವಕಾ ಭರತರ್ಷಭ ॥೧೬॥

ಎಲೈ ಭರತಶ್ರೇಷ್ಠನೇ, ಆಗ ನಿನ್ನವರಾದ ಅವರು ತಮ್ಮ ರಥವಾಹನಗಳನ್ನು ವಿಭಾಗಿಸಿಕೊಂಡು ಎಲ್ಲರೂ ಪಾಂಡವರ ಮೇಲೆ ಯುದ್ಧಕ್ಕೆ ಸಾಗಿದರು.

ಚೇದಿಕಾಶಿಪದಾತ್ಯೈಶ್ಚ ರಥೈಃ ಪಾಂಚಾಲಸೃಂಜಯೈಃ ।
ಪಾಂಡವಾಃ ಸಹಿತಾ ಸರ್ವೇ ಧೃಷ್ಟದ್ಯುಮ್ನಪುರೋಗಮಾಃ ।
ತಾವಕಾನ್ ಸಮರೇ ಜಘ್ನುರ್ಧರ್ಮಪುತ್ರೇಣ ಚೋದಿತಾಃ ॥೧೭॥

ಧೃಷ್ಟದ್ಯುಮ್ನನನ್ನು ಮುಂದೆ ಮಾಡಿಕೊಂಡ ಎಲ್ಲ ಪಾಂಡವರು ಚೇದಿ-ಕಾಶಿ ಪದಾತಿಗಳಿಂದಲೂ, ಪಾಂಚಾಲ-ಸೃಂಜಯರ ರಥಿಕರಿಂದಲೂ ಸೇರಿ ಯುಧಿಷ್ಠಿರನಿಂದ ಪ್ರೇರಿತರಾಗಿ ಯುದ್ಧದಲ್ಲಿ ನಿನ್ನವರ ಮೇಲೆ ಎರಗಿದರು.

ರಥಿಭಿರ್ವಾರಣೈರಶ್ವೈಃ ಪದಾತ್ಯೈಶ್ಚ ಸಮೀರಿತಮ್ ।
ಘೋರಮಾಯೋಧನಂ ಜಜ್ಞೇ ಮಹಾಭ್ರಸದೃಶಂ ರಜಃ ॥೧೮॥

ರಥಿಕರಿಂದ, ಗಜಗಳಿಂದ, ಅಶ್ವಗಳಿಂದ ಮತ್ತು ಪದಾತಿಗಳಿಂದ ತುಳಿಯಲ್ಪಟ್ಟು ಮೇಲೆದ್ದ ಧೂಳು ದೊಡ್ಡ ಮೋಡದಂತೆ ಆಯಿತು. ರಥಿಕರು ಮೊದಲಾದವರಿಂದ ರಣರಂಗವೂ ಘೋರವಾಯಿತು.

ತೋಮರಪ್ರಾಸನಾರಾಚಗಜಾಶ್ವರಥಯೋಧಿನಾಮ್ ।
ಬಲೇನ ಮಹತಾ ಭೀಷ್ಮಃ ಸಮಸಜ್ಜತ್ ಕಿರೀಟಿನಾ ॥೧೯॥

ಅವಂತ್ಯಃ ಕಾಶಿರಾಜೇನ ಭೀಮಸೇನೇನ ಸೈಂಧವಃ ।
ಅಜಾತಶತ್ರುರ್ಮದ್ರಾಣಾಮೃಷಭೇಣ ಯಶಸ್ವಿನಾ ।
ಸಹಪುತ್ರಃ ಸಹಾಮಾತ್ಯಃ ಶಲ್ಯೇನ ಸಮಸಜ್ಜತ ॥೨೦॥

ತೋಮರ, ಪ್ರಾಸ, ನಾರಾಚಗಳಿಂದಲೂ, ಗಜಾಶ್ವರಥ ಯೋಧರಿಂದಲೂ ಕೂಡಿದ ದೊಡ್ಡ ಬಲದಿಂದ ಸಹಿತರಾಗಿ ಭೀಷ್ಮರು ಅರ್ಜುನನ ಜೊತೆಯಲ್ಲಿ ಹೋರಾಡಿದರು. ಅವಂತಿ ದೇಶದ ರಾಜನು ಕಾಶಿರಾಜನ ಜೊತೆಯಲ್ಲಿಯೂ; ಭೀಮಸೇನನು ಸೈಂಧವನ ಜೊತೆಯಲ್ಲಿಯೂ; ಯುಧಿಷ್ಠಿರನು ಕೀರ್ತಿಶಾಲಿಯೂ ಪುತ್ರಸಹಿತನೂ, ಮದ್ರಾಧಿಪತಿಯೂ, ಅಮಾತ್ಯರಿಂದ ಕೂಡಿದವನೂ ಆದ ಶಲ್ಯನ ಜೊತೆಯಲ್ಲಿಯೂ ಯುದ್ಧವನ್ನು ಮಾಡಿದನು.

ವಿಕರ್ಣಃ ಸಹದೇವೇನ ಚಿತ್ರಸೇನಃ ಶಿಖಂಡಿನಾ ।
ಮತ್ಸ್ಯೋ ದುರ್ಯೋಧನಂ ಜಘ್ನುಃ ಶಕುನಿಂ ಚ ವಿಶಾಂಪತೇ ॥೨೧॥

ದ್ರುಪದಶ್ಚೇಕಿತಾನಶ್ಚ ಸಾತ್ಯಕಿಶ್ಚ ಮಹಾರಥಃ ।
ದ್ರೋಣೇನ ಸಮಸಜ್ಜಂತ ಸಪುತ್ರೇಣ ಮಹಾತ್ಮನಾ ।
ಕೃಪಶ್ಚ ಕೃತವರ್ಮಾ ಚ ಧೃಷ್ಟಕೇತುಮಭದ್ರುತೌ ॥೨೨॥

ವಿಕರ್ಣನು ಸಹದೇವನ ಜೊತೆಯಲ್ಲಿಯೂ; ಚಿತ್ರಸೇನನು ಶಿಖಂಡಿಯ ಜೊತೆಯಲ್ಲಿಯೂ ಯುದ್ಧವನ್ನು ಮಾಡಿದರು. ಎಲೈ ರಾಜನೇ, ಮತ್ಸ್ಯಯೋಧರು ದುರ್ಯೋಧನನ ಮತ್ತು ಶಕುನಿಯ ಮೇಲೆ ಯುದ್ಧಕ್ಕೆ ಸಾಗಿದರು. ದ್ರುಪದ, ಚೇಕಿತಾನ ಮತ್ತು ಮಹಾರಥನಾದ ಸಾತ್ಯಕಿ ಇವರು ಮಹಾತ್ಮರಾದ, ಪುತ್ರನಿಂದ ಸಹಿತರಾದ ದ್ರೋಣರ ಮೇಲೆ ಎರಗಿದರು. ಕೃಪ ಮತ್ತು ಕೃತವರ್ಮರು ಧೃಷ್ಟಕೇತುವಿನ ಕಡೆಗೆ ಸಾಗಿದರು.

ಏವಂ ಪ್ರದವಿತಾಶ್ವಾನಿ ಭ್ರಾಂತನಾಗರಥಾನಿ ಚ ।
ಸೈನ್ಯಾನಿ ಸಮಸಜ್ಜಂತ ಪ್ರಯುದ್ಧಾನಿ ಸಮಂತತಃ ॥೨೩॥

ಹೀಗೆ ವೇಗವನ್ನು ಕೂಡಿದ ಅಶ್ವಗಳಿಂದಲೂ, ಶೀಘ್ರವಾಗಿ ಸಂಚರಿಸುವ ಗಜ, ರಥಗಳಿಂದಲೂ ಕೂಡಿದ ಸೈನ್ಯಗಳು ಎಲ್ಲ ಕಡೆಗಳಲ್ಲಿಯೂ ದೊಡ್ಡ ಯುದ್ಧದಲ್ಲಿ ನಿರತವಾದವು.

ನಿರಭ್ರೇ ವಿದ್ಯುತಶ್ಚೀವ್ರಾ ದಿಶಶ್ಚ ರಜಸಾವೃತಾಃ ।
ಪ್ರಾದುರಾಸನ್ಮಹೋಲ್ಕಾಶ್ಚ ಸನಿರ್ಘಾತಾ ವಿಶಾಂಪತೇ ॥೨೪॥

ಎಲೈ ರಾಜನೇ, ನಿರಭ್ರವಾದ ಆಕಾಶದಲ್ಲಿ ತೀವ್ರವಾದ ಮಿಂಚುಗಳು ಉಂಟಾದವು. ದಿಕ್ಕುಗಳು ಧೂಳಿನಿಂದ ಮುಚ್ಚಿಹೋದವು. ಸಿಡಿಲಿನಿಂದ ಕೂಡಿದ ಮಹೋಲ್ಕೆಗಳು ಆಕಾಶದಲ್ಲಿ ಕಂಡುಬಂದವು.

ಪ್ರವವೌ ಚ ಮಹಾವಾತಃ ಪಾಂಸುವರ್ಷಂ ಪಪಾತ ಚ ।
ನಭಶ್ಚಕಂಪೇ ಸೂರ್ಯಃ ಸೈನ್ಯೇನ ರಜಸಾವೃತಃ ॥೨೫॥

ಬಿರುಗಾಳಿಯು ಬೀಸಿತು; ಧೂಳಿನ ಮಳೆಯು ಸುರಿಯಿತು; ಸೈನ್ಯದಿಂದ ಎದ್ದ ಧೂಳಿನಿಂದ ಆವೃತನಾಗಿ ಸೂರ್ಯನು ಆಕಾಶದಲ್ಲಿ ಅಂತರ್ಧಾನವನ್ನು ಹೊಂದಿದನು.

ಪ್ರಮೋಹಃ ಸರ್ವಸತ್ತ್ವಾನಾಮತೀವ ಸಮಪದ್ಯತ ।
ರಜಸಾ ಚಾಭಿಭೂತಾನಾಮಸ್ತ್ರಜಾಲೈಶ್ಚ ತುದ್ಯತಾಮ್ ॥೨೬॥

ಧೂಳುಗಳಿಂದ ಮುಚ್ಚಹೋಗಿ ಅಸ್ತ್ರಸಮೂಹಗಳಿಂದ ಪೀಡಿತರಾದ ಎಲ್ಲ ಪ್ರಾಣಿಗಳಿಗೂ ದೊಡ್ಡ ಭ್ರಾಂತಿಯುಂಟಾಯಿತು.

ವೀರಬಾಹುವಿಸೃಷ್ಟಾನಾಂ ಸರ್ವಾವರಣಭೇದಿನಾಮ್ ।
ಸಂಘಾತಃ ಶರಜಾಲಾನಾಂ ತುಮುಲಃ ಸಮಪದ್ಯತ ॥೨೭॥

ವೀರರ ಬಾಹುಗಳಿಂದ ಪ್ರಯೋಗಿಸಲ್ಪಟ್ಟ, ಸರ್ವಕವಚಗಳನ್ನು ಭೇದಿಸುವ ಬಾಣ ಸಮೂಹಗಳಿಂದ ಉಂಟಾದ ಶಬ್ದವು ತೀವ್ರವಾಗಿದ್ದಿತು.

ಪ್ರಕಾಶಂ ಚಕ್ರುರಾಕಾಶಮುದ್ಯತಾನಿ ಭುಜೋತ್ತಮೈಃ ।
ನಕ್ಷತ್ರವಿಮಲಾಭಾನಿ ಶಸ್ತ್ರಾಣಿ ಭರತರ್ಷಭ ॥೨೮॥

ಎಲೈ ಭರತಶ್ರೇಷ್ಠನೇ, ಭುಜಗಳಿಂದ ಎತ್ತಿಹಿಡಿದ ನಕ್ಷತ್ರದಂತೆ ಸ್ವಚ್ಛವಾದ ಪ್ರಕಾಶವುಳ್ಳ ಆಯುಧಗಳು ಆಕಾಶವನ್ನು ಬೆಳಗಿದವು.

ಆರ್ಷಭಾಣಿ ವಿಚಿತ್ರಾಣಿ ರುಗ್ಜಾಲಾವೃತಾನಿ ಚ ।
ಸಂಪೇತುರ್ದಿಕ್ಷು ಸರ್ವಾಸು ಚರ್ಮಾಣಿ ಭರತರ್ಷಭ ॥೨೯॥

ಎಲೈ ಭರತಶ್ರೇಷ್ಠನೇ, ವೃಷಭ ಚರ್ಮದಿಂದ ಮಾಡಿದ, ಸುವರ್ಣಾಲಂಕೃತವಾದ ವಿಚಿತ್ರವಾದ ಗುರಾಣಿಗಳು ಎಲ್ಲ ದಿಕ್ಕುಗಳಲ್ಲಿಯೂ ನೆಲದ ಮೇಲೆ ಬಿದ್ದವು.

ಸೂರ್ಯವರ್ಚ್ಯೈಶ್ಚ ನಿಸ್ತ್ರಿಂಶೈಃ ಪಾತ್ಯಮಾನಾನಿ ಸರ್ವಶಃ ।
ದಿಕ್ಷು ಸರ್ವಾಸ್ವದೃಶ್ಯಂತ ಶರೀರಾಣಿ ಶಿರಾಂಸಿ ಚ ॥೩೦॥

ಸೂರ್ಯನ ಪ್ರಕಾಶದಂತೆ ಪ್ರಕಾಶಿಸುವ ಖಡ್ಗಗಳಿಂದ ಕತ್ತರಿಸಿ ಬೀಳಿಸಲ್ಪಡುವ ಶರೀರಗಳು ಮತ್ತು ಶಿರಸ್ಸುಗಳು ಎಲ್ಲ ದಿಕ್ಕುಗಳಲ್ಲಿಯೂ ಕಂಡುಬಂದವು.

ಭಗ್ನಚಕ್ರಾಕ್ಷನೀಡಾಶ್ಚ ನಿಪಾತಿತಮಹಾಧ್ವಜಾಃ ।
ಹತಾಶ್ವಾಃ ಪೃಥಿವೀಂ ಜಗ್ಮುಸ್ತತ್ರತತ್ರ ಮಹಾರಥಾಃ ॥೩೧॥

ಮಹಾರಥರು ತಮ್ಮ ರಥದ ಚಕ್ರ, ಅಕ್ಷ ಮತ್ತು ನೀಡಗಳು ಮುರಿಯುತ್ತಿರಲು, ದೊಡ್ಡ ಧ್ವಜಗಳು ಕೆಳಗೆ ಬೀಳುತ್ತಿರಲು, ತಮ್ಮ ಅಶ್ವಗಳು ವಧಿಸಲ್ಪಡುತ್ತಿರಲು ಭೂಮಿಯ ಮೇಲೆ ಬಿದ್ದರು.

ಪರಿಪೇತುರ್ಹಯಾಶ್ಚಾತ್ರ ಕೇಚಿಚ್ಛಸ್ತ್ರಕೃತವ್ರಣಾಃ ।
ರಥಾನ್ ವಿಪರಿಕರ್ಷಂತೋ ಹತೇಷು ರಥಯೋಧಿಷು ॥೩೨॥

ಶತ್ರುಗಳ ಶಸ್ತ್ರದಿಂದ ಗಾಯಗೊಂಡ ಅಶ್ವಗಳು ರಥಯೋಧಿಗಳು ಹತರಾದ ಮೇಲೆ ರಥವನ್ನು ಎಳೆಯುತ್ತಾ ನೆಲದ ಮೇಲೆ ಬಿದ್ದವು.

ಶರಾಹತಾ ಭಿನ್ನದೇಹಾ ಬದ್ಧಯೋಕ್ತ್ರಾ ಹಯೋತ್ತಮಾಃ ।
ಯುಗಾನಿ ಪರ್ಯಕರ್ಷಂತ ತತ್ರತತ್ರ ಸ್ಮ ಭಾರತ ॥೩೩॥

ಎಲೈ ಭಾರತನೇ, ಬಾಣಗಳಿಂದ ಗಾಯಗೊಂಡು ಶರೀರದಲ್ಲಿ ವ್ರಣವುಳ್ಳವಾಗಿ, ಕಡಗೂಟಗಳಿಂದ ಸಹಿತವಾದ ನೊಗವನ್ನು ಹೊತ್ತ ಶ್ರೇಷ್ಠವಾದ ಅಶ್ವಗಳು ನೊಗವನ್ನು ಎಳೆಯುತ್ತಿರುವುದು ಅಲ್ಲಲ್ಲಿ ಕಂಡುಬರುತ್ತಿದ್ದಿತು.

ಅದೃಶ್ಯಂತ ಸಸೂತಾಶ್ಚ ಸಾಶ್ವಾಃ ಸರಥಯೋಧಿನಃ ।
ಏಕೇನ ಬಲಿನಾ ರಾಜನ್ ವಾರಣೇನ ಹತಾ ರಥಾಃ ॥೩೪॥

ಸಾರಥಿಯಿಂದಲೂ, ಅಶ್ವಗಳಿಂದಲೂ ಸಹಿತರಾದ ರಥಯೋಧಿಗಳು ಎಲೈ ರಾಜನೇ, ಬಲಿಷ್ಠವಾದ ಒಂದೇ ಗಜದಿಂದ ಕೊಲ್ಲಲ್ಪಡುವುದು ಕಂಡುಬರುತ್ತಿದ್ದಿತು.

ಗಂಧಂಹಸ್ತಿಮದಸ್ರಾವಮಾಘ್ರಾಯ ಬಹವೋ ರಣೇ ।
ಸನ್ನಿಪಾತೇ ಬಲೌಘಾನಾಂ ವಾತಮಾದದಿರೇ ಜನಾಃ ॥೩೫॥

ಆ ಸೈನ್ಯಸಮೂಹಗಳು ಪರಸ್ಪರ ಯುದ್ಧವನ್ನು ಮಾಡುವಾಗ ಜನರು ಗಜಗಳ ಗಂಧಯುಕ್ತವಾದ ಮದೋದಕದ ಸುಗಂಧವನ್ನು ಆಘ್ರಾಣಿಸಿದರು.

ಸತೋಮರಮಹಾಮಾತ್ರೈರ್ನಿಪತದ್ಭಿರ್ಗತಾಸುಭಿಃ ।
ಬಭೂವಾಯೋಧನಂ ಭನ್ನಂ ನಾರಾಚಾಭಿಹತೈರ್ಗಜೈಃ ॥೩೬॥

ನಾರಾಚಗಳಿಂದ ಕೊಲ್ಲಲ್ಪಟ್ಟ ಗಜಗಳಿಂದಲೂ ಮತ್ತು ಕೈಯಲ್ಲಿ ತೋಮರವನ್ನು ಹಿಡಿದು ಬಾಣದ ಹೊಡೆತಕ್ಕೆ ಸಿಲುಕಿ ಮರಣವನ್ನು ಹೊಂದಿ ಕೆಳಗೆ ಉರುಳುತ್ತಿದ್ದ ಮಹಾಮಾತ್ರರಿಂದಲೂ (ಗಜಾರೋಹಿಗಳಿಂದಲು) ರಣರಂಗವು ಮುಚ್ಚಿಹೋಯಿತು.

ಸನ್ನಿಪಾತೇ ಬಲೌಘಾನಾಂ ಪ್ರೇಷಿತೈರ್ವರವಾರಣೈಃ ।
ನಿಪೇತುರ್ಯೋಧಿ ಸಂಭಗ್ನಾಃ ಸಯೋಧಾಃ ಸಧ್ವಜಾ ರಥಾಃ ॥೩೭॥

ಸೈನ್ಯ ಸಮೂಹಗಳು ಸೆಣಸುವಾಗ ಮಹಾಮಾತ್ರರಿಂದ ಪ್ರೇರಿತವಾದ ಗಜಗಳಿಂದ, ಯೋಧರಿಂದ ಮತ್ತು ಧ್ವಜಗಳಿಂದ ಸಹಿತವಾದ ರಥಿಕರು ತುಳಿಯಲ್ಪಟ್ಟು ಭೂಮಿಯ ಮೇಲೆ ಉರುಳಿದರು.

ನಾಗರಾಜೋಪಮೈರ್ಹಸ್ತೈರ್ನಾಗೈರಾಕ್ಷಿಪ್ಯ ಸಂಯುಗೇ ।
ವ್ಯದೃಶ್ಯಂತ ಮಹಾರಾಜ ಸಂಭಗ್ನಾ ರಥಕೂಬರಾಃ ॥೩೮॥

ಎಲೈ ಮಹಾರಾಜನೇ, ಸರ್ಪದಂತಿರುವ ತಮ್ಮ ಸೊಂಡಿಲುಗಳಿಂದ ರಥಕೂಬರಗಳನ್ನು ಎಳೆದು ರಣರಂಗದಲ್ಲಿ ಅದನ್ನು ತುಳಿದು ಪುಡಿಮಾಡುವ ದೃಶ್ಯಗಳು ಕಂಡುಬರುತ್ತಿದ್ದವು.

ವಿಶೀರ್ಣರಥಜಾಲಾಶ್ಚ ಕೇಶೇಷ್ವಾಕ್ಷಿಪ್ಯ ದಂತಿಭಿಃ ।
ದ್ರುಮಶಾಖಾ ಇವಾವಿಧ್ಯ ನಿಷ್ಪಿಷ್ಟಾ ರಥಿನೋ ರಣೇ ॥೩೯॥

ರಥವನ್ನು ಕಳೆದುಕೊಂಡ ರಥಿಕರು ಗಜಗಳಿಂದ ತಲೆಕೂದಲುಗಳಲ್ಲಿ ಹಿಡಿದು ಮರದ ಕೊಂಬೆಗಳಂತೆ ಕೆಳಗೆಳೆದು ಕಾಲಿನಿಂದ ತುಳಿದು ಪುಡಿ ಮಾಡುವುದು ಕಂಡುಬರುತ್ತಿದ್ದಿತು.

ರಥೇಷು ಚ ರಥಾನ್ ಯುದ್ಧೇ ಸಂಸಕ್ತಾನ್ ನರವಾರಣಾಃ ।
ಏಕರ್ಷಂತೋ ದಿಶಃ ಸರ್ವಾಃ ಸಂಪೇತುಃ ಸರ್ವಶಬ್ದಗಾಃ ॥೪೦॥

ರಥಿಕರ ಜೊತೆಯಲ್ಲಿ ಸೆಣೆಸಾಡುತ್ತಿದ್ದ ರಥಿಕರನ್ನು ಮಹಾಗಜಗಳು ಅವುಗಳಲ್ಲಿ ಒಂದು ರಥವನ್ನು ಎಳೆಯುತ್ತಾ ಎಲ್ಲ ರೀತಿಯ ಶಬ್ದವನ್ನು ಮಾಡುತ್ತಾ ದಿಕ್ಕು ದಿಕ್ಕುಗಳಿಗೆ ಹೋದವು.

ತೇಷಾಂ ತಥಾ ಕರ್ಷತಾಂ ಚ ಗಜಾನಾಂ ರೂಪಮಾಬಭೌ ।
ಸರಃಸು ನಳಿನೀಜಾಲಂ ವಿಷಕ್ತಮಿವ ಕರ್ಷತಾಮ್ ॥೪೧॥

ಹಾಗೆ ರಥಗಳನ್ನು ಎಳೆದುಕೊಂಡು ಹೋಗುವ ಆ ಮಹಾಗಜಗಳ ಆಕೃತಿಯು ಸರೋವರದಲ್ಲಿ ಕಾಲಿಗೆ ಸಿಕ್ಕಿದ ಕಮಲ ಸಸ್ಯಗಳ ಜಾಲವನ್ನು ಎಳೆದುಕೊಂಡು ಹೋಗುವ ಗಜಗಳಂತೆ ತೋರುತ್ತಿದ್ದಿತು.

ಏವಂ ಸಂಧಾದಿತಂ ತತ್ರ ಬಭೂವಾಯೋಧನಂ ಮಹತ್ ।
ಸಾದಿಭಿಶ್ಚ ಪದಾತೈಶ್ಚ ಸಧ್ವಜೈಶ್ಚ ಮಹಾರಥೈಃ ॥೪೨॥

ಹೀಗೆ ಅಲ್ಲಿ ಆ ರಣರಂಗವು ಅಶ್ವಾರೋಹಿಗಳಿಂದಲೂ, ಪದಾತಿಗಳಿಂದಲೂ, ಧ್ವಜ ಸಹಿತವಾದ ರಥಗಳಿಂದ ಕೂಡಿದ ಮಹಾರಥರಿಂದಲೂ ಮುಚ್ಚಿಹೋಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಸಪ್ತಷಷ್ಟಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಸಪ್ತವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಅರವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೆಂಟನೆಯ ಅಧ್ಯಾಯ

ಯುದ್ಧದ ಅನುವೃತ್ತಿ, ಭೀಷ್ಮಾದಿಗಳ ಪ್ರತಾಪ.

ಸಂಜಯಃ

ಶಿಖಂಡೀ ಸಹ ಮತ್ಸ್ಯೇನ ವಿರಾಟೇನ ವಿತಾಂಪತೇ ।
ಭೀಷ್ಮಮಾತು ಮಹೇಷ್ವಾಸಮಾಸಾದ ಸುದುರ್ಜಯಮ್ ॥೧॥

ಸಂಜಯ- ಎಲೈ ರಾಜನೇ, ಶಿಖಂಡಿಯು ಮತ್ಸ್ಯರಾಜನಾದ ವಿರಾಟನ ಜೊತೆಯಲ್ಲಿ ಮಹಾಧನುರ್ಧಾರಿಗಳೂ ಮತ್ತು ಜಯಿಸಲು ಅತ್ಯಂತ ಅಸಾಧ್ಯರಾದವರೂ ಆದ ಭೀಷ್ಮರನ್ನು ಸಮೀಪಿಸಿದನು.

ದ್ರೋಣಂ ಕೃಪಂ ವಿಕರ್ಣಂ ಚ ಮಾಣಿಭದ್ರಾಖ್ಯ ಮಾಹುಲಂ ।
ಧಾರ್ತರಾಷ್ಟ್ರಾನ್ ರಣೇ ಹಂತುಂ ಬಹೂನಸ್ಮತ್ಸಮಾ ಧೃತಾಃ ॥೨೪

ಅರ್ಜುನನಾದರೂ ದ್ರೋಣರು, ಕೃಪರು, ವಿಕರ್ಣ ಮತ್ತು ಮಾಣಿಭದ್ರರಿಗೆಸ್ಸು, ಮಾಹುಲರೆಸ್ಸು ಮತ್ತು ಯುದ್ಧದಲ್ಲಿ ಹೊಡೆದ ಇನ್ನು ಅನೇಕ ರಾಜರುಗಳನ್ನು ಸ್ವ ಬಾಣಪ್ರಯೋಗದಿಂದ ಒಡಿಸಿದನು.

ಶೈಂಧವಂ ಚ ಮಹೇಷ್ವಾಸಂ ಜಯದ್ರಥಂ ಚ ಬಲಾಧಿಪಂ ।
ಪ್ರಾಪ್ಯಾಂತ್ಯೆ ರಾಜ್ಞಾಮಾಜ್ಞಾಂ ಧನಿನಾಮಾ ಧನಿಷ್ಯತಾಂ ॥೨೫

ಶೂರಂ ಚ ತೇ ಮಹೇಷ್ವಾಸಾ ಮಹೇಂದ್ರಪ್ರತಿಮಾಸ್ತಥಾ ।
ದುರಾಪಂ ಪೃಥ ಸಮರೇ ಧೀಮತೇನೋದ್ಯತಾಸ್ತಥಾ ॥೨೬

ಎಲ್ಲೆ ರಾಜಕೇಸರಿಯೇ, ಬಂಧುಗಳಿಂದ ಮತ್ತು ಅಪ್ತರಿಂದ ಕೂಡಿದ ಮಹಾಧನುರ್ಧಾರಿಯಾದ ಜಯದ್ರಥನನ್ನು, ಶೂರರಿಬ್ಬ ಮತ್ತು ದೇವೇಂದ್ರರಿಬ್ಬ ರಾಜರನ್ನು, ದ್ರೋಣಶಿಲಾದ ನಿನ್ನ ಪುತ್ರರಾದ ಮಹೇಷ್ವಾಸರನ್ನು ಮತ್ತು ದುರ್ಜಯನನ್ನು ಯುದ್ಧದಲ್ಲಿ ಧೀಮತೇನ ಸೂಚಿಸಿದನು.

ಸಹದೇವಸ್ತು ಶಮಿಮುಖಂ ಚ ಮಹಾರಥಂ ।
ಪಿತೃಭಕ್ತಿಂ ಮಹೇಷ್ವಾಸಾನಭ್ಯವರ್ತತ ಮಾರಿಷ ॥೨೭

ಸಹದೇವನಾದರೂ ಒಯಸಲು ಶಕ್ತರಾದ್ದರಿಂದ, ಮಹಾರಥರಾದ, ಮಹಾಧನುರ್ಧಾರಿಗಳಾದ ಶಮಿಮುಖ, ಅವನ ಪುತ್ರರಾದ ಅಂಜಸಾಯಿ ಎದ್ದೇಟಿ ಅವರ ಹತಿಗೆ ಸಾಗಿದನು.

ಯುಧಿಷ್ಠಿರೋ ಮಹಾರಾಜಃ ಗಜಾನೀಕಂ ಮಹಾಬಲಃ ।
ಸಮವಾತ ಸಂಗ್ರಾಮೇ ಪೃಥೂನ ನಿಹತಾಸ್ತಥ ॥೨೮

ಎಲ್ಲೆ ಮಹಾರಾಜನೇ, ನಿನ್ನ ಪುತ್ರರಿಂದ ಹೊಡೆಯಲ್ಪಟ್ಟ ಮಹಾಬಲಿಗಳಾದ ಯುಧಿಷ್ಠಿರನು ಯುದ್ಧದಲ್ಲಿ ಗಜಸೈನ್ಯವನ್ನು ಎದುರಿಸಿದನು.

ಮಾದ್ರೀಪುತ್ರಸ್ತು ನಕುಲಃ ಶೂರಃ ಸಂಕ್ರಂದನೋ ಯುಧಿ ।
ತ್ರಿಗರ್ತಾನಾಂ ರಥೋದಾರೈಃ ಸಮಸಜ್ಜತ ಪಾಂಡವಃ ॥೭೭॥

ಶತ್ರುಗಳನ್ನು ರೋದಿಸುವಂತೆ ಮಾಡುವ ಅಥವಾ ಇಂದ್ರನಿಗೆ ಸಮಾನವಾದ ಪೌರುಷವುಳ್ಳ ಮಾದ್ರೀಪುತ್ರನಾದ ನಕುಲನು ಯುದ್ಧದಲ್ಲಿ ರಥಶ್ರೇಷ್ಠರಾದ ತ್ರಿಗರ್ತರ ಜೊತೆಯಲ್ಲಿ ಸೆಣಸುದನು.

ಅಭ್ಯವರ್ತಂತ ದುರ್ಧರ್ಷಾಃ ಸಮರೇ ಸಾಲ್ವಕೇಕಯಾನ್ ।
ಸಾತ್ಯಕಿಶ್ಚೇಕಿತಾನಶ್ಚ ಸೌಭದ್ರಶ್ಚ ಮಹಾರಥಃ ॥೮೮॥

ಸೋಲಿಸಲು ಅಸಾಧ್ಯರಾದ, ಮಹಾರಥರಾದ ಸಾತ್ಯಕಿ, ಚೇಕಿತಾನ ಮತ್ತು ಅಭಿಮನ್ಯು ಇವರು ಯುದ್ಧದಲ್ಲಿ ಸಾಲ್ವರ ಮತ್ತು ಕೇಕಯರ ಮೇಲೆ ಎರಗಿದರು.

ಧೃಷ್ಟಕೇತುಶ್ಚ ಸಮರೇ ರಾಕ್ಷಸಶ್ಚ ಘಟೋತ್ಕಚಃ ।
ಪುತ್ರಾಣಾಂ ತೇ ರಥಾನೀಕಂ ಪ್ರತ್ಯುದ್ಯಾತಾಃ ಸುದುರ್ಜಯಾಃ ॥೮೯॥

ಜಯಿಸಲು ಅತ್ಯಂತ ಕಷ್ಟಸಾಧ್ಯರಾದ ಧೃಷ್ಟಕೇತುವೂ ಮತ್ತು ರಾಕ್ಷಸನಾದ ಘಟೋತ್ಕಚನೂ ನಿನ್ನ ಪುತ್ರರ ರಥಸಮೂಹದ ಮೇಲೆ ಎರಗಿದರು.

ಸೇನಾಪತಿರಮೇಯಾತ್ಮಾ ಧೃಷ್ಟದ್ಯುಮ್ನೋ ಮಹಾಬಲಃ ।
ದ್ರೋಣೇನ ಸಮರೇ ರಾಜನ್ ಸಮಿಯಾಯೇಂದ್ರಕರ್ಮಣಾ ॥೯೦॥

ಸೇನಾಪತಿಯೂ, ಅಪಾರವಾದ ಪ್ರಯತ್ನದಿಂದ ಕೂಡಿದವನೂ, ಮಹಾಬಲನೂ ಆದ ಧೃಷ್ಟದ್ಯುಮ್ನನು ಎಲೈ ರಾಜನೇ, ಯುದ್ಧದಲ್ಲಿ ಶ್ರೇಷ್ಠ ಕರ್ಮವನ್ನು ಮಾಡುವ ದ್ರೋಣರ ಜೊತೆಯಲ್ಲಿ ಅವರಿಗೆ ಅಭಿಮುಖವಾಗಿ ಹೋದನು.

ಏವಮೇತೇ ಮಹೇಷ್ವಾಸಾಸ್ತವಾಃ ಪಾಂಡವೈಃ ಸಹ ।
ಸಮೇತ್ಯ ಸಮರೇ ಶೂರಾಃ ಸಂಪ್ರಹಾರಂ ಪ್ರಚಕ್ರಿರೇ ॥೯೧॥

ಮಹಾಧನುರ್ಧಾರಿಗಳೂ, ಶೂರರೂ ಆದ ನಿನ್ನವರು ಹೀಗೆ ಪಾಂಡವರ ಜೊತೆಯಲ್ಲಿ ಸಂಧಿಸಿ ಯುದ್ಧದಲ್ಲಿ ಪರಸ್ಪರ ಪ್ರಹಾರವನ್ನು ಮಾಡಿದರು.

ಮಧ್ಯಂದಿನಗತೇ ಸೂರ್ಯೇ ನಭಸ್ಯಾಕುಲತಾಂ ಗತೇ ।
ಕುರವಃ ಪಾಂಡವೇಯಾಶ್ಚ ನಿಜಘ್ನುರಿತರೇತರಮ್ ॥೧೨॥

ಸೂರ್ಯನು ದಿನದ ಮಧ್ಯದಲ್ಲಿ ಇರುತ್ತಿರಲು ಆಕಾಶವೆಲ್ಲವೂ ಆಕುಲವಾಗಿರಲು ಕೌರವರು ಮತ್ತು ಪಾಂಡವರು ಪರಸ್ಪರವಾಗಿ ಹೊಡೆದಾಡಿದರು.

ಧ್ವಜಿನೋ ಹೇಮಚಿತ್ರಾಂಗಾ ವಿಚರಂತೋ ರಣಾಜಿರೇ ।
ಸಪತಾಕಾ ರಥಾ ರೇಜುರ್ವ್ಯಾಘ್ರಪರಿವಾರಣಾಃ ॥೧೩॥

ಧ್ವಜದಿಂದ ಕೂಡಿದ, ಸುವರ್ಣದಿಂದ ಅಲಂಕೃತವಾದ ಭಾಗಗಳನ್ನುಳ್ಳ, ಪತಾಕೆಗಳಿಂದ ಕೂಡಿದ, ವ್ಯಾಘ್ರಚರ್ಮದಿಂದ ಸುತ್ತಲೂ ಅಲಂಕಾರ ಮಾಡಲ್ಪಟ್ಟ ರಥಗಳು ರಣರಂಗದಲ್ಲಿ ಸಂಚರಿಸುತ್ತಾ ರಾರಾಜಿಸಿದವು.

ಸಮೇತಾನಾಂ ಚ ಸಮರೇ ಜಿಗೀಷೂಣಾಂ ಪರಸ್ಪರಮ್ ।
ಬಭೂವ ತುಮುಲಃ ಶಬ್ದಃ ಸಿಂಹಾನಾಮಿವ ನರ್ದತಾಮ್ ॥೧೪॥

ರಣರಂಗದಲ್ಲಿ ಒಟ್ಟಿಗೆ ಸೇರಿ ಪರಸ್ಪರವಾಗಿ ಗೆಲ್ಲುವ ಆಸೆಯುಳ್ಳ ಆ ಸೈನ್ಯಗಳಿಂದ ಸಿಂಹಗಳ ಗರ್ಜನೆಯಂತಿರುವ ತೀವ್ರವಾದ ಶಬ್ದವು ಉಂಟಾಯಿತು.

ತತ್ರಾದ್ಭುತಮಪಶ್ಯಾಮ ಸಂಪ್ರಹಾರಂ ಸುದಾರುಣಮ್ ।
ಯಮಕುರ್ವನ್ ರಣೇ ವೀರಾಃ ಸೃಂಜಯಾಃ ಕುರುಭಿಃ ಸಹ ॥೧೫॥

ವೀರರಾದ ಸೃಂಜಯರು ಮತ್ತು ಕುರುಗಳು ಸಹ ರಣರಂಗದಲ್ಲಿ ಮಾಡಿದ ಅತ್ಯಂತ ದಾರುಣವಾದ ಮತ್ತು ಅದ್ಭುತವಾದ ಪ್ರಹಾರಗಳನ್ನು ನಾವು ನೋಡಿದೆವು.

ನೈವ ಖಂ ನ ದಿಶೋ ರಾಜನ್ನ ಸೂರ್ಯಂ ಶತ್ರುತಾಪನ ।
ವಿದಿಶೋ ವಾಪ್ಯಪಶ್ಯಾಮ ಶರೈರ್ಮುಕ್ತೈಃ ಸಮಂತತಃ ॥೧೬॥

ಎಲೈ ರಾಜನೇ, ಎಲೈ ಶತ್ರುತಾಪನನೇ, ಎಲ್ಲಕಡೆಗಳಲ್ಲಿಯೂ ಪ್ರಯೋಗಿಸಲ್ಪಟ್ಟ ಬಾಣಗಳ ನಿಮಿತ್ತದಿಂದಾಗಿ ನಾವು ಆಕಾಶವನ್ನಾಗಲೀ, ದಿಕ್ಕುಗಳನ್ನಾಗಲೀ, ಸೂರ್ಯನನ್ನಾಗಲೀ, ವಿದಿಕ್ಕುಗಳನ್ನಾಗಲೀ ಕಾಣಲಿಲ್ಲ.

ಶಕ್ತೀನಾಂ ವಿಮಲಾಗ್ರಾಣಾಂ ತೋಮರಾಣಾಂ ತಥಾಸ್ಯತಾಮ್ ।
ನಿಸ್ತ್ರಿಂಶಾನಾಂ ಚ ಪೀತಾನಾಂ ನೀಲೋತ್ಪಲನಿಭಾಃ ಪ್ರಭಾಃ ॥೧೭॥

ಕವಚಾನಾಂ ವಿಚಿತ್ರಾಣಾಂ ಭೂಷಣಾನಾಂ ಪ್ರಭಾಸ್ತಥಾ ।
ಖಂ ದಿಶಃ ಪ್ರದಿಶಶ್ಚೈವ ಭಾಸಯಾಮಾಸುರೋಜಸಾ ।
ವಿರರಾಜ ತದಾ ರಾಜಂಸ್ತತ್ರತತ್ರ ರಣಾಂಗಣಮ್ ॥೧೮॥

ಸ್ವಚ್ಛವಾದ ಅಲಬುಳ್ಳ ಶಕ್ತ್ಯಾಯುಧಗಳ, ಪ್ರಯೋಗಿಸಲ್ಪಡುವ ತೋಮರಗಳ, ನೀರು ಕುಡಿಸಿ ಹದಮಾಡಿದ ಖಡ್ಗಗಳಿಂದ ಹೊರಟ ನೀಲೋತ್ಪಲ ಸದೃಶವಾದ ಕಾಂತಿಗಳು; ಹಾಗೆಯೇ ವಿಚಿತ್ರವಾದ ಕವಚಗಳ ಮತ್ತು ಭೂಷಣಗಳ ಕಾಂತಿಗಳು ತಮ್ಮ ಸಾಮರ್ಥ್ಯದಿಂದ ಆಕಾಶವನ್ನೂ ದಿಕ್ಕು-ವಿದಿಕ್ಕುಗಳನ್ನೂ ಬೆಳಗಿದವು. ಎಲೈ ರಾಜನೇ, ಆಗ ರಣಾಂಗಣವು ಅಲ್ಲಲ್ಲಿ ಶೋಭಿಸಿತು.

ರಥಸಿಂಹಾಸನವ್ಯಾಘ್ರಾಃ ಸಮಾಯಾಂತಶ್ಚ ಸಂಯುಗೇ ।
ವಿರೇಜುಃ ಸಮರೇ ರಾಜನ್ ಗ್ರಹಾ ಇವ ನಭಸ್ತಲೇ ॥೧೯॥

ಎಲೈ ರಾಜನೇ, ಯುದ್ಧದಲ್ಲಿ ರಥಗಳು ಚಲಿಸುವಾಗ ಮುಂದೆ ಬರುವ ರಥಗಳು, ರಥಗಳ ಸಿಂಹಾಸನಗಳು ಮತ್ತು ವ್ಯಾಘ್ರಗಳು ಆಕಾಶದಲ್ಲಿರುವ ಗ್ರಹಗಳಂತೆ ವಿರಾಜಿಸಿದವು.

ಭೀಷ್ಮಸ್ತು ರಥಿನಾಂ ಶ್ರೇಷ್ಠೋ ಭೀಮಸೇನಂ ಮಹಾಬಲಮ್ ।
ಅವಾರಯತ ಸಂಕ್ರುದ್ಧಃ ಸರ್ವಸೈನ್ಯಸ್ಯ ಪಶ್ಯತಃ ॥೨೦॥

ರಥಿಕರಲ್ಲಿ ಶ್ರೇಷ್ಠರಾದ ಭೀಷ್ಮರಾದರೋ ಬಹಳ ಕೋಪಗೊಂಡು ಎಲ್ಲ ಸೈನ್ಯವೂ ನೋಡುತ್ತಿರುವಂತೆ ಮಹಾಬಲನಾದ ಭೀಮಸೇನನನ್ನು ನಿವಾರಿಸಿದರು.

ತತೋ ಭೀಷ್ಮವಿಸರ್ಮುಕ್ತಾ ರುಗ್ಮಪುಂಖಾಃ ಶಿಲಾಶಿತಾಃ ।
ಅಭ್ಯಹ್ನನ್ ಸಮರೇ ಭೀಮಂ ತೈಲಧೌತಾಃ ಸುತೇಜನಾಃ ॥೨೧॥

ಆಗ ಭೀಷ್ಮರಿಂದ ಪ್ರಯೋಗಿಸಲ್ಪಟ್ಟ ಸುವರ್ಣಮಯವಾದ ಪುಂಖವುಳ್ಳ, ಕಲ್ಲಿನ ಮೇಲೆ ಸಾಣೆಯನ್ನು ಹಿಡಿದ, ಎಣ್ಣೆಯಿಂದ ಮಸೆದು ಹೊಳಪನ್ನು ಹೊಂದಿದ, ಅತ್ಯಂತ ತೀಕ್ಷ್ಣವಾದ ಬಾಣಗಳು ರಣರಂಗದಲ್ಲಿ ಭೀಮನನ್ನು ಹೊಡೆದವು.

ತಸ್ಯ ಶಕ್ತಿಂ ಮಹಾವೇಗಾಂ ಭೀಮಸೇನೋ ಮಹಾಬಲಃ ।
ಕ್ರುದ್ಧಾಶೀವಿಷಸಂಕಾಶಾಂ ಪ್ರೇಷಯಾಮಾಸ ಭಾರತ ॥೨೨॥

ಎಲೈ ಭಾರತನೇ, ಮಹಾಬಲನಾದ ಭೀಮಸೇನನು ಮಹಾವೇಗವುಳ್ಳ ಕೋಪಗೊಂಡ ಸರ್ಪದಂತಿರುವ ಶಕ್ತ್ಯಾಯುಧವನ್ನು ಭೀಷ್ಮರ ಮೇಲೆ ಎಸೆದನು.

ತಾಮಾಪತಂತೀಂ ಸಹಸಾ ರುಗ್ಣದಂಡಾಂ ದುರಾಸದಾಮ್ ।
ಚಿಚ್ಛೇದ ಸಮರೇ ಭೀಷ್ಮಃ ಶರೈಃ ಸನ್ನತಪರ್ವಭಿಃ ॥೨೩॥

ತನ್ನ ಕಡೆಗೆ ಬರುತ್ತಿದ್ದ ಸುವರ್ಣಮಯವಾದ ಹಿಡಿಯನ್ನು ಹೊಂದಿದ, ಸಮೀಪ ಸುಳಿಯಲು ಅಸಾಧ್ಯವಾದ ಆ ಶಕ್ತ್ಯಾಯುಧವನ್ನು ಭೀಷ್ಮರು ಬಾಗಿದ ತುದಿಯುಳ್ಳ ಬಾಣಗಳಿಂದ ರಣಾಂಗಣದಲ್ಲಿ ಕತ್ತರಿಸಿದರು.

ತತೋಽಪರೇಣ ಭಲ್ಲೇನ ಪೀತೇನ ನಿಶಿತೇನ ಚ ।
ಕಾರ್ಮುಕಂ ಭೀಮಸೇನಸ್ಯ ದ್ವಿಧಾ ಚಿಚ್ಛೇದ ಭಾರತ ॥೨೪॥

ಎಲೈ ಭಾರತನೇ, ಅನಂತರ ನೀರನ್ನು ಕುಡಿಸಿ ಹದಮಾಡಿದ ತೀಕ್ಷ್ಣವಾದ ಇನ್ನೊಂದು ಭಲ್ಲದಿಂದ ಭೀಮಸೇನನ ಧನುಸ್ಸನ್ನು ಎರಡು ಭಾಗವಾಗಿ ಕತ್ತರಿಸಿದರು.

ಸಾತ್ಯಕಿಸ್ತು ತತಸ್ತೂರ್ಣಂ ಭೀಷ್ಮಮಾಸಾದ್ಯ ಸಂಯುಗೇ ।
ಶರೈರ್ಬಹುಭಿರಾನರ್ಚ್ಛತ್ ಪಿತರಂ ತೇ ಜನೇಶ್ವರ ॥೨೫॥

ಎಲೈ ಜನೇಶ್ವರನೇ, ಸಾತ್ಯಕಿಯಾದರೋ ರಣರಂಗದಲ್ಲಿ ಶೀಘ್ರವಾಗಿ ಭೀಷ್ಮರನ್ನು ಸಮೀಪಿಸಿ, ಅನೇಕ ಬಾಣಗಳಿಂದ ನಿನ್ನ ತಂದೆಯಾದ ಅವರನ್ನು ಪೀಡಿಸಿದನು.

ತತಃ ಸಂಧಾಯ ವೈ ತೀಕ್ಷ್ಣಂ ಶರಂ ಪರಮದಾರುಣಮ್ ।
ವಾಷ್ಣೇಯಸ್ಯ ರಥಾದ್ ಭೀಷ್ಮಃ ಪಾತಯಾಮಾಸ ಸಾರಥಿಮ್ ॥೨೬॥

ಅನಂತರ ಭೀಷ್ಮರು ಪರಮದಾರುಣವಾದ, ತೀಕ್ಷ್ಣವಾದ ಒಂದು ಬಾಣವನ್ನು ಬಿಲ್ಲಿನಲ್ಲಿ ಹೂಡಿ ಸಾತ್ಯಕಿಯ ರಥದ ಸಾರಥಿಯನ್ನು ರಥದಿಂದ ಕೆಡವಿದರು.

ತಸ್ಯಾಶ್ವಾಃ ಪ್ರದ್ರುತಾ ರಾಜನ್ ನಿಹತೇ ರಥಸಾರಥೌ ।
ತೇನತೇನೈವ ಧಾವಂತಿ ಮನೋಮಾರುತರಂಹಸಃ ॥೨೭॥

ಎಲೈ ರಾಜನೇ, ರಥದ ಸಾರಥಿಯು ಕೊಲ್ಲಲ್ಪಡುತ್ತಿರಲು ಮನೋಮಾರುತ ವೇಗವುಳ್ಳ ಆ ರಥದ ಅಶ್ವಗಳು ಮನಸ್ಸಿಗೆ ಬಂದಂತೆ ಓಡಿಹೋದವು.

ತತಃ ಸರ್ವಸ್ಯ ಸೈನ್ಯಸ್ಯ ನಿಸ್ವನಸ್ತುಮುಲೋಽಭವತ್ ।
ಹಾಹಾಕಾರಶ್ಚ ಸಂಜಜ್ಞೇ ಪಾಂಡವಾನಾಂ ಮಹಾತ್ಮನಾಮ್ ॥೨೮॥

ಆಗ ಮಹಾತ್ಮರಾದ ಪಾಂಡವರ ಎಲ್ಲ ಸೈನ್ಯದಲ್ಲಿ ತೀವ್ರವಾದ ನಾದವೂ, ಹಾಹಾಕಾರವೂ ಉಂಟಾಯಿತು.

ಅಭದ್ರವತ ಗೃಹ್ಣೀತ ಹಯಾನ್ ಯಚ್ಛತ ಧಾವತ ।
ಇತ್ಯಾಸೀತ್ ತುಮುಲಃ ಶಬ್ದೋ ಯುಯುಧಾನರಥಂ ಪ್ರತಿ ॥೨೯॥

ಮುಂದೆ ನುಗ್ಗಿ, ಹಿಡಿಯಿರಿ, ಅಶ್ವಗಳನ್ನು ನಿಲ್ಲಿಸಿ, ಮುಂದೆ ಓಡಿ, ಇಂತಹ ತೀವ್ರವಾದ ಶಬ್ದಗಳು ಸಾತ್ಯಕಿಯ ರಥದ ಸುತ್ತಲೂ ಕೇಳಿಬರುತ್ತಿದ್ದವು.

ವಿತಸ್ಥಿನ್ನೇವ ಕಾಲೇ ತು ಭೀಷ್ಮಃ ಶಾಂತನವಃ ಪುನಃ ।
ವ್ಯಹನತ್ ಪಾಂಡವೀಂ ಸೇನಾಮಾಸುರೀಮಿವ ವೃತ್ರಹಾ ॥೩೦॥

ಈ ಕಾಲದಲ್ಲಿಯೇ ಶಂತನುಪುತ್ರರಾದ ಭೀಷ್ಮರು ಪುನಃ, ಇಂದ್ರನು ದಾನವ ಸೇನೆಯನ್ನು ಸಂಹರಿಸಿದಂತೆ ಪಾಂಡವರ ಸೈನ್ಯವನ್ನು ಸಂಹರಿಸಿದರು.

ತೇ ವಧ್ಯಮಾನಾ ಭೀಷ್ಮೇಣ ಪಾಂಚಾಲಾಃ ಸೋಮಕೈಃ ಸಹ ।
ಆರ್ಯಾಂ ಯುದ್ಧೇ ಮತಿಂ ಕೃತ್ವಾ ಭೀಷ್ಮಮೇವಾಭಿದುದ್ರುವುಃ ॥೩೧॥

ಭೀಷ್ಮರಿಂದ ವಧಿಸಲ್ಪಡುತ್ತಿದ್ದರೂ ಸೋಮಕರಿಂದ ಕೂಡಿದ ಪಾಂಚಾಲರು ಯುದ್ಧದ ವಿಷಯದಲ್ಲಿ ಉದಾತ್ತವಾದ ಬುದ್ಧಿಯನ್ನು ಹೊಂದಿ ಭೀಷ್ಮರ ಮೇಲೆಯೇ ಎರಗುತ್ತಿದ್ದರು.

ಧೃಷ್ಟದ್ಯುಮ್ನಮುಖಾಶ್ಚಾಪಿ ಪಾರ್ಥಾಃ ಶಾಂತನವಂ ರಣೇ ।
ಅಭ್ಯಧಾವನ್ ಜಿಗೀಷಂತಸ್ತವ ಪುತ್ರಸ್ಯ ವಾಹಿನೀಮ್ ॥೩೨॥

ಧೃಷ್ಟದ್ಯುಮ್ನನೇ ಮೊದಲಾದ ಎಲ್ಲ ಪಾಂಡವರೂ ನಿನ್ನ ಪುತ್ರನ ಸೈನ್ಯವನ್ನು ಜಯಿಸಲು ಬಯಸಿ ಯುದ್ಧದಲ್ಲಿ ಭೀಷ್ಮರ ಕಡೆಗೆ ಓಡಿದರು.

ತಥೈವ ತಾವಕಾ ರಾಜನ್ ಭೀಷ್ಮದ್ರೋಣಮುಖಾಃ ಪರಾನ್ ।
ಅಭ್ಯಧಾವಂತ ವೇಗೇನ ತತೋ ಯುದ್ಧಮವರ್ತತ ॥೩೩॥

ಎಲೈ ರಾಜನೇ, ಹಾಗೆಯೇ ನಿನ್ನವರಾದ ಭೀಷ್ಮ-ದ್ರೋಣ ಮೊದಲಾದವರು ವೇಗದಿಂದ ಪಾಂಡವರ ಕಡೆಗೆ ಓಡಿದರು. ಅನಂತರ ಯುದ್ಧವು ನಡೆಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಅಷ್ಟಪಷ್ಟಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಅಷ್ಟಾವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಅರವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೊಂಬತ್ತನೆಯ ಅಧ್ಯಾಯ

ಭೀಮ-ಅಶ್ವತ್ಥಾಮಾದಿಗಳ ಯುದ್ಧ.

ಸಂಜಯಃ

ವಿರಾಟೋಽಥ ತ್ರಿಭಿರ್ಬಾಣೈರ್ಭೀಷ್ಮಮಾರ್ಚ್ಛನ್ಮಹಾರಥಮ್ ।
ವಿವ್ಯಾಧ ತುರಗಾಂಶ್ಚಾಸ್ಯ ತ್ರಿಭಿರ್ಬಾಣೈರ್ಮಹಾರಥಃ ॥೧॥

ಸಂಜಯ– ಅನಂತರ ವಿರಾಟನು ಮಹಾರಥರಾದ ಭೀಷ್ಮರ ಮೇಲೆ ಮೂರು ಬಾಣಗಳನ್ನು ಪ್ರಯೋಗಿಸಿದನು. ಮಹಾರಥನಾದ ವಿರಾಟನು ಮೂರು ಬಾಣಗಳಿಂದ ಭೀಷ್ಮರ ರಥದ ಕುದುರೆಗಳನ್ನು ಪೀಡಿಸಿದನು.

ತಂ ಪ್ರತ್ಯವಿಧ್ಯದ್ ದಶಭಿರ್ಭೀಷ್ಮಃ ಶಾಂತನವಃ ಶರೈಃ ।
ರುಗ್ಣಪುಂಖೈರ್ಮಹೇಷ್ವಾಸಃ ಕೃತಹಸ್ತೋ ಮಹಾಬಲಃ ॥೨॥

ಪಳಗಿದ ಹಸ್ತವುಳ್ಳವರೂ, ಮಹಾಬಲರೂ, ಮಹಾಧನುರ್ಧಾರಿಗಳೂ, ಶಂತನು ಪುತ್ರರೂ ಆದ ಭೀಷ್ಮರು ಅದಕ್ಕೆ ಪ್ರತಿಯಾಗಿ ವಿರಾಟನ ಮೇಲೆ ಚಿನ್ನದ ಪುಂಖವನ್ನು ಹೊಂದಿದ ಹತ್ತು ಬಾಣಗಳನ್ನು ಪ್ರಯೋಗಿಸಿದರು.

ದ್ರೌಣಿರ್ಗಾಂಡೀವಧನ್ವಾನಂ ಭೀಮಧನ್ವಾ ಮಹಾರಥಃ ।
ಅವಿಧ್ಯದಿಷುಭಿಃ ಷಡ್ಭಿರ್ದೃಢಹಸ್ತಃ ಸ್ತನಾಂತರೇ ॥೩॥

ಮಹಾರಥರೂ, ದೃಢವಾದ ಹಸ್ತವುಳ್ಳವರೂ, ಭಯಂಕರವಾದ ಧನುಸ್ಸುಳ್ಳವರೂ ಆದ ಅಶ್ವತ್ಥಾಮರು ಗಾಂಡೀವ ಧನುರ್ಧಾರಿಯಾದ ಅರ್ಜುನನಿಗೆ ಅವನ ಸ್ತನಗಳ ಮಧ್ಯದಲ್ಲಿ ಆರು ಬಾಣಗಳಿಂದ ಹೊಡೆದರು.

ತಾರ್ಮುಖಂ ತಸ್ಯ ಚಿಚ್ಛೇದ ಫಲ್ಗುನಃ ಪರವೀರಹಾ ।
ಅವಿಧ್ಯಚ್ಚ ಭೃಶಂ ತೀಕ್ಷ್ಣೈಃ ಪತ್ರಿಭಿಃ ಶತ್ರುಕರ್ಶನಃ ॥೪॥

ಪರವೀರಘಾತಕನಾದ ಅರ್ಜುನನು ಅವರ ಧನುಸ್ಸನ್ನು ಕತ್ತರಿಸಿದನು. ಶತ್ರು ಕರ್ಶನನಾದ ಅವನು ಪತ್ರಗಳನ್ನು ಹೊಂದಿದ್ದ ತೀಕ್ಷ್ಣವಾದ ಬಾಣಗಳಿಂದ ಅಶ್ವತ್ಥಾಮರನ್ನು ಚೆನ್ನಾಗಿ ಪೀಡಿಸಿದನು.

ಸೋऽನ್ಯತ್ಕಾರ್ಮುಕಮಾದಾಯ ವೇಗವತ್ ಕ್ರೋಧಮೂರ್ಚ್ಛಿತಃ ।
ಅಮೃಷ್ಯಮಾಣಃ ಪಾರ್ಥೇನ ತಾರ್ಮುಕಚ್ಛೇದಮಾಹವೇ ॥೫॥

ಅವಿಧ್ಯತ್ ಫಲ್ಗುನಂ ರಾಜನ್ ನವತ್ಯಾ ನಿಶಿತೈಃ ಶರೈಃ ।
ವಾಸುದೇವಂ ಚ ಸಪ್ತತ್ಯಾ ವಿವ್ಯಾಧ ಪರಮೇಷುಭಿಃ ॥೬॥

ಅರ್ಜುನನಿಂದ ರಣರಂಗದಲ್ಲಿ ತನ್ನ ಧನುಸ್ಸು ಕತ್ತರಿಸಲ್ಪಡುತ್ತಿರಲು ಕ್ರೋಧ ಮೂರ್ಛಿತರಾದ ಅಶ್ವತ್ಥಾಮರು ಅದನ್ನು ಸಹಿಸದೆ ವೇಗಶಾಲಿಯಾದ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ತೊಂಬತ್ತು ತೀಕ್ಷ್ಣವಾದ ಬಾಣಗಳಿಂದ ಅರ್ಜುನನನ್ನು ಹೊಡೆದರು. ಎಲೈ ರಾಜನೇ, ಅರ್ಜುನ ಸಾರಥಿಯಾದ ಕೃಷ್ಣನನ್ನೂ ಸಹ ಶ್ರೇಷ್ಠವಾದ ಎಪ್ಪತ್ತು ಬಾಣಗಳಿಂದ ಹೊಡೆದರು.

ತತಃ ಕ್ರೋಧಾಭಿತಾಮ್ರಾಕ್ಷಃ ಸಹ ಕೃಷ್ಣೇನ ಫಲ್ಗುನಃ ।
ದೀರ್ಘಮುಷ್ಣಂ ಚ ನಿಶ್ವಸ್ಯ ಚಿಂತಯಿತ್ವಾ ಮುಹುರ್ಮುಹುಃ ॥೭॥

ಧನುಃ ಪ್ರಪೀಡ್ಯ ವಾಮೇನ ಕರೇಣಾಮಿತ್ರಕರ್ಶನಃ ।
ಗಾಂಡೀವಧನ್ವಾ ಸಂಕ್ರುದ್ಧಃ ಶಿತಾನ್ ಸನ್ನತಪರ್ವಣಃ ।
ಜೀವಿತಾಂತಕರಾನ್ ಘೋರಾನ್ ಸಮಾದತ್ತ ಶಿಲೀಮುಖಾನ್ ॥೮॥

ಆಗ ಕೃಷ್ಣನ ಜೊತೆಯಲ್ಲಿಯೇ ಕೋಪದಿಂದ ಕೆಂಪಾದ ಕಣ್ಣುಳ್ಳ ಅರ್ಜುನನು ದೀರ್ಘವೂ, ಉಷ್ಣವೂ ಆದ ಶ್ವಾಸವನ್ನು ಬಿಟ್ಟು ಪುನಃ ಪುನಃ ಆಲೋಚಿಸಿ, ಶತ್ರು ಕರ್ಶನನಾದ ಅವನು ಎಡಗೈಯಿಂದ ಧನುಸ್ಸನ್ನು ಚೆನ್ನಾಗಿ ಎಳೆದು ಬಾಗಿದ ತುದಿಯುಳ್ಳ, ತೀಕ್ಷ್ಣವಾದ, ಪ್ರಾಣಾಂತಕವಾದ, ಘೋರವಾದ ಬಾಣಗಳನ್ನು ಕೈಯಲ್ಲಿ ತೆಗೆದುಕೊಂಡನು.

ತೈಸ್ತೂರ್ಣಂ ಸಮರೇಽವಿಧ್ಯದ್ ದ್ರೌಣಿಂ ಬಲವತಾಂ ವರಮ್ ।
ತಸ್ಯ ತೇ ಕವಚಂ ಭಿತ್ತ್ವಾ ಪಪುಃ ಶೋಣಿತಮಾಹವೇ ॥೯॥

ಆ ಬಾಣಗಳಿಂದ ಅವನು ರಣರಂಗದಲ್ಲಿ ಬಲಿಷ್ಠರಲ್ಲಿ ಶ್ರೇಷ್ಠರಾದ ಅಶ್ವತ್ಥಾಮರನ್ನು ಹೊಡೆದನು. ಆ ಬಾಣಗಳು ಅಶ್ವತ್ಥಾಮರ ಕವಚವನ್ನು ಭೇದಿಸಿ ಅವರ ಶರೀರದಲ್ಲಿ ನಾಟಿ ರಕ್ತವನ್ನು ಕುಡಿದವು.

ನ ವಿವ್ಯಥೇ ಚ ನಿರ್ಭಿನ್ನೋ ದ್ರೌಣಿರ್ಗಾಂಡೀವಧನ್ವನಾ ।
ತಥೈವ ಶರವರ್ಷಾಣಿ ಪ್ರತಿಮುಂಚನ್ನವಿಹ್ವಲಃ ।
ತಸ್ಥೌ ಸ ಸಮರೇ ರಾಜಂಸ್ತ್ರಾತುಮಿಚ್ಛನ್ ಮಹಾವ್ರತಮ್ ॥೧೦॥

ಎಲೈ ರಾಜನೇ, ಗಾಂಡೀವಧನುರ್ಧಾರಿಯಾದ ಅರ್ಜುನನಿಂದ ತೀವ್ರವಾಗಿ ಗಾಯಗೊಳಿಸಲ್ಪಟ್ಟ ಅಶ್ವತ್ಥಾಮರು ವ್ಯಥೆ ಪಡಲಿಲ್ಲ. ಯಾವ ಸಂಕಟವನ್ನೂ ಹೊಂದದೆ ಮೊದಲಿನಂತೆಯೇ ಬಾಣಗಳ ಮಳೆಯನ್ನು ಸುರಿಸುತ್ತಾ ಮಹಾವ್ರತರಾದ ಭೀಷ್ಮರನ್ನು ರಕ್ಷಿಸಲು ಇಚ್ಛಿಸಿ ಯುದ್ಧದಲ್ಲಿ ನಿಂತರು.

ತಸ್ಯ ತತ್ ಸುಮಹತ್ಕರ್ಮ ಶಶಂಸುಃ ಪುರುಷರ್ಷಭಾಃ ।
ಯತ್ ಕೃಷ್ಣಾಭ್ಯಾಂ ಸಮೇತಾಭ್ಯಾಂ ನಾಪತ್ರಪತ ಸಂಯುಗೇ ॥೧೧॥

ಕೃಷ್ಣಾರ್ಜುನರ ಜೊತೆಯಲ್ಲಿ ಸೇರಿಸಿದರೂ ಯುದ್ಧದಲ್ಲಿ ಹಿಂಜರಿಯದ ಅವರ ಆ ಮಹಾಕಾರ್ಯವನ್ನು ಪುರುಷಶ್ರೇಷ್ಠರು ಪ್ರಶಂಸಿಸಿದರು.

ಸ ಹಿ ನಿತ್ಯಮನೀಕೇಷು ಯುಧ್ಯತೇಽಭಯಮಾಸ್ಥಿತಃ ।
ಅಸ್ತ್ರಗ್ರಾಮಂ ಸ ಸಂಹಾರಂ ದ್ರೋಣಾತ್ ಪ್ರಾಪ್ಯ ಸುದುರ್ಲಭಮ್ ॥

ದ್ರೌಣಿರ್ಗಾಂಡೀವಧನ್ವಾನಂ ಭೀಮಧನ್ವಾ ಮಹಾರಥಃ ।
ಅವಿಧ್ಯದಿಷುಭಿಃ ಷಡ್ಭಿರ್ದೃಢಹಸ್ತಃ ಸ್ತನಾಂತರೇ ॥೩॥

ಮಹಾರಥರೂ, ದೃಢವಾದ ಹಸ್ತವುಳ್ಳವರೂ, ಭಯಂಕರವಾದ ಧನುಸ್ಸುಳ್ಳವರೂ ಆದ ಅಶ್ವತ್ಥಾಮರು ಗಾಂಡೀವ ಧನುರ್ಧಾರಿಯಾದ ಅರ್ಜುನನಿಗೆ ಅವನ ಸ್ತನಗಳ ಮಧ್ಯದಲ್ಲಿ ಆರು ಬಾಣಗಳಿಂದ ಹೊಡೆದರು.

ಕಾರ್ಮುಕಂ ತಸ್ಯ ಚಿಚ್ಛೇದ ಫಲ್ಗುನಃ ಪರವೀರಹಾ ।
ಅವಿಧ್ಯಚ್ಚ ಭೃಶಂ ತೀಕ್ಷ್ಣೈಃ ಪತ್ರಿಭಿಃ ಶತ್ರುಕರ್ಶನಃ ॥೪॥

ಪರವೀರಘಾತಕನಾದ ಅರ್ಜುನನು ಅವರ ಧನುಸ್ಸನ್ನು ಕತ್ತರಿಸಿದನು. ಶತ್ರು ಕರ್ಶನನಾದ ಅವನು ಪತ್ರಗಳನ್ನು ಹೊಂದಿದ್ದ ತೀಕ್ಷ್ಣವಾದ ಬಾಣಗಳಿಂದ ಅಶ್ವತ್ಥಾಮರನ್ನು ಚೆನ್ನಾಗಿ ಪೀಡಿಸಿದನು.

ಸೋಽನ್ಯತ್ಕಾರ್ಮುಕಮಾದಾಯ ವೇಗವತ್ ಕ್ರೋಧಮೂರ್ಚ್ಛಿತಃ ।
ಅಮೃಷ್ಯಮಾಣಃ ಪಾರ್ಥೇನ ಕಾರ್ಮುಕಚ್ಛೇದಮಾಹವೇ ॥೫॥

ಅವಿಧ್ಯತ್ ಫಲ್ಗುನಂ ರಾಜನ್ ನವತ್ಯಾ ನಿಶಿತೈಃ ಶರೈಃ ।
ವಾಸುದೇವಂ ಚ ಸಪ್ತತ್ಯಾ ವಿವ್ಯಾಧ ಪರಮೇಷುಭಿಃ ॥೬॥

ಅರ್ಜುನನಿಂದ ರಣರಂಗದಲ್ಲಿ ತನ್ನ ಧನುಸ್ಸು ಕತ್ತರಿಸಲ್ಪಡುತ್ತಿರಲು ಕ್ರೋಧ ಮೂರ್ಛಿತರಾದ ಅಶ್ವತ್ಥಾಮರು ಅದನ್ನು ಸಹಿಸದೆ ವೇಗಶಾಲಿಯಾದ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ತೊಂಬತ್ತು ತೀಕ್ಷ್ಣವಾದ ಬಾಣಗಳಿಂದ ಅರ್ಜುನನನ್ನು ಹೊಡೆದರು. ಎಲೈ ರಾಜನೇ, ಅರ್ಜುನ ಸಾರಥಿಯಾದ ಕೃಷ್ಣನನ್ನೂ ಸಹ ಶ್ರೇಷ್ಠವಾದ ಎಪ್ಪತ್ತು ಬಾಣಗಳಿಂದ ಹೊಡೆದರು.

ತತಃ ಕ್ರೋಧಾಭಿತಾಮ್ರಾಕ್ಷಃ ಸಹ ಕೃಷ್ಣೇನ ಫಲ್ಗುನಃ ।
ದೀರ್ಘಮುಷ್ಣಂ ಚ ನಿಃಶ್ವಸ್ಯ ಚಿಂತಯಿತ್ವಾ ಮುಹುರ್ಮುಹುಃ ॥೭॥

ಧನುಃ ಪ್ರಪೀಡ್ಯ ವಾಮೇನ ಕರೇಣಾಮಿತ್ರಕರ್ಶನಃ ।
ಗಾಂಡೀವಧನ್ವಾ ಸಂಕ್ರುದ್ಧಃ ಶಿತಾನ್ ಸನ್ನತಪರ್ವಣಃ ।
ಜೀವಿತಾಂತಕರಾನ್ ಘೋರಾನ್ ಸಮಾದತ್ತ ಶಿಲೀಮುಖಾನ್ ॥೮॥

ಆಗ ಕೃಷ್ಣನ ಜೊತೆಯಲ್ಲಿಯೇ ಕೋಪದಿಂದ ಕೆಂಪಾದ ಕಣ್ಣುಳ್ಳ ಅರ್ಜುನನು ದೀರ್ಘವೂ, ಉಷ್ಣವೂ ಆದ ಶ್ವಾಸವನ್ನು ಬಿಟ್ಟು ಪುನಃ ಪುನಃ ಆಲೋಚಿಸಿ, ಶತ್ರು ಕರ್ಶನನಾದ ಅವನು ಎಡಗೈಯಿಂದ ಧನುಸ್ಸನ್ನು ಚೆನ್ನಾಗಿ ಎಳೆದು ಬಾಗಿದ ತುದಿಯುಳ್ಳ, ತೀಕ್ಷ್ಣವಾದ, ಪ್ರಾಣಾಂತಕವಾದ, ಘೋರವಾದ ಬಾಣಗಳನ್ನು ಕೈಯಲ್ಲಿ ತೆಗೆದುಕೊಂಡನು.

ತೈಸ್ತೂರ್ಣಂ ಸಮರೇಽವಿಧ್ಯದ್ ದ್ರೌಣಂ ಬಲವತಾಂ ವರಮ್ ।
ತಸ್ಯ ತೇ ಕವಚಂ ಭಿತ್ತ್ವಾ ಪಪುಃ ಶೋಣಿತಮಾಹವೇ ॥೯॥

ಆ ಬಾಣಗಳಿಂದ ಅವನು ರಣರಂಗದಲ್ಲಿ ಬಲಿಷ್ಠರಲ್ಲಿ ಶ್ರೇಷ್ಠರಾದ ಅಶ್ವತ್ಥಾಮರನ್ನು ಹೊಡೆದನು. ಆ ಬಾಣಗಳು ಅಶ್ವತ್ಥಾಮರ ಕವಚವನ್ನು ಭೇದಿಸಿ ಅವರ ಶರೀರದಲ್ಲಿ ನಾಟಿ ರಕ್ತವನ್ನು ಕುಡಿದವು.

ನ ವಿವ್ಯಥೇ ಚ ನಿರ್ಭಿನ್ನೋ ದ್ರೌಣಿರ್ಗಾಂಡೀವಧನ್ವನಾ ।
ತಥೈವ ಶರವರ್ಷಾಣಿ ಪ್ರತಿಮುಂಚನ್ನವಿಹ್ವಲಃ ।
ತಸ್ಥೌ ಸ ಸಮರೇ ರಾಜಂಸ್ತಾತುಮಿಚ್ಛನ್ ಮಹಾವ್ರತಮ್ ॥೧೦॥

ಎಲೈ ರಾಜನೇ, ಗಾಂಡೀವಧನುರ್ಧಾರಿಯಾದ ಅರ್ಜುನನಿಂದ ತೀವ್ರವಾಗಿ ಗಾಯಗೊಳಿಸಲ್ಪಟ್ಟ ಅಶ್ವತ್ಥಾಮರು ವ್ಯಥೆ ಪಡಲಿಲ್ಲ. ಯಾವ ಸಂಕಟವನ್ನೂ ಹೊಂದದೆ ಮೊದಲಿನಂತೆಯೇ ಬಾಣಗಳ ಮಳೆಯನ್ನು ಸುರಿಸುತ್ತಾ ಮಹಾವ್ರತರಾದ ಭೀಷ್ಮರನ್ನು ರಕ್ಷಿಸಲು ಇಚ್ಛಿಸಿ ಯುದ್ಧದಲ್ಲಿ ನಿಂತರು.

ತಸ್ಯ ತತ್ ಸುಮಹತ್ಕರ್ಮ ಶಶಂಸುಃ ಪುರುಷರ್ಷಭಾಃ ।
ಯತ್ ಕೃಷ್ಣಾಭ್ಯಾಂ ಸಮೇತಾಭ್ಯಾಂ ನಾಪತ್ರಪತ ಸಂಯುಗೇ ॥೧೧॥

ಕೃಷ್ಣಾರ್ಜುನರ ಜೊತೆಯಲ್ಲಿ ಸೆಣೆಸಿದರೂ ಯುದ್ಧದಲ್ಲಿ ಹಿಂಜರಿಯದ ಅವರ ಆ ಮಹಾಕಾರ್ಯವನ್ನು ಪುರುಷಶ್ರೇಷ್ಠರು ಪ್ರಶಂಸಿಸಿದರು.

ಸ ಹಿ ನಿತ್ಯಮನೀಕೇಷು ಯುಧ್ಯತೇಽಭಯಮಾಸ್ಥಿತಃ ।
ಅಸ್ತ್ರಗ್ರಾಮಂ ಸ ಸಂಹಾರಂ ದ್ರೋಣಾತ್ ಪ್ರಾಪ್ಯ ಸುದುರ್ಲಭಮ್ ॥

ಅತ್ಯಂತ ದುರ್ಲಭವಾದ ಅಸ್ತ್ರಸಮೂಹಗಳನ್ನು ಮತ್ತು ಅವುಗಳ ಸಂಹಾರವನ್ನು ದ್ರೋಣರಿಂದ ಪಡೆದ ಅಶ್ವತ್ಥಾಮರು ಸೈನ್ಯದ ಮಧ್ಯದಲ್ಲಿ ಯಾವಾಗಲೂ ನಿರ್ಭಯರಾಗಿ ನಿಂತು ಯುದ್ಧವನ್ನು ಮಾಡುತ್ತಾರೆ.

ಮಮಾಯಮಾಚಾರ್ಯಸುತೋ ದ್ರೋಣಸ್ಯಾತಿಪ್ರಿಯಃ ಸುತಃ ।
ಬ್ರಾಹ್ಮಣಶ್ಚ ವಿಶೇಷೇಣ ಮಾನನೀಯೋ ಮಮೇತಿ ಚ ॥೧೩॥

ಸಮಾಸ್ಥಾಯ ಮತಿಂ ವೀರೋ ಬೀಭತ್ಸುಃ ಶತ್ರುತಾಪನಃ ।
ಕೃಪಾಂ ಚಕ್ರೇ ರಥಶ್ರೇಷ್ಠೋ ಭಾರದ್ವಾಜಸುತಂ ಪ್ರತಿ ॥೧೪॥

ಇವರು ನನ್ನ ಗುರುಗಳಾದ ದ್ರೋಣರ ಪುತ್ರರು. ದ್ರೋಣರಿಗೆ ಅತ್ಯಂತ ಪ್ರಿಯರಾದವರು. ವಿಶೇಷವಾಗಿ ಬ್ರಾಹ್ಮಣರು. ನನ್ನಿಂದ ಗೌರವಿಸಲ್ಪಡಬೇಕಾದವರು ಎನ್ನುವ ಬುದ್ಧಿಯನ್ನು ತಳೆದು ವೀರನೂ, ಶತ್ರುತಾಪಕನೂ, ಶ್ರೇಷ್ಠ ಮಹಾರಥನೂ ಆದ ಅರ್ಜುನನು ದ್ರೋಣಪುತ್ರರಾದ ಅಶ್ವತ್ಥಾಮರ ಮೇಲೆ ಕೃಪೆಯನ್ನು ತೋರಿಸಿದನು.

ದ್ರೌಣಂ ತ್ಯಕ್ತ್ವಾ ತತೋ ಯುದ್ಧೇ ಕೌಂತೇಯಃ ಶತ್ರುತಾಪನಃ ।
ಯುಯುಧೇ ತಾವಕಾನ್ ನಿಘ್ನನ್ ತ್ವರಮಾಣಃ ಪರಾಕ್ರಮೀ ॥೧೫॥

ಆಗ ಶತ್ರುತಾಪನನೂ, ಪರಾಕ್ರಮಶಾಲಿಯೂ, ಕುಂತೀಪುತ್ರನೂ ಆದ ಅರ್ಜುನನು ರಣರಂಗದಲ್ಲಿ ಅಶ್ವತ್ಥಾಮರನ್ನು ಬಿಟ್ಟು ಶೀಘ್ರವಾಗಿ ನಿನ್ನ ಮಕ್ಕಳ ಮೇಲೆ ಬಾಣ ಪ್ರಯೋಗವನ್ನು ಮಾಡುತ್ತಾ ಯುದ್ಧವನ್ನು ಮಾಡಿದನು.

ದುರ್ಯೋಧನಸ್ತು ದಶಭಿರ್ಗಾರ್ಧ್ರಪತ್ರೈಃ ಶಿಲಾಶಿತೈಃ ।
ಭೀಮಸೇನಂ ಮಹೇಷ್ವಾಸಂ ರುಗ್ಣಪುಂಖೈಃ ಸಮರ್ಪಯತ್ ॥೧೬॥

ದುರ್ಯೋಧನನಾದರೋ ಗೃಧ್ರಪುಚ್ಛದ ಪತ್ರಗಳನ್ನು ಹೊಂದಿದ್ದ ಕಲ್ಲಿನ ಮೇಲೆ ಸಾಣೆಯನ್ನು ಹಿಡಿದ, ಚಿನ್ನದ ಹಿಂಭಾಗವುಳ್ಳ ಹತ್ತು ಬಾಣಗಳನ್ನು ಮಹಾಧನುರ್ಧಾರಿಯಾದ ಭೀಮಸೇನನ ಮೇಲೆ ಪ್ರಯೋಗಿಸಿದನು.

ಭೀಮಸೇನಸ್ತು ಸಂಕ್ರುದ್ಧಃ ಪರಾಸುಕರಣಂ ದೃಢಮ್ ।
ಚಿತ್ರಂ ಕಾರ್ಮುಕಮಾದತ್ತ ಶರಾಂಶ್ಚ ನಿಶಿತಾನ್ ದಶ ॥೧೭॥

ಆಕರ್ಣಪ್ರಹಿತೈಸ್ತೀಕ್ಷ್ಣೈರ್ನಿಶಿತೈಸ್ತಿಗ್ಮತೇಜಸೈಃ ।
ಅವಿಧ್ಯತ್ ತೂರ್ಣಮವ್ಯಗ್ರಃ ಕುರುರಾಜಂ ಮಹೋರಸಿ ॥೧೮॥

ಭೀಮಸೇನನಾದರೋ ಕೋಪಗೊಂಡು ಪರಪ್ರಾಣಾಪಹಾರಕವಾದ ದೃಢವೂ, ವಿಚಿತ್ರವೂ ಆದ ಬಿಲ್ಲನ್ನು ತೆಗೆದುಕೊಂಡು ಅದಕ್ಕೆ ಹತ್ತು ತೀಕ್ಷ್ಣವಾದ ಬಾಣಗಳನ್ನು ಹೂಡಿ ಹೆದೆಯನ್ನು ಕಿವಿಯವರೆಗೂ ಎಳೆದು ಅತ್ಯಂತ ಹರಿತವಾದ ಆ ಬಾಣಗಳಿಂದ ಕುರುರಾಜನಾದ ದುರ್ಯೋಧನನಿಗೆ ಅವನ ವಕ್ಷಸ್ಥಲದಲ್ಲಿ ಶೀಘ್ರವಾಗಿ ಗುರಿಯ ಯಾವ ವ್ಯತ್ಯಾಸವೂ ಇಲ್ಲದೆ ಹೊಡೆದನು.

ತಸ್ಯ ಕಾಂಚನಸೂತ್ರಸ್ತು ಶರೈಃ ಪರಿವೃತೋ ಮಣಿಃ ।
ರರಾಜೋರಸಿ ವೈ ಸೂರ್ಯೋ ಗ್ರಹೈರಿವ ಸಮಾವೃತಃ ॥೧೯॥

ಅವನ ವಕ್ಷಸ್ಥಲದಲ್ಲಿ ಧರಿಸಿದ್ದ ಸುವರ್ಣಮಯವಾದ ಸೂತ್ರದಿಂದ ಪೋಣಿಸಿದ ಸಣ್ಣ ಶರಗಳಿಂದ ಪರಿವೃತವಾದ ಮಣಿಯು ಗ್ರಹಗಳಿಂದ ಕೂಡಿದ ಸೂರ್ಯನಂತೆ ಶೋಭಿಸುತ್ತಿದ್ದಿತು.

ಪುತ್ರಸ್ತು ತವ ತೇಜಸ್ವೀ ಭೀಮಸೇನೇನ ತಾಡಿತಃ ।
ನಾಮೃಷ್ಯತ ಯಥಾ ನಾಗಸ್ತಳಶಬ್ದಂ ಸಮೀರಿತಮ್ ॥೨೦॥

ತೇಜಸ್ವಿಯಾದ ನಿನ್ನ ಪುತ್ರನಾದರೋ ಹೀಗೆ ಭೀಮಸೇನನಿಂದ ಹೊಡೆಯಲ್ಪಟ್ಟು ಹಸ್ತತಳಶಬ್ದವನ್ನು ಸಹಿಸದ ಗಜದಂತೆ ಆ ಪ್ರಹಾರವನ್ನು ಸಹಿಸಲಿಲ್ಲ.

ತತಃ ಶರೈರ್ಮಹಾರಾಜ ರುಗ್ಮಪುಂಖೈಃ ಶಿಲಾಶಿತೈಃ ।
ಭೀಮಂ ವಿವ್ಯಾಧ ಸಂಕ್ರುದ್ಧಸ್ತ್ವಾಪಯಾನೋ ವರೂಥಿನೀಮ್ ॥೨೧॥

ಎಲೈ ಮಹಾರಾಜನೇ, ಆಗ ಅವನು ಸುವರ್ಣಮಯವಾದ ಪುಂಖಗಳಿಂದ ಕೂಡಿದ್ದ, ಕಲ್ಲಿನ ಮೇಲೆ ಸಾಣೆಯನ್ನು ಹಿಡಿದ ಬಾಣಗಳಿಂದ ಪಾಂಡವ ಸೈನ್ಯವನ್ನು ಹೆದರಿಸುತ್ತಾ ಕೋಪದಿಂದ ಭೀಮನ ಮೇಲೆ ಪ್ರಯೋಗಿಸಿದನು.

ತೌ ಯುಧ್ಯಮಾನೌ ಸಮರೇ ಭೃಶಮನ್ಯೋನ್ಯವಿಕ್ಷತೌ ।
ಪುತ್ರೌ ತೇ ದೇವಸಂಕಾಶೌ ವ್ಯರೋಚೇತಾಂ ಮಹಾಬಲೌ ॥೨೨॥

ರಣಾಂಗಣದಲ್ಲಿ ಯುದ್ಧವನ್ನು ಮಾಡುತ್ತಾ ಪರಸ್ಪರ ಪ್ರಹಾರದಿಂದ ಗಾಯಗೊಂಡ ಮಹಾಬಲರಾದ ಏನ್ನ ಆ ಇಬ್ಬರು ಪುತ್ರರು ದೇವತೆಗಳಂತೆ ಕಂಗೊಳಿಸಿದರು.

ಚಿತ್ರಸೇನಂ ನರವ್ಯಾಘ್ರಂ ಸೌಭದ್ರಃ ಪರವೀರಹಾ ।
ಅವಿಧ್ಯದ್ ದಶಭಿರ್ಬಾಣೈಃ ಪುರುಮಿತ್ರಂ ಚ ಸಪ್ತಭಿಃ ॥೨೩॥

ಸತ್ಯವ್ರತಂ ಚ ಸಪ್ತತ್ಯಾ ವಿದ್ಧ್ವಾ ಶಕ್ರಸಮೋ ಯುಧಿ ।
ಸ್ವಸ್ಥಾನಿವ ರಣೇ ವೀರ ಅರ್ಜಿಂ ನಃ ಸಮಜೀಜನತ್ ॥೨೪॥

ಸುಭದ್ರಾಪುತ್ರನಾದ ಮತ್ತು ಪರವೀರಘಾತಕನಾದ ಅಭಿಮನ್ಯುವು ನರವ್ಯಾಘ್ರನಾದ ಚಿತ್ರಸೇನನ ಮೇಲೆ ಹತ್ತು ಬಾಣಗಳನ್ನು ಪ್ರಯೋಗಿಸಿ, ಪುರುಮಿತ್ರನ ಮೇಲೆ ಏಳು ಬಾಣಗಳನ್ನು ಪ್ರಯೋಗಿಸಿದನು. ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ಅವನು ಯುದ್ಧದಲ್ಲಿ ಸತ್ಯವ್ರತನನ್ನು ಎಪ್ಪತ್ತು ಬಾಣಗಳಿಂದ ಹೀಡಿಸಿದನು. ಆ ವೀರನು ನರ್ತನವನ್ನು ಮಾಡುವವನಂತೆ ರಣಭೂಮಿಯಲ್ಲಿ ಸಂಚರಿಸಿ ನಮಗೆಲ್ಲರಿಗೂ ದುಃಖವನ್ನು ಉಂಟುಮಾಡಿದನು.

ತಂ ಪ್ರತ್ಯವಿಧ್ಯದ್ ದಶಭಿಶ್ಚಿತ್ರಸೇನಃ ಶಿಲೀಮುಖೈಃ ।
ಸತ್ಯವ್ರತಶ್ಚ ನವಭಿಃ ಪುರುಮಿತ್ರಶ್ಚ ಸಪ್ತಭಿಃ ॥೨೫॥

ಅದಕ್ಕೆ ಪ್ರತಿಯಾಗಿ ಅವನನ್ನು ಚಿತ್ರಸೇನನು ಶಿಲಾಮುಖವುಳ್ಳ ಹತ್ತು ಬಾಣಗಳಿಂದಲೂ, ಸತ್ಯವ್ರತನು ಒಂಬತ್ತು ಬಾಣಗಳಿಂದಲೂ, ಪುರುಮಿತ್ರನು ಏಳು ಬಾಣಗಳಿಂದಲೂ ಹೊಡೆದರು.

ಸಂವಿದ್ಧೋರಸ್ಥರನ್ ರಕ್ತಂ ಶತ್ರುಸಂವಾರಣಂ ಮಹತ್ ।
ಚಿಚ್ಛೇದ ಚಿತ್ರಸೇನಸ್ಯ ಚಿತ್ರಂ ಕಾರ್ಮುಕಮಾರ್ಜುನಿಃ ।
ಭಿತ್ತ್ವಾ ಚಾಸ್ಯ ತನುತ್ರಾಣಂ ಶರೇಣೋರಸ್ಯಪಾಡಯತ್ ॥೨೬॥

ಗಾಯಗೊಂಡ ವಕ್ಷಸ್ಥಲದಿಂದ ರಕ್ತವು ಸುರಿಯುತ್ತಿದ್ದರೂ ಅರ್ಜುನ ಪುತ್ರನಾದ ಅಭಿಮನ್ಯುವು ಶತ್ರುಸಂಹಾರಕವೂ, ವಿಚಿತ್ರವೂ, ದೊಡ್ಡದೂ ಆದ ಚಿತ್ರಸೇನನ ಬಿಲ್ಲನ್ನು ಕತ್ತರಿಸಿದನು. ಬಾಣಗಳಿಂದ ಅವನ ಕವಚವನ್ನು ಕತ್ತರಿಸಿ, ಅವನ ವಕ್ಷಸ್ಥಲಕ್ಕೆ ಹೊಡೆದನು.

ತತ್ರೇ ತಾವಕಾ ವೀರಾ ರಾಜಪುತ್ರಾ ಮಹಾರಥಾಃ ।
ಸಮೇತ್ಯ ಯುಧಿ ಸಂರಬ್ಧಾ ವಿವ್ಯಧುರ್ನಿತಿತೈಃ ಶರೈಃ ।
ತಾಂಶ್ಚ ಸರ್ವಾನ್ ಶರೈಸ್ತೀಕ್ಷ್ಣೈರ್ಜಘಾನ ಪರಮಾಸ್ತ್ರವಿತ್ ॥೨೭॥

ಆಗ ಮಹಾರಥರೂ, ವೀರರೂ, ನಿನ್ನ ಸೈನ್ಯಕ್ಕೆ ಸೇರಿದವರೂ ಆದ ರಾಜಪುತ್ರರು ರಣರಂಗದಲ್ಲಿ ಒಟ್ಟಾಗಿ ಕೋಪಗೊಂಡು, ತೀಕ್ಷ್ಣವಾದ ಬಾಣಗಳಿಂದ ಅವನನ್ನು ಹಿಂಸಿಸಿದರು. ಪರಮಾಸ್ತ್ರವೇತ್ತನಾದ ಅಭಿಮನ್ಯುವು ಅವರೆಲ್ಲರನ್ನೂ ತೀಕ್ಷ್ಣವಾದ ಬಾಣಗಳಿಂದ ಸಂಹರಿಸಿದನು.

ತಸ್ಯ ದೃಷ್ಟ್ವಾ ತು ತತ್ಕರ್ಮ ಪರಿವವ್ರುಃ ಸುತಾಸ್ತವ ।
ದಹಂತಂ ಸಮರೇ ಸೈನ್ಯಂ ತವ ಕ್ಷಣಂ ಯಥೋಲ್ಬಣಮ್ ॥೨೮॥

ಅಪೇತಶಿಶಿರೇ ಕಾಲೇ ಸಮಿದ್ಧಮಿವ ಪಾವಕಃ ।
ಆತ್ಮದೋಷಾತ್ ಸೌಭದ್ರಸ್ಯ ಸೈನ್ಯಾನಿ ಪಾತಯನ್ ॥೨೯॥

ಬೇಸಿಗೆಯ ಕಾಲದಲ್ಲಿ ವನವನ್ನು ಸುಡುವ ಅಗ್ನಿಯಂತೆ ನಿನ್ನ ಸೈನ್ಯವನ್ನು ಸುಡುತ್ತಿದ್ದ ಅಭಿಮನ್ಯುವಿನ ಆ ಮಹತ್ಕರ್ಮವನ್ನು ನೋಡಿ ಆಗ ನಿನ್ನ ಪುತ್ರರು ಅವನನ್ನು ಸುತ್ತುವರಿದರು. ಸುಭದ್ರೆಯ ಪುತ್ರನಾದ ಅಭಿಮನ್ಯುವು ನಿನ್ನ ಸೈನ್ಯಗಳನ್ನು ನಾಶಪಡಿಸುತ್ತಾ ಬಹಳವಾಗಿ ಕೋಪಿಸಿದನು.

ತತ್ ತಸ್ಯ ಚರಿತಂ ದೃಷ್ಟ್ವಾ ಪೌತ್ರಸ್ಯ ವಿತಾಂಪತೇ ।
ಲಕ್ಷಣೋಽಭ್ಯಪತತ್ ತೂರ್ಣಂ ಸಾತ್ವತೀಪುತ್ರಮಾಹವೇ ॥೩೦॥

ಎಲೈ ರಾಜನೇ, ಅಭಿಮನ್ಯುವಿನ ಆ ಕರ್ಮವನ್ನು ನೋಡಿ ನಿನ್ನ ಪೌತ್ರನಾದ ಲಕ್ಷಣನು ತೀಘ್ರವಾಗಿ ರಣರಂಗದಲ್ಲಿ ಸುಭದ್ರಾ ಪುತ್ರನ ಮೇಲೆ ಎರಗಿದನು.

ಅಭಿಮನ್ಯುಸ್ತು ಸಂಕ್ರುದ್ಧೋ ಲಕ್ಷಣಂ ಶುಭಲಕ್ಷಣಮ್ ।
ವಿವ್ಯಾಧ ಎಭಿಃ ಪಡ್ಭಿಃ ಸಾರಥಿಂ ಚ ತ್ರಿಭಿಃ ಶರೈಃ ॥೩೧॥

ಕೋಪಗೊಂಡ ಅಭಿಮನ್ಯುವಾದರೋ ಶುಭಲಕ್ಷಣಗಳಿಂದ ಕೂಡಿದ ಲಕ್ಷಣನ ಮೇಲೆ ಆರು ಬಾಣಗಳನ್ನು ಪ್ರಯೋಗಿಸಿ ಅವನ ಸಾರಥಿಯ ಮೇಲೆ ಮೂರು ಬಾಣಗಳನ್ನು ಪ್ರಯೋಗಿಸಿದನು.

ತಥೈವ ಲಕ್ಷಣೋ ರಾಜನ್ ಸೌಭದ್ರಂ ನಿಶಿತೈಃ ಶರೈಃ ।
ಅವಿಧ್ಯತ ಮಹಾರಾಜ ತದದ್ಭುತಮಿವಾಭವತ್ ॥೩೨॥

ಎಲೈ ರಾಜನೇ, ಹಾಗೆಯೇ ಲಕ್ಷಣನೂ ಸಹ ಅಭಮನ್ಯುವನ್ನು ತೀಕ್ಷ್ಣವಾದ ಬಾಣಗಳಿಂದ ಹೊಡೆದನು. ಎಲೈ ಮಹಾರಾಜನೇ, ಆ ದೃಶ್ಯವು ಅದ್ಭುತವಾಗಿದ್ದಿತು.

ತಸ್ಯಾಶ್ವಾಂಶ್ಚತುರೋ ಹತ್ವಾ ಸಾರಥಿಂ ಚ ಮಹಾಬಲಃ ।
ಅಭ್ಯದ್ರವತ ಸೌಭದ್ರೋ ಲಕ್ಷಣಂ ನಿಶಿತೈಃ ಶರೈಃ ॥೩೩॥

ಮಹಾಬಲನಾದ ಅಭಮನ್ಯುವು ಲಕ್ಷಣನ ರಥದ ನಾಲ್ಕು ಅಶ್ವಗಳನ್ನು ಮತ್ತು ಸಾರಥಿಯನ್ನು ಕೊಂದು ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸುತ್ತಾ ಅವನ ಕಡೆಗೆ ಧಾವಿಸಿದನು.

ಹತಾಶ್ವೇ ತು ರಥೇ ತಿಷ್ಠನ್ ಲಕ್ಷಣಃ ಪರವೀರಹಾ ।
ಶಕ್ತಿಂ ಚಿಕ್ಷೇಪ ಸಂಕ್ರುದ್ಧಃ ಸೌಭದ್ರಸ್ಯ ರಥಂ ಪ್ರತಿ ॥೩೪॥

ಅಶ್ವಗಳು ಹತವಾದ ರಥದಲ್ಲಿ ನಿಂತ ಪರವೀರಘಾತಕನಾದ ಲಕ್ಷಣನು ಬಹಳ ಕೋಪಗೊಂಡು ಅಭಮನ್ಯುವಿನ ರಥದ ಮೇಲೆ ಶಕ್ತ್ಯಾಯುಧವನ್ನು ಪ್ರಯೋಗಿಸಿದನು.

ತಾಮಾಪತಂತೀಂ ಸಹಸಾ ಘೋರರೂಪಾಂ ದುರಾಸದಾಮ್ ।
ಅಭಮನ್ಯುಃ ಶರೈಸ್ತೀಕ್ಷ್ಣೈಶ್ಚಿಚ್ಛೇದ ಭುಜಗೋಪಮಾಮ್ ॥೩೫॥

ತನ್ನ ಕಡೆಗೆ ಸರ್ಪದಂತೆ ಬರುತ್ತಿದ್ದಂತಹ ಸಮೀಪದಲ್ಲಿ ಸುಳಿಯಲೂ ಅಸಾಧ್ಯವಾದ ಘೋರವಾದ ಆ ಶಕ್ತ್ಯಾಯುಧವನ್ನು ಅಭಮನ್ಯುವು ತೀಕ್ಷ್ಣವಾದ ಬಾಣಗಳಿಂದ ಕತ್ತರಿಸಿದನು.

ತತಃ ಸ್ವರಥಮಾರೋಪ್ಯ ಲಕ್ಷಣಂ ಗೌತಮಸ್ತದಾ ।
ಅಪೋವಾಹ ರಥೇನಾಜೌ ಸರ್ವಸೈನ್ಯಸ್ಯ ಪಶ್ಯತಃ ॥೩೬॥

ಆಗ ಕೃಪಾಚಾರ್ಯರು ಲಕ್ಷಣನನ್ನು ತಮ್ಮ ರಥದಲ್ಲಿ ಏರಿಸಿಕೊಂಡು ಸರ್ವ ಸೈನ್ಯವು ನೋಡುತ್ತಿರುವಂತೆಯೇ ಅವನನ್ನು ರಣರಂಗದಲ್ಲಿ ಬೇರೆ ಕಡೆಗೆ ಕರೆದುಕೊಂಡು ಹೋದರು.

ತತಃ ಸಮಾಕುಲೇ ತಸ್ಮಿನ್ ವರ್ತಮಾನೇ ಮಹಾಭಯೇ ।
ಅಭ್ಯದ್ರವನ್ ಜಿಘಾಂಸಂತಃ ಪರಸ್ಪರವಧೈಷಿಣಃ ॥೩೭॥

ತಾವಕಾಶ್ಚ ಮಹೇಷ್ವಾಸಾಃ ಪಾಂಡವಾಶ್ಚ ಮಹಾರಥಾಃ ।
ಜುಹ್ವಂತಃ ಸಮರೇ ಪ್ರಾಣಾನ್ ನಿಜಘ್ನುರಿತರೇತರಮ್ ॥೩೮॥

ಆಗ ಮಹಾಭಯಂಕರವಾದ ಯುದ್ಧವು ತೀವ್ರಗೊಳ್ಳುತ್ತಿರಲು ಮಹಾಧನುರ್ಧಾರಿಗಳೂ, ಮಹಾರಥರೂ ಆದ ನಿನ್ನವರು ಮತ್ತು ಪಾಂಡವರು ಒಬ್ಬರನ್ನೊಬ್ಬರು ವಧೆ ಮಾಡಲು ಬಯಸಿ ಯುದ್ಧದಲ್ಲಿ ತಮ್ಮ ಪ್ರಾಣಗಳನ್ನು ಹೋಮ ಮಾಡುತ್ತಾ ಪರಸ್ಪರವಾಗಿ ಹೊಡೆದಾಡಿದರು.

ಮುಕ್ತಕೇಶಾ ವಿಕವಚಾ ವಿರಥಾಶ್ಚಿನ್ನಕಾರ್ಮುಕಾಃ ।
ಬಾಹುಭಿಃ ಸಮಯುಧ್ಯಂತ ಸೃಂಜಯಾಃ ಕುರುಭಿಃ ಸಹ ॥೩೯॥

ಕವಚಗಳನ್ನು ಕಳೆದುಕೊಂಡು, ರಥಗಳನ್ನೂ ಕಳೆದುಕೊಂಡು, ಬಿಲ್ಲುಗಳು ಕತ್ತರಿಸಲ್ಪಡುತ್ತಿರಲು ಸೃಂಜಯರು ಮತ್ತು ಕುರುಗಳು ಮುಕ್ತಕೇಶರಾಗಿ ಬಾಹುಗಳಿಂದ ಯುದ್ಧವನ್ನು ಮಾಡಿದರು.

ತತೋ ಭೀಷ್ಮೋ ಮಹಾಬಾಹುಃ ಪಾಂಡವಾನಾಂ ಮಹಾತ್ಮನಾಮ್ ।
ಸೇನಾಂ ಜಘಾನ ಸಂಕ್ರುದ್ಧೋ ದಿವ್ಯೈರಸ್ತ್ರೈರ್ಮಹಾಬಲಃ ॥೪೦॥

ಆಗ ಮಹಾಬಾಹುವೂ ಮತ್ತು ಮಹಾಬಲರೂ ಆದ ಭೀಷ್ಮರು ಮಹಾತ್ಮರಾದ ಪಾಂಡವರ ಸೈನ್ಯವನ್ನು ಬಹಳ ಕೋಪಗೊಂಡು ತಮ್ಮ ದಿವ್ಯಾಸ್ತ್ರಗಳಿಂದ ಹೊಡೆದರು.

ಹತೈರಶ್ವೈರ್ಗಜೈಶ್ಚತ್ರ ನರೈರಶ್ವೈಶ್ಚ ಪಾತಿತೈಃ ।
ರಥಿಭಿಃ ಸಾದಿಭಿಶ್ಚೈವ ಸಮಾಸ್ತೀರ್ಯತ ಮೇದಿನೀ ॥೪೧॥

ಆ ರಣಭೂಮಿಯು ಹತವಾದ ಅಶ್ವಗಳಿಂದಲೂ, ಗಜಗಳಿಂದಲೂ, ಕೆಳಗೆ ಉರುಳಿದ ಯೋಧರಿಂದಲೂ, ರಥಿಕರಿಂದಲೂ, ಅಶ್ವಾರೋಹಿಗಳಿಂದಲೂ ಹರಡಲ್ಪಟ್ಟಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಏಕೋನಸಪ್ತತಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಏಕೋನತ್ರಿಂಶತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಅರವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತನೆಯ ಅಧ್ಯಾಯ

ಭೂರಿಶ್ರವಸಿಂದ ಸಾತ್ಯಕಿಯ ಹತ್ತು ಪುತ್ರರ ವಧೆ. ಭೀಷ್ಮರಿಂದ ಸೈನ್ಯಾವಹಾರ.

ಸಂಜಯಃ

ಅಥ ರಾಜನ್ ಮಹಾಬಾಹುಃ ಸಾತ್ಯಕಿರ್ಯುದ್ಧದುರ್ಮದಃ ।
ವಿಕೃಷ್ಯ ಚಾಪಂ ಸಮರೇ ಭಾರಸಾಧನಮುತ್ತಮಮ್ ॥೧॥

ಪ್ರಾಮುಂಚತ್ ಪುಂಖಸಂಯುಕ್ತಾನ್ ಶರಾನಾಶೀವಿಷೋಪಮಾನ್ ।
ಪ್ರಕಾಶಂ ಲಘು ಚಿತ್ರಂ ಚ ದರ್ಶಯನ್ನಸ್ತ್ರಲಾಘವಮ್ ॥೨॥

ಸಂಜಯ– ಎಲೈ ರಾಜನೇ, ಅನಂತರ ಯುದ್ಧದುರ್ಮದನೂ, ಮಹಾಬಾಹುವೂ ಆದ ಸಾತ್ಯಕಿಯು ರಣರಂಗದಲ್ಲಿ ಶ್ರೇಷ್ಠವಾದ ಮತ್ತು ಮಹತ್ಕಾರ್ಯ ಸಾಧಕವಾದ ತನ್ನ ಬಿಲ್ಲನ್ನು ಬಲವಾಗಿ ಎಳೆದು ತನ್ನ ಅಸ್ತ್ರಕೌಶಲವನ್ನು ತೋರಿಸುತ್ತಾ ಕ್ಷಿಪ್ರವಾಗಿ, ವಿಚಿತ್ರವಾಗಿ ಮತ್ತು ಗಾಢವಾಗಿ ಅನೇಕ ಬಾಣಗಳನ್ನು ಪ್ರಯೋಗಿಸಿದನು.

ತಸ್ಯ ವಿಕ್ಷಿಪತಶ್ಚಾಪಂ ಶರಾನನ್ಯಾಂಶ್ಚ ಮುಂಚತಃ ।
ಆದದಾನಸ್ಯ ಭೂಯಶ್ಚ ಸಂದಧಾನಸ್ಯ ಚಾಪರಾನ್ ॥೩॥

ಕ್ಷಿಪತಶ್ಚ ಶರಾನಸ್ಯ ರಣೇ ಶತ್ರೂನ್ ವಿನಿಘ್ನತಃ ।
ದದೃಶೇ ರೂಪಮತ್ಯರ್ಥಂ ಮೇಘಸ್ಯೇವ ಪ್ರವರ್ಷತಃ ॥೪॥

ಧನುಸ್ಸನ್ನು ಎಳೆಯುವ, ಬಾಣಗಳನ್ನು ಪ್ರಯೋಗಿಸುವ, ಪುನಃ ಬಾಣಗಳನ್ನು ಭತ್ತಳಿಕೆಯಿಂದ ತೆಗೆದುಕೊಳ್ಳುವ, ಆ ಬಾಣಗಳನ್ನು ಧನುಸ್ಸಿನಲ್ಲಿ ಹೂಡುವ ಮತ್ತು ಆ ಬಾಣಗಳನ್ನು ರಣರಂಗದಲ್ಲಿ ಪ್ರಯೋಗಿಸಿ ಶತ್ರುಗಳನ್ನು ಕೊಲ್ಲುವ ಅವನ ರೂಪವು ಮಳೆಯನ್ನು ಸುರಿಸುವ ಮೇಘದ ರೂಪದಂತೆ ಇದ್ದಿತು.

ತಮುದೀರ್ಯಂತಮಾಲೋಕ್ಯ ರಾಜಾ ದುರ್ಯೋಧನಸ್ತತಃ ।
ರಥಾನಾಮಯುತಂ ತಸ್ಯ ಪ್ರೇಷಯಾಮಾಸ ಭಾರತ ॥೫॥

ಎಲೈ ಭಾರತನೇ, ಯುದ್ಧದಲ್ಲಿ ವಿಜೃಂಭಿಸುವ ಅವನನ್ನು ನೋಡಿ ನಿನ್ನ ಪುತ್ರನಾದ ದುರ್ಯೋಧನನು ಅವನನ್ನು ಎದುರಿಸಲು ಹತ್ತು ಸಾವಿರ ರಥಗಳನ್ನು ಅವನ ಕಡೆಗೆ ಕಳುಹಿಸಿದನು.

ತಾಂಸ್ತು ಸರ್ವಾನ್ ಮಹೇಷ್ವಾಸಾನ್ ಸಾತ್ಯಕಿಃ ಸತ್ಯವಿಕ್ರಮಃ ।
ಜಘಾನ ಪರಮೇಷ್ವಾಸೋ ದಿವ್ಯೇನಾಸ್ತ್ರೇಣ ವೀರ್ಯವಾನ್ ॥೬॥

ಮಹಾಪರಾಕ್ರಮಶಾಲಿಯಾದ, ಮಹಾವೀರನಾದ, ಶ್ರೇಷ್ಠ ಧನುಸ್ಸನ್ನು ಧರಿಸಿದ ಸಾತ್ಯಕಿಯು ದಿವ್ಯಾಸ್ತ್ರಗಳನ್ನು ಪ್ರಯೋಗಿಸಿ ಅವರೆಲ್ಲರನ್ನೂ ವಧ ಮಾಡಿದನು.

ಸ ಕೃತ್ವಾ ದಾರುಣಂ ಕರ್ಮ ಪ್ರಗೃಹೀತಶರಾಸನಃ ।
ಆಸಸಾದ ತತೋ ವೀರೋ ಭೂರಿಶ್ರವಸಮಾಹವೇ ॥೭॥

ವೀರನಾದ ಅವನು ಇಂತಹ ಘೋರವಾದ ಕಾರ್ಯವನ್ನು ಮಾಡಿ ಕೈಯಲ್ಲಿ ಧನುಸ್ಸನ್ನು ಹಿಡಿದು ರಣರಂಗದಲ್ಲಿ ಭೂರಿಶ್ರವನನ್ನು ಸಮೀಪಿಸಿದನು.

ಸ ಹಿ ಸಂದೃಶ್ಯ ಸೇನಾಂ ತಾಂ ಯುಯುಧಾನೇನ ಹಾತಿತಾಮ್ ।
ಅಭ್ಯಧಾವತ ಸಂಕ್ರುದ್ಧಃ ಕುರೂಣಾಂ ಕೀರ್ತಿವರ್ಧನಃ ॥೮॥

ಕುರುವಂಶದ ಕೀರ್ತಿವರ್ಧನನಾದ ಭೂರಿಶ್ರವನು ಸಾತ್ಯಕಿಯಿಂದ ಹತವಾದ ಆ ಸೈನ್ಯವನ್ನು ನೋಡಿ ಸಾತ್ಯಕಿಯ ಕಡೆಗೆ ಕ್ರೋಧದಿಂದ ವೇಗವಾಗಿ ಸಾಗಿದನು.

ಇಂದ್ರಾಯುಧಸವರ್ಣಂ ತತ್ ಸ ವಿಸ್ಫಾರ್ಯ ಮಹದ್ಧನುಃ ।
ವ್ಯಸೃಜದ್ ವಜ್ರಸಂಕಾಶಾನ್ ಶರಾನಾಶೀವಿಷೋಪಮಾನ್ ।
ಸಹಸ್ರಶೋ ಮಹಾರಾಜ ದರ್ಶಯನ್ ಪಾಣಿಲಾಘವಮ್ ॥೯॥

ಎಲೈ ಮಹಾರಾಜನೇ, ಭೂರಿಶ್ರವನು ಇಂದ್ರನ ವಜ್ರಾಯುಧಕ್ಕೆ ಸಮಾನವಾದ ಕಾಂತಿಯನ್ನು ಹೊಂದಿದ ದೊಡ್ಡ ಧನುಸ್ಸನ್ನು ಎಳೆಯುತ್ತಾ ತನ್ನ ಹಸ್ತಲಾಘವವನ್ನು ತೋರಿಸುತ್ತಾ ವಜ್ರಾಯುಧದಂತಿದ್ದ, ಸರ್ಪಗಳಂತಿದ್ದ ಸಹಸ್ರಾರು ಸಂಖ್ಯೆಯ ಬಾಣಗಳನ್ನು ಪ್ರಯೋಗಿಸಿದನು.

ಶರಾಂಸ್ತಾನ್ ಮೃತ್ಯುಸಂಸ್ಪರ್ಶಾನ್ ಸಾತ್ಯಕೇಸ್ತು ಪದಾನುಗಾಃ ।
ನ ವಿಷೇಹುಸ್ತದಾ ರಾಜನ್ ದುದ್ರುವುಸ್ತೇ ಸಮಂತತಃ ।
ವಿಹಾಯ ಸಮರೇ ರಾಜನ್ ಸಾತ್ಯಕಿಂ ಯುದ್ಧದುರ್ಮದಮ್ ॥೧೦॥

ಎಲೈ ರಾಜನೇ, ಮೃತ್ಯುವಿನಂತಿದ್ದ ಆ ಬಾಣಗಳನ್ನು ಸಾತ್ಯಕಿಯ ಅನುಯಾಯಿಗಳು ಸಹಿಸಲು ಸಾಧ್ಯವಾಗಲಿಲ್ಲ. ರಾಜನೇ, ಅವರು ರಣರಂಗದಲ್ಲಿ ಯುದ್ಧದುರ್ಮದನಾದ ಸಾತ್ಯಕಿಯನ್ನು ಬಿಟ್ಟು ಎಲ್ಲ ದಿಕ್ಕುಗಳಲ್ಲಿಯೂ ಓಡಿಹೋದರು.

ತಂ ದೃಷ್ಟ್ವಾ ಯುಯುಧಾನಸ್ಯ ಸುತಾ ದಶ ಮಹಾಬಲಾಃ ।
ಮಹಾರಥಾಃ ಸಮಾಖ್ಯಾತಾಶ್ಚಿತ್ರವರ್ಮಾಯುಧಧ್ವಜಾಃ ॥೧೧॥

ಸಮಾಸಾದ್ಯ ಮಹೇಷ್ವಾಸಂ ಭೂರಿಶ್ರವಸಮಾಹವೇ ।
ಊಚುಃ ಸರ್ವೇ ಸುಸಂರಬ್ಧಾ ಯೂಪಕೇತುಂ ಮಹಾರಣೇ ॥೧೨॥

ಅದನ್ನು ನೋಡಿ ಮಹಾಬಲರೂ, ಮಹಾರಥರೆಂದು ಪ್ರಸಿದ್ಧರಾದವರೂ, ವಿಚಿತ್ರವಾದ ಕವಚ, ಆಯುಧ ಮತ್ತು ಧ್ವಜಗಳನ್ನು ಹೊಂದಿದವರೂ ಆದ ಸಾತ್ಯಕಿಯ ಹತ್ತು ಪುತ್ರರು ಆ ಮಹಾಯುದ್ಧದಲ್ಲಿ ಮಹಾಧನುರ್ಧಾರಿಯಾದ ಯೂಪಧ್ವಜನಾದ ಭೂರಿಶ್ರವನನ್ನು ಸಮೀಪಿಸಿ ಎಲ್ಲರೂ ಕೋಪಗೊಂಡು ಅವನನ್ನು ಕುರಿತು ಹೇಳಿದರು.

ಭೋ ಭೋ ಕೌರವದಾಯಾದ ಸಹಾಸ್ಮಾಭಿರ್ಮಹಾಬಲ ।
ಏಹಿ ಯುಧ್ಯಸ್ವ ಸಂಗ್ರಾಮೇ ಸಮಸ್ತೈಃ ಪೃಥಗೇವ ವಾ ॥೧೩॥

ಎಲೈ ಕೌರವ ದಾಯಾದನೇ, ಮಹಾಬಲನೇ, ನಮ್ಮ ಜೊತೆಯಲ್ಲಿ ಯುದ್ಧಕ್ಕೆ ಬಾ. ನಮ್ಮಲ್ಲಿ ಒಬ್ಬೊಬ್ಬರ ಜೊತೆಯಲ್ಲಿ ಅಥವಾ ಎಲ್ಲರ ಜೊತೆಯಲ್ಲಿ ಒಟ್ಟಿಗೆ ಯುದ್ಧವನ್ನು ಮಾಡುವವನಾಗು.

ಅಸ್ಮಾನ್ ವಾ ತ್ವಂ ಪರಾಜಿತ್ಯ ಯಶಃ ಪ್ರಾಪ್ನುಹಿ ಸಂಯುಗೇ ।
ವಯಂ ವಾ ತ್ವಾಂ ಪರಾಜಿತ್ಯ ಪ್ರೀತಿಂ ದಾಸ್ಯಾಮಹೇ ಪಿತುಃ ॥೧೪॥

ಯುದ್ಧದಲ್ಲಿ ನಮ್ಮನ್ನಾದರೂ ಸೋಲಿಸಿ ನೀನು ಕೀರ್ತಿಯನ್ನು ಪಡೆಯುವವನಾಗು ಅಥವಾ ನಾವಾದರೂ ನಿನ್ನನ್ನು ಸೋಲಿಸಿ ನಮ್ಮ ತಂದೆಗೆ ಸಂತೋಷವನ್ನು ಉಂಟುಮಾಡುವೆವು.

ಏವಮುಕ್ತಸ್ತದಾ ಶೂರೈಸ್ತಾನುವಾಚ ಮಹಾಬಲಃ ।
ವೀರ್ಯಶ್ಲಾಘೀ ನರಶ್ರೇಷ್ಠಸ್ತಾನ್ ದೃಷ್ಟ್ವಾ ಸಮುಪಸ್ಥಿತಾನ್ ॥೧೫॥

ಹೀಗೆ ಆ ಶೂರರಿಂದ ಹೇಳಲ್ಪಟ್ಟ ಮಹಾಬಲನೂ, ಪರಾಕ್ರಮವನ್ನು ಪ್ರಶಂಸಿಸುವವನೂ, ನರಶ್ರೇಷ್ಠನೂ ಆದ ಭೂರಿಶ್ರವನು ಸಾತ್ಯಕಿಯ ಪುತ್ರರು ತನ್ನನ್ನು ಸಮೀಪಿಸಿರುವುದನ್ನು ನೋಡಿ ಅವರಿಗೆ ಹೇಳಿದನು.

ಸಾಧ್ವಿದಂ ಕಥ್ಯತೇ ವೀರಾ ಯದೇವಂ ಮತಿರದ್ಯ ವಃ ।
ಯುಧ್ಯಧ್ವಂ ಸಹಿತಾ ಯತ್ತಾ ನಿಹನಿಷ್ಯಾಮಿ ವೋ ರಣೇ ॥೧೬॥

ಎಲೈ ವೀರರೇ, ಇಂತಹ ಒಳ್ಳೆಯ ಮಾತುಗಳನ್ನು ಆಡುತ್ತಿರುವುದರಿಂದ ಈ ದಿನ ನಿಮ್ಮ ಬುದ್ಧಿಯು ಸರಿಯಾಗಿದೆ. ಎಲ್ಲರೂ ಎಚ್ಚರಿಕೆಯಿಂದ ನನ್ನ ಜೊತೆಯಲ್ಲಿ ಯುದ್ಧವನ್ನು ಮಾಡಿ. ಯುದ್ಧದಲ್ಲಿ ನಾನು ನಿಮ್ಮನ್ನು ಕೊಲ್ಲುವೆನು.

ಏವಮುಕ್ತಾ ಮಹೇಷ್ವಾಸಾಸ್ತೇ ವೀರಾಃ ಕ್ಷಿಪ್ರಕಾರಿಣಃ ।
ಮಹತಾ ಶರವರ್ಷೇಣ ಅಭ್ಯವರ್ಷನ್ನರಿಂದಮಮ್ ॥೧೭॥

ಹೀಗೆ ಹೇಳಲ್ಪಟ್ಟ ಮಹಾಧನುರ್ಧಾರಿಗಳೂ, ವೀರರೂ, ಕ್ಷಿಪ್ರಹಸ್ತರೂ ಆದ ಸಾತ್ಯಕಿಯ ಪುತ್ರರು ಅರಿಂದಮನಾದ ಭೂರಿಶ್ರವನ ಮೇಲೆ ಬಾಣಗಳ ದೊಡ್ಡ ಮಳೆಯನ್ನು ಸುರಿಸಿದರು.

ಅಪರಾಹ್ಣೇ ಮಹಾರಾಜ ಸಂಗ್ರಾಮಸ್ತುಮುಲೋಽಭವತ್ ।
ಏಕಸ್ಯ ಚ ಬಹೂನಾಂ ಚ ಸಮೇತಾನಾಂ ರಣಾಜಿರೇ ॥೧೮॥

ಎಲೈ ಮಹಾರಾಜನೇ, ರಣರಂಗದಲ್ಲಿ ಒಬ್ಬನಿಗೂ ಮತ್ತು ಅನೇಕರಿಗೂ ಪರಸ್ಪರವಾಗಿ ಎದುರಿಸಿ ನಡೆದ ಯುದ್ಧವು ಮಧ್ಯಾಹ್ನ ಕಾಲದಲ್ಲಿ ತೀವ್ರಗೊಂಡಿತು.

ತಮೇಕಂ ರಥಿನಾಂ ಶ್ರೇಷ್ಠಂ ಶರವರ್ಷೈರವಾಕಿರನ್ ।
ಪ್ರಾವೃಷೀವ ಮಹಾಶೈಲಂ ಸಿಷಿಚುರ್ಜಲದಾ ನೃಪ ॥೧೯॥

ಎಲೈ ರಾಜನೇ, ಮಳೆಗಾಲದಲ್ಲಿ ಮೋಡಗಳು ದೊಡ್ಡ ಪರ್ವತದ ಮೇಲೆ ಮಳೆಯನ್ನು ಸುರಿಸಿದಂತೆ ರಥಿಶ್ರೇಷ್ಠನಾದ ಭೂರಿಶ್ರವನೊಬ್ಬನ ಮೇಲೆ ಸಾತ್ಯಕಿಯ ಪುತ್ರರು ಬಾಣಗಳ ಮಳೆಯನ್ನು ಸುರಿಸಿದರು.

ತೈಸ್ತು ಮುಕ್ತಾನ್ ಶರೌಘಾಂಸ್ತಾನ್ ಯಮದಂಡಾಶನಿಪ್ರಭಾನ್ ।
ಅಸಂಪ್ರಾಪ್ತಾನಸಂಪ್ರಾಪ್ತಾಂಶ್ಚಿಚ್ಛೇದಾಶು ಮಹಾರಥಃ ॥೨೦॥

ಮಹಾರಥನಾದ ಭೂರಿಶ್ರವನು ಅವರು ಪ್ರಯೋಗಿಸಿದ ಯಮದಂಡವನ್ನು ಮತ್ತು ಇಂದ್ರನ ವಜ್ರಾಯುಧವನ್ನು ಹೋಲುವ ಆ ಬಾಣಗಳ ಸಮೂಹಗಳನ್ನು ತನ್ನ ಸಮೀಪಕ್ಕೆ ಬರುವುದಕ್ಕಿಂತ ಮೊದಲೇ ಶೀಘ್ರವಾಗಿ ಕತ್ತರಿಸಿದನು.

ತತ್ರಾದ್ಭುತಮಪಶ್ಯಾಮ ಸೌಮದತ್ತೇಃ ಪರಾಕ್ರಮಮ್ ।
ಯದೇಕೋ ಬಹುಭಿರ್ಯುದ್ಧೇ ಸಮಸಜ್ಜದಭೀತವತ್ ॥೨೧॥

ಒಬ್ಬನೇ ರಣರಂಗದಲ್ಲಿ ನಿರ್ಭಯನಾಗಿ ಅನೇಕರ ಜೊತೆಯಲ್ಲಿ ಸೆಣಸಾಡಿದ ಭೂರಿಶ್ರವನ ಅದ್ಭುತವಾದ ಪರಾಕ್ರಮವನ್ನು ನಾವು ಅಲ್ಲಿ ನೋಡಿದೆವು.

ವಿಸೃಜ್ಯ ಶರವೃಷ್ಟಿಂ ತಾಂ ದಶ ರಾಜನ್ ಮಹಾರಥಾಃ ।
ಪರಿವಾರ್ಯ ಮಹಾಬಾಹುಂ ನಿಹಂತುಮುಪಚಕ್ರಮುಃ ॥೨೨॥

ಎಲೈ ರಾಜನೇ, ಮಹಾರಥರಾದ ಆ ಹತ್ತು ಸಾತ್ಯಕಿಯ ಪುತ್ರರು ಮಹಾಬಾಹುವಾದ ಭೂರಿಶ್ರವನನ್ನು ಸುತ್ತುವರಿದು ಅವನ ಮೇಲೆ ಬಾಣಗಳ ಮಳೆಯನ್ನು ಸುರಿಸುತ್ತಾ ಅವನನ್ನು ಕೊಲ್ಲಲು ಉದ್ಯುಕ್ತರಾದರು.

ಸೌಮದತ್ತಿಸ್ತತಃ ಕ್ರುದ್ಧಸ್ತೇಷಾಂ ಚಾಪಾನಿ ಭಾರತ ।
ಚಿಚ್ಛೇದ ದಶಭಿರ್ಬಾಣೈರ್ನಿಮೇಷೇಣ ಮಹಾರಥಃ ॥೨೩॥

ಎಲೈ ಭಾರತನೇ, ಆಗ ಸೋಮದತ್ತನ ಮಗನಾದ ಮಹಾರಥನಾದ ಭೂರಿಶ್ರವನು ಕೋಪಗೊಂಡು ಹತ್ತುಬಾಣಗಳನ್ನು ಪ್ರಯೋಗಿಸಿ ಅವರ ಧನುಸ್ಸುಗಳನ್ನು ಕತ್ತರಿಸಿದನು.

ಅಥೈಷಾಂ ಛಿನ್ನಧನುಷಾಂ ಭಲ್ಲೈಃ ಸನ್ನತಪರ್ವಭಿಃ ।
ಚಿಚ್ಛೇದ ಸಮರೇ ರಾಜನ್ ಶಿರಾಂಸಿ ನಿಶಿತೈಃ ಶರೈಃ ।
ತೇ ಹತಾ ನ್ಯಪತನ್ ಭೂಮೌ ವಜ್ರಭಗ್ನಾ ಇವ ದ್ರುಮಾಃ ॥೨೪॥

ಅನಂತರ ಅವನು ಬಾಗಿದ ತುದಿಯುಳ್ಳ ಭಲ್ಲಗಳನ್ನು ತೆಗೆದುಕೊಂಡು ಎಲೈ ರಾಜನೇ, ತಮ್ಮ ಧನುಸ್ಸುಗಳು ಕತ್ತರಿಸಲ್ಪಟ್ಟಿದ್ದ ಅವರ ಶಿರಸ್ಸನ್ನು ಕತ್ತರಿಸಿದನು. ಎಲೈ

ರಾಜನೇ, ಹರಿತವಾದ ಬಾಣಗಳಿಂದ ಹೊಡೆಯಲ್ಪಟ್ಟ ಅವರು ಸಿಡಿಲು ಎರಗಿದ ವೃಕ್ಷಗಳಂತೆ ಭೂಮಿಯ ಮೇಲೆ ಸತ್ತುಬಿದ್ದರು.

ತಾನ್ ದೃಷ್ಟ್ವಾ ನಿಹತಾನ್ ವೀರಾನ್ ರಣೇ ಪುತ್ರಾನ್ ಮಹಾಬಲಾನ್।
ವಾರ್ಷ್ಣೇಯೋ ವಿನದನ್ ರಾಜನ್ ಭೂರಿಶ್ರವಸಮಭ್ಯಯಾತ್ ॥೨೫॥

ವೀರರೂ, ಮಹಾಬಲರೂ ಆದ ತನ್ನ ಪುತ್ರರು ಯುದ್ಧದಲ್ಲಿ ಹತರಾದುದನ್ನು ನೋಡಿ ಎಲೈ ರಾಜನೇ, ಸಾತ್ಯಕಿಯು ಸಿಂಹನಾದವನ್ನು ಮಾಡುತ್ತ ಭೂರಿಶ್ರವನ ಮೇಲೆ ಎರಗಿದನು.

ರಥಂ ರಥೇನ ಸಮರೇ ಪೀಡಯಿತ್ವಾ ಮಹಾಬಲೌ ।
ತಾವನ್ಯೋನ್ಯಸ್ಯ ಸಮರೇ ನಿಹತ್ಯ ರಥವಾಜಿನಃ ।
ವಿರಥಾವಭವಲ್ಲಂತೌ ಸಮೇಯಾತಾಂ ಮಹಾರಥೌ ॥೨೬॥

ಮಹಾಬಲರಾದ ಅವರಿಬ್ಬರು ರಥಗಳನ್ನು ಪರಸ್ಪರವಾಗಿ ಪೀಡಿಸಿ, ರಥದ ಕುದುರೆಗಳನ್ನು ಪರಸ್ಪರವಾಗಿ ಕೊಂದು, ಮಹಾರಥರಾದ ಅವರಿಬ್ಬರೂ ರಥವಿಲ್ಲದೆ ರಥಗಳಿಂದ ಹಾರಿ ಆರ್ಭಟಿಸುತ್ತಾ ಒಬ್ಬರನ್ನೊಬ್ಬರು ಎದುರಿಸಿದರು.

ಪ್ರಗೃಹೀತಮಹಾಖಡ್ಗೌ ತೌ ಚರ್ಮವರಧಾರಿಣೌ ।
ಶುಶುಭಾತೇ ನರವ್ಯಾಘ್ರೌ ಯುದ್ಧಾಯ ಸಮವಸ್ಥಿತೌ ॥೨೭॥

ನರಶ್ರೇಷ್ಠರಾದ ಅವರಿಬ್ಬರು ಕೈಯಲ್ಲಿ ದೊಡ್ಡ ಖಡ್ಗವನ್ನು ಮತ್ತು ಶ್ರೇಷ್ಠವಾದ ಗುರಾಣಿಯನ್ನು ಹಿಡಿದು ಯುದ್ಧಕ್ಕೆ ಉದ್ಯುಕ್ತರಾಗಿ ಶೋಭಿಸಿದರು.

ತತಃ ಸಾತ್ಯಕಿಮಭ್ಯೇತ್ಯ ನಿಸ್ತ್ರಿಂಶವರಧಾರಿಣಮ್ ।
ಭೀಮಸೇನಸ್ತ್ವರನ್ ರಾಜನ್ ರಥಮಾರೋಪಯತ್ ತದಾ ॥೨೮॥

ಎಲೈ ರಾಜನೇ, ಆಗ ಶ್ರೇಷ್ಠವಾದ ಖಡ್ಗವನ್ನು ಹಿಡಿದ ಸಾತ್ಯಕಿಯ ಕಡೆಗೆ ಭೀಮಸೇನನು ಜಾಗ್ರತೆಯಾಗಿ ಬಂದು ಅವನನ್ನು ತನ್ನ ರಥಕ್ಕೆ ಏರಿಸಿದನು.

ತವಾಪಿ ತನಯೋ ರಾಜನ್ ಭೂರಿಶ್ರವಸಮಾಹವೇ ।
ಆರೋಪಯದ್ ರಥಂ ತೂರ್ಣಂ ಪಶ್ಯತಾಂ ಸರ್ವಧನ್ವಿನಾಮ್ ॥೨೯॥

ಎಲೈ ರಾಜನೇ, ನಿನ್ನ ಪುತ್ರನಾದ ದುರ್ಯೋಧನನೂ ಸಹ ರಣರಂಗದಲ್ಲಿ ಭೂರಿಶ್ರವನನ್ನು ತನ್ನ ರಥದಲ್ಲಿ ಎಲ್ಲ ಧನುರ್ಧಾರಿಗಳು ನೋಡುತ್ತಿರುವಂತೆಯೇ ಶೀಘ್ರವಾಗಿ ಎರಿಸಿಕೊಂಡನು.

ತಸ್ಮಿಂಸ್ತಥಾ ವರ್ತಮಾನೇ ರಣೇ ಭೀಷ್ಮಂ ಮಹಾರಥಮ್ ।
ಅಯೋಧಯಂತ ಸಂರಬ್ಧಾಃ ಪಾಂಡವಾ ಭರತರ್ಷಭ ॥೩೦॥

ಎಲೈ ಭರತಶ್ರೇಷ್ಠನೇ, ಯುದ್ಧವು ಹಾಗೆ ನಡೆಯುತ್ತಿರಲು ಇತ್ತ ಕಡೆ ಮಹಾರಥರಾದ ಭೀಷ್ಮರ ಜೊತೆಯಲ್ಲಿ ಪಾಂಡವರೆಲ್ಲರೂ ಕೋಪಗೊಂಡು ಯುದ್ಧವನ್ನು ಮಾಡಿದರು.

ಲೋಹಿತಾಯತಿ ಚಾದಿತ್ಯೇ ತ್ವರಮಾಣೋ ಧನಂಜಯಃ ।
ಪಂಚವಿಂಶತಿಸಾಹಸ್ರಾನ್ ನಿಜಘಾನ ಮಹಾರಥಾನ್ ॥೩೧॥

ಸೂರ್ಯನು ಕೆಂಪು ಬಣ್ಣಕ್ಕೆ ತಿರುಗುತ್ತಿರಲು ಅರ್ಜುನನು ಜಾಗ್ರತೆಯಾಗಿ ಇಪ್ಪತ್ತೈದು ಸಹಸ್ರ ಮಹಾರಥರನ್ನು ಕೊಂದನು.

ತೇ ಹಿ ದುರ್ಯೋಧನಾದಿಷ್ಟಾಸ್ತದಾ ಪಾರ್ಥನಿಬರ್ಹಣೇ ।
ಸಂಪ್ರಾಪ್ಯೈವ ಗತಾ ನಾಶಂ ಶಲಭಾ ಇವ ಪಾವಕಮ್ ॥೩೨॥

ದುರ್ಯೋಧನನ ಆದೇಶದಂತೆ ಅರ್ಜುನನನ್ನು ನಾಶಮಾಡಲು ಅವನ ಬಳಿಗೆ ಬಂದ ಆ ಮಹಾರಥರೆಲ್ಲರೂ ಅಗ್ನಿಯನ್ನು ಸಮೀಪಿಸಿದ ಶಲಭಗಳಂತೆ ಅರ್ಜುನನನ್ನು ಸಮೀಪಿಸಿ ನಾಶವನ್ನು ಹೊಂದಿದರು.

ತತೋ ಮತ್ಸ್ಯಾಃ ಕೇಕಯಾಶ್ಚ ಧನುರ್ವೇದವಿಶಾರದಾಃ ।
ಪರಿವವ್ರುಸ್ತದಾ ಪಾರ್ಥಂ ಸಹಪುತ್ರಂ ಮಹಾರಥಮ್ ॥೩೩॥

ಆಗ ಧನುರ್ವೇದ ವಿಶಾರದರಾದ ಮತ್ಸ್ಯರು ಮತ್ತು ಕೇಕಯರು ಅರ್ಜುನನ ರಕ್ಷಣೆಗಾಗಿ ಬಂದು ಪುತ್ರ ಸಹಿತರಾದ ಮಹಾರಥನಾದ ಅವನನ್ನು ಸುತ್ತುವರಿದರು.

ಏತಸ್ಮಿನ್ನೇವ ಕಾಲೇ ತು ಸೂರ್ಯೇಽಸ್ತಮುಪಗಚ್ಛತಿ ।
ಸರ್ವೇಷಾಮೇವ ಸೈನ್ಯಾನಾಂ ಪ್ರಮೋಹಃ ಸಮಜಾಯತ ॥೩೪॥

ಇದೇ ಕಾಲದಲ್ಲಿ ಸೂರ್ಯನು ಅಸ್ತಂಗತನಾಗುತ್ತಿರಲು ಎಲ್ಲ ಸೈನ್ಯಗಳಿಗೂ ಏನೂ ತಿಳಿಯದಂತಾಯಿತು.

ಅವಹಾರಂ ತತಶ್ಚಕ್ರೇ ಪಿತಾ ದೇವವ್ರತಸ್ತವ ।
ಸಂಧ್ಯಾಕಾಲೇ ಮಹಾರಾಜ ಸೈನ್ಯಾನಾಂ ಶ್ರಾಂತವಾಹನಃ ॥೩೫॥

ಎಲೈ ಮಹಾರಾಜನೇ, ಆ ಸಂಧ್ಯಾಕಾಲದಲ್ಲಿ ಅಶ್ವಗಜಾದಿ ವಾಹನಗಳೆಲ್ಲವೂ ದಣಿದಿರಲು ನಿನ್ನ ತಂದೆಯಾದ ದೇವವ್ರತನು ಸೈನ್ಯಗಳ ಅವಹಾರವನ್ನು ಮಾಡಿದನು.

ಪಾಂಡವಾನಾಂ ಕುರೂಣಾಂ ಚ ಪರಸ್ಪರಸಮಾಗಮೇ ।
ತೇ ಸೇನೇ ಭೃಶಸಂವಿಗ್ನೇ ಯಯತುಃ ಸ್ವಂ ನಿವೇಶನಮ್ ॥೩೬॥

ಪಾಂಡವರ ಮತ್ತು ಕೌರವರ ಪರಸ್ಪರ ಸಮಾಗಮವನ್ನು ಹೊಂದಿದ ಆ ಸೈನ್ಯಗಳು ಬಹಳವಾಗಿ ವೇದನೆಗೊಂಡು ತಮ್ಮ ಶಿಬಿರಗಳಿಗೆ ಹಿಂದಿರುಗಿದವು.

ತತಃ ಸ್ವಶಿಬಿರಂ ಗತ್ವಾ ನ್ಯವಿಶಂಸ್ತತ್ರ ಭಾರತ ।
ಪಾಂಡವಾಃ ಸೃಂಜಯೈಃ ಸಾರ್ಧಂ ಕುರವಶ್ಚ ಯಥಾವಿಧಿ ॥೩೭॥

ಎಲೈ ಭಾರತನೇ, ಅನಂತರ ಪಾಂಡವರು, ಸೃಂಜಯರು, ಕೌರವರು ಎಲ್ಲರೂ ತಮ್ಮ ಶಿಬಿರಗಳಿಗೆ ಹೋಗಿ ಶಾಸ್ತ್ರೋಕ್ತ ರೀತಿಯಲ್ಲಿ ವಿಶ್ರಾಂತಿಯನ್ನು ಪಡೆದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಸಪ್ತತಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಎಪ್ಪತ್ತನೆಯ ಅಧ್ಯಾಯ ಮುಗಿಯಿತು.

ಭೀಷ್ಮರ ಸೇನಾಪತ್ಯದಲ್ಲಿ ಏದನೆಯ ದಿನದ ಯುದ್ಧವು ಮುಗಿಯಿತು.

★ ★ ★ ★ ★

ಎಪ್ಪತ್ತೊಂದನೆಯ ಅಧ್ಯಾಯ

ಆರನೆಯ ದಿವಸದ ಯುದ್ಧದ ಪ್ರಾರಂಭ. ಧೃಷ್ಟದ್ಯುಮ್ನನಿಂದ ಮಕರವ್ಯೂಹದ ಮತ್ತು ಭೀಷ್ಮರಿಂದ ಕ್ರೌಂಚವ್ಯೂಹದ ರಚನೆ. ದ್ರೋಣರ ಪರಾಕ್ರಮ.

ಸಂಜಯಃ

ವಿಹೃತ್ಯ ಚ ತತೋ ರಾಜನ್ ಸಹಿತಾಃ ಕುರುಪಾಂಡವಾಃ ।
ವ್ಯತೀತಾಯಾಂ ತು ಶರ್ವರ್ಯಾಂ ಪುನರ್ಯುದ್ಧಾಯ ನಿರ್ಯಯುಃ ॥

ಸಂಜಯ– ಎಲೈ ರಾಜನೇ, ಕುರು-ಪಾಂಡವರು ಆ ರಾತ್ರಿಯಲ್ಲಿ ಜೊತೆಯಾಗಿ ವಿಹರಿಸಿ ಆ ರಾತ್ರಿಯು ಕಳೆದ ಮೇಲೆ ಪುನಃ ಯುದ್ಧಕ್ಕೆ ಹೊರಟರು.

ತತ್ರ ಶಬ್ದೋ ಮಹಾನಾಸೀತ್ ತವ ತೇಷಾಂ ಚ ಭಾರತ ।
ಯುಜ್ಯತಾಂ ರಥಮುಖ್ಯಾನಾಂ ಕಲ್ಪ್ಯತಾಂ ಚೈವ ದಂತಿನಾಮ್ ॥೨॥

ಸನ್ನಹ್ಯತಾಂ ಪದಾತೀನಾಂ ಹಯಾನಾಂ ಚೈವ ಭಾರತ ।
ಶಂಖದುಂದುಭಿನಾದಶ್ಚ ತುಮುಲಃ ಸರ್ವತೋऽಭವತ್ ॥೩॥

ಎಲೈ ಭಾರತನೇ, ಆಗ ಹೂಡಲ್ಪಡುವ ರಥಗಳಿಂದ, ಅಣಿಗೊಳಿಸಲ್ಪಡುವ ಗಜಗಳಿಂದ, ಕವಚವನ್ನು ಧರಿಸುವ ಪದಾತಿಗಳಿಂದ ಮತ್ತು ಅಶ್ವಗಳಿಂದ ಹಾಗೂ ಶಂಖ-ದುಂದುಭಿ ನಾದಗಳಿಂದ ಎಲ್ಲ ಕಡೆಯಲ್ಲಿಯೂ ನಿನ್ನ ಮತ್ತು ಅವರ ಸೈನ್ಯದಲ್ಲಿ ತೀವ್ರವಾದ ದೊಡ್ಡ ಶಬ್ದ ಉಂಟಾಯಿತು.

ತತೋ ಯುಧಿಷ್ಠಿರೋ ರಾಜಾ ಧೃಷ್ಟದ್ಯುಮ್ನಮಭಾಷತ ।
ವ್ಯೂಹಂ ವ್ಯೂಹ ಮಹಾಬಾಹೋ ಮಕರಂ ಶತ್ರುತಾಪನಮ್ ॥೪॥

ಆಗ ಯುಧಿಷ್ಠಿರ ರಾಜನು ಧೃಷ್ಟದ್ಯುಮ್ನನನ್ನು ಕುರಿತು ಮಹಾಬಾಹುವೇ, ಶತ್ರುಸಂತಾಪಕಾರಿಯಾದ ಮಕರವ್ಯೂಹವನ್ನು ರಚಿಸು ಎಂದು ಹೇಳಿದನು.

ಏವಮುಕ್ತಸ್ತು ಪಾರ್ಥೇನ ಧೃಷ್ಟದ್ಯುಮ್ನೋ ಮಹಾರಥಃ ।
ವ್ಯಾದಿದೇಶ ಮಹಾರಾಜ ರಥಿನೋ ರಥಿನಾಂ ವರಃ ॥೫॥

ಎಲೈ ಮಹಾರಾಜನೇ, ಯುಧಿಷ್ಠಿರನಿಂದ ಹೀಗೆ ಹೇಳಲ್ಪಟ್ಟ ರಥಿಕರಲ್ಲಿ ಶ್ರೇಷ್ಠನಾದ ಮಹಾರಥನಾದ ಧೃಷ್ಟದ್ಯುಮ್ನನು ಉಳಿದ ರಥಿಕರನ್ನು ಕುರಿತು ಆದೇಶವನ್ನು ನೀಡಿದನು.

ಶಿರೋಽಭೂದ್ ದ್ರುಪದಸ್ತಸ್ಯ ಪಾಂಡವಶ್ಚ ಧನಂಜಯಃ ।
ಚಕ್ಷುಷೀ ಸಹದೇವಶ್ಚ ನಕುಲಶ್ಚ ಮಹಾರಥಃ ।
ತುಂಡಮಾಸೀನ್ಮಹಾರಾಜ ಭೀಮಸೇನೋ ಮಹಾಬಲಃ ॥೬॥

ದ್ರುಪದನು ಮತ್ತು ಪಾಂಡುಪುತ್ರನಾದ ಧನಂಜಯನು ಆ ಮಕರದ ಶಿರಸ್ಸಿನ ಸ್ಥಾನದಲ್ಲಿದ್ದರು. ಮಹಾರಥರಾದ ನಕುಲ ಮತ್ತು ಸಹದೇವರು ಆ ಮಕರದ ಕಣ್ಣುಗಳ ಸ್ಥಾನದಲ್ಲಿದ್ದರು. ಎಲೈ ಮಹಾರಾಜನೇ, ಮಹಾಬಲನಾದ ಭೀಮಸೇನನು ವದನದ ಸ್ಥಾನದಲ್ಲಿದ್ದನು.

ಸೌಭದ್ರೋ ದ್ರೌಪದೇಯಾಶ್ಚ ರಾಕ್ಷಸಶ್ಚ ಘಟೋತ್ಕಚಃ ।
ಸಾತ್ಯಕಿರ್ಧರ್ಮರಾಜಶ್ಚ ವ್ಯೂಹಗ್ರೀವಾಂ ಸಮಾಶ್ರಿತಾಃ ॥೭॥

ಅಭಿಮನ್ಯು, ದ್ರೌಪದಿಯ ಐದು ಮಕ್ಕಳು ಮತ್ತು ರಾಕ್ಷಸನಾದ ಘಟೋತ್ಕಚ, ಸಾತ್ಯಕಿ ಮತ್ತು ಧರ್ಮರಾಜ ಇವರು ಆ ವ್ಯೂಹದ ಕತ್ತಿನ ಸ್ಥಾನದಲ್ಲಿ ನಿಂತರು.

ಪೃಷ್ಠಮಾಸೀನ್ಮಹಾರಾಜ ವಿರಾಟೋ ವಾಹಿನೀಪತಿಃ ।
ಧೃಷ್ಟದ್ಯುಮ್ನೇನ ಸಹಿತೋ ಮಹತ್ಯಾ ಸೇನಯಾ ವೃತಃ ॥೮॥

ಎಲೈ ಮಹಾರಾಜನೇ, ಸೇನಾಪತಿಯಾದ ವಿರಾಟನು ಧೃಷ್ಟದ್ಯುಮ್ನನಿಂದ ಸಹಿತನಾಗಿ ದೊಡ್ಡ ಸೈನ್ಯದಿಂದ ಪರಿವೃತನಾಗಿ ಪೃಷ್ಠಭಾಗದಲ್ಲಿದ್ದನು.

ಕೇಕಯಾ ಭ್ರಾತರಃ ಪಂಚ ವಾಮಂ ಪಾರ್ಶ್ವಂ ಸಮಾಶ್ರಿತಾಃ ।
ಧೃಷ್ಟಕೇತುರ್ನರವ್ಯಾಘ್ರಃ ಚೇಕಿತಾನಶ್ಚ ವೀರ್ಯವಾನ್ ।
ದಕ್ಷಿಣಂ ಪಕ್ಷಮಾಶ್ರಿತ್ಯ ಸ್ಥಿತಾ ವ್ಯೂಹಸ್ಯ ರಕ್ಷಣೇ ॥೯॥

ಕೇಕಯ ದೇಶದ ಐವರು ಸಹೋದರರು ಎಡಪಾರ್ಶ್ವವನ್ನು ಆಶ್ರಯಿಸಿದರು. ನರವ್ಯಾಘ್ರನಾದ ಧೃಷ್ಟಕೇತು ಮತ್ತು ಪರಾಕ್ರಮಶಾಲಿಯಾದ ಚೇಕಿತಾನ ಇವರಿಬ್ಬರು ಮಕರದ ದಕ್ಷಿಣ ಪಾರ್ಶ್ವವನ್ನು ಆಶ್ರಯಿಸಿ ವ್ಯೂಹದ ರಕ್ಷಣೆಗಾಗಿ ನಿಂತರು.

ಪಾದಯೋಸ್ತು ಮಹಾರಾಜ ಸ್ಥಿತಃ ಶ್ರೀಮಾನ್ಮಹಾರಥಃ ।
ಕುಂತಿಭೋಜಃ ಶತಾನೀಕೋ ಮಹತ್ಯಾ ಸೇನಯಾ ವೃತಃ ॥೧೦॥

ಎಲೈ ಮಹಾರಾಜನೇ, ಪಾದಗಳ ಸ್ಥಾನದಲ್ಲಿ ಮಹಾರಥನಾದ ಕುಂತಿಭೋಜ ಮತ್ತು ಶತಾನೀಕರು ದೊಡ್ಡ ಸೈನ್ಯದಿಂದ ಸಹಿತರಾಗಿ ನಿಂತರು.

ಶಿಖಂಡೀ ತು ಮಹೇಷ್ವಾಸಃ ಸೋಮಕೈಃ ಸಂವೃತೋ ಬಲೀ ।
ಇರಾವಾಂಶ್ಚ ತತಃ ಪುಚ್ಛೇ ಮಕರಸ್ಯ ವ್ಯವಸ್ಥಿತೌ ॥೧೧॥

ಸೋಮಕ ಸೈನ್ಯದಿಂದ ಪರಿವೃತನಾದ ಬಲಿಷ್ಠನೂ ಮತ್ತು ಮಹಾಧನುರ್ಧಾರಿಯೂ ಆದ ಶಿಖಂಡಿಯೂ ಮತ್ತು ಇರಾವಂತನೂ ಮಕರದ ಬಾಲದ ಭಾಗದಲ್ಲಿ ನಿಂತರು.

ಏವಮೇತನ್ಮಹಾವ್ಯೂಹಂ ವ್ಯೂಹ್ಯ ಭಾರತ ಪಾಂಡವಾಃ ।
ಸೂರ್ಯೋದಯೇ ಮಹಾರಾಜ ಪುನರ್ಯುದ್ಧಾಯ ದಂಶಿತಾಃ ॥೧೨॥

ಎಲೈ ಮಹಾರಾಜನೇ, ಭಾರತನೇ, ಪಾಂಡವರು ಈ ರೀತಿಯಲ್ಲಿ ಮಹಾವ್ಯೂಹವನ್ನು ರಚಿಸಿ ಸೂರ್ಯೋದಯ ಕಾಲಕ್ಕೆ ಪುನಃ ಯುದ್ಧಕ್ಕೆ ಸನ್ನದ್ಧರಾದರು.

ಕೌರವಾನಭ್ಯಯುಸ್ತೂರ್ಣಂ ಹಸ್ತ್ಯಶ್ವರಥಪತ್ತಿಭಿಃ ।
ಸಮುಚ್ಛ್ರಿತೈರ್ಧ್ವಜೈಶ್ಚಿತ್ರೈಃ ಶಸ್ತ್ರೈಶ್ಚ ವಿಮಲೈಃ ಶಿತೈಃ ॥೧೩॥

ಅವರು ಗಜಾಶ್ವರಥಪದಾತಿಗಳಿಂದಲೂ, ಎತ್ತರವಾಗಿದ್ದ, ವಿಚಿತ್ರವಾದ ಧ್ವಜಗಳಿಂದಲೂ, ವಿಮಲವಾದ ಸಾಣೆಯನ್ನು ಹಿಡಿದ ಶಸ್ತ್ರಗಳಿಂದಲೂ ಕೂಡಿದವರಾಗಿ ಶೀಘ್ರವಾಗಿ ಕೌರವರ ಮೇಲೆ ಎರಗಿದರು.

ವ್ಯೂಹಂ ದೃಷ್ಟ್ವಾ ತು ತತ್ಪೈನ್ಯಂ ಪಿತಾ ದೇವವ್ರತಸ್ತವ ।
ಕ್ರೌಂಚೇನ ಮಹತಾ ರಾಜನ್ ಪ್ರತ್ಯವ್ಯೂಹತ ವಾಹಿನೀಮ್ ॥೧೪॥

ಎಲೈ ರಾಜನೇ, ನಿನ್ನ ತಂದೆಯಾದ ಭೀಷ್ಮರು ಪಾಂಡವರು ರಚಿಸಿದ ಆ ವ್ಯೂಹವನ್ನು ನೋಡಿ ಅದಕ್ಕೆ ಪ್ರತಿಯಾಗಿ ನಿನ್ನ ಸೈನ್ಯವನ್ನು ದೊಡ್ಡ ಕ್ರೌಂಚ ವ್ಯೂಹವನ್ನಾಗಿ ರಚಿಸಿದರು.

ತಸ್ಯ ತುಂಡೇ ಮಹೇಷ್ವಾಸೋ ಭಾರದ್ವಾಜೋ ವ್ಯರೋಚತ ।
ಅಶ್ವತ್ಥಾಮಾ ಕೃಪಶ್ಚೈವ ಚಕ್ಷುರಾಸ್ತಾಂ ನರೇಶ್ವರ ॥೧೫॥

ಎಲೈ ರಾಜನೇ, ಆ ಕ್ರೌಂಚವ್ಯೂಹದ ಕೊಕ್ಕಿನ ಸ್ಥಾನದಲ್ಲಿ ದ್ರೋಣರು ಶೋಭಿಸಿದರು. ಅಶ್ವತ್ಥಾಮರು ಮತ್ತು ಕೃಪರು ಅದರ ಕಣ್ಣುಗಳ ಸ್ಥಾನದಲ್ಲಿದ್ದರು.

ಕೃತವರ್ಮಾ ತು ಸಹಿತಃ ಕಾಂಬೋಜಾರಟ್ಟಬಾಹ್ಲೈಃ ।
ಶಿರಸ್ಯಾಸೀನ್ನರಶ್ರೇಷ್ಠಃ ಶ್ರೇಷ್ಠಃ ಸರ್ವಧನುಷ್ಮತಾಮ್ ॥೧೬॥

ಸರ್ವಧನುರ್ಧಾರಿಗಳಲ್ಲಿ ಶ್ರೇಷ್ಠನಾದ, ನರಶ್ರೇಷ್ಠನಾದ ಕೃತವರ್ಮನು ಕಾಂಬೋಜರಿಂದಲೂ, ಅರಟ್ಟರಿಂದಲೂ ಮತ್ತು ಬಾಹ್ಲಿಕರಿಂದಲೂ ಸಹಿತನಾಗಿ ಕ್ರೌಂಚದ ಶಿರಸ್ಸಿನ ಸ್ಥಾನದಲ್ಲಿದ್ದನು.

ಗ್ರೀವಾಯಾಂ ಶೂರಸೇನಸ್ತು ತವ ಪುತ್ರಶ್ಚ ಮಾರಿಷ ।
ದುರ್ಯೋಧನೋ ಮಹಾರಾಜ ರಾಜಭಿರ್ಬಹುಭಿರ್ವೃತಃ ॥೧೭॥

ಎಲೈ ಪೂಜ್ಯನೇ, ಮಹಾರಾಜನೇ, ಅದರ ಕತ್ತಿನ ಸ್ಥಾನದಲ್ಲಿ ಅನೇಕ ರಾಜರಿಂದ ಪರಿವೃತನಾದ ನಿನ್ನ ಪುತ್ರನಾದ ದುರ್ಯೋಧನನು ಮತ್ತು ಶೂರಸೇನನು ಇದ್ದರು.

ಪ್ರಾಗ್ಜ್ಯೋತಿಷಸ್ತು ಸಹಿತಃ ಮದ್ರಸೌವೀರಕೇಕಯೈಃ ।
ಉರಸ್ಯಭೂನ್ನರಶ್ರೇಷ್ಠ ಮಹತ್ಯಾ ಸೇನಯಾ ವೃತಃ ।
ಪಕ್ಷೇ ಚಾಸ್ತಾಂ ಮಹೇಷ್ವಾಸಾವಾವಂತ್ಯೌ ಸಪದಾನುಗೌ ॥೧೮॥

ಎಲೈ ನರಶ್ರೇಷ್ಠನೇ, ಪ್ರಾಗ್ಜ್ಯೋತಿಷಾಧಿಪತಿಯಾದ ಭಗದತ್ತನು ದೊಡ್ಡ ಸೈನ್ಯದಿಂದ ಕೂಡಿಕೊಂಡು ಮದ್ರರಿಂದಲೂ, ಸೌವೀರರಿಂದಲೂ ಮತ್ತು ಕೇಕಯರಿಂದಲೂ ಸಹಿತನಾಗಿ ಆ ಪಕ್ಷಿಯ ಎದೆಯ ಭಾಗದಲ್ಲಿದ್ದನು. ಆ ಸೈನ್ಯದ ಹಿಂಭಾಗದಲ್ಲಿ ಪದಾತಿಗಳಿಂದ ಸಹಿತರಾದ ಮಹಾಧನುರ್ಧಾರಿಗಳಾದ ಅವಂತಿದೇಶದ ಸಹೋದರರಿದ್ದರು.

ಸ್ವಸೇನಯಾ ಚ ಸಹಿತಃ ಸುಶರ್ಮಾ ಪ್ರಸ್ಥಲಾಧಿಪಃ ।
ವಾಮಂ ಪಕ್ಷಂ ಸಮಾಶ್ರಿತ್ಯ ದಂಶಿತಃ ಸಮವಸ್ಥಿತಃ ॥೧೯॥

ಪ್ರಸ್ಥಲಾಧಿಪತಿಯಾದ ಸುಶರ್ಮನು ಸನ್ನದ್ಧನಾಗಿ ತನ್ನ ಸೈನ್ಯದಿಂದ ಸಹಿತನಾಗಿ ಎಡಭಾಗವನ್ನು ಆಶ್ರಯಿಸಿ ನಿಂತನು.

ಶುಷಾರಾ ಯವನಾಶ್ಚೈವ ಶಕಾಶ್ಚ ಸಹ ಚೂಚುಪೈಃ ।
ದಕ್ಷಿಣಂ ಪಕ್ಷಮಾಶ್ರಿತ್ಯ ಸ್ಥಿತಾ ವ್ಯೂಹಸ್ಯ ಭಾರತ ॥೨೦॥

ಎಲೈ ಭಾರತನೇ, ಶುಷಾರರು, ಯವನರು, ಶಕರು ಮತ್ತು ಚೂಚುಪರು ವ್ಯೂಹದ ಬಲಭಾಗವನ್ನು ಆಶ್ರಯಿಸಿ ನಿಂತರು.

ಶ್ರುತಾಯುಶ್ಚ ಶತಾಯುಶ್ಚ ಸೌಮದತ್ತಿಶ್ಚ ಮಾರಿಷ ।
ವ್ಯೂಹಸ್ಯ ಜಘನೇ ತಸ್ಮೂ ರಕ್ಷಮಾಣಾಃ ಪರಸ್ಪರಮ್ ॥೨೧॥

ಎಲೈ ಪೂಜ್ಯನೇ, ಶ್ರುತಾಯು, ಶತಾಯು ಮತ್ತು ಭೂರಿಶ್ರವ ಇವರು ಪರಸ್ಪರವಾಗಿ ರಕ್ಷಣೆಯನ್ನು ಮಾಡುತ್ತ ವ್ಯೂಹದ ಹಿಂಭಾಗದಲ್ಲಿದ್ದರು.

ತತೋ ಯುದ್ಧಾಯ ಸಂಜಗ್ಮುಃ ಪಾಂಡವಾಃ ಕೌರವೈಃ ಸಹ ।
ಸೂರ್ಯೋದಯೇ ಮಹಾರಾಜ ತತೋ ಯುದ್ಧಮಭೂನ್ಮಹತ್ ॥೨೨॥

ಎಲೈ ಮಹಾರಾಜನೇ, ಸೂರ್ಯೋದಯವಾಗುತ್ತಿರಲು ಪಾಂಡವರು ಮತ್ತು ಕೌರವರು ಯುದ್ಧಕ್ಕಾಗಿ ಮುನ್ನುಗ್ಗಿದರು. ಅನಂತರ ದೊಡ್ಡಯುದ್ಧವು ನಡೆಯಿತು.

ಪ್ರತೀಯೂ ರಥಿನೋ ನಾಗಾನ್ ನಾಗಾಶ್ಚ ರಥಿನೋ ಯಯುಃ ।
ಹಯಾರೋಹಾ ಹಯಾರೋಹಾನ್ ರಥಿನಶ್ಚಾಪಿ ಸಾದಿನಃ ॥೨೩॥

ರಥಿಕರು ಗಜಗಳ ಮೇಲೆಯೂ, ಗಜಗಳು ರಥಿಕರ ಮೇಲೆಯೂ ಎರಗಿದವು. ಅಶ್ವಾರೋಹಿಗಳು ಅಶ್ವಾರೋಹಿಗಳನ್ನೂ, ರಥಿಕರು ಅಶ್ವಾರೋಹಿಗಳನ್ನೂ ಎದುರಿಸಿದರು.

ಸಾರಥಿಂ ಚ ರಥೀ ರಾಜನ್ ಕುಂಜರಾಂಶ್ಚ ಮಹಾರಣೇ ।
ಹಸ್ತ್ಯಾರೋಹಾ ರಥಾರೋಹಾನ್ ರಥಿನಶ್ಚಾಪಿ ಸಾದಿನಃ ॥೨೪॥

ಎಲೈ ರಾಜನೇ, ರಥಿಕರು ಸಾರಥಿಯನ್ನು ಮತ್ತು ಗಜಗಳನ್ನು ಆ ಮಹಾಯುದ್ಧದಲ್ಲಿ ರಕ್ಷಿಸಿದರು. ಗಜಾರೋಹಿಗಳು ರಥಾರೋಹಿಗಳನ್ನು, ರಥಾರೋಹಿಗಳಾದವರು ಅಶ್ವಾರೋಹಿಗಳನ್ನು ಎದುರಿಸಿದರು.

ರಥಿನಃ ಪತ್ತಿಭಿಃ ಸಾರ್ಧಂ ಸಾದಿನಶ್ಚಾಪಿ ಪತ್ತಿಭಿಃ ।
ಅನ್ಯೋನ್ಯಂ ಸಮರೇ ರಾಜನ್ ಪ್ರತ್ಯಧಾವನ್ತಮರ್ಷಿತಾಃ ॥೨೫॥

ಎಲೈ ರಾಜನೇ, ರಥಿಕರು ಪದಾತಿಗಳ ಮೇಲೆಯೂ, ಅಶ್ವಾರೋಹಿಗಳು ಪದಾತಿಗಳ ಮೇಲೆಯೂ ಕೋಪದಿಂದ ಕೂಡಿದವರಾಗಿ ರಣರಂಗದಲ್ಲಿ ಪರಸ್ಪರವಾಗಿ ಎರಗಿದರು.

ಭೀಮಸೇನಾರ್ಜುನಯಮೈರ್ಗುಪ್ತಾ ಚಾನ್ಯೈರ್ಮಹಾರಥೈಃ ।
ಶುಶುಭೇ ಪಾಂಡವೀ ಸೇನಾ ನಕ್ಷತ್ರೈರಿವ ಶರ್ವರೀ ॥೨೬॥

ಭೀಮಸೇನ, ಅರ್ಜುನ, ನಕುಲ-ಸಹದೇವರಿಂದಲೂ ಮತ್ತು ಬೇರೆ ಮಹಾರಥರಿಂದಲೂ ಸುರಕ್ಷಿತವಾದ ಪಾಂಡವ ಸೇನೆಯು ನಕ್ಷತ್ರದಿಂದ ಕೂಡಿದ ರಾತ್ರಿಯಂತೆ ಮೆರೆಯಿತು.

ತಥಾ ಭೀಷ್ಮಕೃಪದ್ರೋಣಶಲ್ಯದುರ್ಯೋಧನಾದಿಭಿಃ ।
ತವಾಪಿ ವಿಬಭೌ ಸೇನಾ ಗ್ರಹೈರ್ದ್ಯೌರಿವ ಸಂವೃತಾ ॥೨೭॥

ಅದರಂತೆ ಭೀಷ್ಮ, ಕೃಪ, ದ್ರೋಣ, ಶಲ್ಯ ಮತ್ತು ದುರ್ಯೋಧನಾದಿಗಳಿಂದ ರಕ್ಷಿತವಾದ ನಿನ್ನ ಸೈನ್ಯವೂ ಸಹ ಗ್ರಹಗಳಿಂದ ಕೂಡಿದ ಆಕಾಶದಂತೆ ಶೋಭಿಸಿತು.

ಭೀಮಸೇನಸ್ತು ಕೌಂತೇಯೋ ದ್ರೋಣಂ ದೃಷ್ಟ್ವಾ ಪರಾಕ್ರಮೀ ।
ಅಭ್ಯಯಾದ್ವವನೈರಶ್ವೈರ್ಭಾರದ್ವಾಜಸ್ಯ ವಾಹಿನೀಮ್ ॥೨೮॥

ಪರಾಕ್ರಮಶಾಲಿಯಾದ ಕುಂತೀಪುತ್ರನಾದ ಭೀಮಸೇನನಾದರೋ ದ್ರೋಣರನ್ನು ನೋಡಿ ವೇಗಶಾಲಿಗಳಾದ ಅಶ್ವಗಳಿಂದ ಅವರ ಸೈನ್ಯದ ಕಡೆಗೆ ಹೋದನು.

ದ್ರೋಣಸ್ತು ಸಮರೇ ಕ್ರುದ್ಧೋ ಭೀಮಂ ನವಭಿರಾಯಸೈಃ ।
ವಿವ್ಯಾಧ ಸಮರೇ ರಾಜನ್ ಮರ್ಮಾಣ್ಯುದ್ದಿಶ್ಯ ವೀರ್ಯವಾನ್ ॥೨೯॥

ಎಲೈ ರಾಜನೇ, ಪರಾಕ್ರಮಶಾಲಿಗಳಾದ ದ್ರೋಣರು ರಣರಂಗದಲ್ಲಿ ಕ್ರುದ್ಧರಾಗಿ ಕಬ್ಬಿಣದ ಒಂಭತ್ತು ಬಾಣಗಳಿಂದ ಭೀಮನನ್ನು ಹೊಡೆದರು.

ದೃಢಾಹತಸ್ತತೋ ಭೀಮೋ ಭಾರದ್ವಾಜಸ್ಯ ಸಂಯುಗೇ ।
ಸಾರಥಿಂ ಪ್ರೇಷಯಾಮಾಸ ಯಮಸ್ಯ ಸದನಂ ಪ್ರತಿ ॥೩೦॥

ಹೀಗೆ ಯುದ್ಧದಲ್ಲಿ ದ್ರೋಣರಿಂದ ಗಟ್ಟಿಯಾಗಿ ಹೊಡೆಯಲ್ಪಟ್ಟ ಭೀಮನು ಅವರ ರಥದ ಸಾರಥಿಯನ್ನು ಯಮಪಟ್ಟಣಕ್ಕೆ ಕಳುಹಿಸಿದನು.

ಸ ಸಂಗೃಹ್ಯ ಸ್ವಯಂ ವಾಹಾನ್ ಭಾರದ್ವಾಜಃ ಪ್ರತಾಪವಾನ್ ।
ವ್ಯಧಮತ್ ಪಾಂಡವೀಂ ಸೇನಾಂ ತೂಲರಾಶಿಮಿವಾನಲಃ ॥೩೧॥

ಎಲೈ ರಾಜನೇ, ಪ್ರತಾಪಶಾಲಿಗಳಾದ ದ್ರೋಣರು ತಾವೇ ಅಶ್ವಗಳನ್ನು ನಿಯಂತ್ರಿಸುತ್ತಾ, ಅಗ್ನಿಯು ತೂಲರಾಶಿಯನ್ನು ಸುಡುವಂತೆ ಪಾಂಡವ ಸೈನ್ಯವನ್ನು ಘಾಸಿಗೊಳಿಸಿದರು.

ತೇ ವಧ್ಯಮಾನಾ ದ್ರೋಣೇನ ಭೀಷ್ಮೇಣ ಚ ನರೋತ್ತಮ ।
ಸೃಂಜಯಾಃ ಕೇಕಯೈಃ ಸಾರ್ಧಂ ಪಲಾಯನಪರಾಭವನ್ ॥೩೨॥

ಎಲೈ ನರಶ್ರೇಷ್ಠನೇ, ದ್ರೋಣ ಮತ್ತು ಭೀಷ್ಮರಿಂದ ಪ್ರಹಾರಕ್ಕೆ ಒಳಗಾದ ಸೃಂಜಯರು, ಕೇಕಯರ ಜೊತೆಯಲ್ಲಿ ಪಲಾಯನ ಪರರಾದರು.

ತಥೈವ ತಾವಕಂ ಸೈನ್ಯಂ ಭೀಮಾರ್ಜುನಪರಿಕ್ಷತಮ್ ।
ಮುಹ್ಯತೇ ತತ್ರ ತತ್ರೈವ ಸಮದೇವ ವರಾಂಗನಾ ॥೩೩॥

ಹಾಗೆಯೇ ಭೀಮಾರ್ಜುನರ ಹೊಡೆತಕ್ಕೆ ಗಾಯಗೊಂಡ ನಿನ್ನ ಸೈನ್ಯವು ಮದಿಸಿದ ವರಾಂಗನೆಯಂತೆ ಅಲ್ಲಲ್ಲಿಯೇ ಮೋಹಕ್ಕೆ ಒಳಗಾಯಿತು (ಏನು ಮಾಡಬೇಕೆಂದು ತಿಳಿಯದಾಯಿತು).

ಅಭಿದ್ಯೇತಾಂ ತತೋ ವ್ಯೂಹೌ ತ್ವನ್ ವೀರವರಕ್ಷಯೇ ।
ಆಸೀದ್ ವ್ಯತಿಕರೋ ಘೋರಸ್ತವ ತೇಷಾಂ ಚ ಭಾರತ ॥೩೪॥

ವೀರಶ್ರೇಷ್ಠರು ಹಾಗೆ ಕ್ಷಯವನ್ನು ಹೊಂದುತ್ತಿರಲು ಎರಡು ವ್ಯೂಹಗಳೂ ಒಡೆದು ಹೋದವು. ಎಲೈ ಭಾರತನೇ, ನಿನ್ನ ಮತ್ತು ಅವರ ಸೈನ್ಯದ ಅತಿಭಯಂಕರವಾದ ಮಿಶ್ರಣವು ಉಂಟಾಯಿತು.

ತದದ್ಭುತಮಪಶ್ಯಾಮ ತಾವಕಾನಾಂ ಪರೈಃ ಸಹ ।
ಏಕಾಯನಗತಾಃ ಸರ್ವೇ ಯದಯುಧ್ಯಂತ ಭಾರತ ॥೩೫॥

ಎಲೈ ಭಾರತನೇ, ನಿನ್ನವರು ಶತ್ರುಗಳ ಜೊತೆಯಲ್ಲಿ ಸೇರಿ ಒಂದೇ ಆಶ್ರಯದಲ್ಲಿ ನಿಂತು ಪರಸ್ಪರವಾಗಿ ಹೊಡೆದಾಡಿದ ಆ ಅದ್ಭುತವನ್ನು ನಾವು ನೋಡಿದವು.

ಪ್ರತಿಸಂವಾರ್ಯ ಚಾಸ್ತ್ರಾಣಿ ತೇಽನ್ಯೋನ್ಯಸ್ಯ ವಿಶಾಂಪತೇ ।
ಯುಯುಧುಃ ಪಾಂಡವಾಶ್ಚೈವ ಕೌರವಾಶ್ಚ ಮಹಾರಥಾಃ ॥೩೬॥

ಎಲೈ ರಾಜನೇ, ಪರಸ್ಪರವಾಗಿ ತಮ್ಮ ಮೇಲೆ ಪ್ರಯೋಗಿಸಿದ ಅಸ್ತ್ರವನ್ನು ನಿವಾರಿಸಿಕೊಂಡು ಮಹಾರಥರಾದ ಕೌರವರು ಮತ್ತು ಪಾಂಡವರು ಪರಸ್ಪರವಾಗಿ ಯುದ್ಧವನ್ನು ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಏಕಸಪ್ತತಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಏಕತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಎಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೆರಡನೆಯ ಅಧ್ಯಾಯ

ತನ್ನ ಸೈನ್ಯದ ನಾಶವನ್ನು ಕೇಳಿ ಧೃತರಾಷ್ಟ್ರನ ಗೋಳಾಟ.

ಧೃತರಾಷ್ಟ್ರಃ

ಏವಂ ಬಹುಗುಣಂ ಸೈನ್ಯಮೇವಂ ಬಹುವಿಧಂ ಪರಮ್ ।
ವ್ಯೂಢಮೇವಂ ಯಥಾಶಾಸ್ತ್ರಮಮೋಘಂ ಚೈವ ಸಂಜಯ ॥೧॥

ಧೃತರಾಷ್ಟ್ರ– ಎಲೈ ಸಂಜಯನೇ, ಹೀಗೆ ನಮ್ಮ ಸೈನ್ಯವು ಬಹುಗುಣಗಳಿಂದ ಕೂಡಿ, ಬಹುವಿಧವಾಗಿದ್ದು, ಉತ್ಕೃಷ್ಟವಾಗಿದೆ. ಶಾಸ್ತ್ರಕ್ಕೆ ಅನುಗುಣವಾಗಿ ವ್ಯೂಹಗೊಂಡ ಈ ಸೈನ್ಯವು ವ್ಯರ್ಥವ್ಯಾಪಾರವುಳ್ಳದ್ದಲ್ಲ.

ಪುಷ್ಪಮಸ್ಮಾಕಮತ್ಯಂತಮಭಿಕಾಮಂ ಚ ನಃ ಸದಾ ।
ಪ್ರಹ್ವಮವ್ಯಸನೋಪೇತಂ ಪುರಸ್ತಾದ್ ದೃಷ್ಟವಿಕ್ರಮಮ್ ॥೨॥

ಸೈನ್ಯವನ್ನು ಚೆನ್ನಾಗಿ ಪೋಷಿಸಿದ್ದಾಗಿದೆ. ನಮ್ಮ ಆಸೆಯನ್ನು ನೆರವೇರಿಸುವುದರಲ್ಲಿಯೇ ಸೈನ್ಯವು ಆಸಕ್ತವಾಗಿದೆ. ವಿನಯದಿಂದ ಕೂಡಿ ಯಾವ ಚಟಗಳೂ ಇಲ್ಲದುದಾಗಿದೆ. ಯಾರ ಪರಾಕ್ರಮವು ಮೊದಲು ದೃಷ್ಟವಾಗಿದೆಯೋ ಅಂತಹ ಯೋಧರಿಂದ ಕೂಡಿದುದಾಗಿದೆ.

ನಾತಿವೃದ್ಧಮಬಾಲಂ ಚ ನ ಕೃಶಂ ನ ಚ ಪೀವರಮ್ ।
ಲಘುವೃತ್ತಾಯತಪ್ರಾಯಂ ಸಾರಗಾತ್ರಮನಾಮಯಮ್ ॥೩॥

ನಮ್ಮ ಸೈನ್ಯದಲ್ಲಿ ಬಹಳ ವೃದ್ಧರಾದವರಾಗಲೀ, ಬಾಲರಾಗಲೀ, ಕೃಶರಾದವರಾಗಲೀ ಅಥವಾ ಬಹಳ ಸ್ಥೂಲರಾದವರಾಗಲೀ ಯಾರೂ ಇಲ್ಲ. ಕ್ಷಿಪ್ರಕಾರಿಯಾದ ದೊಡ್ಡದಾದ ಎತ್ತರವಾದ, ಶಕ್ತಿಯುತವಾದ ಮತ್ತು ರೋಗರಹಿತವಾದ ದೇಹಗಳುಳ್ಳ ಯೋಧರಿಂದ ಈ ಸೈನ್ಯವು ಯೋಜಿಸಲ್ಪಟ್ಟಿದೆ.

ಆತ್ತಸನ್ನಾಹಶಸ್ತ್ರಂ ಚ ಬಹುಶಸ್ತ್ರಪರಿಗ್ರಹಮ್ ।
ಅಸಿಯುದ್ಧೇ ನಿಯುದ್ಧೇ ಚ ಗದಾಯುದ್ಧೇ ಚ ಕೋವಿದಮ್ ॥೪॥

ಸೈನ್ಯವು ಕವಚಾದಿ ಸಲಕರಣೆಗಳಿಂದಲೂ ಮತ್ತು ಶಸ್ತ್ರಗಳಿಂದಲೂ ಪೂರ್ಣವಾಗಿದೆ. ಅನೇಕ ವಿಧವಾದ ಶಸ್ತ್ರಗಳಿಂದ ಕೂಡಿದುದಾಗಿದೆ. ಖಡ್ಗಯುದ್ಧದಲ್ಲಿಯೂ, ಬಾಹುಯುದ್ಧದಲ್ಲಿಯೂ, ಗದಾಯುದ್ಧದಲ್ಲಿಯೂ ಸಹ ಪರಿಣತವಾಗಿದೆ.

ಪ್ರಾಸರ್ಷ್ಟಿತೋಮರೇಷ್ವಾಜೌ ಪರಿಘೇಷ್ವಾಯಸೇಷು ಚ ।
ಭಿಂಡಿಪಾಲೇಷು ಶಕ್ತೀಷು ಮುಸಲೇಷು ಚ ಸರ್ವಶಃ ॥೫॥

ಕಂಪನೇಷು ಚ ಚಾಪೇಷು ಕಣಪೇಷು ಚ ಸರ್ವಶಃ ।
ಕ್ಷೇಪಣೇಷು ಚ ಚಿತ್ರಾಸು ಮುಷ್ಟಿಯುದ್ಧೇಷು ಕೋವಿದಮ್ ॥೬॥

ಪ್ರಾಸಗಳು, ವೃಷ್ಟಿಗಳು, ತೋಮರಗಳು, ಕಬ್ಬಿಣದ ಪರಿಘಗಳು, ಭಿಂಡಿಪಾಲಗಳು, ಶಕ್ತಿಗಳು, ಮುಸಲಗಳು (ಒನಕೆಗಳು), ಕಂಪನಗಳು, ಬಿಲ್ಲುಗಳು, ಕಣಪಗಳು,

ವಿಚಿತ್ರವಾದ ಕ್ಷಿಪಣಿಗಳು ಮತ್ತು ಮುಷ್ಟಿಯುದ್ಧಗಳು ಇವೆಲ್ಲದರಲ್ಲಿಯೂ ಪರಿಣತವಾಗಿದೆ.

ಅಪರೋಕ್ಷಂ ಚ ವಿದ್ಯಾಸು ವ್ಯಾಯಾಮೇಷು ಕೃತಶ್ರಮಮ್ ।
ಶಸ್ತ್ರಗ್ರಹಣವಿದ್ಯಾಸು ಸರ್ವಾಸು ಪರಿನಿಷ್ಠಿತಮ್ ॥೭॥

ಎಲ್ಲರ ಕಣ್ಣೆದುರಿಗೆ ವಿದ್ಯೆಗಳನ್ನು ಅಭ್ಯಾಸ ಮಾಡಿರುವ ಮತ್ತು ವ್ಯಾಯಾಮಗಳನ್ನು ಮಾಡಿರುವ ಪರಿಶ್ರಮವನ್ನು ಹೊಂದಿದೆ. ಎಲ್ಲಾ ವಿಧವಾದ ಶಸ್ತ್ರಗ್ರಹಣ ವಿದ್ಯೆಗಳಲ್ಲಿ ಪಾರಂಗತವಾಗಿದೆ.

ಆರೋಹೇ ಪರ್ಯವಸ್ಥಂದೇ ಸರಣೇ ಸಾಂತರಪ್ಲುತೇ ।
ಸಮ್ಯಕ್ ಪ್ರಹರಣೇ ಯಾನೇ ವ್ಯಪಯಾನೇ ಚ ಕೋವಿದಮ್ ॥೮॥

ವಾಹನಗಳನ್ನು ಹತ್ತುವುದರಲ್ಲಿ, ವಾಹನಗಳಿಂದ ಇಳಿಯುವುದರಲ್ಲಿ, ವಾಹನಗಳ ಮೇಲೆ ಮುಂದೆ ಹೋಗುವುದರಲ್ಲಿ, ಮಧ್ಯದ ಭಾಗವನ್ನು ಹಾರಿ ಮುಂದಕ್ಕೆ ಹೋಗುವುದರಲ್ಲಿ, ಶತ್ರುಗಳ ಮೇಲೆ ಚೆನ್ನಾಗಿ ಪ್ರಹಾರ ಮಾಡುವುದರಲ್ಲಿ, ಶತ್ರುಗಳ ಬಳಿಗೆ ಹೋಗುವುದರಲ್ಲಿ ಮತ್ತು ಶತ್ರುಗಳಿಂದ ಹಿಂದೆ ಸರಿಯುವುದರಲ್ಲಿಯೂ ಪಾರಂಗತವಾಗಿದೆ.

ನಾಗಾಶ್ವರಥಯಾನೇಷು ಬಹುಶಃ ಸುಪರೀಕ್ಷಿತಮ್ ।
ಪರೀಕ್ಷ್ಯ ಚ ಯಥಾನ್ಯಾಯಂ ವೇತನೇನೋಪಪಾದಿತಮ್ ॥೯॥

ಗಜಾಶ್ವರಥ ವಾಹನಗಳಲ್ಲಿ ಬಹಳವಾಗಿ ಪರೀಕ್ಷಿಸಲ್ಪಟ್ಟಿದೆ. ಶಾಸ್ತ್ರೋಕ್ತ ರೀತಿಯಿಂದ ಪರೀಕ್ಷೆಯನ್ನು ಮಾಡಿ ಒಳ್ಳೆಯ ವೇತನವನ್ನು ನೀಡಿ ಸಂಪಾದಿಸಲಾಗಿದೆ.

ನ ಗೋಷ್ಯಾ ನೋಪಚಾರೇಣ ನ ಚ ಬಂಧುನಿಮಿತ್ತತಃ ।
ನ ಸೌಹೃದಬಲೈಶ್ಚಾಪಿ ನಾಕುಲೀನಪರಿಗ್ರಹೈಃ ॥೧೦॥

ಹಾಳುಹರಟೆಯಿಂದಲಾಗಲೀ ಅಥವಾ ಇನ್ನೊಬ್ಬರ ಉಪಕಾರವನ್ನು ಸ್ವೀಕರಿಸುವುದರಿಂದಾಗಲೀ ಅಥವಾ ಶತ್ರುಪಕ್ಷದಲ್ಲಿ ತಮ್ಮ ಬಂಧುವು ಇರುವ ನಿಮಿತ್ತದಿಂದಾಗಲೀ, ವೈಯಕ್ತಿಕ ಸ್ನೇಹದಿಂದಾಗಲೀ, ಅಶಿಕ್ಷಿತ ಮತ್ತು ಅಸಂಸ್ಕೃತರ ಸ್ವೀಕಾರದಿಂದಾಗಲೀ ಎಂದೂ ಸೈನ್ಯದ ನಡತೆಯು ಕಂದಿಹೋಗಿಲ್ಲ.

ಸಮೃದ್ಧಜನಮಾರ್ಯಂ ಚ ತುಷ್ಟಪುತೃತಬಾಂಧವಮ್ ।
ಕೃತೋಪಕಾರಭೂಯಿಷ್ಠಂ ಯಶಸ್ವಿ ಚ ಮನಸ್ವಿ ಚ ॥೧೧॥

ಸಂಪದ್ಯುಕ್ತರಾದ ಯೋಧರಿಂದ ಕೂಡಿದೆ. ಉದಾತ್ತವಾದ ಗುಣವನ್ನು ಹೊಂದಿದೆ. ಸಂತುಷ್ಟರಾದ ಮತ್ತು ಸಂಸ್ಕೃತರಾದ ಬಾಂಧವರನ್ನು ಹೊಂದಿದ ಯೋಧರಿಂದ ಕೂಡಿದುದಾಗಿದೆ. ನಮ್ಮಿಂದ ಬಹಳ ಉಪಕಾರವನ್ನು ಪಡೆದುದಾಗಿದೆ. ಕೀರ್ತಿಶಾಲಿಯೂ, ಧೈರ್ಯಶಾಲಿಯೂ ಆಗಿದೆ.

ಸಜಯೈಶ್ಚ ನರೈರ್ಮುಖ್ಯೈರ್ಬಹುಶೋ ದೃಷ್ಟಕರ್ಮಭಿಃ ।
ಲೋಕಪಾಲೋಪಮೈಸ್ತಾತ ಪಾಲಿತಂ ಲೋಕವಿಶ್ರುತೈಃ ॥೧೨॥

ಎಲೈ ಪ್ರೀತಿಪಾತ್ರನೇ, ಅನೇಕ ಬಾರಿ ಜಯವನ್ನು ಸಂಪಾದಿಸಿದ ಶ್ರೇಷ್ಠರಾದ ಯೋಧರಿಂದಲೂ, ಯಾರ ವೀರಕರ್ಮವನ್ನು ನೋಡಿದ್ದೇವೆಯೋ ಅಂತಹ ಲೋಕವಿಖ್ಯಾತರೂ, ಲೋಕಪಾಲಕರಿಗೆ ಸದೃಶವಾದ ಪರಾಕ್ರಮವುಳ್ಳವರೂ ಆದವರಿಂದ ರಕ್ಷಿತವಾಗಿದೆ.

ಬಹುಭಿಃ ಕ್ಷತ್ರಿಯೈರ್ಗುಪ್ತಂ ಪೃಥಿವ್ಯಾಂ ಲೋಕಸಮ್ಮತೈಃ ।
ಅಸ್ಮಾನಭಿಗತೈಃ ಕಾಮಾತ್ ಸಬಲೈಃ ಸಪದಾನುಗೈಃ ॥೧೩॥

ಮಹೋದಧಿಮಿವಾಪೂರ್ಣಮಾಪಗಾಭಿಃ ಸಮಂತತಃ ।
ಅಪಕ್ಷೈಃ ಪಕ್ಷಸಂಕಾಶೈ ರಥೈರ್ನಾಗೈಶ್ಚ ಸಂವೃತಮ್ ॥೧೪॥

ತಮ್ಮ ಇಚ್ಛೆಯಿಂದಲೇ ನಮ್ಮ ಬಳಿಗೆ ಸೈನ್ಯ ಮತ್ತು ಪದಾತಿಗಳ ಜೊತೆಯಲ್ಲಿ ಬಂದ, ಭೂಮಿಯಲ್ಲಿ ಲೋಕಸಮ್ಮತರಾದ ಅನೇಕ ಕ್ಷತ್ರಿಯರಿಂದ ರಕ್ಷಿತವಾಗಿದೆ. ಎಲ್ಲ ಕಡೆಗಳಿಂದಲೂ ನದಿಗಳಿಂದ ತುಂಬಿದ ಮಹಾಸಮುದ್ರದಂತೆ ಇರುವಂತಹದು. ಈ ಸೈನ್ಯವು ರೆಕ್ಕೆಗಳಿಲ್ಲದಿದ್ದರೂ ಪಕ್ಷಿಗಳಂತೆ ಹಾರಬಲ್ಲ ರಥಗಳಿಂದಲೂ, ಗಜಗಳಿಂದಲೂ ತುಂಬಿರುವಂತಹದು.

ನಾನಾಯೋಧಜಲಂ ಭೀಮಂ ವಾಹನೋರ್ಮಿತರಂಗಿಣಮ್ ।
ಕ್ಷೇಪಣ್ಯಸಿಗದಾಶಕ್ತಿಶರಪ್ರಾಸಸಮಾಕುಲಮ್ ॥೧೫॥

ಧ್ವಜಭೂಷಣಸಂಬಾಧಂ ರತ್ನಪಟ್ಟೇನ ಸಂಚಿತಮ್ ।
ವಾಹನೈಃ ಪರಿಸರ್ಪದ್ಭಿರ್ವಾಯುವೇಗವಿಕಂಪಿತಮ್ ॥೧೬॥

ಅಪಾರಮಿವ ಗರ್ಜಂತಂ ಸಾಗರಪ್ರತಿಮಂ ಮಹತ್ ।
ದ್ರೋಣಭೀಷ್ಮಾಭಿಸಂಗುಪ್ತಂ ಗುಪ್ತಂ ಚ ಕೃತವರ್ಮಣಾ ॥೧೭॥

ಕೃಪದುಃಶಾಸನಾಭ್ಯಾಂ ಚ ಜಯದ್ರಥಮುಖೈಸ್ತಥಾ ।
ಭಗದತ್ತವಿಕರ್ಣಾಭ್ಯಾಂ ದ್ರೌಣಸೌಬಲಬಾಹ್ಲಿಕೈಃ ॥೧೮॥

ಗುಪ್ತಂ ಪ್ರವೀರೈರ್ಲೋಕಸ್ಯ ಸಾರವದ್ಭಿರ್ಮಹಾತ್ಮಭಿಃ ।
ಯದಹನ್ಯತ ಸೈನ್ಯಂ ಮೇ ದಿಷ್ಟಮೇತತ್ಪುರಾತನಮ್ ॥೧೯॥

ನಾನಾ ಯೋಧರೆಂಬ ಜಲವುಳ್ಳ, ಭಯಂಕರವಾದ ವಾಹನಗಳೆಂಬ ಅಲೆಗಳನ್ನುಳ್ಳ ಕ್ಷೇಪಣಿ, ಖಡ್ಗ, ಗದೆ, ಶಕ್ತಿ, ಬಾಣ, ಪ್ರಾಸ ಮೊದಲಾದವುಗಳಿಂದ ನಿಬಿಡವಾದ ಧ್ವಜಗಳಿಂದಲೂ ಮತ್ತು ಭೂಷಣಗಳಿಂದಲೂ ನಿಬಿಡವಾದ, ಚಲಿಸುವ ರತ್ನಪಟ್ಟಗಳಿಂದ ಅಲಂಕೃತವಾದ ವಾಹನಗಳಿಂದ ಉಂಟಾದ ವಾಯುವೇಗದಿಂದ ಅಲುಗಾಡುವ ಸಮುದ್ರದಂತೆ ಗರ್ಜಿಸುವ, ಪಾರವಿಲ್ಲದ ಸಮುದ್ರಕ್ಕೆ ಸದೃಶವಾದ, ದ್ರೋಣ-ಭೀಷ್ಮಾದಿಗಳಿಂದ ರಕ್ಷಿತವಾದ, ಕೃತವರ್ಮನಿಂದಲೂ ರಕ್ಷಿತವಾದ, ಕೃಪ-ದುಶ್ಶಾಸನರಿಂದಲೂ, ಜಯದ್ರಥ ಮೊದಲಾದವರಿಂದಲೂ, ಭಗದತ್ತ-ವಿಕರ್ಣರಿಂದಲೂ ಅಶ್ವತ್ಥಾಮ, ಸೌಬಲ ಮತ್ತು ಬಾಹ್ಲಿಕರಿಂದಲೂ ರಕ್ಷಿತವಾಗಿ ಶಕ್ತಿವಂತರೂ, ಮಹಾತ್ಮರೂ, ಲೋಕವೀರರೂ ಆದ ಈ ವೀರರಿಂದ ರಕ್ಷಿತವಾದರೂ ವಧೆಗೆ ಒಳಗಾಗುತ್ತಿರುವುದು ನಮ್ಮ ಪ್ರಾಚೀನ ಅದೃಷ್ಟವೇ ಸರಿ!

ನೈತಾದೃಶಂ ಸಮುದ್ಯೋಗಂ ದೃಷ್ಟವಂತೋ ಹಿ ಮಾನುಷಾಃ ।
ಋಷಯೋ ವಾ ಮಹಾಭಾಗಾಃ ಪುರಾಣಾ ಭುವಿ ಸಂಜಯ ॥೨೦॥

ಎಲೈ ಸಂಜಯನೇ, ಸೈನ್ಯಗಳ ಇಂತಹ ಪರಸ್ಪರ ವಿಕ್ರಮವನ್ನು ಮನುಷ್ಯರಾಗಲೀ, ಮಹಾನುಭಾವರಾದ ಪುರಾಣಕಾಲದ ಋಷಿಗಳಾಗಲೀ ಭೂಮಿಯಲ್ಲಿ ಯಾರೂ ನೋಡಿಲ್ಲ.

ಈದೃಶೋಽಪಿ ಬಲೌಘಸ್ತು ಯುಕ್ತಃ ಶಸ್ತ್ರಾಸ್ತ್ರಸಂಪದಾ ।
ವಧ್ಯತೇ ಯತ್ರ ಸಂಗ್ರಾಮೇ ಕಿಮನ್ಯದ್ ಭಾಗಧೇಯತಃ ॥೨೧॥

ಶಸ್ತ್ರಾಸ್ತ್ರ ಸಂಪತ್ತಿನಿಂದ ಕೂಡಿದ ಇಂತಹ ಸೈನ್ಯಸಮುದಾಯವೂ ಯುದ್ಧದಲ್ಲಿ ಕೊಲ್ಲಲ್ಪಡುತ್ತದೆ ಎಂದರೆ ಅದೃಷ್ಟವನ್ನು ಬಿಟ್ಟು ಬೇರೆ ಏನು ಕಾರಣವಿದೆ?

ವಿಪರೀತಮಿದಂ ಸರ್ವಂ ಪ್ರತಿಭಾತಿ ಸ್ಮ ಸಂಜಯ ।
ಯತ್ರೇದೃಶಂ ಬಲಂ ಘೋರಂ ನಾತರದ್ ಯುಧಿ ಪಾಂಡವಾನ್॥೨೨॥

ಎಲೈ ಸಂಜಯನೇ, ಇಂತಹ ಘೋರವಾದ ಸೈನ್ಯವು ಯುದ್ಧದಲ್ಲಿ ಪಾಂಡವರನ್ನು ಮೀರಲಾಗಲಿಲ್ಲ ಎಂಬ ಕಾರಣದಿಂದ ನನಗೆ ಎಲ್ಲವೂ ವಿಪರೀತವಾಗಿ (ತಲೆ ಕೆಳಗಾಗಿ) ತೋರುತ್ತಿದೆ.

ಅಥವಾ ಪಾಂಡವಾರ್ಥಾಯ ದೇವಾಸ್ತತ್ರ ಸಮಾಗತಾಃ ।
ಯುಧ್ಯಂತೇ ಮಾಮಕಂ ಸೈನ್ಯಂ ಯದವಧ್ಯಂತ ಸಂಜಯ ॥೨೩॥

ಅಥವಾ ಸಂಜಯನೇ, ಪಾಂಡವರಿಗೋಸ್ಕರವಾಗಿ ದೇವತೆಗಳು ಬಂದು ಯುದ್ಧವನ್ನು ಮಾಡುತ್ತಿದ್ದಾರೆ. ಆದ್ದರಿಂದ ನನ್ನ ಸೈನ್ಯವು ವಧಿಸಲ್ಪಡುತ್ತಿದೆ.

ಉಕ್ತೋಽಪಿ ವಿದುರೇಣೇಹ ಹಿತಂ ಪಥ್ಯಂ ಚ ನಿತ್ಯಶಃ ।
ನ ಚ ಗೃಹ್ಣಾತಿ ತನ್ಮಂದಃ ಪುತ್ರೋ ದುರ್ಯೋಧನೋ ಮಮ ॥೨೪॥

ವಿದುರನು ಈ ವಿಷಯದಲ್ಲಿ ಹಿತವಾದ ಮತ್ತು ಪಥ್ಯವಾದ ವಚನವನ್ನು ಹೇಳಿದರೂ ಮಂದಬುದ್ಧಿಯುಳ್ಳ ನನ್ನ ಪುತ್ರನಾದ ದುರ್ಯೋಧನನು ಅದನ್ನು ಸ್ವೀಕರಿಸುತ್ತಿಲ್ಲ.

ತಸ್ಯ ಮನ್ಯೇ ಮತಿಃ ಪೂರ್ವಂ ಸರ್ವಜ್ಞಸ್ಯ ಮಹಾತ್ಮನಃ ।
ಆಸೀದ್ ಯಥಾಗತಂ ತಾತ ಯೇನ ದೃಷ್ಟಮಿದಂ ಪುರಾ ॥೨೫॥

ಎಲೈ ಪ್ರೀತಿಪಾತ್ರನೇ, ಯಾವ ವಿದುರನು ಮೊದಲೇ ಇದನ್ನು ನೋಡಿ ನುಡಿದನೋ ಆ ಮಹಾತ್ಮನಾದ ಸರ್ವಜ್ಞನಾದ ವಿದುರನ ಬುದ್ಧಿಯು ಯಥಾರ್ಥವಾಗಿದೆ ಎಂದು ಭಾವಿಸುತ್ತೇನೆ.

ಅಥವಾ ಭಾವ್ಯಮೇವಂ ಹಿ ಸಂಜಯೈತೇನ ಸರ್ವಥಾ ।
ಪುರಾ ಧಾತ್ರಾ ಯಥಾ ಸೃಷ್ಟಂ ತತ್ತಥಾ ನ ತದನ್ಯಥಾ ॥೨೬॥

ಅಥವಾ ಸಂಜಯನೇ, ಇದೆಲ್ಲವೂ ಸರ್ವಥಾ ಹೀಗೆಯೇ ನಡೆಯಬೇಕಾಗಿದ್ದಿತು. ವಿಧಿಯು ಹೇಗೆ ಸಂಕಲ್ಪಿಸಿದೆಯೋ ಅದರಂತೆ ಎಲ್ಲವೂ ನಡೆಯುತ್ತದೆ. ಯಾವುದೂ ವ್ಯತ್ಯಾಸವನ್ನು ಹೊಂದುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ದ್ವಾಸಪ್ತತಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ದ್ವಾತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಎಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ಮೂರನೆಯ ಅಧ್ಯಾಯ

ಭೀಮಸೇನನ ಪರಾಕ್ರಮ ಮತ್ತು ದ್ರೋಣರ ಪ್ರತಿಕ್ರಿಯೆ.

ಸಂಜಯಃ

ಆತ್ಮದೋಷಾತ್ ತ್ವಯಾ ರಾಜನ್ ಪ್ರಾಪ್ತಂ ವ್ಯಸನಮೀದೃಶಮ್ ।
ನ ಹಿ ದುರ್ಯೋಧನಸ್ಯಾನಿ ಪಶ್ಯತೇ ಭರತರ್ಷಭ ।
ಯಾನಿ ತ್ವಂ ದೃಷ್ಟವಾನ್ ರಾಜನ್ ಧರ್ಮಸಂಕರಕಾರಿತೇ ॥೧॥

ಸಂಜಯ– ಎಲೈ ರಾಜನೇ, ನಿನ್ನ ದೋಷದಿಂದಲೇ ನೀನು ಇಂತಹ ವ್ಯಸನವನ್ನು ತಂದುಕೊಂಡಿದ್ದೀಯೆ. ಎಲೈ ಭರತಶ್ರೇಷ್ಠನೇ, ಧರ್ಮಸಂಕರದಿಂದ ಉಂಟಾಗುವ ಯಾವ ದೋಷಗಳನ್ನು ನೀನು ನೋಡಿದ್ದೀಯೋ ಅದನ್ನು ದುರ್ಯೋಧನನು ನೋಡುವುದಿಲ್ಲ.

ತವ ದೋಷಾತ್ ಪುರಾ ವೃತ್ತಂ ದ್ಯೂತಮೇತದ್ ವಿಶಾಂಪತೇ ।
ತವ ದೋಷೇಣ ಯುದ್ಧಂ ಚ ಪ್ರವೃತ್ತಂ ಸಹ ಪಾಂಡವೈಃ ।
ತ್ವಮೇವಾದ್ಯ ಫಲಂ ಭುಂಕ್ಷ್ವ ಕೃತ್ವಾ ಕಿಲ್ಬಿಷಮಾತ್ಮನಾ ॥೨॥

ಎಲೈ ರಾಜನೇ, ನಿನ್ನ ದೋಷದಿಂದ ಹಿಂದೆ ಈ ದ್ಯೂತವು ನಡೆಯಿತು. ನಿನ್ನ ದೋಷದಿಂದಲೇ ಪಾಂಡವರ ಜೊತೆಯಲ್ಲಿ ಯುದ್ಧವು ಪ್ರಸಕ್ತವಾಯಿತು. ನೀನು ಮಾಡಿದ ಅಪರಾಧಕ್ಕಾಗಿ ಈ ದಿನ ಅದರ ಫಲವನ್ನು ಅನುಭವಿಸು.

ಆತ್ಮನಾ ಹಿ ಕೃತಂ ಕರ್ಮ ಆತ್ಮನೈವೋಪಭುಜ್ಯತೇ ।
ಇಹ ವಾ ಪ್ರೇತ್ಯ ವಾ ರಾಜನ್ ತ್ವಯಾ ಪ್ರಾಪ್ತಂ ಯಥಾತಥಮ್ ॥೩॥

ಎಲೈ ರಾಜನೇ, ತಾನು ಮಾಡಿದ ಪಾಪದ ಫಲವನ್ನು ತಾನೇ ಈ ಲೋಕದಲ್ಲಾಗಲೀ ಅಥವಾ ಪರಲೋಕದಲ್ಲಾಗಲೀ ಅನುಭವಿಸಬೇಕು. ನಿನಗೆ ಒದಗಿ ಬಂದಿರುವ ದುಃಖವು ಯುಕ್ತವಾಗಿಯೇ ಇದೆ.

ತಸ್ಮಾದ್ ರಾಜನ್ ಸ್ಥಿರೋ ಭೂತ್ವಾ ಪ್ರಾಪ್ಯೇದಂ ವ್ಯಸನಂ ಮಹತ್ ।
ಶೃಣು ಯುದ್ಧಂ ಯಥಾವೃತ್ತಂ ಶಂಸತೋ ಮಮ ಮಾರಿಷ ॥೪॥

ಆದ್ದರಿಂದ ಎಲೈ ರಾಜನೇ, ಪೂಜ್ಯನೇ, ಇಂತಹ ದೊಡ್ಡ ವ್ಯಸನವನ್ನು ಹೊಂದಿ, ಮನಸ್ಸನ್ನು ಸ್ಥಿರ ಮಾಡಿಕೊಂಡು ನಾನು ಹೇಳುವಂತೆ ಯುದ್ಧದ ಯಥಾರ್ಥವಾದ ಘಟನೆಯನ್ನು ಕೇಳು.

ಭೀಮಸೇನಸ್ತು ನಿಶಿತೈರ್ಬಾಣೈರ್ಭಿತ್ತ್ವಾ ಮಹಾಚಮೂಮ್ ।
ಆಸಸಾದ ತತೋ ವೀರಃ ಸರ್ವಾನ್ ದುರ್ಯೋಧನಾನುಜಾನ್ ॥೫॥

ಭೀಮಸೇನನಾದರೋ ತೀಕ್ಷ್ಣವಾದ ಬಾಣಗಳಿಂದ ಕೌರವ ಸೈನ್ಯವನ್ನು ಭೇದಿಸಿ ವೀರನಾದ ಅವನು ದುರ್ಯೋಧನನ ಎಲ್ಲಾ ತಮ್ಮಂದಿರನ್ನೂ ಸಮೀಪಿಸಿದನು.

ದುಃಶಾಸನಂ ದುರ್ವಿಷಹಂ ದುಃಸಹಂ ದುರ್ಮದಂ ಜಯಮ್ ।
ಜಯತ್ಸೇನಂ ವಿಕರ್ಣಂ ಚ ಚಿತ್ರಸೇನಂ ಸುದರ್ಶನಮ್ ॥೬॥

ಚಾರುಚಿತ್ರಂ ಸುವರ್ಮಾಣಂ ದುಷ್ಕರ್ಣಂ ಕರ್ಣಮೇವ ಚ ।
ಏತಾನನ್ಯಾಂಶ್ಚ ಸುಬಹೂನ್ ಸಮೀಪಸ್ಥಾನ್ ಮಹಾರಥಾನ್ ॥೭॥

ಧಾರ್ತರಾಷ್ಟ್ರಾನ್ ಸುಸಂಕ್ರುದ್ಧಾನ್ ದೃಷ್ಟ್ವಾ ಭೀಮೋ ಮಹಾಬಲಃ ।
ಭೀಷ್ಮೇಣ ಸಮರೇ ಗುಪ್ತಾಂ ಪ್ರವಿವೇಶ ಮಹಾಚಮೂಮ್ ॥೮॥

ದುಶ್ಶಾಸನ, ದುರ್ವಿಷಹ, ದುಃಸಹ, ದುರ್ಮದ, ಜಯ, ಜಯತ್ಸೇನ, ವಿಕರ್ಣ, ಚಿತ್ರಸೇನ, ಸುದರ್ಶನ, ಚಾರುಚಿತ್ರ, ಸುವರ್ಮ, ದುಷ್ಕರ್ಣ, ಕರ್ಣ ಇವರೇ ಮೊದಲಾದ ಸಮೀಪದಲ್ಲಿದ್ದ ಮಹಾರಥರಾದ ಇನ್ನೂ ಅನೇಕ ಧೃತರಾಷ್ಟ್ರಪುತ್ರರನ್ನು ನೋಡಿ, ಮಹಾಬಲನಾದ ಕೋಪಗೊಂಡ ಭೀಮನು ರಣರಂಗದಲ್ಲಿ ಭೀಷ್ಮರಿಂದ ರಕ್ಷಿತವಾದ ಆ ದೊಡ್ಡ ಸೈನ್ಯವನ್ನು ಪ್ರವೇಶಿಸಿದನು.

ಅಥಾಹ್ವಯಂತ ತೇऽನ್ಯೋನ್ಯಮಯಂ ಪ್ರಾಪ್ತೋ ವೃಕೋದರಃ ।
ಜೀವಗ್ರಾಹಂ ನಿಗೃಹ್ಣೀಮೋ ವಯಮೇನಂ ನರಾಧಿಪಾಃ ॥೯॥

ಆಗ ಆ ಮಹಾರಥರು ಎಲೈ ರಾಜರೇ, ಈ ವೃಕೋದರನು ಬಂದಿದ್ದಾನೆ. ಅವನನ್ನು ನಾವು ಜೀವಸಹಿತವಾಗಿ ಹಿಡಿಯೋಣ ಎಂದು ಪರಸ್ಪರವಾಗಿ ಮಾತನಾಡಿಕೊಂಡರು.

ಸ ತೈಃ ಪರಿವೃತಃ ಪಾರ್ಥೋ ಭ್ರಾತೃಭಿಃ ಕೃತನಿಶ್ಚಯೈಃ ।
ಪ್ರಜಾಸಂಹರಣೇ ಸೂರ್ಯಃ ಕ್ರೂರೈರಿವ ಮಹಾಗ್ರಹೈಃ ॥೧೦॥

ಪ್ರಜೆಗಳ ವಿನಾಶಕಾಲದಲ್ಲಿ ಸೂರ್ಯನು ಕ್ರೂರವಾದ ಮಹಾಗ್ರಹಗಳಿಂದ ಸುತ್ತುವರಿಯಲ್ಪಟ್ಟಂತೆ ಭೀಮಸೇನನು ಪೂರ್ವನಿಶ್ಚಯವುಳ್ಳ ತನ್ನ ಆ ಸಹೋದರರಿಂದ ಸುತ್ತುವರಿಯಲ್ಪಟ್ಟನು.

ಸಂಪ್ರಾಪ್ಯ ಮಧ್ಯಂ ವ್ಯೂಹಸ್ಯ ನ ಭೀಃ ಪಾಂಡವಮಾವಿಶತ್ ।
ಯಥಾ ದೇವಾಸುರೇ ಯುದ್ಧೇ ಮಹೇಂದ್ರಃ ಪ್ರಾಪ್ಯ ದಾನವಾನ್ ॥೧೧॥

ದೇವಾಸುರರ ಯುದ್ಧದಲ್ಲಿ ದಾನವರನ್ನು ಸಮೀಪಿಸಿದ ಇಂದ್ರನಿಗೆ ಹೇಗೆ ಭಯವುಂಟಾಗಲಿಲ್ಲವೋ, ಅದರಂತೆ ಕೌರವರ ವ್ಯೂಹದ ಮಧ್ಯವನ್ನು ಪ್ರವೇಶಿಸಿದ ಪಾಂಡವನಾದ ಭೀಮಸೇನನಿಗೂ ಭಯವುಂಟಾಗಲಿಲ್ಲ.

ತತಃ ಶತಸಹಸ್ರಾಣಿ ರಥಿನಾಂ ಸರ್ವಶಃ ಪ್ರಭೋ ।
ಉದ್ಯತಾನಿ ಶರೈಘೋರೈಸ್ತಮೇಕಮನುವವ್ರಿರೇ ॥೧೨॥

ಎಲೈ ಪ್ರಭುವೇ, ಅನಂತರ ನೂರಾರು ಸಹಸ್ರಾರು ರಥಿಕರು ಭೀಮಸೇನನೊಬ್ಬನನ್ನು ಹಿಡಿಯಲು ಘೋರವಾದ ಶರಗಳನ್ನು ಪ್ರಯೋಗಿಸಿ, ಎಲ್ಲ ಕಡೆಗಳಿಂದಲೂ ಬಂಧಿಸಲು ಉದ್ಯುಕ್ತರಾದರು.

ಸ ತೇಷಾಂ ಪ್ರವರಾನ್ ಯೋಧಾನ್ ಹಸ್ತ್ಯಶ್ವರಥಸಾದಿನಃ ।
ಜಘಾನ ಸಮರೇ ಶೂರೋ ಧಾರ್ತರಾಷ್ಟ್ರಾನಚಿಂತಯನ್ ॥೧೩॥

ಭೀಮಸೇನನಾದರೋ ಧೃತರಾಷ್ಟ್ರ ಪುತ್ರರನ್ನು ಲೆಕ್ಕಿಸದೆ, ಶೂರನಾದ ಅವನು ಯುದ್ಧದಲ್ಲಿ ಶತ್ರುಸೈನ್ಯದಲ್ಲಿ ಶ್ರೇಷ್ಠರಾದ ಯೋಧರನ್ನು ಮತ್ತು ಗಜಾಶ್ವರಥ ಪದಾತಿಗಳನ್ನು ಸಂಹರಿಸಿದನು.

ತೇಷಾಂ ವ್ಯವಸಿತಂ ಜ್ಞಾತ್ವಾ ಭೀಮಸೇನೋ ಜಿಘೃಕ್ಷತಾಮ್ ।
ಸಮಸ್ತಾನಾಂ ವಧೇ ರಾಜನ್ಕೃತಿಂ ಚಕ್ರೇ ಮಹಾಮನಾಃ ॥೧೪॥

ಎಲೈ ರಾಜನೇ, ತನ್ನನ್ನು ಹಿಡಿಯಲು ಆಶಿಸುತ್ತಿರುವ ಅವರ ಅಭಿಪ್ರಾಯವನ್ನು ತಿಳಿದು ಧೈರ್ಯಶಾಲಿಯಾದ ಅವನು ಅವರೆಲ್ಲರನ್ನೂ ಕೊಲ್ಲಲು ನಿರ್ಧರಿಸಿದನು.

ತತೋ ರಥಂ ಸಮುತ್ಸೃಜ್ಯ ಗದಾಮಾದಾಯ ಪಾಂಡವಃ ।
ಉವಾಚ ಸಾರಥಿಂ ಭೀಮಃ ಸ್ಥೀಯತಾಮಿತಿ ಭಾರತ ।
ಯಾವದೇತಾನ್ ಹನಿಷ್ಯಾಮಿ ಧಾರ್ತರಾಷ್ಟ್ರಾನ್ ಸಹಾನುಗಾನ್ ॥೧೫॥

ಎಲೈ ಭಾರತನೇ, ಆಗ ಪಾಂಡುಪುತ್ರನಾದ ಭೀಮಸೇನನು ಗದೆಯನ್ನು ತೆಗೆದುಕೊಂಡು ರಥವನ್ನು ಪರಿತ್ಯಜಿಸಿ, ಸಾರಥಿಯನ್ನು ಕುರಿತು, ನಾನು ಧೃತರಾಷ್ಟ್ರ ಪುತ್ರರನ್ನು ಮತ್ತು ಅವರ ಅನುಯಾಯಿಗಳನ್ನು ಕೊಲ್ಲುವವರೆಗೆ ನೀನು ಇಲ್ಲಿಯೇ ಇರು ಎಂದು ಹೇಳಿದನು.

ಇತ್ಯುಕ್ತ್ವಾ ಭೀಮಸೇನಸ್ತು ಪ್ರವಿಶ್ಯ ಮಹತೀಂ ಚಮೂಮ್ ।
ಗದಯಾ ಭೀಮಸೇನೇನ ತಾಡಿತಾ ವಾರಣೋತ್ತಮಾಃ ॥೧೬॥

ಭಿನ್ನಕುಂಭಾ ಮಹಾಕಾಯಾ ಭಿನ್ನಪೃಷ್ಠಾಸ್ಥಯೈವ ಚ ।
ಭಿನ್ನಗಾತ್ರಾಃ ಸಹಾರೋಹಾಃ ಶೇರತೇ ಪರ್ವತಾ ಇವ ॥೧೮॥

ಹೀಗೆ ಹೇಳಿ ಭೀಮಸೇನನು ದೊಡ್ಡ ಶತ್ರುಸೈನ್ಯವನ್ನು ಪ್ರವೇಶಿಸಿ, ಗದೆಯನ್ನು ಬೀಸಿದನು. ಭೀಮಸೇನನ ಗದೆಯಿಂದ ಹೊಡೆಯಲ್ಪಟ್ಟ ಮಹಾಕಾಯವುಳ್ಳ ಶ್ರೇಷ್ಠವಾದ ಗಜಗಳು ತಮ್ಮ ಕುಂಭಸ್ಥಲವನ್ನು, ಬೆನ್ನನ್ನು ಮುರಿದುಕೊಂಡು, ದೇಹವು ಭಗ್ನವಾಗಿ ಗಜಾರೋಹಿಗಳ ಜೊತೆಯಲ್ಲಿ ಪರ್ವತಗಳಂತೆ ಭೂಮಿಯ ಮೇಲೆ ಬಿದ್ದವು.

ರಥಾಶ್ಚ ಭಗ್ನಾಸ್ತಿಲಶಃ ಸಯೋಧಾಃ ಶತಶೋ ರಣೇ ।
ಅಶ್ವಾಶ್ಚ ಸಾದಿನಶ್ಚೈವ ಪಾದಾತೈಃ ಸಹ ಭಾರತ ॥೧೯॥

ಯೋಧರಿಂದ ಕೂಡಿದ ರಥಗಳು ಯುದ್ಧದಲ್ಲಿ ನೂರರ ಸಂಖ್ಯೆಯಲ್ಲಿ ಎಳ್ಳಿನಷ್ಟು ಸಣ್ಣದಾಗಿ ಭಗ್ನವಾದವು. ಎಲೈ ಭಾರತನೇ, ಅಶ್ವಗಳು, ಅಶ್ವಾರೋಹಿಗಳು ಪದಾತಿಗಳ ಜೊತೆಯಲ್ಲಿ ಭಗ್ನರಾದರು.

ತತ್ರಾದ್ಭುತಮಪಶ್ಯಾಮ ಭೀಮಸೇನಸ್ಯ ವಿಕ್ರಮಮ್ ।
ಯದೇಕಃ ಸಮರೇ ರಾಜನ್ ಬಹುಭಿಃ ಸಮಯೋಧಯತ್ ।
ಅಂತಕಾಲೇ ಪ್ರಜಾಃ ಸರ್ವಾ ದಂಡಪಾಣಿರಿವಾಂತಕಃ ॥೨೦॥

ಎಲೈ ರಾಜನೇ, ಭೀಮಸೇನನೊಬ್ಬನೇ ಯಮನು ದಂಡವನ್ನು ಹಿಡಿದು ಎಲ್ಲಾ ಪ್ರಜೆಗಳನ್ನು ಅಂತ್ಯಕಾಲದಲ್ಲಿ ಸಂಹರಿಸುವಂತೆ ಭೀಮನೊಬ್ಬನೇ ಅನೇಕರ ಜೊತೆಯಲ್ಲಿ ಯುದ್ಧವನ್ನು ಮಾಡಿದ ಅವನ ಅದ್ಭುತ ಪರಾಕ್ರಮವನ್ನು ನಾವು ನೋಡಿದೆವು.

ಜಘಾನ ಧಾರ್ತರಾಷ್ಟ್ರಾಣಾಂ ತಂ ಬಲೌಘಮಹಾರ್ಣವಮ್ ॥೨೧॥

ಭೀಮಸೇನನು ಗದೆಯನ್ನು ತೆಗೆದುಕೊಂಡು ಮಹಾಸಮುದ್ರದಂತಿದ್ದ ಧೃತರಾಷ್ಟ್ರ ಪುತ್ರರ ಸೈನ್ಯವನ್ನು ಸಂಹರಿಸಿದನು.

ಭೀಮಸೇನೇ ಪ್ರವಿಷ್ಟೇ ತು ಧೃಷ್ಟದ್ಯುಮ್ನೋಽಪಿ ಪಾರ್ಷತಃ ।
ದ್ರೋಣಮುತ್ಸೃಜ್ಯ ತರಸಾ ಪ್ರಯಯೌ ಯತ್ರ ವೃಕೋದರಃ ॥೨೨॥

ಭೀಮಸೇನನು ಕೌರವರ ಸೈನ್ಯವನ್ನು ಪ್ರವೇಶಿಸುತ್ತಿರಲು ಪಾರ್ಷತನಾದ ಧೃಷ್ಟದ್ಯುಮ್ನನೂ ಸಹ ದ್ರೋಣರನ್ನು ಬಿಟ್ಟು ವೃಕೋದರನ ಕಡೆಗೆ ಶೀಘ್ರವಾಗಿ ಹೋದನು.

ವಿದಾರ್ಯ ಮಹತೀಂ ಸೇನಾಂ ತಾವಕಾನಾಂ ನರರ್ಷಭಃ ।
ಆಸಸಾದ ರಥಂ ಶೂನ್ಯಂ ಭೀಮಸೇನಸ್ಯ ಸಂಯುಗೇ ॥೨೩॥

ನರಶ್ರೇಷ್ಠನಾದ ಅವನು ನಿನ್ನವರ ದೊಡ್ಡ ಸೈನ್ಯವನ್ನು ಸೀಳಿಕೊಂಡು ಯುದ್ಧದಲ್ಲಿ ಭೀಮಸೇನನಿಲ್ಲದ ಅವನ ಶೂನ್ಯವಾದ ರಥವನ್ನು ತಲುಪಿದನು.

ದೃಷ್ಟ್ವಾ ವಿತೋಕಂ ಸಮರೇ ಭೀಮಸೇನಸ್ಯ ಸಾರಥಿಮ್ ।
ದೃಷ್ಟದ್ಯುಮ್ನೋ ಮಹಾರಾಜ ದುರ್ಮನಾ ಗತಚೇತನಃ ॥೨೪॥

ಅಕ್ಷಿಪ್ಯನ್ ಬಾಷ್ಪಸಂರುದ್ಧೋ ನಿಶ್ವಸಾಂ ವಾಚಮೀರಯನ್ ।
ಮಮ ಪ್ರಾಣೈಃ ಪ್ರಿಯತಮಃ ಕ್ವ ಭೀಮ ಇತಿ ದುಃಖಿತಃ ॥೨೫॥

ಎಲೈ ಮಹಾರಾಜನೇ, ದೃಷ್ಟದ್ಯುಮ್ನನು ಭೀಮಸೇನನ ಸಾರಥಿಯಾದ ವಿತೋಕನನ್ನು ರಣರಂಗದಲ್ಲಿ ನೋಡಿ ಖೇದಗೊಂಡು ಪ್ರಜ್ಞೆಯನ್ನೇ ಕಳೆದುಕೊಂಡವನಂತೆ ಬಾಷ್ಪಭರಿತ ನೇತ್ರಗಳಲ್ಲಿ, ಸಣ್ಣಸ್ವರದಲ್ಲಿ ಅವನನ್ನು ಕುರಿತು ದುಃಖದಿಂದ, ನನಗೆ ಪ್ರಾಣಗಳಿಗಿಂತಲೂ ಪ್ರಿಯನಾದ ಭೀಮಸೇನನು ಎಲ್ಲಿ ಎಂದು ಕೇಳಿದನು.

ವಿತೋಕಸ್ತಮುವಾಚೇದಂ ದೃಷ್ಟದ್ಯುಮ್ನಂ ಕೃತಾಂಜಲಿಃ ।
ಸಂಸ್ಥಾಪ್ಯ ಮಾಮಿಹ ಬಲೀ ಪಾಂಡವೇಯಃ ಪ್ರತಾಪವಾನ್ ॥೨೬॥

ಪ್ರವಿಷ್ಟೋ ಧಾರ್ತರಾಷ್ಟ್ರಾಣಾಮೇತದ್ ಬಲಮಹಾರ್ಣವಮ್ ।
ಮಾಮುಕ್ತ್ವಾ ಪುರುಷವ್ಯಾಘ್ರ ಪ್ರೀತಿಯುಕ್ತಮಿದಂ ವಚಃ ॥೨೭॥

ಪ್ರತಿಪಾಲಯ ಮಾಂ ಸೂತ ನಿಯಮ್ಯಾಶ್ವಾನ್ ಮುಹೂರ್ತಕಮ್ ।
ಯಾವದೇತಾನ್ನಿಹನ್ಮ್ಯಾಶು ಯ ಇಮೇ ಮದ್ವಧೋದ್ಯತಾಃ ॥೨೮॥

ವಿತೋಕನು ದೃಷ್ಟದ್ಯುಮ್ನನನಿಗೆ ಕೈಮುಗಿದು ಈ ಮಾತುಗಳನ್ನು ಆಡಿದನು. ಬಲಿಷ್ಠನೂ, ಪ್ರತಾಪಶಾಲಿಯೂ ಆದ ಪಾಂಡುಪುತ್ರನಾದ ಭೀಮಸೇನನು ನನ್ನನ್ನು ಇಲ್ಲಿ ನಿಲ್ಲಿಸಿ, ದೃತರಾಷ್ಟ್ರ ಪುತ್ರರ ಈ ಸೈನ್ಯಸಮುದ್ರವನ್ನು ಪ್ರವೇಶಿಸಿದನು. ಎಲೈ ಪುರುಷವ್ಯಾಘ್ರನೇ, ನನ್ನನ್ನು ಕುರಿತು ಪ್ರೀತಿಪೂರ್ವಕವಾಗಿ ಸೂತನೇ, ಒಂದು ಮುಹೂರ್ತದ ಕಾಲ ಅಶ್ವಗಳನ್ನು ನಿಯಂತ್ರಿಸು. ಅಷ್ಟರಲ್ಲಿ ನಾನು ನನ್ನನ್ನು ಕೊಲ್ಲಲು ಉದ್ಯುಕ್ತರಾದ ಈ ದೃತರಾಷ್ಟ್ರ ಪುತ್ರರನ್ನು ಶೀಘ್ರವಾಗಿ ಸಂಹರಿಸುತ್ತೇನೆ ಎಂದು ಹೇಳಿ (ಸೈನ್ಯವನ್ನು ಪ್ರವೇಶಿಸಿದನು).

ತತೋ ದೃಷ್ಟ್ವಾ ಗದಾಹಸ್ತಂ ಪ್ರಧಾವಂತಂ ಮಹಾಬಲಮ್ ।
ಸರ್ವೇಷಾಮೇವ ಸೈನ್ಯಾನಾಂ ಸಂಘರ್ಷಃ ಸಮಜಾಯತ ॥೨೯॥

ತ್ಕುಂಪ್ತು ತುಮುಲೇ ಯುದ್ಧೇ ವರ್ತಮಾನೇ ಭಯಾನಕೇ ।
ಭೀತ್ವಾ ರಾಜನ್ ಮಹಾವ್ಯೂಹಂ ಪ್ರವಿವೇಶ ಸುಖಾ ತವ ॥೩೦॥

ಆಗ ಕೈಯಲ್ಲಿಗದೆಯನ್ನು ಹಿಡಿದು ಓಡುತ್ತಿರುವ ಮಹಾಬಲನಾದ ಭೀಮಸೇನನನ್ನು ನೋಡಿ ಎಲ್ಲ ಸೈನ್ಯಗಳಿಗೂ ದೊಡ್ಡ ಕದನವು ಉಂಟಾಯಿತು. ಅಂತಹ ಭಯಂಕರವಾದ, ತೀವ್ರವಾದ ಯುದ್ಧವು ನಡೆಯುತ್ತಿರಲು ಎಲೈ ರಾಜನೇ, ನಿನ್ನ ಸ್ನೇಹಿತನು ಮಹಾವ್ಯೂಹವನ್ನು ಭೇದಿಸಿ ಅದರೊಳಗೆ ಪ್ರವೇಶಿಸಿದನು (ಎಂದು ಹೇಳಿದನು).

ವಿಶೋಕಸ್ಯ ವಚಃ ಶ್ರುತ್ವಾ ಧೃಷ್ಟದ್ಯುಮ್ನೋऽಪಿ ಪಾರ್ಷತಃ ।
ಪ್ರತ್ಯುವಾಚ ತತಃ ಸೂತಂ ರಣಮಧ್ಯೇ ಮಹಾಬಲಃ ॥೩೧॥

ವಿಶೋಕನ ಮಾತುಗಳನ್ನು ಕೇಳಿ ಮಹಾಬಲನಾದ ಪಾರ್ಷತನಾದ ಧೃಷ್ಟದ್ಯುಮ್ನನೂ ಸಹ ಸೂತನಾದ ವಿಶೋಕನನ್ನು ಕುರಿತು ರಣರಂಗದ ಮಧ್ಯದಲ್ಲಿ ಮಾತನಾಡಿದನು.

ನ ಹಿ ಮೇ ವಿದ್ಯತೇ ಸೂತ ಜೀವಿತೇऽದ್ಯ ಪ್ರಯೋಜನಮ್ ।
ಭೀಮಸೇನಂ ರಣೇ ಹಿತ್ವಾ ಸ್ನೇಹಮುತ್ಸೃಜ್ಯ ಪಾಂಡವೈಃ ॥೩೨॥

ಎಲೈ ಸೂತನೇ, ಪಾಂಡವರ ಜೊತೆಯಲ್ಲಿ ಸ್ನೇಹವನ್ನು ಪರಿತ್ಯಜಿಸಿ ಭೀಮಸೇನನನ್ನು ರಣಭೂಮಿಯಲ್ಲಿ ಬಿಟ್ಟು ನಾನು ಬದುಕುವುದರಿಂದ ನನಗೆ ಆಗಬೇಕಾದ ಪ್ರಯೋಜನವು ಯಾವುದೂ ಇಲ್ಲ.

ಯದಿ ಯಾಮಿ ವಿನಾ ಭೀಮಂ ಕಿಂ ಮಾಂ ಕ್ಷತ್ರಂ ವದಿಷ್ಯತಿ ।
ಪಿತಾಯನಗತೇ ಭೀಮೇ ಮಯಿ ಜೀವತ್ಯಥೇ ಯುಧಿ ।
ಧೃತಸ್ಯ ಚ ಕ್ಷತ್ರೇಣ ನಿರರ್ಥಂ ಜೀವಿತಂ ಭವೇತ್ ॥೩೩॥

ಒಂದೇ ಯಾನದಲ್ಲಿ ಸುಮ್ಮನೆ ಕುಳಿತು ಭೀಮಸೇನನನ್ನು ರಕ್ಷಿಸಲಾಗದೆ ನಾನು ಹಿಂದಿರುಗಿದರೆ ಶತ್ರುಗಳು ನನ್ನ ವಿಷಯದಲ್ಲಿ ಏನು ಹೇಳುವರು?

ಅಸ್ಪೃಷ್ಟ ತಸ್ಯ ಕುರ್ವಂತಿ ದೇವಾಃ ಸಾಗ್ನಿಪುರೋಗಮಾಃ ।
ಯಃ ಸಹಾಯಾನ್ ಪರಿತ್ಯಜ್ಯ ಸ್ಪೃಮಾನಾವ್ರಜೇದ್ ಗೃಹಮ್ ॥೩೪॥

ಯಾವನು ತನ್ನ ಸಹಾಯಕರನ್ನು ಪರಿತ್ಯಜಿಸಿ ಒಬ್ಬನೇ ತನ್ನ ಮನೆಗೆ ಹಿಂದಿರುಗುತ್ತಾನೆಯೋ, ಅವನಿಗೆ ಅಗ್ನಿ ಮೊದಲಾದ ದೇವತೆಗಳು ಅಶುಭವನ್ನು ಮಾಡುತ್ತಾರೆ.

ಮಮ ಭೀಮಃ ಸಖಾ ಚೈವ ಸಂಬಂಧೀ ಚ ಮಹಾಬಲಃ ।
ಭಕ್ತೋಽಸ್ಮಾನ್ ಭಕ್ತಿಮಾಂಶ್ಚಾಹಂ ತಮಪ್ಯರಿನಿಷೂದನಮ್ ॥೩೪॥

ಮಹಾಬಲನಾದ ಭೀಮಸೇನನು ನನ್ನ ಸ್ನೇಹಿತ ಮತ್ತು ಬಂಧು. ನಮ್ಮಲ್ಲಿ ವಿಶೇಷವಾದ ಪ್ರೀತಿಯುಳ್ಳವನು. ನಾನೂ ಸಹ ಶತ್ರುಸೂದನನಾದ ಅವನಲ್ಲಿ ಬಹಳ ಪ್ರೀತಿಯನ್ನು ಹೊಂದಿದ್ದೇನೆ.

ಸೋಽಹಂ ತತ್ರ ಗಮಿಷ್ಯಾಮಿ ಯತ್ರ ಯಾತೋ ವೃಕೋದರಃ ।
ನಿಘ್ನಂತಂ ಮಾಮರೀನ್ ಪಶ್ಯ ದಾನವಾನಿವ ವಾಸವಮ್ ॥೩೫॥

ಅಂತಹ ನಾನು ಎಲ್ಲಿ ವೃಕೋದರ ಹೋಗಿದ್ದಾನೆಯೋ ಅಲ್ಲಿಗೆ ಹೋಗುವೆನು. ಇಂದ್ರನು ದಾನವರನ್ನು ಸಂಹರಿಸಿದಂತೆ ಶತ್ರುಗಳನ್ನು ಸಂಹರಿಸುವ ನನ್ನನ್ನು ನೀನು ನೋಡು.

ಏವಮುಕ್ತ್ವಾ ತತೋ ವೀರೋ ಯಯೌ ಮಧ್ಯೇನ ವಾಹಿನೀಮ್ ।
ಭೀಮಸೇನಸ್ಯ ಮಾರ್ಗೇಷು ಗದಾಪ್ರಮಥಿತೈರ್ಗಜೈಃ ॥೩೬॥

ಹೀಗೆ ಹೇಳಿ ವೀರನಾದ ಅವನು ಭೀಮಸೇನನು ನಡೆದ ಮಾರ್ಗದಲ್ಲಿ ಬಿದ್ದಿದ್ದ ಅವನ ಗದಾಭಗ್ನವಾದ ಗಜಗಳಿಂದ ತೋರಿಸಲ್ಪಟ್ಟ ಮಾರ್ಗದಲ್ಲಿ ಸೈನ್ಯದ ಮಧ್ಯದಲ್ಲಿ ಮುಂದೆ ಸಾಗಿದನು.

ಸ ದದರ್ಶ ತತೋ ಭೀಮಂ ದಹಂತಂ ರಿಪುವಾಹಿನೀಮ್ ।
ವಾತಂ ವೃಕ್ಷಾನಿವ ಬಲಾತ್ ಪ್ರಭಂಜಂತಂ ರಣೇ ನೃಪಾನ್ ॥೩೭॥

ಅವನು ಬಿರುಗಾಳಿಯು ತನ್ನ ಬಲದಿಂದ ವೃಕ್ಷಗಳನ್ನು ಬೀಳಿಸಿದಂತೆ ಯುದ್ಧದಲ್ಲಿ ರಾಜರನ್ನು ಭಗ್ನಗೊಳಿಸುತ್ತಾ ರಿಪು ಸೈನ್ಯವನ್ನು ದಹಿಸುತ್ತಿದ್ದ ಭೀಮನನ್ನು ನೋಡಿದನು.

ತೇ ಹನ್ಯಮಾನಾಃ ಸಮರೇ ರಥಿನಃ ಸಾದಿನಸ್ತಥಾ ।
ಪಾದಾತಾ ದಂತಿನಶ್ಚೈವ ಚಕ್ರುರಾರ್ತಸ್ವರಂ ಮಹತ್ ॥೩೮॥

ಭೀಮನ ಹೊಡೆತಕ್ಕೆ ಸಿಕ್ಕಿದ ರಥಿಕರು, ಅಶ್ವಾರೋಹಿಗಳು, ಪದಾತಿಗಳು ಮತ್ತು ಗಜಗಳು ರಣರಂಗದಲ್ಲಿ ದೊಡ್ಡ ಆರ್ತಸ್ವರವನ್ನು ಮಾಡಿದವು.

ಹಾಹಾಕಾರಶ್ಚ ಸಂಜಜ್ಞೇ ತವ ಸೈನ್ಯಸ್ಯ ಮಾರಿಷ ।
ವಧ್ಯತೋ ಭೀಮಸೇನೇನ ಕೃತಿನಾ ಚಿತ್ರಯೋಧಿನಾ ॥೩೯॥

ಎಲೈ ಪೂಜ್ಯನೇ, ವಿಚಿತ್ರವಾಗಿ ಯುದ್ಧವನ್ನು ಮಾಡುವ ಕುಶಲನಾದ ಭೀಮಸೇನನಿಂದ ವಧಿಸಲ್ಪಡುವ ನಿನ್ನ ಸೈನ್ಯದಲ್ಲಿ ದೊಡ್ಡ ಹಾಹಾಕಾರವುಂಟಾಯಿತು.

ತತಃ ಕೃತಾಸ್ತ್ರಾಸ್ತೇ ಸರ್ವೇ ಪರಿವಾರ್ಯ ವೃಕೋದರಮ್ ।
ಅಭೀತಾಃ ಸಮವರ್ತಂತ ಶಸ್ತ್ರವೃಷ್ಟ್ಯಾ ಸಮಂತತಃ ॥೪೦॥

ಅನಂತರ ಅಸ್ತ್ರವಿದ್ಯೆಯನ್ನು ಬಲ್ಲ ಅವರೆಲ್ಲರೂ ವೃಕೋದರನನ್ನು ಸುತ್ತುವರಿದು ಶಸ್ತ್ರಗಳ ಮಳೆಯನ್ನು ಎಲ್ಲ ಕಡೆಗಳಿಂದಲೂ ಸುರಿಸುತ್ತ ನಿರ್ಭಯರಾಗಿ ಮುಂದೆ ಬಂದರು.

ಅಭಿದ್ರುತಂ ಶಸ್ತ್ರಭೃತಾಂ ವರಿಷ್ಠಂ
ಸಮಂತತಃ ಪಾಂಡವಂ ಲೋಕವೀರೈಃ ।
ಸೈನ್ಯೇನ ಘೋರೇಣ ಸುಸಂಗತೇನ
ದೃಷ್ಟ್ವಾ ಬಲೀ ಪಾರ್ಷತೋ ಭೀಮಸೇನಮ್ ॥೪೧॥

ಅಥೋಪಗಚ್ಛಚ್ಛರವಿಕ್ಷತಾಂಗಂ
ಪದಾತಿನಂ ಕ್ರೋಧವಿಷಂ ವಮಂತಮ್ ।
ಆಶ್ವಾಸಯನ್ ಪಾರ್ಷತೋ ಭೀಮಸೇನಂ
ಗದಾಹಸ್ತಂ ಕಾಲಮಿವಾಂತಕಾಲೇ ॥೪೨॥

ಬಲಿಷ್ಠನಾದ ಧೃಷ್ಟದ್ಯುಮ್ನನು ಸುಸಂಗತವಾದ ಘೋರವಾದ ಸೈನ್ಯದಿಂದ ಕೂಡಿದ, ಲೋಕವೀರರಿಂದ ಓಡಿಬಂದು ಸುತ್ತುವರಿಯಲ್ಪಟ್ಟ, ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ,

ಕ್ರೋಧವಿಷವನ್ನು ಕಾರುತ್ತಿದ್ದ, ಕೈಯಲ್ಲಿ ಗದೆಯನ್ನು ಹಿಡಿದು ಅಂತಕಾಲದ ಯಮನಂತಿದ್ದ, ಗದಪ್ರಹಾರದಿಂದ ಗಾಯಗೊಂಡ ಶರೀರವನ್ನು ಹೊಂದಿದ್ದ, ಪದಾತಿಯಾಗಿದ್ದ ಪಾಂಡುಪುತ್ರನಾದ ಭೀಮಸೇನನನ್ನು ಸಮಾಧಾನ ಪಡಿಸುತ್ತಾ ಅವನ ಸಮೀಪಕ್ಕೆ ಹೋದನು.

ನಿಶಲ್ಯಮೇನಂ ಚ ಚಕಾರ ತೂರ್ಣಮ್
ಆರೋಪಯಚ್ಚಾತ್ಮರಥಂ ಮಹಾತ್ಮಾ ।
ಭೃಶಂ ಪರಿಷ್ವಜ್ಯ ಚ ಭೀಮಸೇನಮ್
ಆಶ್ವಾಸಯಾಮಾಸ ಚ ಶತ್ರುಮಧ್ಯೇ ॥೪೩॥

ಮಹಾತ್ಮನಾದ ಅವನು ಶೀಘ್ರವಾಗಿ ಭೀಮಸೇನನ ಶರೀರಕ್ಕೆ ನಾಟಿದ ಶಲ್ಯಗಳನ್ನು ತೆಗೆದು, ಭೀಮಸೇನನನ್ನು ದೃಢವಾಗಿ ಆಲಿಂಗಿಸಿ ತನ್ನ ರಥಕ್ಕೆ ಏರಿಸಿ ಶತ್ರುಗಳ ಮಧ್ಯದಲ್ಲಿ ಸಮಾಧಾನ ಪಡಿಸಿದನು.

ತಥಾ ತಸ್ಮಿನ್ ವರ್ತಮಾನೇऽತಿವೇಗಂ
ಭ್ರಾತ್ಯನಥೋಪೇತ್ಯ ತವಾಪಿ ಪುತ್ರಃ ।
ತಸ್ಮಿನ್ ವಿಮರ್ದೇ ಮಹತಿ ಪ್ರವೃತ್ತೇ
ದೃಷ್ಟ್ವಾ ರಣೇ ವಾಕ್ಯಮಿದಂ ಬಭಾಷೇ ॥೪೪॥

ಆ ಘಟನೆಯು ಹಾಗೆ ನಡೆಯುತ್ತಿರಲು ನಿನ್ನ ಪುತ್ರನು ಶೀಘ್ರವಾಗಿ ತನ್ನ ಸಹೋದರರ ಬಳಿಗೆ ಬಂದು ಆ ದೊಡ್ಡ ಯುದ್ಧವು ಪ್ರವೃತ್ತವಾಗುತ್ತಿರಲು ಧೃಷ್ಟದ್ಯುಮ್ನನನ್ನು ನೋಡಿ ರಣರಂಗದಲ್ಲಿ ಈ ಮಾತನ್ನು ಆಡಿದನು.

ಅಯಂ ದುರಾತ್ಮಾ ದ್ರುಪದಸ್ಯ ಪುತ್ರಃ
ಸಮಾಗತೋ ಭೀಮಸೇನೇನ ಸಾರ್ಧಮ್ ।
ತಂ ಯಾತ ಸರ್ವೇ ಸಹಿತಾ ನಿಹಂತುಂ
ಮಾ ವೋ ರಿಪುಃ ಪ್ರಾರ್ಥಯತಾಮನೀಕಮ್ ॥೪೫॥

ಈ ದುಷ್ಟನಾದ, ದ್ರುಪದಪುತ್ರನಾದ ಧೃಷ್ಟದ್ಯುಮ್ನನು ಭೀಮಸೇನನ ಜೊತೆಯಲ್ಲಿ ಬರುತ್ತಿದ್ದಾನೆ. ಎಲ್ಲರೂ ಜೊತೆಯಾಗಿ ಮುಂದುವರಿದು ಅವನನ್ನು ಕೊಲ್ಲಿ. ಶತ್ರುವು ವಧೆಗಾಗಿ ನಿಮ್ಮ ಸೈನ್ಯವನ್ನು ಅಪೇಕ್ಷಿಸುವುದು ಬೇಡ.

ಶ್ರುತ್ವಾ ತು ವಾಕ್ಯಂ ತಮಮೃಷ್ಯಮಾಣಾ
ಜ್ಯೇಷ್ಠಾಜ್ಞಯಾ ಚೋದಿತಾ ಧಾರ್ತರಾಷ್ಟ್ರಾಃ ।
ವಧಾಯ ನಿಷ್ಪೇತುರುದಾಯುಧಾಸ್ತೇ
ಯುಗಕ್ಷಯೇ ಕೇತವೋ ಯದ್ವದುಗ್ರಾಃ ॥೪೬॥

ದುರ್ಯೋಧನನ ಮಾತುಗಳನ್ನು ಕೇಳಿ ಹಿರಿಯಣ್ಣನಾದ ಅವನ ಆದೇಶದಿಂದ ಪ್ರೇರಿತರಾದ ಧೃತರಾಷ್ಟ್ರಪುತ್ರರು ಧೃಷ್ಟದ್ಯುಮ್ನನನ್ನು ನೋಡಿ ಸಹಿಸದೆ, ಕೈಯಲ್ಲಿ ಆಯುಧಗಳನ್ನು ಹಿಡಿದು, ಯುಗಾಂತಕಾಲದ ಧೂಮಕೇತುವಿಗಳಂತೆ ಉಗ್ರರಾಗಿ ಧೃಷ್ಟದ್ಯುಮ್ನನನ್ನು ಕೊಲ್ಲಲು ಮುಂದೆ ಸಾಗಿದರು.

ಪ್ರಗೃಹ್ಯ ಚಿತ್ರಾಣಿ ಧನೂಂಷಿ ವೀರಾ
ಜ್ಯಾನೇಮಿಘೋಷೈಃ ಪ್ರವಿಕಂಪಯಂತಃ ।
ಶರೈರವರ್ಷನ್ದ್ರುಪದಸ್ಯ ಪುತ್ರಂ
ಯಥಾಂಬುದಾ ಭೂಧರಂ ವಾರಿಜಾಲೈಃ ।
ನಿಹತ್ಯ ತಾಂಶ್ಚಾಪಿ ಶರೈಃ ಸುತೀಕ್ಷ್ಣೈಃ
ನ ವಿವ್ಯಥೇ ಸಮರೇ ಚಿತ್ರಯೋಧೀ ॥೪೭॥

ವೀರರಾದ ಅವರು ವಿಚಿತ್ರವಾದ ಧನುಸ್ಸುಗಳನ್ನು ಹಿಡಿದುಕೊಂಡು ಹೆದೆಯ ಘೋಷದಿಂದಲೂ, ರಥದ ಘೋಷದಿಂದಲೂ ಭೂಮಿಯನ್ನು ನಡುಗಿಸುತ್ತಾ ಮೋಡಗಳು ಪರ್ವತದ ಮೇಲೆ ಜಲಸಮೂಹವನ್ನು ಸುರಿಸಿದಂತೆ ದ್ರುಪದ ಪುತ್ರನಾದ ಧೃಷ್ಟದ್ಯುಮ್ನನ ಮೇಲೆ ಬಾಣಗಳ ಮಳೆಯನ್ನು ಕರೆದರು. ವಿಚಿತ್ರವಾಗಿ ಯುದ್ಧವನ್ನು ಮಾಡುವ ಧೃಷ್ಟದ್ಯುಮ್ನನು ಅವರನ್ನು ಅತ್ಯಂತ ತೀಕ್ಷ್ಣವಾದ ಬಾಣಗಳಿಂದ ಕೊಂದನು ಮತ್ತು ರಣರಂಗದಲ್ಲಿ ಯಾವ ವ್ಯಥೆಯನ್ನೂ ಹೊಂದಲಿಲ್ಲ.

ಸಮಭ್ಯುದೀರ್ಯಾಂಶ್ಚ ತವಾತ್ಮಜಾಂಸ್ತಥಾ
ನಿಶಾಮ್ಯ ವೀರಾನಭಿತಃ ಸ್ಥಿತಾನ್ ರಣೇ ।
ಜಿಘಾಂಸುರುಗ್ರಂ ದ್ರುಪದಾತ್ಮಜೋ ಯುವಾ
ಪ್ರಮೋಹನಾಸ್ತ್ರಂ ಯುಯುಜೇ ಮಹಾರಥಃ ।
ಕ್ರುದ್ಧೋ ಭೃಶಂ ತವ ಪುತ್ರೇಷು ರಾಜನ್
ದೈತ್ಯೇಷು ಯದ್ವತ್ ಸಮರೇ ಮಹೇಂದ್ರಃ ॥೪೮॥

ವೀರರಾದ ನಿನ್ನ ಪುತ್ರರು ಬಲದಿಂದ ಪ್ರವೃದ್ಧರಾಗಿ ರಣರಂಗದಲ್ಲಿ ಸುತ್ತಲೂ ನಿಂತಿರುವುದನ್ನು ನೋಡಿ ಮಹಾರಥನೂ, ಯುವಕನೂ ಆದ, ದ್ರುಪದನ ಪುತ್ರನಾದ ಧೃಷ್ಟದ್ಯುಮ್ನನು ಅವರನ್ನು ಕೊಲ್ಲಲು ಬಯಸಿ ಎಲೈ ರಾಜನೇ, ಇಂದ್ರನು ಯುದ್ಧದಲ್ಲಿ ದೈತ್ಯರ ಮೇಲೆ ಕ್ರೋಧಗೊಂಡಂತೆ ಬಹಳ ಕ್ರೋಧಗೊಂಡು ನಿನ್ನ ಪುತ್ರರ ಮೇಲೆ ಸಂಮೋಹನಾಸ್ತ್ರವನ್ನು ಪ್ರಯೋಗಿಸಿದನು.

ಸ ವೈ ತತೋಽಸ್ತ್ರಂ ಸುಮಹಾಪ್ರಭಾವಂ
ಪ್ರಮೋಹನಂ ದ್ರೋಣದತ್ತಂ ಮಹಾತ್ಮಾ ।
ಪ್ರಯೋಜಯಾಮಾಸ ಉದಾರಕರ್ಮಾ
ತಸ್ಮಿನ್ ರಣೇ ತವ ಸೈನ್ಯಸ್ಯ ರಾಜನ್ ॥೪೯॥

ಎಲೈ ರಾಜನೇ, ಉದಾರಕರ್ಮನೂ, ಮಹಾತ್ಮನೂ ಆದ ಧೃಷ್ಟದ್ಯುಮ್ನನು ದ್ರೋಣರು ಕೊಟ್ಟ ಮಹಾಪ್ರಭಾವಶಾಲಿಯಾದ ಸಮ್ಮೋಹನಾಸ್ತ್ರವನ್ನು ರಣರಂಗದಲ್ಲಿ ನಿನ್ನ ಸೈನ್ಯದ ಮೇಲೆ ಪ್ರಯೋಗಿಸಿದನು.

ತತೋ ವ್ಯಮುಹ್ಯಂತ ರಣೇ ನೃವೀರಾಃ
ಪ್ರಮೋಹನಾಸ್ತ್ರಾಹತಬುದ್ಧಿಸತ್ತ್ವಾಃ ।
ಪ್ರದುದ್ರುವುಃ ಕುರವಶ್ಚೈವ ಸರ್ವೇ
ಸವಾಜಿನಾಗಾಃ ಸರಥಾಃ ಸಮಂತಾತ್ ।
ಪರೀತಕಾಲಾನಿವ ನಷ್ಟಸಂಜ್ಞಾನ್
ಮೋಹೋಪೇತಾಂಸ್ತವ ಪುತ್ರಾನ್ ನಿಶಮ್ಯ ॥೫೦॥

ಆಗ ವೀರರಾದ ಅವರು ಸಂಮೋಹನಾಸ್ತ್ರದ ಪ್ರಭಾವದಿಂದಾಗಿ ಬುದ್ಧಿಯನ್ನು ಮತ್ತು ಧೈರ್ಯವನ್ನು ಕಳೆದುಕೊಂಡು ರಣರಂಗದಲ್ಲಿ ವಿಮೋಹಿತರಾದರು. ಮರಣವನ್ನು ಸಮೀಪಿಸಿದವರಂತೆ ಪ್ರಜ್ಞೆಯನ್ನು ಕಳೆದುಕೊಂಡು ವಿಮೋಹಿತರಾಗಿದ್ದ ನಿನ್ನ ಪುತ್ರರನ್ನು ನೋಡಿ ಉಳಿದ ಕುರುಗಳೆಲ್ಲರೂ ತಮ್ಮ ಗಜಾಶ್ವರಥಗಳ ಜೊತೆಯಲ್ಲಿ ಎಲ್ಲ ಕಡೆಯಲ್ಲಿಯೂ ಓಡಿಹೋದರು.

ಏತಸ್ಮಿನ್ನೇವ ಕಾಲೇ ತು ಭೀಮಃ ಪ್ರಹರತಾಂ ವರಃ ।
ವಿಶ್ರಮ್ಯ ಚ ತದಾ ರಾಜನ್ ಪೀತ್ವಾಮೃತರಸಂ ಜಲಮ್ ॥೫೧॥

ಪುನಃ ಸನ್ನಹ್ಯ ಸಹಸಾ ಯೋಧಯಾಮಾಸ ಸಂಯುಗೇ ।
ಧೃಷ್ಟದ್ಯುಮ್ನೇನ ಸಂಕ್ರುದ್ಧೋ ಕಾಲಯಾಮಾಸ ಭಾರತ ॥೫೨॥

ಎಲೈ ರಾಜನೇ, ಈ ಸಮಯದಲ್ಲಿ ಪ್ರಹಾರ ಮಾಡುವವರಲ್ಲಿ ಶ್ರೇಷ್ಠನಾದ ಭೀಮನು ಅಮೃತದ ರಸದಂತಿದ್ದ ಜಲವನ್ನು ಪಾನಮಾಡಿ ವಿಶ್ರಾಂತಿಯನ್ನು ಪಡೆದು ಪುನಃ ಕವಚಾದಿಗಳನ್ನು ಧರಿಸಿ ತಕ್ಷಣದಲ್ಲಿಯೇ ಧೃಷ್ಟದ್ಯುಮ್ನನ ಜೊತೆಯಲ್ಲಿ ಯುದ್ಧವನ್ನು ಮಾಡಿ ಕೌರವ ಸೈನ್ಯವನ್ನು ಕಲಕಾಡಿದನು.

ಏತಸ್ಮಿನ್ನೇವ ಕಾಲೇ ತು ದ್ರೋಣಃ ಶಸ್ತ್ರಭೃತಾಂ ವರಃ ।
ದ್ರುಪದಂ ತ್ರಿಭಿರಾಸಾದ್ಯ ಶರೈರ್ವಿವ್ಯಾಧ ದಾರುಣೈಃ ॥೫೩॥

ಈ ಕಾಲದಲ್ಲಿಯೇ ಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ ದ್ರೋಣರು ದ್ರುಪದನನ್ನು ಸಮೀಪಿಸಿ ಘೋರವಾದ ಮೂರುಬಾಣಗಳಿಂದ ಅವನನ್ನು ಹೊಡೆದರು.

ಸೋಽತಿವಿದ್ಧಸ್ತದಾ ರಾಜನ್ ರಣೇ ದ್ರೋಣೇನ ಪಾರ್ಥಿವಃ ।
ಅಪಾಯಾದ್ ದ್ರುಪದೋ ರಾಜನ್ ಪೂರ್ವವೈರಮನುಸ್ಮರನ್ ॥೫೪॥

ಎಲೈ ರಾಜನೇ, ದ್ರೋಣರಿಂದ ಬಹಳವಾಗಿ ಗಾಯಗೊಂಡ ಆ ದ್ರುಪದ ರಾಜನು ಹಿಂದಿನ ವೈರವನ್ನು ಸ್ಮರಿಸಿಕೊಳ್ಳುತ್ತಾ ಅಲ್ಲಿಂದ ದೂರ ಹೋದನು.

ಜಿತ್ವಾ ತು ದ್ರುಪದಂ ದ್ರೋಣಃ ಶಂಖಂ ದಧ್ಮೌ ಪ್ರತಾಪವಾನ್ ।
ತಸ್ಯ ಶಂಖಸ್ವನಂ ಶ್ರುತ್ವಾ ವಿತ್ರೇಸುಃ ಸರ್ವಸೋಮಕಾಃ ॥೫೫॥

ಪ್ರತಾಪಶಾಲಿಗಳಾದ ದ್ರೋಣರು ದ್ರುಪದನನ್ನು ಗೆದ್ದು ಶಂಖವನ್ನು ಊದಿದರು. ಆ ಶಂಖಧ್ವನಿಯನ್ನು ಕೇಳಿ ಎಲ್ಲ ಸೋಮಕರೂ ಬಹಳವಾಗಿ ಹೆದರಿದರು.

ಅಥ ಶುಶ್ರಾವ ತೇಜಸ್ವೀ ದ್ರೋಣಃ ಶಸ್ತ್ರಭೃತಾಂ ವರಃ ।
ಪ್ರಮೋಹನಾಸ್ತ್ರೇಣ ರಣೇ ಮೋಹಿತಾನಾತ್ಮಜಾಂಸ್ತವ ॥೫೬॥

ಅನಂತರ ಶಸ್ತ್ರಧಾರಿಗಳಲ್ಲಿ ಶ್ರೇಷ್ಠರೂ, ತೇಜಸ್ವಿಗಳೂ ಆದ ದ್ರೋಣರು ನಿನ್ನ ಪುತ್ರರು ಪ್ರಮೋಹನಾಸ್ತ್ರದಿಂದ ಮೋಹಿತರಾಗಿದ್ದಾರೆಂಬ ವಾರ್ತೆಯನ್ನು ಕೇಳಿದರು.

ತತೋ ದ್ರೋಣೋ ರಾಜಗೃದ್ಧೀ ತ್ವರಿತೋಽಭಿಯಯೌ ರಣಾತ್ ।
ತತ್ರಾಪಶ್ಯನ್ಮಹೇಷ್ವಾಸೋ ಭಾರದ್ವಾಜಃ ಪ್ರತಾಪವಾನ್ ।
ಧೃಷ್ಟದ್ಯುಮ್ನಂ ಚ ಭೀಮಂ ಚ ವಿಚರಂತೌ ಮಹಾರಣೇ ॥೫೭॥

ಮೋಹಾವಿಷ್ಟಾಂಶ್ಚ ತೇ ಪುತ್ರಾನಪಶ್ಯತ್ ಸ ಮಹಾರಥಃ ।
ತತಃ ಪ್ರಜ್ಞಾಸ್ತ್ರಮಾದಾಯ ಮೋಹನಾಸ್ತ್ರಂ ವ್ಯಶಾತಯತ್ ॥೫೮॥

ರಾಜರ ಹಿತವನ್ನು ಬಯಸುವ ದ್ರೋಣರು ತಕ್ಷಣದಲ್ಲಿ ಆ ಯುದ್ಧಭೂಮಿಯಿಂದ ಹಿಂದೆ ಸರಿದು ಪ್ರತಾಪಶಾಲಿಗಳೂ, ಮಹಾಧನುರ್ಧಾರಿಗಳೂ ಆದ ಅವರು ಧೃಷ್ಟದ್ಯುಮ್ನ ಮತ್ತು ಭೀಮಸೇನರು ಮಹಾಯುದ್ಧದಲ್ಲಿ ಓಡಾಡುತ್ತಿರುವುದನ್ನು ನೋಡಿದರು. ಆ ಮಹಾರಥರು, ನಿನ್ನ ಪುತ್ರರು ಮೋಹಪರವಶರಾಗಿರುವುದನ್ನು ನೋಡಿದರು. ಆಗ ಪ್ರಜ್ಞಾನಾಸ್ತ್ರವನ್ನು ಪ್ರಯೋಗಿಸಿ ಮೋಹನಾಸ್ತ್ರವನ್ನು ನಾಶಗೊಳಿಸಿದರು.

ಅಥ ಪ್ರತ್ಯಾಗತಪ್ರಾಣಾಸ್ತವ ಪುತ್ರಾ ಮಹಾರಥಾಃ ।
ಪುನರ್ಯುದ್ಧಾಯ ಸಮರೇ ಪ್ರಯಯುರ್ಭೀಮಪಾರ್ಷತೌ ॥೫೯॥

ಆಗ ಮಹಾರಥರಾದ ನಿನ್ನ ಪುತ್ರರು ತಮ್ಮ ಪ್ರಾಣ (ಪ್ರಜ್ಞೆ)ವನ್ನು ಮರಳಿ ಪಡೆದು ಯುದ್ಧದಲ್ಲಿ ಪುನಃ ಭೀಮ-ಧೃಷ್ಟದ್ಯುಮ್ನರ ಕಡೆಗೆ ಸಾಗಿದರು.

ತತೋ ಯುಧಿಷ್ಠಿರಃ ಪ್ರಾಹ ಸಮಾಹೂಯ ಸ್ವಸೈನಿಕಾನ್ ।
ಗಚ್ಛಂತು ಪದವೀಂ ಶಕ್ಯಾ ಭೀಮಪಾರ್ಷತಯೋರ್ಯುಧಿ ॥೬೦॥

ಸೌಭದ್ರಪ್ರಮುಖಾ ವೀರಾ ರಥಾ ದ್ವಾದಶ ದಂಶಿತಾಃ ।
ಪ್ರವೃತ್ತಿಮಧಿಗಚ್ಛಂತು ನ ಹಿ ಶುಧ್ಯತಿ ಮೇ ಮನಃ ॥೬೧॥

ಪ್ರವೃತ್ತಿಂ ಭೀಮಸೇನಸ್ಯ ಪಾರ್ಷತಸ್ಯ ಚ ಸಂಯುಗೇ ।
ವಿಜ್ಞಾಯ ಸಮರೇ ಶೀಘ್ರಂ ಪ್ರವಿಶದ್ಧ್ವಂ ರಥಾರ್ಣವಮ್ ।
ಗಚ್ಛಂತು ಪರಯಾ ಶಕ್ಯಾ ಭವಂತ ಇತಿ ಮೇ ಮತಿಃ ॥೬೨॥

ಆಗ ಯುಧಿಷ್ಠಿರನು ತನ್ನ ಸೈನಿಕರನ್ನು ಕರೆದು ರಣರಂಗದಲ್ಲಿ ಭೀಮ ಧೃಷ್ಟದ್ಯುಮ್ನರು ಹೋಗಿರುವ ಮಾರ್ಗವನ್ನು ಅನುಸರಿಸಿ ಹೋಗಿ, ಅಭಿಮನ್ಯು ಮೊದಲಾದ ಹನ್ನೆರಡು ರಥರು ಶಸ್ತ್ರಕವಚದಿಂದ ಸನ್ನದ್ಧರಾಗಿ ಭೀಮಸೇನನ ವಾರ್ತೆಯನ್ನು ತಿಳಿದುಕೊಳ್ಳಿ. ನನ್ನ ಮನಸ್ಸಿಗೆ ಏಕೋ ಸಮಾಧಾನವಿಲ್ಲ. ರಣರಂಗದಲ್ಲಿ ಭೀಮಸೇನ ಮತ್ತು ಧೃಷ್ಟದ್ಯುಮ್ನರ ಪ್ರವೃತ್ತಿಯನ್ನು ತಿಳಿದು ಶೀಘ್ರವಾಗಿ ರಥಸಮೂಹವನ್ನು ಪ್ರವೇಶಿಸಿ. ನೀವೆಲ್ಲರೂ ಶಕ್ತಿ ಇದ್ದಷ್ಟು ಶೀಘ್ರವಾಗಿ ಹೋಗಬೇಕು ಎಂದು ನನ್ನ ಅಭಿಪ್ರಾಯ ಎಂದು ಹೇಳಿದನು.

ತ ಏವಂ ಸಮನುಜ್ಞಾತಾಃ ಶೂರಾ ವಿಕ್ರಾಂತಯೋಧಿನಃ ।
ಬಾಢಮಿತ್ಯೇವಮುಕ್ತ್ವಾ ತು ಸರ್ವೇ ಪುರುಷಮಾನಿನಃ ।
ಮಧ್ಯಂದಿನಗತೇ ಸೂರ್ಯೇ ಪ್ರಯಯುಃ ಸರ್ವ ಏವ ಹಿ ॥೬೩॥

ಕೇಕಯಾ ದ್ರೌಪದೇಯಾಶ್ಚ ಧೃಷ್ಟಕೇತುಶ್ಚ ವೀರ್ಯವಾನ್ ।
ಅಭಿಮನ್ಯುಂ ಪುರಸ್ಕೃತ್ಯ ಮಹತ್ಯಾ ಸೇನಯಾ ವೃತಾಃ ॥೬೪॥

ಶೂರರೂ ಪರಾಕ್ರಮವುಳ್ಳ ಯೋಧರೂ ತಮ್ಮ ಪರಾಕ್ರಮದಲ್ಲಿ ವಿಶ್ವಾಸವುಳ್ಳವರೂ ಆದ ಅವರೆಲ್ಲರೂ ಹೀಗೆ ಆಜ್ಞಪ್ತರಾಗಿ ಹಾಗೆಯೇ ಆಗಲಿ ಎಂದು ಹೇಳಿ ಸೂರ್ಯನು ಆಕಾಶಮಧ್ಯಗತನಾಗಿರುವಾಗ ಕೇಕಯರು, ದ್ರೌಪದಿಯ ಮಕ್ಕಳು, ಪರಾಕ್ರಮಶಾಲಿಯಾದ ಧೃಷ್ಟಕೇತು ಇವರೆಲ್ಲರೂ ಅಭಿಮನ್ಯುವನ್ನು ಮುಂದೆ ಮಾಡಿಕೊಂಡು ದೊಡ್ಡ ಸೇನೆಯಿಂದ ಪರಿವೃತರಾಗಿ ಅಲ್ಲಿಂದ ಹೊರಟರು.

ತೇ ಕೃತ್ವಾ ಸಮರೇ ವ್ಯೂಹಂ ಸೂಚೀಮುಖಮರಿಂದಮಾಃ ।
ಬಿಭಿದುರ್ಧಾರ್ತರಾಷ್ಟ್ರಾಣಾಂ ತದ್ರಥಾನೀಕಮಾಹವೇ ॥೬೫॥

ಅರಿಂದಮರಾದ ಅವರು ರಣರಂಗದಲ್ಲಿ ಒಂದು ಸೂಚೀಮುಖ ವ್ಯೂಹವನ್ನು ಮಾಡಿ ಧೃತರಾಷ್ಟ್ರನ ಪುತ್ರರ ರಥಸಮೂಹವನ್ನು ಭೇದಿಸಿದರು.

ತಾನ್ ಪ್ರಯಾತಾನ್ ಮಹೇಷ್ವಾಸಾನಭಿಮನ್ಯುಪುರೋಗಮಾನ್ ।
ಭೀಮಸೇನಭಯಾವಿಷ್ಟಾ ಧೃಷ್ಟದ್ಯುಮ್ನವಿಮೋಹಿತಾ ॥೬೬॥

ನ ಸಂಧಾರಯಿತುಂ ಶಕ್ತಾ ತವ ಸೇನಾ ಜನಾಧಿಪ ।
ಮದಮೂರ್ಛಾನ್ವಿತಾತ್ಮಾನಂ ಪ್ರಮದೇವಾಧ್ವನಿ ಸ್ಥಿತಾ ॥೬೭॥

ಎಲೈ ರಾಜನೇ, ಭೀಮಸೇನನ ಭಯದಿಂದ ಕೂಡಿದ ಧೃಷ್ಟದ್ಯುಮ್ನನ ಅಸ್ತ್ರದಿಂದ ವಿಮೋಹಿತವಾದ ನಿನ್ನ ಸೇನೆಯು ಮದ ಮತ್ತು ಮೂರ್ಛೆಗೆ ಒಳಗಾಗಿ ದಾರಿಯಲ್ಲಿ ನಿಂತ ವನಿತೆಯಂತೆ ಮೇಲೆರಗಿ ಬರುತ್ತಿದ್ದ ಅಭಿಮನ್ಯು ಮೊದಲಾದ ಮಹಾಧನುರ್ಧಾರಿಗಳನ್ನು ಎದುರಿಸಲು ಸಾಧ್ಯವಾಗಲಿಲ್ಲ.

ತೇಽಭಿಯಾತಾ ಮಹೇಷ್ವಾಸಾಃ ಸುವರ್ಣವಿಕೃತಧ್ವಜಾಃ ।
ಪರೀಪ್ಸಂತೋಽಭ್ಯಧಾವಂತ ಧೃಷ್ಟದ್ಯುಮ್ನವೃಕೋದರೌ ॥೬೮॥

ಮಹಾಧನುರ್ಧಾರಿಗಳೂ, ಸುವರ್ಣಾಲಂಕೃತ ಧ್ವಜವುಳ್ಳವರೂ ಆದ ಅವರು (ಅಭಿಮನ್ಯು ಮೊದಲಾದವರು) ಧೃಷ್ಟದ್ಯುಮ್ನ ಮತ್ತು ಭೀಮಸೇನರನ್ನು ರಕ್ಷಿಸಲು ಬಯಸಿ ವೇಗವಾಗಿ ಅವರ ಕಡೆಗೆ ಓಡಿದರು.

ತೌ ಚ ದೃಷ್ಟ್ವಾ ಮಹೇಷ್ವಾಸಾನಭಿಮನ್ಯುಪುರೋಗಮಾನ್ ।
ಬಭೂವತುರ್ಮುದಾ ಯುಕ್ತೌ ನಿಘ್ನಂತೌ ತವ ವಾಹಿನೀಮ್ ॥೬೯॥

ನಿನ್ನ ಸೈನ್ಯವನ್ನು ಸಂಹರಿಸುತ್ತಿದ್ದ ಧೃಷ್ಟದ್ಯುಮ್ನ ಮತ್ತು ಭೀಮಸೇನರು ಮಹಾಧನುರ್ಧಾರಿಗಳಾದ ಅಭಿಮನ್ಯು ಮೊದಲಾದವರನ್ನು ನೋಡಿ ಸಂತೋಷವನ್ನು ಹೊಂದಿದರು.

ದೃಷ್ಟ್ವಾ ಚ ಸಹಸಾಯಾಂತಂ ಪಾಂಚಾಲ್ಯೋ ಗುರುಮಾತ್ಮನಃ ।
ನಾಶಂಸತ ವಧಂ ವೀರಃ ಪುತ್ರಾಣಾಂ ತವ ಪಾರ್ಷತಃ ॥೭೦॥

ಇತ್ತ ಕಡೆ ತನ್ನ ಗುರುಗಳಾದ ದ್ರೋಣರು ಇದ್ದಕ್ಕಿದ್ದಂತೆಯೇ ಬಂದುದನ್ನು ನೋಡಿ ವೀರನಾದ ಧೃಷ್ಟದ್ಯುಮ್ನನು ನಿನ್ನ ಪುತ್ರರ ವಧೆಯ ಅಭಿಪ್ರಾಯವನ್ನು ತೊರೆದನು.

ತತೋ ರಥಂ ಸಮಾರೋಹ್ಯ ಕೇಕಯಸ್ಯ ವೃಕೋದರಮ್ ।
ಅಭ್ಯಧಾವತ್ ಸುಸಂಕ್ರುದ್ಧೋ ದ್ರೋಣಮಿಷ್ವಸ್ತ್ರಧಾರಗಮ್ ॥೭೧॥

ಆಗ ಭೀಮಸೇನನನ್ನು ಕೇಕಯರಾಜನ ರಥದಲ್ಲಿ ಧೃಷ್ಟದ್ಯುಮ್ನನನ್ನು ಏರಿಸಿಕೊಂಡು ಬಹಳ ಕೋಪದಿಂದ ಕೂಡಿದವನಾಗಿ ಸರ್ವವಿದ್ಯಾಪಾರಂಗತನಾದ ದ್ರೋಣರ ಮೇಲೆ ಎರಗಿದನು.

ತಸ್ಯಾಭಿಪತತಸ್ತೂರ್ಣಂ ಭಾರದ್ವಾಜಃ ಪ್ರತಾಪವಾನ್ ।
ಕ್ರುದ್ಧಶ್ಚಿಚ್ಛೇದ ಭಲ್ಲೇನ ಧನುಃ ಶತ್ರುನಿಷೂದನಃ ॥೭೨॥

ತನ್ನ ಮೇಲೆ ಎರಗಿ ಬರುತ್ತಿದ್ದ ಅವನನ್ನು ನೋಡಿ ಪ್ರತಾಪಶಾಲಿಗಳೂ, ಶತ್ರು ಸಂಹಾರಕರು ಆದ ದ್ರೋಣರು ಕೋಪಗೊಂಡು ಭಲ್ಲದಿಂದ ಅವನ ಧನುಸ್ಸನ್ನು ಕತ್ತರಿಸಿದರು.

ಅನ್ಯಾಂಶ್ಚ ಶತಶೋ ಬಾಣಾನ್ ಪ್ರೇಷಯಾಮಾಸ ಪಾರ್ಷತೇ ।
ದುರ್ಯೋಧನಹಿತಾರ್ಥಾಯ ಭರ್ತ್ರಪಿಂಡಮನುಸ್ಮರನ್ ॥೭೩॥

ಭರ್ತ್ರಪಿಂಡವನ್ನು ಸ್ಮರಿಸಿ ದುರ್ಯೋಧನನಿಗೆ ಹಿತವನ್ನು ಮಾಡಲು ಧೃಷ್ಟದ್ಯುಮ್ನನ ಮೇಲೆ ಇನ್ನೂ ನೂರಾರು ಬಾಣಗಳನ್ನು ಪ್ರಯೋಗಿಸಿದನು.

ಅಥಾನ್ಯದ್ ಧನುರಾದಾಯ ಪಾರ್ಷತಃ ಪರವೀರಹಾ ।
ದ್ರೋಣಂ ವಿವ್ಯಾಧ ಸಪ್ತತ್ಯಾ ರುಗ್ಮಪುಂಖೈಃ ಶಿಲಾಶಿತೈಃ ॥೭೪॥

ಆಗ ಪರವೀರಘಾತಕನಾದ ಧೃಷ್ಟದ್ಯುಮ್ನನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಸುವರ್ಣಮಯವಾದ ಪುಂಖಗಳನ್ನು ಹೊಂದಿದ, ಕಲ್ಲಿನ ಮೇಲೆ ಸಾಣೆಯನ್ನು ಹಿಡಿದ ಎಪ್ಪತ್ತು ಬಾಣಗಳಿಂದ ದ್ರೋಣರನ್ನು ಹೊಡೆದನು.

ತಸ್ಯ ದ್ರೋಣಃ ಪುನಶ್ಚಾಪಂ ಚಿಚ್ಛೇದಾಮಿತ್ರಕರ್ಶನಃ ।
ಹಯಾಂಶ್ಚ ಚತುರಸ್ತೂರ್ಣಂ ಚತುರ್ಭಿಃ ಸಾಯಕೋತ್ತಮೈಃ ॥೭೫॥

ವೈವಸ್ವತಕ್ಷಯಂ ಘೋರಂ ಪ್ರೇಷಯಾಮಾಸ ವೀರ್ಯವಾನ್ ।
ಸಾರಥಿಂ ಚಾಸ್ಯ ಭಲ್ಲೇನ ಪ್ರೇಷಯಾಮಾಸ ಮೃತ್ಯವೇ ॥೭೬॥

ಶತ್ರುಕರ್ಶನರಾದ ದ್ರೋಣರು ಪುನಃ ಅವನ ಧನುಸ್ಸನ್ನು ಕತ್ತರಿಸಿದರು. ವೀರ್ಯಶಾಲಿಗಳಾದ ಅವರು ನಾಲ್ಕು ಶ್ರೇಷ್ಠವಾದ ಬಾಣಗಳಿಂದ ಅವನ ರಥದ

ನಾಲ್ಕು ಕುದುರೆಗಳನ್ನು ಘೋರವಾದ ಯಮಪಟ್ಟಣಕ್ಕೆ ಕಳುಹಿಸಿದರು. ಅವನ ಸಾರಥಿಯನ್ನೂ ಸಹ ಭಲ್ಲದಿಂದ ಸಂಹರಿಸಿ ಮೃತ್ಯುಲೋಕಕ್ಕೆ ಕಳುಹಿಸಿದರು.

ಹತಾಶ್ವಾತ್ ಸರಥಾತ್ ತೂರ್ಣಮವಪ್ಲುತ್ಯ ಮಹಾರಥಃ ।
ಆರುರೋಹ ಮಹಾಬಾಹುರಭಿಮನ್ಯೋರ್ಮಹಾರಥಮ್ ॥೭೭॥

ಮಹಾರಥನೂ, ಮಹಾಬಾಹುವೂ ಆದ ಧೃಷ್ಟದ್ಯುಮ್ನನು ಕುದುರೆಯು ಮೃತವಾದ ತನ್ನ ರಥದಿಂದ ಶೀಘ್ರವಾಗಿ ಕೆಳಗೆ ಹಾರಿ ಅಭಿಮನ್ಯುವಿನ ದೊಡ್ಡ ರಥವನ್ನು ಏರಿದನು.

ತತಃ ಸರಥನಾಗಾಶ್ವಾ ಸಮಕಂಪತ ವಾಹಿನೀ ।
ಪಶ್ಯತೋ ಭೀಮಸೇನಸ್ಯ ಪಾರ್ಷತಸ್ಯ ಚ ಪಶ್ಯತಃ ॥೭೮॥

ಆಗ ಭೀಮಸೇನ ಮತ್ತು ಧೃಷ್ಟದ್ಯುಮ್ನರು ನೋಡುತ್ತಿರುವಂತೆಯೇ ರಥ ಗಜಾಶ್ವಗಳಿಂದ ಕೂಡಿದ ಪಾಂಡವರ ಸೇನೆಯು ನಡುಗಿತು.

ತತ್ಪ್ರಭಗ್ನಂ ಬಲಂ ದೃಷ್ಟ್ವಾ ದ್ರೋಣೇನಾಮಿತತೇಜಸಾ ।
ನಾಶಕ್ನುವನ್ ವಾರಯಿತುಂ ಸಮಸ್ತಾಸ್ತೇ ಮಹಾರಥಾಃ ॥೭೯॥

ಅಮಿತ ಪರಾಕ್ರಮಿಗಳಾದ ದ್ರೋಣರಿಂದ ಭಗ್ನವಾದ ತಮ್ಮ ಸೈನ್ಯವನ್ನು ನೋಡಿ ಮಹಾರಥರಾದ ಅವರೆಲ್ಲರೂ ಅದನ್ನು ತಡೆಯಲು ಸಾಧ್ಯವಾಗಲಿಲ್ಲ.

ವಧ್ಯಮಾನಂ ತು ತತ್ಸೈನ್ಯಂ ದ್ರೋಣೇನ ನಿಶಿತೈಃ ಶರೈಃ ।
ವ್ಯಭ್ರಮತ್ ತತ್ರ ತತ್ರೈವ ಕ್ಷೋಭ್ಯಮಾಣ ಇವಾರ್ಣವಃ ॥೮೦॥

ತೀಕ್ಷ್ಣವಾದ ಬಾಣಗಳಿಂದ ದ್ರೋಣರಿಂದ ಹೊಡೆಯಲ್ಪಡುತ್ತಿದ್ದ ಆ ಸೈನ್ಯವು ಕ್ಷೋಭೆಗೊಂಡ ಸಮುದ್ರದಂತೆ ಅಲ್ಲಲ್ಲಿಯೇ ತಿರುಗಾಡಿತು.

ತಥಾ ದೃಷ್ಟ್ವಾ ಚ ತತ್ಸೈನ್ಯಂ ಜಹೃಷೇ ಚ ಬಲಂ ತವ ।
ದೃಷ್ಟ್ವಾಚಾರ್ಯಂ ಚ ಸಂಕ್ರುದ್ಧಂ ದಹಂತಂ ರಿಪುವಾಹಿನೀಮ್ ।
ಚುಕ್ರುಶುಃ ಸರ್ವತೋ ಯೋಧಾಃ ಸಾಧು ಸಾಧ್ವಿತಿ ಭಾರತ ॥೮೧॥

ಪಾಂಡವರ ಸೈನ್ಯವು ಅಂತಹ ಸ್ಥಿತಿಯಲ್ಲಿರುವುದನ್ನು ನೋಡಿದ ನಿನ್ನ ಸೈನ್ಯವು ಸಂತೋಷಗೊಂಡಿತು. ಆಚಾರ್ಯರಾದ ದ್ರೋಣರು ಬಹಳ ಕೋಪಗೊಂಡು ಶತ್ರುಸೈನ್ಯವನ್ನು ದಹಿಸುತ್ತಿರುವುದನ್ನು ನೋಡಿ ಎಲೈ ಭಾರತನೇ, ಎಲ್ಲ ಯೋಧರೂ ಸಾಧು, ಸಾಧು ಎಂದು ಹೇಳುತ್ತಾ ಜಯಘೋಷವನ್ನು ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ತ್ರಿಸಪ್ತತಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ತ್ರಯಸ್ತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಎಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ನಾಲ್ಕನೆಯ ಅಧ್ಯಾಯ

ಭೀಮಸೇನನ ಪರಾಕ್ರಮ.

ಸಂಜಯಃ

ತತೋ ದುರ್ಯೋಧನೋ ರಾಜಾ ಮೋಹಾತ್ ಪ್ರತ್ಯಾಗತಸ್ತದಾ ।
ಶರವರ್ಷೈಃ ಪುನರ್ಭೀಮಂ ಪ್ರತ್ಯವಾರಯದಚ್ಯುತಮ್ ॥೧॥

ಸಂಜಯ– ಆನಂತರ ರಾಜನಾದ ದುರ್ಯೋಧನನು ಮೂರ್ಛೆಯಿಂದ ಎದ್ದು ಪುನಃ ಪ್ರಜ್ಞೆಯನ್ನು ಪಡೆದು ತನ್ನ ಶೌರ್ಯಾದಿ ಗುಣಗಳಿಂದ ಚ್ಯುತನಾಗದ ಭೀಮಸೇನನನ್ನು ಬಾಣಗಳ ಮಳೆಯಿಂದ ಪುನಃ ತಡೆದನು.

ಏಕೀಭೂತಾಃ ಪುನಶ್ಚೈವ ತವ ಪುತ್ರಾ ಮಹಾರಥಾಃ ।
ಸಮೇತ್ಯ ಸಮರೇ ಭೀಮಂ ಯೋಧಯಾಮಾಸುರುದ್ಯತಾಃ ॥೨॥

ಮಹಾರಥರಾದ ನಿನ್ನ ಪುತ್ರರು ಪುನಃ ಒಂದುಗೂಡಿ ಯುದ್ಧದಲ್ಲಿ ಎಲ್ಲರೂ ಸಹಿತರಾಗಿ ಪ್ರಯತ್ನಪೂರ್ವಕವಾಗಿ ಭೀಮಸೇನನ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ಭೀಮಸೇನೋಽಪಿ ಸಮರೇ ಸಂಪ್ರಾಪ್ಯ ಸ್ವರಥಂ ಪುನಃ ।
ಸಮಾರುಹ್ಯ ಮಹಾಬಾಹುರ್ಯಯೌ ಯೇನ ತವಾತ್ಮಜಃ ॥೩॥

ಮಹಾಬಾಹುವಾದ ಭೀಮಸೇನನಾದರೂ ಪುನಃ ತನ್ನ ರಥದ ಬಳಿಗೆ ಹೋಗಿ ರಥವನ್ನು ಏರಿ ನಿನ್ನ ಪುತ್ರರು ಇದ್ದ ಕಡೆಗೆ ಹೊರಟನು.

ಪ್ರಗೃಹ್ಯ ಚ ಮಹಾವೇಗಂ ಪರಾಸುಕರಣಂ ದೃಢಮ್ ।
ಚಿತ್ರಂ ಶರಾಸನಂ ಸಂಖ್ಯೇ ಶರೈರ್ವಿವ್ಯಾಧ ತೇ ಸುತಾನ್ ॥೪॥

ಮಹಾವೇಗಶಾಲಿಯಾದ, ಶತ್ರುಸಂಹಾರಕವಾದ, ದೃಢವಾದ, ವಿಚಿತ್ರವಾದ ಧನುಸ್ಸನ್ನು ತೆಗೆದುಕೊಂಡು ಯುದ್ಧದಲ್ಲಿ ಬಾಣಗಳಿಂದ ನಿನ್ನ ಪುತ್ರರನ್ನು ಹೊಡೆದನು.

ತತೋ ದುರ್ಯೋಧನೋ ರಾಜಾ ಭೀಮಸೇನಂ ಮಹಾಬಲಮ್ ।
ನಾರಾಚೇನ ಸುತೀಕ್ಷ್ಣೇನ ಭೃಶಂ ಮರ್ಮಣ್ಯತಾಡಯತ್ ॥೫॥

ಆಗ ರಾಜನಾದ ದುರ್ಯೋಧನನು ಮಹಾಬಲನಾದ ಭೀಮಸೇನನನ್ನು ಬಹಳ ತೀಕ್ಷ್ಣವಾದ ನಾರಾಚದಿಂದ ಮರ್ಮಸ್ಥಾನಗಳಲ್ಲಿ ಗಟ್ಟಿಯಾಗಿ ಹೊಡೆದನು.

ಸೋಽತಿವಿದ್ಧೋ ಮಹೇಷ್ವಾಸಸ್ತವ ಪುತ್ರೇಣ ಧನ್ವಿನಾ ।
ಕ್ರೋಧಸಂರಕ್ತನಯನೋ ವೇಗೇನೋತ್ಕ್ಷಿಪ್ಯ ಕಾರ್ಮುಕಮ್ ॥೬॥

ದುರ್ಯೋಧನಂ ತ್ರಿಭಿರ್ಬಾಣೈರ್ಬಾಹ್ವೋರುರಸಿ ಚಾರ್ಪಯತ್ ।
ಸ ತಥಾಭಿಹತೋ ರಾಜಾ ನಾಚಲದ್ ಗಿರಿರಾಡಿವ ॥೭॥

ಧನುರ್ಧಾರಿಯಾದ ನಿನ್ನ ಪುತ್ರನಿಂದ ಗಾಢವಾಗಿ ಹೊಡೆಯಲ್ಪಟ್ಟ ಮಹಾಧನುರ್ಧಾರಿಯಾದ ಭೀಮನು ಕ್ರೋಧದಿಂದ ಕೆಂಪಾದ ಕಣ್ಣುಳ್ಳವನಾಗಿ ವೇಗದಿಂದ ಧನುಸ್ಸನ್ನು ಮೇಲಕ್ಕೆ ಎತ್ತಿ ಮೂರುಬಾಣಗಳನ್ನು ಪ್ರಯೋಗಿಸಿ ದುರ್ಯೋಧನನಿಗೆ ಬಾಹುಗಳಲ್ಲಿಯೂ ಮತ್ತು ವಕ್ಷಸ್ಥಲದಲ್ಲಿಯೂ ಹೊಡೆದನು. ಹೀಗೆ ಹೊಡೆಯಲ್ಪಟ್ಟ ರಾಜನಾದ ದುರ್ಯೋಧನನು ಶ್ರೇಷ್ಠವಾದ ಪರ್ವತದಂತೆ ಅಲುಗಾಡಲಿಲ್ಲ.

ತೌ ದೃಷ್ಟ್ವಾ ಸಮರೇ ಕ್ರುದ್ಧೌ ವಿನಿಘ್ನಂತೌ ಪರಸ್ಪರಮ್ ।
ದುರ್ಯೋಧನಾನುಜಾಃ ಸರ್ವೇ ಶೂರಾಃ ಸಂತ್ಯಕ್ತಜೀವಿತಾಃ ॥೮॥

ಸಂಸ್ಮೃತ್ಯ ಮಂತ್ರಿತಂ ಪೂರ್ವಂ ನಿಗ್ರಹೇ ಭೀಮಕರ್ಮಣಃ ।
ನಿಶ್ಚಯಂ ಮನಸಾ ಕೃತ್ವಾ ನಿಗ್ರಹೀತುಂ ಪ್ರಚಕ್ರಮುಃ ॥೯॥

ಅವರಿಬ್ಬರೂ ಕ್ರುದ್ಧರಾಗಿ ಪರಸ್ಪರವಾಗಿ ಹೊಡೆದಾಡುತ್ತಿರುವುದನ್ನು ನೋಡಿ ಶೂರರಾದ ದುರ್ಯೋಧನನ ಎಲ್ಲಾತಮ್ಮಂದಿರೂ ಜೀವನದ ಆಸೆಯನ್ನು ತೊರೆದು ಭೀಮಸೇನನನ್ನು ಜೀವಸಹಿತವಾಗಿ ಹಿಡಿಯಲು ಮೊದಲು ಮಾಡಿದ ಮಂತ್ರಾಲೋಚನೆಯನ್ನು ಸ್ಮರಿಸಿ, ಹಾಗೆಯೇ ಮಾಡುವುದೆಂದು ಮನಸ್ಸಿನಲ್ಲಿನಿರ್ಧರಿಸಿ ಅವನನ್ನು ಹಿಡಿಯಲು ಉದ್ಯುಕ್ತರಾದರು.

ತಾನಾಪತತ ಏವಾಜೌ ಭೀಮಸೇನೋ ಮಹಾಬಲಃ ।
ಪ್ರತ್ಯುದ್ಯಯೌ ಮಹಾರಾಜ ಗಜಃ ಪ್ರತಿಗಜಾನಿವ ॥೧೦॥

ಅವರು ತನ್ನ ಬಳಿಗೆ ಬರುತ್ತಿರುವಂತೆಯೇ ಎಲೈ ಮಹಾರಾಜನೇ, ಮಹಾಬಲನಾದ ಭೀಮಸೇನನು ಗಜವು ಪ್ರತಿಗಜಗಳ ಮೇಲೆ ಎರಗಿದಂತೆ ಅವರ ಮೇಲೆ ಎರಗಿದನು.

ಭೃಶಂ ಕ್ರುದ್ಧಶ್ಚ ತೇಜಸ್ವೀ ನಾರಾಚೇನ ಸಮರ್ಪಯತ್ ।
ಚಿತ್ರಸೇನಂ ಮಹಾರಾಜ ತವ ಪುತ್ರಂ ಮಹಾಯಶಾಃ ॥೧೧॥

ಎಲೈ ಮಹಾರಾಜನೇ, ಬಹಳ ಕೋಪಗೊಂಡವನೂ, ತೇಜಸ್ವಿಯೂ, ಕೀರ್ತಿಶಾಲಿಯೂ ಆದ ಅವನು ನಿನ್ನ ಪುತ್ರನಾದ ಚಿತ್ರಸೇನನನ್ನು ನಾರಾಚದಿಂದ ಹೊಡೆದನು.

ತಥೇತರಾಂಸ್ತವ ಸುತಾಂಸ್ತಾಡಯಾಮಾಸ ಭಾರತ ।
ಶರೈರ್ಬಹುವಿಧೈಃ ಸಂಖೇ ರುಗ್ಮಪುಂಖೈಃ ಸುವೇಗಿತೈಃ ॥೧೨॥

ಎಲೈ ಭಾರತನೇ, ಹಾಗೆಯೇ ನಿನ್ನ ಉಳಿದ ಪುತ್ರರನ್ನೂ ಸಹ ವೇಗಶಾಲಿಗಳಾದ ಸುವರ್ಣಮಯವಾದ ಪುಂಖವುಳ್ಳ ಅನೇಕ ವಿಧವಾದ ಬಾಣಗಳಿಂದ ರಣರಂಗದಲ್ಲಿ ಹೊಡೆದನು.

ತತಃ ಸಂಸ್ಥಾಪ್ಯ ಸಮರೇ ಸ್ವಾನ್ಯನೀಕಾನಿ ಸರ್ವಶಃ ।
ಅಭಿಮನ್ಯುಪ್ರಭೃತಯಸ್ತೇ ದ್ವಾದಶ ಮಹಾರಥಾಃ ॥೧೩॥

ಪ್ರೇಷಿತಾ ಧರ್ಮರಾಜೇನ ಭೀಮಸೇನಪದಾನುಗಾಃ ।
ಪ್ರತ್ಯುದ್ಯಯುರ್ಮಹಾರಾಜ ತವ ಪುತ್ರಾನ್ ಮಹಾಬಲಾನ್ ॥೧೪॥

ಎಲೈ ಮಹಾರಾಜನೇ, ಆ ವೇಳೆಗೆ ಅಭಿಮನ್ಯು ಮೊದಲಾದ ಹನ್ನೆರಡು ಮಹಾರಥರು ತಮ್ಮ ತಮ್ಮ ಸೈನ್ಯಗಳನ್ನು ಯುದ್ಧದಲ್ಲಿ ಅಲ್ಲಲ್ಲಿ ನಿಲ್ಲಿಸಿ ಭೀಮಸೇನನನ್ನು ಹುಡುಕಲು ಯುಧಿಷ್ಠಿರನಿಂದ ಕಳುಹಿಸಿಕೊಡಲ್ಪಟ್ಟವರಾಗಿ ಮಹಾಬಲರಾದ ನಿನ್ನ ಪುತ್ರರನ್ನು ಸಮೀಪಿಸಿದರು.

ದೃಷ್ಟ್ವಾ ರಥಸ್ಥಾಂಸ್ತಾನ್ ಶೂರಾನ್ ಸೂರ್ಯಾಗ್ನಿಸಮತೇಜಸಃ ।
ಸರ್ವಾನೇವ ಮಹೇಷ್ವಾಸಾನ್ ಭ್ರಾಜಮಾನಾನ್ ಶ್ರಿಯಾ ವೃತಾನ್ ॥

ಮಹಾಹವೇ ದೀಪ್ಯಮಾನಾನ್ ಸುವರ್ಣಕವಚೋಜ್ಜ್ವಲಾನ್ ।
ತತ್ಯಜುಃ ಸಮರೇ ಭೀಮಂ ತವ ಪುತ್ರಾ ಮಹಾಬಲಾಃ ॥೧೬॥

ಸೂರ್ಯಾಗ್ನಿಗಳಿಗೆ ಸಮಾನವಾದ ತೇಜಸ್ಸುಳ್ಳ, ರಥದಲ್ಲಿ ಕುಳಿತ, ಕಾಂತಿಯಿಂದ ಕಂಗೊಳಿಸುವ, ಮಹಾಧನುರ್ಧಾರಿಗಳಾದ, ಸುವರ್ಣಕವಚಗಳಿಂದ ಶೋಭಿಸುತ್ತಿರುವ ಆ ಮಹಾರಥರನ್ನು ನೋಡಿ ಮಹಾಬಲರಾದ ನಿನ್ನ ಪುತ್ರರು ಯುದ್ಧದಲ್ಲಿ ಭೀಮಸೇನನನ್ನು ಬಿಟ್ಟುಬಿಟ್ಟರು.

ತಾನ್ ನಾಮೃಷ್ಯತ ಕೌಂತೇಯೋ ಜೀವಮಾನಾ ಗತಾ ಇತಿ ।
ಅನ್ವೀಯ ಚ ಪುನಃ ಸರ್ವಾಂಸ್ತವ ಪುತ್ರಾನಪೀಡಯತ್ ॥೧೭॥

ಅವರು ಜೀವಸಹಿತರಾಗಿ ಹಿಂದಿರುಗಿದುದನ್ನು ಸಹಿಸದ ಭೀಮಸೇನನು ಅವರನ್ನು ಹಿಂಬಾಲಿಸಿ ಪುನಃ ನಿನ್ನ ಪುತ್ರರೆಲ್ಲರನ್ನೂ ಬಾಣಗಳಿಂದ ಪೀಡಿಸಿದನು.

ಅಥಾಭಿಮನ್ಯುಂ ಸಮರೇ ಭೀಮಸೇನೇನ ಸಂಗತಮ್ ।
ಪಾರ್ಷತೇನ ಚ ಸಂಪ್ರೇಕ್ಷ್ಯ ತವ ಸೈನ್ಯೇ ಮಹಾರಥಾಃ ॥೧೮॥

ದುರ್ಯೋಧನಪ್ರಭೃತಯಃ ಪ್ರಗೃಹೀತಶರಾಸನಾಃ ।
ಭೃಶಮಶ್ವೈಃ ಪ್ರಜವಿತೈಃ ಪ್ರಯಯುರ್ಯತ್ರ ತೇ ರಥಾಃ ॥೧೯॥

ಅನಂತರ ರಣರಂಗದಲ್ಲಿ ಅಭಿಮನ್ಯುವು ಭೀಮಸೇನನ ಜೊತೆಯಲ್ಲಿಯೂ ಮತ್ತು ಧೃಷ್ಟದ್ಯುಮ್ನನ ಜೊತೆಯಲ್ಲಿಯೂ ಸೇರಿದುದನ್ನು ನೋಡಿ ನಿನ್ನ ಸೈನ್ಯದ ಮಹಾರಥರಾದ ದುರ್ಯೋಧನ ಮೊದಲಾದವರು ಕೈಯಲ್ಲಿ ಧನುಸ್ಸನ್ನು ಹಿಡಿದು ವೇಗವುಳ್ಳ ಅಶ್ವಗಳಿಂದ ಎಳೆಯಲ್ಪಟ್ಟ ರಥಗಳಲ್ಲಿ ಆ ಮಹಾರಥರು ಇದ್ದ ಕಡೆಗೆ ಹೊರಟರು.

ಅಪರಾಹ್ಣೇ ತತೋ ರಾಜನ್ ಪ್ರಾವರ್ತತ ಮಹಾನ್ ರಣಃ ।
ತಾವಕಾನಾಂ ಚ ಬಲಿನಾಂ ಪರೇಷಾಂ ಚೈವ ಭಾರತ ॥೨೦॥

ಎಲೈ ರಾಜನೇ, ಭಾರತನೇ, ಅಪರಾಹ್ಣದಲ್ಲಿ ನಿನ್ನವರಿಗೂ ಮತ್ತು ಬಲಿಷ್ಠರಾದ ಪಾಂಡವರಿಗೂ ದೊಡ್ಡ ಯುದ್ಧವು ಜರುಗಿತು.

ಅಭಿಮನ್ಯುರ್ವಿಕರ್ಣಸ್ಯ ಹಯಾನ್ ಹತ್ವಾ ಮಹಾಜವಾನ್ ।
ಅಥೈನಂ ಪಂಚವಿಂಶತ್ಯಾ ಕ್ಷುದ್ರಕಾಣಾಂ ಸಮಾಚಿನೋತ್ ॥೨೧॥

ಅಭಿಮನ್ಯುವು ವಿಕರ್ಣನ ವೇಗಶಾಲಿಗಳಾದ ರಥಾಶ್ವಗಳನ್ನು ಕೊಂದು ಇಪ್ಪತ್ತೈದು ಸಣ್ಣ ಬಾಣಗಳನ್ನು ಪ್ರಯೋಗಿಸಿ ಅವುಗಳಿಂದ ಅವನ ಶರೀರವನ್ನು ತುಂಬಿದನು.

ಹತಾಶ್ವಂ ರಥಮುತ್ಸೃಜ್ಯ ವಿಕರ್ಣಸ್ತು ಮಹಾರಥಃ ।
ಆರುರೋಹ ರಥಂ ರಾಜನ್ ಚಿತ್ರಸೇನಸ್ಯ ಭಾಸ್ವರಮ್ ॥೨೨॥

ಎಲೈ ರಾಜನೇ, ತನ್ನ ಅಶ್ವಗಳು ಹತವಾದಮೇಲೆ ಮಹಾರಥನಾದ ವಿಕರ್ಣನು ಆ ರಥವನ್ನು ಬಿಟ್ಟು ಚಿತ್ರಸೇನನ ಪ್ರಕಾಶಮಾನವಾದ ರಥವನ್ನು ಏರಿದನು.

ಸ್ಥಿತಾವೇಕರಥೇ ತೌ ತು ಭ್ರಾತರೌ ಕುರುವರ್ಧನೌ ।
ಆರ್ಜುನಿಃ ಶರಜಾಲೇನ ಛಾದಯಾಮಾಸ ಭಾರತ ॥೨೩॥

ಎಲೈ ಭಾರತನೇ, ಒಂದೇ ರಥದಲ್ಲಿದ್ದ ಕುರುವರ್ಧನರಾದ ಆ ಸಹೋದರರನ್ನು ಅಭಿಮನ್ಯುವು ಬಾಣಗಳ ಸಮೂಹದಿಂದ ಮುಚ್ಚಿಹಾಕಿದನು.

ಚಿತ್ರಸೇನೋ ವಿಕರ್ಣಶ್ಚ ಕಾರ್ಷ್ಣಿಂ ಪಂಚಭಿರಾಯಸೈಃ ।
ವಿವ್ಯಧಾತೇ ನ ಚಾಕಂಪತ್ ಕಾರ್ಷ್ಣಿರ್ಮೇರುರಿವಾಚಲಃ ॥೨೪॥

ಚಿತ್ರಸೇನ ಮತ್ತು ವಿಕರ್ಣರು ಅಭಿಮನ್ಯುವಿನ ಮೇಲೆ ಐದು ಕಬ್ಬಿಣದ ಬಾಣಗಳನ್ನು ಪ್ರಯೋಗಿಸಿದರು. ಅಚಲವಾದ ಮೇರುಪರ್ವತದಂತೆ ಅಭಿಮನ್ಯುವು ಅದರಿಂದ ಅಲುಗಾಡಲಿಲ್ಲ.

ದುಃಶಾಸನಸ್ತು ಸಮರೇ ಕೇಕಯಾನ್ ಪಂಚ ಮಾರಿಷ ।
ಯೋಧಯಾಮಾಸ ರಾಜೇಂದ್ರ ತದದ್ಭುತಮಿವಾಭವತ್ ॥೨೫॥

ಎಲೈ ಪೂಜ್ಯನಾದ ರಾಜೇಂದ್ರನೇ, ರಣರಂಗದಲ್ಲಿ ದುಶ್ಶಾಸನನು ಐದು ಜನ ಕೇಕಯ ರಾಜರ ಜೊತೆಯಲ್ಲಿ ಯುದ್ಧವನ್ನು ಮಾಡಿದನು. ಅದು ಅದ್ಭುತವಾಗಿದ್ದಿತು.

ದ್ರೌಪದೇಯಾ ರಣೇ ಕ್ರುದ್ಧಾ ದುರ್ಯೋಧನಮವಾರಯನ್ ।
ಏಕೈಕಸ್ಮಿಂರಾರ್ಚ್ಛತ್ ಪುತ್ರಂ ತವ ವಿಶಾಂಪತೇ ॥೨೬॥

ದ್ರೌಪದಿಯ ಐದು ಮಕ್ಕಳು ಕ್ರುದ್ಧರಾಗಿ ಯುದ್ಧದಲ್ಲಿ ದುರ್ಯೋಧನನನ್ನು ತಡೆದರು. ಎಲೈ ರಾಜನೇ, ಅವರಲ್ಲಿ ಒಬ್ಬೊಬ್ಬರೂ ನಿನ್ನ ಪುತ್ರನ ಮೇಲೆ ಮೂರು ಬಾಣಗಳನ್ನು ಪ್ರಯೋಗಿಸಿದರು.

ಪುತ್ರೋಽಪಿ ತವ ದುರ್ಧರ್ಷೋ ದ್ರೌಪದ್ಯಾಸ್ತನಯಾನ್ ರಣೇ ।
ಸಾಯಕೈರ್ನಿಶಿತೈ ರಾಜನ್ನಾಜಘಾನ ಪೃಥಕ್‌ಪೃಥಕ್ ॥೨೭॥

ಎಲೈ ರಾಜನೇ, ಸೋಲಿಸಲು ಕಷ್ಟಸಾಧ್ಯನಾದ ನಿನ್ನ ಪುತ್ರನೂ ಸಹ ಯುದ್ಧ ಭೂಮಿಯಲ್ಲಿ ದ್ರೌಪದಿಯ ಮಕ್ಕಳನ್ನು ತೀಕ್ಷ್ಣವಾದ ಬಾಣಗಳಿಂದ ಬೇರೆ ಬೇರೆಯಾಗಿ ಹೊಡೆದನು.

ತೈಶ್ಚಾಪಿ ವಿದ್ಧಃ ಶುಶುಭೇ ರುಧಿರೇಣ ಸಮುಕ್ಷಿತಃ ।
ಗಿರಿಪ್ರಸ್ರವಣೈರ್ಯದ್ವದ್ ಗಿರಿರ್ಧಾತುವಿಮಿಶ್ರಿತೈಃ ॥೨೮॥

ಅವರಿಂದಲೂ ಬಾಣಗಳಿಂದ ಹೊಡೆಯಲ್ಪಟ್ಟು ರಕ್ತವನ್ನು ಸುರಿಸುತ್ತಿದ್ದ ದುರ್ಯೋಧನನು ಪರ್ವತಧಾತುಗಳಿಂದ ಮಿಶ್ರಿತವಾಗಿದ್ದ ಪರ್ವತದ ಝರಿಗಳಂತೆ ಶೋಭಿಸಿದನು.

ಭೀಷ್ಮೋಽಪಿ ಸಮರೇ ರಾಜನ್ ಪಾಂಡವಾನಾಮನೀಕಿನೀಮ್ ।
ಕಾಲಯಾಮಾಸ ಬಲವಾನ್ ಪಾಲಃ ಪಶುಗಣಾನಿವ ॥೨೯॥

ಎಲೈ ರಾಜನೇ, ಬಲಿಷ್ಠರಾದ ಭೀಷ್ಮರೂ ಸಹ ಯುದ್ಧದಲ್ಲಿ ಪಾಂಡವರ ಸೈನ್ಯವನ್ನು ಗೋಪಾಲಕನು ಪಶುಗಣವನ್ನು ಕಲಕಾಡಿದಂತೆ ಕಲಕಾಡಿದರು.

ತತೋ ಗಾಂಡೀವನಿರ್ಘೋಷಃ ಪ್ರಾದುರಾಸೀದ್ ವಿಶಾಂಪತೇ ।
ದಕ್ಷಿಣೇನ ವರೂಥಿನ್ಯಾಃ ಪಾರ್ಥಸ್ಯಾರೀನ್ ವಿನಿಘ್ನತಃ ॥೩೦॥

ಎಲೈ ರಾಜನೇ, ಆಗ ಸೈನ್ಯದ ದಕ್ಷಿಣಭಾಗದಿಂದ ಶತ್ರುಗಳನ್ನು ಸಂಹಾರ ಮಾಡುವ ಅರ್ಜುನನ ಗಾಂಡೀವ ಧನುಸ್ಸಿನ ಘೋಷವು ಕೇಳಿ ಬಂದಿತು.

ಉತ್ತಸ್ಥುಃ ಸಮರೇ ತತ್ರ ಕಬಂಧಾನಿ ಸಮಂತತಃ ।
ಕುರೂಣಾಂ ಚಾಪಿ ಸೈನ್ಯೇಷು ಪಾಂಡವಾನಾಂ ಚ ಭಾರತ ॥೩೧॥

ಎಲೈ ಭಾರತನೇ, ಆಗ ಕೌರವರ ಸೈನ್ಯದಲ್ಲಿಯೂ ಮತ್ತು ಪಾಂಡವರ ಸೈನ್ಯದಲ್ಲಿಯೂ ಎಲ್ಲ ಕಡೆಯಲ್ಲಿಯೂ ರಣರಂಗದಲ್ಲಿ ಶಿರಸ್ಸಿಲ್ಲದ ರುಂಡಗಳು ಕಂಡುಬಂದವು.

ಶೋಣಿತೋದಂ ರಥಾವರ್ತಂ ಗಜದ್ವೀಪಂ ಹಯೋರ್ಮಿಣಮ್ ।
ರಥನೌಭರ್ನರವ್ಯಾಘ್ರಾಃ ಪ್ರತೇರುಃ ಸೈನ್ಯಸಾಗರಮ್ ॥೩೨॥

ರಕ್ತೋದಕದಿಂದ ಕೂಡಿದ, ರಥಗಳೆಂಬ ಸುಳಿಗಳಿಂದ ಕೂಡಿದ, ಗಜಗಳೆಂಬ ದ್ವೀಪಗಳಿಂದ ಕೂಡಿದ, ಅಶ್ವಗಳೆಂಬ ಅಲೆಗಳಿಂದ ಕೂಡಿದ ಸೈನ್ಯ ಸಾಗರವನ್ನು ನರವ್ಯಾಘ್ರರಾದ ವೀರರು ರಥಗಳೆಂಬ ನೌಕೆಗಳಿಂದ ದಾಟಿದರು.

ಛಿನ್ನಹಸ್ತಾ ವಿಕವಚಾ ವಿದೇಹಾಶ್ಚ ನರೋತ್ತಮಾಃ ।
ಪತಿತಾಸ್ತತ್ರ ದೃಶ್ಯಂತೇ ಶತಶೋಽಥ ಸಹಸ್ರಶಃ ॥೩೩॥

ಹಸ್ತಗಳು ಕತ್ತರಿಸಲ್ಪಟ್ಟ, ಕವಚಗಳಿಲ್ಲದಿರುವ, ರುಂಡವಿಲ್ಲದಿರುವ ಯೋಧರು ಅಲ್ಲಿ ಬಿದ್ದಿರುವುದು ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ಕಂಡುಬರುತ್ತಿದ್ದಿತು.

ನಿಹತೈರ್ಮತ್ತಮಾತಂಗೈಃ ಶೋಣಿತೌಘಪರಿಪ್ಲುತೈಃ ।
ಭೂರ್ಭಾತಿ ಭರತಶ್ರೇಷ್ಠ ಪರ್ವತೈರಾಚಿತಾ ಯಥಾ ॥೩೪॥

ಎಲೈ ಭರತಶ್ರೇಷ್ಠನೇ, ರಕ್ತದ ಪ್ರವಾಹದಲ್ಲಿ ಮುಳುಗಿ ಮೃತವಾದ ಮದಗಜಗಳಿಂದ ಕೂಡಿದ ರಣಭೂಮಿಯು ಪರ್ವತಗಳನ್ನು ಜೋಡಿಸಿದಂತೆ ಕಂಡುಬರುತ್ತಿತ್ತು.

ತತ್ರಾದ್ಭುತಮಪಶ್ಯಾಮ ತವ ತೇಷಾಂ ಚ ಭಾರತ ।
ನ ತತ್ರಾಸೀತ್ ಪುಮಾನ್ ಕಶ್ಚಿದ್ ಯೋ ಯೋದ್ಧುಂ ನಾಭಿಕಾಂಕ್ಷತಿ ॥

ಎಲೈ ಭಾರತನೇ, ಆ ಸಂದರ್ಭದಲ್ಲಿ ನಿನ್ನ ಸೈನ್ಯದಲ್ಲಾಗಲೀ, ಪಾಂಡವರ ಸೈನ್ಯದಲ್ಲಾಗಲೀ ಯುದ್ಧವನ್ನು ಬಯಸದಿರುವ ಯಾವ ಯೋಧನೂ ಇಲ್ಲದ ಅದ್ಭುತವನ್ನು ಅಲ್ಲಿನೋಡಿದೆವು.

ಏವಂ ಯುಯುಧಿರೇ ವೀರಾಃ ಪ್ರಾರ್ಥಯಾನಾ ಮಹದ್ಯಶಃ ।
ತಾವಕಾಃ ಪಾಂಡವೈಃ ಸಾರ್ಧಂ ಕಾಂಕ್ಷಮಾಣಾ ಜಯಂ ಯುಧಿ ॥೩೬॥

ಹೀಗೆ ಮಹಾಕೀರ್ತಿಯನ್ನು ಸಂಪಾದಿಸಲು ಬಯಸಿ, ಯುದ್ಧದಲ್ಲಿ ಜಯವನ್ನು ಆಶಿಸುತ್ತಾ ನಿನ್ನ ಸೈನ್ಯದ ವೀರರು ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ಭೀಷ್ಮಪರ್ವಣಿ ಚತುಃಸಪ್ತತಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಚತುಸ್ತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಎಪ್ಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೈದನೆಯ ಅಧ್ಯಾಯ

ಭೀಮಸೇನನ ಮತ್ತು ದ್ರೌಪದಿಯ ಪುತ್ರರ ಪರಾಕ್ರಮ.
ಭೀಷ್ಮರಿಂದ ಸೈನ್ಯಾವಹಾರ.

ಸಂಜಯಃ

ತತೋ ದುರ್ಯೋಧನೋ ರಾಜಾ ಲೋಹಿತಾಯತಿ ಭಾಸ್ಕರೇ ।
ಸಂಗ್ರಾಮರಭಸೋ ಭೀಮಂ ಹಂತುಕಾಮೋಽಭ್ಯಧಾವತ ॥೧॥

ಸಂಜಯ– ಆಗ ಸೂರ್ಯನು ಕೆಂಪಾಗುತ್ತಿರಲು ಯುದ್ಧ ರಭಸವುಳ್ಳ ದುರ್ಯೋಧನನು ಭೀಮಸೇನನನ್ನು ಕೊಲ್ಲಲು ಬಯಸಿ ಅವನ ಬಳಿಗೆ ಧಾವಿಸಿದನು.

ತಮಾಯಾಂತಮಭಿಪ್ರೇಕ್ಷ್ಯ ನೃವೀರಂ ದೃಢವೈರಿಣಮ್ ।
ಭೀಮಸೇನಃ ಸುಸಂಕ್ರುದ್ಧ ಇದಂ ವಚನಮಬ್ರವೀತ್ ॥೨॥

ದೃಢವೈರಿಯಾದ, ವೀರನಾದ ಅವನು ತನ್ನ ಬಳಿಗೆ ಬರುತ್ತಿರುವುದನ್ನು ನೋಡಿ ಭೀಮಸೇನನು ಬಹಳ ಕೋಪಗೊಂಡು ಈ ಮಾತುಗಳನ್ನು ಆಡಿದನು.

ಅಯಂ ಸ ಕಾಲಃ ಸಂಪ್ರಾಪ್ತೋ ವರ್ಷಪೂಗಾಭಿಕಾಂಕ್ಷಿತಃ ।
ಅದ್ಯ ತ್ವಾಂ ನಿಹನಿಷ್ಯಾಮಿ ಯದಿ ನೋತ್ಸೃಜಸೇ ರಣಮ್ ॥೩॥

ಅನೇಕ ವರ್ಷಗಳಿಂದ ಬಯಸಿದ ಆ ಕಾಲವು ಈಗ ಸಂಪ್ರಾಪ್ತವಾಗಿದೆ. ನೀನು ರಣರಂಗವನ್ನು ತ್ಯಜಿಸದಿದ್ದರೆ ಈ ದಿನ ನಿನ್ನನ್ನು ಕೊಲ್ಲುವೆನು.

ಅದ್ಯ ಕುಂತ್ಯಾಃ ಪರಿಕ್ಲೇಶಂ ವನವಾಸಂ ಚ ಕೃತ್ಸ್ನಶಃ ।
ದ್ರೌಪದ್ಯಾಶ್ಚ ಪರಿಕ್ಲೇಶಂ ಪ್ರಣೋತ್ಸ್ಯಾಮಿ ಹತೇ ತ್ವಯಿ ॥೪॥

ಈ ದಿನ ನಿನ್ನನ್ನು ಕೊಂದು ಕುಂತಿಯ ಪರಿಕ್ಲೇಶವನ್ನು, ವನವಾಸದ ಎಲ್ಲ ಕ್ಲೇಶಗಳನ್ನು, ದ್ರೌಪದಿಯ ಪರಿಕ್ಲೇಶಗಳನ್ನು ನಿವಾರಿಸುವೆನು.

ಯತ್ತ್ವಂ ದುರೋದರೋ ಭೂತ್ವಾ ಪಾಂಡವಾನವಮನ್ಯಸೇ ।
ತಸ್ಯ ಪಾಪಸ್ಯ ಗಾಂಧಾರೇ ಪಶ್ಯ ವ್ಯಸನಮಾಗತಮ್ ॥೫॥

ಎಲೈ ಗಾಂಧಾರಿ ಪುತ್ರನೇ, ನೀನು ಕೆಟ್ಟ ಜೂಜನ್ನಾಡಿ ಪಾಂಡವರಿಗೆ ಅವಮಾನ ಮಾಡಿರುವಿಯಷ್ಟೆ! ಅದರ ಫಲವಾದ ದುಃಖವು ಈಗ ಒದಗಿ ಬಂದಿದೆ ಅದನ್ನು ನೀನು ನೋಡು.

ಕರ್ಣಸ್ಯ ಮತಮಾಜ್ಞಾಯ ಸೌಬಲಸ್ಯ ಚ ಯತ್ ಪುರಾ ।
ಅಚಿಂತ್ಯ ಪಾಂಡವಾನ್ ಕಾಮಾದ್ ಯಥೇಷ್ಟಂ ಕೃತವಾನಸಿ ॥೬॥

ನೀನು ಹಿಂದೆ ಕರ್ಣನ ಮತ್ತು ಶಕುನಿಯ ಅಭಿಪ್ರಾಯಗಳನ್ನು ಸ್ವೀಕರಿಸಿ ಪಾಂಡವರನ್ನು ಗಣನೆಗೇ ತೆಗೆದುಕೊಳ್ಳದೆ ನಿನ್ನ ಮನಸ್ಸಿಗೆ ಬಂದಂತೆ ಕಾರ್ಯವನ್ನು ಮಾಡಿದ್ದೀಯೆ.

ಯಾಚಮಾನಂ ಚ ಯನ್ಮೋಹಾದ್ ದಾಶಾರ್ಹಮವಮನ್ಯಸೇ ।
ಉಲೂಕಸ್ಯ ಸಮಾದೇಶಂ ಯದ್ ದದಾಸಿ ಚ ಹೃಷ್ಟವತ್ ॥೭॥

ಸಂಧಿಯನ್ನು ಯಾಚಿಸುವ ಕೃಷ್ಣನನ್ನೂ ಸಹ ನೀನು ಮೋಹದಿಂದ ಅವಮಾನ ಮಾಡಿದ್ದೀಯೆ. ಶಕುನಿಯ ಪುತ್ರನಾದ ಉಲೂಕನಿಗೆ ಕೃಷ್ಣನನ್ನು ಬಂಧಿಸಲು ಸಂತೋಷದಿಂದ ಆದೇಶವನ್ನೂ ನೀಡಿದ್ದೀಯೆ.

ಅದ್ಯ ತ್ವಾ ನಿಹನಿಷ್ಯಾಮಿ ಸಾನುಬಂಧಂ ಸಬಾಂಧವಮ್ ।
ಸಮೀಕರಿಷ್ಯೇ ತತ್ಪಾಪಂ ಯತ್ ಪುರಾ ಕೃತವಾನಸಿ ॥೮೪॥

ಈ ದಿನ ನಿನ್ನನ್ನು ನಿನ್ನ ಅನುಯಾಯಿಗಳ ಮತ್ತು ಬಾಂಧವರೊಡನೆ ಕೊಲ್ಲುವೆನು. ನೀನು ಹಿಂದೆ ಮಾಡಿದ ಎಲ್ಲ ಪಾಪಗಳಿಗೆ ಪ್ರತೀಕಾರವನ್ನು ಮಾಡುವೆನು.

ಏವಮುಕ್ತ್ವಾ ಧನುಶ್ಚೋರ್ವರಂ ವಿಕೃಷ್ಯೋದ್ಯಮ್ಯ ಚಾಸಕೃತ್ ।
ಸಮಾದಾಯ ಶರಾನ್ ಘೋರಾನ್ ಮಹಾಶನಿಸಮಪ್ರಭಾನ್ ॥೯॥

ಷಡ್ದಿಶತ್ ತರಸಾ ಕ್ರುದ್ಧೋ ಮುಮೋಚಾಶು ಸುಯೋಧನೇ ।
ಜ್ವಲಿತಾಗ್ನಿಶಿಖಾಕಾರಾನ್ ವಜ್ರಕಲ್ಪಾನಜಿಹ್ಮಗಾನ್ ॥೧೦॥

ಹೀಗೆ ಹೇಳಿ ಘೋರವಾದ ಧನುಸ್ಸನ್ನು ಎಳೆದು ಅದನ್ನು ಅನೇಕ ಬಾರಿ ತಿರುಗಿಸಿ ದೊಡ್ಡಸಿಡಿಲಿನ ಕಾಂತಿಯುಳ್ಳ ಘೋರವಾದ ಇಪ್ಪತ್ತಾರು ಬಾಣಗಳನ್ನು ತೆಗೆದುಕೊಂಡು ಉರಿಯುವ ಅಗ್ನಿಯ ಜ್ವಾಲೆಯಂತಿದ್ದ ವಜ್ರಾಯುಧಕ್ಕೆ ಸಮಾನವಾದ, ನೇರವಾಗಿ ಸಾಗುವ ಆ ಬಾಣಗಳನ್ನು ಸುಯೋಧನನ ಮೇಲೆ ಪ್ರಯೋಗಿಸಿದನು.

ತತೋಽಸ್ಯ ಕಾರ್ಮುಕಂ ದ್ವಾಭ್ಯಾಂ ಸೂತಂ ದ್ವಾಭ್ಯಾಂ ಚ ವಿವ್ಯಧೇ ।
ಚತುರ್ಭಿರಶ್ವಾನ್ ಜವನಾನನಯದ್ ಯಮಸಾದನಮ್ ॥೧೧॥

ಅನಂತರ ಎರಡು ಬಾಣಗಳಿಂದ ಅವನ ಧನುಸ್ಸನ್ನು ಕತ್ತರಿಸಿ, ಎರಡು ಬಾಣಗಳಿಂದ ಅವನ ಸೂತನನ್ನು ಕೊಂದು, ನಾಲ್ಕು ಬಾಣಗಳಿಂದ ಅವನ ವೇಗಶಾಲಿಗಳಾದ ಅಶ್ವಗಳನ್ನು ಯಮಪಟ್ಟಣಕ್ಕೆ ಕಳುಹಿಸಿದನು.

ದ್ವಾಭ್ಯಾಂ ಚ ಸುವಿಕೃಷ್ಟಾಭ್ಯಾಂ ಶರಾಭ್ಯಾಮರಿಮರ್ದನಃ ।
ಛತ್ರಂ ಚಿಚ್ಛೇದ ಸಮರೇ ರಾಜ್ಞಸ್ತಸ್ಯ ರಥೋತ್ತಮಾತ್ ॥೧೨॥

ಶತ್ರುಮರ್ದನನಾದ ಭೀಮಸೇನನು ಎರಡು ಬಾಣಗಳನ್ನು ಚೆನ್ನಾಗಿ ಎಳೆದು ಪ್ರಯೋಗಿಸಿ ರಣರಂಗದಲ್ಲಿ ಆ ರಾಜನ ಶ್ರೇಷ್ಠವಾದ ರಥದಿಂದ ಛತ್ರವನ್ನು ಕೆಡವಿದನು.

ತ್ರಿಭಿಶ್ಚ ತಸ್ಯ ಚಿಚ್ಛೇದ ಜ್ವಲಂತಂ ಧ್ವಜಮುತ್ತಮಮ್ ।
ಛತ್ರಾ ತಂ ಚ ನನಾದೋಚ್ಚೈರವ ಪುತ್ರಸ್ಯ ಪಶ್ಯತಃ ॥೧೩॥

ಪ್ರಕಾಶಮಾನವಾದ ಅವನ ರಥದ ಶ್ರೇಷ್ಠವಾದ ಧ್ವಜವನ್ನು ಮೂರು ಬಾಣಗಳಿಂದ ಕತ್ತರಿಸಿ ನಿನ್ನ ಪುತ್ರನು ನೋಡುತ್ತಿರುವಂತೆಯೇ ಗಟ್ಟಿಯಾಗಿ ಸಿಂಹನಾದವನ್ನು ಮಾಡಿದನು.

ರಥಾಚ್ಚ ಸ ಧ್ವಜಃ ಶ್ರೀಮಾನ್ ನಾನಾರತ್ನವಿಭೂಷಿತಃ ।
ಪಪಾತ ಸಹಸಾ ಭೂಮಿಂ ವಿದ್ಯುಜ್ಜ್ವಲಧರಾದಿವ ॥೧೪॥

ನಾನಾರತ್ನಗಳಿಂದ ಅಲಂಕೃತವಾದ, ಕಾಂತಿಯುಕ್ತವಾದ ಅವನ ರಥದ ಧ್ವಜವು ಮೋಡದಿಂದ ಮಿಂಚು ಬಂದಂತೆ ಇದ್ದಕ್ಕಿದ್ದಂತೆಯೇ ಶೀಘ್ರವಾಗಿ ಭೂಮಿಯ ಮೇಲೆ ಬಿದ್ದಿತು.

ಜ್ವಲಂತಂ ಸೂರ್ಯಸಂಕಾಶಂ ನಾಗಂ ಮಣಿಮಯಂ ಶುಭಮ್ ।
ಧ್ವಜಂ ಕುರುಪತೇಶ್ಛಿನ್ನಂ ದದೃಶುಃ ಸರ್ವಪಾರ್ಥಿವಾಃ ॥೧೫॥

ಸೂರ್ಯನ ಪ್ರಭೆಯನ್ನು ಹೊಂದಿ ಪ್ರಕಾಶಿಸುತ್ತಿದ್ದ ಮಣಿಮಯವೂ, ಶುಭವೂ ಆದ ಕುರುಪತಿಯ ಸರ್ಪಧ್ವಜವು ಕತ್ತರಿಸಿ ನೆಲದ ಮೇಲೆ ಬಿದ್ದುದನ್ನು ಎಲ್ಲ ರಾಜರೂ ನೋಡಿದರು.

ಅಥೈನಂ ದಶಭಿರ್ಬಾಣೈಸ್ತೋತ್ತ್ರೈರಿವ ಮಹಾಗಜಮ್ ।
ಆಜಘಾನ ರಣೇ ಭೀಮಃ ಸ್ಥಯನ್ನಿವ ಮಹಾರಥಃ ॥೧೬॥

ಅನಂತರ ಮಹಾರಥನಾದ ಭೀಮನು ಅಂಕುಶದಿಂದ ಮಹಾಗಜವನ್ನು ಪೀಡಿಸಿದಂತೆ ಹತ್ತು ಬಾಣಗಳಿಂದ ನಗುತ್ತಾ ಅವನನ್ನು ಹೊಡೆದನು.

ಸ ಗಾಢವಿದ್ಧೋ ವ್ಯಥಿತೋ ಭೀಮಸೇನೇನ ಸಂಯುಗೇ ।
ನಿಷಸಾದ ರಥೋಪಸ್ಥೇ ಮೂರ್ಚ್ಛಾಭಿಹತಚೇತನಃ ॥೧೭॥

ಗಾಢವಾಗಿ ಭೀಮಸೇನನಿಂದ ರಣರಂಗದಲ್ಲಿ ಹೊಡೆಯಲ್ಪಟ್ಟುವ್ಯಥೆಗೆ ಒಳಗಾದ ದುರ್ಯೋಧನನು ಮೂರ್ಚ್ಛಾಕ್ರಾಂತನಾಗಿ ರಥದ ಮಧ್ಯಭಾಗದಲ್ಲಿ ಕುಸಿದನು.

ತತಸ್ತು ರಾಜಾ ಸಿಂಧೂನಾಂ ರಥಶ್ರೇಷ್ಠೋ ಜಯದ್ರಥಃ ।
ದುರ್ಯೋಧನಸ್ಯ ಜಗ್ರಾಹ ಪಾರ್ಷ್ಣಿಂ ಸತ್ಪುರುಷೋಚಿತಾಮ್ ॥೧೮॥

ಆಗ ಸಿಂಧುರಾಜನೂ, ರಥಶ್ರೇಷ್ಠನೂ ಆದ ಜಯದ್ರಥನು ಸತ್ಕುರುಷರಿಗೆ ಉಚಿತವಾದ ದುರ್ಯೋಧನನ ಪಕ್ಷವನ್ನು ಹಿಡಿದನು.

ಕೃಪಶ್ಚ ರಥಿನಾಂ ಶ್ರೇಷ್ಠಃ ಕೌರವ್ಯಮಮಿತೌಜಸಮ್ ।
ಆರೋಪಯದ್ ರಥಂ ರಾಜನ್ ದುರ್ಯೋಧನಮಮರ್ಷಣಮ್ ॥

ಎಲೈ ರಾಜನೇ, ರಥಿಗಳಲ್ಲಿ ಶ್ರೇಷ್ಠರಾದ ಕೃಪರೂ ಸಹ ಅಮಿತಪರಾಕ್ರಮಿಯೂ, ಕ್ರೋಧಶೀಲನೂ, ಕೌರವ್ಯನೂ ಆದ ದುರ್ಯೋಧನನನ್ನು ತಮ್ಮ ರಥದಲ್ಲಿ ಏರಿಸಿದರು.

ಪರಿವಾರ್ಯ ತತೋ ಭೀಮಂ ಹಂತುಕಾಮೋ ಜಯದ್ರಥಃ ।
ರಥೈರನೇಕಸಾಹಸ್ರೈರ್ಭೀಮಸ್ಯಾವಾರಯದ್ ದಿಶಃ ॥೨೦॥

ಜಯದ್ರಥನು ಭೀಮಸೇನನನ್ನು ಕೊಲ್ಲಲು ಬಯಸಿ ಅನೇಕ ಸಹಸ್ರ ರಥಗಳಿಂದ ಎಲ್ಲ ದಿಕ್ಕುಗಳಲ್ಲಿಯೂ ಭೀಮಸೇನನ ಮೇಲೆ ಮುತ್ತಿದನು.

ಧೃಷ್ಟಕೇತುಸ್ತತೋ ರಾಜನ್ನಭಿಮನ್ಯುಶ್ಚ ವೀರ್ಯವಾನ್ ।
ಕೇಕಯಾ ದ್ರೌಪದೇಯಾಶ್ಚ ತವ ಪುತ್ರಾನಯೋಧಯನ್ ॥೨೧॥

ಎಲೈ ರಾಜನೇ, ಆಗ ಧೃಷ್ಟಕೇತುವೂ ಪರಾಕ್ರಮಶಾಲಿಯಾದ ಅಭಿಮನ್ಯುವೂ, ಕೇಕಯ ಸಹೋದರರೂ ಮತ್ತು ದ್ರೌಪದಿಯ ಪುತ್ರರೂ ನಿನ್ನ ಪುತ್ರರ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ಚಿತ್ರಸೇನಃ ಸುಚಿತ್ರಶ್ಚ ಚಿತ್ರಾಶ್ವಶ್ಚಿತ್ರದರ್ಶನಃ ।
ಚಾರುಚಿತ್ರಃ ಸುಚಾರುಶ್ಚ ತಥಾ ನಂದೋಪನಂದಕೌ ॥೨೨॥

ಅಷ್ಟಾವೇತೇ ಮಹೇಷ್ವಾಸಾಃ ಸುಕುಮಾರಾ ಯಶಸ್ವಿನಃ ।
ಅಭಿಮನ್ಯುರಥಂ ರಾಜನ್ ಸಮಂತಾತ್ ಪರ್ಯವಾರಯನ್ ॥೨೩॥

ಚಿತ್ರಸೇನ, ಸುಚಿತ್ರ, ಚಿತ್ರಾಶ್ವ, ಚಿತ್ರದರ್ಶನ, ಚಾರುಚಿತ್ರ, ಸುಚಾರು, ನಂದ ಮತ್ತು ಉಪನಂದ ಈ ಕೀರ್ತಿಶಾಲಿಗಳೂ, ಸುಕುಮಾರರೂ, ಮಹಾಧನುರ್ಧಾರಿಗಳೂ ಆದ ನಿನ್ನ ಎಂಟು ಪುತ್ರರು ಎಲೈ ರಾಜನೇ, ಅಭಿಮನ್ಯುವಿನ ರಥವನ್ನು ಎಲ್ಲ ಕಡೆಗಳಿಂದಲೂ ಸುತ್ತುವರಿದರು.

ಆಜಘಾನ ತತಸ್ತೂರ್ಣಮಭಿಮನ್ಯುರ್ಮಹಾಮನಾಃ ।
ಏಕೈಕಂ ಪಂಚಭಿರ್ವಿದ್ಧ್ವಾ ಶರೈಃ ಸನ್ನತಪರ್ವಭಿಃ ।
ವಜ್ರಮೃತ್ಯುಪ್ರತೀಕಾಶೈರ್ವಿಚಿತ್ರಾಯುಧನಿಃಸೃತೈಃ ॥೨೪॥

ಧೈರ್ಯಶಾಲಿಯಾದ ಅಭಿಮನ್ಯುವು ಆಗ ಶೀಘ್ರವಾಗಿ ಅವರಲ್ಲಿ ಒಬ್ಬೊಬ್ಬರನ್ನೂ ಬಾಗಿದ ತುದಿಯುಳ್ಳ, ವಜ್ರದಂತೆ ಇದ್ದ, ಮೃತ್ಯುವನ್ನು ಹೋಲುವ ವಿಚಿತ್ರಾಯುಧಗಳಿಂದ ಹೊರಹೊಮ್ಮುವ ಐದೈದು ಬಾಣಗಳಿಂದ ಹೊಡೆದನು.

ಅಮೃಷ್ಯಮಾಣಾಸ್ತೇ ಸರ್ವೇ ಸೌಭದ್ರಂ ರಥಸತ್ತಮಮ್ ।
ವವರ್ಷುರ್ಮಾರ್ಗಣೈಸ್ತೀಕ್ಷ್ಣೈರ್ಗಿರಿಂ ಮೇರುಮಿವಾಂಬುದಾಃ ॥೨೫॥

ರಥಶ್ರೇಷ್ಠನಾದ ಅಭಿಮನ್ಯುವಿನ ಕಾರ್ಯವನ್ನು ಸಹಿಸದೆ ಅವರೆಲ್ಲರೂ ಮೋಡಗಳು ಮೇರುಪರ್ವತದ ಮೇಲೆ ಮಳೆಯನ್ನು ಸುರಿಸಿದಂತೆ ಅಭಿಮನ್ಯುವಿನ ಮೇಲೆ ತೀಕ್ಷ್ಣವಾದ ಬಾಣಗಳ ಮಳೆಯನ್ನು ಸುರಿಸಿದರು.

ಸ ಪೀಡ್ಯಮಾನಃ ಸಮರೇ ಕೃತಾಸ್ತ್ರೋ ಯುದ್ಧದುರ್ಮದಃ ।
ಅಭಿಮನ್ಯುರ್ಮಹಾರಾಜ ತಾವಕಾನ್ ಸಮಕಂಪಯತ್ ।
ಯಥಾ ದೇವಾಸುರೇ ಯುದ್ಧೇ ವಜ್ರಪಾಣಿರ್ಮಹಾಸುರಾನ್ ॥೨೬॥

ಎಲೈ ಮಹಾರಾಜನೇ, ಅಸ್ತ್ರಪಾರಂಗತನೂ, ಯುದ್ಧದಲ್ಲಿ ದುರ್ಮದನೂ ಆದ ಅಭಿಮನ್ಯುವು ಅವರಿಂದ ಹಾಗೆ ಪೀಡಿಸಲ್ಪಟ್ಟರೂ ದೇವಾಸುರ ಯುದ್ಧದಲ್ಲಿ ವಜ್ರಪಾಣಿಯಾದ ಇಂದ್ರನು ಮಹಾದೈತ್ಯರನ್ನು ಅಲುಗಾಡಿಸಿದಂತೆ ನಿನ್ನ ಪುತ್ರರನ್ನು ಕಂಪಿಸುವಂತೆ ಮಾಡಿದನು.

ವಿಕರ್ಣಸ್ಯ ತತೋ ಭಲ್ಲಾನ್ ಪ್ರೇಷಯಾಮಾಸ ಭಾರತ ।
ಚತುರ್ದಶ ರಥಶ್ರೇಷ್ಠೋ ಘೋರಾನಾಶೀವಿಷೋಪಮಾನ್ ।
ಧ್ವಜಂ ಸೂತಂ ಹಯಾಂಶ್ಚಾಸ್ಯ ಛಿತ್ತ್ವಾ ನೃತ್ಯನ್ನಿವಾಹವೇ ॥೨೭॥

ಎಲೈ ಭಾರತನೇ, ರಥಶ್ರೇಷ್ಠನಾದ ಅವನು ಘೋರವಾದ, ಸರ್ಪಗಳಂತಿದ್ದ ಹದಿನಾಲ್ಕು ಭಲ್ಲಗಳನ್ನು ವಿಕರ್ಣನ ಮೇಲೆ ಪ್ರಯೋಗಿಸಿ, ಯುದ್ಧದಲ್ಲಿ ನೃತ್ಯವನ್ನು

ಮಾಡುವವನಂತೆ ಅವನ ರಥದ ಧ್ವಜವನ್ನೂ, ಸೂತನನ್ನೂ ಮತ್ತು ಅಶ್ವಗಳನ್ನೂ ಕತ್ತರಿಸಿದನು.

ಪುನಶ್ಚಾನ್ಯಾನ್ ಶರಾನ್ ಪೀತಾನಕುಂಠಾಗ್ರಾನ್ ಶಿಲಾಶಿತಾನ್ ।
ಪ್ರೇಷಯಾಮಾಸ ಸೌಭದ್ರೋ ವಿಕರ್ಣಾಯ ಮಹಾಬಲಃ ॥೨೮॥

ಪುನಃ ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ತೀಕ್ಷ್ಣವಾದ ತುದಿಯುಳ್ಳ ನೀರು ಕುಡಿಸಿ ಹದಮಾಡಿದ ಬೇರೆ ಬಾಣಗಳನ್ನು ತೆಗೆದುಕೊಂಡು ಮಹಾಬಲನಾದ ಅಭಿಮನ್ಯುವು ವಿಕರ್ಣನ ಮೇಲೆ ಪ್ರಯೋಗಿಸಿದನು.

ತೇ ವಿಕರ್ಣಂ ಸಮಾಸಾದ್ಯ ಕಂಕಬರ್ಹಿಣವಾಸಸಃ ।
ಭಿತ್ತ್ವಾ ದೇಹಂ ಗತಾ ಭೂಮಿಂ ಜ್ವಲಂತ ಇವ ಪನ್ನಗಾಃ ॥೨೯॥

ಕಂಕಪಕ್ಷಿಯ ಮತ್ತು ನವಿಲಿನ ಗರಿಗಳ ಪುಂಖವನ್ನು ಹೊಂದಿದ್ದ ಆ ಬಾಣಗಳು ವಿಕರ್ಣನನ್ನು ಸಮೀಪಿಸಿ ಅವನ ದೇಹವನ್ನು ಭೇದಿಸಿ ಜ್ವಲಿಸುವ ಸರ್ಪಗಳಂತೆ ಭೂಮಿಯನ್ನು ಸೇರಿದವು.

ತೇ ಶರಾ ಹೇಮಪುಂಖಾಗ್ರಾ ವ್ಯದೃಶ್ಯಂತ ಮಹೀತಲೇ ।
ವಿಕರ್ಣರುಧಿರಕ್ಲಿನ್ನಾ ವಮಂತ ಇವ ಶೋಣಿತಮ್ ॥೩೦॥

ಭೂಮಿಯ ಮೇಲೆ ಬಿದ್ದ ಸುವರ್ಣಮಯವಾದ ಪುಂಖಗಳನ್ನು ಹೊಂದಿದ್ದ ವಿಕರ್ಣನ ರಕ್ತದಿಂದ ತೊಯ್ದ ಆ ಬಾಣಗಳು ರಕ್ತವನ್ನು ಕಾರುತ್ತಿರುವಂತೆ ತೋರುತ್ತಿದ್ದವು.

ವಿಕರ್ಣಂ ವೀಕ್ಷ್ಯ ನಿರ್ಭಿನ್ನಂ ತಸ್ಯ ಭ್ರಾತ್ರೇ ಸಹೋದರಾಃ ।
ಅಭ್ಯದ್ರವಂತ ಸಮರೇ ಸೌಭದ್ರಪ್ರಮುಖಾನ್ ರಥಾನ್ ॥೩೧॥

ವಿಕರ್ಣನು ಹೀಗೆ ಗಾಯಗೊಂಡುದನ್ನು ನೋಡಿ ಅವನ ಉಳಿದ ಸಹೋದರರು ರಣರಂಗದಲ್ಲಿ ಅಭಿಮನ್ಯು ಮೊದಲಾದ ರಥರ ಮೇಲೆ ಎರಗಿದರು.

ಅಭಿಯಾತ್ತಾ ತಥೈವಾಶು ರಥಸ್ಥಾನ್ ಸೂರ್ಯವರ್ಚಸಃ ।
ಅವಿಧ್ಯನ್ ಸಮರೇಽನ್ಯೋನ್ಯಂ ಸಂರಬ್ಧಾ ಯುದ್ಧದುರ್ಮದಾಃ ॥೩೨॥

ಶೀಘ್ರವಾಗಿ ಅವರ ಬಳಿಗೆ ಓಡಿ ಬಂದು, ಸೂರ್ಯನ ಕಾಂತಿಯಿಂದ ಕೂಡಿದ ರಥದಲ್ಲಿ ಬೆಳಗುತ್ತಿದ್ದ ಅವರ ಮೇಲೆ ಯುದ್ಧದುರ್ಮದರಾದ ಅವರು ಕೋಪದಿಂದ ಪರಸ್ಪರವಾಗಿ ಹೊಡೆದಾಡಿದರು.

ದುರ್ಮುಖಃ ಶ್ರುತಕರ್ಮಾಣಂ ವಿದ್ಧ್ವಾ ಸಪ್ತಭಿರಾಶುಗೈಃ ।
ಧ್ವಜಮೇಕೇನ ಚಿಚ್ಛೇದ ಸಾರಥಿಂ ಚಾಸ್ಯ ಸಪ್ತಭಿಃ ॥೩೩॥

ದುರ್ಮುಖನು ವೇಗಶಾಲಿಗಳಾದ ಏಳು ಬಾಣಗಳಿಂದ ಶ್ರುತಕರ್ಮನನ್ನು ಹೊಡೆದು, ಒಂದು ಬಾಣದಿಂದ ಅವನ ಧ್ವಜವನ್ನು ಕತ್ತರಿಸಿ, ಏಳು ಬಾಣಗಳಿಂದ ಅವನ ಸಾರಥಿಯನ್ನು ಹೊಡೆದನು.

ಅಶ್ವಾನ್ ಜಾಂಬೂನದೈರ್ಜಾಲೈಃ ಕಲ್ಮಾಷಾನ್ ವಾತರಂಹಸಃ ।
ಜಘಾನ ಷಡ್ಭಿರಾಸಾದ್ಯ ಸಾರಥಿಂ ಚಾಭ್ಯಪಾತಯತ್ ॥೩೪॥

ವಾಯುವೇಗವುಳ್ಳ, ಶುಕ್ಲ-ಕೃಷ್ಣವರ್ಣಗಳಿಂದ ಕೂಡಿದ, ಸುವರ್ಣಮಯವಾದ ಹೊದಿಕೆಗಳಿಂದ ಅಲಂಕೃತವಾದ ಅವನ ರಥದ ಅಶ್ವಗಳನ್ನು ಆರು ಬಾಣಗಳಿಂದ ಕೊಂದು ಸಾರಥಿಯನ್ನೂ ಕೆಡವಿದನು.

ಸ ಹತಾಶ್ವೇ ರಥೇ ತಿಷ್ಠನ್ ಶ್ರುತಕರ್ಮಾ ಮಹಾರಥಃ ।
ಶಕ್ತಿಂ ಚಿಕ್ಷೇಪ ಸಂಕ್ರುದ್ಧೋ ಮಹೋಲ್ಕಾಂ ಜ್ವಲಿತಾಮಿವ ॥೩೫॥

ಮಹಾರಥನಾದ ಶ್ರುತಕರ್ಮನಾದರೋ ಅಶ್ವರಹಿತವಾದ ರಥದಲ್ಲಿ ನಿಂತು ಕೋಪಗೊಂಡು ಮಹೋಲ್ಕೆಯಂತೆ ಜ್ವಲಿಸುವ ಶಕ್ತ್ಯಾಯುಧವನ್ನು ದುರ್ಮುಖನ ಮೇಲೆ ಪ್ರಯೋಗಿಸಿದನು.

ಸಾ ದುರ್ಮುಖಸ್ಯ ವಿಪುಲಂ ವರ್ಮ ಭಿತ್ತ್ವಾ ಯಶಸ್ವಿನಃ ।
ವಿದಾರ್ಯ ಹ್ಯಾವಿಶದ್ ಭೂಮಿಂ ದೀಪ್ಯಮಾನಾ ಸುತೇಜಸಾ ॥೩೬॥

ವೇಗಶಾಲಿಯಾದ ಜ್ವಲಿಸುವ ಆ ಶಕ್ತ್ಯಾಯುಧವು ಕೀರ್ತಿವಂತನಾದ ದುರ್ಮುಖನ ವಿಪುಲವಾದ ಕವಚವನ್ನು ಭೇದಿಸಿ ಅವನನ್ನು ಸೀಳಿಕೊಂಡು ಭೂಮಿಯನ್ನು ಪ್ರವೇಶಿಸಿತು.

ತಂ ದೃಷ್ಟ್ವಾ ವಿರಥಂ ತತ್ರ ಸುತಸೋಮೋ ಮಹಾಬಲಃ ।
ಪಶ್ಯತಾಂ ಸರ್ವಸೈನ್ಯಾನಾಂ ರಥಮಾರೋಪಯತ್ ಸ್ವಕಮ್ ॥೩೭॥

ಸುತಕರ್ಮನು ರಥಹೀನನಾಗಿರುವುದನ್ನು ನೋಡಿ ಮಹಾಬಲನಾದ ಶ್ರುತಸೋಮನು ಎಲ್ಲ ಸೈನ್ಯವೂ ನೋಡುತ್ತಿರುವಂತೆ ಅವನನ್ನು ತನ್ನ ರಥಕ್ಕೆ ಏರಿಸಿದನು.

ಶ್ರುತಕೀರ್ತಿಸ್ತಥಾ ವೀರೋ ಜಯತ್ಸೇನಂ ಸುತಂ ತವ ।
ಆಭ್ಯಯಾತ್ ಸಮರೇ ರಾಜನ್ ಹಂತುಕಾಮೋ ಯಶಸ್ವಿನಮ್ ॥೩೮॥

ಎಲೈ ರಾಜನೇ, ಹಾಗೆಯೇ ವೀರನಾದ ಶ್ರುತಕೀರ್ತಿಯು ಕೀರ್ತಿವಂತನಾದ ನಿನ್ನ ಪುತ್ರನಾದ ಜಯತ್ಸೇನನನ್ನು ಕೊಲ್ಲಲು ಬಯಸಿ ರಣರಂಗದಲ್ಲಿ ಅವನ ಕಡೆಗೆ ಸಾಗಿದನು.

ತಸ್ಯ ವಿಚ್ಚಿಪತಶ್ಚಾಪಂ ಶ್ರುತಕೀರ್ತೇರ್ಮಹಾತ್ಮನಃ ।
ಚಿಚ್ಛೇದ ಸಮರೇ ರಾಜನ್ ಜಯತ್ಸೇನಃ ಸುತಸ್ತವ ।
ಕ್ಷುರಪ್ರೇಣ ಸುತೀಕ್ಷ್ಣೇನ ಪ್ರಹಸನ್ನಿವ ಭಾರತ ॥೩೯॥

ಎಲೈ ಭಾರತನೇ, ಎಲೈ ರಾಜನೇ, ಮಹಾತ್ಮನಾದ ಶ್ರುತಕೀರ್ತಿಯು ಧನುಸ್ಸನ್ನು ಬಗ್ಗಿಸುತ್ತಿರುವಂತೆಯೇ ನಿನ್ನ ಸುತನಾದ ಜಯತ್ಸೇನನು ತೀಕ್ಷ್ಣವಾದ ಕ್ಷುರಪ್ರದಿಂದ ನಗುವವನಂತೆ ಅವನ ಧನುಸ್ಸನ್ನು ಕತ್ತರಿಸಿದನು.

ತಂ ದೃಷ್ಟ್ವಾ ಛಿನ್ನಧನ್ವಾನಂ ಶತಾನೀಕಃ ಸಹೋದರಮ್ ।
ಅಭ್ಯಪದ್ಯತ ತೇಜಸ್ವೀ ಸಿಂಹವದ್ ವಿನದನ್ ಮುಹುಃ ॥೪೦॥

ಅವನ ಧನುಸ್ಸು ಕತ್ತರಿಸಲ್ಪಟ್ಟುದ್ದನ್ನು ನೋಡಿ ಅವನ ಸಹೋದರನಾದ ತೇಜಸ್ವಿಯಾದ ಶತಾನೀಕನು ಸಿಂಹದಂತೆ ಪುನಃ ಪುನಃ ಗರ್ಜಿಸುತ್ತಾ ಅವನ ಬಳಿಗೆ ಬಂದನು.

ಶತಾನೀಕಸ್ತು ಸಮರೇ ದೃಢಂ ವಿಸ್ಫಾರ್ಯ ಕಾರ್ಮುಕಮ್ ।
ವಿವ್ಯಾಧ ದಶಭಿಸ್ತೂರ್ಣಂ ಜಯತ್ಸೇನಂ ಶಿಲೀಮುಖೈಃ ।
ನನಾದ ಸುಮಹಾನಾದಂ ಪ್ರಭಿನ್ನ ಇವ ವಾರಣಃ ॥೪೧॥

ಶತಾನೀಕನಾದರೋ ರಣರಂಗದಲ್ಲಿ ತನ್ನ ಬಿಲ್ಲನ್ನು ದೃಢವಾಗಿ ಎಳೆದು ತೀಕ್ಷ್ಣವಾದ ತುದಿಯುಳ್ಳ ಹತ್ತು ಬಾಣಗಳಿಂದ ಶೀಘ್ರವಾಗಿ ಜಯತ್ಸೇನನನ್ನು ಹೊಡೆದನು. ಮತ್ತು ಮದಿಸಿದ ಗಜದಂತೆ ದೊಡ್ಡ ನಾದವನ್ನು ಮಾಡಿದನು.

ಅಥಾನ್ಯೇನ ಸುತೀಕ್ಷ್ಣೇನ ಸರ್ವಾವರಣಭೇದಿನಾ ।
ಶತಾನೀಕೋ ಜಯತ್ಸೇನಂ ವಿವ್ಯಾಧ ಹೃದಯೇ ಭೃಶಮ್ ॥೪೨॥

ಅನಂತರ ಶತಾನೀಕನು ಎಲ್ಲ ಕವಚಗಳನ್ನೂ ಭೇದಿಸುವ ಅತ್ಯಂತ ತೀಕ್ಷ್ಣವಾದ ಇನ್ನೊಂದು ಬಾಣದಿಂದ ಜಯತ್ಸೇನನಿಗೆ ಅವನ ಹೃದಯದಲ್ಲಿ ಗಾಢವಾಗಿ ಹೊಡೆದನು.

ತಥಾ ತಸ್ಮಿನ್ ವರ್ತಮಾನೇ ದುಷ್ಪರ್ಣೋ ಭ್ರಾತುರಂತಿಕೇ ।
ಚಿಚ್ಛೇದ ಸಮರೇ ಚಾಪಂ ನಾಕುಲೇಃ ಕ್ರೋಧಮೂರ್ಛಿತಃ ॥೪೩॥

ಜಯತ್ಸೇನನು ಅಂತಹ ಸ್ಥಿತಿಗೆ ಒಳಗಾಗಿರುವುದನ್ನು ನೋಡಿದ ಅವನ ಸಹೋದರನಾದ ದುಷ್ಪರ್ಣನು ಕ್ರೋಧಮೂರ್ಛಿತನಾಗಿ ಅವನ ಸಮೀಪಕ್ಕೆ ಬಂದು ಯುದ್ಧದಲ್ಲಿ ನಕುಲಪುತ್ರನಾದ ಶತನೀಕನ ಧನುಸ್ಸನ್ನು ಕತ್ತರಿಸಿದನು.

ಅಥಾನ್ಯದ್ಧನುರಾದಾಯ ಭಾರಸಾಧನಮುತ್ತಮಮ್ ।
ಸಮಾದತ್ತ ಶಿತಾನ್ ಬಾಣಾನ್ ಶತಾನೀಕೋ ಮಹಾಬಲಃ ॥೪೪॥

ಆಗ ಮಹಾಬಲನಾದ ಶತಾನೀಕನು ಗುರುತರವಾದ ಕಾರ್ಯವನ್ನು ಮಾಡುವ ಶ್ರೇಷ್ಠವಾದ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ತೀಕ್ಷ್ಣವಾದ ಬಾಣವನ್ನು ಕೈಯಲ್ಲಿ ತೆಗೆದುಕೊಂಡನು.

ತಿಷ್ಠ ತಿಷ್ಠೇತಿ ಚಾಮಂತ್ರ್ಯ ದುಷ್ಪರ್ಣಂ ಭ್ರಾತುರಗ್ರತಃ ।
ಮುಮೋಚ ನಿಶಿತಾನ್ ಬಾಣಾನ್ ಜ್ವಲಿತಾನ್ ಪನ್ನಗಾನಿವ ॥೪೫॥

ಅವನ ಸಹೋದರನ ಮುಂದೆ ದುಷ್ಪರ್ಣನನ್ನು ಕುರಿತು ನಿಲ್ಲು, ನಿಲ್ಲು ಎಂದು ಹೇಳುತ್ತಾ ಜ್ವಲಿಸುವ ಸರ್ಪಗಳಂತಿದ್ದ ತೀಕ್ಷ್ಣವಾದ ಬಾಣಗಳನ್ನು ಅವನ ಮೇಲೆ ಪ್ರಯೋಗಿಸಿದನು.

ತತೋಽಸ್ಯ ಧನುರೇಕೇನ ದ್ವಾಭ್ಯಾಂ ಸೂತಂ ಚ ಮಾರಿಷ ।
ಚಿಚ್ಛೇದ ಸಮರೇ ತೂರ್ಣಂ ತಂ ಚ ವಿವ್ಯಾಧ ಸಪ್ತಭಿಃ ॥೪೬॥

ಎಲೈ ಪೂಜ್ಯನೇ, ಅನಂತರ ಒಂದು ಬಾಣದಿಂದ ಅವನ ಧನುಸ್ಸನ್ನೂ, ಎರಡು ಬಾಣಗಳಿಂದ ಅವನ ಸೂತನನ್ನೂ ಕತ್ತರಿಸಿ, ಶೀಘ್ರವಾಗಿ ಅವನ ಮೇಲೆ ರಣರಂಗದಲ್ಲಿ ಏಳು ಬಾಣಗಳನ್ನು ಪ್ರಯೋಗಿಸಿದನು.

ಅಶ್ವಾನ್ ಮನೋಜವಾಂಶ್ಚಾಸ್ಯ ಕಲ್ಮಾಷಾನ್ ವೀತಕಲ್ಮಷಃ ।
ಜಘಾನ ನಿಶಿತೈಸ್ತೂರ್ಣಂ ಸರ್ವಾನ್ ದ್ವಾದಶಭಿಃ ಶರೈಃ ॥೪೭॥

ಹನ್ನೆರಡು ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿ ಮನೋವೇಗವುಳ್ಳ ಬಿಳಿ ಮತ್ತು ಕಪ್ಪು ಬಣ್ಣಗಳಿಂದ ಕೂಡಿದ ಪರಿಶುದ್ಧ ಜಾತಿಗೆ ಸೇರಿದ ಅವನ ರಥದ ಅಶ್ವಗಳೆಲ್ಲವನ್ನೂ ಶೀಘ್ರವಾಗಿ ಕೊಂದನು.

ಅಥಾಪರೇಣ ಭಲ್ಲೇನ ಸುಮುಕ್ತೇನ ನಿಪಾತಿನಾ ।
ದುಷ್ಕರ್ಣಂ ಸಮರೇ ಕ್ರುದ್ಧೋ ವಿವ್ಯಾಧ ಹೃದಯೇ ಭೃಶಮ್ ।
ಸ ಪಪಾತ ತತೋ ಭೂಮೌ ವಜ್ರರುಗ್ಣ ಇವ ದ್ರುಮಃ ॥೪೮॥

ಅನಂತರ ತನ್ನ ಗುರಿಯನ್ನು ತಲುಪುವ, ಚೆನ್ನಾಗಿ ಪ್ರಯೋಗಿಸಲ್ಪಟ್ಟ ಇನ್ನೊಂದು ಭಲ್ಲದಿಂದ ಕ್ರುದ್ಧನಾಗಿ ದುಷ್ಕರ್ಣನಿಗೆ ಅವನ ಎದೆಯಲ್ಲಿ ಗಾಢವಾಗಿ ಹೊಡೆದನು. ಅವನು ಸಿಡಿಲು ಬಡಿದ ವೃಕ್ಷದಂತೆ ಭೂಮಿಯ ಮೇಲೆ ಬಿದ್ದನು.

ದುಷ್ಕರ್ಣಂ ನಿಹತಂ ದೃಷ್ಟ್ವಾ ಪಂಚ ರಾಜನ್ಮಹಾರಥಾಃ ।
ಜಘಾಂಸಂತಃ ಶತಾನೀಕಂ ಸರ್ವತಃ ಪರ್ಯವಾರಯನ್ ॥೪೯॥

ದುಷ್ಕರ್ಣನು ಹೀಗೆ ಭೂಮಿಯ ಮೇಲೆ ಬಿದ್ದುದನ್ನು ನೋಡಿ ಎಲೈ ರಾಜನೇ, ಮಹಾರಥರಾದ ಅವನ ಐವರು ಸಹೋದರರು ಶತಾನೀಕನನ್ನು ಕೊಲ್ಲಲು ಬಯಸಿ ಎಲ್ಲ ಕಡೆಗಳಿಂದಲೂ ಅವನನ್ನು ಸುತ್ತುವರಿದರು.

ಧಾರ್ಯಮಾನಂ ಶರವ್ರಾತೈಃ ಶತಾನೀಕಂ ಯಶಸ್ವಿನಮ್ ।
ಅಭ್ಯಧಾವಂತ ಸಂರಬ್ಧಾಃ ಕೇಕಯಾಃ ಪಂಚ ಸೋದರಾಃ ॥೫೦॥

ಕೀರ್ತಿಶಾಲಿಯಾದ ಶತಾನೀಕನು ಬಾಣಗಳ ಸಮೂಹದಿಂದ ಮುಚ್ಚಲ್ಪಡುತ್ತಿರಲು ಕೋಪಗೊಂಡ ಕೇಕಯದೇಶದ ಐವರು ಸಹೋದರರು ಅವನ ಬಳಿಗೆ ಧಾವಿಸಿದರು.

ತಾನಭ್ಯಾಪತತಃ ಪ್ರೇಕ್ಷ್ಯ ತವ ಪುತ್ರಾ ಮಹಾರಥಾಃ ।
ಪ್ರತ್ಯುದ್ಯಯುರ್ಮಹಾರಾಜ ಗಜಾ ಇವ ಮಹಾಗಜಾನ್ ॥೫೧॥

ಎಲೈ ಮಹಾರಾಜನೇ, ಅವರು ಸಮೀಪಕ್ಕೆ ಬರುತ್ತಿರುವುದನ್ನು ನೋಡಿ ಮಹಾರಥರಾದ ನಿನ್ನ ಪುತ್ರರು ಗಜಗಳು ಪ್ರತಿಗಜಗಳ ಮೇಲೆ ಎರಗಿದಂತೆ ಅವರ ಮೇಲೆ ಎರಗಿದರು.

ದುರ್ಮುಖೋ ದುರ್ಜಯಶ್ಚೈವ ತಥಾ ದುರ್ಮರ್ಷಣೋ ಯುವಾ ।
ಶತ್ರುಂಜಯಃ ಶತ್ರುಸಹಃ ಸರ್ವೇ ಕ್ರುದ್ಧಾ ಯಶಸ್ವಿನಃ ।
ಪ್ರತ್ಯುದ್ಯಾತಾ ಮಹಾರಾಜ ಕೇಕಯಾನ್ ಭ್ರಾತರಃ ಸಮಮ್ ॥೫೨॥

ಎಲೈ ಮಹಾರಾಜನೇ, ದುರ್ಮುಖ, ದುರ್ಜಯ, ಯುವಕನಾದ ದುರ್ಮರ್ಷಣ, ಶತ್ರುಂಜಯ, ಶತ್ರುಸಹ ಈ ಎಲ್ಲ ಕೀರ್ತಿಶಾಲಿಗಳೂ ಕ್ರುದ್ಧರಾಗಿ ಒಟ್ಟಿಗೆ ಕೇಕಯ ದೇಶದ ಐವರು ಸಹೋದರರ ಮೇಲೆ ಎರಗಿದರು.

ರಥೈರ್ನಗರಸಂಕಾಶೈರ್ಹಯೈರ್ಯುಕ್ತೈರ್ಮನೋಜವೈಃ ।
ನಾನಾವರ್ಣವಿಚಿತ್ರಾಭಿಃ ಪತಾಕಾಭಿರಲಂಕೃತೈಃ ॥೫೩॥

ವರಚಾಪಧರಾ ವೀರಾ ವಿಚಿತ್ರಕವಚಧ್ವಜಾಃ ।
ವಿವಿಶುಸ್ತೇ ಪರಂ ಸೈನ್ಯಂ ಸಿಂಹಾ ಇವ ವನಾದ್ವನಮ್ ॥೫೪॥

ಶ್ರೇಷ್ಠವಾದ ಧನುಸ್ಸನ್ನು ಧರಿಸಿದ, ವಿಚಿತ್ರ ಕವಚ-ಧ್ವಜಗಳನ್ನು ಹೊಂದಿದ ಆ ವೀರರು ನಾನಾವರ್ಣದ ವಿಚಿತ್ರವಾದ ಪತಾಕೆಗಳಿಂದ ಅಲಂಕೃತವಾದ ಮನೋಜವವುಳ್ಳ ಅಶ್ವಗಳನ್ನು ಹೂಡಿದ, ನಗರದಂತೆ ಶೋಭಿಸುವ ರಥಗಳಲ್ಲಿ ಸಿಂಹಗಳು ಒಂದು ವನದಿಂದ ಇನ್ನೊಂದು ವನಕ್ಕೆ ಹೋದಂತೆ ಶತ್ರುಸೈನ್ಯವನ್ನು ಪ್ರವೇಶಿಸಿದರು.

ತೇಷಾಂ ಸುತುಮುಲಂ ಯುದ್ಧಂ ವ್ಯತಿಷಕ್ತರಥದ್ವಿಪಮ್ ।
ಅವರ್ತತ ಮಹಾರೌದ್ರಂ ನಿಘ್ನತಾಮಿತರೇತರಮ್ ।
ಅನ್ಯೋನ್ಯಾಗಸ್ಕೃತಾಂ ರಾಜನ್ ಯಮರಾಷ್ಟ್ರವಿವರ್ಧನಮ್ ॥೫೫॥

ಎಲೈ ರಾಜನೇ, ಪರಸ್ಪರವಾಗಿ ಅಪಚಾರವನ್ನು ಮಾಡಿ, ಪರಸ್ಪರವಾಗಿ ಕೊಲ್ಲಲು ಬಯಸಿದ ಅವರಿಬ್ಬರ ಸೈನ್ಯದ ರಥ-ಗಜಗಳು ಪರಸ್ಪರ ಮಿಶ್ರಿತವಾಗಿ ಮಹಾಭಯಂಕರವೂ, ತೀವ್ರವೂ, ಯಮಲೋಕವರ್ಧನವೂ ಆದ ಯುದ್ಧವು ನಡೆಯಿತು.

ಮುಹೂರ್ತಾಸ್ತಮಿತೇ ಸೂರ್ಯೇ ಚಕ್ರುರ್ಯುದ್ಧಂ ಸುದಾರುಣಮ್ ।
ರಥಿನಃ ಸಾದಿನಶ್ಚೈವ ವ್ಯಕೀರ್ಯಂತ ಸಹಸ್ರಶಃ ॥೫೬॥

ಸೂರ್ಯಾಸ್ತವಾಗಿ ಒಂದು ಮುಹೂರ್ತವು ಕಳೆದಿದ್ದರೂ ಅವರು ದಾರುಣವಾದ ಯುದ್ಧವನ್ನು ಮಾಡಿದರು. ರಥಿಕರು ಮತ್ತು ಅಶ್ವಾರೋಹಿಗಳು ಸಹಸ್ರ ಸಂಖ್ಯೆಯಲ್ಲಿ ನಾಶವನ್ನು ಹೊಂದಿದರು.

ನಾಶಯಾಮಾಸತುರ್ವೀರೌ ಧೃಷ್ಟದ್ಯುಮ್ನವೃಕೋದರೌ ।
ಕೌರವಾಣಾಮನೀಕಾನಿ ಶರೈಃ ಸನ್ನತಪರ್ವಭಿಃ ॥೫೭॥

ವೀರರಾದ ಧೃಷ್ಟದ್ಯುಮ್ನ ಮತ್ತು ಭೀಮಸೇನರು ಬಾಗಿದ ತುದಿಯುಳ್ಳ ಬಾಣಗಳಿಂದ ಕೌರವರ ಸೈನ್ಯಗಳನ್ನು ನಾಶಮಾಡಿದರು.

ತತಃ ಶಾಂತನವಃ ಕ್ರುದ್ಧಃ ಶರೈಃ ಸನ್ನತಪರ್ವಭಿಃ ।
ನಾಶಯಾಮಾಸ ಸೇನಾಂ ವೈ ಭೀಷ್ಮಸ್ತೇಷಾಂ ಮಹಾತ್ಮನಾಮ್ ।
ಪಾಂಚಾಲಾನಾಂ ಚ ಸೈನ್ಯಾನಿ ಶರೈರ್ನಿನ್ಯೇ ಯಮಕ್ಷಯಮ್ ॥೫೮॥

ಆಗ ಕೋಪಗೊಂಡ ಭೀಷ್ಮರು ಬಾಗಿದ ತುದಿಯುಳ್ಳ ಬಾಣಗಳಿಂದ ಮಹಾತ್ಮರಾದ ಪಾಂಡವರ ಸೈನ್ಯವನ್ನು ನಾಶಮಾಡಿದರು. ತಮ್ಮ ಬಾಣಗಳಿಂದ ಪಾಂಚಾಲರ ಸೈನ್ಯವನ್ನೂ ಯಮಪಟ್ಟಣಕ್ಕೆ ಕಳುಹಿಸಿದರು.

ಏವಂ ಭಿತ್ತ್ವಾ ಮಹೇಷ್ವಾಸಃ ಪಾಂಡವಾನಾಮನೀಕಿನೀಮ್ ।
ಕೃತ್ವಾವಹಾರಂ ಸೈನ್ಯಾನಾಂ ಯಯೌ ಸ್ವಶಿಬಿರಂ ನೃಪ ॥೫೯॥

ಎಲೈ ರಾಜನೇ, ಮಹಾಧನುರ್ಧಾರಿಗಳಾದ ಭೀಷ್ಮರು ಪಾಂಡವರ ಸೈನ್ಯವನ್ನು ಹೀಗೆ ಭೇದಿಸಿ ತಮ್ಮ ಸೈನ್ಯವನ್ನು ಹಿಂದಕ್ಕೆ ತೆಗೆದುಕೊಂಡು ತಮ್ಮ ಶಿಬಿರಕ್ಕೆ ಹಿಂದಿರುಗಿದರು.

ಧರ್ಮರಾಜೋಽಪಿ ಸಂಪ್ರೇಕ್ಷ್ಯ ಧೃಷ್ಟದ್ಯುಮ್ನವೃಕೋದರೌ ।
ಮೂರ್ಧ್ನಿ ಚೈತಾವುಪಾಘ್ರಾಯ ಸಂಹೃಷ್ಟಃ ಶಿಬಿರಂ ಯಯೌ ॥೬೦॥

ಧರ್ಮರಾಜನೂ ಸಹ ಧೃಷ್ಟದ್ಯುಮ್ನ-ಭೀಮಸೇನರನ್ನು ನೋಡಿ ಅವರನ್ನು ಶಿರಸ್ಸಿನಲ್ಲಿ ಆಘ್ರಾಣಿಸಿ ಸಂತೋಷದಿಂದ ತನ್ನ ಶಿಬಿರಕ್ಕೆ ಹಿಂದಿರುಗಿದನು.

ಅರ್ಜುನೋ ವಾಸುದೇವಶ್ಚ ಕೌರವಾಣಾಮನೀಕಿನೀಮ್ ।
ಹತ್ವಾ ವಿದ್ರಾವ್ಯ ಚ ಶರೈಃ ಶಿಬಿರಾಯೈವ ಜಗ್ಮತುಃ ॥೬೧॥

ಅರ್ಜುನ ಮತ್ತು ಕೃಷ್ಣರೂ ಸಹ ಕೌರವರ ಸೈನ್ಯವನ್ನು ಕೊಂದು ಮತ್ತು ತಮ್ಮ ಬಾಣಗಳಿಂದ ಚದುರಿಸಿ ಶಿಬಿರಕ್ಕೆ ಹಿಂದಿರುಗಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಪಂಚಸಪ್ತತಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಪಂಚತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಎಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

ಭೀಷ್ಮರ ಸೇನಾಪತ್ಯದಲ್ಲಿ ಆರನೆಯ ದಿನದ ಯುದ್ಧವು ಮುಗಿಯಿತು.

★ ★ ★ ★ ★

ಎಪ್ಪತ್ತಾರನೆಯ ಅಧ್ಯಾಯ

ರಾತ್ರಿಯಲ್ಲಿ ಶಿಬಿರದಲ್ಲಿ ಭೀಷ್ಮ-ದುರ್ಯೋಧನರ ಸಂವಾದ.
ಪುನಃ ಏಳನೆಯ ದಿವಸ ಯುದ್ಧಕ್ಕಾಗಿ ಸನ್ನಾಹ.

ಸಂಜಯಃ

ಅಥ ಶೂರಾ ಮಹಾರಾಜ ಪರಸ್ಪರಕೃತಾಗಸಃ ।
ಜಗ್ಮುಃ ಸ್ವಶಿಬಿರಾಣ್ಯೇವ ರುಧಿರೇಣ ಸಮುಕ್ಷಿತಾಃ ॥೧॥

ಸಂಜಯ– ಎಲೈ ಮಹಾರಾಜನೇ, ಅನಂತರ ಪರಸ್ಪರವಾಗಿ ವಿರೋಧ ಮಾಡಿದ ಎಲ್ಲ ಶೂರರೂ ರಕ್ತದಿಂದ ತೋಯ್ದ ಶರೀರವುಳ್ಳವರಾಗಿ ತಮ್ಮ ಶಿಬಿರಗಳಿಗೆ ಹೋದರು.

ವಿಶ್ರಮ್ಯ ಚ ಯಥಾನ್ಯಾಯಂ ಪೂಜಯಿತ್ವಾ ಪರಸ್ಪರಮ್ ।
ಸನ್ನದ್ಧಾಃ ಸಮದೃಶ್ಯಂತ ಭೂಯೋ ಯುದ್ಧಚಿಕೀರ್ಷಯಾ ॥೨॥

ಶಾಸ್ತ್ರೋಕ್ತವಾಗಿ ವಿಶ್ರಾಂತಿಯನ್ನು ತೆಗೆದುಕೊಂಡು ಪರಸ್ಪರವಾಗಿ ಗೌರವಿಸಿ ಪುನಃ ಯುದ್ಧ ಮಾಡುವ ಆಸೆಯಿಂದ ಸನ್ನದ್ಧರಾಗುವುದು ಕಂಡುಬಂದಿತು.

ತತಸ್ತವ ಸುತೋ ರಾಜನ್ ಚಿಂತಯಾಭಪರಿಪ್ಲುತಃ ।
ವಿಸ್ರವಚ್ಛೋಣಿತಾಕ್ತಾಂಗಃ ಪಪ್ರಚ್ಛೇದಂ ಪಿತಾಮಹಮ್ ॥೩॥

ಆಗ ಎಲೈ ರಾಜನೇ, ರಕ್ತವು ಸೋರುತ್ತಿದ್ದ ಶರೀರವುಳ್ಳ ನಿನ್ನ ಪುತ್ರನು ಚಿಂತಾಕ್ರಾಂತನಾಗಿ ಪಿತಾಮಹರಾದ ಭೀಷ್ಮರನ್ನು ಕುರಿತು ಈ ಪ್ರಶ್ನೆಯನ್ನು ಮಾಡಿದನು.

ಸೈನ್ಯಾನಿ ರೌದ್ರಾಣಿ ಭಯಾನಕಾನಿ
ವ್ಯೂಢಾನಿ ಸಮ್ಯಗ್ಬಹುಲಧ್ವಜಾನಿ ।
ವಿದಾರ್ಯ ಹತ್ವಾ ಚ ನಿಪೀಡ್ಯ ಶೂರಾನ್
ತೇ ಪಾಂಡವಾನಾಂ ತ್ವರಿತಾ ರಥೌಘಾಃ ॥೪॥

ಸಮ್ಮೋಹ್ಯ ಸರ್ವಾನ್ ಯುಧಿ ಕೀರ್ತಿಮಂತೋ
ವ್ಯೂಹಂ ಚ ತಂ ಮಕರಂ ವಜ್ರಕಲ್ಪಮ್ ।
ಪ್ರವಿಶ್ಯ ಭೀಮೇನ ನಿಬರ್ಹಿತೋಽಸ್ಮಿ
ಘೋರೈಃ ಶರೈರ್ಮೃತ್ಯುದಂಡಪ್ರಕಾಶೈಃ ॥೫॥

ಭಯಂಕರವೂ, ಕಠೋರವೂ ಆದ ನಮ್ಮ ಸೈನ್ಯಗಳು ಅನೇಕ ಧ್ವಜ-ಪತಾಕೆಗಳಿಂದ ಕೂಡಿ ವ್ಯೂಹಗೊಳಿಸಲ್ಪಟ್ಟವು. ಆದರೂ ಶೂರರಾದ ಪಾಂಡವರ ಮಹಾರಥರು ಶೀಘ್ರಗಾಮಿಗಳಾಗಿ ನಮ್ಮ ವ್ಯೂಹವನ್ನು ಭೇದಿಸಿ, ನಮ್ಮ ಶೂರರನ್ನು ಹಿಂಸೆಗೊಳಿಸಿ, ನಮ್ಮ ಎಲ್ಲ ಶೂರರಿಗೂ ಮೋಹಗೊಳಿಸಿ ಕೀರ್ತಿಶಾಲಿಗಳಾಗಿದ್ದಾರೆ. ವಜ್ರದಂತೆ ಅಭೇದ್ಯವಾಗಿದ್ದ ಆ ಮಕರವ್ಯೂಹವನ್ನು ಪ್ರವೇಶಿಸಿ ಭೀಮನು ಯಮದಂಡದಂತಿರುವ ಘೋರವಾದ ಬಾಣಗಳಿಂದ ನನ್ನನ್ನು ವಿನಾಶಗೊಳಿಸಿದ್ದಾನೆ.

ಕ್ರುದ್ಧಂ ತಮುದ್ವೀಕ್ಷ್ಯ ಭಯೇನ ರಾಜನ್
ಸಮ್ಮೂರ್ಛಿತೋ ನಾಲಭಂ ಶಾಂತಿಮದ್ಯ ।
ಇಚ್ಛೇ ಪ್ರಸಾದಾತ್ ತವ ಸತ್ಯಸಂಧ
ಪ್ರಾಪ್ತುಂ ಜಯಂ ಪಾಂಡವೇಯಾಂಶ್ಚ ಹಂತುಮ್ ॥೬॥

ಎಲೈ ರಾಜನೇ (ಭೀಷ್ಮರೇ), ಕ್ರುದ್ಧನಾದ ಆ ಭೀಮಸೇನನನ್ನು ನೋಡಿ ನಾನು ಮೂರ್ಛೆಗೆ ಒಳಗಾಗಿ ಈ ದಿನ ಮನಸ್ಸಮಾಧಾನವನ್ನೇ ಹೊಂದುತ್ತಿಲ್ಲ. ಎಲೈ ಸತ್ಯಸಂಧರೇ, ನಿಮ್ಮ ಅನುಗ್ರಹದಿಂದ ಪಾಂಡವರನ್ನು ಕೊಂದು ಜಯವನ್ನು ಪಡೆಯಲು ಬಯಸುತ್ತೇನೆ.

ತೇನೈವಮುಕ್ತಃ ಪ್ರಹಸನ್ ಮಹಾತ್ಮಾ
ದುರ್ಯೋಧನಂ ಜಾತಮನ್ಯುಂ ವಿದಿತ್ವಾ ।
ತಂ ಪ್ರತ್ಯುವಾಚಾವಿಮನಾ ಮನಸ್ವೀ
ಗಂಗಾಸುತಃ ಶಸ್ತ್ರಭೃತಾಂ ವರಿಷ್ಠಃ ॥೭॥

ಹೀಗೆ ದುರ್ಯೋಧನನಿಂದ ಹೇಳಲ್ಪಟ್ಟ ಮಹಾತ್ಮರೂ, ಧೈರ್ಯಶಾಲಿಗಳೂ, ಶಸ್ತ್ರಧಾರಿಗಳಲ್ಲಿ ಶ್ರೇಷ್ಠರೂ, ಗಂಗಾಪುತ್ರರೂ ಆದ ಭೀಷ್ಮರು ಮನಸ್ಸಿನಲ್ಲಿ ಬೇಸರವನ್ನು ತಂದುಕೊಳ್ಳದೆ ದುರ್ಯೋಧನನು ಕೋಪಪೀಡಿತನಾಗಿದ್ದಾನೆಂದು ಗಮನಿಸಿ ಅವನನ್ನು ಕುರಿತು ಮಾತನಾಡಿದರು.

ಪರೇಣ ಯತ್ನೇನ ವಿಗಾಹ್ಯ ಸೇನಾಂ
ಸರ್ವಾತ್ಮನಾಹಂ ತವ ರಾಜಪುತ್ರ ।

ಇಚ್ಛಾಮಿ ದಾತುಂ ವಿಜಯಂ ಸುಖಂ ಚ
ನ ಚಾತ್ಮಾನಂ ಧಾದಯೇಽಹಂ ತ್ವದರ್ಥೇ ॥೮॥

ಎಲೈ ರಾಜಪುತ್ರನೇ, ನನ್ನ ಸರ್ವಪ್ರಯತ್ನದಿಂದಲೂ ಶತ್ರುಸೈನ್ಯವನ್ನು ಪ್ರವೇಶಿಸಿ ಸರ್ವಪ್ರಯತ್ನದಿಂದ ಯುದ್ಧವನ್ನು ಮಾಡಿ ನಿನಗೆ ವಿಜಯವನ್ನು ಮತ್ತು ಸುಖವನ್ನು ತಂದುಕೊಡಲು ಇಚ್ಛಿಸುತ್ತೇನೆ. ನಿನ್ನ ಸಲುವಾಗಿ ಹೋರಾಡುವ ನಾನು ನನ್ನ ರಕ್ಷಣೆಯನ್ನೂ ಮಾಡಿಕೊಳ್ಳುತ್ತಿಲ್ಲ.

ಏತೇ ತು ರೌದ್ರಾ ಬಹವೋ ಮಹಾರಥಾ
ಯಶಸ್ವಿನಃ ಶೂರತಮಾಃ ಕೃತಾಸ್ತ್ರಾಃ ।
ಯೇ ಪಾಂಡವಾನಾಂ ಸಮರೇ ಸಹಾಯಾ
ಜಿತಕ್ಲಮಾಃ ಕ್ರೋಧವಿಷಂ ವಮಂತಿ ॥೯॥

ಪಾಂಡವರಿಗೆ ಸಹಾಯಕರಾಗಿರುವ ಈ ಭಯಂಕರರಾದ ಅನೇಕ ಮಹಾರಥರು ಕೀರ್ತಿವಂತರು, ಅತ್ಯಂತ ಶೂರರು ಮತ್ತು ಅಸ್ತ್ರಗಳ ಪರಿಶ್ರಮವುಳ್ಳವರು. ದಣಿವನ್ನು ಮೀರಿದ ಅವರು ನಿನ್ನ ಮೇಲೆ ಕ್ರೋಧವಿಷವನ್ನು ಉಗುಳುತ್ತಿದ್ದಾರೆ.

ತೇ ನೇಹ ಶಕ್ಯಾಃ ಸಹಸಾ ವಿಜೇತುಂ
ವೀರ್ಯೋನ್ನದ್ಧಾಃ ಕೃತವೈರಾಸ್ತ್ವಯಾ ಚ ।
ಅಹಂ ಹ್ಯೇತಾನ್ ಪ್ರತಿಯೋತ್ಸ್ಯಾಮಿ ರಾಜನ್
ಸರ್ವಾತ್ಮನಾ ಜೀವಿತಂ ತ್ಯಜ್ಯ ವೀರ ॥೧೦॥

ದರ್ಪಿಷ್ಠರೂ, ನಿನ್ನಲ್ಲಿ ವೈರವನ್ನು ಮಾಡಿದವರೂ ಆದ ಅವರನ್ನು ಇದ್ದಕ್ಕಿದ್ದಂತೆ ಯುದ್ಧದಲ್ಲಿ ಗೆಲ್ಲಲು ಸಾಧ್ಯವಿಲ್ಲ. ಎಲೈ ರಾಜನೇ, ವೀರನೇ, ನನ್ನ ಪ್ರಾಣದ ಆಸೆಯನ್ನು ಸರ್ವಥಾ ತೊರೆದು ಅವರ ಜೊತೆಯಲ್ಲಿ ನಾನು ಯುದ್ಧ ಮಾಡುವೆನು.

ರಣೇ ತವಾರ್ಥಾಯ ಮಹಾನುಭಾವ
ನ ಜೀವಿತಂ ರಕ್ಷ್ಯತಮಂ ಮಮಾದ್ಯ ।
ಸರ್ವಾಂಸ್ತವಾರ್ಥಾಯ ಸದೇವದೈತ್ಯಾನ್
ಲೋಕಾನ್ ದಹೇಯಂ ಕಿಮು ಶತ್ರೂಂಸ್ತವೇಹ ॥೧೧॥

ನಿನ್ನ ಸಲುವಾಗಿ ಯುದ್ಧವನ್ನು ಮಾಡುವ ನನಗೆ ಈ ದಿನ ನನ್ನ ಪ್ರಾಣವು ರಕ್ಷಿಸಲ್ಪಡಬೇಕಾದುದಲ್ಲ. ನಿನ್ನ ಸಲುವಾಗಿ ದೇವತೆಗಳಿಂದ ಮತ್ತು ದೈತ್ಯರಿಂದ ಕೂಡಿದ ಎಲ್ಲ ಲೋಕಗಳನ್ನೂ ಸುಟ್ಟೇನು. ಇನ್ನು ನಿನ್ನ ಶತ್ರುಗಳ ವಿಷಯದಲ್ಲಿ ಹೇಳುವುದೇನಿದೆ?

ತತ್ಪಾಂಡವಾನ್ ಯೋಧಯಿಷ್ಯಾಮಿ ರಾಜನ್
ಪ್ರಿಯಂ ಚ ತೇ ಸರ್ವಮಹಂ ಕರಿಷ್ಯೇ ।
ಶ್ರುತ್ವೈವ ಚೈತತ್ ಪರಮಪ್ರತೀತೋ
ದುರ್ಯೋಧನಃ ಪ್ರೀತಮನಾ ಬಭೂವ ॥೧೨॥

ಎಲೈ ರಾಜನೇ, ಆದ್ದರಿಂದ ನಾನು ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡಿ ನಿನಗೆ ಎಲ್ಲಾ ಪ್ರಿಯವನ್ನೂ ಮಾಡುವೆನು (ಎಂದು ಹೇಳಿದರು). ಭೀಷ್ಮರ ಈ ಮಾತುಗಳನ್ನು ಕೇಳಿದ ದುರ್ಯೋಧನನು ಸಮಾಧಾನವನ್ನು ಹೊಂದಿ ಬಹಳ ಸಂತೋಷದಿಂದ ಕೂಡಿದವನಾದನು.

ಸರ್ವಾಣಿ ಸೈನ್ಯಾನಿ ತತಃ ಪ್ರಹೃಷ್ಟೋ
ನಿರ್ಗಚ್ಛತೇತ್ಯಾಹ ನೃಪಾಂಶ್ಚ ಸರ್ವಾನ್ ।
ತದಾಜ್ಞಯಾ ತಾನಿ ವಿನಿರ್ಯಯುರ್ಯುತಂ
ರಥಾಶ್ವಪಾದಾತಗಜಾಯುತಾನಿ ॥೧೩॥

ಅನಂತರ ಸಂತೋಷಗೊಂಡ ಅವನು ಎಲ್ಲ ಸೈನ್ಯಗಳನ್ನು ಮತ್ತು ರಾಜರುಗಳನ್ನು ಕುರಿತು ಯುದ್ಧಕ್ಕಾಗಿ ಹೊರಡಿ ಎಂದು ಹೇಳಿದನು. ಅವನ ಆಜ್ಞೆಯಂತೆ ರಥ-ಗಜಾಶ್ವ-ಪದಾತಿಗಳಿಂದ ಕೂಡಿದ ಆ ಸೈನ್ಯಗಳು ಕ್ಷಿಪ್ರವಾಗಿ ಹೊರಟವು.

ಪ್ರಹರ್ಷಯುಕ್ತಾನಿ ತು ತಾನಿ ರಾಜನ್
ಮಹಾಂತಿ ನಾನಾವಿಧಶಸ್ತ್ರವಂತಿ ।
ಭಿನ್ನಾನಿ ನಾಗಾಶ್ವಪದಾತಿಮಂತಿ
ವಿರೇಜುರಾಜೌ ತವ ರಾಜನ್ ಬಲಾನಿ ॥೧೪॥

ಶಸ್ತ್ರಾಸ್ತ್ರವಿದ್ಭಿರ್ನರದೇವ ಯೋಧೈಃ
ಅಧಿಷ್ಠಿತಾಃ ಸೈನ್ಯಗಣಾಸ್ತ್ವದೀಯಾಃ ॥೧೫॥

ಎಲೈ ರಾಜನೇ, ಸಂತೋಷದಿಂದ ಕೂಡಿ ನಾನಾವಿಧ ಶಸ್ತ್ರಗಳನ್ನು ಧರಿಸಿ ಬೇರೆ ಬೇರೆ ಗುಂಪುಗಳಾಗಿ ಮಾಡಿದ, ಗಜಾಶ್ವಪದಾತಿಗಳನ್ನು ಹೊಂದಿ ಶಸ್ತ್ರಾಸ್ತ್ರಜ್ಞಾನವುಳ್ಳ ಯೋಧರಿಂದ ಕೂಡಿದ, ನಿನ್ನ ದೊಡ್ಡ ಸೈನ್ಯಗಳೆಲ್ಲವೂ ಯುದ್ಧದಲ್ಲಿ ಶೋಭಿಸಿದವು.

ರಥೈಶ್ಚ ಪಾದಾತಗಜಾಶ್ವಸಂಘೈಃ
ಪ್ರಯಾದ್ಭಿರಾಜೌ ವಿಧಿವತ್ ಪ್ರಣುನ್ನೈಃ ।
ಸಮುದ್ಧತಂ ವೈ ತರುಣಾರ್ಕವರ್ಣಂ
ರಜೋ ಬಭೌ ಛಾದಯತ್ ಸೂರ್ಯರಶ್ಮೀನ್ ॥೧೬॥

ಶಾಸ್ತ್ರೋಕ್ತ ರೀತಿಯಿಂದ ಪ್ರೇರಿಸಲ್ಪಟ್ಟು ಹೊರಟ ಗಜಾಶ್ವ ರಥಪದಾತಿಗಳಿಂದ ಎದ್ದ ಕೆಂಪು ಬಣ್ಣದ ಧೂಳು ಸೂರ್ಯಕಿರಣಗಳನ್ನು ಮರೆ ಮಾಡಿ ಶೋಭಿಸಿತು.

ರೇಜುಃ ಪತಾಕಾ ರಥದಂತಿಸಂಸ್ಥಾ
ವಾತೇರಿತಾ ಭ್ರಾಮ್ಯಮಾಣಾಃ ಸಮಂತಾತ್ ।
ನಾನಾರಂಗಾಃ ಸಮರೇ ತತ್ರ ರಾಜನ್
ಮೇಘೈರ್ಯುಕ್ತಾ ವಿದ್ಯುತಃ ಖೇ ಯಥೈವ ॥೧೭॥

ಎಲೈ ರಾಜನೇ, ರಥಗಜಗಳ ಮೇಲಿದ್ದ ಗಾಳಿಯ ಹೊಡೆತಕ್ಕೆ ಸಿಲುಕಿ ಅಲುಗಾಡುವ ನಾನಾ ವರ್ಣೋಪೇತವಾದ ಪತಾಕೆಗಳು ಆಕಾಶದಲ್ಲಿ ಮೋಡಗಳಿಂದ ಕೂಡಿದ ಮಿಂಚುಗಳಂತೆ ಕಂಗೊಳಿಸಿದವು.

ಧನೂಂಷಿ ವಿಸ್ಫಾರಯತಾಂ ನೃಪಾಣಾಂ
ಬಭೂವ ಶಬ್ದಸ್ತುಮುಲೋಽತಿಘೋರಃ ।
ವಿಮಥ್ಯತೋ ದೇವಮಹಾಸುರೌಘೈಃ
ಯಥಾರ್ಣವಸ್ಯಾದಿಯುಗೇ ತದಾನೀಮ್ ॥೧೮॥

ತಮ್ಮ ಬಿಲ್ಲಿನ ಹೆದೆಗಳನ್ನು ಎಳೆಯುವ ರಾಜರುಗಳಿಂದ ಉಂಟಾದ ಅತಿಘೋರವಾದ ಶಬ್ದವು ಆದಿಯುಗದಲ್ಲಿ ಅಮೃತ ಪ್ರಾಪ್ತಿಗಾಗಿ ಕ್ಷೀರ ಸಮುದ್ರವನ್ನು ಕಡೆಯುವ ದೇವಾಸುರರಿಂದ ಉಂಟಾದ ಕ್ಷೀರಸಮುದ್ರದ ಶಬ್ದದಂತಿದ್ದಿತು.

ತದುಗ್ರನಾದಂ ಬಹುರೂಪವರ್ಣಂ
ತವಾತ್ಮಜಾನಾಂ ಸಮುದೀರ್ಣಮೇವಮ್ ।
ಬಭೂವ ಸೈನ್ಯಂ ರಿಪುಸೈನ್ಯಹಂತೃ
ಯುಗಾಂತಮೇಘೌಘನಿಭಂ ತದಾನೀಮ್ ॥೫೯॥

ಅನೇಕ ಆಕಾರಗಳಿಂದ ಮತ್ತು ವರ್ಣದಿಂದ ಕೂಡಿದ, ಉಗ್ರವಾದ ನಾದವನ್ನು ಮಾಡುತ್ತಿದ್ದ, ಸಾಮರ್ಥ್ಯಪೂರ್ಣವಾದ, ಶತ್ರುಸೈನ್ಯವನ್ನು ಸಂಹಾರ ಮಾಡುವ, ನಿನ್ನ ಪುತ್ರರ ಸೈನ್ಯವು ಯುಗಾಂತ ಕಾಲದ ಮೇಘಮಂಡಲದಂತೆ ಆಗ ಕಂಗೊಳಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಷಷ್ಠಸ್ತುತಿಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಷಷ್ಠ್ಯಂತೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಎಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೇಳನೆಯ ಅಧ್ಯಾಯ

ಭೀಷ್ಮರಿಂದ ದುರ್ಯೋಧನನಿಗೆ ಆಶ್ವಾಸನೆ. ಏಳನೆಯ ದಿವಸದ ಯುದ್ಧದ ಆರಂಭ. ಭೀಷ್ಮರಿಂದ ಮಂಡಲವ್ಯೂಹದ ಮತ್ತು ಯುಧಿಷ್ಠಿರನಿಂದ ವಜ್ರವ್ಯೂಹದ ರಚನೆ.

ಸಂಜಯಃ

ಅಥಾತ್ಮಜಂ ತವ ಪುನರ್ಗಾಂಗೇಯೋ ಧ್ಯಾನಮಾಸ್ಥಿತಮ್ ।
ಅಬ್ರವೀದ್ ಭರತಶ್ರೇಷ್ಠ ಸಂಪ್ರಹರ್ಷಯನ್ ವಚಃ ॥೧॥

ಸಂಜಯ– ರಥಶ್ರೇಷ್ಠರೂ ಮತ್ತು ಗಂಗಾಪುತ್ರರೂ ಆದ ಭೀಷ್ಮರು ನಿನ್ನ ಪುತ್ರನು ಚಿಂತಾಕ್ರಾಂತನಾಗಿರುವುದನ್ನು ನೋಡಿ ಅವನಿಗೆ ಸಂತೋಷವನ್ನುಂಟು ಮಾಡುವ ಮಾತುಗಳನ್ನು ಆಡಿದರು.

ಅಹಂ ದ್ರೋಣಶ್ಚ ಶಲ್ಯಶ್ಚ ಕೃತವರ್ಮಾ ಚ ಸಾತ್ವತಃ ।
ಅಶ್ವತ್ಥಾಮಾ ವಿಕರ್ಣಶ್ಚ ಸೋಮದತ್ತೋಽಥ ಸೈಂಧವಃ ॥೨॥

ಏಂದಾನುಏಂದಾವಾವಂತ್ಯೌ ಬಾಹ್ಲಿಕಃ ಸಹ ಬಾಹ್ಲಿಕೈಃ ।
ತ್ರಿಗರ್ತರಾಜಶ್ಚ ಬಲೀ ಮಾಗಧಶ್ಚ ಸುದುರ್ಜಯಃ ॥೩॥

ಬೃಹದ್ಬಲಶ್ಚ ಕೌಸಲ್ಯಶ್ಚಿತ್ರಸೇನೋ ವಿವಿಂಶತಿಃ ।
ಕೃಪಶ್ಚ ಸಹ ಸೌದರ್ಯೈಸ್ತವ ರಾಜನ್ ಪದಾನುಗೈಃ ।
ರಥಾಶ್ಚ ಬಹುಸಾಹಸ್ರಾಃ ಶೋಭಮಾನಾ ಮಹಾಧ್ವಜಾಃ ॥೪॥

ದೇಶಜಾಶ್ಚ ಹಯಾ ರಾಜನ್ ಸ್ವಾರೂಢಾ ಹಯಸಾದಿಭಿಃ ।
ಗಜೇಂದ್ರಾಶ್ಚ ಮದೋದ್ಗೃತ್ತಾಃ ಪ್ರಭಿನ್ನಕರಟಾಮುಖಾಃ ॥೫॥

ಪದಾತಾಶ್ಚ ತಥಾ ಶೂರಾ ನಾನಾಪ್ರಹರಣಾಯುಧಾಃ ।
ನಾನಾದೇಶಸಮುತ್ಪನ್ನಾಸ್ತ್ವದರ್ಥೇ ಯೋದ್ಧುಮುದ್ಯತಾಃ ॥೬॥

ನಾನು, ದ್ರೋಣರು, ಶಲ್ಯ, ಸಾತ್ವತ ಕುಲದ ಕೃತವರ್ಮ, ಅಶ್ವತ್ಥಾಮರು, ವಿಕರ್ಣ, ಸೋಮದತ್ತ, ಸೈಂಧವ, ಅವಂತಿದೇಶದ ವಿಂದಾನುವಿಂದರು, ಬಾಹ್ಲಿಕ ರಾಜ, ಅವನ ಸೈನಿಕರು, ಸೈನ್ಯದಿಂದ ಕೂಡಿದ ತ್ರಿಗರ್ತ ರಾಜ, ದುರ್ಜಯನಾದ ಮಗಧರಾಜ, ಕೋಸಲ ದೇಶದ ಬೃಹದ್ಬಲ, ಚಿತ್ರಸೇನ, ವಿವಿಂಶತಿ, ಕೃಪರು ನಿನ್ನ ಸೋದರರಿಂದ, ಪದಾತಿಗಳಿಂದ ಸಹಿತರಾದ ಶೋಭಮಾನವಾದ ದೊಡ್ಡ ಧ್ವಜಗಳುಳ್ಳ ಅನೇಕ ಸಹಸ್ರ ಸಂಖ್ಯೆಯ ರಥಗಳು, ಅಶ್ವಾರೋಹಿಗಳಿಂದ ಚೆನ್ನಾಗಿ ಏರಲ್ಪಟ್ಟ ಒಳ್ಳೆಯ ಜಾತಿಯ ಅಶ್ವಗಳು, ಗಂಡಸ್ಥಲದಿಂದ ಮದೋದಕವನ್ನು ಸುರಿಸುತ್ತಿರುವ ಮದೋದ್ಧತವಾದ ಶ್ರೇಷ್ಠವಾದ ಗಜಗಳು, ಪ್ರಹಾರಕ್ಕೆ ಯೋಗ್ಯವಾದ ನಾನಾವಿಧವಾದ ಆಯುಧವನ್ನು ಹಿಡಿದ ನಾನಾ ದೇಶದಿಂದ ಬಂದ ಶೂರರಾದ ಪದಾತಿಗಳು ಎಲ್ಲೆ ರಾಜನೇ, ಎಲ್ಲರೂ ನಿನ್ನ ಸಲುವಾಗಿ ಯುದ್ಧ ಮಾಡಲು ಸನ್ನದ್ಧರಾಗಿದ್ದೇವೆ.

ಏತೇ ಚಾನ್ಯೇ ಚ ಬಹವಸ್ತ್ವದರ್ಥೇ ತ್ಯಕ್ತಜೀವಿತಾಃ ।
ದೇವಾಸಪಿ ರಣೇ ಜೇತುಂ ಸಮರ್ಥಾ ಇತಿ ಮೇ ಮತಿಃ ॥೭॥

ಮೇಲೆ ಹೇಳಿದ ನಾವು ಮತ್ತು ಇನ್ನು ಅನೇಕ ಶೂರರು ನಿನ್ನ ಸಲುವಾಗಿ ಪ್ರಾಣಗಳನ್ನು ಬಿಡಲು ಸಿದ್ಧರಾಗಿದ್ದಾರೆ. ಅವರು ಯುದ್ಧದಲ್ಲಿ ದೇವತೆಗಳನ್ನೂ ಗೆಲ್ಲಲು ಸಮರ್ಥರಾಗಿದ್ದಾರೆ ಎಂದು ನನ್ನ ಅಭಿಪ್ರಾಯ.

ಅವಶ್ಯಂ ತು ಮಯಾ ರಾಜಂಸ್ತವ ವಾಚ್ಯಂ ಹಿತಂ ಸದಾ ।
ಅಶಕ್ಯಾಃ ಪಾಂಡವಾ ಜೇತುಂ ದೇವೈರಪಿ ಸವಾಸವೈಃ ।
ವಾಸುದೇವಸಹಾಯಾಶ್ಚ ಮಹೇಂದ್ರಸಮವಿಕ್ರಮಾಃ ॥೮॥

ಆದರೆ ರಾಜನೇ, ನಾನು ನಿನಗೆ ಅವಶ್ಯವಾಗಿ ಯಾವಾಗಲೂ ಹಿತವನ್ನು ಹೇಳಲೇಬೇಕು. ಕೃಷ್ಣನ ಸಹಾಯವುಳ್ಳ, ದೇವೇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ಪಾಂಡವರನ್ನು ಯುದ್ಧದಲ್ಲಿ ಇಂದ್ರನಿಂದ ಸಹಿತರಾದ ದೇವತೆಗಳೂ ಗೆಲ್ಲಲಾರರು.

ಸರ್ವಥಾऽಹಂ ತು ರಾಜೇಂದ್ರ ಕರಿಷ್ಯೇ ವಚನಂ ತವ ।
ಪಾಂಡವಾನ್ ವಾ ರಣೇ ಜೇಷ್ಯೇ ಮಾಂ ವಾ ಜೇಷ್ಯಂತಿ ಪಾಂಡವಾಃ ॥

ಎಲೈ ರಾಜೇಂದ್ರನೇ, ನಾನು ಸರ್ವರೀತಿಯಿಂದ ನಿನ್ನ ಮಾತನ್ನು ನಡೆಸುವೆನು. ಯುದ್ಧದಲ್ಲಿ ಪಾಂಡವರನ್ನು ಜಯಿಸುವೆನು ಅಥವಾ ಪಾಂಡವರಾದರೂ ಯುದ್ಧದಲ್ಲಿ ನನ್ನನ್ನು ಜಯಿಸುವರು.

ಏವಮುಕ್ತ್ವಾ ದದೌ ಚಾಸ್ಮೈ ವಿಶಲ್ಯಕರಣೀಂ ಶುಭಾಮ್ ।
ಓಷಧೀಂ ವೀರ್ಯಸಂಪನ್ನಾಂ ವಿಶಲ್ಯಶ್ಚಾಭವತ್ ತದಾ ॥೧೦॥

ಹೀಗೆ ಹೇಳಿ ಭೀಷ್ಮರು ಬಹಳ ಪ್ರಭಾವಶಾಲಿಯಾದ ವಿಶಲ್ಯಕರಣಿ ಔಷಧವನ್ನು ಅವನಿಗೆ ಕೊಟ್ಟರು. ಆದರಿಂದ ಅವಳೂ ಎಲ್ಲ ಗಾಯಗಳೂ ವಾಸಿಯಾದವು.

ತತಃ ಪ್ರಭಾತೇ ವಿಮಲೇ ಸ್ವೇನಾನೀಕೇನ ವೀರ್ಯವಾನ್ ।
ಅವ್ಯೂಹತ ಸ್ವಯಂ ವ್ಯೂಹಂ ಭೀಷ್ಮೋ ವ್ಯೂಹವಿಶಾರದಃ ॥೧೧॥

ಮಂಡಲಂ ಮನುಜಶ್ರೇಷ್ಠ ನಾನಾಶಸ್ತ್ರಸಮಾಕುಲಮ್ ।
ಸಂಪೂರ್ಣಂ ಯೋಧಮುಖ್ಯೈಶ್ಚ ತಥಾ ದಂತಿಪದಾತಿಭಿಃ ॥೧೨॥

ರಥೈರನೇಕಸಾಹಸ್ರೈಃ ಸಮಂತಾತ್ ಪರಿವಾರಿತಮ್ ।
ಅಶ್ವವೃಂದೈರ್ಮಹದ್ಭಿಶ್ಚ ಋಷ್ಟಿತೋಮರಧಾರಿಭಿಃ ॥೧೩॥

ಎಲೈ ಮನುಜಶ್ರೇಷ್ಠನೇ, ಅನಂತರ ಸ್ವಚ್ಛವಾದ ಪ್ರಾತಃಕಾಲದಲ್ಲಿ ಪರಾಕ್ರಮಶಾಲಿಗಳೂ, ವ್ಯೂಹ ಮಾಡುವುದರಲ್ಲಿ ಪರಿಣತರೂ ಆದ ಭೀಷ್ಮರು

ನಾನಾಶಸ್ತ್ರಗಳನ್ನು ತಿಳಿದ ಯೋಧಶ್ರೇಷ್ಠರಿಂದ ತುಂಬಿದಂತಹ ಹಾಗೆಯೇ ಗಜ ಪದಾತಿಗಳಿಂದಲೂ, ಅನೇಕ ಸಹಸ್ರ ರಥಗಳಿಂದಲೂ ಪೂರ್ಣವಾಗಿ ಸುತ್ತುವರಿಯಲ್ಪಟ್ಟ, ಋಷ್ಟಿತೋಮರಗಳನ್ನು ಹಿಡಿದ ಅಶ್ವಾರೋಹಿಗಳಿಂದ ಕೂಡಿದ ದೊಡ್ಡ ಅಶ್ವವ್ಯೂಹಗಳಿಂದಲೂ ಸಹಿತವಾದ ಮಂಡಲಾಕಾರದ ವ್ಯೂಹವನ್ನು ತಾವೇ ಸ್ವತಃ ರಚಿಸಿದರು.

ನಾಗೇ ನಾಗೇ ರಥಾಃ ಸಪ್ತ ಸಪ್ತ ಚಾಶ್ವಾ ರಥೇ ರಥೇ ।
ಅನ್ವಶ್ವಂ ದಶ ಧಾನುಷ್ಕಾ ಧಾನುಷ್ಕೇ ಸಪ್ತ ಚರ್ಮಿಣಃ ॥೧೪॥

ಏವಂ ವ್ಯೂಹಂ ಮಹಾರಾಜ ತವ ಸೈನ್ಯಂ ಮಹಾರಥೈಃ ।
ಸ್ಥಿತಂ ರಣಾಯ ಮಹತೇ ಭೀಷ್ಮೇಣ ಯುಧಿ ಪಾಲಿತಮ್ ॥೧೫॥

ಒಂದೊಂದು ಗಜಕ್ಕೆ ಏಳು ರಥಗಳು, ಒಂದೊಂದು ರಥಕ್ಕೆ ಏಳು ಕುದುರೆಗಳು, ಒಂದೊಂದು ಕುದುರೆಗೆ ಹತ್ತು ಧನುರ್ಧಾರಿಗಳು, ಒಬ್ಬೊಬ್ಬ ಧನುರ್ಧಾರಿಗೆ ಏಳು ಜನ (ಖಡ್ಗ) ಗುರಾಣಿಯನ್ನು ಹಿಡಿದವರು, ಎಲೈ ಮಹಾರಾಜನೇ, ಹೀಗೆ ಮಹಾರಥರಿಂದ ಕೂಡಿದ ನಿನ್ನ ಸೈನ್ಯವು ಭೀಷ್ಮರಿಂದ ರಕ್ಷಿಸಲ್ಪಟ್ಟು ವ್ಯೂಹಗೊಂಡು ದೊಡ್ಡ ಯುದ್ಧಕ್ಕೆ ಸನ್ನದ್ಧವಾಯಿತು.

ದಶಾಶ್ವಾನಾಂ ಸಹಸ್ರಾಣಿ ದಂತಿನಾಂ ಚ ತಥೈವ ಚ ।
ರಥಾನಾಮಯುತಂ ಚಾಪಿ ಪುತ್ರಾಶ್ಚ ತವ ದಂಶಿತಾಃ ।
ಚಿತ್ರಸೇನಾದಯಃ ಶೂರಾ ಅಭ್ಯರಕ್ಷನ್ ಪಿತಾಮಹಮ್ ॥೧೬॥

ಹತ್ತು ಸಹಸ್ರ ಅಶ್ವಗಳು, ಅಷ್ಟೇ ಗಜಗಳು, ಹತ್ತು ಸಹಸ್ರ ರಥಗಳು, ಕವಚ ಧಾರಿಗಳಾದ ನಿನ್ನ ಪುತ್ರರಾದ ಶೂರರಾದ ಚಿತ್ರಸೇನಾದಿಗಳು ಎಲ್ಲರೂ ಪಿತಾಮಹರನ್ನು ರಕ್ಷಿಸಿದರು.

ರಕ್ಷ್ಯಮಾಣಶ್ಚ ತೈಃ ಶೂರೈರ್ಗೋಪ್ಯಮಾನಾಶ್ಚ ತೇನ ತೇ ।
ಸನ್ನದ್ಧಾಃ ಸಮದೃಶ್ಯಂತ ರಾಜಾನಶ್ಚ ಮಹಾಬಲಾಃ ॥೧೭॥

ಭೀಷ್ಮರು ಆ ಶೂರರಿಂದ ರಕ್ಷಿಸಲ್ಪಟ್ಟು, ಆ ಶೂರರೂ ಭೀಷ್ಮರಿಂದ ರಕ್ಷಿಸಲ್ಪಟ್ಟು ಮಹಾಬಲರಾದ ರಾಜರು ಯುದ್ಧಕ್ಕೆ ಸನ್ನದ್ಧವಾಗಿರುವುದು ಕಂಡುಬಂದಿತು.

ದುರ್ಯೋಧನಸ್ತು ಸಮರೇ ದಂಶಿತೋ ರಥಮಾಸ್ಥಿತಃ ।
ವ್ಯಭ್ರಾಜತ ಶ್ರಿಯಾ ಜುಷ್ಟೋ ಯಥಾ ಶಕ್ರಸ್ತ್ರಿವಿಷ್ಟಪೇ ॥೧೮॥

ಶಸ್ತ್ರವಚಧಾರಿಯಾಗಿ, ರಥವನ್ನು ಏರಿದ ದುರ್ಯೋಧನನು ಸ್ವರ್ಗಲೋಕದಲ್ಲಿ ಇಂದ್ರನು ಮೆರೆದಂತೆ ತನ್ನ ಕಾಂತಿಯಿಂದ ಮೆರೆದನು.

ತತಃ ಶಬ್ದೋ ಮಹಾನಾಸೀತ್ ಪುತ್ರಾಣಾಂ ತವ ಭಾರತ ।
ರಥಘೋಷಶ್ಚ ತುಮುಲೋ ವಾದಿತ್ರಾಣಾಂ ಚ ನಿಸ್ವನಃ ॥೧೯॥

ಎಲೈ ಭಾರತನೇ, ಆಗ ನಿನ್ನ ಪುತ್ರರಿಂದ ಮಹಾಶಬ್ದ ಉಂಟಾಯಿತು. ತೀವ್ರವಾದ ರಥಘೋಷವೂ ಮತ್ತು ವಾದ್ಯಗಳ ಮೊಳಗುವಿಕೆಯೂ ಉಂಟಾಯಿತು.

ಭೀಷ್ಮೇಣ ಧಾರ್ತರಾಷ್ಟ್ರಾಣಾಂ ವ್ಯೂಢಃ ಪ್ರತ್ಯಙ್ಮುಖೋ ಯುಧಿ ।
ಮಂಡಲಃ ಸುಮಹಾವ್ಯೂಹೋ ದುರ್ಭೇದ್ಯೋಽಮಿತ್ರಘಾತಿನಾಮ್ ।
ಸರ್ವತಃ ಶುಶುಭೇ ರಾಜನ್ ರಣೇಽರೀಣಾಂ ದುರಾಸದಃ ॥೨೦॥

ಎಲೈ ರಾಜನೇ, ಭೀಷ್ಮರು ರಚಿಸಿದ ಯುದ್ಧದಲ್ಲಿ ಪಶ್ಚಿಮಾಭಿಮುಖವಾದ, ಶತ್ರುಗಳು ಸಮೀಪಕ್ಕೆ ಸುಳಿಯಲು ಸಾಧ್ಯವಿಲ್ಲದ, ಶತ್ರುಸಂಹಾರಕವಾದ, ಅಭೇದ್ಯವಾದ ಮಂಡಲಾಕಾರವಾದ ಮಹಾವ್ಯೂಹವು ಎಲ್ಲ ಕಡೆಯಲ್ಲಿಯೂ ಶೋಭಿಸಿತು.

ಮಂಡಲಂ ತು ಸಮಾಲೋಕ್ಯ ವ್ಯೂಹಂ ಪರಮದಾರುಣಮ್ ।
ಸ್ವಯಂ ಯುಧಿಷ್ಠಿರೋ ರಾಜಾ ವ್ಯೂಹಂ ವಜ್ರಮಥಾಕರೋತ್ ॥೨೧॥

ಪರಮದುರ್ಜಯವಾದ ಮಂಡಲವ್ಯೂಹವನ್ನು ನೋಡಿ ರಾಜನಾದ ಯುಧಿಷ್ಠಿರನು ಸ್ವತಃ ವಜ್ರವ್ಯೂಹವನ್ನು ರಚಿಸಿದನು.

ತಥಾ ವ್ಯೂಢೇಷ್ವನೀಕೇಷು ಯಥಾಸ್ಥಾನಮವಸ್ಥಿತಾಃ ।
ರಥಿನಃ ಸಾದಿನಶ್ಚೈವ ಸಿಂಹನಾದಮಥಾನದನ್ ॥೨೨॥

ಹಾಗೆ ವ್ಯೂಹಗಳು ರಚಿಸಲ್ಪಟ್ಟ ಮೇಲೆ ತಮ್ಮ ತಮ್ಮ ಸ್ಥಾನಗಳಲ್ಲಿ ನಿಂತ ರಥಿಕರು ಮತ್ತು ಅಶ್ವಾರೋಹಿಗಳು ಸಿಂಹನಾದವನ್ನು ಮಾಡಿದರು.

ಬಭೂವುಸ್ತಸ್ಯ ವ್ಯೂಹಂ ನಿರ್ಯಯುರ್ಯುದ್ಧಕಾಂಕ್ಷಿಣಃ ।
ಇತರೇತರತಃ ಶೂರಾಃ ಸಹಸೈನ್ಯಾಃ ಪ್ರಹಾರಿಣಃ ॥೨೩॥

ಪರರ ವ್ಯೂಹವನ್ನು ಭೇದಿಸುವ ಸಲುವಾಗಿ ಪ್ರಹಾರಶೀಲರಾಗಿ ಯುದ್ಧವನ್ನು ಬಯಸಿದ ಶೂರರು ತಮ್ಮ ತಮ್ಮ ಸೈನ್ಯದ ಜೊತೆಯಲ್ಲಿ ಮುನ್ನುಗ್ಗಿದರು.

ದ್ರೌಣಾಜ್ಜೋ ಯಯೌ ಮತ್ಸ್ಯಂ ದ್ರೌಣಶ್ಚಾಪಿ ಶಿಖಂಡಿನಮ್ ।
ಸ್ವಯಂ ದುರ್ಯೋಧನೋ ರಾಜಾ ಪಾರ್ಷತಂ ಸಮುಪಾದ್ರವತ್ ॥

ದ್ರೋಣರು ಮತ್ಸ್ಯರಾಜನ ಮೇಲೆಯೂ, ಅಶ್ವತ್ಥಾಮರು ಶಿಖಂಡಿಯ ಮೇಲೆಯೂ, ರಾಜನಾದ ದುರ್ಯೋಧನನು ಸ್ವಯಂ ಧೃಷ್ಟದ್ಯುಮ್ನನ ಮೇಲೆಯೂ ಎರಗಿದರು.

ನಕುಲಃ ಸಹದೇವಶ್ಚ ರಾಜನ್ ಮದ್ರೇಶಮೀಯತುಃ ।
ವಿಂದಾನುವಿಂದಾವಾವಂತ್ಯಾವಿರಾವಂತಮಭಿದ್ರುತೌ ॥೨೫॥

ನಕುಲ-ಸಹದೇವರು ಮದ್ರಾಧಿಪತಿಯಾದ ಶಲ್ಯನ ಮೇಲೆ ಏರಿ ಹೋದರು. ಅವಂತಿ ದೇಶದ ವಿಂದಾನುವಿಂದರು ಇರಾವಂತನ ಮೇಲೆ ಧಾವಿಸಿದರು.

ಸರ್ವೇ ನೃಪಾಸ್ತು ಸಮರೇ ಧನಂಜಯಮಯೋಧಯನ್ ।
ಭೀಮಸೇನೋ ರಣೇ ಯತ್ತೋ ಹಾರ್ದಿಕ್ಯಂ ಸಮವಾರಯತ್ ॥೨೬॥

ಉಳಿದ ಎಲ್ಲ ರಾಜರೂ ಯುದ್ಧದಲ್ಲಿ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಿದರು. ಭೀಮಸೇನನು ಪ್ರಯತ್ನಪೂರ್ವಕವಾಗಿ ರಣರಂಗದಲ್ಲಿ ಕೃತವರ್ಮನನ್ನು ತಡೆದನು.

ಚಿತ್ರಸೇನಂ ವಿಕರ್ಣಂ ಚ ತಥಾ ದುರ್ಮರ್ಷಣಂ ವಿಭೋ ।
ಆರ್ಜುನಿಃ ಸಮರೇ ರಾಜಂಸ್ತವ ಪುತ್ರಾನಯೋಧಯತ್ ॥೨೭॥

ಎಲೈ ವಿಭುವೇ, ರಾಜನೇ, ನಿನ್ನ ಪುತ್ರರಾದ ಚಿತ್ರಸೇನ, ವಿಕರ್ಣ, ದುರ್ಮರ್ಷಣ ಇವರ ಜೊತೆಯಲ್ಲಿ ಅಭಿಮನ್ಯುವು ಯುದ್ಧವನ್ನು ಮಾಡಿದನು.

ಪ್ರಾಗ್ಜ್ಯೋತಿಷಂ ಮಹೇಷ್ವಾಸಂ ಹೈಡಿಂಬೋ ರಾಕ್ಷಸೋತ್ತಮಃ ।
ಅಭಿದುದ್ರಾವ ವೇಗೇನ ಮತ್ತೋ ಮತ್ತಮಿವ ದ್ವಿಪಮ್ ॥೨೮॥

ರಾಕ್ಷಸಶ್ರೇಷ್ಠನಾದ ಘಟೋತ್ಕಚನು ಮಹಾಧನುರ್ಧಾರಿಯೂ, ಪ್ರಾಗ್ಜ್ಯೋತಿಷಾಧಿಪತಿಯೂ ಆದ ಭಗದತ್ತನ ಮೇಲೆ ಮದಗಜವು ಮದಗಜದ ಕಡೆಗೆ ಓಡಿದಂತೆ ವೇಗವಾಗಿ ಓಡಿದನು.

ಅಲಂಬುಸಸ್ತತೋ ರಾಜನ್ ಸಾತ್ಯಕಿಂ ಯುದ್ಧದುರ್ಮದಮ್ ।
ಸಸೈನ್ಯಂ ಸಮರೇ ಕ್ರುದ್ಧೋ ರಾಕ್ಷಸಃ ಸಮಭಿದ್ರವತ್ ॥೨೯॥

ಎಲೈ ರಾಜನೇ, ಯುದ್ಧದುರ್ಮದನಾದ ಸಾತ್ಯಕಿಯನ್ನು ಕ್ರುದ್ಧನೂ, ರಾಕ್ಷಸನೂ ಆದ ಅಲಂಬುಸನು ತನ್ನ ಸೈನ್ಯದ ಜೊತೆಯಲ್ಲಿ ಎದುರಿಸಿದನು.

ಭೂರಿಶ್ರವಾ ರಣೇ ಯತ್ತೋ ಧೃಷ್ಟಕೇತುಮಯೋಧಯತ್ ।
ಶ್ರುತಾಯುಷಂ ತು ರಾಜಾನಂ ಧರ್ಮಪುತ್ರೋ ಯುಧಿಷ್ಠಿರಃ ॥೩೦॥

ರಣರಂಗದಲ್ಲಿ ಭೂರಿಶ್ರವನು ಪ್ರಯತ್ನಪೂರ್ವಕವಾಗಿ ಧೃಷ್ಟಕೇತುವಿನ ಜೊತೆಯಲ್ಲಿಯೂ, ಧರ್ಮಪುತ್ರನಾದ ಯುಧಿಷ್ಠಿರನು ಶ್ರುತಾಯುರಾಜನ ಜೊತೆಯಲ್ಲಿಯೂ ಯುದ್ಧವನ್ನು ಮಾಡಿದರು.

ಚೇಕಿತಾನಸ್ತು ಸಮರೇ ಕೃಪಮೇವಾನ್ವಯೋಧಯತ್ ।
ಶೇಷಾಃ ಪ್ರತಿಯಯುರ್ಯತ್ತಾ ಭೀಮಮೇವ ಮಹಾರಥಮ್ ॥೩೧॥

ಚೇಕಿತಾನನಾದರೂ ರಣಭೂಮಿಯಲ್ಲಿ ಕೃಪರ ಜೊತೆಯಲ್ಲಿ ಯುದ್ಧವನ್ನು ಮಾಡಿದನು. ಉಳಿದವರು ಮಹಾರಥನಾದ ಭೀಮಸೇನನ ಮೇಲೆ ಎಚ್ಚರಿಕೆಯಿಂದ ಎರಗಿದರು.

ತತೋ ರಾಜಸಹಸ್ರಾಣಿ ಪರಿವವ್ರುರ್ಧನಂಜಯಮ್ ।
ಶಕ್ತಿತೋಮರನಾರಾಚಗದಾಪರಿಘಪಾಣಯಃ ॥೩೨॥

ಅನಂತರ ಶಕ್ತಿ, ತೋಮರ, ನಾರಾಚ, ಗದಾ, ಪರಿಘಗಳನ್ನು ಧರಿಸಿದ ಸಹಸ್ರಾರು ರಾಜರು ಅರ್ಜುನನನ್ನು ಸುತ್ತುವರಿದರು.

ಅರ್ಜುನೋಽಥ ಭೃಶಂ ಕ್ರುದ್ಧೋ ವಾರ್ಷ್ಣೇಯಮಿದಮಬ್ರವೀತ್ ।
ಪಶ್ಯ ಮಾಧವ ಸೈನ್ಯಾನಿ ಧಾರ್ತರಾಷ್ಟ್ರಸ್ಯ ಸಂಯುಗೇ ।
ವ್ಯೂಢಾನಿ ವ್ಯೂಹವಿದುಷಾ ಗಾಂಗೇಯೇನ ಮಹಾತ್ಮನಾ ॥೩೩॥

ಆಗ ಬಹಳ ಕೋಪಗೊಂಡ ಅರ್ಜುನನು ಕೃಷ್ಣನನ್ನು ಕುರಿತು ಹೀಗೆ ಮಾತನಾಡಿದನು. ಎಲೈ ಮಾಧವನೇ, ಮಹಾತ್ಮರೂ, ವ್ಯೂಹ ಪರಿಣತರೂ ಆದ ಭೀಷ್ಮರು ದುರ್ಯೋಧನನ ಸೈನ್ಯವನ್ನು ವ್ಯೂಹಗೊಳಿಸಿರುವುದನ್ನು ನೋಡು.

ಯುದ್ಧಾಭಿಕಾಮಾನ್ ಶೂರಾಂಶ್ಚ ಪಶ್ಯ ಮಾಧವ ದಂಶಿತಾನ್ ।
ತ್ರಿಗರ್ತರಾಜಂ ಸಹಿತಂ ಭ್ರಾತೃಭಿಃ ಪಶ್ಯ ಕೇಶವ ॥೩೪॥

ಎಲೈ ಮಾಧವನೇ, ಯುದ್ಧವನ್ನು ಬಯಸಿದ ಶಸ್ತ್ರಕವಚಧಾರಿಗಳಾದ ಶೂರರನ್ನು ನೋಡು. ಎಲೈ ಕೇಶವನೇ, ತನ್ನ ಸಹೋದರರಿಂದ ಸಹಿತನಾದ ತ್ರಿಗರ್ತರಾಜನಾದ ಸುಶರ್ಮನನ್ನು ನೋಡು.

ಅದ್ಯೈತಾನ್ ಪಾತಯಿಷ್ಯಾಮಿ ಪಶ್ಯತಸ್ತೇ ಜನಾರ್ದನ ।
ಯ ಇಮೇ ಮಾಂ ಯದುಶ್ರೇಷ್ಠ ಯೋದ್ಧುಕಾಮಾ ರಣಾಜಿರೇ ॥೩೫॥

ಎಲೈ ಯದುಶ್ರೇಷ್ಠನೇ, ಜನಾರ್ದನನೇ, ನನ್ನ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸುವ ಇವರೆಲ್ಲರನ್ನೂ ನಿನ್ನ ಕಣ್ಣೆದುರಿಗೆ ರಣಭೂಮಿಯಲ್ಲಿ ನಾನು ಉರುಳಿಸುವೆನು.

ಏವಮುಕ್ತ್ವಾ ತು ಕೌಂತೇಯೋ ಧನುರ್ಜ್ಯಾಮವಮೃಜ್ಯ ಚ ।
ವವರ್ಷ ಶರವರ್ಷಾಣಿ ನರಾಧಿಪಗಣಾನ್ ಪ್ರತಿ ॥೩೬॥

ಕೌಂತೇಯನಾದ ಅರ್ಜುನನು ಹೀಗೆ ಹೇಳಿ ಧನುಸ್ಸಿನ ಹೆದೆಯನ್ನು ನೇವರಿಸಿ ರಾಜರ ಸಮೂಹದ ಮೇಲೆ ಬಾಣಗಳ ಮಳೆಯನ್ನು ಕರೆದನು.

ತೇಽಪಿ ತಂ ಪರಮೇಷ್ವಾಸಾಃ ಶರವರ್ಷೈರಪೂರಯನ್ ।
ತಡಾಗಮಿವ ಧಾರಾಭಿರ್ಯಥಾ ಪ್ರಾವೃಷಿ ತೋಯದಾಃ ॥೩೭॥

ಮಹಾಧನುರ್ಧಾರಿಗಳಾದ ಅವರೂ ಸಹ ಮೋಡಗಳು ಮಳೆಗಾಲದಲ್ಲಿ ವರ್ಷಧಾರೆಗಳಿಂದ ಕೆರೆಯನ್ನು ತುಂಬುವಂತೆ ಅರ್ಜುನನ ಮೇಲೆ ಬಾಣಗಳ ಮಳೆಯನ್ನು ಕರೆದರು.

ಹಾಹಾಕಾರೋ ಮಹಾನಾಸೀತ್ ತವ ಸೈನ್ಯೇ ವಿಶಾಂಪತೇ ।
ಧಾದ್ಯಮಾನೌ ಭೃಶಂ ಕೃಷ್ಣೌ ಶರೈರ್ದೃಷ್ಟ್ವಾ ಮಹಾರಣೇ ॥೩೮॥

ಆ ಮಹಾಯುದ್ಧದಲ್ಲಿ ಕೃಷ್ಣಾರ್ಜುನರು ಬಾಣಗಳಿಂದ ಮುಚ್ಚಲ್ಪಟ್ಟಿದ್ದನ್ನು ನೋಡಿ ಎಲೈ ರಾಜನೇ, ನಿನ್ನ ಸೈನ್ಯದಲ್ಲಿ ದೊಡ್ಡ ಹಾಹಾಕಾರವುಂಟಾಯಿತು.

ದೇವಾ ದೇವರ್ಷಯಶ್ಚೈವ ಗಂಧರ್ವಾಶ್ಚ ಮಹೋರಗಾಃ ।
ವಿಸ್ಮಯಂ ಪರಮಂ ಜಗ್ಮುರ್ದೃಷ್ಟ್ವಾ ಕೃಷ್ಣೌ ತಥಾಗತೌ ॥೩೯॥

ಕೃಷ್ಣಾರ್ಜುನರು ಅಂತಹ ಪರಿಸ್ಥಿತಿಯಲ್ಲಿ ನಿಲುಕಿದುದನ್ನು ನೋಡಿ ದೇವತೆಗಳು, ದೇವರ್ಷಿಗಳು, ಗಂಧರ್ವರು ಮತ್ತು ಮಹಾಸರ್ಪಗಳು ಆಶ್ಚರ್ಯಗೊಂಡರು.

ತತಃ ಕ್ರುದ್ಧೋಽರ್ಜುನೋ ರಾಜನ್ನೈಂದ್ರಮಸ್ತ್ರಮುದೀರಯತ್ ।
ತತ್ರಾದ್ಭುತಮಪಶ್ಯಾಮ ವಿಜಯಸ್ಯ ಪರಾಕ್ರಮಮ್ ॥೪೦॥

ಶಸ್ತ್ರವೃಷ್ಟಿಂ ಪರೈರ್ಮುಕ್ತಾಂ ಶರೌಘೈರ್ಯದವಾರಯತ್ ।
ನ ಚ ತತ್ರಾಪ್ಯನಿರ್ಭಿನ್ನಃ ಕಶ್ಚಿದಾಸೀದ್ ವಿಶಾಂಪತೇ ॥೪೧॥

ಆಗ ಕೋಪಗೊಂಡ ಅರ್ಜುನನು ಐಂದ್ರಾಸ್ತ್ರವನ್ನು ಪ್ರಯೋಗಿಸಿದನು. ಶತ್ರುಗಳು ತನ್ನ ಮೇಲೆ ಕರೆದ ಬಾಣಗಳ ಮಳೆಯನ್ನು ನಿವಾರಿಸಿ ಎಲೈ ರಾಜನೇ, ಅವರಲ್ಲಿ ಯಾವೊಬ್ಬನೂ ಗಾಯಗೊಳ್ಳದೇ ಇರದಂತೆ ಮಾಡಿದ ಅರ್ಜುನನ ಪರಾಕ್ರಮವನ್ನು ನಾವಲ್ಲಿ ನೋಡಿದೆವು.

ತೇಷಾಂ ರಾಜಸಹಸ್ರಾಣಾಂ ಹಯಾನಾಂ ದಂತಿನಾಂ ತಥಾ ।
ದ್ವಾಭ್ಯಾಂ ತ್ರಿಭಿಃ ಶರೈಶ್ಚಾನ್ಯಾನ್ ಪಾರ್ಥೋ ವಿವ್ಯಾಧ ಮಾರಿಷ ॥೪೨॥

ಎಲೈ ಪೂಜ್ಯನೇ, ಆ ಸಹಸ್ರಾರು ರಾಜರು, ಅಶ್ವಗಳು, ಗಜಗಳು, ಉಳಿದವರು ಎಲ್ಲರ ಮೇಲೆಯೂ ಅರ್ಜುನನು ಎರಡು-ಮೂರು ಬಾಣಗಳನ್ನು ಪ್ರಯೋಗಿಸಿ ಯುದ್ಧವನ್ನು ಮಾಡಿದನು.

ತೇ ಹನ್ಯಮಾನಾಃ ಪಾರ್ಥೇನ ಭೀಷ್ಮಂ ಶಾಂತನವಂ ಯಯುಃ ।
ಅಗಾಧೇ ಮಜ್ಜಮಾನಾನಾಂ ಭೀಷ್ಮಸ್ತಾಧಮತ್ ತದಾ ॥೪೩॥

ಅರ್ಜುನನಿಂದ ಹೀಗೆ ಪ್ರಹಾರ ಮಾಡಲ್ಪಟ್ಟ ಅವರು ಶಂತನುಪುತ್ರರಾದ ಭೀಷ್ಮರಿಗೆ ಶರಣಾಗತರಾದರು. ಅಗಾಧ ಸಾಗರದಲ್ಲಿ ಮುಳುಗುವವರಂತೆ ಇದ್ದ ಅವರಿಗೆ ಆಗ ಭೀಷ್ಮರು ರಕ್ಷಕರಾದರು.

ಆಪತದ್ಭಿಸ್ತು ತೈಸ್ತತ್ರ ಪ್ರಭಗ್ನಂ ತಾವಕಂ ಬಲಮ್ ।
ಸಂಚುಕ್ಷುಭೇ ಮಹಾರಾಜ ವಾತೈರಿವ ಮಹಾರ್ಣವಃ ॥೪೪॥

ಎಲೈ ಮಹಾರಾಜನೇ, ಮೇಲೆ ಮೇಲೆ ಬರುತ್ತಿದ್ದ ಪಾಂಡವ ಸೈನ್ಯದಿಂದ ಚೆನ್ನಾಗಿ ಭಗ್ನವಾದ ನಿನ್ನ ಸೈನ್ಯವು ಬಿರುಗಾಳಿಗೆ ಸಿಕ್ಕಿದ ಸಾಗರದಂತೆ ಬಹಳ ಕ್ಷೋಭೆಗೊಂಡಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಸಪ್ತಸಪ್ತತಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಸಪ್ತತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಎಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೆಂಟನೆಯ ಅಧ್ಯಾಯ

ಧೃಷ್ಟದ್ಯುಮ್ನ-ಭೀಮಸೇನರ ಪರಾಕ್ರಮ.

ಸಂಜಯಃ

ತಥಾ ಪ್ರವೃತ್ತೇ ಸಂಗ್ರಾಮೇ ನಿರ್ವೃತ್ತೇ ಚ ಸುತರ್ಮಣಿ ।
ಪ್ರಭಗ್ನೇಷು ಚ ವೀರೇಷು ಪಾಂಡವೇನ ಮಹಾತ್ಮನಾ ॥೧॥

ಕ್ಷುಭ್ಯಮಾಣೇ ಬಲೇ ತೂರ್ಣಂ ಸಾಗರಪ್ರತಿಮೇ ತವ ।
ಪ್ರತ್ಯುದ್ಯಾತೇ ಚ ಗಾಂಗೇಯೇ ತ್ವರಿತಂ ವಿಜಯಂ ಪ್ರತಿ ॥೨॥

ದೃಷ್ಟ್ವಾ ದುರ್ಯೋಧನೋ ರಾಜನ್ ರಣೇ ಪಾರ್ಥಸ್ಯ ವಿಕ್ರಮಮ್ ।
ತ್ವರಮಾಣಃ ಸಮಭ್ಯೇತ್ಯ ಸರ್ವಾಂಸ್ತಾನಬ್ರವೀನ್ನೃಪಾನ್ ॥೩॥

ತೇಷಾಂ ಚ ಪ್ರಮುಖೇ ಶೂರಂ ಸುತರ್ಮಾಣಂ ಮಹಾಬಲಮ್ ।
ಮಧ್ಯೇ ಸರ್ವಸ್ಯ ಸೈನ್ಯಸ್ಯ ಭೃಶಂ ಸಂಹರ್ಷಯನ್ ಮಹಿ ॥೪॥

ಸಂಜಯ- ಯುದ್ಧವು ಪ್ರಾರಂಭವಾದ ಪಕ್ಷಿಗಳು ಸುಮ್ಮಾನು ಒಂದಿಯನ್ನಿರಲು, ಮಹಾಸೈನ್ಯದ ಅರ್ಜುನಿಂದ ಕೌರವ ವೀರರು ಭಗ್ನಗೊಳ್ಳುತ್ತಿರಲು, ಪ್ರಾರಂಭಿಸಿದ್ದ ನಿನ್ನ ಸೈನ್ಯವು ಶೀಘ್ರವಾಗಿ ಓಲ್ಗಿಗೊಳ್ಳುತ್ತಿರಲು ಭೀಷ್ಮರು ಅರ್ಜುನನ ಕಡೆಗೆ ಸಾಗುತ್ತಿರಲು, ಎಲೈ ರಾಜನೇ, ದುರ್ಯೋಧನನು ಯುದ್ಧದಲ್ಲಿ ಅರ್ಜುನನ ಪರಾಕ್ರಮವನ್ನು ನೋಡಿ ಶೀಘ್ರವಾಗಿ ಎಲ್ಲ ರಾಜರುಗಳನ್ನೂ ಸೇರಿಸಿ, ಅವರ ಮಧ್ಯದಲ್ಲಿ ಮಹಾಬಲನೂ, ಶೂರನೂ ಆದ ಸುಶರ್ಮನನ್ನು ಸಂತೋಷಗೊಳಿಸುತ್ತಾ ಎಲ್ಲ ಸೈನ್ಯಗಳ ಮಧ್ಯದಲ್ಲಿ ಎಲ್ಲ ರಾಜರನ್ನು ಕುರಿತು ಹೇಳಿದನು

ಏಷ ಭೀಷ್ಮ ಶಾಂತನವೋ ಯೋದ್ಧುಮಿಚ್ಛತಿ ಫಲ್ಗುನಮ್ ।
ಸರ್ವಾಶ್ಚೈನಂ ರಥವ್ರಾತೈಃ ರಕ್ಷಧ್ವಮಜಿತಂ ಯುಧಿ ॥೫॥

ತಂ ಪ್ರಯಾಂತಂ ಶರಾನೀಕಂ ಸರ್ವಸೈನ್ಯೈಸ್ತ ಧಾರಯತ್ ।
ಸಂಯತ್ತಾಃ ಸಮರೇ ಶೂರಾ ಜಾಲಯದ್ವಂ ಪತಾಯಿನಃ ॥೬॥

ತಂತನು ಪುತ್ರರಾದ ಕುರುಶ್ರೇಷ್ಠರಾದ ಈ ಭೀಷ್ಮರು ಮೃತ್ಯು ಸ್ಥಾನವನ್ನು ತೊರೆದು ಸರ್ವಪ್ರಕಾರದಿಂದ ಅರ್ಜುನನ ಹತ್ತಿರಕ್ಕೆ ಯುದ್ಧ ಮಾಡಲು ಬರುತ್ತಾರೆ. ಎಲ್ಲ ಸೈನ್ಯದ ಹತ್ತಿರಕ್ಕೆ ಶತ್ರುಸೈನ್ಯದ ಮೇಲೆ ಎರಗುತ್ತಿರುವ ಬಾಣಪ್ರಹಾರವನ್ನು ನೀವೆಲ್ಲರೂ ಯುದ್ಧದಲ್ಲಿ ಜಾಗರೂಕರಾಗಿ ರಕ್ಷಿಸಿ (ಎಂದು ಹೇಳಿದನು).

ದಾಶಮಿತ್ಯೇವಮುಕ್ತಾಸ್ತು ತವ ಪುತ್ರಸ್ಯ ಸರ್ವಶಃ ।
ಪರೀಪ್ಸವಃ ಪರಾಣಾನ್ ಸಮಾಜಗ್ಮುಃ ಪತಾಯಿನಃ ॥೭॥

ಎಲೈ ಮಹಾರಾಜನೇ, ಹಾಗೆಯೇ ಆಗಲಿ ಎಂದು ಹೇಳಿ ಆ ರಾಜರ ಸೈನ್ಯಗಳೆಲ್ಲವೂ ಭೀಷ್ಮರ ಹತ್ತಿರಕ್ಕೆ ಹೊರಟುವು.

ತತಃ ಪ್ರಯಾತಃ ಸುಮಹಾ ಭೀಷ್ಮಃ ಶಾಂತನವೋಽಭವತ್ ।
ರಥೇ ಧಾರಯಮಾಣಃ ಸುಮಹಾಬಲೈಃ ಮಹಾಬಲಃ ॥೮॥

ಆಗ ತಂತನು ಪುತ್ರರಾದ ಭೀಷ್ಮರು ಮಹಾಬಲನೂ, ಧಾರಣೆಯ, ಎಂದಾಗಿ ಬಲ್ಲವರಿಂದಲೂ ಆದ ಅರ್ಜುನ ಕಡೆಗೆ ಯುದ್ಧಮಾಡಲಿಕ್ಕಾಗಿ ಪ್ರಯಾಣ ಹೊರಟರು.

ಮಹಾಶ್ವೇತಾಶ್ವಯುಕ್ತೇನ ಭೀಮವಾನರಕೇತುನಾ ।
ಮಹತಾ ಮೇಘನಾದೇನ ರಥೇನಾತಿವಿರಾಜತಾ ॥೯॥

ಸಮರೇ ಸರ್ವಸೈನ್ಯಾನಾಮುಪಯಾತಂ ಧನಂಜಯಮ್ ।
ಅಭವತ್ ತುಮುಲೋ ನಾದೋ ಭಯಾದ್ ದೃಷ್ಟ್ವಾ ಕಿರೀಟಿನಮ್ ॥

ಶುಭ್ರಶ್ವೇತವರ್ಣದ ಅಶ್ವಗಳನ್ನು ಹೊಂದಿದ, ಭಯಂಕರವಾದ ವಾನರ ಧ್ವಜದಿಂದ ಕೂಡಿದ, ಮೇಘನಾದವನ್ನು ಮಾಡುತ್ತಾ ಬಹಳವಾಗಿ ಶೋಭಿಸುವ ರಥದಲ್ಲಿ ಬರುತ್ತಿರುವ ಅರ್ಜುನನನ್ನು ನೋಡಿ ಯುದ್ಧದಲ್ಲಿ ನಿನ್ನ ಎಲ್ಲ ಸೈನ್ಯಗಳಿಗೂ ಭಯದಿಂದ ತೀವ್ರವಾದ ನಾದ ಉಂಟಾಯಿತು.

ಅಭೀಶುಹಸ್ತಂ ಕೃಷ್ಣಂ ಚ ದೃಷ್ಟ್ವಾ ತ್ವದಿತ್ಯಮಿವಾಪರಮ್ ।
ಮಧ್ಯಂದಿನಗತಂ ಸಂಖೇ ನ ಶೇಕುಃ ಪ್ರತಿವೀಕ್ಷಿತುಮ್ ॥೧೧॥

ಕೈಯಲ್ಲಿ ಕಡಿವಾಣವನ್ನು ಹಿಡಿದು ಮಧ್ಯಾಹ್ನದ ಸೂರ್ಯನಂತೆ ಕಂಗೊಳಿಸುತ್ತಿದ್ದ ಕೃಷ್ಣನನ್ನು ನೋಡಲು ನಿನ್ನ ಯೋಧರು ಸಮರ್ಥರಾಗಲಿಲ್ಲ.

ತಥಾ ಶಾಂತನವಂ ಭೀಷ್ಮಂ ಶ್ವೇತಾಶ್ವಂ ಶ್ವೇತಕಾರ್ಮುಕಮ್ ।
ನ ಶೇಕುಃ ಪಾಂಡವಾ ದ್ರಷ್ಟುಂ ಶ್ವೇತಗ್ರಹಮಿವೋದಿತಮ್ ॥೧೨॥

ಹಾಗೆಯೇ ಶ್ವೇತಾಶ್ವಗಳನ್ನು ಹೊಂದಿ, ಶ್ವೇತವಾದ ಧನುಸ್ಸನ್ನು ಹೊಂದಿ ಉದಯಿಸಿದ ರಾಹುಗ್ರಹದಂತೆ ಇದ್ದ ಭೀಷ್ಮರನ್ನು ನೋಡಲು ಪಾಂಡವರೂ ಶಕ್ತರಾಗಲಿಲ್ಲ.

ಸ ಸರ್ವತಃ ಪರಿವೃತಸ್ತ್ರಿಗರ್ತೈಃ ಸುಮಹಾತ್ಮಭಿಃ ।
ಭ್ರಾತೃಭಿಸ್ತವ ಪುತ್ರೈಶ್ಚ ತಥಾನ್ಯೈಶ್ಚ ಮಹಾರಥೈಃ ॥೧೩॥

ಆ ಭೀಷ್ಮರಾದರೋ ಮಹಾತ್ಮರಾದ ತ್ರಿಗರ್ತರಿಂದಲೂ, ಸಹೋದರರಾದ ನಿನ್ನ ಪುತ್ರರಿಂದಲೂ ಮತ್ತು ಬೇರೆ ಮಹಾರಥರಿಂದಲೂ ಎಲ್ಲ ಕಡೆಯಲ್ಲಿಯೂ (ಅವರ ರಕ್ಷಣೆಗಾಗಿ) ಸುತ್ತುವರಿಯಲ್ಪಟ್ಟರು.

ಭಾರದ್ವಾಜಸ್ತು ಸಮರೇ ಮತ್ಸ್ಯಂ ವಿವ್ಯಾಧ ಪತ್ರಿಣಾ ।
ಧ್ವಜಂ ಚಾಸ್ಯ ಶರೇಣಾಜೌ ಧನುಶ್ಚೈಕೇನ ಚಿಚ್ಛೇದ ॥೧೪॥

ದ್ರೋಣರಾದರೋ ಯುದ್ಧದಲ್ಲಿ ವಿರಾಟನ ಜೊತೆಯಲ್ಲಿ ಬಾಣಗಳಿಂದ ಸೆಣಸಿದರು. ಅವರು ಒಂದು ಬಾಣದಿಂದ ಅವನ ಧ್ವಜವನ್ನು, ಇನ್ನೊಂದು ಬಾಣದಿಂದ ಅವನ ಧನುಸ್ಸನ್ನು ಕತ್ತರಿಸಿದರು.

ತದಪಾಸ್ಯ ಧನುಶ್ಚಿನ್ನಂ ವಿರಾಟೋ ವಾಹಿನೀಪತಿಃ ।
ಅನ್ಯದಾದತ್ತ ವೇಗೇನ ಧನುರ್ಭಾರಸಹಂ ದೃಢಮ್ ।
ಶರಾಂಶ್ಚಾಶೀವಿಷಾಕಾರಾನ್ ಜ್ವಲಿತಾನ್ ಪನ್ನಗಾನಿವ ॥೧೫॥

ಸೇನಾಪತಿಯಾದ ವಿರಾಟನು ಕತ್ತರಿಸಿದ ಧನುಸ್ಸನ್ನು ಎಸೆದು ದೃಢವಾದ, ಗುರುಕಾರ್ಯವನ್ನು ಮಾಡುವ ಇನ್ನೊಂದು ಧನುಸ್ಸನ್ನು ಶೀಘ್ರವಾಗಿ ತೆಗೆದುಕೊಂಡು ಜ್ವಲಿಸುವ ಸರ್ಪದಂತಿದ್ದ ಬಾಣಗಳನ್ನು ಸರ್ಪಗಳಂತೆ ಅವರ ಮೇಲೆ ಪ್ರಯೋಗಿಸಿದನು.

ದ್ರೋಣಂ ತ್ರಿಭಿಃ ಪ್ರವಿವ್ಯಾಧ ಚತುರ್ಭಿಶ್ಚಾಸ್ಯ ವಾಜಿನಃ ।
ಧ್ವಜಮೇಕೇನ ವಿವ್ಯಾಧ ಸಾರಥಿಂ ಚಾಸ್ಯ ಪಂಚಭಿಃ ।
ಧನುರೇಕೇಷುಣಾವಿಧ್ಯತ್ ತತ್ರಾಕ್ರುಧ್ಯದ್ ದ್ವಿಜರ್ಷಭಃ ॥೧೬॥

ಅವನು ದ್ರೋಣರನ್ನು ಮೂರು ಬಾಣಗಳಿಂದಲೂ, ಅವರ ರಥದ ಅಶ್ವಗಳನ್ನು ನಾಲ್ಕು ಬಾಣಗಳಿಂದಲೂ, ಧ್ವಜವನ್ನು ಒಂದು ಬಾಣದಿಂದಲೂ, ಸಾರಥಿಯನ್ನು ಐದು ಬಾಣಗಳಿಂದಲೂ ಮತ್ತು ಧನುಸ್ಸನ್ನು ಒಂದು ಬಾಣದಿಂದಲೂ ಹೊಡೆದು ಪೀಡಿಸಿದನು. ಆಗ ಬ್ರಾಹ್ಮಣ ಶ್ರೇಷ್ಠರಾದ ದ್ರೋಣರು ಕೋಪಗೊಂಡರು.

ತಸ್ಯ ದ್ರೋಣೋಽವಧೀದಶ್ವಾನ್ ಶರೈಃ ಸನ್ನತಪರ್ವಭಿಃ ।
ಅಷ್ಟಾಭಿರ್ಭರತಶ್ರೇಷ್ಠ ಸೂತಮೇಕೇನ ಪತ್ರಿಣಾ ॥೧೭॥

ಎಲೈ ಭರತಶ್ರೇಷ್ಠನೇ, ದ್ರೋಣರು ಬಾಗಿದ ತುದಿಯುಳ್ಳ ಮತ್ತು ಪತ್ರಗಳನ್ನು ಹೊಂದಿದ ಎಂಟು ಬಾಣಗಳಿಂದ ಅವನ ಅಶ್ವಗಳನ್ನು ಮತ್ತು ಒಂದು ಬಾಣದಿಂದ ಅವನ ಸಾರಥಿಯನ್ನು ಹೊಡೆದು ಉರುಳಿಸಿದರು.

ಮಹಾಶ್ವೇತಾಶ್ವಯುಕ್ತೇನ ಭೀಮವಾನರಕೇತುನಾ ।
ಮಹತಾ ಮೇಘನಾದೇನ ರಥೇನಾತಿವಿರಾಜತಾ ॥೯॥

ಸಮರೇ ಸರ್ವಸೈನ್ಯಾನಾಮುಪಯಾತಂ ಧನಂಜಯಮ್ ।
ಅಭವತ್ ತುಮುಲೋ ನಾದೋ ಭಯಾದ್ ದೃಷ್ಟ್ವಾ ಕಿರೀಟಿನಮ್ ॥

ಶುಭ್ರಶ್ವೇತವರ್ಣದ ಅಶ್ವಗಳನ್ನು ಹೊಂದಿದ, ಭಯಂಕರವಾದ ವಾನರ ಧ್ವಜದಿಂದ ಕೂಡಿದ, ಮೇಘನಾದವನ್ನು ಮಾಡುತ್ತಾ ಬಹಳವಾಗಿ ಶೋಭಿಸುವ ರಥದಲ್ಲಿ ಬರುತ್ತಿರುವ ಅರ್ಜುನನನ್ನು ನೋಡಿ ಯುದ್ಧದಲ್ಲಿ ನಿನ್ನ ಎಲ್ಲ ಸೈನ್ಯಗಳಿಗೂ ಭಯದಿಂದ ತೀವ್ರವಾದ ನಾದ ಉಂಟಾಯಿತು.

ಅಭೀಶುಹಸ್ತಂ ಕೃಷ್ಣಂ ಚ ದೃಷ್ಟ್ವಾ ತ್ವದಿತ್ಯಮಿವಾಪರಮ್ ।
ಮಧ್ಯಂದಿನಗತಂ ಸಂಖ್ಯೇ ನ ಶೇಕುಃ ಪ್ರತಿವೀಕ್ಷಿತುಮ್ ॥೧೦॥

ಕೈಯಲ್ಲಿ ಕಡಿವಾಣವನ್ನು ಹಿಡಿದು ಮಧ್ಯಾಹ್ನದ ಸೂರ್ಯನಂತೆ ಕಂಗೊಳಿಸುತ್ತಿದ್ದ ಕೃಷ್ಣನನ್ನು ನೋಡಲು ನಿನ್ನ ಯೋಧರು ಸಮರ್ಥರಾಗಲಿಲ್ಲ.

ತಥಾ ಶಾಂತನವಂ ಭೀಷ್ಮಂ ಶ್ವೇತಾಶ್ವಂ ಶ್ವೇತಕಾರ್ಮುಕಮ್ ।
ನ ಶೇಕುಃ ಪಾಂಡವಾ ದ್ರಷ್ಟುಂ ಶ್ವೇತಗ್ರಹಮಿವೋದಿತಮ್ ॥೧೨॥

ಹಾಗೆಯೇ ಶ್ವೇತಾಶ್ವಗಳನ್ನು ಹೊಂದಿ, ಶ್ವೇತವಾದ ಧನುಸ್ಸನ್ನು ಹೊಂದಿ ಉದಯಿಸಿದ ರಾಹುಗ್ರಹದಂತೆ ಇದ್ದ ಭೀಷ್ಮರನ್ನು ನೋಡಲು ಪಾಂಡವರೂ ಶಕ್ತರಾಗಲಿಲ್ಲ.

ಸ ಸರ್ವತಃ ಪರಿವೃತಸ್ತ್ರಿಗರ್ತೈಃ ಸುಮಹಾತ್ಮಭಿಃ ।
ಭ್ರಾತೃಭಿಸ್ತವ ಪುತ್ರೈಶ್ಚ ತಥಾನ್ಯೈಶ್ಚ ಮಹಾರಥೈಃ ॥೧೩॥

ಆ ಭೀಷ್ಮರಾದರೋ ಮಹಾತ್ಮರಾದ ತ್ರಿಗರ್ತರಿಂದಲೂ, ಸಹೋದರರಾದ ನಿನ್ನ ಪುತ್ರರಿಂದಲೂ ಮತ್ತು ಬೇರೆ ಮಹಾರಥರಿಂದಲೂ ಎಲ್ಲ ಕಡೆಯಲ್ಲಿಯೂ (ಅವರ ರಕ್ಷಣೆಗಾಗಿ) ಸುತ್ತುವರಿಯಲ್ಪಟ್ಟರು.

ಭಾರದ್ವಾಜಸ್ತು ಸಮರೇ ಮತ್ಸ್ಯಂ ವಿವ್ಯಾಧ ಪತ್ರಿಣಾ ।
ಧ್ವಜಂ ಚಾಸ್ಯ ಶರೇಣಾಜೌ ಧನುಶ್ಚೈನ ಚಿಚ್ಛೇದ ॥೧೪॥

ದ್ರೋಣರಾದರೋ ಯುದ್ಧದಲ್ಲಿ ವಿರಾಟನ ಜೊತೆಯಲ್ಲಿ ಬಾಣಗಳಿಂದ ಸೆಣಸಿದರು. ಅವರು ಒಂದು ಬಾಣದಿಂದ ಅವನ ಧ್ವಜವನ್ನು, ಇನ್ನೊಂದು ಬಾಣದಿಂದ ಅವನ ಧನುಸ್ಸನ್ನು ಕತ್ತರಿಸಿದರು.

ತದಪಾಸ್ಯ ಧನುಶ್ಚಿನ್ನಂ ವಿರಾಟೋ ವಾಹಿನೀಪತಿಃ ।
ಅನ್ಯದಾದತ್ತ ವೇಗೇನ ಧನುರ್ಭಾರಸಹಂ ದೃಢಮ್ ।
ಶರಾಂಶ್ಚಾಶೀವಿಷಾಕಾರಾನ್ ಜ್ವಲಿತಾನ್ ಪನ್ನಗಾನಿವ ॥೧೫॥

ಸೇನಾಪತಿಯಾದ ವಿರಾಟನು ಕತ್ತರಿಸಿದ ಧನುಸ್ಸನ್ನು ಎಸೆದು ದೃಢವಾದ, ಗುರುಕಾರ್ಯವನ್ನು ಮಾಡುವ ಇನ್ನೊಂದು ಧನುಸ್ಸನ್ನು ಕ್ಷಿಪ್ರವಾಗಿ ತೆಗೆದುಕೊಂಡು ಜ್ವಲಿಸುವ ಸರ್ಪದಂತಿದ್ದ ಬಾಣಗಳನ್ನು ಸರ್ಪಗಳಂತೆ ಅವರ ಮೇಲೆ ಪ್ರಯೋಗಿಸಿದನು.

ದ್ರೋಣಂ ತ್ರಿಭಿಃ ಪ್ರವಿವ್ಯಾಧ ಚತುರ್ಭಿಶ್ಚಾಸ್ಯ ವಾಜಿನಃ ।
ಧ್ವಜಮೇಕೇನ ವಿವ್ಯಾಧ ಸಾರಥಿಂ ಚಾಸ್ಯ ಪಂಚಭಿಃ ।
ಧನುರೇಕೇಷುಣಾವಿಧ್ಯತ್ ತತ್ಸಾಕ್ಷಾದ್ಧ್ಯದ್ಭಿಜರ್ಷಭಃ ॥೧೬॥

ಅವನು ದ್ರೋಣರನ್ನು ಮೂರು ಬಾಣಗಳಿಂದಲೂ, ಅವರ ರಥದ ಅಶ್ವಗಳನ್ನು ನಾಲ್ಕು ಬಾಣಗಳಿಂದಲೂ, ಧ್ವಜವನ್ನು ಒಂದು ಬಾಣದಿಂದಲೂ, ಸಾರಥಿಯನ್ನು ಐದು ಬಾಣಗಳಿಂದಲೂ ಮತ್ತು ಧನುಸ್ಸನ್ನು ಒಂದು ಬಾಣದಿಂದಲೂ ಹೊಡೆದು ಪೀಡಿಸಿದನು. ಆಗ ಬ್ರಾಹ್ಮಣ ಶ್ರೇಷ್ಠರಾದ ದ್ರೋಣರು ಕೋಪಗೊಂಡರು.

ತಸ್ಯ ದ್ರೋಣೋऽವಧೀದಶ್ವಾನ್ ಶರೈಃ ಸನ್ನತಪರ್ವಭಿಃ ।
ಅಷ್ಟಾಭಿರ್ಭರತಶ್ರೇಷ್ಠ ಸೂತಮೇಕೇನ ಪತ್ರಿಣಾ ॥೧೭॥

ಎಲೈ ಭರತಶ್ರೇಷ್ಠನೇ, ದ್ರೋಣರು ಬಾಗಿದ ಹುರಿಯುಳ್ಳ ಮತ್ತು ಪತ್ರಗಳನ್ನು ಹೊಂದಿದ ಎಂಟು ಬಾಣಗಳಿಂದ ಅವನ ಅಶ್ವಗಳನ್ನು ಮತ್ತು ಒಂದು ಬಾಣದಿಂದ

ಮಹಾಶ್ವೇತಾಶ್ವಯುಕ್ತೇನ ಭೀಮವಾನರಕೇತುನಾ ।
ಮಹತಾ ಮೇಘನಾದೇನ ರಥೇನಾತಿವಿರಾಜತಾ ॥೯॥

ಸಮರೇ ಸರ್ವಸೈನ್ಯಾನಾಮುಪಯಾತಂ ಧನಂಜಯಮ್ ।
ಅಭವತ್ ತುಮುಲೋ ನಾದೋ ಭಯಾದ್ ದೃಷ್ಟ್ವಾ ಕಿರೀಟಿನಮ್ ॥

ಶುಭ್ರಶ್ವೇತವರ್ಣದ ಅಶ್ವಗಳನ್ನು ಹೊಂದಿದ, ಭಯಂಕರವಾದ ವಾನರ ಧ್ವಜದಿಂದ ಕೂಡಿದ, ಮೇಘನಾದವನ್ನು ಮಾಡುತ್ತಾ ಬಹಳವಾಗಿ ಶೋಭಿಸುವ ರಥದಲ್ಲಿ ಬರುತ್ತಿರುವ ಅರ್ಜುನನನ್ನು ನೋಡಿ ಯುದ್ಧದಲ್ಲಿ ನಿನ್ನ ಎಲ್ಲ ಸೈನ್ಯಗಳಿಗೂ ಭಯದಿಂದ ತೀವ್ರವಾದ ನಾದ ಉಂಟಾಯಿತು.

ಅಭೀಶುಹಸ್ತಂ ಕೃಷ್ಣಂ ಚ ದೃಷ್ಟ್ವಾ ತ್ವದಿತ್ಯಮಿವಾಪರಮ್ ।
ಮಧ್ಯಂದಿನಗತಂ ಸಂಖೇ ನ ಶೇಕುಃ ಪ್ರತಿವೀಕ್ಷಿತುಮ್ ॥೧೧॥

ಕೈಯಲ್ಲಿ ಕಡಿವಾಣವನ್ನು ಹಿಡಿದು ಮಧ್ಯಾಹ್ನದ ಸೂರ್ಯನಂತೆ ಕಂಗೊಳಿಸುತ್ತಿದ್ದ ಕೃಷ್ಣನನ್ನು ನೋಡಲು ನಿನ್ನ ಯೋಧರು ಸಮರ್ಥರಾಗಲಿಲ್ಲ.

ತಥಾ ಶಾಂತನವಂ ಭೀಷ್ಮಂ ಶ್ವೇತಾಶ್ವಂ ಶ್ವೇತಕಾರ್ಮುಕಮ್ ।
ನ ಶೇಕುಃ ಪಾಂಡವಾ ದ್ರಷ್ಟುಂ ಶ್ವೇತಗ್ರಹಮಿವೋದಿತಮ್ ॥೧೨॥

ಹಾಗೆಯೇ ಶ್ವೇತಾಶ್ವಗಳನ್ನು ಹೊಂದಿ, ಶ್ವೇತವಾದ ಧನುಸ್ಸನ್ನು ಹೊಂದಿ ಉದಯಿಸಿದ ರಾಹುಗ್ರಹದಂತೆ ಇದ್ದ ಭೀಷ್ಮರನ್ನು ನೋಡಲು ಪಾಂಡವರೂ ಶಕ್ತರಾಗಲಿಲ್ಲ.

ಸ ಸರ್ವತಃ ಪರಿವೃತಸ್ತ್ರಿಗರ್ತೈಃ ಸುಮಹಾತ್ಮಭಿಃ ।
ಭ್ರಾತೃಭಿಸ್ತವ ಪುತ್ರೈಶ್ಚ ತಥಾನ್ಯೈಶ್ಚ ಮಹಾರಥೈಃ ॥೧೩॥

ಆ ಭೀಷ್ಮರಾದರೋ ಮಹಾತ್ಮರಾದ ತ್ರಿಗರ್ತರಿಂದಲೂ, ಸಹೋದರರಾದ ನಿನ್ನ ಪುತ್ರರಿಂದಲೂ ಮತ್ತು ಬೇರೆ ಮಹಾರಥರಿಂದಲೂ ಎಲ್ಲ ಕಡೆಯಲ್ಲಿಯೂ (ಅವರ ರಕ್ಷಣೆಗಾಗಿ) ಸುತ್ತುವರಿಯಲ್ಪಟ್ಟರು.

ಭಾರದ್ವಾಜಸ್ತು ಸಮರೇ ಮತ್ಸ್ಯಂ ವಿವ್ಯಾಧ ಪತ್ರಿಣಾ ।
ಧ್ವಜಂ ಚಾಸ್ಯ ಶರೇಣಾಜೌ ಧನುಶ್ಚೈನೇನ ಚಿಚ್ಛಿದೇ ॥೧೪॥

ದ್ರೋಣರಾದರೋ ಯುದ್ಧದಲ್ಲಿ ವಿರಾಟನ ಕೊತಯಲ್ಲಿ ಬಾಣಗಳಿಂದ ಸೆಣಸಿದರು. ಅವರು ಒಂದು ಬಾಣದಿಂದ ಅವನ ಧ್ವಜವನ್ನು, ಇನ್ನೊಂದು ಬಾಣದಿಂದ ಅವನ ಧನುಸ್ಸನ್ನು ಕತ್ತರಿಸಿದರು.

ತದಪಾಸ್ಯ ಧನುಶ್ಚಿನ್ನಂ ವಿರಾಟೋ ಮಾಹಿನೀಪತಿಃ ।
ಅನ್ಯದಾದತ್ತ ವೇಗೇನ ಧನುರ್ಭಾರಸಹಂ ದೃಢಮ್ ।
ಶರಾಂಶ್ಚಾಶೀವಿಷಾಕಾರಾನ್ ಜ್ವಲಿತಾನ್ ಪನ್ನಗಾನಿವ ॥೧೫॥

ಸೇನಾಪತಿಯಾದ ವಿರಾಟನು ಕತ್ತರಿಸಿದ ಧನುಸ್ಸನ್ನು ಎಸೆದು ದೃಢವಾದ, ಗುರುಕಾರ್ಯವನ್ನು ಮಾಡುವ ಇನ್ನೊಂದು ಧನುಸ್ಸನ್ನು ತೀಕ್ಷ್ಣವಾಗಿ ತೆಗೆದುಕೊಂಡು ಜ್ವಲಿಸುವ ಸರ್ಪದಂತಿದ್ದ ಬಾಣಗಳನ್ನು ಸರ್ಪಗಳಂತೆ ಅವರ ಮೇಲೆ ಪ್ರಯೋಗಿಸಿದನು.

ದ್ರೋಣಂ ತ್ರಿಭಿಃ ಪ್ರವಿವ್ಯಾಧ ಚತುರ್ಭಿಶ್ಚಸ್ಯ ವಾಜಿನಃ ।
ಧ್ವಜಮೇಕೇನ ವಿವ್ಯಾಧ ಸಾರಥಿಂ ಚಾಸ್ಯ ಪಂಚಭಿಃ ।
ಧನುರೇಕೇಷುಣಾವಿಧ್ಯತ್ ತತ್ಸಾಧ್ವಧ್ಯದ್ ದ್ವಿಜರ್ಷಭಃ ॥೧೬॥

ಅವನು ದ್ರೋಣರನ್ನು ಮೂರು ಬಾಣಗಳಿಂದಲೂ, ಅವರ ರಥದ ಅಶ್ವಗಳನ್ನು ನಾಲ್ಕು ಬಾಣಗಳಿಂದಲೂ, ಧ್ವಜವನ್ನು ಒಂದು ಬಾಣದಿಂದಲೂ, ಸಾರಥಿಯನ್ನು ಐದು ಬಾಣಗಳಿಂದಲೂ ಮತ್ತು ಧನುಸ್ಸನ್ನು ಒಂದು ಬಾಣದಿಂದಲೂ ಹೊಡೆದು ಪೀಡಿಸಿದನು. ಆಗ ಬ್ರಾಹ್ಮಣ ಶ್ರೇಷ್ಠರಾದ ದ್ರೋಣರು ಕೋಪಗೊಂಡರು.

ತಸ್ಯ ದ್ರೋಣೋಽವಧೀದಶ್ವಾನ್ ಕರ್ಮಃ ಸುನಿಶಿತೈಃ ।
ಅಷ್ಟಾಭಿರ್ಭರತಶ್ರೇಷ್ಠ ಸೂತಮೇಕೇನ ಪತ್ರಿಣಾ ॥೧೭॥

ಎಲೈ ಭರತಶ್ರೇಷ್ಠನೇ, ದ್ರೋಣರು ಬಾಗಿದ ಕುರಿಯಿಳ್ಳ ಮತ್ತು ಪತ್ರಗಳನ್ನು ಹೊಂದಿದ ಎಂಟು ಬಾಣಗಳಿಂದ ಅವನ ಅಶ್ವಗಳನ್ನು ಮತ್ತು ಒಂದು ಬಾಣದಿಂದ ಅವನ ಸಾರಥಿಯನ್ನು ಹೊಡೆದು ಉರುಳಿಸಿದರು.

ಸ ಹತಾಶ್ವಾದವಪ್ಲುತ್ಯ ಸ್ಯಂದನಾದ್ ಹತಸಾರಥಿಃ ।
ಆರುರೋಹ ರಥಂ ತೂರ್ಣಂ ಪುತ್ರಸ್ಯ ರಥಿನಾಂ ವರಃ ॥೧೮॥

ವಿರಾಟ ರಾಜನಾದರೋ ಅಶ್ವಗಳು ಮತ್ತು ಸಾರಥಿಯು ಹತರಾದ ರಥದಿಂದ ಹಾರಿ ರಥಿಶ್ರೇಷ್ಠನಾದ ಅವನು ಶೀಘ್ರವಾಗಿ ತನ್ನ ಪುತ್ರನಾದ ಶಂಖನ ರಥವನ್ನು ಏರಿದನು.

ತತಸ್ತು ತೌ ಪಿತಾಪುತ್ರೌ ಭಾರದ್ವಾಜಂ ರಥೇ ಸ್ಥಿತೌ ।
ಮಹತಾ ಶರವರ್ಷೇಣ ವಾರಯಾಮಾಸತುರ್ಬಲಾತ್ ॥೧೯॥

ಅನಂತರ ಆ ತಂದೆ-ಮಕ್ಕಳಿಬ್ಬರೂ ರಥದಲ್ಲಿ ಕುಳಿತು ದ್ರೋಣರ ಮೇಲೆ ಬಾಣಗಳ ದೊಡ್ಡ ಮಳೆಯನ್ನು ಸುರಿಸಿ ತಮ್ಮ ಸಾಮರ್ಥ್ಯದಿಂದ ಅವರನ್ನು ತಡೆದರು.

ಭಾರದ್ವಾಜಸ್ತತಃ ಕ್ರುದ್ಧಃ ಶರಮಾಶೀವಿಷೋಪಮಮ್ ।
ಚಿಕ್ಷೇಪ ಸಮರೇ ತೂರ್ಣಂ ಶಂಖಂ ಪ್ರತಿ ಜನೇಶ್ವರ ॥೨೦॥

ಎಲೈ ರಾಜನೇ, ಆಗ ದ್ರೋಣರು ಬಹಳ ಕೋಪಗೊಂಡು ಸರ್ಪದಂತಿದ್ದ ಒಂದು ಬಾಣವನ್ನು ಶೀಘ್ರವಾಗಿ ಯುದ್ಧದಲ್ಲಿ ಶಂಖನ ಮೇಲೆ ಪ್ರಯೋಗಿಸಿದರು.

ಸ ತಸ್ಯ ಹೃದಯಂ ಭಿತ್ತ್ವಾ ಪೀತ್ವಾ ಶೋಣಿತಮಾಹವೇ ।
ಜಗಾಮ ಧರಣೀಂ ಬಾಣೋ ಲೋಹಿತಾರ್ದ್ರೀಕೃತಚ್ಛವಿಃ ॥೨೧॥

ಆ ಬಾಣವಾದರೋ ರಣರಂಗದಲ್ಲಿ ಅವನ ಹೃದಯವನ್ನು ಭೇದಿಸಿ ರಕ್ತವನ್ನು ಪಾನ ಮಾಡಿ, ಹಸಿರಕ್ತದಿಂದ ಆವೃತವಾದ ಕಾಂತಿಯುಳ್ಳದ್ದಾಗಿ ಭೂಮಿಯನ್ನು ಸೇರಿತು.

ಸ ಪಪಾತ ರಥಾತ್ ತೂರ್ಣಂ ಭಾರದ್ವಾಜಶರಾಹತಃ ।
ಧನುಸ್ಮೃತ್ವಾ ಶರಾಂಶ್ಚೈವ ಪಿತುರೇವ ಸಮೀಪತಃ ॥೨೨॥

ದ್ರೋಣರ ಬಾಣದಿಂದ ಹೊಡೆಯಲ್ಪಟ್ಟ ಅವನು ತನ್ನ ಬಿಲ್ಲು ಬಾಣಗಳನ್ನು ತ್ಯಜಿಸಿ ತಂದೆಯಾದ ವಿರಾಟನ ಸಮೀಪದಲ್ಲಿಯೇ ರಥದಿಂದ ಶೀಘ್ರವಾಗಿ ಕೆಳಗೆ ಉರುಳಿದನು.

ಹತಂ ಸ್ವಮಾತ್ಮಜಂ ದೃಷ್ಟ್ವಾ ವಿರಾಟಃ ಪ್ರಾದ್ರವದ್ ಭಯಾತ್ ।
ಉತ್ಸೃಜ್ಯ ಸಮರೇ ದ್ರೋಣಂ ವ್ಯಾತ್ತಾನನಮಿವಾಂತಕಮ್ ॥೨೩॥

ಯುದ್ಧದಲ್ಲಿ ತನ್ನ ಪುತ್ರನು ಹತನಾದುದನ್ನೂ ಮತ್ತು ಬಾಯ್ತೆರೆದ ಯಮನಂತಿರುವ ದ್ರೋಣರನ್ನೂ ನೋಡಿ ವಿರಾಟನು ಅವರನ್ನು ಬಿಟ್ಟು ಭಯದಿಂದ ಓಡಿಹೋದನು.

ಭಾರದ್ವಾಜಸ್ತತಸ್ತೂರ್ಣಂ ಪಾಂಡವಾನಾಂ ಮಹಾಚಮೂಮ್ ।
ದಾರಯಾಮಾಸ ಸಮರೇ ಶತಶೋಽಥ ಸಹಸ್ರಶಃ ॥೨೪॥

ದ್ರೋಣರಾದರೋ ಅನಂತರ ಶೀಘ್ರವಾಗಿ ಪಾಂಡವರ ಮಹಾಸೈನ್ಯವನ್ನು ನೂರಾರು ಸಾವಿರಾರು ಭಾಗಗಳಾಗಿ ಸೀಳಿದರು.

ಶಿಖಂಡ್ಯಪಿ ಮಹಾರಾಜ ದ್ರೌಣಮಾಸಾದ್ಯ ಸಂಯುಗೇ ।
ಆಜಘಾನ ಭ್ರುವೋರ್ಮಧ್ಯೇ ನಾರಾಚೈಸ್ತ್ರಿಭಿರಾಶುಗೈಃ ॥೨೫॥

ಎಲೈ ಮಹಾರಾಜನೇ, ಶಿಖಂಡಿಯಾದರೋ ರಣಭೂಮಿಯಲ್ಲಿ ಅಶ್ವತ್ಥಾಮರನ್ನು ಸಮೀಪಿಸಿ ಶೀಘ್ರಗಾಮಿಗಳಾದ ಮೂರು ಬಾಣಗಳಿಂದ ಅವರ ಭ್ರೂಮಧ್ಯದಲ್ಲಿ ಹೊಡೆದನು.

ಸ ಬಭೌ ನರಶಾರ್ದೂಲೋ ಲಲಾಟೇ ಸಂಸ್ಥಿತೈಸ್ತ್ರಿಭಿಃ ।
ಶಿಖರೈಃ ಕಾಂಚನಮಯೈರ್ಮೇರುಸ್ತ್ರಿಭಿರಿವೋಚ್ಛ್ರಿತೈಃ ॥೨೬॥

ಹಣೆಯಲ್ಲಿ ನೆಟ್ಟ ಆ ಮೂರುಬಾಣಗಳಿಂದ ನರಶ್ರೇಷ್ಠರಾದ ಅವರು ಸುವರ್ಣಮಯವಾದ ಮೂರು ಶಿಖರಗಳಿಂದ ಶೋಭಿಸುವ ಮೇರು ಪರ್ವತದಂತೆ ಶೋಭಿಸಿದರು.

ಅಶ್ವತ್ಥಾಮಾ ತತಃ ಕ್ರುದ್ಧೋ ನಿಮೇಷಾರ್ಧಾಚ್ಛಿಖಂಡಿನಃ ।
ಸೂತಂ ಧ್ವಜಮಥೋ ರಾಜಂಸ್ತುರಗಾನಾಯುಧಂ ಶಥಾ ।
ಶರೈರ್ಬಹುಭಿರುದ್ದಿತ್ಯ ಪಾತಯಾಮಾಸ ಸಂಯುಗೇ ॥೨೭॥

ಎಲೈ ರಾಜನೇ, ಅಶ್ವತ್ಥಾಮರು ಆಗ ಕೋಪಗೊಂಡು ಕಣ್ಣುಮುಚ್ಚಿ ತೆಗೆಯುವಷ್ಟರಲ್ಲಿ ಶಿಖಂಡಿಯ ಸಾರಥಿಯನ್ನು, ಧ್ವಜವನ್ನು, ಅಶ್ವಗಳನ್ನು, ಆಯುಧವನ್ನು ಅನೇಕ ಬಾಣಗಳಿಂದ ಕತ್ತರಿಸಿ ಭೂಮಿಯ ಮೇಲೆ ಬೀಳಿಸಿದರು.

ಸ ಹತಾಶ್ವಾದವಪ್ಲುತ್ಯ ರಥಾದ್ ವೈ ರಥಿನಾಂ ವರಃ ।
ಖಡ್ಗಮಾದಾಯ ನಿಶಿತಂ ವಿಮಲಂ ಚ ಶರಾವರಮ್ ।
ಶ್ಯೇನವದ್ ವ್ಯಚರತ್ ಕ್ರುದ್ಧಃ ಶಿಖಂಡೀ ಶತ್ರುತಾಪನಃ ॥೨೮॥

ರಥಿಶ್ರೇಷ್ಠನೂ, ಶತ್ರುತಾಪಕನೂ, ಕ್ರುದ್ಧನೂ ಆದ ಆ ಶಿಖಂಡಿಯು ಅಶ್ವವನ್ನು ಕಳೆದುಕೊಂಡ ರಥದಿಂದ ಕೆಳಗೆ ಹಾರಿ ಕೈಯಲ್ಲಿ ಹರಿತವಾದ ಖಡ್ಗವನ್ನು ಮತ್ತು ಸ್ವಚ್ಛವಾದ ಗುರಾಣಿಯನ್ನು ಹಿಡಿದು ಗಿಡುಗನಂತೆ ತಿರುಗಾಡಿದನು.

ಸಖಡ್ಗಸ್ಯ ಮಹಾರಾಜ ಚರತಸ್ತಸ್ಯ ಸಂಯುಗೇ ।
ನಾಂತರಂ ದದೃಶೇ ದ್ರೌಣಸ್ತದದ್ಭುತಮಿವಾಭವತ್ ॥೨೯॥

ಎಲೈ ಮಹಾರಾಜನೇ, ಖಡ್ಗವನ್ನು ಕೈಯಲ್ಲಿ ಹಿಡಿದು ರಣಭೂಮಿಯಲ್ಲಿ ಸಂಚರಿಸುವ ಅವನನ್ನು ಹೊಡೆಯಲು ಅಶ್ವತ್ಥಾಮರಿಗೆ ಯಾವ ಅವಕಾಶವೂ ದೊರೆಯಲಿಲ್ಲ. ಅದು ಅದ್ಭುತವಾಗಿದ್ದಿತು.

ತತಃ ಶರಸಹಸ್ರಾಣಿ ಬಹೂನಿ ಭರತರ್ಷಭ ।
ಪ್ರೇಷಯಾಮಾಸ ಸಮರೇ ದ್ರೌಣಿಃ ಪರಮಕೋಪನಃ ॥೩೦॥

ಎಲೈ ಭರತಶ್ರೇಷ್ಠನೇ, ಆಗ ಪರಮಕೋಪಸ್ವಭಾವದ ಅಶ್ವತ್ಥಾಮರು ಅನೇಕ ಸಹಸ್ರ ಬಾಣಗಳನ್ನು ರಣರಂಗದಲ್ಲಿ ಅವನ ಮೇಲೆ ಪ್ರಯೋಗಿಸಿದರು.

ತಾಮಾಪತಂತೀಂ ಸಮರೇ ಶರವೃಷ್ಟಿಂ ಸುದಾರುಣಾಮ್ ।
ಅಸಿನಾ ತೀಕ್ಷ್ಣಧಾರೇಣ ಚಿಚ್ಛೇದ ಬಲಿನಾಂ ವರಃ ॥೩೧॥

ಬಲಿಷ್ಠರಲ್ಲಿ ಶ್ರೇಷ್ಠನಾದ ಅವನು ತನ್ನ ಕಡೆಗೆ ಬರುತ್ತಿದ್ದ ಭಯಂಕರವಾದ ಬಾಣಗಳ ಆ ಮಳೆಯನ್ನು ಹರಿತವಾದ ಅಲುಬುಳ್ಳ ಕತ್ತಿಯಿಂದ ಕತ್ತರಿಸಿದನು.

ತತೋಽಸ್ಯ ವಿಮಲಂ ದ್ರೌಣಿಃ ಶತಚಂದ್ರಂ ಮನೋರಮಮ್ ।
ಚರ್ಮಾಚ್ಛಿನದ್ಸುಂ ಚಾಸ್ಯ ಖಂಡಯಾಮಾಸ ಸಂಯುಗೇ ।
ಶರೈಃ ಸುಬಹುಶೋ ರಾಜಂಸ್ತಂ ಚ ವಿವ್ಯಾಧ ಪತ್ರಿಭಿಃ ॥೩೨॥

ಅನಂತರ ಅಶ್ವತ್ಥಾಮರು ಅವನ ಸುಂದರವಾದ ಶತಚಂದ್ರಗಳಿದ್ದ ಗುರಾಣಿಯನ್ನು ಮತ್ತು ಖಡ್ಗವನ್ನು ಕತ್ತರಿಸಿ ಎಲೈ ರಾಜನೇ, ಅವನ ಮೇಲೆ ಪತ್ರಗಳನ್ನು ಹೊಂದಿದ ಹರಿತವಾದ ಅನೇಕ ಬಾಣಗಳನ್ನು ಪ್ರಯೋಗಿಸಿದರು.

ಶಿಖಂಡೀ ತು ತತಃ ಖಡ್ಗಂ ಖಂಡಿತಂ ತೇನ ಸಾಯಕೈಃ ।
ಆವಿಧ್ಯ ವ್ಯಸೃಜತ್ ತೂರ್ಣಂ ಜ್ವಲಂತಮಿವ ಪನ್ನಗಮ್ ॥೩೩॥

ತಮಾಪತಂತಂ ಸಹಸಾ ಕಾಲಾನಲಸಮಪ್ರಭಮ್ ।
ಚಿಚ್ಛೇದ ಸಮರೇ ದ್ರೌಣಿರ್ದರ್ಶಯನ್ ಹಸ್ತಲಾಘವಮ್ ।
ಶಿಖಂಡಿನಂ ಚ ವಿವ್ಯಾಧ ಶರೈರ್ಬಹುಭಿರಾಯಸೈಃ ॥೩೪॥

ಶಿಖಂಡಿಯಾದರೋ ಅಶ್ವತ್ಥಾಮರು ಬಾಣಗಳಿಂದ ಕತ್ತರಿಸಿದ ಖಡ್ಗವನ್ನು ತಿರುಗಿಸಿ ಉರಿಯುವ ಸರ್ಪದಂತಿದ್ದ ಅದನ್ನು ಶೀಘ್ರವಾಗಿ ಅವರ ಮೇಲೆಯೇ ಪ್ರಯೋಗಿಸಿದನು. ಅಶ್ವತ್ಥಾಮರು ತಮ್ಮ ಹಸ್ತಲಾಘವವನ್ನು ತೋರಿಸುತ್ತಾ ಕಾಲಾಗ್ನಿಯ ಕಾಂತಿಯಿಂದ ತಮ್ಮ ಕಡೆಗೆ ಬರುತ್ತಿದ್ದ ಆ ಖಡ್ಗದ ತುಂಡನ್ನು ಕತ್ತರಿಸಿದರು ಮತ್ತು ಅಯೋಮಯವಾದ ಅನೇಕ ಬಾಣಗಳಿಂದ ಶಿಖಂಡಿಯನ್ನು ಏಡಿಸಿದರು.

ಶಿಖಂಡೀ ತು ಭೃಶಂ ರಾಜಂಸ್ತಾಡ್ಯಮಾನಃ ಶಿತೈಃ ಶರೈಃ ।
ಆರುರೋಹ ರಥಂ ತೂರ್ಣಂ ಮಾಧವಸ್ಯ ಮಹಾತ್ಮನಃ ॥೩೫॥

ಎಲೈ ರಾಜನೇ, ಅವರ ಹರಿತವಾದ ಬಾಣಗಳಿಂದ ಚೆನ್ನಾಗಿ ಹೊಡೆಯಲ್ಪಟ್ಟ ಶಿಖಂಡಿಯು ಶೀಘ್ರವಾಗಿ ಮಹಾತ್ಮನಾದ ಸಾತ್ಯಕಿಯ ರಥವನ್ನು ಏರಿದನು.

ಸಾತ್ಯಕಿಸ್ತು ತತಃ ಕ್ರುದ್ಧೋ ರಾಕ್ಷಸಂ ಕ್ರೂರಮಾಹವೇ ।
ಅಲಂಬುಸಂ ಶರೈರ್ಘೋರೈರ್ವಿವ್ಯಾಧ ಬಲಿನಾಂ ಬಲೀ ॥೩೬॥

ಆಗ ಬಲಿಷ್ಠರಲ್ಲಿ ಬಲಿಷ್ಠನಾದ ಸಾತ್ಯಕಿಯಾದರೋ ಕ್ರುದ್ಧನಾಗಿ ಯುದ್ಧದಲ್ಲಿ ಕ್ರೂರನಾದ ಅಲಂಬುಸ ರಾಕ್ಷಸನ ಮೇಲೆ ಘೋರವಾದ ಬಾಣಗಳನ್ನು ಪ್ರಯೋಗಿಸಿದನು.

ಸ ಹತಾಶ್ವಾದವಪ್ಲುತ್ಯ ರಥಾದ್ ವೈ ರಥಿನಾಂ ವರಃ ।
ಖಡ್ಗಮಾದಾಯ ನಿಶಿತಂ ವಿಮಲಂ ಚ ಶರಾವರಮ್ ।
ಶ್ಯೇನವದ್ ವ್ಯಚರತ್ ಕ್ರುದ್ಧಃ ಶಿಖಂಡೀ ಶತ್ರುತಾಪನಃ ॥೨೮॥

ರಥಿಶ್ರೇಷ್ಠನೂ, ಶತ್ರುತಾಪಕನೂ, ಕ್ರುದ್ಧನೂ ಆದ ಆ ಶಿಖಂಡಿಯು ಅಶ್ವವನ್ನು ಕಳೆದುಕೊಂಡ ರಥದಿಂದ ಕೆಳಗೆ ಹಾರಿ ಕೈಯಲ್ಲಿ ಹರಿತವಾದ ಖಡ್ಗವನ್ನು ಮತ್ತು ಸ್ವಚ್ಛವಾದ ಗುರಾಣಿಯನ್ನು ಹಿಡಿದು ಗಿಡುಗನಂತೆ ತಿರುಗಾಡಿದನು.

ಸಖಡ್ಗಸ್ಯ ಮಹಾರಾಜ ಚರತಸ್ತಸ್ಯ ಸಂಯುಗೇ ।
ನಾಂತರಂ ದದೃಶೇ ದ್ರೌಣಿಸ್ತದದ್ಭುತಮಿವಾಭವತ್ ॥೨೯॥

ಎಲೈ ಮಹಾರಾಜನೇ, ಖಡ್ಗವನ್ನು ಕೈಯಲ್ಲಿ ಹಿಡಿದು ರಣಭೂಮಿಯಲ್ಲಿ ಸಂಚರಿಸುವ ಅವನನ್ನು ಹೊಡೆಯಲು ಅಶ್ವತ್ಥಾಮರಿಗೆ ಯಾವ ಅವಕಾಶವೂ ದೊರೆಯಲಿಲ್ಲ. ಅದು ಅದ್ಭುತವಾಗಿದ್ದಿತು.

ತತಃ ಶರಸಹಸ್ರಾಣಿ ಬಹೂನಿ ಭರತರ್ಷಭ ।
ಪ್ರೇಷಯಾಮಾಸ ಸಮರೇ ದ್ರೌಣಿಃ ಪರಮಕೋಪನಃ ॥೩೦॥

ಎಲೈ ಭರತಶ್ರೇಷ್ಠನೇ, ಆಗ ಪರಮಕೋಪಸ್ವಭಾವದ ಅಶ್ವತ್ಥಾಮರು ಅನೇಕ ಸಹಸ್ರ ಬಾಣಗಳನ್ನು ರಣರಂಗದಲ್ಲಿ ಅವನ ಮೇಲೆ ಪ್ರಯೋಗಿಸಿದರು.

ತಾಮಾಪತಂತೀಂ ಸಮರೇ ಶರವೃಷ್ಟಿಂ ಸುದಾರುಣಾಮ್ ।
ಅಸಿನಾ ತೀಕ್ಷ್ಣಧಾರೇಣ ಚಿಚ್ಛೇದ ಬಲಿನಾಂ ವರಃ ॥೩೧॥

ಬಲಿಷ್ಠರಲ್ಲಿ ಶ್ರೇಷ್ಠನಾದ ಅವನು ತನ್ನ ಕಡೆಗೆ ಬರುತ್ತಿದ್ದ ಭಯಂಕರವಾದ ಬಾಣಗಳ ಆ ಮಳೆಯನ್ನು ಹರಿತವಾದ ಅಲುಬುಳ್ಳ ಕತ್ತಿಯಿಂದ ಕತ್ತರಿಸಿದನು.

ತತೋಽಸ್ಯ ವಿಮಲಂ ದ್ರೌಣಿಃ ಶತಚಂದ್ರಂ ಮನೋರಮಮ್ ।
ಚರ್ಮಾಚ್ಛಿನದಸಿಂ ಚಾಸ್ಯ ಖಂಡಯಾಮಾಸ ಸಂಯುಗೇ ।
ಶರೈಃ ಸುಬಹುಭೋ ರಾಜಂಸ್ತಂ ಚ ವಿವ್ಯಾಧ ಪತ್ರಿಭಿಃ ॥೩೨॥

ಅನಂತರ ಅಶ್ವತ್ಥಾಮರು ಅವನ ಸುಂದರವಾದ ಶತಚಂದ್ರಗಳಿದ್ದ ಗುರಾಣಿಯನ್ನು ಮತ್ತು ಖಡ್ಗವನ್ನು ಕತ್ತರಿಸಿ ಎಲೈ ರಾಜನೇ, ಅವನ ಮೇಲೆ ಪತ್ರಗಳನ್ನು ಹೊಂದಿದ ಹರಿತವಾದ ಅನೇಕ ಬಾಣಗಳನ್ನು ಪ್ರಯೋಗಿಸಿದರು.

ಶಿಖಂಡೀ ತು ತತಃ ಖಡ್ಗಂ ಖಂಡಿತಂ ತೇನ ಸಾಯಕೈಃ ।
ಆವಿಧ್ಯ ವ್ಯಸೃಜತ್ ತೂರ್ಣಂ ಜ್ವಲಂತಮಿವ ಪನ್ನಗಮ್ ॥೩೩॥

ತಮಾಪತಂತಂ ಸಹಸಾ ಕಾಲಾನಲಸಮಪ್ರಭಮ್ ।
ಚಿಚ್ಛೇದ ಸಮರೇ ದ್ರೌಣಿರ್ದರ್ಶಯನ್ ಪಾಣಿಲಾಘವಮ್ ।
ಶಿಖಂಡಿನಂ ಚ ವಿವ್ಯಾಧ ಶರೈರ್ಬಹುಭಿರಾಯಸೈಃ ॥೩೪॥

ಶಿಖಂಡಿಯಾದರೋ ಅಶ್ವತ್ಥಾಮರು ಬಾಣಗಳಿಂದ ಕತ್ತರಿಸಿದ ಖಡ್ಗವನ್ನು ತಿರುಗಿಸಿ ಉರಿಯುವ ಸರ್ಪದಂತಿದ್ದ ಅದನ್ನು ಶೀಘ್ರವಾಗಿ ಅವರ ಮೇಲೆಯೇ ಪ್ರಯೋಗಿಸಿದನು. ಅಶ್ವತ್ಥಾಮರು ತಮ್ಮ ಪ್ರಲಾಘವವನ್ನು ತೋರಿಸುತ್ತಾ ಕಾಲಾಗ್ನಿಯ ಕಾಂತಿಯಿಂದ ತಮ್ಮ ಕಡೆಗೆ ಬರುತ್ತಿದ್ದ ಆ ಖಡ್ಗದ ತುಂಡನ್ನು ಕತ್ತರಿಸಿದರು ಮತ್ತು ಅಯೋಮಯವಾದ ಅನೇಕ ಬಾಣಗಳಿಂದ ಶಿಖಂಡಿಯನ್ನು ಏಡಿಸಿದರು.

ಶಿಖಂಡೀ ತು ಭೃಶಂ ರಾಜಂಸ್ತಾಡ್ಯಮಾನಃ ಶಿತೈಃ ಶರೈಃ ।
ಆರುರೋಹ ರಥಂ ತೂರ್ಣಂ ಮಾಧವಸ್ಯ ಮಹಾತ್ಮನಃ ॥೩೫॥

ಎಲೈ ರಾಜನೇ, ಅವರ ಹರಿತವಾದ ಬಾಣಗಳಿಂದ ಚೆನ್ನಾಗಿ ಹೊಡೆಯಲ್ಪಟ್ಟ ಶಿಖಂಡಿಯು ಶೀಘ್ರವಾಗಿ ಮಹಾತ್ಮನಾದ ಸಾತ್ಯಕಿಯ ರಥವನ್ನು ಏರಿದನು.

ಸಾತ್ಯಕಿಸ್ತು ತತಃ ಕ್ರುದ್ಧೋ ರಾಕ್ಷಸಂ ಕ್ರೂರಮಾಹವೇ ।
ಅಲಂಬುಸಂ ಶರೈಘೋರೈರ್ವಿವ್ಯಾಧ ಬಲಿನಾಂ ಬಲೀ ॥೩೬॥

ಆಗ ಬಲಿಷ್ಠರಲ್ಲಿ ಬಲಿಷ್ಠನಾದ ಸಾತ್ಯಕಿಯಾದರೋ ಕ್ರುದ್ಧನಾಗಿ ಯುದ್ಧದಲ್ಲಿ ಕ್ರೂರನಾದ ಅಲಂಬುಸ ರಾಕ್ಷಸನ ಮೇಲೆ ಘೋರವಾದ ಬಾಣಗಳನ್ನು ಪ್ರಯೋಗಿಸಿದನು.

ರಾಕ್ಷಸೇಂದ್ರಸ್ತತಸ್ತಸ್ಯ ಧನುಶ್ಚಿಚ್ಛೇದ ಭಾರತ ।
ಅರ್ಧಚಂದ್ರೇಣ ಸಮರೇ ತಂ ಚ ವಿವ್ಯಾಧ ಸಾಯಕೈಃ ।
ಮಾಯಾಂ ಚ ರಾಕ್ಷಸೀಂ ಕೃತ್ವಾ ಶರವರ್ಷೈರವಾಕಿರತ್ ॥೩೭॥

ಎಲೈ ಭಾರತನೇ, ರಾಕ್ಷಸೇಂದ್ರನಾದ ಅಲಂಬುಸನು ಸಾತ್ಯಕಿಯ ಬಾಣಗಳನ್ನು ಕತ್ತರಿಸಿದನು ಮತ್ತು ಅರ್ಧಚಂದ್ರಾಕಾರದ ಬಾಣಗಳಿಂದ ಸಾತ್ಯಕಿಯನ್ನು ಹೊಡೆದು ರಾಕ್ಷಸ ಮಾಯೆಯನ್ನು ಆಶ್ರಯಿಸಿ ಅವನ ಮೇಲೆ ಬಾಣಗಳ ಮಳೆಯನ್ನು ಕರೆದನು.

ತತ್ರಾದ್ಭುತಮಪಶ್ಯಾಮ ಶೈನೇಯಸ್ಯ ಪರಾಕ್ರಮಮ್ ।
ನಾಸಂಭ್ರಮದ್ ಯತ್ ಸಮರೇ ವಧ್ಯಮಾನಃ ಶಿತೈಃ ಶರೈಃ ॥೩೮॥

ಹರಿತವಾದ ಬಾಣಗಳಿಂದ ಪೀಡಿಸಲ್ಪಟ್ಟರೂ ಯುದ್ಧದಲ್ಲಿ ಗಾಬರಿಗೊಳ್ಳದ ಸಾತ್ಯಕಿಯ ಅದ್ಭುತವಾದ ಪರಾಕ್ರಮವನ್ನು ನಾವು ಅಲ್ಲಿ ನೋಡಿದೆವು.

ಐಂದ್ರಮಸ್ತ್ರಂ ಚ ವಾರ್ಷ್ಣೇಯೋ ಯೋಜಯಾಮಾಸ ಭಾರತ ।
ವಿಜಯಾದ್ ಯದನುಪ್ರಾಪ್ತಂ ಮಾಧವೇನ ಯಶಸ್ವಿನಾ ॥೩೯॥

ತದಸ್ತ್ರಂ ಭಸ್ಮಸಾತ್ ಕೃತ್ವಾ ಮಾಯಾಂ ತಾಂ ರಾಕ್ಷಸೀಂ ತದಾ ।
ಅಲಂಬುಸಂ ಶರೈಘೋರೈರಭ್ಯಾಕಿರತ ಸರ್ವತಃ ।
ಪರ್ವತಂ ವಾರಿಧಾರಾಭಿಃ ಪ್ರಾವೃಷೀವ ಬಲಾಹಕಃ ॥೪೦॥

ಎಲೈ ಭಾರತನೇ, ಸಾತ್ಯಕಿಯು ಅರ್ಜುನನಿಂದ ಪಡೆದ ಐಂದ್ರಾಸ್ತ್ರವನ್ನು ಪ್ರಯೋಗಿಸಿದನು. ಕೀರ್ತಿಶಾಲಿಯಾದ ಸಾತ್ಯಕಿಯಿಂದ ಪ್ರಯೋಗಿಸಲ್ಪಟ್ಟ ಆ ಅಸ್ತ್ರವು ಆ ರಾಕ್ಷಸಮಾಯೆಯನ್ನು ಸುಟ್ಟುಹಾಕಿತು ಮತ್ತು ಮೋಡವು ಮಳೆಗಾಲದಲ್ಲಿ ಪರ್ವತವನ್ನು ಜಲಧಾರೆಗಳಿಂದ ಮುಚ್ಚಿದಂತೆ ಅಲಂಬುಸನನ್ನು ಎಲ್ಲ ಕಡೆಗಳಿಂದಲೂ ಘೋರವಾದ ಬಾಣಗಳ ಧಾರೆಯಿಂದ ಪೀಡಿಸಿತು.

ತತ್ ತಥಾ ಪೀಡಿತಂ ತೇನ ಮಾಧವೇನ ಮಹಾತ್ಮನಾ ।
ಪ್ರದುದ್ರಾವ ಭಯಾದ್ ರಕ್ಷೋ ಹಿತ್ವಾ ಸಾತ್ಯಕಿಮಾಹವೇ ॥೪೧॥

ಮಹಾತ್ಮನಾದ ಮಾಧವನಾದ ಸಾತ್ಯಕಿಯಿಂದ ಹೀಗೆ ಪೀಡಿಸಲ್ಪಟ್ಟ ಆ ರಾಕ್ಷಸನು ಯುದ್ಧಭೂಮಿಯಲ್ಲಿ ಸಾತ್ಯಕಿಯನ್ನು ಬಿಟ್ಟು ಭಯದಿಂದ ಓಡಿಹೋದನು.

ತಮಜೇಯಂ ರಾಕ್ಷಸೇಂದ್ರಂ ಸಂಯೇ ಮಘವಾ ಅಪಿ ।
ಶೈನೇಯಃ ಪ್ರಾಣದದ್ ಜಿತ್ವಾ ಯೋಧಾನಾಂ ತವ ಪಶ್ಯತಾಮ್ ॥೪೨॥

ಇಂದ್ರನಿಗೂ ಸೋಲದಂತಹ ಅಜೇಯನಾದ ಆ ರಾಕ್ಷಸಶ್ರೇಷ್ಠನನ್ನು ಜಯಿಸಿ ನಿನ್ನ ಯೋಧರು ನೋಡುತ್ತಿರುವಂತೆಯೇ ಸಾತ್ಯಕಿಯು ಸಿಂಹನಾದವನ್ನು ಮಾಡಿದನು.

ನ್ಯಹನತ್ ತಾವತಾಂಶ್ಚಾಪಿ ಸಾತ್ಯಕಿಃ ಸತ್ಯವಿಕ್ರಮಃ ।
ನಿಶಿತೈರ್ಬಹುಭಿರ್ಬಾಣೈಸ್ತೇऽದ್ರವಂತ ಭಯಾರ್ದಿತಾಃ ॥೪೩॥

ಸತ್ಯವಿಕ್ರಮನಾದ ಸಾತ್ಯಕಿಯು ಅನೇಕ ಹರಿತವಾದ ಬಾಣಗಳಿಂದ ನಿನ್ನ ಯೋಧರನ್ನೂ ಪೀಡಿಸಿದನು. ಭಯಾರ್ದಿತರಾದ ನಿನ್ನ ಯೋಧರು ಓಡಿಹೋದರು.

ವಿತುನ್ನೇವ ಕಾಲೇ ತು ದ್ರುಪದಸ್ಯಾತ್ಮಜೋ ಬಲೀ ।
ಧೃಷ್ಟದ್ಯುಮ್ನೋ ಮಹಾರಾಜ ತವ ಪುತ್ರಂ ಜಘಾನ ಹ ।
ಭಾದಯಾಮಾಸ ಸಮರೇ ಶರೈಃ ಸನ್ನತಪರ್ವಭಿಃ ॥೪೪॥

ಎಲೈ ಮಹಾರಾಜನೇ, ಅದೇ ಸಮಯದಲ್ಲಿ ದ್ರುಪದ ಪುತ್ರನೂ, ಬಲಿಷ್ಠನೂ ಆದ ಧೃಷ್ಟದ್ಯುಮ್ನನು ಬಾಗಿದ ತುದಿಯುಳ್ಳ ಬಾಣಗಳಿಂದ ರಾಜನಾದ ನಿನ್ನ ಪುತ್ರನನ್ನು ರಣರಂಗದಲ್ಲಿ ಮುಚ್ಚಾಕಿದನು.

ಸಂಭಾದ್ಯಮಾನೋ ವಿಶಿಖೈರ್ಧೃಷ್ಟದ್ಯುಮ್ನೇನ ಭಾರತ ।
ವಿವ್ಯಥೇ ನ ಚ ರಾಜೇಂದ್ರ ತವ ಪುತ್ರೋ ಜನೇಶ್ವರ ॥೪೫॥

ಎಲೈ ಭಾರತನೇ, ರಾಜೇಂದ್ರನೇ, ಧೃಷ್ಟದ್ಯುಮ್ನನು ಪ್ರಯೋಗಿಸಿದ ಬಾಣಗಳಿಂದ ಆವರಿಸಲ್ಪಟ್ಟಿದ್ದರೂ ರಾಜನಾದ ನಿನ್ನ ಪುತ್ರನು ವ್ಯಥೆ ಪಡಲಿಲ್ಲ.

ಧೃಷ್ಟದ್ಯುಮ್ನಂ ಚ ಸಮರೇ ತೂರ್ಣಂ ವಿವ್ಯಾಧ ಸಾಯಕೈಃ ।
ಪಞ್ಚಭಿಶ್ಚ ತ್ರಿಭಿರ್ಬಾಣೈರ್ವ ತದದ್ಭುತಮಿವಾಭವತ್ ॥೪೬॥

ಅವನು ಶೀಘ್ರವಾಗಿ ಯುದ್ಧದಲ್ಲಿ ಧೃಷ್ಟದ್ಯುಮ್ನನ ಮೇಲೆ ಹೊಂಚುತ್ತು ಬಾಣಗಳನ್ನು ಪ್ರಯೋಗಿಸಿದನು. ಅದು ಅದ್ಭುತವಾಗಿದ್ದಿತು.

ತಸ್ಯ ಸೇನಾಪತಿಃ ಕ್ರುದ್ಧೋ ಧನುಶ್ಚಿಚ್ಛೇದ ಮಾರಿಷ ।
ಹಯಾಂಶ್ಚ ಚತುರಃ ಶೀಘ್ರಂ ನಿಜಘಾನ ಮಹಾರಥಃ ।
ಶರೈಶ್ಚೈನಂ ಸುನಿಶಿತೈಃ ಕ್ಷಿಪ್ರಂ ವಿವ್ಯಾಧ ಸಪ್ತಭಿಃ ॥೪೭॥

ಎಲೈ ಪೂಜ್ಯನೇ, ಸೇನಾಪತಿಯಾದ ಧೃಷ್ಟದ್ಯುಮ್ನನು ಕ್ರುದ್ಧನಾಗಿ ದುರ್ಯೋಧನನ ಧನುಸ್ಸನ್ನು ಕತ್ತರಿಸಿ ಅವನ ರಥದ ನಾಲ್ಕು ಅಶ್ವಗಳನ್ನು ಕೊಂದನು. ಮಹಾರಥನಾದ ಅವನು ಅತ್ಯಂತ ಹರಿತವಾದ ಏಳು ಬಾಣಗಳಿಂದ ಶೀಘ್ರವಾಗಿ ಅವನನ್ನು ಪೀಡಿಸಿದನು.

ಸ ಹತಾಶ್ವಾತ್ ಮಹಾಬಾಹುರವಪ್ಲುತ್ಯ ರಥಾದ್ ಬಲೀ ।
ಪದಾತಿರಸಿಮುದ್ಯಮ್ಯ ಪ್ರಾದ್ರವತ್ ಪಾರ್ಷತಂ ಪ್ರತಿ ॥೪೮॥

ಬಲಿಷ್ಠನಾದ, ಮಹಾಬಾಹುವಾದ ದುರ್ಯೋಧನನಾದರೋ ಅಶ್ವಗಳು ನಾಶಹೊಂದಿದ ರಥದಿಂದ ಕೆಳಗೆ ಹಾರಿ ಕೈಯಲ್ಲಿ ಕತ್ತಿಯನ್ನು ಹಿಡಿದು ಪದಾತಿಯಾಗಿ ಧೃಷ್ಟದ್ಯುಮ್ನನ ಕಡೆಗೆ ವೇಗದಿಂದ ಸಾಗಿದನು.

ಶಕುನಿಸ್ತಂ ಸಮಭ್ಯೇತ್ಯ ರಾಜಗೃದ್ಧೀ ಮಹಾಬಲಃ ।
ರಾಜಾನಂ ಸರ್ವಲೋಕಸ್ಯ ರಥಮಾರೋಪಯತ್ ಸ್ವಕಮ್ ॥೪೯॥

ಮಹಾಬಲನೂ, ರಾಜನ ಪ್ರಾಣವನ್ನು ಉಳಿಸಲು ಬಯಸುವವನೂ ಆದ ಶಕುನಿಯು ಅವನ ಸಮೀಪಕ್ಕೆ ಬಂದು ಎಲ್ಲ ಯೋಧರು ನೋಡುತ್ತಿರುವಂತೆಯೇ ಅವನನ್ನು ತನ್ನ ರಥಕ್ಕೆ ಏರಿಸಿದನು.

ತತೋ ನೃಪಂ ಪರಾಜಿತ್ಯ ಪಾರ್ಷತಃ ಪರವೀರಹಾ ।
ನ್ಯಹನತ್ ತಾವಕಂ ಸೈನ್ಯಂ ವಜ್ರಪಾಣಿರಿವಾಸುರಮ್ ॥೫೦॥

ಪರವೀರಘಾತಕನಾದ ಧೃಷ್ಟದ್ಯುಮ್ನನು ರಾಜನಾದ ದುರ್ಯೋಧನನನ್ನು ಸೋಲಿಸಿ ವಜ್ರಪಾಣಿಯಾದ ಇಂದ್ರನು ಅಸುರರ ಸೈನ್ಯವನ್ನು ನಾಶಮಾಡಿದಂತೆ ನಿನ್ನ ಸೈನ್ಯವನ್ನು ನಾಶಮಾಡಿದನು.

ಕೃತವರ್ಮಾ ರಣೇ ಭೀಮಂ ಶರೈರಾರ್ದಯನ್ಮಹಾರಥಮ್ ।
ಪ್ರಚ್ಛಾದಯಾಮಾಸ ಚ ತಂ ಮಹಾಮೇಘೋ ರವಿಂ ಯಥಾ ॥೫೧॥

ಕೃತವರ್ಮನು ಯುದ್ಧದಲ್ಲಿ ಮಹಾರಥನಾದ ಭೀಮನನ್ನು ಸಮೀಪಿಸಿ ದೊಡ್ಡ ಮೋಡವು ಸೂರ್ಯನನ್ನು ಮುಚ್ಚುವಂತೆ ತನ್ನ ಬಾಣಗಳಿಂದ ಅವನನ್ನು ಮುಚ್ಚಿದನು.

ತತಃ ಪ್ರಹಸ್ಯ ಸಮರೇ ಭೀಮಸೇನಃ ಪರಂತಪಃ ।
ಪ್ರೇಷಯಾಮಾಸ ಸಂಕ್ರುದ್ಧಃ ಸಾಯಕಾನ್ ಕೃತವರ್ಮಣೇ ॥೫೨॥

ಪರಂತಪನಾದ ಭೀಮಸೇನನು ನಕ್ಕು ಆಗ ಯುದ್ಧದಲ್ಲಿ ಬಹಳ ಕೋಪಗೊಂಡು ಕೃತವರ್ಮನ ಮೇಲೆ ಅನೇಕ ಬಾಣಗಳನ್ನು ಪ್ರಯೋಗಿಸಿದನು.

ತೈರರ್ದ್ಯಮಾನೋಽತಿರಥಃ ಸಾತ್ವತಃ ಶಸ್ತ್ರಕೋವಿದಃ ।
ನಾಕಂಪತ ಮಹಾರಾಜ ಭೀಮಂ ಚಾರ್ಧಚ್ಛಿತೈಃ ಶರೈಃ ॥೫೩॥

ಎಲೈ ಮಹಾರಾಜನೇ, ಸಾತ್ವತ ಕುಲದಲ್ಲಿ ಜನಿಸಿದವನೂ, ಶಸ್ತ್ರಪಾರಂಗತನೂ, ಅತಿರಥನೂ ಆದ ಕೃತವರ್ಮನು ಆ ಬಾಣಗಳಿಂದ ಪೀಡಿಸಲ್ಪಟ್ಟರೂ ಅಲುಗಾಡಲಿಲ್ಲ ಮತ್ತು ಹರಿತವಾದ ಬಾಣಗಳನ್ನು ಭೀಮನ ಮೇಲೆ ಪ್ರಯೋಗಿಸಿದನು.

ತಸ್ಯಾಶ್ವಾಂಶ್ಚತುರೋ ಹತ್ವಾ ಭೀಮಸೇನೋ ಮಹಾಬಲಃ ।
ಸಾರಥಿಂ ಪಾತಯಾಮಾಸ ಧ್ವಜಂ ಚ ಸುಪರಿಷ್ಕೃತಮ್ ॥೫೪॥

ಮಹಾಬಲನಾದ ಭೀಮಸೇನನು ಅವನ ರಥದ ನಾಲ್ಕು ಅಶ್ವಗಳನ್ನು ಕೊಂದು, ಅಲಂಕೃತವಾದ ಅವನ ರಥಧ್ವಜವನ್ನು ಮತ್ತು ಸಾರಥಿಯನ್ನು ಕೆಳಗೆ ಉರುಳಿಸಿದನು.

ಶರೈರ್ಬಹುವಿಧೈಶ್ಚೈನಮಾಚಿನೋತ್ ಪರವೀರಹಾ ।
ಶಕಲೀಕೃತಸರ್ವಾಂಗಃ ಶ್ವಾವಿದ್ವತ್ ಸಮದೃಶ್ಯತ ॥೫೫॥

ಪರವೀರಘಾತಕನಾದ ಭೀಮಸೇನನು ಅನೇಕ ವಿಧವಾದ ಬಾಣಗಳನ್ನು ಅವನ ಮೇಲೆ ಪ್ರಯೋಗಿಸಿದನು. ಆ ಬಾಣಗಳೆಲ್ಲವೂ ತನ್ನ ಶರೀರದ ಸರ್ವಾಂಗಗಳಲ್ಲಿ ನಾಟಿದ ಕೃತವರ್ಮನು ಮುಳ್ಳುಹಂದಿಯಂತೆ ಕಂಡುಬಂದನು.

ಹತಾಶ್ವಾತ್ ತು ರಥಾತ್ ತೂರ್ಣಂ ವೃಷಕಸ್ಯ ರಥಂ ಯಯೌ ।
ಸ್ಯಾಲಸ್ಯ ತೇ ಮಹಾರಾಜ ತವ ಪುತ್ರಸ್ಯ ಪಶ್ಯತಃ ॥೫೬॥

ಎಲೈ ಮಹಾರಾಜನೇ, ತನ್ನ ರಥದ ಅಶ್ವಗಳು ಹತವಾಗುತ್ತಿರಲು ದುರ್ಯೋಧನನು ನೋಡುತ್ತಿರುವಂತೆಯೇ ಕೃತವರ್ಮನು ಶೀಘ್ರವಾಗಿ ಶಕುನಿಯ ತಮ್ಮನೂ, ನಿನ್ನ ಭಾವಮೈದುನನೂ ಆದ ವೃಷಕನ ರಥವನ್ನು ಏರಿದನು.

ಭೀಮಸೇನೋಽಪಿ ಸಂಕ್ರುದ್ಧವ ಸೈನ್ಯಮುಪಾದ್ರವತ್ ।
ನಿಜಘಾನ ಚ ಸಂಕ್ರುದ್ಧೋ ದಂಡಪಾಣಿರಿವಾಂತಕಃ ॥೫೭॥

ಭೀಮಸೇನನೂ ಸಹ ಬಹಳ ಕೋಪಗೊಂಡು ನಿನ್ನ ಸೈನ್ಯವನ್ನು ಸಮೀಪಿಸಿ ದಂಡಪಾಣಿಯಾದ ಯಮನಂತೆ ಸಂಹರಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಅಷ್ಟಸಪ್ತತಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಅಷ್ಟತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಎಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೊಂಬತ್ತನೆಯ ಅಧ್ಯಾಯ

ಇರಾವಂತನ ಮತ್ತು ಭಗದತ್ತನ ಪರಾಕ್ರಮ.
ನಕುಲ-ಸಹದೇವರನಿಂದ ಶಲ್ಯನ ಪರಾಭವ.

ಧೃತರಾಷ್ಟ್ರಃ

ಬಹೂನೀಹ ವಿಚಿತ್ರಾಣಿ ದ್ವೈರಥಾನಿ ಸ್ಮ ಸಂಜಯ ।
ಪಾಂಡೂನಾಂ ಮಾಮಕೈಃ ಸಾರ್ಧಮಶ್ರೌಷಂ ತವ ಜಲ್ಪತಃ ॥೧॥

ಧೃತರಾಷ್ಟ್ರ- ಎಲೈ ಸಂಜಯನೇ, ನೀನು ಮಾತನಾಡುತ್ತಿರುವಂತೆ ನಿನ್ನಿಂದ ಪಾಂಡವರಿಗೂ ಮತ್ತು ನನ್ನವರಿಗೂ ನಡೆದ ವಿಚಿತ್ರವಾದ ಅನೇಕ ದ್ವಂದ್ವಯುದ್ಧಗಳನ್ನು ಕೇಳಿದೆನು.

ನ ಚೈವ ಮಾಮಕಂ ಕಂಚಿದ್ ಹೃಷ್ಯಂ ಶಂಸಸಿ ಸಂಜಯ ।
ನಿತ್ಯಂ ಪಾಂಡುಸುತಾನ್ ಹೃಷ್ಯಾನಭಗ್ನಾಂಶ್ಚೈವ ಶಂಸಸಿ ॥೨॥

ಎಲೈ ಸಂಜಯನೇ, ನನ್ನವರು ಯಾರೂ ಸಂತೋಷದಿಂದಿದ್ದಾರೆಂದು ನೀನು ಹೇಳಲಿಲ್ಲ. ಪಾಂಡವರು ಯಾವಾಗಲೂ ಸಂತೋಷದಿಂದಿದ್ದಾರೆಂದೂ, ಭಗ್ನರಾಗಿಲ್ಲವೆಂದೂ ಹೇಳುತ್ತಿದ್ದೀಯೆ.

ಜೇಯಮಾನಾನ್ ವಿಮನಸೋ ಮಾಮಕಾನ್ ವಿಗತೌಜಸಃ ।
ವದಸೇ ಸಂಯುಗೇ ಸೂತ ದಿಷ್ಟಮೇತದಸಂಶಯಮ್ ॥೩॥

ಎಲೈ ಸೂತನೇ, ನನ್ನವರು ಸಾಮರ್ಥ್ಯಹೀನರೆಂದೂ, ಬೇಸರಗೊಂಡವರೆಂದೂ ಮತ್ತು ಯುದ್ಧದಲ್ಲಿ ಪರಾಭವಗೊಳ್ಳುವವರೆಂದೂ ಹೇಳುತ್ತಿದ್ದೀಯೆ. ಎಲೈ ಸೂತನೇ, ಇದು ನಿಶ್ಚಯವಾಗಿ ವಿಧಿಯ ನಿಯತಿಯೇ ಸರಿ.

ಸಂಜಯಃ

ಯಥಾಶಕ್ತಿ ಯಥೋತ್ಸಾಹಂ ಯುದ್ಧೇ ಚೇಷ್ಟಂತಿ ತಾವಕಾಃ ।
ದರ್ಶಯಾನಾಃ ಪರಂ ಶಕ್ತ್ಯಾ ಪೌರುಷಂ ಪುರುಷರ್ಷಭ ॥೪॥

ಸಂಜಯ– ಎಲೈ ಪುರುಷಶ್ರೇಷ್ಠನೇ, ನಿನ್ನವರು ತಮ್ಮ ಶಕ್ತಿಗೆ ಅನುಗುಣವಾಗಿ, ಉತ್ಸಾಹಕ್ಕೆ ಅನುಗುಣವಾಗಿ, ತಮ್ಮ ಶಕ್ತಿಯನ್ನು ಮೀರಿ ಪರಾಕ್ರಮವನ್ನು ತೋರಿಸುತ್ತಾ ಯುದ್ಧವನ್ನು ಮಾಡುತ್ತಿದ್ದಾರೆ.

ಗಂಗಾಯಾಃ ಸುರನದ್ಯಾ ವೈ ಸ್ಯಾದುಭೋತಂ ಯಥೋದಕಮ್ ।
ಮಹೋದಧಿಗುಣಾಭ್ಯಾಸಾಲ್ಲವಣತ್ವಂ ನಿಗಚ್ಛತಿ ॥೫॥

ತಥಾ ತವೈರುಷಂ ರಾಜಂಸ್ತವಕಾನಾಂ ಮಹಾತ್ಮನಾಮ್ ।
ಪ್ರಾಪ್ಯ ಪಾಂಡುಸುತಾನ್ ವೀರಾನ್ ವ್ಯರ್ಥಂ ಭವತಿ ಸಂಯುಗೇ ॥೬॥

ಗಂಗೆಯ ಸಿಹಿಯಾದ ನೀರು ಸಮುದ್ರವನ್ನು ಸೇರಿ ಹೇಗೆ ಉಪ್ಪಾಗುತ್ತದೆಯೋ ಅದರಂತೆ ಎಲೈ ರಾಜನೇ, ಮಹಾತ್ಮರಾದ ನಿನ್ನ ಮಕ್ಕಳ ಪೌರುಷವು ಯುದ್ಧದಲ್ಲಿ ವೀರರಾದ ಪಾಂಡವರನ್ನು ಸೇರಿ ವ್ಯರ್ಥವಾಗುತ್ತದೆ.

ಘಟಮಾನಾನ್ ಯಥಾಶಕ್ತಿ ಕುರ್ವಾಣಾನ್ ಕರ್ಮ ದುಷ್ಕರಮ್ ।
ನ ದೋಷೇಣ ಕುಯುತ್ಸೇಷ್ಠ ವೀರವಾನ್ ಗಂತುಮರ್ಹಸಿ ॥೭॥

ಎಲೈ ಕುರುಶ್ರೇಷ್ಠನೇ, ತಮ್ಮ ಶಕ್ತಿಗೆ ಅನುಗುಣವಾಗಿ ದುಷ್ಕರವಾದ ಕಾರ್ಯವನ್ನು ಮಾಡುತ್ತಿರುವ ಕೌರವರನ್ನು ನೀನು ದೋಷ ದೃಷ್ಟಿಯಿಂದ ಎಣಿಸಬೇಡ.

ತವಾಪರಾಧಾತ್ ಸುಮಹಾನ್ ಸಪುತ್ರಸ್ಯ ವಿಶಾಂಪತೇ ।
ಪೃಥಿವ್ಯಾಃ ಪ್ರಕ್ಷಯೋ ಘೋರೋ ಯಮರಾಷ್ಟ್ರವಿವರ್ಧನಃ ॥೮॥

ಎಲೈ ರಾಜನೇ, ಪುತ್ರರಿಂದ ಸಹಿತನಾದ ನಿನ್ನ ಮಹಾಪರಾಧದಿಂದ ಯಮರಾಷ್ಟ್ರ ವರ್ಧನವಾದ ಭೂಮಿಯ ಘೋರವಾದ ವಿನಾಶವು ಪ್ರಾಪ್ತವಾಗಿದೆ.

ಆತ್ಮದೋಷಾತ್ ಸಮುತ್ಥಾನಂ ಶೋಚಿತುಂ ನಾರ್ಹಸೇ ನೃಪ ।
ನ ಹಿ ರಕ್ಷಂತಿ ರಾಜಾನಃ ಸರ್ವಾರ್ಥಾನ್ ನಾಪಿ ಜೀವಿತಮ್ ॥೯॥

ಎಲೈ ರಾಜನೇ, ನಿನ್ನ ದೋಷದಿಂದ ಉಂಟಾದ ಈ ಸಂಕಟವನ್ನು ಕುರಿತು ನೀನು ಶೋಕಪಡುವುದು ಸರಿಯಲ್ಲ. ರಾಜರುಗಳು ಎಲ್ಲಾ ವಸ್ತುಗಳನ್ನಾಗಲೀ ಅಥವಾ ಎಲ್ಲರ ಜೀವಿತವನ್ನಾಗಲೀ ರಕ್ಷಿಸುವುದಿಲ್ಲವಷ್ಟೆ?

ಯುದ್ಧೇ ಸುಕೃತಿನಾಂ ಲೋಕಾನಿಚ್ಛಂತೋ ವಸುಧಾಧಿಪಾಃ ।
ಚಮೂಂ ವಿಗಾಹ್ಯ ಯುಧ್ಯಂತೇ ನಿತ್ಯಂ ಸ್ವರ್ಗಪರಾಯಣಾಃ ॥೧೦॥

ವಸುಧಾಧಿಪರು ಪುಣ್ಯಮಾಡಿದವರ ಲೋಕಗಳನ್ನು ಯುದ್ಧರೂಪವಾದ ಕರ್ಮದಿಂದ ಬಯಸುತ್ತಾ, ಯಾವಾಗಲೂ ಸ್ವರ್ಗಪರಾಯಣರಾಗಿ ಶತ್ರುಸೈನ್ಯವನ್ನು ಪ್ರವೇಶಿಸಿ ಯುದ್ಧವನ್ನು ಮಾಡುತ್ತಿದ್ದಾರೆ.

ಪೂರ್ವಾಹ್ಣೇ ತು ಮಹಾರಾಜ ಪ್ರಾವರ್ತತ ಜನಕ್ಷಯಃ ।
ತನ್ಮಮೈಕಮನಾ ಭೂತ್ವಾ ಶೃಣು ದೇವಾಸುರೋಪಮಮ್ ॥೧೧॥

ಎಲೈ ಮಹಾರಾಜನೇ, ಆ ದಿನ ಪ್ರಾತಃಕಾಲದಲ್ಲಿ ಯೋಧರ ದೊಡ್ಡ ವಿನಾಶವು ಉಂಟಾಯಿತು. ದೇವಾಸುರ ಸಂಗ್ರಾಮವನ್ನು ಹೋಲುವ ಆ ವಿನಾಶವನ್ನು ಏಕಾಗ್ರವಾದ ಮನಸ್ಸಿನಿಂದ ಕೇಳುವವನಾಗು.

ಅವಂತ್ಯೌ ತು ಮಹೇಷ್ವಾಸೌ ಮಹಾತ್ಮಾನೌ ಮಹಾಬಲೌ ।
ಇರಾವಂತಮಭಿಪ್ರೇಕ್ಷ್ಯ ಸಮೇಯಾತಾಂ ರಣೋತ್ಕಟೌ ।
ತೇಷಾಂ ಪ್ರವವೃತೇ ಯುದ್ಧಂ ತುಮುಲಂ ಲೋಮಹರ್ಷಣಮ್ ॥೧೨॥

ಮಹಾಬಲರೂ, ಮಹಾಧನುರ್ಧಾರಿಗಳೂ, ರಣೋತ್ಕುರೂ, ಮಹಾತ್ಮರೂ ಆದ ಅವಂತಿ ದೇಶದ ಸಹೋದರರು ಇರಾವಂತನನ್ನು ಉದ್ದೇಶಿಸಿ ಅವನ ಜೊತೆಯಲ್ಲಿ ಯುದ್ಧವನ್ನು ಮಾಡಿದರು. ಅವರಿಗೆ ತೀವ್ರವೂ ಮತ್ತು ರೋಮಹರ್ಷಣವೂ ಆದ ಯುದ್ಧವು ಜರುಗಿತು.

ಇರಾವಾಂಸ್ತು ಸುಸಂಕ್ರುದ್ಧೋ ಭ್ರಾತರೌ ದೇವರೂಪಿಣೌ ।
ವಿವ್ಯಾಧ ನಿಶಿತೈಸ್ತೂರ್ಣಂ ಶರೈಃ ಸನ್ನತಪರ್ವಭಿಃ ।
ತಾವೇನಂ ಪ್ರತ್ಯವಿಧ್ಯೇತಾಂ ಸಮರೇ ಚಿತ್ರಯೋಧಿನೌ ॥೧೩॥

ಬಹಳ ಕ್ರೋಧಗೊಂಡ ಇರಾವಂತನಾದರೋ ದೇವತೆಗಳಂತೆ ಸುಂದರರಾಗಿದ್ದ ಆ ಸಹೋದರರಿಬ್ಬರ ಮೇಲೆ ಬಾಗಿದ ತುದಿಯುಳ್ಳ ಹರಿತವಾದ ಬಾಣಗಳ ಮಳೆಯನ್ನು ಶೀಘ್ರವಾಗಿ ಕರೆದನು. ವಿಚಿತ್ರವಾಗಿ ಯುದ್ಧವನ್ನು ಮಾಡುವ ಅವರಿಬ್ಬರೂ ಅವನ ಮೇಲೆ ಪ್ರತಿಯಾಗಿ ಬಾಣಗಳನ್ನು ಪ್ರಯೋಗಿಸಿದರು.

ಯುಧ್ಯತಾಂ ಹಿ ತಥಾ ರಾಜನ್ ವಿಶೇಷೋ ನ ವ್ಯದೃಶ್ಯತ ।
ಯತತಾಂ ಶತ್ರುನಾಶಾಯ ಕೃತಪ್ರತಿಕೃತೈಷಿಣಾಮ್ ॥೧೪॥

ಎಲೈ ರಾಜನೇ, ಶತ್ರುನಾಶವನ್ನು ಬಯಸಿ ಒಬ್ಬರು ಮಾಡಿದುದಕ್ಕೆ ಇನ್ನೊಬ್ಬರು ಪ್ರತೀಕಾರವನ್ನು ಮಾಡಿ ಯುದ್ಧವನ್ನು ಮಾಡುತ್ತಿದ್ದ ಅವರಲ್ಲಿ ಯಾವ ವೈಲಕ್ಷಣ್ಯವೂ ಕಂಡುಬರಲಿಲ್ಲ.

ಇರಾವಾಂಸ್ತು ತತೋ ರಾಜನ್ಸಮಿಂದಮ್ಯ ಸಾಯಕೈಃ ।
ಚತುರ್ಭಿರ್ಹತ್ತುರೋ ವಾಹಾನ್ಸಂಯದ್ ಯಮಸಾದನಮ್ ॥೧೫॥

ಎಲೈ ರಾಜನೇ, ಆಗ ಇರಾವಂತನು ನಾಲ್ಕು ಬಾಣಗಳಿಂದ ಅನುವಿಂದನ ರಥದ ನಾಲ್ಕು ಅಶ್ವಗಳನ್ನು ಯಮಪಟ್ಟಣಕ್ಕೆ ಕಳುಹಿಸಿದನು.

ಧನ್ವಾಭ್ಯಾಂ ಚ ಸುತೀಕ್ಷ್ಣಾಭ್ಯಾಂ ಧನುಃ ಕೇತುಂ ಚ ಮಾರಿಷ ।
ಚಿಚ್ಛೇದ ಸಮರೇ ರಾಜನ್ ತದದ್ಭುತಮಿವಾಭವತ್ ॥೧೬॥

ಎಲೈ ರಾಜನೇ, ಪೂಜ್ಯನೇ, ಹರಿತವಾದ ಎರಡು ಧಲ್ಲಗಳಿಂದ ಯುದ್ಧದಲ್ಲಿ ಅವನ ಧನುಸ್ಸನ್ನು ಮತ್ತು ಧ್ವಜವನ್ನು ಕತ್ತರಿಸಿದನು. ಅದು ಅದ್ಭುತವಾಗಿದ್ದಿತು.

ತ್ಯಕ್ತ್ವಾನುವಿಂದೋಽಥ ರಥಂ ವಿಂದಸ್ಯ ರಥಮಾಸ್ಥಿತಃ ।
ಧನುರ್ಗೃಹೀತ್ವಾ ನವಮಂ ಭಾರಸಾಧನಮುತ್ತಮಮ್ ॥೧೭॥

ತಾವೇಕಸ್ಥೌ ರಣೇ ವೀರಾವಾವಂತ್ಯೌ ರಥಿನಾಂ ವರೌ ।
ಶರಾನ್ ಮುಮುಚತುಸ್ತೂರ್ಣಮಿರಾವತಿ ಮಹಾತ್ಮನಿ ॥೧೮॥

ಅನಂತರ ಅನುವಿಂದನಾದರೋ ತನ್ನ ರಥವನ್ನು ಬಿಟ್ಟು ವಿಂದನ ರಥವನ್ನು ಏರಿ ಭಾರಸಾಧನವೂ ಶ್ರೇಷ್ಠವೂ ಆದ ಧನುಸ್ಸನ್ನು ತೆಗೆದುಕೊಂಡನು. ಅವಂತಿ ದೇಶದ ವೀರರಾದ, ರಥಿಶ್ರೇಷ್ಠರಾದ ಅವರಿಬ್ಬರೂ ಒಂದೇ ರಥದಲ್ಲಿ ನೆಲೆಸಿ ಶೀಘ್ರವಾಗಿ ಮಹಾತ್ಮನಾದ ಇರಾವಂತನ ಮೇಲೆ ಅನೇಕ ಬಾಣಗಳನ್ನು ಪ್ರಯೋಗಿಸಿದರು.

ತಾಭ್ಯಾಂ ಮುಕ್ತಾ ಮಹಾವೇಗಾಃ ಶರಾಃ ಕಾಂಚನಭೂಷಣಾಃ ।
ದಿವಾಕರಪಥಂ ಪ್ರಾಪ್ಯ ಭಾದಯಾಮಾಸುರಂಬರಮ್ ॥೧೯॥

ಅವರಿಬ್ಬರೂ ಪ್ರಯೋಗಿಸಿದ ಮಹಾವೇಗವುಳ್ಳ, ಸುವರ್ಣಭೂಷಿತವಾದ ಬಾಣಗಳು ಆಕಾಶಮಾರ್ಗವನ್ನು ಸೇರಿ ಆಕಾಶವನ್ನು ಮುಚ್ಚಿಹಾಕಿದವು.

ಇರಾವಾಂಸ್ತು ತತಃ ಕ್ರುದ್ಧೋ ಭ್ರಾತರೌ ತೌ ಮಹಾರಥೌ ।
ವವರ್ಷ ಶರವರ್ಷೇಣ ಸಾರಥಿಂ ಚಾಪ್ಯಪಾತಯತ್ ॥೨೦॥

ಇರಾವಂತನಾದರೋ ಆಗ ಕ್ರುದ್ಧನಾಗಿ ಮಹಾರಥರಾದ ಆ ಇಬ್ಬರು ಸಹೋದರರ ಮೇಲೆ ಬಾಣಗಳ ಮಳೆಯನ್ನು ಸುರಿಸಿ ಅವರ ಸಾರಥಿಯನ್ನು ಕೆಡವಿದನು.

ತಸ್ಮಿನ್ ನಿಪತಿತೇ ಭೂಮೌ ಗತಸತ್ತ್ವೇಽಥ ಸಾರಥೌ ।
ರಥಃ ಪ್ರದುದ್ರಾವ ದಿಶಃ ಸಮುದ್ಭ್ರಾಂತಹಯಸ್ತತಃ ॥೨೧॥

ಅವರ ಸಾರಥಿಯು ಪ್ರಾಣವನ್ನು ಕಳೆದುಕೊಂಡು ಭೂಮಿಯ ಮೇಲೆ ಬೀಳುತ್ತಿರಲು ರಥದ ಅಶ್ವಗಳು ಗಾಬರಿಗೊಂಡು ತಮ್ಮ ಮನಸ್ಸಿಗೆ ಬಂದ ದಿಕ್ಕಿಗೆ ಓಡಿದವು.

ತೌ ಸ ಜಿತ್ವಾ ಮಹಾರಾಜ ನಾಗರಾಜಸುತಾಸುತಃ ।
ಪೌರುಷಂ ಖ್ಯಾಪಯಂಸ್ತೂರ್ಣಂ ವೃಧಮತ್ ತವ ವಾಹಿನೀಮ್॥೨೨॥

ಎಲೈ ಮಹಾರಾಜನೇ, ನಾಗರಾಜನ ಮಗಳಾದ ಉಲೂಪಿಯ ಮಗನಾದ ಅವನು ಅವರಿಬ್ಬರನ್ನೂ ಜಯಿಸಿ ತನ್ನ ಪೌರುಷವನ್ನು ಪ್ರಕಟಪಡಿಸುತ್ತಾ ಶೀಘ್ರವಾಗಿ ನಿನ್ನ ಸೈನ್ಯವನ್ನು ನಾಶಗೊಳಿಸಿದನು.

ಸಾ ವಧ್ಯಮಾನಾ ಸಮರೇ ಧಾರ್ತರಾಷ್ಟ್ರೀ ಮಹಾಚಮೂಃ ।
ವೇಗಾನ್ ಬಹುವಿಧಾಂಶ್ಚಕ್ರೇ ವಿಷಂ ಪೀತ್ವೇವ ಮಾನವಃ ॥೨೩॥

ಯುದ್ಧದಲ್ಲಿ ಅವನಿಂದ ಪೀಡಿಸಲ್ಪಟ್ಟ ನಿನ್ನ ದೊಡ್ಡ ಸೈನ್ಯವು ವಿಷವನ್ನು ಕುಡಿದ ಮನುಷ್ಯನಂತೆ ಅನೇಕ ರೀತಿಯಲ್ಲಿ ಹಿಂದೆ-ಮುಂದೆ ಮತ್ತು ಪಾರ್ಶ್ವಗಳಲ್ಲಿ ಓಡಿಹೋಯಿತು.

ಪೈಡಿಂಬೋ ರಾಕ್ಷಸೇಂದ್ರಸ್ತು ಭಗದತ್ತಂ ಸಮಾದ್ರವತ್ ।
ರಥೇನಾದಿತ್ಯವರ್ಣೇನ ಸಧ್ವಜೇನ ಮಹಾಬಲಃ ॥೨೪॥

ರಾಕ್ಷಸೇಶ್ವರನಾದ, ಮಹಾಬಲನಾದ ಘಟೋತ್ಕಚನಾದರೋ ಧ್ವಜದಿಂದ ಕೂಡಿದ ಆದಿತ್ಯವರ್ಣದ ರಥದಲ್ಲಿ ಭಗದತ್ತನನ್ನು ಎದುರಿಸಿದನು.

ತತಃ ಪ್ರಾಗ್ಜ್ಯೋತಿಷೋ ರಾಜಾ ನಾಗರಾಜಂ ಸಮಾಸ್ಥಿತಃ ।
ಯಥಾ ವಜ್ರಧರಃ ಪೂರ್ವಂ ಸಂಗ್ರಾಮೇ ತಾರಕಾಮಯೇ ॥೨೫॥

ಆಗ ರಾಜನಾದ ಭಗದತ್ತನು ಗಜರಾಜನನ್ನು ಏರಿ ದೇವಾಸುರ ಸಂಗ್ರಾಮದಲ್ಲಿ ಕಣ್ಣುಗಳಿಗೆ ಹಿಂಸೆಯನ್ನು ಉಂಟುಮಾಡುವ ಯುದ್ಧದಲ್ಲಿ ವಜ್ರಪಾಣಿಯಾದ ಇಂದ್ರನಂತೆ ಮುಂದೆ ಬಂದನು.

ತತ್ರ ದೇವಾಃ ಸಗಂಧರ್ವಾ ಋಷಯಶ್ಚ ಸಮಾಗತಾಃ ।
ವಿಶೇಷಂ ನ ಸ್ಮ ವಿವಿದುರ್ಹೈಡಿಂಬಭಗದತ್ತಯೋಃ ॥೨೬॥

ಘಟೋತ್ಕಚ ಮತ್ತು ಭಗದತ್ತರು ಯುದ್ಧ ಮಾಡುವಾಗ ಅಲ್ಲಿ ಬಂದ ದೇವತೆಗಳಾಗಲೀ, ಗಂಧರ್ವರಾಗಲೀ, ಋಷಿಗಳಾಗಲೀ ಅವರಿಬ್ಬರಲ್ಲಿ ಯಾವ ವಿಶೇಷವೂ ತಿಳಿಯಲಿಲ್ಲ.

ಯಥಾ ಸುರಪತಿಃ ಶಕ್ರಸ್ತ್ವಾಷ್ಟ್ರಯಾಮಾಸ ದಾನವಾನ್ ।
ತಥೈವ ಸಮರೇ ರಾಜಂಸ್ತ್ವಾಷ್ಟ್ರಯಾಮಾಸ ಪಾಂಡವಾನ್ ॥೨೭॥

ಎಲೈ ರಾಜನೇ, ಸುರಪತಿಯಾದ ಇಂದ್ರನು ದಾನವರನ್ನು ಹೆದರಿಸಿದಂತೆ ಯುದ್ಧದಲ್ಲಿ ಭಗದತ್ತನು ಪಾಂಡವರಿಗೆ ಭಯವನ್ನು ಉಂಟುಮಾಡಿದನು.

ತೇನ ವಿದ್ರಾವ್ಯಮಾಣಾಸ್ತೇ ಪಾಂಡವಾಃ ಸರ್ವತೋದಿಶಮ್ ।
ತ್ರಾತಾರಂ ನಾಭ್ಯವಿಂದಂತ ಸ್ವೇಷ್ವನೀಕೇಷು ಭಾರತ ॥೨೮॥

ಎಲೈ ಭಾರತನೇ, ಅವನಿಂದ ಹೆದರಿಸಲ್ಪಟ್ಟು ದಿಕ್ಕು-ದಿಕ್ಕುಗಳಿಗೆ ಓಡುವ ಪಾಂಡವಯೋಧರಿಗೆ ಆಗ ತಮ್ಮ ಸೈನ್ಯದಲ್ಲಿ ಯಾವ ರಕ್ಷಕರೂ ದೊರೆಯಲಿಲ್ಲ.

ಭೈಮಸೇನಿಂ ರಥಸ್ಥಂ ತು ತತ್ರಾಪಶ್ಯಾಮ ಭಾರತ ।
ಶೇಷಾ ವಿಮನಸೋ ಭೂತ್ವಾ ಪ್ರಾದ್ರವಂತ ಮಹಾರಥಾಃ ॥೨೯॥

ಎಲೈ ಭಾರತನೇ, ಘಟೋತ್ಕಚನೊಬ್ಬನು ಅಲ್ಲಿ ರಥದಲ್ಲಿದ್ದುದನ್ನು ನಾವು ನೋಡಿದೆವು. ಉಳಿದ ಮಹಾರಥರು ಹೆದರಿ ಓಡಿಹೋದರು.

ನಿವೃತ್ತೇಷು ತು ಪಾಂಡೂನಾಂ ಪುನಃ ಸೈನ್ಯೇಷು ಭಾರತ ।
ಆಸೀತ್ ನಿಸ್ವಾನಕೋ ಘೋರಸ್ತವ ಸೈನ್ಯೇಷು ಸಂಯುಗೇ ॥೩೦॥

ಎಲೈ ಭಾರತನೇ, ಪಾಂಡವರ ಸೈನ್ಯಗಳು ಹೀಗೆ ಓಡಿಹೋದ ಮೇಲೆ ಯುದ್ಧದಲ್ಲಿ ನಿನ್ನ ಸೈನ್ಯದಲ್ಲಿ ಘೋರವಾದ ದೊಡ್ಡ ಹರ್ಷಶಬ್ದವು ಉಂಟಾಯಿತು.

ಘಟೋತ್ಕಚಸ್ತತೋ ರಾಜನ್ ಭಗದತ್ತಂ ಮಹಾರಣೇ ।
ಶರೈಃ ಪ್ರಚ್ಛಾದಯಾಮಾಸ ಮೇರುಂ ಗಿರಿಮಿವಾಂಬುದಃ ॥೩೧॥

ಎಲೈ ರಾಜನೇ, ಆಗ ಆ ಮಹಾಯುದ್ಧದಲ್ಲಿ ಘಟೋತ್ಕಚನು ಭಗದತ್ತನನ್ನು ಮೋಡವು ಮೇರುಪರ್ವತವನ್ನು ಮುಚ್ಚಿದಂತೆ ತನ್ನ ಬಾಣಗಳಿಂದ ಮುಚ್ಚಿದನು.

ನಿಹತ್ಯ ತಾನ್ ಶರಾನ್ ರಾಜಾ ರಾಕ್ಷಸಸ್ಯ ಧನುಶ್ಚ್ಯುತಾನ್ ।
ಭೈಮಸೇನಿಂ ರಣೇ ತೂರ್ಣಂ ಸರ್ವಮರ್ಮಸ್ವತಾಡಯತ್ ॥೩೨॥

ರಾಜನಾದ ಭಗದತ್ತನು ಘಟೋತ್ಕಚನ ಧನುಸ್ಸಿನಿಂದ ಹೊಮ್ಮಿದ ಆ ಬಾಣಗಳನ್ನು ನಿವಾರಿಸಿ ಘಟೋತ್ಕಚನನ್ನು ಶೀಘ್ರವಾಗಿ ಎಲ್ಲ ಮರ್ಮಗಳಲ್ಲಿಯೂ ಹೊಡೆದನು.

ಸ ತಾಡ್ಯಮಾನೋ ಬಹುಭಿಃ ಶರೈಃ ಸನ್ನತಪರ್ವಭಿಃ ।
ನ ವಿವ್ಯಥೇ ರಾಕ್ಷಸೇಂದ್ರೋ ಭಿದ್ಯಮಾನ ಇವಾಚಲಃ ॥೩೩॥

ಬಾಗಿದ ತುದಿಯುಳ್ಳ ಅನೇಕ ಬಾಣಗಳಿಂದ ಹೊಡೆಯಲ್ಪಟ್ಟರೂ ರಾಕ್ಷಸೇಂದ್ರನಾದ ಘಟೋತ್ಕಚನು ಸೀಳಲ್ಪಟ್ಟ ಪರ್ವತದಂತೆ ವ್ಯಥೆಯನ್ನು ಹೊಂದಲಿಲ್ಲ.

ತಸ್ಯ ಪ್ರಾಗ್ಜ್ಯೋತಿಷಃ ಕ್ರುದ್ಧೋಮರಾನ್ ಸ ಚತುರ್ದಶ ।
ಪ್ರೇಷಯಾಮಾಸ ಸಮರೇ ತಾಂಶ್ಚ ಚಿಚ್ಛೇದ ರಾಕ್ಷಸಃ ॥೩೪॥

ಪ್ರಾಗ್ಜ್ಯೋತಿಷಾಧಿಪತಿಯಾದ ಭಗದತ್ತನು ಕ್ರುದ್ಧನಾಗಿ ಅವನ ಮೇಲೆ ಹದಿನಾಲ್ಕು ತೋಮರಗಳನ್ನು ಪ್ರಯೋಗಿಸಿದನು. ರಾಕ್ಷಸನಾದ ಘಟೋತ್ಕಚನು ಅವುಗಳನ್ನೂ ಕ್ಷುರಿಸಿ ಹಾಕಿದನು.

ಸ ತಾಂಶ್ಚಿತ್ತ್ವಾ ಮಹಾಬಾಹುಸ್ತೋಮರಾನ್ ನಿಶಿತೈಃ ಶರೈಃ ।
ಭಗದತ್ತಂ ಚ ವಿವ್ಯಾಧ ಸಪ್ತತ್ಯಾ ಕಂಕಪತ್ರಿಭಿಃ ॥೩೫॥

ಮಹಾಬಾಹುವಾದ ಘಟೋತ್ಕಚನು ಹರಿತವಾದ ಬಾಣಗಳಿಂದ ಆ ತೋಮರಗಳನ್ನು ಕತ್ತರಿಸಿ ಕಂಕಪತ್ರಗಳಿಂದ ಕೂಡಿದ ಎಪ್ಪತ್ತು ಬಾಣಗಳನ್ನು ಭಗದತ್ತನ ಮೇಲೆ ಪ್ರಯೋಗಿಸಿದನು.

ತತಃ ಪ್ರಾಗ್ಜ್ಯೋತಿಷೋ ರಾಜನ್ ಪ್ರಹಸ್ಯೇವ ಭಾರತ ।
ತಸ್ಯಾಶ್ವಾಂಶ್ಚತುರಃ ಸಂಖ್ಯೇ ಪಾತಯಾಮಾಸ ಸಾಯಕೈಃ ॥೩೬॥

ಎಲೈ ರಾಜನೇ, ಭಾರತನೇ, ಆಗ ಪ್ರಾಗ್ಜ್ಯೋತಿಷನು ನಗುವವನಂತೆ ಯುದ್ಧದಲ್ಲಿ ತನ್ನ ಬಾಣಗಳಿಂದ ಘಟೋತ್ಕಚನ ರಥದ ನಾಲ್ಕು ಅಶ್ವಗಳನ್ನು ಉರುಳಿಸಿದನು.

ಸ ಹತಾಶ್ವೇ ರಥೇ ತಿಷ್ಠನ್ ರಾಕ್ಷಸೇಂದ್ರಃ ಪ್ರತಾಪವಾನ್ ।
ಶಕ್ತಿಂ ಚಿಕ್ಷೇಪ ವೇಗೇನ ಪ್ರಾಗ್ಜ್ಯೋತಿಷಗಜಂ ಪ್ರತಿ ॥೩೭॥

ಅಶ್ವರಹಿತವಾದ ರಥದಲ್ಲಿದ್ದ ಪ್ರತಾಪಶಾಲಿಯಾದ, ರಾಕ್ಷಸೇಂದ್ರನಾದ ಘಟೋತ್ಕಚನು ಪ್ರಾಗ್ಜ್ಯೋತಿಷನ ಆನೆಯಾದ ಸುಪ್ರತೀಕದ ಮೇಲೆ ವೇಗವಾಗಿ ಶಕ್ತಿಯನ್ನು ಪ್ರಯೋಗಿಸಿದನು.

ತಾಮಾಪತಂತೀಂ ಸಹಸಾ ಹೇಮದಂಡಾಂ ಸುವೇಗಿನಾಮ್ ।
ತ್ರಿಧಾ ಚಚ್ಛೇದ ನೃಪತಿಃ ಸಾ ವ್ಯಕೀರ್ಯತ ಮೇದಿನೀಮ್ ॥೩೮॥

ಹೇಮದಂಡ ಸಹಿತವಾಗಿ ವೇಗದಿಂದ ತನ್ನ ಕಡೆಗೆ ಬರುತ್ತಿದ್ದ ಆ ಶಕ್ತಿಯನ್ನು ರಾಜನು ಮೂರುಭಾಗವಾಗಿ ಕತ್ತರಿಸಿದನು. ಅದು ನಾಶವನ್ನು ಹೊಂದಿ ಭೂಮಿಯ ಮೇಲೆ ಬಿದ್ದಿತು.

ಶಕ್ತಿಂ ವಿನಿಹತಾಂ ದೃಷ್ಟ್ವಾ ಹೈಡಿಂಬಃ ಪ್ರಾದ್ರವದ್ ಭಯಾತ್ ।
ಯಥೇಂದ್ರಸ್ಯ ರಣಾತ್ ಪೂರ್ವಂ ನಮುಚಿರ್ದೈತ್ಯಸತ್ತಮಃ ॥೩೯॥

ಶಕ್ತಿಯು ವಿನಾಶವನ್ನು ಹೊಂದಿದುದನ್ನು ನೋಡಿ ಘಟೋತ್ಕಚನು ಇಂದ್ರನ ಜೊತೆಗೆ ಯುದ್ಧದಲ್ಲಿ ಹಿಂದೆ ದೈತ್ಯಶ್ರೇಷ್ಠನಾದ ನಮುಚಿಯು ಓಡಿಹೋದಂತೆ ಭಯದಿಂದ ಓಡಿಹೋದನು.

ತಂ ವಿಜಿತ್ಯ ರಣೇ ಶೂರಂ ವಿಕ್ರಾಂತಂ ಖ್ಯಾತಪೌರುಷಮ್ ।
ಅಜೇಯಂ ಸಮರೇ ರಾಜನ್ ಯಮೇನ ವರುಣೇನ ಚ ॥೪೦॥

ಪಾಂಡವೀಂ ಸಮರೇ ಸೇನಾಂ ಸಮ್ಮಮರ್ದ ಸಕುಂಜರಃ ।
ಯಥಾ ವನಗಜೋ ರಾಜನ್ ಮೃದ್ನಂಶ್ಚರತಿ ಪದ್ಮಿನೀಮ್ ॥೪೧॥

ಎಲೈ ರಾಜನೇ, ಶೂರನೂ, ಪರಾಕ್ರಮಶಾಲಿಯೂ, ವಿಖ್ಯಾತ ಪೌರುಷನೂ, ಯುದ್ಧದಲ್ಲಿ ಯಮನಿಗೂ ಮತ್ತು ವರುಣನಿಗೂ ಅಜೇಯನಾದವನೂ ಆದ ಘಟೋತ್ಕಚನನ್ನು ಯುದ್ಧದಲ್ಲಿ ಪರಾಭವಗೊಳಿಸಿ, ವನಗಜವು ಪದ್ಮಸರೋವರವನ್ನು ಕಲಕಿ ಓಡಾಡಿದಂತೆ ತನ್ನ ಗಜದ ಜೊತೆಯಲ್ಲಿ ಭಗದತ್ತನು ಪಾಂಡವರ ಸೈನ್ಯವನ್ನು ಮರ್ದಿಸಿದನು.

ಮದ್ರೇಶ್ವರಸ್ತು ಸಮರೇ ಯಮಾಭ್ಯಾಂ ಸಹ ಸಂಗತಃ ।
ಸ್ವಸ್ರೀಯೌ ಭಾದಯಾಂಚಕ್ರೇ ಶರೌಘೈಃ ಪಾಂಡುನಂದನೌ ॥೪೨॥

ಮದ್ರೇಶ್ವರನಾದ ಶಲ್ಯನು ಯುದ್ಧದಲ್ಲಿ ನಕುಲ-ಸಹದೇವರನ್ನು ಸಂಧಿಸಿ ತನ್ನ ಸೋದರಳಿಯಂದಿರೂ ಮತ್ತು ಪಾಂಡುಪುತ್ರರೂ ಆದ ಅವರನ್ನು ಬಾಣಗಳ ಸಮೂಹಗಳಿಂದ ಮುಚ್ಚಿಹಾಕಿದನು.

ಸಹದೇವಸ್ತು ಸಮರೇ ಮಾತುಲಂ ವೀಕ್ಷ್ಯ ಸಂಗತಮ್ ।
ಅವಾರಯಚ್ಛರೌಘೇಣ ಮೇಘೋ ಯದ್ವದ್ ದಿವಾಕರಮ್ ॥೪೩॥

ಸಹದೇವನಾದರೋ ತನ್ನ ಸೋದರಮಾವನು ಯುದ್ಧದಲ್ಲಿ ಎದುರಾದುದನ್ನು ನೋಡಿ ಮೋಡವು ಸೂರ್ಯನನ್ನು ಮುಚ್ಚಿದಂತೆ ಅವನನ್ನು ಬಾಣಗಳ ಸಮೂಹದಿಂದ ಮುಚ್ಚಿಹಾಕಿದನು.

ಛಾದ್ಯಮಾನಃ ಶರೌಘೇಣ ಹೃಷ್ಟರೂಪತರೋಽಭವತ್ ।
ತಯೋಶ್ಚಾಪ್ಯಭವತ್ ಪ್ರೀತಿರತುಲಾ ಮಾತೃಕಾರಣಾತ್ ॥೪೪॥

ಸಹದೇವನ ಬಾಣವರ್ಷದಿಂದ ಮುಚ್ಚಲ್ಪಟ್ಟ ಶಲ್ಯನು ಬಹಳ ಸಂತೋಷಗೊಂಡನು ಮತ್ತು ಅವರಿಬ್ಬರಿಗೂ ಸಹ ತಮ್ಮ ತಾಯಿಯ ಮೂಲಕವಾದ ಸಂಬಂಧದಿಂದ ಅವನಲ್ಲಿ ಅಸದೃಶವಾದ ಪ್ರೀತಿಯುಂಟಾಯಿತು.

ತತಃ ಪ್ರಹಸ್ಯ ಸಮರೇ ನಕುಲಸ್ಯ ಮಹಾರಥಃ ।
ಅಶ್ವಾನ್ ವೈ ಚತುರೋ ರಾಜಂಶ್ಚತುರ್ಭಿಃ ಸಾಯಕೋತ್ತಮೈಃ ।
ಪ್ರೇಷಯಾಮಾಸ ಸಮರೇ ಯಮಸ್ಯ ಸದನಂ ಪ್ರತಿ ॥೪೫॥

ಎಲೈ ರಾಜನೇ, ಅನಂತರ ಮಹಾರಥನಾದ ಶಲ್ಯನು ನಕ್ಕು ನಕುಲನ ರಥದ ನಾಲ್ಕು ಅಶ್ವಗಳನ್ನು ಶ್ರೇಷ್ಠವಾದ ನಾಲ್ಕು ಬಾಣಗಳಿಂದ ಯಮಪಟ್ಟಣಕ್ಕೆ ಕಳುಹಿಸಿದನು.

ಹತಾಶ್ವಾತ್ತು ರಥಾತ್ ತೂರ್ಣಮವಪ್ಲುತ್ಯ ಮಹಾರಥಃ ।
ಆರುರೋಹ ತತೋ ಯಾನಂ ಭ್ರಾತುರೇವ ಯಶಸ್ವಿನಃ ॥೪೬॥

ಮಹಾರಥನಾದ ನಕುಲನಾದರೋ ಶೀಘ್ರವಾಗಿ ಅಶ್ವರಹಿತವಾದ ತನ್ನ ರಥದಿಂದ ಕೆಳಗೆ ಹಾರಿ ಕೀರ್ತಿವಂತನಾದ ತನ್ನ ಸಹೋದರನ ರಥವನ್ನು ಏರಿದನು.

ಏಕಸ್ಥೌ ತು ರಣೇ ಶೂರೌ ದೃಢೇ ವಿಷ್ಪತ್ಯ ಕಾರ್ಮುಕೇ ।
ಮದ್ರರಾಜರಥಂ ಕ್ರುದ್ಧೌ ಛಾದಯಾಮಾಸತುಃ ಕ್ಷಣಾತ್ ॥೪೭॥

ಒಂದೇ ರಥದಲ್ಲಿ ನಿಂತ ಅವರಿಬ್ಬರೂ ತಮ್ಮ ದೃಢವಾದ ಧನುಸ್ಸುಗಳನ್ನು ಎಳೆದು ಒಂದು ಕ್ಷಣದಲ್ಲಿ ಮದ್ರರಾಜನಾದ ಶಲ್ಯನ ರಥವನ್ನು ಬಾಣಗಳಿಂದ ಮುಚ್ಚಿದರು.

ಸ ಚ್ಛಾದ್ಯಮಾನೋ ಬಹುಭಿಃ ಶರೈಃ ಸನ್ನತಪರ್ವಭಿಃ ।
ಸ್ವಸ್ರೀಯಾಭ್ಯಾಂ ನರವ್ಯಾಘ್ರೋ ನಾಕಂಪತ ಯಥಾಚಲಃ ।
ಪ್ರಹಸನ್ನಿವ ತಾಂ ಚಾಪಿ ಶರವೃಷ್ಟಿಂ ಜಘಾನ ಹ ॥೪೮॥

ತನ್ನ ಸೋದರಳಿಯಂದಿರ ಬಾಗಿದ ತುದಿಯುಳ್ಳ ಅನೇಕ ಬಾಣಗಳಿಂದ ಮುಚ್ಚಲ್ಪಟ್ಟರೂ ನರಶ್ರೇಷ್ಠನಾದ ಅವನು ಪರ್ವತದಂತೆ ಅಲುಗಾಡಲಿಲ್ಲ. ನಗುವವನಂತೆ ಆ ಬಾಣಗಳ ಮಳೆಯನ್ನೂ ಅವನು ವಿನಾಶಗೊಳಿಸಿದನು.

ಸಹದೇವಸ್ತತಃ ಕ್ರುದ್ಧಃ ಶರಮುದ್ಯಮ್ಯ ವೀರ್ಯವಾನ್ ।
ಮದ್ರರಾಜಮಭಪ್ರೇಕ್ಷ್ಯ ಪ್ರೇಷಯಾಮಾಸ ಭಾರತ ॥೪೯॥

ಎಲೈ ಭಾರತನೇ, ಆಗ ಪರಾಕ್ರಮಶಾಲಿಯಾದ ಸಹದೇವನು ಕ್ರೋಧಯುಕ್ತನಾಗಿ ಬಾಣವನ್ನು ಎತ್ತಿ ಮದ್ರರಾಜನ ಮೇಲೆ ಪ್ರಯೋಗಿಸಿದನು.

ಸ ಶರಃ ಪ್ರೇಷಿತಸ್ತೇನ ಗರುತ್ಮಾನಿವ ವೇಗವಾನ್ ।
ಮದ್ರರಾಜಂ ವಿನಿರ್ಭಿದ್ಯ ನಿಪಪಾತ ಮಹೀತಳೇ ॥೫೦॥

ಸಹದೇವನಿಂದ ಪ್ರಯೋಗಿಸಲ್ಪಟ್ಟ ವೇಗಶಾಲಿಯಾದ ಆ ಬಾಣವು ಗರುಡನಂತೆ ಎರಗಿ ಶಲ್ಯನನ್ನು ಭೇದಿಸಿ ಭೂತಳದಲ್ಲಿ ಬಿದ್ದಿತು.

ಸ ಗಾಢವಿದ್ಧೋ ವ್ಯಥಿತೋ ರಥೋಪಸ್ಥೇ ಮಹಾರಥಃ ।
ನಿಪಪಾದ ಮಹಾರಾಜ ಕಶ್ಮಲಂ ಚ ಜಗಾಮ ಹ ॥೫೧॥

ಎಲೈ ಮಹಾರಾಜನೇ, ಆ ಬಾಣದಿಂದ ಬಹಳವಾಗಿ ಗಾಯಗೊಂಡ ಮಹಾರಥನಾದ ಶಲ್ಯನು ವ್ಯಥೆಯಿಂದ ಕೂಡಿ ರಥದ ಪೀಠದಲ್ಲಿ ಕುಸಿದು ಮೂರ್ಛೆಯನ್ನು ಹೊಂದಿದನು.

ತಂ ವಿಸಂಜ್ಞಂ ನಿಪತಿತಂ ಸೂತಃ ಸಂಪ್ರೇಕ್ಷ್ಯ ಸಂಯುಗೇ ।
ಅಪೋವಾಹ ರಥೇನಾಜೌ ಯಮಾಭ್ಯಾಮಭಪೀಡಿತಮ್ ॥೫೨॥

ನಕುಲ-ಸಹದೇವರಿಂದ ಚೆನ್ನಾಗಿ ಪೀಡಿತನಾಗಿ ಯುದ್ಧದಲ್ಲಿ ಮೂರ್ಛೆಯನ್ನು ಹೊಂದಿ ಬಿದ್ದ ಅವನನ್ನು ನೋಡಿ ಅವನ ಸಾರಥಿಯು ತನ್ನ ರಥದಿಂದ ಅವನನ್ನು ರಣಭೂಮಿಯಿಂದ ದೂರಕ್ಕೆ ಕರೆದುಕೊಂಡು ಹೋದನು.

ದೃಷ್ಟ್ವಾ ಮದ್ರೇಶ್ವರರಥಂ ಧಾರ್ತರಾಷ್ಟ್ರಾಃ ಪರಾಙ್ಮುಖಮ್ ।
ಸರ್ವೇ ಏಮನಸೋ ಭೂತ್ವಾ ನೇದಮಸ್ತೀತ್ಯಚಿಂತಯನ್ ॥೫೩॥

ಮದ್ರರಾಜನಾದ ಶಲ್ಯನ ರಥವು ಹಿಂದಿರುಗುವುದನ್ನು ನೋಡಿದ ಧೃತರಾಷ್ಟ್ರ ಪುತ್ರರೆಲ್ಲರೂ ಬೇಸರವನ್ನು ಹೊಂದಿ ಇದು ಎಂದೂ ಸರಿಯಲ್ಲ ಎಂದು ಚಿಂತಿಸಿದರು.

ನಿರ್ಜಿತ್ಯ ಮಾತುಲಂ ಸಂಖ್ಯೇ ಮಾದ್ರೀಪುತ್ರೌ ಮಹಾರಥೌ ।
ದಧ್ಮತುರ್ಮುದಿತೌ ಶಂಖೌ ಸಿಂಹನಾದಂ ವಿನೇದತುಃ ॥೫೪॥

ಮಾದ್ರೀಪುತ್ರರಾದ ಮಹಾರಥರು ಯುದ್ಧದಲ್ಲಿ ತಮ್ಮ ಸೋದರಮಾವನನ್ನು ಪರಾಭವಗೊಳಿಸಿ ಸಂತೋಷಗೊಂಡು ತಮ್ಮ ಶಂಖಗಳನ್ನು ಊದಿ ಸಿಂಹನಾದವನ್ನು ಮಾಡಿದರು.

ಅಭಿದುದ್ರುವತುರ್ಹೃಷ್ಟೌ ತವ ಸೈನ್ಯಂ ವಿಶಾಂಪತೇ ।
ಯಥಾ ದೈತ್ಯಚಮೂಂ ರಾಜನ್ನಿಂದ್ರೋಪೇಂದ್ರಾವಿವಾಮರೌ ॥೫೫॥

ಎಲೈ ರಾಜನೇ, ದೇವತೆಗಳಾದ ಇಂದ್ರೋಪೇಂದ್ರರು ದೈತ್ಯರ ಸೈನ್ಯದ ಮೇಲೆ ಎರಗಿದಂತೆ ಸಂತೋಷದಿಂದ ನಿನ್ನ ಸೈನ್ಯದ ಮೇಲೆ ಎರಗಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಏಕೋನಾಶೀತಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಏಕೋನಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಎಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತನೆಯ ಅಧ್ಯಾಯ

ಯುಧಿಷ್ಠಿರನ ಪರಾಕ್ರಮ. ಕೃಪ-ಚೇಕಿತಾನನ ಯುದ್ಧ.
ಅಭಿಮನ್ಯುವಿನ ಪರಾಕ್ರಮ.

ಸಂಜಯಃ

ತತೋ ಯುಧಿಷ್ಠಿರೋ ರಾಜಾ ಮಧ್ಯಂ ಪ್ರಾಪ್ತೇ ದಿವಾಕರೇ ।
ಶ್ರುತಾಯುಷಮಭಿಪ್ರೇಕ್ಷ್ಯ ಚೋದಯಾಮಾಸ ವಾಜಿನಃ ॥೧॥

ಸಂಜಯ– ಅನಂತರ ಸೂರ್ಯನು ಆಕಾಶದ ಮಧ್ಯಕ್ಕೆ ಬರುತ್ತಿರಲು ಯುಧಿಷ್ಠಿರನು ಶ್ರುತಾಯುವನ್ನು ನೋಡಿ ತನ್ನ ಕುದುರೆಗಳನ್ನು ಪ್ರಚೋದಿಸಿದನು.

ಅಭ್ಯಧಾವತ್ ತತೋ ರಾಜಾ ಶ್ರುತಾಯುಷಮರಿಂದಮಮ್ ।
ವಿನಿಘ್ನನ್ ಸಾಯಕೈಸ್ತೀಕ್ಷ್ಣೈರ್ನವಭಿರ್ನತಪರ್ವಭಿಃ ॥೨॥

ಅನಂತರ ರಾಜನು ಬಾಗಿದ ತುದಿಯುಳ್ಳ ಒಂಬತ್ತು ತೀಕ್ಷ್ಣವಾದ ಬಾಣಗಳಿಂದ ಅರಿಂದಮನಾದ ಶ್ರುತಾಯುವನ್ನು ಹೊಡೆಯುತ್ತಾ ಅವನ ಕಡೆಗೆ ಧಾವಿಸಿದನು.

ಸ ಸಂವಾರ್ಯ ರಣೇ ರಾಜಾ ಪ್ರೇಷಿತಾನ್ ಧರ್ಮಸೂನುನಾ ।
ಶರಾನ್ ಸಪ್ತ ಮಹೇಷ್ವಾಸಃ ಕೌಂತೇಯಾಯ ಸಮರ್ಪಯತ್ ॥೩॥

ರಾಜನೂ, ಮಹಾಧನುರ್ಧಾರಿಯೂ ಆದ ಶ್ರುತಾಯುವು ಧರ್ಮರಾಜನು ಪ್ರಯೋಗಿಸಿದ ಬಾಣಗಳನ್ನು ನಿವಾರಿಸಿ ಧರ್ಮರಾಜನ ಮೇಲೆ ಏಳು ಬಾಣಗಳನ್ನು ಪ್ರಯೋಗಿಸಿದನು.

ತೇ ತಸ್ಯ ಕವಚಂ ಭಿತ್ತ್ವಾ ಪಪುಃ ಶೋಣಿತಮಾಹವೇ ।
ಅಸೂನಿವ ವಿಚಿನ್ವಂತೋ ದೇಹೇ ತಸ್ಯ ಮಹಾತ್ಮನಃ ॥೪॥

ಅವು ಆ ಮಹಾತ್ಮನ ದೇಹದಲ್ಲಿ ಪ್ರಾಣಗಳನ್ನು ಹುಡುಕುವಂತೆ ಅವನ ಕವಚವನ್ನು ಭೇದಿಸಿ ರಕ್ತವನ್ನು ಕುಡಿದವು.

ಪಾಂಡವಸ್ತು ಭೃಶಂ ವಿದ್ಧಸ್ತೇನ ರಾಜ್ಞಾ ಮಹಾತ್ಮನಾ ।
ರಣೇ ವರಾಹಕರ್ಣೇನ ರಾಜಾನಂ ಹೃದಿ ವಿವ್ಯಧೇ ॥೫॥

ಮಹಾಪ್ರಯತ್ನಶಾಲಿಯಾದ ರಾಜನಿಂದ ದೃಢವಾಗಿ ಗಾಯಗೊಂಡ ಧರ್ಮರಾಜನು ಯುದ್ಧದಲ್ಲಿ ವರಾಹಕರ್ಣವನ್ನು ಅವನ ಹೃದಯದಲ್ಲಿ ಪ್ರಯೋಗಿಸಿದನು.

ಅಥಾಪರೇಣ ಭಲ್ಲೇನ ಕೇತುಂ ತಸ್ಯ ಮಹಾತ್ಮನಃ ।
ರಥಶ್ರೇಷ್ಠೋ ರಥಾತ್ ತೂರ್ಣಂ ಭೂಮೌ ಪಾರ್ಥೋ ನ್ಯಪಾತಯತ್ ॥

ಅನಂತರ ರಥಶ್ರೇಷ್ಠನಾದ ಪಾರ್ಥನು ಇನ್ನೊಂದು ಭಲ್ಲದಿಂದ ಮಹಾತ್ಮನಾದ ಶ್ರುತಾಯುವಿನ ರಥದ ಧ್ವಜವನ್ನು ಭೂಮಿಯಲ್ಲಿ ಕೆಡವಿದನು.

ಕೇತುಂ ನಿಪತಿತಂ ದೃಷ್ಟ್ವಾ ಶ್ರುತಾಯುಃ ಸ ತು ಪಾರ್ಥಿವಃ ।
ಪಾಂಡವಂ ವಿಶಿಖೈಸ್ತೀಕ್ಷ್ಣೈ ರಾಜನ್ ವಿವ್ಯಾಧ ಸಪ್ತಭಿಃ ॥೭॥

ಎಲೈ ರಾಜನೇ, ತನ್ನ ರಥದ ಧ್ವಜವು ಭೂಮಿಯಲ್ಲಿ ಬಿದ್ದುದನ್ನು ನೋಡಿದ ರಾಜನಾದ ಆ ಶ್ರುತಾಯುವು ತೀಕ್ಷ್ಣವಾದ ಏಳು ಬಾಣಗಳಿಂದ ಧರ್ಮರಾಜನನ್ನು ಗಾಯಗೊಳಿಸಿದನು.

ತತಃ ಕ್ರೋಧಾತ್ ಪ್ರಜಜ್ವಾಲ ಧರ್ಮಪುತ್ರೋ ಯುಧಿಷ್ಠಿರಃ ।
ಯಥಾ ಯುಗಾಂತೇ ಭೂತಾನಿ ಧಕ್ಷ್ಯನ್ನಿವ ಹುತಾಶನಃ ॥೮॥

ಧರ್ಮರಾಜನು ಯುಗಾಂತದಲ್ಲಿ ಪ್ರಾಣಿಗಳನ್ನು ದಹಿಸುವ ಅಗ್ನಿಯಂತೆ ಕ್ರೋಧದಿಂದ ಉರಿದನು.

ಕ್ರುದ್ಧಂ ತು ಪಾಂಡವಂ ದೃಷ್ಟ್ವಾ ದೇವಗಂಧರ್ವರಾಕ್ಷಸಾಃ ।
ಪ್ರವಿವ್ಯಥುರ್ಮಹಾರಾಜ ವ್ಯಾಕುಲಂ ಚಾಪ್ಯಭೂಜ್ಜಗತ್ ॥೯॥

ಎಲೈ ಮಹಾರಾಜನೇ, ಕ್ರೋಧಗೊಂಡ ಪಾಂಡುಪುತ್ರನಾದ ಯುಧಿಷ್ಠಿರನನ್ನು ನೋಡಿ ದೇವ-ಗಂಧರ್ವ-ರಾಕ್ಷಸರು ಬಹಳವಾದ ವ್ಯಥೆಯನ್ನು ಹೊಂದಿದರು. ಜಗತ್ತು ವ್ಯಾಕುಲವಾಯಿತು.

ಸರ್ವೇಷಾಂ ಚೈವ ಭೂತಾನಾಮಿದಮಾಸೀನ್ಮನೋಗತಮ್ ।
ತ್ರೀನ್ ಲೋಕಾನದ್ಯ ಸಂಕ್ರುದ್ಧೋ ನೃಪೋಽಯಂ ಧಕ್ಷ್ಯತೀತಿ ವೈ ॥

ಎಲ್ಲ ಪ್ರಾಣಿಗಳ ಮನಸ್ಸಿನಲ್ಲಿ ಈ ದಿನ ಕೋಪಗೊಂಡ ಈ ರಾಜನು ಮೂರು ಲೋಕಗಳನ್ನು ಸುಡುವನು ಎಂಬ ಭಾವನೆಯು ಮೂಡಿತು.

ಋಷಯಶ್ಚೈವ ದೇವಾಶ್ಚ ಚಕ್ರುಃ ಸ್ವಸ್ತ್ಯಯನಂ ಮಹತ್ ।
ಲೋಕಾನಾಂ ನೃಪ ಶಾಂತ್ಯರ್ಥಂ ಕ್ರೋಧಿತೇ ಪಾಂಡವೇ ತದಾ ॥೧೧॥

ಎಲೈ ರಾಜನೇ, ಯುಧಿಷ್ಠಿರನು ಕೋಪಗೊಳ್ಳುತ್ತಿರಲು ಆಗ ಋಷಿಗಳು ಮತ್ತು ದೇವತೆಗಳು ಲೋಕಕ್ಕೆ ಶಾಂತಿಯುಂಟಾಗಲಿ ಎಂದು ದೊಡ್ಡ ಸ್ತ್ರೀಯನ್ನು ಆಶಂಸಿಸಿದರು.

ಸ ಚ ಕ್ರೋಧಸಮಾವಿಷ್ಟಃ ಸೃಕ್ಕಿಣೀ ಪರಿಲೇಲಿಹನ್ ।
ದಧಾರಾತ್ಮವಪುರ್ಘೋರಂ ಯುಗಾಂತಾದಿತ್ಯಸನ್ನಿಭಮ್ ॥೧೨॥

ಯುಧಿಷ್ಠಿರನಾದರೋ ಯುಗಾಂತ ಕಾಲದ ಆದಿತ್ಯನಂತೆ ಘೋರವಾದ ಶರೀರವನ್ನು ಧರಿಸಿ, ಕಟಿಬಾಯನ್ನು ಸವರಿಕೊಳ್ಳುತ್ತಾ ಕ್ರೋಧಪೂರಿತನಾಗಿದ್ದನು.

ತತಃ ಸರ್ವಾಣಿ ಸೈನ್ಯಾನಿ ತಾವಕಾನಿ ವಿತಾಂಪತೇ ।
ನಿರಾಶಾನ್ಯಭವಂಸ್ತತ್ರ ಜೀವಿತಂ ಪ್ರತಿ ಭಾರತ ॥೧೩॥

ಎಲೈ ರಾಜನೇ, ಭಾರತನೇ, ಆಗ ನಿನ್ನ ಸೈನ್ಯವೆಲ್ಲವೂ ತಮ್ಮ ಜೀವಿತದ ವಿಷಯದಲ್ಲಿ ನಿರಾಶೆಯನ್ನು ಹೊಂದಿದವು.

ಸ ತು ಧೈರ್ಯೇಣ ತಂ ಕೋಪಂ ಸನ್ನಿವಾರ್ಯ ಮಹಾಯತಾಃ ।
ಶ್ರುತಾಯುಷಃ ಪ್ರಚಿಚ್ಛೇದ ಮುಷ್ಟಿದೇಶೇ ಮಹದ್ಧನುಃ ॥೧೪॥

ಮಹಾಕೀರ್ತಿವಂತನಾದ ಯುಧಿಷ್ಠಿರನು ಧೈರ್ಯದಿಂದ ತನ್ನ ಕೋಪವನ್ನು ತಡೆದುಕೊಂಡು ಶ್ರುತಾಯುವಿನ ದೊಡ್ಡ ಧನುಸ್ಸನ್ನು ಮುಷ್ಟಿದೇಶದಲ್ಲಿ ಕತ್ತರಿಸಿದನು.

ಅಕ್ಷೈಸಂ ಭಿನ್ನಧನ್ವಾನಂ ನಾರಾಚೇನ ಸ್ತನಾಂತರೇ ।
ನಿರ್ಬಿಭೇದ ರಣೇ ರಾಜಾ ಸರ್ವಸೈನ್ಯಸ್ಯ ಪತ್ಯತಃ ॥೧೫॥

ಅನಂತರ ಶ್ರುತಾಯುವಿನ ಧನುಸ್ಸು ಕತ್ತರಿಸಲ್ಪಡುತ್ತಿರಲು ರಾಜನಾದ ಯುಧಿಷ್ಠಿರನು ಎಲ್ಲ ಸೈನ್ಯವು ನೋಡುತ್ತಿರುವಂತೆಯೇ ಒಂದು ನಾರಾಚದಿಂದ ಅವನ ಸ್ತನಗಳ ಮಧ್ಯಭಾಗವನ್ನು ಭೇದಿಸಿದನು.

ಸತ್ವರಂ ಚರಣೇ ರಾಜಂಸ್ತಸ್ಯ ವಾಹಾನ್ ಮಹಾತ್ಮನಃ ।
ನಿಜಘಾನ ಶರೈಃ ಕ್ಷಿಪ್ರಂ ಸೂತಂ ಚ ಸುಮಹಾಬಲಃ ॥೧೬॥

ಎಲೈ ರಾಜನೇ, ಅತ್ಯಂತ ಬಲಶಾಲಿಯಾದ ಯುಧಿಷ್ಠಿರನು ಯುದ್ಧದಲ್ಲಿ ಶೀಘ್ರವಾಗಿ ಮಹಾತ್ಮನಾದ ಶ್ರುತಾಯುವಿನ ರಥದ ಅಶ್ವಗಳನ್ನು ಮತ್ತು ಸಾರಥಿಯನ್ನು ಕೊಂದನು.

ಹತಾಶ್ವಂ ತು ರಥಂ ತ್ಯಕ್ತ್ವಾ ದೃಷ್ಟ್ವಾ ರಾಜ್ಞಸ್ತು ಪೌರುಷಮ್ ।
ಏಪ್ರದುದ್ರಾವ ವೇಗೇನ ಶ್ರುತಾಯುಃ ಸಮರೇ ತದಾ ॥೧೭॥

ಆಗ ಯುದ್ಧದಲ್ಲಿ ರಾಜನ ಪರಾಕ್ರಮವನ್ನು ನೋಡಿ ರಥಾಶ್ವಗಳು ನಾಶ ಹೊಂದಿದ ತನ್ನ ರಥವನ್ನು ಬಿಟ್ಟು ಶೀಘ್ರವಾಗಿ ಶ್ರುತಾಯುವು ಯುದ್ಧದಿಂದ ಓಡಿಹೋದನು.

ತಸ್ಮಿನ್ ಜಿತೇ ಮಹೇಷ್ವಾಸೇ ಧರ್ಮಪುತ್ರೇಣ ಸಂಯುಗೇ ।
ದುರ್ಯೋಧನಬಲಂ ರಾಜನ್ ಸರ್ವಮಾಸೀತ್ ಪರಾಙ್ಮುಖಮ್ ॥೧೮॥

ಎಲೈ ರಾಜನೇ, ಮಹಾಧನುರ್ಧಾರಿಯಾದ ಅವನು ಯುದ್ಧದಲ್ಲಿ ಯುಧಿಷ್ಠಿರನಿಂದ ಪರಾಜಿತನಾಗುತ್ತಿರಲು ದುರ್ಯೋಧನನ ಸೈನ್ಯವೆಲ್ಲವೂ ಯುದ್ಧದಿಂದ ವಿಮುಖವಾಯಿತು.

ಏವಮೃತ್ವಾ ಮಹಾರಾಜ ಧರ್ಮಪುತ್ರೋ ಯುಧಿಷ್ಠಿರಃ ।
ವ್ಯಾತ್ತಾನನೋ ಯಥಾ ಕಾಲಸ್ತವ ಸೈನ್ಯಂ ಜಘಾನ ಹ ॥೧೯॥

ಎಲೈ ಮಹಾರಾಜನೇ, ಧರ್ಮಪುತ್ರನಾದ ಯುಧಿಷ್ಠಿರನು ಈ ಕಾರ್ಯವನ್ನು ಮಾಡಿ ಬಾಯ್ತೆರೆದ ಮೃತ್ಯುವಿನಂತೆ ನಿನ್ನ ಸೈನ್ಯವನ್ನು ಕೊಂದನು.

ಚೇಕಿತಾನಸ್ತು ವಾರ್ಷ್ಣೇಯೋ ಗೌತಮಂ ರಥಿನಾಂ ವರಮ್ ।
ಪ್ರೇಕ್ಷತಾಂ ಸರ್ವಸೈನ್ಯಾನಾಂ ಛಾದಯಾಮಾಸ ಸಾಯಕೈಃ ॥೨೦॥

ವೃಷ್ಣಿಕುಲದಲ್ಲಿ ಜನಿಸಿದ ಚೇಕಿತಾನನು ಸರ್ವಸೈನ್ಯಗಳು ನೋಡುತ್ತಿರುವಂತೆಯೇ, ಶ್ರೇಷ್ಠರಾದ ಕೃಪರನ್ನು ಬಾಣಗಳಿಂದ ಮುಚ್ಚಿಹಾಕಿದನು.

ಸನ್ನಿವಾರ್ಯ ಶರಾಂಸ್ತಾಂಸ್ತು ಕೃಪಃ ಶಾರದ್ವತೋ ಯುಧಿ ।
ಚೇಕಿತಾನಂ ರಣೇ ಯತ್ತಂ ರಾಜನ್ ವಿವ್ಯಾಧ ಪತ್ರಿಭಿಃ ॥೨೧॥

ಎಲೈ ರಾಜನೇ, ಶರದ್ವತರ ಪುತ್ರರಾದ ಕೃಪಾಚಾರ್ಯರು ಯುದ್ಧದಲ್ಲಿ ಚೇಕಿತಾನನು ಪ್ರಯೋಗಿಸಿದ ಆ ಬಾಣಗಳನ್ನು ನಿವಾರಿಸಿ ಪತ್ರವುಳ್ಳ ಬಾಣಗಳನ್ನು ಅವನ ಮೇಲೆ ಪ್ರಯೋಗಿಸಿದರು.

ಅಥಾಪರೇಣ ಭಲ್ಲೇನ ಧನುಶ್ಚಿಚ್ಛೇದ ಮಾರಿಷ ।
ಸಾರಥಿಂ ಚಾಸ್ಯ ಸಮರೇ ಕ್ಷಿಪ್ರಹಸ್ತೋ ನ್ಯಪಾತಯತ್ ।
ಹಯಾಂಶ್ಚಾಸ್ಯಾವಧೀದ್ ರಾಜನ್ನುಭೌ ಚ ಪಾರ್ಷ್ಣಿಸಾರಥೀ ॥೨೨॥

ಎಲೈ ಪೂಜ್ಯನೇ, ಅನಂತರ ಇನ್ನೊಂದು ಭಲ್ಲದಿಂದ ಅವನ ಧನುಸ್ಸನ್ನು ಕತ್ತರಿಸಿದರು. ಕ್ಷಿಪ್ರಹಸ್ತರಾದ ಅವರು ಯುದ್ಧದಲ್ಲಿ ಅವನ ಸಾರಥಿಯನ್ನೂ ನೆಲಕ್ಕೆ ಉರುಳಿಸಿದರು. ಎಲೈ ರಾಜನೇ, ಅವನ ರಥದ ಅಶ್ವಗಳನ್ನು ಮತ್ತು ಪಾರ್ಶ್ವದ ಇಬ್ಬರು ಸಾರಥಿಗಳನ್ನು ಕೊಂದರು.

ಸೋಽವಪ್ಲುತ್ಯ ರಥಾತ್ ತೂರ್ಣಂ ಗದಾಂ ಜಗ್ರಾಹ ಸಾತ್ವತಃ ।
ಸ ತಯಾ ವೀರಘಾತಿನ್ಯಾ ಗದಯಾ ಗದಿನಾಂ ವರಃ ।
ಗೌತಮಸ್ಯ ಹಯಾನ್ ಹತ್ವಾ ಸಾರಥಿಂ ಚ ನ್ಯಪಾತಯತ್ ॥೨೩॥

ಸಾತ್ವತ ಕುಲಪ್ರಸೂತನಾದ ಚೇಕಿತಾನನು ರಥದಿಂದ ಶೀಘ್ರವಾಗಿ ಕೆಳಗೆ ಹಾರಿ ಗದೆಯನ್ನು ತೆಗೆದುಕೊಂಡನು. ಗದಾಧಾರಿಗಳಲ್ಲಿ ಶ್ರೇಷ್ಠನಾದ ಅವನು ವೀರರನ್ನು ಸಂಹರಿಸುವ ಆ ಗದೆಯಿಂದ ಕೃಪಾಚಾರ್ಯರ ರಥಾಶ್ವಗಳನ್ನು ಮತ್ತು ಸಾರಥಿಯನ್ನು ಹೊಡೆದು ಉರುಳಿಸಿದನು.

ಭೂಮಿಷ್ಠೋ ಗೌತಮಸ್ತಸ್ಯ ಶರಾಂಶ್ಚಿಕ್ಷೇಪ ಷೋಡಶ ।
ತೇ ಶರಾಃ ಸಾತ್ವತಂ ಭಿತ್ತ್ವಾ ಪ್ರಾವಿಶಂತ ಧರಾತಲಮ್ ॥೨೪॥

ಭೂಮಿಯ ಮೇಲೆ ನಿಂತ ಕೃಪಾಚಾರ್ಯರು ಅವನ ಮೇಲೆ ಹದಿನಾರು ಬಾಣಗಳನ್ನು ಪ್ರಯೋಗಿಸಿದರು. ಆ ಬಾಣಗಳು ಸಾತ್ವತನಾದ ಅವನನ್ನು ಭೇದಿಸಿ ಭೂಮಿಯಲ್ಲಿ ಇಳಿದವು.

ಚೇಕಿತಾನಸ್ತತಃ ಕ್ರುದ್ಧಃ ಪುನಶ್ಚಿಕ್ಷೇಪ ತಾಂ ಗದಾಮ್ ।
ಗೌತಮಸ್ಯ ವಧಾಕಾಂಕ್ಷೀ ವೃತ್ರಸ್ಯೇವ ಪುರಂದರಃ ॥೨೫॥

ಚೇಕಿತಾನನು ಆಗ ಬಹಳ ಕೋಪಗೊಂಡು ಇಂದ್ರನು ವೃತ್ರಾಸುರನನ್ನು ಕೊಲ್ಲಲು ಬಯಸಿದಂತೆ ಕೃಪರನ್ನು ಕೊಲ್ಲಲು ಬಯಸಿ ಆ ಗದೆಯನ್ನು ಪುನಃ ಅವರ ಮೇಲೆ ಎಸೆದನು.

ತಾಮಾಪತಂತೀಂ ವಿಮಲಾಮಶ್ಮಗರ್ಭಾಂ ಮಹಾಗದಾಮ್ ।
ಶರೈರನೇಕಸಾಹಸ್ರೈರ್ವಾರಯಾಮಾಸ ಗೌತಮಃ ॥೨೬॥

ತಮ್ಮ ಕಡೆಗೆ ಬರುತ್ತಿದ್ದ, ಶಿಲಾಗರ್ಭವನ್ನು ಹೊಂದಿದ ಆ ದೊಡ್ಡ ಗದೆಯನ್ನು ಕೃಪರು ಅನೇಕ ಸಹಸ್ರ ಬಾಣಗಳನ್ನು ಪ್ರಯೋಗಿಸಿ ನಿವಾರಿಸಿಕೊಂಡರು.

ಚೇಕಿತಾನಸ್ತತಃ ಖಡ್ಗಂ ಕೋಶಾದುದ್ಧೃತ್ಯ ಭಾರತ ।
ಲಾಘವಂ ಪರಮಾಸ್ಥಾಯ ಗೌತಮಂ ಸಮುಪಾದ್ರವತ್ ॥೨೭॥

ಎಲೈ ಭಾರತನೇ, ಅನಂತರ ಚೇಕಿತಾನನು ಒರೆಯಿಂದ ಖಡ್ಗವನ್ನು ಹಿರಿದು ಬಹಳ ವೇಗವನ್ನು ಆಶ್ರಯಿಸಿ ಕೃಪರ ಕಡೆಗೆ ಓಡಿಬಂದನು.

ಗೌತಮೋಽಪಿ ಧನುಸ್ತ್ಯಕ್ತ್ವಾ ಪ್ರಗೃಹ್ಯಾಸಿಂ ಸುಸಂಶಿತಮ್ ।
ವೇಗೇನ ಮಹತಾ ರಾಜಂಶ್ಚೇಕಿತಾನಮುಪಾದ್ರವತ್ ॥೨೮॥

ಎಲೈ ರಾಜನೇ, ಕೃಪರೂ ಸಹ ಧನುಸ್ಸನ್ನು ಬಿಟ್ಟು ಬಹಳ ತೀಕ್ಷ್ಣವಾದ ಖಡ್ಗವನ್ನು ಹಿಡಿದು, ಬಹಳ ವೇಗದಿಂದ ಚೇಕಿತಾನನ ಕಡೆಗೆ ಧಾವಿಸಿದರು.

ತಾವುಭೌ ಬಲಸಂಪನ್ನೌ ನಿಸ್ತ್ರಿಂಶವರಧಾರಿಣೌ ।
ನಿಸ್ತ್ರಿಂಶಾಭ್ಯಾಂ ಸುತೀಕ್ಷ್ಣಾಭ್ಯಾಮನ್ಯೋನ್ಯಂ ಸಂತತಕ್ಷತುಃ ॥೨೯॥

ಬಲಸಂಪನ್ನರಾಗಿ ಶ್ರೇಷ್ಠವಾದ ಖಡ್ಗವನ್ನು ಹಿಡಿದ ಅವರಿಬ್ಬರು ತೀಕ್ಷ್ಣವಾದ ತಮ್ಮ ಖಡ್ಗಗಳಿಂದ ಪರಸ್ಪರವಾಗಿ ಗಾಯಗೊಳಿಸಿದರು.

ನಿಸ್ತ್ರಿಂಶವೇಗಾಭಿಹತೌ ತತಸ್ತೌ ಪುರುಷರ್ಷಭೌ ।
ಧರಣೀಂ ಸಮನುಪ್ರಾಪ್ತೌ ಸರ್ವಭೂತನಿಷೇವಿತಾಮ್ ।
ಮೂರ್ಛಯಾಭಿಪರೀತಾಂಗೌ ವ್ಯಾಯಾಮೇನ ಚ ಮೋಹಿತೌ ॥೩೦॥

ಆ ಇಬ್ಬರು ಪುರುಷಶ್ರೇಷ್ಠರು ಖಡ್ಗದ ಪ್ರಹಾರಗಳಿಗೆ ತುತ್ತಾಗಿ ಸರ್ವಪ್ರಾಣಿಗಳಿಂದ ಸೇವಿತವಾದ ಭೂಮಿಯ ಮೇಲೆ ಬಿದ್ದು ಆಯಾಸದಿಂದಲೂ ಮೂರ್ಛಿತರಾಗಿ ಪ್ರಜ್ಞೆಯನ್ನು ಕಳೆದುಕೊಂಡರು.

ತತೋಽಭ್ಯಧಾವದ್ ವೇಗೇನ ಕರಕರ್ಷಃ ಸುಹೃತ್ತಯಾ ।
ಚೇಕಿತಾನಂ ತಥಾಭೂತಂ ದೃಷ್ಟ್ವಾ ಸಮರದುರ್ಮದಮ್ ।
ರಥಮಾರೋಪಯಚ್ಚೈನಂ ಸರ್ವಸೈನ್ಯಸ್ಯ ಪಶ್ಯತಃ ॥೩೧॥

ಯುದ್ಧದುರ್ಮದನಾದ ಚೇಕಿತಾನನು ಅಂತಹ ಅವಸ್ಥೆಯನ್ನು ಹೊಂದಿದುದನ್ನು ನೋಡಿ ಅವನ ಮಿತ್ರನಾದ ಕರಕರ್ಷನು ವೇಗವಾಗಿ ಅವನ ಕಡೆಗೆ ಧಾವಿಸಿ ಎಲ್ಲ ಸೈನ್ಯವು ನೋಡುತ್ತಿರುವಂತೆಯೇ ಅವನನ್ನು ತನ್ನ ರಥದಲ್ಲಿ ಏರಿಸಿದನು.

ತಥೈವ ಶಕುನಿಃ ಶೂರಃ ಸ್ಯಾಲಸ್ತವ ವಿಶಾಂಪತೇ ।
ಆರೋಪಯದ್ ರಥಂ ತೂರ್ಣಂ ಗೌತಮಂ ರಥಿನಾಂ ವರಮ್ ॥

ಎಲೈ ರಾಜನೇ, ನಿನ್ನ ಭಾವಮೈದುನನೂ ಮತ್ತು ಶೂರನೂ ಆದ ಶಕುನಿಯು ಶೀಘ್ರವಾಗಿ ಕೃಪರ ಬಳಿಗೆ ಬಂದು ರಥಿಶ್ರೇಷ್ಠರಾದ ಅವರನ್ನು ತನ್ನ ರಥದಲ್ಲಿ ಏರಿಸಿದನು.

ಸೌಮದತ್ತಿಂ ತಥಾ ಕ್ರುದ್ಧೋ ಧೃಷ್ಟಕೇತುರ್ಮಹಾಬಲಃ ।
ನವತ್ಯಾ ಸಾಯಕೈಃ ಕ್ಷಿಪ್ರಂ ರಾಜನ್ ವಿವ್ಯಾಧ ವಕ್ಷಸಿ ॥೩೩॥

ಎಲೈ ರಾಜನೇ, ಇನ್ನೊಂದು ಕಡೆ ಮಹಾಬಲನಾದ ಧೃಷ್ಟಕೇತುವು ಕ್ರುದ್ಧನಾಗಿ ಭೂರಿಶ್ರವನನ್ನು ಒಂಬತ್ತು ಬಾಣಗಳಿಂದ ಶೀಘ್ರವಾಗಿ ಅವನ ವಕ್ಷಸ್ಥಲದಲ್ಲಿ ಗಾಯಗೊಳಿಸಿದನು.

ಸೌಮದತ್ತಿರುರಃಸ್ಥೈರ್ತೈರ್ಭೃಶಂ ಬಾಣೈರಶೋಭತ ।
ಮಧ್ಯಂದಿನೇ ಮಹಾರಾಜ ರಶ್ಮಿಭಸ್ತಪನೋ ಯಥಾ ॥೩೪॥

ತನ್ನ ವಕ್ಷಸ್ಥಲದಲ್ಲಿ ನೆಟ್ಟ ಆ ಬಾಣಗಳಿಂದ ಭೂರಿಶ್ರವನು ಮಧ್ಯಾಹ್ನ ಕಾಲದಲ್ಲಿ ಕಿರಣಗಳಿಂದ ಕೂಡಿದ ಸೂರ್ಯನಂತೆ ಶೋಭಿಸಿದನು.

ಭೂರಿಶ್ರವಾಸ್ತು ಸಮರೇ ಧೃಷ್ಟಕೇತುಂ ಮಹಾರಥಮ್ ।
ಹತಸೂತಹಯಂ ಚಕ್ರೇ ವಿರಥಂ ಸಾಯಕೋತ್ತಮೈಃ ॥೩೫॥

ಭೂರಿಶ್ರವನಾದರೋ ಯುದ್ಧದಲ್ಲಿ ಮಹಾರಥನಾದ ಧೃಷ್ಟಕೇತುವಿನ ರಥದ ಸಾರಥಿಯನ್ನು ಮತ್ತು ಅಶ್ವಗಳನ್ನು ತನ್ನ ಶ್ರೇಷ್ಠವಾದ ಬಾಣಗಳಿಂದ ಕೊಂದು ಅವನನ್ನು ರಥಹೀನನನ್ನಾಗಿ ಮಾಡಿದನು.

ವಿರಥಂ ಚೈನಮಾಲೋಕ್ಯ ಹತಾಶ್ವಂ ಹತಸಾರಥಿಮ್ ।
ಮಹತಾ ಶರವರ್ಷೇಣ ಛಾದಯಾಮಾಸ ಸಂಯುಗೇ ॥೩೬॥

ಅವನ ರಥದ ಅಶ್ವಸಾರಥಿಗಳು ಹತರಾಗಿ, ಅವನು ರಥಹೀನನಾದುದನ್ನು ನೋಡಿ ಬಾಣಗಳ ದೊಡ್ಡ ಮಳೆಯಿಂದ ಯುದ್ಧದಲ್ಲಿ ಅವನನ್ನು ಮುಚ್ಚಿಹಾಕಿದನು.

ಸ ಚ ತಂ ರಥಮುತ್ಸೃಜ್ಯ ಧೃಷ್ಟಕೇತುರ್ಮಹಾಮನಾಃ ।
ಆರುರೋಹ ತತೋ ವಾಹಂ ಶತಾನೀಕಸ್ಯ ಮಾರಿಷ ॥೩೭॥

ಎಲೈ ಪೂಜ್ಯನೇ, ಧೈರ್ಯಶಾಲಿಯಾದ ಧೃಷ್ಟಕೇತುವು ತನ್ನ ಆ ರಥವನ್ನು ಬಿಟ್ಟು ಶತಾನೀಕನ ರಥವನ್ನು ಏರಿದನು.

ಚಿತ್ರಸೇನೋ ವಿಕರ್ಣಶ್ಚ ರಾಜನ್ ದುರ್ಮರ್ಷಣಸ್ತಥಾ ।
ರಥಿನೋ ಹೇಮಸನ್ನಾಹಾಃ ಸೌಭದ್ರಮಭಿದುದ್ರುವುಃ ॥೩೮॥

ಎಲೈ ರಾಜನೇ, ಇನ್ನೊಂದು ಕಡೆ ರಥಿಗಳಾದ ಚಿತ್ರಸೇನ, ವಿಕರ್ಣ ಮತ್ತು ದುರ್ಮರ್ಷಣನು ಸುವರ್ಣಾಲಂಕೃತ ಸನ್ನಾಹಗಳಿಂದ ಕೂಡಿದವರಾಗಿ ಅಭಿಮನ್ಯುವಿನ ಮೇಲೆ ಧಾವಿಸಿ ಹೋದರು.

ಅಭಿಮನ್ಯೋಸ್ತತಸ್ತೈಸ್ತು ಘೋರಂ ಯುದ್ಧಮವರ್ತತ ।
ಶರೀರಸ್ಯ ಯಥಾ ರಾಜನ್ ವಾತಪಿತ್ತಕಫೈಃ ಪ್ರಭುಃ ॥೩೯॥

ಎಲೈ ರಾಜನೇ, ಶರೀರವು ವಾತ-ಪಿತ್ತ-ಕಫಗಳ ಜೊತೆಯಲ್ಲಿ ಹೋರಾಡಿದಂತೆ ಅಭಿಮನ್ಯುವಿಗೂ ಮತ್ತು ನಿನ್ನ ಮೂರು ಪುತ್ರರಿಗೂ ಘೋರವಾದ ಯುದ್ಧವು ನಡೆಯಿತು.

ವಿರಥಾಂಸ್ತವ ಪುತ್ರಾಂಸ್ತು ಕೃತ್ವಾ ರಾಜನ್ ಮಹಾಹವೇ ।
ನ ಜಘಾನ ನರವ್ಯಾಘ್ರಃ ಸ್ಮರನ್ ಭೀಮವಚಸ್ತದಾ ॥೪೦॥

ಎಲೈ ರಾಜನೇ, ನರಶ್ರೇಷ್ಠನಾದ ಅಭಿಮನ್ಯುವು ಆ ಮಹಾಯುದ್ಧದಲ್ಲಿ ನಿನ್ನ ಪುತ್ರರನ್ನು ವಿರಥರನ್ನಾಗಿ ಮಾಡಿ (ಧೃತರಾಷ್ಟ್ರ ಪುತ್ರರೆಲ್ಲರನ್ನೂ ತಾನೇ ಕೊಲ್ಲುವೆನೆಂಬ) ಭೀಮಸೇನನ ಪ್ರತಿಜ್ಞೆಯನ್ನು ಸ್ಮರಿಸಿ ಅವರನ್ನು ಕೊಲ್ಲದೆ ಬಿಟ್ಟನು.

ತತೋ ರಾಜ್ಞಾಂ ಬಹುಶತೈರ್ಗಜಾಶ್ವರಥಯಾಯಿಭಿಃ ।
ಸಂವೃತಂ ಸಮರೇ ಭೀಷ್ಮಂ ದೇವೈರಪಿ ದುರಾಸದಮ್ ॥೪೧॥

ಪ್ರಯಾಂತಂ ಶೀಘ್ರಮುದ್ವೀಕ್ಷ್ಯ ಪರಿತ್ರಾತುಂ ಸುತಾಂಸ್ತವ ।
ಅಭಿಮನ್ಯುಂ ಸಮುದ್ದಿಶ್ಯ ಬಾಲಮೇಕಂ ಮಹಾರಥಮ್ ।
ವಾಸುದೇವಮುವಾಚೇದಂ ಕೌಂತೇಯಃ ಶ್ವೇತವಾಹನಃ ॥೪೨॥

ಅನಂತರ ಬಾಲಕನಾದ ಮಹಾರಥನಾದ ಅಭಿಮನ್ಯುವನ್ನು ಉದ್ದೇಶಿಸಿ ಗಜಾಶ್ವ ರಥಗಳ ಮೇಲೆ ಹೊರಟ, ಅನೇಕ ನೂರು ರಾಜರಿಂದ ಸಹಿತರಾದ, ದೇವತೆಗಳೂ ಹತ್ತಿರ ಸುಳಿಯಲಾರದ ಭೀಷ್ಮರು ನಿನ್ನ ಪುತ್ರರನ್ನು ರಕ್ಷಿಸಲು ಅಭಿಮನ್ಯುವಿನ ಕಡೆಗೆ ಶೀಘ್ರವಾಗಿ ಹೋಗುತ್ತಿರುವುದನ್ನು ನೋಡಿ ಕುಂತೀಪುತ್ರನಾದ ಅರ್ಜುನನು ಕೃಷ್ಣನನ್ನು ಕುರಿತು ಈ ಮಾತುಗಳನ್ನು ಆಡಿದನು.

ಚೋದಯಾಶ್ವಾನ್ ಹೃಷೀಕೇಶ ಯತ್ರೈತೇ ಬಹುಲಾ ರಥಾಃ ।
ಏತೇ ಹಿ ಬಹವಃ ಶೂರಾಃ ಕೃತಾಸ್ತ್ರಾ ಯುದ್ಧದುರ್ಮದಾಃ ।
ಯಥಾ ನ ಹನ್ಯುರ್ನಃ ಸೇನಾಂ ತಥಾ ಮಾಧವ ಚೋದಯ ॥೪೩॥

ಎಲೈ ಹೃಷೀಕೇಶನೇ, ಈ ಅನೇಕ ರಥಗಳು ಕಾಣುತ್ತಿರುವ ಕಡೆಗೆ ನನ್ನ ಅಶ್ವಗಳನ್ನು ಓಡಿಸು. ಎಲೈ ಮಾಧವನೇ, ಅಶ್ವಪಾರಂಗತರೂ, ಯುದ್ಧದುರ್ಮದರೂ, ಶೂರರೂ ಆದ ಈ ಅನೇಕರು ನನ್ನ ಸೈನ್ಯವನ್ನು ಕೊಲ್ಲದಂತೆ ರಥವನ್ನು ಓಡಿಸುವವನಾಗು.

ಏವಮುಕ್ತಃ ಸ ವಾರ್ಷ್ಣೇಯಃ ಕೌಂತೇಯೇನಾಮಿತೌಜಸಾ ।
ರಥಂ ಶ್ವೇತಹಯೈರ್ಯುಕ್ತಂ ಪ್ರೇಷಯಾಮಾಸ ಸಂಯುಗೇ ॥೪೪॥

ಅಮಿತಪರಾಕ್ರಮಿಯಾದ ಅರ್ಜುನನಿಂದ ಹೀಗೆ ಹೇಳಲ್ಪಟ್ಟ ಕೃಷ್ಣನು ಶ್ವೇತಾಶ್ವಗಳಿಂದ ಕೂಡಿದ ಅವನ ರಥವನ್ನು ರಣರಂಗದಲ್ಲಿ ಮುಂದೆ ನಡೆಸಿದನು.

ನಿಷ್ಪಾನಕೋ ಮಹಾನಾಸೀತ್ ತವ ಸೈನ್ಯಸ್ಯ ಮಾರಿಷ ।
ಯದರ್ಜುನೋ ರಣೇ ಕ್ರುದ್ಧಃ ಸಂಯಾತಸ್ತಾವಕಾನ್ ಪ್ರತಿ ॥೪೫॥

ಎಲೈ ಪೂಜ್ಯನೇ, ಅರ್ಜುನನು ಕ್ರುದ್ಧನಾಗಿ ಯುದ್ಧದಲ್ಲಿನಿನ್ನ ಸೈನ್ಯದ ಯೋಧರ ಕಡೆಗೆ ಬರುತ್ತಿರುವುದನ್ನು ನೋಡಿ ನಿನ್ನ ಸೈನ್ಯದಲ್ಲಿ (ಭಯದಿಂದ ಕೂಡಿದ) ದೊಡ್ಡ ಶಬ್ದ ಉಂಟಾಯಿತು.

ಸಮಾಸಾದ್ಯ ತು ಕೌಂತೇಯೋ ರಾಜ್ಞಸ್ತಾನ್ ಭೀಷ್ಮರಕ್ಷಿಣಃ ।
ಸುಶರ್ಮಾಣಮಥೋ ರಾಜನ್ನಿದಂ ವಚನಮಬ್ರವೀತ್ ॥೪೬॥

ಎಲೈ ರಾಜನೇ, ಕುಂತೀಪುತ್ರನಾದ ಅರ್ಜುನನು ಭೀಷ್ಮರನ್ನು ರಕ್ಷಿಸುತ್ತಿದ್ದ ಆ ರಾಜರನ್ನು ಸಮೀಪಿಸಿ ಅನಂತರ ಸುಶರ್ಮನನ್ನು ಕುರಿತು ಹೀಗೆ ಮಾತನಾಡಿದನು.

ಜಾನಾಮಿ ತ್ವಾಂ ಯುಧಿ ಶ್ರೇಷ್ಠಮತ್ಯಂತಂ ಪೂರ್ವವೈರಿಣಮ್ ।
ಪರ್ಯಾಯಸ್ಯಾದ್ಯ ಸಂಪ್ರಾಪ್ತಂ ಫಲಂ ಪಶ್ಯ ಸುದಾರುಣಮ್ ।
ಅದ್ಯ ತೇ ದರ್ಶಯಿಷ್ಯಾಮಿ ಪೂರ್ವಪ್ರೇತಾನ್ ಪಿತಾಮಹಾನ್ ॥೪೭॥

ನೀನು ನಮ್ಮ ಪೂರ್ವವೈರಿ ಎಂದೂ, ಯುದ್ಧದಲ್ಲಿ ಬಹಳ ಶ್ರೇಷ್ಠನಾದವನೆಂದು ನಿನ್ನನ್ನು ತಿಳಿದಿದ್ದೇನೆ. ನೀನು ಮಾಡಿದ ಅನ್ಯಾಯಗಳ, ಘೋರವಾದ ಫಲವು ಪ್ರಾಪ್ತವಾಗಿರುವುದನ್ನು ಈ ದಿನ ನೋಡು. ಈ ದಿನ ನಿನಗೆ ಹಿಂದೆಯೇ ಮೃತರಾದ ನಿನ್ನ ಪಿತಾಮಹರನ್ನು ತೋರಿಸುವೆನು.

ಏವಂ ಸಂಜಲ್ಪತಸ್ತಸ್ಯ ಬೀಭತ್ಸೋಃ ಶತ್ರುಘಾತಿನಃ ।
ಶ್ರುತ್ವಾಪಿ ಪರುಷಂ ವಾಕ್ಯಂ ಸುಶರ್ಮಾ ರಥಯೂಥಪಃ ।
ನ ಚೈನಮಬ್ರವೀತ್ ಕಿಂಚಿಚ್ಛುಭಂ ವಾ ಯದಿ ವಾಶುಭಮ್ ॥೪೮॥

ಶತ್ರುಘಾತಕನಾದ ಅರ್ಜುನನ ಹೀಗೆ ಒರಟಾದ ಮಾತುಗಳನ್ನು ಕೇಳಿದರೂ ರಥಯೂಥಪನಾದ ಸುಶರ್ಮನು ಅವುಗಳನ್ನು ಕೇಳಿ ಒಳ್ಳೆಯದನ್ನಾಗಲೀ, ಕೆಟ್ಟದನ್ನಾಗಲೀ ಏನೂ ಮಾತನಾಡಲಿಲ್ಲ.

ಅಭಿಗತ್ವಾರ್ಜುನಂ ವೀರಂ ರಾಜಭಿರ್ಬಹುಭಿರ್ವೃತಃ ।
ಪುರಸ್ತಾತ್ ಪೃಷ್ಠತಶ್ಚೈವ ಪಾರ್ಶ್ವತಶ್ಚೈವ ಸರ್ವತಃ ॥೪೯॥

ಪರಿವಾರ್ಯಾರ್ಜುನಂ ಸಂಖೇ ತವ ಪುತ್ರೈಃ ಸಹಾನಘ ।
ಶರೈಃ ಸಂಛಾದಯಾಮಾಸ ಮೇಘೈರಿವ ದಿವಾಕರಮ್ ॥೫೦॥

ಎಲೈ ಅನಘನೇ, ಅವನು ಅನೇಕ ರಾಜರ ಜೊತೆಯಲ್ಲಿ ವೀರನಾದ ಅರ್ಜುನನ ಎದುರಾಗಿ ಓಡಿ ಅರ್ಜುನನನ್ನು ಮುಂಭಾಗದಿಂದಲೂ, ಹಿಂಭಾಗದಿಂದಲೂ, ಪಾರ್ಶ್ವಗಳಿಂದಲೂ, ಎಲ್ಲ ಕಡೆಯಲ್ಲಿಯೂ ನಿನ್ನ ಪುತ್ರರ ಜೊತೆಯಲ್ಲಿ ಸುತ್ತುವರಿದು ಮೋಡಗಳು ಸೂರ್ಯನನ್ನು ಮುಚ್ಚಿದಂತೆ ಬಾಣಗಳಿಂದ ಅವನನ್ನು ಮುಚ್ಚಿಹಾಕಿದನು.

ತತಃ ಪ್ರವೃತ್ತಃ ಸುಮಹಾನ್ ಸಂಗ್ರಾಮಃ ಶೋಣಿತೋದಕಃ ।
ತಾವಕಾನಾಂ ಚ ಸಮರೇ ಪಾಂಡವಾನಾಂ ಚ ಭಾರತ ॥೫೧॥

ಎಲೈ ಭಾರತನೇ, ಆನಂತರ ಪಾಂಡವರಿಗೂ ಮತ್ತು ನಿನ್ನವರಿಗೂ ರಕ್ತದ ಓಕುಳಿಯ ದೊಡ್ಡ ಯುದ್ಧವು ಜರುಗಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಅಶೀತಿತಮೋऽಧ್ಯಾಯಃ ॥

॥ ಭೀಷ್ಮವಧಪರ್ವಣಿ ಚತ್ವಾರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಎಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೊಂದನೆಯ ಅಧ್ಯಾಯ

ಪಾಂಡವರ ಜೊತೆಯಲ್ಲಿ ಭೀಷ್ಮರ ಯುದ್ಧ. ಶಿಖಂಡಿಯನ್ನು ಕುರಿತು ಯುಧಿಷ್ಠಿರನ ಉಗ್ರವಚನಗಳು. ಶಿಖಂಡಿಯ ಮತ್ತು ಭೀಮಸೇನನ ಪರಾಕ್ರಮ.

ಸಂಜಯಃ

ಸ ತುದ್ಯಮಾನಸ್ತು ಶರೈರ್ಧನಂಜಯಃ
ಪದಾ ಹತೋ ನಾಗ ಇವ ಶ್ವಸನ್ ಬಲೀ ।
ಬಾಣೇನ ಬಾಣೇನ ಮಹಾರಥಾನಾಂ
ಚಿಚ್ಛೇದ ಚಾಪಾನಿ ರಣೇ ಪ್ರಸಹ್ಯ ॥೧॥

ಸಂಜಯ– ಶತ್ರುಗಳ ಬಾಣಗಳಿಂದ ಪೀಡಿತನಾದ ಬಲಿಷ್ಠನಾದ ಧನಂಜಯನು ಪಾದದಿಂದ ತುಳಿದ ಸರ್ಪದಂತೆ ಶ್ವಾಸವನ್ನು ಬಿಡುತ್ತಾ ಒಂದೊಂದು ಬಾಣದಿಂದ ಯುದ್ಧದಲ್ಲಿ ಆ ಮಹಾರಥರ ಧನುಸ್ಸುಗಳನ್ನು ಶೀಘ್ರವಾಗಿ ಕತ್ತರಿಸಿದನು.

ಸಂಛಿದ್ಯ ಚಾಪಾನಿ ಚ ತಾನಿ ರಾಜ್ಞಾಂ
ತೇಷಾಂ ರಣೇ ವೀರ್ಯವತಾಂ ಕ್ಷಣೇನ ।
ವಿವ್ಯಾಧ ಬಾಣೈರ್ಯುಗಪನ್ಮಹಾತ್ಮಾ
ನಿಃಶೇಷತಾಂ ತೇಷ್ವಥ ಮನ್ಯಮಾನಃ ॥೨॥

ಮಹಾತ್ಮನಾದ ಅವನು ತನ್ನ ಬಾಣಗಳಿಂದ ಪರಾಕ್ರಮಶಾಲಿಗಳಾದ ಆ ರಾಜರ ಧನುಸ್ಸುಗಳನ್ನು ರಣರಂಗದಲ್ಲಿ ಒಂದು ಕ್ಷಣದಲ್ಲಿ ಕತ್ತರಿಸಿ ಅವರನ್ನು ನಿಶ್ಶೇಷಗೊಳಿಸಲು ಬಯಸಿದನು.

ನಿಪೇತುರಾಜ್ಞೋ ರುಧಿರಪ್ರದಿಗ್ಧಾಃ
ತೇ ತಾಡಿತಾಃ ಶಕ್ರಸುತೇನ ರಾಜನ್ ।
ವಿಭಿನ್ನಗಾತ್ರಾಃ ಪತಿತೋತ್ತಮಾಂಗಾಃ
ಗತಾಸವಶ್ಚಿನ್ನತನುತ್ರಕಾಯಾಃ ॥೩॥

ಎಲೈ ರಾಜನೇ, ಇಂದ್ರಪುತ್ರನಾದ ಅರ್ಜುನನ ಪ್ರಹಾರಕ್ಕೆ ಒಳಗಾದ ಆ ರಾಜರು ರಕ್ತಸಿಕ್ತರಾಗಿ, ಕತ್ತರಿಸಲ್ಪಟ್ಟ ಶರೀರಗಳನ್ನು ಮತ್ತು ಶಿರಸ್ಸುಗಳನ್ನು ಉಳ್ಳವರಾಗಿ, ಅವರ ಕವಚಗಳು ಮತ್ತು ಶರೀರಗಳು ಭೇದಿಸಲ್ಪಡುತ್ತಿರಲು ಪ್ರಾಣಗಳನ್ನು ಕಳೆದುಕೊಂಡು ರಣಭೂಮಿಯಲ್ಲಿ ಬಿದ್ದರು.

ಮಹೀಂಗತಾಃ ಪಾರ್ಥಬಲಾಭಿಭೂತಾ
ವಿಚಿತ್ರರೂಪಾ ಯುಗಪದ್ ವಿನೇಶುಃ ।
ದೃಷ್ಟ್ವಾ ಹತಾಂಸ್ತಾನ್ ಯುಧಿ ರಾಜಪುತ್ರಾನ್
ತ್ರಿಗರ್ತರಾಜಃ ಪ್ರಯಯೌ ಕ್ಷಣೇನ ॥೪॥

ಅರ್ಜುನನ ಬಲಕ್ಕೆ ಒಳಗಾದ, ಭೂಮಿಯಲ್ಲಿ ಉರುಳಿದ, ವಿಚಿತ್ರವೇಷದ ರಾಜರು ಯುದ್ಧದಲ್ಲಿ ವಿನಾಶವನ್ನು ಹೊಂದಿದರು. ಯುದ್ಧದಲ್ಲಿ ಆ ರಾಜಪುತ್ರರು ಅರ್ಜುನನಿಂದ ಹತರಾದುದನ್ನು ನೋಡಿ ತ್ರಿಗರ್ತರಾಜನಾದ ಸುಶರ್ಮನು ಶೀಘ್ರವಾಗಿ ಅರ್ಜುನನ ಕಡೆಗೆ ಧಾವಿಸಿದನು.

ತೇಷಾಂ ರಥಾನಾಮಥ ಪೃಷ್ಠಗೋಪಾ
ದ್ವಾತ್ರಿಂಶದನ್ಯೇಽಭ್ಯಪತಂತ ಪಾರ್ಥಮ್ ।
ತಥೈವ ತೇ ಸಂಪರಿವಾರ್ಯ ಪಾರ್ಥಂ
ವಿಕೃಷ್ಯ ಚಾಪಾನಿ ಮಹಾರವಾಣಿ ।
ಅವೀವೃಷನ್ ಬಾಣಮಹೌಘವೃಷ್ಟ್ಯಾ
ಯಥಾ ಗಿರಿಂ ತೋಯಧರಾ ಜಲೌಘೈಃ ॥೫॥

ರಥಗಳ ಮಧ್ಯದಲ್ಲಿ ಸುಶರ್ಮನ ರಥದ ಹಿಂಭಾಗದ ರಕ್ಷಕರಾದ ಬೇರೆ ಮೂವತ್ತೆರಡು ರಥರೂ ಸಹ ಅರ್ಜುನನ ಕಡೆಗೆ ಧಾವಿಸಿದರು. ಹಾಗೆಯೇ ಅವರು ಅರ್ಜುನನನ್ನು ಸುತ್ತುವರಿದು ಮಹಾನಾದವನ್ನು ಮಾಡುವ ತಮ್ಮ ಬಿಲ್ಲುಗಳನ್ನು ಎಳೆದು ಮೋಡಗಳು ಪರ್ವತದ ಮೇಲೆ ಜಲರಾಶಿಯನ್ನು ಸುರಿಸಿದಂತೆ ಬಾಣಗಳ ಮಹಾಪ್ರವಾಹಗಳ ವೃಷ್ಟಿಯನ್ನು ಅರ್ಜುನನ ಮೇಲೆ ಸುರಿಸಿದರು.

ಸಂಪೀಡ್ಯಮಾನಸ್ತು ಶರೌಘವೃಷ್ಟ್ಯಾ
ಧನಂಜಯಸ್ತಾನ್ ಯುಧಿ ಜಾತರೋಷಃ ।
ಪಷ್ಟ್ಯಾ ಶರೈಃ ಸಂಯತಿ ತೈಲಧೌತೈಃ
ಜಘಾನ ತಾನಷ್ಟಥ ಪೃಷ್ಠಗೋಪಾನ್ ॥೬॥

ಆ ಶರಸಮೂಹದ ಮಳೆಯಿಂದ ಪೀಡಿಸಲ್ಪಟ್ಟ ಅರ್ಜುನನು, ಯುದ್ಧದಲ್ಲಿ ರೋಷವನ್ನು ಹೊಂದಿದವನಾಗಿ ತೈಲದಲ್ಲಿ ಸಾಣೆಯನ್ನು ಹಿಡಿದ ಅರವತ್ತು ಬಾಣಗಳನ್ನು ಪ್ರಯೋಗಿಸಿ ಯುದ್ಧದಲ್ಲಿ ಆ ರಾಜಪುತ್ರರನ್ನು ಮತ್ತು ಅವರ ಹಿಂಭಾಗದ ರಕ್ಷಕರಾದ ಮೂವತ್ತೆರಡು ರಥರನ್ನು ಕೊಂದನು.

ಷಷ್ಟಿಂ ರಥಾಂಸ್ತಾನವಜಿತ್ಯ ಸಂಖ್ಯೇ
ಧನಂಜಯಃ ಪ್ರೀತಮನಾ ಯಶಸ್ವೀ ।
ಅಥಾತ್ವರದ್ ಭೀಷ್ಮವಧಾಯ ಜಿಷ್ಣುಃ
ಬಲಾನಿ ರಾಜ್ಞಾಂ ಸಮರೇ ನಿಹತ್ಯ ॥೭॥

ಧನಂಜಯನು ಯುದ್ಧದಲ್ಲಿ ಆ ಅರವತ್ತು ರಥರನ್ನು ಸೋಲಿಸಿ ಸಂತೋಷದಿಂದ ಕೂಡಿದ ಮನಸ್ಸುಳ್ಳವನಾಗಿ, ಕೀರ್ತಿವಂತನಾಗಿ ಆ ರಾಜರ ಸೈನ್ಯವನ್ನು ಸಂಹರಿಸಿ ಭೀಷ್ಮರ ವಧೆಯನ್ನು ಉದ್ದೇಶಿಸಿ ತ್ವರೆಯನ್ನು ಮಾಡಿದನು.

ತ್ರಿಗರ್ತರಾಜೋ ನಿಹತಾನ್ ಸಮೀಕ್ಷ್ಯ
ಮಹಾರಥಾಂಸ್ತಾನಥ ಬಂಧುವರ್ಗಾನ್ ।
ರಣೇ ಪುರಸೃತ್ಯ ನರಾಧಿಪಾಂಸ್ತಾನ್
ಜಗಾಮ ಪಾರ್ಥಂ ತ್ವರಿತೋ ವಧಾಯ ॥೮॥

ತ್ರಿಗರ್ತರಾಜನಾದ ಸುಶರ್ಮನಾದರೋ ತನ್ನ ಪೃಷ್ಠಗೋಪರೂ, ಬಂಧುವರ್ಗಕ್ಕೆ ಸೇರಿದವರೂ ಆದ ಮಹಾರಥರು ಅರ್ಜುನನಿಂದ ಹತರಾದುದನ್ನು ನೋಡಿ ಉಳಿದ ರಾಜರನ್ನು ಮುಂದ ಮಾಡಿಕೊಂಡು ಯುದ್ಧದಲ್ಲಿ ಅರ್ಜುನನ ವಧೆಯನ್ನು ಉದ್ದೇಶಿಸಿ ಶೀಘ್ರವಾಗಿ ಅವನ ಕಡೆಗೆ ಸಾಗಿದನು.

ಅಭಿದ್ರುತಂ ಚಾಸ್ತ್ರಭೃತಾಂ ವರಿಷ್ಠಂ
ಧನಂಜಯಂ ವೀಕ್ಷ್ಯ ಶಿಖಂಡಿಮುಖ್ಯಾಃ ।
ಅಭ್ಯುದ್ಯಯುಸ್ತೇ ಶಿತಶಸ್ತ್ರಹಸ್ತಾ
ರಿರಕ್ಷಿಷಂತೋ ರಥಮರ್ಜುನಸ್ಯ ॥೯॥

ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಅರ್ಜುನನು ಆ ರಾಜರುಗಳಿಂದ ಸುತ್ತುವರಿಯಲ್ಪಡುತ್ತಿರುವುದನ್ನು ನೋಡಿ ಶಿಖಂಡಿಯೇ ಮೊದಲಾದ ತೀಕ್ಷ್ಣ ಶಸ್ತ್ರಧಾರಿಗಳು ಅರ್ಜುನನ ರಥವನ್ನು ರಕ್ಷಿಸಲು ಬಯಸಿ ಅವನ ಕಡೆಗೆ ಸಾಗಿದರು.

ಪಾರ್ಥೋಽಪಿ ತಾನಾಪತತಃ ಸಮೀಕ್ಷ್ಯ
ತ್ರಿಗರ್ತರಾಜ್ಞಾ ಸಹಿತಾನ್ ನೃವೀರಾನ್ ।
ವಿಧ್ವಂಸಯಿತ್ವಾ ಸಮರೇ ಧನುಷ್ಮಾನ್
ಗಾಂಡೀವಮುಕ್ತೈರ್ನಿಶಿತೈಃ ಕೃಷ್ಣೈಃ ।
ಭೀಷ್ಮಂ ಯಿಯಾಸುರ್ಯುಧಿ ಸಂದದರ್ಶ
ದುರ್ಯೋಧನಂ ಸೈಂಧವಾದೀಂಶ್ಚ ರಾಜ್ಞಃ ॥೧೦॥

ಅರ್ಜುನನಾದರೋ ತ್ರಿಗರ್ತರಾಜರ ಜೊತೆಯಲ್ಲಿ ತನ್ನ ಕಡೆಗೆ ಒಟ್ಟಾಗಿ ಬರುವ ಆ ರಾಜರನ್ನು ನೋಡಿ ಧನುರ್ಧಾರಿಯಾದ ಅವನು ಗಾಂಡೀವ ಧನುಸ್ಸಿನಿಂದ ಹೊರಹೊಮ್ಮಿದ ಹರಿತವಾದ ಬಾಣಗಳಿಂದ ಯುದ್ಧದಲ್ಲಿ ಅವರನ್ನು ನಾಶಗೊಳಿಸಿ, ಯುದ್ಧಭೂಮಿಯಲ್ಲಿ ಭೀಷ್ಮರ ಕಡೆಗೆ ಹೋಗಲು ಬಯಸುತ್ತಾ ದುರ್ಯೋಧನನನ್ನೂ ಮತ್ತು ಸೈಂಧವಾದಿ ರಾಜರನ್ನೂ ನೋಡಿದನು.

ಆವಾರಯಿಷ್ಣೂನಭಿಸಂಪ್ರಯಾಯ
ಮುಹೂರ್ತಮಾಯೋಧ್ಯ ಬಲೇನ ವೀರಃ ।
ಉತ್ಸೃಜ್ಯ ರಾಜಾನಮನಂತವೀರ್ಯೋ
ಜಯದ್ರಥಾದೀಂಶ್ಚ ನೃಪಾನ್ ಮಹೌಜಾಃ ।
ಯಯೌ ತತೋ ಭೀಮಬಲೋ ಮನಸ್ವೀ
ಗಾಂಗೇಯಮಾಜೌ ಶರಚಾಪಪಾಣಿಃ ॥೧೧॥

ತನ್ನನ್ನು ತಡೆಯಲು ಬಂದ ಅವರ ಜೊತೆಯಲ್ಲಿ ಒಂದು ಮುಹೂರ್ತದ ಕಾಲ ತನ್ನ ಬಲದಿಂದ ಯುದ್ಧವನ್ನು ಮಾಡಿದ ಅನಂತ ಪರಾಕ್ರಮಿಯಾದ, ಮಹಾಸಾಮರ್ಥ್ಯವನ್ನು ಹೊಂದಿದ, ಭಯಂಕರವಾದ ಬಲವುಳ್ಳ, ಧೈರ್ಯಶಾಲಿಯಾದ, ವೀರನಾದ ಅರ್ಜುನನು ರಾಜನಾದ ದುರ್ಯೋಧನ ಜಯದ್ರಥ ಮೊದಲಾದ ರಾಜರನ್ನು ಬಿಟ್ಟು ಕೈಯಲ್ಲಿ ಬಿಲ್ಲು ಬಾಣಗಳನ್ನು ಹಿಡಿದು ಭೀಷ್ಮರ ಕಡೆಗೆ ಸಾಗಿಬಂದನು.

ಭೀಷ್ಮೋಽಪಿ ದೃಷ್ಟ್ವಾ ಸಮರೇ ಕೃತಾಸ್ತ್ರಾನ್
ಸ ಪಾಂಡವಾನಾಂ ರಥಿನೋಽಭ್ಯುದಾರಾನ್ ।
ವಿಹಾಯ ಸಂಗ್ರಾಮಮುಖೇ ಧನಂಜಯಂ
ಜವೇನ ಪಾರ್ಥಂ ಪುನರಾಜಗಾಮ ॥೧೨॥

ಭೀಷ್ಮರೂ ಸಹ ರಣರಂಗದಲ್ಲಿ ಅಸ್ತ್ರಜ್ಞರೂ, ಉದಾರರೂ ಆದ ಪಾಂಡವರ ರಥವನ್ನು ನೋಡಿ ಅರ್ಜುನನನ್ನು ಬಿಟ್ಟು ಶೀಘ್ರವಾಗಿ ಧರ್ಮರಾಜನ ಕಡೆಗೆ ಪುನಃ ಬಂದರು.

ಯುಧಿಷ್ಠಿರಶ್ಚೋಗ್ರಬಲೋ ಮಹಾತ್ಮಾ
ಸಮಾಯಯೌ ತ್ವರಿತೋ ಜಾತಕೋಪಃ ।
ಮದ್ರಾಧಿಪಂ ಸಮಭಿತ್ಯಜ್ಯ ಸಂಖೇ
ಸ್ವಭಾಗಮಾಪ್ತಂ ತಮನಂತಕೀರ್ತಿಃ ।
ಸಾರ್ಧಂ ಸ ಮಾದ್ರೀಸುತಭೀಮಸೇನೈಃ
ಭೀಷ್ಮಂ ಯಯೌ ಶಾಂತನವಂ ರಣಾಯ ॥೧೩॥

ಅನಂತ ಕೀರ್ತಿಯುಳ್ಳ ಮಹಾತ್ಮನಾದ ಉಗ್ರಬಲವುಳ್ಳ ಯುಧಿಷ್ಠಿರನೂ ಸಹ ಕೋಪಗೊಂಡವನಾಗಿ ಯುದ್ಧದಲ್ಲಿ ತನ್ನ ಭಾಗದಲ್ಲಿ ದೊರಕಿದ ಶಲ್ಯನನ್ನು ತೊರೆದು ನಕುಲ-ಸಹದೇವರ ಮತ್ತು ಭೀಮಸೇನನ ಜೊತೆಯಲ್ಲಿ ಶಂತನು ಪುತ್ರರಾದ ಭೀಷ್ಮರ ಜೊತೆಯಲ್ಲಿ ಯುದ್ಧವನ್ನು ಮಾಡಲು ಶೀಘ್ರವಾಗಿ ಬಂದನು.

ತೈಃ ಸಂಪ್ರಯುಕ್ತಃ ಸ ಮಹಾರಥಾಗ್ರೈ
ಗಂಗಾಸುತಃ ಸಮರೇ ಚಿತ್ರಯೋಧೀ ।
ನ ವಿವ್ಯಥೇ ಶಾಂತನವೋ ಮಹಾತ್ಮಾ
ಸಮಾಗತೈಃ ಪಾಂಡುಸುತೈಃ ಸಮಸ್ತೈಃ ॥೧೪॥

ಮಹಾರಥಶ್ರೇಷ್ಠರಾದ ಸಮಸ್ತರಾದ ಪಾಂಡುಸುತರು ತನ್ನ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಂದರೂ ಮಹಾತ್ಮರೂ, ಗಂಗಾಪುತ್ರರೂ, ಶಂತನು ಪುತ್ರರೂ, ವಿಚಿತ್ರಯುದ್ಧವನ್ನು ಮಾಡುವವರೂ ಆದ ಭೀಷ್ಮರು ವ್ಯಥೆ ಪಡಲಿಲ್ಲ.

ಅಥೈತ್ಯ ರಾಜಾ ಯುಧಿ ಸತ್ಯಸಂಧೋ
ಜಯದ್ರಥೋಽತ್ಯುಗ್ರಬಲೋ ಮನಸ್ವೀ ।
ಚಿಚ್ಛೇದ ಚಾಪಾನಿ ಮಹಾರಥಾನಾಂ
ಪ್ರಸಹ್ಯ ತೇಷಾಂ ಧನುಷಾ ವರೇಣ ॥೧೫॥

ಆಗ ಸತ್ಯಸಂಧರೂ, ಧೈರ್ಯಶಾಲಿಗಳೂ, ಬಹಳ ಉಗ್ರವಾದ ಬಲವುಳ್ಳವರೂ, ಜಯಿಸುವ ರಥವನ್ನು ಹೊಂದಿದವರೂ ಆದ ಭೀಷ್ಮರು ಆ ಮಹಾರಥರ ಧನುಸ್ಸುಗಳನ್ನು ತಮ್ಮ ಶ್ರೇಷ್ಠವಾದ ಧನುಸ್ಸಿನಿಂದ ಬಲಾತ್ಕರಿಸಿ ಕತ್ತರಿಸಿದರು (ಇಲ್ಲಿ ಜಯದ್ರಥ ಜಯಿಸುವ ರಥವನ್ನುಳ್ಳ ಎಂದರೆ ಭೀಷ್ಮರೆಂದು ಅರ್ಥ- ಲಕ್ಷಾಲಂಕಾರ).

ಯುಧಿಷ್ಠಿರಂ ಭೀಮಸೇನಂ ಯಮೌ ಚ
ಪಾರ್ಥಂ ತಥಾ ಯುಧಿ ಸಂಜಾತಕೋಪಃ ।
ದುರ್ಯೋಧನಃ ಕ್ರೋಧವಿಷೋ ಮಹಾತ್ಮಾ
ಜಘಾನ ಬಾಣೈರನಲಪ್ರಕಾಶೈಃ ॥೧೬॥

ಯುದ್ಧದಲ್ಲಿ ಕೋಪಗೊಂಡ ಕ್ರೋಧವಿಷವನ್ನು ಉಗುಳುವ, ಮಹಾಪ್ರಯತ್ನಶಾಲಿಯಾದ ದುರ್ಯೋಧನನು ಅಗ್ನಿಯ ಪ್ರಕಾಶವನ್ನು ಹೊಂದಿದ ಬಾಣಗಳಿಂದ ಯುಧಿಷ್ಠಿರನನ್ನೂ, ಭೀಮಸೇನನನ್ನೂ, ನಕುಲ-ಸಹದೇವರನ್ನೂ, ಅರ್ಜುನನನ್ನೂ ಹೊಡೆದನು.

ಕೃಪೇಣ ಶಲ್ಯೇನ ಶಲೇನ ಚೈವ
ತಥಾ ವಿಭೋ ಚಿತ್ರಸೇನೇನ ಚಾಜೌ ।
ವಿದ್ಧಾಃ ಶರೈಸ್ತೇऽತಿವಿವೃದ್ಧಕೋಪೈಃ
ದೇವಾ ಯಥಾ ದೈತ್ಯಗಣೈಃ ಸಮೇತೈಃ ॥೧೭॥

ಎಲೈ ವಿಭುವೇ, ಬಹಳವಾಗಿ ಕೋಪಗೊಂಡ ಕೃಪರಿಂದ, ಶಲ್ಯನಿಂದ, ಶಲನಿಂದ ಹಾಗೆಯೇ ಚಿತ್ರಸೇನನಿಂದ ಯುದ್ಧದಲ್ಲಿ ಪಾಂಡವರು ಒಟ್ಟಾಗಿ ಸೇರಿದ ದೈತ್ಯ ಸಮೂಹದಿಂದ ಹೊಡೆಯಲ್ಪಟ್ಟ ದೇವತೆಗಳಂತೆ ಬಾಣಗಳಿಂದ ಹೊಡೆಯಲ್ಪಟ್ಟರು.

ಛಿನ್ನಾಯುಧಂ ಶಾಂತನವೇನ ರಾಜಾ
ಶಿಖಂಡಿನಂ ಪ್ರೇಕ್ಷ್ಯ ಚ ಜಾತಕೋಪಃ ।
ಅಜಾತಶತ್ರುಃ ಸಮರೇ ಮಹಾತ್ಮಾ
ಶಿಖಂಡಿನಂ ಕ್ರುದ್ಧ ಉವಾಚ ವಾಕ್ಯಮ್ ॥೧೮॥

ಭೀಷ್ಮರಿಂದ ಕತ್ತರಿಸಲ್ಪಟ್ಟ ಆಯುಧವುಳ್ಳ ಶಿಖಂಡಿಯನ್ನು ನೋಡಿ ಅಜಾತ ಶತ್ರುವೂ, ಮಹಾತ್ಮನೂ ಆದ ಧರ್ಮರಾಜನು ಕೋಪವನ್ನು ಹೊಂದಿ ಯುದ್ಧದಲ್ಲಿ ಶಿಖಂಡಿಯನ್ನು ಕುರಿತು ಕ್ರುದ್ಧನಾಗಿ ಈ ಮಾತನ್ನು ಆಡಿದನು.

ಉಕ್ತ್ವಾ ತಥಾ ತ್ವಂ ಪಿತುರಗ್ರತೋ ಮಾಮ್
ಅಹಂ ಹನಿಷ್ಯಾಮಿ ಮಹಾವ್ರತಂ ತಮ್ ।

ಭೀಷ್ಮಂ ಶರೌಘೈರ್ವಿಮಲಾರ್ಕವರ್ಣೈಃ
ಸತ್ಯಂ ವದಾಮೀತಿ ಕೃತಾ ಪ್ರತಿಜ್ಞಾ ॥೧೯॥

ನೀನು ನಿನ್ನ ತಂದೆಯ ಎದುರಿನಲ್ಲಿ ನಾನು ಸ್ವಚ್ಛವಾದ ಸೂರ್ಯನ ವರ್ಣದ ಬಾಣವನ್ನು ಹೊಂದಿದ ಮಹಾರಥರಾದ ಭೀಷ್ಮರನ್ನು ಕೊಲ್ಲುವೆನು ಎಂದು ನನಗೆ ಪ್ರತಿಜ್ಞೆಯನ್ನು ಮಾಡಿ, ನಾನು ಸತ್ಯವನ್ನು ನುಡಿದಿದ್ದೇನೆ (ಹಾಗೆ ಮಾಡದಿದ್ದರೆ ಅಗ್ನಿಯನ್ನು ಪ್ರವೇಶಿಸುತ್ತೇನೆ) ಎಂದೂ ಪ್ರತಿಜ್ಞೆಯನ್ನು ಮಾಡಿದ್ದೀಯೆ.

ತ್ವಯಾ ನ ಚೈನಾಂ ಸಫಲಾಂ ಕರೋಷಿ
ದೇವವ್ರತಂ ಯನ್ನ ನಿಹಂಸಿ ಯುದ್ಧೇ ।
ಮಿಥ್ಯಾಪ್ರತಿಜ್ಞೋ ಭವ ಮಾ ನ್ಯವೀರ
ರಕ್ಷಸ್ವ ಧರ್ಮಂ ಚ ಕುಲಂ ಯಶಶ್ಚ ॥೨೦॥

ನೀನು ಯುದ್ಧದಲ್ಲಿ ಭೀಷ್ಮರನ್ನು ಕೊಲ್ಲದಿರುವುದರಿಂದ ನಿನ್ನ ಪ್ರತಿಜ್ಞೆಯನ್ನು ವ್ಯರ್ಥವನ್ನಾಗಿ ಮಾಡುತ್ತಿದ್ದೀಯೆ. ಎಲೈ ಪುರುಷವೀರನೇ, ನಿನ್ನ ಪ್ರತಿಜ್ಞೆಯನ್ನು ವ್ಯರ್ಥಗೊಳಿಸಬೇಡ. ನಿನ್ನ ಕುಲದ ಧರ್ಮವನ್ನು ಮತ್ತು ಕೀರ್ತಿಯನ್ನು ರಕ್ಷಿಸಿಕೊಳ್ಳುವವನಾಗು.

ಪ್ರೇಕ್ಷಸ್ವ ಭೀಷ್ಮಂ ಯುಧಿ ಭೀಮವೇಗಂ
ಸರ್ವಾಂಸ್ತಪಂತಂ ಮಮ ಸೈನ್ಯಸಂಘಾನ್ ।
ಶರೌಘಜಾಲೈರತಿಗೃಧ್ನತೇಜೈಃ
ಕಾಲಂ ಯಥಾ ಕಾಲಕೃತಂ ಕ್ಷಣೇನ ॥೨೧॥

ಆಯುಸ್ಸಿನ ಅವಸಾನ ಕಾಲದಲ್ಲಿ ಒದಗುವ ಯಮನಂತೆ ತಮ್ಮ ಪೂರ್ಣ ಸಾಮರ್ಥ್ಯವುಳ್ಳ ಬಾಣಗಳ ಸಮೂಹದಿಂದ ನನ್ನ ಸೈನ್ಯವೆಲ್ಲವನ್ನೂ ಯುದ್ಧದಲ್ಲಿ ದಹಿಸುತ್ತಿರುವ, ಭಯಂಕರವಾದ ವೇಗವುಳ್ಳ ಭೀಷ್ಮರನ್ನು ನೋಡು.

ನಿಕೃತ್ತಚಾಪಃ ಸಮರಾನಪೇಕ್ಷಃ
ಪರಾಜಿತಃ ಶಾಂತನವೇನ ರಾಜ್ಞಾ ।
ವಿಹಾಯ ಬಂಧೂನಥ ಸೋದರಾಂಶ್ಚ
ಕ್ವ ಯಾಸ್ಯಸೇ ನಾನುರೂಪಂ ತವೇದಮ್ ॥೨೨॥

ಯುದ್ಧದಲ್ಲಿ ಭೀಷ್ಮರಿಂದ ಪರಾಜಿತನಾಗಿ ನಿನ್ನ ಧನುಸ್ಸು ಕತ್ತರಿಸಲ್ಪಡುತ್ತಿರಲು ಯುದ್ಧದಿಂದ ವಿಮುಖನಾಗಿ ನಿನ್ನ ಬಂಧುಗಳನ್ನು ಮತ್ತು ಸಹೋದರರನ್ನು ಬಿಟ್ಟು ಎಲ್ಲಿಗೆ ಹೋಗುತ್ತಿದ್ದೀಯೆ? ಇದು ನಿನಗೆ ಅನುರೂಪವಾದುದಲ್ಲ.

ದೃಷ್ಟ್ವಾ ಹಿ ಭೀಷ್ಮಂ ತಮನಂತವೀರ್ಯಂ
ಭಗ್ನಂ ಚ ಸೈನ್ಯಂ ದ್ರವಮಾಣಮೇವಮ್ ।
ಭೀತೋಽಸಿ ನೂನಂ ದ್ರುಪದಸ್ಯ ಪುತ್ರ
ತಥಾ ಹಿ ತೇ ಮುಖವರ್ಣೋಽಪ್ರಹೃಷ್ಟಃ ॥೨೩॥

ಎಲೈ ದ್ರುಪದಪುತ್ರನೇ, ಅನಂತ ಪರಾಕ್ರಮವುಳ್ಳ ಭೀಷ್ಮರನ್ನು ಮತ್ತು ಭಗ್ನವಾಗಿ ಈ ರೀತಿ ಓಡುತ್ತಿರುವ ನಿನ್ನ ಸೈನ್ಯವನ್ನು ನೋಡಿ ನೀನು ಖಂಡಿತವಾಗಿ ಹೆದರಿದ್ದೀಯೆ. ನಿನ್ನ ಮುಖದ ಕಾಂತಿಯು ದುಃಖದಿಂದ ಕೂಡಿರುವಂತೆ ತೋರುತ್ತಿದೆ.

ಅಜ್ಞಾಯಮಾನೇಽಪಿ ಧನಂಜಯೇ ತು
ಮಹಾಹವೇ ಸಂಪ್ರಸಕ್ತೇ ನೃವೀರ ।
ಕಥಂ ಹಿ ಭೀಷ್ಮಾತ್ ಪೃಥಿತಃ ಪೃಥಿವ್ಯಾಂ
ಭಯಂ ತ್ವಮದ್ಯ ಪ್ರಕರೋಷಿ ವೀರ ॥೨೪॥

ಎಲೈ ಪುರುಷವೀರನೇ, ಧನಂಜಯನು ಹಿಂಭಾಗದಲ್ಲಿ ಇರುತ್ತಿರಲು, ದೊಡ್ಡ ಯುದ್ಧವು ಪ್ರಸಕ್ತವಾಗಿರಲು, ಭೂಮಿಯಲ್ಲಿ ಪ್ರಖ್ಯಾತನಾಗಿರುವ ನೀನು ಹೇಗೆ ಈ ದಿನ ಭೀಷ್ಮರಿಗೆ ಹೆದರಿದ್ದೀಯೆ? (ಎಂದು ಹೇಳಿದನು).

ಸ ಧರ್ಮರಾಜಸ್ಯ ವಚೋ ನಿಶಮ್ಯ
ರೂಕ್ಷಾಕ್ಷರಂ ವಿಪ್ರಲಾಪಾನುಬದ್ಧಮ್ ।
ಪ್ರತ್ಯಾದೇಶಂ ಮನ್ಯಮಾನೋ ಮಹಾತ್ಮಾ
ಪ್ರತತ್ವರೇ ಭೀಷ್ಮವಧಾಯ ರಾಜನ್ ॥೨೫॥

ಎಲೈ ರಾಜನೇ, ಅವನು ತನ್ನ ನಿಂದಾಸಹಿತವಾದ ಧರ್ಮರಾಜನ ಕ್ರೂರವಾದ ಮಾತುಗಳನ್ನು ಕೇಳಿ ಅದನ್ನು ನಿರಾಕರಣ ರೂಪವಾದ ಆ ಮಾತುಗಳು ತನಗೆ ಅವನು ಮಾಡಿದ ಆಜ್ಞೆ ಎಂದು ತಿಳಿದು ಮಹಾತ್ಮನಾದ ಅವನು ಭೀಷ್ಮರ ವಧೆಗಾಗಿ ತ್ವರೆ ಮಾಡಿದನು.

ತಮಾಪತಂತಂ ಮಹತಾ ಜವೇನ
ಶಿಖಂಡಿನಂ ಭೀಷ್ಮಮಭದ್ರವಂತಮ್ ।
ಆವಾರಯಾಮಾಸ ಹಿ ಶಲ್ಯ ಏನಂ
ಶಸ್ತ್ರೇಣ ಘೋರೇಣ ಸುದುರ್ಜಯೇನ ॥೨೬॥

ಮಹಾವೇಗದಿಂದ ಭೀಷ್ಮರ ಕಡೆಗೆ ಸಾಗಿಬರುತ್ತಿದ್ದ ಆ ಶಿಖಂಡಿಯನ್ನು ಜಯಿಸಲು ಅಸಾಧ್ಯವಾದ, ಘೋರವಾದ ಶಸ್ತ್ರಪ್ರಯೋಗದಿಂದ ಶಲ್ಯನು ತಡೆದನು.

ಸ ಚಾಪಿ ದೃಷ್ಟ್ವಾ ಸಮುದೀರ್ಯಮಾಣಮ್
ಅಸ್ತ್ರಂ ಯುಗಾಂತಾಗ್ನಿಸಮಪ್ರಭಾವಮ್ ।
ನಾಸೌ ವ್ಯಮುಹ್ಯದ್ ದ್ರುಪದಸ್ಯ ಪುತ್ರೋ
ರಾಜನ್ ಮಹೇಂದ್ರಪ್ರತಿಮಪ್ರಭಾವಃ ॥೨೭॥

ಎಲೈ ರಾಜನೇ, ಶಲ್ಯನು ಪ್ರಯೋಗಿಸಿದ ಯುಗಾಂತ ಕಾಲದ ಅಗ್ನಿಗೆ ಸಮಾನವಾದ ಸಾಮರ್ಥ್ಯವುಳ್ಳ ಆ ಅಸ್ತ್ರವು (ಆಗ್ನೇಯಾಸ್ತ್ರ) ವಿಜೃಂಭಿಸುತ್ತಿರುವುದನ್ನು ನೋಡಿ ಮಹೇಂದ್ರನಿಗೆ ಸಮನಾದ ಸಾಮರ್ಥ್ಯವುಳ್ಳ ಆ ದ್ರುಪದ ಪುತ್ರನು ಮೋಹಕ್ಕೆ ಒಳಗಾಗಲಿಲ್ಲ.

ತಸ್ಮೈ ಚ ತತ್ಕೈವ ಮಹಾಧನುಷ್ಮಾನ್
ಶರೈಸ್ತದಸ್ತ್ರಂ ಪ್ರತಿಬಾಧಮಾನಃ ।
ಅಥಾದದೇ ವಾರುಣಮನ್ಯದಸ್ತ್ರಂ
ಶಿಖಂಡ್ಯಥೋಗ್ರಂ ಪ್ರತಿಘಾತಾಯ ತಸ್ಯ ।
ತದಸ್ತ್ರಮಸ್ತ್ರೇಣ ವಿದಾರ್ಯಮಾಣಂ
ಖಸ್ಥಾಃ ಸುರಾ ದದೃಶುಃ ಪಾರ್ಥಿವಾಶ್ಚ ॥೨೮॥

ಮಹಾಧನುರ್ಧಾರಿಯಾದ ಅವನು ತನ್ನ ಬಾಣಗಳಿಂದ ಆ ಅಸ್ತ್ರವನ್ನು ನಿವಾರಣೆ ಮಾಡುತ್ತಾ ಅಲ್ಲಿಯೇ ನಿಂತನು. ಅನಂತರ ಆ ಅಸ್ತ್ರವನ್ನು ಪ್ರತಿಘಾತಗೊಳಿಸಲು ಉಗ್ರವಾದ ವಾರುಣಾಸ್ತ್ರವನ್ನು ಹೂಡಿದನು. ಶಲ್ಯನು ಪ್ರಯೋಗಿಸಿದ ಆಗ್ನೇಯಾಸ್ತ್ರವು ಶಿಖಂಡಿಯ ವಾರುಣಾಸ್ತ್ರದಿಂದ ನಾಶಹೊಂದುವುದನ್ನು ಅಂತರಿಕ್ಷದಲ್ಲಿ ನಿಂತ ದೇವತೆಗಳು ಮತ್ತು ರಣರಂಗದಲ್ಲಿದ್ದ ರಾಜರು ನೋಡಿದರು.

ಭೀಷ್ಮಸ್ತು ರಾಜನ್ ಸಮರೇ ಮಹಾತ್ಮಾ
ಧನುಃ ಸುಚಿತ್ರಂ ಧ್ವಜಮೇವ ಚಾಪಿ ।
ಛಿತ್ತ್ವಾ ನದತ್ ಪಾಂಡುಸುತಸ್ಯ ವೀರೋ
ಯುಧಿಷ್ಠಿರಸ್ಯಾಜಮೀಢಸ್ಯ ರಾಜ್ಞಃ ॥೨೯॥

ಎಲೈ ರಾಜನೇ, ಮಹಾತ್ಮರೂ, ವೀರರೂ ಆದ ಭೀಷ್ಮರಾದರೋ ಯುದ್ಧದಲ್ಲಿ ಪಾಂಡುಸುತನಾದ, ಅಜಮೀಢನಾದ ಯುಧಿಷ್ಠಿರನ ಅತ್ಯಂತ ಚಿತ್ರವಾದ ಧನುಸ್ಸನ್ನು ಮತ್ತು ಧ್ವಜವನ್ನು ಕತ್ತರಿಸಿ ಸಿಂಹನಾದವನ್ನು ಮಾಡಿದರು.

ತತಃ ಸಮುತ್ಸೃಜ್ಯ ಧನುಃ ಸಬಾಣಂ
ಯುಧಿಷ್ಠಿರಂ ವೀಕ್ಷ್ಯ ಭಯಾಭಿಭೂತಮ್ ।
ಗದಾಂ ಪ್ರಗೃಹ್ಯಾಭಿಪಪಾತ ಸಂಖ್ಯೇ
ಜಯದ್ರಥಂ ಭೀಮಸೇನಃ ಪದಾತಿಃ ॥೩೦॥

ಆಗ ಯುಧಿಷ್ಠಿರನು ಭಯದಿಂದ ಆವೃತವಾದುದನ್ನು ನೋಡಿ ಭೀಮಸೇನನು ಧನುಸ್ಸನ್ನು ಮತ್ತು ಬಾಣಗಳನ್ನು ತ್ಯಜಿಸಿ ಗದೆಯನ್ನು ತೆಗೆದುಕೊಂಡು ಪದಾತಿಯಾಗಿ ಸೈಂಧವನಾದ ಜಯದ್ರಥನ ಕಡೆಗೆ ಸಾಗಿಬಂದನು.

ತಮಾಪತಂತಂ ಮಹತಾ ಜವೇನ
ಜಯದ್ರಥಃ ಸಗದಂ ಭೀಮಸೇನಮ್ ।
ವಿವ್ಯಾಧ ಘೋರೈರ್ಯಮದಂಡಕಲ್ಪೈಃ
ಶತೈಃ ಶರೈಃ ಪಂಚಶತೈಃ ಸಮಂತಾತ್ ॥೩೧॥

ಗದೆಯನ್ನು ಹಿಡಿದು ತನ್ನ ಕಡೆಗೆ ಬಹಳ ವೇಗದಿಂದ ಸಾಗಿಬರುತ್ತಿದ್ದ ಭೀಮಸೇನನನ್ನುನೋಡಿ ಯಮದಂಡ ಸದೃಶವಾಗಿದ್ದ ಘೋರವಾದ ಐದು ನೂರು ಹರಿತವಾದ ಬಾಣಗಳನ್ನು ಭೀಮಸೇನನ ಮೇಲೆ ಎಲ್ಲ ಕಡೆಗಳಲ್ಲಿಯೂ ಪ್ರಯೋಗಿಸಿದನು.

ಅಚಿಂತಯಿತ್ವಾ ಸ ಶರಾಂಸ್ತರಸ್ವೀ
ವೃಕೋದರಃ ಕ್ರೋಧಪರೀತಚೇತಾಃ ।

ಜಘಾನ ವಾಹಾನ್ ಸಮರೇ ಸಮಸ್ತಾನ್
ಆರಟ್ಟಜಾನ್ ಸಿಂಧುರಾಜಸ್ಯ ಸಂಖೇ ॥೩೨॥

ಕ್ರೋಧಪೂರ್ಣ ಮನಸ್ಸುಳ್ಳವನೂ, ವೇಗಶಾಲಿಯೂ ಆದ ಆ ವೃಕೋದರನು ಆ ಬಾಣಗಳನ್ನು ಗಣನೆಗೇ ತೆಗೆದುಕೊಳ್ಳದೆ ಯುದ್ಧದಲ್ಲಿ ಸಿಂಧುರಾಜನ ರಥದ ಆರಟ್ಟದೇಶದಲ್ಲಿ ಜನಿಸಿದ ಎಲ್ಲ ಅಶ್ವಗಳನ್ನೂ ಕೊಂದನು.

ತತೋಽಭವೀಕ್ಷ್ಯಾಪ್ರತಿಮಪ್ರಭಾವಃ
ತವಾತ್ಮಜಸ್ತ್ವರಮಾಣೋ ರಥೇನ ।
ಅಭ್ಯಾಯಯೌ ಭೀಮಸೇನಂ ನಿಹಂತುಂ
ಸಮುದ್ಯತಾಸ್ತ್ರಃ ಸುರರಾಜಕಲ್ಪಃ ॥೩೩॥

ಆಗ ಅಸದೃಶ ಸಾಮರ್ಥ್ಯವುಳ್ಳ, ಸುರರಾಜನಿಗೆ ಸದೃಶನಾದ, ನಿನ್ನ ಪುತ್ರನು ಅಸ್ತ್ರವನ್ನು ಕೈಯಲ್ಲಿ ಎತ್ತಿಹಿಡಿದು ಭೀಮಸೇನನನ್ನು ಕೊಲ್ಲಲು ತನ್ನ ರಥದಿಂದ ಅವನ ಕಡೆಗೆ ಧಾವಿಸಿ ಬಂದನು.

ಜಯದ್ರಥೋ ಭಗ್ನವಾಹಂ ರಥಂ ತಂ
ತ್ಯಕ್ತ್ವಾ ಯಯೌ ಯತ್ರ ರಾಜಾ ಕುರೂಣಾಮ್ ।
ಭಯೇನ ಭೀಮಸ್ಯ ಸ ಮೂಢಚೇತಾಃ
ಸಸೌಬಲಸ್ತತ್ರ ಯುದ್ಧಸ್ಯ ಭೀತಃ ॥೩೪॥

ಭೀಮನ ಭಯದಿಂದ ದಿಕ್ಕು ತೋಚದಂತಿದ್ದ ಜಯದ್ರಥನು ಅಲ್ಲಿ ಶಕುನಿಯ ಜೊತೆಯಲ್ಲಿ ನಿಂತು ಯುದ್ಧ ಮಾಡಲು ಹೆದರಿ, ಅಶ್ವಗಳು ಭಗ್ನಗೊಂಡ ತನ್ನ ರಥವನ್ನು ಬಿಟ್ಟು ಕುರುರಾಜನಾದ ದುರ್ಯೋಧನನು ಯುದ್ಧ ಮಾಡುವ ಸ್ಥಳಕ್ಕೆ ಬಂದನು.

ಭೀಮೋಽಪ್ಯಥೈನಂ ಸಹಸಾ ವಿನದ್ಯ
ಪ್ರತ್ಯುದ್ಯಯೌ ಗದಯಾ ತರ್ಜಮಾನಃ ।
ಸಮುದ್ಯತಾಂ ತಾಂ ಯಮದಂಡಕಲ್ಪಾಂ
ದೃಷ್ಟ್ವಾ ಗದಾಂ ತೇ ಕುರವಃ ಸಮಂತಾತ್ ॥೩೫॥

ವಿಹಾಯ ಸರ್ವೇ ತವ ಪುತ್ರಮುಗ್ರಂ
ಪಾತಂ ಗದಾಯಾಃ ಪರಿಹರ್ತುಕಾಮಾಃ ।
ಅಪಕ್ರಾಂತಾಸ್ತುಮುಲೇ ಸಂವಿಮರ್ದೇ
ಸುದಾರುಣೇ ಭಾರತ ಮೋಹನೀಯೇ ॥೩೬॥

ಭೀಮಸೇನನೂ ಸಹ ಆಗ ತಕ್ಷಣ ಸಿಂಹನಾದವನ್ನು ಮಾಡಿ ಗದೆಯಿಂದ ಅವನನ್ನು ಹೆದರಿಸುತ್ತಾ ಅವನ ಕಡೆಗೆ ಸಾಗಿದನು. ಭೀಮಸೇನನು ಎತ್ತಿ ಹಿಡಿದ ಯಮದಂಡಕ್ಕೆ ಸದೃಶವಾದ ಆ ಗದೆಯನ್ನು ನೋಡಿ ಆ ಕುರುಗಳೆಲ್ಲರೂ ಆ ಗದೆಯ ಉಗ್ರಪಾತವನ್ನು ತಪ್ಪಿಸಿಕೊಳ್ಳಲು ಬಯಸಿ ಘೋರವಾದ ಮತ್ತು ಮೂರ್ಛಾಜನಕವಾದ ಯುದ್ಧವು ಸನ್ನಿಹಿತವಾಗಿರುವಾಗ ನಿನ್ನ ಪುತ್ರನನ್ನು ಒಬ್ಬನನ್ನೇ ಬಿಟ್ಟು ಓಡಿಹೋದರು.

ಅಮೂಢಚೇತಾಸ್ತ್ವಥ ಚಿತ್ರಸೇನೋ
ಮಹಾಗದಾಮಾಪತಂತೀಂ ನಿರೀಕ್ಷ್ಯ ।
ರಥಂ ಸಮುತ್ಸೃಜ್ಯ ಪದಾತಿರಾಜೌ
ಪ್ರಗೃಹ್ಯ ಖಡ್ಗಂ ವಿಮಲಂ ಚ ಚರ್ಮ ।
ಅವಪ್ಲುತಃ ಸಿಂಹ ಇವಾಚಲಾಗ್ರಾತ್
ಜಗಾಮ ಚಾನ್ಯಂ ಭುವಿ ಭೂಮಿದೇಶಮ್ ॥೩೭॥

ನಿನ್ನ ಪುತ್ರನಾದ ಚಿತ್ರಸೇನನಾದರೋ ಮನಸ್ಸಿನಲ್ಲಿ ಗಾಬರಿಗೊಳ್ಳದೆ ತನ್ನ ಕಡೆಗೆ ಬರುತ್ತಿದ್ದ ಆ ಮಹಾಗದೆಯನ್ನು ನೋಡಿ ರಥವನ್ನು ಬಿಟ್ಟು ಪರ್ವತದಿಂದ ಸಿಂಹವು ಇಳಿದಂತೆ ಕೆಳಗೆ ಹಾರಿ, ಯುದ್ಧಭೂಮಿಯಲ್ಲಿ ಪದಾತಿಯಾಗಿ ಖಡ್ಗ ಮತ್ತು ವಿಮಲವಾದ ಗುರಾಣಿಯನ್ನು ಹಿಡಿದು ರಣಭೂಮಿಯ ಇನ್ನೊಂದು ಪ್ರದೇಶಕ್ಕೆ ಹೋದನು.

ಗದಾಪಿ ಸಾ ಪ್ರಾಪ್ಯ ರಥಂ ಸುಚಿತ್ರಂ
ಸಾಶ್ವಂ ಸಸೂತಂ ವಿನಿಹತ್ಯ ಸಂಖೇ ।
ಜಗಾಮ ಭೂಮಿಂ ಜ್ವಲಿತಾ ಮಹೋಲ್ಕಾ
ಭ್ರಷ್ಟಾಂಬರಾದ್ ಗಾಮಿವ ಸಂಪತಂತೀ ॥೩೮॥

ಭೀಮಸೇನನು ಪ್ರಯೋಗಿಸಿದ ಆ ಗದೆಯಾದರೂ ಆಶ್ಚರ್ಯಕರವಾದ ಆ ರಥವನ್ನು ಸೇರಿ ಯುದ್ಧಭೂಮಿಯಲ್ಲಿ ಅಶ್ವ-ಸೂತ ಸಹಿತವಾದ ಅದನ್ನು ಪುಡಿ ಮಾಡಿ ಆಕಾಶದಿಂದ ಬಿದ್ದ ಜ್ವಲಿಸುವ ಮಹೋಲ್ಕೆಯಂತೆ ಭೂಮಿಯನ್ನು ಪ್ರವೇಶ ಮಾಡಿತು.

ಆಶ್ಚರ್ಯಭೂತಂ ಸುಮಹತ್ ತ್ವದೀಯಾ
ದೃಷ್ಟ್ವೈವ ತದ್ ಭಾರತ ಸಂಪ್ರಹೃಷ್ಟಾಃ ।
ಸರ್ವೇ ಏನೇದುಃ ಸಹಿತಾಃ ಸಮಂತಾತ್
ಪುಪೂಜಿರೇ ತವ ಪುತ್ರಂ ಸಸೈನ್ಯಾಃ ॥೩೯॥

ಎಲೈ ಭಾರತನೇ, ನಿನ್ನ ಪುತ್ರನಾದ ಚಿತ್ರಸೇನನ ಆಶ್ಚರ್ಯಭೂತವಾದ ಮಹಾಧೈರ್ಯವನ್ನು ನೋಡಿ ನಿನ್ನವರೆಲ್ಲರೂ ಸಂತೋಷಗೊಂಡು ಒಟ್ಟಿಗೆ ಸೇರಿ ಸಿಂಹನಾದವನ್ನು ಮಾಡಿದರು. ಸೈನ್ಯದ ಜೊತೆಯಲ್ಲಿ ಅವರೆಲ್ಲರೂ ನಿನ್ನ ಪುತ್ರನನ್ನು ಪೂಜಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಏಕಾಶೀತಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಏಕಚತ್ವಾರಿಂಶತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಎಂಬತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೆರಡನೆಯ ಅಧ್ಯಾಯ

ಭೀಷ್ಮ-ಯುಧಿಷ್ಠಿರಾದಿಗಳ ಯುದ್ಧ. ಸಪ್ತಮ ದಿವಸದ ಯುದ್ಧ ವಿರಾಮ.

ಸಂಜಯಃ

ವಿರಥಂ ತಂ ಸಮಾಸಾದ್ಯ ಚಿತ್ರಸೇನಂ ಮನಸ್ವಿನಮ್ ।
ರಥಮಾರೋಪಯಾಮಾಸ ವಿಕರ್ಣಸ್ತನಯಸ್ತವ ॥೧॥

ಸಂಜಯ– ನಿನ್ನ ಪುತ್ರನಾದ ವಿಕರ್ಣನು ವಿರಥನಾದರೂ ಧೈರ್ಯಶಾಲಿಯಾಗಿದ್ದ ಚಿತ್ರಸೇನನನ್ನು ಸಮೀಪಿಸಿ ಅವನನ್ನು ತನ್ನ ರಥಕ್ಕೆ ಏರಿಸಿಕೊಂಡನು.

ತಸ್ಮಿಂಸ್ತಥಾ ವರ್ತಮಾನೇ ತುಮುಲೇ ಸಂಕುಲೇ ಭೃಶಮ್ ।
ಭೀಷ್ಮಃ ಶಾಂತನವಸ್ತೂರ್ಣಂ ಯುಧಿಷ್ಠಿರಮುಪಾದ್ರವತ್ ॥೨॥

ಸಂಕುಲವಾದ ಯುದ್ಧವು ಹಾಗೆ ತೀವ್ರವಾಗಿ ನಡೆಯುತ್ತಿರಲು ಶಂತನು ಪುತ್ರರಾದ ಭೀಷ್ಮರು ಶೀಘ್ರವಾಗಿ ಯುಧಿಷ್ಠಿರನ ಬಳಿಗೆ ಧಾವಿಸಿ ಬಂದರು.

ತತಃ ಸರಥನಾಗಾಶ್ವಾಃ ಸಮಕಂಪಂತ ಸೃಂಜಯಾಃ ।
ಮೃತ್ಯೋರಾಸ್ಯಮನುಪ್ರಾಪ್ತಂ ಮೇನಿರೇ ಚ ಯುಧಿಷ್ಠಿರಮ್ ॥೩॥

ಆಗ ರಥಗಜಾಶ್ವಗಳಿಂದ ಕೂಡಿದ ಸೃಂಜಯರು ನಡುಗಿ ಹೋದರು ಮತ್ತು ಯುಧಿಷ್ಠಿರನು ಮೃತ್ಯುವಿನ ಬಾಯಿಗೆ ಸಿಲುಕಿದ್ದಾನೆಂದು ತಿಳಿದರು.

ಯುಧಿಷ್ಠಿರೋಽಪಿ ಕೌರವ್ಯ ಯಮಾಭ್ಯಾಂ ಸಹಿತಃ ಪ್ರಭುಃ ।
ಮಹೇಷ್ವಾಸಂ ನರವ್ಯಾಘ್ರಂ ಭೀಷ್ಮಂ ಶಾಂತನವಂ ಯಯೌ ॥೪॥

ಎಲೈ ಕೌರವ್ಯನೇ, ಪ್ರಭುವಾದ ಯುಧಿಷ್ಠಿರನೂ ಸಹ ನಕುಲ-ಸಹದೇವರ ಜೊತೆಯಲ್ಲಿ ಮಹಾಧನುರ್ಧಾರಿಗಳೂ, ನರಶ್ರೇಷ್ಠರೂ, ಶಂತನು ಪುತ್ರರೂ ಆದ ಭೀಷ್ಮರ ಕಡೆಗೆ ಹೋದನು.

ತತಃ ಶರಸಹಸ್ರಾಣಿ ಪ್ರಮುಂಚನ್ ಪಾಂಡವೋ ಯುಧಿ ।
ಭೀಷ್ಮಂ ಸಂಛಾದಯಾಮಾಸ ಯಥಾ ಮೇಘೋ ದಿವಾಕರಮ್ ॥೫॥

ಆನಂತರ ಪಾಂಡವನಾದ ಯುಧಿಷ್ಠಿರನು ಸಹಸ್ರಾರು ಬಾಣಗಳನ್ನು ಪ್ರಯೋಗಿಸಿ ಮೇಘವು ಸೂರ್ಯನನ್ನು ಮುಚ್ಚಿದಂತೆ ಭೀಷ್ಮರನ್ನು ಮುಚ್ಚಿದನು.

ತೇನ ಸಮ್ಯಕ್ ಪ್ರಣೀತಾನಿ ಶರಜಾಲಾನಿ ಭಾರತ ।
ಪ್ರತಿಜಗ್ರಾಹ ಗಾಂಗೇಯಃ ಶತಶೋಽಥ ಸಹಸ್ರಶಃ ॥೬॥

ಎಲೈ ಭಾರತನೇ, ಯುಧಿಷ್ಠಿರನು ನೂರಾರು, ಸಾವಿರಾರು ಸಂಖ್ಯೆಯಲ್ಲಿ ಚೆನ್ನಾಗಿ ಪ್ರಯೋಗಿಸಿದ ಬಾಣಸಮೂಹಗಳನ್ನು ಗಂಗಾಪುತ್ರರಾದ ಭೀಷ್ಮರು ಸ್ವೀಕರಿಸಿದರು.

ತಥೈವ ಶರಜಾಲಾನಿ ಭೀಷ್ಮೇಣಾಸ್ತಾನಿ ಮಾರಿಷ ।
ಆಕಾಶೇ ಸಮದೃಶ್ಯಂತ ಖಗಮಾನಾಂ ವ್ರಜಾ ಇವ ॥೭॥

ಎಲೈ ಪೂಜ್ಯನೇ, ಹಾಗೆಯೇ ಭೀಷ್ಮರು ಪ್ರಯೋಗಿಸಿದ ಬಾಣಗಳು ಆಕಾಶದಲ್ಲಿ ಪಕ್ಷಿಗಳ ಸಮೂಹದಂತೆ ಕಂಡುಬಂದವು.

ನಿಮೇಷಾರ್ಧಾಚ್ಚ ಕೌಂತೇಯಂ ಭೀಷ್ಮಃ ಶಾಂತನವೋ ಯುಧಿ ।
ಅದೃಶ್ಯಂ ಸಮರೇ ಚಕ್ರೇ ಶರಜಾಲೇನ ಭಾರತ ॥೮॥

ಅರ್ಧನಿಮಿಷ ಕಾಲದಲ್ಲಿ ಶಂತನುಪುತ್ರರಾದ ಭೀಷ್ಮರು ಯುದ್ಧದಲ್ಲಿ ತಮ್ಮ ಬಾಣಗಳ ಸಮೂಹದಿಂದ ಕುಂತೀಪುತ್ರನಾದ ಯುಧಿಷ್ಠಿರನನ್ನು ಅದೃಶ್ಯನನ್ನಾಗಿ ಮಾಡಿದರು.

ತತೋ ಯುಧಿಷ್ಠಿರೋ ರಾಜಾ ಕೌರವ್ಯಸ್ಯ ಮಹಾತ್ಮನಃ ।
ನಾರಾಚಂ ಪ್ರೇಷಯಾಮಾಸ ಕ್ರುದ್ಧ ಆತೀವಿಷೋಪಮಮ್ ॥೯॥

ಆಗ ರಾಜನಾದ ಯುಧಿಷ್ಠಿರನು ಕ್ರೋಧಗೊಂಡು ಮಹಾತ್ಮರಾದ ಕೌರವ್ಯರಾದ ಭೀಷ್ಮರ ಮೇಲೆ ಸರ್ಪದಂತಿದ್ದ ಒಂದು ನಾರಾಚವನ್ನು ಪ್ರಯೋಗಿಸಿದನು.

ಆಸಂಪ್ರಾಪ್ತಂ ತಪ್ತಂ ತು ಕ್ಷುರಾಭ್ಯೇಣ ಮಹಾರಥಃ ।
ಚಿಚ್ಛೇದ ಸಮರೇ ರಾಜನ್ ಭೀಷ್ಮಶ್ಚಾಸ್ಯ ಧನುಶ್ಚ್ಯುತಮ್ ॥೧೦॥

ಎಲೈ ರಾಜನೇ, ಮಹಾರಥರಾದ ಭೀಷ್ಮರು ಯುಧಿಷ್ಠಿರನ ಧನುಸ್ಸಿನಿಂದ ಹೊರಟ ಆ ನಾರಾಚವು ತಮ್ಮ ಬಳಿಗೆ ಬರುವುದಕ್ಕಿಂತ ಮುಂಚೆಯೇ ಕ್ಷುರಪ್ರದಿಂದ ಅದನ್ನು ಕತ್ತರಿಸಿದರು.

ತಂ ತು ಛಿತ್ತ್ವಾ ರಣೇ ಭೀಷ್ಮೋ ನಾರಾಚಂ ಕಾಲಸಮ್ಮಿತಮ್ ।
ನಿಜಘ್ನೇ ಕೌರವೇಂದ್ರಸ್ಯ ಹಯಾನ್ ಕಾಂಚನಭೂಷಣಾನ್ ॥೧೧॥

ಭೀಷ್ಮರು ಮೃತ್ಯುವಿನಂತಿದ್ದ ಆ ನಾರಾಚವನ್ನು ಯುದ್ಧದಲ್ಲಿ ಕತ್ತರಿಸಿ ಯುಧಿಷ್ಠಿರನ ಸುವರ್ಣಭೂಷಿತವಾದ ಅಶ್ವಗಳನ್ನು ಕೊಂದರು.

ಹತಾಶ್ವಂ ತು ರಥಂ ತ್ಯಕ್ತ್ವಾ ಧರ್ಮಪುತ್ರೋ ಯುಧಿಷ್ಠಿರಃ ।
ಆರುರೋಹ ರಥಂ ತೂರ್ಣಂ ನಕುಲಸ್ಯ ಮಹಾತ್ಮನಃ ॥೧೨॥

ಧರ್ಮಪುತ್ರನಾದ ಯುಧಿಷ್ಠಿರನು ಅಶ್ವಗಳು ಮೃತವಾದ ತನ್ನ ರಥವನ್ನು ಬಿಟ್ಟು ಶೀಘ್ರವಾಗಿ ಮಹಾತ್ಮನಾದ ನಕುಲನ ರಥವನ್ನು ಹತ್ತಿದನು.

ಯಮಾವಪಿ ಸುಸಂಕ್ರುದ್ಧಃ ಸಮಾಸಾದ್ಯ ರಣೇ ತದಾ ।
ಶರೈಃ ಸಂಘಾದಯಾಮಾಸ ಭೀಷ್ಮಃ ಪರಪುರಂಜಯಃ ॥೧೩॥

ಆಗ ಪರಪುರಂಜಯರಾದ ಭೀಷ್ಮರು ಬಹಳ ಕೋಪಗೊಂಡು ರಣರಂಗದಲ್ಲಿ ನಕುಲ-ಸಹದೇವರ ಸಮೀಪಕ್ಕೆ ಬಂದು ಅವರನ್ನೂ ತಮ್ಮ ಬಾಣಗಳಿಂದ ಮುಚ್ಚಿಹಾಕಿದರು.

ತೌ ತು ದೃಷ್ಟ್ವಾ ಮಹಾರಾಜ ಭೀಷ್ಮಬಾಣಪ್ರಪೀಡಿತೌ ।
ಜಗಾಮಾಥ ಪರಾಂ ಚಿಂತಾಂ ಭೀಷ್ಮಸ್ಯ ವಧಕಾಂಕ್ಷಯಾ ॥೧೪॥

ಎಲೈ ಮಹಾರಾಜನೇ, ಅವರೂ ಭೀಷ್ಮರ ಬಾಣದಿಂದ ಚೆನ್ನಾಗಿ ಪೀಡಿತರಾದುದನ್ನು ನೋಡಿ ಭೀಷ್ಮರ ವಧೆಯನ್ನು ಬಯಸಿದ ಯುಧಿಷ್ಠಿರನು ಚಿಂತಾಕ್ರಾಂತನಾದನು.

ತತೋ ಯುಧಿಷ್ಠಿರೋ ವಶ್ಯಾನ್ ರಾಜ್ಞಸ್ತಾನ್ ಸಮಚೋದಯತ್ ।
ಭೀಷ್ಮಂ ಶಾಂತನವಂ ಸರ್ವೇ ನಿಹತೇತಿ ಸುಹೃದ್ಗಣಾನ್ ॥೧೫॥

ಅನಂತರ ಯುಧಿಷ್ಠಿರನು ತನಗೆ ಅಧೀನರೂ, ಸುಹೃದಯರೂ ಆದ ಆ ರಾಜರನ್ನು ಕುರಿತು ನೀವೆಲ್ಲರೂ ಶಂತನುಪುತ್ರರಾದ ಭೀಷ್ಮರನ್ನು ಸಂಹರಿಸಿ ಎಂದು ಪ್ರಚೋದಿಸಿದನು.

ತತಸ್ತೇ ಪಾರ್ಥಿವಾಃ ಸರ್ವೇ ಶ್ರುತ್ವಾ ಪಾರ್ಥಸ್ಯ ಭಾಷಿತಮ್ ।
ಮಹತಾ ರಥವಂಶೇನ ಪರಿವವ್ರುಃ ಪಿತಾಮಹಮ್ ॥೧೬॥

ರಾಜನ ಆ ಮಾತುಗಳನ್ನು ಕೇಳಿ ಆಗ ಆ ರಾಜರೆಲ್ಲರೂ ದೊಡ್ಡ ರಥ ಸಮೂಹದಿಂದ ಪಿತಾಮಹರಾದ ಭೀಷ್ಮರನ್ನು ಸುತ್ತುವರಿದರು.

ಸ ಸಮಂತಾತ್ ಪರಿವೃತಃ ಪಿತಾ ದೇವವ್ರತಸ್ತವ ।
ಚಕ್ರೀಡ ಧನುಷಾ ರಾಜನ್ ಪಾತಯಾನೋ ಮಹಾರಥಾನ್ ॥೧೭॥

ಎಲೈ ರಾಜನೇ, ನಿನ್ನ ತಂದೆಯಾದ ದೇವವ್ರತರು ಅಪ್ಪು ಜನ ಮಹಾರಥರಿಂದ ಸುತ್ತುವರಿಯಲ್ಪಟ್ಟಿದ್ದರೂ ತನ್ನ ಧನುಸ್ಸಿನಿಂದ ಅವರನ್ನು ಉರುಳಿಸುತ್ತಾ ಆಟವಾಡಿದರು.

ತಂ ಚರಂತಂ ರಣೇ ಪಾರ್ಥಾ ದದೃಶುಃ ಕೌರವಂ ಯುಧಿ ।
ಮೃಗಮಧ್ಯಂ ಪ್ರವಿಶ್ಯೇವ ಯಥಾ ಸಿಂಹಶಿಶುಂ ವನೇ ॥೧೮॥

ಕಾಡಿನಲ್ಲಿ ಜಿಂಕೆಗಳ ಮಧ್ಯದಲ್ಲಿ ಸಿಂಹದ ಮರಿಯಂತೆ ಯುದ್ಧದಲ್ಲಿ ಚಲಿಸುವ ಭೀಷ್ಮರನ್ನು ಪಾಂಡವರು ನೋಡಿದರು.

ತರ್ದಯಾನಂ ರಣೇ ಶೂರಾಂಸ್ತ್ವರಯಾನಂ ಚ ಸಾಯಕೈಃ ।
ದೃಷ್ಟ್ವಾ ತ್ರೇಸುರ್ಮಹಾರಾಜ ಸಿಂಹಂ ಮೃಗಗಣಾ ಇವ ॥೧೯॥

ಎಲೈ ಮಹಾರಾಜನೇ, ರಣರಂಗದಲ್ಲಿ ಶೂರರನ್ನು ಹೆದರಿಸುತ್ತಾ, ತಮ್ಮ ಬಾಣಗಳಿಂದ ಅವರನ್ನು ಹಿಂಸೆಗೊಳಿಸುತ್ತಿದ್ದ ಭೀಷ್ಮರನ್ನು ನೋಡಿ ಸಿಂಹಕ್ಕೆ ಹೆದರಿದ ಜಿಂಕೆಗಳ ಸಮೂಹದಂತೆ ಆ ರಾಜರು ಹೆದರಿದರು.

ರಣೇ ಭರತಸಿಂಹಸ್ಯ ದದೃಶುಃ ಕ್ಷತ್ರಿಯಾ ಗತಿಮ್ ।
ಅಗ್ನೇರ್ವಾಯುಸಹಾಯಸ್ಯ ಯಥಾ ಕ್ಷಯಂ ದಿಧಕ್ಷತಃ ॥೨೦॥

ಭರತಸಿಂಹರಾದ ಭೀಷ್ಮರ ವನವನ್ನು ಸುಡುವ ವಾಯುಸಹಾಯವುಳ್ಳ ಅಗ್ನಿಯಂತೆ ರಣರಂಗದಲ್ಲಿ ತಿರುಗಾಡುವ ಗತಿಯನ್ನು ಕ್ಷತ್ರಿಯರು ನೋಡಿದರು.

ಶಿರಾಂಸಿ ರಥಿನಾಂ ಭೀಷ್ಮಃ ಪಾತಯಾಮಾಸ ಸಂಯುಗೇ ।
ತಾಳೇಭ್ಯ ಇವ ಪಕ್ವಾನಿ ಫಲಾನಿ ಕುಶಲೋ ನರಃ ॥೨೧॥

ನಿಪುಣನಾದ ಮನುಷ್ಯನು ತಾಳವೃಕ್ಷದಿಂದ ಪಕ್ವವಾದ ಫಲಗಳನ್ನು ಉದುರಿಸಿದಂತೆ ಯುದ್ಧದಲ್ಲಿ ಭೀಷ್ಮರು ರಥಿಕರ ಶಿರಸ್ಸುಗಳನ್ನು ಉರುಳಿಸಿದರು.

ಪತದ್ಭಿಶ್ಚ ಮಹಾರಾಜ ಶಿರೋಭಿರ್ಧರಣೀತಳೇ ।
ಬಭೂವ ತುಮುಲಃ ಶಬ್ದಃ ಪತತಾಮಶ್ಮನಾಮಿವ ॥೨೨॥

ಎಲೈ ಮಹಾರಾಜನೇ, ಭೂಮಿಯ ಮೇಲೆ ಬೀಳುವ ಆ ಶಿರಸ್ಸುಗಳಿಂದ ಉಂಟಾದ ತೀವ್ರವಾದ ಶಬ್ದವು ಕೆಳಗೆ ಬೀಳುವ ಕಲ್ಲುಗಳ ಶಬ್ದದಂತೆ ಇದ್ದಿತು.

ತಸ್ಮಿಂಸ್ತು ತುಮುಲೇ ಯುದ್ಧೇ ವರ್ತಮಾನೇ ಸುದಾರುಣೇ ।
ಸರ್ವೇಷಾಮೇವ ಸೈನ್ಯಾನಾಮಾಸೀದ್ ವ್ಯತಿಕರೋ ಮಹಾನ್ ॥೨೩॥

ತೀವ್ರವೂ, ಪರಮದಾರುಣವೂ ಆದ ಆ ಯುದ್ಧವು ಹಾಗೆ ನಡೆಯುತ್ತಿರಲು ಎಲ್ಲ ಸೈನ್ಯಗಳಿಗೂ ದೊಡ್ಡ ಮಿಶ್ರಣವುಂಟಾಯಿತು.

ಭಿನ್ನೇಷು ತೇಷು ವ್ಯೂಹೇಷು ಕ್ಷತ್ರಿಯಾ ಇತರೇತರಮ್ ।
ಏಕಮೇಕಂ ಸಮಾಹೂಯ ಯುದ್ಧಾಯೈವೋಪತಸ್ಥಿರೇ ॥೨೪॥

ಮೊದಲು ರಚಿಸಿದ ವ್ಯೂಹಗಳು ಭೇದಿಸಲ್ಪಡುತ್ತಿರಲು ಕ್ಷತ್ರಿಯರು ಪರಸ್ಪರವಾಗಿ ಒಬ್ಬರನ್ನೊಬ್ಬರು ಆಹ್ವಾನಿಸಿ ಯುದ್ಧಕ್ಕೆ ನಿಂತರು.

ಶಿಖಂಡೀ ತು ಸಮಾಸಾದ್ಯ ಭರತಾನಾಂ ಪಿತಾಮಹಮ್ ।
ಅಭಿದುದ್ರಾವ ವೇಗೇನ ತಿಷ್ಠ ತಿಷ್ಠೇತಿ ಚಾಬ್ರವೀತ್ ॥೨೫॥

ಶಿಖಂಡಿಯಾದರೋ ಭರತರ ಪಿತಾಮಹರಾದ ಭೀಷ್ಮರ ಕಡೆಗೆ ವೇಗದಿಂದ ಸಾಗಿ ನಿಲ್ಲು, ನಿಲ್ಲು ಎಂದು ಹೇಳಿದನು.

ಅನಾದೃತ್ಯ ತತೋ ಭೀಷ್ಮಂ ಶಿಖಂಡಿನಮಾಹವೇ ।
ಪ್ರಯಯೌ ಸೃಂಜಯಾನ್ ಕ್ರುದ್ಧಃ ಸ್ತ್ರೀತ್ವಂ ಚಿಂತ್ಯ ಶಿಖಂಡಿನಃ ॥೨೬॥

ಭೀಷ್ಮರು ಶಿಖಂಡಿಯ ಸ್ತ್ರೀತ್ವವನ್ನು ಸ್ಮರಿಸಿ ರಣರಂಗದಲ್ಲಿ ಅವನನ್ನು ಗಣನೆಗೇ ತೆಗೆದುಕೊಳ್ಳದ ಕ್ರೋಧದಿಂದ ಸೃಂಜಯರ ಕಡೆಗೆ ಹೊರಟರು.

ಸೃಂಜಯಾಸ್ತು ತತೋ ಹೃಷ್ಟಾ ದೃಷ್ಟ್ವಾ ಭೀಷ್ಮಂ ಮಹಾರಥಮ್ ।
ಸಿಂಹನಾದಾನ್ ಬಹುವಿಧಾಂಶ್ಚಕ್ರುಃ ಶಂಖವಿಮಿಶ್ರಿತಾನ್ ॥೨೭॥

ಸೃಂಜಯರಾದರೋ ಮಹಾರಥರಾದ ಭೀಷ್ಮರು ತಮ್ಮ ಕಡೆಗೆ ಬರುತ್ತಿರುವುದನ್ನು ನೋಡಿ ಸಂತೋಷಗೊಂಡು ಶಂಖನಾದ ಮಿಶ್ರಿತವಾದ ಅನೇಕವಿಧವಾದ ಸಿಂಹನಾದಗಳನ್ನು ಮಾಡಿದರು.

ತತಃ ಪ್ರವವೃತೇ ಯುದ್ಧಂ ವ್ಯತಿಷಕ್ತರಥದ್ವಿಪಮ್ ।
ಅಪರಾಂ ದಿಶಮಾಸ್ಥಾಯ ಸ್ಥಿತೇ ಸವಿತರಿ ಪ್ರಭೋ ॥೨೮॥

ಅನಂತರ ಸೂರ್ಯನು ಪಶ್ಚಿಮದಿಕ್ಕಿಗೆ ಹೋಗುತ್ತಿರಲು ರಥ-ಗಜಗಳು ಪರಸ್ಪರ ಮಿತ್ರಿತವಾಗಿ ಯುದ್ಧವು ಪ್ರವೃತ್ತವಾಯಿತು.

ಧೃಷ್ಟದ್ಯುಮ್ನೋಽಥ ಪಾಂಚಾಲ್ಯಃ ಸಾತ್ಯಕಿಶ್ಚ ಮಹಾರಥಃ ।
ಪೀಡಯಂತೌ ಭೃಶಂ ಸೈನ್ಯಂ ಶಕ್ತಿತೋಮರವೃಷ್ಟಿಭಿಃ ।
ಶಸ್ತ್ರೈಶ್ಚ ಬಹುಭೀ ರಾಜನ್ ಜಘ್ನತುಸ್ತಾವಕಾನ್ ರಣೇ ॥೨೯॥

ಎಲೈ ರಾಜನೇ, ಪಾಂಚಾಲದೇಶದ ಧೃಷ್ಟದ್ಯುಮ್ನನೂ ಮತ್ತು ಮಹಾರಥನಾದ ಸಾತ್ಯಕಿಯೂ ಸಹ ಶಕ್ತಿ, ತೋಮರ, ಋಷ್ಟಿಗಳಿಂದಲೂ ಮತ್ತು ಅನೇಕ ಶಸ್ತ್ರಗಳಿಂದಲೂ ನಿನ್ನ ಸೈನ್ಯವನ್ನು ಬಹಳವಾಗಿ ಪೀಡಿಸುತ್ತಾ ರಣರಂಗದಲ್ಲಿ ನಿನ್ನವರನ್ನು ಸಂಹರಿಸಿದರು.

ತೇ ಹನ್ಯಮಾನಾಃ ಸಮರೇ ತಾವಕಾಃ ಪುರುಷರ್ಷಭ ।
ಆರ್ಯಾಂ ಯುದ್ಧೇ ಮತಿಂ ಕೃತ್ವಾ ನ ತ್ಯಜಂತಿ ಸ್ಮ ಸಂಯುಗಮ್ ।
ಯಥೋತ್ಸಾಹಂ ಚ ಸಮರೇ ಜಘ್ನುರ್ಲೋಕಂ ಮಹಾರಥಾಃ ॥೩೦॥

ಎಲೈ ಪುರುಷಶ್ರೇಷ್ಠನೇ, ಯುದ್ಧದಲ್ಲಿ ಹೀಗೆ ಪ್ರಹಾರಕ್ಕೆ ಒಳಗಾದ ನಿನ್ನವರು ಉದಾತ್ತವಾದ ಬುದ್ಧಿಯನ್ನು ಹೊಂದಿದವರಾಗಿ ಯುದ್ಧವನ್ನು ತೊರೆಯಲಿಲ್ಲ. ಮಹಾರಥರಾದ ಅವರು ತಮ್ಮ ಉತ್ಸಾಹಕ್ಕೆ ಅನುಗುಣವಾಗಿ ಯುದ್ಧದಲ್ಲಿ ಶತ್ರುಗಳ ಯೋಧರನ್ನು ಕೊಂದರು.

ತತ್ರಾಕ್ರಂದೋ ಮಹಾನಾಸೀತ್ ತಾವಕಾನಾಂ ಮಹಾತ್ಮನಾಮ್ ।
ವಧ್ಯತಾಂ ಸಮರೇ ರಾಜನ್ ಪಾರ್ಷತೇನ ಮಹಾತ್ಮನಾ ॥೩೧॥

ಎಲೈ ರಾಜನೇ, ಮಹಾತ್ಮನಾದ ಧೃಷ್ಟದ್ಯುಮ್ನನಿಂದ ಮಹಾತ್ಮರಾದ ನಿನ್ನವರು ಹೀಗೆ ವಧಿಸಲ್ಪಡುತ್ತಿರುವಾಗ ನಿಮ್ಮ ಸೈನ್ಯದಲ್ಲಿ ದೊಡ್ಡ ಚೀರಾಟ ಉಂಟಾಯಿತು.

ತಂ ಶ್ರುತ್ವಾ ನಿನದಂ ಘೋರಂ ತಾವಕಾನಾಂ ಮಹಾರಥೌ ।
ವಿಂದಾನುವಿಂದಾವಾವಂತ್ಯೌ ಪಾರ್ಷತಂ ಪ್ರತ್ಯುಪಸ್ಥಿತೌ ॥೩೨॥

ಆ ಘೋರವಾದ ನಿನಾದವನ್ನು ಕೇಳಿ ಅವಂತಿದೇಶದ ಮಹಾರಥರಾದ ವಿಂದಾನುವಿಂದರು ಧೃಷ್ಟದ್ಯುಮ್ನನನ್ನು ಎದುರಿಸಿದರು.

ತೌ ತಸ್ಯ ತುರಗಾನ್ ಹತ್ವಾ ತ್ವರಮಾಣೌ ಮಹಾರಥೌ ।
ಧಾದಯಾಮಾಸತುರುಭೌ ಶರವರ್ಷೇಣ ಪಾರ್ಷತಮ್ ॥೩೩॥

ಮಹಾರಥರಾದ ಅವರಿಬ್ಬರೂ ಕ್ಷಿಪ್ರವಾಗಿ ಯುದ್ಧವನ್ನು ಮಾಡುತ್ತಾ ಧೃಷ್ಟದ್ಯುಮ್ನನ ಅಶ್ವಗಳನ್ನು ಕೊಂದು ಬಾಣಗಳ ಮಳೆಯಿಂದ ಅವನನ್ನೂ ಮುಚ್ಚಿಹಾಕಿದರು.

ಅವಪ್ಲುತ್ಯಾಥ ಪಾಂಚಾಲ್ಯೋ ರಥಾತ್ ತೂರ್ಣಂ ಮಹಾಬಲಃ ।
ಆರುರೋಹ ರಥಂ ತೂರ್ಣಂ ಸಾತ್ಯಕೇಃ ಸುಮಹಾತ್ಮನಃ ॥೩೪॥

ಆಗ ಮಹಾಬಲನಾದ ಧೃಷ್ಟದ್ಯುಮ್ನನು ತನ್ನ ರಥದಿಂದ ಶೀಘ್ರವಾಗಿ ಕೆಳಗೆ ಹಾರಿ ಅಷ್ಟೇ ಶೀಘ್ರವಾಗಿ ಮಹಾತ್ಮನಾದ ಸಾತ್ಯಕಿಯ ರಥವನ್ನು ಏರಿದನು.

ತತೋ ಯುಧಿಷ್ಠಿರೋ ರಾಜಾ ಮಹತ್ಯಾ ಸೇನಯಾ ವೃತಃ ।
ಆವಂತ್ಯೌ ಸಮರೇ ಕ್ರುದ್ಧಾವಭ್ಯಯಾತ್ ಸ ಪರಂತಪೌ ॥೩೫॥

ಆಗ ರಾಜನಾದ ಯುಧಿಷ್ಠಿರನು ದೊಡ್ಡ ಸೈನ್ಯದಿಂದ ಕೂಡಿ ಶತ್ರುತಾಪನರೂ, ಕ್ರುದ್ಧರೂ ಆದ ಅವಂತಿದೇಶದ ಆ ಇಬ್ಬರು ಸಹೋದರರ ಕಡೆಗೆ ಬಂದನು.

ತಥೈವ ತವ ಪುತ್ರೋಽಪಿ ಸರ್ವೋದ್ಯೋಗೇನ ಮಾರಿಷ ।
ವಿಂದಾನುವಿಂದಾವಾವಂತ್ಯೌ ಪರಿವಾರ್ಯೋಪತಸ್ಥಿವಾನ್ ॥೩೬॥

ಎಲೈ ಪೂಜ್ಯನೇ, ಹಾಗೆಯೇ ನಿನ್ನ ಪುತ್ರನೂ ಸಹ ಸರ್ವಪ್ರಯತ್ನದಿಂದ ಅವಂತಿದೇಶದ ವಿಂದಾನುವಿಂದರನ್ನು ಸುತ್ತುವರಿದು ನಿಂತನು.

ಅರ್ಜುನಶ್ಚಾಪಿ ಸಂಕ್ರುದ್ಧಃ ಕ್ಷತ್ರಿಯಾನ್ ಕ್ಷತ್ರಿಯರ್ಷಭ ।
ಅಯೋಧಯತ ಸಂಗ್ರಾಮೇ ವಜ್ರಪಾಣಿರಿವಾಸುರಾನ್ ॥೩೭॥

ಎಲೈ ಕ್ಷತ್ರಿಯಶ್ರೇಷ್ಠನೇ, ಬಹಳ ಕೋಪಗೊಂಡ ಅರ್ಜುನನೂ ಸಹ ಯುದ್ಧದಲ್ಲಿ ವಜ್ರಪಾಣಿಯಾದ ಇಂದ್ರನು ಅಸುರರ ಜೊತೆಯಲ್ಲಿ ಯುದ್ಧವನ್ನು ಮಾಡಿದಂತೆ ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ದ್ರೋಣಶ್ಚ ಸಮರೇ ಕ್ರುದ್ಧಃ ಪುತ್ರಸ್ಯ ಪ್ರಿಯಕೃತ್ತವ ।
ವ್ಯಧಮತ್ ಸರ್ವಪಾಂಚಾಲಾನ್ ತೂಲರಾಶಿಮಿವಾನಲಃ ॥೩೮॥

ನಿನ್ನ ಪುತ್ರರಿಗೆ ಪ್ರಿಯವನ್ನು ಮಾಡುವ ದ್ರೋಣರೂ ಸಹ ಕೋಪಗೊಂಡು ಅಗ್ನಿಯು ಹತ್ತಿಯ ರಾಶಿಯನ್ನು ನಾಶಗೊಳಿಸುವಂತೆ ಎಲ್ಲ ಪಾಂಚಾಲರನ್ನೂ ನಾಶಗೊಳಿಸಿದರು.

ದುರ್ಯೋಧನಪುರೋಗಾಸ್ತು ಪುತ್ರಾಸ್ತವ ವಿಶಾಂಪತೇ ।
ಪರಿವಾರ್ಯ ರಣೇ ಭೀಷ್ಮಂ ಯುಯುಧುಃ ಪಾಂಡವೈಃ ಸಹ ॥೩೯॥

ಎಲೈ ರಾಜನೇ, ದುರ್ಯೋಧನನೇ ಮೊದಲಾದ ನಿನ್ನ ಪುತ್ರರು ಯುದ್ಧದಲ್ಲಿ ಭೀಷ್ಮರನ್ನು ಸುತ್ತುವರಿದು ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ತತೋ ದುರ್ಯೋಧನೋ ರಾಜಾ ಲೋಹಿತಾಯತಿ ಭಾಸ್ಕರೇ ।
ಅಬ್ರವೀತ್ ತಾವಕಾನ್ ಸರ್ವಾನ್ ತ್ವರಧ್ವಮಿತಿ ಭಾರತ ॥೪೦॥

ಎಲೈ ಭಾರತನೇ, ಆಗ ಸೂರ್ಯನು ಕೆಂಪುಬಣ್ಣಕ್ಕೆ ತಿರುಗುತ್ತಿರಲು ರಾಜನಾದ ದುರ್ಯೋಧನನು ನಿನ್ನವರೆಲ್ಲರನ್ನೂ ಕುರಿತು ತ್ವರೆ ಮಾಡಿ ಎಂದು ಹೇಳಿದನು.

ಯುಧ್ಯತಾಂ ತು ತಥಾ ತೇಷಾಂ ಕುರ್ವತಾಂ ಕರ್ಮ ದುಷ್ಕರಮ್ ।
ಅಸ್ತಂ ಗಿರಿಮಥಾರೂಢೇ ನ ಪ್ರಕಾಶತಿ ಭಾಸ್ಕರೇ ॥೪೧॥

ಪ್ರಾವರ್ತತ ನದೀ ಘೋರಾ ಶೋಣಿತೌಘತರಂಗಿಣೀ ।
ಗೋಮಾಯುಗಣಸಂಕೀರ್ಣಾ ಕ್ಷಣೇನ ರಜನೀಮುಖೇ ॥೪೨॥

ದುಷ್ಕರವಾದ ಕಾರ್ಯವನ್ನು ಮಾಡಿ ಅವರು ಹಾಗೆ ಯುದ್ಧವನ್ನು ಮಾಡುತ್ತಿರಲು ಸೂರ್ಯನು ಅಸ್ತಗಿರಿಯವನ್ನು ಏರುತ್ತಿರಲು ರಾತ್ರಿಯ ಪ್ರಾರಂಭದಲ್ಲಿ ಒಂದು ಕ್ಷಣದಲ್ಲಿ ನರಿಗಳ ಸಮೂಹದಿಂದ ನಿಬಿಡವಾದ ರಕ್ತಸಮೂಹದ ತರಂಗವುಳ್ಳ ಘೋರವಾದ ನದಿಯು ಹರಿಯಿತು.

ಶಿವಾಭಿರಶಿವಾಭಿಶ್ಚ ರುವದ್ಭಿರ್ಭೈರವಂ ರವಮ್ ।
ಘೋರಮಾಯೋಧನಂ ಜಜ್ಞೇ ಭೂತಸಂಘಸಮಾಕುಲಮ್ ॥೪೩॥

ನರಿಗಳೂ, ಮೃಗ-ಪ್ರಾಣಿಗಳೂ ಭೈರವವಾದ ನಾದವನ್ನು ಮಾಡುತ್ತಿರಲು ಭೂತಗಣಗಳಿಂದ ನಿಬಿಡವಾದ ಆ ರಣರಂಗವು ಘೋರವಾಯಿತು.

ರಾಕ್ಷಸಾಶ್ಚ ಪಿಶಾಚಾಶ್ಚ ತಥಾನ್ಯೇ ಪಿಶಿತಾಶನಾಃ ।
ಸಮಂತತೋ ವ್ಯದೃಶ್ಯಂತ ಶತಶೋಽಥ ಸಹಸ್ರಶಃ ॥೪೪॥

ರಾಕ್ಷಸರು, ಪಿಶಾಚಿಗಳು ಮತ್ತು ಉಳಿದ ಮಾಂಸಾಹಾರಿಗಳು ಎಲ್ಲ ಕಡೆಗಳಲ್ಲಿಯೂ ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ಕಂಡುಬಂದರು.

ಅರ್ಜುನೋಽಥ ಸುಶರ್ಮಾದೀನ್ ರಾಜ್ಞಸ್ತಾನ್ ಸಪದಾನುಗಾನ್ ।
ವಿಜಿತ್ಯ ಪೃತನಾಮಧ್ಯೇ ಯಯೌ ಸ್ವಶಿಬಿರಂ ಪ್ರತಿ ॥೪೫॥

ಆಗ ಅರ್ಜುನನು ಅನುಚರರಿಂದ ಸಹಿತರಾದ ಸುಶರ್ಮ ಮೊದಲಾದ ರಾಜರನ್ನು ರಣರಂಗದ ಮಧ್ಯದಲ್ಲಿ ಗೆದ್ದು ತನ್ನ ಶಿಬಿರಕ್ಕೆ ಹೋದನು.

ಯುಧಿಷ್ಠಿರೋಽಪಿ ಕೌರವ್ಯ ಭ್ರಾತೃಭ್ಯಾಂ ಸಹಿತಸ್ತದಾ ।
ಯಯೌ ಸ್ವಶಿಬಿರಂ ರಾಜಾ ನಿಶಾಯಾಂ ಸೇನಯಾ ವೃತಃ ॥೪೬॥

ರಾತ್ರಿಯು ಆವರಿಸುತ್ತಿರಲು ಕೌರವ್ಯನಾದ ಯುಧಿಷ್ಠಿರ ರಾಜನೂ ಸಹ ತನ್ನ ತಮ್ಮಂದಿರಾದ ನಕುಲ-ಸಹದೇವರನ್ನು ಒಡಗೂಡಿ ತನ್ನ ಶಿಬಿರಕ್ಕೆ ಹೋದನು.

ಭೀಮಸೇನೋಽಪಿ ರಾಜೇಂದ್ರ ದುರ್ಯೋಧನಮುಖಾನ್ ರಥಾನ್ ।
ಅವಜಿತ್ಯ ತತಃ ಸಂಖೇ ಯಯೌ ಸ್ವಶಿಬಿರಂ ಪ್ರತಿ ॥೪೭॥

ಎಲೈ ರಾಜೇಂದ್ರನೇ, ಭೀಮಸೇನನೂ ಸಹ ದುರ್ಯೋಧನ ಮೊದಲಾದ ರಥರನ್ನು ಯುದ್ಧದಲ್ಲಿ ಪರಾಭವಗೊಳಿಸಿ ತನ್ನ ಶಿಬಿರಕ್ಕೆ ಹೋದನು.

ದುರ್ಯೋಧನೋಽಪಿ ನೃಪತಿಃ ಪರಿವಾರ್ಯ ಮಹಾರಣೇ ।
ಭೀಷ್ಮಂ ಶಾಂತನವಂ ತೂರ್ಣಂ ಪ್ರಯಾತಃ ಶಿಬಿರಂ ಪ್ರತಿ ॥೪೮॥

ರಾಜನಾದ ದುರ್ಯೋಧನನೂ ಸಹ ಆ ಮಹಾಯುದ್ಧದಲ್ಲಿ ಶಂತನು ಪುತ್ರರಾದ ಭೀಷ್ಮರನ್ನು ಸುತ್ತುವರಿದು ಶೀಘ್ರವಾಗಿ ತನ್ನ ಶಿಬಿರಕ್ಕೆ ಹೋದನು.

ದ್ರೋಣೋ ದ್ರೌಣಿಃ ಕೃಪಃ ಶಲ್ಯಃ ಕೃತವರ್ಮಾ ಚ ಸಾತ್ವತಃ ।
ಪರಿವಾರ್ಯ ಚಮೂಂ ಸರ್ವಾಂ ಪ್ರಯಯುಃ ಶಿಬಿರಂ ಪ್ರತಿ ॥೪೯॥

ದ್ರೋಣರು, ಅಶ್ವತ್ಥಾಮರು, ಕೃಪರು, ಶಲ್ಯ ಮತ್ತು ಸಾತ್ವತನಾದ ಕೃತವರ್ಮ ಇವರೂ ಸಹ ಎಲ್ಲ ಸೈನ್ಯವನ್ನು ಸುತ್ತುವರಿದು ತಮ್ಮ ಶಿಬಿರಗಳಿಗೆ ಹೋದರು.

ತಥೈವ ಸಾತ್ಯಕೀ ರಾಜನ್ ಧೃಷ್ಟದ್ಯುಮ್ನಶ್ಚ ಪಾರ್ಷತಃ ।
ಪರಿವಾರ್ಯ ರಣೇ ಯೋಧಾನ್ ಯಯತುಃ ಶಿಬಿರಂ ಪ್ರತಿ ॥೫೦॥

ಎಲೈ ರಾಜನೇ, ಹಾಗೆಯೇ ಸಾತ್ಯಕಿ ಮತ್ತು ಪಾರ್ಷತನಾದ ಧೃಷ್ಟದ್ಯುಮ್ನನೂ ಸಹ ರಣರಂಗದಲ್ಲಿ ತಮ್ಮ ಯೋಧರನ್ನು ಸುತ್ತುವರಿದು ತಮ್ಮ ಶಿಬಿರಗಳಿಗೆ ಹೋದರು.

ಏವಮೇತೇ ಮಹಾರಾಜ ತಾವಕಾಃ ಪಾಂಡವೈಃ ಸಹ ।
ಪರ್ಯಾವರ್ತಂತ ಸಹಿತಾ ನಿಶಾಕಾಲೇ ಪರಂತಪಾಃ ॥೫೧॥

ಎಲೈ ಮಹಾರಾಜನೇ, ಹೀಗೆ ಪರಂತಪರಾದ ನಿನ್ನವರು ಮತ್ತು ಪಾಂಡವರು ಸಹ ನಿಶಾಕಾಲದಲ್ಲಿ ತಮ್ಮ ಶಿಬಿರಗಳಿಗೆ ಹಿಂದಿರುಗಿದರು.

ತತಃ ಸ್ವಶಿಬಿರಂ ಗತ್ವಾ ಪಾಂಡವಾಃ ಕುರವಸ್ತಥಾ ।
ನ್ಯವಿಶಂತ ಮಹಾರಾಜ ಪೂಜಯಂತಃ ಪರಸ್ಪರಮ್ ॥೫೨॥

ಎಲೈ ಮಹಾರಾಜನೇ, ತಮ್ಮ ಶಿಬಿರಗಳಿಗೆ ಹಿಂದಿರುಗಿದ ಕೌರವರು ಮತ್ತು ಪಾಂಡವರು ತಮ್ಮ ತಮ್ಮ ಗುಂಪುಗಳನ್ನು ಪರಸ್ಪರವಾಗಿ ಪೂಜಿಸುತ್ತಾ ವಿಶ್ರಾಂತಿಯನ್ನು ಪಡೆದರು.

ರಕ್ಷಾಂ ಕೃತ್ವಾತ್ಮನಃ ಶೂರಾ ನ್ಯಸ್ಯ ಗುಲ್ಮಾನ್ ಯಥಾವಿಧಿ ।
ಅಪನೀಯ ಚ ಶಲ್ಯಾಂಸ್ತೇ ಸ್ನಾತ್ವಾ ಚ ವಿವಿಧೈರ್ಜಲೈಃ ॥೫೩॥

ಕೃತಸ್ವಸ್ತ್ಯಯನಾಃ ಸರ್ವೇ ಸಂಸ್ತೂಯಂತಶ್ಚ ಬಂದಿಭಿಃ ।
ಗೀತವಾದಿತ್ರಶಬ್ದೇನ ವ್ಯಕ್ರೀಡಂತ ಯಶಸ್ವಿನಃ ॥೫೪॥

ಶೂರರಾದ ಅವರು ತಮ್ಮ ಕವಚಾದಿಗಳನ್ನು ವಿಧಿಪೂರ್ವಕವಾಗಿ ತೆಗೆದು, ತಮಗೆ ರಕ್ಷೆಯನ್ನು ಮಾಡಿಕೊಂಡು, ಶರೀರದಲ್ಲಿ ನಾಟಿದ್ದ ಶಲ್ಯಗಳನ್ನು ತೆಗೆದು, ವಿವಿಧ ಜಲಗಳಲ್ಲಿ ಸ್ನಾನವನ್ನು ಮಾಡಿ, ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಮಾಡಿಸಿಕೊಂಡು, ಬಂಧುಗಳಿಂದ ಸ್ತೋತ್ರ ಮಾಡಲ್ಪಟ್ಟವರಾಗಿ, ಕೀರ್ತಿವಂತರಾದ ಅವರು ಗೀತ-ವಾದಿತ್ರ ಶಬ್ದಗಳಿಂದ ಆಟವಾಡಿ ರಾತ್ರಿಯನ್ನು ಕಳೆದರು.

ಮುಹೂರ್ತಮಿವ ತತ್ಸರ್ವಮಭವತ್ ಸ್ವರ್ಗಸನ್ನಿಭಮ್ ।
ನ ಹಿ ಯುದ್ಧಕಥಾಂ ಕಾಂಚಿತ್ ತತ್ರ ಚಕ್ರುರ್ಮಹಾರಥಾಃ ॥೫೫॥

ಒಂದು ಮುಹೂರ್ತದ ಕಾಲ ಎಲ್ಲವೂ ಸ್ವರ್ಗಸದೃಶವಾಗಿದ್ದಿತು. ಅಲ್ಲಿ ಯಾವ ಮಹಾರಥರೂ ಯುದ್ಧದ ವಿಷಯವನ್ನು ಮಾತನಾಡಲಿಲ್ಲ.

ತೇ ಪ್ರಸುಪ್ತೇ ಬಲೇ ತತ್ರ ಪರಿಶ್ರಾಂತಜನೇ ನೃಪ ।
ಹಸ್ತ್ಯಶ್ವಬಹುಲೇ ರಾಜನ್ ಪ್ರೇಕ್ಷಣೀಯೇ ಬಭೂವತುಃ ॥೫೬॥

ಎಲೈ ರಾಜನೇ, ಬಹಳ ಗಜಾಶ್ವದಿಂದ ತುಂಬಿ, ದಣಿದ ಯೋಧರಿಂದ ತುಂಬಿದ ಆ ಎರಡು ಸೈನ್ಯಗಳು ನಿದ್ರೆಯನ್ನು ಹೊಂದುತ್ತಿರಲು ನೋಡಲು ಬಹಳ ಸುಂದರವಾಗಿ ಕಂಡವು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ದ್ವ್ಯಶೀತಿತಮೋऽಧ್ಯಾಯಃ ॥

॥ ಭೀಷ್ಮವಧಪರ್ವಣಿ ದ್ವಿಚತ್ವಾರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಎಂಬತ್ತೆರಡನೆಯ ಅಧ್ಯಾಯ ಮುಗಿಯಿತು.

ಭೀಷ್ಮರ ಸೇನಾಪತ್ಯದಲ್ಲಿ ಏಳನೆಯ ದಿನದ ಯುದ್ಧವು ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯ - ೨೫ನೇ ಅಧ್ಯಾಯ

ಧೃಷ್ಟದ್ಯುಮ್ನಸ್ತತ್ರ ಭೀಮಾನುಯಾಯೀ
ದುರ್ಯೋಧನಸ್ಯಾವರಜೈಃ ಪ್ರಯುಧ್ಯನ್ ।
ಸಮ್ಮೋಹನಾಸ್ತ್ರೇಣ ವಿಮೋಹಯಿತ್ವಾ
ವಿಕರ್ಣಪೂರ್ವಾನಹನಚ್ಚ ಸೇನಾಮ್ ॥೬೦॥

ಆಗ ಭೀಮನ ಹಿಂಬಾಲಕನಾದ ಧೃಷ್ಟದ್ಯುಮ್ನನು ದುರ್ಯೋಧನನ ತಮ್ಮಂದಿರೊಡನೆ ಹೋರಾಡುತ್ತಾ ಸಂಮೋಹನಾಸ್ತ್ರದಿಂದ ಮೂರ್ಛೆಗೊಳಿಸಿ ಸೈನ್ಯವನ್ನು ನಾಶ ಮಾಡಲು ತೊಡಗಿದನು.

ತತೋ ದ್ರೋಣಸ್ತಾನ್ ಸಮುತ್ಥಾಪ್ಯ ಸರ್ವಾನ್
ವಿಜ್ಞಾನಾಸ್ತ್ರೇಣಾऽಸದತ್ ಪಾರ್ಷತಂ ಚ ।
ತಂ ಭೀಮಸೇನಃ ಸೂತಹೀನಂ ವಿಧಾಯ
ವ್ಯದ್ರಾವಯತ್ ಶತ್ರುಗಣಾನ್ ಶರೌಘೈಃ ॥೬೧॥

ಆಗ ದ್ರೋಣರು ವಿಜ್ಞಾನಾಸ್ತ್ರದಿಂದ ಅವರೆಲ್ಲರನ್ನೂ ಎಬ್ಬಿಸಿ ಧೃಷ್ಟದ್ಯುಮ್ನನನ್ನು ಆಕ್ರಮಿಸಿದರು. ಒಡನೆ ಭೀಮಸೇನನು ಅವನನ್ನು ಸಾರಥಿರಹಿತನನ್ನಾಗಿ ಮಾಡಿ ಶತ್ರು ಸಮೂಹಗಳನ್ನು ಬಾಣ ಸಮೂಹಗಳಿಂದ ಓಡಿಸಿದನು.

ಅಥಾಸದತ್ ಕೃತವರ್ಮಾ ರಥೇನ
ಧೃಷ್ಟದ್ಯುಮ್ನಂ ಸೋऽಭ್ಯಯಾತ್ ತಾವುಭೌ ಚ ।
ವವರ್ಷತುಃ ಶರವರ್ಷೈರಥೋಗ್ರೈಃ
ತತ್ಸಾಕರೋದ್ ವಿರಥಂ ದ್ರೌಪದಿಸ್ತಮ್ ॥೬೨॥

ಬಳಿಕ ಕೃತವರ್ಮನು ರಥದಿಂದ ಧೃಷ್ಟದ್ಯುಮ್ನನಿಗೆ ಎದುರಾದನು. ಧೃಷ್ಟದ್ಯುಮ್ನನು ಅವನನ್ನು ಎದುರಿಸಿದನು. ಅವರಿಬ್ಬರೂ ಭಯಂಕರವಾದ ಬಾಣಗಳ ಮಳೆಗರೆದುಕೊಂಡರು. ಆಗ ಧೃಷ್ಟದ್ಯುಮ್ನನು ಕೃತವರ್ಮನನ್ನು ರಥರಹಿತನನ್ನಾಗಿ ಮಾಡಿದನು.

ತಸ್ಮಿನ್ ಜಿತೇ ರಥವೀರೇ ಸ್ವಯಂ ತಂ
ದುರ್ಯೋಧನಃ ಪಾರ್ಷತಮಾಸಸಾದ ।
ತಂ ಭೀಮಸೇನೋ ವಿರಥಾಯುಧಂ ಚ
ಕೃತ್ವಾ ಬಾಣೇನಾಹನತ್ ಜತ್ರುದೇಶೇ ॥೬೩॥

ರಥಿಕರಲ್ಲಿ ಶ್ರೇಷ್ಠನಾದ ಕೃತವರ್ಮನು ಪರಾಜಿತನಾದಾಗ ದುರ್ಯೋಧನನು ಸ್ವತಃ ಧೃಷ್ಟದ್ಯುಮ್ನನನ್ನು ಎದುರಿಸಿದ. ಅವನನ್ನು ಭೀಮಸೇನನು ರಥ, ಆಯುಧರಹಿತನನ್ನಾಗಿ ಮಾಡಿ, ಬಾಣದಿಂದ ಕುತ್ತಿಗೆ, ಎದೆಗಳ ಮಧ್ಯದಲ್ಲಿ ಚೆನ್ನಾಗಿ ಹೊಡೆದನು.

ವಿಮೂರ್ಛಿತಂ ತಂ ರುಧಿರೌಘಮುಕ್ತೈಃ
ವಮಂತಮಾಶು ಸ್ವರಥೇ ನಿಧಾಯ ।

ಕೃಪೋ ಯಯೌ ಮಾರುತಿರ್ಧಾರ್ತರಾಷ್ಟ್ರಂ
ವ್ಯದ್ರಾವಯತ್ ಪೃತನಾಂ ಬಾಣಪೂಗೈಃ ॥೬೪॥

ಮೂರ್ಛಿತನಾಗಿ ರಕ್ತಪ್ರವಾಹವನ್ನು ಕಾರುತ್ತಿದ್ದ ದುರ್ಯೋಧನನನ್ನು ಕೃಪರು ಬೇಗನೆ ತನ್ನ ರಥದಲ್ಲಿರಿಸಿ ಕೊಂಡೊಯ್ದರು. ಭೀಮಸೇನನು ಕೌರವಸೇನೆಯನ್ನು ಬಾಣ ಪ್ರವಾಹಗಳಿಂದ ಅಟ್ಟಿದನು.

ಅಥೇಂದ್ರಸೂನುಃ ಕೇಶವಪ್ರೇರಿತೇನ
ರಥೇನ ಶತ್ರೂನ್ ವಿಧಮತ್ ಶರೌಘೈಃ ।
ರಥಾನ್ ರಣೇ ಪಂಚವಿಂಶತ್‌ಸಹಸ್ರಾನ್
ನಿನಾಯ ವೈವಸ್ವತಸಾದನಾಯ ॥೬೫॥

ಬಳಿಕ ಕೃಷ್ಣನು ನಡೆಸುತ್ತಿದ್ದ ರಥದಿಂದ ಅರ್ಜುನನು ಯುದ್ಧದಲ್ಲಿ ಶತ್ರುಗಳನ್ನು ಬಾಣ ಪ್ರವಾಹಗಳಿಂದ ಹೊಡೆಯುತ್ತಾ ಇಪ್ಪತ್ತೈದು ಸಾವಿರ ರಥಿಕರನ್ನು ಯಮ ಸದನಕ್ಕೆ ಕಳುಹಿಸಿದನು.

ತಮನ್ವಯಾದ್ ಯುಯುಧಾನಃ ಸುಧನ್ವಾ
ವಿದ್ರಾವಯನ್ ಧಾರ್ತರಾಷ್ಟ್ರಸ್ಯ ಸೇನಾಮ್ ।
ತಮಭ್ಯಯಾತ್ ಸೌಮದತ್ತಿಸ್ತಥೋಶ್ಚ
ಸುಯುದ್ಧಮಾಸೀದತಿಭೈರವಾಸ್ತ್ರಮ್ ॥೬೬॥

ಅರ್ಜುನನ ಹಿಂದಿನಿಂದ ಒಳ್ಳೆಯ ಧನುಸ್ಸನ್ನು ಹಿಡಿದ ಸಾತ್ಯಕಿಯೂ ಕೌರವರ ಸೇನೆಯನ್ನು ಅಟ್ಟುತ್ತ ಬಂದನು. ಅವನನ್ನು ಭೂರಿಶ್ರವನು ಎದುರಿಸಿದನು. ಅವರಿಬ್ಬರೊಳಗೆ ಅತ್ಯಂತ ಭೀಕರ ಅಸ್ತ್ರಗಳಿಂದ ಯುಕ್ತವಾದ ಘೋರಯುದ್ಧವು ನಡೆಯಿತು.

ಪುತ್ರಾನ್ ದಶಾಸ್ಯಾಶು ನಿಹತ್ಯ ವೀರಃ
ಸ ಸಾತ್ಯಕೇಃ ಸೌಮದತ್ತೇಃ ಸಕಾಶೇ ।
ಸಮರ್ಪಯಾಮಾಸ ಶರೀರದಾರಣೈಃ
ಶರೈರುಭೌ ತೌ ವಿರಥೌ ಚ ಚಕ್ರತುಃ ॥೬೭॥

ವೀರನಾದ ಭೂರಿಶ್ರವನು ಸಾತ್ಯಕಿಯ ಕಣ್ಣುಮುಂದೆಯೇ ಅವನ ಹತ್ತು ಮಕ್ಕಳನ್ನು ಕೊಂದು, ಶರೀರವನ್ನು ಸೀಳುವ ಆಯುಧಗಳಿಂದ ಅವನನ್ನೂ ಪೀಡಿಸಿದನು. ಅವರಿಬ್ಬರೂ ಒಬ್ಬರನ್ನೊಬ್ಬರು ವಿರಥರನ್ನಾಗಿ ಮಾಡಿದರು.

ಅಥಾಸಿಪಾಣಿಂ ಯುಯುಧಾನಮಾಶು
ಮಹಾಸಿಹಸ್ತೇನ ಚ ಸೌಮದತ್ತಿನಾ ।
ಆಸಾದಿತಂ ವೀಕ್ಷ್ಯ ರಥಂ ಸ್ವಕೀಯಮ್
ಆರೋಪಯಾಮಾಸ ಸುತೋಽನಿಲಸ್ಯ ॥೬೮॥

ಬಳಿಕ ಖಡ್ಗಧಾರಿಯಾದ ಸಾತ್ಯಕಿಯನ್ನು ಮಹಾಖಡ್ಗಧಾರಿ ಭೂರಿಶ್ರವನು ಆಕ್ರಮಿಸಿದುದನ್ನು ಕಂಡು ಭೀಮಸೇನನು ಬೇಗನೆ ಸಾತ್ಯಕಿಯನ್ನು ತನ್ನ ರಥದಲ್ಲಿ ಏರಿಸಿಕೊಂಡನು.

ಸುಯೋಧನಃ ಸೌಮದತ್ತಿಂ ಸ್ವಕೀಯ-
ರಥೇ ವ್ಯವಸ್ಥಾಪ್ಯ ಚ ಭೀಮಸೇನಾತ್ ।
ಅಪಾದ್ರವದ್ ವಾಸವಿರ್ಭೀಷ್ಮಮಾಜೌ
ಸಮಾಸಸಾದಾಽಶು ಮಹೇಂದ್ರಕಲ್ಪಃ ॥೬೯॥

ದುರ್ಯೋಧನನು ಭೂರಿಶ್ರವನನ್ನು ತನ್ನ ರಥದಲ್ಲಿ ಏರಿಸಿಕೊಂಡು ಭೀಮನನ್ನು ಎದುರಿಸಲಾರದೆ ಪಲಾಯನ ಮಾಡಿದನು. ದೇವೇಂದ್ರನಿಗೆ ಸಮಾನನಾದ ಅರ್ಜುನನು ಯುದ್ಧದಲ್ಲಿ ಬೇಗನೆ ಭೀಷ್ಮರ ಬಳಿಗೆ ಬಂದನು.

ಉಭೌ ಚ ತಾಮಸ್ತ್ರವಿದಾಂ ಪ್ರಬರ್ಹೌ
ಶರೈರ್ಮಹಾಶೀವಿಷಸನ್ನಿಕಾಶೈಃ ।
ತತಕ್ಷತುರ್ನಾಕಸದಾಂ ಸಮಕ್ಷಂ
ಮಹಾಬಲೌ ಸಂಯತಿ ಜಾತದರ್ಪೌ ॥೭೦॥

ಯುದ್ಧದಲ್ಲಿ ತಮ್ಮ ಸಾಮರ್ಥ್ಯದ ಮೇಲೆ ಹೆಮ್ಮೆಪಡುವ, ಅಸ್ತ್ರವೇತ್ತರಲ್ಲಿ ಶ್ರೇಷ್ಠರಾದ ಮಹಾಬಲಶಾಲಿಗಳಾದ ಭೀಷ್ಮಾರ್ಜುನರು ಇಬ್ಬರೂ ದೇವತೆಗಳ ಸಮಕ್ಷಮದಲ್ಲಿ ಮಹಾಸರ್ಪಸದೃಶವಾದ ಬಾಣಗಳಿಂದ ಒಬ್ಬರನ್ನೊಬ್ಬರು ಗಾಯಗೊಳಿಸಿದರು.

ಸ್ವಬಾಹುವೀರ್ಯೇಣ ಜಿತಃ ಸ ಭೀಷ್ಮಃ
ಕಿರೀಟಿನಾ ಲೋಕಮಹಾರಥೇನ ।
ಸೇನಾಮಪಾಹೃತ್ಯ ಯಯೌ ನಿಶಾಯಾಮ್
ಆಸಾದಿತಾಯಾಮಥ ಪಾಂಡವಾಶ್ಚ ॥೭೧॥

ಲೋಕದಲ್ಲಿ ಮಹಾರಥಿಕನಾದ ಅರ್ಜುನನಿಂದ ಬಾಹುಬಲದಿಂದಲೇ ಪರಾಜಿತರಾದ ಆ ಭೀಷ್ಮರು ಸೇನೆಯನ್ನು ಹಿಂದೆ ತೆಗೆದುಕೊಂಡು ಹೊರಟುಹೋದರು. ಕತ್ತಲಾದ್ದರಿಂದ ಪಾಂಡವರೂ ಹಾಗೇ ಮಾಡಿದರು.

ತತಃ ಪರೇದ್ಯುಃ ಪುನರೇವ ಭೀಮ-
ಭೀಷ್ಮೌ ಪುರಸ್ಕೃತ್ಯ ಸಮೀಯತುಸ್ತೇ ।
ಸೇನೇ ತದಾ ಸಾರಥಿಹೀನಮಾಶು
ಭೀಷ್ಮಂ ಕೃತ್ವಾ ಮಾರುತಿರಭ್ಯಗಾತ್ ಪರಾನ್ ॥೭೨॥

ಬಳಿಕ ಮರುದಿನ ಪುನಃ ಭೀಮ ಭೀಷ್ಮರನ್ನು ಮುಂದೆ ಮಾಡಿಕೊಂಡು ಎರಡೂ ಸೈನ್ಯಗಳು ಎದುರಾದವು. ಆಗ ಭೀಮಸೇನನು ಭೀಷ್ಮರನ್ನು ಬೇಗನೆ ಸಾರಥಿ ರಹಿತನನ್ನಾಗಿ ಮಾಡಿ ಶತ್ರುಗಳನ್ನು ಎದುರಿಸಿದನು.

ನಿಪಾತಿತಾಸ್ತೇನ ರಥೇಭವಾಜಿನಃ
ಪ್ರದುದ್ರುವುಶ್ಚಾವಶಿಷ್ಟಾಃ ಸಮಸ್ತಾಃ ।
ದುರ್ಯೋಧನಾದ್ಯೇಷು ಪರಾಜಿತೇಷು
ಭೀಷ್ಮದ್ರೋಣದ್ರೌಣಿಪುರಸ್ಸರೇಷು ॥೭೩॥

ರಥ, ಆನೆ, ಕುದುರೆಗಳಲ್ಲಿ ಬಂದ ವೀರರು ಭೀಮನಿಂದ ಹತರಾದರು. ಅವನಿಂದ ಭೀಷ್ಮ-ದ್ರೋಣ-ಅಶ್ವತ್ಥಾಮ, ದುರ್ಯೋಧನ ಮುಂತಾದವರೂ ಪರಾಜಿತರಾದಾಗ ಉಳಿದೆಲ್ಲರೂ ಪಲಾಯನಗೈದರು.

ಮಹಾಗಜಸ್ಥೋ ಭಗದತ್ತ ಆಗಾದಾ-
ಯನ್ ಬಾಣಾನ್ ಭೀಮಸೇನೇऽಮುಚಚ್ಚ ।
ತೇನಾತಿವಿದ್ಧೋ ಭೀಮಸೇನೇऽಸ್ಯ ಪುತ್ರ
ಉದ್ಯಚ್ಛಮಾನಂ ಪಿತರಂ ನಿವಾರ್ಯ ।

ಘಟೋತ್ಕಚೋऽಭ್ಯದ್ರವದಾಶು ವೀರಃ
ಸ್ವಮಾಯಯಾ ಹಸ್ತಿಚತುಷ್ಪಯಸ್ಥಃ ॥೭೪॥

ಮಹಾಗಜವನ್ನೇರಿದ್ದ ಭಗದತ್ತನು ಬಂದನು. ಬಂದು ಬಾಣಗಳನ್ನು ಭೀಮಸೇನನ ಮೇಲೆ ಎಸೆದನು. ಅದರಿಂದ ಭೀಮ ಬಹಳ ಹೊಡೆಸಿಕೊಂಡಾಗ, ತನ್ನ ಮಾಯೆಯಿಂದ ನಾಲ್ಕು ಆನೆಗಳಲ್ಲಿ ನಾಲ್ಕು ರೂಪಗಳಿಂದ ಕುಳಿತ ವೀರ ಘಟೋತ್ಕಚನು ಯುದ್ಧದಲ್ಲಿ ಉದ್ಯತನಾದ ತಂದೆಯನ್ನು ತಡೆದು ತಾನೇ ಬೇಗನೆ ಭಗದತ್ತನ ಎದುರಿಗೆ ಬಂದನು.

ಸ ವೈಷ್ಣವಾಗ್ರಂ ಭಗದತ್ತಸಂಸ್ಥಂ
ವಿಜ್ಞಾಯ ವಿಷ್ಣೋರ್ವರತೋ ವಿಶೇಷತಃ ।
ಅಮೋಘಮನ್ಯತ್ರ ಹರೇರ್ಮರುತ್ಸುತಃ
ಪುತ್ರೇ ಯಾತೇ ನ ಸ್ವಯಮಭ್ಯಧಾವತ್ ॥೭೫॥

ಭಗದತ್ತನಲ್ಲಿರುವ ವೈಷ್ಣವಾಸ್ತ್ರವು ವರಾಹರೂಪಿ ಹರಿಯ ವಿಶೇಷ ವರಬಲದಿಂದ ಹರಿಯಲ್ಲಿ ಹೊರತು ಅನ್ಯರಲ್ಲಿ ವ್ಯರ್ಥವಾಗದುದೆಂದು ತಿಳಿದು ಭೀಮನು, ಘಟೋತ್ಕಚನು ಮುಂದೆ ನಡೆದಾಗ, ತಾನು ಸ್ವತಃ ಮುಂದೆ ಹೋಗಲಿಲ್ಲ.

ಅನುಗ್ರಹಾದಭ್ಯಧಿಕಾದವಧ್ಯಂ
ಜಾನನ್ನಪಿ ಸ್ವಂ ವಾಸುದೇವಸ್ಯ ನಿತ್ಯಮ್ ।
ತದ್ಭಕ್ತಿವೈಶೇಷ್ಯತ ಏವ ತಸ್ಯ
ಸತ್ಯಂ ವಾಕ್ಯಂ ಕರ್ತುಮರಿಂ ನ ಜಗಾತ್ ॥೭೬॥

ಹರಿಯ ಪರಮಾನುಗ್ರಹದಿಂದ ತಾನು ಸದಾ ಅವಧ್ಯನೆಂಬುದನ್ನು ತಿಳಿದವನಾದರೂ ಭೀಮನು ಹರಿಭಕ್ತಿಯ ಅತಿಶಯದಿಂದ ವರಾಹರೂಪಿ ಹರಿಯ ವಾಕ್ಯವನ್ನು ಸತ್ಯವನ್ನಾಗಿ ಮಾಡುವುದಕ್ಕೆಂದೇ ಶತ್ರುವಿನ ಎದುರಿಗೆ ಹೋಗಲಿಲ್ಲ.

ಯದಾ ಸ್ವಪುತ್ರೇಣ ಜಿತೋ ಭವೇತ್ ಸ
ಕಿಮ್ವಾತ್ಮನೇತ್ಯೇವ ತದಾ ಪ್ರವೇತ್ತುಮ್ ।
ಸ ವಿಸ್ಮೃತಾಸ್ತ್ರಸ್ತು ಯದಾ ಭವೇತ
ತದಾ ಭೀಮೋ ಭಗದತ್ತಂ ಪ್ರಯಾತಿ ॥೭೭॥

ಭಗದತ್ತನು ಯಾವಾಗ ತನ್ನ ಮಗನಿಂದಲೇ ಪರಾಜಿತನಾಗುವನೋ ಆಗ ತನ್ನಿಂದ ಪರಾಜಿತನಾಗುವನೆಂದು ಏನು ಹೇಳಬೇಕು? ಎಂದು ತಿಳಿಸುವ ಉದ್ದೇಶದಿಂದಲೂ ಭೀಮನು ಭಗದತ್ತನ ಎದುರಿಗೆ ಹೋಗಲಿಲ್ಲ. ಭಗದತ್ತನು ಯಾವಾಗ ಆ ಅಸ್ತ್ರಮಂತ್ರವನ್ನು ಮರೆಯುವನೋ ಆಗ ಭೀಮನು ಅವನನ್ನು ಎದುರಿಸುತ್ತಾನೆ.

ಋತೇ ಭೀಮಂ ವಾಽರ್ಜುನಂ ನಾಸ್ತ್ರಮೇಷ
ಪ್ರಮುಂಚತೀತ್ಯೇವ ಹಿ ವೇದ ಭೀಮಃ ॥೭೮॥

ಭೀಮನ ಮತ್ತು ಅರ್ಜುನನ ಮೇಲೆ ಹೊರತು ಬೇರೆ ಕಡೆ ಭಗದತ್ತನು ವೈಷ್ಣವಾಸ್ತ್ರವನ್ನು ಪ್ರಯೋಗಿಸುವುದಿಲ್ಲವೆಂದು ಭೀಮನು ತಿಳಿದೇ ಇದ್ದಾನೆ.

ಚತುರ್ಗಜಾತ್ಕೋಪರಿಗಾತ್ಕಚಶ್ಚ
ಘಟೋತ್ಕಚಃ ಸುಪ್ರತೀಕಂ ಚ ತಂ ಚ ।
ನಾನಾಪ್ರಹಾರೈರ್ವಿತುದಂಶ್ಚಕಾರ
ಸಂದಿಗ್ಧಜೀವೌ ಜಗತಾಂ ಸಮಕ್ಷಮ್ ॥೭೯॥

ಘಟೋತ್ಕಚನು ನಾಲ್ಕು ಆನೆಗಳೂ ತಾನೇ ಆದ. ಆ ಆನೆಗಳ ಮೇಲೇರಿರುವ ನಾಲ್ವರು ವೀರರೂ ತಾನೇ ಆಗಿ, ಸುಪ್ರತೀಕವನ್ನೂ ಅದಕ್ಕೇರಿರುವ ಭಗದತ್ತನನ್ನೂ ನಾನಾ ಬಗೆಯ ಪ್ರಹಾರಗಳಿಂದ ಪೀಡಿಸುತ್ತಾ, ಜಗತ್ತಿನ ಸಮಕ್ಷಮದಲ್ಲಿ ಇಬ್ಬರ ಉಳಿವೂ ಸಂದಿಗ್ಧವಾಗುವಂತೆ ಮಾಡಿದ.

ಗಜಾರ್ತನಾದಂ ತು ನಿಶಮ್ಯ ಭೀಷ್ಮ-
ಮುಖಾಃ ಸಮಾಪೇತುರಮುಂ ಚ ದೃಷ್ಟ್ವಾ ।
ಮಹಾಕಾಯಂ ಭೀಮ-ಮುಷ್ಯ ಪೃಷ್ಠ-
ಗೋಪಂ ಚ ವಾಯ್ವಾತ್ಮಜಮತ್ರಸನ್ ಭೃಶಮ್ ॥೮೦॥

ಸುಪ್ರತೀಕ ಆನೆಯ ಆರ್ತನಾದವನ್ನು ಕೇಳಿ ಭೀಷ್ಮರು ಮುಂತಾದವರು ಧಾವಿಸಿ ಬಂದರು. ಭೀಕರ ಮಹಾಕಾಯನಾದ ಘಟೋತ್ಕಚನನ್ನೂ ಅವನ ಹಿಂದೆ ರಕ್ಷಕನಾಗಿ ನಿಂತ ಭೀಮನನ್ನೂ ಕಂಡು ಬಹಳ ಭಯಪಟ್ಟರು.

ತೇ ಭೀತಭೀತಾಃ ಪೃತನಾಪಹಾರಂ
ಕೃತ್ವಾಽಪಜಗ್ಮುಃ ಶಿಬಿರಾಯ ಶೀಘ್ರಮ್ ॥೮೧॥

ಭೀಷ್ಮ ಮುಂತಾದವರು ಬಹಳ ಭೀತರಾಗಿ ಬೇಗನೆ ಸೈನ್ಯವನ್ನು ಹಿಂದಕ್ಕೆ ಕರೆಸಿಕೊಂಡು ಶಿಬಿರದ ಕಡೆಗೆ ನಡೆದರು.

★ ★ ★ ★ ★

ಎಂಬತ್ತೂರನೆಯ ಅಧ್ಯಾಯ

ಎಂಟನೆಯ ದಿನದ ಯುದ್ಧದ ಪ್ರಾರಂಭ. ಶೃಂಗಾಟಕ ವ್ಯೂಹದ ರಚನೆ.

ಸಂಜಯಃ

ಪರಿಣಾಮ್ಯ ನಿಶಾಂ ತಾಂ ತು ಸುಖಸುಪ್ತಾ ಜನೇಶ್ವರಾಃ ।
ಕುರವಃ ಪಾಂಡವಾಶ್ಚೈವ ಪುನರ್ಯುದ್ಧಾಯ ನಿರ್ಯಯುಃ ॥೧॥

ಸಂಜಯ– ಕೌರವರೂ, ಪಾಂಡವರೂ ಮತ್ತು ಉಳಿದ ರಾಜರೂ ಸುಖನಿದ್ರೆಯಿಂದ ಆ ರಾತ್ರಿಯನ್ನು ಕಳೆದು ಪುನಃ ಯುದ್ಧಕ್ಕಾಗಿ ಹೊರಟರು.

ತತಃ ಶಬ್ದೋ ಮಹಾನಾಸೀತ್ ಸೇನಯೋರುಭಯೋರಪಿ ।
ನಿರ್ಗಚ್ಛಮಾನಯೋಃ ಸಂಖೇ ಸಾಗರಪ್ರತಿಮೋ ಮಹಾನ್ ॥೨॥

ಎರಡು ಸೇನೆಗಳು ಯುದ್ಧಕ್ಕಾಗಿ ಹೊರಡುತ್ತಿರಲು ಸಾಗರದ ಗರ್ಜನೆಯಂತಹ ದೊಡ್ಡ ಶಬ್ದವುಂಟಾಯಿತು.

ತತೋ ದುರ್ಯೋಧನೋ ರಾಜಾ ಚಿತ್ರಸೇನೋ ವಿವಿಂಶತಿಃ ।
ಭೀಷ್ಮಶ್ಚ ರಥಿನಾಂ ಶ್ರೇಷ್ಠೋ ಭಾರದ್ವಾಜಶ್ಚ ವೈ ದ್ವಿಜಃ ॥೩॥

ಏತೀಭೂತಾಃ ಸುಸಂಯತ್ತಾಃ ಕೌರವಾಣಾಂ ಮಹಾಚಮೂಃ ।
ವ್ಯೂಹಾಯ ವಿದಧೂ ರಾಜನ್ ಪಾಂಡವಾನ್ ಪ್ರತಿ ದಂಶಿತಾಃ ॥೪॥

ಎಲೈ ರಾಜನೇ, ಅನಂತರ ರಾಜನಾದ ದುರ್ಯೋಧನ, ಚಿತ್ರಸೇನ, ವಿವಿಂಶತಿ, ರಥಿಶ್ರೇಷ್ಠರಾದ ಭೀಷ್ಮರು, ಬ್ರಾಹ್ಮಣರಾದ ದ್ರೋಣರು ಎಲ್ಲರೂ ಸೇರಿ ಪಾಂಡವರಿಗೆ

ಪ್ರತಿಯಾಗಿ ಯುದ್ಧವನ್ನು ಮಾಡಲು ಶಸ್ತ್ರ-ಕವಚಾದಿಗಳನ್ನು ಧರಿಸಿ ಕೌರವರ ಮಹಾಸೈನ್ಯವನ್ನು ವ್ಯೂಹಗೊಳಿಸಿದರು.

ಭೀಷ್ಮಃ ಕೃತ್ವಾ ಮಹಾವ್ಯೂಹಂ ಪಿತಾ ತವ ವಿಶಾಂಪತೇ ।
ಸಾಗರಪ್ರತಿಮಂ ಘೋರಂ ವಾಹನೋರ್ಮಿತರಂಗಿಣಮ್ ॥೫॥

ಅಗ್ರತಃ ಸರ್ವಸೈನ್ಯಾನಾಂ ಭೀಷ್ಮಃ ಶಾಂತನವೋ ಯಯೌ ।
ಮಾಲವೈರ್ದಾಕ್ಷಿಣಾತ್ಯೈಶ್ಚ ಆವಂತ್ಯೈಶ್ಚ ಸಮನ್ವಿತಃ ॥೬॥

ಎಲೈ ರಾಜನೇ, ನಿನ್ನ ತಂದೆಯಾದ, ಶಂತನುಪುತ್ರರಾದ ಭೀಷ್ಮರು ಸಾಗರಸದೃಶವಾದ, ಘೋರವಾದ, ವಾಹನಗಳೆಂಬ ಅಲೆಗಳು ಮತ್ತು ತರಂಗಗಳನ್ನು ಹೊಂದಿದ ದಂಡಾಕಾರವಾದ ಮಹಾವ್ಯೂಹವನ್ನು ರಚಿಸಿ, ಸರ್ವಸೈನ್ಯಗಳ ಮುಂಭಾಗದಲ್ಲಿ ಮಾಲವರಿಂದಲೂ, ದಾಕ್ಷಿಣಾತ್ಯ ಯೋಧರಿಂದಲೂ, ಅವಂತಿಯ ಯೋಧರಿಂದಲೂ ಸಹಿತರಾಗಿ ಮುಂದೆ ಹೊರಟರು.

ತತೋಽನಂತರಮೇವಾಸೀದ್ ಭಾರದ್ವಾಜಃ ಪ್ರತಾಪವಾನ್ ।
ಪುಳಿಂದೈಃ ಪಾರದೈಶ್ಚೈವ ತಥಾ ಕ್ಷುದ್ರಕಮಾಲವೈಃ ॥೭॥

ಪ್ರತಾಪಶಾಲಿಗಳಾದ ದ್ರೋಣರು ಪುಳಿಂದರಿಂದಲೂ, ಪಾರದರಿಂದಲೂ ಹಾಗೆಯೇ ಕ್ಷುದ್ರಕಮಾಲವರಿಂದಲೂ ಸಹಿತರಾಗಿ ಅವರ ಹಿಂದೆ ಇದ್ದರು.

ದ್ರೋಣಾದನಂತರಂ ಯತ್ತೋ ಭಗದತ್ತಃ ಪ್ರತಾಪವಾನ್ ।
ಮಾಗಧೈಶ್ಚ ಕಳಿಂಗೈಶ್ಚ ಪಿಶಾಚೈಶ್ಚ ವಿಶಾಂಪತೇ ॥೮॥

ಎಲೈ ರಾಜನೇ, ಪ್ರತಾಪಶಾಲಿಯಾದ ಭಗದತ್ತನು ಮಾಗಧರಿಂದಲೂ, ಕಳಿಂಗರಿಂದಲೂ, ಪಿಶಾಚರಿಂದಲೂ ಸಹಿತನಾಗಿ ಜಾಗರೂಕನಾಗಿ ದ್ರೋಣರ ಹಿಂದೆ ಇದ್ದನು.

ಪ್ರಾಗ್ಜ್ಯೋತಿಷಾದಸು ನೃಪಃ ಕೌಸಲ್ಯೋಽಥ ಬೃಹದ್ಬಲಃ ।
ಮೇಕಲೈಸ್ತ್ರಿಪುರೈಶ್ಚೈವ ಚಿಚ್ಚಿಲೈಶ್ಚ ಸಮನ್ವಿತಃ ॥೯॥

ಪ್ರಾಗ್ಜ್ಯೋತಿಷಾಧಿಪತಿಯಾದ ಭಗದತ್ತನ ಹಿಂದೆ ಮೇಕಲರಿಂದಲೂ, ತ್ರಿಪುರರಿಂದಲೂ, ಚಚ್ಚಿಲರಿಂದಲೂ ಸಹಿತನಾದ ಕೋಸಲಾಧಿಪತಿಯಾದ ಬೃಹದ್ಬಲನಿದ್ದನು.

ಬೃಹದ್ಬಲಾತ್ ತತಃ ಶೂರಸ್ತ್ರಿಗರ್ತಃ ಪ್ರಚ್ಛಲಾಧಿಪಃ ।
ಕಾಂಬೋಜೈರ್ಬಹುಭಿಃ ಸಾರ್ಧಂ ಯವನೈಶ್ಚ ಸಹಸ್ರಶಃ ॥೧೦॥

ನಾವು ಏನಾದರೂ ಯುದ್ಧವನ್ನು ಬಿಡುವುದಿಲ್ಲ ಎಂಬ ಛಲವನ್ನು ಧರಿಸಿದ ಸಂಶಪ್ತಕರಿಗೆ ಅಧಿಪತಿಯಾದ ಶೂರನಾದ ತ್ರಿಗರ್ತನು ಬೃಹದ್ಬಲನ ಹಿಂದೆ ಅನೇಕ ಕಾಂಬೋಜರಿಂದಲೂ, ಸಹಸ್ರಾರು ಯವನರಿಂದಲೂ ಸಹಿತನಾಗಿದ್ದನು.

ದ್ರೌಣಿಸ್ತು ರಭಸಃ ಶೂರಸ್ತ್ರಿಗರ್ತಾದನು ಭಾರತ ।
ಪ್ರಯಯೌ ಸಿಂಹನಾದೇನ ನಾದಯಾನೋ ಧರಾತಳಮ್ ॥೧೧॥

ಎಲೈ ಭಾರತನೇ, ತ್ರಿಗರ್ತನ ಹಿಂದೆ ಶೂರರೂ, ವೇಗಶಾಲಿಗಳೂ ಆದ ಅಶ್ವತ್ಥಾಮರು ತಮ್ಮ ಸಿಂಹನಾದದಿಂದ ಭೂಮಿಯನ್ನೇ ಪ್ರತಿಧ್ವನಿಸುತ್ತಾ ಸಾಗಿದರು.

ತಥಾ ಸರ್ವೇಣ ಸೈನ್ಯೇನ ರಾಜಾ ದುರ್ಯೋಧನಸ್ತದಾ ।
ದ್ರೌಣೇರನಂತರಂ ಪ್ರಾಯಾತ್ ಸೋದರ್ಯೈಃ ಪರಿವಾರಿತಃ ॥೧೨॥

ಹಾಗೆಯೇ ರಾಜನಾದ ದುರ್ಯೋಧನನು ತನ್ನ ಎಲ್ಲ ಸೈನ್ಯದಿಂದಲೂ ಮತ್ತು ಸಹೋದರರಿಂದಲೂ ಕೂಡಿಕೊಂಡವನಾಗಿ ಅಶ್ವತ್ಥಾಮರ ಹಿಂದೆ ಹೊರಟನು.

ದುರ್ಯೋಧನಾದನು ಕೃಪಸ್ತತಃ ಶಾರದ್ವತೋ ಯಯೌ ।
ಏವಮೇಷ ಮಹಾವ್ಯೂಹಃ ಪ್ರಯಯೌ ಸಾಗರೋಪಮಃ ॥೧೩॥

ದುರ್ಯೋಧನನ ಹಿಂಭಾಗದಲ್ಲಿ ಶಾರದ್ವತರಾದ ಕೃಪಾಚಾರ್ಯರು ಹೊರಟರು. ಹೀಗೆ ಸಾಗರಸದೃಶವಾಗಿದ್ದ ಆ ಮಹಾವ್ಯೂಹವು ಯುದ್ಧಕ್ಕೆ ಹೊರಟಿತು.

ರೇಜುಸ್ತತ್ರ ಪತಾಕಾಶ್ಚ ಶ್ವೇತಚ್ಛತ್ರಾಣಿ ಚಾಭಿಭೋ ।
ಅಂಗದಾನ್ಯಥ ಚಿತ್ರಾಣಿ ಮಹಾರ್ಹಾಣಿ ಧನೂಂಷಿ ಚ ॥೧೪॥

ಎಲೈ ಶತ್ರುನಿವಾರಕನೇ, ಅಲ್ಲಿ ಪತಾಕೆಗಳು, ಶ್ವೇತಚ್ಛತ್ರಗಳು, ವಿಚಿತ್ರವಾದ ಅಂಗದಗಳು, ಬೆಲೆಬಾಳುವ ಧನುಸ್ಸುಗಳು ಸಹ ಶೋಭಿಸಿದವು.

ತಂ ತು ದೃಷ್ಟ್ವಾ ಮಹಾವ್ಯೂಹಂ ತಾವಕಾನಾಂ ಮಹಾರಥಃ ।
ಯುಧಿಷ್ಠಿರೋಽಬ್ರವೀತ್ ತೂರ್ಣಂ ಪಾರ್ಷತಂ ಪೃತನಾಪತಿಮ್॥೧೫॥

ಮಹಾರಥನಾದ ಯುಧಿಷ್ಠಿರನು ನಿನ್ನವರ ಆ ಮಹಾವ್ಯೂಹವನ್ನು ನೋಡಿ ಶೀಘ್ರವಾಗಿ ಸೇನಾಪತಿಯಾದ ಧೃಷ್ಟದ್ಯುಮ್ನನನ್ನು ಕುರಿತು ಹೇಳಿದನು.

ಪಶ್ಯ ವ್ಯೂಹಂ ಮಹೇಷ್ವಾಸ ನಿರ್ಮಿತಂ ಸಾಗರೋಪಮಮ್ ।
ಪ್ರತಿವ್ಯೂಹಂ ತ್ವಮಪಿ ಹಿ ಕುರು ಪಾರ್ಷತ ಮಾಚಿರಮ್ ॥೧೬॥

ಮಹಾಧನುರ್ಧಾರಿಯೇ, (ಭೀಷ್ಮರು ರಚಿಸಿರುವ) ಸಾಗರಸದೃಶವಾದ ಈ ವ್ಯೂಹವನ್ನು ನೋಡು. ಎಲೈ ಧೃಷ್ಟದ್ಯುಮ್ನನೇ, ನೀನೂ ಸಹ ಶೀಘ್ರವಾಗಿ ಪ್ರತಿ ವ್ಯೂಹವನ್ನು ರಚಿಸು.

ತತಃ ಸ ಪಾರ್ಷತಃ ಶೂರೋ ವ್ಯೂಹಂ ಚಕ್ರೇ ಸುದಾರುಣಮ್ ।
ಶೃಂಗಾಟಕಂ ಮಹಾರಾಜ ಪರವ್ಯೂಹವಿನಾಶನಮ್ ॥೧೭॥

ಎಲೈ ಮಹಾರಾಜನೇ, ಆಗ ಶೂರನಾದ ಧೃಷ್ಟದ್ಯುಮ್ನನು ಶತ್ರುವ್ಯೂಹವನ್ನು ವಿನಾಶಮಾಡುವ ಶೃಂಗಾಟಕ ಎಂಬ ಭಯಂಕರವಾದ ವ್ಯೂಹವನ್ನು ರಚಿಸಿದನು (ಗೋಶೃಂಗಗಳಂತಿರುವ ವ್ಯೂಹಕ್ಕೆ ಶೃಂಗಾಟಕ ವ್ಯೂಹವೆಂದು ಹೆಸರು. ಅದರಲ್ಲಿ ಶೃಂಗಗಳ ಸ್ಥಾನದಲ್ಲಿ ಬಹಳ ಪ್ರಮುಖರಾದವರು ಮತ್ತು ಮಧ್ಯದ ಸ್ಥಾನದಲ್ಲಿ ಉಳಿದವರು ಇರುತ್ತಾರೆ).

ಶೃಂಗೇಭ್ಯೋ ಭೀಮಸೇನಶ್ಚ ಸಾತ್ಯಕಿಶ್ಚ ಮಹಾರಥಃ ।
ರಥೈರನೇಕಸಾಹಸ್ರೈಸ್ತಥಾ ಹಯಪದಾತಿಭಃ ॥೧೮॥

ಆ ವ್ಯೂಹದ ಶೃಂಗಸ್ಥಾನದಲ್ಲಿ ಭೀಮಸೇನ ಮತ್ತು ಮಹಾರಥನಾದ ಸಾತ್ಯಕಿಯು ಅನೇಕ ಸಹಸ್ರ ರಥಗಳಿಂದಲೂ, ಹಯಪದಾತಿಗಳಿಂದಲೂ ಕೂಡಿಕೊಂಡು ನಿಂತರು.

ನಾಭ್ಯಾಮಭೂನ್ನರಶ್ರೇಷ್ಠಃ ಶ್ವೇತಾಶ್ವೋ ವಾನರಧ್ವಜಃ ।
ಮಧ್ಯೇ ಯುಧಿಷ್ಠಿರೋ ರಾಜಾ ಮಾದ್ರೀಪುತ್ರೌ ಚ ಪಾಂಡವೌ ॥೧೯॥

ಶೃಂಗಗಳ ನಾಭಿಸ್ಥಾನದಲ್ಲಿ ನರಶ್ರೇಷ್ಠನೂ, ಶ್ವೇತಾಶ್ವನೂ, ವಾನರಧ್ವಜನೂ ಆದ ಅರ್ಜುನನಿದ್ದನು. ಮಧ್ಯಪ್ರದೇಶದಲ್ಲಿ ರಾಜನಾದ ಯುಧಿಷ್ಠಿರನೂ ಮತ್ತು ಪಾಂಡುಪುತ್ರರಾದ ನಕುಲ-ಸಹದೇವರೂ ಇದ್ದರು.

ಅಥೇತರೇ ಮಹೇಷ್ವಾಸಾಃ ಸಹಸೈನ್ಯಾ ನರಾಧಿಪಾಃ ।
ವ್ಯೂಹಂ ತಂ ಪೂರಯಾಮಾಸುರ್ವ್ಯೂಹಶಾಸ್ತ್ರವಿಶಾರದಾಃ ॥೨೦॥

ಆಗ ವ್ಯೂಹಶಾಸ್ತ್ರದಲ್ಲಿ ಪರಿಣತರಾದ ಮಹಾಧನುರ್ಧಾರಿಗಳಾದ ರಾಜರು ತಮ್ಮ ಸೈನ್ಯದ ಜೊತೆಯಲ್ಲಿ ವ್ಯೂಹದ ಉಳಿದ ಭಾಗವನ್ನು ಪೂರಣ ಮಾಡಿದರು.

ಏವಮೇತಂ ಮಹಾವ್ಯೂಹಂ ವ್ಯೂಹ್ಯ ಭಾರತ ಪಾಂಡವಾಃ ।
ಅತಿಷ್ಠನ್ ಸಮರೇ ಶೂರಾ ಯೋದ್ಧುಕಾಮಾ ಜಯೈಷಿಣಃ ॥೨೧॥

ಎಲೈ ಭಾರತನೇ, ಹೀಗೆ ಪಾಂಡವರು ಈ ಮಹಾವ್ಯೂಹವನ್ನು ರಚಿಸಿ, ಜಯವನ್ನು ಬಯಸಿ, ಯುದ್ಧಮಾಡಲು ಇಚ್ಛಿಸಿ, ಶೂರರಾದ ಅವರು ಯುದ್ಧಕ್ಕಾಗಿ ನಿಂತರು.

ಭೇರೀಶಬ್ದಾಶ್ಚ ತುಮುಲಾ ವಿಮಿಶ್ರಾಃ ಶಂಖನಿಸ್ವನೈಃ ।
ಕ್ಷ್ವೇಡಿತಾಸ್ಫೋಟಿತೋತ್ಕೃಷ್ಟೈಃ ಸುಭೀಮಾಃ ಸರ್ವತೋದಿಶಮ್ ॥೨೨॥

ಶಂಖನಾದಗಳಿಂದ ಮಿಶ್ರಿತವಾದ ತೀವ್ರವಾದ ಭೇರೀಶಬ್ದಗಳು, ಸಿಂಹನಾದಗಳು, ಹಸ್ತತಳಶಬ್ದಗಳು ಮತ್ತು ಭಯಂಕರವಾದ ಕಿರುಚುವ ಶಬ್ದಗಳು ಎಲ್ಲ ದಿಕ್ಕುಗಳಲ್ಲಿಯೂ ಕೇಳಿ ಬಂದವು.

ತತಃ ಶೂರಾಃ ಸಮಾಸಾದ್ಯ ಸಮರೇ ತೇ ಪರಸ್ಪರಮ್ ।
ನೇತ್ತೈರನಿಮಿಷೈ ರಾಜನ್ನವೈಕ್ಷಂತ ಪ್ರಕೋಪಿತಾಃ ॥೨೩॥

ಎಲೈ ರಾಜನೇ, ಅನಂತರ ಶೂರರು ಪರಸ್ಪರವಾಗಿ ಸಂಧಿಸಿ ಕೋಪಗೊಂಡು ರೆಪ್ಪೆಗಳನ್ನು ಮುಚ್ಚದ ತಮ್ಮ ಕಣ್ಣುಗಳಿಂದ ಒಬ್ಬರನ್ನೊಬ್ಬರು ನೋಡಿದರು (ದೃಷ್ಟಿ ಯುದ್ಧವನ್ನು ಮಾಡಿದರು).

ಎಲೈ ಶತ್ರುನಿವಾರಕನೇ, ಅಲ್ಲಿ ಪತಾಕೆಗಳು, ಶ್ವೇತಚ್ಛತ್ರಗಳು, ವಿಚಿತ್ರವಾದ ಅಂಗದಗಳು, ಬೆಲೆಬಾಳುವ ಧನುಸ್ಸುಗಳು ಸಹ ಶೋಭಿಸಿದವು.

ತಂ ತು ದೃಷ್ಟ್ವಾ ಮಹಾವ್ಯೂಹಂ ತಾವಕಾನಾಂ ಮಹಾರಥಃ ।
ಯುಧಿಷ್ಠಿರೋಽಬ್ರವೀತ್ ತೂರ್ಣಂ ಪಾರ್ಷತಂ ಪೃತನಾಪತಿಮ್॥೧೫॥

ಮಹಾರಥನಾದ ಯುಧಿಷ್ಠಿರನು ನಿನ್ನವರ ಆ ಮಹಾವ್ಯೂಹವನ್ನು ನೋಡಿ ಶೀಘ್ರವಾಗಿ ಸೇನಾಪತಿಯಾದ ಧೃಷ್ಟದ್ಯುಮ್ನನನ್ನು ಕುರಿತು ಹೇಳಿದನು.

ಪಶ್ಯ ವ್ಯೂಹಂ ಮಹೇಷ್ವಾಸ ನಿರ್ಮಿತಂ ಸಾಗರೋಪಮಮ್ ।
ಪ್ರತಿವ್ಯೂಹಂ ತ್ವಮಪಿ ಹಿ ಕುರು ಪಾರ್ಷತ ಮಾಚಿರಮ್ ॥೧೬॥

ಮಹಾಧನುರ್ಧಾರಿಯೇ, (ಭೀಷ್ಮರು ರಚಿಸಿರುವ) ಸಾಗರಸದೃಶವಾದ ಈ ವ್ಯೂಹವನ್ನು ನೋಡು. ಎಲೈ ಧೃಷ್ಟದ್ಯುಮ್ನನೇ, ನೀನೂ ಸಹ ಶೀಘ್ರವಾಗಿ ಪ್ರತಿ ವ್ಯೂಹವನ್ನು ರಚಿಸು.

ತತಃ ಸ ಪಾರ್ಷತಃ ಶೂರೋ ವ್ಯೂಹಂ ಚಕ್ರೇ ಸುದಾರುಣಮ್ ।
ಶೃಂಗಾಟಕಂ ಮಹಾರಾಜ ಪರವ್ಯೂಹವಿನಾಶನಮ್ ॥೧೭॥

ಎಲೈ ಮಹಾರಾಜನೇ, ಆಗ ಶೂರನಾದ ಧೃಷ್ಟದ್ಯುಮ್ನನು ಶತ್ರುವ್ಯೂಹವನ್ನು ವಿನಾಶಮಾಡುವ ಶೃಂಗಾಟಕ ಎಂಬ ಭಯಂಕರವಾದ ವ್ಯೂಹವನ್ನು ರಚಿಸಿದನು (ಗೋಶೃಂಗಗಳಂತಿರುವ ವ್ಯೂಹಕ್ಕೆ ಶೃಂಗಾಟಕ ವ್ಯೂಹವೆಂದು ಹೆಸರು. ಅದರಲ್ಲಿ ಶೃಂಗಗಳ ಸ್ಥಾನದಲ್ಲಿ ಬಹಳ ಪ್ರಮುಖರಾದವರು ಮತ್ತು ಮಧ್ಯದ ಸ್ಥಾನದಲ್ಲಿ ಉಳಿದವರು ಇರುತ್ತಾರೆ).

ಶೃಂಗೇಭ್ಯೋ ಭೀಮಸೇನಶ್ಚ ಸಾತ್ಯಕಿಶ್ಚ ಮಹಾರಥಃ ।
ರಥೈರನೇಕಸಾಹಸ್ರೈಸ್ತಥಾ ಹಯಪದಾತಿಭಿಃ ॥೧೮॥

ಆ ವ್ಯೂಹದ ಶೃಂಗಸ್ಥಾನದಲ್ಲಿ ಭೀಮಸೇನ ಮತ್ತು ಮಹಾರಥನಾದ ಸಾತ್ಯಕಿಯು ಅನೇಕ ಸಹಸ್ರ ರಥಗಳಿಂದಲೂ, ಹಯಪದಾತಿಗಳಿಂದಲೂ ಕೂಡಿಕೊಂಡು ನಿಂತರು.

ನಾಭ್ಯಾಮಭೂನ್ನರಶ್ರೇಷ್ಠಃ ಶ್ವೇತಾಶ್ವೋ ವಾನರಧ್ವಜಃ ।
ಮಧ್ಯೇ ಯುಧಿಷ್ಠಿರೋ ರಾಜಾ ಮಾದ್ರೀಪುತ್ರೌ ಚ ಪಾಂಡವೌ ॥೧೯॥

ಶೃಂಗಗಳ ನಾಭಿಸ್ಥಾನದಲ್ಲಿ ನರಶ್ರೇಷ್ಠನೂ, ಶ್ವೇತಾಶ್ವನೂ, ವಾನರಧ್ವಜನೂ ಆದ ಅರ್ಜುನನಿದ್ದನು. ಮಧ್ಯಪ್ರದೇಶದಲ್ಲಿ ರಾಜನಾದ ಯುಧಿಷ್ಠಿರನೂ ಮತ್ತು ಪಾಂಡುಪುತ್ರರಾದ ನಕುಲ-ಸಹದೇವರೂ ಇದ್ದರು.

ಅಥೇತರೇ ಮಹೇಷ್ವಾಸಾಃ ಸಹಸೈನ್ಯಾ ನರಾಧಿಪಾಃ ।
ವ್ಯೂಹಂ ತಂ ಪೂರಯಾಮಾಸುರ್ವ್ಯೂಹಶಾಸ್ತ್ರವಿಶಾರದಾಃ ॥೨೦॥

ಆಗ ವ್ಯೂಹಶಾಸ್ತ್ರದಲ್ಲಿ ಪರಿಣತರಾದ ಮಹಾಧನುರ್ಧಾರಿಗಳಾದ ರಾಜರು ತಮ್ಮ ಸೈನ್ಯದ ಜೊತೆಯಲ್ಲಿ ವ್ಯೂಹದ ಉಳಿದ ಭಾಗವನ್ನು ಪೂರಣ ಮಾಡಿದರು.

ಏವಮೇತಂ ಮಹಾವ್ಯೂಹಂ ವ್ಯೂಹ್ಯ ಭಾರತ ಪಾಂಡವಾಃ ।
ಅತಿಷ್ಠನ್ ಸಮರೇ ಶೂರಾ ಯೋದ್ಧುಕಾಮಾ ಜಯೈಷಿಣಃ ॥೨೧॥

ಎಲೈ ಭಾರತನೇ, ಹೀಗೆ ಪಾಂಡವರು ಈ ಮಹಾವ್ಯೂಹವನ್ನು ರಚಿಸಿ, ಜಯವನ್ನು ಬಯಸಿ, ಯುದ್ಧಮಾಡಲು ಇಚ್ಛಿಸಿ, ಶೂರರಾದ ಅವರು ಯುದ್ಧಕ್ಕಾಗಿ ನಿಂತರು.

ಭೇರೀಶಬ್ದಾಶ್ಚ ತುಮುಲಾ ವಿಮಿಶ್ರಾಃ ಶಂಖನಿಸ್ವನೈಃ ।
ಕ್ಷ್ವೇಡಿತಾಸ್ಫೋಟಿತೋತ್ಕೃಷ್ಟೈಃ ಸುಭೀಮಾಃ ಸರ್ವತೋದಿಶಮ್ ॥೨೨॥

ಶಂಖನಾದಗಳಿಂದ ಮಿಶ್ರಿತವಾದ ತೀವ್ರವಾದ ಭೇರೀಶಬ್ದಗಳು, ಸಿಂಹನಾದಗಳು, ಹಸ್ತತಳಶಬ್ದಗಳು ಮತ್ತು ಭಯಂಕರವಾದ ಕಿರುಚುವ ಶಬ್ದಗಳು ಎಲ್ಲ ದಿಕ್ಕುಗಳಲ್ಲಿಯೂ ಕೇಳಿ ಬಂದವು.

ತತಃ ಶೂರಾಃ ಸಮಾಸಾದ್ಯ ಸಮರೇ ತೇ ಪರಸ್ಪರಮ್ ।
ನೇತ್ತರನಿಮಿಷ್ಯೈ ರಾಜನ್ನವೈಕ್ಷಂತ ಪ್ರಕೋಪಿತಾಃ ॥೨೩॥

ಎಲೈ ರಾಜನೇ, ಅನಂತರ ಶೂರರು ಪರಸ್ಪರವಾಗಿ ಸಂಧಿಸಿ ಕೋಪಗೊಂಡು ರೆಪ್ಪೆಗಳನ್ನು ಮುಚ್ಚದ ತಮ್ಮ ಕಣ್ಣುಗಳಿಂದ ಒಬ್ಬರನ್ನೊಬ್ಬರು ನೋಡಿದರು (ದೃಷ್ಟಿ ಯುದ್ಧವನ್ನು ಮಾಡಿದರು).

ಮನೋಭಿಶ್ಚೇ ಮನುಷ್ಯೇಂದ್ರ ಪೂರ್ವಂ ಯೋಧಾಃ ಪರಸ್ಪರಮ್ ।
ಯುದ್ಧಾಯ ಸಮವರ್ತಂತ ಸಮಾಹೂಯೇತರೇತರಮ್ ॥೨೪॥

ಎಲೈ ಮನುಷ್ಯೇಂದ್ರನೇ, ಆ ಯೋಧರು ಮೊದಲು ಒಬ್ಬರನ್ನೊಬ್ಬರು ಆಹ್ವಾನಿಸಿ ಮನಸ್ಸುಗಳಿಂದಲೂ ಯುದ್ಧವನ್ನು ಮಾಡಿದರು.

ತತಃ ಪ್ರವವೃತೇ ಯುದ್ಧಂ ಘೋರರೂಪಂ ಭಯಾವಹಮ್ ।
ತಾವಕಾನಾಂ ಪರೇಷಾಂ ಚ ನಿಘ್ನತಾಮಿತರೇತರಮ್ ॥೨೫॥

ಅನಂತರ ನಿನ್ನವರಿಗೂ ಮತ್ತು ಪರರಿಗೂ ಪರಸ್ಪರವಾಗಿ ಕೊಲ್ಲುವ ಭಯಜನಕವಾದ ಘೋರವಾದ ಯುದ್ಧವು ಪ್ರಾರಂಭವಾಯಿತು.

ನಾರಾಚಾ ನಿಶಿತಾಃ ಸಂಖೇ ಸಂಪತಂತಿ ಸ್ಮ ಭಾರತ ।
ವ್ಯಾತ್ತಾಸನಾ ಭಯಕರಾ ಉರಗಾ ಇವ ಸಂಘಶಃ ॥೨೬॥

ಎಲೈ ಭಾರತನೇ, ಹರಿತವಾದ ನಾರಾಚಗಳು, ಬಾಯಿಯನ್ನು ತೆರೆದ ಭಯಂಕರವಾದ ಸರ್ಪಗಳಂತೆ ಗುಂಪು ಗುಂಪುಗಳಲ್ಲಿ ರಣರಂಗದಲ್ಲಿ ಚಲಿಸಿದವು.

ನಿಷ್ಪೇತುರ್ವಿಮಲಾಃ ಶಕ್ತ್ಯಸ್ತೈಲಧೌತಾಃ ಸುತೇಜನಾಃ ।
ಅಂಬುದೇಭ್ಯೋ ಯಥಾ ರಾಜನ್ ಭ್ರಾಜಮಾನಾಃ ಶತಹ್ರದಾಃ ॥೨೭॥

ಎಲೈ ರಾಜನೇ, ಮೋಡಗಳಿಂದ ಹೊಳೆಯುವ ಮಿಂಚುಗಳಂತೆ ಎಣ್ಣೆಯಲ್ಲಿ ಸಾಣೆಯನ್ನು ಹಿಡಿದ ಶಕ್ತಿಶಾಲಿಗಳಾದ ಶುದ್ಧವಾದ ಶಕ್ತ್ಯಾಯುಧಗಳು ಹಾರಾಡಿದವು.

ಗದಾಶ್ಚ ವಿಮಲೈಃ ಪಟ್ಟೈಃ ಪಿಸದ್ಭಾಃ ಸ್ವರ್ಣಭೂಷಿತಾಃ ।
ಪತಂತ್ಯಸ್ತತ್ರ ದೃಶ್ಯಂತೇ ಗಿರಿಶೃಂಗೋಪಮಾಃ ಶುಭಾಃ ।
ನಿಸ್ತ್ರಿಂಶಾಶ್ಚ ವ್ಯರಾಜಂತ ವಿಮಲಾಂಬರಸನ್ನಿಭಾಃ ॥೨೮॥

ಸ್ವರ್ಣಭೂಷಿತವಾದ ಪಟ್ಟಗಳಿಂದ ಹಿಡಿಯಲ್ಪಟ್ಟ, ನಿರ್ಮಲವಾದ ಶುಭವಾದ ಗದೆಗಳು ಪರ್ವತದ ಶಿಖರಗಳಂತೆ ಅಲ್ಲಲ್ಲಿ ಬೀಳುತ್ತಿರುವುದು ಕಂಡುಬಂದಿತು. ಸ್ವಚ್ಛವಾದ ಆಕಾಶದಂತೆ ಕಪ್ಪು ಬಣ್ಣದಿಂದ ಕೂಡಿದ ಖಡ್ಗಗಳೂ ವಿರಾಜಿಸಿದವು.

ಆರ್ಷಭಾಣಿ ಚ ಚರ್ಮಾಣಿ ಶತಚಂದ್ರಾಣಿ ಭಾರತ ।
ಅಶೋಭಂತ ರಣೇ ರಾಜನ್ ಪತಮಾನಾನಿ ಸರ್ವಶಃ ॥೨೯॥

ಎಲೈ ರಾಜನೇ, ಭಾರತನೇ, ವೃಷಭ ಚರ್ಮಗಳಿಂದ ಮಾಡಿದ ಶತಚಂದ್ರ ಚಿಹ್ನೆಯನ್ನು ಹೊಂದಿದ ಗುರಾಣಿಗಳು ರಣರಂಗದಲ್ಲಿ ಎಲ್ಲ ಕಡೆಯಲ್ಲಿಯೂ ಬೀಳುತ್ತಾ ಶೋಭಿಸಿದವು.

ತೇऽನ್ಯೋನ್ಯಂ ಸಮರೇ ಸೇನೇ ಯುಧ್ಯಮಾನೇ ನರಾಧಿಪ ।
ಅಶೋಭೇತಾಂ ಯಥಾ ದೈತ್ಯದೇವಸೇನೇ ಸಮುದ್ಯತೇ ।
ಅಭ್ಯದ್ರವಂತ ಸಮರೇ ತೇऽನ್ಯೋನ್ಯಂ ವೈ ಸಮಂತತಃ ॥೩೦॥

ಎಲೈ ರಾಜನೇ, ಪರಸ್ಪರವಾಗಿ ಯುದ್ಧವನ್ನು ಮಾಡುವ ಆ ಎರಡು ಸೈನ್ಯಗಳು ಯುದ್ಧೋದ್ಯುಕ್ತವಾದ ದೇವ-ದಾನವರ ಸೈನ್ಯದಂತೆ ಕಂಗೊಳಿಸಿದವು. ರಣರಂಗದಲ್ಲಿ ಎಲ್ಲ ಕಡೆಗಳಲ್ಲಿಯೂ ಪರಸ್ಪರವಾಗಿ ಯೋಧರು ಓಡಿದರು.

ರಥಾಸ್ತು ರಥಿಭಿಸ್ತೂರ್ಣಂ ಪ್ರೇಷಿತಾಃ ಪರಮಾಹವೇ ।
ಯುಗೈರ್ಯುಗಾನಿ ಸಂಶ್ಲಿಷ್ಯ ಯುಯುಧುಃ ಪಾರ್ಥಿವರ್ಷಭಾಃ ॥೩೧॥

ಆ ದೊಡ್ಡ ಯುದ್ಧದಲ್ಲಿ ರಥಿಗಳು ಪ್ರಚೋದಿಸಿದ ರಥಗಳ ನೊಗಗಳು ಶತ್ರುರಥಗಳ ನೊಗಗಳ ಜೊತೆಯಲ್ಲಿ ಸಂಶ್ಲೇಷವನ್ನು ಹೊಂದುತ್ತಿರಲು ರಾಜಶ್ರೇಷ್ಠರು ಯುದ್ಧವನ್ನು ಮಾಡಿದರು.

ದಂತಿನಾಂ ಯುಧ್ಯಮಾನಾನಾಂ ಸಂಘರ್ಷಾತ್ ಪಾವಕೋऽಭವತ್ ।
ದಂತೇಷು ಭರತಶ್ರೇಷ್ಠ ಸಧೂಮಃ ಸರ್ವತೋದಿಶಮ್ ॥೩೨॥

ಎಲೈ ಭರತಶ್ರೇಷ್ಠನೇ, ಗಜಗಳು ಯುದ್ಧವನ್ನು ಮಾಡುವಾಗ ಅವುಗಳ ದಂತಗಳ ಘರ್ಷಣೆಯಿಂದ ಎಲ್ಲ ದಿಕ್ಕುಗಳಲ್ಲಿಯೂ ಧೂಮಸಹಿತವಾದ ಅಗ್ನಿಯು ಉಂಟಾಯಿತು.

ಪ್ರಾಸೈರಭಹತಾಃ ಕೇಚಿದ್ ಗಜಯೋಧಾಃ ಸಮಂತತಃ ।
ಪತಮಾನಾಃ ಸ್ಮ ದೃಶ್ಯಂತೇ ಗಿರಿಶೃಂಗಾನ್ನಗಾ ಇವ ॥೩೩॥

ಪ್ರಾಸಗಳಿಂದ ತಿವಿಯಲ್ಪಟ್ಟ ಕೆಲವು ಗಜಯೋಧರು ಪರ್ವತದ ಶಿಖರಗಳಲ್ಲಿದ್ದ ವೃಕ್ಷಗಳಂತೆ ಕೆಳಗೆ ಉರುಳುವುದು ಎಲ್ಲ ಕಡೆಗಳಲ್ಲಿಯೂ ಕಂಡುಬಂದಿತು.

ಪಾದಾತಾಶ್ಚಾಪ್ಯದೃಶ್ಯಂತ ನಿಘ್ನಂತೋ ಹಿ ಪರಸ್ಪರಮ್ ।
ಚಿತ್ರರೂಪಧರಾಃ ಶೂರಾ ನಖರಪ್ರಾಸಯೋಧಿನಃ ॥೩೪॥

ವಿಚಿತ್ರರೂಪವನ್ನು ಧರಿಸಿದ ನಖರ, ಪ್ರಾಸ ಮೊದಲಾದ ಆಯುಧಗಳಿಂದ ಯುದ್ಧವನ್ನು ಮಾಡುವ ಶೂರರಾದ ಪದಾತಿಗಳೂ ಸಹ ಪರಸ್ಪರವಾಗಿ ಕೊಲ್ಲುವುದು ಕಂಡುಬಂದಿತು.

ಅನ್ಯೋನ್ಯಂ ತೇ ಸಮಾಸಾದ್ಯ ಕುರುಪಾಂಡವಸೈನಿಕಾಃ ।
ಶಸ್ತ್ರೈರ್ನಾನಾವಿಧೈರ್ಘೋರೈ ರಣೇ ನಿನ್ಯುರ್ಯಮಕ್ಷಯಮ್ ॥೩೫॥

ಕುರು-ಪಾಂಡವ ಸೈನಿಕರು ಪರಸ್ಪರವಾಗಿ ಸಂಧಿಸಿ ನಾನಾವಿಧವಾದ ಘೋರ ಶಸ್ತ್ರಗಳಿಂದ ರಣರಂಗದಲ್ಲಿ ಶತ್ರುಯೋಧರನ್ನು ಯಮಪಟ್ಟಣಕ್ಕೆ ಕಳುಹಿಸಿದರು.

ತತಃ ಶಾಂತನವೋ ಭೀಷ್ಮೋ ರಥಘೋಷೇಣ ನಾದಯನ್ ।
ಅಭ್ಯಾಗಮದ್ ರಣೇ ಪಾಂಡೂನ್ ಧನುಃಶಬ್ದೇನ ಮೋಹಯನ್॥೩೬॥

ಆಗ ಶಂತನು ಪುತ್ರರಾದ ಭೀಷ್ಮರು ತಮ್ಮ ರಥಘೋಷದಿಂದ ರಣಭೂಮಿಯನ್ನು ಪ್ರತಿಧ್ವನಿಸುತ್ತಾ, ತಮ್ಮ ಧನುಃಶಬ್ದದಿಂದ ಪಾಂಡವರಿಗೆ ಮೋಹವನ್ನುಂಟು ಮಾಡುತ್ತಾ ರಣರಂಗದಲ್ಲಿ ಪಾಂಡವರ ಸಮೀಪಕ್ಕೆ ಬಂದರು.

ಪಾಂಡವಾನಾಂ ರಥಾಶ್ಚಾಪಿ ನದಂತೋ ಭೈರವಸ್ವನಮ್ ।
ಅಭ್ಯದ್ರವಂತ ಸಂಯತ್ತಾ ಧೃಷ್ಟದ್ಯುಮ್ನಪುರೋಗಮಾಃ ॥೩೭॥

ಧೃಷ್ಟದ್ಯುಮ್ನರೇ ಮೊದಲಾದ ಪಾಂಡವರ ಮಹಾರಥರೂ ಸಹ ಭೈರವನಾದವನ್ನು ಮಾಡುತ್ತಾ ಬಹಳ ಎಚ್ಚರಿಕೆಯಿಂದ ಮುಂದೆ ಓಡಿದರು.

ತತಃ ಪ್ರವವೃತೇ ಯುದ್ಧಂ ತವ ತೇಷಾಂ ಚ ಭಾರತ ।
ನರಾಶ್ವರಥನಾಗಾನಾಂ ವ್ಯತಿಷಕ್ತಂ ಪರಸ್ಪರಮ್ ॥೩೮॥

ಎಲೈ ಭಾರತನೇ, ಅನಂತರ ನರಾಶ್ವರಥಗಜಗಳು ಪರಸ್ಪರವಾಗಿ ಮಿಶ್ರಣಗೊಳ್ಳುತ್ತಿರಲು ನಿನಗೂ ಮತ್ತು ಅವರಿಗೂ ಯುದ್ಧವು ಪ್ರಾರಂಭವಾಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ತ್ರಿಶತಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ತ್ರಿಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಎಂಬತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ನಾಲ್ಕನೆಯ ಅಧ್ಯಾಯ

ಭೀಷ್ಮರನ್ನು ಸೋಲಿಸಿದ ಭೀಮಸೇನನಿಂದ ಧೃತರಾಷ್ಟ್ರನ ಎಂಟು ಪುತ್ರರ ವಧೆ. ಭೀಷ್ಮರನ್ನು ಕುರಿತು ದುರ್ಯೋಧನನ ಕ್ರೂರ ವಚನಗಳು ಮತ್ತು ಭೀಷ್ಮರ ಸತ್ಯವಾದ ಮಾತುಗಳು.

ಸಂಜಯಃ

ಭೀಷ್ಮಂ ತು ಸಮರೇ ಕ್ರುದ್ಧಂ ಪ್ರತಪಂತಂ ಸಮಂತತಃ ।
ನ ಶೇಕುಃ ಪಾಂಡವಾ ದ್ರಷ್ಟುಂ ತಪಂತಮಿವ ಭಾಸ್ಕರಮ್ ॥೧॥

ಸಂಜಯ– ರಣರಂಗದಲ್ಲಿ ಎಲ್ಲ ಕಡೆಗಳಲ್ಲಿಯೂ ಕ್ರುದ್ಧರಾಗಿ ಶತ್ರುಸೈನ್ಯವನ್ನು ದಹಿಸುತ್ತಿದ್ದ, ಸೂರ್ಯನಂತೆ ಜ್ವಲಿಸುತ್ತಿದ್ದ, ಭೀಷ್ಮರನ್ನು ನೋಡಲು ಪಾಂಡವರು ಸಮರ್ಥರಾಗಲಿಲ್ಲ.

ತತಃ ಸರ್ವಾಣಿ ಸೈನ್ಯಾನಿ ಧರ್ಮಪುತ್ರಸ್ಯ ಶಾಸನಾತ್ ।
ಅಭ್ಯದ್ರವಂತ ಗಾಂಗೇಯಂ ಮರ್ದಯಂತಂ ಶಿತೈಃ ಶರೈಃ ॥೨॥

ಆಗ ಧರ್ಮರಾಜನ ಶಾಸನದಂತೆ ಎಲ್ಲ ಸೈನ್ಯಗಳೂ ತಮ್ಮ ಹರಿತವಾದ ಬಾಣದಿಂದ ಕೌರವರ ಸೈನ್ಯರನ್ನು ಮರ್ದಿಸುತ್ತಿದ್ದ ಗಂಗಾಪುತ್ರರ ಕಡೆಗೆ ಓಡಿದವು.

ಸ ತು ಭೀಷ್ಮೋ ರಣಶ್ಲಾಘೀ ಸೋಮಕಾನ್ ಸಸೃಂಜಯಾನ್ ।
ಪಾಂಚಾಲಾಂಶ್ಚ ಮಹೇಷ್ವಾಸಾನ್ ಪಾತಯಾಮಾಸ ಸಾಯಕೈಃ ॥೩॥

ಯುದ್ಧೋತ್ಸಾಹವುಳ್ಳ ಭೀಷ್ಮರು ತಮ್ಮ ಬಾಣಗಳಿಂದ ಸೃಂಜಯಸಹಿತರಾದ ಸೋಮಕರನ್ನೂ ಮತ್ತು ಮಹಾಧನುರ್ಧಾರಿಗಳಾದ ಪಾಂಚಾಲರನ್ನೂ ಕೆಡವಿದರು.

ತೇ ವಧ್ಯಮಾನಾ ಭೀಷ್ಮೇಣ ಪಾಂಚಾಲಾಃ ಸೋಮಕೈಃ ಸಹ ।
ಭೀಷ್ಮಮೇವಾಭ್ಯಯುಸ್ತೂರ್ಣಂ ತ್ಯಕ್ತ್ವಾ ಮೃತ್ಯುಕೃತಂ ಭಯಮ್ ॥೪॥

ಭೀಷ್ಮರಿಂದ ಪ್ರಹಾರಕ್ಕೆ ಒಳಗಾದ ಪಾಂಚಾಲರು ಮತ್ತು ಸೋಮಕರು ಮೃತ್ಯುಭಯವನ್ನು ತೊರೆದು ಭೀಷ್ಮರ ಮೇಲೆಯೇ ಶೀಘ್ರವಾಗಿ ಎರಗಿದರು.

ಸ ತೇಷಾಂ ರಥಿನಾಂ ವೀರೋ ಭೀಷ್ಮಃ ಶಾಂತನವೋ ಯುಧಿ ।
ಚಿಚ್ಛೇದ ಸಹಸಾ ರಾಜನ್ ಬಾಹೂನಥ ಶಿರಾಂಸಿ ಚ ॥೫॥

ಎಲೈ ರಾಜನೇ, ರಥಿಶ್ರೇಷ್ಠರಾದ, ವೀರರಾದ, ಶಂತನುಪುತ್ರರಾದ ಆ ಭೀಷ್ಮರು ಯುದ್ಧದಲ್ಲಿ ತಕ್ಷಣದಲ್ಲಿ ಅವರ ಬಾಹುಗಳನ್ನೂ ಮತ್ತು ಶಿರಸ್ಸುಗಳನ್ನೂ ಕತ್ತರಿಸಿದರು.

ವಿರಥಾನ್ ರಥಿನಶ್ಚಕ್ರೇ ಪಿತಾ ದೇವವ್ರತಸ್ತವ ।
ಪತಿತಾನ್ಯುತ್ತಮಾಂಗಾನಿ ಹಯೇಭ್ಯೋ ಹಯಸಾದಿನಾಮ್ ॥೬॥

ನಿನ್ನ ತಂದೆಯಾದ ದೇವವ್ರತರು ರಥವುಳ್ಳವರನ್ನು ರಥಹೀನರನ್ನಾಗಿ ಮಾಡಿದರು. ಅಶ್ವಾರೋಹಿಗಳ ಶಿರಸ್ಸುಗಳು ಅಶ್ವಗಳಿಂದ ಕೆಳಗೆ ಉರುಳಿದವು.

ನಿರ್ಮನುಷ್ಯಾಂಶ್ಚ ಮಾತಂಗಾನ್ ಶಯಾನಾನ್ ಪರ್ವತೋಪಮಾನ್ ।
ಅಪಶ್ಯಾಮ ಮಹಾರಾಜ ಭೀಷ್ಮಾಸ್ತ್ರೇಣ ಪ್ರಮೋಹಿತಾನ್ ॥೭॥

ಭೀಷ್ಮರ ಅಸ್ತ್ರಗಳಿಂದ ಪ್ರಮರ್ದಿತವಾಗಿ ಗಜಾರೋಹಿಗಳಿಲ್ಲದೆ ಪರ್ವತದಂತೆ ನೆಲದ ಮೇಲೆ ಬಿದ್ದಿರುವ ಗಜಗಳನ್ನು ನಾವು ನೋಡಿದೆವು.

ನ ತತ್ರಾಸೀತ್ ಪುಮಾನ್ ಕಶ್ಚಿತ್ ಪಾಂಡವಾನಾಂ ವಿಶಾಂಪತೇ ।
ಅನ್ಯತ್ರ ರಥಿನಾಂ ಶ್ರೇಷ್ಠಾದ್ ಭೀಮಸೇನಾನ್ಮಹಾಬಲಾತ್ ॥೮॥

ಎಲೈ ರಾಜನೇ, ಪಾಂಡವರ ಸೈನ್ಯದಲ್ಲಿ ಮಹಾಬಲನೂ, ರಥಿಶ್ರೇಷ್ಠನೂ ಆದ ಭೀಮಸೇನನೊಬ್ಬನನ್ನು ಬಿಟ್ಟು ಬೇರೆ ಯಾವ ಪುರುಷನೂ ಅಲ್ಲಿ ಇರಲಿಲ್ಲ.

ಸ ಹಿ ಭೀಷ್ಮಂ ಸಮಾಸಾದ್ಯ ತಾಡಯಾಮಾಸ ಸಂಯುಗೇ ।
ತತೋ ನಿಷ್ಪಾನಕೋ ಘೋರೋ ಭೀಷ್ಮಭೀಮಸಮಾಗಮೇ ॥೯॥

ಬಭೂವ ಸರ್ವಸೈನ್ಯಾನಾಂ ಘೋರರೂಪೋ ಭಯಾನಕಃ ।
ತಥೈವ ಪಾಂಡವಾ ಹೃಷ್ಟಾಃ ಸಿಂಹನಾದಮಥಾನದನ್ ॥೧೦॥

ಅವನಾದರೋ ಭೀಷ್ಮರನ್ನು ಸಮೀಪಿಸಿ ಯುದ್ಧದಲ್ಲಿ ಅವರಿಗೆ ಪ್ರಹಾರವನ್ನು ಮಾಡಿದನು. ಭೀಷ್ಮ-ಭೀಮರ ಸಮಾಗಮ ಉಂಟಾದಾಗ ನಿನ್ನ ಎಲ್ಲಾ ಸೈನ್ಯಗಳಲ್ಲಿ ಘೋರವೂ, ಭಯಂಕರವೂ ಆದ ದೊಡ್ಡ ಶಬ್ದವು ಉಂಟಾಯಿತು. ಅದರಂತೆ ಪಾಂಡವರೂ ಸಹ ಸಂತೋಷದಿಂದ ಸಿಂಹನಾದವನ್ನು ಮಾಡಿದರು.

ತತೋ ದುರ್ಯೋಧನೋ ರಾಜಾ ಸೋದರ್ಯೈಃ ಪರಿವಾರಿತಃ ।
ಭೀಷ್ಮಂ ಜುಗೋಪ ಸಮರೇ ವರ್ತಮಾನೇ ಜನಕ್ಷಯೇ ॥೧೧॥

ಯುದ್ಧದಲ್ಲಿ ಯೋಧರ ಕ್ಷಯವಾಗುತ್ತಿರಲು ಆಗ ರಾಜನಾದ ದುರ್ಯೋಧನನು ತನ್ನ ಸಹೋದರರಿಂದ ಪರಿವಾರಿತನಾಗಿ ಭೀಷ್ಮರನ್ನು ರಕ್ಷಿಸಿದನು.

ಭೀಮಸ್ತು ಸಾರಥಿಂ ಹತ್ವಾ ಭೀಷ್ಮಸ್ಯ ರಥಿನಾಂ ವರಃ ।
ಪ್ರಹತಾಶ್ವರಥೇ ತಸ್ಮಿನ್ ದ್ರವಮಾಣೇ ಸಮಂತತಃ ।
ಸುನಾಭಸ್ಯ ಶರೇಣಾಶು ಶಿರಶ್ಚಿಚ್ಛೇದ ಚಾರಿಹಾ ॥೧೨॥

ರಥಿಶ್ರೇಷ್ಠನೂ, ಶತ್ರುಘಾತಕನೂ ಆದ ಭೀಮನು ಭೀಷ್ಮರ ಸಾರಥಿಯನ್ನು ಕೊಂದು, ಅಶ್ವಗಳನ್ನೂ ಕೊಂದು, ಭೀಷ್ಮರನ್ನು ಬಿಟ್ಟು ಎಲ್ಲ ಕಡೆಗಳಲ್ಲಿಯೂ ವೇಗವಾಗಿ ಸಂಚರಿಸುತ್ತಾ, ನಿನ್ನ ಪುತ್ರನಾದ ಸುನಾಭನ ಶಿರಸ್ಸನ್ನು ಶೀಘ್ರವಾಗಿ ಬಾಣದಿಂದ ಕತ್ತರಿಸಿದನು.

ಕ್ಷುರಪ್ರೇಣ ಸುತೀಕ್ಷ್ಣೇನ ಸ ಹತೋ ನ್ಯಪತದ್ ಭುವಿ ।
ಹತೇ ತಸ್ಮಿನ್ ಮಹಾರಾಜ ತವ ಪುತ್ರೇ ಮಹಾರಥೇ ।
ನಾಮೃಷ್ಯಂತ ರಣೇ ಶೂರಾಃ ಸೋದರ್ಯಾಃ ಸಪ್ತ ಸಂಯುಗೇ ॥೧೩॥

ಬಹಳ ತೀಕ್ಷ್ಣವಾದ ಕ್ಷುರಪ್ರದಿಂದ ಹತನಾದ ಸುನಾಭನು ಭೂಮಿಯ ಮೇಲೆ ಬಿದ್ದನು. ಎಲೈ ಮಹಾರಾಜನೇ, ನಿನ್ನ ಪುತ್ರನೂ, ಮಹಾರಥನೂ ಆದ ಅವನು ಹತನಾಗುತ್ತಿರಲು ಶೂರರಾದ ಅವನ ಸಪ್ತ ಸಹೋದರರು ಯುದ್ಧದಲ್ಲಿ ಅದನ್ನು ಸಹಿಸಲಿಲ್ಲ.

ಆದಿತ್ಯಕೇತುರ್ಬಹ್ವಾಶೀ ಕುಂಡಧಾರೋ ಮಹೋದರಃ ।
ಅಪರಾಜಿತಃ ಪಂಡಿತಕೋ ವಿಶಾಲಾಕ್ಷಃ ಸುದುರ್ಜಯಃ ॥೧೪॥

ಪಾಂಡವಂ ಚಿತ್ರಸನ್ನಾಹಾ ವಿಚಿತ್ರಕವಚಧ್ವಜಾಃ ।
ಅಭ್ಯದ್ರವಂತ ಸಂಗ್ರಾಮೇ ಯೋದ್ಧುಕಾಮಾರಿಮರ್ದನಾಃ ॥೧೫॥

ಶತ್ರುಮರ್ದನರೂ, ಶತ್ರುಗಳ ಜೊತೆಯಲ್ಲಿ ಯುದ್ಧಮಾಡಲು ಬಯಸುವವರೂ, ವಿಚಿತ್ರ ಕವಚಗಳನ್ನು ಮತ್ತು ಧ್ವಜಗಳನ್ನು ಹೊಂದಿದವರೂ, ವಿಚಿತ್ರವಾದ ಸನ್ನಾಹಗಳನ್ನು ಹೊಂದಿದವರೂ ಆದ ಆದಿತ್ಯಕೇತು, ಬಹ್ವಾಶೀ, ಕುಂಡಧಾರ, ಮಹೋದರ, ಅಪರಾಜಿತ, ಪಂಡಿತ, ಅತ್ಯಂತ ದುರ್ಜಯನಾದ ವಿಶಾಲಾಕ್ಷ ಇವರೆಲ್ಲರೂ ಭೀಮಸೇನನ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸಿ ರಣರಂಗದಲ್ಲಿ ಅವನ ಕಡೆಗೆ ಓಡಿದರು.

ಮಹೋದರಸ್ತು ಸಮರೇ ಭೀಮಂ ವಿವ್ಯಾಧ ಪತ್ರಿಭಿಃ ।
ನವಭಿರ್ವಜ್ರಸಂಕಾಶೈರ್ನಮುಚಿಂ ವೃತ್ರಹಾ ಯಥಾ ॥೧೬॥

ಮಹೋದರನಾದರೋ ಇಂದ್ರನು ನಮುಚಿಗೆ ಪ್ರಹಾರ ಮಾಡಿದಂತೆ ಪತ್ರಸಹಿತವಾದ ವಜ್ರದಂತಿರುವ ಒಂಬತ್ತು ಬಾಣಗಳಿಂದ ಭೀಮನಿಗೆ ಪ್ರಹಾರವನ್ನು ಮಾಡಿದನು.

ಆದಿತ್ಯಕೇತುಃ ಸಪ್ತತ್ಯಾ ಬಹ್ವಾಶೀ ಚಾಪಿ ಪಂಚಭಿಃ ।
ನವತ್ಯಾ ಕುಂಡಧಾರಸ್ತು ವಿಶಾಲಾಕ್ಷಶ್ಚ ಸಪ್ತಭಿಃ ॥೧೭॥

ಅಪರಾಜಿತೋ ಮಹಾರಾಜ ಪರಾಜಿಷ್ಣುರ್ಮಹಾರಥಃ ।
ಶರೈರ್ಬಹುಭಿರಾನರ್ಚ್ಛದ್ ಭೀಮಸೇನಂ ಮಹಾಬಲಮ್ ॥೧೮॥

ಎಲೈ ಮಹಾರಾಜನೇ, ಆದಿತ್ಯಕೇತುವು ಎಪ್ಪತ್ತು ಬಾಣಗಳಿಂದಲೂ, ಬಹ್ವಾಶಿಯು ಐದು ಬಾಣಗಳಿಂದಲೂ, ಕುಂಡಧಾರನು ತೊಂಭತ್ತು ಬಾಣಗಳಿಂದಲೂ, ವಿಶಾಲಾಕ್ಷನು ಏಳು ಬಾಣಗಳಿಂದಲೂ, ಶತ್ರುಗಳನ್ನು ಸೋಲಿಸುವವನೂ ಮಹಾರಥನೂ ಆದ ಅಪರಾಜಿತನು ಅನೇಕ ಬಾಣಗಳಿಂದಲೂ ಮಹಾಬಲನಾದ ಭೀಮಸೇನನನ್ನು ಹೊಡೆದರು.

ರಣೇ ಪಂಡಿತಕಶ್ಚೈನಂ ತ್ರಿಭಿರ್ಬಾಣೈಃ ಸಮರ್ದಯತ್ ।
ಸ ತನ್ನ ಮಮೃಷೇ ಭೀಮಃ ಶತ್ರುಭಿರ್ವಧಮಾಹವೇ ॥೧೯॥

ಯುದ್ಧದಲ್ಲಿ ಪಂಡಿತಕನು ಮೂರುಬಾಣಗಳಿಂದ ಭೀಮಸೇನನನ್ನು ಪೀಡಿಸಿದನು. ಯುದ್ಧದಲ್ಲಿ ಶತ್ರುಗಳ ಈ ಪ್ರಹಾರವನ್ನು ಭೀಮಸೇನನು ಸಹಿಸಲಿಲ್ಲ.

ಧನುಃ ಪ್ರಪೀಡ್ಯ ವಾಮೇನ ಕರೇಣಾಮಿತ್ರಕರ್ಶನಃ ।
ಶರಶ್ಚಿಚ್ಛೇದ ಸಮರೇ ಶರೇಣ ನತಪರ್ವಣಾ ॥೨೦॥

ಅಪರಾಜಿತಸ್ಯ ಸುನಸಂ ತವ ಪುತ್ರಸ್ಯ ಸಂಯುಗೇ ।
ಪರಾಜಿತಸ್ಯ ಭೀಮೇನ ನಿಪಪಾತ ಶಿರೋ ಮಹೀಮ್ ॥೨೧॥

ಶತ್ರುಕರ್ಶನನಾದ ಅವನು ತನ್ನ ಎಡಗೈಯಿಂದ ಧನುಸ್ಸನ್ನು ಚೆನ್ನಾಗಿ ಬಗ್ಗಿಸಿ ಬಾಗಿದ ತುದಿಯುಳ್ಳ ಬಾಣದಿಂದ ನಿನ್ನ ಪುತ್ರನೂ, ಒಳ್ಳೆಯ ನಾಸಿಕವುಳ್ಳವನೂ ಆದ ಅಪರಾಜಿತನ ಶಿರಸ್ಸನ್ನು ಕತ್ತರಿಸಿದನು. ಭೀಮನ ಎದುರಿಗೆ ಸೋತು ಹೋದ ಅವನ ಶಿರಸ್ಸು ಭೂಮಿಯ ಮೇಲೆ ಬಿದ್ದಿತು.

ಅಥಾಪರೇಣ ಭಲ್ಲೇನ ಕುಂಡಧಾರಂ ಮಹಾರಥಮ್ ।
ಪ್ರಾಹಿಣೋನ್ಮೃತ್ಯುಲೋಕಾಯ ಸರ್ವಲೋಕಸ್ಯ ಪಶ್ಯತಃ ॥೨೨॥

ಭೀಮಸೇನನು ಇನ್ನೊಂದು ಭಲ್ಲವನ್ನು ತೆಗೆದುಕೊಂಡು ಎಲ್ಲ ಯೋಧರೂ ನೋಡುತ್ತಿರುವಂತೆ ಮಹಾರಥನಾದ ಕುಂಡಧಾರನನ್ನು ಅದರಿಂದ ಮೃತ್ಯುಲೋಕಕ್ಕೆ ಕಳುಹಿಸಿದನು.

ತತಃ ಪುನರಮೇಯಾತ್ಮಾ ಪ್ರಸಂಧಾಯ ಶಿಲೀಮುಖಮ್ ।
ಪ್ರೇಷಯಾಮಾಸ ಸಮರೇ ಪಂಡಿತಂ ಪ್ರತಿ ಭಾರತ ॥೨೩॥

ಎಲೈ ಭಾರತನೇ, ಅಚಿಂತ್ಯ ಸಾಮರ್ಥ್ಯವುಳ್ಳ ಅವನು ಪುನಃ ತನ್ನ ಧನುಸ್ಸಿಗೆ ಬಾಣವನ್ನು ಹೂಡಿ ಪಂಡಿತನ ಮೇಲೆ ಬಾಣ ಪ್ರಯೋಗವನ್ನು ಮಾಡಿದನು.

ಸ ಶರಃ ಪಂಡಿತಂ ಹತ್ವಾ ವಿವೇಶ ಧರಣೀತಳಮ್ ।
ಯಥಾ ನರಂ ನಿಹತ್ಯಾಶು ಭುಜಗಃ ಕಾಲಚೋದಿತಃ ॥೨೪॥

ಆ ಬಾಣವಾದರೋ ಮೃತ್ಯುಚೋದಿತವಾದ ಸರ್ಪವು ಮನುಷ್ಯನನ್ನು ಕೊಂದು ಶೀಘ್ರವಾಗಿ ಭೂಮಿಯನ್ನು ಪ್ರವೇಶಿಸುವಂತೆ ಪಂಡಿತಕನನ್ನು ಕೊಂದು ಭೂಮಿಯನ್ನು ಪ್ರವೇಶಿಸಿತು.

ವಿಶಾಲಾಕ್ಷಶಿರಶ್ಛಿತ್ತ್ವಾ ಪಾತಯಾಮಾಸ ಭೂತಳೇ ।
ತ್ರಿಭಿಃ ಶರೈರದೀನಾತ್ಮಾ ಸ್ಮರನ್ ಕ್ಲೇಶಂ ಪುರಾತನಮ್ ॥೨೫॥

ಧೈರ್ಯಶಾಲಿಯಾದ ಭೀಮಸೇನನು ಹಿಂದಿನ ಕ್ಲೇಶಗಳನ್ನು ಸ್ಮರಿಸುತ್ತಾ ಮೂರು ಬಾಣಗಳಿಂದ ವಿಶಾಲಾಕ್ಷನ ಶಿರಸ್ಸನ್ನು ಕತ್ತರಿಸಿ ಭೂಮಿಯ ಮೇಲೆ ಬೀಳಿಸಿದನು.

ಮಹೋದರಂ ಮಹೇಷ್ವಾಸಂ ನಾರಾಚೇನ ಸ್ತನಾಂತರೇ ।
ವಿವ್ಯಾಧ ಸಮರೇ ರಾಜನ್ ಸ ಹತೋ ನ್ಯಪತದ್ ಭುವಿ ॥೨೬॥

ಎಲೈ ರಾಜನೇ, ಮಹಾಧನುರ್ಧಾರಿಯಾದ ಮಹೋದರನಿಗೆ ಒಂದು ನಾರಾಚವನ್ನು ಅವನ ಸ್ತನಗಳ ಮಧ್ಯದಲ್ಲಿ ಹೊಡೆದನು. ಅವನು ಆ ಯುದ್ಧದಲ್ಲಿ ಮರಣವನ್ನು ಹೊಂದಿ ಭೂಮಿಯ ಮೇಲೆ ಬಿದ್ದನು.

ಆದಿತ್ಯಕೇತೋಃ ಕೇತುಂ ಚ ಛಿತ್ತ್ವಾ ಬಾಣೇನ ಸಂಯುಗೇ ।
ಭಲ್ಲೇನ ಬೃಶತೀಕ್ಷ್ಣೇನ ಶಿರಶ್ಚಿಚ್ಛೇದ ಚಾರಿಹಾ ॥೨೭॥

ಶತ್ರುಘಾತಕನಾದ ಭೀಮಸೇನನು ಯುದ್ಧದಲ್ಲಿ ತನ್ನ ಬಾಣದಿಂದ ಆದಿತ್ಯಕೇತುವಿನ ಧ್ವಜವನ್ನು ಕತ್ತರಿಸಿ ಬಹಳ ತೀಕ್ಷ್ಣವಾದ ಭಲ್ಲದಿಂದ ಅವನ ಶಿರಸ್ಸನ್ನು ಕತ್ತರಿಸಿದನು.

ಬಹ್ವಾಶಿನಂ ತತೋ ಭೀಮಃ ಶರೇಣ ನತಪರ್ವಣಾ ।
ಪ್ರೇಷಯಾಮಾಸ ಸಂಕ್ರುದ್ಧೋ ಯಮಸ್ಯ ಸದನಂ ಪ್ರತಿ ॥೨೮॥

ಅನಂತರ ಕ್ರೋಧಯುಕ್ತನಾದ ಭೀಮನು ಬಾಗಿದ ತುದಿಯುಳ್ಳ ಬಾಣದಿಂದ ಬಹ್ವಾಶಿಯನ್ನು ಯಮನ ಆಲಯಕ್ಕೆ ಕಳುಹಿಸಿದನು.

ಪ್ರದುದ್ರುವುಸ್ತತಸ್ತೇಽನ್ಯೇ ಪುತ್ರಾಸ್ತವ ವಿಶಾಂಪತೇ ।
ಮನ್ಯಮಾನಾ ಹಿ ತತ್ಸತ್ಯಂ ಸಭಾಯಾಂ ತಸ್ಯ ಭಾಷಿತಮ್ ॥೨೯॥

ಎಲೈ ರಾಜನೇ, ನಿನ್ನ ಉಳಿದ ಮಕ್ಕಳು ಸಭೆಯಲ್ಲಿ ಭೀಮಸೇನನು ಆಡಿದ ಮಾತುಗಳು ಸತ್ಯವೆಂದು ಭಾವಿಸಿ ರಣರಂಗದಿಂದ ಓಡಿಹೋದರು.

ತತೋ ದುರ್ಯೋಧನೋ
ರಾಜಾ ಭ್ರಾತೃವ್ಯಸನಕರ್ಶಿತಃ ।
ಅಬ್ರವೀತ್ ತಾವಕಾನ್ ಯೋಧಾನ್
ಭೀಮೋಽಯಂ ಯುಧಿ ವಧ್ಯತಾಮ್ ॥೩೦॥

ತಮ್ಮಂದಿರ ನಿಧನದಿಂದ ಉಂಟಾದ ಶೋಕದಿಂದ ಕರ್ಶಿತನಾದ ದುರ್ಯೋಧನ ರಾಜನು ನಿನ್ನ ಯೋಧರನ್ನು ಕುರಿತು ಈ ಭೀಮನನ್ನು ಯುದ್ಧದಲ್ಲಿ ಕೊಲ್ಲಿ ಎಂದು ಹೇಳಿದನು.

ಏವಮೇತೇ ಮಹೇಷ್ವಾಸಾಃ ಪುತ್ರಾಸ್ತವ ವಿಶಾಂಪತೇ ।
ಭ್ರಾತೄನ್ ಸಂದೃಶ್ಯ ನಿಹತಾನ್ ಪ್ರಾಸ್ಮರಂಸ್ತೇ ಹಿ ತದ್ವಚಃ ॥೩೧॥

ಯದುಕ್ತವಾನ್ ಮಹಾಪ್ರಾಜ್ಞಃ ಕ್ಷತ್ತಾ ಹಿತಮನಾಮಯಮ್ ।
ತದಿದಂ ಸಮನುಪ್ರಾಪ್ತಂ ವಚನಂ ದಿವ್ಯದರ್ಶಿನಃ ॥೩೨॥

ಎಲೈ ರಾಜನೇ, ಹೀಗೆ ಮಹಾಧನುರ್ಧಾರಿಗಳಾದ ಈ ನಿನ್ನ ಮಕ್ಕಳು ತಮ್ಮ ಸಹೋದರರು ಹತರಾದುದನ್ನು ನೋಡಿ, ಮಹಾಪ್ರಾಜ್ಞನಾದ ವಿದುರನು ಯಾವ ಹಿತವನ್ನು ಮತ್ತು ಕ್ಷೇಮವನ್ನು ನುಡಿದಿದ್ದನೋ ಆ ಮಾತುಗಳನ್ನು ಸ್ಮರಿಸಿ ದಿವ್ಯದರ್ಶಿಯಾದ ಅವನ ಮಾತುಗಳು ಸತ್ಯವಾಗಿವೆ ಎಂದೂ ಸ್ಮರಿಸಿದರು.

ಲೋಭಮೋಹಸಮಾವಿಷ್ಟಃ ಪುತ್ರಪ್ರೀತ್ಯಾ ಜನಾಧಿಪ ।
ನ ಬುಧ್ಯಸೇ ಪುರಾ ಯತ್ತತ್ ತಥ್ಯಮುಕ್ತಂ ವಚೋ ಮಹತ್ ॥೩೩॥

ಎಲೈ ಮಹಾರಾಜನೇ, ಲೋಭ-ಮೋಹಗಳಿಗೆ ವಶನಾದ ನೀನು ಪುತ್ರರ ಮೇಲಿನ ಮಮತೆಯಿಂದ ವಿದುರನು ಆಡಿದ ದೊಡ್ಡ ಸತ್ಯವಚನಗಳನ್ನು ಹಿಂದೆ ತಿಳಿಯಲಿಲ್ಲ.

ತಥೈವ ಹಿ ವಧಾರ್ಥಾಯ ಪುತ್ರಾಣಾಂ ಪಾಂಡವೋ ಬಲೀ ।
ನೂನಂ ಜಾತೋ ಮಹಾಬಾಹುರ್ಯಥಾ ಹಂತಿ ಸ್ಮ ಕೌರವಾನ್ ॥೩೪॥

ಮಹಾಬಾಹುವೂ, ಬಲಿಷ್ಠನೂ, ಪಾಂಡುಪುತ್ರನೂ ಆದ ಭೀಮಸೇನನು ಕೌರವರನ್ನು ಕೊಲ್ಲುವುದನ್ನು ನೋಡಿದರೆ ಅವರ ವಧೆಗಾಗಿಯೇ ಅವನು ಜನಿಸಿದ್ದಾನೆಂದು ಕಂಡುಬರುತ್ತಿದೆ (ಎಂದು ಸಂಜಯನು ಹೇಳಿದನು).

ತತೋ ದುರ್ಯೋಧನೋ ರಾಜಾ ಭೀಷ್ಮಮಾಸಾದ್ಯ ಮಾರಿಷ ।
ದುಃಖೇನ ಮಹತಾऽऽವಿಷ್ಟೋ ವಿಲಲಾಪಾತಿಕರ್ಶಿತಃ ॥೩೫॥

ಎಲೈ ಪೂಜ್ಯನೇ, ಆಗ ರಾಜನಾದ ದುರ್ಯೋಧನನು ಬಹಳ ದುಃಖದಿಂದ ಕೂಡಿದವನಾಗಿ, ಅತ್ಯಂತ ವ್ಯಥೆಗೆ ಒಳಗಾಗಿ ಭೀಷ್ಮರ ಸಮೀಪಕ್ಕೆ ಹೋಗಿ ವಿಲಾಪವನ್ನು ಮಾಡಿದನು.

ನಿಹತಾ ಭ್ರಾತರಃ ಶೂರಾ ಭೀಮಸೇನೇನ ಮೇ ಯುಧಿ ।
ಯತಮಾನಾಸ್ತಥಾನ್ಯೇऽಪಿ ಹನ್ಯಂತೇ ಸರ್ವಸೈನಿಕಾಃ ॥೩೬॥

ಶೂರರೂ, ಪ್ರಯತ್ನಶಾಲಿಗಳೂ ಆದ ನನ್ನ ತಮ್ಮಂದಿರು ಯುದ್ಧದಲ್ಲಿ ಭೀಮಸೇನನಿಂದ ಹತರಾದರು. ಹಾಗೆಯೇ ಉಳಿದ ಎಲ್ಲಾ ಸೈನಿಕರು ಹತರಾಗುತ್ತಿದ್ದಾರೆ.

ಭವಾಂಶ್ಚ ಮಧ್ಯಸ್ಥತಯಾ ನಿತ್ಯಮಸ್ಮಾನುಪೇಕ್ಷತೇ ।
ಸೋऽಹಂ ಕಾಪಥಮಾರೂಢಃ ಪಶ್ಯ ದೈವಮಿದಂ ಮಮ ॥೩೭॥

ನೀವಾದರೋ ತಟಸ್ಥರಾಗಿದ್ದು, ಯಾವಾಗಲೂ ನಮ್ಮನ್ನು ಉದಾಸೀನ ಮಾಡುತ್ತಿದ್ದೀರಿ. ನಾನು ದುರ್ಮಾರ್ಗವನ್ನು ಹಿಡಿದಂತಾಯಿತು. ಈ ನನ್ನ ದುರದೃಷ್ಟವನ್ನು ನೋಡಿ (ಎಂದು ಹೇಳಿದನು).

ಏತಚ್ಛ್ರುತ್ವಾ ವಚಃ ಕ್ರೂರಂ ಪಿತಾ ದೇವವ್ರತಸ್ತವ ।
ದುರ್ಯೋಧನಮಿದಂ ವಾಕ್ಯಮಬ್ರವೀತ್ ಸಾಶ್ರುಲೋಚನಮ್ ॥೩೮॥

ಈ ಕ್ರೂರವಚನವನ್ನು ಕೇಳಿದ ನಿನ್ನ ತಂದೆಯಾದ ಭೀಷ್ಮರು ಅಶ್ರುಪೂರಿತ ನಯನನಾದ ದುರ್ಯೋಧನನನ್ನು ಕುರಿತು ಈ ಮಾತನ್ನು ಆಡಿದರು.

ಉಕ್ತಮೇತನ್ಮಯಾ ಪೂರ್ವಂ ದ್ರೋಣೇನ ವಿದುರೇಣ ಚ ।
ಗಾಂಧಾರ್ಯಾ ಚ ಯಶಸ್ವಿನ್ಯಾ ತತ್ತ್ವಂ ತಾತ ನ ಬುದ್ಧವಾನ್ ॥೩೯॥

ಎಲೈ ಪ್ರೀತಿಪಾತ್ರನೇ, ಈ ವಿಷಯವನ್ನು ಹಿಂದೆ ನಾನು, ದ್ರೋಣರು, ವಿದುರನು, ಕೀರ್ತಿವಂತಳಾದ ಗಾಂಧಾರಿಯು ಹೇಳಿದ್ದೇವೆ. ಆದರೆ ನೀನು ಆ ಮಾತುಗಳನ್ನು ತಿಳಿಯಲಿಲ್ಲ.

ಸಮಯಶ್ಚ ಮಯಾ ಪೂರ್ವಂ ಕೃತೋ ವಃ ಶತ್ರುಕರ್ಶನ ।
ನಾಹಂ ಯುಧಿ ವಿಮೋಕ್ತವ್ಯೋ ನಾಪ್ಯಾಚಾರ್ಯಃ ಕಥಂಚನ ॥೪೦॥

ಎಲೈ ಶತ್ರುಕರ್ಶನನೇ, ತಾತನೆಂದು ನನ್ನ ಮೇಲಾಗಲೀ ಅಥವಾ ಗುರುಗಳೆಂದು ದ್ರೋಣಾಚಾರ್ಯರ ಮೇಲಾಗಲೀ ಯಾವ ದಾಕ್ಷಿಣ್ಯವನ್ನು ತೋರಿಸಬಾರದೆಂದು ನಾನು ಹಿಂದೆಯೇ ಪಾಂಡವರಿಂದ ಪ್ರತಿಜ್ಞೆಯನ್ನು ಪಡೆದಿದ್ದೇನೆ.

ಯಂ ಯಂ ಹಿ ಧಾರ್ತರಾಷ್ಟ್ರಾಣಾಂ ಭೀಮೋ ದ್ರಕ್ಷ್ಯತಿ ಸಂಯುಗೇ ।
ಹನಿಷ್ಯತಿ ರಣೇ ತಂ ತಂ ಸತ್ಯಮೇತದ್ ಬ್ರವೀಮಿ ತೇ ॥೪೧॥

ಭೀಮಸೇನನು ಯುದ್ಧದಲ್ಲಿ ಯಾವ ಯಾವ ಧೃತರಾಷ್ಟ್ರಪುತ್ರರನ್ನು ನೋಡುವನೋ ಅವರನ್ನು ಕೊಲ್ಲುವನು. ಇದನ್ನು ಸತ್ಯವಾಗಿ ನಿನಗೆ ಹೇಳುತ್ತಿದ್ದೇನೆ.

ಸ ತ್ವಂ ರಾಜನ್ ಸ್ಥಿರೋ ಭೂತ್ವಾ ಧೃಢಾಂ ಕೃತ್ವಾ ರಣೇ ಮತಿಮ್ ।
ಯೋಧಯಸ್ವ ರಣೇ ಪಾರ್ಥಾನ್ ಸ್ವರ್ಗಂ ಕೃತ್ವಾ ಪರಾಯಣಮ್॥೪೨॥

ಎಲೈ ರಾಜನೇ, ಆದ್ದರಿಂದ ನೀನು ಸ್ಥೈರ್ಯವನ್ನು ತಂದುಕೊಂಡು, ಯುದ್ಧದ ವಿಷಯದಲ್ಲಿ ದೃಢವಾದ ಮನಸ್ಸನ್ನು ಹೊಂದಿ, ಸ್ವರ್ಗವೇ ಶ್ರೇಷ್ಠವಾದ ಆಶ್ರಯವೆಂದು ತಿಳಿದು ಪಾಂಡವರ ಜೊತೆಯಲ್ಲಿ ಯುದ್ಧ ಮಾಡುವವನಾಗು.

ನ ಶಕ್ಯಾಃ ಪಾಂಡವಾ ಜೇತುಂ ಸೇಂದ್ರೈರಪಿ ಸುರಾಸುರೈಃ ।
ತಸ್ಮಾದ್ ಯುದ್ಧೇ ಮತಿಂ ಕೃತ್ವಾ ಸ್ಥಿರಾಂ ಯುಧ್ಯಸ್ವ ಭಾರತ ॥೪೩॥

ಎಲೈ ಭಾರತನೇ, ಇಂದ್ರನಿಂದ ಸಹಿತರಾದ ಸುರಾಸುರರು ಸೇರಿದರೂ ಪಾಂಡವರನ್ನು ಗೆಲ್ಲಲು ಸಾಧ್ಯವಿಲ್ಲ. ಆದ್ದರಿಂದ ಯುದ್ಧದ ವಿಷಯದಲ್ಲಿ ದೃಢವಾದ ಬುದ್ಧಿಯನ್ನು ಹೊಂದಿ ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡು (ಎಂದು ಹೇಳಿದರು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಚತುರಶೀತಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಚತುಶ್ಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಎಂಬತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೈದನೆಯ ಅಧ್ಯಾಯ

ಮಧ್ಯಾಹ್ನದ ಯುದ್ಧದಲ್ಲಿ ಎರಡು ಪಕ್ಷಗಳಲ್ಲಿಯೂ ಸೈನ್ಯದ ದೊಡ್ಡ ಕ್ಷಯ.

ಧೃತರಾಷ್ಟ್ರಃ

ದೃಷ್ಟ್ವಾ ಮಮ ಹತಾನ್ ಪುತ್ರಾನ್ ಬಹೂನೇಕೇನ ಸಂಜಯ ।
ಭೀಷ್ಮೋ ದ್ರೋಣಃ ಕೃಪಶ್ಚೈವ ಕಿಮಕುರ್ವತ ಸಂಯುಗೇ ॥೧॥

ಧೃತರಾಷ್ಟ್ರ- ಎಲೈ ಸಂಜಯನೇ, ನನ್ನ ಅನೇಕ ಪುತ್ರರು ಭೀಮನೊಬ್ಬನಿಂದಲೇ ಹತರಾದುದನ್ನು ನೋಡಿ ಭೀಷ್ಮರು, ದ್ರೋಣರು ಮತ್ತು ಕೃಪರು ಯುದ್ಧದಲ್ಲಿ ಏನು ಮಾಡಿದರು?

ಅಹನ್ಯಹನಿ ಮೇ ಪುತ್ರಾಃ ಕ್ಷಯಂ ಗಚ್ಛಂತಿ ಸಂಜಯ ।
ಮನ್ಯೇಽಹಂ ಸರ್ವಥಾ ಸೂತ ದೈವೇನೋಪಹತಾ ಭೃಶಮ್ ॥೨॥

ಎಲೈ ಸಂಜಯನೇ, ಪ್ರತಿದಿವಸವೂ ನನ್ನ ಪುತ್ರರು ವಿನಾಶವನ್ನು ಹೊಂದುತ್ತಿದ್ದಾರೆ. ಎಲೈ ಸೂತನೇ, ನಾನು ಎಲ್ಲ ರೀತಿಯಿಂದಲೂ ವಿಧಿಯ ಪ್ರಕೋಪಕ್ಕೆ ಒಳಗಾಗಿದ್ದೇನೆಂದು ತಿಳಿಯುತ್ತೇನೆ.

ಯತ್ರ ಮೇ ತನಯಾಃ ಸರ್ವೇ ಜೇಯಂತೇ ನ ಜಯಂತ್ಯುತ ।
ಯತ್ರ ಭೀಷ್ಮಸ್ಯ ದ್ರೋಣಸ್ಯ ಕೃಪಸ್ಯ ಚ ಮಹಾತ್ಮನಃ ॥೩॥

ಸೌಮದತ್ತೇಶ್ಚ ವೀರಸ್ಯ ಭಗದತ್ತಸ್ಯ ಚೋಭಯೋಃ ।
ಅಶ್ವತ್ಥಾಮ್ನಶ್ಚ ತಾತ ಶೂರಾಣಾಂ ಸುಮಹಾತ್ಮನಾಮ್ ॥೪॥

ಅನ್ಯೇಷಾಂ ಚೈವ ವೀರಾಣಾಂ ಮದ್ಗೂತ್ಥನಯಾ ಮಮ ।
ಯದಹನ್ಯಂತ ಸಂಗ್ರಾಮೇ ಕಿಮನ್ಯದ್ ಭಾಗಧೇಯತಃ ॥೫॥

ಎಲೈ ಪ್ರೀತಿಪಾತ್ರನೇ, ಯುದ್ಧದಲ್ಲಿ ನನ್ನ ಪುತ್ರರೆಲ್ಲರೂ ಪರಾಭವಗೊಳ್ಳುತ್ತಿದ್ದಾರೆ, ಜಯಿಸುತ್ತಿಲ್ಲ. ಯುದ್ಧದಲ್ಲಿ ನನ್ನ ಮಕ್ಕಳು ಭೀಷ್ಮರ, ದ್ರೋಣರ, ಮಹಾತ್ಮರಾದ ಕೃಪರ, ವೀರರಾದ ಭೂರಿಶ್ರವ ಮತ್ತು ಭಗದತ್ತರಿಬ್ಬರ, ಹಾಗೆಯೇ ಅಶ್ವತ್ಥಾಮರ, ಮಹಾತ್ಮರಾದ ಶೂರರ ಮತ್ತು ಇನ್ನೂ ಅನೇಕ ವೀರರ ಮಧ್ಯದಲ್ಲಿದ್ದರೂ ಕೊಲ್ಲಲ್ಪಡುತ್ತಾರೆಂಬುದಕ್ಕೆ ದುರದೃಷ್ಟವನ್ನು ಬಿಟ್ಟು ಬೇರೆ ಏನು ಕಾರಣವಿದೆ?

ನ ಹಿ ದುರ್ಯೋಧನೋ ಮಂದಃ ಪುರಾ ಪ್ರೋಕ್ತಮಬುಧ್ಯತ ।
ವಾರ್ಯಮಾಣೋ ಮಯಾ ತಾತ ಭೀಷ್ಮೇಣ ವಿದುರೇಣ ಚ ॥೬॥

ಗಾಂಧಾರ್ಯಾ ಚೈವ ದುರ್ಮೇಧಾಃ ಸತತಂ ಹಿತಕಾಮ್ಯಯಾ ।
ನಾವಬುಧ್ಯತ್ ಪುರಾ ಮೋಹಾತ್ ತಸ್ಯ ಪ್ರಾಪ್ತಮಿದಂ ಫಲಮ್ ॥೭॥

ಯದ್ ಭೀಮಸೇನಃ ಸಮರೇ ಪುತ್ರಾನ್ ಮಮ ವಿಶೇಷತಃ ।
ಅಹನ್ಯಹನಿ ಸಂಕ್ರುದ್ಧೋ ನಯತೇ ಯಮಸಾದನಮ್ ॥೮॥

ಎಲೈ ಪ್ರೀತಿಪಾತ್ರನೇ, ಮಂದನೂ, ದುರ್ಬುದ್ಧಿಯುಳ್ಳವನೂ ಆದ ದುರ್ಯೋಧನನು ಹಿಂದೆ ಹೇಳಿದ ಒಳ್ಳೆಯ ಮಾತುಗಳನ್ನು ತಿಳಿಯಲಿಲ್ಲ. ಭೀಷ್ಮರೂ, ವಿದುರನೂ, ನಾನೂ, ನಿರಂತರವಾಗಿ ಅವನ ಹಿತವನ್ನು ಬಯಸುವ ಗಾಂಧಾರಿಯೂ ಸಹ ನಿಷೇಧ ಮಾಡಿದರೂ ಮೋಹಕ್ಕೆ ಒಳಗಾದ ಅವನು ಅದನ್ನು ತಿಳಿಯಲಿಲ್ಲ. ಅದರ ಪರಿಣಾಮವಾಗಿ ಭೀಮಸೇನನು ಸಂಕ್ರುದ್ಧನಾಗಿ ಯುದ್ಧದಲ್ಲಿ ಪ್ರಜ್ಞಾಹೀನನಾದ ನನ್ನ ಪುತ್ರರನ್ನು ಪ್ರತಿದಿನವು ಯಮಪಟ್ಟಣಕ್ಕೆ ಕಳುಹಿಸುತ್ತಿರುವ ದುಸ್ಥಲವು ಈಗ ಪ್ರಾಪ್ತವಾಗಿದೆ.

ಸಂಜಯಃ

ಇದಂ ತತ್ ಸಮನುಪ್ರಾಪ್ತಂ ಕ್ಷತ್ತುರ್ವಚನಮುತ್ತಮಮ್ ।
ನ ಬುದ್ಧವಾನಸಿ ವಿಭೋ ಪ್ರೋಚ್ಯಮಾನಂ ಹಿತಂ ತದಾ ॥೯॥

ಸಂಜಯ– ವಿದುರನು ಹೇಳಿದ ಶ್ರೇಷ್ಠವಾದ ವಚನಗಳ ಫಲವು ಪ್ರಾಪ್ತವಾಗಿದೆ. ಎಲೈ ವಿಭುವೇ, ಆಗ ನಿನ್ನ ಹಿತವನ್ನು ಹೇಳಿದರೂ ನೀನು ಅದನ್ನು ಕೇಳಲಿಲ್ಲ.

ನಿವಾರಯ ಸುತಾನ್ ದ್ಯೂತಾತ್ ಪಾಂಡವಾನ್ ಮಾ ರುದೇತಿ ವೈ ।
ಸುಹೃದಾಂ ಹಿತಕಾಮಾನಾಂ ಬ್ರುವತಾಂ ತತ್ತದೇವ ಚ ॥೧೦॥

ನ ಶುಶ್ರೂಷಸಿ ಯದ್ವಾಕ್ಯಂ ಮರ್ತ್ಯಃ ಪಥ್ಯಮಿವೌಷಧಮ್ ।
ತದೇವ ತ್ವಾಮನುಪ್ರಾಪ್ತಂ ವಚನಂ ಸಾಧು ಭಾಷಿತಮ್ ॥೧೧॥

ನಿನ್ನ ಪುತ್ರರನ್ನು ದ್ಯೂತದಿಂದ ನಿವಾರಣೆ ಮಾಡು. ಪಾಂಡವರನ್ನು ರೋದಿಸಬೇಡ ಎಂದು ನಿನ್ನ ಹಿತವನ್ನು ಬಯಸುವ ಸುಹೃಜ್ಜನರು ಏನನ್ನು ಹೇಳಬೇಕೋ ಆಯಾ ಕಾಲದಲ್ಲಿ ಅವರು ಆ ಮಾತುಗಳನ್ನು ಆಡಿದರೂ, ಮನುಷ್ಯನು ಪಥ್ಯದ ಔಷಧಿಯನ್ನು ನಿರಾಕರಿಸುವಂತೆ ನೀನು ಹಿಂದೆ ಆ ಮಾತುಗಳನ್ನು ಕೇಳಲಿಲ್ಲ. ಆ ಸತ್ಯವಚನಗಳ ಫಲವು ಈಗ ನಿನಗೆ ಪ್ರಾಪ್ತವಾಗಿದೆ.

ವಿದುರದ್ರೋಣಭೀಷ್ಮಾಣಾಂ ತಥಾನ್ಯೇಷಾಂ ಹಿತೈಷಿಣಾಮ್ ।
ಅಕೃತ್ವಾ ವಚನಂ ಪಥ್ಯಂ ಕ್ಷಯಂ ಗಚ್ಛಂತಿ ಕೌರವಾಃ ॥೧೨॥

ಕೌರವರು ವಿದುರ, ದ್ರೋಣರು, ಭೀಷ್ಮರು, ಹಾಗೆಯೇ ಉಳಿದ ಹಿತೈಷಿಗಳ ಹಿತವಾದ ಮಾತುಗಳನ್ನು ಕೇಳದೆ ವಿನಾಶವನ್ನು ಹೊಂದುತ್ತಾರೆ.

ತದೇತತ್ ಸಮತಿಕ್ರಾಂತಂ ಪೂರ್ವಮೇವ ವಿಶಾಂಪತೇ ।
ತಸ್ಮಾನ್ಮೇ ಶೃಣು ತತ್ತ್ವೇನ ಯಥಾ ಯುದ್ಧಮವರ್ತತ ॥೧೩॥

ಎಲೈ ರಾಜನೇ, ಇವೆಲ್ಲವೂ ಹಿಂದೆಯೇ ಕಳೆದು ಹೋಯಿತು. ಆದ್ದರಿಂದ ಈಗ ಯುದ್ಧವು ಹೇಗೆ ನಡೆಯಿತೆಂಬ ವಾರ್ತೆಯನ್ನು ಯಥಾರ್ಥವಾಗಿ ಕೇಳುವವನಾಗು.

ಮಧ್ಯಾಹ್ನೇ ಸುಮಹಾರೌದ್ರಃ ಸಂಗ್ರಾಮಃ ಸಮಪದ್ಯತ ।
ಲೋಕಕ್ಷಯಕರೋ ರಾಜಂಸ್ತನ್ಮೇ ನಿಗದತಃ ಶೃಣು ॥೧೪॥

ಎಲೈ ರಾಜನೇ, ಆ ದಿನ ಮಧ್ಯಾಹ್ನದಲ್ಲಿ ಲೋಕಕ್ಷಯಕಾರಕವಾದ ಮಹಾಘೋರವಾದ ಸಂಗ್ರಾಮವು ಜರುಗಿತು. ಅದನ್ನು ನನ್ನಿಂದ ಕೇಳುವವನಾಗು.

ತತಃ ಸರ್ವಾಣಿ ಸೈನ್ಯಾನಿ ಧರ್ಮಪುತ್ರಸ್ಯ ಶಾಸನಾತ್ ।
ಸಂರಬ್ಧಾನ್ಯಭ್ಯಧಾವಂತ ಭೀಷ್ಮಮೇವ ಜಿಘಾಂಸಯಾ ॥೧೫॥

ಆಗ ಎಲ್ಲ ಸೈನ್ಯಗಳೂ ಕೋಪಗೊಂಡು ಧರ್ಮಪುತ್ರನಾದ ಯುಧಿಷ್ಠಿರನ ಶಾಸನದಂತೆ ಭೀಷ್ಮರನ್ನು ಕೊಲ್ಲಲು ಬಯಸಿ ಅವರ ಕಡೆಗೆ ಧಾವಿಸಿದವು.

ಧೃಷ್ಟದ್ಯುಮ್ನಃ ಶಿಖಂಡೀ ಚ ಸಾತ್ಯಕಿಶ್ಚ ಮಹಾರಥಃ ।
ಯುಕ್ತಾನೀಕಾ ಮಹಾರಾಜ ಭೀಷ್ಮಮೇವ ಸಮಭ್ಯಯುಃ ॥೧೬॥

ಎಲೈ ಮಹಾರಾಜನೇ, ಧೃಷ್ಟದ್ಯುಮ್ನ, ಶಿಖಂಡಿ ಮತ್ತು ಮಹಾರಥನಾದ ಸಾತ್ಯಕಿ ಇವರು ತಮ್ಮ ಸೈನ್ಯಗಳನ್ನು ಹೂಡಿ ಭೀಷ್ಮರಿಗೆ ಅಭಿಮುಖವಾಗಿಯೇ ಹೋದರು.

ವಿರಾಟೋ ದ್ರುಪದಶ್ಚೈವ ಸಹಿತಾ ಸರ್ವಸೋಮಕೈಃ ।
ಅಭ್ಯದ್ರವಂತ ಸಂಗ್ರಾಮೇ ಭೀಷ್ಮಮೇವ ಮಹಾರಥಾಃ ॥೧೭॥

ವಿರಾಟ, ದ್ರುಪದ ಮತ್ತು ಎಲ್ಲ ಸೋಮಕರಿಂದ ಸಹಿತರಾದ ಮಹಾರಥರು ಯುದ್ಧದಲ್ಲಿ ಭೀಷ್ಮರಿದ್ದಲ್ಲಿಯೇ ಧಾವಿಸಿದರು.

ಕೇಕಯಾ ಧೃಷ್ಟಕೇತುಶ್ಚ ಕುಂತಿಭೋಜಶ್ಚ ದಂಶಿತಃ ।
ಯುಕ್ತಾನೀಕಾ ಮಹಾರಾಜ ಭೀಷ್ಮಮೇವ ಸಮಭ್ಯಯುಃ ॥೧೮॥

ಕೇಕಯರು, ಧೃಷ್ಟಕೇತು ಮತ್ತು ಕುಂತಿಭೋಜ ಇವರು ಸನ್ನದ್ಧರಾಗಿ ತಮ್ಮ ಸೈನ್ಯವನ್ನು ಹೂಡಿ ಎಲೈ ಮಹಾರಾಜನೇ, ಭೀಷ್ಮನ ಕಡೆಗೇ ಧಾವಿಸಿದರು.

ಅರ್ಜುನೋ ದ್ರೌಪದೇಯಾಶ್ಚ ಚೇಕಿತಾನಶ್ಚ ಸಂಯುಗೇ ।
ದುರ್ಯೋಧನಸಮಾದಿಷ್ಟಾನ್ ರಾಜ್ಞಃ ಸರ್ವಾನ್ ಸಮಭ್ಯಯುಃ ॥೧೯॥

ಅರ್ಜುನ, ದ್ರೌಪದಿಯ ಐವರು ಮಕ್ಕಳು ಮತ್ತು ಚೇಕಿತಾನ ಇವರು ಯುದ್ಧದಲ್ಲಿ ದುರ್ಯೋಧನನ ಸಹಾಯಕ್ಕಾಗಿ ಇರುವ ದುರ್ಯೋಧನನ ಆಜ್ಞಾಧಾರಕರಾದ ಉಳಿದ ಎಲ್ಲಾ ರಾಜರುಗಳ ಮೇಲೆ ಎರಗಿದರು.

ಅಭಿಮನ್ಯುಸ್ತಥಾ ವೀರೋ ಹೈಡಿಂಬಶ್ಚ ಮಹಾರಥಃ ।
ಭೀಮಸೇನಶ್ಚ ಸಂಕ್ರುದ್ಧಸ್ತೇಽಭ್ಯಧಾವಂತ ಕೌರವಾನ್ ॥೨೦॥

ಅಭಿಮನ್ಯುವೂ ವೀರನೂ, ಮಹಾರಥನೂ ಆದ ಘಟೋತ್ಕಚ ಮತ್ತು ಭೀಮಸೇನ ಇವರು ಬಹಳ ಕೋಪಗೊಂಡು ಕೌರವ ವಂಶದಲ್ಲಿ ಜನಿಸಿದವರ ಮೇಲೆ ಎರಗಿದರು.

ತ್ರಿಧಾಭೂತೈರವಧ್ಯಂತ ಪಾಂಡವೈಃ ಕೌರವಾ ಯುಧಿ ।
ತಥೈವ ಕೌರವೈ ರಾಜನ್ನವಧ್ಯಂತ ಪರೇ ರಣೇ ॥೨೧॥

ಹೀಗೆ ಮೂರು ಭಾಗವಾದ ಪಾಂಡವ ಸೈನ್ಯದಿಂದ ಯುದ್ಧದಲ್ಲಿ ಕೌರವರು ವಧೆಗೆ ಈಡಾದರು. ಎಲೈ ರಾಜನೇ, ಹಾಗೆಯೇ ಪರರೂ ಸಹ ಯುದ್ಧದಲ್ಲಿ ಕೌರವರಿಂದ ಹತರಾದರು.

ದ್ರೋಣಸ್ತು ರಥಿನಾಂ ಶ್ರೇಷ್ಠಃ ಸೋಮಕಾನ್ ಸಂಜಯೈಃ ಸಹ ।
ಅಭ್ಯದ್ರವತ ಸಂಕ್ರುದ್ಧಃ ಪ್ರೇಷಯಿಷ್ಯನ್ ಯಮಕ್ಷಯಮ್ ॥೨೨॥

ರಥಿಕರಲ್ಲಿ ಶ್ರೇಷ್ಠರಾದ ದ್ರೋಣರಾದರೋ ಕೋಪಗೊಂಡು ಸೃಂಜಯರಿಂದ ಸಹಿತರಾದ ಸೋಮಕರನ್ನು ಯಮಪಟ್ಟಣಕ್ಕೆ ಕಳುಹಿಸುವವರಾಗಿ ಅವರ ಮೇಲೆ ಎರಗಿದರು.

ತತ್ರಾಕ್ರಂದೋ ಮಹಾನಾಸೀತ್ ಸೃಂಜಯಾನಾಂ ಮಹಾತ್ಮನಾಮ್ ।
ವಧ್ಯತಾಂ ಸಮರೇ ರಾಜನ್ ಭಾರದ್ವಾಜೇನ ಧನ್ವಿನಾ ॥೨೩॥

ಎಲೈ ರಾಜನೇ, ಧರ್ನುಧಾರಿಗಳಾದ ದ್ರೋಣರಿಂದ ಪ್ರಹಾರಕ್ಕೆ ಒಳಗಾದ, ಮಹಾತ್ಮರಾದ ಸೃಂಜಯರಿಂದ ಆಗ ದೊಡ್ಡ ಆಕ್ರಂದನವು ಉಂಟಾಯಿತು.

ದ್ರೋಣೇನ ನಿಹತಾಸ್ತತ್ರ ಕ್ಷತ್ರಿಯಾ ಬಹವೋ ರಣೇ ।
ವಿವೇಷ್ಟಂತಃ ಸ್ಮ ದೃಶ್ಯಂತೇ ವ್ಯಾಧಿಕ್ಷಿಪ್ತಾ ನರಾ ಇವ ॥೨೪॥

ದ್ರೋಣರ ಪ್ರಹಾರಕ್ಕೆ ಒಳಗಾದ ಅನೇಕ ಕ್ಷತ್ರಿಯರು ಅಲ್ಲಿ ಯುದ್ಧಭೂಮಿಯಲ್ಲಿ ವ್ಯಾಧಿಪೀಡಿತ ಮನುಷ್ಯರಂತೆ ಹೊರಳಾಡುವುದು ಕಂಡುಬರುತ್ತಿದ್ದಿತು.

ಕೂಜತಾಂ ಕ್ರಂದತಾಂ ಚೈವ ಸ್ವನತಾಂ ಚೈವ ಸಂಯುಗೇ ।
ಅನಿಶಂ ಶ್ರೂಯತೇ ಶಬ್ದಃ ಕ್ಷುತ್ಕೃಶಾನಾಂ ನೃಣಾಮಿವ ॥೨೫॥

ಕಷ್ಟಕ್ಕೆ ಒಳಗಾಗಿ ಚೀರಾಡುವ ಭಟರ, ಹೇಷಾರವವನ್ನು ಮಾಡುವ ಅಶ್ವಗಳ ಮತ್ತು ಗರ್ಜಿಸುವ ಗಜಗಳ ಶಬ್ದವು ಹಸಿದ ಮನುಷ್ಯರ ಗೋಳಾಟದಂತೆ ಸತತವಾಗಿ ಕೇಳಿಬರುತ್ತಿದ್ದಿತು.

ತಥೈವ ಕೌರವೇಯಾಣಾಂ ಭೀಮಸೇನೋ ಮಹಾಬಲಃ ।
ಚಕಾರ ಕದನಂ ಘೋರಂ ಕ್ರುದ್ಧಃ ಕಾಲ ಇವಾಪರಃ ॥೨೬॥

ಹಾಗೆಯೇ ಮಹಾಬಲನಾದ ಭೀಮಸೇನನು ಇನ್ನೊಬ್ಬ ಮೃತ್ಯುದೇವತೆಯಂತೆ ಕೌರವ ಕುಲೋತ್ಪನ್ನರ ಜೊತೆಯಲ್ಲಿ ಘೋರವಾದ ಕದನವನ್ನು ಮಾಡಿದನು.

ವಧ್ಯತಾಂ ತತ್ರ ಸೈನ್ಯಾನಾಮನ್ಯೋನ್ಯೇನ ಮಹಾರಣೇ ।
ಪ್ರಾವರ್ತತ ನದೀ ಘೋರಾ ರುಧಿರೌಘಪ್ರವಾಹಿನೀ ॥೨೭॥

ಆ ಮಹಾಯುದ್ಧದಲ್ಲಿ ಪರಸ್ಪರವಾಗಿ ವಧೆ ಮಾಡಲ್ಪಡುವ ಸೈನ್ಯದಿಂದ ರಕ್ತ ಸಮೂಹ ಪ್ರವಾಹವುಳ್ಳ ಘೋರವಾದ ನದಿಯು ಹರಿಯಿತು.

ಸ ಸಂಗ್ರಾಮೋ ಮಹಾರಾಜ ಘೋರರೂಪೋऽಭವನ್ಮಹಾನ್ ।
ಕುರೂಣಾಂ ಪಾಂಡವಾನಾಂ ಚ ಯಮರಾಷ್ಟ್ರವಿವರ್ಧನಃ ॥೨೮॥

ಎಲೈ ಮಹಾರಾಜನೇ, ಕೌರವರಿಗೂ ಮತ್ತು ಪಾಂಡವರಿಗೂ ನಡೆದ ಆ ಘೋರವಾದ ಮಹಾಸಂಗ್ರಾಮವು ಯಮರಾಷ್ಟ್ರವನ್ನು ತುಂಬುವುದಾಗಿದ್ದಿತು.

ತತೋ ಭೀಮೋ ರಣೇ ಕ್ರುದ್ಧೋ ರಭಸಶ್ಚ ವಿಶೇಷತಃ ।
ಗಜಾನೀಕಂ ಸಮಾಸಾದ್ಯ ಪ್ರೇಷಯಾಮಾಸ ಮೃತ್ಯವೇ ॥೨೯॥

ಆಗ ಯುದ್ಧದಲ್ಲಿ ಕ್ರುದ್ಧನಾದ, ವಿಶೇಷವಾಗಿ ವೇಗಶಾಲಿಯಾದ ಭೀಮನು ಗಜ ಸಮೂಹವನ್ನು ತಲುಪಿ ಅವುಗಳನ್ನು ಮೃತ್ಯುಲೋಕಕ್ಕೆ ಕಳುಹಿಸಿದನು.

ತತ್ರ ಭಾರತ ಭೀಮೇನ ಸಾರಾಽಭಿಹತಾ ಗಜಾಃ ।
ಪೇತುಃ ಸೇದುಶ್ಚ ನೇದುಶ್ಚ ದಿಶಶ್ಚ ಪರಿಬಭ್ರಮುಃ ॥೩೦॥

ಎಲೈ ಭಾರತನೇ, ಭೀಮನಿಂದ ನಾರಾಚಗಳಿಂದ ಹೊಡೆಯಲ್ಪಟ್ಟ ಗಜಗಳು ಕೆಲವು ಬಿದ್ದವು, ಕೆಲವು ನಾಶವನ್ನು ಹೊಂದಿದವು, ಕೆಲವು ಗರ್ಜಿಸಿದವು, ಕೆಲವು ದಿಕ್ಕು ದಿಕ್ಕುಗಳಿಗೆ ಓಡಿದವು.

ಛಿನ್ನಹಸ್ತಾ ಮಹಾನಾಗಾಶ್ಛಿನ್ನಪಾದಾಶ್ಚ ಮಾರಿಷ ।
ಕ್ರೌಂಚವದ್ ವ್ಯನದನ್ ಭೀತಾಃ ಪೃಥಿವೀಮಧಿಶಿಶ್ಯಿರೇ ॥೩೧॥

ಎಲೈ ಪೂಜ್ಯನೇ, ಸೊಂಡಿಲುಗಳು ಕತ್ತರಿಸಿದ, ಪಾದಗಳನ್ನು ಕತ್ತರಿಸಿದ ಮಹಾಗಜಗಳು ಭಯದಿಂದ ಕೂಡಿ ಕ್ರೌಂಚ ಪಕ್ಷಿಯಂತೆ ಚೀರುತ್ತಾ ಭೂಮಿಯ ಮೇಲೆ ಮಲಗಿದವು.

ನಕುಲಃ ಸಹದೇವಶ್ಚ ಹಯಾನೀಕಮಭಿದ್ರುತೌ ।
ತೇ ಹಯಾಃ ಕಾಂಚನಾಪೀಡಾ ರುಗ್ಭಾಂಡಪರಿಚ್ಛದಾಃ ।
ವಧ್ಯಮಾನಾ ವ್ಯದೃಶ್ಯಂತ ಶತಶೋಽಥ ಸಹಸ್ರಶಃ ॥೩೨॥

ನಕುಲ-ಸಹದೇವರು ಹಯಸಮೂಹಗಳ ಮೇಲೆ ಎರಗಿದರು. ಸುವರ್ಣಾಲಂಕೃತವಾದ, ಸುವರ್ಣಮಯವಾದ ಹೊದಿಕೆಗಳನ್ನು ಹೊಂದಿದ ಆ ಅಶ್ವಗಳು ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ಕೊಲ್ಲಲ್ಪಡುವುದು ಕಂಡುಬರುತ್ತಿದ್ದಿತು.

ಪತದ್ಭಿಶ್ಚ ಹಯೈ ರಾಜನ್ ಸಮಾಸ್ತೀರ್ಯತ ಮೇದಿನೀ ।
ನಿರ್ಜಹ್ವೈಶ್ಚ ಶ್ವಸದ್ಭಿಶ್ಚ ಕೂಜದ್ಭಿಶ್ಚ ಗತಾಸುಭಿಃ ।
ಹಯೈರ್ಬಭೌ ನರಶ್ರೇಷ್ಠ ನಾನಾರೂಪಧರೈರ್ಧರಾ ॥೩೩॥

ಎಲೈ ರಾಜನೇ, ಭೂಮಿಯ ಮೇಲೆ ಬೀಳುವ ಅಶ್ವಗಳಿಂದ ಭೂಮಿಯು ತುಂಬಿಹೋಯಿತು. ಎಲೈ ನರಶ್ರೇಷ್ಠನೇ, ನಾನಾ ರೂಪಗಳನ್ನು ಧರಿಸಿದ, ನಾಲಿಗೆಯನ್ನು ಕಳೆದುಕೊಂಡ ಅಶ್ವಗಳಿಂದ, ಕೇವಲ ಉಸಿರಾಡುವ ಅಶ್ವಗಳಿಂದ, ನರಳಾಡುವ ಅಶ್ವಗಳಿಂದ ಮತ್ತು ಮೃತವಾದ ಅಶ್ವಗಳಿಂದ ಭೂಮಿಯು ತುಂಬಿಹೋಯಿತು.

ಅರ್ದ್ಯಮಾನೈಶ್ಚ ಹಯೈಃ ಸಂಖೇ ತಥಾ ಭಾರತ ವಾಜಿಭಿಃ ।
ಪ್ರಬಭೌ ವಸುಧಾ ಘೋರಾ ತತ್ರತತ್ರ ವಿಶಾಂಪತೇ ॥೩೪॥

ಎಲೈ ಭಾರತನೇ, ರಾಜನೇ, ಅರ್ಜುನನಿಂದ ಯುದ್ಧದಲ್ಲಿ ಹತವಾದ ಅಶ್ವಗಳಿಂದ ರಣಭೂಮಿಯು ಅಲ್ಲಲ್ಲಿ ಘೋರವಾಗಿ ಕಾಣಿಸಿತು.

ರಥೈರ್ಭಗ್ನೈರ್ಧ್ವಜೈಶ್ಚಿನ್ನೈಶ್ಚತ್ರೈಶ್ಚ ಸುಮಹಾಪ್ರಭೈಃ ।
ಹಾರೈರ್ನಿಷ್ಕೈಃ ಸಕೇಯೂರೈಃ ಶಿರೋಭಿಶ್ಚ ಸಕುಂಡಲೈಃ ॥೩೫॥

ಉಷ್ಣೀಷೈರಪವಿದ್ಧೈಶ್ಚ ಪತಾಕಾಭಿಶ್ಚ ಸರ್ವಶಃ ।
ಅನುಕರ್ಷೈಃ ಶುಭೈ ರಾಜನ್ ಯೋಕ್ತ್ರೈಶ್ಚ ಸಹ ರಶ್ಮಿಭಿಃ ।
ಸಂಛನ್ನಾ ವಸುಧಾ ಭಾತಿ ವಸಂತೇ ಕುಸುಮೈರಿವ ॥೩೬॥

ಎಲೈ ರಾಜನೇ, ಭಗ್ನವಾದ ರಥಗಳಿಂದಲೂ, ಕತ್ತರಿಸಲ್ಪಟ್ಟ ಧ್ವಜ-ಛತ್ರಗಳಿಂದಲೂ, ಮಹಾಕಾಂತಿಯುಳ್ಳ ಹಾರನಿಷ್ಕಗಳಿಂದಲೂ, ಕೇಯೂರಗಳಿಂದಲೂ, ಕುಂಡಲ ಸಹಿತವಾದ ಶಿರಸ್ಸುಗಳಿಂದಲೂ, ಎಸೆದ ರುಮಾಲುಗಳಿಂದಲೂ, ಪತಾಕೆಗಳಿಂದಲೂ, ಸಣ್ಣನೊಗಗಳಿಂದಲೂ, ರಶ್ಮಿಸಹಿತವಾದ ಕಡಗೂಟಗಳಿಂದಲೂ ಹರಡಿದ ಭೂಮಿಯು ವಸಂತ ಕಾಲದಲ್ಲಿ ಪುಷ್ಪಗಳು ಹರಡಿರುವಂತೆ ಕಂಡುಬಂದಿತು.

ಏವಮೇಷ ಕ್ಷಯೋ ವೃತ್ತಃ ಪಾಂಡೂನಾಮಪಿ ಭಾರತ ।
ಕ್ರುದ್ಧೇ ಶಾಂತನವೇ ಭೀಷ್ಮೇ ದ್ರೋಣೇ ಚ ರಥಸತ್ತಮೇ ॥೩೭॥

ಅಶ್ವತ್ಥಾಮ್ನಿ ಕೃಪೇ ಚೈವ ತಥೈವ ಕೃತವರ್ಮಣಿ ।
ತಥೇತರೇಷು ಕ್ರುದ್ಧೇಷು ತಾವಕಾನಾಮಪಿ ಕ್ಷಯಃ ॥೩೮॥

ಎಲೈ ಭಾರತನೇ, ಶಂತನುಪುತ್ರರಾದ ಭೀಷ್ಮರು, ರಥಶ್ರೇಷ್ಠರಾದ ದ್ರೋಣರು, ಅಶ್ವತ್ಥಾಮರು, ಕೃಪರು ಮತ್ತು ಕೃತವರ್ಮನು ಕೋಪಗೊಂಡಿರಲು ಪಾಂಡವರ ಸೈನ್ಯದಲ್ಲಿಯೂ ಹೀಗೆಯೇ ವಿನಾಶವುಂಟಾಯಿತು. ಹಾಗೆಯೇ ಪಾಂಡವರ ಸೈನ್ಯದವರು ಕ್ರುದ್ಧರಾದಾಗ ನಿನ್ನ ಸೈನ್ಯದಲ್ಲಿಯೂ ಕ್ಷಯವುಂಟಾಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸ್ಕ್ಯಾಂ
ಭೀಷ್ಮಪರ್ವಣಿ ಪಂಚಾಶೀತಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಪಂಚಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಎಂಬತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯ - ೨೫ನೇ ಅಧ್ಯಾಯ

ದಿನೇ ಪರೇ ಚೈವ ಪುನಃ ಸಮೇತಾಃ
ಪರಸ್ಪರಂ ಪಾಂಡವಾಃ ಕೌರವಾಸ್ತೇ ।
ತತ್ರಾSಸದನ್ನಾಗಸುತಾಸಮುದ್ಭವಃ
ಪಾರ್ಥಾತ್ಮಜಃ ಶಾಕುನೇಯಾನ್ ಷಡೇಕಃ ॥೮೨॥

ಮರುದಿನ ಪುನಃ ಪಾಂಡವರೂ ಕೌರವರೂ ಪರಸ್ಪರ ಸೇರಿದರು. ಆಗ ಅರ್ಜುನನಿಗೆ ನಾಗಕನ್ಯೆ ಉಲೂಪಿಯಲ್ಲಿ ಜನಿಸಿದ ಇರಾವಂತ ಶಕುನಿಯ ಆರುಮಂದಿ ಸೋದರರನ್ನು ಒಬ್ಬನೇ ಎದುರಿಸಿದನು.

ತೈಃ ಪ್ರಾಸಹಸ್ತೈಃ ಕೃತಕಾಯೋSತಿರೂಢ
ಕೋಪಃ ಸ ಖಡ್ಗೇನ ಚಕರ್ತ ತೇಷಾಮ್ ।
ಶಿರಾಂಸಿ ವೀರೋ ಬಲವಾನಿರಾವಾನ್ ಭಯಂ
ದಧದ್ ಧಾರ್ತರಾಷ್ಟ್ರೇಷು ಚೋಗ್ರಮ್ ॥೮೩॥

ಪ್ರಾಸವೆಂಬ ಆಯುಧವನ್ನು ಕೈಯಲ್ಲಿ ಹಿಡಿದಿದ್ದ ಸೋದರರು ಇರಾವಂತನ ಶರೀರವನ್ನು ಗಾಯಗೊಳಿಸಿದಾಗ ಅವನ ಕೋಪ ಹೆಚ್ಚಿತು. ಬಲಿಷ್ಠ ವೀರನಾದ ಆತನು ಕೌರವರಿಗೆ ಮಹಾಭಯವನ್ನು ಹುಟ್ಟಿಸುತ್ತ ಶಕುನಿ ಸೋದರರ ತಲೆಗಳನ್ನು ಖಡ್ಗದಿಂದ ಕತ್ತರಿಸಿದನು.

ದೃಷ್ಟ್ವಾ ತಮುಗ್ರಂ ಧೃತರಾಷ್ಟ್ರಪುತ್ರೋ
ದಿದೇಶ ರಕ್ಷೋSಲಂಬುಸನಾಮಧೇಯಮ್ ।
ಜಹ್ಯಾರ್ಜುನಿಂ ಕ್ಷಿಪ್ರಮಿತಿ ಸ್ಮ ತಚ್ಚ
ಸಮಾಸದನ್ ನಾಗಸುತಾತನೂಜಮ್ ॥೮೪॥

ಭಯಂಕರನಾದ ಇರಾವಂತನನ್ನು ಕಂಡು ದುರ್ಯೋಧನನು ಅಲಂಬುಸನೆಂಬ ಹೆಸರಿನ ರಾಕ್ಷಸನಿಗೆ 'ಇರಾವಂತನನ್ನು ಬೇಗನೆ ಕೊಲ್ಲು' ಎಂದು ಆದೇಶಿಸಿದನು. ರಾಕ್ಷಸನು ಇರಾವಂತನನ್ನು ಎದುರಿಸಿದನು.

ತಯೋರಭೂದ್ ಯುದ್ಧಮತೀವ ದಾರುಣಂ
ಮಾಯಾಯುಜೋರ್ವೀರ್ಯವತೋರ್ಮಹಾದ್ಭುತಮ್ ।

ಸಸಾದಿನೋಽಶ್ವಾನ್ ಸ ತು ರಾಕ್ಷಸೋಽಸೃಜತ್
ತೇ ಪಾರ್ಥಪುತ್ರಸ್ಯ ಚ ಸಾದಿನೋಽಹನನ್ ।
ತತಸ್ತ್ವನಂತಾಕೃತಿಮಾಪ್ತಮಾರ್ಜುನಿಂ
ಸುಪರ್ಣರೂಪೋಽಹನದಾಶು ರಾಕ್ಷಸಃ ॥೮೫॥

ಮಾಯಾವಿಗಳೂ ಪರಾಕ್ರಮಿಗಳೂ ಆದ ಅಲಂಬುಸ ಮತ್ತು ಇರಾವಂತರಿಗೆ ಅತ್ಯಂತ ಭೀಕರವೂ ಮಹಾ ಅದ್ಭುತವೂ ಆದ ಯುದ್ಧವು ನಡೆಯಿತು. ರಾಕ್ಷಸನು ಕುದುರೆಗಳನ್ನೂ ಸವಾರರನ್ನೂ ಮಾಯೆಯಿಂದ ನಿರ್ಮಿಸಿದ. ಅವರು ಇರಾವಂತನ ಅಶ್ವಸೈನಿಕರನ್ನು ಕೊಂದರು. ಆಗ ಸರ್ಪಾಕಾರವನ್ನು ತಳೆದ ಇರಾವಂತನನ್ನು ಗರುಡ ರೂಪನಾದ ರಾಕ್ಷಸನು ಬೇಗನೆ ವಧಿಸಿದ.

ಹತಂ ನಿಶಮ್ಯಾರ್ಜುನಿಮುಗ್ರಪೌರುಷೋ
ನನಾದ ಕೋಪೇನ ವೃಕೋದರಾತ್ಮಜಃ ।
ಚಚಾಲ ಭೂರ್ನಾನದತೋಽಸ್ಯ ರಾವತಃ
ಸಸಾಗರಾಗೇಂದ್ರನಗಾ ಭೃಶಂ ತದಾ ॥೮೬॥

ಇರಾವಂತನು ಹತನಾದುದನ್ನು ಕಂಡು ಭಯಂಕರ ಪೌರುಷಶಾಲಿಯಾದ ಘಟೋತ್ಕಚನು ಕೋಪದಿಂದ ಗರ್ಜಿಸಿದನು. ಅವನು ಗರ್ಜಿಸಿದಾಗ ಆ ಶಬ್ದದಿಂದ ಸಾಗರಗಳು, ಮಹಾವೃಕ್ಷಗಳು ಮತ್ತು ಬೆಟ್ಟಗಳಿಂದ ಕೂಡಿದ ಭೂಮಿ ಬಲವಾಗಿ ಕಂಪಿಸಿತು.

ಅಲಂಬುಸಸ್ತಂ ಪ್ರಸಮೀಕ್ಷ್ಯ ಮಾರುತೇಃ
ಸುತಂ ಬಲಾಢ್ಯಂ ಭಯತಃ ಪರಾದ್ರವತ್ ।
ಪರಾದ್ರವನ್ ಧಾರ್ತರಾಷ್ಟ್ರಸ್ಯ ಸೇನಾಃ
ಸರ್ವಾಸ್ತಮಾರಾಧ ಸುಯೋಧನೋ ನೃಪಃ ॥೮೭॥

ಅಲಂಬುಸನು ಬಲಾಢ್ಯನಾದ ಘಟೋತ್ಕಚನನ್ನು ಕಂಡು ಭಯದಿಂದ ಓಡಿದನು. ದುರ್ಯೋಧನನ ಸೇನೆಗಳೆಲ್ಲವೂ ಪಲಾಯನಗೈದವು. ಆಗ ದುರ್ಯೋಧನನು ಘಟೋತ್ಕಚನನ್ನು ಎದುರಿಸಿದನು.

★ ★ ★ ★ ★

ಎಂಬತ್ತಾರನೆಯ ಅಧ್ಯಾಯ

ಅಲಂಬುಸನಿಂದ ಇರಾವಂತನ ವಧೆ.

ಸಂಜಯಃ

ವರ್ತಮಾನೇ ತಥಾ ರೌದ್ರೇ ರಾಜನ್ ವೀರವರಕ್ಷಯೇ ।
ಶಕುನಿಃ ಸೌಬಲಃ ಶ್ರೀಮಾನ್ ಪಾಂಡವಾನ್ ಸಮುಪಾದ್ರವತ್ ॥೧॥

ಸಂಜಯ– ಎಲೈ ರಾಜನೇ, ಶ್ರೇಷ್ಠರಾದ ವೀರರು ನಾಶವನ್ನು ಹೊಂದುವ ಭಯಂಕರವಾದ ಯುದ್ಧವು ಹಾಗೆ ನಡೆಯುತ್ತಿರಲು ಕಾಂತಿಯುಕ್ತನಾದ ಸೌಬಲನಾದ ಶಕುನಿಯು ಪಾಂಡವರ ಕಡೆಗೆ ಧಾವಿಸಿ ಬಂದನು.

ತಥೈವ ಸಾತ್ವತೋ ರಾಜನ್ ಹಾರ್ದಿಕ್ಯಃ ಪರವೀರಹಾ ।
ಅಭ್ಯದ್ರವತ ಸಂಗ್ರಾಮೇ ಪಾಂಡವಾನಾಮನೀಕಿನೀಮ್ ॥೨॥

ಎಲೈ ರಾಜನೇ, ಹಾಗೆಯೇ ಪರವೀರಘಾತಕನೂ, ಸಾತ್ವತನೂ ಆದ ಕೃತವರ್ಮನು ಯುದ್ಧದಲ್ಲಿ ಪಾಂಡವರ ಸೈನ್ಯದ ಮೇಲೆ ಎರಗಿದನು.

ತತಃ ಕಾಂಬೋಜಮುಖ್ಯಾನಾಂ ನದೀಜಾನಾಂ ಚ ವಾಜಿನಾಮ್ ।
ಆರಟ್ಟಾನಾಂ ಮಹೀಜಾನಾಂ ಸಿಂಧುಜಾನಾಂ ಚ ಸರ್ವಶಃ ॥೩॥

ವನಾಯುಜಾನಾಂ ಶುಭ್ರಾಣಾಂ ತಥಾ ಪರ್ವತವಾಸಿನಾಮ್ ।
ಯೇ ಚಾಪರೇ ತಿತ್ತಿರಿಜಾ ಜವನಾ ವಾತರಂಹಸಃ ॥೪॥

ಸುವರ್ಣಾಲಂಕೃತೈರೇತೈರ್ವರ್ಮವದ್ಭಿಃ ಸುಕಲ್ಪಿತೈಃ ।
ಹಯೈರ್ವಾತಜವೈರ್ಮುಖ್ಯೈಃ ಪಾಂಡವಸ್ಯ ಸುತೋ ಬಲೀ ।
ಅಭ್ಯವರ್ತತ ತತ್ಸೈನ್ಯಂ ಹೃಷ್ಟರೂಪಃ ಪರಂತಪಃ ॥೫॥

ಅನಂತರ ಕಾಂಭೋಜದೇಶದ ಅಶ್ವಗಳು, ನದೀ ದೇಶದ ಅಶ್ವಗಳು, ಆರಟ್ಟ ದೇಶದ ಅಶ್ವಗಳು, ಈ ಭೂಮಿಯಲ್ಲಿ ಜನಿಸಿದ ಅಶ್ವಗಳು, ಸಿಂಧು ದೇಶದಲ್ಲಿ ಜನಿಸಿದ ಅಶ್ವಗಳು, ವನಾಯು ದೇಶದಲ್ಲಿ ಜನಿಸಿದ ಶುಭ್ರವಾದ ಅಶ್ವಗಳು, ಪರ್ವತ ಪ್ರದೇಶದಲ್ಲಿ ಜನಿಸಿದ ಅಶ್ವಗಳು, ತಿತ್ತಿರ ದೇಶದಲ್ಲಿ ಜನಿಸಿದ ವಾಯುವೇಗವುಳ್ಳ ವೇಗಶಾಲಿಗಳಾದ

ಅಶ್ವಗಳು, ಈ ಎಲ್ಲವನ್ನೂ ಚೆನ್ನಾಗಿ ಸಿದ್ಧಗೊಳಿಸಿ ಸುವರ್ಣಾಲಂಕೃತವಾದ ವಾಯುವೇಗವುಳ್ಳ ಪ್ರಧಾನವಾದ ಅಶ್ವಗಳ ಜೊತೆಯಲ್ಲಿ ಪಾಂಡವನಾದ ಅರ್ಜುನನ ಮಗನೂ, ಬಲಿಷ್ಠನೂ, ಪರಂತಪನೂ, ಸಂತೋಷಗೊಂಡವನೂ ಆದ ಇರಾವಂತನು ಕೌರವರ ಸೈನ್ಯವನ್ನು ಪ್ರವೇಶಿಸಿದನು.

ಅರ್ಜುನಸ್ಯಾಥ ದಾಯಾದ ಇರಾವಾನ್ನಾಮ ವೀರ್ಯವಾನ್ ।
ಸುತಾಯಾಂ ನಾಗರಾಜಸ್ಯ ಜಾತಃ ಪಾರ್ಥೇನ ಧೀಮತಾ ॥೬॥

ಐರಾವತೇನ ಸಾ ದತ್ತಾ ಅನಪತ್ಯಾ ಮಹಾತ್ಮನಾ ।
ಪತ್ಯೌ ಹತೇ ಸುಪರ್ಣೇನ ಕೃಪಣಾ ದೀನಚೇತನಾ ॥೭॥

ಭಾರ್ಯಾರ್ಥಂ ತಾಂ ಚ ಜಗ್ರಾಹ ಪಾರ್ಥಃ ಕಾಮವಶಾನುಗಾಮ್ ।
ಏವಮೇಷ ಸಮುತ್ಪನ್ನಃ ಪರಕ್ಷೇತ್ರೇಽರ್ಜುನಾತ್ಮಜಃ ॥೮॥

ಅವನು ಐರಾವತನೆಂಬ ಸರ್ಪರಾಜನ ಮಗಳಾದ ಉಲೂಪಿಯಲ್ಲಿ ಧೀಮಂತನಾದ ಅರ್ಜುನನಿಂದ ಜನಿಸಿದ ಪರಾಕ್ರಮಶಾಲಿಯಾದ ಅರ್ಜುನನ ದಾಯಾದನಾದ ಇರಾವಂತನೆಂಬ ನಾಮವುಳ್ಳವನು. ತನ್ನ ಮಗಳಾದ ಉಲೂಪಿಯ ಪತಿಯು ಗರುಡನಿಂದ ಹತನಾಗುತ್ತಿರಲು ಮಹಾತ್ಮನಾದ ಐರಾವತನು ಮಕ್ಕಳಿಲ್ಲದೆ ಕೃಪಣಳೂ, ದೀನಳೂ ಆಗಿದ್ದ ಅವಳನ್ನು ಅರ್ಜುನನಿಗೆ ಕೊಟ್ಟನು. ಕಾಮವಶಳಾಗಿದ್ದ ಅವಳನ್ನು ಅರ್ಜುನನಾದರೂ ಮುಂದೆ ನಡೆಯಬೇಕಾದ ಕಾರ್ಯದ ಸಲುವಾಗಿ ಪತ್ನಿಯಾಗಿ ಸ್ವೀಕರಿಸಿದನು. ಹೀಗೆ ಇರಾವಂತನು ಅರ್ಜುನನಿಗೆ ಪರಕ್ಷೇತ್ರದಲ್ಲಿ ಜನಿಸಿದ ಪುತ್ರ.

ಸ ನಾಗಲೋಕೇ ಸಂವೃದ್ಧೋ ಮಾತ್ರಾ ಚ ಪರಿರಕ್ಷಿತಃ ।
ಪಿತೃವ್ಯೇಣ ಪರಿತ್ಯಕ್ತಃ ಪಾರ್ಥದ್ವೇಷಾದ್ ದುರಾತ್ಮನಾ ॥೯॥

ಅವನು ತಾಯಿಯಿಂದ ರಕ್ಷಿಸಲ್ಪಟ್ಟು ನಾಗಲೋಕದಲ್ಲಿ ಬೆಳೆದನು. ಅವನ ಚಿಕ್ಕಪ್ಪನಾದ ದುರಾತ್ಮನಾದ ಅಶ್ವಸೇನನು ಅರ್ಜುನನ ಮೇಲಿನ ದ್ವೇಷದಿಂದ ಅವನನ್ನು ಪರಿತ್ಯಾಗ ಮಾಡಿದನು.

ರೂಪವಾನ್ ವೀರ್ಯಸಂಪನ್ನೋ ಗುಣವಾನ್ ಸತ್ಯವಿಕ್ರಮಃ ।
ಇಂದ್ರಲೋಕಂ ಜಗಾಮಾಶು ಶ್ರುತ್ವಾ ತತ್ರಾರ್ಜುನಂ ಗತಮ್ ॥೧೦॥

ರೂಪವಂತನೂ, ವೀರ್ಯಸಂಪನ್ನನೂ, ಗುಣವಂತನೂ, ಸತ್ಯವಾದ ಪರಾಕ್ರಮವುಳ್ಳವನೂ ಆದ ಅವನು ಅರ್ಜುನನು ಇಂದ್ರಲೋಕಕ್ಕೆ ಹೋಗಿದ್ದಾನೆಂದು ಕೇಳಿ ಶೀಘ್ರವಾಗಿ ಇಂದ್ರಲೋಕಕ್ಕೆ ಹೋದನು.

ಸೋಽಭಿಗಮ್ಯ ಮಹಾತ್ಮಾನಂ ಪಿತರಂ ಸತ್ಯವಿಕ್ರಮಮ್ ।
ಅಭ್ಯವಾದಯದವ್ಯಗ್ರೋ ವಿನಯೇನ ಕೃತಾಂಜಲಿಃ ।
ಇರಾವಾನಸ್ಮಿ ಭದ್ರಂ ತೇ ಪುತ್ರಶ್ಚಾಹಂ ತವಾಭಿಭೋ ॥೧೧॥

ಮಾತುಃ ಸಮಾಗಮೋ ಯಶ್ಚ ತತ್ಸರ್ವಂ ಪ್ರತ್ಯವೇದಯತ್ ।
ತಚ್ಚ ಸರ್ವಂ ಯಥಾವೃತ್ತಮನುಸಸ್ಮಾರ ಪಾಂಡವಃ ॥೧೨॥

ಪರಿಷ್ವಜ್ಯ ಸುತಂ ಚಾಪಿ ಸೋಽತ್ಮನಃ ಸದೃಶಂ ಗುಣೈಃ ।
ಪ್ರೀತಿಮಾನಭವತ್ ಪಾರ್ಥೋ ದೇವರಾಜನಿವೇಶನೇ ॥೧೩॥

ಅವನು ಸತ್ಯವಿಕ್ರಮನೂ, ಮಹಾತ್ಮನೂ ಆದ ತಂದೆಗೆ ವಿನಯದಿಂದ ಕೈಗಳನ್ನು ಮುಗಿದು ಅವ್ಯಗ್ರನಾಗಿ ನಮಸ್ಕಾರವನ್ನು ಮಾಡಿ, ಎಲೈ ಶತ್ರುಗಳನ್ನು ಸೋಲಿಸುವವನೇ, ನಿನಗೆ ಮಂಗಳವಾಗಲಿ. ನಾನು ನಿನ್ನ ಪುತ್ರನಾದ ಇರಾವಾನ್ ಎಂದು ಹೇಳಿದನು. ತನ್ನ ತಾಯಿಗೂ, ಅರ್ಜುನನಿಗೂ ಆದ ಸಮಾಗಮವೆಲ್ಲವನ್ನೂ ಅವನು ವಿವರಿಸಿದನು. ಹಿಂದೆ ನಡೆದ ಎಲ್ಲಾ ಘಟನೆಗಳನ್ನು ಅರ್ಜುನನು ಸ್ಮರಿಸಿಕೊಂಡನು. ಗುಣಗಳಿಂದ ತನಗೆ ಸದೃಶನಾದ ತನ್ನ ಪುತ್ರನನ್ನು ಆಲಿಂಗಿಸಿ ಅರ್ಜುನನು ಇಂದ್ರನ ನಿವೇಶದಲ್ಲಿ ಸಂತೋಷಭರಿತನಾದನು.

ಸೋಽರ್ಜುನೇನ ಸಮಾಜ್ಞಪ್ತೋ ದೇವಲೋಕೇ ತದಾ ನೃಪ ।
ಪ್ರೀತಿಪೂರ್ವಂ ಮಹಾಬಾಹುಃ ಸ್ವಕಾರ್ಯಂ ಪ್ರತಿ ಭಾರತ ।
ಯುದ್ಧಕಾಲೇ ತ್ವಯಾಸ್ಮಾಕಂ ಸಾಹ್ಯಂ ದೇಯಮಿತಿ ಪ್ರಭೋ ॥೧೪॥

ಎಲೈ ಭಾರತನೇ, ಪ್ರಭುವೇ, ಆಗ ದೇವಲೋಕದಲ್ಲಿ ಮಹಾಬಾಹುವಾದ ಅವನು ಅರ್ಜುನನಿಂದ ಪ್ರೀತಿಪೂರ್ವಕವಾಗಿ, ನೀನು ಯುದ್ಧಕಾಲದಲ್ಲಿ ನಮಗೆ ಸಹಾಯವನ್ನು ಮಾಡಬೇಕು ಎಂದು ಸ್ವಕಾರ್ಯವನ್ನು ಆಜ್ಞಾಪಿಸಲ್ಪಟ್ಟನು.

ಬಾಢಮಿತ್ಯೇವಮುಕ್ತ್ವಾ ಚ ಯುದ್ಧಕಾಲ ಉಪಾಗತಃ ।
ಕಾಮವರ್ಣಜವೈರಶ್ವೈಃ ಸಂವೃತೋ ಬಹುಭಿರ್ನೃಪ ॥೧೫॥

ಎಲೈ ರಾಜನೇ, ಇರಾವಂತನು ಹಾಗೆಯೇ ಆಗಲಿ ಎಂದು ಹೇಳಿ, ಯುದ್ಧಕಾಲದಲ್ಲಿ ಕಾಮವರ್ಣವನ್ನು ಮತ್ತು ಕಾಮವೇಗವನ್ನು ಹೊಂದಿದ ಅನೇಕ ಅಶ್ವಗಳಿಂದ ಸಹಿತನಾಗಿ ಅರ್ಜುನನ ಬಳಿಗೆ ಬಂದನು.

ತೇ ಹಯಾಃ ಕಾಂಚನಾಪೀಡಾ ನಾನಾವರ್ಣಾ ಮನೋಜವಾಃ ।
ಉತ್ಪೇತುಃ ಸಹಸಾ ರಾಜನ್ ಹಂಸಾ ಇವ ಮಹೋದಧೌ ॥೧೬॥

ಎಲೈ ರಾಜನೇ, ಸುವರ್ಣಾಲಂಕೃತವಾದ ಮನೋಜವವುಳ್ಳ ನಾನಾವರ್ಣದ ಆ ಅಶ್ವಗಳು ಹಂಸಗಳು ಮಹಾಸಾಗರದಲ್ಲಿ ಹಾರಿದಂತೆ ಹಾರುತ್ತಿದ್ದವು.

ತೇ ತ್ವದೀಯಾನ್ ಸಮಾಸಾದ್ಯ ಹಯಸಂಘಾನ್ ಮಹಾಜವಾನ್ ।
ಕ್ರೋಡ್ಯೈಃ ಕ್ರೋಡಾನಭಿಘ್ನಂತೋ ಘೋಣಾಭಿಶ್ಚ ಪರಸ್ಪರಮ್ ।
ನಿಪೇತುಃ ಸಹಸಾ ರಾಜನ್ ಸುವೇಗಾಭಿಹತಾ ಭುವಿ ॥೧೭॥

ಎಲೈ ರಾಜನೇ, ಆ ಅಶ್ವಗಳು ಮಹಾವೇಗವುಳ್ಳ ನಿನ್ನ ಅಶ್ವಸಮೂಹಗಳನ್ನು ಯುದ್ಧದಲ್ಲಿ ಎದುರಿಸಿ ಭುಜದಿಂದ ಭುಜಗಳನ್ನು, ಮುಖದಿಂದ ಮುಖಗಳನ್ನು ಘಟ್ಟಿಸುತ್ತಾ ತಕ್ಷಣದಲ್ಲಿ ಒಳ್ಳೆಯ ವೇಗದಿಂದ ತಾಡಿತವಾಗಿ ಭೂಮಿಯ ಮೇಲೆ ಬಿದ್ದವು.

ನಿಪತದ್ಭಿಸ್ತಥಾ ತೈಶ್ಚ ಹಯಸಂಘೈಃ ಪರಸ್ಪರಮ್ ।
ಶುಶ್ರುವೇ ದಾರುಣಃ ಶಬ್ದಃ ಸುಪರ್ಣಪತನೇ ಯಥಾ ॥೧೮॥

ಆ ಅಶ್ವಸಂಘಗಳು ಪರಸ್ಪರವಾಗಿ ಘಟ್ಟಿಸಿ ಭೂಮಿಯ ಮೇಲೆ ಬೀಳುವಾಗ ಗರುಡನು ಹಾರುವ ಶಬ್ದದಂತೆ ದಾರುಣವಾದ ಶಬ್ದವು ಕೇಳಿಬರುತ್ತಿದ್ದಿತು.

ತಥೈವ ಚ ಮಹಾರಾಜ ಸಮೇತ್ಯಾನ್ಯೋನ್ಯಮಾಹವೇ ।
ಪರಸ್ಪರವಧಂ ಘೋರಂ ಚಕ್ರುಸ್ತೇ ಹಯಸಾದಿನಃ ॥೧೯॥

ಎಲೈ ಮಹಾರಾಜನೇ, ಹಾಗೆಯೇ ಆ ಅಶ್ವಾರೋಹಿಗಳೂ ಸಹ ಯುದ್ಧದಲ್ಲಿ ಒಬ್ಬರನ್ನೊಬ್ಬರು ಎದುರಿಸಿ, ಪರಸ್ಪರವಾಗಿ ಘೋರವಾದ ವಧೆಯನ್ನು ಮಾಡಿದರು.

ತಸ್ಮಿಂಸ್ತಥಾ ವರ್ತಮಾನೇ ಸಂಕುಲೇ ತುಮುಲೇ ಭೃಶಮ್ ।
ಉಭಯೋರಪಿ ಸಂಶಾಂತಾ ಹಯಸಂಘಾಃ ಸಮಂತತಃ ॥೨೦॥

ಪ್ರಕ್ಷೀಣಸಾಯಕಾಃ ಶೂರಾ ನಿಹತಾಶ್ವಾಃ ಶ್ರಮಾತುರಾಃ ।
ವಿಲಯಂ ಸಮನುಪ್ರಾಪ್ತಾಸ್ತಕ್ಷಮಾಣಾಃ ಪರಸ್ಪರಮ್ ॥೨೧॥

ಆ ಸಂಕುಲಯುದ್ಧವು ಹಾಗೆ ತೀವ್ರವಾಗಿ ನಡೆಯುತ್ತಿರಲು, ಎರಡು ಕಡೆಗಳಲ್ಲಿಯೂ ಅಶ್ವಸಮೂಹಗಳು ನಾಶವನ್ನು ಹೊಂದಿದವು. ಅಶ್ವಗಳನ್ನು ಕಳೆದುಕೊಂಡು, ಭತ್ತಳಿಕೆಗಳು ಬರಿದಾಗಿ, ಶ್ರಮದಿಂದ ಆರ್ತರಾದ ಯೋಧರು ಪರಸ್ಪರವಾಗಿ ಗಾಯಗೊಳಿಸುತ್ತಾ ನಾಶವನ್ನು ಹೊಂದಿದರು.

ತತಃ ಕ್ಷೀಣೇ ಹಯಾನೀಕೇ ಕಿಂಚಿಚ್ಛೇಷೇ ಚ ಭಾರತ ।
ಸೌಬಲಸ್ಯಾತ್ಮಜಾಃ ಶೂರಾ ನಿರ್ಗತಾ ರಣಮೂರ್ಧನಿ ॥೨೨॥

ಎಲೈ ಭಾರತನೇ, ಹಯಸಮೂಹವು ಹಾಗೆ ನಾಶವಾಗಿ ಸ್ವಲ್ಪವು ಮಾತ್ರ ಉಳಿದಿರಲು ಸೌಬಲನಾದ ಶಕುನಿಯ ಶೂರರಾದ ಪುತ್ರರು ಉನ್ನತವಾದ ರಣದಲ್ಲಿ ಹೊರಗೆ ಬಂದರು.

ವಾಯುವೇಗಸಮಸ್ಪರ್ಶಾ ಜವೇ ವಾಯುಸಮಾಂಸ್ತಥಾ ।
ಆರುಹ್ಯ ಶೀಲಸಂಪನ್ನಾನ್ ವಯಃಸ್ಥಾಂಸ್ತುರಗೋತ್ತಮಾನ್ ॥೨೩॥

ವಾಯುವೇಗಕ್ಕೆ ಸಮವಾದ ಸ್ಪರ್ಶವುಳ್ಳ ಅವರು ವಾಯುವೇಗವನ್ನು ಹೊಂದಿದ ಶೀಲಸಂಪನ್ನವಾದ ತರುಣ ವಯಸ್ಸಿನ ಅಶ್ವಗಳನ್ನು ಏರಿ ಬಂದರು.

ಗಜೋ ಗವಾಕ್ಷೋ ವೃಷಕಶ್ಚರ್ಮವಾನಾರ್ಜವಃ ಶುಕಃ ।
ಷಡೇತೇ ಬಲಸಂಪನ್ನಾ ನಿರ್ಯಯುರ್ಮಹತೋ ಬಲಾತ್ ॥೨೪॥

ಗಜ, ಗವಾಕ್ಷ, ವೃಷಕ, ಚರ್ಮವಾನ್, ಆರ್ಜವ, ಶುಕ ಈ ಆರು ಬಲಿಷ್ಠರು ದೊಡ್ಡ ಕೌರವ ಸೈನ್ಯದಿಂದ ಮುಂದೆ ಬಂದರು.

ವಾರ್ಯಮಾಣಾಃ ಶಕುನಿನಾ ಸ್ವೈಶ್ಚ ಯೋಧೈರ್ಮಹಾಬಲೈಃ ।
ಸನ್ನದ್ಧಾ ಯುದ್ಧಕುಶಲಾ ರೌದ್ರರೂಪಾ ಮಹಾಬಲಾಃ ॥೨೫॥

ತದನೀಕಂ ಮಹಾಬಾಹೋ ಭಿತ್ತ್ವಾ ಪರಮದುರ್ಜಯಮ್ ।
ಬಲೇನ ಮಹತಾ ಯುಕ್ತಾಃ ಸ್ವರ್ಗಾಯ ವಿಜಯೈಷಿಣಃ ।
ವಿವಿಶುಸ್ತೇ ತದಾ ಹೃಷ್ಟಾ ಗಾಂಧಾರಾ ಯುದ್ಧದುರ್ಮದಾಃ ॥೨೬॥

ಶಕುನಿಯೂ ಮತ್ತು ತಮ್ಮ ಪಕ್ಷದ ಮಹಾಬಲರೂ ನಿಷೇಧಿಸುತ್ತಿದ್ದರೂ ಯುದ್ಧಕುಶಲರೂ, ಘೋರವಾದ ಆಕಾರವನ್ನು ಹೊಂದಿದವರೂ, ಮಹಾಬಲರೂ, ಯುದ್ಧಸನ್ನದ್ಧರೂ ಆದ ಅವರು ಪರಮದುರ್ಜಯವಾದ ಪಾಂಡವರ ಸೈನ್ಯವನ್ನು ಭೇದಿಸಿ, ಸ್ವರ್ಗವನ್ನು ಅಥವಾ ಜಯವನ್ನು ಪಡೆಯಲು ಬಯಸಿ, ದೊಡ್ಡ ಸೈನ್ಯದಿಂದ ಕೂಡಿ ಸಂತೋಷದಿಂದ ಯುದ್ಧದುರ್ಮದರೂ, ಗಾಂಧಾರರೂ ಆದ ಅವರು ಪಾಂಡವ ಸೈನ್ಯವನ್ನು ಪ್ರವೇಶಿಸಿದರು.

ತಾನ್ ಪ್ರವಿಷ್ಟಾಂಸ್ತದಾ ದೃಷ್ಟ್ವಾ ಇರಾವಾನಪಿ ವೀರ್ಯವಾನ್ ।
ಅಬ್ರವೀತ್ ಸಮರೇ ಯೋಧಾನ್ ವಿಚಿತ್ರಾಭರಣಾಯುಧಾನ್ ॥೨೭॥

ತನ್ನ ಸೈನ್ಯವನ್ನು ಪ್ರವೇಶಿಸಿದ ಅವರನ್ನು ನೋಡಿ ಪರಾಕ್ರಮಶಾಲಿಯಾದ ಇರಾವಂತನೂ ಸಹ ವಿಚಿತ್ರಾಭರಣಭೂಷಿತರಾದ ತನ್ನ ಯೋಧರನ್ನು ಕುರಿತು ಹೇಳಿದನು.

ಯಚ್ಚೈತೇ ಧಾರ್ತರಾಷ್ಟ್ರಸ್ಯ ಯೋಧಾಃ ಸಾನುಗವಾಹನಾಃ ।
ಹನ್ಯಂತೇ ಸಮರೇ ಸರ್ವೇ ತಥಾ ನೀತಿರ್ವಿಧೀಯತಾಮ್ ॥೨೮॥

ತಮ್ಮ ಅನುಯಾಯಿಗಳ ಮತ್ತು ವಾಹನಗಳ ಜೊತೆಯಲ್ಲಿ ಬಂದ ಈ ದುರ್ಯೋಧನನ ಯೋಧರೆಲ್ಲರೂ ಯುದ್ಧದಲ್ಲಿ ವಧೆಯನ್ನು ಹೊಂದುವಂತೆ ನೀತಿಯನ್ನು ನಿರೂಪಿಸಿ (ಎಂದು ಹೇಳಿದನು).

ಬಾಢಮಿತ್ಯೇವಮುಕ್ತ್ವಾ ತೇ ಸರ್ವೇ ಯೋಧಾ ಇರಾವತಃ ।
ಜಘ್ನುಸ್ತೇ ವೈ ಪರಾನೀಕಂ ದುರ್ಜಯಂ ಸಮರೇ ಪರೈಃ ॥೨೯॥

ಹಾಗೆಯೇ ಆಗಲಿ ಎಂದು ಹೇಳಿ ಇರಾವಂತನ ಯೋಧರೆಲ್ಲರೂ ಶತ್ರುಗಳಿಂದ ಜಯಿಸಲು ಅಸಾಧ್ಯವಾದ ಆ ಶತ್ರುಸೈನ್ಯವನ್ನು ಪ್ರಹಾರಕ್ಕೆ ಈಡುಮಾಡಿದರು.

ತದನೀಕಮನೀಕೇನ ಸಮರೇ ವೀಕ್ಷ್ಯ ಪಾತಿತಮ್ ।
ಅಮೃಷ್ಯಮಾಣಾಸ್ತೇ ಸರ್ವೇ ಸುಬಲಸ್ಯಾತ್ಮಜಾ ರಣೇ ।
ಇರಾವಂತಮಭಿದ್ರುತ್ಯ ಸರ್ವತಃ ಪರ್ಯವಾರಯನ್ ॥೩೦॥

ತಮ್ಮ ಸೈನ್ಯವು ಪರಸೈನ್ಯದಿಂದ ಯುದ್ಧದಲ್ಲಿ ನಿಪಾತವನ್ನು ಹೊಂದುವುದನ್ನು ನೋಡಿ ಸುಬಲನ ಪುತ್ರರೆಲ್ಲರೂ ಅದನ್ನು ನೋಡಿ ಸಹಿಸದೆ ಯುದ್ಧದಲ್ಲಿ ಇರಾವಂತನ ಮೇಲೆ ಎರಗಿ ಅವನನ್ನು ಸುತ್ತುವರಿದರು.

ತಾಡಯಂತಃ ಶಿತೈಃ ಪ್ರಾಸೈಶ್ಚೋದಯಂತಃ ಪರಸ್ಪರಮ್ ।
ತೇ ಶೂರಾಃ ಪರ್ಯಧಾವಂತ ಕುರ್ವಂತೋ ಮಹದಾಕುಲಮ್ ॥೩೧॥

ಹರಿತವಾದ ಪ್ರಾಸಗಳಿಂದ ಅವನಿಗೆ ಹೊಡೆಯುತ್ತಾ ತಮ್ಮನ್ನೇ ಪರಸ್ಪರವಾಗಿ ಉತ್ಸಾಹಗೊಳಿಸುತ್ತಾ ಶೂರರಾದ ಅವರು ದೊಡ್ಡ ಕ್ಷೋಭೆಯನ್ನು ಮಾಡುತ್ತಾ ಓಡಾಡಿದರು.

ಇರಾವಾನಥ ನಿರ್ಭಿನ್ನಃ ಪ್ರಾಸೈಸ್ತೀಕ್ಷ್ಣೈರ್ಮಹಾತ್ಮಭಿಃ ।
ಸ್ರವತಾ ರುಧಿರೇಣಾಕ್ತಸ್ತೋತ್ತ್ರೈರ್ವಿದ್ಧ ಇವ ದ್ವಿಪಃ ॥೩೨॥

ಆಗ ಇರಾವಂತನಾದರೋ ಆ ಮಹಾತ್ಮರ ತೀಕ್ಷ್ಣವಾದ ಪ್ರಾಸಗಳಿಂದ ಗಾಯಗೊಂಡ ಶರೀರವುಳ್ಳವನಾಗಿ ರಕ್ತವು ಸೋರುತ್ತಾ ಅಂಕುಶದಿಂದ ಹೊಡೆಯಲ್ಪಟ್ಟ ಆನೆಯಂತೆ ತೋರಿದನು.

ಉರಸ್ಯಪಿ ಚ ಪೃಷ್ಠೇ ಚ ಪಾರ್ಶ್ವಯೋಶ್ಚ ಭೃಶಾಹತಃ ।
ಏಕೋ ಬಹುಭರತ್ಯರ್ಥಂ ಧೈರ್ಯಾದ್ ರಾಜನ್ನ ವಿವ್ಯಥೇ ॥೩೩॥

ಎಲೈ ರಾಜನೇ, ಅವನ ಎದೆಯಲ್ಲಿಯೂ, ಬೆನ್ನಿನಲ್ಲಿಯೂ, ಪಕ್ಕೆಗಳಲ್ಲಿಯೂ ಚೆನ್ನಾಗಿ ಆಯುಧಗಳಿಂದ ಒಬ್ಬನೇ ಬಹಳ ಜನರಿಂದ ಹತನಾದರೂ ಧೈರ್ಯದಿಂದ ಅವನು ವ್ಯಥೆಯನ್ನು ಹೊಂದಲಿಲ್ಲ.

ಇರಾವಾನಥ ಸಂಕ್ರುದ್ಧಃ ಸರ್ವಾಂಸ್ತಾನ್ ನಿಶಿತೈಃ ಶರೈಃ ।
ಮೋಹಯಾಮಾಸ ಸಮರೇ ಎದ್ವಾ ಪರಪುರಂಜಯಃ ॥೩೪॥

ಆಗ ಪರಪುರಂಜಯನಾದ ಇರಾವಂತನೂ ಸಹ ಬಹಳ ಕೋಪಗೊಂಡು ಅವರೆಲ್ಲರನ್ನೂ ಹರಿತವಾದ ಬಾಣಗಳಿಂದ ಗಾಯಗೊಳಿಸುತ್ತಾ ಯುದ್ಧದಲ್ಲಿ ಅವರಿಗೆ ಮೂರ್ಛೆಯನ್ನು ಉಂಟುಮಾಡಿದನು.

ಪ್ರಾಸಾನುದ್ಧೃತ್ಯ ಸರ್ವಾಂಶ್ಚ ಸ್ವಶರೀರಾದರಿಂದಮಃ ।
ತೈರೇವ ತಾಡಯಾಮಾಸ ಸುಬಲಸ್ಯಾತ್ಮಜಾನ್ ರಣೇ ॥೩೫॥

ಅರಿಂದಮನಾದ ಅವನು ತನ್ನ ಶರೀರದಲ್ಲಿ ನಾಟಿದ್ದ ಪ್ರಾಸಗಳನ್ನು ಕಿತ್ತು ಅವುಗಳಿಂದಲೇ ಶಕುನಿಯ ಪುತ್ರರನ್ನು ಯುದ್ಧದಲ್ಲಿ ಹೊಡೆದನು.

ನಿಕೃತ್ಯ ನಿಶಿತಂ ಖಡ್ಗಂ ಗೃಹೀತ್ವಾ ಚ ಶರಾವರಮ್ ।
ಪದಾತಿಸ್ತೂರ್ಣಮಾಗಚ್ಛಜ್ಜಿಘಾಂಸುಃ ಸೌಬಲಾನ್ ಯುಧಿ ॥೩೬॥

ತನ್ನ ಹರಿತವಾದ ಖಡ್ಗವನ್ನು ಒರೆಯಿಂದ ಹಿರಿದು, ಗುರಾಣಿಯನ್ನು ಹಿಡಿದು ಶಕುನಿಯ ಪುತ್ರರನ್ನು ಯುದ್ಧದಲ್ಲಿ ಕೊಲ್ಲಲು ಬಯಸಿ, ಪದಾತಿಯಾಗಿ ಅವನು ಶೀಘ್ರವಾಗಿ ಮುಂದೆ ಬಂದನು.

ತತಃ ಪ್ರತ್ಯಾಗತಪ್ರಾಣಾಃ ಸರ್ವೇ ತೇ ಸುಬಲಾತ್ಮಜಾಃ ।
ಭೂಯಃ ಕ್ರೋಧಸಮಾವಿಷ್ಟಾ ಇರಾವಂತಮಥಾದ್ರವನ್ ॥೩೭॥

ಆ ವೇಳೆಗೆ ಪ್ರಜ್ಞೆಯನ್ನು ಮರಳಿ ಪಡೆದ ಶಕುನಿಯ ಪುತ್ರರೆಲ್ಲರೂ ಕ್ರೋಧಪೂರಿತರಾಗಿ ಪುನಃ ಇರಾವಂತನನ್ನು ಮುತ್ತಿದರು.

ಇರಾವಾನಪಿ ಖಡ್ಗೇನ ದರ್ಶಯನ್ ಪಾಣಿಲಾಘವಮ್ ।
ಅಭ್ಯವರ್ತತ ತಾನ್ ಸರ್ವಾನ್ ಸೌಬಲಾನ್ ಬಲದರ್ಪಿತಃ ॥೩೮॥

ಬಲದರ್ಪಿತನಾದ ಇರಾವಂತನೂ ಸಹ ಖಡ್ಗವನ್ನು ಹಿಡಿದು ತನ್ನ ಹಸ್ತಚಾತುರ್ಯವನ್ನು ತೋರಿಸುತ್ತಾ ಶಕುನಿಯ ಆ ಎಲ್ಲ ಪುತ್ರರನ್ನೂ ಎದುರಿಸಿದನು.

ಲಾಘವೇನಾಥ ಚರತಃ ಸರ್ವೇ ತೇ ಸುಬಲಾತ್ಮಜಾಃ ।
ಅಂತರಂ ನಾಧ್ಯಗಚ್ಛಂತ ಚರಂತಃ ಶೀಘ್ರಗಾಮಿನಃ ॥೩೯॥

ಶೀಘ್ರಗಾಮಿಗಳಾಗಿ ಚಲಿಸುವ ಆ ಎಲ್ಲ ಶಕುನಿಯ ಪುತ್ರರು ಶೀಘ್ರವಾಗಿ ಸಂಚರಿಸುವ ಅವನನ್ನು ಹೊಡೆಯಲು ಯಾವ ಅವಕಾಶವನ್ನೂ ಪಡೆಯಲಿಲ್ಲ.

ಭೂಮಿಷ್ಠಮಥ ತಂ ಸಂಖೇ ಸಂಪ್ರದೃಶ್ಯ ತತಃ ಪುನಃ ।
ಪರಿವಾರ್ಯ ಭೃಶಂ ಸರ್ವೇ ಗ್ರಹೀತುಮುಪಚಕ್ರಮುಃ ॥೪೦॥

ಆಗ ಅವರು ಭೂಮಿಯ ಮೇಲೆ ಪದಾತಿಯಾಗಿದ್ದ ಅವನನ್ನು ಸುತ್ತುವರಿದು ಸೆರೆಹಿಡಿಯಲು ಯತ್ನಿಸಿದರು.

ಅಥಾಭ್ಯಾಶಗತಾನಾಂ ಸ ಖಡ್ಗೇನಾಮಿತ್ರಕರ್ಶನಃ ।
ಉಪಹಸ್ತಾವಹಸ್ತಾಭ್ಯಾಂ ತೇಷಾಂ ಗಾತ್ರಾಣ್ಯಕೃಂತತ ॥೪೧॥

ಶತ್ರುಕರ್ಶನನಾದ ಇರಾವಂತನು ಸಮೀಪಕ್ಕೆ ಬಂದ ಅವರ ಶರೀರಗಳನ್ನು ಮುಂದಿನ ಹಸ್ತ ಮತ್ತು ಹಿಂದಿನ ಹಸ್ತಗಳ (Forehand and Backhand) ಖಡ್ಗ ಪ್ರಹಾರದಿಂದ ಕತ್ತರಿಸಿದನು.

ಆಯುಧಾನಿ ಚ ಸರ್ವೇಷಾಂ ಬಾಹೂನಪಿ ಚ ಭೂಷಿತಾನ್ ।
ಅಪತಂತ ನಿಕೃತ್ತಾಂಗಾ ಗತಾ ಭೂಮಿಂ ಗತಾಸವಃ ॥೪೨॥

ಅವರೆಲ್ಲರ ಆಯುಧಗಳನ್ನು ಮತ್ತು ಅಲಂಕೃತವಾದ ಬಾಹುಗಳನ್ನು ಕತ್ತರಿಸಿದನು. ಅವರು ದೇಹವು ಕತ್ತರಿಸಲ್ಪಟ್ಟು ಪ್ರಾಣಗಳನ್ನು ಕಳೆದುಕೊಂಡು ಭೂಮಿಯ ಮೇಲೆ ಬಿದ್ದರು.

ವೃಷಕಸ್ತು ಮಹಾರಾಜ ಬಹುಧಾ ಪರಿವಿಕ್ಷತಃ ।
ಅಮುಚ್ಯತ ಮಹಾರೌದ್ರಾತ್ ತಸ್ಮಾದ್ ವೀರಾವಕರ್ತನಾತ್ ॥೪೩॥

ಎಲೈ ಮಹಾರಾಜನೇ, ವೃಷಕನೊಬ್ಬನು ಮಾತ್ರ ಬಹಳ ಗಾಯಗೊಂಡರೂ ಸಹ ಮಹಾಭಯಂಕರವಾದ ಆ ವೀರರ ಬಲಿಕರ್ಮದಿಂದ ಮುಕ್ತನಾದನು.

ತಾನ್ ಸರ್ವಾನ್ ಪತಿತಾನ್ ದೃಷ್ಟ್ವಾ ಭೀತೋ ದುರ್ಯೋಧನಸ್ತತಃ ।
ಅಭ್ಯಭಾಷತ ಸಂಕ್ರುದ್ಧೋ ರಾಕ್ಷಸಂ ಘೋರದರ್ಶನಮ್ ॥೪೪॥

ಆರ್ಜುನಿಂ ಮಹೇಷ್ವಾಸಂ ಮಾಯಾವಿನಮರಿಂದಮಮ್ ।
ವೈರಿಣಂ ಭೀಮಸೇನಸ್ಯ ಪೂರ್ವಂ ಬಕವಧೇನ ವೈ ॥೪೫॥

ಅವರೆಲ್ಲರೂ ಹತರಾಗಿ ಬಿದ್ದುದನ್ನು ನೋಡಿದ ದುರ್ಯೋಧನನು ಭೀತನಾಗಿ ಬಹಳ ಕೋಪಗೊಂಡು ಘೋರದರ್ಶನನಾದ ಮಹಾಧನುರ್ಧಾರಿಯಾದ ಮಾಯಾವಿಯೂ ಮತ್ತು ಅರಿಂದಮನೂ ಆದ, ಹಿಂದೆ ಬಕನನ್ನು ವಧೆ ಮಾಡಿದುದರಿಂದ ಭೀಮಸೇನನ ಪೂರ್ವಶತ್ರುವಾದ ಅಲಂಬುಸನನ್ನು ಕುರಿತು ಮಾತನಾಡಿದನು.

ಪಶ್ಯ ವೀರ ಯಥಾ ಹ್ಯೇಷ ಫಲ್ಗುನಸ್ಯ ಸುತೋ ಬಲೀ ।
ಮಾಯಾವೀ ವಿಪ್ರಿಯಂ ಘೋರಮಕಾರ್ಷೀನ್ಮೇ ಬಲಕ್ಷಯಮ್ ॥೪೬॥

ಎಲೈ ವೀರನೇ, ಮಾಯಾವಿಯಾದ ಅರ್ಜುನನ ಬಲಿಷ್ಠವಾದ ಈ ಪುತ್ರನು ನನ್ನ ಸೈನ್ಯದ ಕ್ಷಯವನ್ನು ಮಾಡಿ, ನನಗೆ ಹೇಗೆ ಘೋರವಾದ ಅಪ್ರಿಯವನ್ನು ಮಾಡುತ್ತಿದ್ದಾನೆಂಬುದನ್ನು ನೋಡು.

ತ್ವಂ ಚ ಕಾಮಗಮಸ್ತಾತ ಮಾಯಾಸ್ವೀ ಚ ವಿಶಾರದಃ ।
ಕೃತವೈರಶ್ಚ ಪಾರ್ಥೇನ ತಸ್ಮಾದೇನಂ ರಣೇ ಜಹಿ ॥೪೭॥

ಎಲೈ ಪ್ರೀತಿಪಾತ್ರನೇ, ನೀನೂ ಸಹ ಕಾಮಗಮನವುಳ್ಳವನು. ಮಾಯಾ ಯುದ್ಧದಲ್ಲಿ ವಿಶಾರದನಾದವನು. ಅರ್ಜುನನ ಜೊತೆಯಲ್ಲಿ ವೈರವನ್ನು ಮಾಡಿದವನು. ಆದ್ದರಿಂದ ಯುದ್ಧದಲ್ಲಿ ಈ ಇರಾವಂತನನ್ನು ಕೊಲ್ಲು ಎಂದು ಹೇಳಿದನು.

ಬಾಢಮಿತ್ಯೇವಮುಕ್ತ್ವಾ ತು ರಾಕ್ಷಸೋ ಘೋರದರ್ಶನಃ ।
ಪ್ರಯಯೌ ಸಿಂಹನಾದೇನ ಯತ್ರಾರ್ಜುನಸುತೋ ಯುವಾ ॥೪೮॥

ಸ್ವಾರೂಢೈರ್ಯುದ್ಧಕುಶಲೈರ್ವಿಮಲಪ್ರಾಸಯೋಧಿಭಿಃ ।
ವೀರೈಃ ಪ್ರಹಾರಿಭಿರ್ಯುಕ್ತಃ ಸ್ವೈರನೀಕೈಃ ಸಮಾವೃತಃ ।
ನಿಹಂತುಕಾಮಃ ಸಮರೇ ಇರಾವಂತಂ ಮಹಾಬಲಮ್ ॥೪೯॥

ಘೋರರೂಪವನ್ನು ಹೊಂದಿದ ಆ ರಾಕ್ಷಸನು ಹಾಗೆಯೇ ಆಗಲಿ ಎಂದು ಹೇಳಿ, ಸಿಂಹನಾದವನ್ನು ಮಾಡುತ್ತಾ, ಅಶ್ವಾದಿಗಳನ್ನು ಏರಿದ ಯುದ್ಧಕುಶಲರಾದ

ನಿರ್ಮಲವಾದ ಪ್ರಾಸಗಳಿಂದ ಯುದ್ಧವನ್ನು ಮಾಡುವ ಪ್ರಹಾರಶೀಲರಾದ ವೀರರಿಂದ ಕೂಡಿದ ತನ್ನ ಸೈನ್ಯದಿಂದ ಸಮಾವೃತನಾಗಿ ಮಹಾಬಲನಾದ ಇರಾವಂತನನ್ನು ಯುದ್ಧದಲ್ಲಿ ಕೊಲ್ಲಲು ಬಯಸಿ ಅವನ ಕಡೆಗೆ ಸಾಗಿದನು.

ಇರಾವಾನಪಿ ಸಂಕ್ರುದ್ಧ ಸ್ತ್ವರಮಾಣಃ ಪರಾಕ್ರಮೀ ।
ಹಂತುಕಾಮಮಮಿತ್ರಘ್ನೋ ರಾಕ್ಷಸಂ ಪ್ರತ್ಯವಾರಯತ್ ॥೫೦॥

ಪರಾಕ್ರಮಶಾಲಿಯೂ, ಶತ್ರುಸೂದನನೂ ಆದ ಇರಾವಂತನೂ ಸಹ ಬಹಳ ಕೋಪಗೊಂಡು ತನ್ನನ್ನು ಕೊಲ್ಲಲು ಬಯಸಿದ ಅಲಂಬುಸ ರಾಕ್ಷಸನನ್ನು ಶೀಘ್ರವಾಗಿ ತಡೆದನು.

ತಮಾಪತಂತಂ ಸಂಪ್ರೇಕ್ಷ್ಯ ರಾಕ್ಷಸಃ ಸುಮಹಾಬಲಃ ।
ತ್ವರಮಾಣಸ್ತತೋ ಮಾಯಾಂ ಪ್ರಯೋಕ್ತುಮುಪಚಕ್ರಮೇ ॥೫೧॥

ಅತ್ಯಂತ ಬಲಶಾಲಿಯಾದ ಇರಾವಂತನು ರಾಕ್ಷಸನು ತನ್ನ ಮೇಲೆ ಎರಗುತ್ತಿರುವುದನ್ನು ನೋಡಿ, ಶೀಘ್ರವಾಗಿ ಮಾಯಾಯುದ್ಧವನ್ನು ಮಾಡಲು ಪ್ರಾರಂಭಿಸಿದನು.

ತೇನ ಮಾಯಾಮಯಾಃ ಕೃಪ್ತಾ ಹಯಾಸ್ತಾವಂತ ಏವ ಹಿ ।
ಸ್ವಾರೂಢಾ ರಾಕ್ಷಸೈರ್ಘೋರೈಃ ಶೂಲಪಟ್ಟಿಶಪಾಣಿಭಿಃ ॥೫೨॥

ಅವನು ಶೂಲ-ಪಟ್ಟಿಶಗಳನ್ನು ಹಿಡಿದ, ಘೋರವಾದ ರಾಕ್ಷಸರಿಂದ ಏರಲ್ಪಟ್ಟ ಅಷ್ಟೇ ಮಾಯಾಮಯವಾದ ಅಶ್ವಗಳನ್ನು ಸೃಷ್ಟಿಸಿದನು.

ತೇ ಸಂರಬ್ಧಾಃ ಸಮಾಗಮ್ಯ ದ್ವಿಸಾಹಸ್ರಾಃ ಪ್ರಹಾರಿಣಃ ।
ಅಚಿರಾದ್ ಗಮಯಾಮಾಸುಃ ಪ್ರೇತಲೋಕಂ ಪರಸ್ಪರಮ್ ॥೫೩॥

ಆ ಎರಡು ಸಹಸ್ರ ಪ್ರಹಾರಶೀಲರಾದ ಯೋಧರು ಕ್ರೋಧಗೊಂಡು ಸಮಾರೋಪವನ್ನು ಹೊಂದಿ ಸ್ವಲ್ಪಕಾಲದಲ್ಲಿಯೇ ಪರಸ್ಪರವಾಗಿ ಒಬ್ಬರನ್ನೊಬ್ಬರು ಯಮಲೋಕಕ್ಕೆ ಕಳುಹಿಸಿದರು.

ತಸ್ಮಿಂಸ್ತು ನಿಹತೇ ಸೈನ್ಯೇ ತಾವುಭೌ ಯುದ್ಧದುರ್ಮದೌ ।
ಸಂಗ್ರಾಮೇ ವ್ಯವತಿಷ್ಠೇತಾಂ ಯಥಾ ವೈ ವೃತ್ರವಾಸವೌ ॥೫೪॥

ಆ ಸೈನ್ಯಗಳು ಹತವಾದ ಮೇಲೆ ಯುದ್ಧದುರ್ಮದರಾದ ಇರಾವಂತ ಮತ್ತು ಅಲಂಬುಸರಿಬ್ಬರೂ ವೃತ್ರ-ವಾಸವರಂತೆ ಯುದ್ಧದಲ್ಲಿ ನಿಂತರು.

ಆದ್ರವಂತಮಭಿಪ್ರೇಕ್ಷ್ಯ ರಾಕ್ಷಸಂ ಯುದ್ಧದುರ್ಮದಮ್ ।
ಇರಾವಾನ್ ಕ್ರೋಧಸಂರಬ್ಧಃ ಪ್ರತ್ಯಧಾವನ್ಮಹಾಬಲಃ ॥೫೫॥

ತನ್ನ ಕಡೆಗೆ ಓಡಿ ಬರುತ್ತಿದ್ದ ಯುದ್ಧದುರ್ಮದರಾದ ರಾಕ್ಷಸರನ್ನು ನೋಡಿ ಮಹಾಬಲನಾದ ಇರಾವಂತನು ಕ್ರೋಧಪೂರಿತನಾಗಿ ತಾನೂ ಅವನ ಕಡೆಗೆ ಓಡಿದನು.

ಸಮಭ್ಯಾಶಗತಸ್ಯಾಜೌ ತಸ್ಯ ಖಡ್ಗೇನ ದುರ್ಮತೇಃ ।
ಚಿಚ್ಛೇದ ಕಾರ್ಮುಕಂ ದೀಪ್ತಂ ಶರಾವಾಪಂ ಚ ಪಂಚಕಮ್ ॥೫೬॥

ಆ ದುರ್ಮತಿಯು ಸಮೀಪಕ್ಕೆ ಬರುತ್ತಿರಲು ಇರಾವಂತನು ತನ್ನ ಖಡ್ಗದಿಂದ ಪ್ರಕಾಶಮಾನವಾದ ಅವನ ಧನುಸ್ಸನ್ನು ಮತ್ತು ಐದು ಭತ್ತಳಿಕೆಗಳನ್ನೂ ಕತ್ತರಿಸಿದನು.

ಸ ನಿಕೃತ್ತಂ ಧನುರ್ದೃಷ್ಟ್ವಾ ಖಂ ಜವೇನ ಸಮಾವಿಶತ್ ।
ಇರಾವಂತಮಭಿಕ್ರುದ್ಧಂ ಮೋಹಯನ್ನಿವ ಮಾಯಯಾ ॥೫೭॥

ತನ್ನ ಧನುಸ್ಸು ಕತ್ತರಿಸಲ್ಪಡುತ್ತಿರಲು ಅದನ್ನು ನೋಡಿದ ಅಲಂಬುಸನು ಕ್ರೋಧಗೊಂಡ ಇರಾವಂತನನ್ನು ತನ್ನ ಮಾಯೆಯಿಂದ ಮರುಳುಗೊಳಿಸುತ್ತಾ ಶೀಘ್ರವಾಗಿ ಆಕಾಶಕ್ಕೆ ಹಾರಿದನು.

ತತೋಽಂತರಿಕ್ಷಮುತ್ಪತ್ಯ ಇರಾವಾನಪಿ ರಾಕ್ಷಸಮ್ ।
ವಿಮೋಹಯಿತ್ವಾ ಮಾಯಾಭಿಸ್ತಸ್ಯ ಗಾತ್ರಾಣಿ ಸಾಯಕೈಃ ।
ಚಿಚ್ಛೇದ ಸರ್ವಮರ್ಮಜ್ಞಃ ಕಾಮರೂಪೋ ದುರಾಸದಃ ॥೫೮॥

ಆಗ ಇರಾವಂತನೂ ಸಹ ಅಂತರಿಕ್ಷಕ್ಕೆ ಹಾರಿ ತನ್ನ ಮಾಯೆಗಳಿಂದ ಅಲಂಬುಸನನ್ನು ಮರುಳುಗೊಳಿಸುತ್ತಾ ಕಾಮರೂಪವನ್ನೂ ಮತ್ತು ಹತ್ತಿರ ಸುಳಿಯಲು ಅಸಾಧ್ಯನಾದವನೂ, ಎಲ್ಲ ಮರ್ಮಗಳನ್ನು ತಿಳಿದವನೂ ಆದ ಅವನು ಅಲಂಬುಸನ ಶರೀರವನ್ನು ಬಾಣಗಳಿಂದ ಕತ್ತರಿಸಿದನು.

ತಥಾ ಸ ರಾಕ್ಷಸಶ್ರೇಷ್ಠಃ ಶರ್ಯೈಃ ಕೃತ್ತಃ ಪುನಃ ಪುನಃ ।
ಸಂಬಭೂವ ಮಹಾರಾಜ ಸಮವಾಪ ಚ ಯೌವನಮ್ ॥೫೯॥

ಎಲೈ ಮಹಾರಾಜನೇ, ಹಾಗೆ ಪುನಃ ಪುನಃ ಕತ್ತರಿಸಲ್ಪಡುತ್ತಿರಲು ಆ ರಾಕ್ಷಸಶ್ರೇಷ್ಠನು ಪುನಃ ಪುನಃ ಶರೀರವನ್ನು ಧರಿಸಿ ಯೌವನಭರಿತನಾದನು.

ಮಾಯಾ ಹಿ ಸಹಜಾ ತೇಷಾಂ ವಯೋ ರೂಪಂ ಚ ಕಾಮಜಮ್ ।
ಏವಂ ತದ್ರಾಕ್ಷಸಸ್ಯಾಂಗಂ ಛಿನ್ನಂ ಛಿನ್ನಂ ವ್ಯರೋಹತ ॥೬೦॥

ಅವರಿಗೆ ಇಂತಹ ಮಾಯೆಗಳು ಸಹಜವಾದವು. ಮತ್ತು ಬಯಸಿದಂತೆ ವಯಸ್ಸು ಮತ್ತು ರೂಪವುಂಟಾಗುತ್ತದೆ. ಆ ಕಾರಣದಿಂದ ಆ ರಾಕ್ಷಸನ ಶರೀರವು ಕತ್ತರಿಸಲ್ಪಟ್ಟರೂ ಪುನಃ ಪುನಃ ಬೆಳೆಯಿತು.

ಇರಾವಾನಪಿ ಸಂಕ್ರುದ್ಧೋ ರಾಕ್ಷಸಂ ತಂ ಮಹಾಬಲಮ್ ।
ಪರಶ್ವಧೇನ ತೀಕ್ಷ್ಣೇನ ಚಿಚ್ಛೇದ ಚ ಪುನಃ ಪುನಃ ॥೬೧॥

ಬಹಳ ಕೋಪಗೊಂಡ ಇರಾವಂತನೂ ಕೂಡ ಮಹಾಬಲನಾದ ಆ ರಾಕ್ಷಸನನ್ನು ಹರಿತವಾದ ತನ್ನ ಕೊಡಲಿಯಿಂದ ಪುನಃ ಪುನಃ ಕತ್ತರಿಸಿದನು.

ಸ ತೇನ ಬಲಿನಾ ವೀರಶ್ಛಿದ್ಯಮಾನ ಇವ ದ್ರುಮಃ ।
ರಾಕ್ಷಸೋ ವ್ಯನದದ್ ಘೋರಂ ಸ ಶಬ್ದಸ್ತುಮುಲೋಽಭವತ್ ॥೬೨॥

ಬಲಿಷ್ಠನಾದ ಇರಾವಂತನಿಂದ ಹಾಗೆ ಕತ್ತರಿಸಲ್ಪಡುವ ವೀರನಾದ ರಾಕ್ಷಸನು ಕತ್ತರಿಸಿದ ವೃಕ್ಷದಂತೆ ಪುನಃ ಬೆಳೆದು ಘೋರವಾದ ನಾದವನ್ನು ಮಾಡಿದನು. ಆ ಶಬ್ದವು ತೀವ್ರವಾಗಿದ್ದಿತು.

ಪರಶ್ವಧಕ್ಷತಂ ರಕ್ಷಃ ಸುಸ್ರಾವ ರುಧಿರಂ ಬಹು ।
ತತಶ್ಚುಕ್ರೋಧ ಬಲವಾಂಶ್ಚಕ್ರೇ ವೇಗಂ ಚ ಸಂಯುಗೇ ॥೬೩॥

ಕೊಡಲಿಯಿಂದ ಕಡಿಯಲ್ಪಟ್ಟ ಆ ರಾಕ್ಷಸನು ಬಹಳ ರಕ್ತವನ್ನು ಸುರಿಸಿದನು. ಬಲಿಷ್ಠನಾದ ಅವನು ಅದರಿಂದ ಕೋಪಗೊಂಡು ಯುದ್ಧದಲ್ಲಿ ತನ್ನ ವೇಗವನ್ನು ಹೆಚ್ಚಿಸಿದನು.

ಆರ್ಷ್ಯಶೃಂಗಿಸ್ತತೋ ದೃಷ್ಟ್ವಾ ಸಮರೇ ಶತ್ರುಮೋರ್ಜಿತಮ್ ।
ಕೃತ್ವಾ ಘೋರಂ ಮಹದ್ರೂಪಂ ಗ್ರಹೀತುಮುಪಚಕ್ರಮೇ ।
ಸಂಗ್ರಾಮಶಿರಸೋ ಮಧ್ಯೇ ಸರ್ವೇಷಾಂ ತತ್ರ ಪಶ್ಯತಾಮ್ IIL೪II

ಅಲಂಬುಸನು ಯುದ್ಧದಲ್ಲಿ ಶತ್ರುವು ಬಲೋನ್ಮದ್ದನಾಗಿರುವುದನ್ನು ನೋಡಿ ಘೋರವಾದ ರೂಪವನ್ನು ಧರಿಸಿ, ಘೋರವಾದ ಯುದ್ಧದ ಮಧ್ಯದಲ್ಲಿ ಎಲ್ಲರೂ ನೋಡುತ್ತಿರುವಂತೆ ಅವನನ್ನು ಹಿಡಿಯಲು ಉಪಕ್ರಮಿಸಿದನು.

ತಾಂ ದೃಷ್ಟ್ವಾ ತಾದೃಶೀಂ ಮಾಯಾಂ ರಾಕ್ಷಸಸ್ಯ ಮಹಾತ್ಮನಃ ।
ಇರಾವಾನಪಿ ಸಂಕ್ರುದ್ಧೋ ಮಾಯಾಂ ಶತ್ರೋಃ ಪ್ರಚಕ್ರಮೇ IIL೫II

ಮಹಾಪ್ರಯತ್ನಶೀಲನಾದ ರಾಕ್ಷಸನ ಅಂತಹ ಮಾಯೆಯನ್ನು ನೋಡಿ ಕೋಪಗೊಂಡ ಇರಾವಂತನೂ ಸಹ ತಾನೂ ಮಾಯಾಸೃಷ್ಟಿಯನ್ನು ಮಾಡಲು ಪ್ರಾರಂಭಿಸಿದನು.

ತಸ್ಯ ಕ್ರೋಧಾಭಿಭೂತಸ್ಯ ಸಂಯುಗೇಷ್ವನಿವರ್ತಿನಃ ।
ಯೋಽನ್ವಯೋ ಮಾತೃಪಕ್ಷಸ್ಯ ಸ ಏನಮಭಿದೇವಿವಾನ್ IIL೬II

ಸ ನಾಗೈರ್ಬಹುತೋ ರಾಜನ್ ಸರ್ಪತಃ ಸಂವೃತೋ ರಣೇ ।
ದಧಾರ ಸುಮಹದ್ರೂಪಮನಂತ ಇವ ಭೋಗವಾನ್ ।
ತತೋ ಬಹುವಿಧೈರ್ನಾಗೈಶ್ಚಾದಯಾಮಾಸ ರಾಕ್ಷಸಮ್ IIL೭II

ಯುದ್ಧದಿಂದ ಹಿಮ್ಮೆಟ್ಟದಿರುವ ಕ್ರೋಧಾಭಿಭೂತನಾದ ಅವನ ತಾಯಿಯ ವಂಶವೆಲ್ಲವೂ ಅವನನ್ನು ಬಂದು ಸೇರಿತು. ಎಲೈ ರಾಜನೇ, ಅವನು ರಣರಂಗದಲ್ಲಿ ಅನೇಕ ಸರ್ಪಗಳಿಂದ ಎಲ್ಲ ಕಡೆಯಲ್ಲಿಯೂ ಸಂವೃತನಾಗಿ ಅನಂತನಂತೆ ದೊಡ್ಡ ಶರೀರವನ್ನು ಧರಿಸಿದ ಮಹಾರೂಪವನ್ನು ಧರಿಸಿದನು. ಅನಂತರ ಅನೇಕ ವಿಧವಾದ ಸರ್ಪಗಳಿಂದ ರಾಕ್ಷಸನನ್ನು ಮುಚ್ಚಿಹಾಕಿದನು.

ಧಾದ್ಯಮಾನಸ್ತು ನಾಗೈಃ ಸ ಧೃತ್ವಾ ರಾಕ್ಷಸಯೋಗಮ್ ।
ಸೌಪರ್ಣಂ ರೂಪಮಾಸ್ಥಾಯ ಭೃಶಯಾಮಾಸ ಪನ್ನಗಾನ್ IIL೮II

ಅಲಂಬುಸನು ಹೀಗೆ ಸರ್ಪಗಳಿಂದ ಮುಚ್ಚಲ್ಪಡುತ್ತಿರಲು ರಾಕ್ಷಸಶ್ರೇಷ್ಠನಾದ ಅವನು ಗರುಡನ ರೂಪವನ್ನು ಧರಿಸಿ ಆ ಸರ್ಪಗಳನ್ನು ಭಕ್ಷಿಸಿದನು.

ಮಾಯಯಾ ಭಕ್ಷಿತೇ ತಸ್ಮಿನ್ನನ್ವಯೇ ತಸ್ಯ ಮಾತೃಕೇ ।
ವಿಮೋಹಿತಮಿರಾವಂತಮಸಿನಾ ರಾಕ್ಷಸೋಽವಧೀತ್ ॥೬೯॥

ತನ್ನ ತಾಯಿಯ ವಂಶಕ್ಕೆ ಸೇರಿದ ಸರ್ಪಗಳು ಅಲಂಬುಸನಿಂದ ಭಕ್ಷಿಸಲ್ಪಡಲು ಕರ್ತವ್ಯಪ್ರಜ್ಞೆಯನ್ನು ಕಳೆದುಕೊಂಡ ಇರಾವಂತನ ಕಡೆಗೆ ಧಾವಿಸಿ ರಾಕ್ಷಸನು ಖಡ್ಗದಿಂದ ಅವನನ್ನು ಕತ್ತರಿಸಿದನು.

ಸಕುಂಡಲಂ ಸಮುಕುಟಂ ಪದ್ಮೇಂದುಸದೃಶಪ್ರಭಮ್ ।
ಇರಾವತಃ ಶಿರೋ ರಕ್ಷಃ ಪಾತಯಾಮಾಸ ಭೂತಳೇ ॥೭೦॥

ಕಿರೀಟ-ಕುಂಡಲಗಳಿಂದ ಸಹಿತವಾದ, ಪದ್ಮದ ಮತ್ತು ಚಂದ್ರನ ಕಾಂತಿಯನ್ನು ಹೊಂದಿದ ಇರಾವಂತನ ಶಿರಸ್ಸನ್ನು ರಾಕ್ಷಸನು ಭೂತಳದಲ್ಲಿ ಕೆಡವಿದನು.

ತಸ್ಮಿಂಸ್ತು ನಿಹತೇ ವೀರೇ ರಾಕ್ಷಸೇನಾರ್ಜುನಾತ್ಮಜೇ ।
ವಿಶೋಕಾಃ ಸಮಪದ್ಯಂತ ಧಾರ್ತರಾಷ್ಟ್ರಾಃ ಸರಾಜಕಾಃ ॥೭೧॥

ಅರ್ಜುನನ ಪುತ್ರನಾದ ಆ ವೀರನು ಹಾಗೆ ಹತನಾಗುತ್ತಿರಲು ಧೃತರಾಷ್ಟ್ರಪುತ್ರರೂ ಮತ್ತು ಉಳಿದ ರಾಜರೂ ಸಮಾಧಾನಗೊಂಡರು.

ತಸ್ಮಿನ್ ಮಹತಿ ಸಂಗ್ರಾಮೇ ತಾದೃಶೇ ಭೈರವೇ ಪುನಃ ।
ಮಹಾನ್ ವ್ಯತಿಕರೋ ಘೋರಃ ಸೇನಯೋಃ ಸಮಪದ್ಯತ ॥೭೨॥

ಆ ದೊಡ್ಡ ಭಯಂಕರವಾದ ಸಂಗ್ರಾಮದಲ್ಲಿ ಪುನಃ ಎರಡು ಸೇನೆಗಳಿಗೆ ಘೋರವಾದ ದೊಡ್ಡ ಮಿಶ್ರಣವು ಉಂಟಾಯಿತು.

ಹಯಾ ಗಜಾಃ ಪದಾತಾಶ್ಚ ವಿಮಿಶ್ರಾ ದಂತಿಭಿರ್ಹತಾಃ ।
ರಥಾಶ್ಚ ದಂತಿನಶ್ಚೈವ ಪತ್ತಿಭಸ್ತತ್ರ ಸೂದಿತಾಃ ॥೭೩॥

ಅಶ್ವಗಳು, ಗಜಗಳು ಮತ್ತು ಪದಾತಿಗಳು ಮಿಶ್ರಣಗೊಂಡು ಗಜಗಳಿಂದ ಹತವಾದರು. ರಥರೂ ಮತ್ತು ಗಜಗಳೂ ಪದಾತಿಗಳಿಂದಲೂ ಅಲ್ಲಿ ಹತರಾದರು.

ತಥಾ ಪತ್ತಿರಥೈಶ್ಚಾಶ್ವ ಹಯಾಶ್ಚ ಬಹವೋ ರಣೇ ।
ರಥಿಭಿರ್ನಿಹತಾ ರಾಜಂಸ್ತವ ತೇಷಾಂ ಚ ಸಂಕುಲೇ ॥೭೪॥

ಎಲೈ ರಾಜನೇ, ನಿನಗೂ ಮತ್ತು ಪರರಿಗೂ ಸಂಕುಲ ಯುದ್ಧವು ಜರುಗಿದಾಗ ಹಾಗೆಯೇ ರಥರಿಂದ ಪದಾತಿಗಳೂ, ರಥರೂ ಮತ್ತು ಅನೇಕ ಅಶ್ವಗಳೂ ಯುದ್ಧದಲ್ಲಿ ಹತವಾದವು.

ಅಜಾನನ್ನರ್ಜುನಶ್ಚಾಪಿ ನಿಹತಂ ಪುತ್ರಮೌರಸಮ್ ।
ಜಘಾನ ಸಮರೇ ಶೂರಾನ್ ರಾಜ್ಞಸ್ತಾನ್ ಭೀಷ್ಮರಕ್ಷಿಣಃ ॥೭೫॥

ಅರ್ಜುನನು ತನ್ನ ಔರಸಪುತ್ರನು ಹತನಾಗಿರುವುದನ್ನು ತಿಳಿಯದೆ ಭೀಷ್ಮರ ರಕ್ಷಕರಾಗಿದ್ದ ಶೂರರಾದ ಆ ರಾಜರನ್ನು ಯುದ್ಧದಲ್ಲಿ ಕೊಂದನು.

ತಥೈವ ತಾವಕಾ ರಾಜನ್ ಸೃಂಜಯಾಶ್ಚ ಮಹಾಬಲಾಃ ।
ಜುಹ್ವತಃ ಸಮರೇ ಪ್ರಾಣಾನ್ ನಿಜಘ್ನುರಿತರೇತರಮ್ ॥೭೬॥

ಎಲೈ ರಾಜನೇ, ಹಾಗೆಯೇ ನಿನ್ನವರು ಮತ್ತು ಮಹಾಬಲರಾದ ಸೃಂಜಯರೂ ಸಹ ಯುದ್ಧದಲ್ಲಿ ತಮ್ಮ ಪ್ರಾಣಗಳನ್ನು ಹೋಮಿಸುವ ಒಬ್ಬರನ್ನೊಬ್ಬರು ಪರಸ್ಪರವಾಗಿ ಕೊಂದರು.

ಮುಕ್ತಕೇಶಾ ಏಕವಚಾ ವಿರಥಾಶ್ಚಿನ್ನಕಾರ್ಮುಕಾಃ ।
ಬಾಹುಭಿಃ ಸಮಯುದ್ಧ್ಯಂತ ಸಮವೇತಾಃ ಪರಸ್ಪರಮ್ ॥೭೭॥

ತಲೆಕೂದಲುಗಳನ್ನು ಕೆದರಿಕೊಂಡು, ಕವಚವಿಲ್ಲದೆ, ರಥಹೀನರಾಗಿ, ಧನುಸ್ಸುಗಳು ಕತ್ತರಿಸಲ್ಪಟ್ಟು, ಒಬ್ಬರನ್ನೊಬ್ಬರು ಸಂಧಿಸಿ ಬಾಹುಯುದ್ಧವನ್ನು ಮಾಡಿದರು.

ತಥಾ ಮರ್ಮಾತಿಗೈರ್ಭೀಷ್ಮೋ ನಿಜಘಾನ ಮಹಾರಥಾನ್ ।
ಕಂಪಯನ್ ಸಮರೇ ಸೇನಾಂ ಪಾಂಡವಾನಾಂ ಮಹಾಬಲಃ ॥೭೮॥

ಹಾಗೆಯೇ ಮಹಾಬಲರಾದ ಭೀಷ್ಮರು ಯುದ್ಧದಲ್ಲಿ ಪಾಂಡವರ ಸೈನ್ಯವನ್ನು ನಡುಗಿಸುತ್ತಾ ಮಹಾರಥರನ್ನು ಮರ್ಮಭೇದಕವಾದ ಬಾಣಗಳಿಂದ ಸಂಹರಿಸಿದರು.

ತೇನ ಯೌಧಿಷ್ಠಿರೇ ಸೈನ್ಯೇ ಬಹವೋ ಮಾನವಾ ಹತಾಃ ।
ದಂತಿನಃ ಸಾದಿನಶ್ಚೈವ ರಥಿನೋऽಥ ಹಯಾಸ್ತಥಾ ॥೭೯॥

ಅವರಿಂದ ಧರ್ಮರಾಜನ ಸೈನ್ಯದಲ್ಲಿ ಅನೇಕ ಯೋಧರು, ಗಜಗಳು, ಅಶ್ವಾರೋಹಿಗಳು ಮತ್ತು ರಥಿಕರು ಹತರಾದರು.

ತತ್ರ ಭಾರತ ಭೀಷ್ಮಸ್ಯ ರಣೇ ದೃಷ್ಟ್ವಾ ಪರಾಕ್ರಮಮ್ ।
ಅತ್ಯದ್ಭುತಮಪಶ್ಯಾಮ ಶಕ್ರಸ್ಯೇವ ಪರಾಕ್ರಮಮ್ ॥೮೦॥

ಎಲೈ ಭಾರತನೇ, ಆ ಯುದ್ಧದಲ್ಲಿ ಇಂದ್ರನ ಪರಾಕ್ರಮದಂತಿದ್ದ ಭೀಷ್ಮರ ಅತ್ಯದ್ಭುತ ಪರಾಕ್ರಮವನ್ನು ನಾವು ನೋಡಿದೆವು.

ತಥೈವ ಭೀಮಸೇನಸ್ಯ ಪಾರ್ಷತಸ್ಯ ಚ ಭಾರತ ।
ರೌದ್ರಮಾಸೀತ್ ತದಾ ಯುದ್ಧಂ ಸಾತ್ವತಸ್ಯ ಚ ಧನ್ವಿನಃ ॥೮೧॥

ಎಲೈ ಭಾರತನೇ, ಹಾಗೆಯೇ ಭೀಮಸೇನನಿಗೂ ಮತ್ತು ಧೃಷ್ಟದ್ಯುಮ್ನನಿಗೂ ಸಾತ್ವತನೂ, ಧನುರ್ಧಾರಿಯೂ ಆದ ಕೃತವರ್ಮನ ಜೊತೆಯಲ್ಲಿ ಘೋರವಾದ ಯುದ್ಧವು ನಡೆಯಿತು.

ದೃಷ್ಟ್ವಾ ದ್ರೋಣಸ್ಯ ವಿಕ್ರಾಂತಂ ಪಾಂಡವಾನ್ ಭಯಮಾವಿಶತ್ ।
ಏಕ ಏವ ರಣೇ ಶಕ್ತೋ ಹಂತುಮಸ್ಮಾನ್ ಸಸೈನಿಕಾನ್ ॥೮೨॥

ಕಂ ಪುನಃ ಪೃಥಿವೀಶೂರೈರ್ಯೋಧವ್ರಾತೈಃ ಸಮಾವೃತಃ ।
ಇತ್ಯಬ್ರುವನ್ ಮಹಾರಾಜ ರಣೇ ದ್ರೋಣೇನ ಪೀಡಿತಾಃ ॥೮೩॥

ಎಲೈ ಮಹಾರಾಜನೇ, ಹಾಗೆಯೇ ದ್ರೋಣರ ಪರಾಕ್ರಮವನ್ನು ನೋಡಿ ಪಾಂಡವರಿಗೆ ಭಯ ಉಂಟಾಯಿತು. ಸೈನಿಕರಿಂದ ಒಡಗೂಡಿದ ನಮ್ಮನ್ನು ಕೊಲ್ಲಲು ಅವರೊಬ್ಬರೇ ಸಮರ್ಥರಾಗಿದ್ದಾರೆ. ಇನ್ನು ಭೂಮಿಯಲ್ಲಿ ಶೂರರಾದ ಯೋಧರ ಸಮೂಹದಿಂದ ಅವರು ಸಮಾವೃತರಾಗಿರುವಾಗ ಹೇಳಬೇಕಾದುದೇನು! ಎಂದು ಯುದ್ಧದಲ್ಲಿ ದ್ರೋಣರ ಬಾಣಗಳಿಂದ ಪೀಡಿತರಾದ ಪಾಂಡವರು ಮಾತನಾಡಿಕೊಂಡರು.

ವರ್ತಮಾನೇ ತಥಾ ರೌದ್ರೇ ಸಂಗ್ರಾಮೇ ಭರತರ್ಷಭ ।
ಉಭಯೋಃ ಸೇನಯೋಃ ಶೂರಾ ನಾಮೃಷ್ಯಂತ ಪರಸ್ಪರಮ್ ॥೮೪॥

ಎಲೈ ಭರತಶ್ರೇಷ್ಠನೇ, ಭಯಂಕರವಾದ ಯುದ್ಧವು ಆ ರೀತಿಯಲ್ಲಿ ನಡೆಯುತ್ತಿರಲು ಎರಡೂ ಸೈನ್ಯಗಳ ಶೂರರು ಒಬ್ಬರನ್ನೊಬ್ಬರು ಸಹಿಸಲಿಲ್ಲ.

ಆವಿಷ್ಟಾ ಇವ ಯುಧ್ಯಂತೇ ರಕ್ಷೋಭೂತಾ ಮಹಾಬಲಾಃ ।
ತಾವಕಾಃ ಪಾಂಡವೇಯಾಶ್ಚ ಸಂರಬ್ಧಾಸ್ತಾತ ಧನ್ವಿನಃ ॥೮೫॥

ರಾಕ್ಷಸರಿಂದ ಅಥವಾ ಪಿಶಾಚಿಗಳಿಂದ ಆವಿಷ್ಟರಾದವರಂತೆ ಮಹಾಬಲರಾದ ನಿನ್ನವರು ಮತ್ತು ಪಾಂಡವರು ಧನುರ್ಧಾರಿಗಳಾಗಿ ಕ್ರೋಧಗೊಂಡು ಯುದ್ಧವನ್ನು ಮಾಡಿದರು.

ನ ಸ್ಮ ಪಶ್ಯಾಮಹೇ ಕಂಚಿದ್ ಯಃ ಪ್ರಾಣಾನ್ ಪರಿರಕ್ಷತಿ ।
ಸಂಗ್ರಾಮೇ ದೈತ್ಯಸಂಕಾಶೇ ತಸ್ಮಿನ್ ಯೋದ್ಧಾ ನರಾಧಿಪ ॥೮೬॥

ಎಲೈ ರಾಜನೇ, ದೈತ್ಯಾಕಾರದ ಆ ಯುದ್ಧದಲ್ಲಿ ಪ್ರಾಣಗಳನ್ನು ರಕ್ಷಿಸಿಕೊಳ್ಳಲು ಬಯಸುವ ಯಾವ ಯೋಧನನ್ನೂ ನಾವು ಕಾಣಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಷಡಶೀತಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಷಟ್‌ಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಎಂಬತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯ - ೨೫ನೇ ಅಧ್ಯಾಯ

ಸ ಭೀಮಪುತ್ರಸ್ಯ ಜಘಾನ ಮಂತ್ರಿಣೋ
ಮಹಾಬಲಾಂಶ್ಚತುರೋಽನ್ಯಾಂಸ್ತಥೈವ ।
ಹತಾವಶೇಷೇಷು ಚ ವಿದ್ರವತ್ಸು
ಘಟೋತ್ಕಚೋಽಭ್ಯಾಹನದಾಶು ತಂ ನೃಪಮ್ ॥೮೮॥

ದುರ್ಯೋಧನನು ಘಟೋತ್ಕಚನ ನಾಲ್ಕು ಮಂದಿ ಮಹಾಬಲಶಾಲಿಗಳಾದ ಸಹಾಯಕರನ್ನು ಕೊಂದನು. ಹಾಗೇ ಇತರರನ್ನೂ ಕೊಂದನು. ಅಳಿದುಳಿದ ಸೈನಿಕರು ಓಡಿಹೋದಾಗ ಘಟೋತ್ಕಚನು ಬೇಗನೆ ದುರ್ಯೋಧನನನ್ನು ಹೊಡೆದನು.

ಸ ಪೀಡ್ಯಮಾನೋ ಯುಧಿ ತೇನ ರಕ್ಷಸಾ
ಪ್ರವೇಶಯಾಮಾಸ ಶರಂ ಘಟೋತ್ಕಚೇ ।
ದೃಢಾಹತಸ್ತೇನ ತದಾ ಬಲೀಯಸಾ
ಘಟೋತ್ಕಚಃ ಪ್ರವ್ಯಥಿತೇಂದ್ರಿಯೋ ಭೃಶಮ್ ।
ತಸ್ಥೌ ಕಥಂಚಿದ್ ಭುವಿ ಪಾತ್ಯಮಾನಃ
ಪುನಃ ಶರಾನಪ್ಯಸೃಜತ್ ಸುಯೋಧನೇ ॥೮೯॥

ದುರ್ಯೋಧನನು, ಯುದ್ಧದಲ್ಲಿ ಘಟೋತ್ಕಚನಿಂದ ಪೀಡಿತನಾಗುತ್ತಿದ್ದಂತೆ, ಘಟೋತ್ಕಚನ ಮೈಯೊಳಗೆ ಬಾಣವನ್ನು ತೂರಿದ. ಬಲಿಷ್ಠವಾದ ದುರ್ಯೋಧನನಿಂದ ಬಲವಾಗಿ ಹೊಡೆಸಿಕೊಂಡ ಘಟೋತ್ಕಚನ ಇಂದ್ರಿಯಗಳೆಲ್ಲವೂ ಬಹಳ ಗಾಯಗೊಂಡವು. ನೆಲದಲ್ಲಿ ಕೆಡವಲ್ಪಡುತ್ತಲೇ ಅವನು ಹೇಗೋ ಸಾವರಿಸಿಕೊಂಡು ನಿಂತು, ಪುನಃ ದುರ್ಯೋಧನನ ಮೇಲೆ ಬಾಣಗಳನ್ನೆಸೆದನು.

ಚಿರಪ್ರಯುದ್ಧೌ ನೃಪರಾಕ್ಷಸಾಧಿಪೌ
ಪರಸ್ಪರಾಜೇಯತಮೌ ರಣಾಜಿರೇ ।
ದ್ರೋಣಾದಯೋ ವೀಕ್ಷ್ಯ ರಿರಕ್ಷಿಷಂತಃ
ಸುಯೋಧನಂ ಪ್ರಾಪುರಮಿತ್ರಸಾಹಾಃ ॥೯೦॥

ದುರ್ಯೋಧನ-ಘಟೋತ್ಕಚರು ರಣರಂಗದಲ್ಲಿ ದೀರ್ಘಕಾಲ ಯುದ್ಧ ಮಾಡಿದರು. ಆದರೆ ಒಬ್ಬರಿಗೊಬ್ಬರು ಸೋಲಲಿಲ್ಲ. ಶತ್ರುಗಳನ್ನು ಸಮರ್ಥವಾಗಿ ಎದುರಿಸಬಲ್ಲ ದ್ರೋಣ ಮುಂತಾದವರು ನೋಡಿ ದುರ್ಯೋಧನನನ್ನು ರಕ್ಷಿಸಲು ಅವನ ಬಳಿಗೆ ಬಂದರು.

ಸದ್ರೋಣಶಲ್ಯೌ ಗುರುಪುತ್ರಗೌತಮೌ
ಭೂರಿಶ್ರವಃ ಕೃತವರ್ಮಾದಿಕಾಂಶ್ಚ ।

ವವರ್ಷ ಬಾಣೈರ್ಗಗನಂ ಸಮಾಶ್ರಿತೋ
ಘಟೋತ್ಕಚಃ ಸ್ಥೂಲತಮೈಃ ಸುವೇಗೈಃ ॥೯೦॥

ದ್ರೋಣ, ಶಲ್ಯ, ಅಶ್ವತ್ಥಾಮ, ಕೃಪ, ಭೂರಿಶ್ರವ, ಕೃತವರ್ಮಾದಿಗಳ ಮೇಲೆ ಆಕಾಶದಲ್ಲಿ ನಿಂತಿದ್ದ ಘಟೋತ್ಕಚನು ಅತಿ ದೊಡ್ಡ ಗಾತ್ರದ, ಬಲು ವೇಗದ ಬಾಣಗಳ ಮಳೆಗರೆದನು.

ತಮೇಕಮಗ್ರೈ ರಥಿಭಿಃ ಪರಿಷ್ಕೃತಂ
ನಿರೀಕ್ಷ್ಯ ಭೀಮೋಽಭ್ಯಗಮತ್ ಸಮಸ್ತಾನ್ ।
ದ್ರೋಣೋಽತ್ರ ಭೀಮಪ್ರಹಿತೈಃ ಶರೋತ್ತಮೈಃ
ಸುಪೀಡಿತಃ ಪ್ರಾಪ್ತಮೂರ್ಛಃ ಪಪಾತ ॥೯೨॥

ಒಬ್ಬ ಘಟೋತ್ಕಚನು ಅನೇಕ ಶ್ರೇಷ್ಠ ರಥಿಕರಿಂದ ಸುತ್ತುವರಿಯಲ್ಪಟ್ಟುದನ್ನು ಕಂಡು ಭೀಮ ಎಲ್ಲರನ್ನೂ ಆಕ್ರಮಿಸಿದನು. ಆಗ ಭೀಮನು ಎಸೆದ ಉತ್ತಮ ಬಾಣಗಳಿಂದ ಬಹಳ ಪೀಡಿತರಾದ ದ್ರೋಣರು ಮೂರ್ಛೆ ಹೊಂದಿ ಬಿದ್ದರು.

ದ್ರೌಣಿಂ ಕೃಪಾದ್ಯಾನ್ ಸಸುಯೋಧನಾಂಶ್ಚ
ಚಕಾರ ಭೀಮೋ ವಿರಥಾನ್ ಕ್ಷಣೇನ ।
ನಿವಾರ್ಯಮಾಣಾಂಸ್ತು ವೃಕೋದರೇಣ
ಘಟೋತ್ಕಚಸ್ತಾನ್ ಪ್ರವವರ್ಷ ಸಾಯಕೈಃ ॥೯೩॥

ಅಶ್ವತ್ಥಾಮ, ದುರ್ಯೋಧನ, ಕೃಪ ಮುಂತಾದವರನ್ನು ಭೀಮ ಕ್ಷಣದಲ್ಲಿ ವಿರಥರನ್ನಾಗಿ ಮಾಡಿದ. ಅವರನ್ನು ಭೀಮ ತಡೆಯುತ್ತಿದ್ದಂತೆ ಘಟೋತ್ಕಚ ಅವರ ಮೇಲೆ ಬಾಣಗಳ ಮಳೆಗರೆದ.

ತೇನಾಂಬರಸ್ಥೇನ ತರುಪ್ರಮಾಣೈಃ
ಅಭ್ಯರ್ದಿತಾ ಕುರವಃ ಸಾಯಕೌಘೈಃ ।
ಭೂಮೌ ಚ ಭೀಮೇನ ಶರೌಘಪೀಡಿತಾಃ
ಪೇತುರ್ನೇದುಃ ಪ್ರಾದ್ರವಂಶ್ಚಾತಿಭೀತಾಃ ॥೯೪॥

ಕೌರವರು ಆಕಾಶದಲ್ಲಿ ನಿಂತ ಘಟೋತ್ಕಚನಿಂದ ಮರಗಳಷ್ಟು ಗಾತ್ರದ ಬಾಣ ಸಮೂಹಗಳಿಂದ ಪೀಡಿಸಲ್ಪಡುತ್ತಾ ನೆಲದಲ್ಲಿಯೂ ಭೀಮನ ಬಾಣ ಪ್ರವಾಹಗಳಿಂದ ಪೀಡಿತರಾಗಿ ಬಿದ್ದರು. ಕೂಗಿದರು, ಅತ್ಯಂತ ಭೀತರಾಗಿ ಪಲಾಯನ ಮಾಡಿದರು.

ಸರ್ವಾಂಶ್ಚ ತಾನ್ ಶಿಬಿರಂ ಪ್ರಾಪಯಿತ್ವಾ
ಏನಾ ಭೀಷ್ಮಂ ಕೌರವಾನ್ ಭೀಮಸೇನಃ ।
ಘಟೋತ್ಕಚಶ್ಚಾನದತಾಂ ಮಹಾಸ್ವನೌ
ನಾದೇನ ಲೋಕಾನಭಿಪೂರಯಂತೌ ॥೯೫॥

ಭೀಷ್ಮನನ್ನು ಹೊರತು ಆ ಎಲ್ಲ ಕೌರವರನ್ನೂ ಶಿಬಿರಕ್ಕೆ ಅಟ್ಟಿ ಭೀಮ ಘಟೋತ್ಕಚರು ಮಹಾಧ್ವನಿ ಮಾಡಿ ಗರ್ಜಿಸಿದರು. ಆ ಧ್ವನಿಯಿಂದ ಲೋಕಗಳನ್ನು ತುಂಬಿಸಿದರು.

ದುರ್ಯೋಧನೋಽಥ ಸ್ವಜನೈಃ ಸಮೇತಃ
ಪುನಃ ಪ್ರಾಯಾದ್ ರಣಭೂಮಿಂ ಸ ಭೀಷ್ಮಮ್ ।
ಜಯೋಪಾಯಂ ಭೈಮಸೇನೇರಪೃಚ್ಛತ್
ಸ್ವಯೈವ ಸ ಪ್ರಾಹ ನ ತಂ ವ್ರಜೇತಿ ॥೯೬॥

ಬಳಿಕ ದುರ್ಯೋಧನ ತಮ್ಮವರೊಂದಿಗೆ ಪುನಃ ರಣಭೂಮಿಗೆ ಹೋದ. ಭೀಷ್ಮರಲ್ಲಿ ಘಟೋತ್ಕಚನನ್ನು ತಾನು ಗೆಲ್ಲುವ ಉಪಾಯವನ್ನು ಕೇಳಿದ. ಭೀಷ್ಮರೆಂದರು 'ನೀನು ಅವನ ಎದುರಿಗೆ ಹೋಗಬೇಡ'.

★ ★ ★ ★ ★

ಎಂಬತ್ತೇಳನೆಯ ಅಧ್ಯಾಯ

ಇರಾವಂತನು ಹತನಾದುದನ್ನು ನೋಡಿ ಘಟೋತ್ಕಚನ ಕ್ರೋಧ.
ಭಯಂಕರನಾದ ಅವನ ಕಡೆಗೆ ದುರ್ಯೋಧನನ ಗಮನ.

ಧೃತರಾಷ್ಟ್ರಃ

ಇರಾವಂತಂ ತು ನಿಹತಂ ದೃಷ್ಟ್ವಾ ಪಾರ್ಥಾ ಮಹಾರಥಾಃ ।
ಸಂಗ್ರಾಮೇ ಕಿಮಕುರ್ವಂತ ತನ್ಮಾಚಕ್ಷ್ವ ಸಂಜಯ ॥೧॥

ಧೃತರಾಷ್ಟ್ರ- ಎಲೈ ಸಂಜಯನೇ, ಇರಾವಂತನು ಹತನಾದುದನ್ನು ನೋಡಿ ಮಹಾರಥರಾದ ಪಾಂಡವರು ಸಂಗ್ರಾಮದಲ್ಲಿ ಏನು ಮಾಡಿದರು ಎಂದು ನನಗೆ ಹೇಳು.

ಸಂಜಯಃ

ಇರಾವಂತಂ ತು ನಿಹತಂ ಸಂಗ್ರಾಮೇ ವೀಕ್ಷ್ಯ ರಾಕ್ಷಸಃ ।
ವ್ಯನದತ್ ಸುಮಹಾನಾದಂ ಭೈಮಸೇನಿರ್ಘಟೋತ್ಕಚಃ ॥೨॥

ನದತಸ್ತಸ್ಯ ಶಬ್ದೇನ ಪೃಥಿವೀ ಸಾಗರಾಂಬರಾ ।
ಸಪರ್ವತವನಾ ರಾಜಂಶ್ಚಚಾಲ ಸುಭೃಶಂ ತದಾ ।
ಅಂತರಿಕ್ಷಂ ದಿಶಶ್ಚೈವ ಸರ್ವಾಶ್ಚ ಪ್ರದಿಶಸ್ತಥಾ ॥೩॥

ಸಂಜಯ– ಇರಾವಂತನು ಯುದ್ಧದಲ್ಲಿ ಹತನಾದುದನ್ನು ನೋಡಿ ಭೀಮಸೇನ ಪುತ್ರನಾದ ಘಟೋತ್ಕಚ ರಾಕ್ಷಸನು ಮಹಾನಾದವನ್ನು ಮಾಡಿದನು. ಎಲೈ ರಾಜನೇ, ಅವನ ಗರ್ಜನೆಯಿಂದ ಉಂಟಾದ ಶಬ್ದದಿಂದ ಪರ್ವತ, ವನಸಹಿತವಾದ ಸಮುದ್ರವಸನವಾದ ಭೂಮಿಯು ಬಹಳವಾಗಿ ನಡುಗಿತು. ಅಂತರಿಕ್ಷವೂ, ದಿಕ್ಕುಗಳೂ ಎಲ್ಲಾ ವಿದಿಕ್ಕುಗಳೂ ಸಹ (ನಡುಗಿದವು).

ತಂ ಶ್ರುತ್ವಾ ಸುಮಹಾನಾದಂ ತವ ಸೈನ್ಯಸ್ಯ ಭಾರತ ।
ಊರುಸ್ತಂಭಃ ಸಮಭವದ್ ವೇಪಥುಃ ಸ್ವೇದ ಏವ ಚ ॥೪॥

ಎಲೈ ಭಾರತನೇ, ಆ ಮಹಾನಾದವನ್ನು ಕೇಳಿದ ನಿನ್ನ ಸೈನ್ಯಕ್ಕೆ ತೊಡೆಗಳು ಸ್ತಂಭಿತವಾದವು. ದೇಹದಲ್ಲಿ ನಡುಕವು ಮತ್ತು ಬೆವರು ಉಂಟಾದವು.

ಸರ್ವ ಏವ ಚ ರಾಜೇಂದ್ರ ತಾವಕಾ ದೀನಚೇತಸಃ ।
ಸರ್ಪಮತ್ ಸಮವೇಷ್ಟಂತ ಸಿಂಹಭೀತಾ ಗಜಾ ಇವ ॥೫॥

ಎಲೈ ರಾಜನೇ, ನಿನ್ನವರೆಲ್ಲರೂ ದೈನ್ಯದಿಂದ ಕೂಡಿದ ಮನಸ್ಸುಳ್ಳವರಾಗಿ ಸಿಂಹಕ್ಕೆ ಹೆದರಿದ ಗಜಗಳಂತೆ, ಸರ್ಪಗಳಂತೆ ಮುದುರಿಕೊಂಡರು.

ನಿನದನ್ ಸುಮಹಾನಾದಂ ನಿರ್ಘಾತಮಿವ ರಾಕ್ಷಸಃ ।
ಜ್ವಲಿತಂ ಶೂಲಮುದ್ಯಮ್ಯ ರೂಪಂ ಕೃತ್ವಾ ವಿಭೀಷಣಮ್ ॥೬॥

ನಾನಾಪ್ರಹರಣೈಶ್ಚೋರ್ಧ್ವೈರ್ವ್ಯತೋ ರಾಕ್ಷಸಪುಂಗವೈಃ ।
ಆಜಗಾಮ ಸುಸಂಕ್ರುದ್ಧಃ ಕಾಲಾಂತಕಯಮೋಪಮಃ ॥೭॥

ರಾಕ್ಷಸನಾದ ಘಟೋತ್ಕಚನು ಸಿಡಿಲಿನಂತೆ ಮಹಾನಾದವನ್ನು ಮಾಡಿ ಭಯಂಕರವಾದ ರೂಪವನ್ನು ಧರಿಸಿ, ಜ್ವಲಿಸುವ ಶೂಲವನ್ನು ಎತ್ತಿ, ನಾನಾವಿಧವಾದ ಆಯುಧಗಳನ್ನು ಧರಿಸಿದ ಘೋರವಾದ ರಾಕ್ಷಸಶ್ರೇಷ್ಠರಿಂದ ಪರಿವೃತನಾಗಿ, ಬಹಳ ಕೋಪದಿಂದ ಕೂಡಿ ಕಾಲಾಂತಕ ಯಮನಂತೆ (ನಿನ್ನ ಸೈನ್ಯದ ಕಡೆಗೆ) ಬಂದನು.

ತಮಾಪತಂತಂ ಸಂಪ್ರೇಕ್ಷ್ಯ ಸಂಕ್ರುದ್ಧಂ ಭೀಮದರ್ಶನಮ್ ।
ಸ್ವಬಲಂ ಚ ಭಯಾತ್ ತಸ್ಯ ಪ್ರಾಯಶೋ ವಿಮುಖೀಕೃತಮ್ ॥೮॥

ತತೋ ದುರ್ಯೋಧನೋ ರಾಜಾ ಘಟೋತ್ಕಚಮುಪಾದ್ರವತ್ ।
ಪ್ರಗೃಹ್ಯ ವಿಪುಲಂ ಚಾಪಂ ಸಿಂಹವದ್ ವಿನದನ್ ಮುಹುಃ ॥೯॥

ಭಯಂಕರವಾದ ರೂಪವುಳ್ಳ ಅವನು ಕ್ರೋಧಗೊಂಡು ತನ್ನ ಸೈನ್ಯದ ಕಡೆಗೆ ಬರುತ್ತಿರುವುದನ್ನು ಮತ್ತು ತನ್ನ ಸೈನ್ಯವು ಪ್ರಾಯಶಃ ಯುದ್ಧ ವಿಮುಖವಾಗಿರುವುದನ್ನು ಗಮನಿಸಿದ ರಾಜನಾದ ದುರ್ಯೋಧನನು ದೊಡ್ಡ ಬಿಲ್ಲನ್ನು ಹಿಡಿದು ಸಿಂಹದಂತೆ ಪುನಃ ಪುನಃ ಗರ್ಜನೆಯನ್ನು ಮಾಡುತ್ತಾ ಘಟೋತ್ಕಚನ ಕಡೆಗೆ ಸಾಗಿದನು.

ಹೃಷ್ಟತೋऽನುಯಯೌ ಚೈನಂ ಸ್ರವದ್ಭಿಃ ಪರ್ವತೋಪಮೈಃ ।
ಕುಂಜರೈರ್ದಶಸಾಹಸ್ರೈರ್ವಂಗಾನಾಮಧಿಪಃ ಸ್ವಯಮ್ ॥೧೦॥

ಅವನ ಹಿಂದೆ ಮದೋದಕವನ್ನು ಸುರಿಸುವ ಪರ್ವತ ಸದೃಶವಾದ ಹತ್ತು ಸಹಸ್ರ ಆನೆಗಳಿಂದ ಕೂಡಿದ ವಂಗಾಧಿಪತಿಯು ಸ್ವತಃ ಅವನನ್ನು ಹಿಂಬಾಲಿಸಿದನು.

ತಮಾಪತಂತಂ ಸಂಪ್ರೇಕ್ಷ್ಯ ಗಜಾನೀಕೇನ ಸಂವೃತಮ್ ।
ಪುತ್ರಂ ತವ ಮಹಾರಾಜ ಚುಕೋಪ ಸ ನಿಶಾಚರಃ ॥೧೧॥

ಎಲೈ ಮಹಾರಾಜನೇ, ಗಜಸಮೂಹದ ಜೊತೆಯಲ್ಲಿ ತನ್ನ ಮೇಲೆ ಏರಿ ಬರುತ್ತಿದ್ದ ನಿನ್ನ ಪುತ್ರನನ್ನು ನೋಡಿ ನಿಶಾಚರನಾದ ಘಟೋತ್ಕಚನು ಕೋಪಗೊಂಡನು.

ತತಃ ಪ್ರವವೃತೇ ಯುದ್ಧಂ ತುಮುಲಂ ಲೋಮಹರ್ಷಣಮ್ ।
ರಾಕ್ಷಸಾನಾಂ ಚ ರಾಜೇಂದ್ರ ದುರ್ಯೋಧನಬಲಸ್ಯ ಚ ॥೧೨॥

ಎಲೈ ರಾಜೇಂದ್ರನೇ, ಅನಂತರ ರಾಕ್ಷಸರಿಗೂ ಮತ್ತು ದುರ್ಯೋಧನನ ಸೈನ್ಯಕ್ಕೂ ತೀವ್ರವೂ, ರೋಮಾಂಚಕಾರಿಯೂ ಆದ ಯುದ್ಧವು ಪ್ರಾರಂಭವಾಯಿತು.

ಗಜಾನೀಕಂ ಚ ಸಂಪ್ರೇಕ್ಷ್ಯ ಮೇಘವೃಂದಮಿವೋದ್ಯತಮ್ ।
ಅಭ್ಯಧಾವಂತ ಸಂಕ್ರುದ್ಧಾ ರಾಕ್ಷಸಾಃ ಶಸ್ತ್ರಪಾಣಯಃ ॥೧೩॥

ಮೋಡಗಳ ಸಮೂಹದಂತೆ ಬಂದ ಆನೆಗಳ ಸಮೂಹಗಳನ್ನು ನೋಡಿ ಶಸ್ತ್ರಪಾಣಿಗಳಾದ ರಾಕ್ಷಸರು ಕೋಪಗೊಂಡು ಅವುಗಳ ಕಡೆಗೆ ಓಡಿದರು.

ನದಂತೋ ವಿವಿಧಾನ್ ನಾದಾನ್ ಮೇಘಾ ಇವ ಸವಿದ್ಯುತಃ ।
ಶರಶಕ್ತ್ಯೃಷ್ಟಿನಾರಾಚೈರ್ನಿಘ್ನಂತೋ ಗಜಯೋಧಿನಃ ॥೧೪॥

ಭಿಂಡಿಪಾಲೈಸ್ತಥಾ ಶೂಲೈರ್ಮುದ್ಗರೈಃ ಸಪರಶ್ವಧೈಃ ।
ಪರ್ವತಾಗ್ರೈಶ್ಚ ವೃಕ್ಷೈಶ್ಚ ನಿಜಘ್ನುಸ್ತೇ ಮಹಾಗಜಾನ್ ॥೧೫॥

ಮಿಂಚಿನಿಂದ ಕೂಡಿದ ಮೇಘಗಳಂತೆ ವಿವಿಧವಾದ ನಾದಗಳನ್ನು ಗರ್ಜಿಸುತ್ತಾ, ಬಾಣಗಳಿಂದಲೂ, ಶಕ್ತಿ-ಋಷ್ಟಿ-ನಾರಾಚಗಳಿಂದಲೂ, ಭಿಂಡಿಪಾಲಗಳಿಂದಲೂ, ಶೂಲಗಳಿಂದಲೂ, ಮುದ್ಗರಗಳಿಂದಲೂ, ಪರಶ್ವಧಗಳಿಂದಲೂ, ಪರ್ವತದ ಶಿಖರಗಳಿಂದಲೂ, ವೃಕ್ಷಗಳಿಂದಲೂ ಗಜ-ಯೋಧರನ್ನು ಮತ್ತು ಮಹಾಗಜಗಳನ್ನು ಅವರು ಸಂಹರಿಸಿದರು.

ಭಿನ್ನಕುಂಭಾನ್ ವಿರುಧಿರಾನ್ ಭಿನ್ನಗಾತ್ರಾಂಶ್ಚ ವಾರಣಾನ್ ।
ಅಪಶ್ಯಾಮ ಮಹಾರಾಜ ವಧ್ಯಮಾನಾನ್ ನಿಶಾಚರೈಃ ॥೧೬॥

ಎಲೈ ಮಹಾರಾಜನೇ, ಕುಂಭಸ್ಥಲದಿಂದ ರಕ್ತವು ಸೋರುತ್ತಾ ಶರೀರವು ಜಜ್ಜಲ್ಪಟ್ಟ ಗಜಗಳು ನಿಶಾಚರರಿಂದ ಕೊಲ್ಲಲ್ಪಡುವುದನ್ನು ನಾವು ನೋಡಿದೆವು.

ತೇಷು ಪ್ರಕ್ಷೀಯಮಾಣೇಷು ಭಗ್ನೇಷು ಗಜಯೋಧಿಷು ।
ದುರ್ಯೋಧನೋ ಮಹಾರಾಜ ರಾಕ್ಷಸಾನ್ ಸಮುಪಾದ್ರವತ್ ॥೧೭॥

ಆಗ ಆ ಗಜಯೋಧಿಗಳು ಭಗ್ನಗೊಂಡು, ಅವರ ಸಂಖ್ಯೆಯು ಕಡಿಮೆಯಾಗುತ್ತಿರಲು ಎಲೈ ಮಹಾರಾಜನೇ, ದುರ್ಯೋಧನನು ರಾಕ್ಷಸರ ಮೇಲೆ ಎರಗಿದನು.

ಅಮರ್ಷವಶಮಾಪನ್ನಸ್ತ್ಯಕ್ತ್ವಾ ಜೀವಿತಮಾತ್ಮನಃ ।
ಮುಮೋಚ ನಿಶಿತಾನ್ ಬಾಣಾನ್ ರಾಕ್ಷಸೇಷು ಮಹಾಬಲಃ ॥೧೮॥

ಮಹಾಬಲನಾದ ಅವನು ಕ್ರೋಧವಶನಾಗಿ ತನ್ನ ಜೀವಿತದ ಆಸೆಯನ್ನು ತೊರೆದು ರಾಕ್ಷಸರ ಮೇಲೆ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿದನು.

ಜಘಾನ ಚ ಮಹೇಷ್ವಾಸಃ ಪ್ರಧಾನಾಂಸ್ತತ್ರ ರಾಕ್ಷಸಾನ್ ।
ಸಂಕ್ರುದ್ಧೋ ಭರತಶ್ರೇಷ್ಠ ಪುತ್ರೋ ದುರ್ಯೋಧನಸ್ತವ ॥೧೯॥

ಎಲೈ ಭರತಶ್ರೇಷ್ಠನೇ, ನಿನ್ನ ಪುತ್ರನೂ, ಮಹಾಧನುರ್ಧಾರಿಯೂ ಆದ ದುರ್ಯೋಧನನು ಬಹಳ ಕೋಪಗೊಂಡು ಅಲ್ಲಿ ಪ್ರಧಾನರಾದ ರಾಕ್ಷಸರನ್ನು ಕೊಂದನು.

ವೇಗವಂತಂ ಮಹಾರೌದ್ರಂ ವಿದ್ಯುಜ್ಜಿಹ್ವಂ ಪ್ರಮಾಥಿನಮ್ ।
ಶರೈಶ್ಚತುರ್ಭಿಶ್ಚತುರೋ ನಿಜಘಾನ ಮಹಾರಥಃ ॥೨೦॥

ಮಹಾರಥನಾದ ಅವನು ವೇಗವಂತ, ಮಹಾರೌದ್ರ, ವಿದ್ಯುಜ್ಜಿಹ್ವ, ಪ್ರಮಾಥಿ ಎಂಬ ನಾಲ್ಕು ರಾಕ್ಷಸರನ್ನು ನಾಲ್ಕು ಬಾಣಗಳಿಂದ ಸಂಹರಿಸಿದನು.

ತತಃ ಪುನರಮೇಯಾತ್ಮಾ ಶರವರ್ಷಂ ದುರಾಸದಮ್ ।
ಮುಮೋಚ ಭರತಶ್ರೇಷ್ಠ ನಿಶಾಚರಬಲಂ ಪ್ರತಿ ॥೨೧॥

ಎಲೈ ಭರತಶ್ರೇಷ್ಠನೇ, ಪುನಃ ಅಚಿಂತ್ಯವಾದ ಸಾಮರ್ಥ್ಯವುಳ್ಳ ಅವನು ತಡೆಯಲು ಅಸಾಧ್ಯವಾದ ಬಾಣಗಳ ಮಳೆಯನ್ನು ರಾಕ್ಷಸರ ಸೈನ್ಯದ ಮೇಲೆ ಕರೆದನು.

ತತ್ತು ದೃಷ್ಟ್ವಾ ಮಹತ್ಕರ್ಮ ಪುತ್ರಸ್ಯ ತವ ಮಾರಿಷ ।
ಕ್ರೋಧೇನಾಭಿಪ್ರಜಜ್ವಾಲ ಭೈಮಸೇನಿರ್ಮಹಾಬಲಃ ॥೨೨॥

ಎಲೈ ಪೂಜ್ಯನೇ, ನಿನ್ನ ಪುತ್ರನ ಆ ಮಹಾಕಾರ್ಯವನ್ನು ನೋಡಿ ಮಹಾಬಲನೂ, ಭೀಮಸೇನನ ಪುತ್ರನೂ ಆದ ಘಟೋತ್ಕಚನು ಕ್ರೋಧದಿಂದ ಉರಿದನು.

ವಿಸ್ಫಾರ್ಯ ಚ ಮಹಚ್ಚಾಪಮಿಂದ್ರಾಶನಿಸಮಸ್ವನಮ್ ।
ಅಭಿದುದ್ರಾವ ವೇಗೇನ ದುರ್ಯೋಧನಮರಿಂದಮಮ್ ॥೨೩॥

ಇಂದ್ರನ ವಜ್ರಾಯುಧಕ್ಕೆ ಸಮಾನವಾದ ಘೋಷವುಳ್ಳ ತನ್ನ ದೊಡ್ಡ ಧನುಸ್ಸನ್ನು ಎಳೆಯುತ್ತಾ ವೇಗದಿಂದ ಅರಿಂದಮನಾದ ದುರ್ಯೋಧನನ ಕಡೆಗೆ ಓಡಿಬಂದನು.

ತಮಾಪತಂತಮುದ್ವೀಕ್ಷ್ಯ ಕಾಲಸೃಷ್ಟಮಿವಾಂತಕಮ್ ।
ನ ವಿವ್ಯಥೇ ಮಹಾರಾಜ ಪುತ್ರೋ ದುರ್ಯೋಧನಸ್ತವ ॥೨೪॥

ಎಲೈ ಮಹಾರಾಜನೇ, ಕಾಲಸೃಷ್ಟನಾದ ಯಮನಂತೆ ತನ್ನ ಕಡೆಗೆ ಓಡಿಬರುತ್ತಿದ್ದ ಅವನನ್ನು ನೋಡಿ ನಿನ್ನ ಪುತ್ರನಾದ ದುರ್ಯೋಧನನು ವ್ಯಥೆ ಪಡಲಿಲ್ಲ.

ಅಥೈನಮಬ್ರವೀತ್ ಕ್ರುದ್ಧಃ ಕ್ರೂರಃ ಸಂರಕ್ತಲೋಚನಃ ।
ಯೇ ತ್ವಯಾ ಸುನೃಶಂಸೇನ ದೀರ್ಘಕಾಲಂ ಪ್ರವಾಸಿತಾಃ ।
ಯಚ್ಚ ತೇ ಪಾಂಡವಾ ರಾಜಂಶ್ಚಲದ್ಯೂತೇ ಪರಾಜಿತಾಃ ॥೨೫॥

ಯಚ್ಚೈವ ದ್ರೌಪದೀ ಕೃಷ್ಣಾ ಏಕವಸ್ತ್ರಾ ರಜಸ್ವಲಾ ।
ಸಭಾಮಾನೀಯ ದುರ್ಬುದ್ಧೇ ಬಹುಧಾ ಕ್ಲೇಶಿತಾ ತ್ವಯಾ ॥೨೬॥

ತವ ಚ ಪ್ರಿಯಕಾಮೇನ ಆಶ್ರಮಸ್ಥಾ ದುರಾತ್ಮನಾ ।
ಸೈಂಧವೇನ ಪರಿಕ್ಲಿಷ್ಟಾ ಪರಿಭೂಯ ಪಿತೄನ್ ಮಮ ॥೨೭॥

ಏತೇಷಾಮವಮಾನಾನಾಮನ್ಯೇಷಾಂ ಚ ಕುಲಾಧಮ ।
ಅಂತಮದ್ಯ ಗಮಿಷ್ಯಾಮಿ ಯದಿ ನೋತ್ಸೃಜಸೇ ರಣಮ್ ॥೨೮॥

ಅನಂತರ ಕ್ರೂರನೂ, ಕೆಂಪಾದ ಕಣ್ಣುಳ್ಳವನೂ, ಕ್ರೋಧಗೊಂಡವನೂ ಆದ ಘಟೋತ್ಕಚನು ದುರ್ಯೋಧನನನ್ನು ಕುರಿತು ಮಾತನಾಡಿದನು. ಯಾವ ಕ್ರೂರನಾದ ನಿನ್ನಿಂದ ಪಾಂಡವರು ದೀರ್ಘಕಾಲದವರೆಗೆ ರಾಜ್ಯದಿಂದ ಹೊರಗೆ ಕಳುಹಿಸಲ್ಪಟ್ಟಿದ್ದಾರೆಯೋ ಮತ್ತು ಆ ಪಾಂಡವರು ಎಲೈ ರಾಜನೇ, ನಿನ್ನ ಯಾವ ಮೋಸದ ದ್ಯೂತದಲ್ಲಿ ಪರಾಜಿತರಾಗಿದ್ದಾರೆಯೋ ಎಲೈ ದುರ್ಬುದ್ಧಿಯೇ, ರಜಸ್ವಲೆಯೂ, ಏಕವಸ್ತ್ರಳೂ ಆದ ದ್ರೌಪದಿಯನ್ನು ಸಭೆಗೆ ಎಳೆತಂದು ನೀನು ಯಾವ

ಕ್ಲೇಶವನ್ನು ಕೊಟ್ಟಿದ್ದೀಯೋ, ನಿನಗೆ ಪ್ರಿಯವನ್ನು ಮಾಡುವ ಉದ್ದೇಶದಿಂದ ದುರಾತ್ಮನಾದ ಸೈಂಧವನು ನನ್ನ ಪಿತೃಗಳನ್ನು ಕಡೆಗಣಿಸಿ ಆಶ್ರಮದಲ್ಲಿದ್ದ ದ್ರೌಪದಿಗೆ ಯಾವ ಕ್ಲೇಶವನ್ನು ಕೊಟ್ಟಿದ್ದಾನೆಯೋ, ಎಲೈ ಕುಲಾಧಮನೇ, ಇವೆಲ್ಲವುಗಳ ಮತ್ತು ನೀನು ಮಾಡಿದ ಉಳಿದ ಅವಮಾನಗಳ ಪ್ರತೀಕಾರವನ್ನು ನೀನು ರಣರಂಗವನ್ನು ತೊರೆಯದಿದ್ದರೆ ನಾನು ಈ ದಿನ ಮಾಡುವೆನು (ಎಂದು ಹೇಳಿದನು).

ಏವಮುಕ್ತ್ವಾ ತು ಹೈಡಿಂಬೋ ಮಹದ್ ವಿಸ್ಫಾರ್ಯ ಕಾರ್ಮುಕಮ್ ।
ಸಂದಶ್ಯ ದಶನೈರೋಷ್ಠಂ ಸೃಕ್ಕಣೇ ಪರಿಸಂಲಿಹನ್ ॥೨೯॥

ಶರವರ್ಷೇಣ ಮಹತಾ ದುರ್ಯೋಧನಮವಾಕಿರತ್ ।
ಪರ್ವತಂ ವಾರಿಧಾರಾಭಿಃ ಪ್ರಾವೃಷೀವ ಬಲಾಹಕಃ ॥೩೦॥

ಹೀಗೆ ಹೇಳಿ ಹಿಡಿಂಬೆಯ ಪುತ್ರನಾದ ಘಟೋತ್ಕಚನು ತನ್ನ ದೊಡ್ಡ ಧನುಸ್ಸನ್ನು ಎಳೆದು, ಹಲ್ಲುಗಳಿಂದ ತುಟಿಯನ್ನು ಕಚ್ಚಿ, ಕಟಬಾಯನ್ನು ಸವರಿಕೊಳ್ಳುತ್ತಾ, ಮಳೆಗಾಲದಲ್ಲಿ ಮೋಡವು ಪರ್ವತವನ್ನು ಜಲಧಾರೆಗಳನ್ನು ಸುರಿಸಿ ಮುಚ್ಚುವಂತೆ ದುರ್ಯೋಧನನ ಮೇಲೆ ಬಾಣಗಳ ದೊಡ್ಡ ಮಳೆಯನ್ನು ಕರೆದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಸಪ್ತಾಶೀತಿತಮೋऽಧ್ಯಾಯಃ ॥

॥ ಭೀಷ್ಮವಧಪರ್ವಣಿ ಸಪ್ತಚತ್ವಾರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಎಂಬತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೆಂಟನೆಯ ಅಧ್ಯಾಯ

ಘಟೋತ್ಕಚನ ಪರಾಕ್ರಮ.

ಸಂಜಯಃ

ತತಸ್ತದ್ಭೀಮವರ್ಷಂ ತು ದುಃಸಹಂ ದಾನವೈರಪಿ ।
ದಧಾರ ಯುಧಿ ರಾಜೇಂದ್ರೋ ಯಥಾ ವರ್ಷಂ ಮಹಾದ್ವಿಪಃ ॥೧॥

ಸಂಜಯ– ಆಗ ದಾನವರಿಗೂ ಸಹಿಸಲು ಕಷ್ಟವಾದ ಆ ಬಾಣಗಳ ಮಳೆಯನ್ನು ರಾಜೇಂದ್ರನಾದ ದುರ್ಯೋಧನನು ಮಹಾಗಜವು ಮಳೆಯನ್ನು ಧರಿಸಿದಂತೆ ಯುದ್ಧದಲ್ಲಿ ಧರಿಸಿದನು.

ತತಃ ಕ್ರೋಧಸಮಾವಿಷ್ಟೋ ನಿಃಶ್ವಸನ್ನಿವ ಪನ್ನಗಃ ।
ಸಂಶಯಂ ಪರಮಂ ಪ್ರಾಪ್ತಃ ಪುತ್ರಸ್ತೇ ಭರತರ್ಷಭ ॥೨॥

ಮುಮೋಚ ನಿಶಿತಾಂಸ್ತೀಕ್ಷ್ಣಾನ್ ನಾರಾಚಾನ್ ಪಂಚವಿಂಶತಿಮ್ ।
ತೇऽಪತನ್ ಸಹಸಾ ರಾಜಂಸ್ತಸ್ಮಿನ್ ರಾಕ್ಷಸಪುಂಗವೇ ।
ಆಶೀವಿಷಾ ಇವ ಕ್ರುದ್ಧಾಃ ಪರ್ವತೇ ಗಂಧಮಾದನೇ ॥೩॥

ಎಲೈ ಭರತಶ್ರೇಷ್ಠನೇ, ಆಗ ಕ್ರೋಧಸಮಾವಿಷ್ಟವಾದ ನಿನ್ನ ಪುತ್ರನು ಬುಸುಗುಟ್ಟುವ ಸರ್ಪದಂತೆ ಪ್ರಾಣಸಂಶಯವನ್ನು ಹೊಂದಿ ಇಪ್ಪತ್ತೈದು ತೀಕ್ಷ್ಣವಾದ ನಾರಾಚಗಳನ್ನು ಪ್ರಯೋಗಿಸಿದನು. ಎಲೈ ರಾಜನೇ, ಅವು ಆ ರಾಕ್ಷಸಶ್ರೇಷ್ಠನಲ್ಲಿ ಗಂಧಮಾದನ ಪರ್ವತದಲ್ಲಿ ಕೋಪಗೊಂಡ ಸರ್ಪಗಳು ಪ್ರವೇಶಿಸಿದಂತೆ ಬಲವಾಗಿ ಬಿದ್ದವು.

ಸ ತೈರ್ವಿದ್ಧಃ ಸ್ರವನ್ ರಕ್ತಂ ಪ್ರಭಿನ್ನ ಇವ ಕುಂಜರಃ ।
ದಧ್ಯೌ ಮತಿಂ ವಿನಾಶಾಯ ರಾಜ್ಞಃ ಸ ಪಿಶಿತಾಶನಃ ।
ಜಗ್ರಾಹ ಚ ಮಹಾಶಕ್ತಿಂ ಗಿರೀಣಾಮಪಿ ದಾರಣೀಮ್ ॥೪॥

ಸಂಪ್ರದೀಪ್ತಾಂ ಮಹೋಲ್ಕಾಭಾಮಶನೀಂ ಮಘವಾನಿವ ।
ಸಮುದ್ಯಚ್ಛನ್ಮಹಾಬಾಹುರ್ಜಘಾಂಸುಸ್ತನಯಂ ತವ ॥೫॥

ರಾಕ್ಷಸನಾದ ಮಾಂಸಾಹಾರಿಯಾದ ಘಟೋತ್ಕಚನು ಆ ನಾರಾಚಗಳಿಂದ ಗಾಯಗೊಂಡು ಮದೋದಕವನ್ನು ಸುರಿಸುವ ಗಜದಂತೆ ರಕ್ತವನ್ನು ಸುರಿಸುತ್ತಾ ರಾಜನ ವಿನಾಶಕ್ಕಾಗಿ ನಿಶ್ಚಯವನ್ನು ಮಾಡಿದನು. ಮಹಾಬಾಹುವಾದ ಅವನು ಇಂದ್ರನು ವಜ್ರಾಯುಧವನ್ನು ತೆಗೆದುಕೊಂಡಂತೆ ಮಹೋಲ್ಕೆಗೆ ಸದೃಶವಾದ, ಪರ್ವತಗಳನ್ನೂ ಭೇದಿಸುವ, ಜ್ವಲಿಸುವ ದೊಡ್ಡ ಶಕ್ತ್ಯಾಯುಧವನ್ನು ತೆಗೆದುಕೊಂಡು ನಿನ್ನ ಪುತ್ರನನ್ನು ಕೊಲ್ಲಲು ಬಯಸಿ ಅದನ್ನು ಎತ್ತಿಹಿಡಿದನು.

ತಾಮುದ್ಯತಾಮಭಿಪ್ರೇಕ್ಷ್ಯ ವಂಗಾನಾಮಧಿಪಸ್ತ್ವರನ್ ।
ಕುಂಜರಂ ಗಿರಿಸಂಕಾಶಂ ರಾಕ್ಷಸಂ ಪ್ರತ್ಯಚೋದಯತ್ ॥೬॥

ಆಗ ಆ ಶಕ್ತಿಯು ಎತ್ತಿಹಿಡಿಯಲ್ಪಟ್ಟಿದ್ದನ್ನು ನೋಡಿ ವಂಗಾಧಿಪತಿಯು ಪರ್ವತದಂತಿದ್ದ ತನ್ನ ಗಜವನ್ನು ರಾಕ್ಷಸನ ಮೇಲೆ ಪ್ರಚೋದಿಸಿದನು.

ಸ ನಾಗಪ್ರವರೇಣಾಜೌ ಬಲಿನಾ ಶೀಘ್ರಗಾಮಿನಾ ।
ಯತೋ ದುರ್ಯೋಧನರಥಸ್ತಂ ಮಾರ್ಗಂ ಪ್ರತ್ಯಪದ್ಯತ ।
ರಥಂ ಚ ವಾರಯಾಮಾಸ ಕುಂಜರೇಣ ಸುತಸ್ಯ ತೇ ॥೭॥

ಆ ವಂಗಾಧಿಪತಿಯು ಬಲಿಷ್ಠವೂ, ಶೀಘ್ರಗಾಮಿಯೂ ಆದ ಆ ಶ್ರೇಷ್ಠ ಗಜವನ್ನು ಏರಿ, ರಣರಂಗದಲ್ಲಿ ದುರ್ಯೋಧನನ ರಥವಿದ್ದ ಮಾರ್ಗವನ್ನು ತಲುಪಿ, ನಿನ್ನ ಪುತ್ರನ ರಥಕ್ಕೆ ತನ್ನ ಗಜವನ್ನು ಅಡ್ಡವಾಗಿ ನಿಲ್ಲಿಸಿದನು.

ಮಾರ್ಗಮಾವಾರಿತಂ ದೃಷ್ಟ್ವಾ ರಾಜ್ಞಾ ವಂಗೇನ ಧೀಮತಾ ।
ಘಟೋತ್ಕಚೋ ಮಹಾರಾಜ ಕ್ರೋಧಸಂರಕ್ತಲೋಚನಃ ।
ಉದ್ಯತಾಂ ತಾಂ ಮಹಾಶಕ್ತಿಂ ತಸ್ಮಿಂಶ್ಚಿಕ್ಷೇಪ ವಾರಣೇ ॥೮॥

ಮೇಧಾವಿಯಾದ ವಂಗರಾಜನು ದುರ್ಯೋಧನನ ಮಾರ್ಗವನ್ನು ತಡೆದುದನ್ನು ನೋಡಿ ಎಲೈ ಮಹಾರಾಜನೇ, ಘಟೋತ್ಕಚನು ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ ಆ ಮಹಾಶಕ್ತಿಯನ್ನು ಆ ಗಜದ ಮೇಲೆ ಪ್ರಯೋಗಿಸಿದನು.

ಸ ತಯಾಭಿಹತೋ ರಾಜಂಸ್ತೇನ ಬಾಹುವಿಮುಕ್ತಯಾ ।
ಸಂಜಾತರುಧಿರೋತ್ಪೀಡಃ ಪಪಾತ ಚ ಮಮಾರ ಚ ॥೯॥

ಎಲೈ ರಾಜನೇ, ಘಟೋತ್ಕಚನ ಬಾಹುವಿನಿಂದ ವಿಮುಕ್ತವಾದ ಆ ಶಕ್ತ್ಯಾಯುಧದಿಂದ ತಾಡಿತವಾದ ಆ ಗಜವು ಶಿರಸ್ಸಿನಲ್ಲಿ ರಕ್ತದ ಅಲಂಕಾರವುಳ್ಳದ್ದಾಗಿ ಬಿದ್ದು ಮರಣವನ್ನು ಹೊಂದಿತು.

ಪತತ್ಯಥ ಗಜೇ ಚಾಪಿ ವಂಗಾನಾಮೀಶ್ವರೋ ಬಲೀ ।
ಜವೇನ ಸಮಭಿದ್ರುತ್ಯ ಜಗಾಮ ಧರಣೀತಳಮ್ ॥೧೦॥

ಗಜವು ಬೀಳುತ್ತಿರಲು ಬಲಿಷ್ಠನಾದ ವಂಗಾಧಿಪತಿಯು ಬೇಗ ಓಡಿ ಭೂಮಿಯನ್ನು ಸೇರಿದನು.

ದುರ್ಯೋಧನೋऽಪಿ ಸಂಪ್ರೇಕ್ಷ್ಯ ಹತಿತಂ ವರವಾರಣಮ್ ।
ಪ್ರಭಗ್ನಂ ಚ ಬಲಂ ದೃಷ್ಟ್ವಾ ಜಗಾಮ ಪರಮಾಂ ವ್ಯಥಾಮ್ ॥೧೧॥

ದುರ್ಯೋಧನನಾದರೋ ಶ್ರೇಷ್ಠವಾದ ಆ ಗಜವು ಕೆಡವಲ್ಪಟ್ಟಿದ್ದನ್ನು ಮತ್ತು ತನ್ನ ಸೈನ್ಯವು ಭಗ್ನವಾದುದನ್ನು ನೋಡಿ ಬಹಳ ವ್ಯಥೆಯನ್ನು ಹೊಂದಿದನು.

ಕ್ಷತ್ರಧರ್ಮಂ ಪುರಸ್ಕೃತ್ಯ ಆತ್ಮನಶ್ಚಾಭಿಮಾನಿತಾಮ್ ।
ಪ್ರಾಪ್ತೇऽಪಕ್ರಮಣೇ ರಾಜಾ ತಸ್ಥೌ ಗಿರಿರಿವಾಚಲಃ ॥೧೨॥

ಯುದ್ಧಭೂಮಿಯಿಂದ ಅಪಯಾನವು ಪ್ರಾಪ್ತವಾಗಿದ್ದರೂ ಕ್ಷತ್ರಿಯಧರ್ಮವನ್ನು ಗೌರವಿಸಿ, ತನ್ನ ಅಭಿಮಾನವನ್ನು ಗಮನಿಸಿ, ರಾಜನಾದ ಅವನು ಪರ್ವತದಂತೆ ಸ್ಥಿರವಾಗಿ ನಿಂತನು.

ಸಂಧಾಯ ಚ ಶಿತಂ ಬಾಣಂ ಕಾಲಾಗ್ನಿಸಮತೇಜಸಮ್ ।
ಮುಮೋಚ ಪರಮಕ್ರುದ್ಧಸ್ತಸ್ಮೈ ಘೋರೇ ನಿಶಾಚರೇ ॥೧೩॥

ಕಾಲಾಗ್ನಿಗೆ ಸಮವಾದ ತೇಜಸ್ಸನ್ನು ಹೊಂದಿ ತೀಕ್ಷ್ಣವಾದ ಬಾಣವನ್ನು ಬಿಲ್ಲಿನಲ್ಲಿ ಹೂಡಿ ಪರಮಕ್ರೋಧಗೊಂಡು ಅದನ್ನು ಘೋರ ರಾಕ್ಷಸನಾದ ಘಟೋತ್ಕಚನ ಮೇಲೆ ಪ್ರಯೋಗಿಸಿದನು.

ತಮಾಪತಂತಂ ಸಂಪ್ರೇಕ್ಷ್ಯ ಬಾಣಮಿಂದ್ರಾಶನಿಪ್ರಭಮ್ ।
ಲಾಘವಾದ್ ವಂಚಯಾಮಾಸ ಮಹಾಕಾಯೋ ಘಟೋತ್ಕಚಃ ॥೧೪॥

ಇಂದ್ರನ ವಜ್ರಾಯುಧದ ಕಾಂತಿಯನ್ನು ಹೊಂದಿದ ಆ ಬಾಣವು ತನ್ನ ಕಡೆಗೆ ಬರುತ್ತಿರುವುದನ್ನು ನೋಡಿ ಮಹಾಕಾಯನಾದ ಘಟೋತ್ಕಚನು ತನ್ನ ಕ್ಷಿಪ್ರತೆಯಿಂದ ಅದರಿಂದ ತಪ್ಪಿಸಿಕೊಂಡು ಅದನ್ನು ವ್ಯರ್ಥಗೊಳಿಸಿದನು.

ಭೂಯ ಏವ ನನಾದೋಗ್ರಃ ಕ್ರೋಧಸಂರಕ್ತಲೋಚನಃ ।
ತ್ರಾಸಯನ್ ಸರ್ವಭೂತಾನಿ ಯುಗಾಂತೇ ಜಲದೋ ಯಥಾ ॥೧೫॥

ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ ಸರ್ವಪ್ರಾಣಿಗಳನ್ನೂ ಭಯಪಡಿಸುತ್ತಾ ಯುಗಾಂತಕಾಲದ ಮೋಡದಂತೆ ಪುನಃ ಘೋರವಾದ ಗರ್ಜನೆಯನ್ನು ಮಾಡಿದನು.

ತಂ ಶ್ರುತ್ವಾ ನಿನದಂ ಘೋರಂ ತಸ್ಯ ಭೀಷ್ಮಸ್ಯ ರಕ್ಷಸಃ ।
ಆಚಾರ್ಯಮುಪಸಂಗಮ್ಯ ಭೀಷ್ಮಃ ಶಾಂತನವೋಽಬ್ರವೀತ್ ॥೧೬॥

ಭಯಂಕರವಾದ ಆ ರಾಕ್ಷಸನ ಘೋರವಾದ ಗರ್ಜನೆಯನ್ನು ಕೇಳಿದ ಶಂತನು ಪುತ್ರರಾದ ಭೀಷ್ಮರು ದ್ರೋಣಾಚಾರ್ಯರನ್ನು ಸಮೀಪಿಸಿ ಮಾತನಾಡಿದರು.

ಯಥೈಷ ನಿನದೋ ಘೋರಃ ಶ್ರೂಯತೇ ರಾಕ್ಷಸೇರಿತಃ ।
ಹೈಡಿಂಬೋ ಯುಧ್ಯತೇ ನೂನಂ ರಾಜ್ಞಾ ದುರ್ಯೋಧನೇನ ಹ ॥೧೭॥

ರಾಕ್ಷಸನಿಂದ ಹೊರಹೊಮ್ಮುತ್ತಿರುವ ಈ ಘೋರವಾದ ನಿನಾದವನ್ನು ಕೇಳಿದರೆ ಖಂಡಿತವಾಗಿ ಘಟೋತ್ಕಚನು ರಾಜನಾದ ದುರ್ಯೋಧನನ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಿರುವಂತೆ ತೋರುತ್ತದೆ.

ನೈಷ ಶಕ್ಯೋ ಹಿ ಸಂಗ್ರಾಮೇ ಜೇತುಂ ಭೂತೇನ ಕೇನಚಿತ್ ।
ತತ್ರ ಗಚ್ಛತ ಭದ್ರಂ ವೋ ರಾಜಾನಂ ಪರಿರಕ್ಷತ ॥೧೮॥

ಅಭಿದ್ರುತಂ ಮಹಾಭಾಗಂ ರಾಕ್ಷಸೇನ ದುರಾತ್ಮನಾ ।
ಏತದ್ಧಿ ಪರಮಂ ಕೃತ್ಯಂ ಸರ್ವೇಷಾಂ ನಃ ಪರಂತಪಾಃ ॥೧೯॥

ಅವನನ್ನು ಯಾವ ಪ್ರಾಣಿಯೂ ಸಹ ಯುದ್ಧದಲ್ಲಿ ಜಯಿಸಲು ಸಾಧ್ಯವಿಲ್ಲ. ಆದ್ದರಿಂದ ನಿಮಗೆ ಮಂಗಳವಾಗಲಿ, ಅಲ್ಲಿಗೆ ಹೋಗಿ ದುರಾತ್ಮನಾದ ರಾಕ್ಷಸನಿಂದ ಪೀಡಿತನಾದ ರಾಜನನ್ನು ರಕ್ಷಿಸಿ. ಎಲೈ ಪರಂತಪರೇ, ಇದು ನಾವೆಲ್ಲರೂ ಈಗ ಮಾಡಬೇಕಾದ ಶ್ರೇಷ್ಠವಾದ ಕಾರ್ಯ.

ಪಿತಾಮಹವಚಃ ಶ್ರುತ್ವಾ ತ್ವರಮಾಣಾ ಮಹಾರಥಾಃ ।
ಉತ್ತಮಂ ಜವಮಾಸ್ಥಾಯ ಪ್ರಯಯುರ್ಯತ್ರ ಕೌರವಃ ॥೨೦॥

ದ್ರೋಣಶ್ಚ ಸೋಮದತ್ತಶ್ಚ ಬಾಹ್ಲಿಕಶ್ಚ ಜಯದ್ರಥಃ ।
ಕೃಪೋ ಭೂರಿಶ್ರವಾಃ ಶಲ್ಯಶ್ಚಿತ್ರಸೇನೋ ವಿವಿಂಶತಿಃ ॥೨೧॥

ಅಶ್ವತ್ಥಾಮಾ ವಿಕರ್ಣಶ್ಚ ಆವಂತ್ಯಶ್ಚ ಬೃಹದ್ಬಲಃ ।
ರಥಾಶ್ಚಾನೇಕಸಾಹಸ್ರಾ ಯೇ ತೇಷಾಮನುಯಾಯಿನಃ ।
ಅಭಿದ್ರುತಂ ಪರೀಪ್ಸಂತಃ ಪುತ್ರಂ ದುರ್ಯೋಧನಂ ತವ ॥೨೨॥

ಪಿತಾಮಹರ ಮಾತುಗಳನ್ನು ಕೇಳಿ ಮಹಾರಥರೆಲ್ಲರೂ ತ್ವರೆಯನ್ನು ಮಾಡುತ್ತಾ ಉತ್ತಮವಾದ ವೇಗವನ್ನು ಆಶ್ರಯಿಸಿ, ದುರ್ಯೋಧನನು ಇದ್ದ ಕಡೆಗೆ ಹೊರಟರು. ದ್ರೋಣರು, ಸೋಮದತ್ತ, ಬಾಹ್ಲಿಕ, ಜಯದ್ರಥ, ಕೃಪರು, ಭೂರಿಶ್ರವ, ಶಲ್ಯ, ಚಿತ್ರಸೇನ, ವಿವಿಂಶತಿ, ಅಶ್ವತ್ಥಾಮರು, ವಿಕರ್ಣ, ಆವಂತಿದೇಶದ ಬೃಹದ್ಬಲ ಮತ್ತು ಇನ್ನೂ ಅನೇಕ ಸಹಸ್ರ ಮಹಾರಥರು ಮತ್ತು ಅವರ ಅನುಯಾಯಿಗಳು ಎಲ್ಲರೂ ರಾಕ್ಷಸನಿಂದ ಪೀಡಿತನಾದ ನಿನ್ನ ಪುತ್ರನಾದ ದುರ್ಯೋಧನನನ್ನು ರಕ್ಷಿಸಲು ಬಯಸಿ (ಅಲ್ಲಿಗೆ ಹೋದರು).

ತದನೀಕಮನಾಧೃಷ್ಯಂ ಪಾಲಿತಂ ಲೋಕಶತ್ರುಮೈಃ ।
ಆತತಾಯಿನಮಾಯಾಂತಂ ಪ್ರೇಕ್ಷ್ಯ ರಾಕ್ಷಸಸತ್ತಮಃ ।
ನಾಕಂಪತ ಮಹಾಬಾಹುರ್ಮೈನಾಕ ಇವ ಪರ್ವತಃ ॥೨೩॥

ಪ್ರಗೃಹ್ಯ ವಿಪುಲಂ ಚಾಪಂ ಜ್ಞಾತಿಭಿಃ ಪರಿವಾರಿತಃ ।
ಶೂಲಮುದ್ಗರಹಸ್ತೈಶ್ಚ ನಾನಾಪ್ರಹರಣೈರಪಿ ॥೨೪॥

ಲೋಕಶ್ರೇಷ್ಠರಿಂದ ಪಾಲಿತವಾದ, ಸೋಲಿಸಲು ಅಸಾಧ್ಯವಾದ, ಶಸ್ತ್ರಧಾರಿಯಾದ ಆ ಸೈನ್ಯವು ತನ್ನ ಕಡೆಗೆ ಬರುತ್ತಿರುವುದನ್ನು ನೋಡಿದ ಮಹಾಬಾಹುವಾದ ರಾಕ್ಷಸಶ್ರೇಷ್ಠವಾದ ಘಟೋತ್ಕಚನು ಮೈನಾಕಪರ್ವತದಂತೆ ಅಲುಗಾಡದೇ ನಿಂತನು. ಹಸ್ತಗಳಲ್ಲಿ ಶೂಲ-ಮುದ್ಗರಗಳನ್ನೂ, ನಾನಾವಿಧವಾದ ಆಯುಧಗಳನ್ನೂ ಹಿಡಿದ ರಾಕ್ಷಸ ಬಂಧುಗಳಿಂದ ಪರಿವಾರಿತನಾಗಿ ವಿಸ್ತಾರವಾದ ಧನುಸ್ಸನ್ನು ಕೈಯಲ್ಲಿ ಹಿಡಿದು (ನಿಂತನು).

ತತಃ ಸಮಭವದ್ ಯುದ್ಧಂ ತುಮುಲಂ ಲೋಮಹರ್ಷಣಮ್ ।
ರಾಕ್ಷಸಾನಾಂ ಚ ಮುಖ್ಯಸ್ಯ ದುರ್ಯೋಧನಬಲಸ್ಯ ಚ ॥೨೫॥

ಅನಂತರ ರಾಕ್ಷಸಶ್ರೇಷ್ಠನಾದ ಅವನಿಗೂ ಮತ್ತು ದುರ್ಯೋಧನನ ಸೈನ್ಯಕ್ಕೂ ತೀವ್ರವೂ, ರೋಮಾಂಚಕಾರಿಯೂ ಆದ ಯುದ್ಧವು ನಡೆಯಿತು.

ಧನುಷಾಂ ಕೂಜತಾಂ ಶಬ್ದಃ ಸರ್ವತಸ್ತುಮುಲೋಽಭವತ್ ।
ಅಶ್ರೂಯತ ಮಹಾರಾಜ ವಂಶಾನಾಂ ದಹ್ಯತಾಮಿವ ॥೨೬॥

ಎಲೈ ಮಹಾರಾಜನೇ, ರಣರಂಗದಲ್ಲಿ ನಾದವನ್ನು ಮಾಡುವ ಧನುಸ್ಸುಗಳ ತೀವ್ರವಾದ ಶಬ್ದವು ಉರಿಯುವ ಬಿದಿರುಗಳ ಶಬ್ದದಂತೆ ಎಲ್ಲ ಕಡೆಗಳಲ್ಲಿಯೂ ಕೇಳಿಬಂದಿತು.

ಶಸ್ತ್ರಾಣಾಂ ಪಾತ್ಯಮಾನಾನಾಂ ಕವಚೇಷು ಶರೀರಿಣಾಮ್ ।
ಶಬ್ದಃ ಸಮಭವದ್ ರಾಜನ್ನದ್ರೀಣಾಮಿವ ದೀರ್ಯತಾಮ್ ॥೨೭॥

ಎಲೈ ರಾಜನೇ, ಯೋಧರು ಧರಿಸಿದ ಶಸ್ತ್ರಗಳಿಂದ ಉಂಟಾದ ಶಬ್ದವು ಬಿರಿಯುವ ಪರ್ವತಗಳ ಶಬ್ದಗಳಂತೆ ಇದ್ದಿತು.

ವೀರಬಾಹುವಿಸೃಷ್ಟಾನಾಂ ತೋಮರಾಣಾಂ ವಿಶಾಂಪತೇ ।
ರೂಪಮಾಸೀದ್ ವಿಯತ್ಸ್ಥಾನಾಂ ಸರ್ಪಾಣಾಂ ಸರ್ಪತಾಮಿವ ॥೨೮॥

ಎಲೈ ರಾಜನೇ, ವೀರಬಾಹುಗಳಿಂದ ಮುಕ್ತವಾದ ಆಕಾಶದಲ್ಲಿ ಹಾರುವ ತೋಮರಗಳ ಆಕಾರವು ಹರಿಯುವ ಸರ್ಪಗಳಂತಿದ್ದಿತು.

ತತಃ ಪರಮಸಂಕ್ರುದ್ಧೋ ವಿಸ್ಫಾರ್ಯ ಸುಮಹದ್ಧನುಃ ।
ರಾಕ್ಷಸೇಂದ್ರೋ ಮಹಾಬಾಹುರ್ವಿನದನ್ ಭೈರವಂ ರವಮ್ ॥೨೯॥

ಆಚಾರ್ಯಸ್ಯಾರ್ಧಚಂದ್ರೇಣ ಕ್ರುದ್ಧಶ್ಚಿಚ್ಛೇದ ಕಾರ್ಮುಕಮ್ ।
ಸೋಮದತ್ತಸ್ಯ ಭಲ್ಲೇನ ಧ್ವಜಮುನ್ಮಥ್ಯ ಚಾನದತ್ ॥೩೦॥

ಆಗ ಪರಮಕ್ರುದ್ಧನಾದ, ಮಹಾಬಾಹುವಾದ ರಾಕ್ಷಸೇಂದ್ರನಾದ ಘಟೋತ್ಕಚನು ಭಯಂಕರವಾದ ಗರ್ಜನೆಯನ್ನು ಮಾಡುತ್ತಾ ತನ್ನ ದೊಡ್ಡ ಧನುಸ್ಸನ್ನು ಎಳೆದು ಕೋಪಗೊಂಡು ದ್ರೋಣಾಚಾರ್ಯರ ಧನುಸ್ಸನ್ನು ಅರ್ಧಚಂದ್ರದಿಂದ ಕತ್ತರಿಸಿದನು. ಭಲ್ಲದಿಂದ ಸೋಮದತ್ತನ ಧ್ವಜವನ್ನು ಧ್ವಂಸ ಮಾಡಿ ಸಿಂಹನಾದವನ್ನು ಮಾಡಿದನು.

ಬಾಹ್ಲಿಕಂ ಚ ತ್ರಿಭಿರ್ಬಾಣೈರಭ್ಯವಿಧ್ಯತ್ ಸ್ತನಾಂತರೇ ।
ಕೃಪಮೇಕೇನ ವಿವ್ಯಾಧ ಚಿತ್ರಸೇನಂ ತ್ರಿಭಿಃ ಶರೈಃ ॥೩೧॥

ಬಾಹ್ಲಿಕನನ್ನು ಅವನ ಸ್ತನಗಳ ಮಧ್ಯದಲ್ಲಿ ಮೂರು ಬಾಣಗಳಿಂದ ಹೊಡೆದನು. ಕೃಪರನ್ನು ಒಂದು ಬಾಣದಿಂದಲೂ, ಚಿತ್ರಸೇನನನ್ನು ಮೂರು ಬಾಣದಿಂದಲೂ ಗಾಯಗೊಳಿಸಿದನು.

ಪೂರ್ಣಾಯತವಿಸೃಷ್ಟೇನ ಸಮ್ಯಕ್‌ಪ್ರಣಿಹಿತೇನ ಚ ।
ಜತ್ರುದೇಶೇ ಸಮಾಸಾದ್ಯ ವಿಕರ್ಣಂ ಸಮತಾಡಯತ್ ।
ನ್ಯಷೀದತ್ ಸ ರಥೋಪಸ್ಥೇ ಶೋಣಿತೇನ ಪರಿಪ್ಲುತಃ ॥೩೨॥

ಪೂರ್ಣವಾಗಿ ಎಳೆದು, ಚೆನ್ನಾಗಿ ಪ್ರಯೋಗಿಸಿದ ಬಾಣದಿಂದ ವಿಕರ್ಣನನ್ನು ಅವನ ಭುಜಸಂಧಿದೇಶದಲ್ಲಿ ಹೊಡೆದನು. ವಿಕರ್ಣನಾದರೋ ರಕ್ತದಿಂದ ತೊಯ್ದವನಾಗಿ ರಥದ ಪೀಠದಲ್ಲಿ ಕುಸಿದನು.

ತತಃ ಪುನರಮೇಯಾತ್ಮಾ ನಾರಾಚಾನ್ ದಶ ಪಂಚ ಚ ।
ಭೂರಿಶ್ರವಸಿ ಸಂಕ್ರುದ್ಧಃ ಪ್ರಾಹಿಣೋದ್ ಭರತರ್ಷಭ ।
ತೇ ವರ್ಮ ಭಿತ್ತ್ವಾ ತಸ್ಯಾಶು ಪ್ರಾವಿಶನ್ ಮೇದಿನೀತಳಮ್ ॥೩೩॥

ಎಲೈ ಭರತಶ್ರೇಷ್ಠನೇ, ಅನಂತರ ಪುನಃ ಅಚಿಂತ್ಯಶಕ್ತಿಯುಳ್ಳ ಅವನು ಹದಿನೈದು ನಾರಾಚಗಳನ್ನು ತೆಗೆದುಕೊಂಡು ಕೋಪಗೊಂಡವನಾಗಿ ಭೂರಿಶ್ರವನ ಮೇಲೆ ಅವುಗಳನ್ನು ಪ್ರಯೋಗಿಸಿದನು. ಅವುಗಳು ಅವನ ಕವಚವನ್ನು ಭೇದಿಸಿ ಶೀಘ್ರವಾಗಿ ಭೂತಳದಲ್ಲಿ ಇಳಿದವು.

ವಿವಿಂಶತೇಶ್ಚ ದ್ರೌಣೇಶ್ಚ ಯಂತಾರೌ ಸಮತಾಡಯತ್ ।
ತೌ ಪೇತತೂ ರಥೋಪಸ್ಥೇ ರಶ್ಮೀನುತ್ಸೃಜ್ಯ ವಾಜಿನಾಮ್ ॥೩೪॥

ವಿವಿಂಶತಿ ಮತ್ತು ಅಶ್ವತ್ಥಾಮರ ಸಾರಥಿಗಳನ್ನು ಬಾಣಗಳಿಂದ ಹೊಡೆದನು. ಅವರು ಕುದುರೆಯ ಕಡಿವಾಣಗಳನ್ನು ಬಿಟ್ಟು ರಥದ ಪೀಠದಲ್ಲಿ ಬಿದ್ದರು.

ಸಿಂಧುರಾಜೋಽರ್ಧಚಂದ್ರೇಣ ವಾರಾಹಂ ಸ್ವರ್ಣಭೂಷಿತಮ್ ।
ಉನ್ಮಮಾಥ ಮಹಾರಾಜ ದ್ವಿತೀಯೇನಾಚ್ಯುತಂ ಧನುಃ ॥೩೫॥

ಎಲೈ ಮಹಾರಾಜನೇ, ಸಿಂಧುರಾಜನಾದ ಸೈಂಧವನ ಧ್ವಜದ ಸ್ವರ್ಣಭೂಷಿತವಾದ ವರಾಹವನ್ನು ಅರ್ಧಚಂದ್ರದಿಂದ ಕೆಡವಿದನು. ಅನಂತರ ಇನ್ನೊಂದು ಅರ್ಧಚಂದ್ರದಿಂದ ಅವನ ಧನುಸ್ಸನ್ನು ಕತ್ತರಿಸಿದನು.

ಚತುರ್ಭಿರಥ ನಾರಾಚೈರಾವಂತ್ಯಸ್ಯ ಮಹಾತ್ಮನಃ ।
ಜಘಾನ ಚತುರೋ ವಾಹಾನ್ ಕ್ರೋಧಸಂರಕ್ತಲೋಚನಃ ॥೩೬॥

ಕೋಪದಿಂದ ಕೆಂಪಾದ ಕಣ್ಣುಳ್ಳ ಅವನು ನಾಲ್ಕು ನಾರಾಚಗಳಿಂದ ಮಹಾತ್ಮನಾದ ಅವಂತಿರಾಜನ ನಾಲ್ಕು ಕುದುರೆಗಳನ್ನು ಕೊಂದನು.

ಪೂರ್ಣಾಯತವಿಸೃಷ್ಟೇನ ಪೀತೇನ ನಿಶಿತೇನ ಚ ।
ನಿರ್ಬಿಭೇದ ಮಹಾರಾಜ ರಾಜಪುತ್ರಂ ಬೃಹದ್ಬಲಮ್ ।
ಸ ಗಾಢವಿದ್ಧೋ ವ್ಯಥಿತೋ ರಥೋಪಸ್ಥ ಉಪಾವಿಶತ್ ॥೩೭॥

ಎಲೈ ಮಹಾರಾಜನೇ, ಪೂರ್ಣವಾಗಿ ಎಳೆದು ಪ್ರಯೋಗಿಸಿದ ನೀರನ್ನು ಕುಡಿಸಿ ಹದಮಾಡಿದ ತೀಕ್ಷ್ಣವಾದ ಬಾಣದಿಂದ ಅವನು ರಾಜಪುತ್ರನಾದ ಬೃಹದ್ಬಲನನ್ನು ಹೊಡೆದನು. ಆ ಬಾಣದಿಂದ ಗಾಢವಾಗಿ ಗಾಯಗೊಂಡ ಬೃಹದ್ಬಲನು ವ್ಯಥೆಗೊಂಡು ರಥದ ಪೀಠದಲ್ಲಿ ಕುಳಿತುಕೊಂಡನು.

ಭೃಶಂ ಕ್ರೋಧೇನ ಚಾವಿಷ್ಟೋ ರಥಸ್ಥೋ ರಾಕ್ಷಸಾಧಿಪಃ ।
ಚಿಕ್ಷೇಪ ನಿಶಿತಾಂಸ್ತೀಕ್ಷ್ಣಾನ್ ಶರಾನಾಶೀವಿಷೋಪಮಾನ್ ।
ವಿಭಿದುಸ್ತೇ ಮಹಾರಾಜ ಶಲ್ಯಂ ಯುದ್ಧವಿಶಾರದಮ್ ॥೩೮॥

ಬಹಳ ಕೋಪದಿಂದ ಕೂಡಿ ತನ್ನ ರಥದಲ್ಲಿದ್ದ ರಾಕ್ಷಸಶ್ರೇಷ್ಠನಾದ ಘಟೋತ್ಕಚನು ಹರಿತವಾದ, ತೀಕ್ಷ್ಣವಾದ, ಸರ್ಪಸದೃಶವಾದ ಬಾಣಗಳನ್ನು ಪ್ರಯೋಗಿಸಿದನು. ಎಲೈ ಮಹಾರಾಜನೇ, ಅವು ಯುದ್ಧವಿಶಾರದನಾದ ಶಲ್ಯನನ್ನು ಭೇದಿಸಿದವು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಅಷ್ಟಾಶೀತಿತಮೋऽಧ್ಯಾಯಃ ॥

॥ ಭೀಷ್ಮವಧಪರ್ವಣಿ ಅಷ್ಟಚತ್ವಾರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಎಂಬತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯ - ೨೫ನೇ ಅಧ್ಯಾಯ

ಪ್ರಾಗ್ಜ್ಯೋತಿಷಂ ಚೈವ ಘಟೋತ್ಕಚಾಯ
ಸಂಪ್ರೇಷಯಾಮಾಸ ಸುರಾಪಗಾಸುತಃ ।
ಸ ಪ್ರಾಪ್ಯ ಹೈಡಿಂಬಮಯೋಧಯದ್ ಬಲೀ
ಸ ಚಾರ್ದಯಾಮಾಸ ಸಕುಂಜರಂ ತಮ್ ॥೯೭॥

ಭೀಷ್ಮರು ಘಟೋತ್ಕಚನ ಎದುರಿಗೆ ಭಗದತ್ತನನ್ನು ಕಳುಹಿಸಿದರು. ಬಲಿಷ್ಠನಾದ ಭಗದತ್ತನು ಘಟೋತ್ಕಚನ ಬಳಿಗೆ ಹೋಗಿ ಯುದ್ಧ ಮಾಡಿದನು. ಘಟೋತ್ಕಚ ಅವನನ್ನೂ ಅವನ ಆನೆಯನ್ನೂ ಪೀಡಿಸಿದನು.

ತೇನಾರ್ದಿತಃ ಪ್ರಾಹಿಣೋತ್ ಶೂಲಮಸ್ಯೈ
ವಿಯತ್ಯಭಿಪ್ಲುತ್ಯ ತದಾ ಘಟೋತ್ಕಚಃ ।
ಪ್ರಗೃಹ್ಯ ಶೂಲಂ ಪ್ರಬಭಂಜ ಜಾನುಮ್
ಆರೋಪ್ಯ ದೇವಾ ಜಹೃಷುಸ್ತದೀಕ್ಷ್ಯ ॥೯೮॥

ಘಟೋತ್ಕಚನಿಂದ ಪೀಡಿತನಾದ ಭಗದತ್ತನು ಅವನ ಮೇಲೆ ಶೂಲವನ್ನೆಸೆದನು. ಆಗ ಘಟೋತ್ಕಚನು ಶೂಲವನ್ನು ಹಿಡಿದು ಆಕಾಶದಲ್ಲಿ ಹಾರಿ ಮೊಣಕಾಲ ಮೇಲೆ ಅದನ್ನಿಟ್ಟು ಮುರಿದ. ಅದನ್ನು ನೋಡಿ ದೇವತೆಗಳು ಆನಂದಿಸಿದರು.

ತದಾ ಸ ತಸ್ಯೈವ ಪದಾನುಗಾನ್ ನೃಪಃ
ಜಘಾನ ತಂ ಮಾರುತಿರಭ್ಯಯಾದ್ ರಣೇ ।
ಸ ಪ್ರಾಹಿಣೋದ್ ಭೀಮಸೇನಾಯ ವೀರೋ
ಗಜಂ ತಮಸ್ತಂಭಯದಾಶು ಸಾಯಕೈಃ ॥೯೯॥

ಆಗ ಭಗದತ್ತನು ಘಟೋತ್ಕಚನ ಪರಿವಾರದವರನ್ನು ಕೊಂದನು. ಅವನನ್ನು ಯುದ್ಧದಲ್ಲಿ ಭೀಮನು ಎದುರಿಸಿದನು. ಆಗ ವೀರನಾದ ಅವನು ಭೀಮಸೇನನಿಗೆ ಎದುರಾಗಿ ಆನೆಯನ್ನು ನಡೆಸಿದ. ಒಡನೆ ಭೀಮನು ಆನೆಯನ್ನು ಬಾಣಗಳಿಂದ ತಡೆದನು.

ಸಂಸ್ತಂಭತೇ ಬಾಣವರೈಸ್ತು ನಾಗೇ
ಭೀಮಸ್ಯಾಶ್ವಾನ್ ಸಾಯಕೈರರ್ದಯತ್ ಸಃ ।
ಸೋಽಭ್ಯರ್ದಿತಾಶ್ವೋಽಥ ಗದಾಂ ಪ್ರಗೃಹ್ಯ
ಹಂತು ನೃಪಂ ತಂ ಸಗಜಂ ಸಮಾಸದತ್ ॥೧೦೦॥

ಭೀಮನು ಶ್ರೇಷ್ಠವಾದ ಬಾಣಗಳಿಂದ ಸುಪ್ರತೀಕ ಆನೆಯನ್ನು ತಡೆದಾಗ ಅವನ ಕುದುರೆಗಳನ್ನು ಭಗದತ್ತನು ಬಾಣಗಳಿಂದ ಪೀಡಿಸಿದನು. ತನ್ನ ಕುದುರೆಗಳಿಗೆ ಬಹಳ ಪೀಡೆಯಾದಾಗ ಭೀಮನು ಗದೆಯನ್ನೆತ್ತಿಕೊಂಡು ಭಗದತ್ತನನ್ನು ಆನೆ ಸಮೇತವಾಗಿ ಕೊಲ್ಲಲು ಮುಂದೆ ಬಂದನು.

ಸ ಹಂತುಕಾಮೇನ ರುಷಾಽಭಿಪನ್ನೋ
ಭೀಮೇನ ರಾಜಾ ಪುರತಃ ಪೃಷ್ಠತಶ್ಚ ।
ಕೃಷ್ಣೇನಾಸ್ತ್ರಂ ವೈಷ್ಣವಂ ತದ್ ಗೃಹೀತುಂ
ಸಹಾರ್ಜುನೇನಾಪಯಯೌ ಸುಭೀತಃ ॥೧೦೧॥

ಮುಂದಿನಿಂದ, ತನ್ನನ್ನು ಕೊಲ್ಲಲು ಬಯಸಿ ಕೋಪದಿಂದ ಭೀಮನು ಬರುತ್ತಿರುವುದನ್ನೂ ಹಿಂದಿನಿಂದ, ತನ್ನ ವೈಷ್ಣವಾಸ್ತ್ರವನ್ನು ಅಪಹರಿಸಲು ಅರ್ಜುನ ಸಮೇತನಾಗಿ ಕೃಷ್ಣ ಬರುತ್ತಿರುವುದನ್ನೂ ಕಂಡು ಭಗದತ್ತನು ಭಯಗ್ರಸ್ತನಾಗಿ ಪಲಾಯನಗೈದನು.

ತಸ್ಮಿನ್ ಗತೇ ಭೀಮಸೇನಾರ್ಜುನಾಭ್ಯಾಂ
ವಿದ್ರಾವಿತೇ ರಾಜಸಂಘೇ ಸಮಸ್ತೇ ।
ಭೀಷ್ಮಃ ಸೇನಾಮಪಹೃತ್ಯಾಪಯಾತೋ
ದುರ್ಯೋಧನಸ್ತಂ ನಿಶಿ ಚೋಪಜಗ್ಮಿವಾನ್ ॥೧೦೨॥

ಭಗದತ್ತನು ಪಲಾಯನ ಮಾಡಿದಾಗ ಭೀಮಾರ್ಜುನರು ಸಮಸ್ತ ರಾಜ ಸಮೂಹವನ್ನೂ ಓಡಿಸಿದರು. ಆಗ ಭೀಷ್ಮರು ಸೈನ್ಯವನ್ನು ಹಿಂದೆ ಕರೆಸಿಕೊಂಡು ಹೊರಟು ಹೋದರು. ರಾತ್ರಿಯಲ್ಲಿ ಅವರ ಬಳಿಗೆ ದುರ್ಯೋಧನನು ಬಂದನು.

★ ★ ★ ★ ★

ಎಂಬತ್ತೊಂಬತ್ತನೆಯ ಅಧ್ಯಾಯ

ಅನೇಕ ವೀರರೊಡನೆ ಘಟೋತ್ಕಚನ ಯುದ್ಧ.
ಕ್ಲೇಶಕ್ಕೆ ಒಳಗಾದ ಅವನ ಸಹಾಯಕ್ಕಾಗಿ ಭೀಮಸೇನನ ಆಗಮನ.

ಸಂಜಯಃ

ವಿಮುಖೀಕೃತ್ಯ ತಾನ್ ಸರ್ವಾಂಸ್ತಾವಕಾನ್ ಯುಧಿ ರಾಕ್ಷಸಃ ।
ಜಘಾಂಸುರ್ಭರತಶ್ರೇಷ್ಠ ದುರ್ಯೋಧನಮುಪಾದ್ರವತ್ ॥೧॥

ಸಂಜಯ– ರಾಕ್ಷಸನಾದ ಘಟೋತ್ಕಚನು ನಿನ್ನ ಯೋಧರನ್ನೆಲ್ಲ ಯುದ್ಧ ವಿಮುಖರನ್ನಾಗಿ ಮಾಡಿ ಎಲೈ ಭರತಶ್ರೇಷ್ಠನೇ, ದುರ್ಯೋಧನನನ್ನು ಕೊಲ್ಲಲು ಬಯಸಿ ಅವನ ಸಮೀಪಕ್ಕೆ ಧಾವಿಸಿದನು.

ತಮಾಪತಂತಂ ಸಂಪ್ರೇಕ್ಷ್ಯ ರಾಜಾನಂ ಪ್ರತಿ ವೇಗಿತಮ್ ।
ಅಭ್ಯಧಾವಜ್ಜಿಘಾಂಸಂತಸ್ತಾವಕಾ ಯುದ್ಧದುರ್ಮದಾಃ ॥೨॥

ರಾಜನ ಕಡೆಗೆ ವೇಗದಿಂದ ಬರುತ್ತಿದ್ದ ಅವನನ್ನು ನೋಡಿ ಯುದ್ಧದುರ್ಮದರಾದ ನಿನ್ನ ವೀರರು ಅವನನ್ನೇ ಕೊಲ್ಲಲು ಬಯಸಿ ಅವನ ಕಡೆಗೆ ಓಡಿದರು.

ತಾಳಮಾತ್ರಾಣಿ ಚಾಪಾನಿ ವಿಕರ್ಷಂತೋ ಮಹಾಬಲಾಃ ।
ತಮೇಕಮಭ್ಯಧಾವಂತ ನದಂತಃ ಸಿಂಹಸಂಘವತ್ ॥೩॥

ತಾಳವೃಕ್ಷದಷ್ಟು ಎತ್ತರವಾದ ಧನುಸ್ಸುಗಳನ್ನು ಎಳೆಯುತ್ತಾ ಮಹಾಬಲರಾದ ಅವರು ಸಿಂಹಸಮೂಹದಂತೆ ಗರ್ಜಿಸುತ್ತಾ ಅವನೊಬ್ಬನ ಮೇಲೆ ಎರಗಿದರು.

ಅಥೈನಂ ಶರವರ್ಷೇಣ ಸಮಂತಾತ್ ಪರ್ಯವಾರಯನ್ ।
ಪರ್ವತಂ ವಾರಿಧಾರಾಭಿಃ ಶರದೀವ ಬಲಾಹಕಾಃ ॥೪॥

ಶರತ್ಕಾಲದಲ್ಲಿ ಮೋಡಗಳು ಜಲಧಾರೆಗಳಿಂದ ಪರ್ವತವನ್ನು ಮುಚ್ಚುವಂತೆ ಬಾಣಗಳ ಮಳೆಯಿಂದ ಅವನನ್ನು ಸುತ್ತಲೂ ಮುಚ್ಚಿದರು.

ಸ ಗಾಢವಿದ್ಧೋ ವ್ಯಥಿತಸ್ತೋತ್ತ್ರಾರ್ದಿತ ಇವ ದ್ವಿಪಃ ।
ಉತ್ಪಪಾತ ತದಾಕಾಶಂ ಸಮಂತಾದ್ ವೈನತೇಯವತ್ ॥೫॥

ಗಾಢವಾದ ಪ್ರಹಾರಕ್ಕೆ ಒಳಗಾಗಿ ಅಂಕುಶದಿಂದ ಪೀಡಿತವಾದ ಗಜದಂತೆ ವ್ಯಥೆಗೊಂಡ ಘಟೋತ್ಕಚನು ಆಗ ಗರುಡನಂತೆ ಆಕಾಶಕ್ಕೆ ಹಾರಿದನು.

ವ್ಯನದತ್ ಸುಮಹಾನಾದಂ ಜೀಮೂತ ಇವ ಶಾರದಃ ।
ದಿಶಃ ಖಂ ಪ್ರದಿಶಶ್ಚೈವ ನಾದಯನ್ ಭೈರವಸ್ವನಃ ॥೬॥

ಶರತ್ಕಾಲದ ಮೋಡದಂತೆ ಭೈರವಸ್ವನದಿಂದ ದೊಡ್ಡ ಗರ್ಜನೆಯನ್ನು ಮಾಡಿ ಅಂತರಿಕ್ಷವನ್ನೂ, ದಿಕ್ಕು-ವಿದಿಕ್ಕುಗಳನ್ನೂ ಪ್ರತಿಧ್ವನಿಸಿದನು.

ರಾಕ್ಷಸಸ್ಯ ತು ತಂ ಶಬ್ದಂ ಶ್ರುತ್ವಾ ರಾಜಾ ಯುಧಿಷ್ಠಿರಃ ।
ಉವಾಚ ಭರತಶ್ರೇಷ್ಠೋ ಭೀಮಸೇನಮಿದಂ ವಚಃ ॥೭॥

ಘಟೋತ್ಕಚನ ಆ ಶಬ್ದವನ್ನು ಕೇಳಿದ ಭರತಶ್ರೇಷ್ಠನಾದ ಯುಧಿಷ್ಠಿರ ರಾಜನು ಭೀಮಸೇನನನ್ನು ಕುರಿತು ಈ ಮಾತನ್ನಾಡಿದನು.

ಯುಧ್ಯತೇ ರಾಕ್ಷಸೋ ನೂನಂ ಧಾರ್ತರಾಷ್ಟ್ರೈರ್ಮಹಾರಥೈಃ ।
ಯಥಾಸ್ಯ ಶ್ರೂಯತೇ ಶಬ್ದೋ ನದತೋ ಭೈರವಂ ಸ್ವನಮ್ ।
ಅತಿಭಾರಂ ಚ ಪಶ್ಯಾಮಿ ತತ್ರ ತಾತ ಸಮಾಹಿತಮ್ ॥೮॥

ಘಟೋತ್ಕಚನು ಮಾಡುತ್ತಿರುವ ಭಯಂಕರ ಗರ್ಜನೆಗಳನ್ನು ಕೇಳಿದರೆ ಅವನು ಖಂಡಿತವಾಗಿ ಮಹಾರಥರಾದ ಧೃತರಾಷ್ಟ್ರನ ಪುತ್ರರ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಿದ್ದಾನೆಂದು ತೋರುತ್ತದೆ. ಎಲೈ ಪ್ರೀತಿಪಾತ್ರನೇ, ಅವನ ಮೇಲೆ ದೊಡ್ಡ ಭಾರವು ಒದಗಿಬಂದಿದೆ ಎಂದು ನಾನು ಭಾವಿಸುತ್ತೇನೆ.

ಪಿತಾಮಹಶ್ಚ ಸಂಕ್ರುದ್ಧಃ ಪಾಂಚಾಲಾನ್ ಹಂತುಮುದ್ಯತಃ ।
ತೇಷಾಂ ಚ ರಕ್ಷಣಾರ್ಥಾಯ ಯುಧ್ಯತೇ ಫಲ್ಗುನಃ ಪರೈಃ ॥೯॥

ಪಿತಾಮಹರಾದ ಭೀಷ್ಮರು ಕೋಪಗೊಂಡು ಪಾಂಚಾಲರನ್ನು ಕೊಲ್ಲಲು ಉದ್ಯುಕ್ತರಾಗಿದ್ದಾರೆ. ಪಾಂಚಾಲರನ್ನು ರಕ್ಷಿಸಲು ಅರ್ಜುನನು ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಿದ್ದಾನೆ.

ಏತಚ್ಛ್ರುತ್ವಾ ಮಹಾಬಾಹೋ ಕಾರ್ಯದ್ವಯಮುಪಸ್ಥಿತಮ್ ।
ಗಚ್ಛ ರಕ್ಷಸ್ವ ಹೈಡಿಂಬಂ ಸಂಶಯಂ ಪರಮಂ ಗತಮ್ ॥೧೦॥

ಎಲೈ ಮಹಾಬಾಹುವೇ, ಒದಗಿ ಬಂದಿರುವ ಈ ಎರಡು ಕಾರ್ಯಗಳನ್ನು ಕೇಳಿ ಪ್ರಾಣಸಂಶಯಕ್ಕೆ ಸಿಲುಕಿದ ಘಟೋತ್ಕಚನ ಬಳಿಗೆ ಹೋಗಿ ಅವನನ್ನು ರಕ್ಷಿಸು (ಎಂದು ಹೇಳಿದನು).

ಭ್ರಾತುರ್ವಚನಮಾಜ್ಞಾಯ ತ್ವರಮಾಣೋ ವೃಕೋದರಃ ।
ಪ್ರಯಯೌ ಸಿಂಹನಾದೇನ ತ್ರಾಸಯನ್ ಸರ್ವಪಾರ್ಥಿವಾನ್ ।
ವೇಗೇನ ಮಹತಾ ರಾಜನ್ ಪರ್ವಕಾಲೇ ಯಥೋದಧಿಃ ॥೧೧॥

ಎಲೈ ರಾಜನೇ, ಅಣ್ಣನ ಮಾತುಗಳನ್ನು ಕೇಳಿದ ವೃಕೋದರನು ಸಿಂಹನಾದದಿಂದ ಎಲ್ಲರಾಜರನ್ನೂ ಭಯಪಡಿಸುತ್ತಾ ಪರ್ವಕಾಲದ ಸಮುದ್ರದಂತೆ ಮಹಾವೇಗದಿಂದ ಹೊರಟನು.

ತಮನ್ವಯಾತ್ ಸತ್ಯಧೃತಿಃ ಸೌಚಿತ್ತಿರ್ಯುದ್ಧದುರ್ಮದಃ ।
ಶ್ರೇಣಿಮಾನ್ ವಸುದಾನಶ್ಚ ಪುತ್ರಃ ಕಾಶ್ಯಸ್ಯ ಚಾಭಿಭೂಃ ॥೧೨॥

ಅಭಿಮನ್ಯುಮುಖಾಶ್ಚೈವ ದ್ರೌಪದೇಯಾ ಮಹಾರಥಾಃ ।
ಕ್ಷತ್ರದೇವಶ್ಚ ವಿಕ್ರಾಂತಃ ಕ್ಷತ್ರಧರ್ಮಾ ತಥೈವ ಚ ॥೧೩॥

ಅನೂಪಾಧಿಪತಿಶ್ಚೈವ ನೀಲಃ ಸ್ವಬಲಮಾಸ್ಥಿತಃ ।
ಮಹತಾ ರಥವಂಶೇನ ಹೈಡಿಂಬಂ ಪರ್ಯವಾರಯನ್ ॥೧೪॥

ಅವನನ್ನು ಹಿಂಬಾಲಿಸಿ ಸತ್ಯಧೃತಿ, ಯುದ್ಧದುರ್ಮದನಾದ ಸೌಚಿತ್ತಿ, ಶ್ರೇಣಿಮಾನ್, ವಸುದಾನ, ಕಾಶಿರಾಜನ ಪುತ್ರ, ಅಭಿಮನ್ಯು ಮೊದಲಾದವರು, ಮಹಾರಥರಾದ ದ್ರೌಪದಿಯ ಪುತ್ರರು, ಪರಾಕ್ರಮಶಾಲಿಯಾದ ಕ್ಷತ್ರದೇವ ಮತ್ತು ಕ್ಷತ್ರಧರ್ಮ, ಅನೂಪಾಧಿಪತಿಯಾದ ಮತ್ತು ತನ್ನ ಸೈನ್ಯದಿಂದೊಡಗೂಡಿದ ನೀಲ ಇವರೆಲ್ಲರೂ ದೊಡ್ಡ ರಥಸಮೂಹದಿಂದ ಘಟೋತ್ಕಚನನ್ನು ಸುತ್ತುವರಿದು (ಅವನ ರಕ್ಷಣೆಗಾಗಿ ನಿಂತರು).

ಕುಂಜರೈಶ್ಚ ಸದಾ ಮತ್ತೈಃ ಷಟ್ಸಹಸ್ರೈಃ ಪ್ರಹಾರಿಭಿಃ ।
ಅಭ್ಯರಕ್ಷಂತ ಸಹಿತಾ ರಾಕ್ಷಸೇಂದ್ರಂ ಘಟೋತ್ಕಚಮ್ ॥೧೫॥

ಸದಾ ಮದವುಳ್ಳವೂ, ಪ್ರಹಾರಶೀಲಗಳೂ ಆದ ಆರುಸಾವಿರ ಗಜಗಳಿಂದ ಎಲ್ಲರೂ ಒಟ್ಟಾಗಿ ರಾಕ್ಷಸೇಂದ್ರನಾದ ಘಟೋತ್ಕಚನನ್ನು ರಕ್ಷಿಸಿದರು.

ಸಿಂಹನಾದೇನ ಮಹತಾ ನೇಮಿಘೋಷೇಣ ಚೈವ ಹಿ ।
ಖುರಶಬ್ದನಿನಾದೈಶ್ಚ ಕಂಪಯಂತೋ ವಸುಂಧರಾಮ್ ॥೧೬॥

ತೇಷಾಮಾಪತತಾಂ ಶ್ರುತ್ವಾ ಶಬ್ದಂ ತಂ ತಾವಕಂ ಬಲಮ್ ।
ಭೀಮಸೇನಭಯೋದ್ವಿಗ್ನಂ ವಿವರ್ಣವದನಂ ತಥಾ ।
ಪರಿವೃತ್ತಂ ಮಹಾರಾಜ ಪರಿತ್ಯಜ್ಯ ಘಟೋತ್ಕಚಮ್ ॥೧೭॥

ದೊಡ್ಡ ಸಿಂಹನಾದದಿಂದಲೂ, ರಥದ ಚಕ್ರಗಳ ಘೋಷದಿಂದಲೂ, ಕುದುರೆಗಳ ಖುರಪುಟದ ನಾದಗಳಿಂದಲೂ ಭೂಮಿಯನ್ನು ನಡುಗಿಸುತ್ತಾ ತಮ್ಮ ಕಡೆಗೆ ಬರುತ್ತಿದ್ದ ಅವರ ಶಬ್ದವನ್ನು ಕೇಳಿ ನಿನ್ನ ಸೈನ್ಯವು ಭೀಮಸೇನನ ಭಯದಿಂದ ನಡುಗಿ ಮುಖದ ಕಾಂತಿಯನ್ನು ಕಳೆದುಕೊಂಡಿತು. ಮತ್ತು ಎಲೈ ಮಹಾರಾಜನೇ, ಘಟೋತ್ಕಚನನ್ನು ಬಿಟ್ಟು ಭೀಮಸೇನನ ಕಡೆಗೆ ತಿರುಗಿತು.

ತತಃ ಪ್ರವವೃತೇ ಯುದ್ಧಂ ತತ್ರತತ್ರ ಮಹಾತ್ಮನಾಮ್ ।
ತಾವಕಾನಾಂ ಪರೇಷಾಂ ಚ ಸಂಗ್ರಾಮೇಷ್ವನಿವರ್ತಿನಾಮ್ ॥೧೮॥

ಅನಂತರ ಯುದ್ಧದಲ್ಲಿ ಹಿಮ್ಮೆಟ್ಟದಿರುವ ಮಹಾತ್ಮರಾದ ನಿನ್ನವರಿಗೂ ಮತ್ತು ಪರರಿಗೂ ಯುದ್ಧವು ಪ್ರಾರಂಭವಾಯಿತು.

ನಾನಾರೂಪಾಣಿ ಶಸ್ತ್ರಾಣಿ ವಿಸೃಜಂತೋ ಮಹಾರಥಾಃ ।
ಅನ್ಯೋನ್ಯಮಭಿಧಾವಂತಃ ಸಂಪ್ರಹಾರಂ ಪ್ರಚಕ್ರಿರೇ ।
ವ್ಯತಿಷಕ್ತಂ ಮಹಾರೌದ್ರಂ ಯುದ್ಧಂ ಭೀರುಭಯಾವಹಮ್ ॥೧೯॥

ಮಹಾರಥರು ನಾನಾಕಾರದ ಶಸ್ತ್ರಗಳನ್ನು ಪ್ರಯೋಗಿಸುತ್ತಾ ಪರಸ್ಪರವಾಗಿ ಮುನ್ನುಗ್ಗುತ್ತಾ ಪ್ರಹಾರವನ್ನು ಮಾಡಿದರು. ಭೀರುಗಳಿಗೆ ಭಯವನ್ನುಂಟು ಮಾಡುವ ಮಹಾಘೋರವಾದ ಯುದ್ಧವು ನಡೆಯಿತು.

ಹಯಾ ಗಜೈಃ ಸಮಾಜಗ್ಮುಃ ಪಾದಾತಾ ರಥಿಭಿಃ ಸಹ ।
ರಥಾ ರಥೈಃ ಸಮಾಗಚ್ಛನ್ ನಾಗಾ ನಾಗೈಶ್ಚ ಸಂಯುಗೇ ।
ಅನ್ಯೋನ್ಯಂ ಸಮರೇ ರಾಜನ್ ಪ್ರಾರ್ಥಯಾನಾ ಮಹದ್ಯಶಃ॥೨೦॥

ಅಶ್ವಗಳು ಗಜಗಳ ಜೊತೆಯಲ್ಲಿಯೂ, ಪದಾತಿಗಳು ರಥಿಗಳ ಜೊತೆಯಲ್ಲಿಯೂ, ರಥಗಳು ರಥಗಳ ಜೊತೆಯಲ್ಲಿಯೂ, ಗಜಗಳು ಗಜಗಳ ಜೊತೆಯಲ್ಲಿಯೂ ಯುದ್ಧದಲ್ಲಿ ಸಮಾಗಮವನ್ನು ಹೊಂದಿದವು. ಎಲೈ ರಾಜನೇ, ಯುದ್ಧದಲ್ಲಿ ಪರಸ್ಪರವಾಗಿ ದೊಡ್ಡ ಕೀರ್ತಿಯನ್ನು ಆಶಿಸುತ್ತಾ ಅವರು ಹೋರಾಡಿದರು.

ಸಹಸಾ ಚಾಭವತ್ ತೀವ್ರಂ ಸಂನಿಪಾತಾನ್ ಮಹದ್ರಜಃ ।
ರಥಾಶ್ವಗಜಪತ್ತೀನಾಂ ಪದನೇಮಿಸಮುದ್ಭವಮ್ ॥೨೧॥

ಆ ಸಂಘರ್ಷದಲ್ಲಿ ರಥಾಶ್ವಗಜಪದಾತಿಗಳ ಪಾದಗಳಿಂದಲೂ, ರಥಚಕ್ರದಿಂದಲೂ ತೀವ್ರವಾದ ಧೂಳು ತಕ್ಷಣವೇ ಮೇಲಕ್ಕೆದ್ದಿತು.

ಧೂಮ್ಯಾರುಣಂ ರಜಸ್ತೀವ್ರಂ ರಣಭೂಮಿಂ ಸಮಾವೃಣೋತ್ ।
ನೈವ ಸ್ವೇ ನ ಪರೇ ರಾಜನ್ ಸಮಜಾನನ್ಪರಾಪರಮ್ ॥೨೨॥

ಧೂಮದಂತೆ ಅರುಣವರ್ಣೋಪೇತವಾದ, ನಿಬಿಡವಾದ ಧೂಳು ರಣಭೂಮಿಯನ್ನು ಆವರಿಸಿತು. ಎಲೈ ರಾಜನೇ, ನಿನ್ನವರಾಗಲೀ ಅಥವಾ ಪರರಾಗಲೀ ಪರಸ್ಪರವಾಗಿ ತಮ್ಮವರನ್ನು ತಿಳಿಯಲಿಲ್ಲ.

ಪಿತಾ ಪುತ್ರಂ ನ ಜಾನೀತೇ ಪುತ್ರೋ ವಾ ಪಿತರಂ ತಥಾ ।
ನಿರ್ಮರ್ಯಾದೇ ತಥಾ ಭೂತೇ ವೈಶಸೇ ರೋಮಹರ್ಷಣೇ ॥೨೩॥

ಶಸ್ತ್ರಾಣಾಂ ಭರತಶ್ರೇಷ್ಠ ಮನುಷ್ಯಾಣಾಂ ಚ ಗರ್ಜತಾಮ್ ।
ಸುಮಹಾನಭವಚ್ಛಬ್ದೋ ವಂತಾನಾಮಿವ ದಹ್ಯತಾಮ್ ॥೨೪॥

ತಂದೆಯು ಮಗನನ್ನು ತಿಳಿಯಲಿಲ್ಲ ಅಥವಾ ಮಗನಾದರೂ ತಂದೆಯನ್ನು ತಿಳಿಯಲಿಲ್ಲ. ಎಲ್ಲ ಎಲ್ಲೆಗಳನ್ನು ಮೀರಿದ ರೋಮಾಂಚಕಾರಿಯಾದ ಅಂತಹ ಯುದ್ಧ ಹಿಂಸೆಯು ನಡೆಯುತ್ತಿರುವಾಗ ಎಲೈ ಭರತಶ್ರೇಷ್ಠನೇ, ಶಸ್ತ್ರಗಳಿಂದ ಮತ್ತು ಗರ್ಜಿಸುವ ಮನುಷ್ಯರಿಂದ ಉಂಟಾದ ದೊಡ್ಡ ಶಬ್ದವು ಉರಿಯುವ ಬಿದಿರುಗಳ ಶಬ್ದದಂತೆ ಇದ್ದಿತು.

ಗಜವಾಜಿಮನುಷ್ಯಾಣಾಂ ಶೋಣಿತಾಂತ್ರತರಂಗಿಣೀ ।
ಪ್ರಾವರ್ತತ ನದೀ ತತ್ರ ಕೇಶಶೈವಲಶಾದ್ವಲಾ ॥೨೫॥

ಗಜಾಶ್ವಮನುಷ್ಯರ ರಕ್ತ-ಮಾಂಸಗಳ ತರಂಗವುಳ್ಳ, ಕೇಶಗಳೆಂಬ, ಪಾಚಿಗಳನ್ನು ಮತ್ತು ಮೃದುಪ್ರದೇಶಗಳುಳ್ಳ ಘೋರವಾದ ನದಿಯು ಅಲ್ಲಿ ಹರಿಯಿತು.

ನರಾಣಾಂ ಚೈವ ಕಾಯೇಭ್ಯಃ ಶಿರಸಾಂ ಪತತಾಂ ರಣೇ ।
ಶುಶ್ರುವೇ ಸುಮಹಾನ್ ಶಬ್ದಃ ಪತತಾಮಶ್ಮನಾಮಿವ ॥೨೬॥

ಯುದ್ಧದಲ್ಲಿ ಯೋಧರ ಶರೀರಗಳಿಂದ ಬೀಳುವ ಶಿರಸ್ಸುಗಳ ದೊಡ್ಡ ಶಬ್ದವು ಕಲ್ಲುಬಂಡೆಗಳು ಬೀಳುವ ಶಬ್ದವನ್ನು ಹೋಲುವಂತೆ ಇದ್ದಿತು.

ವಿಶಿರಸ್ಕೈರ್ಮನುಷ್ಯೈಶ್ಚ ಛಿನ್ನಗಾತ್ರೈಶ್ಚ ವಾರಣೈಃ ।
ಅಶ್ವೈಃ ಸಂಛಿನ್ನದೇಹೈಶ್ಚ ಸಂಕೀರ್ಣಾಭೂದ್ ವಸುಂಧರಾ ॥೨೭॥

ರಣಭೂಮಿಯು ಶಿರಸ್ಸಿಲ್ಲದ ಮನುಷ್ಯರಿಂದಲೂ, ಕತ್ತರಿಸಲ್ಪಟ್ಟ ದೇಹವುಳ್ಳ ಗಜಗಳಿಂದಲೂ ಮತ್ತು ಅಂತಹ ಅಶ್ವಗಳಿಂದಲೂ ನಿಬಿಡವಾಗಿ ತುಂಬಿಹೋಯಿತು.

ನಾನಾವಿಧಾನಿ ಶಸ್ತ್ರಾಣಿ ವಿಸೃಜಂತೋ ಮಹಾರಥಾಃ ।
ಅನ್ಯೋನ್ಯಮಭಿಧಾವಂತಃ ಸಂಪ್ರಹಾರಂ ಪ್ರಚಕ್ರಿರೇ ॥೨೮॥

ಮಹಾರಥರು ನಾನಾವಿಧವಾದ ಶಸ್ತ್ರಗಳನ್ನು ಪ್ರಯೋಗಿಸುತ್ತಾ, ಪರಸ್ಪರವಾಗಿ ಧಾವಿಸುತ್ತಾ, ಸಂಪ್ರಹಾರವನ್ನು ಮಾಡಿದರು.

ಹಯಾ ಹಯಾನ್ ಸಮಾಸಾದ್ಯ ಪ್ರೇಷಿತಾ ಹಯಸಾದಿಭಿಃ ।
ಸಮಾಹತ್ಯ ರಣೇಽನ್ಯೋನ್ಯಂ ನಿಪೇತುರ್ಗತಜೀವಿತಾಃ ॥೨೯॥

ಕುದುರೆಗಳು ಅಶ್ವಾರೋಹಿಗಳಿಂದ ಪ್ರೇರಿಸಲ್ಪಟ್ಟು ಶತ್ರುಪಕ್ಷದ ಕುದುರೆಗಳನ್ನು ಘಟ್ಟಿಸಿ, ಪರಸ್ಪರವಾಗಿ ಪ್ರಾಣಗಳನ್ನು ತ್ಯಜಿಸಿ ರಣಭೂಮಿಯಲ್ಲಿ ಬಿದ್ದವು.

ನರಾ ನರಾನ್ ಸಮಾಸಾದ್ಯ ಕ್ರೋಧರಕ್ತೇಕ್ಷಣಾ ಭೃಶಮ್ ।
ಉರಾಂಸ್ಯುರೋಭಿರನ್ಯೋನ್ಯಂ ಸಮಾಶ್ಲಿಷ್ಯ ನಿಜಘ್ನಿರೇ ॥೩೦॥

ಯೋಧರು ಕ್ರೋಧದಿಂದ ಕೆಂಪಾದ ಕಣ್ಣುಳ್ಳವರಾಗಿ ಶತ್ರುಯೋಧರನ್ನು ಸಮೀಪಿಸಿ ತಮ್ಮ ಎದೆಯಿಂದ ಅವರ ಎದೆಗೆ ಗಟ್ಟಿಯಾಗಿ ಹೊಡೆದು ಅಲಿಂಗಿಸಿ ಪ್ರಹಾರವನ್ನು ಮಾಡಿದರು.

ಪ್ರೇಷಿತಾಶ್ಚ ಮಹಾಮಾತ್ರೈರ್ವಾರಣಾಃ ಪರವಾರಣಾಃ ।
ಅಭಘ್ನಂತಿ ವಿಷಾಣಾಗ್ರೈರ್ವಾರಣಾನೇವ ಸಂಯುಗೇ ॥೩೧॥

ಮಹಾಮಾತ್ರದಿಂದ ಪ್ರೇರಿಸಲ್ಪಟ್ಟ ಶತ್ರುನಿವಾರಕವಾದ ಗಜಗಳು ಯುದ್ಧಭೂಮಿಯಲ್ಲಿ ತಮ್ಮ ದಂತದ ತುದಿಗಳಿಂದ ಗಜಗಳನ್ನೇ ತಿವಿದವು.

ತೇ ಜಾತರುಧಿರಾಪೀಡಾಃ ಪತಾಕಾಭಿರಲಂಕೃತಾಃ ।
ಸಂಸಕ್ತಾಃ ಪ್ರತ್ಯದೃಶ್ಯಂತ ಮೇಘಾ ಇವ ಸವಿದ್ಯುತಃ ॥೩೨॥

ಪತಾಕೆಗಳಿಂದ ಅಲಂಕೃತವಾದ ಆ ಗಜಗಳು ಅದರಿಂದ ರಕ್ತಾಭರಣಭೂಷಿತವಾಗಿ ಪರಸ್ಪರವಾಗಿ ಸೆಣಸಿ ಮಿಂಚಿನಿಂದ ಕೂಡಿದ ಮೋಡಗಳಂತೆ ಕಂಡುಬಂದವು.

ಕೇಚಿದ್ ಭಿನ್ನಾ ವಿಷಾಣಾಗ್ರೈರ್ಭಿನ್ನಕುಂಭಾಶ್ಚ ತೋಮರೈಃ ।
ವಿನದಂತೋಽಭ್ಯಧಾವಂತ ಗರ್ಜಂತೋ ಜಲದಾ ಇವ ॥೩೩॥

ಕೆಲವು ಗಜಗಳು ದಂತದ ಅಗ್ರಭಾಗಗಳಿಂದ ಭಿನ್ನವಾಗಿ, ಇನ್ನು ಕೆಲವು ಗಜಗಳು ತೋಮರಗಳಿಂದ ಅವುಗಳ ಕುಂಭಸ್ಥಲಗಳು ಭಿನ್ನವಾಗಿ ಮೋಡಗಳಂತೆ ಗರ್ಜಿಸುತ್ತಾ ರಣಭೂಮಿಯಲ್ಲಿ ಓಡಿದವು.

ಕೇಚಿದ್ ಹಸ್ತ್ಯರ್ದ್ಧಿಧಾ ಭಿನ್ನೈಶ್ಚಿನ್ನಗಾತ್ರಾಸ್ತ್ರಹಾಪರೇ ।
ನಿಪೇತುಸ್ತುಮುಲೇ ತಸ್ಮಿಂಶ್ಚಿನ್ನಪಕ್ಷಾ ಇವಾದ್ರಯಃ ॥೩೪॥

ಕೆಲವು ಗಜಗಳು ಎರಡು ಭಾಗವಾಗಿ ಕತ್ತರಿಸಿದ ಸೊಂಡಿಲುಗಳನ್ನು ಹೊಂದಿ, ಇನ್ನು ಕೆಲವು ಗಜಗಳು ಶರೀರವೆಲ್ಲ ಕತ್ತರಿಸಲ್ಪಟ್ಟು ರೆಕ್ಕೆಗಳನ್ನು ಕತ್ತರಿಸಿದ ಪರ್ವತಗಳಂತೆ ಆ ತೀವ್ರವಾದ ಸಂಘರ್ಷದಲ್ಲಿ ರಣಭೂಮಿಯಲ್ಲಿ ಬಿದ್ದವು.

ಪಾರ್ಶ್ವೈಸ್ತು ದಾರಿತೈರನ್ಯೇ ವಾರಣೈರ್ವಾರವಾರಣಾಃ ।
ಮುಮುಚುಃ ಶೋಣಿತಂ ಭೂರಿ ಧಾತೂನಿವ ಮಹೀಧರಾಃ ॥೩೫॥

ಇನ್ನು ಕೆಲವು ಗಜಗಳು ಶತ್ರುಗಜಗಳಿಂದ ಪಾರ್ಶ್ವಗಳಲ್ಲಿ ಸೀಳಲ್ಪಟ್ಟು ಪರ್ವತವು ಧಾತುಗಳನ್ನು ಸುರಿಸಿದಂತೆ ಬಹಳ ರಕ್ತವನ್ನು ಸುರಿಸಿದವು.

ನಾರಾಚಾಭಿಹತಾಸ್ತ್ವನ್ಯೇ ತಥಾ ವಿದ್ಧಾಶ್ಚ ತೋಮರೈಃ ।
ಹತಾರೋಹಾ ವ್ಯದೃಶ್ಯಂತ ವಿಶೃಂಗಾ ಇವ ಪರ್ವತಾಃ ॥೩೬॥

ನಾರಾಚಗಳಿಂದ ಹೊಡೆಯಲ್ಪಟ್ಟು, ಹಾಗೆಯೇ ತೋಮರಗಳಿಂದ ಹೊಡೆಯಲ್ಪಟ್ಟು, ಗಜಾರೋಹಿಗಳು ಹತರಾಗುತ್ತಿರಲು ಆ ಗಜಗಳು ಶಿಖರವಿಲ್ಲದ ಪರ್ವತದಂತೆ ಕಂಡುಬಂದವು.

ಕೇಚಿತ್ ಕ್ರೋಧಸಮಾವಿಷ್ಟಾ ಮದಾಂಧಾ ನಿರವಗ್ರಹಾಃ ।
ರಥಾನ್ ಹಯಾನ್ ಪದಾತಾಂಶ್ಚ ಮಮೃದುಃ ಶತಶೋ ರಣೇ ॥೩೭॥

ಕೆಲವು ಕ್ರೋಧಾವಿಷ್ಟವಾದ ಗಜಗಳು ಮದಾಂಧವಾಗಿ ಯಾವ ತಡೆಯೂ ಇಲ್ಲದೆ ರಣರಂಗದಲ್ಲಿ ನೂರಾರು ಸಂಖ್ಯೆಯಲ್ಲಿ ರಥಗಳನ್ನೂ, ಅಶ್ವಗಳನ್ನೂ ಮತ್ತು ಪದಾತಿಗಳನ್ನೂ ತುಳಿದು ಪುಡಿಮಾಡಿದವು.

ತಥಾ ಹಯಾ ಹಯಾರೋಹೈಸ್ತಾಡಿತಾಃ ಪ್ರಾಸತೋಮರೈಃ ।
ತೇನ ತೇನಾಭ್ಯವರ್ತಂತ ಕುರ್ವಂತೋ ವ್ಯಾಕುಲಾ ದಿಶಃ ॥೩೮॥

ಹಾಗೆಯೇ ಅಶ್ವಾರೋಹಿಗಳಿಂದ ಪ್ರಾಸ-ತೋಮರಗಳಿಂದ ಪ್ರಹಾರವನ್ನು ಹೊಂದಿದ ಅಶ್ವಗಳು ತಮಗೆ ಮನಸ್ಸು ಬಂದ ಕಡೆ ಓಡಿ, ಎಲ್ಲ ದಿಕ್ಕುಗಳನ್ನೂ ವ್ಯಾಕುಲಗೊಳಿಸಿದವು.

ರಥಿನೋ ರಥಿಭಿಃ ಸಾರ್ಧಂ ಕುಲಪುತ್ರಾಸ್ತನುತ್ಯಜಃ ।
ಪರಾಂ ಶಕ್ತಿಂ ಸಮಾಸ್ಥಾಯ ಚಕ್ರುಃ ಕರ್ಮಾಣ್ಯಭೀತವತ್ ॥೩೯॥

ಕುಲಪುತ್ರರೂ, ಶರೀರವನ್ನು ತ್ಯಜಿಸಲು ಸಿದ್ಧರಾದವರೂ ಆದ ರಥಿಕರು ರಥಿಕರ ಜೊತೆಯಲ್ಲಿ ಸೇರಿ ತಮ್ಮ ಉತ್ತಮವಾದ ಶಕ್ತಿಯನ್ನು ಆಶ್ರಯಿಸಿ ನಿರ್ಭಯವಾಗಿ ಹೋರಾಟವನ್ನು ಮಾಡಿದರು.

ಸ್ವಯಂವರ ಇವಾಮರ್ದೇ ಪ್ರಜಹ್ರುರಿತರೇತರಮ್ ।
ಪ್ರಾರ್ಥಯಾನಾ ಯಶೋ ರಾಜನ್ ಸ್ವರ್ಗಂ ವಾ ಯುದ್ಧಶಾಲಿನಃ ॥

ಎಲೈ ರಾಜನೇ, ಸ್ವಯಂವರದ ಉತ್ಸಾಹದಂತೆ ರಣರಂಗದಲ್ಲಿ ಉತ್ಸಾಹವನ್ನು ಹೊಂದಿ ಯಶಸ್ಸನ್ನಾಗಲೀ ಅಥವಾ ಸ್ವರ್ಗವನ್ನಾಗಲೀ ಬಯಸಿ ಯುದ್ಧತೀಲರಾದ ಯೋಧರು ಪರಸ್ಪರವಾಗಿ ಪ್ರಹಾರವನ್ನು ಮಾಡಿದರು.

ತಸ್ಮಿಂಸ್ತಥಾ ವರ್ತಮಾನೇ ಸಂಗ್ರಾಮೇ ರೋಮಹರ್ಷಣೇ ।
ಧಾರ್ತರಾಷ್ಟ್ರಂ ಮಹತ್ಸೈನ್ಯಂ ಪ್ರಾಯಶೋ ವಿಮುಖೀಕೃತಮ್ ॥೪೧॥

ರೋಮಾಂಚಕಾರಿಯಾದ ಆ ಸಂಘರ್ಷವು ಹಾಗೆ ನಡೆಯುತ್ತಿರಲು ದುರ್ಯೋಧನನ ದೊಡ್ಡ ಸೈನ್ಯವು ಹೆಚ್ಚಾಗಿ ಯುದ್ಧ ವಿಮುಖವಾಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ಭೀಷ್ಮಪರ್ವಣಿ ಏಕೋನನವತಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಏಕೋನಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಎಂಬತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತನೆಯ ಅಧ್ಯಾಯ

ಘಟೋತ್ಕಚನಿಗೆ ಹೆದರಿ ಕೌರವಸೇನೆಯ ಪಲಾಯನ.

ಸಂಜಯಃ

ಸ್ವಸೈನ್ಯಂ ನಿಹತಂ ದೃಷ್ಟ್ವಾ ರಾಜಾ ದುರ್ಯೋಧನಃ ಸ್ವಯಮ್ ।
ಅಭ್ಯಧಾವತ ಸಂಕ್ರುದ್ಧೋ ಭೀಮಸೇನಮರಿಂದಮಮ್ ॥೧॥

ಸಂಜಯ– ತನ್ನ ಸೈನ್ಯವು ಹತವಾಗುತ್ತಿರುವುದನ್ನು ನೋಡಿ ರಾಜನಾದ ದುರ್ಯೋಧನನು ಬಹಳ ಕೋಪಗೊಂಡು ಅರಿಂದಮನಾದ ಭೀಮಸೇನನ ಕಡೆಗೆ ಸ್ವತಃ ಧಾವಿಸಿದನು.

ಪ್ರಗೃಹ್ಯ ಸುಮಹಚ್ಚಾಪಮಿಂದ್ರಾಶನಿಸಮಸ್ವನಮ್ ।
ಮಹತಾ ಶರವರ್ಷೇಣ ಪಾಂಡವಂ ಸಮವಾಕಿರತ್ ॥೨॥

ಇಂದ್ರನ ವಜ್ರಾಯುಧಕ್ಕೆ ಸಮವಾದ ನಾದವನ್ನು ಮಾಡುವ ದೊಡ್ಡ ಧನುಸ್ಸನ್ನು ಕೈಯಲ್ಲಿ ಹಿಡಿದು ಪಾಂಡವನ ಮೇಲೆ ಬಾಣಗಳ ದೊಡ್ಡ ಮಳೆಯನ್ನು ಸುರಿಸಿದನು.

ಅರ್ಧಚಂದ್ರಂ ಚ ಸಂಧಾಯ ಸುತೀಕ್ಷ್ಣಂ ಲೋಮವಾಹಿನಮ್ ।
ಭೀಮಸೇನಸ್ಯ ಚಿಚ್ಛೇದ ಚಾಪಂ ಕ್ರೋಧಸಮನ್ವಿತಃ ॥೩॥

ಕ್ರೋಧದಿಂದ ಕೂಡಿದ ಅವನು ರೋಮವನ್ನೂ ಸೀಳುವಷ್ಟು ಹರಿತವಾದ ಅರ್ಧಚಂದ್ರವನ್ನು ಬಿಲ್ಲಿಗೆ ಹೂಡಿ ಭೀಮಸೇನನ ಧನುಸ್ಸನ್ನು ಕತ್ತರಿಸಿದನು.

ತದಂತರಂ ಚ ಸಂಪ್ರೇಕ್ಷ್ಯ ತ್ವರಮಾಣೋ ಮಹಾರಥಃ ।
ಸಂದಧೇ ನಿಶಿತಂ ಬಾಣಂ ಗಿರೀಣಾಮಪಿ ದಾರಣಮ್ ।
ತೇನೋರಸಿ ಮಹಾಬಾಹುರ್ಭೀಮಸೇನಮತಾಡಯತ್ ॥೪॥

ಭೀಮಸೇನನು ಕೊಟ್ಟ ಒಂದು ಅವಕಾಶವನ್ನು ನೋಡಿ ಮಹಾರಥನೂ, ಮಹಾಬಾಹುವೂ ಆದ ದುರ್ಯೋಧನನು ಪರ್ವತವನ್ನೂ ಭೇದಿಸುವಂತಹ ತೀಕ್ಷ್ಣವಾದ ಬಾಣವನ್ನು ಹೂಡಿ ಅದರಿಂದ ಭೀಮಸೇನನನ್ನು, ವಕ್ಷಸ್ಥಲದಲ್ಲಿ ಹೊಡೆದನು.

ಸ ಗಾಢವಿದ್ಧೋ ವ್ಯಥಿತಃ ಸೃಕ್ಕಿಣೇ ಪರಿಸಂಲಿಹನ್ ।
ಸಮಾಲಲಂಬೇ ತೇಜಸ್ವೀ ಧ್ವಜಂ ಹೇಮಪರಿಷ್ಕೃತಮ್ ॥೫॥

ಆ ಬಾಣದಿಂದ ಗಾಢವಾಗಿ ಗಾಯಗೊಂಡು ವ್ಯಥಿತನಾದ ತೇಜಸ್ವಿಯಾದ ಭೀಮನು ಕಟಬಾಯಿಯನ್ನು ಸವರಿಕೊಳ್ಳುತ್ತಾ ಸುವರ್ಣಾಲಂಕೃತವಾದ ರಥಧ್ವಜವನ್ನು ಆಶ್ರಯಿಸಿದನು.

ತಥಾ ವಿಮನಸಂ ದೃಷ್ಟ್ವಾ ಭೀಮಸೇನಂ ಘಟೋತ್ಕಚಃ ।
ಕ್ರೋಧೇನಾಭಿಪ್ರಜಜ್ವಾಲ ದಿಧಕ್ಷನ್ನಿವ ಪಾವಕಃ ॥೬॥

ಭೀಮಸೇನನು ಪೀಡಿತನಾಗಿ ವಿಮನಸ್ಕನಾಗಿರುವುದನ್ನು ನೋಡಿದ ಘಟೋತ್ಕಚನು ದಹಿಸುವ ಅಗ್ನಿಯಂತೆ ಕ್ರೋಧದಿಂದ ಉರಿದನು.

ಅಭಿಮನ್ಯುಮುಖಾಶ್ಚೈವ ಪಾಂಡವಾನಾಂ ಮಹಾರಥಾಃ ।
ಸಮಭ್ಯಧಾವನ್ ಕ್ರೋಶಂತೋ ರಾಜಾನಂ ಜಾತಸಂಭ್ರಮಾಃ ॥೬॥

ಅಭಿಮನ್ಯು ಮೊದಲಾದ ಪಾಂಡವರ ಮಹಾರಥರು ಗಾಬರಿಗೊಂಡು ಸಿಂಹನಾದವನ್ನು ಮಾಡುತ್ತಾ ಭೀಮಸೇನನ ಬಳಿಗೆ ಓಡಿ ಬಂದರು.

ಸಂಪ್ರೇಕ್ಷ್ಯ ತಾನಾಪತತಃ ಸಂಕ್ರುದ್ಧಾನ್ ಜಾತಸಂಭ್ರಮಾನ್ ।
ಭಾರದ್ವಾಜೋಽಬ್ರವೀದ್ ವಾಕ್ಯಂ ತಾವಕಾನಾಂ ಮಹಾರಥಾನ್ ॥೭॥

ಬಹಳ ಕೋಪಗೊಂಡವರೂ ಮತ್ತು ಗಾಬರಿಗೊಂಡವರೂ ಆದ ಅವರು ತಮ್ಮ ಕಡೆಗೆ ಬರುತ್ತಿದ್ದುದನ್ನು ನೋಡಿದ ದ್ರೋಣರು ನಿನ್ನ ಮಹಾರಥರನ್ನು ಕುರಿತು ಮಾತನಾಡಿದರು.

ಕ್ಷಿಪ್ರಂ ಗಚ್ಛತ ಭದ್ರಂ ವೋ ರಾಜಾನಂ ಪರಿರಕ್ಷತ ।
ಸಂಶಯಂ ಪರಮಂ ಪ್ರಾಪ್ತಂ ಮಜ್ಜಂತಂ ವ್ಯಸನಾರ್ಣವೇ ॥೮॥

ನಿಮಗೆ ಮಂಗಳವಾಗಲಿ. ಬೇಗ ಹೋಗಿ. ಪ್ರಾಣಸಂಶಯಕ್ಕೆ ಸಿಲುಕಿ ವ್ಯಸನ ಸಮುದ್ರದಲ್ಲಿ ಮುಳುಗುತ್ತಿರುವ ರಾಜನನ್ನು ರಕ್ಷಿಸಿ.

ಏತೇ ಕ್ರುದ್ಧಾ ಮಹೇಷ್ವಾಸಾಃ ಪಾಂಡವಾನಾಂ ಮಹಾರಥಾಃ ।
ಭೀಮಸೇನಂ ಪುರಸ್ಕೃತ್ಯ ದುರ್ಯೋಧನಮುಪದ್ರುತಾಃ ॥೯॥

ಕ್ರೋಧಗೊಂಡವರೂ, ಮಹಾಧನುರ್ಧಾರಿಗಳೂ ಆದ ಪಾಂಡವರ ಈ ಮಹಾರಥರು ಭೀಮಸೇನನನ್ನು ಮುಂದೆ ಮಾಡಿಕೊಂಡು ದುರ್ಯೋಧನನ ಕಡೆಗೆ ಓಡಿಬರುತ್ತಿದ್ದಾರೆ.

ನಾನಾವಿಧಾನಿ ಶಸ್ತ್ರಾಣಿ ವಿಸೃಜಂತೋ ಜಯೇ ರತಾಃ ।
ನದಂತೋ ಭೈರವಾನ್ನಾದಾನ್ ತ್ರಾಸಯಂತಶ್ಚ ಭೂಮಿಪಾನ್ ॥೧೦॥

ಜಯದಲ್ಲಿಯೇ ಮನಸ್ಸುಳ್ಳ ಅವರು ನಾನಾವಿಧವಾದ ಶಸ್ತ್ರಗಳನ್ನು ಪ್ರಯೋಗಿಸುತ್ತಾ ಭಯಂಕರವಾದ ನಾದವನ್ನು ಮಾಡಿ ನಮ್ಮ ರಾಜರುಗಳನ್ನು ಹೆದರಿಸುತ್ತಾ (ಬರುತ್ತಿದ್ದಾರೆ) (ಎಂದು ಹೇಳಿದರು).

ತದಾಚಾರ್ಯವಚಃ ಶ್ರುತ್ವಾ ಸೋಮದತ್ತಪುರೋಗಮಾಃ ।
ತಾವಕಾಃ ಸಮವರ್ತಂತ ಪಾಂಡವಾನಾಮನೀಕಿನೀಮ್ ॥೧೨॥

ಆಚಾರ್ಯರ ಆ ಮಾತುಗಳನ್ನು ಕೇಳಿ ಸೋಮದತ್ತನೇ ಮೊದಲಾದ ನಿನ್ನವರು ಪಾಂಡವರ ಸೈನ್ಯವನ್ನು ಎದುರಿಸಿದರು.

ಕೃಪೋ ಭೂರಿಶ್ರವಾಃ ಶಲ್ಯೋ ದ್ರೋಣಪುತ್ರೋ ವಿವಿಂಶತಿಃ ।
ಚಿತ್ರಸೇನೋ ವಿಕರ್ಣಶ್ಚ ಸೈಂಧವೋಽಥ ಬೃಹದ್ಬಲಃ ।
ಆವಂತ್ಯೌ ಚ ಮಹೇಷ್ವಾಸೌ ಕೌರವಂ ಪರ್ಯವಾರಯನ್ ॥೧೩॥

ಕೃಪರು, ಭೂರಿಶ್ರವ, ಶಲ್ಯ, ಅಶ್ವತ್ಥಾಮರು, ವಿವಿಂಶತಿ, ಚಿತ್ರಸೇನ, ವಿಕರ್ಣ, ಸೈಂಧವ, ಬೃಹದ್ಬಲ, ಆವಂತಿದೇಶದ ಸಹೋದರರು ಈ ಎಲ್ಲಾ ಮಹಾಧನುರ್ಧಾರಿಗಳು ದುರ್ಯೋಧನನನ್ನು ರಕ್ಷಿಸಲು ಅವನನ್ನು ಸುತ್ತುವರಿದರು.

ತೇ ವಿಂಶತಿಪದಂ ಗತ್ವಾ ಸಂಪ್ರಹಾರಂ ಪ್ರಚಕ್ರಿರೇ ।
ಪಾಂಡವಾ ಧಾರ್ತರಾಷ್ಟ್ರಾಶ್ಚ ಪರಸ್ಪರಜಿಘಾಂಸವಃ ॥೧೪॥

ಇಪ್ಪತ್ತು ಹೆಜ್ಜೆಗಳು ಮುಂದೆ ಹೋಗಿ ಪಾಂಡವರು ಮತ್ತು ದುರ್ಯೋಧನಾದಿಗಳು ಪರಸ್ಪರವಾಗಿ ಕೊಲ್ಲಲು ಬಯಸಿ ಶ್ರೇಷ್ಠವಾದ ಪ್ರಹಾರಗಳನ್ನು ಮಾಡಿದರು.

ವಿವಮುಕ್ತ್ವಾ ಮಹಾಬಾಹುರ್ಮಹದ್ ವಿಸ್ಫಾರ್ಯ ಕಾರ್ಮುಕಮ್ ।
ಭಾರದ್ವಾಜಸ್ತತೋ ಭೀಮಂ ಷಡ್ವಿಂಶತ್ಯಾ ಸಮಾರ್ಪಯತ್ ॥೧೫॥

ಮಹಾಬಾಹುಗಳಾದ ದ್ರೋಣರು ಹಿಂದೆ ಹೇಳಿದಂತೆ ಮಾತನಾಡಿ ತಮ್ಮ ಧನುಸ್ಸನ್ನು ಎಳೆದು ಭೀಮಸೇನನ ಮೇಲೆ ಇಪ್ಪತ್ತಾರು ಬಾಣಗಳನ್ನು ಪ್ರಯೋಗಿಸಿದರು.

ಭೂಯಶ್ಚೈನಂ ಮಹಾಬಾಹುಃ ಶರೈಃ ಶೀಘ್ರಮವಾಕಿರತ್ ।
ಪರ್ವತಂ ವಾರಿಧಾರಾಭಿಃ ಶರದೀವ ಬಲಾಹಕಃ ॥೧೬॥

ಮಹಾಬಾಹುಗಳಾದ ಅವರು ಪುನಃ ಶರತ್ಕಾಲದಲ್ಲಿ ಮೋಡವು ಪರ್ವತದ ಮೇಲೆ ಜಲಧಾರೆಗಳನ್ನು ಸುರಿಸುವಂತೆ ಶೀಘ್ರವಾಗಿ ಅವನ ಮೇಲೆ ಬಾಣಗಳ ಮಳೆಯನ್ನು ಸುರಿಸಿದರು.

ತಂ ಪ್ರತ್ಯವಿಧ್ಯದ್ ದಶಭಿರ್ಭೀಮಸೇನಃ ಶಿಲೀಮುಖೈಃ ।
ತ್ವರಮಾಣೋ ಮಹೇಷ್ವಾಸಃ ಸವ್ಯೇ ಪಾರ್ಶ್ವೇ ಮಹಾಬಲಃ ॥೧೭॥

ಮಹಾಬಲನೂ, ಮಹಾಧನುರ್ಧಾರಿಯೂ ಆದ ಭೀಮಸೇನನು ಶೀಘ್ರವಾಗಿ ದ್ರೋಣರಿಗೆ ಅವರ ಎಡಪಾರ್ಶ್ವದಲ್ಲಿ ಹತ್ತು ಬಾಣಗಳಿಂದ ಹೊಡೆದನು.

ಸ ಗಾಢವಿದ್ಧೋ ವ್ಯಥಿತೋ ವಯೋವೃದ್ಧಶ್ಚ ಭಾರತ ।
ಪ್ರನಷ್ಟಸಂಜ್ಞಃ ಸಹಸಾ ರಥೋಪಸ್ಥ ಉಪಾವಿಶತ್ ॥೧೮॥

ಎಲೈ ಭಾರತನೇ, ಭೀಮಸೇನನ ಬಾಣಗಳಿಂದ ಗಾಢವಾಗಿ ಗಾಯಗೊಂಡು ವ್ಯಥೆಯನ್ನು ಹೊಂದಿದ ವಯೋವೃದ್ಧರಾದ ದ್ರೋಣರು ಸಂಜ್ಞೆಯನ್ನು ಕಳೆದುಕೊಂಡು ತಕ್ಷಣ ರಥಪೀಠದಲ್ಲಿ ಕುಳಿತರು.

ಗುರುಂ ಪ್ರವ್ಯಥಿತಂ ದೃಷ್ಟ್ವಾ ರಾಜಾ ದುರ್ಯೋಧನಃ ಸ್ವಯಮ್ ।
ದ್ರೌಣಾಯನಿಶ್ಚ ಸಂಕ್ರುದ್ಧೌ ಭೀಮಸೇನಮಭಿದ್ರುತೌ ॥೧೯॥

ಗುರುಗಳು ವ್ಯಥೆಗೆ ಈಡಾದುದನ್ನು ನೋಡಿ ಸ್ವತಃ ರಾಜನಾದ ದುರ್ಯೋಧನನು ಮತ್ತು ಅಶ್ವತ್ಥಾಮರು ಕೋಪಗೊಂಡು ಭೀಮಸೇನನ ಕಡೆಗೆ ಧಾವಿಸಿದರು.

ತಾವಾಪತಂತೌ ಸಂಪ್ರೇಕ್ಷ್ಯ ಕಾಲಾಂತಕಯಮೋಪಮೌ ।
ಭೀಮಸೇನೋ ಮಹಾಬಾಹುರ್ಗದಾಮಾದಾಯ ಸತ್ವರಃ ॥೨೦॥

ಅವಪ್ಲುತ್ಯ ರಥಾತ್ ತೂರ್ಣಂ ತಸ್ಥೌ ಗಿರಿರಿವಾಚಲಃ ।
ಸಮುದ್ಯಮ್ಯ ಗದಾಂ ಗುರ್ವೀಂ ಯಮದಂಡೋಪಮಾಂ ರಣೇ ॥೨೧॥

ಕಾಲಾಂತಕ ಯಮನಂತೆ ತನ್ನ ಕಡೆಗೆ ಬರುತ್ತಿದ್ದ ಅವರಿಬ್ಬರನ್ನೂ ನೋಡಿ ಮಹಾಬಾಹುವಾದ ಭೀಮಸೇನನು ಜಾಗ್ರತೆಯಾಗಿ ಗದೆಯನ್ನು ತೆಗೆದುಕೊಂಡು, ಶೀಘ್ರವಾಗಿ ರಥದಿಂದ ಕೆಳಗೆ ಹಾರಿ, ಯಮದಂಡಸದೃಶವಾದ ಆ ಭಾರವಾದ ಗದೆಯನ್ನು ಎತ್ತಿಹಿಡಿದು ರಣರಂಗದಲ್ಲಿ ಪರ್ವತದಂತೆ ಅಚಲನಾಗಿ ನಿಂತನು.

ತಮುದ್ಯತಗದಂ ದೃಷ್ಟ್ವಾ ಕೈಲಾಸಮಿವ ಶೃಂಗಿಣಮ್ ।
ಕೌರವ್ಯೋ ದ್ರೋಣಪುತ್ರಶ್ಚ ಸಹಿತಾವಭ್ಯಧಾವತಾಮ್ ॥೨೨॥

ಗದೆಯನ್ನು ಎತ್ತಿಹಿಡಿದು ಕೈಲಾಸದ ಶಿಖರದಂತಿದ್ದ ಭೀಮಸೇನನನ್ನು ನೋಡಿ ದುರ್ಯೋಧನ ಮತ್ತು ಅಶ್ವತ್ಥಾಮರಿಬ್ಬರೂ ಜೊತೆಯಲ್ಲಿಯೇ ಅವನ ಕಡೆಗೆ ಧಾವಿಸಿದರು.

ತಾವಾಪತಂತೌ ಸಹಿತೌ ತ್ವರಿತೌ ಬಲಿನಾಂ ವರೌ ।
ಅಭ್ಯಧಾವತ ವೇಗೇನ ತ್ವರಮಾಣೋ ವೃಕೋದರಃ ॥೨೩॥

ಬಲಿಷ್ಠರಲ್ಲಿ ಶ್ರೇಷ್ಠರಾದ ಅವರಿಬ್ಬರೂ ಜೊತೆಯಲ್ಲಿ ತನ್ನ ಕಡೆಗೆ ಧಾವಿಸಿ ಬರುತ್ತಿರುವುದನ್ನು ನೋಡಿದ ಭೀಮಸೇನನು ತಾನೂ ತ್ವರೆಮಾಡಿ ಶೀಘ್ರವಾಗಿ ಅವರ ಕಡೆಗೆ ಓಡಿದನು.

ತಮಾಪತಂತಂ ಸಂಪ್ರೇಕ್ಷ್ಯ ಸಂಕ್ರುದ್ಧಂ ಭೀಮದರ್ಶನಮ್ ।
ಸಮಭ್ಯಧಾವಂಸ್ತ್ವರಿತಾಃ ಕೌರವಾಣಾಂ ಮಹಾರಥಾಃ ॥೨೪॥

ಬಹಳ ಕೋಪಗೊಂಡವನೂ, ನೋಡಲು ಭಯಂಕರನೂ ಆದ ಭೀಮಸೇನನು ತಮ್ಮ ಕಡೆಗೆ ಬರುತ್ತಿರುವುದನ್ನು ನೋಡಿ ಕೌರವರ ಮಹಾರಥರು ಶೀಘ್ರವಾಗಿ ಅವನ ಕಡೆಗೆ ಧಾವಿಸಿದರು.

ಭಾರದ್ವಾಜಮುಖಾಃ ಸರ್ವೇ ಭೀಮಸೇನಜಿಘಾಂಸಯಾ ।
ನಾನಾವಿಧಾನಿ ಶಸ್ತ್ರಾಣಿ ಭೀಮಸ್ಯೋರಸ್ಯಪಾತಯನ್ ।
ಸಹಿತಾಃ ಪಾಂಡವಂ ಸರ್ವೇ ಪೀಡಯಂತಃ ಸಮಂತತಃ ॥೨೫॥

ದ್ರೋಣರೇ ಮೊದಲಾದ ಎಲ್ಲರೂ ಜೊತೆಯಾಗಿ ಎಲ್ಲ ಕಡೆಗಳಿಂದಲೂ ಭೀಮಸೇನನನ್ನು ಪೀಡಿಸುತ್ತಾ, ಅವನನ್ನು ಕೊಲ್ಲಲು ಬಯಸಿ ನಾನಾವಿಧವಾದ ಶಸ್ತ್ರಗಳನ್ನು ಅವನ ವಕ್ಷಸ್ಥಲದಲ್ಲಿ ಪ್ರಯೋಗಿಸಿದರು.

ತಂ ದೃಷ್ಟ್ವಾ ಸಂಶಯಂ ಪ್ರಾಪ್ತಂ ಪೀಡ್ಯಮಾನಂ ಮಹಾರಥಮ್ ।
ಅಭಿಮನ್ಯುಪ್ರಭೃತಯಃ ಪಾಂಡವಾನಾಂ ಮಹಾರಥಾಃ ।
ಅಭ್ಯಧಾವನ್ ಪರೀಪ್ಸಂತಃ ಪ್ರಾಣಾಂಸ್ತ್ಯಕ್ತ್ವಾ ಸುದುಸ್ತ್ಯಜಾನ್ ॥೨೬॥

ದ್ರೋಣಾದಿಗಳಿಂದ ಪೀಡಿತನಾಗಿ, ಸಂಕಟಕ್ಕೆ ಸಿಲುಕಿದ ಮಹಾರಥನಾದ ಭೀಮಸೇನನನ್ನು ರಕ್ಷಿಸಲು ಬಯಸಿ, ಅಭಿಮನ್ಯು ಮೊದಲಾದ ಪಾಂಡವರ

ಮಹಾರಥರು ದುಸ್ತ್ಯಜವಾದ ತಮ್ಮ ಪ್ರಾಣಗಳನ್ನೂ ಲೆಕ್ಕಿಸದೆ (ಭೀಮಸೇನನ ರಕ್ಷಣೆಗಾಗಿ) ಓಡಿಬಂದರು.

ಅನೂಪಾಧಿಪತಿಃ ಶೂರೋ ಭೀಮಸ್ಯ ದಯಿತಃ ಸಖಾ ।
ನೀಲೋ ನೀಲಾಂಬುದಪ್ರಖ್ಯಃ ಸಂಕ್ರುದ್ಧೋ ದ್ರೌಣಮಭ್ಯಯಾತ್ ।
ಸ್ಪರ್ಧತೇ ಹಿ ಮಹೇಷ್ವಾಸೋ ನಿತ್ಯಂ ದ್ರೋಣಸುತೇನ ಯಃ ॥೨೭॥

ಭೀಮನ ಪ್ರಿಯಸ್ನೇಹಿತನೂ, ನೀಲಮೇಘವರ್ಣನೂ, ಶೂರನೂ, ಅನೂಪ ದೇಶದ ರಾಜನೂ ಆದ ನೀಲನು ಬಹಳ ಕೋಪಗೊಂಡು ಅಶ್ವತ್ಥಾಮರನ್ನು ಎದುರಿಸಿದನು. ಮಹಾಧನುರ್ಧಾರಿಯಾದ ಅವನು ಯಾವಾಗಲೂ ಅಶ್ವತ್ಥಾಮರ ಜೊತೆಯಲ್ಲಿ ಸ್ಪರ್ಧಿಸುತ್ತಾನೆ ಎಂಬುದು ಪ್ರಸಿದ್ಧವಾದುದು.

ಸ ವಿಸ್ಫಾರ್ಯ ಮಹಚ್ಚಾಪಂ ದ್ರೌಣಿಂ ವಿವ್ಯಾಧ ಪತ್ರಿಣಾ ।
ಯಥಾ ಶಕ್ರೋ ಮಹಾರಾಜ ಪುರಾ ವಿವ್ಯಾಧ ದಾನವಮ್ ॥೨೮॥

ವಿಪ್ರಚಿತ್ತಿಂ ದುರಾಧರ್ಷಂ ದೇವತಾನಾಂ ಭಯಂಕರಮ್ ।
ಯೇನ ಲೋಕತ್ರಯಂ ಕ್ರೋಧಾತ್ ತ್ರಾಸಿತಂ ಸ್ವೇನ ತೇಜಸಾ ॥೨೯॥

ಎಲೈ ಮಹಾರಾಜನೇ, ಲೋಕತ್ರಯವನ್ನು ಕ್ರೋಧದಿಂದ ಮತ್ತು ತನ್ನ ಸಾಮರ್ಥ್ಯದಿಂದ ಹೆದರಿಸಿದವನೂ, ದೇವತೆಗಳಿಗೆ ಭಯಂಕರನೂ, ಸೋಲಿಸಲು ಸಾಧ್ಯವಿಲ್ಲದವನೂ ಆದ ದಾನವನಾದ ವಿಪ್ರಚಿತ್ತಿಯ ಜೊತೆಯಲ್ಲಿ ಹಿಂದೆ ಇಂದ್ರನು ಯುದ್ಧಮಾಡಿದಂತೆ ನೀಲನು ತನ್ನ ದೊಡ್ಡ ಧನುಸ್ಸನ್ನು ಬಗ್ಗಿಸಿ ಅಶ್ವತ್ಥಾಮರನ್ನು ಬಾಣದಿಂದ ಹೊಡೆದನು.

ತಥಾ ನೀಲೇನ ನಿರ್ಭಿನ್ನಃ ಸುಮುಖೇನ ಪತತ್ರಿಣಾ ।
ಸಂಜಾತರುಧಿರೋತ್ಪೀಡೋ ದ್ರೌಣಿಃ ಕ್ರೋಧಸಮನ್ವಿತಃ ॥೩೦॥

ಸ ವಿಸ್ಫಾರ್ಯ ಧನುಶ್ಚಿತ್ರಮಿಂದ್ರಾಶನಿಸಮಸ್ವನಮ್ ।
ದಧ್ಮೌ ನೀಲವಿನಾಶಾಯ ಮತಿಂ ಮತಿಮತಾಂ ವರಃ ॥೩೧॥

ನೀಲನು ಚೆನ್ನಾಗಿ ಪ್ರಯೋಗಿಸಿದ ಪತ್ರಸಹಿತವಾದ ಬಾಣದಿಂದ ಗಾಯಗೊಂಡ ಅಶ್ವತ್ಥಾಮರು ರಕ್ತದ ಶಿರೋಭೂಷಣವನ್ನು ಹೊಂದಿದವರಾಗಿ, ಕ್ರೋಧಸಮನ್ವಿತರಾಗಿ

ಇಂದ್ರನ ವಜ್ರಾಯುಧದಂತೆ ನಾದವನ್ನು ಮಾಡುವ ತಮ್ಮ ವಿಚಿತ್ರವಾದ ಧನುಸ್ಸನ್ನು ಎಳೆದು ಮೇಧಾವಿಗಳಲ್ಲಿ ಶ್ರೇಷ್ಠರಾದ ಅವರು ನೀಲನನ್ನು ವಿನಾಶ ಮಾಡುವುದಾಗಿ ನಿಶ್ಚಯಿಸಿದರು.

ತತಃ ಸಂಧಾಯ ವಿಮಲಾನ್ ಭಲ್ಲಾನ್ ಕರ್ಮಾರಪಾಯಿತಾನ್ ।
ಜಘಾನ ಚತುರೋ ವಾಹಾನ್ ಹತಯಾಮಾಸ ಚ ಧ್ವಜಮ್ ॥೩.೨॥

ಅನಂತರ ಕರ್ಮಾರನು ನೀರು ಕುಡಿಸಿ ಹದಮಾಡಿದ ಸ್ವಚ್ಛವಾದ ಭಲ್ಲಗಳನ್ನು ಧನುಸ್ಸಿನಲ್ಲಿ ಹೂಡಿ ಅವುಗಳಿಂದ ನೀಲನ ರಥದ ನಾಲ್ಕು ಕುದುರೆಗಳನ್ನು ಮತ್ತು ಧ್ವಜವನ್ನು ಕೆಡವಿದರು.

ಸಹಸೋತ್ಥಾಯ ಚ ಭಲ್ಲೇನ ನೀಲಂ ವಿವ್ಯಾಧ ವಕ್ಷಸಿ ।
ಸ ಗಾಢವಿದ್ಧೋ ವ್ಯಥಿತೋ ರಥೋಪಸ್ಥ ಉಪಾವಿಶತ್ ॥೩.೩॥

ಏಳನೆಯ ಭಲ್ಲವನ್ನು ಪ್ರಯೋಗಿಸಿ ನೀಲನನ್ನು ಎದೆಯಲ್ಲಿ ಹೊಡೆದರು. ಗಾಢವಾದ ಪ್ರಹಾರಕ್ಕೆ ಒಳಗಾದ ಅವನು ವ್ಯಥೆಯಿಂದ ಕೂಡಿ ರಥೋಪದಲ್ಲಿ ಕುಳಿತನು.

ಮೋಹಿತಂ ವೀಕ್ಷ್ಯ ರಾಜಾನಂ ನೀಲಮಭ್ರಚಯೋಪಮಮ್ ।
ಶ್ವೇತೋಶ್ವೋಽಪಿ ಸಂಕ್ರುದ್ಧೋ ಭ್ರಾತೃಭಿಃ ಪರಿವಾರಿತಃ ॥೩.೪॥

ಅಭಿದುದ್ರಾವ ವೇಗೇನ ದ್ರೌಣಮಾಹವಶೋಭಿನಮ್ ।
ತಥೇತರೇ ಅಭ್ಯಧಾವನ್ ರಾಕ್ಷಸಾ ಯುದ್ಧದುರ್ಮದಾಃ ॥೩.೫॥

ಮೋಡದ ರಾಶಿಯಂತೆ ನೀಲವರ್ಣದಿಂದ ಕೂಡಿದ್ದ ನೀಲರಾಜನು ಮೂರ್ಛೆ ಹೊಂದಿದುದನ್ನು ನೋಡಿ ಶ್ವೇತೋಶ್ವನೂ ಸಹ ಕ್ರೋಧಗೊಂಡು ತನ್ನ ಬಂಧುಗಳಿಂದ ಪರಿವಾರಿತನಾಗಿ ಯುದ್ಧದಲ್ಲಿ ಶೋಭಿಸುವ ಅಶ್ವತ್ಥಾಮರ ಕಡೆಗೆ ವೇಗದಿಂದ ಸಾಗಿದನು. ಯುದ್ಧದುರ್ಮದರಾದ ಇತರ ರಾಕ್ಷಸರೂ ಹಾಗೆಯೇ ಓಡಿದರು.

ತಮಾಪತಂತಂ ಸಂಪ್ರೇಕ್ಷ್ಯ ರಾಕ್ಷಸಂ ಘೋರದರ್ಶನಮ್ ।
ಅಭ್ಯಧಾವತ ತೇಜಸ್ವೀ ಭಾರದ್ವಾಜಾತ್ಮಜಸ್ತ್ವರನ್ ॥೩.೬॥

ತನ್ನ ಕಡೆಗೆ ಓಡಿ ಬರುತ್ತಿದ್ದ ಘೋರರೂಪನಾದ ರಾಕ್ಷಸನನ್ನು ನೋಡಿ ತೇಜಸ್ವಿಗಳಾದ ದ್ರೋಣಪುತ್ರರು ತಾವೂ ಕ್ಷಿಪ್ರವಾಗಿ ಅವನ ಕಡೆಗೆ ಓಡಿದರು.

ನಿಜಘಾನ ಚ ಸಂಕ್ರುದ್ಧೋ ರಾಕ್ಷಸಾನ್ ಭೀಮದರ್ಶನಾನ್ ।
ಯೋಽಭವನ್ಮಗ್ನತಃ ಕ್ರುದ್ಧಾ ರಾಕ್ಷಸಸ್ಯ ಪುರಃಸರಾಃ ॥೩೭॥

ಬಹಳ ಕೋಪಗೊಂಡ ಅವರು ಘಟೋತ್ಕಚನ ಮುಂಭಾಗದಲ್ಲಿದ್ದ ಕ್ರೋಧಗೊಂಡ ಭಯಂಕರ ರೂಪವುಳ್ಳ ರಾಕ್ಷಸರನ್ನು ಬಾಣಗಳಿಂದ ಹೊಡೆದರು.

ವಿಮುಖಾಂಶ್ಚೈವ ತಾನ್ ದೃಷ್ಟ್ವಾ ದ್ರೌಣಿಚಾಪಚ್ಯುತೈಃ ಶರೈಃ ।
ಅಕ್ರುಧ್ಯತ ಮಹಾಕಾಯೋ ಭೈಮಸೇನಿರ್ಘಟೋತ್ಕಚಃ ॥೩೮॥

ಅಶ್ವತ್ಥಾಮರ ಬಿಲ್ಲಿನಿಂದ ಹೊರಹೊಮ್ಮಿದ ಬಾಣಗಳಿಂದ ಪೀಡಿತರಾಗಿ ಯುದ್ಧವಿಮುಖರಾದ ಅವರನ್ನು ನೋಡಿ ಮಹಾಕಾಯನೂ, ಭೀಮಸೇನ ಪುತ್ರನೂ ಆದ ಘಟೋತ್ಕಚನು ಕ್ರೋಧವನ್ನು ತಾಳಿದನು.

ಪ್ರಾದುಶ್ಚಕ್ರೇ ಮಹಾಮಾಯಾಂ ಘೋರರೂಪಾಂ ಸುದಾರುಣಾಮ್ ।
ಮೋಹಯನ್ ಸಮರೇ ದ್ರೌಣಿಂ ಮಾಯಾವೀ ರಾಕ್ಷಸಾಧಿಪಃ ॥೩೯॥

ರಾಕ್ಷಸಾಧಿಪತಿಯೂ ಮತ್ತು ಮಾಯಾವಿಯೂ ಆದ ಅವನು ಭಯಂಕರವಾದ ಘೋರರೂಪವುಳ್ಳ ದೊಡ್ಡ ಮಾಯೆಯನ್ನು ಸೃಷ್ಟಿಸಿ ಯುದ್ಧದಲ್ಲಿ ಅಶ್ವತ್ಥಾಮರನ್ನು ಮರುಳು ಮಾಡಿದನು.

ತತಸ್ತೇ ತಾವಕಾಃ ಸರ್ವೇ ಮಾಯಯಾ ವಿಮುಖೀಕೃತಾಃ ।
ಅನ್ಯೋನ್ಯಂ ಸಮಪಶ್ಯಂತ ನಿಕೃತ್ತಾನ್ ಮೇದಿನೀತಳೇ ।
ವಿಚೇಷ್ಟಮಾನಾನ್ ಕೃಪಣಾನ್ ಶೋಣಿತೇನ ಸಮುಕ್ಷಿತಾನ್ ॥೪೦॥

ಆಗ ನಿನ್ನ ಯೋಧರೆಲ್ಲರೂ ಘಟೋತ್ಕಚನ ಮಾಯೆಯಿಂದ ಯುದ್ಧವಿಮುಖರಾಗಿ ತಾವು ಪರಸ್ಪರವಾಗಿ ಭೂಮಿಯಲ್ಲಿ ಬಿದ್ದು ಶರೀರವು ಕತ್ತರಿಸಲ್ಪಟ್ಟು ರಕ್ತದಿಂದ ತೊಯ್ದು ಹೊರಳಾಡುವುದನ್ನು ನೋಡಿದರು.

ದ್ರೋಣಂ ದುರ್ಯೋಧನಂ ಶಲ್ಯಮಶ್ವತ್ಥಾಮಾನಮೇವ ಚ ।
ಪ್ರಾಯಶಶ್ಚ ಮಹೇಷ್ವಾಸಾ ಯೇ ಪ್ರಧಾನಾಶ್ಚ ಕೌರವಾಃ ॥೪೧॥

ವಿಧ್ವಸ್ತಾ ರಥಿನಃ ಸರ್ವೇ ಗಜಾಶ್ಚ ವಿನಿಪಾತಿತಾಃ ।
ಹಯಾಶ್ಚ ಸಹಯಾರೋಹಾ ವಿನಿಕೃತ್ತಾಃ ಸಹಸ್ರಶಃ ॥೪೨॥

ದ್ರೋಣರು, ದುರ್ಯೋಧನ, ಶಲ್ಯ, ಅಶ್ವತ್ಥಾಮ ಮತ್ತು ಕೌರವರ ಪಕ್ಷದ ಪ್ರಧಾನರಾದ ಧನುರ್ಧಾರಿಗಳು, ಎಲ್ಲ ಮಹಾರಥರು, ಗಜಗಳು, ಅಶ್ವಗಳು ಮತ್ತು ಅಶ್ವಾರೋಹಿಗಳು ಸಹಸ್ರ ಸಂಖ್ಯೆಯಲ್ಲಿ ಕತ್ತರಿಸಲ್ಪಟ್ಟವು.

ತದ್ ದೃಷ್ಟ್ವಾ ತಾವಕಂ ಸೈನ್ಯಂ ವಿದ್ರುತಂ ಶಿಬಿರಂ ಪ್ರತಿ ।
ಮಮ ಪ್ರಾಕ್ರೋಶತೋ ರಾಜನ್ ತಥಾ ದೇವವ್ರತಸ್ಯ ಚ ॥೪೩॥

ಅದನ್ನು ನೋಡಿದ ನಿನ್ನ ಸೈನ್ಯವು ಎಲ್ಲೆ ರಾಜನೇ, ನಾನು ಮತ್ತು ಭೀಷ್ಮರು ಕಿರುಚುತ್ತಿದ್ದರೂ ತಮ್ಮ ಶಿಬಿರಕ್ಕೆ ಓಡಿಹೋಯಿತು.

ಯುಧ್ಯಧ್ವಂ ಮಾ ಪಲಾಯಧ್ವಂ ಮಾಯೈಷಾ ರಾಕ್ಷಸೀ ರಣೇ ।
ಘಟೋತ್ಕಚಪ್ರಯುಕ್ತೇತಿ ನಾತಿಷ್ಠಂತ ವಿಮೋಹಿತಾಃ ।
ನೈವ ತೇ ಶ್ರದ್ದಧುರ್ಭೀತಾ ವದತೋರಾವಯೋರ್ವಚಃ ॥೪೪॥

ಯುದ್ಧವನ್ನು ಮಾಡಿ, ಓಡಬೇಡಿ, ಇದು ಘಟೋತ್ಕಚನು ಪ್ರಯೋಗಿಸಿದ ರಾಕ್ಷಸ ಮಾಯೆಗೆ (ಎಂದು ನಾವಿಬ್ಬರೂ ಕಿರುಚಿದರೂ) ಮರುಳುಗೊಂಡ ಅವರು ನಿಲ್ಲಲಿಲ್ಲ. ಭಯಗ್ರಸ್ತರಾದ ಅವರು ನಮ್ಮಿಬ್ಬರ ಮಾತನ್ನು ನಂಬಲಿಲ್ಲ.

ತಾಂಶ್ಚ ಪ್ರದ್ರವತೋ ದೃಷ್ಟ್ವಾ ಜಯಂ ಪ್ರಾಪ್ತಾಶ್ಚ ಪಾಂಡವಾಃ ।
ಘಟೋತ್ಕಚೇನ ಸಹಿತಾಃ ಸಿಂಹನಾದಾನ್ ಪ್ರಚಕ್ರಿರೇ ।
ಶಂಖದುಂದುಭಿಘೋಷಾಶ್ಚ ಸಮಂತಾತ್ ಸ್ವನನುರ್ಭೃತಮ್ ॥೪೫॥

ನಿನ್ನ ಯೋಧರು ಓಡುವುದನ್ನು ನೋಡಿ ಜಯವನ್ನು ಪಡೆದ ಪಾಂಡವರು ಘಟೋತ್ಕಚನ ಜೊತೆಯಲ್ಲಿ ಸಿಂಹನಾದಗಳನ್ನು ಮಾಡಿದರು. ಎಲ್ಲ ಕಡೆಗಳಲ್ಲಿಯೂ ಶಂಖ-ದುಂದುಭಿಗಳ ದೊಡ್ಡ ಘೋಷವು ಉಂಟಾಯಿತು.

ಏವಂ ತವ ಬಲಂ ಸರ್ವಂ ಹೈಡಿಂಬೇನ ದುರಾತ್ಮನಾ ।
ಸೂರ್ಯಾಸ್ತಮಯವೇಲಾಯಾಂ ಪ್ರಭಗ್ನಂ ವಿದ್ರುತಂ ದಿಶಃ ॥೪೬॥

ಹೀಗೆ ನಿನ್ನ ಸೈನ್ಯವೆಲ್ಲವೂ ದುರಾತ್ಮನಾದ ಘಟೋತ್ಕಚನಿಂದ ಭಗ್ನವಾಗಿ ಸೂರ್ಯಾಸ್ತ ಸಮಯದಲ್ಲಿ ದಿಕ್ಕು ದಿಕ್ಕುಗಳಿಗೆ ಓಡಿಹೋಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮವರ್ಷಣಿ ನವತಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮವರ್ಷದಲ್ಲಿ ತೊಂಬತ್ತನೆಯ ಅಧ್ಯಾಯ ಮುಗಿಯಿತು

★ ★ ★ ★ ★

ತೊಂಬತ್ತೊಂದನೆಯ ಅಧ್ಯಾಯ

ಘಟೋತ್ಕಚನಿಂದ ಪರಾಜಯವನ್ನು ಹೊಂದಿದ ದುರ್ಯೋಧನನಿಂದ ಭಗದತ್ತನ ಪ್ರೇಷಣ. ಭಗದತ್ತ-ಘಟೋತ್ಕಚರ ಯುದ್ಧ

ಸಂಜಯಃ

ತಸ್ಮಿನ್ ಮಹತಿ ಸಂಕ್ರಂದೇ ರಾಜಾ ದುರ್ಯೋಧನಸ್ತದಾ ।
ಪರಾಜಯಂ ರಾಕ್ಷಸೇನ ಪ್ರಾಪ್ತಕ್ಷತ ಪರಂತಪ ।
ಗಾಂಗೇಯಮುಪಸಂಗಮ್ಯ ವಿನಯೇನಾಭಿವಾದ್ಯ ಚ ॥೧॥

ತಸ್ಯ ಸರ್ವಂ ಯಥಾವೃತ್ತಮಾಸ್ಯಾತುಮುಪಚಕ್ರಮೇ ।
ಘಟೋತ್ಕಚಸ್ಯ ವಿಜಯಮಾತ್ಮನಶ್ಚ ಪರಾಜಯಮ್ ॥೨॥

ಸಂಜಯ- ಅಂತಹ ದೊಡ್ಡಸಂಘರ್ಷದಲ್ಲಿ ರಾಜನಾದ ದುರ್ಯೋಧನನು ಘಟೋತ್ಕಚನಿಂದ ಆದ ಪರಾಜಯವನ್ನು ಸಹಿಸಲಿಲ್ಲ. ಎಲೈ ಪರಂತಪನೇ, ಅವನು ಭೀಷ್ಮರನ್ನು ಸಮೀಪಿಸಿ ವಿನಯದಿಂದ ನಮಸ್ಕಾರವನ್ನು ಮಾಡಿ ಘಟೋತ್ಕಚನ ವಿಜಯ, ತನ್ನ ಪರಾಜಯ ಎಲ್ಲವನ್ನೂ ನಡೆದಂತೆ ಹೇಳಲು ಪ್ರಾರಂಭಿಸಿದನು.

ಕಥಯಾಮಾಸ ದುರ್ಧರ್ಷೋ ವಿವಿಶ್ಯಸ್ಯ ಪುನಃ ಪುನಃ ।
ಅಬ್ರವೀಚ್ಚ ತದಾ ರಾಜನ್ ಭೀಷ್ಮಂ ಕುರುಪಿತಾಮಹಮ್ ॥೩॥

ಎಲೈ ರಾಜನೇ, ಯುದ್ಧದಲ್ಲಿ ಸೋಲಿಸಲು ಕಷ್ಟಸಾಧ್ಯನಾದ ಅವನು ಪುನಃ ಪುನಃ ನಿಟ್ಟುಸಿರನ್ನು ಬಿಟ್ಟು ಕುರುಪಿತಾಮಹರಾದ ಭೀಷ್ಮರನ್ನು ಕುರಿತು ಆಗ ಮಾತನಾಡಿದನು.

ಭವಂತಂ ಸಮುಪಾಶ್ರಿತ್ಯ ವಾಸುದೇವಂ ಯಥಾ ಪರೈಃ ।
ಪಾಂಡವೈರ್ವಿಗ್ರಹೋ ಘೋರಃ ಸಮಾರಬ್ಧೋ ಮಯಾ ಪ್ರಭೋ ॥೪॥

ಎಲೈ ಪ್ರಭುವೇ, ಪಾಂಡವರು ಕೃಷ್ಣನನ್ನು ಆಶ್ರಯಿಸಿದಂತೆ ನಾನು ನಿಮ್ಮನ್ನು ಆಶ್ರಯಿಸಿ ಪಾಂಡವರ ಜೊತೆಯಲ್ಲಿ ಘೋರವಾದ ಕದನವನ್ನು ಪ್ರಾರಂಭಿಸಿದ್ದೇನೆ.

ಏಕಾದಶ ಸಮಾಖ್ಯಾತಾ ಅಕ್ಷೌಹಿಣ್ಯಶ್ಚ ಯಾ ಮಮ ।
ನಿದೇಶೇ ತವ ತಿಷ್ಠಂತಿ ಮಯಾ ಸಾರ್ಧಂ ಪರಂತಪ ॥೫॥

ಎಲೈ ಪರಂತಪರೇ, ನನ್ನ ಹನ್ನೊಂದು ಅಕ್ಷೌಹಿಣಿ ಸೈನ್ಯಗಳು ನನ್ನ ಜೊತೆಯಲ್ಲಿ ನಿಮ್ಮ ಆಜ್ಞಾಧಾರಕವಾಗಿವೆ.

ಸೋಽಹಂ ಭರತಶಾರ್ದೂಲ ಭೀಮಸೇನಪುರೋಗಮೈಃ ।
ಘಟೋತ್ಕಚಂ ಸಮಾಶ್ರಿತ್ಯ ಪಾಂಡವೈರ್ಯುಧಿ ನಿರ್ಜಿತಃ ॥೬॥

ಎಲೈ ಭರತಶಾರ್ದೂಲರೇ, ಅಂತಹ ನಾನು ಘಟೋತ್ಕಚನನ್ನು ಆಶ್ರಯಿಸಿದ ಭೀಮಸೇನ ಮೊದಲಾದ ಪಾಂಡವರಿಂದ ಯುದ್ಧದಲ್ಲಿ ಪರಾಜಯವನ್ನು ಹೊಂದಿದೆ.

ತನ್ಮೇ ದಹತಿ ಗಾತ್ರಾಣಿ ಶುಷ್ಕವೃಕ್ಷಮಿವಾನಲಃ ।
ತದಿಚ್ಛಾಮಿ ಮಹಾಭಾಗ ತ್ವತ್ಪ್ರಸಾದಾತ್ ಪರಂತಪ ॥೭॥

ರಾಕ್ಷಸಾಪಶದಂ ಹಂತುಂ ಸ್ವಯಮೇವ ಪಿತಾಮಹ ।
ತ್ವಾಂ ಸಮಾಶ್ರಿತ್ಯ ದುರ್ಧರ್ಷಂ ತನ್ಮೇ ಕರ್ತುಂ ತ್ವಮರ್ಹಸಿ ॥೮॥

ಆ ಪರಾಜಯವು ಒಣಗಿದ ವೃಕ್ಷವನ್ನು ಅಗ್ನಿಯು ಸುಡುವಂತೆ ನನ್ನ ಶರೀರವನ್ನು ಸುಡುತ್ತಿದೆ. ಎಲೈ ಪರಂತಪರೇ, ಪಿತಾಮಹರೇ, ಮಹಾನುಭಾವರೇ, ನಿಮ್ಮ ಅನುಗ್ರಹದಿಂದ ನಿಮ್ಮನ್ನು ಆಶ್ರಯಿಸಿ, ಸೋಲಿಸಲು ಕಷ್ಟಸಾಧ್ಯನಾದ ಆ ರಾಕ್ಷಸಾಧಮನನ್ನು ನಾನೇ ಕೊಲ್ಲಲು ಬಯಸುತ್ತೇನೆ. ನೀವು ನನಗೆ ಆ ಉಪಕಾರವನ್ನು ಮಾಡಬೇಕು (ಎಂದು ಹೇಳಿದನು).

ಸಂಜಯಃ

ಏತಚ್ಛ್ರುತ್ವಾ ತು ವಚನಂ ರಾಜ್ಞೋ ಭರತಸತ್ತಮ ।
ದುರ್ಯೋಧನಮಿದಂ ವಾಕ್ಯಂ ಭೀಷ್ಮಃ ಶಾಂತನವೋಽಬ್ರವೀತ್ ॥೯॥

ಸಂಜಯ– ಎಲೈ ಭರತಶ್ರೇಷ್ಠನೇ, ರಾಜನ ಈ ಮಾತುಗಳನ್ನು ಕೇಳಿ ಶಂತನು ಪುತ್ರರಾದ ಭೀಷ್ಮರು ದುರ್ಯೋಧನನನ್ನು ಕುರಿತು ಈ ಮಾತುಗಳನ್ನು ಆಡಿದರು.

ಶೃಣು ರಾಜನ್ ಮಮ ವಚೋ ಯತ್ತ್ವಾ ವಕ್ಷ್ಯಾಮಿ ಕೌರವ ।
ಯಥಾ ತ್ವಯಾ ಮಹಾರಾಜ ವರ್ತಿತವ್ಯಂ ಪರಂತಪ ॥೧೦॥

ಎಲೈ ರಾಜನೇ, ಕೌರವನೇ, ಪರಂತಪನೇ, ನೀನು ಹೇಗೆ ನಡದುಕೊಳ್ಳಬೇಕೆಂದು ನಾನು ನಿನಗೆ ಹೇಳುವೆನು. ಆ ನನ್ನ ಮಾತುಗಳನ್ನು ಕೇಳು.

ಆತ್ಮಾ ರಕ್ಷ್ಯೋ ರಣೇ ತಾತ ಸರ್ವಾಮಾಸ್ವರಿಂದಮ ।
ಧರ್ಮರಾಜೇನ ಸಂಗ್ರಾಮಸ್ತ್ವಯಾ ಕಾರ್ಯಃ ಸದಾನಘ ॥೧೧॥

ಎಲೈ ಪ್ರೀತಿಪಾತ್ರನೇ, ಅರಿಂದಮನೇ, ಎಲ್ಲಾ ಪರಿಸ್ಥಿತಿಯಲ್ಲಿಯೂ ರಾಜನು ಯುದ್ಧದಲ್ಲಿ ತನ್ನನ್ನು ರಕ್ಷಿಸಿಕೊಳ್ಳಬೇಕು. ಎಲೈ ಅನಘನೇ, ನೀನು ಧರ್ಮರಾಜನ ಜೊತೆಯಲ್ಲಿಯೇ ಸದಾ ಯುದ್ಧವನ್ನು ಮಾಡಬೇಕು.

ಅರ್ಜುನೇನ ಯಮಾಭ್ಯಾಂ ವಾ ಭೀಮಸೇನೇನ ವಾ ಪುನಃ ।
ರಾಜಧರ್ಮಂ ಪುರಸ್ಕೃತ್ಯ ರಾಜಾ ರಾಜಾನಮೃಚ್ಛತಿ ॥೧೨॥

ನೀನು ರಾಜಧರ್ಮವನ್ನು ಪುರಸ್ಕರಿಸಿ ಅರ್ಜುನನ ಜೊತೆಯಲ್ಲಾಗಲೀ, ನಕುಲ-ಸಹದೇವರ ಜೊತೆಯಲ್ಲಾಗಲೀ ಅಥವಾ ಭೀಮಸೇನನ ಜೊತೆಯಲ್ಲಾಗಲೀ ಯುದ್ಧವನ್ನು ಮಾಡಬೇಕು. ರಾಜನು ರಾಜನ ಜೊತೆಯಲ್ಲಿ ಹೋರಾಡಬೇಕೆಂಬುದು ರಾಜಧರ್ಮ.

ಅಹಂ ದ್ರೋಣಃ ಕೃಪೋ ದ್ರೌಣಿಃ ಕೃತವರ್ಮಾ ಚ ಸಾತ್ವತಃ ।
ಶಲ್ಯಶ್ಚ ಸೌಮದತ್ತಿಶ್ಚ ವಿಕರ್ಣಶ್ಚ ಮಹಾರಥಃ ॥೧೩॥

ಎಲೈ ರಾಜನೇ, ಯುದ್ಧದಲ್ಲಿ ಸೋಲಿಸಲು ಕಷ್ಟಸಾಧ್ಯನಾದ ಅವನು ಪುನಃ ಪುನಃ ನಿಟ್ಟುಸಿರನ್ನು ಬಿಟ್ಟುಕುರುಪಿತಾಮಹರಾದ ಭೀಷ್ಮರನ್ನು ಕುರಿತು ಆಗ ಮಾತನಾಡಿದನು.

ಭವಂತಂ ಸಮುಪಾಶ್ರಿತ್ಯ ವಾಸುದೇವಂ ಯಥಾ ಪರೈಃ ।
ಪಾಂಡವೈರ್ವಿಗ್ರಹೋ ಘೋರಃ ಸಮಾರಬ್ಧೋ ಮಯಾ ಪ್ರಭೋ ॥೪॥

ಎಲೈ ಪ್ರಭುವೇ, ಪಾಂಡವರು ಕೃಷ್ಣನನ್ನು ಆಶ್ರಯಿಸಿದಂತೆ ನಾನು ನಿಮ್ಮನ್ನು ಆಶ್ರಯಿಸಿ ಪಾಂಡವರ ಜೊತೆಯಲ್ಲಿ ಘೋರವಾದ ಕದನವನ್ನು ಪ್ರಾರಂಭಿಸಿದ್ದೇನೆ.

ಏಕಾದಶ ಸಮಾಖ್ಯಾತಾ ಅಕ್ಷೌಹಿಣ್ಯಶ್ಚ ಯಾ ಮಮ ।
ನಿದೇಶೇ ತವ ತಿಷ್ಠಂತಿ ಮಯಾ ಸಾರ್ಧಂ ಪರಂತಪ ॥೫॥

ಎಲೈ ಪರಂತಪರೇ, ನನ್ನ ಹನ್ನೊಂದು ಅಕ್ಷೌಹಿಣಿ ಸೈನ್ಯಗಳು ನನ್ನ ಜೊತೆಯಲ್ಲಿ ನಿಮ್ಮ ಆಜ್ಞಾಧಾರಕವಾಗಿವೆ.

ಸೋಽಹಂ ಭರತಶಾರ್ದೂಲ ಭೀಮಸೇನಪುರೋಗಮೈಃ ।
ಘಟೋತ್ಕಚಂ ಸಮಾಶ್ರಿತ್ಯ ಪಾಂಡವೈರ್ಯುಧಿ ನಿರ್ಜಿತಃ ॥೬॥

ಎಲೈ ಭರತಶಾರ್ದೂಲರೇ, ಅಂತಹ ನಾನು ಘಟೋತ್ಕಚನನ್ನು ಆಶ್ರಯಿಸಿದ ಭೀಮಸೇನ ಮೊದಲಾದ ಪಾಂಡವರಿಂದ ಯುದ್ಧದಲ್ಲಿ ಪರಾಜಯವನ್ನು ಹೊಂದಿದೆ.

ತನ್ಮೇ ದಹತಿ ಗಾತ್ರಾಣಿ ಶುಷ್ಕವೃಕ್ಷಮಿವಾನಲಃ ।
ತದಿಚ್ಛಾಮಿ ಮಹಾಭಾಗ ತ್ವತ್ಪ್ರಸಾದಾತ್ ಪರಂತಪ ॥೭॥

ರಾಕ್ಷಸಾಪಶದಂ ಹಂತುಂ ಸ್ವಯಮೇವ ಪಿತಾಮಹ ।
ತ್ವಾಂ ಸಮಾಶ್ರಿತ್ಯ ದುರ್ಧರ್ಷಂ ತನ್ಮೇ ಕರ್ತುಂ ತ್ವಮರ್ಹಸಿ ॥೮॥

ಆ ಪರಾಜಯವು ಒಣಗಿದ ವೃಕ್ಷವನ್ನು ಅಗ್ನಿಯು ಸುಡುವಂತೆ ನನ್ನ ಶರೀರವನ್ನು ಸುಡುತ್ತಿದೆ. ಎಲೈ ಪರಂತಪರೇ, ಪಿತಾಮಹರೇ, ಮಹಾನುಭಾವರೇ, ನಿಮ್ಮ ಅನುಗ್ರಹದಿಂದ ನಿಮ್ಮನ್ನು ಆಶ್ರಯಿಸಿ, ಸೋಲಿಸಲು ಕಷ್ಟಸಾಧ್ಯನಾದ ಆ ರಾಕ್ಷಸಾಧಮನನ್ನು ನಾನೇ ಕೊಲ್ಲಲು ಬಯಸುತ್ತೇನೆ. ನೀವು ನನಗೆ ಆ ಉಪಕಾರವನ್ನು ಮಾಡಬೇಕು (ಎಂದು ಹೇಳಿದನು).

ಸಂಜಯಃ

ಏತಚ್ಛ್ರುತ್ವಾ ತು ವಚನಂ ರಾಜ್ಞೋ ಭರತಸತ್ತಮ ।
ದುರ್ಯೋಧನಮಿದಂ ವಾಕ್ಯಂ ಭೀಷ್ಮಃ ಶಾಂತನವೋಽಬ್ರವೀತ್ ॥೯॥

ಸಂಜಯ– ಎಲೈ ಭರತಶ್ರೇಷ್ಠನೇ, ರಾಜನ ಈ ಮಾತುಗಳನ್ನು ಕೇಳಿ ಶಂತನು ಪುತ್ರರಾದ ಭೀಷ್ಮರು ದುರ್ಯೋಧನನನ್ನು ಕುರಿತು ಈ ಮಾತುಗಳನ್ನು ಆಡಿದರು.

ಶೃಣು ರಾಜನ್ ಮಮ ವಚೋ ಯತ್ತ್ವಾ ವಕ್ಷ್ಯಾಮಿ ಕೌರವ ।
ಯಥಾ ತ್ವಯಾ ಮಹಾರಾಜ ವರ್ತಿತವ್ಯಂ ಪರಂತಪ ॥೧೦॥

ಎಲೈ ರಾಜನೇ, ಕೌರವನೇ, ಪರಂತಪನೇ, ನೀನು ಹೇಗೆ ನಡೆದುಕೊಳ್ಳಬೇಕೆಂದು ನಾನು ನಿನಗೆ ಹೇಳುವೆನು. ಆ ನನ್ನ ಮಾತುಗಳನ್ನು ಕೇಳು.

ಆತ್ಮಾ ರಕ್ಷ್ಯೋ ರಣೇ ತಾತ ಸರ್ವಾವಸ್ಥಾಸ್ವರಿಂದಮ ।
ಧರ್ಮರಾಜೇನ ಸಂಗ್ರಾಮಸ್ತ್ವಯಾ ಕಾರ್ಯಃ ಸದಾನಘ ॥೧೧॥

ಎಲೈ ಪ್ರೀತಿಪಾತ್ರನೇ, ಅರಿಂದಮನೇ, ಎಲ್ಲಾ ಪರಿಸ್ಥಿತಿಯಲ್ಲಿಯೂ ರಾಜನು ಯುದ್ಧದಲ್ಲಿ ತನ್ನನ್ನು ರಕ್ಷಿಸಿಕೊಳ್ಳಬೇಕು. ಎಲೈ ಅನಘನೇ, ನೀನು ಧರ್ಮರಾಜನ ಜೊತೆಯಲ್ಲಿಯೇ ಸದಾ ಯುದ್ಧವನ್ನು ಮಾಡಬೇಕು.

ಅರ್ಜುನೇನ ಯಮಾಭ್ಯಾಂ ವಾ ಭೀಮಸೇನೇನ ವಾ ಪುನಃ ।
ರಾಜಧರ್ಮಂ ಪುರಸ್ಕೃತ್ಯ ರಾಜಾ ರಾಜಾನಮೃಚ್ಛತಿ ॥೧೨॥

ನೀನು ರಾಜಧರ್ಮವನ್ನು ಪುರಸ್ಕರಿಸಿ ಅರ್ಜುನನ ಜೊತೆಯಲ್ಲಾಗಲೀ, ನಕುಲ-ಸಹದೇವರ ಜೊತೆಯಲ್ಲಾಗಲೀ ಅಥವಾ ಭೀಮಸೇನನ ಜೊತೆಯಲ್ಲಾಗಲೀ ಯುದ್ಧವನ್ನು ಮಾಡಬೇಕು. ರಾಜನು ರಾಜನ ಜೊತೆಯಲ್ಲಿ ಹೋರಾಡಬೇಕೆಂಬುದು ರಾಜಧರ್ಮ.

ಅಹಂ ದ್ರೋಣಃ ಕೃಪೋ ದ್ರೌಣಿಃ ಕೃತವರ್ಮಾ ಚ ಸಾತ್ವತಃ ।
ಶಲ್ಯಶ್ಚ ಸೌಮದತ್ತಿಶ್ಚ ವಿಕರ್ಣಶ್ಚ ಮಹಾರಥಃ ॥೧೩॥

ತವ ಚ ಭ್ರಾತರಃ ಶೂರಾ ದುಃಶಾಸನಪುರೋಗಮಾಃ ।
ತ್ವದರ್ಥಂ ಪ್ರತಿಯೋತ್ಸ್ಯಾಮೋ ರಾಕ್ಷಸಂ ತಂ ಮಹಾಬಲಮ್ ॥೧೪॥

ನಾನು, ದ್ರೋಣರು, ಕೃಪರು, ಅಶ್ವತ್ಥಾಮರು, ಸಾತ್ವತನಾದ ಕೃತವರ್ಮ, ಶಲ್ಯ, ಭೂರಿಶ್ರವ, ಮಹಾರಥನಾದ ವಿಕರ್ಣ, ದುಶ್ಶಾಸನನೇ ಮೊದಲಾದ ಶೂರರಾದ ನಿಮ್ಮ ತಮ್ಮಂದಿರು, ನಾವೆಲ್ಲರೂ ನಿನ್ನ ಸಲುವಾಗಿ ಮಹಾಬಲನಾದ ಘಟೋತ್ಕಚನ ಜೊತೆಯಲ್ಲಿ ಯುದ್ಧವನ್ನು ಮಾಡುವೆವು.

ತಸ್ಮಿನ್ ರೌದ್ರೇ ರಾಕ್ಷಸೇಂದ್ರೇ ಯದಿ ತೇऽನುಶಯೋ ಮಹಾನ್ ।
ಅಯಂ ವಾ ಗಚ್ಛತು ರಣೇ ತಸ್ಯ ಯುದ್ಧಾಯ ದುರ್ಮತೇಃ ।
ಭಗದತ್ತೋ ಮಹೀಪಾಲಃ ಪುರಂದರಸಮೋ ಯುಧಿ ॥೧೫॥

ಆ ಘೋರವಾದ ರಾಕ್ಷಸೇಂದ್ರನನ್ನು ಕೊಲ್ಲಲೇಬೇಕು ಎಂದು ನಿನಗೆ ಆಗ್ರಹವಿದ್ದರೆ ಆ ದುರ್ಮತಿಯ ವಧೆಗಾಗಿ ಯುದ್ಧದಲ್ಲಿ ಇಂದ್ರನಿಗೆ ಸಮನಾದ ಈ ಭಗದತ್ತರಾಜನು ಅವನ ಜೊತೆಯಲ್ಲಿ ಯುದ್ಧಕ್ಕೆ ಹೋಗಲು (ಎಂದು ಹೇಳಿದರು).

ವಿತಾವದುಕ್ತ್ವಾ ರಾಜಾನಂ ಭಗದತ್ತಮಥಾಬ್ರವೀತ್ ।
ಸಮಕ್ಷಂ ಪಾರ್ಥಿವೇಂದ್ರಸ್ಯ ವಾಕ್ಯಂ ವಾಕ್ಯವಿಶಾರದಃ ॥೧೬॥

ಗಚ್ಛ ಶೀಘ್ರಂ ಮಹಾರಾಜ ಹೈಡಿಂಬಂ ಯುದ್ಧದುರ್ಮದಮ್ ।
ವಾರಯಸ್ವ ರಣೇ ಯತ್ತೋ ಮಿಷತಾಂ ಸರ್ವಧನ್ವಿನಾಮ್ ।
ರಾಕ್ಷಸಂ ಕ್ರೂರಕರ್ಮಾಣಂ ಯಥೇಂದ್ರಸ್ತಾರಕಂ ಪುರಾ ॥೧೭॥

ವಾಕ್ಯವಿಶಾರದರಾದ ಆ ಭೀಷ್ಮರು ರಾಜನನ್ನು ಕುರಿತು ಇಷ್ಟು ಮಾತುಗಳನ್ನು ಹೇಳಿ ರಾಜನ ಎದುರಿನಲ್ಲಿಯೇ ಭಗದತ್ತನನ್ನು ಕುರಿತು, ಮಹಾರಾಜನೇ, ಯುದ್ಧ ದುರ್ಮದನಾದ ಘಟೋತ್ಕಚನ ಬಳಿಗೆ ಹೋಗು. ಎಲ್ಲ ಧನುರ್ಧಾರಿಗಳು ನೋಡುತ್ತಿರುವಂತೆ ಕ್ರೂರಕರ್ಮವನ್ನು ಮಾಡುವ ಅವನನ್ನು ಇಂದ್ರನು ಹಿಂದೆ ತಾರಕಾಸುರನನ್ನು ನಿವಾರಿಸಿದಂತೆ ನಿವಾರಣೆ ಮಾಡು ಎಂದು ಹೇಳಿದರು.

ತವ ದಿವ್ಯಾನಿ ಚಾಸ್ತ್ರಾಣಿ ವಿಕ್ರಮಶ್ಚ ಪರಂತಪ ।
ಸಮಾಗಮಶ್ಚ ಬಹುಭಿಃ ಪುರಾಭೂದಸುರೈಃ ಸಹ ॥೧೮॥

ಎಲೈ ಪರಂತಪನೇ, ನಿನ್ನ ಬಳಿ ದಿವ್ಯಾಸ್ತ್ರಗಳಿವೆ, ಪರಾಕ್ರಮವೂ ಇದೆ. ನೀನು ಹಿಂದೆ ಅನೇಕ ಅಸುರರ ಜೊತೆಯಲ್ಲಿ ಯುದ್ಧವನ್ನು ಮಾಡಿದ್ದೀಯೆ.

ತ್ವಂ ತಸ್ಯ ರಾಜಶಾರ್ದೂಲ ಪ್ರತಿಯೋದ್ಧಾ ಮಹಾಹವೇ ।
ಸ್ವಬಲೇನ ವೃತೋ ರಾಜನ್ ಜಹಿ ರಾಕ್ಷಸಪುಂಗವಮ್ ॥೧೯॥

ಎಲೈ ರಾಜಶಾರ್ದೂಲನೇ, ದೊಡ್ಡ ಯುದ್ಧದಲ್ಲಿ ನೀನು ಅವನಿಗೆ ಪ್ರತಿಯುದ್ಧವನ್ನು ಮಾಡುವವನಾಗುತ್ತೀಯೆ. ಎಲೈ ರಾಜನೇ, ನಿನ್ನ ಸೈನ್ಯದ ಜೊತೆಯಲ್ಲಿ ಹೋಗಿ ಆ ರಾಕ್ಷಸಶ್ರೇಷ್ಠನನ್ನು ಕೊಲ್ಲು(ಎಂದು ಹೇಳಿದರು).

ಏತಚ್ಛ್ರುತ್ವಾ ತು ವಚನಂ ಭೀಷ್ಮಸ್ಯ ಪೃತನಾಪತೇಃ ।
ಪ್ರಯಯೌ ಸಿಂಹನಾದೇನ ಪರಾನಭಿಮುಖೋ ದ್ರುತಮ್ ॥೨೦॥

ಸೇನಾಪತಿಗಳಾದ ಭೀಷ್ಮರ ಈ ಮಾತುಗಳನ್ನು ಕೇಳಿ ಭಗದತ್ತನು ಸಿಂಹನಾದವನ್ನು ಮಾಡುತ್ತಾ ಶೀಘ್ರವಾಗಿ ಶತ್ರುಗಳಿಗೆ ಅಭಿಮುಖವಾಗಿ ಹೊರಟನು.

ತಮಾದ್ರವಂತಂ ಸಂಪ್ರೇಕ್ಷ್ಯ ಗರ್ಜಂತಮಿವ ತೋಯದಮ್ ।
ಅಭ್ಯವರ್ತಂತ ಸಂಕ್ರುದ್ಧಾಃ ಪಾಂಡವಾನಾಂ ಮಹಾರಥಾಃ ॥೨೧॥

ಭೀಮಸೇನೋऽಭಿಮನ್ಯುಶ್ಚ ರಾಕ್ಷಸಶ್ಚ ಘಟೋತ್ಕಚಃ ।
ದ್ರೌಪದೇಯಾಃ ಸತ್ಯಧೃತಿಃ ಕ್ಷತ್ರದೇವಶ್ಚ ಮಾರಿಷ ॥೨೨॥

ಚೇದಿಪೋ ವಸುದಾನಶ್ಚ ದಶಾರ್ಣಾಧಿಪತಿಸ್ತಥಾ ।
ಸುಪ್ರತೀಕೇನ ತಾಂಶ್ಚಾಪಿ ಭಗದತ್ತೋऽಪ್ಯುಪಾದ್ರವತ್ ॥೨೩॥

ಗರ್ಜಿಸುವ ಮೇಘದಂತೆ ತಮ್ಮ ಕಡೆಗೆ ಧಾವಿಸಿ ಬರುತ್ತಿದ್ದ ಅವನನ್ನು ನೋಡಿ ಪಾಂಡವರ ಮಹಾರಥರು ಕ್ರೋಧಗೊಂಡು ಅವನ ಕಡೆಗೆ ಸಾಗಿದರು. ಭೀಮಸೇನ, ಅಭಿಮನ್ಯು, ರಾಕ್ಷಸನಾದ ಘಟೋತ್ಕಚ, ದ್ರೌಪದಿಯ ಪುತ್ರರು, ಸತ್ಯಧೃತಿ, ಕ್ಷತ್ರದೇವ, ಚೇದಿರಾಜ, ವಸುದಾನ, ದಶಾರ್ಣಾಧಿಪತಿ ಎಲ್ಲರೂ ಎಲೈ ಪೂಜ್ಯನೇ, ಅವನ ಕಡೆಗೆ ಹೋದರು. ಭಗದತ್ತನೂ ಸಹ ಸುಪ್ರತೀಕ ಗಜದ ಜೊತೆಯಲ್ಲಿ ಅವರ ಕಡೆಗೆ ಧಾವಿಸಿ ಬಂದನು.

ತತಃ ಸಮಭವದ್ ಯುದ್ಧಂ ಘೋರರೂಪಂ ಭಯಾನಕಮ್ ।
ಪಾಂಡೂನಾಂ ಭಗದತ್ತೇನ ಯಮರಾಷ್ಟ್ರವಿವರ್ಧನಮ್ ॥೨೪॥

ಅನಂತರ ಪಾಂಡವರಿಗೂ ಮತ್ತು ಭಗದತ್ತನಿಗೂ ಯಮರಾಷ್ಟ್ರವಿವರ್ಧನವಾದ, ಭಯಂಕರವಾದ, ಘೋರವಾದ ಯುದ್ಧವು ನಡೆಯಿತು.

ಪ್ರಮುಕ್ತಾ ರಥಿಭಿರ್ಬಾಣಾ ಭೀಮವೇಗಾಃ ಸುತೇಜನಾಃ ।
ತೇ ನಿಪೇತುರ್ಮಹಾರಾಜ ನಾಗೇಷು ಚ ರಥೇಷು ಚ ॥೨೫॥

ಎಲೈ ಮಹಾರಾಜನೇ, ರಥಿಕರು ಪ್ರಯೋಗಿಸಿದ ತೀಕ್ಷ್ಣವಾದ ಮತ್ತು ಭಯಂಕರ ವೇಗವುಳ್ಳ ಬಾಣಗಳು ಗಜಗಳ ಮೇಲೆಯೂ ಮತ್ತು ರಥಗಳ ಮೇಲೆಯೂ ಬಿದ್ದವು.

ಪ್ರಭಿನ್ನಾಶ್ಚ ಮಹಾನಾಗಾ ವಿನೀತಾ ಹಸ್ತಿಸಾದಿಭಿಃ ।
ಪರಸ್ಪರಂ ಸಮಾಸಾದ್ಯ ಸನ್ನಿಪೇತುರಭೀತವತ್ ॥೨೬॥

ಗಜಾರೋಹಿಗಳಿಂದ ಪಳಗಿಸಲ್ಪಟ್ಟ ದೊಡ್ಡ ಮಹಾಗಜಗಳು ಪರಸ್ಪರವಾಗಿ ಸಮೀಪಿಸಿ ನಿರ್ಭಯವಾಗಿ ಘಟ್ಟಿಸಿ, ಕೆಳಗೆ ಉರುಳಿದವು.

ಮದಾಂಧಾ ರೋಷಸಂರಬ್ಧಾ ವಿಷಾಣಾಗ್ರೈರ್ಮಹಾಹವೇ ।
ಬಿಭಿದುರ್ದಂತಮುಸಲೈಃ ಸಮಾಸಾದ್ಯ ಪರಸ್ಪರಮ್ ॥೨೭॥

ಮದಾಂಧಗಳೂ ಮತ್ತು ರೋಷಯುಕ್ತಗಳೂ ಆದ ಆ ಗಜಗಳು ಆ ದೊಡ್ಡ ರಣದಲ್ಲಿ ಪರಸ್ಪರವಾಗಿ ಸಮೀಪಿಸಿ ಒನಕೆಗಳಂತಹ ತಮ್ಮ ದಂತದ ತುದಿಗಳಿಂದ ಒಂದನ್ನೊಂದು ತಿವಿದವು.

ಹಯಾಶ್ಚ ಚಾಮರಾಪೀಡಾಃ ಪ್ರಾಸಪಾಣಿಭರಾಸ್ಥಿತಾಃ ।
ಚೋದಿತಾಃ ಸಾದಿಭಃ ಕ್ಷಿಪ್ರಂ ನಿಪೇತುರಿತರೇತರಮ್ ॥೨೮॥

ಚಾಮರಗಳ ಅಲಂಕಾರಗಳನ್ನು ಹೊಂದಿದ ಹಯಗಳು ಪ್ರಾಸವನ್ನು ಹಿಡಿದ ಅಶ್ವಾರೋಹಿಗಳಿಂದ ಆರೂಢವಾಗಿ, ಅವರಿಂದ ಪ್ರಚೋದಿಸಲ್ಪಟ್ಟು ಪರಸ್ಪರವಾಗಿ, ಶೀಘ್ರವಾಗಿ ಒಂದನ್ನೊಂದು ಉರುಳಿಸಿದವು.

ಪಾದಾತಾಶ್ಚ ಪದಾತ್ಯೋಘೈಸ್ತಾಡಿತಾಃ ಶಕ್ತಿತೋಮರೈಃ ।
ನ್ಯಪತಂತ ತದಾ ಭೂಮೌ ಶತಶೋಽಥ ಸಹಸ್ರಶಃ ॥೨೯॥

ಪದಾತಿಗಳೂ ಸಹ ಪದಾತಿಗಳ ಸಮೂಹದಿಂದ ಶಕ್ತಿ-ತೋಮರಗಳಿಂದ ಹೊಡೆಯಲ್ಪಟ್ಟು ನೂರರ ಸಂಖ್ಯೆಯಲ್ಲಿ ಮತ್ತು ಸಾವಿರದ ಸಂಖ್ಯೆಯಲ್ಲಿ ಆಗ ಭೂಮಿಯ ಮೇಲೆ ಬಿದ್ದರು.

ರಥಿನಶ್ಚ ತಥಾ ರಾಜನ್ ಕರ್ಣನಾಲೀಕಸಾಯಕೈಃ ।
ನಿಹತ್ಯ ಸಮರೇ ವೀರಾನ್ ಸಿಂಹನಾದಾನ್ ವಿನೇದಿರೇ ॥೩೦॥

ಎಲೈ ರಾಜನೇ, ರಥಿಕರೂ ಸಹ ಕರ್ಣ, ನಾಲೀಕ, ಸಾಯಕ ಮೊದಲಾದ ಬಾಣ ವಿಶೇಷಗಳಿಂದ ಯುದ್ಧದಲ್ಲಿ ಶತ್ರುವೀರರನ್ನು ಕೊಂದು ಸಿಂಹನಾದಗಳನ್ನು ಮಾಡಿದರು.

ತಸ್ಮಿಂಸ್ತಥಾ ವರ್ತಮಾನೇ ಸಂಗ್ರಾಮೇ ಲೋಮಹರ್ಷಣೇ ।
ಭಗದತ್ತೋ ಮಹೇಷ್ವಾಸೋ ಭೀಮಸೇನಮಥಾದ್ರವತ್ ॥೩೧॥

ಕುಂಜರೇಣ ಪ್ರಭಿನ್ನೇನ ಸಪ್ತಧಾ ಸ್ರವತಾ ಮದಮ್ ।
ಪರ್ವತೇನ ಯಥಾ ತೋಯಂ ಸ್ರವಮಾಣೇನ ಸರ್ವತಃ ॥೩೨॥

ಕಿರನ್ ಶರಸಹಸ್ರಾಣಿ ಸುಪ್ರತೀಕಶಿರೋಗತಃ ।
ಐರಾವತಸ್ಥೋ ಮಘವಾನ್ ವಾರಿಧಾರಾ ಇವಾನಘ ॥೩೩॥

ಎಲೈ ಅನಘನೇ, ರೋಮಾಂಚಕಾರಿಯಾದ ಆ ಯುದ್ಧವು ಹಾಗೆ ನಡೆಯುತ್ತಿರಲು ಮಹಾಧನುರ್ಧಾರಿಯಾದ ಭಗದತ್ತನು ಪರ್ವತದಿಂದ ನೀರು ಎಲ್ಲ ಕಡೆಗಳಲ್ಲಿಯೂ ಹರಿಯುವಂತೆ, ಏಳು ಧಾರೆಗಳಲ್ಲಿ ಮದೋದಕವನ್ನು ಸುರಿಸುತ್ತಿದ್ದ ಸುಪ್ರತೀಕದ ಶಿರಸ್ಸಿನಲ್ಲಿ ಐರಾವತದ ಮೇಲೆ ಇಂದ್ರನಂತೆ ಕುಳಿತು, ಮಳೆಯ ಧಾರೆಗಳಂತೆ ಸಹಸ್ರಾರು ಬಾಣಗಳನ್ನು ಪ್ರಯೋಗಿಸುತ್ತಾ ಭೀಮಸೇನನ ಕಡೆಗೆ ಧಾವಿಸಿದನು.

ಸ ಭೀಮಂ ಶರಧಾರಾಭಿಸ್ತಾಡಯಾಮಾಸ ಪಾರ್ಥಿವಃ ।
ಪರ್ವತಂ ವಾರಿಧಾರಾಭಿಃ ಸಂಪಾತೇ ಜಲದೋ ಯಥಾ ॥೩೪॥

ಆ ರಾಜರು ಮಳೆಗಾಲದಲ್ಲಿ ಮೋಡಗಳು ಪರ್ವತದ ಮೇಲೆ ನೀರಿನ ಧಾರೆಗಳನ್ನು ಸುರಿಸಿದಂತೆ ಭೀಮನನ್ನು ಬಾಣಗಳ ಧಾರೆಗಳಿಂದ ಹೊಡೆದನು.

ಭೀಮಸೇನಸ್ತು ಸಂಕ್ರುದ್ಧಃ ಪಾದರಕ್ಷಾನ್ ಪರಂತಪಾನ್ ।
ನಿಜಘಾನ ಮಹೇಷ್ವಾಸಃ ಸಂಕ್ರುದ್ಧಃ ಶರವೃಷ್ಟಿಭಿಃ ॥೩೫॥

ಕೋಪಗೊಂಡ ಮಹಾಧನುರ್ಧಾರಿಯಾದ ಭೀಮಸೇನನಾದರೋ ನೂರಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಗಜಪಾದ ರಕ್ಷಕರನ್ನು ತನ್ನ ಬಾಣಗಳ ಮಳೆಯಿಂದ ಕೊಂದನು.

ತಾನ್ ದೃಷ್ಟ್ವಾ ನಿಹತಾನ್ ಕ್ರುದ್ಧೋ ಭಗದತ್ತಃ ಪ್ರತಾಪವಾನ್ ।
ಚೋದಯಾಮಾಸ ನಾಗೇಂದ್ರಂ ಭೀಮಸೇನರಥಂ ಪ್ರತಿ ॥೩೬॥

ತನ್ನ ಗಜಪಾದರಕ್ಷಕರು ಹತರಾದುದನ್ನು ನೋಡಿ ಪ್ರತಾಪಶಾಲಿಯಾದ ಭಗದತ್ತನು ತನ್ನ ಗಜರಾಜನನ್ನು ಭೀಮಸೇನನ ರಥದ ಮೇಲೆ ಪ್ರಚೋದಿಸಿದನು.

ಸ ನಾಗಃ ಪ್ರೇಷಿತಸ್ತೇನ ಬಾಣೋ ಜ್ಯಾಚೋದಿತೋ ಯಥಾ ।
ಅಭ್ಯಧಾವತ ವೇಗೇನ ಭೀಮಸೇನಮರಿಂದಮಮ್ ॥೩೭॥

ಅವನಿಂದ ಪ್ರಚೋದಿಸಲ್ಪಟ್ಟ ಆ ಮಹಾಗಜವು ಹೆದೆಯಿಂದ ಹೊರಹೊಮ್ಮಿದ ಬಾಣದಂತೆ ವೇಗವಾಗಿ ಅರಿಂದಮನಾದ ಭೀಮಸೇನನ ಕಡೆಗೆ ಸಾಗಿತು.

ತಮಾಪತಂತಂ ಸಂಪ್ರೇಕ್ಷ್ಯ ಪಾಂಡವಾನಾಂ ಮಹಾರಥಾಃ ।
ಅಭ್ಯವರ್ತಂತ ವೇಗೇನ ಭೀಮಸೇನಪುರೋಗಮಾಃ ॥೩೮॥

ತನ್ನ ಕಡೆಗೆ ಬರುತ್ತಿದ್ದ ಆ ಮಹಾಗಜವನ್ನು ನೋಡಿ ಭೀಮಸೇನ ಮೊದಲಾದ ಪಾಂಡವರ ಮಹಾರಥರು ತಾವೂ ವೇಗವಾಗಿ ಆ ಗಜದ ಕಡೆಗೆ ಸಾಗಿದರು.

ಕೇತಯಾಶ್ಚಾಭಿಮನ್ಯೋಶ್ಚ ದ್ರೌಪದೇಯಾಶ್ಚ ಸರ್ವತಃ ।
ದಶಾರ್ಣಾಧಿಪತೇಃ ಶೂರಃ ಕ್ಷತ್ರದೇವಶ್ಚ ಮಾನಿನಃ ।
ಚೇದಿಪಸ್ಯಾತ್ಮಜೇತುಶ್ಚ ಸಂಕ್ರುದ್ಧಾಃ ಸರ್ವ ಏವ ತೇ ॥೩೯॥

ಉತ್ತಮಾಸ್ತ್ರಾಣಿ ದಿವ್ಯಾನಿ ದರ್ಶಯಂತೋ ಮಹಾಬಲಾಃ ।
ತಮೇನಂ ಕುಂಜರಂ ಕ್ರುದ್ಧಾಃ ಸಮಂತಾತ್ ಪರ್ಯವಾರಯನ್ ॥೪೦॥

ತೆಯ ಸಹೋದರರು, ಅರ್ಜುನನ್ನು , ದ್ರೌಪದಿಯ ಪುತ್ರರು, ದಾಶಾರ್ಹಾಧಿಪತಿಯಾದ ಶೂರನಾದ ಕ್ಷತ್ರದೇವ, ಚೇದಿರಾಜ, ಧೃಷ್ಟಕೇತು ಎಲ್ಲರೂ ಕೋಪಗೊಂಡು ಎಲ್ಲೆ ಮೀಜ್ಞನೇ, ದಿವ್ಯವಾದ ಶ್ರೇಷ್ಠವಾದ ಅಸ್ತ್ರವನ್ನು ಪ್ರದರ್ಶಿಸುತ್ತಾ ಮಹಾಬಲರಾದ ಅವರು ಆ ಒಂದು ಗಜವನ್ನು ಎಲ್ಲ ಕಡೆಯಿಂದಲೂ ಸುತ್ತುವರಿದರು.

ಸ ವಿದ್ಧೋ ಬಹುಭಿರ್ಬಾಣೈರ್ಗಜರೋಷಪ್ರಮಾಥಿಭಿಃ ।
ಸಂಜಾತರುಧಿರೋತ್ಸರ್ಗೋ ಧಾತುಚಿತ್ರ ಇವಾದ್ರಿರಾಟ್ ॥೯೧॥

ಅನೇಕ ಬಾಣಗಳಿಂದ ಹೊಡೆಯಲ್ಪಟ್ಟು ಆ ಮಹಾಗಜವು ರಕ್ತದ ಅಲಂಕಾರವನ್ನು ಹೊಂದಿ, ಧಾತುಗಳಿಂದ ಚಿತ್ರಿತವಾದ ಪರ್ವತರಾಜನಂತೆ ಕಂಗೊಳಿಸಿತು.

ದಾಶಾರ್ಹಾಧಿಪತಿಸ್ತ್ಯಕ್ತ್ವಾ ಗಜಂ ಧರಣಿಧರೋಪಮಮ್ ।
ಸಮುದ್ಯತೋऽಧಿರುಹ್ಯಾಶ್ವಂ ಧೃಷ್ಟಕೇತುಂ ಪ್ರಚೋದಯತ್ ॥೯೨॥

ದಾಶಾರ್ಹಾಧಿಪತಿಯೂ ಸಹ ಪರ್ವತರೂಪದ ಗಜವನ್ನು ಏರಿ ಧೃಷ್ಟಕೇತು ಗಜಕ್ಕೆ ಪ್ರತಿಯಾಗಿ ಅವನ ಕಡೆಗೆ ಬಂದನು.

ತಮಾಪತಂತಂ ಸಮರೇ ಗಜಂ ಗಜಪತಿಃ ಸ ಚ ।
ದದಾರ ಸುಪ್ರತೀಕೋऽಪಿ ವೇಲೇವ ಮಕರಾಲಯಮ್ ॥೯೩॥

ರಣರಂಗದಲ್ಲಿ ಹತ್ತಿರ ಬರುತ್ತಿದ್ದ ಗಜವನ್ನು ಮತ್ತು ಗಜಪತಿಯಾದ ದಾಶಾರ್ಹಾಧಿಪತಿಯನ್ನು, ಸುಪ್ರತೀಕವು ತೀರವು ಸಮುದ್ರವನ್ನು ಕಡೆಯುವಂತೆ ಕಡೆಯಿತು.

ವಾರಿತಂ ಶೈನ್ಯೈ ರಾಜೇಂದ್ರಂ ದಾಶಾರ್ಹಂ ಮಹಾಬಲಮ್ ।
ಸಾಧು ಸಾಧ್ವಿತಿ ಶೈನ್ಯಾಸ್ತೇ ಪಾಂಡವೇಯಾಶ್ಚುಕ್ರುಶುರ್ಮುಹುಃ ॥೯೪॥

ಮಹಾಬಲಶಾಲಿಯಾದ ದಾಶಾರ್ಹಾಧಿಪತಿಯನ್ನು ಗಜೇಂದ್ರನು ಕಡಿಯಲ್ಪಟ್ಟುದನ್ನು ನೋಡಿ ಪಾಂಡವರ ಸೈನ್ಯಗಳೂ ಸಹ ಸಾಧು, ಸಾಧು ಎಂದು ಗರ್ಜಿಸಿದವು.

ಸಶ ಪ್ರಾಗ್ಜ್ಯೋತಿಷಃ ಕ್ರುದ್ಧೋಮಾಯಾಶ್ಚ ಸ್ವೇ ಜಘಾನಹ ।
ಪ್ರಾಪೋಡೇಷ್ಟ ಪಕ್ಷ ಪಾಕ್ಷ ಪ್ರಮಾಣೇ ಭೂಪತಯಮು ॥೯೫॥

ಆ ರಾಜರು ಮಳೆಗಾಲದಲ್ಲಿ ಮೋಡಗಳು ಪರ್ವತದ ಮೇಲೆ ನೀರಿನ ಧಾರೆಗಳನ್ನು ಸುರಿಸಿದಂತೆ ಭೀಮನನ್ನು ಬಾಣಗಳ ಧಾರೆಗಳಿಂದ ಹೊಡೆದನು.

ಭೀಮಸೇನಸ್ತು ಸಂಕ್ರುದ್ಧಃ ಪಾದರಕ್ಷಾನ್ ಪರಃಶತಾನ್ ।
ನಿಜಘಾನ ಮಹೇಷ್ವಾಸಃ ಸಂಕ್ರುದ್ಧಃ ಶರವೃಷ್ಟಿಭಿಃ ॥೩೫॥

ಕೋಪಗೊಂಡ ಮಹಾಧನುರ್ಧಾರಿಯಾದ ಭೀಮಸೇನನಾದರೋ ನೂರಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಗಜಪಾದ ರಕ್ಷಕರನ್ನು ತನ್ನ ಬಾಣಗಳ ಮಳೆಯಿಂದ ಕೊಂದನು.

ತಾನ್ ದೃಷ್ಟ್ವಾ ನಿಹತಾನ್ ಕ್ರುದ್ಧೋ ಭಗದತ್ತಃ ಪ್ರತಾಪವಾನ್ ।
ಚೋದಯಾಮಾಸ ನಾಗೇಂದ್ರಂ ಭೀಮಸೇನರಥಂ ಪ್ರತಿ ॥೩೬॥

ತನ್ನ ಗಜಪಾದರಕ್ಷಕರು ಹತರಾದುದನ್ನು ನೋಡಿ ಪ್ರತಾಪಶಾಲಿಯಾದ ಭಗದತ್ತನು ತನ್ನ ಗಜರಾಜನನ್ನು ಭೀಮಸೇನನ ರಥದ ಮೇಲೆ ಪ್ರಚೋದಿಸಿದನು.

ಸ ನಾಗಃ ಪ್ರೇಷಿತಸ್ತೇನ ಬಾಣೋ ಜ್ಯಾಚೋದಿತೋ ಯಥಾ ।
ಅಭ್ಯಧಾವತ ವೇಗೇನ ಭೀಮಸೇನಮರಿಂದಮಮ್ ॥೩೭॥

ಅವನಿಂದ ಪ್ರಚೋದಿಸಲ್ಪಟ್ಟ ಆ ಮಹಾಗಜವು ಹೆದೆಯಿಂದ ಹೊರಹೊಮ್ಮಿದ ಬಾಣದಂತೆ ವೇಗವಾಗಿ ಅರಿಂದಮನಾದ ಭೀಮಸೇನನ ಕಡೆಗೆ ಸಾಗಿತು.

ತಮಾಪತಂತಂ ಸಂಪ್ರೇಕ್ಷ್ಯ ಪಾಂಡವಾನಾಂ ಮಹಾರಥಾಃ ।
ಅಭ್ಯವರ್ತಂತ ವೇಗೇನ ಭೀಮಸೇನಪುರೋಗಮಾಃ ॥೩೮॥

ತನ್ನ ಕಡೆಗೆ ಬರುತ್ತಿದ್ದ ಆ ಮಹಾಗಜವನ್ನು ನೋಡಿ ಭೀಮಸೇನ ಮೊದಲಾದ ಪಾಂಡವರ ಮಹಾರಥರು ತಾವೂ ವೇಗವಾಗಿ ಆ ಗಜದ ಕಡೆಗೆ ಸಾಗಿದರು.

ಕೇಕಯಾಶ್ಚಾಭಿಮನ್ಯುಶ್ಚ ದ್ರೌಪದೇಯಾಶ್ಚ ಸರ್ವಶಃ ।
ದಶಾರ್ಣಾಧಿಪತಿಃ ಶೂರಃ ಕ್ಷತ್ರದೇವಶ್ಚ ಮಾರಿಷ ।
ಚೇದಿಪಶ್ಚಿತ್ರಕೇತುಶ್ಚ ಸಂಕ್ರುದ್ಧಾಃ ಸರ್ವ ಏವ ತೇ ॥೩೯॥

ಉತ್ತಮಾಸ್ತ್ರಾಣಿ ದಿವ್ಯಾನಿ ದರ್ಶಯಂತೋ ಮಹಾಬಲಾಃ ।
ತಮೇಕಂ ಕುಂಜರಂ ಕ್ರುದ್ಧಾಃ ಸಮಂತಾತ್ ಪರ್ಯವಾರಯನ್ ॥೪೦॥

ಕೇಕಯ ಸಹೋದರರು, ಅಭಿಮನ್ಯು, ದ್ರೌಪದಿಯ ಪುತ್ರರು, ದಶಾರ್ಣಾಧಿಪತಿಯಾದ ಶೂರನಾದ ಕ್ಷತ್ರದೇವ, ಚೇದಿರಾಜ, ಚಿತ್ರಕೇತು ಎಲ್ಲರೂ ಕೋಪಗೊಂಡು ಎಲೈ ಪೂಜ್ಯನೇ, ದಿವ್ಯವಾದ ಶ್ರೇಷ್ಠವಾದ ಅಸ್ತ್ರವನ್ನು ಪ್ರದರ್ಶಿಸುತ್ತಾ ಮಹಾಬಲರಾದ ಅವರು ಆ ಒಂದು ಗಜವನ್ನು ಎಲ್ಲಕಡೆಯಿಂದಲೂ ಸುತ್ತುವರಿದರು.

ಸ ವಿದ್ಧೋ ಬಹುಭಿರ್ಬಾಣೈರ್ವ್ಯರೋಚತ ಮಹಾದ್ವಿಪಃ ।
ಸಂಜಾತರುಧಿರೋತ್ಪೀಡೋ ಧಾತುಚಿತ್ರ ಇವಾದ್ರಿರಾಟ್ ॥೪೧॥

ಅನೇಕ ಬಾಣಗಳಿಂದ ಹೊಡೆಯಲ್ಪಟ್ಟ ಆ ಮಹಾಗಜವು ರಕ್ತದ ಅಲಂಕಾರವನ್ನು ಹೊಂದಿ, ಧಾತುಗಳಿಂದ ಚಿತ್ರಿತವಾದ ಪರ್ವತರಾಜನಂತೆ ಕಂಗೊಳಿಸಿತು.

ದಶಾರ್ಣಾಧಿಪತಿಶ್ಚಾಪಿ ಗಜಂ ಭೂಮಿಧರೋಪಮಮ್ ।
ಸಮಾಸ್ಥಿತೋಽಭಿದುದ್ರಾವ ಭಗದತ್ತಸ್ಯ ವಾರಣಮ್ ॥೪೨॥

ದಶಾರ್ಣಾಧಿಪತಿಯೂ ಸಹ ಪರ್ವತದಂತಹ ಗಜವನ್ನು ಏರಿ ಭಗದತ್ತನ ಗಜಕ್ಕೆ ಪ್ರತಿಯಾಗಿ ಅವನ ಕಡೆಗೆ ಬಂದನು.

ತಮಾಪತಂತಂ ಸಮರೇ ಗಜಂ ಗಜಪತಿಃ ಸ ಚ ।
ದಧಾರ ಸುಪ್ರತೀಕೋಽಪಿ ವೇಲೇವ ಮಕರಾಲಯಮ್ ॥೪೩॥

ರಣರಂಗದಲ್ಲಿ ತನ್ನೆಡೆಗೆ ಬರುತ್ತಿದ್ದ ಗಜವನ್ನು ಮತ್ತು ಗಜಪತಿಯಾದ ದಶಾರ್ಣಾಧಿಪತಿಯನ್ನು, ಸುಪ್ರತೀಕವು ತೀರವು ಸಮುದ್ರವನ್ನು ತಡೆಯುವಂತೆ ತಡೆಯಿತು.

ವಾರಿತಂ ಪ್ರೇಕ್ಷ್ಯ ನಾಗೇಂದ್ರಂ ದಶಾರ್ಣಸ್ಯ ಮಹಾತ್ಮನಃ ।
ಸಾಧು ಸಾಧ್ವಿತಿ ಸೈನ್ಯಾನಿ ಪಾಂಡವೇಯಾನ್ಯಪೂಜಯನ್ ॥೪೪॥

ಮಹಾತ್ಮನಾದ ದಶಾರ್ಣಾಧಿಪತಿಯನ್ನು ಗಜೇಂದ್ರನು ತಡೆಯಲ್ಪಟ್ಟುದನ್ನು ನೋಡಿ ಪಾಂಡವರ ಸೈನ್ಯಗಳೂ ಸಹ ಸಾಧು, ಸಾಧು ಎಂದು ಗೌರವಿಸಿದವು.

ತತಃ ಪ್ರಾಗ್ಜ್ಯೋತಿಷಃ ಕ್ರುದ್ಧಸ್ತೋಮರಾನ್ ವೈ ಚತುರ್ದಶ ।
ಪ್ರಾಹಿಣೋತ್ ತಸ್ಯ ನಾಗಸ್ಯ ಪ್ರಮುಖೇ ನೃಪಸತ್ತಮ ॥೪೫॥

ಎಲೈ ನೃಪಶ್ರೇಷ್ಠನೇ, ಆಗ ಪ್ರಾಗ್ಜ್ಯೋತಿಷನು ಕ್ರುದ್ಧನಾಗಿ ಹದಿನಾಲ್ಕು ತೋಮರಗಳನ್ನು ಆ ಗಜದ ಮುಖದಲ್ಲಿ ಪ್ರಯೋಗಿಸಿದನು.

ತಸ್ಯ ವರ್ಮ ಮುಖತ್ರಾಣಂ ಶಾತಕುಂಭಪರಿಷ್ಕೃತಮ್ ।
ವಿದಾರ್ಯ ಪ್ರಾವಿಶನ್ ಕ್ಷಿಪ್ರಂ ವಲ್ಮೀಕಮಿವ ಪನ್ನಗಾಃ ॥೪೬॥

ಆ ಬಾಣಗಳು ಆ ಗಜದ ಸುವರ್ಣಮಯವಾದ ಕುಂಭಕವಚವನ್ನು ಮತ್ತು ಮುಖತ್ರಾಣವನ್ನು ಸೀಳಿ, ಸರ್ಪಗಳು ಹುತ್ತವನ್ನು ಪ್ರವೇಶಿಸುವಂತೆ ಕ್ಷಿಪ್ರವಾಗಿ ಗಜಶರೀರವನ್ನು ಪ್ರವೇಶಿಸಿದವು.

ಸ ಗಾಢವಿದ್ಧೋ ವ್ಯಥಿತೋ ನಾಗೋ ಭರತಸತ್ತಮ ।
ಉಪಾವೃತ್ತಮದಃ ಕ್ಷಿಪ್ರಂ ಸ ನ್ಯವರ್ತತ ವೇಗತಃ ॥೪೭॥

ಎಲೈ ಭರತಶ್ರೇಷ್ಠನೇ, ಗಾಢವಾಗಿ ಗಾಯಗೊಂಡ ಆ ಗಜವು ವ್ಯಥೆಯಿಂದ ಕೂಡಿ ತನ್ನ ಮದವನ್ನು ಕಳೆದುಕೊಂಡು ವೇಗವಾಗಿ ಹಿಂದಿರುಗಿತು.

ಪ್ರದುದ್ರಾವ ಚ ವೇಗೇನ ಪ್ರಣದನ್ ಭೈರವಂ ಸ್ವನಮ್ ।
ಸ ಮರ್ದಮಾನಃ ಸ್ವಬಲಂ ವಾಯುರ್ವೃಕ್ಷಾನಿವೌಜಸಾ ॥೪೮॥

ಅದು ಭಯಂಕರ ನಾದವನ್ನು ಮಾಡುತ್ತಾ ವಾಯುವು ತನ್ನ ಸಾಮರ್ಥ್ಯದಿಂದ ವೃಕ್ಷಗಳನ್ನು ಮರ್ದಿಸುವಂತೆ ತನ್ನ ಸೈನ್ಯವನ್ನೇ ಮರ್ದಿಸುತ್ತಾ ಓಡಿಹೋಯಿತು.

ತಸ್ಮಿನ್ ಪರಾಜಿತೇ ನಾಗೇ ಪಾಂಡವಾನಾಂ ಮಹಾರಥಾಃ ।
ಸಿಂಹನಾದಂ ವಿನದ್ಯೋಚ್ಚೈರ್ಯುದ್ಧಾಯೈವೋಪತಸ್ಥಿರೇ ॥೪೯॥

ಆ ಗಜವು ಪರಾಭವಗೊಳ್ಳುತ್ತಿರಲು ಪಾಂಡವರ ಮಹಾರಥರು ಉಚ್ಚವಾದ ಸಿಂಹನಾದವನ್ನು ಮಾಡಿ ಯುದ್ಧಕ್ಕೇ ನಿಂತರು.

ತತೋ ಭೀಮಂ ಪುರಸ್ಕೃತ್ಯ ಭಗದತ್ತಮುಪಾದ್ರವನ್ ।
ಕಿರಂತೋ ವಿವಿಧಾನ್ ಬಾಣಾನ್ ಶಸ್ತ್ರಾಣಿ ವಿವಿಧಾನಿ ಚ ॥೫೦॥

ಅನಂತರ ಭೀಮನನ್ನು ಮುಂದೆ ಮಾಡಿಕೊಂಡು ಅನೇಕವಿಧವಾದ ಬಾಣಗಳನ್ನೂ ಮತ್ತು ಶಸ್ತ್ರಗಳನ್ನೂ ಪ್ರಯೋಗಿಸುತ್ತಾ ಭಗದತ್ತನ ಕಡೆಗೆ ಧಾವಿಸಿದರು.

ತೇಷಾಮಾಪತತಾಂ ರಾಜನ್ ಸಂಕ್ರುದ್ಧಾನಾಮಮರ್ಷಿಣಾಮ್ ।
ಶ್ರುತ್ವಾ ಸ ನಿನದಂ ಘೋರಮಮರ್ಷಾದ್ ಗತಸಾಧ್ವಸಃ ।
ಭಗದತ್ತೋ ಮಹೇಷ್ವಾಸಃ ಸ್ವನಾಗಂ ಪ್ರತ್ಯಚೋದಯತ್ ॥೫೧॥

ಎಲೈ ರಾಜನೇ, ಬಹಳ ಕೋಪ ಮತ್ತು ರೋಷದಿಂದ ಕೂಡಿ ತನ್ನ ಮೇಲೆ ಬರುತ್ತಿರುವ ಪಾಂಡವರ ಘೋರ ನಿನಾದವನ್ನು ಕೇಳಿ ಮಹಾಧನುರ್ಧಾರಿಯಾದ ಭಗದತ್ತನು ಯಾವ ಭಯವೂ ಇಲ್ಲದೆ ತನ್ನ ಗಜವನ್ನು ಅವರ ಕಡೆಗೆ ಪ್ರಚೋದಿಸಿದನು.

ಅಂಕುಶಾಂಗುಷ್ಠನುದಿತಃ ಸ ಗಜಪ್ರವರೋ ಯುಧಿ ।
ತಸ್ಮಿನ್ ಕ್ಷಣೇ ಸಮಭವತ್ ಸಂವರ್ತಕ ಇವಾನಲಃ ॥೫೨॥

ಅಂಕುಶದಿಂದಲೂ ಮತ್ತು ಅಂಗುಷ್ಠದಿಂದಲೂ ಪ್ರಚೋದಿಸಲ್ಪಟ್ಟ ಆ ಶ್ರೇಷ್ಠ ಗಜವು ಆ ಕ್ಷಣದಲ್ಲಿ ರಣರಂಗದಲ್ಲಿ ಸಂವರ್ತಕಾಗ್ನಿಯಂತೆ ಆಯಿತು.

ರಥಸಂಘಾಂಸ್ತಥಾ ನಾಗಾನ್ ಹಯಾಂಶ್ಚ ಸಹ ಸಾದಿಭಿಃ ।
ಪಾದಾತಾಂಶ್ಚ ಸುಸಂಕ್ರುದ್ಧಃ ಶತಶೋಽಥ ಸಹಸ್ರಶಃ ।
ಅಮೃದ್ನಾತ್ ಸಮರೇ ರಾಜನ್ ಸಂಪ್ರಧಾವಂಸ್ತತಸ್ತತಃ ॥೫೩॥

ಎಲೈ ರಾಜನೇ, ರಣರಂಗದಲ್ಲಿ ಅಲ್ಲಿಂದಿಲ್ಲಿಗೆ ಓಡುತ್ತಾ ಅದು ರಥಸಮೂಹಗಳನ್ನೂ, ಗಜಗಳನ್ನೂ, ಅಶ್ವಾರೋಹಿಗಳಿಂದ ಸಹಿತವಾದ ಅಶ್ವಗಳನ್ನೂ, ಪದಾತಿಗಳನ್ನೂ ಬಹಳ ಕೋಪದಿಂದ ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ತುಳಿದು ಹಾಕಿತು.

ತೇನ ಸಂಲೋಡ್ಯಮಾನಂ ತು ಪಾಂಡೂನಾಂ ತದ್ಬಲಂ ಮಹತ್ ।
ಸಂಚುಕೋಚ ಮಹಾರಾಜ ಚರ್ಮೇವಾಗ್ನೌ ಸಮಾಹಿತಮ್ ॥೫೪॥

ಎಲೈ ಮಹಾರಾಜನೇ, ಆ ಗಜದಿಂದ ಕಲಕಲ್ಪಡುವ ಪಾಂಡವರ ಆ ದೊಡ್ಡ ಸೈನ್ಯವು ಅಗ್ನಿಯಲ್ಲಿ ಹಾಕಿದ ಚರ್ಮದಂತೆ ಮುದುರಿಕೊಂಡಿತು.

ಭಗ್ನಂ ತು ಸ್ವಬಲಂ ದೃಷ್ಟ್ವಾ ಭಗದತ್ತೇನ ಧೀಮತಾ ।
ಘಟೋತ್ಕಚೋಽಥ ಸಂಕ್ರುದ್ಧೋ ಭಗದತ್ತಮುಪಾದ್ರವತ್ ॥೫೫॥

ವಿಕಟಃ ಪುರುಷೋ ರಾಜನ್ ದೀಪ್ತಾಸ್ಯೋ ದೀಪ್ತಲೋಚನಃ ।
ರೂಪಂ ವಿಭೀಷಣಂ ಕೃತ್ವಾ ರೋಷೇಣ ಪ್ರಜ್ವಲನ್ನಿವ ॥೫೬॥

ಎಲೈ ರಾಜನೇ, ತನ್ನ ಸೈನ್ಯವು ಮೇಧಾವಿಯಾದ ಭಗದತ್ತನಿಂದ ಭಗ್ನವಾದುದನ್ನು ನೋಡಿ ವಿಕಟ ಪುರುಷನೂ, ಜ್ವಲಿಸುವ ಮುಖವುಳ್ಳವನೂ, ಜ್ವಲಿಸುವ ಕಣ್ಣುಗಳುಳ್ಳವನೂ ಆದ ಘಟೋತ್ಕಚನು ರೋಷದಿಂದ ಉರಿಯುವವನಂತೆ ಭಯಂಕರವಾದ ರೂಪವನ್ನು ತಾಳಿ ಭಗದತ್ತನ ಕಡೆಗೆ ಧಾವಿಸಿದನು.

ಜಗ್ರಾಹ ವಿಪುಲಂ ಶೂಲಂ ಗಿರೀಣಾಮಪಿ ದಾರಣಮ್ ।
ನಾಗಂ ಜಿಘಾಂಸುಃ ಸಹಸಾ ಚಿಕ್ಷೇಪ ಚ ಮಹಾಬಲಃ ।
ಸವಿಸ್ಫುಲಿಂಗಜ್ವಾಲಾಭಿಃ ಸಮಂತಾತ್ ಪರಿವೇಷ್ಟಿತಮ್ ॥೫೭॥

ಪರ್ವತಗಳನ್ನೂ ಭೇದಿಸುವ ಅಗ್ನಿಯ ಕಿಡಿಗಳಿಂದ ಮತ್ತು ಜ್ವಾಲೆಗಳಿಂದ ಸುತ್ತಲೂ ಪರಿವೃತವಾದ ದೊಡ್ಡ ಶೂಲವನ್ನು ತೆಗೆದುಕೊಂಡು ಗಜವನ್ನು ಕೊಲ್ಲಲು ಬಯಸಿ ಮಹಾಬಲನಾದ ಅವನು ಅದನ್ನು ತನ್ನ ಬಲದಿಂದ ಗಜದ ಮೇಲೆ ಎಸೆದನು.

ತಮಾಪತಂತಂ ಸಹಸಾ ದೃಷ್ಟ್ವಾ ಜ್ವಾಲಾಕುಲಂ ರಣೇ ।
ಚಿಚ್ಛೇದ ರುಚಿರಂ ತೀಕ್ಷ್ಣಮರ್ಧಚಂದ್ರಂ ಸ ಪಾರ್ಥಿವಃ ।
ಚಿಚ್ಛೇದ ಸುಮಹಚ್ಛೂಲಂ ತೇನ ಬಾಣೇನ ವೇಗವತ್ ॥೫೮॥

ಜ್ವಾಲೆಗಳಿಂದ ಸಹಿತವಾಗಿ ರಣರಂಗದಲ್ಲಿ ತನ್ನ ಕಡೆಗೆ ಇದ್ದಕ್ಕಿದ್ದಂತೆ ಬರುತ್ತಿದ್ದ ಆ ದೊಡ್ಡ ಶೂಲವನ್ನು ನೋಡಿ ಭಗದತ್ತ ರಾಜನು ತೀಕ್ಷ್ಣವೂ, ಮನೋಹರವೂ ಆದ ಅರ್ಧಚಂದ್ರಾಕಾರದ ಬಾಣವನ್ನು ತೆಗೆದುಕೊಂಡು ಆ ಬಾಣದಿಂದ ಶೀಘ್ರವಾಗಿ ಶೂಲವನ್ನು ಕತ್ತರಿಸಿದನು.

ನಿಪಪಾತ ದ್ವಿಧಾ ಛಿನ್ನಂ ಶೂಲಂ ಹೇಮಪರಿಷ್ಕೃತಮ್ ।
ಮಹಾಶನಿರ್ಯಥಾ ಭ್ರಷ್ಟಾ ಶಕ್ರಮುಕ್ತಾ ನಭೋಗತಾ ॥೫೯॥

ಸುವರ್ಣಾಲಂಕೃತವಾದ ಆ ಶೂಲವು ಎರಡು ಭಾಗವಾಗಿ ಕತ್ತರಿಸಲ್ಪಟ್ಟು ಶಕ್ರನ ಕೈಯಿಂದ ಜಾರಿ ಆಕಾಶದಿಂದ ಬೀಳುತ್ತಿರುವ ವಜ್ರಾಯುಧದಂತೆ ತೋರಿತು.

ಶೂಲಂ ನಿಪತಿತಂ ದೃಷ್ಟ್ವಾ ದ್ವಿಧಾಕೃತ್ತಂ ಸ ಪಾರ್ಥಿವಃ ।
ರುಗ್ಣದಂಡಾಂ ಮಹಾಶಕ್ತಿಂ ಜಗ್ರಾಹಾಗ್ನಿಶಿಖೋಪಮಾಮ್ ।
ಚಿಕ್ಷೇಪ ತಾಂ ರಾಕ್ಷಸಸ್ಯ ತಿಷ್ಠ ತಿಷ್ಠೇತಿ ಚಾಬ್ರವೀತ್ ॥೬೦॥

ಶೂಲವು ಕತ್ತರಿಸಲ್ಪಟ್ಟು ಕೆಳಗೆ ಬಿದ್ದುದನ್ನು ನೋಡಿದ ಆ ಭಗದತ್ತನು ಚಿನ್ನದ ಹಿಡಿಯಿರುವ ಅಗ್ನಿಶಿಖೆಯಂತಿದ್ದ ಶಕ್ತ್ಯಾಯುಧವನ್ನು ತೆಗೆದುಕೊಂಡು ನಿಲ್ಲು, ನಿಲ್ಲು ಎಂದು ಹೇಳುತ್ತಾ ಅದನ್ನು ಘಟೋತ್ಕಚನ ಮೇಲೆ ಎಸೆದನು.

ತಾಮಾಪತಂತೀಂ ಸಂಪ್ರೇಕ್ಷ್ಯ ವಿಯತ್ಸ್ವಮಶನೀಮಿವ ।
ಉತ್ಪತ್ಯ ರಾಕ್ಷಸಸ್ತೂರ್ಣಂ ಜಗ್ರಾಹ ಚ ನನಾದ ಚ ॥೬೧॥

ಸಿಡಿಲಿನಂತೆ ತನ್ನ ಕಡೆಗೆ ಆಕಾಶದಲ್ಲಿ ಬರುತ್ತಿದ್ದ ಆ ಶಕ್ತಿಯನ್ನು ನೋಡಿ ಘಟೋತ್ಕಚನು ಶೀಘ್ರವಾಗಿ ಹಾರಿ ಅದನ್ನು ಹಿಡಿದು ಸಿಂಹನಾದವನ್ನು ಮಾಡಿದನು.

ಬಭಂಜ ಚೈನಾಂ ತ್ವರಿತೋ ಜಾನುನ್ಯಾರೋಪ್ಯ ಭಾರತ ।
ಪಶ್ಯತಃ ಪಾರ್ಥಿವೇಂದ್ರಸ್ಯ ತದದ್ಭುತಮಿವಾಭವತ್ ॥೬೨॥

ಎಲೈ ಭಾರತನೇ, ಆವನು ಅದನ್ನು ಶೀಘ್ರವಾಗಿ ಭಗದತ್ತನು ನೋಡುತ್ತಿರುವಂತೆಯೇ ತನ್ನ ಮಂಡಿಯನ್ನು ಕೊಟ್ಟು ಅದನ್ನು ಮುರಿದನು. ಅದು ಅದ್ಭುತವಾಗಿದ್ದಿತು.

ತದವೇಕ್ಷ್ಯ ಕೃತಂ ಕರ್ಮ ರಾಕ್ಷಸೇನ ಬಲೀಯಸಾ ।
ದಿವಿ ದೇವಾಃ ಸಗಂಧರ್ವಾ ಮುನಯಶ್ಚಾಪಿ ವಿಸ್ಮಿತಾಃ ॥೬೩॥

ಬಲಿಷ್ಠನೂ, ರಾಕ್ಷಸನೂ ಆದ ಆ ಘಟೋತ್ಕಚನು ಮಾಡಿದ ಆ ಕರ್ಮವನ್ನು ನೋಡಿ, ಆಕಾಶದಲ್ಲಿದ್ದ ಗಂಧರ್ವಸಹಿತರಾದ ದೇವತೆಗಳು ಮತ್ತು ಋಷಿಗಳು ವಿಸ್ಮಿತರಾದರು.

ಪಾಂಡವಾಶ್ಚ ಮಹೇಷ್ವಾಸಾ ಭೀಮಸೇನಪುರೋಗಮಾಃ ।
ಸಾಧುಸಾಧ್ವಿತಿ ನಾದೇನ ಪೃಥಿವೀಮನುನಾದಯನ್ ॥೬೪॥

ಭೀಮಸೇನನೇ ಮೊದಲಾದ ಮಹಾಧನುರ್ಧಾರಿಗಳಾದ ಪಾಂಡವರೂ ಸಹ ಸಾಧು, ಸಾಧು ಎಂದು ಹೇಳುತ್ತಾ ತಮ್ಮ ನಾದದಿಂದ ಭೂಮಿಯನ್ನು ಪ್ರತಿಧ್ವನಿಸಿದರು.

ತಂ ತು ಶ್ರುತ್ವಾ ಮಹಾನಾದಂ ಪ್ರಹೃಷ್ಟಾನಾಂ ಮಹಾತ್ಮನಾಮ್ ।
ನಾಮೃಷ್ಯತ ಮಹೇಷ್ವಾಸೋ ಭಗದತ್ತಃ ಪ್ರತಾಪವಾನ್ ॥೬೫॥

ಸಂತೋಷದಿಂದ ಕೂಡಿದ ಮಹಾತ್ಮರಾದ ಪಾಂಡವರ ಆ ಮಹಾನಾದವನ್ನು ಕೇಳಿ ಪ್ರತಾಪಶಾಲಿಯೂ, ಮಹಾಧನುರ್ಧಾರಿಯೂ ಆದ ಭಗದತ್ತನು ಸಹಿಸಲಿಲ್ಲ.

ಸ ವಿಸ್ಫಾರ್ಯ ಮಹಚ್ಚಾಪಮಿಂದ್ರಾಶನಿಸಮಸ್ವನಮ್ ।
ಅಭಿದುದ್ರಾವ ವೇಗೇನ ಪಾಂಡವಾನಾಂ ಮಹಾರಥಾನ್ ।
ವಿಸೃಜನ್ ವಿಮಲಾಂಸ್ತೀಕ್ಷ್ಣಾನ್ ನಾರಾಚಾನ್ ಜ್ವಲನಪ್ರಭಾನ್ ॥೬೬॥

ಅವನು ಇಂದ್ರಾಯುಧಕ್ಕೆ ಸಮಾನವಾದ ನಾದವುಳ್ಳ ತನ್ನ ದೊಡ್ಡ ಧನುಸ್ಸನ್ನು ಎಳೆದು ವಿಮಲವೂ, ತೀಕ್ಷ್ಣವೂ ಮತ್ತು ಅಗ್ನಿಸದೃಶವೂ ಆದ ನಾರಾಚಗಳನ್ನು ಪ್ರಯೋಗಿಸುತ್ತಾ ಪಾಂಡವರ ಮಹಾರಥರ ಮೇಲೆ ವೇಗದಿಂದ ಎರಗಿದನು.

ಭೀಮಮೇಕೇನ ವಿವ್ಯಾಧ ರಾಕ್ಷಸಂ ನವಭಿಃ ಶರೈಃ ।
ಅಭಿಮನ್ಯುಂ ತ್ರಿಭಿಶ್ಚೈವ ಕೇಕಯಾನ್ ಪಂಚಭಿಸ್ತಥಾ ॥೬೭॥

ಅವನು ಭೀಮನನ್ನು ಒಂದು ನಾರಾಚದಿಂದಲೂ, ಘಟೋತ್ಕಚನನ್ನು ಒಂಬತ್ತು ನಾರಾಚಗಳಿಂದಲೂ, ಅಭಿಮನ್ಯುವನ್ನು ಮೂರು ನಾರಾಚಗಳಿಂದಲೂ ಮತ್ತು ಕೇಕಯ ಸಹೋದರರನ್ನು ಐದು ನಾರಾಚಗಳಿಂದಲೂ ವ್ಯಥೆಗೊಳಿಸಿದನು.

ಪೂರ್ಣಾಯತವಿಸೃಷ್ಟೇನ ಸ್ವರ್ಣಪುಂಖೇನ ಪತ್ರಿಣಾ ।
ಬಿಭೇದ ದಕ್ಷಿಣಂ ಬಾಹುಂ ಕ್ಷತ್ರದೇವಸ್ಯ ಚಾಹವೇ ।
ಪಪಾತ ಸಹಸಾ ತಸ್ಯ ಸಶರಂ ಧನುರುತ್ತಮಮ್ ॥೬೮॥

ಪೂರ್ಣವಾಗಿ ಎಳೆದು ಪ್ರಯೋಗಿಸಿದ ಸ್ವರ್ಣಪುಂಖವನ್ನು ಮತ್ತು ಪತ್ರವನ್ನು ಹೊಂದಿದ್ದ ಬಾಣದಿಂದ ರಣರಂಗದಲ್ಲಿ ಅವನು ಕ್ಷತ್ರದೇವನ ಬಲಬಾಹುವನ್ನು ಕತ್ತರಿಸಿದನು. ಕ್ಷತ್ರದೇವನ ಬಾಣ ಸಹಿತವಾದ ಧನುಸ್ಸು ತಕ್ಷಣ ಕೆಳಗೆ ಬಿದ್ದಿತು.

ದ್ರೌಪದೇಯಾಂಸ್ತತಃ ಪಂಚ ಪಂಚಭಿಃ ಸಮತಾಡಯತ್ ।
ಭೀಮಸೇನಸ್ಯ ಚ ಕ್ರೋಧಾನ್ನಿಜಘಾನ ತುರಂಗಮಾನ್ ॥೬೯॥

ಅನಂತರ ದ್ರೌಪದಿಯ ಐದು ಪುತ್ರರನ್ನು ಐದು ಬಾಣಗಳಿಂದ ಹೊಡೆದನು. ಭೀಮಸೇನನ ಮೇಲಿನ ಕ್ರೋಧದಿಂದ ಅವನ ರಥದ ಅಶ್ವಗಳನ್ನು ಕೊಂದನು.

ಧ್ವಜಂ ಕೇಸರಿಣಂ ಚಾಸ್ಯ ಚಿಚ್ಛೇದ ಏಭಿಃಸ್ತ್ರಿಭಿಃ ।
ನಿರ್ಭಿದೇದ ತ್ರಿಭಿಶ್ಚಾನ್ಯೈಃ ಸಾರಥಿಂ ಚಾಸ್ಯ ಪತ್ತಿಭಿಃ ॥೭೦॥

ಮೂರು ಬಾಣಗಳಿಂದ ಅವನ ಸಿಂಹಧ್ವಜವನ್ನು ಕತ್ತರಿಸಿದನು. ಬೇರೆ ಪತ್ರ ಸಹಿತವಾದ ಮೂರು ಬಾಣಗಳಿಂದ ಅವನ ಸಾರಥಿಯನ್ನು ಗಾಯಗೊಳಿಸಿದನು.

ಸ ಗಾಢವಿದ್ಧೋ ವ್ಯಥಿತೋ ರಥೋಪಸ್ಥ ಉಪಾವಿಶತ್ ।
ವಿಶೋಕೋ ಭರತಶ್ರೇಷ್ಠ ಭಗದತ್ತೇನ ಸಂಯುಗೇ ॥೭೧॥

ಎಲೈ ಭರತಶ್ರೇಷ್ಠನೇ, ರಣರಂಗದಲ್ಲಿ ಭಗದತ್ತನಿಂದ ಗಾಢವಾಗಿ ಗಾಯಗೊಂಡ ವಿಶೋಕನು ರಥದ ಪೀಠದಲ್ಲಿ ಕುಳಿತನು.

ತತೋ ಭೀಮೋ ಮಹಾರಾಜ ವಿರಥೋ ರಥಿನಾಂ ವರಃ ।
ಗದಾಂ ಪ್ರಗೃಹ್ಯ ವೇಗೇನ ಪ್ರಚಸ್ಕಂದ ಮಹಾರಥಾತ್ ॥೭೨॥

ಎಲೈ ಮಹಾರಾಜನೇ, ಆಗ ರಥಿಶ್ರೇಷ್ಠನಾದ ಭೀಮನು ರಥವಿಲ್ಲದೆ ಕೈಯಲ್ಲಿ ಗದೆಯನ್ನು ಹಿಡಿದು ಶೀಘ್ರವಾಗಿ ಆ ಮಹಾರಥದಿಂದ ಕೆಳಗೆ ಹಾರಿದನು.

ತಮುದ್ಯತಗದಂ ದೃಷ್ಟ್ವಾ ಸಶೃಂಗಮಿವ ಪರ್ವತಮ್ ।
ತಾವಕಾನಾಂ ಭಯಂ ಘೋರಂ ಸಮಪದ್ಯತ ಭಾರತ ॥೭೩॥

ಎಲೈ ಭಾರತನೇ, ಶಿಖರ ಸಹಿತವಾದ ಪರ್ವತದಂತೆ ಗದೆಯನ್ನು ಎತ್ತಿಹಿಡಿದ ಅವನನ್ನು ನೋಡಿ ನಿನ್ನ ಯೋಧರಿಗೆ ಘೋರವಾದ ಭಯವುಂಟಾಯಿತು.

ಏತಸ್ಮಿನ್ನೇವ ಕಾಲೇ ತು ಪಾಂಡವಃ ಕೃಷ್ಣಸಾರಥಿಃ ।
ಆಜಗಾಮ ಮಹಾರಾಜ ನಿಘ್ನನ್ ಶತ್ರೂನ್ ಸಹಸ್ರಶಃ ॥೭೪॥

ಯತ್ರ ತೌ ಪುರುಷವ್ಯಾಘ್ರೌ ಪಿತಾಪುತ್ರೌ ಪರಂತಪೌ ।
ಪ್ರಾಗ್ಜ್ಯೋತಿಷೇಣ ಸಂಸಕ್ತೌ ಭೀಮಸೇನಘಟೋತ್ಕಚೌ ॥೭೫॥

ಎಲೈ ಮಹಾರಾಜನೇ, ಇದೇ ಸಮಯದಲ್ಲಿ ಕೃಷ್ಣಸಾರಥಿಯಾದ ಅರ್ಜುನನು ಶತ್ರುಗಳನ್ನು ಸಹಸ್ರ ಸಂಖ್ಯೆಯಲ್ಲಿ ಸಂಹರಿಸುತ್ತಾ ಪುರುಷವ್ಯಾಘ್ರರಾದ, ಪರಂತಪರಾದ, ತಂದೆ-ಮಕ್ಕಳಾದ ಭೀಮಸೇನ ಮತ್ತು ಘಟೋತ್ಕಚರು ಎಲ್ಲಿ ಪ್ರಾಗ್ಜ್ಯೋತಿಷನಾದ ಭಗದತ್ತನೊಂದಿಗೆ ಸೆಣಸುತ್ತಿದ್ದರೋ ಅಲ್ಲಿಗೆ ಬಂದನು.

ದೃಷ್ಟ್ವಾ ತು ಪಾಂಡವೋ ರಾಜನ್ ಯುಧ್ಯಮಾನಾನ್ ಮಹಾರಥಾನ್ ।
ತ್ವರಿತೋ ಭರತಶ್ರೇಷ್ಠ ತತ್ರಾಯಾದ್ ಏಕಿರನ್ ಶರಾನ್ ॥೭೬॥

ಎಲೈ ರಾಜನೇ, ಭರತಶ್ರೇಷ್ಠನೇ, ಪಾಂಡವನಾದ ಅರ್ಜುನನು ಯುದ್ಧ ಮಾಡುತ್ತಿರುವ ಮಹಾರಥರನ್ನು ನೋಡಿ ಶೀಘ್ರವಾಗಿ ಬಾಣಗಳನ್ನು ಪ್ರಯೋಗಿಸುತ್ತಾ ಅಲ್ಲಿಗೆ ಬಂದನು.

ತತೋ ದುರ್ಯೋಧನೋ ರಾಜಾ ತ್ವರಮಾಣೋ ಮಹಾರಥಃ ।
ಸೇನಾಮಚೋದಯತ್ ಕ್ಷಿಪ್ರಂ ರಥನಾಗಾಶ್ವಸಂಕುಲಾಮ್ ॥೭೭॥

ಆಗ ಮಹಾರಥನಾದ, ರಾಜನಾದ ದುರ್ಯೋಧನನು ತ್ವರೆ ಮಾಡುತ್ತಾ, ಶೀಘ್ರವಾಗಿ ರಥ-ಗಜಾಶ್ವಗಳಿಂದ ತುಂಬಿದ ತನ್ನ ಸೈನ್ಯವನ್ನು ಅರ್ಜುನನ ಮೇಲೆ ಪ್ರಚೋದಿಸಿದನು.

ತಾಮಾಪತಂತೀಂ ಸಹಸಾ ಕೌರವಾಣಾಂ ಮಹಾಚಮೂಮ್ ।
ಅಭಿದುದ್ರಾವ ವೇಗೇನ ಪಾಂಡವಃ ಶ್ವೇತವಾಹನಃ ॥೭೮॥

ಶ್ವೇತವಾಹನನಾದ ಅರ್ಜುನನು ಕೌರವರ ಮಹಾಸೈನ್ಯವು ತನ್ನ ಕಡೆಗೆ ಬರುತ್ತಿದ್ದುದನ್ನು ನೋಡಿ ತಾನೂ ವೇಗವಾಗಿ ಅದರ ಕಡೆಗೆ ಓಡಿದನು.

ಭಗದತ್ತೋಽಪಿ ಸಮರೇ ತೇನ ನಾಗೇನ ಭಾರತ ।
ವಿಮೃದ್ನನ್ ಪಾಂಡವಬಲಂ ಯುಧಿಷ್ಠಿರಮುಪಾದ್ರವತ್ ॥೭೯॥

ಎಲೈ ಭಾರತನೇ, ಭಗದತ್ತನೂ ಸಹ ರಣರಂಗದಲ್ಲಿ ಪಾಂಡವಸೈನ್ಯವನ್ನು ಆ ಗಜದಿಂದ ಭಗ್ನಗೊಳಿಸುತ್ತಾ ಯುಧಿಷ್ಠಿರನ ಕಡೆಗೆ ಧಾವಿಸಿ ಬಂದನು.

ತದಾಸೀತ್ ತುಮುಲಂ ಯುದ್ಧಂ ಭಗದತ್ತಸ್ಯ ಮಾರಿಷ ।
ಪಾಂಚಾಲೈಃ ಸೃಂಜಯೈಶ್ಚೈವ ಕೇಕಯೈಶ್ಚೋದ್ಯತಾಯುಧೈಃ ॥೮೦॥

ಎಲೈ ಪೂಜ್ಯನೇ, ಆಗ ಭಗದತ್ತನಿಗೂ, ಪಾಂಚಾಲರು, ಸೃಂಜಯರು ಮತ್ತು ಆಯುಧಧಾರಿಗಳಾದ ಕೇಕಯರು ಇವರಿಗೂ ತೀವ್ರವಾದ ಯುದ್ಧವು ನಡೆಯಿತು.

ಭೀಮಸೇನೋऽಪಿ ಸಮರೇ ತಾವುಭೌ ಕೇಶವಾರ್ಜುನೌ ।
ಆಶ್ರಾವಯದ್ ಯಥಾವೃತ್ತಮಿರಾವದ್ವಧಮುತ್ತಮಮ್ ॥೮೧॥

ಭೀಮಸೇನನೂ ಸಹ ಕೇಶವಾರ್ಜುನರಿಬ್ಬರನ್ನೂ ಕುರಿತು ರಣರಂಗದಲ್ಲಿ ಇರಾವಂತನ ವಧೆಯು ನಡೆದ ರೀತಿಯನ್ನು ಯಥಾರ್ಥವಾಗಿ ತಿಳಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಏಕನವತಿತಮೋऽಧ್ಯಾಯಃ ॥

॥ ಭೀಷ್ಮವಧಪರ್ವಣಿ ಏಕಪಂಚಾಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ತೊಂಬತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೆರಡನೆಯ ಅಧ್ಯಾಯ

ವಿಷಣ್ಣನಾದ ಅರ್ಜುನನಿಂದ ಪುನಃ ಯುದ್ಧದಲ್ಲಿ ಪರಾಕ್ರಮ ಪ್ರದರ್ಶನ.
ಭೀಮಸೇನನ ಪರಾಕ್ರಮ. ರಣರಂಗದ ವರ್ಣನೆ ಮತ್ತು
ಎಂಟನೆಯ ದಿವಸದ ಸೈನ್ಯಾವಹಾರ.

ಸಂಜಯಃ

ಪುತ್ರಂ ತು ನಿಹತಂ ಶ್ರುತ್ವಾ ಇರಾವಂತಂ ಧನಂಜಯಃ ।
ದುಃಖೇನ ಮಹತಾವಿಷ್ಟೋ ನಿಶ್ವಸನ್ ಪನ್ನಗೋ ಯಥಾ ॥೧॥

ಅಬ್ರವೀತ್ ಸಮರೇ ರಾಜನ್ ವಾಸುದೇವಮಿದಂ ವಚಃ ।
ಇದಂ ನೂನಂ ಮಹಾಪ್ರಾಜ್ಞೋ ವಿದುರೋ ದೃಷ್ಟವಾನ್ ಪುರಾ ॥೨॥

ಕುರೂಣಾಂ ಪಾಂಡವಾನಾಂ ಚ ಕ್ಷಯಂ ಘೋರಂ ಮಹಾಮತಿಃ ।
ತತೋ ನಿವಾರಯಿತವಾನ್ ಧೃತರಾಷ್ಟ್ರಂ ಜನೇಶ್ವರಮ್ ॥೩॥

ಸಂಜಯ– ಎಲೈ ರಾಜನೇ, ಪುತ್ರನಾದ ಇರಾವಂತನ ವಧೆಯ ವಾರ್ತೆಯನ್ನು ಕೇಳಿ ಧನಂಜಯನು ಬಹಳ ದುಃಖದಿಂದ ಕೂಡಿದವನಾಗಿ, ಸರ್ಪದಂತೆ ನಿಟ್ಟುಸಿರನ್ನು ಬಿಡುತ್ತಾ ಕೃಷ್ಣನನ್ನು ಕುರಿತು ಈ ಮಾತನ್ನಾಡಿದನು. ಮಹಾಪ್ರಾಜ್ಞನಾದ ವಿದುರನು ಕೌರವರ ಮತ್ತು ಪಾಂಡವರ ಘೋರವಾದ ವಿನಾಶವನ್ನು ಮೊದಲೇ ತಿಳಿದಿದ್ದನು. ಆದ್ದರಿಂದಲೇ ಅವನು ರಾಜನಾದ ಧೃತರಾಷ್ಟ್ರನನ್ನು ಯುದ್ಧದಿಂದ ನಿವಾರಿಸಲು ಪ್ರಯತ್ನಪಟ್ಟನು.

ಅವಧ್ಯಾ ಬಹವೋ ವೀರಾಃ ಸಂಗ್ರಾಮೇ ಮಧುಸೂದನ ।
ನಿಹತಾಃ ಕೌರವೈಃ ಸಂಖೇ ತಥಾಸ್ಮಾಭಿಶ್ಚ ತೇ ಹತಾಃ ॥೪॥

ಎಲೈ ಮಧುಸೂದನನೇ, ಅವಧ್ಯರಾದ ಅನೇಕ ವೀರರು ಸಂಗ್ರಾಮದಲ್ಲಿ ಕೌರವರಿಂದ ಹತರಾದರು. ಹಾಗೆಯೇ ನಮ್ಮಿಂದಲೂ ಕೌರವ ಪಕ್ಷದ ವೀರರು ಹತರಾದರು.

ಅರ್ಥಹೇತೋರ್ನರಶ್ರೇಷ್ಠ ಕ್ರಿಯತೇ ಕರ್ಮ ಕುತ್ಸಿತಮ್ ।
ಧಿಗರ್ಥಾನ್ ಯತ್ ಕೃತೇ ಹ್ಯೇವಂ ಕ್ರಿಯತೇ ಜ್ಞಾತಿಸಂಕ್ಷಯಃ ॥೫॥

ಎಲೈ ಪುರುಷಶ್ರೇಷ್ಠನೇ, ಅರ್ಥದ ಸಲುವಾಗಿ ನಾವು ಕುತ್ಸಿತವಾದ ಕರ್ಮವನ್ನು ಮಾಡುತ್ತಿದ್ದೇವೆ. ಯಾವ ಅರ್ಥದ ಸಲುವಾಗಿ ಇಂತಹ ಬಂಧುವಿನಾಶ ಉಂಟಾಗುತ್ತಿದೆಯೋ ಅಂತಹ ಅರ್ಥಕ್ಕೆ (ಸಂಪತ್ತಿಗೆ) ಧಿಕ್ಕಾರವಿರಲಿ.

ಅಧನಸ್ಯ ಮೃತಂ ಶ್ರೇಯೋ ನ ಚ ಜ್ಞಾತಿವಧಾದ್ ಧನಮ್ ।
ಕಿಂ ನು ಪ್ರಾಪ್ಸ್ಯಾಮಹೇ ಕೃಷ್ಣ ಹತ್ವಾ ಜ್ಞಾತೀನ್ ಸಮಾಗತಾನ್ ॥೬॥

ನಿರ್ಧನನಾಗಿ ಮೃತನಾಗುವುದು ಒಳ್ಳೆಯದು. ಬಂಧುವಧೆಯಿಂದ ಧನವನ್ನು ಸಂಪಾದಿಸುವುದಲ್ಲ. ಎಲೈ ಕೃಷ್ಣನೇ, ಸಮಾಗತರಾದ ದಾಯಾದಿಗಳನ್ನು ಕೊಂದು ನಾವು ಏನನ್ನು ಪಡೆಯುವೆವು?

ದುರ್ಯೋಧನಾಪರಾಧೇನ ಶಕುನೇಃ ಸೌಬಲಸ್ಯ ಚ ।
ಕ್ಷತ್ರಿಯಾ ನಿಧನಂ ಯಾಂತಿ ಕರ್ಣದುರ್ಮಂತ್ರಿತೇನ ಚ ॥೭॥

ದುರ್ಯೋಧನ ಮತ್ತು ಸೌಬಲನಾದ ಶಕುನಿಯ ಅಪರಾಧದಿಂದಲೂ, ಕರ್ಣನ ದುರ್ಮಂತ್ರಣದಿಂದಲೂ ಕ್ಷತ್ರಿಯರು ನಿಧನವನ್ನು ಹೊಂದುತ್ತಿದ್ದಾರೆ.

ಇದಾನೀಂ ಚ ವಿಜಾನಾಮಿ ಸುಕೃತಂ ಮಧುಸೂದನ ।
ಕೃತಂ ರಾಜ್ಞಾ ಮಹಾಬಾಹೋ ಯಾಚತಾ ಸ್ಮ ಸುಯೋಧನಮ್ ।
ರಾಜ್ಯಾರ್ಧಂ ಪಂಚ ವಾ ಗ್ರಾಮಾನ್ ನಾಕಾರ್ಷೀತ್ ಸ ಚ ದುರ್ಮತಿಃ ॥

ಎಲೈ ಮಧುಸೂದನನೇ, ಮಹಾಬಾಹುವೇ, ಸುಯೋಧನನನ್ನು ಅರ್ಧರಾಜ್ಯವನ್ನು ಅಥವಾ ಐದು ಗ್ರಾಮಗಳನ್ನು ಯಾಚಿಸಿ ಯುಧಿಷ್ಠಿರನು ಎಂತಹ ಒಳ್ಳೆಯ ಕೆಲಸ ಮಾಡಿದನು ಎಂದು ಈಗ ತಿಳಿಯುತ್ತಿದ್ದೇನೆ. ಆದರೆ ಆ ದುರ್ಮತಿಯು ಯುಧಿಷ್ಠಿರನ ಮಾತನ್ನು ನಡೆಸಿಕೊಡಲಿಲ್ಲ.

ದೃಷ್ಟ್ವಾ ಹಿ ಕ್ಷತ್ರಿಯಾನ್ ಶೂರಾನ್ ಶಯಾನಾನ್ ಧರಣೀತಳೇ ।
ನಿಂದಾಮಿ ಭೃಶಮಾತ್ಮಾನಂ ಧಿಗಸ್ತು ಕ್ಷತ್ರಜೀವಿಕಾಮ್ ॥೯॥

ಭೂಮಿಯ ಮೇಲೆ ಮೃತರಾಗಿ ಮಲಗಿರುವ ಕ್ಷತ್ರಿಯ ವೀರರನ್ನು ನೋಡಿ ನಾನು ಕ್ಷತ್ರಿಯ ಜೀವನಕ್ಕೆ ಧಿಕ್ಕಾರವಿರಲಿ ಎಂದು ನನ್ನನ್ನೇ ನಿಂದಿಸಿಕೊಳ್ಳುತ್ತೇನೆ.

ಅಶಕ್ತಮಿತಿ ಮಾಮೇತೇ ಜ್ಞಾಸ್ಯಂತಿ ಕ್ಷತ್ರಿಯಾ ರಣೇ ।
ಯುದ್ಧಂ ಮಮೈಭೀ ರುಚಿತಂ ಜ್ಞಾತಿಭಿರ್ಮಧುಸೂದನ ॥೧೦॥

ಈ ಕ್ಷತ್ರಿಯರು ನನ್ನನ್ನು ಯುದ್ಧದಲ್ಲಿ ಅಶಕ್ತರೆಂದು ತಿಳಿಯುವರು. ಎಲೈ ಮಧುಸೂದನನೇ, ಆ ಕಾರಣದಿಂದ ಜ್ಞಾತಿಗಳ ಜೊತೆಯಲ್ಲಿ ಯುದ್ಧವು ನನಗೆ ಇಷ್ಟವಾಗಿದೆ.

ಸಂಚೋದಯ ಹಯಾನ್ ಕ್ಷಿಪ್ರಂ ಧಾರ್ತರಾಷ್ಟ್ರಚಮೂಂ ಪ್ರತಿ ।
ಪ್ರತರಿಷ್ಯೇ ಮಹಾಪಾರಂ ಭುಜಾಭ್ಯಾಂ ಸಮರೋದಧಿಮ್ ।
ನಾಯಂ ಕ್ಲೀಬಯಿತುಂ ಕಾಲೋ ವಿದ್ಯತೇ ಮಾಧವ ಕ್ವಚಿತ್ ॥೧೧॥

ದುರ್ಯೋಧನನ ಸೈನ್ಯವನ್ನು ಕುರಿತು ನಮ್ಮ ಅಶ್ವಗಳನ್ನು ಶೀಘ್ರವಾಗಿ ಪ್ರಚೋದಿಸು. ಅಪಾರವಾದ ದೊಡ್ಡ ಈ ಸಮರಸಮುದ್ರವನ್ನು ನಾನು ಎರಡು ಭುಜಗಳಿಂದಲೇ ದಾಟುವೆನು. ಎಲೈ ಮಾಧವನೇ, ಇದು ನಪುಂಸಕನಂತೆ ಹೆದರಿ ಹಿಂದಕ್ಕೆ ಸರಿಯುವ ಕಾಲವಲ್ಲ(ಎಂದು ಹೇಳಿದನು).

ಏವಮುಕ್ತಸ್ತು ಪಾರ್ಥೇನ ಕೇಶವಃ ಪರವೀರಹಾ ।
ಚೋದಯಾಮಾಸ ತಾನಶ್ವಾನ್ ಪಾಂಡರಾನ್ ವಾತರಂಹಸಃ ॥೧೨॥

ಅರ್ಜುನನಿಂದ ಹೀಗೆ ಹೇಳಲ್ಪಟ್ಟ ಪರವೀರಘಾತಕನಾದ ಕೇಶವನು ಶ್ವೇತವರ್ಣದ, ವಾಯುವೇಗದ ಆ ಅಶ್ವಗಳನ್ನು ಪ್ರಚೋದಿಸಿದನು.

ಅಥ ಶಬ್ದೋ ಮಹಾನಾಸೀತ್ ತವ ಸೈನ್ಯಸ್ಯ ಭಾರತ ।
ಮಾರುತೋದ್ಧೂತವೇಗಸ್ಯ ಸಾಗರಸ್ಯೇವ ಪರ್ವಣಿ ॥೧೩॥

ಎಲೈ ಭಾರತನೇ, ಆಗ ಪರ್ವಕಾಲದಲ್ಲಿ ಬಿರುಗಾಳಿಗೆ ಸಿಕ್ಕಿ ವೇಗಗೊಂಡ ಸಮುದ್ರದ ಮೊರೆತದಂತೆ ನಿನ್ನ ಸೈನ್ಯದಲ್ಲಿ ತೀವ್ರವಾದ ಶಬ್ದವುಂಟಾಯಿತು.

ಅಪರಾಹ್ಣೇ ಮಹಾರಾಜ ಸಂಗ್ರಾಮಃ ಸಮಪದ್ಯತ ।
ಪರ್ಜನ್ಯಸಮನಿರ್ಘೋಷೋ ಭೀಷ್ಮಸ್ಯ ಸಹ ಪಾಂಡವೈಃ ॥೧೪॥

ಎಲೈ ಮಹಾರಾಜನೇ, ಅಪರಾಹ್ಣದ ಸಮಯದಲ್ಲಿ ಭೀಷ್ಮರಿಗೂ ಮತ್ತು ಪಾಂಡವರಿಗೂ ಸಿಡಿಲಿನ ಘೋಷದಂತಹ ಘೋಷವಿರುವ ಸಂಗ್ರಾಮವು ಜರುಗಿತು.

ತತೋ ರಾಜಂಸ್ತವ ಸುತಾ ಭೀಮಸೇನಮುಪಾದ್ರವನ್ ।
ಪರಿವಾರ್ಯ ರಣೇ ದ್ರೋಣಂ ವಸವೋ ವಾಸವಂ ಯಥಾ ॥೧೫॥

ಎಲೈ ರಾಜನೇ, ಆಗ ನಿನ್ನ ಮಕ್ಕಳು ವಸುಗಳು ಇಂದ್ರನನ್ನು ಸುತ್ತುವರಿದಂತೆ ರಣರಂಗದಲ್ಲಿ ದ್ರೋಣರನ್ನು ಸುತ್ತುವರಿದು ಭೀಮಸೇನನ ಕಡೆಗೆ ಧಾವಿಸಿದರು.

ತತಃ ಶಾಂತನವೋ ಭೀಷ್ಮಃ ಕೃಪಶ್ಚ ರಥಿನಾಂ ವರಃ ।
ಭಗದತ್ತಃ ಸುಶರ್ಮಾ ಚ ಧನಂಜಯಮುಪಾದ್ರವನ್ ॥೧೬॥

ಆಗ ಶಂತನು ಪುತ್ರರಾದ ಭೀಷ್ಮರು, ರಥಿಶ್ರೇಷ್ಠರಾದ ಕೃಪರು, ಭಗದತ್ತ ಮತ್ತು ಸುಶರ್ಮರು ಅರ್ಜುನನ ಕಡೆಗೆ ಧಾವಿಸಿದರು.

ಹಾರ್ದಿಕ್ಯೋ ಬಾಹ್ಲಿಕಶ್ಚೈವ ಸಾತ್ಯಕಿಂ ಸಮಭಿದ್ರುತೌ ।
ಅಂಬಷ್ಠಕಸ್ತು ನೃಪತಿರಭಿಮನ್ಯುಮವಾರಯತ್ ॥೧೭॥

ಕೃತವರ್ಮ ಮತ್ತು ಬಾಹ್ಲಿಕರು ಸಾತ್ಯಕಿಯ ಕಡೆಗೆ ಧಾವಿಸಿದರು. ರಾಜನಾದ ಅಂಬಷ್ಠನು ಅಭಿಮನ್ಯುವನ್ನು ತಡೆದನು.

ಶೇಷಾಸ್ತ್ವನ್ಯೇ ಮಹಾರಾಜ ಶೇಷಾನೇವ ಮಹಾರಥಾನ್ ।
ತತಃ ಪ್ರವವೃತೇ ಯುದ್ಧಂ ಘೋರರೂಪಂ ಭಯಾವಹಮ್ ॥೧೮॥

ಎಲೈ ಮಹಾರಾಜನೇ, ಉಳಿದವರು ಉಳಿದ ಮಹಾರಥರ ಜೊತೆಯಲ್ಲಿ ಸೆಣಸಿದರು. ಅನಂತರ ಘೋರವೂ, ಭಯಂಕರವೂ ಆದ ಯುದ್ಧವು ಪ್ರಾರಂಭವಾಯಿತು.

ಭೀಮಸೇನಸ್ತು ಸಂಪ್ರೇಕ್ಷ್ಯ ಪುತ್ರಾಂಶ್ಚವ ಜನೇಶ್ವರ ।
ಪ್ರಜಜ್ವಾಲ ರಣೇ ಕ್ರುದ್ಧೋ ಹವಿಷಾ ಹವ್ಯವಾಡಿವ ॥೧೯॥

ಎಲೈ ಜನೇಶ್ವರನೇ, ಭೀಮಸೇನನಾದರೂ ನಿನ್ನ ಪುತ್ರರನ್ನು ನೋಡಿ ಹವಿಸ್ಸಿನಿಂದ ಅಗ್ನಿಯು ಪ್ರಜ್ವಲಿಸುವಂತೆ ರಣರಂಗದಲ್ಲಿ ಕ್ರುದ್ಧನಾಗಿ ಪ್ರಜ್ವಲಿಸಿದನು.

ಪುತ್ರಾಸ್ತು ತವ ಕೌಂತೇಯಂ ಛಾದಯಾಂಚಕ್ರಿರೇ ಶರೈಃ ।
ಪ್ರಾವೃಷೀವ ಮಹಾರಾಜ ಜಲದಾಃ ಪರ್ವತಂ ಯಥಾ ॥೨೦॥

ಎಲೈ ಮಹಾರಾಜನೇ, ನಿನ್ನ ಮಕ್ಕಳಾದರೋ ಮಳೆಗಾಲದಲ್ಲಿ ಮೋಡಗಳು ನೀರಿನಲ್ಲಿ ಪರ್ವತವನ್ನು ಆಚ್ಛಾದಿಸಿದಂತೆ ಬಾಣಗಳಿಂದ ಕುಂತೀಪುತ್ರನಾದ ಭೀಮಸೇನನನ್ನು ಆಚ್ಛಾದಿಸಿದರು.

ಸ ಚ್ಛಾದ್ಯಮಾನೋ ಬಹುಧಾ ಪುತ್ರೈಸ್ತವ ವಿಶಾಂಪತೇ ।
ಸೃಕ್ಕಿಣೀ ವಿಲಿಹನ್ ವೀರಃ ಶಾರ್ದೂಲ ಇವ ದರ್ಪಿತಃ ॥೨೧॥

ವ್ಯೂಢೋರಸ್ಕಂ ತತೋ ಭೀಮಃ ಪಾತಯಾಮಾಸ ಪಾರ್ಥಿವ ।
ಕ್ಷುರಪ್ರೇಣ ಸುತೀಕ್ಷ್ಣೇನ ಸೋಽಭವದ್ ಗತಜೀವಿತಃ ॥೨೨॥

ಎಲೈ ರಾಜನೇ, ಹೀಗೆ ನಿನ್ನ ಪುತ್ರರಿಂದ ಅನೇಕ ರೀತಿಯಲ್ಲಿ ಆಚ್ಛಾದಿಸಲ್ಪಟ್ಟ ವೀರನಾದ ಭೀಮಸೇನನು ಕಟಬಾಯಿಯನ್ನು ಸವರಿಕೊಳ್ಳುತ್ತಾ ವ್ಯಾಘ್ರದಂತೆ ದರ್ಪಯುಕ್ತನಾಗಿ ನಿನ್ನ ಪುತ್ರನಾದ ವ್ಯೂಢೋರಸ್ಕನನ್ನು ತೀಕ್ಷ್ಣವಾದ ಕ್ಷುರಪ್ರದಿಂದ ಕೆಡವಿದನು. ವ್ಯೂಢೋರಸ್ಕನು ಪ್ರಾಣವನ್ನು ತ್ಯಜಿಸಿದನು.

ಅಪರೇಣ ತು ಭಲ್ಲೇನ ಪೀತೇನ ನಿಶಿತೇನ ಚ ।
ಅಪಾತಯತ್ ಕುಂಡಲಿನಂ ಸಿಂಹಃ ಕ್ಷುದ್ರಮೃಗಂ ಯಥಾ ॥೨೩॥

ಇನ್ನೊಂದು ತೀಕ್ಷ್ಣವಾದ ನೀರು ಕುಡಿಸಿ ಹದ ಮಾಡಿದ ಭಲ್ಲದಿಂದ ಸಿಂಹವು ಕ್ಷುದ್ರ ಮೃಗವನ್ನು ಕೆಡವಿದಂತೆ ನಿನ್ನ ಪುತ್ರನಾದ ಕುಂಡಲಿಯನ್ನು ಹೊಡೆದು ಉರುಳಿಸಿದನು.

ತತಃ ಸುನಿಶಿತಾನ್ ಪೀತಾನ್ ಸಮಾದತ್ತ ಶಿಲೀಮುಖಾನ್ ।
ಸ ಸಪ್ತ ತ್ವರಯಾ ಯುಕ್ತಃ ಪುತ್ರಾಂಸ್ತೇ ಪ್ರಾಪ್ಯ ಮಾರಿಷ ॥೨೪॥

ಎಲೈ ಪೂಜ್ಯನೇ, ಅನಂತರ ಅವನು ನಿನ್ನ ಪುತ್ರರ ಸಮೀಪಕ್ಕೆ ಬಂದು ಶೀಘ್ರವಾಗಿ ಅತ್ಯಂತ ತೀಕ್ಷ್ಣವಾದ ನೀರು ಕುಡಿಸಿದ ಏಳು ಬಾಣಗಳನ್ನು ತೆಗೆದುಕೊಂಡನು.

ಪ್ರೇಷಿತಾ ಭೀಮಸೇನೇನ ಶರಾಸ್ತೇ ದೃಢಧನ್ವನಾ ।
ಅಪಾತಯಂತ ಪುತ್ರಾಂಸ್ತೇ ರಥೇಭ್ಯಃ ಸುಮಹಾರಥಾನ್ ॥೨೫॥

ಅನಾಧೃಷ್ಟಿಂ ಕುಂಡಭೇದಂ ವೈರಾಟಂ ದೀರ್ಘಲೋಚನಮ್ ।
ದೀರ್ಘಬಾಹುಂ ಸುಬಾಹುಂ ಚ ತಥೈವ ಕನಕಧ್ವಜಮ್ ॥೨೬॥

ದೃಢವಾದ ಧನುಸ್ಸುಳ್ಳ ಭೀಮಸೇನನಿಂದ ಪ್ರಯೋಗಿಸಲ್ಪಟ್ಟ ಆ ಬಾಣಗಳು ಮಹಾರಥರಾದ, ನಿನ್ನ ಪುತ್ರರಾದ ಅನಾಧೃಷ್ಟಿ, ಕುಂಡಭೇದ, ವೈರಾಟ, ದೀರ್ಘಲೋಚನ, ದೀರ್ಘಬಾಹು, ಸುಬಾಹು ಮತ್ತು ಕನಕಧ್ವಜ ಇವರನ್ನು ಅವರ ರಥಗಳಿಂದ ಕೆಡವಿದವು.

ಪ್ರಪತಂತ ಸ್ಮ ತೇ ವೀರಾ ವಿರೇಜುರ್ಭರತರ್ಷಭ ।
ವಸಂತೇ ಪುಷ್ಪಶಬಲಾಶ್ಚೂತಾಃ ಪ್ರಪತಿತಾ ಇವ ॥೨೭॥

ಎಲೈ ಭರತಶ್ರೇಷ್ಠನೇ, ಆ ವೀರರು ತಮ್ಮ ರಥದಿಂದ ಬೀಳುತ್ತಾ ವಸಂತ ಕಾಲದಲ್ಲಿ ಪುಷ್ಪಭರಿತವಾದ ಮಾವಿನ ವೃಕ್ಷಗಳು ಬೀಳುವಂತೆ ಕಂಗೊಳಿಸಿದರು.

ತತಃ ಪ್ರದುದ್ರುವುಃ ಶೇಷಾಃ ಪುತ್ರಾಸ್ತವ ವಿಶಾಂಪತೇ ।
ತಂ ಕಾಲಮಿವ ಮನ್ಯಂತೋ ಭೀಮಸೇನಂ ಮಹಾಬಲಮ್ ॥೨೮॥

ಆಗ ಎಲೈ ರಾಜನೇ, ಮಹಾಬಲಶಾಲಿಯಾದ ಭೀಮನನ್ನು ಮೃತ್ಯುವೆಂದು ತಿಳಿಯುತ್ತಾ ನಿನ್ನ ಉಳಿದ ಪುತ್ರರು ಓಡಿಹೋದರು.

ದ್ರೋಣಸ್ತು ಸಮರೇ ವೀರಂ ನಿರ್ದಹಂತಂ ಸುತಾಂಸ್ತವ ।
ಯಥಾದ್ರಿಂ ವಾರಿಧಾರಾಭಿಃ ಸಮಂತಾದ್ ವ್ಯಕಿರಚ್ಛರೈಃ ॥೨೯॥

ದ್ರೋಣರಾದರೋ ಯುದ್ಧದಲ್ಲಿ ನಿನ್ನ ಪುತ್ರರನ್ನು ದಹಿಸುತ್ತಿದ್ದ ವೀರನಾದ ಭೀಮಸೇನನ ಮೇಲೆ ಪರ್ವತದ ಮೇಲೆ ಮಳೆಯನ್ನು ಸುರಿಸಿದಂತೆ ಎಲ್ಲ ಕಡೆಗಳಿಂದಲೂ ಬಾಣಗಳನ್ನು ಪ್ರಯೋಗಿಸಿದರು.

ತತ್ರಾದ್ಭುತಮಪಶ್ಯಾಮ ಕುಂತೀಪುತ್ರಸ್ಯ ಪೌರುಷಮ್ ।
ದ್ರೋಣೇನ ವಾರ್ಯಮಾಣೋಽಪಿ ನಿಜಘ್ನೇ ಯತ್ ಸುತಾಂಸ್ತವ ॥

ದ್ರೋಣರು ತಡೆಯುತ್ತಿದ್ದರೂ ಕುಂತೀಪುತ್ರನಾದ ಭೀಮಸೇನನು ನಿನ್ನ ಪುತ್ರರನ್ನು ಹೊಡೆಯುತ್ತಿದ್ದ ಅವನ ಅದ್ಭುತ ಪರಾಕ್ರಮವನ್ನು ನಾವು ನೋಡಿದೆವು.

ಯಥಾ ಹಿ ಗೋವೃಷೋ ವರ್ಷಂ ಸಂಧಾರಯತಿ ಖಾತ್ ಪತತ್ ।
ಭೀಮಸ್ತಥಾ ದ್ರೋಣಮುಕ್ತಂ ಶರವರ್ಷಮಧೀಧರತ್ ॥೩೧॥

ಹೇಗೆ ಗೋವೃಷವು ಆಕಾಶದಿಂದ ಬೀಳುವ ಮಳೆಯನ್ನು ಧರಿಸುತ್ತದೆಯೋ ಹಾಗೆ ಭೀಮಸೇನನು ದ್ರೋಣರು ಪ್ರಯೋಗಿಸಿದ ಬಾಣಗಳ ಮಳೆಯನ್ನು ಧರಿಸಿದನು.

ಅದ್ಭುತಂ ಚ ಮಹಾರಾಜ ತತ್ರ ಚಕ್ರೇ ವೃಕೋದರಃ ।
ಯತ್ಪುತ್ರಾಂಸ್ತೇಽವಧೀತ್ ಸಂಖ್ಯೇ ದ್ರೋಣಂ ಚೈವ ನ್ಯಯೋಧಯತ್ ॥

ಎಲೈ ಮಹಾರಾಜನೇ, ಭೀಮಸೇನನು ನಿನ್ನ ಪುತ್ರರನ್ನೂ ಬಾಣಗಳಿಂದ ಹೊಡೆಯುತ್ತಾ ದ್ರೋಣರ ಜೊತೆಯಲ್ಲೂ ಯುದ್ಧವನ್ನು ಮಾಡುವ ಅದ್ಭುತ ಕಾರ್ಯವನ್ನು ಮಾಡಿದನು.

ಪುತ್ರೇಷು ತವ ವೀರೇಷು ಚಿಕ್ರೀಡಾರ್ಜುನಪೂರ್ವಜಃ ।
ಮೃಗೇಷ್ವಿವ ಮಹಾರಾಜ ಚರನ್ ವ್ಯಾಘ್ರೋ ಮಹಾಬಲಃ ॥೩೩॥

ಎಲೈ ಮಹಾರಾಜನೇ, ಅರ್ಜುನನ ಅಣ್ಣನಾದ ಭೀಮನು ಮಹಾಭುಜವುಳ್ಳ ವ್ಯಾಘ್ರವು ಜಿಂಕೆಗಳ ಮಧ್ಯದಲ್ಲಿ ಸಂಚರಿಸಿದಂತೆ ವೀರರಾದ ನಿನ್ನ ಪುತ್ರರ ಜೊತೆಯಲ್ಲಿ ಆಟವಾಡಿದನು.

ಯಥಾ ವಾ ಪಶುಮಧ್ಯಸ್ಥೋ ದ್ರಾವಯೇತ ಪಶೂನ್ ವೃಕಃ ।
ವೃಕೋದರಸ್ತವ ಸುತಾಂಸ್ತಥಾ ವ್ಯದ್ರಾವಯದ್ ರಣೇ ॥೩೪॥

ಪಶುಗಳ ಮಧ್ಯದಲ್ಲಿದ್ದ ತೋಳವು ಪಶುಗಳನ್ನು ಓಡಿಸುವಂತೆ ವೃಕೋದರನು ರಣರಂಗದಲ್ಲಿ ನಿನ್ನ ಪುತ್ರರನ್ನು ಓಡಿಸಿದನು.

ಗಾಂಗೇಯೋ ಭಗದತ್ತಶ್ಚ ಗೌತಮಶ್ಚ ಮಹಾರಥಃ ।
ಪಾಂಡವಂ ರಭಸಂ ಯುದ್ಧೇ ವಾರಯಾಮಾಸುರರ್ಜುನಮ್ ॥೩೫॥

ಭೀಷ್ಮರು, ಭಗದತ್ತ ಮತ್ತು ಮಹಾರಥರಾದ ಕೃಪರು ವೇಗಶಾಲಿಯಾದ ಪಾಂಡುಪುತ್ರನಾದ ಅರ್ಜುನನನ್ನು ಯುದ್ಧದಲ್ಲಿ ತಡೆದರು.

ಅಸ್ತ್ರೈರಸ್ತ್ರಾಣಿ ಸಂವಾರ್ಯ ತೇಷಾಂ ಸೋಽತಿರಥೋ ರಣೇ ।
ಪ್ರವೀರಾಂಸ್ತವ ಸೈನ್ಯೇಷು ಪ್ರೇಷಯಾಮಾಸ ಮೃತ್ಯವೇ ॥೩೬॥

ಅತಿರಥನಾದ ಅರ್ಜುನನು ಯುದ್ಧದಲ್ಲಿ ಅವರ ಅಸ್ತ್ರಗಳನ್ನು ತನ್ನ ಅಸ್ತ್ರಗಳಿಂದ ನಿವಾರಿಸಿ ನಿನ್ನ ಸೈನ್ಯದಲ್ಲಿದ್ದ ಶ್ರೇಷ್ಠರಾದ ವೀರರನ್ನು ಮೃತ್ಯುಲೋಕಕ್ಕೆ ಕಳುಹಿಸಿದನು.

ಅಭಿಮನ್ಯುಶ್ಚ ರಾಜಾನಮಂಬಷ್ಠಂ ಲೋಕವಿಶ್ರುತಮ್ ।
ವಿರಥಂ ರಥಿನಾಂ ಶ್ರೇಷ್ಠಂ ಕಾರಯಾಮಾಸ ಸಾಯಕೈಃ ॥೩೭॥

ಅಭಿಮನ್ಯುವೂ ಸಹ ಲೋಕವಿಖ್ಯಾತನಾದ ರಥಿಶ್ರೇಷ್ಠನಾದ ಅಂಬಷ್ಠರಾಜನನ್ನು ತನ್ನ ಬಾಣಗಳಿಂದ ರಥಹೀನನ್ನಾಗಿ ಮಾಡಿದನು.

ವಿರಥೋ ವಧ್ಯಮಾನಃ ಸ ಸೌಭದ್ರೇಣ ಯಶಸ್ವಿನಾ ।
ಅವಪ್ಲುತ್ಯ ರಥಾತ್ ತೂರ್ಣಂ ಸವ್ರೀಡೋ ಮನುಜಾಧಿಪಃ ॥೩೮॥

ಅಸಿಂ ಚಿಕ್ಷೇಪ ಸಮರೇ ಸೌಭದ್ರಸ್ಯ ಮಹಾತ್ಮನಃ ।
ಆರುರೋಹ ರಥಂ ಚೈವ ಹಾರ್ದಿಕ್ಯಸ್ಯ ಮಹಾತ್ಮನಃ ॥೩೯॥

ರಥವನ್ನು ಕಳೆದುಕೊಂಡು ಕೀರ್ತಿವಂತನಾದ ಅಭಿಮನ್ಯುವಿನಿಂದ ಬಾಣಗಳಿಂದ ಹೊಡೆಯಲ್ಪಡುತ್ತಿದ್ದ ರಾಜನಾದ ಅಂಬಷ್ಠನು ನಾಚಿಕೆಗೊಂಡು ಶೀಘ್ರವಾಗಿ ರಥದಿಂದ ಕೆಳಗೆ ಹಾರಿ ಮಹಾತ್ಮನಾದ ಅಭಿಮನ್ಯುವಿನ ಮೇಲೆ ಒಂದು ಖಡ್ಗವನ್ನು ಎಸೆದನು ಮತ್ತು ಮಹಾತ್ಮನಾದ ಹಾರ್ದಿಕ್ಯನ ರಥವನ್ನು ಏರಿದನು.

ಆಪತಂತಂ ತು ನಿಸ್ತ್ರಿಂಶಂ ಯುದ್ಧಮಾರ್ಗವಿಶಾರದಃ ।
ಲಾಘವಾದ್ ವ್ಯಂಸಯಾಮಾಸ ಸೌಭದ್ರಃ ಪರವೀರಹಾ ॥೪೦॥

ಪರವೀರಘಾತಕನೂ, ಯುದ್ಧಮಾರ್ಗಗಳಲ್ಲಿ ಕುಶಲನೂ ಆದ ಅಭಿಮನ್ಯುವು ತನ್ನ ಕ್ಷಿಪ್ರತನದಿಂದ ತನ್ನ ಕಡೆಗೆ ಬರುತ್ತಿದ್ದ ಖಡ್ಗವನ್ನು ವಂಚಿಸಿದನು.

ವ್ಯಂಸಿತಂ ವೀಕ್ಷ್ಯ ನಿಸ್ತ್ರಿಂಶಂ ಸೌಭದ್ರೇಣ ರಣೇ ತದಾ ।
ಸಾಧುಸಾಧ್ವಿತಿ ಸೈನ್ಯಾನಾಂ ಪ್ರಣಾದೋಽಭೂದ್ ವಿಶಾಂಪತೇ ॥೪೧॥

ಎಲೈ ರಾಜನೇ, ಅಭಿಮನ್ಯುವು ಯುದ್ಧದಲ್ಲಿ ಖಡ್ಗವನ್ನು ವಂಚಿಸಿದುದನ್ನು ನೋಡಿ ಸೈನ್ಯಗಳಲ್ಲಿ ಸಾಧು, ಸಾಧು ಎಂಬ ಮಹಾನಾದವುಂಟಾಯಿತು.

ಧೃಷ್ಟದ್ಯುಮ್ನಮುಖಾಸ್ತ್ವನ್ಯೇ ತವ ಸೈನ್ಯಮಯೋಧಯನ್ ।
ತಥೈವ ತಾವಕಾಃ ಸರ್ವೇ ಪಾಂಡುಸೈನ್ಯಮಯೋಧಯನ್ ॥೪೨॥

ಉಳಿದ ಧೃಷ್ಟದ್ಯುಮ್ನ ಮೊದಲಾದವರು ನಿನ್ನ ಸೈನ್ಯದ ಜೊತೆಯಲ್ಲಿ ಯುದ್ಧವನ್ನು ಮಾಡಿದರು. ಹಾಗೆಯೇ ನಿನ್ನವರೆಲ್ಲರೂ ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ತತ್ರಾಕ್ರಂದೋ ಮಹಾನಾಸೀತ್ ತವ ತೇಷಾಂ ಚ ಭಾರತ ।
ನಿಘ್ನತಾಂ ಬೃಶಮನ್ಯೋನ್ಯಂ ಕುರ್ವತಾಂ ಕರ್ಮ ದುಷ್ಕರಮ್ ॥೪೩॥

ಎಲೈ ಭಾರತನೇ, ಪರಸ್ಪರವಾಗಿ ಕೊಂದು ದುಷ್ಕರವಾದ ಕರ್ಮವನ್ನು ಮಾಡುವ ನಿನ್ನ ಮತ್ತು ಅವರ ಸೈನ್ಯಗಳಲ್ಲಿ ದೊಡ್ಡ ಆಕ್ರಂದನ (ಗೋಳಾಟ) ಉಂಟಾಯಿತು.

ಅನ್ಯೋನ್ಯಂ ಹಿ ರಣೇ ಶೂರಾಃ ಕೇಶೇಷ್ವಾಕ್ಷಿಪ್ಯ ಮಾರಿಷ ।
ನಖೈರ್ದಂಷ್ಟ್ರೈರಯುಧ್ಯಂತ ಮುಷ್ಟಿಭಿರ್ಜಾನುಭಿಸ್ತಥಾ ॥೪೪॥

ಎಲೈ ಪೂಜ್ಯನೇ, ಶೂರರಾದವರು ಯುದ್ಧದಲ್ಲಿ ಒಬ್ಬರನ್ನೊಬ್ಬರು ತಲೆಕೂದಲಲ್ಲಿ ಹಿಡಿದು ನಖಗಳಿಂದಲೂ, ದಂತಗಳಿಂದಲೂ, ಮುಷ್ಟಿಗಳಿಂದಲೂ, ಮಂಡಿಗಳಿಂದಲೂ ಹೋರಾಡಿದರು.

ಬಾಹುಭಿಶ್ಚ ತಳೈಶ್ಚೈವ ನಿಸ್ತ್ರಿಂಶೈಶ್ಚ ಸುಸಂಶಿತೈಃ ।
ವಿವರಂ ಪ್ರಾಪ್ಯ ಚಾನ್ಯೋನ್ಯಮನಯನ್ ಯಮಸಾದನಮ್ ॥೪೫॥

ಬಾಹುಗಳಿಂದಲೂ, ಹಸ್ತತಳಗಳಿಂದಲೂ, ತೀಕ್ಷ್ಣವಾದ ಖಡ್ಗಗಳಿಂದಲೂ ಒಬ್ಬರ ರಂಧ್ರವನ್ನು ಇನ್ನೊಬ್ಬರು ಹೊಂದಿ ಪರಸ್ಪರವಾಗಿ ಯಮಪಟ್ಟಣಕ್ಕೆ ಕಳುಹಿಸಿದರು.

ನ್ಯಹನಚ್ಚ ಪಿತಾ ಪುತ್ರಂ ಪುತ್ರಶ್ಚ ಪಿತರಂ ರಣೇ ।
ವ್ಯಾಕುಲೀಕೃತಸಂಕಲ್ಪಾ ಯುಯುಧುಸ್ತತ್ರ ಮಾನವಾಃ ॥೪೬॥

ತಂದೆಯು ಮಗನನ್ನು ಕೊಂದನು, ಮಗನೂ ತಂದೆಯನ್ನು ಕೊಂದನು. ಮಾನವರು ಅಲ್ಲಿ ತಮ್ಮ ಸಂಕಲ್ಪದಲ್ಲಿ ವ್ಯತ್ಯಾಸಗೊಂಡು ಯುದ್ಧವನ್ನು ಮಾಡಿದರು.

ರಣೇ ಚಾರೂಣಿ ಚಾಪಾನಿ ಹೇಮಪೃಷ್ಠಾನಿ ಭಾರತ ।
ಹತಾನಾಮಪವಿದ್ಧಾನಿ ಕಲಾಪಾಶ್ಚ ಮಹಾಧನಾಃ ॥೪೭॥

ಜಾತರೂಪಮಯೈಃ ಪುಂಖೈ ರಾಜತೈಶ್ಚ ಶಿತಾಃ ಶರಾಃ ।
ತೈಲಧೌತಾ ವ್ಯರಾಜಂತ ನಿರ್ಮುಕ್ತಭುಜಗೋಪಮಾಃ ॥೪೮॥

ಎಲೈ ಭಾರತನೇ, ಯುದ್ಧಭೂಮಿಯಲ್ಲಿ ಚಿನ್ನದ ಹಿಡಿಯಿರುವ ಸುಂದರವಾದ ಧನುಸ್ಸುಗಳು, ಮೃತರಾದವರ ದೇಹದಿಂದ ಎಸೆದ ಬೆಲೆಬಾಳುವ ಆಭರಣಗಳು,

ಸುವರ್ಣಮಯವಾದ ಮತ್ತು ರಜತಮಯವಾದ ಪುಂಖಗಳನ್ನು ಹೊಂದಿದ ಎಣ್ಣೆಯಲ್ಲಿ ಸಾಣೆಯನ್ನು ಹಿಡಿದ, ಪೊರೆಯನ್ನು ಬಿಟ್ಟ ಸರ್ಪದಂತಿರುವ ತೀಕ್ಷ್ಣವಾದ ಬಾಣಗಳು ಎಲ್ಲವೂ ಶೋಭಿಸಿದವು.

ಹಸ್ತಿದಂತತ್ಸರೂನ್ ಖಡ್ಗಾನ್ ಜಾತರೂಪಪರಿಷ್ಕೃತಾನ್ ।
ಚರ್ಮಾಣಿ ಚಾಪವಿದ್ಧಾನಿ ರುಗ್ಣಪೃಷ್ಠಾನಿ ಧನ್ವಿನಾಮ್ ॥೪೯॥

ಸುವರ್ಣವಿಕೃತಪ್ರಾಸಾನ್ ಪಟ್ಟಿಶಾನ್ ಹೇಮಭೂಷಿತಾನ್ ।
ಜಾತರೂಪಮಯಾಶ್ಚರ್ಷ್ಟೀಃ ಶಕ್ತಯಶ್ಚ ಕನಕೋಜ್ವಲಾಃ ॥೫೦॥

ಅಪಕೃತ್ತಾಶ್ಚ ಪತಿತಾ ಮುಸಲಾನಿ ಗುರೂಣಿ ಚ ।

ಆನೆಯ ದಂತದ ಹಿಡಿಯುಳ್ಳ ಸುವರ್ಣಾಲಂಕೃತವಾದ ಖಡ್ಗಗಳು, ಧನುರ್ಧಾರಿಗಳ ಸುವರ್ಣಪೃಷ್ಠವುಳ್ಳ ಎಸೆದ ಗುರಾಣಿಗಳು, ಸುವರ್ಣಮಯವಾದ ಪ್ರಾಸಗಳು, ಸುವರ್ಣಾಲಂಕೃತವಾದ ಪಟ್ಟಿಶಗಳು, ಸುವರ್ಣಮಯವಾದ ಋಷ್ಟಿಗಳು, ಸುವರ್ಣದಿಂದ ಪ್ರಜ್ವಲಿಸುವ ಶಕ್ತ್ಯಾಯುಧಗಳು, ದೊಡ್ಡ ದೊಡ್ಡ ಒನಕೆಗಳು ಎಲ್ಲವೂ ಕತ್ತರಿಸಿ ನೆಲದ ಮೇಲೆ ಬಿದ್ದಿದ್ದವು.

ಪರಿಘಾನ್ ಪಟ್ಟಿಶಾಂಶ್ಚೈವ ಭಿಂಡಿಪಾಲಾಂಶ್ಚ ಮಾರಿಷ ॥೫೧॥

ಪತಿತಾಂಸ್ತೋಮರಾಂಶ್ಚಾಪಿ ಚಿತ್ರಾ ಹೇಮಪರಿಷ್ಕೃತಾಃ ।
ಕುಥಾಶ್ಚ ಬಹುಧಾಕಾರಾಶ್ಚಾಮರವ್ಯಜನಾನಿ ಚ ॥೫೨॥

ನಾನಾವಿಧಾನಿ ಶಸ್ತ್ರಾಣಿ ವಿಸೃಜ್ಯ ಪತಿತಾ ನರಾಃ ।
ಜೀವಂತ ಇವ ದೃಶ್ಯಂತೇ ಗತಸತ್ತ್ವಾ ಮಹಾರಥಾಃ ॥೫೩॥

ಎಲೈ ಪೂಜ್ಯನೇ, ಪರಿಘಗಳು, ಪಟ್ಟಿಶಗಳು, ಭಿಂಡಿಪಾಲಗಳು, ಕೆಳಗೆ ಬಿದ್ದ ತೋಮರಗಳು, ಸುವರ್ಣಾಲಂಕೃತವಾದ ವಿಚಿತ್ರವಾದ ಹಾಸುಗಳು, ಅನೇಕ ಆಕಾರದ ಚಾಮರ-ವ್ಯಜನಗಳು, ನಾನಾವಿಧವಾದ ಶಸ್ತ್ರಗಳು ಇವುಗಳನ್ನು ಬಿಟ್ಟು ಪತಿತರಾಗಿ ಮೃತರಾದ ಮಹಾರಥರು ಬದುಕಿರುವಂತೆ ಕಾಣುತ್ತಿದ್ದರು.

ಗದಾವಿಮಥಿತೈರ್ಗಾತ್ರೈರ್ಮುಸಲೈರ್ಭಿನ್ನಮಸ್ತಕಾಃ ।
ಗಜವಾಜಿರಥಕ್ಷುಣ್ಣಾಃ ಶೇರತೇ ಸ್ಮ ನರಾಃ ಕ್ಷಿತೌ ॥೫೪॥

ತಥೈವಾಶ್ವನಾಗಾನಾಂ ಶರೀರೈರಾಬಭೌ ತದಾ ।
ಸಂಛನ್ನಾ ವಸುಧಾ ರಾಜನ್ ಪರ್ವತೈರಿವ ಸರ್ವತಃ ॥೫೫॥

ಗದೆಗಳಿಂದ ಪುಡಿಮಾಡಲ್ಪಟ್ಟ ಶರೀರಗಳಿಂದ ಒನಕೆಗಳಿಂದ ಭಗ್ನವಾದ ಶಿರಸ್ಸುಳ್ಳ ಗಜಾಶ್ವರಥಗಳಿಗೆ ಸಿಕ್ಕಿ ಮೃತರಾದ ಯೋಧರು ಭೂಮಿಯ ಮೇಲೆ ಮಲಗಿದ್ದರು. ಹಾಗೆಯೇ ಮೃತವಾದ ಅಶ್ವಗಳ, ಯೋಧರ, ಗಜಗಳ ಶರೀರಗಳಿಂದ ಆವೃತವಾದ ರಣಭೂಮಿಯು ಎಲೈ ರಾಜನೇ, ಎಲ್ಲ ಕಡೆಗಳಲ್ಲಿಯೂ ಪರ್ವತಗಳಿಂದ ಆವೃತವಾದಂತೆ ಇದ್ದಿತು.

ಸಮರೇ ಪತಿತೈಶ್ಚೈವ ಶಕ್ತ್ಯೃಷ್ಟಿಶರತೋಮರೈಃ ।
ನಿಸ್ತ್ರಿಂಶೈಃ ಪಟ್ಟಿಶೈಃ ಪ್ರಾಸೈರಯಸ್ಕುಂತೈಃ ಪರಶ್ವಧೈಃ ॥೫೬॥

ಪರಿಘೈರ್ಭಂಡಿಪಾಲೈಶ್ಚ ಶತಘ್ನೀಭಿಸ್ತಥೈವ ಚ ।
ಶರೀರೈಃ ಶಸ್ತ್ರಭಿನ್ನೈಶ್ಚ ಸಮಾಸ್ತೀರ್ಯತ ಮೇದಿನೀ ॥೫೭॥

ಯುದ್ಧದಲ್ಲಿ ಬಿದ್ದ ಶಕ್ತಿ-ಋಷ್ಟಿ-ಬಾಣ-ತೋಮರಗಳಿಂದಲೂ, ಖಡ್ಗಗಳಿಂದಲೂ, ಪಟ್ಟಿಶಗಳಿಂದಲೂ, ಪ್ರಾಸಗಳಿಂದಲೂ, ಕಬ್ಬಿಣದ ಹಾರೆಗಳಿಂದಲೂ, ಕೊಡಲಿಗಳಿಂದಲೂ, ಕಬ್ಬಿಣದ ಒನಕೆಗಳಿಂದಲೂ, ಭಿಂಡಿಪಾಲಗಳಿಂದಲೂ ಹಾಗೆಯೇ ಶಸ್ತ್ರದಿಂದ ಕತ್ತರಿಸಲ್ಪಟ್ಟ ಶರೀರಗಳಿಂದಲೂ ಭೂಮಿಯು ಎಲ್ಲ ಕಡೆಗಳಲ್ಲಿಯೂ ಹರಡಲ್ಪಟ್ಟಿತು.

ನಿಃಶಬ್ದೈರಲ್ಪಶಬ್ದೈಶ್ಚ ಶೋಣಿತೌಘಪರಿಪ್ಲುತೈಃ ।
ಗತಾಸುಭಿರಮಿತ್ರಶ್ಚ ವಿಬಭೌ ಸಂವೃತಾ ಮಹೀ ॥೫೮॥

ನಿಶ್ಶಬ್ದವಾದ ಅಥವಾ ಅಲ್ಪಶಬ್ದವನ್ನು ಮಾಡುತ್ತಿರುವ ರಕ್ತದಿಂದ ತೋಯಿಸಲ್ಪಟ್ಟ ಮೃತರಾದ ಯೋಧರಿಂದ ಮುಚ್ಚಲ್ಪಟ್ಟ ಭೂಮಿಯು ಶೋಭಿಸಿತು.

ಸತಳತ್ರೈಃ ಸಕೇಯೂರೈರ್ಬಾಹುಭಿಶ್ಚಂದನೋಕ್ಷಿತೈಃ ।
ಹಸ್ತಿಹಸ್ತೋಪಮೈಶ್ಚಿನ್ನೈರೂರುಭಿಶ್ಚ ತರಸ್ವಿನಾಮ್ ॥೫೯॥

ಬದ್ಧಚೂಡಾಮಣಿಧರೈಃ ಶಿರೋಭಿಶ್ಚ ಸಕುಂಡಲೈಃ ।
ಪತಿತೈರ್ವೃಷಭಾಕ್ಷಾಣಾಂ ಬಭೌ ಭಾರತ ಮೇದಿನೀ ॥೬೦॥

ಎಲೈ ಭಾರತನೇ, ವೃಷಭಾಕ್ಷವುಳ್ಳ ವೀರರ ಹಸ್ತರಕ್ಷೆಗಳಿಂದಲೂ, ಚಂದನ ಲೇಪಿತವಾದ ಕೇಯೂರ ಸಹಿತವಾದ ಭುಜಗಳಿಂದಲೂ, ವೇಗಶಾಲಿಗಳ ಆನೆಯ ಸೊಂಡಿಲಿನಂತಹ ಕತ್ತರಿಸಲ್ಪಟ್ಟ ತೊಡೆಗಳಿಂದಲೂ, ಕಟ್ಟಿದ ಚೂಡಾಮಣಿಗಳನ್ನು ಧರಿಸಿದ ಶಿರಸ್ಸುಗಳಿಂದಲೂ, ಕುಂಡಲಸಹಿತವಾದ ಶಿರಸ್ಸುಗಳಿಂದಲೂ ಯುದ್ಧಭೂಮಿಯು ಶೋಭಿಸಿತು.

ಕವಚೈಃ ಶೋಣತಾದಿಗ್ಧೈರ್ವಿಪ್ರಕೀರ್ಣೈಶ್ಚ ಕಾಂಚನೈಃ ।
ರರಾಜ ಸುಭೃಶಂ ಭೂಮಿಃ ಶಾಂತಾರ್ಚಿಭಿರಿವಾನಲೈಃ ॥೬೧॥

ರಕ್ತಲೇಪಿತವಾದ, ಸುವರ್ಣಮಯವಾದ ಚೆಲ್ಲಾಡಿದ ಕವಚಗಳಿಂದ ಭೂಮಿಯು ಜ್ವಾಲೆಗಳು ಶಾಂತವಾದ ಅಗ್ನಿಯಂತೆ ಶೋಭಿಸಿತು.

ವಿಪ್ರವಿದ್ಧೈಃ ಕಲಾಪೈಶ್ಚ ಪತಿತೈಶ್ಚ ಶರಾಸನೈಃ ।
ವಿಪ್ರಕೀರ್ಣೈಃ ಶರೈಶ್ಚಾಪಿ ರುಗ್ಣಪುಂಖೈಃ ಸಮಂತತಃ ॥೬೨॥

ರಥೈಶ್ಚ ಬಹುಭಿರ್ಭಗ್ನೈಃ ಕಿಂಕಿಣೀಜಾಲಮಾಲಿಭಿಃ ।
ವಾಜಿಭಿಶ್ಚ ಹತೈಃ ಕೀರ್ಣೈಃ ಸ್ರಸ್ತಜಿಹ್ವೈಃ ಸಶೋಣಿತೈಃ ॥೬೩॥

ಅನುಕರ್ಷೈಃ ಪತಾಕಾಭಿರುಪಾಸಂಗೈರ್ಧ್ವಜೈರಪಿ ।
ಪ್ರವೀರಾಣಾಂ ಮಹಾಶಂಖೈರ್ವಿಪ್ರಕೀರ್ಣೈಶ್ಚ ಪಾಂಡರೈಃ ॥೬೪॥

ಸ್ರಸ್ತಹಸ್ತೈಶ್ಚ ಮಾತಂಗೈಃ ಶಯಾನೈರ್ವಿಬಭೌ ಮಹೀ ।
ನಾನಾರೂಪೈರಲಂಕಾರೈಃ ಪ್ರಮದೇವಾಭ್ಯಲಂಕೃತಾ ॥೬೫॥

ಎಸೆಯಲ್ಪಟ್ಟ ಆಭರಣಗಳಿಂದಲೂ, ಬಿದ್ದಿರುವ ಧನುಸ್ಸುಗಳಿಂದಲೂ, ರುಗ್ಣಪುಂಖವನ್ನು ಹೊಂದಿದ ಎಲ್ಲಕಡೆಗಳಲ್ಲಿಯೂ ಚೆಲ್ಲಾಡಿದ ಬಾಣಗಳಿಂದಲೂ, ಭಗ್ನವಾದ ಸಣ್ಣಗಂಟೆಯ ಮಾಲೆಯನ್ನು ಹೊಂದಿದ ರಥಗಳಿಂದಲೂ, ಮೃತವಾಗಿ ನಾಲಿಗೆಯನ್ನು ಚಾಚಿ ರಕ್ತಸಿಕ್ತವಾಗಿ ಅಲ್ಲಲ್ಲಿ ಬಿದ್ದಿರುವ ಅಶ್ವಗಳಿಂದಲೂ, ಸಣ್ಣನೊಗಗಳು, ಪತಾಕೆಗಳು, ಭತ್ತಳಿಕೆಗಳು, ಧ್ವಜಗಳು, ಪ್ರವೀರರ ಚೆಲ್ಲಾಡಿದ ಶ್ವೇತವರ್ಣದ ಶಂಖಗಳು ಇವುಗಳಿಂದಲೂ, ಸೊಂಡಲಿಲ್ಲದೆ ಭೂಮಿಯ ಮೇಲೆ ಮಲಗಿದ ಗಜಗಳಿಂದಲೂ ಭೂಮಿಯು ನಾನಾ ರೂಪವಾದ ಅಲಂಕಾರವನ್ನು ಧರಿಸಿದ ವನಿತೆಯಂತೆ ಶೋಭಿಸಿತು.

ದಂತಿಭಿಶ್ಚಾಪರೈಸ್ತತ್ರ ಸಪ್ರಾಸೈರ್ಗಾಢವೇದನೈಃ ।
ಕರೈಃ ಶಬ್ದಂ ವಿಮುಂಚದ್ಭಿಃ ಶೀಕರಂ ಚ ಮುಹುರ್ಮುಹುಃ ।
ವಿಬಭೌ ತದ್ ರಣಸ್ಥಾನಂ ಧಮ್ಯಮಾನೈರಿವಾಚಲೈಃ ॥೬೬॥

ಪ್ರಾಸಗಳಿಂದ ಬಲವಾದ ಪ್ರಹಾರವನ್ನು ಹೊಂದಿ, ವೇದನೆಯನ್ನು ಅನುಭವಿಸುತ್ತಿರುವ ಗಜಗಳಿಂದಲೂ, ಸೊಂಡಿಲುಗಳಿಂದ ಪುನಃ ಪುನಃ ಶೀಕರ ಶಬ್ದವನ್ನು ಮಾಡುತ್ತಿದ್ದ ಗಜಗಳಿಂದಲೂ ಆ ರಣಭೂಮಿಯು ಉಸಿರಾಡುವ ಪರ್ವತದಂತೆ ತೋರುತ್ತಿದ್ದಿತು.

ನಾನಾರಾಗೈಃ ಕಂಬಲೈಶ್ಚ ಪರಿಸ್ತೋಮೈಶ್ಚ ದಂತಿನಾಮ್ ।
ವೈಡೂರ್ಯಮಣಿದಂಡೈಶ್ಚ ಪತಿತೈರಂಕುಶೈಃ ಶುಭೈಃ ॥೬೭॥

ಘಂಟಾಭಿಶ್ಚ ಗಜೇಂದ್ರಾಣಾಂ ಪತಿತಾಭಿಃ ಸಮಂತತಃ ।
ವಿಘಾಟಿತವಿಚಿತ್ರಾಭಿಃ ಕುಥಾಭೀ ರಾಂಕವೈಸ್ತಥಾ ॥೬೮॥

ಗ್ರೈವೇಯೈಶ್ಚಿತ್ರರೂಪೈಶ್ಚ ರುಗ್ಣಕಕ್ಷ್ಯಾಭರೇಷು ಚ ।
ಯಂತ್ರೈಶ್ಚ ಬಹುಧಾ ಛಿನ್ನೈಸ್ತೋಮರೈಶ್ಚ ಸಕಂಪನೈಃ ॥೬೯॥

ಅಶ್ವಾನಾಂ ರೇಣುಕಪಿಲೈ ರುಗ್ಣಚ್ಚನ್ನೈರುರಶ್ಛದೈಃ ।
ಸಾದಿನಾಂ ಚ ಭುಜೈಶ್ಛಿನ್ನೈಃ ಪತಿತೈಃ ಸಾಂಗದೈಸ್ತಥಾ ॥೭೦॥

ಪ್ರಾಸೈಶ್ಚ ವಿಮಲೈಸ್ತೀಕ್ಷ್ಣೈರ್ವಿಮಲಾಭಸ್ತಥರ್ಷ್ಟಿಭಿಃ ।
ಉಷ್ಣೀಷೈಶ್ಚ ತಥಾ ಛಿನ್ನೈಃ ಪ್ರವಿದ್ಧೈಶ್ಚ ತತಸ್ತತಃ ॥೭೧॥

ವಿಚಿತ್ರೈರರ್ಧಚಂದ್ರೈಶ್ಚ ಜಾತರೂಪಪರಿಷ್ಕೃತೈಃ ।
ಅಶ್ವಾಸ್ತರಪರಿಸ್ತೋಮೈ ರಾಂಕವೈರ್ಮಂದಿತೈಸ್ತಥಾ ॥೭೨॥

ನರೇಂದ್ರಚೂಡಾಮಣಿಭಿರ್ವಿಚಿತ್ರೈಶ್ಚ ಮಹಾಧನೈಃ ।
ಛತ್ರೈಸ್ತಥಾಪವಿದ್ಧೈಶ್ಚ ಚಾಮರವ್ಯಜನೈರಪಿ ॥೭೩॥

ಪದ್ಮೇಂದುದ್ಯುತಿಭಿಶ್ಚೈವ ವದನೈಶ್ಚಾರುಕುಂಡಲೈಃ ।
ಕೃತ್ತಶ್ಮಶ್ರುಭಿರತ್ಯರ್ಥಂ ವೀರಾಣಾಂ ಸಮಲಂಕೃತೈಃ ॥೭೪॥

ಅಪವಿದ್ಧೈರ್ಮಹಾರಾಜ ಸುವರ್ಣೋಜ್ಜ್ವಲಕುಂಡಲೈಃ ।
ಗ್ರಹನಕ್ಷತ್ರಶಬಲಾ ದ್ಯೌರಿವಾಸೀದ್ ವಸುಂಧರಾ ॥೭೫॥

ಅನೇಕ ವರ್ಣದ ಕಂಬಳಿಗಳಿಂದಲೂ, ಗಜದ ಮೇಲಿನ ಹಾಸುಗಳಿಂದಲೂ, ವೈಡೂರ್ಯಮಣಿಯ ಹಿಡಿಯುಳ್ಳ ನೆಲದ ಮೇಲೆ ಬಿದ್ದ ಶುಭವಾದ ಅಂಕುಶಗಳಿಂದಲೂ, ಎಲ್ಲ ಕಡೆಗಳಲ್ಲಿಯೂ ಬಿದ್ದ ಶ್ರೇಷ್ಠ ಗಜಗಳ ಗಂಟೆಗಳಿಂದಲೂ, ಮೃಗರೋಮಗಳಿಂದ ಮಾಡಿದ ವಿಚಿತ್ರವಾದ ರತ್ನಕಂಬಳಿಗಳಿಂದಲೂ, ವಿಚಿತ್ರ ರೂಪವುಳ್ಳ ಗಜಗಳ ಕೊರಳಿನ ಆಭರಣಗಳಿಂದಲೂ, ಸುವರ್ಣಮಯವಾದ ಸರಪಳಿಗಳಿಂದಲೂ, ಅನೇಕ ವಿಧವಾಗಿ ಕತ್ತರಿಸಲ್ಪಟ್ಟ ಯಂತ್ರಗಳಿಂದಲೂ, ಕಂಪನಗಳಿಂದ ಕೂಡಿದ ತೋಮರಗಳಿಂದಲೂ, ಧೂಳಿನಿಂದ ಕಂದುಬಣ್ಣಕ್ಕೆ ತಿರುಗಿದ ಸುವರ್ಣದಿಂದ ಆವೃತವಾದ ಅಶ್ವಗಳ ವಕ್ಷಸ್ಥಲದ ವಸ್ತ್ರಗಳಿಂದಲೂ, ಛಿನ್ನವಾದ ಅಂಗದಿಂದ ಕೂಡಿದ ನೆಲದ ಮೇಲೆ ಬಿದ್ದ ಅಶ್ವಾರೋಹಿಗಳ ಭುಜಗಳಿಂದಲೂ, ವಿಮಲವೂ ತೀಕ್ಷ್ಣವೂ ಆದ ಪ್ರಾಸ ಮತ್ತು ಋಷ್ಟಿಗಳಿಂದಲೂ, ಹರಿದು ಅಲ್ಲಲ್ಲಿ ಎಸೆದ ರುಮಾಲುಗಳಿಂದಲೂ, ಸುವರ್ಣದಿಂದ ಅಲಂಕೃತವಾದ ಅರ್ಧಚಂದ್ರಾಕೃತಿಯ ವಿಚಿತ್ರವಾದ ಬಾಣಗಳಿಂದಲೂ, ಅಶ್ವದ ಬೆನ್ನಿನ ಮೇಲೆ ಹಾಸುವ ವಸ್ತ್ರಗಳಿಂದಲೂ, ತುಳಿದು ಹಾಳಾದ ಮೃಗರೋಮದ ಕಂಬಳಿಗಳಿಂದಲೂ, ವಿಚಿತ್ರವೂ ಮತ್ತು ಮಹಾಬೆಲೆಯುಳ್ಳವೂ ಆದ ರಾಜರ ಚೂಡಾಮಣಿಗಳಿಂದಲೂ, ಅಲ್ಲಲ್ಲಿ ಎಸೆದ ಛತ್ರ-ಚಾಮರ-ವ್ಯಜನಗಳಿಂದಲೂ, ವೀರರ ಪದ್ಮೇಂದು ಕಾಂತಿಯುಳ್ಳ, ಚಾರುಕುಂಡಲಗಳನ್ನು ಧರಿಸಿದ, ಅಲಂಕರಿಸಿದ ಮೀಸೆಗಳನ್ನುಳ್ಳ ಅಲ್ಲಲ್ಲಿ ಬಿದ್ದ ಶಿರಸ್ಸುಗಳಿಂದಲೂ ಎಲೈ ಮಹಾರಾಜನೇ, ರಣಭೂಮಿಯು ಗ್ರಹ-ನಕ್ಷತ್ರಗಳಿಂದ ಕೂಡಿದ ಆಕಾಶದಂತೆ ಇದ್ದಿತು.

ಏವಮೇತೇ ಮಹಾಸೇನೇ ಮೃದಿತೇ ತತ್ರ ಭಾರತ ।
ಪರಸ್ಪರಂ ಸಮಾಸಾದ್ಯ ತವ ತೇಷಾಂ ಚ ಸಂಯುಗೇ ॥೭೬॥

ಎಲೈ ಭಾರತನೇ, ಹೀಗೆ ಆ ಎರಡು ಸೈನ್ಯಗಳು ಯುದ್ಧದಲ್ಲಿ ಪರಸ್ಪರವಾಗಿ ಸಮಾಗಮವನ್ನು ಹೊಂದಿ ವಿನಾಶಗೊಳಿಸಲ್ಪಟ್ಟವು.

ತೇಷು ಶ್ರಾಂತೇಷು ಭಗ್ನೇಷು ಮೃದಿತೇಷು ಚ ಭಾರತ ।
ರಾತ್ರಿಃ ಸಮಭವದ್ ಘೋರಾ ನಾಪಶ್ಯಾಮ ತತೋ ರಣಮ್ ॥೭೭॥

ಎಲೈ ಭಾರತನೇ, ಆ ವೀರರು ಮತ್ತು ವಾಹನಗಳು ಭಗ್ನಗೊಂಡು ತುಳಿಯಲ್ಪಟ್ಟು ದಣಿದಿರಲು ಘೋರವಾದ ರಾತ್ರಿಯುಂಟಾಯಿತು. ಆಗ ನಾವು ಯುದ್ಧವನ್ನು ಕಾಣಲಿಲ್ಲ.

ತತೋಽವಹಾರಂ ಸೈನ್ಯಾನಾಂ ಪ್ರಚಕ್ರುಃ ಕುರುಪಾಂಡವಾಃ ।
ಘೋರೇ ನಿಶಾಮುಖೇ ರೌದ್ರೇ ವರ್ತಮಾನೇ ಸುದಾರುಣೇ ॥೭೮॥

ಘೋರವೂ, ಭಯಂಕರವೂ ಆದ ನಿಶಾಮುಖ (ರಾತ್ರಿ) ಉಂಟಾಗುತ್ತಿರಲು ಕುರು- ಪಾಂಡವರಿಬ್ಬರೂ ಸೈನ್ಯದ ಅವಹಾರವನ್ನು ಮಾಡಿದರು.

ಅವಹಾರಂ ತತಃ ಕೃತ್ವಾ ಸಹಿತಾಃ ಕುರುಪಾಂಡವಾಃ ।
ನ್ಯವಿಶಂತ ಯಥಾಕಾಲಂ ಗತ್ವಾ ಸ್ವಶಿಬಿರಂ ತದಾ ॥೭೯॥

ಕುರು-ಪಾಂಡವರು ಜೊತೆಯಲ್ಲಿಯೇ ಸೈನ್ಯಾವಹಾರವನ್ನು ಮಾಡಿ ಯೋಗ್ಯವಾದ ಕಾಲದಲ್ಲಿ ತಮ್ಮ ಶಿಬಿರವನ್ನು ಪ್ರವೇಶಿಸಿ ವಿಶ್ರಾಂತಿಯನ್ನು ಪಡೆದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ದ್ವಿನವತಿತಮೋಽಧ್ಯಾಯಃ ॥
॥ ಭೀಷ್ಮವಧಪರ್ವಣಿ ದ್ವಿಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ತೊಂಬತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ಮೂರನೆಯ ಅಧ್ಯಾಯ

ಕರ್ಣಾದಿಗಳ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಿ
ಭೀಷ್ಮರನ್ನು ಕುರಿತು ದುರ್ಯೋಧನನ ಉಗ್ರವಚನಗಳು.

ಸಂಜಯಃ

ತತೋ ದುರ್ಯೋಧನೋ ರಾಜಾ ಶಕುನಿಶ್ಚಾಪಿ ಸೌಬಲಃ ।
ದುಃಶಾಸನಶ್ಚ ಪುತ್ರಸ್ತೇ ಸೂತಪುತ್ರಶ್ಚ ದುರ್ಜಯಃ ॥೧॥

ಸಮಾಗಮ್ಯ ಮಹಾರಾಜ ಮಂತ್ರಂ ಚಕ್ರುರ್ವಿಶಾಂಪತೇ ।
ಕಥಂ ಪಾಂಡುಸುತಾ ಯುದ್ಧೇ ಜೇತವ್ಯಾಃ ಸಗಣಾ ಇತಿ ॥೨॥

ಸಂಜಯ– ಎಲೈ ಮಹಾರಾಜನೇ, ಅನಂತರ ರಾಜನಾದ ದುರ್ಯೋಧನನೂ, ಸೌಬಲನಾದ ಶಕುನಿಯೂ, ನಿನ್ನ ಪುತ್ರನಾದ ದುಶ್ಶಾಸನನೂ, ದುರ್ಜಯನಾದ ಕರ್ಣನೂ ಒಟ್ಟಿಗೆ ಸೇರಿ, ಪರಿವಾರಸಹಿತರಾದ ಪಾಂಡವರನ್ನು ಯುದ್ಧದಲ್ಲಿ ಹೇಗೆ ಗೆಲ್ಲುವುದು ಎಂದು ಮಂತ್ರಾಲೋಚನೆಯನ್ನು ಮಾಡಿದರು.

ತತೋ ದುರ್ಯೋಧನೋ ರಾಜಾ ಸರ್ವಾಂಸ್ತಾನಾಹ ಮಂತ್ರಿಣಃ ।
ಸೂತಪುತ್ರಂ ಸಮಾಭಾಷ್ಯ ಸೌಬಲಂ ಚ ಮಹಾಬಲಮ್ ॥೩॥

ಆಗ ರಾಜನಾದ ದುರ್ಯೋಧನನು ಸೂತಪುತ್ರನಾದ ಕರ್ಣನನ್ನು ಮತ್ತು ಮಹಾಬಲನಾದ ಶಕುನಿಯನ್ನು ಕುರಿತು, ಮಂತ್ರಾಲೋಚನೆಗೆ ಸೇರಿದ ಎಲ್ಲರೂ ಕೇಳುವಂತೆ ಹೇಳಿದನು.

ದ್ರೋಣೋ ಭೀಷ್ಮಃ ಕೃಪಃ ಶಲ್ಯಃ ಸೌಮದತ್ತಿಶ್ಚ ಸಂಯುಗೇ ।
ನ ಪಾರ್ಥಾನ್ ಪ್ರತಿಬಾಧಂತೇ ನ ಜಾನೇ ತತ್ರ ಕಾರಣಮ್ ॥೪॥

ದ್ರೋಣರು, ಭೀಷ್ಮರು, ಕೃಪರು, ಶಲ್ಯ ಮತ್ತು ಭೂರಿಶ್ರವರು ಯುದ್ಧದಲ್ಲಿ ಪಾಂಡವರನ್ನು ಬಾಧಿಸುತ್ತಿಲ್ಲ. ಇದಕ್ಕೆ ನನಗೆ ಕಾರಣವು ತಿಳಿಯುತ್ತಿಲ್ಲ.

ಅವಧ್ಯಮಾನಾಸ್ತೇ ಚಾಪಿ ಕ್ಷಪಯಂತಿ ಬಲಂ ಮಮ ।
ಸೋಽಸ್ಮಿ ಕ್ಷೀಣಬಲಃ ಕರ್ಣ ಕ್ಷೀಣಶಸ್ತ್ರಶ್ಚ ಸಂಯುಗೇ ॥೫॥

ಪಾಂಡವರು ಅವಧ್ಯರಾಗಿ ನನ್ನ ಸೈನ್ಯವನ್ನು ವಿನಾಶಗೊಳಿಸುತ್ತಿದ್ದಾರೆ. ಆದ್ದರಿಂದ ಎಲೈ ಕರ್ಣನೇ, ನಾನು ಯುದ್ಧದಲ್ಲಿ ಸೈನ್ಯವನ್ನು ಮತ್ತು ಶಸ್ತ್ರಗಳನ್ನು ಕಳೆದುಕೊಂಡಿದ್ದೇನೆ.

ದ್ರೋಣಸ್ಯ ಪ್ರಮುಖೇ ವೀರಾ ಹತಾಸ್ತೇ ಭ್ರಾತರೋ ಮಮ ।
ಭೀಮಸೇನೇನ ರಾಧೇಯ ಮಮ ಚೈವ ಚ ಪಶ್ಯತಃ ॥೬॥

ಎಲೈ ಕರ್ಣನೇ, ದ್ರೋಣರ ಎದುರಿನಲ್ಲಿ ನಾನು ನೋಡುತ್ತಿದ್ದಂತೆಯೇ ವೀರರಾದ ನನ್ನ ತಮ್ಮಂದಿರು ಭೀಮಸೇನನಿಂದ ಹತರಾದರು.

ನಿಕೃತಃ ಪಾಂಡವೈಃ ಶೂರೈರವಧ್ಯೈರ್ದೈವತೈರಪಿ ।
ಸೋಽಹಂ ಸಂಶಯಮಾಪನ್ನಃ ಪ್ರಕರಿಷ್ಯೇ ಕಥಂ ರಣಮ್ ॥೭॥

ಹೀಗೆ ದೇವತೆಗಳಿಂದಲೂ ಅವಧ್ಯರಾದ ಪಾಂಡವರಿಂದ ಅವಮಾನವನ್ನು ಹೊಂದಿದ ನಾನು ಪ್ರಾಣಸಂಶಯವನ್ನು ಹೊಂದಿ ಹೇಗೆ ಯುದ್ಧವನ್ನು ಮಾಡಲಿ? (ಎಂದು ಹೇಳಿದನು).

ತಮಬ್ರವೀನ್ಮಹಾರಾಜ ಸೂತಪುತ್ರೋ ನರಾಧಿಪಮ್ ।
ಮಾ ಶುಚೋ ಭರತಶ್ರೇಷ್ಠ ಪ್ರಕರಿಷ್ಯೇ ಪ್ರಿಯಂ ತವ ॥೮॥

ಎಲೈ ಮಹಾರಾಜನೇ, ಆ ರಾಜನನ್ನು ಕುರಿತು ಸೂತಪುತ್ರನಾದ ಕರ್ಣನು ಭರತಶ್ರೇಷ್ಠನೇ, ಶೋಕಪಡಬೇಡ. ನಾನು ನಿನಗೆ ಪ್ರಿಯವನ್ನು ಮಾಡುವೆನು.

ಭೀಷ್ಮಃ ಶಾಂತನವಸ್ತೂರ್ಣಮಪಯಾತು ಮಹಾರಣಾತ್ ।
ನಿವೃತ್ತೇ ಯುಧಿ ಗಾಂಗೇಯೇ ನ್ಯಸ್ತಶಸ್ತ್ರೇ ಚ ಭಾರತ ॥೯॥

ಅಹಂ ಪಾರ್ಥಾನ್ ಹನಿಷ್ಯಾಮಿ ಸಹಿತಾನ್ ಸರ್ವಸೋಮಕೈಃ ।
ಪಶ್ಯತೋ ಯುಧಿ ಭೀಷ್ಮಸ್ಯ ಶಪೇ ಸತ್ಯೇನ ತೇ ನೃಪ ॥೧೦॥

ಶಂತನು ಪುತ್ರರಾದ ಭೀಷ್ಮರು ಮಹಾಯುದ್ಧದಿಂದ ಶೀಘ್ರವಾಗಿ ಹಿಂದಕ್ಕೆ ಸರಿಯಲಿ. ಎಲೈ ಭಾರತನೇ, ಗಂಗಾಪುತ್ರರು ಶಸ್ತ್ರಸಂನ್ಯಾಸವನ್ನು ಮಾಡಿ ಯುದ್ಧದಿಂದ ನಿವೃತ್ತರಾದ ಮೇಲೆ ಎಲೈ ರಾಜನೇ, ನಾನು ಭೀಷ್ಮರ ಕಣ್ಣೆದುರಿಗೇ ಸೋಮಕರಿಂದ ಸಹಿತರಾದ ಪಾಂಡವರನ್ನು ಕೊಲ್ಲುವೆನು. ಇದನ್ನು ನಿನಗೆ ಶಪಥ ಮಾಡಿ ಹೇಳುತ್ತಿದ್ದೇನೆ.

ಪಾಂಡವೇಷು ದಯಾಂ ರಾಜನ್ ಸದಾ ಭೀಷ್ಮಃ ಕರೋತಿ ವೈ ।
ಅಶಕ್ತಶ್ಚ ರಣೇ ಭೀಷ್ಮೋ ಜೇತುಮೇತಾನ್ ಮಹಾರಥಾನ್ ॥೧೧॥

ಎಲೈ ರಾಜನೇ, ಭೀಷ್ಮರು ಪಾಂಡವರಲ್ಲಿ ಯಾವಾಗಲೂ ದಯೆಯನ್ನು ತೋರಿಸುತ್ತಾರೆ. ಮತ್ತು ಮಹಾರಥರಾದ ಅವರನ್ನು ಯುದ್ಧದಲ್ಲಿ ಗೆಲ್ಲಲು ಭೀಷ್ಮರಿಗೆ ಶಕ್ತಿಯೂ ಇಲ್ಲ.

ಅಭಿಮಾನೀ ರಣೇ ಭೀಷ್ಮೋ ನಿತ್ಯಂ ಚಾಪಿ ರಣಪ್ರಿಯಃ ।
ಸ ಕಥಂ ಪಾಂಡವಾನ್ ಯುದ್ಧೇ ಜೇಷ್ಯತೇ ತಾತ ಸಂಗತಾನ್ ॥೧೧॥

ಭೀಷ್ಮರು ಯಾವಾಗಲೂ ಯುದ್ಧಪ್ರಿಯರಾದರೂ ಬಹಳ ಅಹಂಕಾರವುಳ್ಳವರು. ಎಲೈ ಪ್ರೀತಿಪಾತ್ರನೇ, ಅವರು ಒಟ್ಟುಗೂಡಿದ ಪಾಂಡವರನ್ನು ಹೇಗೆ ಗೆಲ್ಲುವರು?

ಸ ತ್ವಂ ಶೀಘ್ರಮಿತೋ ಗತ್ವಾ ಭೀಷ್ಮಸ್ಯ ಶಿಬಿರಂ ಪ್ರತಿ ।
ಅನುಮಾನ್ಯ ರಣೇ ಭೀಷ್ಮಂ ಶಸ್ತ್ರಂ ನ್ಯಾಸಯ ಭಾರತ ॥೧೨॥

ಎಲೈ ಭಾರತನೇ, ಆದ್ದರಿಂದ ನೀನು ಶೀಘ್ರವಾಗಿ ಇಲ್ಲಿಂದ ಭೀಷ್ಮರ ಶಿಬಿರಕ್ಕೆ ಹೋಗಿ ಅವರನ್ನು ಒಪ್ಪಿಸಿ ಯುದ್ಧದಲ್ಲಿ ಅವರು ಶಸ್ತ್ರವನ್ನು ಕೆಳಗಿಡುವಂತೆ ಮಾಡು.

ನ್ಯಸ್ತಶಸ್ತ್ರೇ ತತೋ ಭೀಷ್ಮೇ ನಿಹತಾನ್ ಪಶ್ಯ ಪಾಂಡವಾನ್ ।
ಮಯೈಕೇನ ರಣೇ ರಾಜನ್ ಸಸುಹೃದ್ಗಣಬಾಂಧವಾನ್ ॥೧೩॥

ಎಲೈ ರಾಜನೇ, ಭೀಷ್ಮರು ಶಸ್ತ್ರಸಂನ್ಯಾಸವನ್ನು ಮಾಡಿದ ಮೇಲೆ ನಾನೊಬ್ಬನೇ ಸುಹೃದರಿಂದಲೂ ಮತ್ತು ಬಾಂಧವರಿಂದಲೂ ಸಹಿತರಾದ ಪಾಂಡವರನ್ನು ಕೊಲ್ಲುವುದನ್ನು ನೋಡು (ಎಂದು ಹೇಳಿದನು).

ಏವಮುಕ್ತಸ್ತು ಕರ್ಣೇನ ಪುತ್ರೋ ದುರ್ಯೋಧನಸ್ತವ ।
ಅಬ್ರವೀದ್ ಭ್ರಾತರಂ ತತ್ರ ದುಃಶಾಸನಮಿದಂ ವಚಃ ॥೧೪॥

ಅನುಯಾತ್ರಂ ಯಥಾ ಸಜ್ಜಂ ಸರ್ವಂ ಭವತಿ ಸರ್ವತಃ ।
ದುಃಶಾಸನ ತಥಾ ಕ್ಷಿಪ್ರಂ ಸರ್ವಮೇವೋಪಪಾದಯ ॥೧೫॥

ಕರ್ಣನಿಂದ ಹೀಗೆ ಹೇಳಲ್ಪಟ್ಟ ನಿನ್ನ ಪುತ್ರನಾದ ದುರ್ಯೋಧನನು ತಮ್ಮನಾದ ದುಶ್ಶಾಸನನನ್ನು ಕುರಿತು, ದುಶ್ಶಾಸನನೇ ಪ್ರಯಾಣಕ್ಕೆ ಪರಿವಾರವು ಸಿದ್ಧವಾಗುವಂತೆ ನೀನು ಎಲ್ಲಾ ವ್ಯವಸ್ಥೆಯನ್ನೂ ಶೀಘ್ರವಾಗಿ ಮಾಡು ಎಂದು ಹೇಳಿದನು.

ಏವಮುಕ್ತ್ವಾ ತತೋ ರಾಜನ್ ಕರ್ಣಮಾಹ ಜನೇಶ್ವರಃ ।
ಅನುಮಾನ್ಯ ರಣೇ ಭೀಷ್ಮಮಿತೋಽಹಂ ದ್ವಿಪದಾಂ ವರಮ್ ॥೧೬॥

ಆಗಮಿಷ್ಯೇ ತತಃ ಕ್ಷಿಪ್ರಂ ತ್ವತ್ಸಕಾಶಮರಿಂದಮ ।
ತತಸ್ತ್ವಂ ಪುರುಷವ್ಯಾಘ್ರ ಪ್ರಕರಿಷ್ಯಸಿ ಸಂಯುಗಮ್ ॥೧೭॥

ಎಲೈ ರಾಜನೇ, ರಾಜನಾದ ಅವನು ದುಶ್ಶಾಸನನಿಗೆ ಹೀಗೆ ಹೇಳಿ ಕರ್ಣನನ್ನು ಕುರಿತು ನಾನು ಇಲ್ಲಿಂದ ಹೊರಟು ಪುರುಷಶ್ರೇಷ್ಠರಾದ ಭೀಷ್ಮರನ್ನು ಒಪ್ಪಿಸಿ ಶೀಘ್ರವಾಗಿ ನಿನ್ನ ಸಮೀಪಕ್ಕೆ ಹಿಂದಿರುಗುವೆನು. ಎಲೈ ಅರಿಂದಮನೇ, ಪುರುಷವ್ಯಾಘ್ರನೇ, ಅನಂತರ ನೀನು ಯುದ್ಧವನ್ನು ಮಾಡುವಿ ಎಂದು ಹೇಳಿದನು.

ಸಂಜಯಃ

ನಿಷ್ಪಪಾತ ತತಸ್ತೂರ್ಣಂ ಪುತ್ರಸ್ತವ ಏಶಾಂಪತೇ ।
ಸಹಿತೋ ಭ್ರಾತೃಭಿಃ ಸರ್ವೈರ್ದೇವೈರಿವ ಶತಕ್ರತುಃ ॥೧೮॥

ಸಂಜಯ– ಎಲೈ ರಾಜನೇ, ಅನಂತರ ನಿನ್ನ ಪುತ್ರನು ಎಲ್ಲ ಸಹೋದರರಿಂದ ಸಹಿತನಾಗಿ, ಎಲ್ಲ ದೇವತೆಗಳಿಂದ ಸಹಿತನಾದ ಇಂದ್ರನಂತೆ ಅಲ್ಲಿಂದ ಶೀಘ್ರವಾಗಿ ಹೊರಟನು.

ತತಸ್ತಂ ನೃಪಶಾರ್ದೂಲಂ ಶಾರ್ದೂಲಸಮವಿಕ್ರಮಮ್ ।
ಆರೋಹಯದ್ ಹಯಂ ತೂರ್ಣಂ ಭ್ರಾತಾ ದುಃಶಾಸನಸ್ತದಾ ॥೧೯॥

ಅನಂತರ ದುಶ್ಶಾಸನನು ಶಾರ್ದೂಲವಿಕ್ರಮವನ್ನು ಹೊಂದಿದ, ನೃಪಶ್ರೇಷ್ಠನಾದ ತನ್ನ ಅಣ್ಣನನ್ನು ಶೀಘ್ರವಾಗಿ ಅಶ್ವವನ್ನು ಏರಿಸಿದನು.

ಅಂಗದೀ ಬದ್ಧಮುಕುಟೋ ಹಸ್ತಾಭರಣವಾನ್ ನೃಪಃ ।
ಧಾರ್ತರಾಷ್ಟ್ರೋ ಮಹಾರಾಜ ವಿಬಭೌ ಸ ಮಹೇಂದ್ರವತ್ ॥೨೦॥

ಎಲೈ ಮಹಾರಾಜನೇ, ಅಂಗದಗಳನ್ನೂ, ಕಿರೀಟವನ್ನೂ, ಹಸ್ತಾಭರಣಗಳನ್ನೂ ಧರಿಸಿದ ದುರ್ಯೋಧನನು ಮಹೇಂದ್ರನಂತೆ ಶೋಭಿಸಿದನು.

ಭಾಂಡೀಪುಷ್ಪನಿಕಾಶೇನ ತಪನೀಯನಿಭೇನ ಚ ।
ಅನುಲಿಪ್ತಃ ಪರಾರ್ಧ್ಯೇನ ಚಂದನೇನ ಸುಗಂಧಿನಾ ॥೨೧॥

ಅರಜೋಂಬರಸಂವೀತಃ ಸಿಂಹಖೇಲಗತಿರ್ನೃಪಃ ।
ಶುಶುಭೇ ವಿಮಲಾರ್ಚಿಷ್ಮಾನ್ ಶರದೀವ ದಿವಾಕರಃ ॥೨೨॥

ಸುವರ್ಣದ ಕಾಂತಿಯನ್ನು ಹೊಂದಿದ್ದ, ಕುಂಕುಮ-ಕೇಸರ ಪುಷ್ಪಗಳ ಬಣ್ಣದ, ಸುಗಂಧಯುಕ್ತವಾದ ಬೆಲೆಬಾಳುವ ಚಂದನದಿಂದ ಲಿಪ್ತನಾಗಿ, ಸ್ವಚ್ಛವಾದ ವಸ್ತ್ರಗಳನ್ನು ಧರಿಸಿ ಸಿಂಹದ ನಡಿಗೆಯುಳ್ಳ ರಾಜನು ಶರತ್ಕಾಲದಲ್ಲಿ ಪರಿಶುದ್ಧವಾದ ಕಿರಣಗಳನ್ನು ಹೊಂದಿದ ಸೂರ್ಯನಂತೆ ಕಂಗೊಳಿಸಿದನು.

ತಂ ಪ್ರಯಾಂತಂ ನರವ್ಯಾಘ್ರಂ ಭೀಷ್ಮಸ್ಯ ಶಿಬಿರಂ ಪ್ರತಿ ।
ಅನುಜಗ್ಮುರ್ಮಹೇಷ್ವಾಸಾಃ ಸರ್ವಲೋಕಸ್ಯ ಧನ್ವಿನಃ ।
ಭ್ರಾತರಶ್ಚ ಮಹೇಷ್ವಾಸಾಸ್ತ್ರಿದಶಾ ಇವ ವಾಸವಮ್ ॥೨೩॥

ಭೀಷ್ಮರ ಶಿಬಿರಕ್ಕೆ ಹೊರಟ ಆ ನರವ್ಯಾಘ್ರನನ್ನು ಮಹಾಧನುರ್ಧಾರಿಗಳಾದ ಸರ್ವಲೋಕವೀರರೂ ಮತ್ತು ಅವನ ತಮ್ಮಂದಿರೂ ದೇವತೆಗಳು ಇಂದ್ರನನ್ನು ಹಿಂಬಾಲಿಸಿದಂತೆ ಹಿಂಬಾಲಿಸಿದರು.

ಹಯಾನನ್ಯೇ ಸಮಾರುಹ್ಯ ಗಜಾನನ್ಯೇ ಚ ಭಾರತ ।
ರಥೈರನ್ಯೇ ನರಶ್ರೇಷ್ಠಾಃ ಪರಿವವ್ರುಃ ಸಮಂತತಃ ॥೨೪॥

ಎಲೈ ಭಾರತನೇ, ಕೆಲವರು ಅಶ್ವಗಳನ್ನು ಏರಿ, ಇನ್ನು ಕೆಲವರು ಗಜಗಳನ್ನು ಏರಿ, ಇನ್ನು ಕೆಲವು ನರಶ್ರೇಷ್ಠರು ರಥಗಳನ್ನು ಏರಿ ದುರ್ಯೋಧನನನ್ನು ಸುತ್ತುವರಿದರು.

ಆತ್ತಶಸ್ತ್ರಾಶ್ಚ ಸುಹೃದೋ ರಕ್ಷಣಾರ್ಥಂ ಮಹೀಪತೇಃ ।
ಪ್ರಾದುರ್ಬಭೂವುಃ ಸಹಿತಾಃ ಶಕ್ರಸ್ಯೇವಾಮರಾ ದಿವಿ ॥೨೫॥

ರಾಜನ ರಕ್ಷಣೆಗಾಗಿ ಕೈಯಲ್ಲಿ ಶಸ್ತ್ರಗಳನ್ನು ಹಿಡಿದ ಯೋಧರು ಸ್ವರ್ಗದಲ್ಲಿ ದೇವತೆಗಳು ಇಂದ್ರನನ್ನು ಸುತ್ತುವರಿದಂತೆ ಒಟ್ಟಾಗಿ ಕಾಣಿಸಿಕೊಂಡರು.

ಸಂಪೂಜ್ಯಮಾನಃ ಕುರುಭಿಃ ಕೌರವಾಣಾಂ ಮಹಾರಥಃ ।
ಪ್ರಯಯೌ ಸದನಂ ರಾಜನ್ ಗಾಂಗೇಯಸ್ಯ ಯಶಸ್ವಿನಃ ।
ಅನ್ವೀಯಮಾನಃ ಸಹಿತೈಃ ಸೋದರ್ಯೈಃ ಸರ್ವತೋ ನೃಪಃ ॥೨೬॥

ಎಲೈ ರಾಜನೇ, ಕೌರವರ ಮಹಾರಥನಾದ ಅವನು ಕುರುಗಳಿಂದ ಗೌರವಿಸಲ್ಪಟ್ಟು, ತನ್ನ ಎಲ್ಲ ಸಹೋದರರಿಂದಲೂ ಹಿಂಬಾಲಿಸಲ್ಪಟ್ಟು ಕೀರ್ತಿವಂತರಾದ ಭೀಷ್ಮರ ಶಿಬಿರಕ್ಕೆ ಹೊರಟನು.

ದಕ್ಷಿಣಂ ದಕ್ಷಿಣಾಕಾರಂ ಸಂಭೃತ್ಯ ಸ್ವಭುಜಂ ತದಾ ।
ಹಸ್ತಿಹಸ್ತೋಪಮಂ ಶೈಕ್ಷಂ ಸರ್ವಶತ್ರುನಿಬರ್ಹಣಮ್ ॥೨೭॥

ಪ್ರಗೃಹ್ಯನ್ನಂಜಲೀನ್ ನೃಣಾಮುದ್ಯತಾನ್ ಸರ್ವತೋ ದಿತಮ್ ।
ಶುಶ್ರಾವ ಮಧುರಾ ವಾಚೋ ನಾನಾದೇಶನಿವಾಸಿನಾಮ್ ॥೨೮॥

ದಕ್ಷಿಣೆಯನ್ನು ಕೊಡುವ, ಆನೆಯ ಸೊಂಡಿಲಿನಂತಿದ್ದ, ಶತ್ರುವಿನಾಶಕವಾದ, ವ್ಯಾಯಾಮದಿಂದ ಪೂರ್ಣವಾದ, ತನ್ನ ಭುಜವನ್ನು ಮೇಲಕ್ಕೆತ್ತಿ ಎಲ್ಲ ದಿಕ್ಕುಗಳಲ್ಲಿಯೂ ಎದ್ದುನಿಂತ ಮನುಷ್ಯರ ನಮಸ್ಕಾರರೂಪವಾದ ಅಂಜಲಿಗಳನ್ನು ಸ್ವೀಕರಿಸುತ್ತಾ ನಾನಾ ದೇಶದಲ್ಲಿ ವಾಸಿಸುವ ಜನರು ಹೇಳುವ ತನ್ನ ಪ್ರಶಂಸಾರೂಪವಾದ ಮಧುರವಾದ ಮಾತುಗಳನ್ನು ಕೇಳಿದನು.

ಸಂಸ್ತೂಯಮಾನಃ ಸೂತೈಶ್ಚ ಮಾಗಧೈಶ್ಚ ಮಹಾಯತಾಃ ।
ಪೂಜಯಾನಶ್ಚ ತಾನ್ ಸರ್ವಾನ್ ಸರ್ವಲೋಕೇಶ್ವರೇಶ್ವರಃ ॥೨೯॥

ಮಹಾಕೀರ್ತಿವಂತನೂ, ಸರ್ವಲೋಕೇಶ್ವರನೂ ಆದ ಅವನು ಸೂತ-ಮಾಗಧರಿಂದ ಸೋತ್ರಮಾಡಲ್ಪಟ್ಟು, ಅವರೆಲ್ಲರನ್ನೂ ಸನ್ಮಾನಿಸುತ್ತಾ ಹೊರಟನು.

ಪ್ರದೀಪೈಃ ಕಾಂಚನೈಸ್ತತ್ರ ಗಂಧತೈಲಾವಸೇಚನೈಃ ।
ಪರಿವವ್ರುರ್ಮಹಾತ್ಮಾನಂ ಪ್ರಜ್ವಲದ್ಭಿಃ ಸಮಂತತಃ ॥೩೦॥

ಅವನ ಅನುಚರರು ಸುಂಗಧಯುಕ್ತವಾದ ತೈಲಗಳಿಂದ ಪೂರಿತವಾದ, ಜ್ವಲಿಸುವ ಸುವರ್ಣಮಯವಾದ ಪ್ರದೀಪಗಳನ್ನು ಹಿಡಿದು ಆ ಮಹಾತ್ಮನನ್ನು ಎಲ್ಲ ಕಡೆಗಳಿಂದಲೂ ಸುತ್ತುವರಿದರು.

ಸ ತೈಃ ಪರಿವೃತೋ ರಾಜಾ ಪ್ರದೀಪೈಃ ಕಾಂಚನೈಃ ಶುಭೈಃ ।
ಶುಶುಭೇ ಚಂದ್ರಮಾ ಯುಕ್ತೋ ದೀಪ್ತೈರಿವ ಮಹಾಗ್ರಹೈಃ ॥೩೧॥

ಸುವರ್ಣಮಯವಾದ ಬುಧ್ನದೀಪಗಳಿಂದ ಸುತ್ತುವರಿಯಲ್ಪಟ್ಟ ಆ ರಾಜನು ವ್ರತಾಚರಿಸುವ ಮಹಾಗ್ರಹಗಳಿಂದ ಕೂಡಿದ ಸಂಧ್ಯಾಸಂಜೆ ತೋರುವಂತೆ.

ಕಂಬುಗೋಷ್ಪೀಪಾಪಕ್ಷ ದೇವ್ಯಮುಖ್ಯಾರಾಜಾನಃ ।
ಶ್ರೋತ್ರಾಪ್ತಯಂತಃ ಪಶ್ಯೇಯಂ ಮನಂ ಸಂಗತೋ ದಿವಿಯಾ ॥೩.೨॥

ಕಂಬುಗೋಷ್ಪಾಪಗಳನ್ನು ಧರಿಸಿ, ಶ್ರೇಯಸ್ಸಿಲ್ಲದ ದೇವ್ಯಮುಖ್ಯರಾಗಿರುವ ಕೂಡಿದ ಅವರು ಚರರು ಎಲ್ಲ ದಿಕ್ಕುಗಳಲ್ಲಿಯೂ ಜನರನ್ನು ನಿರಾಸಕ್ತರಾಗಿ ಹಿಂದ ಸುಖದರು

ಸಂಜ್ಞಾಪ್ಯ ತು ತತೋ ರಾಜಾ ಧರ್ಮಪ್ಸ ಸದನಂ ಶುಭಮ್ ।
ಅವತೀರ್ಯ ಶುಭಾಚ್ಚಾಪಿ ಧರ್ಮಂ ತ್ರಾಸ್ಯ ಜಗಾಮ ಹ ॥೩.೩॥

ಅಥವಾಪ್ಯ ತತೋ ಧರ್ಮಂ ನಿಷ್ಟಾಸ್ಯ ಪರಮಾಸನೇ ।
ಪಾಂಡುನೇ ಸುವರ್ಣೋಧಪ್ತೇ ಸ್ವಯಂ ಸಾಧಾರಣಾಸನೇ ।
ಅಮಾಯ ತ್ರಾಂಜಲಿರ್ಧರಾತ್ಮಾ ವಾಕ್ಯಮೇತದಾಸ್ಯ ಪೂರಯತಿ ॥೩.೪॥

ಅನಂತರ ರಾಜನು ಧರ್ಮನ ಶುಭವಾದ ಸಿಂಹಸನ್ನು ಸುಖ. ಅದರಿಂದ ಇಳಿದು ಧರ್ಮನ ಸುಮಿಪಕ್ಕೆ ಬಂದು, ಧರ್ಮರಿಗೆ ನಮಸ್ಕರಿಸಿದನ್ನು ಮಾಡಿ, ಸುವರ್ಣಮಯವಾದ ಒಳ್ಳೆಯ ಪೀಠಗಳಿಂದ ಕೂಡಿದ ಸುವರ್ಣಮಯವಾದ ಆಸನದಲ್ಲಿ ಬಂದು ಧರ್ಮರಿಗೆ ಕೈಗಳನ್ನು ಮುಗಿದು ರಾಷ್ಟ್ರಂಜಲಿ, ಅಭ್ಯರ್ಥಿಸಿದವನಾಗಿ ಆತನಿಗೆ ಹಿಂದು ಮಹಾಸಾಧಿಸಿದನು.

ತ್ವಾಂ ವಯಂ ಸಮುಪಾಸ್ಯಾಸ್ಮ ಸಂಯಮೇ ಪಿತೃಸೂದನ ।
ಉಪಪನ್ನಾಸು ದಾರೇಷು ಶೋಷಂ ಶೇಂದ್ರಾಸು ಸಂಯಮಾ ॥೩.೫॥

ಕಿಮು ಪಾಂಡವಾಣಾಂ ನೀರಾಣಾಂ ಸಂಪ್ರಸ್ಥಾನಾಂಧಾಣಾಂ ।
ಪಾಪ್ಯಾಯಾಸಾ ಗಾಂಗೇಯ ಭ್ರಾತೃಣಾಂ ಕರಾಂ ಮಯಿ ಕ್ಷತ್ರಿಯ ।
ಪಿಂ ಪಾಂಡವಾಣಾಂ ನೀರಾಣಾಂ ಮಹೇಂದ್ರ ಇವ ದಾನವಾಣಾ ॥೩.೬॥

ಎಲ್ಲ ಪಿತೃಸೂದನರೇ, ನಿಮ್ಮನ್ನು ಆಶ್ರಯಿಸಿ ಯುದ್ಧದಲ್ಲಿ ಪಾಪ ಇಂದ್ರನಿಂದ ಕೂಡಿದ ಸುಯಶಸ್ಸಿನಲ್ಲೂ ಗೆಲ್ಲಲು ಆಸಕ್ತರಾಗಿದ್ದೇವೆ. ಸಂಪ್ರಸ್ಥಾನಿಂದಲೂ, ಪಾಪ್ಯ

ಎಲೈ ರಾಜನೇ, ಕೌರವರ ಮಹಾರಥನಾದ ಅವನು ಕುರುಗಳಿಂದ ಗೌರವಿಸಲ್ಪಟ್ಟು, ತನ್ನ ಎಲ್ಲ ಸಹೋದರರಿಂದಲೂ ಹಿಂಬಾಲಿಸಲ್ಪಟ್ಟು ಕೀರ್ತಿವಂತರಾದ ಭೀಷ್ಮರ ಶಿಬಿರಕ್ಕೆ ಹೊರಟನು.

ದಕ್ಷಿಣಂ ದಕ್ಷಿಣಾಕಾರಂ ಸಂಭೃತ್ಯ ಸ್ವಭುಜಂ ತದಾ ।
ಹಸ್ತಿಹಸ್ತೋಪಮಂ ಶ್ಲಕ್ಷ್ಣಂ ಸರ್ವಶತ್ರುನಿಬರ್ಹಣಮ್ ॥೨೭॥

ಪ್ರಗೃಹ್ಣನ್ನಂಜಲೀನ್ ನ್ಯಾಮುದ್ಯತಾನ್ ಸರ್ವತೋ ದಿಶಮ್ ।
ಶುಶ್ರಾವ ಮಧುರಾ ವಾಚೋ ನಾನಾದೇಶನಿವಾಸಿನಾಮ್ ॥೨೮॥

ದಕ್ಷಿಣೆಯನ್ನು ಕೊಡುವ, ಆನೆಯ ಸೊಂಡಿಲಿನಂತಿದ್ದ, ಶತ್ರುವಿನಾಶಕವಾದ, ವ್ಯಾಯಾಮದಿಂದ ಪೂರ್ಣವಾದ, ತನ್ನ ಭುಜವನ್ನು ಮೇಲಕ್ಕೆತ್ತಿ ಎಲ್ಲ ದಿಕ್ಕುಗಳಲ್ಲಿಯೂ ಎದ್ದುನಿಂತ ಮನುಷ್ಯರ ನಮಸ್ಕಾರರೂಪವಾದ ಅಂಜಲಿಗಳನ್ನು ಸ್ವೀಕರಿಸುತ್ತಾ ನಾನಾ ದೇಶದಲ್ಲಿ ವಾಸಿಸುವ ಜನರು ಹೇಳುವ ತನ್ನ ಪ್ರಶಂಸಾರೂಪವಾದ ಮಧುರವಾದ ಮಾತುಗಳನ್ನು ಕೇಳಿದನು.

ಸಂಸ್ತೂಯಮಾನಃ ಸೂತೈಶ್ಚ ಮಾಗಧೈಶ್ಚ ಮಹಾಯಶಾಃ ।
ಪೂಜಯಾನಶ್ಚ ತಾನ್ ಸರ್ವಾನ್ ಸರ್ವಲೋಕೇಶ್ವರೇಶ್ವರಃ ॥೨೯॥

ಮಹಾಕೀರ್ತಿವಂತನೂ, ಸರ್ವಲೋಕೇಶ್ವರನೂ ಆದ ಅವನು ಸೂತ-ಮಾಗಧರಿಂದ ಸ್ತೋತ್ರಮಾಡಲ್ಪಟ್ಟು, ಅವರೆಲ್ಲರನ್ನೂ ಸನ್ಮಾನಿಸುತ್ತಾ ಹೊರಟನು.

ಪ್ರದೀಪೈಃ ಕಾಂಚನೈಸ್ತತ್ರ ಗಂಧತೈಲಾವಸೇಚನೈಃ ।
ಪರಿವವ್ರುರ್ಮಹಾತ್ಮಾನಂ ಪ್ರಜ್ವಲದ್ಭಿಃ ಸಮಂತತಃ ॥೩೦॥

ಅವನ ಅನುಚರರು ಸುಗಂಧಯುಕ್ತವಾದ ತೈಲಗಳಿಂದ ಪೂರಿತವಾದ, ಜ್ವಲಿಸುವ ಸುವರ್ಣಮಯವಾದ ಪ್ರದೀಪಗಳನ್ನು ಹಿಡಿದು ಆ ಮಹಾತ್ಮನನ್ನು ಎಲ್ಲ ಕಡೆಗಳಿಂದಲೂ ಸುತ್ತುವರಿದರು.

ಸ ತೈಃ ಪರಿವೃತೋ ರಾಜಾ ಪ್ರದೀಪೈಃ ಕಾಂಚನೈಃ ಶುಭೈಃ ।
ಶುಶುಭೇ ಚಂದ್ರಮಾ ಯುಕ್ತೋ ದೀಪ್ತೈರಿವ ಮಹಾಗ್ರಹೈಃ ॥೩೧॥

ಸುವರ್ಣಮಯವಾದ ಶುಭಪ್ರದೀಪಗಳಿಂದ ಸುತ್ತುವರಿಯಲ್ಪಟ್ಟ ಆ ರಾಜನು ಪ್ರಕಾಶಿಸುವ ಮಹಾಗ್ರಹಗಳಿಂದ ಕೂಡಿದ ಚಂದ್ರನಂತೆ ಶೋಭಿಸಿದನು.

ಕಂಚುಕೋಷ್ಣೀಷಿಣಸ್ತತ್ರ ವೇತ್ರಧುರ್ಧುರಪಾಣಯಃ ।
ಪ್ರೋತ್ಸಾರಯಂತಃ ಶನಕೈಸ್ತಂ ಜನಂ ಸರ್ವತೋ ದಿಶಮ್ ॥೩೨॥

ಕಂಚುಕೋಷ್ಣೀಷಗಳನ್ನು ಧರಿಸಿ, ಕೈಯಲ್ಲಿ ವೇತ್ರಧುರ್ಧುರಗಳನ್ನು ಹಿಡಿದ ಅವನ ಚರರು ಎಲ್ಲ ದಿಕ್ಕುಗಳಲ್ಲಿಯೂ ಜನರನ್ನು ನಿಧಾನವಾಗಿ ಹಿಂದೆ ಸರಿಸಿದರು.

ಸಂಪ್ರಾಪ್ಯ ತು ತತೋ ರಾಜಾ ಭೀಷ್ಮಸ್ಯ ಸದನಂ ಶುಭಮ್ ।
ಅವತೀರ್ಯ ಹಯಾಚ್ಚಾಪಿ ಭೀಷ್ಮಂ ಪ್ರಾಪ್ಯ ಜನೇಶ್ವರಃ ॥೩೩॥

ಅಭಿವಾದ್ಯ ತತೋ ಭೀಷ್ಮಂ ನಿಷಣ್ಣಃ ಪರಮಾಸನೇ ।
ಕಾಂಚನೇ ಸರ್ವತೋಭದ್ರೇ ಸ್ಪರ್ಧ್ಯಾಸ್ತರಣಸಂವೃತೇ ।
ಉವಾಚ ಪ್ರಾಂಜಲಿರ್ಭೀಷ್ಮಂ ಬಾಷ್ಪಕಂಠೋಽಶ್ರುಲೋಚನಃ ॥೩೪॥

ಅನಂತರ ರಾಜನು ಭೀಷ್ಮರ ಶುಭವಾದ ಶಿಬಿರವನ್ನು ತಲುಪಿ, ಅಶ್ವದಿಂದ ಇಳಿದು ಭೀಷ್ಮರ ಸಮೀಪಕ್ಕೆ ಬಂದು, ಭೀಷ್ಮರಿಗೆ ನಮಸ್ಕಾರವನ್ನು ಮಾಡಿ, ಸರ್ವಮಂಗಳವಾದ ಒಳ್ಳೆಯ ಹಾಸುಗಳಿಂದ ಕೂಡಿದ ಸುವರ್ಣಮಯವಾದ ಆಸನದಲ್ಲಿ ಕುಳಿತು ಭೀಷ್ಮರಿಗೆ ಕೈಗಳನ್ನು ಮುಗಿದು ಬಾಷ್ಪಕಂಠನೂ, ಅಶ್ರುಪೂರಿತನೇತ್ರನೂ ಆಗಿ ಅವರನ್ನು ಕುರಿತು ಮಾತನಾಡಿದನು.

ತ್ವಾಂ ವಯಂ ಸಮುಪಾಶ್ರಿತ್ಯ ಸಂಯುಗೇ ಶತ್ರುಸೂದನ ।
ಉತ್ಸಹೇಮ ರಣೇ ಜೇತುಂ ಸೇಂದ್ರಾನಪಿ ಸುರಾಸುರಾನ್ ॥೩೫॥

ಕಿಮು ಪಾಂಡುಸುತಾನ್ ವೀರಾನ್ ಸಸುಹೃದ್ಗಣಬಾಂಧವಾನ್ ।
ತಸ್ಮಾದರ್ಹಸಿ ಗಾಂಗೇಯ ಕೃಪಾಂ ಕರ್ತುಂ ಮಯಿ ಪ್ರಭೋ ।
ಜಹಿ ಪಾಂಡುಸುತಾನ್ ವೀರಾನ್ ಮಹೇಂದ್ರ ಇವ ದಾನವಾನ್॥೩೬॥

ಎಲೈ ಶತ್ರುಸೂದನರೇ, ನಿಮ್ಮನ್ನು ಆಶ್ರಯಿಸಿ ಯುದ್ಧದಲ್ಲಿ ನಾವು ಇಂದ್ರನಿಂದ ಕೂಡಿದ ಸುರಾಸುರರನ್ನೂ ಗೆಲ್ಲಲು ಉತ್ಸುಕರಾಗಿದ್ದೇವೆ. ಸುಹೃದ್ಗಣದಿಂದಲೂ, ಮತ್ತು

ಬಾಂಧವರಿಂದಲೂ ಸಹಿತರಾದ ವೀರರಾದ ಪಾಂಡವರನ್ನು ಗೆಲ್ಲುವುದು ಯಾವ ದೊಡ್ಡ ವಿಷಯ? ಆದ್ದರಿಂದ ಗಂಗಾಪುತ್ರರೇ, ಪ್ರಭುಗಳೇ, ನನ್ನಲ್ಲಿ ದಯೆಯನ್ನು ಮಾಡಬೇಕು. ಮಹೇಂದ್ರನು ದಾನವರನ್ನು ಸಂಹರಿಸಿದಂತೆ ನೀವು ವೀರರಾದ ಪಾಂಡುಪುತ್ರರನ್ನು ಸಂಹರಿಸಿ.

ಪೂರ್ವಮುಕ್ತಂ ಮಹಾಬಾಹೋ ನಿಹನಿಷ್ಯಾಮಿ ಸೋಮಕಾನ್ ।
ಪಾಂಚಾಲಾನ್ ಪಾಂಡವೈಃ ಸಾರ್ಧಂ ಕರೂಷಾಂಶ್ಚೇತಿ ಭಾರತ ॥೩೭॥

ಎಲೈ ಮಹಾಬಾಹುಗಳೇ, ಭಾರತರೇ, ನೀವು ಪಾಂಡವರಿಂದ ಸಹಿತರಾದ ಸೋಮಕರನ್ನೂ, ಪಾಂಚಾಲರನ್ನೂ, ಕರೂಷರನ್ನೂ ಕೊಲ್ಲುವೆನು ಎಂದು ಹಿಂದೆ ಹೇಳಿದ್ದೀರಿ.

ತದ್ವಚಃ ಸತ್ಯಮೇವಾಸ್ತು ಜಹಿ ಪಾರ್ಥಾನ್ ಸಮಾಗತಾನ್ ।
ಸೋಮಕಾಂಶ್ಚ ಮಹೇಷ್ವಾಸಾನ್ ಸತ್ಯವಾಗ್ ಭವ ಭಾರತ ॥೩೮॥

ಆ ಮಾತು ಸತ್ಯವೇ ಆಗಲಿ. ಪ್ರಾಪ್ತರಾದ ಪಾಂಡವರನ್ನೂ ಮತ್ತು ಮಹಾಧನುರ್ಧಾರಿಗಳಾದ ಸೋಮಕರನ್ನೂ ಕೊಲ್ಲುವವರಾಗಿ. ಎಲೈ ಭಾರತರೇ, ಸತ್ಯವಚನವುಳ್ಳವರಾಗಿ.

ದಯಯಾ ಯದಿ ವಾ ರಾಜನ್ ದ್ವೇಷ್ಯಭಾವಾನ್ಮಮ ಪ್ರಭೋ ।
ಮಂದಭಾಗ್ಯತಯಾ ವಾಪಿ ಮಮ ರಕ್ಷಸಿ ಪಾಂಡವಾನ್ ॥೩೯॥

ಅನುಜಾನೀಹಿ ಸಮರೇ ಕರ್ಣಮಾಹವಶೋಭನಮ್ ।
ಸ ಜೇಷ್ಯತಿ ರಣೇ ಪಾರ್ಥಾನ್ ಸಸುಹೃದ್ಗಣಬಾಂಧವಾನ್ ॥೪೦॥

ಪ್ರಭುಗಳೇ, ರಾಜರೇ, ಪಾಂಡವರ ಮೇಲಿನ ದಯೆಯಿಂದಾಗಲೀ ಅಥವಾ ನನ್ನ ಮೇಲಿನ ದ್ವೇಷದಿಂದಾಗಲೀ ಅಥವಾ ನನ್ನ ದುರದೃಷ್ಟದಿಂದಾಗಲೀ ನೀವು ಪಾಂಡವರನ್ನು ರಕ್ಷಿಸುವುದಾದರೆ ಸಮರದಲ್ಲಿ ಶೋಭಿಸುವ ಕರ್ಣನಿಗೆ ಯುದ್ಧವನ್ನು ಮಾಡಲು ಅನುಮತಿಯನ್ನು ಕೊಡಿ. ಅವನು ಯುದ್ಧದಲ್ಲಿ ಸುಹೃದ್ಗಣದಿಂದಲೂ ಮತ್ತು ಬಾಂಧವರಿಂದಲೂ ಸಹಿತರಾದ ಪಾಂಡವರನ್ನು ಗೆಲ್ಲುವನು (ಎಂದು ಹೇಳಿದನು).

ಏತಾವದುಕ್ತ್ವಾ ನೃಪತಿಃ ಪುತ್ರೋ ದುರ್ಯೋಧನಸ್ತವ ।
ನೋವಾಚ ವಚನಂ ಕಿಂಚಿದ್ ಭೀಷ್ಮಂ ಭೀಮಪರಾಕ್ರಮಮ್ ॥೪೧॥

ನಿನ್ನ ಪುತ್ರನೂ, ರಾಜನೂ ಆದ ದುರ್ಯೋಧನನು ಭಯಂಕರ ಪರಾಕ್ರಮವುಳ್ಳ ಭೀಷ್ಮರನ್ನು ಕುರಿತು ಇಷ್ಟು ಮಾತುಗಳನ್ನು ಆಡಿ ಮುಂದೆ ಏನೂ ಮಾತನಾಡಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ತ್ರಿನವತಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ತ್ರಿಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ತೊಂಬತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ನಾಲ್ಕನೆಯ ಅಧ್ಯಾಯ

ಭೀಷ್ಮರ ಪ್ರತಿಜ್ಞೆ.

ಸಂಜಯಃ

ವಾಕ್‌ಶಲ್ಯೈಸ್ತವ ಪುತ್ರೇಣ ಸೋಽತಿವಿದ್ಧಃ ಪಿತಾಮಹಃ ।
ದುಃಖೇನ ಮಹತಾವಿಷ್ಟೋ ನೋವಾಚಾಪ್ರಿಯಮಣ್ವಪಿ ॥೧॥

ಸಂಜಯ– ನಿನ್ನ ಪುತ್ರನ ಮಾತುಗಳೆಂಬ ಶಲ್ಯಗಳಿಂದ ಇರಿಯಲ್ಪಟ್ಟ ಪಿತಾಮಹರಾದ ಭೀಷ್ಮರು ಬಹಳ ದುಃಖದಿಂದ ಕೂಡಿದವರಾಗಿ ಸ್ವಲ್ಪ ಅಪ್ರಿಯವಾದ ಮಾತನ್ನೂ ಸಹ ಆಡಲಿಲ್ಲ.

ಸ ಧ್ಯಾತ್ವಾ ಸುಚಿರಂ ಕಾಲಂ ದುಃಖರೋಷಸಮನ್ವಿತಃ ।
ಶ್ವಸಮಾನೋ ಯಥಾ ನಾಗಃ ಪ್ರಣುನ್ನೋ ವೈ ಶಲಾಕಯಾ ॥೨॥

ಉದ್ಧೃತ್ಯ ಚಕ್ಷುಷೀ ಕೋಪಾನ್ನಿರ್ದಹನ್ನಿವ ಭಾರತ ।
ಸದೇವಾಸುರಗಂಧರ್ವಂ ಲೋಕಂ ಲೋಕವಿದಾಂ ವರಃ ।
ಅಬ್ರವೀತ್ ತವ ಪುತ್ರಂ ತು ಸಾಮಪೂರ್ವಮಿದಂ ವಚಃ ॥೩॥

ಅವರು ಬಹಳ ಹೊತ್ತಿನವರೆಗೆ ಆಲೋಚಿಸಿ, ದುಃಖ-ರೋಷ ಸಮನ್ವಿತರಾಗಿ ಸಲಾಕೆಯಿಂದ ತಿವಿದ ಸರ್ಪದಂತೆ ಶ್ವಾಸವನ್ನು ಬಿಡುತ್ತಾ, ಕೋಪದಿಂದ ಕಣ್ಣುಗಳನ್ನು

ಮೇಲಕ್ಕೆತ್ತಿ ಲೋಕವೇತ್ತರಲ್ಲಿ ಶ್ರೇಷ್ಠರಾದ ಅವರು ದೇವಾಸುರ-ಗಂಧರ್ವಸಹಿತವಾದ ಲೋಕವನ್ನು ಸುಡುವವರಂತೆ, ನಿನ್ನ ಪುತ್ರನನ್ನು ಕುರಿತು ಸಮಾಧಾನ ಪೂರ್ವಕವಾಗಿ ಈ ಮಾತನ್ನು ಆಡಿದರು.

ಕಿಂ ನು ದುರ್ಯೋಧನೈವಂ ಮಾಂ ವಾಕ್‌ಶಲ್ಯೈರುಪವಿಧ್ಯಸಿ ।
ಘಟಮಾನಂ ಯಥಾಶಕ್ತಿ ಕುರ್ವಾಣಂ ಚ ತವ ಪ್ರಿಯಮ್ ।
ಜುಹ್ವಾನಂ ಸಮರೇ ಪ್ರಾಣಾಂಸ್ತವೈವ ಹಿತಕಾಮ್ಯಯಾ ॥೪॥

ಎಲೈ ದುರ್ಯೋಧನನೇ ನನ್ನ ಶಕ್ತಿ ಇದ್ದಷ್ಟು ಯುದ್ಧವನ್ನು ಮಾಡಿ ನಿನಗೆ ಪ್ರಿಯವನ್ನು ಮಾಡುತ್ತಾ, ನಿನ್ನ ಹಿತವನ್ನು ಬಯಸಿ, ಯುದ್ಧದಲ್ಲಿ ನನ್ನ ಪ್ರಾಣಗಳನ್ನು ಹೋಮ ಮಾಡುತ್ತಿರುವ ನನ್ನನ್ನು ಏಕೆ ಇಂತಹ ವಾಗ್ಬಾಣಗಳಿಂದ ತಿವಿಯುತ್ತಿದ್ದೀಯೆ?

ಯದಾ ತು ಪಾಂಡವಃ ಶೂರಃ ಖಾಂಡವೇऽಗ್ನಿಮತರ್ಪಯತ್ ।
ಪರಾಜಿತ್ಯ ರಣೇ ಶಕ್ರಂ ಪರ್ಯಾಪ್ತಂ ತನ್ನಿದರ್ಶನಮ್ ॥೫॥

ಶೂರನಾದ ಅರ್ಜುನನು ಯುದ್ಧದಲ್ಲಿ ಇಂದ್ರನನ್ನು ಸೋಲಿಸಿ ಖಾಂಡವ ವನದಲ್ಲಿ ಅಗ್ನಿಯನ್ನು ತೃಪ್ತಿಪಡಿಸಿದ ಒಂದು ನಿದರ್ಶನವು ಸಾಕು.

ಯದಾ ಚ ತ್ವಾಂ ಮಹಾಬಾಹೋ ಗಂಧರ್ವೈರ್ಹೃತಮೋಜಸಾ ।
ಅಮೋಚಯತ್ ಪಾಂಡುಸುತಃ ಪರ್ಯಾಪ್ತಂ ತನ್ನಿದರ್ಶನಮ್ ॥೬॥

ದ್ರವಮಾಣೇಷು ಶೂರೇಷು ಸೋದರೇಷು ತಥಾಭಭೋ ।
ಸೂತಪುತ್ರೇ ಚ ರಾಧೇಯೇ ಪರ್ಯಾಪ್ತಂ ತನ್ನಿದರ್ಶನಮ್ ॥೭॥

ಎಲೈ ಮಹಾಬಾಹುವೇ, ಗಂಧರ್ವರು ಅವರ ಸಾಮರ್ಥ್ಯದಿಂದ ನಿನ್ನನ್ನು ಅಪಹರಿಸಿದಾಗ, ನಿನ್ನ ತಮ್ಮಂದಿರೂ, ಸೂತಪುತ್ರನಾದ ಕರ್ಣನೂ ಓಡುತ್ತಿರಲು ಎಲೈ ಶತ್ರುಸೂದನನೇ, ಪಾಂಡುಪುತ್ರನಾದ ಅರ್ಜುನನು ನಿನ್ನನ್ನು ವಿಮೋಚನೆಗೊಳಿಸಿದ ಒಂದು ನಿದರ್ಶನವು ಸಾಕು.

ಯಚ್ಚ ನಃ ಸಹಿತಾನ್ ಸರ್ವಾನ್ ವಿರಾಟನಗರೇ ತದಾ ।
ಏಕ ಏವ ಸಮುದ್ಯಾತಃ ಪರ್ಯಾಪ್ತಂ ತನ್ನಿದರ್ಶನಮ್ ॥೮॥

ವಿರಾಟನಗರದಲ್ಲಿ ಗೋಗ್ರಹಣ ಸಮಯದಲ್ಲಿ ನಾವೆಲ್ಲರೂ ಒಟ್ಟಾಗಿ ಯುದ್ಧ ಮಾಡುವಾಗ ಅರ್ಜುನನೊಬ್ಬನೇ ನಮ್ಮ ಎದುರಿಗೆ ಸಾಗಿಬಂದ ನಿದರ್ಶನವು ಸಾಕು.

ದ್ರೋಣಂ ಚ ಯುಧಿ ಸಂರಬ್ಧಂ ಮಾಂ ಚ ನಿರ್ಜಿತ್ಯ ಸಂಯುಗೇ ।
ಕರ್ಣಂ ಚ ತ್ವಾಂ ಚ ದ್ರೌಣಿಂ ಚ ಕೃಪಂ ಚ ಸುಮಹಾರಥಮ್ ।
ವಾಸಾಂಸಿ ಸ ಸಮಾದತ್ತ ಪರ್ಯಾಪ್ತಂ ತನ್ನಿದರ್ಶನಮ್ ॥೯॥

ಯುದ್ಧದಲ್ಲಿ ಕೋಪಗೊಂಡ ದ್ರೋಣರನ್ನು ಮತ್ತು ನನ್ನನ್ನು ಸೋಲಿಸಿ, ಕರ್ಣನನ್ನು, ಮಹಾರಥರಾದ ನಿನ್ನನ್ನು, ಅಶ್ವತ್ಥಾಮರನ್ನು, ಕೃಪರನ್ನು ಸೋಲಿಸಿ ನಮ್ಮ ವಸ್ತ್ರಗಳನ್ನು ಅಪಹರಿಸಿದ ಆ ನಿದರ್ಶನವು ಸಾಕು.

ನಿವಾತಕವಚಾನ್ ಯುದ್ಧೇ ವಾಸವೇನಾಪಿ ದುರ್ಜಯಾನ್ ।
ಜಿತವಾನ್ ಸಮರೇ ಪಾರ್ಥಃ ಪರ್ಯಾಪ್ತಂ ತನ್ನಿದರ್ಶನಮ್ ॥೧೦॥

ಇಂದ್ರನಿಂದಲೂ ಸೋಲಿಸಲು ಸಾಧ್ಯವಾಗದ ನಿವಾತಕವಚರನ್ನು ಯುದ್ಧದಲ್ಲಿ ಅರ್ಜುನನು ಜಯಿಸಿದ ಆ ನಿದರ್ಶನವು ಸಾಕು.

ಕೋ ಹಿ ಶಕ್ತೋ ರಣೇ ಜೇತುಂ ಪಾಂಡವಂ ರಭಸಂ ರಣೇ ।
ಯಸ್ಯ ಗೋಪ್ತಾ ಜಗದ್ಗೋಪ್ತಾ ಶಂಖಚಕ್ರಗದಾಧರಃ ।
ವಾಸುದೇವೋಽನಂತಶಕ್ತಿಃ ಸೃಷ್ಟಿಸಂಹಾರಕಾರಕಃ ।
ಸರ್ವೇಶ್ವರೋ ದೇವದೇವಃ ಪರಮಾತ್ಮಾ ಸನಾತನಃ ॥೧೧॥

ಯಾವ ಪಾರ್ಥನಿಗೆ ಜಗದ್ರಕ್ಷಕನೂ, ಶಂಖಚಕ್ರಗದಾಧರನೂ ಸೃಷ್ಟಿಸಂಹಾರ ಕರ್ತನೂ, ಅನಂತಶಕ್ತಿಯೂ, ಸರ್ವೇಶ್ವರನೂ, ದೇವದೇವನೂ, ಪರಮಾತ್ಮನೂ, ವೇದಪ್ರತಿಪಾದ್ಯನೂ ಆದ ಕೃಷ್ಣನು ರಕ್ಷಕನಾಗಿದ್ದಾನೆಯೋ ಅಂತಹ ವೇಗಶಾಲಿಯಾದ ಅವನನ್ನು ಯುದ್ಧದಲ್ಲಿ ಯಾರು ಗೆಲ್ಲಲು ಸಾಧ್ಯ ?

ಉಕ್ತೋಽಸಿ ಬಹುಶೋ ರಾಜನ್ ನಾರದಾದ್ಯೈರ್ಮಹರ್ಷಿಭಿಃ ।
ತ್ವಂ ತು ಮೋಹಾನ್ನ ಜಾನೀಷೇ ವಾಙ್ಮಾವಾಙ್ಮಂ ಸುಯೋಧನ ॥೧೨॥

ಎಲೈ ರಾಜನೇ, ನಾರದಾದಿ ಮಹರ್ಷಿಗಳು ಈ ವಿಷಯವನ್ನು ನಿನಗೆ ಅನೇಕ ಬಾರಿ ಹೇಳಿದ್ದಾರೆ. ಎಲೈ ಸುಯೋಧನನೇ, ನೀನು ಮೋಹಕ್ಕೆ ವಶನಾಗಿ ಏನನ್ನು ಮಾತನಾಡಬೇಕು, ಏನನ್ನು ಮಾತನಾಡಬಾರದು ಎಂದು ತಿಳಿದಿಲ್ಲ.

ಮುಮೂರ್ಷುರ್ಹಿ ನರಃ ಸರ್ವಾನ್ ವೃಕ್ಷಾನ್ ಪಶ್ಯತಿ ಕಾಂಚನಾನ್ ।
ತಥಾ ತ್ವಮಪಿ ಗಾಂಧಾರೇ ವಿಪರೀತಾನಿ ಪಶ್ಯಸಿ ॥೧೩॥

ಮರಣವು ಸನ್ನಿಹಿತನಾದ ಮನುಷ್ಯನು ವೃಕ್ಷಗಳನ್ನು ಸುವರ್ಣಮಯವಾಗಿ ನೋಡುತ್ತಾನೆ. ಎಲೈ ಗಾಂಧಾರಿ ಪುತ್ರನೇ, ಹಾಗೆ ನೀನೂ ಸಹ ಎಲ್ಲವನ್ನೂ ವಿರುದ್ಧವಾಗಿ ನೋಡುತ್ತಿದ್ದೀಯೆ.

ಸ್ವಯಂ ವೈರಂ ಮಹತ್ಕೃತ್ವಾ ಪಾಂಡವೈಃ ಸಹಸೃಂಜಯೈಃ ।
ಯುಧ್ಯಸ್ವ ತಾನದ್ಯ ರಣೇ ಪಶ್ಯಾಮಃ ಪುರುಷೋ ಭವ ।
ಅಶಕ್ಯಾ ಪಾಂಡವಾ ಜೇತುಂ ದೇವೈರಪಿ ಸವಾಸವೈಃ ॥೧೪॥

ಪಾಂಡವರ ಮತ್ತು ಸೃಂಜಯರ ಜೊತೆಯಲ್ಲಿ ದೊಡ್ಡ ವೈರವನ್ನು ಮಾಡಿದ ನೀನು ಈ ದಿನ ಅವರ ಜೊತೆಯಲ್ಲಿ ಯುದ್ಧವನ್ನು ಮಾಡು. ಯುದ್ಧದಲ್ಲಿ ನಿನ್ನ ಪೌರುಷವನ್ನು ನೋಡೋಣ. ಪುರುಷನಾಗು. ಇಂದ್ರನಿಂದ ಸಹಿತರಾದ ದೇವತೆಗಳೂ ಸಹ ಪಾಂಡವರನ್ನು ಗೆಲ್ಲಲಾರರು.

ಅಹಂ ತು ಸೋಮಕಾನ್ ಸರ್ವಾನ್ ಸಪಾಂಚಾಲಾನ್ ಸಮಾಗತಾನ್।
ನಿಹನಿಷ್ಯೇ ನರವ್ಯಾಘ್ರ ವರ್ಜಯಿತ್ವಾ ಶಿಖಂಡಿನಮ್ ॥೧೫॥

ಎಲೈ ನರವ್ಯಾಘ್ರನೇ, ಶಿಖಂಡಿಯೊಬ್ಬನನ್ನು ಬಿಟ್ಟು ಯುದ್ಧಕ್ಕೆ ಸಮಾಗತರಾದ ಪಾಂಚಾಲ ಸಹಿತರಾದ ಎಲ್ಲಾ ಸೋಮಕರನ್ನೂ ನಾನು ಕೊಲ್ಲುವೆನು.

ತೈರ್ವಾಹಂ ನಿಹತಃ ಸಂಖ್ಯೇ ಗಮಿಷ್ಯೇ ಯಮಸಾದನಮ್ ।
ತಾನ್ ವಾ ನಿಹತ್ಯ ಸಂಗ್ರಾಮೇ ಪ್ರೀತಿಂ ದಾಸ್ಯಾಮಿ ವೈ ತವ ॥೧೬॥

ಅವರಿಂದ ಕೊಲ್ಲಲ್ಪಟ್ಟು ನಾನಾದರೂ ಯಮಲೋಕಕ್ಕೆ ಹೋಗುವೆನು ಅಥವಾ ಯುದ್ಧದಲ್ಲಿ ಅವರನ್ನು ಕೊಂದು ನಿನಗೆ ಬಹಳ ಸಂತೋಷವನ್ನು ಕೊಡುವೆನು.

ಪೂರ್ವಂ ಹಿ ಸ್ತ್ರೀ ಸಮುತ್ಪನ್ನಾ ಶಿಖಂಡೀ ರಾಜವೇಶ್ಮನಿ ।
ವರದಾನಾತ್ ಪುಮಾನ್ ಜಾತಃ ಸೈಷಾ ವೈ ಸ್ತ್ರೀ ಶಿಖಂಡಿನೀ ॥೧೭॥

ಹಿಂದೆ ರಾಜಮಂದಿರದಲ್ಲಿ ಕನ್ಯೆಯಾಗಿ ಹುಟ್ಟಿದ ಶಿಖಂಡಿಯು ದೇವತೆಗಳ ವರದಾನದಿಂದ ಪುರುಷಳಾದಳು. ಅಂತಹ ಈ ಶಿಖಂಡಿನಿಯು ವನಿತೆಯಾದವಳು.

ತಾಮಹಂ ನ ಹನಿಷ್ಯಾಮಿ ಪ್ರಾಣತ್ಯಾಗೇಽಪಿ ಭಾರತ ।
ಸೈಷಾ ವಾಙ್ನಿರ್ಮಿತಾ ಧಾತ್ರಾ ಸೈಷಾ ವೈ ಸ್ತ್ರೀ ಶಿಖಂಡಿನೀ ॥೧೮॥

ಎಲೈ ಭಾರತನೇ, ನನ್ನ ಪ್ರಾಣವು ಹೋದರೂ ನಾನು ಅವಳನ್ನು ಕೊಲ್ಲುವುದಿಲ್ಲ. ಇವಳು ಬ್ರಹ್ಮದೇವರು ಸೃಷ್ಟಿಸಿದ ವಾಕ್ ಎಂಬ ಕನ್ಯೆ. ಶಿಖಂಡಿನಿಯು ನಿಶ್ಚಯವಾಗಿ ವನಿತೆಯಾದವಳು.

ಸುಖಂ ಸ್ವಪಿಹಿ ಗಾಂಧಾರೇ ಶ್ವೋಽಸ್ಮಿ ಕರ್ತಾ ಮಹಾರಣಮ್ ।
ಯಂ ಜನಾಃ ಕಥಯಿಷ್ಯಂತಿ ಯಾವತ್ ಸ್ಥಾಸ್ಯತಿ ಮೇದಿನೀ ॥೧೯॥

ಎಲೈ ಗಾಂಧಾರಿಪುತ್ರನೇ, ಸುಖವಾಗಿ ನಿದ್ರೆಯನ್ನು ಮಾಡು. ನಾಳೆ ದೊಡ್ಡ ಯುದ್ಧವನ್ನು ಮಾಡುವೆನು. ಆ ಯುದ್ಧವನ್ನು ಮಾಡಿದ ನನ್ನನ್ನು ಭೂಮಿಯು ಇರುವವರೆಗೆ ಮಾನವರು ಪ್ರಶಂಸಿಸುವರು (ಎಂದು ಹೇಳಿದರು).

ಏವಮುಕ್ತಸ್ತವ ಸುತೋ ನಿರ್ಜಗಾಮ ಜನೇಶ್ವರ ।
ಅಭಿವಾದ್ಯ ಗುರುಂ ಮೂರ್ಧ್ನಾ ಪ್ರಯಯೌ ಸ್ವಂ ನಿವೇಶನಮ್ ॥೨೦॥

ಎಲೈ ರಾಜನೇ, ಹೀಗೆ ಹೇಳಲ್ಪಟ್ಟ ನಿನ್ನ ಪುತ್ರನು ಹಿರಿಯರಾದ ಅವರಿಗೆ ಶಿರಸ್ಸಹಿತವಾದ ನಮಸ್ಕಾರವನ್ನು ಮಾಡಿ ತನ್ನ ಶಿಬಿರಕ್ಕೆ ಹೋದನು.

ಆಗಮ್ಯ ತು ತತೋ ರಾಜಾ ವಿಸೃಜ್ಯ ಚ ಮಹಾಜನಮ್ ।
ಪ್ರವಿವೇಶ ತತಸ್ತೂರ್ಣಂ ಕ್ಷಯಂ ಶತ್ರುಕ್ಷಯಂಕರಃ ।
ಪ್ರವಿಷ್ಟಃ ಸ ನಿಶಾಂ ತಾಂ ಚ ಗಮಯಾಮಾಸ ಪಾರ್ಥಿವಃ ॥೨೧॥

ತನ್ನ ಶಿಬಿರವನ್ನು ತಲುಪಿ, ಮಹಾಜನರನ್ನು ಕಳುಹಿಸಿಕೊಟ್ಟು ಶತ್ರು ಕ್ಷಯಕಾರಿಯಾದ ಅವನು ತನ್ನ ವಿಶ್ರಾಂತಿ ಸ್ಥಾನಕ್ಕೆ ಶೀಘ್ರವಾಗಿ ಹೋಗಿ ಆ ರಾತ್ರಿಯನ್ನು ಕಳೆದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಚತುರ್ನವತಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಚತುಃಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ತೊಂಬತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೈದನೆಯ ಅಧ್ಯಾಯ

ದುರ್ಯೋಧನನಿಂದ ದುಶ್ಶಾಸನನನ್ನು ಕುರಿತು
ಸೈನ್ಯವನ್ನು ಯೋಜಿಸುವಂತೆ ಆದೇಶ.

ಸಂಜಯಃ

ಪ್ರಭಾತಾಯಾಂ ತು ಶರ್ವರ್ಯಾಂ ಪ್ರಾತರುತ್ಥಾಯ ವೈ ನೃಪಃ ।
ರಾಜ್ಞಃ ಸಮಾಜ್ಞಾಪಯತ ಸೇನಾಂ ಯೋಜಯತೇತಿ ಹ ।
ಅದ್ಯ ಭೀಷ್ಮೋ ರಣೇ ಕ್ರುದ್ಧೋ ನಿಹನಿಷ್ಯತಿ ಸೋಮಕಾನ್ ॥೧॥

ಸಂಜಯ– ಎಲೈ ರಾಜನೇ, ರಾತ್ರಿಯು ಕಳೆದು ಪ್ರಾತಃಕಾಲವಾದ ಮೇಲೆ ರಾಜನು ಎದ್ದು ಈ ದಿನ ಭೀಷ್ಮರು ಯುದ್ಧದಲ್ಲಿ ಕ್ರುದ್ಧರಾಗಿ ಸೋಮಕರನ್ನು ಕೊಲ್ಲುವರು. ನೀವು ಸೇನೆಯನ್ನು ಯೋಜಿಸಿ ಎಂದು ರಾಜರಿಗೆ ಆಜ್ಞೆಯನ್ನು ಮಾಡಿದನು.

ದುರ್ಯೋಧನಸ್ಯ ತಚ್ಛ್ರುತ್ವಾ ರಾತ್ರೌ ವಿಲಪಿತಂ ಬಹು ।
ಮನ್ಯಮಾನಃ ಸ ತಂ ರಾಜನ್ ಪ್ರತ್ಯಾದೇಶಮಿವಾತ್ಮನಃ ॥೨॥

ನಿರ್ವೇದಂ ಪರಮಂ ಗತ್ವಾ ವಿನಿಂದ್ಯ ಪರವಾಚ್ಯತಾಮ್ ।
ದೀರ್ಘಂ ದಧ್ಮೌ ಶಾಂತನವೋ ಯೋದ್ಧುಕಾಮೋಽರ್ಜುನಂ ರಣೇ ॥

ಎಲೈ ರಾಜನೇ, ದುರ್ಯೋಧನನು ಹಿಂದಿನ ರಾತ್ರಿಯಲ್ಲಿ ಆಡಿದ ಅನೇಕ ಮಾತುಗಳನ್ನು ತಮ್ಮ ನಿರಾಕರಣೆ ಎಂದು ತಿಳಿದ ಭೀಷ್ಮರು ಬಹಳ ಬೇಸರಗೊಂಡವರಾಗಿ ಇನ್ನೊಬ್ಬರಿಂದ ಕರ್ತವ್ಯವನ್ನು ಹೇಳಿಸಿಕೊಳ್ಳುವುದನ್ನು ನಿಂದಿಸಿ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸಿ ಬಹಳ ಕಾಲ ಆಲೋಚಿಸಿದರು.

ಇಂಗಿತೇನ ತು ತಜ್ಞಾತ್ವಾ ಗಾಂಗೇಯೇನ ವಿಚಿಂತಿತಮ್ ।
ದುರ್ಯೋಧನೋ ಮಹಾರಾಜ ದುಃಶಾಸನಮಚೋದಯತ್ ॥೪॥

ಭೀಷ್ಮರ ಇಂಗಿತದಿಂದ ಅವರ ಚಿಂತನೆಯನ್ನು ತಿಳಿದ ದುರ್ಯೋಧನನು ಎಲೈ ಮಹಾರಾಜನೇ, ದುಶ್ಶಾಸನನಿಗೆ ಆಜ್ಞೆಯನ್ನು ಮಾಡಿದನು.

ದುಃಶಾಸನ ರಥಾಸ್ತೂರ್ಣಂ ಯುಜ್ಯಂತಾಂ ಭೀಷ್ಮರಕ್ಷಿಣಃ ।
ದ್ವಾವಿಂಶತಿಮನೀಕಾನಿ ಸರ್ವಾಣ್ಯೇವಾಭಿಚೋದಯ ॥೫॥

ಎಲೈ ದುಶ್ಶಾಸನನೇ, ಭೀಷ್ಮರ ರಕ್ಷಣೆಯನ್ನು ಮಾಡುವ ರಥಗಳು ಶೀಘ್ರವಾಗಿ ಹೂಡಲ್ಪಡಲಿ. ಸೈನ್ಯವನ್ನು ಇಪ್ಪತ್ತೆರಡು ಯೋಧರ ಗುಂಪುಗಳಾಗಿ ವಿಭಾಗಿಸಿ ಎಲ್ಲರನ್ನೂ ಪ್ರೇರಿಸುವವನಾಗು.

ಇದಂ ಹಿ ಸಮನುಪ್ರಾಪ್ತಂ ವರ್ಷಪೂಗಾಭಿಚಿಂತಿತಮ್ ।
ಪಾಂಡವಾನಾಂ ಸಸೈನ್ಯಾನಾಂ ವಧೋ ರಾಜ್ಯಸ್ಯ ಚಾಗಮಃ ॥೬॥

ನಾವು ಅನೇಕ ವರ್ಷಗಳಿಂದ ಚಿಂತಿಸಿದ ಸೈನ್ಯಸಹಿತರಾದ ಪಾಂಡವರ ವಧೆಯೂ, ನಮ್ಮ ಮತ್ತು ನಮ್ಮ ರಾಜ್ಯಲಾಭವೂ ಈಗ ಪ್ರಾಪ್ತವಾಗಿದೆ.

ತತ್ರ ಕಾರ್ಯಮಹಂ ಮನ್ಯೇ ಭೀಷ್ಮಸ್ಯೈವಾಭಿರಕ್ಷಣಮ್ ।
ಸ ನೋ ಗುಪ್ತಃ ಸುಖಾಯ ಸ್ಯಾದ್ ಹನ್ಯಾತ್ ಪಾರ್ಥಾಂಶ್ಚ ಸಂಯುಗೇ ॥

ಈಗ ಭೀಷ್ಮರ ರಕ್ಷಣೆಯು ನಾವು ಮಾಡಬೇಕಾದ ಪರಮಕಾರ್ಯವೆಂದು ನಾನು ಭಾವಿಸುತ್ತೇನೆ. ರಕ್ಷಿಸಲ್ಪಟ್ಟ ಭೀಷ್ಮರು ನಮಗೆ ಸುಖವನ್ನು ಕೊಡುವವರಾಗಿ ಯುದ್ಧದಲ್ಲಿ ಪಾಂಡವರನ್ನು ಕೊಂದಾರು.

ಅಬ್ರವೀಚ್ಚ ವಿಶುದ್ಧಾತ್ಮಾ ನಾಹಂ ಹನ್ಯಾಂ ಶಿಖಂಡಿನಮ್ ।
ಸ್ತ್ರೀಪೂರ್ವಕೋ ಹ್ಯಸೌ ಜಾತಸ್ತಸ್ಮಾದ್ ವರ್ಜ್ಯೋ ರಣೇ ಮಯಾ ॥೮॥

ಶುದ್ಧಮನಸ್ಸುಳ್ಳ ಅವರು ನನ್ನನ್ನು ಕುರಿತು, ನಾನು ಶಿಖಂಡಿಯನ್ನು ಕೊಲ್ಲುವುದಿಲ್ಲ. ಅವನು ಮೊದಲು ಸ್ತ್ರೀಯಾಗಿದ್ದವನು. ಆದ್ದರಿಂದ ಅವನನ್ನು ನಾನು ವರ್ಜಿಸುತ್ತೇನೆ.

ಲೋಕಸ್ತದ್ವೇದ ಯದಹಂ ಪಿತುಃ ಪ್ರಿಯಚಿಕೀರ್ಷಯಾ ।
ರಾಜ್ಯಂ ಸ್ಫೀತಂ ಮಹಾಬಾಹೋ ಸ್ತ್ರಿಯಶ್ಚ ತ್ಯಕ್ತವಾನ್ ಪುರಾ ॥೯॥

ಎಲೈ ಮಹಾಬಾಹುವೇ, ನಾನು ತಂದೆಗೆ ಪ್ರಿಯವನ್ನು ಮಾಡಲು ಸಂಪದ್ಯುಕ್ತವಾದ ರಾಜ್ಯವನ್ನೂ, ಸ್ತ್ರೀಯರನ್ನೂ ಮೊದಲೇ ತ್ಯಜಿಸಿದ್ದೇನೆಂಬುದನ್ನು ಲೋಕವೆಲ್ಲವೂ ತಿಳಿದಿದೆ.

ನೈವ ಚಾಹಂ ಸ್ತ್ರಿಯಂ ಜಾತು ನ ಸ್ತ್ರೀಪೂರ್ವಂ ಕಥಂಚನ ।
ಹನ್ಯಾಂ ಯುಧಿ ನರಶ್ರೇಷ್ಠ ಸತ್ಯಮೇತದ್ ಬ್ರವೀಮಿ ತೇ ॥೧೦॥

ಎಲೈ ನರಶ್ರೇಷ್ಠನೇ, ನಾನು ಸ್ತ್ರೀಯನ್ನಾಗಲೀ ಅಥವಾ ಮೊದಲು ಸ್ತ್ರೀಯಾಗಿದ್ದವನನ್ನಾಗಲೀ ಯುದ್ಧದಲ್ಲಿ ಎಂದೂ ಕೊಲ್ಲಲಾರೆ. ಈ ಸತ್ಯವಚನವನ್ನು ನಿನಗೆ ಹೇಳುತ್ತಿದ್ದೇನೆ.

ಅಯಂ ಸ್ತ್ರೀಪೂರ್ವಕೋ ರಾಜನ್ ಶಿಖಂಡೀ ಯದಿ ತೇ ಶ್ರುತಃ ।
ಉದ್ಯೋಗೇ ಕಥಿತಂ ಯತ್ ತತ್ತಥಾ ಜಾತಾ ಶಿಖಂಡಿನೀ ॥೧೧॥

ಎಲೈ ರಾಜನೇ, ನೀನು ಕೇಳಿದ್ದರೆ, ಈ ಶಿಖಂಡಿಯು ಮೊದಲು ಸ್ತ್ರೀಯಾಗಿದ್ದವನು. ಯುದ್ಧೋದ್ಯೋಗ ಸಮಯದಲ್ಲಿ ಹೇಳಿದಂತೆ ಶಿಖಂಡಿಯು ಹಾಗೆಯೇ ಜನಿಸಿದವನು.

ಕನ್ಯಾ ಭೂತ್ವಾ ಪುಮಾನ್ ಜಾತಃ ಸ ಚ ಯೋತ್ಸ್ಯತಿ ಭಾರತ ।
ತಸ್ಯಾಹಂ ಪ್ರಮುಖೇ ಬಾಣಾನ್ ನ ಮುಂಚೇಯಂ ಕಥಂಚನ ॥೧೨॥

ಎಲೈ ಭಾರತನೇ, ಮೊದಲು ಕನ್ಯೆಯಾಗಿ ಅವನು ಪುನಃ ಪುರುಷನಾದನು. ಅವನು ಯುದ್ಧವನ್ನು ಮಾಡುವನು. ಅವನ ಎದುರಿನಲ್ಲಿ ನಾನು ಯಾವ ಕಾರಣದಿಂದಲೂ ಬಾಣಪ್ರಯೋಗವನ್ನು ಮಾಡುವುದಿಲ್ಲ.

ಯುದ್ಧೇ ತು ಕ್ಷತ್ರಿಯಾಂಸ್ತಾತ ಪಾಂಡವಾನಾಂ ಜಯೈಷಿಣಃ ।
ಸರ್ವಾನನ್ಯಾನ್ ಹನಿಷ್ಯಾಮಿ ಸಂಪ್ರಾಪ್ತಾನ್ ಬಾಣಗೋಚರಾನ್ ॥೧೩॥

ಎಲೈ ಪ್ರೀತಿಪಾತ್ರನೇ, ಯುದ್ಧದಲ್ಲಿ ಪಾಂಡವರ ಜಯವನ್ನು ಬಯಸಿದ ನನ್ನ ಬಾಣದ ವ್ಯಾಪ್ತಿಗೆ ಸಿಲುಕುವ ಉಳಿದ ಎಲ್ಲಾ ಕ್ಷತ್ರಿಯರನ್ನೂ ಕೊಲ್ಲುವೆನು.

ಏವಂ ಮಾಂ ಭರತಶ್ರೇಷ್ಠೋ ಗಾಂಗೇಯಃ ಪ್ರಾಹ ಶಾಸ್ತ್ರವಿತ್ ।
ತತ್ರ ಸರ್ವಾತ್ಮನಾ ಮನ್ಯೇ ಭೀಷ್ಮಸ್ಯೈವಾಭಿಪಾಲನಮ್ ॥೧೪॥

ಹೀಗೆಂದು ಭರತಶ್ರೇಷ್ಠರೂ, ಶಾಸ್ತ್ರಜ್ಞರೂ ಆದ ಭೀಷ್ಮರು ನನಗೆ ಹೇಳಿದರು. ಆದ್ದರಿಂದ ಸರ್ವರೀತಿಯಿಂದ ಭೀಷ್ಮರನ್ನು ರಕ್ಷಿಸಬೇಕೆಂದು ನಾನು ಭಾವಿಸುತ್ತೇನೆ.

ಅರಕ್ಷ್ಯಮಾಣಂ ಹಿ ವೃಕೋ ಹನ್ಯಾತ್ ಸಿಂಹಂ ಮಹಾವನೇ ।
ಮಾ ವೃಕೇಣೇವ ಶಾರ್ದೂಲಂ ಘಾತಯೇಮ ಶಿಖಂಡಿನಾ ॥೧೫॥

ಸಿಂಹವನ್ನು ರಕ್ಷಿಸದಿದ್ದರೆ ಮಹಾವನದಲ್ಲಿ ತೋಳವೂ ಅದನ್ನು ಕೊಂದೀತು. ತೋಳದಿಂದ ವ್ಯಾಘ್ರವನ್ನು ಕೊಲ್ಲಿಸಿದಂತೆ ಶಿಖಂಡಿಯಿಂದ ಭೀಷ್ಮರನ್ನು ಕೊಲ್ಲಿಸುವುದು ಬೇಡ.

ಮಾತುಲಃ ಶಕುನಿಃ ಶಲ್ಯಃ ಕೃಪೋ ದ್ರೋಣೋ ವಿವಿಂಶತಿಃ ।
ಯತ್ತಾ ರಕ್ಷಂತು ಗಾಂಗೇಯಂ ತಸ್ಮಿನ್ ಗುಪ್ತೇ ಧ್ರುವೋ ಜಯಃ ॥೧೬॥

ಸೋದರಮಾವನಾದ ಶಕುನಿ, ಶಲ್ಯ, ಕೃಪರು, ದ್ರೋಣರು, ವಿವಿಂಶತಿ ಎಲ್ಲರೂ ಜಾಗರೂಕರಾಗಿ ಭೀಷ್ಮರನ್ನು ರಕ್ಷಿಸಲಿ. ಅವರನ್ನು ರಕ್ಷಿಸಿದರೆ ನಮಗೆ ಜಯವು ನಿಶ್ಚಿತವಾದುದು (ಎಂದು ಹೇಳಿದನು).

ಸಂಜಯಃ

ಏತಚ್ಛ್ರುತ್ವಾ ತು ರಾಜಾನೋ ದುರ್ಯೋಧನವಚಸ್ತದಾ ।
ಸರ್ವತೋ ರಥವಂಶೇನ ಗಾಂಗೇಯಂ ಪರ್ಯವಾರಯನ್ ॥೧೭॥

ಸಂಜಯ– ದುರ್ಯೋಧನನ ಈ ಮಾತುಗಳನ್ನು ಕೇಳಿ ಆಗ ಆ ರಾಜರು ರಥಸಮೂಹದಿಂದ ಎಲ್ಲ ಕಡೆಗಳಿಂದಲೂ ಭೀಷ್ಮರನ್ನು ಸುತ್ತುವರಿದರು.

ಪುತ್ರಾಶ್ಚ ತವ ಗಾಂಗೇಯಂ ಪರಿವಾರ್ಯ ಯಯುರ್ಮುದಾ ।
ಕಂಪಯಂತೋ ಭುವಂ ದ್ಯಾಂ ಚ ಕ್ಷೋಭಯಂತಶ್ಚ ಪಾಂಡವಾನ್ ॥

ನಿನ್ನ ಪುತ್ರರೂ ಸಹ ಭೀಷ್ಮರನ್ನು ಸುತ್ತುವರಿದು ಭೂಮಿಯನ್ನು ಮತ್ತು ಅಂತರಿಕ್ಷವನ್ನು ನಡುಗಿಸುತ್ತಾ, ಪಾಂಡವರಿಗೆ ಕ್ಷೋಭೆಯನ್ನುಂಟು ಮಾಡುತ್ತಾ, ಸಂತೋಷದಿಂದ ಹೊರಟರು.

ತೈ ರಥೈಶ್ಚ ಸುಸಂಯುಕ್ತೈರ್ದಂತಿಭಿಶ್ಚ ಮಹಾರಥಾಃ ।
ಪರಿವಾರ್ಯ ರಣೇ ಭೀಷ್ಮಂ ದಂಶಿತಾಃ ಸಮವಸ್ಥಿತಾಃ ॥೧೯॥

ಚೆನ್ನಾಗಿ ಹೂಡಿದ ರಥಗಳಿಂದಲೂ, ಸಜ್ಜುಗೊಂಡ ಗಜಗಳಿಂದಲೂ ಮಹಾರಥರಾದ ಅವರು ರಣರಂಗದಲ್ಲಿ ಭೀಷ್ಮರನ್ನು ಸುತ್ತುವರಿದು ತಾವೂ ಶಸ್ತ್ರ-ಕವಚ ಸನ್ನದ್ಧರಾಗಿ ನಿಂತರು.

ಯಥಾ ದೇವಾಸುರೇ ಯುದ್ಧೇ ತ್ರಿದಶಾ ವಜ್ರಧಾರಿಣಮ್ ।
ಸರ್ವೇ ತೇ ಸ್ಮ ವ್ಯತಿಷ್ಠಂತ ರಕ್ಷಂತಸ್ತಂ ಮಹಾರಥಮ್ ॥೨೦॥

ದೇವಾಸುರ ಯುದ್ಧದಲ್ಲಿ ದೇವತೆಗಳೆಲ್ಲರೂ ಮಹಾರಥನಾದ ವಜ್ರಾಯುಧ-ಧಾರಿಯಾದ ದೇವೇಂದ್ರನನ್ನು ರಕ್ಷಿಸುತ್ತಾ ಸುತ್ತುವರಿದಂತೆ (ಅವರು ನಿಂತರು).

ತತೋ ದುರ್ಯೋಧನೋ ರಾಜಾ ಪುನರ್ಭಾತರಮಬ್ರವೀತ್ ।
ಸವ್ಯಂ ಚಕ್ರಂ ಯುಧಾಮನ್ಯುರುತ್ತಮೌಜಾಶ್ಚ ದಕ್ಷಿಣಮ್ ।
ಗೋಪ್ತಾರಾವರ್ಜುನಸ್ಯೈತಾವರ್ಜುನೋಽಪಿ ಶಿಖಂಡಿನಃ ॥೨೧॥

ಸ ರಕ್ಷ್ಯಮಾಣಃ ಪಾರ್ಥೇನ ತಥಾಸ್ಮಾಭಿರ್ವಿವರ್ಜಿತಃ ।
ಯಥಾ ಭೀಷ್ಮಂ ನ ನೋ ಹನ್ಯಾದ್ ದುಃಶಾಸನ ತಥಾ ಕುರು ॥೨೨॥

ಆಗ ರಾಜನಾದ ದುರ್ಯೋಧನನು ಪುನಃ ತಮ್ಮನನ್ನು ಕುರಿತು ಹೀಗೆ ಹೇಳಿದನು. ಅರ್ಜುನನ ಎಡಪಾರ್ಶ್ವದ ಸೈನ್ಯವನ್ನು ಯುಧಾಮನ್ಯುವೂ, ಬಲಪಾರ್ಶ್ವದ ಸೈನ್ಯವನ್ನು ಉತ್ತಮೌಜನೂ ರಕ್ಷಿಸುವರು. ಅರ್ಜುನನೂ ಸಹ ಶಿಖಂಡಿಯನ್ನು ರಕ್ಷಿಸುವನು. ಎಲೈ ದುಶ್ಶಾಸನನೇ, ಅವನು ಅರ್ಜುನನಿಂದ ರಕ್ಷಿತನಾಗಿ ನಮ್ಮಿಂದ ಪರಿತ್ಯಕ್ತನಾಗಿ ಭೀಷ್ಮರನ್ನು ಮತ್ತು ನಮ್ಮನ್ನು ಕೊಲ್ಲದಂತೆ ಯೋಜನೆಯನ್ನು ಮಾಡು.

ಸಂಜಯಃ

ಭ್ರಾತುಸ್ತದ್ವಚನಂ ಶ್ರುತ್ವಾ ಪುತ್ರೋ ದುಃಶಾಸನಸ್ತವ ।
ಭೀಷ್ಮಂ ಪ್ರಮುಖತಃ ಕೃತ್ವಾ ಪ್ರಯಯೌ ಸೇನಯಾ ಸಹ ॥೨೩॥

ಸಂಜಯ– ಅಣ್ಣನ ಆ ಮಾತುಗಳನ್ನು ಕೇಳಿ ನಿನ್ನ ಪುತ್ರನಾದ ದುಶ್ಶಾಸನನು ಭೀಷ್ಮರನ್ನು ಮುಂದೆ ಮಾಡಿಕೊಂಡು ಸೈನ್ಯದ ಜೊತೆಯಲ್ಲಿ ಹೊರಟನು.

ಭೀಷ್ಮಂ ತು ರಥವಂಶೇನ ದೃಷ್ಟ್ವಾ ತಮಭಿಸಂವೃತಮ್ ।
ಅರ್ಜುನೋ ರಥಿನಾಂ ಶ್ರೇಷ್ಠೋ ಧೃಷ್ಟದ್ಯುಮ್ನಮುವಾಚ ಹ ॥೨೪॥

ಶಿಖಂಡಿನಂ ನರವ್ಯಾಘ್ರ ಭೀಷ್ಮಸ್ಯ ಪ್ರಮುಖೇಽನಘ ।
ಸ್ಥಾಪಯಸ್ವಾದ್ಯ ಪಾಂಚಾಲ್ಯ ತಸ್ಯ ಗೋಪ್ತಾಹಮಪ್ಯುತ ॥೨೫॥

ಭೀಷ್ಮರು ರಥಸಮೂಹಗಳಿಂದ ಸುತ್ತುವರಿಯಲ್ಪಟ್ಟುದನ್ನು ನೋಡಿದ ರಥಿಶ್ರೇಷ್ಠನಾದ ಅರ್ಜುನನು ಧೃಷ್ಟದ್ಯುಮ್ನನನ್ನು ಕುರಿತು ಎಲೈ ಅನಘನೇ, ನರವ್ಯಾಘ್ರನೇ, ಪಾಂಚಾಲ ರಾಜಕುಮಾರನೇ, ಶಿಖಂಡಿಯನ್ನು ಈ ದಿನ ಭೀಷ್ಮರ ಎದುರಿಗೆ ನಿಲ್ಲಿಸು, ನಾನು ಅವನನ್ನು ರಕ್ಷಿಸುವೆನು ಎಂದು ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಪಂಚನವತಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಪಂಚಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ತೊಂಬತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ - ೨೫ನೇ ಅಧ್ಯಾಯ

ಸಂಶ್ರಾವಿತಃ ಕ್ರೂರವಚಃ ಸ ತೇನ
ಚಕ್ರೇ ಸತ್ಯಂ ಮೃತ್ಯುಭಯಂ ವಿಹಾಯ ।
ಶಕ್ತ್ಯಾ ಹನಿಷ್ಯಾಮಿ ಪರಾನಿತಿ ಸ್ಮ
ಚಕ್ರೇ ಚ ತತ್ಕರ್ಮ ತಥಾ ಪರೇದ್ಯುಃ ॥೧೦೩॥

ದುರ್ಯೋಧನನಿಂದ ಕಠೋರ ಮಾತುಗಳನ್ನು ಕೇಳಿಸಿಕೊಂಡ ಭೀಷ್ಮರು ಮೃತ್ಯು ಭಯವನ್ನು ತೊರೆದು ಶಕ್ತಿಪೂರ್ತಿ ವೈರಿಗಳನ್ನು ಕೊಲ್ಲುವೆನೆಂದು ಪ್ರತಿಜ್ಞೆ ಮಾಡಿದರು. ಮರುದಿನ ಆ ಕಾರ್ಯವನ್ನೂ ಮಾಡಿದರು.

ತಂ ಶಕ್ತಿತೋ ಜುಗುಪುರ್ಧಾರ್ತರಾಷ್ಟ್ರಾ-
ಸ್ತೇನಾರ್ದಿತಾಶ್ಚೇದಿಪಾಂಚಾಲಮತ್ಸ್ಯಾಃ ।
ಪರಾದ್ರವನ್ ಭೀಷ್ಮಬಾಣೋರುಭೀತಾಃ
ಸಿಂಹಾರ್ದಿತಾಃ ಕ್ಷುದ್ರಮೃಗಾ ಇವಾರ್ತಾಃ ॥೧೦೪॥

ಕೌರವರು ಭೀಷ್ಮರನ್ನು ಶಕ್ತಿಪೂರ್ತಿ ರಕ್ಷಿಸಿಕೊಂಡರು. ಭೀಷ್ಮರಿಂದ ಪೀಡಿತರಾದ ಚೇದಿ ಪಾಂಚಾಲ ಮತ್ಸ್ಯದೇಶಗಳ ರಾಜರು ಭೀಷ್ಮರ ಬಾಣಗಳಿಗೆ ಬಹಳ ಭಯಪಟ್ಟು ಆರ್ತರಾಗಿ ಸಿಂಹದಿಂದ ಪೀಡಿತವಾದ ಕ್ಷುದ್ರಮೃಗಗಳಂತೆ ಓಡಿದರು.

★ ★ ★ ★ ★

ತೊಂಬತ್ತಾರನೆಯ ಅಧ್ಯಾಯ

ಒಂಬತ್ತನೆಯ ದಿವಸದ ಯುದ್ಧದ ಪ್ರಾರಂಭ. ಭೀಷ್ಮರಿಂದ ಸರ್ವತೋಭದ್ರ ವ್ಯೂಹದ ಮತ್ತು ಪಾಂಡವರಿಂದ ಪ್ರತಿವ್ಯೂಹದ ರಚನೆ.

ಸಂಜಯಃ

ತತಃ ಶಾಂತನವೋ ಭೀಷ್ಮೋ ನಿರ್ಯಯೌ ಸೇನಯಾ ಸಹ ।
ವ್ಯೂಹಂ ಚಾವ್ಯೂಹತ ಮಹತ್ ಸರ್ವತೋಭದ್ರಮಾಹವೇ ॥೧॥

ಸಂಜಯ– ಅನಂತರ ಶಂತನುಪುತ್ರರಾದ ಭೀಷ್ಮರು ಸೈನ್ಯದ ಜೊತೆಯಲ್ಲಿ ಹೊರಟು ರಣರಂಗದಲ್ಲಿ ದೊಡ್ಡದಾದ ಸರ್ವತೋಭದ್ರವ್ಯೂಹವನ್ನು ರಚಿಸಿದರು.

ಕೃಪಶ್ಚ ಕೃತವರ್ಮಾ ಚ ಶೈಬ್ಯಶ್ಚೈವ ಮಹಾರಥಃ ।
ಶಕುನಿಃ ಸೈಂಧವಶ್ಚೈವ ಕಾಂಬೋಜಶ್ಚ ಸುದಕ್ಷಿಣಃ ॥೨॥

ಭೀಷ್ಮೇಣ ಸಹಿತಾಃ ಸರ್ವೇ ಪುತ್ರೈಶ್ಚ ತವ ಭಾರತ ।
ಅಗ್ರತಃ ಸರ್ವಸೈನ್ಯಾನಾಂ ವ್ಯೂಹಸ್ಯ ಪ್ರಮುಖೇ ಸ್ಥಿತಾಃ ॥೩॥

ಕೃಪರು, ಕೃತವರ್ಮ, ಮಹಾರಥನಾದ ಶೈಬ್ಯ, ಶಕುನಿ, ಸೈಂಧವ, ಕಾಂಬೋಜ ರಾಜನಾದ ಸುದಕ್ಷಿಣ, ನಿನ್ನ ಪುತ್ರರಿಂದ ಒಡಗೂಡಿದ ಭೀಷ್ಮರು ಇವರೆಲ್ಲರೂ ಎಲೈ ಭಾರತನೇ, ಸರ್ವ ಸೈನ್ಯಗಳ ವ್ಯೂಹದಲ್ಲಿ ಮುಂಭಾಗದಲ್ಲಿದ್ದರು.

ದ್ರೋಣೋ ಭೂರಿಶ್ರವಾಃ ಶಲ್ಯೋ ಭಗದತ್ತಶ್ಚ ಮಾರಿಷ ।
ದಕ್ಷಿಣಂ ಪಕ್ಷಮಾಶ್ರಿತ್ಯ ಸ್ಥಿತಾ ವ್ಯೂಹಸ್ಯ ದಂಶಿತಾಃ ॥೪॥

ಎಲೈ ಪೂಜ್ಯನೇ, ದ್ರೋಣರು, ಭೂರಿಶ್ರವ, ಶಲ್ಯ ಮತ್ತು ಭಗದತ್ತ ಇವರು ವ್ಯೂಹದ ಬಲಭಾಗವನ್ನು ಆಶ್ರಯಿಸಿ ಸನ್ನದ್ಧರಾದರು.

ಅಶ್ವತ್ಥಾಮಾ ಸೋಮದತ್ತ ಅವಂತ್ಯೌ ಚ ಮಹಾರಥೌ ।
ಮಹತ್ಯಾ ಸೇನಯಾ ಯುಕ್ತಾ ವಾಮಂ ಪಕ್ಷಮಪಾಲಯನ್ ॥೫॥

ಅಶ್ವತ್ಥಾಮರು, ಸೋಮದತ್ತ ಮತ್ತು ಅವಂತಿದೇಶದ ಮಹಾರಥರಿಬ್ಬರು ದೊಡ್ಡ ಸೇನೆಯಿಂದ ಕೂಡಿ ಎಡಭಾಗವನ್ನು ರಕ್ಷಿಸಿದರು.

ದುರ್ಯೋಧನೋ ಮಹಾರಾಜ ತ್ರಿಗರ್ತೈಃ ಸರ್ವತೋ ವೃತಃ ।
ವ್ಯೂಹಮಧ್ಯೇ ಸ್ಥಿತೋ ರಾಜನ್ ಪಾಂಡವಾನ್ ಪ್ರತಿ ಭಾರತ ॥೬॥

ಎಲೈ ಮಹಾರಾಜನೇ, ಭಾರತನೇ, ಸರ್ವತ್ರಿಗರ್ತರಿಂದಲೂ ಪರಿವೃತನಾಗಿ ದುರ್ಯೋಧನನು ವ್ಯೂಹಮಧ್ಯದಲ್ಲಿ ನಿಂತು ಪಾಂಡವರನ್ನು ಎದುರಿಸಿದನು.

ಅಲಂಬುಸೋ ರಥಶ್ರೇಷ್ಠಃ ಶ್ರುತಾಯುಶ್ಚ ಮಹಾರಥಃ ।
ಪೃಷ್ಠತಃ ಸರ್ವಸೈನ್ಯಾನಾಂ ಸ್ಥಿತೌ ವ್ಯೂಹಸ್ಯ ದಂಶಿತೌ ॥೭॥

ಶ್ರೇಷ್ಠರಥನಾದ ಅಲಂಬುಸನು ಮತ್ತು ಮಹಾರಥನಾದ ಶ್ರುತಾಯುವು ವ್ಯೂಹದಲ್ಲಿ ಎಲ್ಲ ಸೈನ್ಯಗಳ ಹಿಂಭಾಗದಲ್ಲಿ ಸನ್ನದ್ಧರಾಗಿದ್ದರು.

ಏವಮೇತೇ ತದಾ ವ್ಯೂಹಂ ಕೃತ್ವಾ ಭಾರತ ತಾವಕಾಃ ।
ಸನ್ನದ್ಧಾಃ ಸಮದೃಶ್ಯಂತ ಪ್ರತಪಂತ ಇವಾಗ್ನಯಃ ॥೮॥

ಎಲೈ ಭಾರತನೇ, ಹೀಗೆ ನಿನ್ನವರೆಲ್ಲರೂ ಆಗ ವ್ಯೂಹವನ್ನು ಮಾಡಿ ಯುದ್ಧ ಸನ್ನದ್ಧರಾಗಿ ಜ್ವಲಿಸುವ ಅಗ್ನಿಗಳಂತೆ ಕಂಡುಬಂದರು.

ತಥಾ ಯುಧಿಷ್ಠಿರೋ ರಾಜಾ ಭೀಮಸೇನಶ್ಚ ಪಾಂಡವಃ ।
ನಕುಲಃ ಸಹದೇವಶ್ಚ ಮಾದ್ರೀಪುತ್ರಾವುಭಾವಪಿ ।
ಅಗ್ರತಃ ಸರ್ವಸೈನ್ಯಾನಾಂ ಸ್ಥಿತಾ ವ್ಯೂಹಸ್ಯ ದಂಶಿತಾಃ ॥೯॥

ಹಾಗೆಯೇ, ರಾಜನಾದ ಯುಧಿಷ್ಠಿರನೂ, ಪಾಂಡುಪುತ್ರನಾದ ಭೀಮಸೇನ, ಮಾದ್ರೀಪುತ್ರರಾದ ನಕುಲ-ಸಹದೇವರು ತಮ್ಮ ವ್ಯೂಹದ ಮುಂಭಾಗದಲ್ಲಿ ಸನ್ನದ್ಧರಾದರು.

ಧೃಷ್ಟದ್ಯುಮ್ನೋ ವಿರಾಟಶ್ಚ ಸಾತ್ಯಕಿಶ್ಚ ಮಹಾರಥಃ ।
ಸ್ಥಿತಾಃ ಸೈನ್ಯೇನ ಮಹತಾ ಪರಾನೀಕವಿನಾಶನಾಃ ॥೧೦॥

ಧೃಷ್ಟದ್ಯುಮ್ನ, ವಿರಾಟ, ಮಹಾರಥನಾದ ಸಾತ್ಯಕಿ-ಪರಸೈನ್ಯ ವಿನಾಶಕರಾದ ಇವರೂ ಸಹ ದೊಡ್ಡ ಸೈನ್ಯದಿಂದ ಕೂಡಿ ನಿಂತರು.

ಶಿಖಂಡೀ ವಿಜಯಶ್ಚೈವ ರಾಕ್ಷಸಶ್ಚ ಘಟೋತ್ಕಚಃ ।
ಚೇಕಿತಾನೋ ಮಹಾಬಾಹುಃ ಕುಂತಿಭೋಜಶ್ಚ ವೀರ್ಯವಾನ್ ।
ಸ್ಥಿತಾ ರಣೇ ಮಹಾರಾಜ ಮಹತ್ಯಾ ಸೇನಯಾ ವೃತಾಃ ॥೧೧॥

ಎಲೈ ಮಹಾರಾಜನೇ, ಶಿಖಂಡಿ, ಅರ್ಜುನ, ರಾಕ್ಷಸನಾದ ಘಟೋತ್ಕಚ, ಮಹಾಬಾಹುವಾದ ಚೇಕಿತಾನ, ಪರಾಕ್ರಮಶಾಲಿಯಾದ ಕುಂತಿಭೋಜ- ಇವರೂ ದೊಡ್ಡ ಸೈನ್ಯದಿಂದ ಕೂಡಿ ರಣರಂಗದಲ್ಲಿ ನಿಂತರು.

ಅಭಿಮನ್ಯುರ್ಮಹೇಷ್ವಾಸೋ ದ್ರುಪದಶ್ಚ ಮಹಾರಥಃ ।
ಕೇಕಯಾ ಭ್ರಾತರಃ ಪಂಚ ಸ್ಥಿತಾ ಯುದ್ಧಾಯ ದಂಶಿತಾಃ ॥೧೨॥

ಮಹಾಧನುರ್ಧಾರಿಯಾದ ಅಭಿಮನ್ಯು, ಮಹಾರಥರಾದ ದ್ರುಪದ, ಕೇಕಯ ದೇಶದ ಐವರು ಸಹೋದರರು- ಇವರೂ ಯುದ್ಧಕ್ಕೆ ಸನ್ನದ್ಧರಾಗಿ ನಿಂತರು.

ಏವಂ ತೇಽಪಿ ಮಹಾವ್ಯೂಹಂ ಪ್ರತಿವ್ಯೂಹ್ಯ ಸುದುರ್ಜಯಮ್ ।
ಪಾಂಡವಾಃ ಸಮರೇ ಶೂರಾಃ ಸ್ಥಿತಾ ಯುದ್ಧಾಯ ಮಾರಿಷ ॥೧೩॥

ಎಲೈ ಪೂಜ್ಯನೇ, ಹೀಗೆ ಅವರೂ ಸಹ ಭೀಷ್ಮರ ವ್ಯೂಹಕ್ಕೆ ಪ್ರತಿಯಾಗಿ ಜಯಿಸಲು ಬಹಳ ಕಷ್ಟಸಾಧ್ಯವಾದ ಮಹಾವ್ಯೂಹವನ್ನು ರಚಿಸಿ ರಣಶೂರರಾದ ಪಾಂಡವರು ಯುದ್ಧಕ್ಕೆ ಸನ್ನದ್ಧರಾದರು.

ತಾವಕಾಸ್ತು ರಣೇ ಯತ್ತಾಃ ಸಹಸೇನಾ ನರಾಧಿಪಾಃ ।
ಅಭ್ಯುದ್ಯಯೂ ರಣೇ ಪಾರ್ಥಾನ್ ಭೀಷ್ಮಂ ಕೃತ್ವಾಗ್ರತೋ ನೃಪ ॥೧೪॥

ಎಲೈ ರಾಜನೇ, ನಿನ್ನವರಾದ ರಾಜರಾದರೋ ತಮ್ಮ ಸೈನ್ಯದಿಂದ ಕೂಡಿ ರಣರಂಗದಲ್ಲಿ ಜಾಗರೂಕರಾಗಿದ್ದು, ಭೀಷ್ಮರನ್ನು ಮುಂದೆ ಮಾಡಿಕೊಂಡು ಪಾಂಡವರ ಮೇಲೆ ಎರಗಿದರು.

ತಥೈವ ಪಾಂಡವಾ ರಾಜನ್ ಭೀಮಸೇನಪುರೋಗಮಾಃ ।
ಭೀಷ್ಮಂ ಯುದ್ಧಮಭೀಪ್ಸಂತಃ ಸಂಗ್ರಾಮೇ ವಿಜಿಗೀಷವಃ ॥೧೫॥

ಕ್ಷ್ವೇಡಾಃ ಕಿಲಕಿಲಾಶಬ್ದಾನ್ ಕ್ರಕಚಾನ್ ಗೋವಿಷಾಣಕಾಃ ।
ಭೇರೀಮೃದಂಗಪಣವಾನ್ಹಾದಯಂತಶ್ಚ ಪುಷ್ಕರಾನ್ ।
ಪಾಂಡವಾ ಅಭ್ಯಧಾವಂತ ನದಂತೋ ಭೈರವಾನ್ ರವಾನ್ ॥೧೬॥

ಎಲೈ ರಾಜನೇ, ಹಾಗೆಯೇ ಭೀಮಸೇನ ಮೊದಲಾದ ಪಾಂಡವರೂ ಸಹ ಯುದ್ಧಾಕಾಂಕ್ಷಿಗಳಾದ ಭೀಷ್ಮರನ್ನು ಯುದ್ಧದಲ್ಲಿ ಗೆಲ್ಲಲು ಬಯಸಿ, ಸಿಂಹನಾದಗಳನ್ನೂ ಕಿಲಕಿಲ ಶಬ್ದಗಳನ್ನೂ ಮಾಡುತ್ತಾ, ಕರಗಸ, ಗೋವಿಷಾಣ, ಭೇರೀ-ಮೃದಂಗ-ಪಣವಗಳು, ಪುಷ್ಕರಗಳು ಇವುಗಳ ನಾದವನ್ನು ಮಾಡುತ್ತಾ, ಭಯಂಕರವಾದ ನಾದಗಳನ್ನು ಮಾಡುತ್ತಾ ನಿನ್ನ ಸೈನ್ಯದ ಕಡೆಗೆ ಧಾವಿಸಿದರು.

ಭೇರೀಮೃದಂಗಶಂಖಾನಾಂ ದುಂದುಭೀನಾಂ ಚ ನಿಸ್ವನೈಃ ।
ಉತ್ಕೃಷ್ಟಸಿಂಹನಾದೈಶ್ಚ ವಲ್ಗಿತೈಶ್ಚ ಪೃಥಗ್ವಿಧೈಃ ॥೧೭॥
ಭಯಂ ಪ್ರತಿನದಂತಸ್ತಾನಭ್ಯಗಚ್ಛಾಮ ಸತ್ವರಾಃ ।
ಸಹಸೈವಾಭಿಸಂಕ್ರುದ್ಧಾಸ್ತದಾಪೀತ್ ತುಮುಲಂ ಮಹತ್ ॥೧೮॥

ನಾವೂ ಸಹ ಭೇರೀ-ಮೃದಂಗ-ಶಂಖಗಳಿಂದಲೂ, ದುಂದುಭಿಗಳ ಧ್ವನಿಯಿಂದಲೂ, ಉತ್ಕೃಷ್ಟವಾದ ಸಿಂಹನಾದಗಳಿಂದಲೂ, ವಿವಿಧವಾದ ವೀರನಾದಗಳಿಂದಲೂ ಪಾಂಡವಸೇನೆಗೆ ಭಯವುಂಟಾಗುವಂತೆ ಪ್ರತಿಯಾಗಿ ಗರ್ಜಿಸುತ್ತಾ ಶೀಘ್ರವಾಗಿ ಪಾಂಡವರ ಕಡೆಗೆ ಕ್ರುದ್ಧರಾಗಿ ಧಾವಿಸಿದವು. ಅನಂತರ ತೀವ್ರವಾದ ಯುದ್ಧವು ಜರುಗಿತು.

ತತೋಽನ್ಯೋನ್ಯಂ ಪ್ರಧಾವಂತಃ ಸಂಪ್ರಹಾರಂ ಪ್ರಚಕ್ರಿರೇ ।
ತತಃ ಶಬ್ದೇನ ಮಹತಾ ಪ್ರಚಕಂಪೇ ವಸುಂಧರಾ ॥೧೯॥

ಆಗ ಪರಸ್ಪರವಾಗಿ ಎರಗುತ್ತಾ ಯೋಧರು ಪ್ರಹಾರಗಳನ್ನು ಮಾಡಿದರು. ಅದರಿಂದ ಉಂಟಾದ ದೊಡ್ಡ ಶಬ್ದದಿಂದ ಭೂಮಿಯು ನಡುಗಿತು.

ಪಕ್ಷಿಣಶ್ಚ ಮಹಾಘೋರಂ ವ್ಯಾಹರಂತೋ ವಿಭೀಷಣಮ್ ।
ಸಪ್ರಭಶ್ಚೋದಿತಃ ಸೂರ್ಯೋ ನಿಷ್ಪ್ರಭಃ ಸಮಪದ್ಯತ ॥೨೦॥

ಪಕ್ಷಿಗಳೂ ಸಹ ಬಹಳ ಘೋರವಾದ ಶಬ್ದವನ್ನು ಮಾಡುತ್ತಾ ಹಾರಾಡಿದವು. ಕಾಂತಿಯುಕ್ತನಾಗಿ ಉದಯಿಸಿದ ಸೂರ್ಯನು ನಿಷ್ಪ್ರಭನಾದನು.

ವವುಶ್ಚ ತುಮುಲಾ ವಾತಾಃ ಶಂಸಂತಃ ಸುಮಹದ್ಭಯಮ್ ।
ಘೋರಾಶ್ಚ ಘೋರನಿರ್ಹ್ರಾದಾಃ ಶಿವಾಸ್ತತ್ರ ವವಾಶಿರೇ ।
ವೇದಯಂತ್ಯೋ ಮಹಾರಾಜ ಮಹದ್ ವೈಶಸಮಾಗತಮ್ ॥೨೧॥

ದೊಡ್ಡ ಭಯವನ್ನು ಸೃಷ್ಟಿಸುತ್ತಾ ವಾಯುವು ತೀವ್ರವಾಗಿ ಬೀಸಿತು. ಎಲೈ ಮಹಾರಾಜನೇ, ಘೋರವಾದ ಹೆಣ್ಣುನರಿಗಳು ದೊಡ್ಡ ಹಿಂಸೆಯು ಪ್ರಾಪ್ತವಾಗಿದೆ ಎಂದು ಸೂಚಿಸುತ್ತಾ ಭಯಂಕರವಾಗಿ ನಾದಗಳನ್ನು ಮಾಡಿದವು.

ದಿಶಃ ಪ್ರಜ್ವಲಿತಾ ರಾಜನ್ ಪಾಂಸುವರ್ಷಂ ಪಪಾತ ಚ ।
ರುಧಿರೇಣ ಸಮುನ್ಮಿಶ್ರಮಸ್ಥಿವರ್ಷಂ ತಥೈವ ಚ ॥೨೨॥

ಎಲೈ ರಾಜನೇ, ದಿಕ್ಕುಗಳು ಪ್ರಜ್ವಲಿಸಿದವು. ಧೂಳಿನ ಮಳೆಯು ಬಿದ್ದಿತು. ರಕ್ತದಿಂದ ಮಿಶ್ರಿತವಾದ ಅಸ್ಥಿಗಳ ಮಳೆಯೂ ಉಂಟಾಯಿತು.

ರುದತಾಂ ವಾಹನಾನಾಂ ಚ ನೇತ್ರೇಭ್ಯಃ ಪ್ರಾಪತಜ್ಜಲಮ್ ।
ಸುಸ್ರುವುಶ್ಚ ಶಕೃನ್ಮೂತ್ರಂ ಪ್ರಧ್ಯಾಯಂತೋ ವಿಶಾಂಪತೇ ॥೨೩॥

ರೋದಿಸುವ ವಾಹನಗಳ ಕಣ್ಣುಗಳಿಂದ ನೀರು ಸುರಿಯಿತು. ಎಲೈ ರಾಜನೇ, ಮೌನವಾಗಿ ಧ್ಯಾನಿಸುತ್ತಾ ನಿಂತ ವಾಹನಗಳು ಮಲ-ಮೂತ್ರಗಳನ್ನು ಸ್ರವಿಸಿದವು.

ಅಂತರ್ಹಿತಾ ಮಹಾನಾದಾಃ ಶ್ರೂಯಂತೇ ಭರತರ್ಷಭ ।
ರಕ್ಷಸಾಂ ಪುರುಷಾದಾನಾಂ ನದತಾಂ ಭೈರವಾನ್ ರವಾನ್ ॥೨೪॥

ಎಲೈ ಭರತಶ್ರೇಷ್ಠನೇ, ಆ ಮಹಾನಾದಗಳು ಭೈರವವಾದ ನಾದಗಳನ್ನು ಮಾಡುವ ರಾಕ್ಷಸರ ಗರ್ಜನೆಗಳಿಂದ ಮುಳುಗಿಹೋಗುವುದು ಕೇಳಿ ಬಂದಿತು.

ಸಂಪತಂತಃ ಸ್ಮ ದೃಶ್ಯಂತೇ ಗೋಮಾಯುಬಕವಾಯಸಾಃ ।
ಶ್ವಾನಶ್ಚ ವಿವಿಧೈರ್ನಾದೈರ್ಭಷಂತಸ್ತತ್ರ ತಸ್ಥಿರೇ ॥೨೫॥

ನರಿಗಳು, ಬಕಪಕ್ಷಿಗಳು ಮತ್ತು ಕಾಗೆಗಳು ಹಾರಾಡುವುದು ಕಂಡುಬಂದಿತು. ನಾಯಿಗಳು ಅನೇಕ ವಿಧವಾಗಿ ಬೊಗಳುತ್ತಾ ಅಲ್ಲಿ ನಿಂತವು.

ಜ್ವಲಿತಾಶ್ಚ ಮಹೋಲ್ಕಾ ವೈ ಸಮಾಹತ್ಯ ದಿವಾಕರಮ್ ।
ನಿಪೇತುಃ ಸಹಸಾ ಭೂಮೌ ವೇದಯಾನಾ ಮಹದ್ಭಯಮ್ ॥೨೬॥

ಜ್ವಲಿಸುವ ದೊಡ್ಡ ಉಲ್ಕೆಗಳು ದೊಡ್ಡ ಭಯವನ್ನು ಸೂಚಿಸುತ್ತಾ ಸೂರ್ಯನನ್ನು ಬಡಿದು ಭೂಮಿಯ ಮೇಲೆ ತಕ್ಷಣದಲ್ಲಿ ಬಿದ್ದವು.

ಮಹಾಂತ್ಯನೀಕಾನಿ ಮಹಾಸಮುದ್ಯಮೇ
ಸಮಾಗಮೇ ಪಾಂಡವಧಾರ್ತರಾಷ್ಟ್ರಯೋಃ ।
ಚಕಂಪಿರೇ ಶಂಖಮೃದಂಗನಿಸ್ವನೈಃ
ಪ್ರಕಂಪಿತಾನೀವ ವನಾನಿ ವಾಯುನಾ ॥೨೭॥

ಪಾಂಡವ-ಕೌರವರಿಗೆ ಅಂತಹ ದೊಡ್ಡ ಸಂಘರ್ಷ ಉಂಟಾದಾಗ ಶಂಖ-ಮೃದಂಗ ಶಬ್ದಗಳಿಂದ ಕೂಡಿದ ಆ ದೊಡ್ಡ ಸೈನ್ಯಗಳು ಬಿರುಗಾಳಿಗೆ ಸಿಕ್ಕಿದ ಕಾಡುಗಳಂತೆ ಅಲುಗಾಡುವುದು ಕಂಡುಬಂದಿತು.

ನರೇಂದ್ರನಾಗಾಶ್ವಸಮಾಕುಲಾನಾಮ್
ಅಭ್ಯಾಯತೀನಾಮಭಿವೇ ಮುಹೂರ್ತೇ ।
ಬಭೂವ ಘೋಷಸ್ತುಮುಲಶ್ಚಮೂನಾಂ
ವಾತೋದ್ಧುತಾನಾಮಿವ ಸಾಗರಾಣಾಮ್ ॥೨೮॥

ರಾಜರಿಂದಲೂ, ಗಜಗಳಿಂದಲೂ, ಅಶ್ವಗಳಿಂದಲೂ ನಿಬಿಡವಾದ ವಿಸ್ತಾರವಾದ ಸೈನ್ಯದಲ್ಲಿ ಉಂಟಾದ ಆ ತೀವ್ರವಾದ ಶಬ್ದವು ಬಿರುಗಾಳಿಗೆ ಎದ್ದ ಸಮುದ್ರದ ಗರ್ಜನೆಯಂತೆ ಆ ಅಮಂಗಳ ಮುಹೂರ್ತದಲ್ಲಿ ಕೇಳಿಬಂದಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಷಣ್ಣವತಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಷೋಡಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ತೊಂಬತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯ - ೨೫ನೇ ಅಧ್ಯಾಯ

ತದ್ ಯುದ್ಧಮಾಸೀನ್ನೃಪಪಾರ್ಥಪುತ್ರಯೋಃ
ವಿಚಿತ್ರಮತ್ಯದ್ಭುತಮುಗ್ರರೂಪಮ್ ।
ಸಮಂ ಚಿರಂ ತತ್ರ ಧನುಶ್ಚಕರ್ತ
ಧ್ವಜಂ ಚ ರಾಜಾ ಸಹಸಾऽಭಿಮನ್ಯೋಃ ॥೧೦೬॥

ದುರ್ಯೋಧನ-ಅಭಿಮನ್ಯುಗಳ ಆ ಯುದ್ಧ ವಿಚಿತ್ರ, ಅತ್ಯದ್ಭುತ ಸ್ವರೂಪದ್ದಾಗಿತ್ತು. ಭಯಂಕರವಾಗಿತ್ತು. ದೀರ್ಘಕಾಲದವರೆಗೆ ಸಮವಾಗಿಯೇ ಇತ್ತು. ಬಳಿಕ ದುರ್ಯೋಧನ ಅಭಿಮನ್ಯುವಿನ ಬಿಲ್ಲನ್ನೂ ಧ್ವಜವನ್ನೂ ಬಲಾತ್ಕಾರವಾಗಿ ಕತ್ತರಿಸಿದ.

ಅಥೈನಮುಗ್ರೈಶ್ಚ ಶರೈರ್ವವರ್ಷ
ಸೂತಂ ಚ ತಸ್ಯಾಶು ಜಘಾನ ವೀರಃ ।
ತದಾऽऽಸದದ್ ಭೀಮಸೇನೋ ನೃಪಂ ತಂ
ಜಘಾನ ಚಾಶ್ವಾನ್ ಧೃತರಾಷ್ಟ್ರಜಸ್ಯ ॥೧೦೭॥

ಬಳಿಕ ವೀರ ದುರ್ಯೋಧನ ಅಭಿಮನ್ಯುವಿನ ಮೇಲೆ ಭಯಂಕರ ಬಾಣಗಳ ಮಳೆಗರೆದ. ಅವನ ಸಾರಥಿಯನ್ನು ಬೇಗನೆ ಕೊಂದ. ಆಗ ಭೀಮಸೇನ ದುರ್ಯೋಧನನನ್ನು ಆಕ್ರಮಿಸಿದ. ಅವನ ಕುದುರೆಗಳನ್ನು ಕೊಂದ.

ದ್ರೋಣೋ ದ್ರೌಣಿರ್ಭಗದತ್ತಃ ಕೃಪಶ್ಚ
ಸಚಿತ್ರಸೇನಾ ಅಭ್ಯಯುರ್ಭೀಮಸೇನಮ್ ।
ಸರ್ವಾಂಶ್ಚ ತಾನ್ ವಿಮುಖೀಕೃತ್ಯ ಭೀಮಃ
ಸ ಚಿತ್ರಸೇನಾಯ ಗದಾಂ ಸಮಾದದೇ ॥೧೦೮॥

ದ್ರೋಣರು, ಅಶ್ವತ್ಥಾಮರು, ಭಗದತ್ತ, ಕೃಪರು ಮತ್ತು ಚಿತ್ರಸೇನನೆಂಬ ದುರ್ಯೋಧನನ ಸೋದರ ಇವರು ಭೀಮನನ್ನು ಆಕ್ರಮಿಸಿದರು. ಅವರೆಲ್ಲರನ್ನೂ ಹಿಮ್ಮೆಟ್ಟಿಸಿ ಭೀಮ ಚಿತ್ರಸೇನನ ವಧೆಗೆ ಗದೆ ಬೀಸಿದ.

ತಾಮುದ್ಯತಾಂ ವೀಕ್ಷ್ಯ ಪರಾದ್ರವನ್ ತೇ
ಸ ಚಿತ್ರಸೇನಶ್ಚ ರಥಾದವಪ್ಲುತಃ ।
ಸಂಚೂರ್ಣಿತೋ ಗದಯಾ ತದ್ ರಥಶ್ಚ
ತಜ್ಜೀವನೇನೋದ್ಪಪಿತಾಶ್ಚ ಕೌರವಾಃ ॥೧೦೯॥

ಬೀಸಿ ಒಗೆದ ಆ ಗದೆಯನ್ನು ಕಂಡು ಎಲ್ಲರೂ ಪಲಾಯನ ಮಾಡಿದರು. ಚಿತ್ರಸೇನ ರಥದಿಂದ ಕೆಳಗೆ ಹಾರಿದ. ಅವನ ರಥ ಗದೆಯಿಂದ ಪುಡಿಯಾಯಿತು. ಚಿತ್ರಸೇನ ಬದುಕಿದನೆಂದು ಕೌರವರು ಹರ್ಷಿತರಾದರು.

★ ★ ★ ★ ★

ತೊಂಬತ್ತೇಳನೆಯ ಅಧ್ಯಾಯ

ಅಭಿಮನ್ಯುವಿನ ಪರಾಕ್ರಮ. ಅಲಂಬುಸನ ಜೊತೆಯಲ್ಲಿ ಅವನ ಯುದ್ಧ.

ಸಂಜಯಃ

ಅಭಿಮನ್ಯೂ ರಥೋದಾರಃ ಪಿಶಂಗೈಸ್ತುರಗೋತ್ತಮೈಃ ।
ಅಭಿದುದ್ರಾವ ತೇಜಸ್ವೀ ದುರ್ಯೋಧನಬಲಂ ಮಹತ್ ।
ವಿಕಿರನ್ ಶರವರ್ಷಾಣಿ ವಾರಿಧಾರಾ ಇವಾಂಬುದಃ ॥೧॥

ಸಂಜಯ– ತೇಜಸ್ವಿಯೂ, ರಥಶ್ರೇಷ್ಠನೂ ಆದ ಅಭಿಮನ್ಯುವು ಪಿಶಂಗ ವರ್ಣದ ಅಶ್ವಗಳನ್ನು ಹೂಡಿದ ರಥದಲ್ಲಿ ಮೋಡವು ಮಳೆಯ ಧಾರೆಯನ್ನು ಸುರಿಸುವಂತೆ ಬಾಣಗಳ ಮಳೆಯನ್ನು ಸುರಿಸುತ್ತಾ ದೊಡ್ಡದಾದ ದುರ್ಯೋಧನನ ಸೈನ್ಯವನ್ನು ಕುರಿತು ವೇಗದಿಂದ ಧಾವಿಸಿದನು.

ನ ಶೇಕುಃ ಸಮರೇ ಕ್ರುದ್ಧಂ ಸೌಭದ್ರಮರಿಸೂದನಮ್ ।
ಶಸ್ತ್ರೌಘಿಣಂ ಗಾಹಮಾನಂ ಸೇನಾಸಾಗರಮಕ್ಷಯಮ್ ।
ನಿವಾರಯಿತುಮಪ್ಯಾಜೌ ತ್ವದೀಯಾಃ ಕುರುಪುಂಗವಾಃ ॥೨॥

ನಿನ್ನವರಾದ ಕುರುಶ್ರೇಷ್ಠರು ಯುದ್ಧದಲ್ಲಿ ಕೋಪಗೊಂಡು ಅಪಾರವಾದ ಸೈನ್ಯಸಾಗರವನ್ನು ಪ್ರವೇಶಿಸಲು ಮುನ್ನುಗ್ಗುತ್ತಿರುವ ಶತ್ರುಸೂದನನೂ, ಶಸ್ತ್ರಸಮೂಹ ಸಂಪನ್ನನೂ ಆದ ಅಭಿಮನ್ಯುವನ್ನು ತಡೆಯಲು ಸಾಧ್ಯವಾಗಲಿಲ್ಲ.

ತೇನ ಮುಕ್ತಾ ರಣೇ ರಾಜನ್ ಶರಾಃ ಶತ್ರುನಿಬರ್ಹಣಾಃ ।
ಕ್ಷತ್ರಿಯಾನನಯನ್ ಶೂರಾನ್ ಪ್ರೇತರಾಜನಿವೇಶನಮ್ ॥೩॥

ಎಲೈ ರಾಜನೇ, ಅವನಿಂದ ಪ್ರಯುಕ್ತವಾದ ಶತ್ರುಸಂಹಾರಕವಾದ ಬಾಣಗಳು ಶೂರರಾದ ಕ್ಷತ್ರಿಯರನ್ನು ಯಮಪಟ್ಟಣಕ್ಕೆ ಕಳುಹಿಸಿದವು.

ಯಮದಂಡೋಪಮಾನ್ ಘೋರಾನ್ ಜ್ವಲನಾಶೀವಿಷೋಪಮಾನ್ ।
ಸೌಭದ್ರಃ ಸಮರೇ ಕ್ರುದ್ಧಃ ಪ್ರೇಷಯಾಮಾಸ ಸಾಯಕಾನ್ ॥೪॥

ಯುದ್ಧದಲ್ಲಿ ಕೋಪಗೊಂಡ ಅಭಿಮನ್ಯುವು ಯಮದಂಡದಂತೆ, ಅಗ್ನಿಯಂತೆ, ಸರ್ಪಗಳಂತೆ ಘೋರವಾಗಿದ್ದ ಬಾಣಗಳನ್ನು ಶತ್ರುಗಳ ಮೇಲೆ ಪ್ರಯೋಗಿಸಿದನು.

ರಥಿನಂ ಚ ರಥಾತ್ ತೂರ್ಣಂ ಹಯಪೃಷ್ಠಾಚ್ಚ ಸಾದಿನಮ್ ।
ಗಜಾರೋಹಾಂಶ್ಚ ಸಗಜಾನ್ ಪಾತಯಾಮಾಸ ಫಾಲ್ಗುನಿಃ ॥೫॥

ಅರ್ಜುನನ ಪುತ್ರನಾದ ಅವನು ಶೀಘ್ರವಾಗಿ ರಥಿಕನನ್ನು ರಥದಿಂದಲೂ, ಅಶ್ವಾರೋಹಿಯನ್ನು ಅಶ್ವದಿಂದಲೂ, ಗಜಾರೋಹಿಗಳನ್ನು ಗಜಗಳಿಂದಲೂ ಕೆಡವಿದನು.

ತಸ್ಯ ತತ್ ಕುರ್ವತಃ ಕರ್ಮ ಮಹತ್ ಸಂಖೇಽದ್ಭುತಂ ನೃಪಾಃ ।
ಪೂಜಯಾಂಚಕ್ರಿರೇ ಹೃಷ್ಟಾಃ ಪ್ರಶಶಂಸುಶ್ಚ ಫಾಲ್ಗುನಿಮ್ ॥೬॥

ಯುದ್ಧದಲ್ಲಿ ಅಂತಹ ಅದ್ಭುತವಾದ ಮತ್ತು ದೊಡ್ಡದಾದ ಕಾರ್ಯವನ್ನು ಮಾಡುವುದನ್ನು ನೋಡಿ ಸಂತೋಷಗೊಂಡ ರಾಜರು ಅಭಿಮನ್ಯುವನ್ನು ಗೌರವಿಸಿದರು.

ತಾನ್ಯನೀಕಾನಿ ಸೌಭದ್ರೋ ದ್ರಾವಯನ್ ಬಹ್ವಶೋಭತ ।
ತೂಲರಾಶಿಮಿವಾಧೂಯ ಮಾರುತಃ ಸರ್ವತೋದಿಶಮ್ ॥೭॥

ಆ ಸೈನ್ಯಗಳನ್ನು ಚದುರಿಸುವ ಅಭಿಮನ್ಯುವು ಹತ್ತಿಯ ರಾಶಿಯನ್ನು ಎಲ್ಲ ದಿಕ್ಕುಗಳಿಗೂ ಹಾರಿಸುವ ವಾಯುವಿನಂತೆ ಶೋಭಿಸಿದನು.

ತೇನ ವಿದ್ರಾವ್ಯಮಾಣಾನಿ ತವ ಸೈನ್ಯಾನಿ ಭಾರತ ।
ತ್ರಾತಾರಂ ನಾಧ್ಯಗಚ್ಛಂತ ಪಂಕೇ ಮಗ್ನಾ ಇವ ದ್ವಿಪಾಃ ॥೮॥

ಎಲೈ ಭಾರತನೇ, ಅವನಿಂದ ಚದುರಿಸಲ್ಪಡುವ ನಿನ್ನ ಸೈನ್ಯಗಳು ಕೆಸರಿನಲ್ಲಿ ಮುಳುಗಿದ ಗಜದಂತೆ ರಕ್ಷಕನನ್ನು ಕಾಣಲಿಲ್ಲ.

ವಿದ್ರಾವ್ಯ ಸರ್ವಸೈನ್ಯಾನಿ ತಾವಕಾನಿ ನರೋತ್ತಮಃ ।
ಅಭಿಮನ್ಯುಃ ಸ್ಥಿತೋ ರಾಜನ್ ವಿಧೂಮೋಽಗ್ನಿರಿವ ಜ್ವಲನ್ ॥೯॥

ಎಲೈ ರಾಜನೇ, ನರಶ್ರೇಷ್ಠನಾದ ಅಭಿಮನ್ಯುವು ನಿನ್ನ ಸೈನ್ಯವನ್ನೆಲ್ಲಾ ಓಡಿಸಿ, ಧೂಮರಹಿತ ಅಗ್ನಿಯಂತೆ ಜ್ವಲಿಸುತ್ತಾ ನಿಂತನು.

ನ ಚೈನಂ ತಾವಕಾಃ ಸರ್ವೇ ವಿಷೇಹುರರಿಘಾತಿನಮ್ ।
ಪ್ರದೀಪ್ತಂ ಪಾವಕಂ ಯದ್ವತ್ ಪತಂಗಾಃ ಕಾಲಚೋದಿತಾಃ ॥೧೦॥

ಮೃತ್ಯುಪ್ರೇರಿತವಾದ ಪತಂಗಗಳು ಜ್ವಲಿಸುವ ಅಗ್ನಿಯನ್ನು ಸಹಿಸಲು ಸಾಧ್ಯವಿಲ್ಲದಂತೆ, ಶತ್ರುಸಂಹಾರಕನಾದ ಅವನನ್ನು ನಿನ್ನವರೆಲ್ಲರೂ ಸೇರಿ ಸಹಿಸಲು ಸಾಧ್ಯವಾಗಲಿಲ್ಲ.

ಪ್ರಹರನ್ ಸರ್ವಶತ್ರುಭ್ಯಃ ಪಾಂಡವಾನಾಂ ಮಹಾರಥಃ ।
ಅದೃಶ್ಯತ ಮಹೇಷ್ವಾಸಃ ಸವಜ್ರ ಇವ ವಜ್ರಭೃತ್ ॥೧೧॥

ಪಾಂಡವರ ಮಹಾರಥನೂ, ಮಹಾಧನುರ್ಧಾರಿಯೂ ಆದ ಅವನು ತನ್ನ ಎಲ್ಲ ಶತ್ರುಗಳ ಮೇಲೆ ಪ್ರಹಾರವನ್ನು ಮಾಡುತ್ತಾ ವಜ್ರಾಯುಧವನ್ನು ಹಿಡಿದ ಇಂದ್ರನಂತೆ ಕಂಡುಬಂದನು.

ಹೇಮಪೃಷ್ಠಂ ಧನುಶ್ಚಾಸ್ಯ ದದೃಶೇ ಚರತೋ ದಿಶಃ ।
ತೋಯದೇಷು ಯಥಾ ರಾಜನ್ ಭ್ರಾಜಮಾನಾಃ ಶತಹ್ರದಾಃ ॥೧೨॥

ಎಲೈ ರಾಜನೇ, ಎಲ್ಲ ದಿಕ್ಕುಗಳಲ್ಲಿಯೂ ಸಂಚರಿಸುವ ಅವನ ಚಿನ್ನದ ಹಿಡಿಯ ಧನುಸ್ಸು ಮೋಡಗಳ ಮಧ್ಯದಲ್ಲಿ ಹೊಳೆಯುವ ಮಿಂಚುಗಳಂತೆ ಕಂಡುಬಂದಿತು.

ಶರಾಶ್ಚ ನಿಶಿತಾಃ ಪೀತಾ ನಿಶ್ಚರಂತಿ ಸ್ಮ ಸಂಯುಗೇ ।
ವನಾತ್ ಫುಲ್ಲದ್ರುಮಾದ್ ರಾಜನ್ ಭ್ರಮರಾಣಾಮಿವ ವ್ರಜಾಃ ॥೧೩॥

ಎಲೈ ರಾಜನೇ, ಯುದ್ಧದಲ್ಲಿ ಅವನ ಬಿಲ್ಲಿನಿಂದ ಹೊರಹೊಮ್ಮಿದ ಹರಿತವಾದ ಮತ್ತು ಜಲಸಂಸ್ಕೃತವಾದ ಬಾಣಗಳು ಅರಳಿದ ಹೂವಿನ ಮರಗಳ ಕಾಡಿನಿಂದ ಹೊರಹೊಮ್ಮುವ ದುಂಬಿಗಳ ಸಮೂಹದಂತಿದ್ದಿತು.

ತಥೈವ ಚರತಸ್ತಸ್ಯ ಸೌಭದ್ರಸ್ಯ ಮಹಾತ್ಮನಃ ।
ರಥೇನ ಮೇಘಘೋಷೇಣ ದದೃಶುರ್ನಾಂತರಂ ಜನಾಃ ॥೧೪॥

ಹಾಗೆ ಮೇಘಗರ್ಜನೆಯಂತಹ ಗರ್ಜನೆಯುಳ್ಳ ರಥದಿಂದ ಸಂಚರಿಸುವ ಮಹಾತ್ಮನಾದ ಅಭಿಮನ್ಯುವಿನಲ್ಲಿ ಶತ್ರುಪಕ್ಷದವರು ಅಲ್ಪವಾದ ಒಂದು ಅವಕಾಶವನ್ನೂ ಕಾಣಲಿಲ್ಲ.

ಮೋಹಯಿತ್ವಾ ಕೃಪಂ ದ್ರೋಣಂ ದ್ರೌಣಿಂ ಚ ಸ ಬೃಹದ್ಬಲಮ್ ।
ಸೈಂಧವಂ ಚ ಮಹೇಷ್ವಾಸಂ ವ್ಯಚರಲ್ಲಘು ಸುಷ್ಠು ಚ ॥೧೫॥

ಅವನು ಕೃಪರನ್ನೂ, ದ್ರೋಣರನ್ನೂ, ಮಹಾಬಲಿಷ್ಠರಾದ ಅಶ್ವತ್ಥಾಮರನ್ನೂ, ಮಹಾಧನುರ್ಧಾರಿಯಾದ ಸೈಂಧವನನ್ನೂ ಮರುಳುಗೊಳಿಸಿ ಶೀಘ್ರವಾಗಿ ಮತ್ತು ಬಹಳ ಚೆನ್ನಾಗಿ ರಣರಂಗದಲ್ಲಿ ಸಂಚರಿಸಿದನು.

ಮಂಡಲೀಕೃತಮೇವಾಸ್ಯ ಧನುಃ ಪಶ್ಯಾಮ ಮಾರಿಷ ।
ಸೂರ್ಯಮಂಡಲಸಂಕಾಶಂ ತಪತಸ್ತವ ವಾಹಿನೀಮ್ ॥೧೬॥

ಎಲೈ ಪೂಜ್ಯನೇ, ನಿನ್ನ ಸೈನ್ಯವನ್ನು ದಹಿಸುವ ಸೂರ್ಯಮಂಡಲದಂತಿದ್ದ ಅವನ ಧನುಸ್ಸನ್ನು ಯಾವಾಗಲೂ ಮಂಡಲಾಕಾರವಾಗಿರುವುದನ್ನೇ ನೋಡಿದೆವು.

ತಂ ದೃಷ್ಟ್ವಾ ಕ್ಷತ್ರಿಯಾಃ ಶೂರಾಃ ಪ್ರತಪಂತಂ ಶರಾರ್ಚಿಭಿಃ ।
ದ್ವಿಷಲ್ಲುಗ್ನಮಿಮಂ ಲೋಕಂ ಮೇನಿರೇ ತಸ್ಯ ಕರ್ಮಭಿಃ ॥೧೭॥

ತನ್ನ ಬಾಣಗಳ ಜ್ವಾಲೆಗಳಿಂದ ಶತ್ರುಗಳನ್ನು ದಹಿಸುವ ಅವನ ಕಾರ್ಯಗಳನ್ನು ನೋಡಿದ ಶೂರರಾದ ಕ್ಷತ್ರಿಯರು ಈ ಲೋಕದಲ್ಲಿ ಇಬ್ಬರು ಅರ್ಜುನರಿದ್ದಾರೆ ಎಂದು ತಿಳಿದರು.

ತೇನಾರ್ದಿತಾ ಮಹಾರಾಜ ಭಾರತೀ ಸಾ ಮಹಾಚಮೂಃ ।
ಬಭ್ರಾಮ ತತ್ರ ತತ್ರೈವ ಯೋಷಿನ್ಮದಮಶಾದಿವ ॥೧೮॥

ಎಲೈ ಮಹಾರಾಜನೇ, ಅವನಿಂದ ಪೀಡಿತವಾದ ಕೌರವರ ಆ ದೊಡ್ಡ ಸೈನ್ಯವು ಮದವಶಳಾದ ವನಿತೆಯಂತೆ ಅಲ್ಲಲ್ಲಿಯೇ ಗುರಿ ಇಲ್ಲದೆಯೇ ತಿರುಗಾಡಿತು.

ದ್ರಾವಯಿತ್ವಾ ಚ ತತ್ಸೈನ್ಯಂ ಕಂಪಯಿತ್ವಾ ಮಹಾರಥಾನ್ ।
ನಂದಯಾಮಾಸ ಸುಹೃದೋ ಮಯಂ ಜಿತ್ವೇವ ವಾಸವಃ ॥೧೯॥

ಅಭಿಮನ್ಯುವು ಮಹಾರಥರನ್ನು ನಡುಗಿಸಿ, ಆ ನಿನ್ನ ಸೈನ್ಯವನ್ನು ಓಡಿಸಿ, ಮಯಾಸುರನನ್ನು ಗೆದ್ದ ಇಂದ್ರನಂತೆ ತನ್ನ ವಿಶ್ವಾಸಪಾತ್ರರನ್ನು ಸಂತೋಷಗೊಳಿಸಿದನು.

ತೇನ ವಿದ್ರಾವ್ಯಮಾಣಾನಿ ತವ ಸೈನ್ಯಾನಿ ಸಂಯುಗೇ ।
ಚಕ್ರುರಾರ್ತಸ್ವರಂ ಘೋರಂ ಪರ್ಜನ್ಯನಿನದೋಪಮಮ್ ॥೨೦॥

ರಣರಂಗದಲ್ಲಿ ಅವನಿಂದ ಓಡಿಸಲ್ಪಡುವ ನಿನ್ನ ಸೈನ್ಯಗಳು ಮೇಘ ಗರ್ಜನೆಯಂತಹ ಘೋರವಾದ ಆರ್ತನಾದವನ್ನು ಮಾಡಿದವು.

ತಂ ಶ್ರುತ್ವಾ ನಿನದಂ ಘೋರಂ ತವ ಸೈನ್ಯಸ್ಯ ಮಾರಿಷ ।
ಮಾರುತೋದ್ಧೂತವೇಗಸ್ಯ ಸಮುದ್ರಸ್ಯೇವ ಪರ್ವಣಿ ।
ದುರ್ಯೋಧನಸ್ತದಾ ರಾಜಾ ಆರ್ಶ್ಯಶೃಂಗಿಮಭಾಷತ ॥೨೧॥

ಪರ್ವಕಾಲದಲ್ಲಿ ಬಿರುಗಾಳಿಗೆ ಎದ್ದ ಸಮುದ್ರದ ಗರ್ಜನೆಯಂತಿದ್ದ ನಿನ್ನ ಸೈನ್ಯದ ಆ ಗರ್ಜನೆಯನ್ನು ಕೇಳಿ ಎಲೈ ಪೂಜ್ಯನೇ, ರಾಜನಾದ ದುರ್ಯೋಧನನು ಆಗ ಋಷ್ಯಶೃಂಗಾರ ಪುತ್ರನಾದ ಅಲಂಬುಸನನ್ನು ಕುರಿತು ಮಾತನಾಡಿದನು.

ಏಷ ಕಾರ್ಷ್ಣಿರ್ಮಹೇಷ್ವಾಸೋ ದ್ವಿತೀಯ ಇವ ಫಲ್ಗುನಃ ।
ಚಮೂಂ ದ್ರಾವಯತೇ ಕ್ರೋಧಾದ್ ವೃತ್ರೋ ದೇವಚಮೂಮಿವ॥೨೨॥

ಅರ್ಜುನನ ಪುತ್ರನೂ, ಮಹಾಧನುರ್ಧಾರಿಯೂ ಆದ ಈ ಅಭಿಮನ್ಯುವು ಎರಡನೆಯ ಅರ್ಜುನನಂತೆ, ವೃತ್ರನು ದೇವಸೈನ್ಯವನ್ನು ಓಡಿಸಿದಂತೆ ಕ್ರೋಧದಿಂದ ನಮ್ಮ ಸೈನ್ಯವನ್ನು ಓಡಿಸುತ್ತಿದ್ದಾನೆ.

ತಸ್ಯ ನಾನ್ಯಂ ಪ್ರಪಶ್ಯಾಮಿ ಸಂಯುಗೇ ಭೇಷಜಂ ಮಹತ್ ।
ಋತೇ ತ್ವಾಂ ರಾಕ್ಷಸಶ್ರೇಷ್ಠ ಸರ್ವವಿದ್ಯಾಸು ಪಾರಗಮ್ ॥೨೩॥

ಎಲೈ ರಾಕ್ಷಸಶ್ರೇಷ್ಠನೇ, ಸರ್ವವಿದ್ಯಾಪಾರಂಗತನಾದ ನಿನ್ನನ್ನು ಬಿಟ್ಟು ಅವನನ್ನು ಪರಿಹರಿಸಲು ನಾನು ಬೇರೆ ಯಾವ ಶ್ರೇಷ್ಠವಾದ ಉಪಾಯವನ್ನೂ ಕಾಣುತ್ತಿಲ್ಲ.

ಸ ಗತ್ವಾ ತ್ವರಿತಂ ವೀರಂ ಜಹಿ ಸೌಭದ್ರಮಾಹವೇ ।
ವಯಂ ಪಾರ್ಥಾನ್ ಹನಿಷ್ಯಾಮೋ ಭೀಷ್ಮದ್ರೋಣಪುರಃಸರಾಃ ॥೨೪॥

ಅಂತಹ ನೀನು ಶೀಘ್ರವಾಗಿ ಹೋಗಿ ಯುದ್ಧದಲ್ಲಿ ವೀರನಾದ ಅಭಿಮನ್ಯುವನ್ನು ಸೋಲಿಸು. ನಾವು ಭೀಷ್ಮ-ದ್ರೋಣರನ್ನು ಮುಂದೆ ಮಾಡಿಕೊಂಡು ಪಾಂಡವರನ್ನು ಕೊಲ್ಲುವೆವು.

ಸ ಏವಮುಕ್ತೋ ಬಲವಾನ್ ರಾಕ್ಷಸೇಂದ್ರಃ ಪ್ರತಾಪವಾನ್ ।
ಪ್ರಯಯೌ ಸಮರೇ ತೂರ್ಣಂ ತವ ಪುತ್ರಸ್ಯ ಶಾಸನಾತ್ ।
ನರ್ದಮಾನೋ ಮಹಾನಾದಂ ಪ್ರಾವೃಷೀವ ಬಲಾಹಕಃ ॥೨೫॥

ಹೀಗೆ ಹೇಳಲ್ಪಟ್ಟ ರಾಕ್ಷಸಶ್ರೇಷ್ಠನೂ, ಪ್ರತಾಪಶಾಲಿಯೂ ಆದ ಅಲಂಬುಸನು ನಿನ್ನ ಮಗನ ಶಾಸನದಂತೆ, ಮಳೆಗಾಲದ ಮೋಡದಂತೆ ಮಹಾನಾದವನ್ನು ಮಾಡುತ್ತಾ, ಶೀಘ್ರವಾಗಿ ರಣರಂಗದಲ್ಲಿ ಅಭಿಮನ್ಯುವಿನ ಕಡೆಗೆ ಹೊರಟನು.

ತಸ್ಯ ಶಬ್ದೇನ ಮಹತಾ ಪಾಂಡವಾನಾಂ ಮಹದ್ಬಲಮ್ ।
ಪ್ರಾಚಲತ್ ಸರ್ವತೋ ರಾಜನ್ ಪೂರ್ಯಮಾಣ ಇವಾರ್ಣವಃ॥೨೬॥

ಎಲೈ ರಾಜನೇ, ಅವನ ಆ ದೊಡ್ಡ ಶಬ್ದದಿಂದ ಪಾಂಡವರ ದೊಡ್ಡ ಸೈನ್ಯವು ನದಿಗಳು ಬಂದು ಸೇರುವ ಸಮುದ್ರದಂತೆ ಎಲ್ಲ ಕಡೆಯಲ್ಲಿಯೂ ಕ್ಷೋಭೆಗೊಂಡಿತು.

ಬಹವಶ್ಚ ನರಾ ರಾಜಂಸ್ತಸ್ಯ ನಾದೇನ ಭೀಷಿತಾಃ ।
ಪ್ರಿಯಾನ್ ಪ್ರಾಣಾನ್ ಪರಿತ್ಯಜ್ಯ ನಿಪೇತುರ್ಧರಣೀತಳೇ ॥೨೭॥

ಎಲೈ ರಾಜನೇ, ಅವನ ಆ ಮಹಾನಾದದಿಂದ ಹೆದರಿದ ಅನೇಕ ಯೋಧರು ತಮ್ಮ ಪ್ರಿಯ ಪ್ರಾಣಗಳನ್ನು ತ್ಯಜಿಸಿ ಭೂಮಿಯ ಮೇಲೆ ಬಿದ್ದರು.

ಕಾರ್ಷ್ಣಿಶ್ಚಾಪಿ ಮುದಾ ಯುಕ್ತಃ ಪ್ರಗೃಹೀತಶರಾಸನಃ ।
ನೃತ್ಯನ್ನಿವ ರಥೋಪಸ್ಥೇ ತದ್‌ರಕ್ಷಃ ಸಮುಪಾದ್ರವತ್ ॥೨೮॥

ಅಭಿಮನ್ಯುವಾದರೋ ಸಂತೋಷದಿಂದ ಕೂಡಿದವನಾಗಿ, ಕೈಯಲ್ಲಿ ಧನುಸ್ಸನ್ನು ಹಿಡಿದು ರಥದ ಪೀಠದಲ್ಲಿ ಕುಣಿಯುವವನಂತೆ ಆ ರಾಕ್ಷಸನ ಕಡೆಗೆ ಧಾವಿಸಿದನು.

ತತಃ ಸ ರಾಕ್ಷಸಃ ಕ್ರುದ್ಧಃ ಸಂಪ್ರಾಪ್ಯೈವಾರ್ಜುನಿಂ ರಣೇ ।
ನಾತಿದೂರೇ ಸ್ಥಿತಸ್ತಸ್ಯ ದ್ರಾವಯಾಮಾಸ ವೈ ಚಮೂಮ್ ॥೨೯॥

ಅನಂತರ ಕ್ರುದ್ಧನಾದ ಆ ರಾಕ್ಷಸನು ರಣರಂಗದಲ್ಲಿ ಅಭಿಮನ್ಯುವಿನ ಸಮೀಪಕ್ಕೆ ಬಂದು ನಿಂತು ಅವನ ಸೈನ್ಯವನ್ನು ಚದುರಿಸಿದನು.

ಸಾ ವಧ್ಯಮಾನಾ ಸಮರೇ ಪಾಂಡವಾನಾಂ ಮಹಾಚಮೂಃ ।
ಪ್ರತ್ಯುದ್ಯಯೌ ರಣೇ ರಕ್ಷೋ ದೇವಸೇನಾ ಯಥಾ ಬಲಿಮ್ ॥೩೦॥

ಅವನಿಂದ ಪ್ರಹಾರಕ್ಕೆ ಒಳಗಾದ ಪಾಂಡವರ ಸೈನ್ಯವು ರಣರಂಗದಲ್ಲಿ ದೇವತೆಗಳ ಸೈನ್ಯವು ಬಲಿಯ ಮೇಲೆ ಎರಗಿದಂತೆ ಆ ರಾಕ್ಷಸನ ಮೇಲೆ ಎರಗಿತು.

ವಿಮರ್ದಃ ಸುಮಹಾನಾಸೀತ್ ತಸ್ಯ ಸೈನ್ಯಸ್ಯ ಮಾರಿಷ ।
ರಕ್ಷಸಾ ಘೋರರೂಪೇಣ ವಧ್ಯಮಾನಸ್ಯ ಸಂಯುಗೇ ॥೩೧॥

ಎಲೈ ಪೂಜ್ಯನೇ, ಘೋರವಾದ ಆಕಾರದ ಆ ರಾಕ್ಷಸನಿಂದ ಪ್ರಹಾರಕ್ಕೆ ಒಳಗಾದ ಪಾಂಡವ ಸೈನ್ಯಕ್ಕೂ ಮತ್ತು ಆ ರಾಕ್ಷಸನಿಗೂ ದೊಡ್ಡ ಸಂಘರ್ಷ ಉಂಟಾಯಿತು.

ತತಃ ಶರಸಹಸ್ರೈಸ್ತಾಂ ಪಾಂಡವಾನಾಂ ಮಹಾಚಮೂಮ್ ।
ವ್ಯದ್ರಾವಯದ್ ರಣೇ ರಕ್ಷೋ ದರ್ಶಯದ್ ವೈ ಪರಾಕ್ರಮಮ್ ॥೩೨॥

ಆಗ ಆ ರಾಕ್ಷಸನು ಯುದ್ಧದಲ್ಲಿ ತನ್ನ ಪರಾಕ್ರಮವನ್ನು ತೋರಿಸುತ್ತಾ ಪಾಂಡವರ ಆ ದೊಡ್ಡ ಸೈನ್ಯವನ್ನು ಸಹಸ್ರಾರು ಬಾಣಗಳಿಂದ ರಣರಂಗದಿಂದ ಓಡಿಸಿದನು.

ಸಾ ವಧ್ಯಮಾನಾ ಚ ತಥಾ ಪಾಂಡವಾನಾಮನೀಕಿನೀ ।
ರಕ್ಷಸಾ ಘೋರರೂಪೇಣ ಪ್ರದುದ್ರಾವ ರಣೇ ಭಯಾತ್ ॥೩೩॥

ಹೀಗೆ ಘೋರರೂಪನಾದ ಆ ರಾಕ್ಷಸನ ಪ್ರಹಾರಕ್ಕೆ ಒಳಗಾದ ಪಾಂಡವರ ಸೈನ್ಯವು ಭಯದಿಂದ ರಣರಂಗದಿಂದ ಓಡಿಹೋಯಿತು.

ತಾಂ ಪ್ರಮೃದ್ಯ ತತಃ ಸೇನಾಂ ಪದ್ಮಿನೀಂ ವಾರಣೋ ಯಥಾ ।
ತತೋऽಭಿದುದ್ರಾವ ರಣೇ ದ್ರೌಪದೇಯಾನ್ ಮಹಾಬಲಾನ್ ॥೩೪॥

ಗಜವು ಪದ್ಮಸರೋವರವನ್ನು ಕಲಕಿದಂತೆ ಪಾಂಡವರ ಆ ಸೈನ್ಯವನ್ನು ಮರ್ದಿಸಿ ಆನಂತರ ಆ ರಾಕ್ಷಸನು ಮಹಾಬಲರಾದ ದ್ರೌಪದಿಯ ಪುತ್ರರ ಮೇಲೆ ಧಾವಿಸಿದನು.

ತೇ ತು ಕ್ರುದ್ಧಾ ಮಹೇಷ್ವಾಸಾ ದ್ರೌಪದೇಯಾಃ ಪ್ರಹಾರಿಣಃ ।
ರಾಕ್ಷಸಂ ದುದ್ರುವುಃ ಸರ್ವೇ ಗ್ರಹಾಃ ಪಂಚ ಯಥಾ ರವಿಮ್ ॥೩೫॥

ಮಹಾಧನುರ್ಧಾರಿಗಳೂ, ಪ್ರಹಾರಶೀಲರೂ, ಕ್ರುದ್ಧರೂ ಆದ ಆ ದ್ರೌಪದಿಯ ಪುತ್ರರು ಸೂರ್ಯನ ಕಡೆಗೆ ಐದು ಗ್ರಹಗಳು ಓಡಿದಂತೆ ಆ ರಾಕ್ಷಸನ ಕಡೆಗೆ ಓಡಿದರು.

ವೀರ್ಯವದ್ಭಿಸ್ತತಸ್ತೈಸ್ತು ಪೀಡಿತೋ ರಾಕ್ಷಸೋತ್ತಮಃ ।
ಯಥಾ ಯುಗಕ್ಷಯೇ ಘೋರೇ ಚಂದ್ರಮಾಃ ಪಂಚಭಿರ್ಗ್ರಹೈಃ ॥೩೬॥

ಘೋರವಾದ ಯುಗಾಂತ್ಯಕಾಲದಲ್ಲಿ ಚಂದ್ರನು ಐದು ಗ್ರಹಗಳಿಂದ ಪೀಡಿಸಲ್ಪಡುವಂತೆ ಆ ರಾಕ್ಷಸೋತ್ತಮನು ಪರಾಕ್ರಮಶಾಲಿಗಳಾದ ಆ ಐವರಿಂದ ಪೀಡಿಸಲ್ಪಟ್ಟನು.

ಪ್ರತಿವಿಂಧ್ಯಸ್ತತೋ ರಕ್ಷೋ ಬಿಭೇದ ನಿಶಿತೈಃ ಶರೈಃ ।
ಸರ್ವಪಾರಶವೈಸ್ತೂರ್ಣಮಕುಂಠಾಗ್ರೈರ್ಮಹಾಬಲಃ ॥೩೭॥

ಆಗ ಮಹಾಬಲನಾದ ಪ್ರತಿವಿಂಧ್ಯನು ತೀಕ್ಷ್ಣವಾದ, ಅಯೋಮಯವಾದ ಹರಿತವಾದ ತುದಿಯುಳ್ಳ ಬಾಣಗಳಿಂದ ಆ ರಾಕ್ಷಸನನ್ನು ಭೇದಿಸಿದನು.

ಸ ತೈರ್ಭಿನ್ನತನುತ್ರಾಣಃ ಶುಶುಭೇ ರಾಕ್ಷಸೋತ್ತಮಃ ।
ಮರೀಚಿಭಿರಿವಾರ್ಕಸ್ಯ ಸಂಸ್ಕೃತೋ ಜಲದೋ ಮಹಾನ್ ॥೩೮॥

ಆ ಬಾಣಗಳಿಂದ ತನ್ನ ಕವಚವು ಭೇದಿಸಲ್ಪಡುತ್ತಿರಲು ಆ ರಾಕ್ಷಸಶ್ರೇಷ್ಠನು ಸೂರ್ಯಕಿರಣಗಳಿಂದ ಪೋಣಿಸಲ್ಪಟ್ಟ ದೊಡ್ಡ ಮೇಘದಂತೆ ಶೋಭಿಸಿದನು.

ವಿಷಕ್ತೈಃ ಸ ಶರೈಶ್ಚಾಪಿ ತಪನೀಯಪರಿಚ್ಛದೈಃ ।
ಆರ್ಶ್ಯಶೃಂಗಿರ್ಬಭೌ ರಾಜನ್ ದೀಪ್ತಶೃಂಗ ಇವಾಚಲಃ ॥೩೯॥

ಎಲೈ ರಾಜನೇ, ಸುವರ್ಣದ ಹೊದಿಕೆಗಳಿದ್ದ ದೇಹದಲ್ಲಿ ನಾಟಿದ ಆ ಬಾಣಗಳಿಂದ ಅಲಂಬುಸನು ಜ್ವಲಿಸುವ ಶಿಖರದಿಂದ ಕೂಡಿದ ಪರ್ವತದಂತೆ ಶೋಭಿಸಿದನು.

ತತಸ್ತೇ ಭ್ರಾತರಃ ಪಂಚ ರಾಕ್ಷಸೇಂದ್ರಂ ಮಹಾಹವೇ ।
ವಿವ್ಯಧುರ್ನಿಶಿತೈರ್ಬಾಣೈಸ್ತಪನೀಯವಿಭೂಷಿತೈಃ ॥೪೦॥

ಅನಂತರ ಆ ಐವರು ಸಹೋದರರು ಆ ದೊಡ್ಡ ಯುದ್ಧದಲ್ಲಿ ಸುವರ್ಣಾಲಂಕೃತವಾದ ತೀಕ್ಷ್ಣವಾದ ಬಾಣಗಳಿಂದ ಆ ರಾಕ್ಷಸಶ್ರೇಷ್ಠನನ್ನು ಹೊಡೆದರು.

ಸ ನಿರ್ಭಿನ್ನಃ ಶರೈರ್ಘೋರೈರ್ಭುಜಗೈಃ ಕೋಪಿತೈರಿವ ।
ಅಲಂಬುಸೋ ಭೃಶಂ ರಾಜನ್ ನಾಗೇಂದ್ರ ಇವ ಚುಕ್ರುಧೇ ॥೪೧॥

ಎಲೈ ರಾಜನೇ, ಕೋಪಗೊಂಡ ಸರ್ಪಗಳಂತಹ ಘೋರವಾದ ಬಾಣಗಳಿಂದ ಗಾಯಗೊಂಡ ಅಲಂಬುಸನು ಸರ್ಪರಾಜನಂತೆ ಶೀಘ್ರವಾಗಿ ಕೋಪಗೊಂಡನು.

ಸೋಽತಿವಿದ್ಧೋ ಮಹಾರಾಜ ಮುಹೂರ್ತಮಥ ಮಾರಿಷ ।
ಪ್ರವಿವೇಶ ತಮೋ ದೀರ್ಘಂ ಪೀಡಿತಸ್ತೈರ್ಮಹಾರಥೈಃ ॥೪೨॥

ಎಲೈ ಮಹಾರಾಜನೇ, ಪೂಜ್ಯನೇ, ಮಹಾರಥರಾದ ಆ ಐವರಿಂದ ಪೀಡಿತರಾಗಿ ಬಹಳ ಗಾಯಗೊಂಡ ಅವನು ಒಂದು ಮುಹೂರ್ತದವರೆಗೆ ದೀರ್ಘವಾಗಿ ಪ್ರಜ್ಞಾಶೂನ್ಯನಾದನು.

ಪ್ರತಿಲಭ್ಯ ತತಃ ಸಂಜ್ಞಾಂ ಕ್ರೋಧೇನ ದ್ವಿಗುಣೀಕೃತಃ ।
ಚಿಚ್ಛೇದ ಸಾಯಕೈಸ್ತೇಷಾಂ ಧ್ವಜಾಂಶ್ಚೈವ ಧನೂಂಷಿ ಚ ॥೪೩॥

ಅನಂತರ ಸಂಜ್ಞೆಯನ್ನು ಮರಳಿ ಪಡೆದು, ಎರಡರಷ್ಟು ಕ್ರೋಧದಿಂದ ಕೂಡಿದವನಾಗಿ ತನ್ನ ಬಾಣಗಳಿಂದ ಅವರ ಧ್ವಜಗಳನ್ನು ಮತ್ತು ಧನುಸ್ಸುಗಳನ್ನು ಕತ್ತರಿಸಿದನು.

ಏಕೈಕಂ ಚ ತ್ರಿಭಿರ್ಬಾಣೈರಾಜಘಾನ ಸ್ಮಯನ್ನಿವ ।
ಅಲಂಬುಸೋ ರಥೋಪಸ್ಥೇ ನೃತ್ಯನ್ನಿವ ಮಹಾರಥಃ ॥೪೪॥

ಮಹಾರಥನಾದ ಅಲಂಬುಸನು ರಥದ ಪೀಠದಲ್ಲಿ ನರ್ತಿಸುವವನಂತೆ ನಗುತ್ತಾ ಅವರಲ್ಲಿ ಒಬ್ಬೊಬ್ಬರ ಮೇಲೆಯೂ ಐದು ಬಾಣಗಳನ್ನು ಪ್ರಯೋಗಿಸಿದನು.

ತ್ವರಮಾಣಶ್ಚ ಸಂಕ್ರುದ್ಧೋ ಹಯಾಂಸ್ತೇಷಾಂ ಮಹಾತ್ಮನಾಮ್ ।
ಜಘಾನ ರಾಕ್ಷಸಃ ಕ್ರುದ್ಧಃ ಸಾರಥೀಂಶ್ಚ ಮಹಾಬಲಃ ॥೪೫॥

ಮಹಾಬಲನಾದ ಆ ರಾಕ್ಷಸನು ಕ್ರುದ್ಧನಾಗಿ ತಕ್ಷಣ ಶೀಘ್ರವಾಗಿ ಆ ಮಹಾತ್ಮರ ರಥದ ಅಶ್ವಗಳನ್ನು ಮತ್ತು ಸಾರಥಿಗಳನ್ನು ಕೊಂದನು.

ಬಿಭೇದ ಚ ಸುಸಂಹೃಷ್ಟಃ ಪುನಶ್ಚಿನ್ನಾನ್ ಸುಸಂಶಿತೈಃ ।
ಶರೈರ್ಬಹುವಿಧಾಕಾರೈಃ ಶತಶೋಽಥ ಸಹಸ್ರಶಃ ॥೪೬॥

ಪುನಃ ಬಹಳ ಸಂತೋಷಗೊಂಡು ಬಹಳ ತೀಕ್ಷ್ಣವಾದ, ಬಹುವಿಧವಾದ ಆಕಾರವನ್ನು ಹೊಂದಿದ, ನೂರಾರು ಸಹಸ್ರಾರು ಬಾಣಗಳನ್ನು ಪ್ರಯೋಗಿಸಿ ಅವರನ್ನು ಭೇದಿಸಿದನು.

ವಿರಥಾಂಶ್ಚ ಮಹೇಷ್ವಾಸಾನ್ ಕೃತ್ವಾ ತತ್ರ ಸ ರಾಕ್ಷಸಃ ।
ಅಭಿದುದ್ರಾವ ವೇಗೇನ ಹಂತುಕಾಮೋ ನಿಶಾಚರಃ ॥೪೭॥

ನಿಶಾಚರನಾದ ಆ ರಾಕ್ಷಸನು ಆ ಮಹಾಧನುರ್ಧಾರಿಗಳ ರಥಗಳನ್ನು ನಾಶಗೊಳಿಸಿ ಅವರನ್ನು ಕೊಲ್ಲಲು ಬಯಸಿ ಅವರ ಕಡೆಗೆ ವೇಗವಾಗಿ ಓಡಿದನು.

ತಾನರ್ದಿತಾನ್ ರಣೇ ತೇನ ರಾಕ್ಷಸೇನ ದುರಾತ್ಮನಾ ।
ದೃಷ್ಟ್ವಾರ್ಜುನಸುತಃ ಸಂಖೇ ರಾಕ್ಷಸಂ ಸಮುಪಾದ್ರವತ್ ॥೪೮॥

ಆ ದುರಾತ್ಮನಾದ ರಾಕ್ಷಸನಿಂದ ಯುದ್ಧದಲ್ಲಿ ಪೀಡಿತರಾದ ಆ ಪಂಚಸಹೋದರರನ್ನು ನೋಡಿ ರಣರಂಗದಲ್ಲಿ ಅರ್ಜುನನ ಸುತನಾದ ಅಭಿಮನ್ಯುವು ರಾಕ್ಷಸನ ಕಡೆಗೆ ಧಾವಿಸಿದನು.

ತಯೋಃ ಸಮಭವದ್ ಯುದ್ಧಂ ವೃತ್ರವಾಸವಯೋರಿವ ।
ದದೃಶುಸ್ತಾವಕಾಃ ಸರ್ವೇ ಪಾಂಡವಾಶ್ಚ ಮಹಾರಥಾಃ ॥೪೯॥

ವೃತ್ರ-ವಾಸವರಿಗೆ ನಡೆದಂತೆ ಅವರಿಬ್ಬರಿಗೂ ದೊಡ್ಡ ಯುದ್ಧವು ನಡೆದುದನ್ನು ಮಹಾರಥರಾದ ಎಲ್ಲ ಪಾಂಡವರೂ ಮತ್ತು ನಿನ್ನವರೂ ನೋಡಿದರು.

ತೌ ಸಮೇತೌ ಮಹಾಯುದ್ಧೇ ಕ್ರೋಧದೀಪ್ತೌ ಪರಸ್ಪರಮ್ ।
ಮಹಾಬಲೌ ಮಹಾರಾಜ ಕ್ರೋಧಸಂರಕ್ತಲೋಚನೌ ॥೫೦॥

ಪರಸ್ಪರಮವೇಕ್ಷೇತಾಂ ಕಾಲಾನಲಸಮೌ ಯುಧಿ ।
ಆಶೀವಿಷಾವಿವ ಕ್ರುದ್ಧೌ ನೇತ್ರಾಭ್ಯಾಮಿತರೇತರಮ್ ॥೫೧॥

ಎಲೈ ಮಹಾರಾಜನೇ, ಮಹಾಬಲರೂ, ಕ್ರೋಧದಿಂದ ಪರಸ್ಪರವಾಗಿ ಜ್ವಲಿಸುವವರೂ ಮತ್ತು ಕ್ರೋಧದಿಂದ ಕೆಂಪಾದ ಕಣ್ಣುಳ್ಳವರೂ, ಕಾಲಾಗ್ನಿಗೆ ಸಮರಾದಂತಹ, ಸರ್ಪಗಳಂತೆ ಕ್ರುದ್ಧರಾದಂತಹವರೂ ಆದ ಅವರು ಮಹಾಯುದ್ಧದಲ್ಲಿ ಒಬ್ಬರನ್ನೊಬ್ಬರು ಸಂಧಿಸಿ ತಮ್ಮ ನೇತ್ರಗಳಿಂದ ಒಬ್ಬರನ್ನೊಬ್ಬರು ನೋಡಿದರು.

ತಯೋಃ ಸಮಾಗಮೋ ಘೋರೋ ಬಭೂವ ಕಟುಕೋದಯಃ ।
ಯಥಾ ದೇವಾಸುರೇ ಯುದ್ಧೇ ಶಕ್ರಶಂಬರಯೋರಿವ ॥೫೨॥

ದೇವಾಸುರ ಯುದ್ಧದಲ್ಲಿ ಇಂದ್ರ-ಶಂಬರರ ಸಮಾಗಮದಂತೆ ಅಭಮನ್ಯು ಮತ್ತು ಅಲಂಬುಸರ ಸಮಾಗಮವು ಭಯಂಕರವಾದ ಮತ್ತು ಘೋರವಾದ ಪರಿಣಾಮವನ್ನು ಉಂಟುಮಾಡುವುದಾಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಸಪ್ತದಶಮತಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಸಪ್ತಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ತೊಂಬತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯ - ೨೫ನೇ ಅಧ್ಯಾಯ

ಭೀಷ್ಮಸ್ತು ಪಾಂಚಾಲಕರೂಶಚೇದಿ-
ಷ್ವಹನ್ ಸಹಸ್ರಾಣಿ ಚತುರ್ದಶೋಗ್ರಃ ।
ರಥಪ್ರಬರ್ಹಾನತಿತೀಗ್ಮತೇಜಾ
ವಿದ್ರಾವಯಾಮಾಸ ಪರಾನವೀನಿವ ॥೧೧೦॥

ಭಯಂಕರನಾದ, ಪ್ರಖರ ತೇಜಸ್ಸುಳ್ಳ, ಭೀಷ್ಮ ಪಾಂಚಾಲ ಕರೂಷ ಚೇದಿ ದೇಶಗಳ ಹದಿನಾಲ್ಕು ಸಾವಿರ ಮಹಾರಥರನ್ನು ಕೊಂದ. ತೋಳ ಕುರಿಗಳನ್ನು ಓಡಿಸುವಂತೆ ಉಳಿದವರನ್ನು ಓಡಿಸಿದ.

ವಿದ್ರಾವ್ಯ ಸರ್ವಾಮಪಿ ಪಾಂಡುಸೇನಾಂ
ವಿಶ್ರಾವ್ಯ ಲೋಕೇಷು ಚ ಕೀರ್ತಿಮಾತ್ಮನಃ ।
ಸೇನಾಂ ಸಮಾಹೃತ್ಯ ಯಯೌ ನಿಶಾಗಮೇ
ಸಂಪೂಜ್ಯಮಾನೋ ಧೃತರಾಷ್ಟ್ರಪುತ್ರೈಃ ॥೧೧೧॥

ಭೀಷ್ಮರು ಸಮಸ್ತ ಪಾಂಡವ ಸೈನ್ಯವನ್ನು ಓಡಿಸಿ, ಲೋಕಗಳಲ್ಲಿ ತನ್ನ ಕೀರ್ತಿಯನ್ನು ಶ್ರುತಪಡಿಸಿ, ರಾತ್ರಿ ಕಾಲ ಬಂದಾಗ ಸೈನ್ಯವನ್ನು ಹಿಂದಕ್ಕೆ ಕರೆಸಿಕೊಂಡು, ಕೌರವರಿಂದ ಹೊಗಳಿಸಿಕೊಳ್ಳುತ್ತ, ಶಿಬಿರಕ್ಕೆ ನಡೆದ.

ದ್ರೋಣೋ ವಿರಾಟಸ್ಯ ಪುರೋ ನಿಹತ್ಯ
ಶಂಖಂ ಸುತಂ ತಸ್ಯ ವಿಜಿತ್ಯ ತಂ ಚ ।
ವಿದ್ರಾವ್ಯ ಸೇನಾಮಪಿ ಪಾಂಡವಾನಾಂ
ಯಯೌ ನದೀಜೇನ ಸಹೈವ ಹೃಷ್ಟಃ ॥೧೧೨॥

ದ್ರೋಣರು ವಿರಾಟನ ಮುಂದೆಯೇ ಅವನ ಮಗನಾದ ಶಂಖನನ್ನು ಕೊಂದು, ವಿರಾಟನನ್ನೂ ಗೆದ್ದು, ಪಾಂಡವರ ಸೈನ್ಯವನ್ನೂ ಓಡಿಸಿ, ಹರ್ಷಿತರಾಗಿ ಭೀಷ್ಮರೊಡನೆ ಹೊರಟು ಹೋದರು.

ಭೀಮಾರ್ಜುನಾವಪಿ ಶತ್ರೂನ್ ನಿಹತ್ಯ
ವಿದ್ರಾವ್ಯ ಸರ್ವಾಂಶ್ಚ ಯುಧಿ ಪ್ರವೀರಾನ್ ।

ಯುಧಿಷ್ಠಿರೇಣಾಪಹೃತೇ ಸ್ವಸೈನ್ಯೇ
ಭೀತೇನ ಭೀಷ್ಮಾಚ್ಚಿಬಿರಂ ಪ್ರಜಗ್ಮತುಃ ॥೧೧೩॥

ಭೀಮಾರ್ಜುನರೂ ಕೂಡ ಶತ್ರುಗಳನ್ನು ಕೊಂದು, ಯುದ್ಧದಲ್ಲಿ ವೀರರಾಗಿರುವ ಉಳಿದ ಎಲ್ಲರನ್ನೂ ಓಡಿಸಿ, ಯುಧಿಷ್ಠಿರ ಭೀಷ್ಮರಿಗೆ ಭಯಗೊಂಡು ತನ್ನ ಸೈನ್ಯವನ್ನು ಹಿಂದೆ ಕರೆಸಿಕೊಂಡಾಗ, ತಾವೂ ಶಿಬಿರಕ್ಕೆ ತೆರಳಿದರು.

★ ★ ★ ★ ★

ತೊಂಬತ್ತೆಂಟನೆಯ ಅಧ್ಯಾಯ

ಅಭಿಮನ್ಯುವಿನಿಂದ ಅಲಂಬುಸನ ಪರಾಜಯ. ಅಭಿಮನ್ಯುವಿನ ಪರಾಕ್ರಮ. ಸಾತ್ಯಕಿಯಿಂದ ದ್ರೋಣರ ಪರಾಜಯ.

ಧೃತರಾಷ್ಟ್ರಃ

ಆರ್ಜುನಿಂ ಸಮರೇ ಶೂರಂ ವಿನಿಘ್ನಂತಂ ಮಹಾರಥಾನ್ ।
ಅಲಂಬುಸಃ ಕಥಂ ಯುದ್ಧೇ ಪ್ರತ್ಯಯುಧ್ಯತ ಸಂಜಯ ॥೧॥

ಧೃತರಾಷ್ಟ್ರ- ಎಲೈ ಸಂಜಯನೇ, ಮಹಾರಥನೂ, ಯುದ್ಧದಲ್ಲಿ ಶೂರನೂ, ನಮ್ಮ ಸೈನ್ಯವನ್ನು ವಿನಾಶವನ್ನು ಮಾಡುವವನೂ ಆದ ಅಭಿಮನ್ಯುವಿನ ಜೊತೆಯಲ್ಲಿ ಅಲಂಬುಸನು ಹೇಗೆ ಯುದ್ಧವನ್ನು ಮಾಡಿದನು?

ಆಶ್ಚರ್ಯಶೃಂಗಿಂ ಕಥಂ ಚಾಪಿ ಸೌಭದ್ರಃ ಪರವೀರಹಾ ।
ತನ್ಮಮಾಚಕ್ಷ್ವ ತತ್ತ್ವೇನ ಯಥಾವೃತ್ತಂ ಸ್ಮ ಸಂಯುಗೇ ॥೨॥

ಪರವೀರಘಾತಕನಾದ ಅಭಿಮನ್ಯುವಾದರೂ ಅಲಂಬುಸನ ಜೊತೆಯಲ್ಲಿ ಹೇಗೆ ಯುದ್ಧಮಾಡಿದನು ಎಂದು ನನಗೆ ನಡದಂತೆ ಯಥಾರ್ಥವಾಗಿ ಹೇಳು.

ಧನಂಜಯಶ್ಚ ಕಿಂ ಚಕ್ರೇ ಮಮ ಸೈನ್ಯೇಷು ಸಂಜಯ ।
ಭೀಮೋ ವಾ ಬಲಿನಾಂ ಶ್ರೇಷ್ಠೋ ರಾಕ್ಷಸೋ ವಾ ಘಟೋತ್ಕಚಃ ॥೩॥

ಎಲೈ ಸಂಜಯನೇ, ಅರ್ಜುನನಾದರೂ ನನ್ನ ಸೈನ್ಯದಲ್ಲಿ ಏನು ಮಾಡಿದನು? ಬಲಿಷ್ಠರಲ್ಲಿ ಶ್ರೇಷ್ಠನಾದ ಭೀಮನಾಗಲೀ ಅಥವಾ ರಾಕ್ಷಸನಾದ ಘಟೋತ್ಕಚನಾಗಲೀ ಏನು ಮಾಡಿದರು?

ನಕುಲಃ ಸಹದೇವೋ ವಾ ಸಾತ್ಯಕಿರ್ವಾ ಮಹಾರಥಃ ।
ಏತದಾಚಕ್ಷ್ವ ಮೇ ಸರ್ವಂ ಕುಶಲೋ ಹ್ಯಸಿ ಸಂಜಯ ॥೪॥

ನಕುಲ-ಸಹದೇವರಾಗಲೀ, ಮಹಾರಥನಾದ ಸಾತ್ಯಕಿಯಾಗಲೀ ಏನು ಮಾಡಿದರು? ಎಲೈ ಸಂಜಯನೇ, ನಿರೂಪಣೆ ಮಾಡುವುದರಲ್ಲಿ ನೀನು ನಿಪುಣನಾಗಿದ್ದೀಯೆ. ಆದ್ದರಿಂದ ಇವೆಲ್ಲವನ್ನೂ ನನಗೆ ಹೇಳು.

ಸಂಜಯಃ

ಹಂತ ತೇಽಹಂ ಪ್ರವಕ್ಷ್ಯಾಮಿ ಸಂಗ್ರಾಮಂ ಲೋಮಹರ್ಷಣಮ್ ।
ಯಥಾಭೂದ್ ರಾಕ್ಷಸೇಂದ್ರಸ್ಯ ಸೌಭದ್ರಸ್ಯ ಚ ಮಾರಿಷ ॥೫॥

ಸಂಜಯ- ಸಂತೋಷ. ಎಲೈ ಪೂಜ್ಯನೇ, ರಾಕ್ಷಸೇಂದ್ರನಾದ ಅಲಂಬುಸನಿಗೂ ಮತ್ತು ಸುಭದ್ರೆಯ ಪುತ್ರನಾದ ಅಭಿಮನ್ಯುವಿಗೂ ರೋಮಾಂಚಕಾರಿಯಾದ ಯುದ್ಧವು ಹೇಗೆ ನಡೆಯಿತೆಂದು ನಾನು ನಿನಗೆ ಹೇಳುವೆನು.

ಅರ್ಜುನಶ್ಚ ಯಥಾ ಸಂಖೇ ಭೀಮಸೇನಶ್ಚ ಪಾಂಡವಃ ।
ನಕುಲಃ ಸಹದೇವಶ್ಚ ರಣೇ ಚಕ್ರುಃ ಪರಾಕ್ರಮಮ್ ॥೬॥

ಪಾಂಡುಪುತ್ರರಾದ ಅರ್ಜುನನೂ, ಭೀಮಸೇನನೂ, ನಕುಲ- ಸಹದೇವರೂ ಯುದ್ಧದಲ್ಲಿ ಹೇಗೆ ಪರಾಕ್ರಮವನ್ನು ಮಾಡಿದರು ಎಂಬುದನ್ನೂ;

ತಥೈವ ತಾವಕಾಃ ಸರ್ವೇ ಭೀಷ್ಮದ್ರೋಣಪುರೋಗಮಾಃ ।
ಅದ್ಭುತಾನಿ ವಿಚಿತ್ರಾಣಿ ಚಕ್ರುಃ ಕರ್ಮಾಣ್ಯಭೀತವತ್ ॥೭॥

ಅದರಂತೆಯೇ ಭೀಷ್ಮ-ದ್ರೋಣ ಮೊದಲಾದ ನಿನ್ನವರೆಲ್ಲರೂ ಯುದ್ಧದಲ್ಲಿ ಹೇಗೆ ಅದ್ಭುತವಾದ ಮತ್ತು ವಿಚಿತ್ರವಾದ ಕರ್ಮವನ್ನು ನಿರ್ಭಯವಾಗಿ ಮಾಡಿದರು ಎಂಬುದನ್ನೂ ಹೇಳುವೆವು.

ಅಲಂಬುಸಸ್ತು ಸಮರೇ ಅಭಿಮನ್ಯುಂ ಮಹಾರಥಮ್ ।
ವಿನದ್ಯ ಸುಮಹಾನಾದಂ ತರ್ಜಯಿತ್ವಾ ಮುಹುರ್ಮುಹುಃ ।
ಅಭಿದುದ್ರಾವ ವೇಗೇನ ತಿಷ್ಠ ತಿಷ್ಠೇತಿ ಚಾಬ್ರವೀತ್ ॥೮॥

ಅಲಂಬುಸನಾದರೋ ಮಹಾರಥನಾದ ಅಭಿಮನ್ಯುವಿನ ಎದುರಿಗೆ ಮಹಾನಾದಗಳಿಂದ ಗರ್ಜಿಸಿ ಪುನಃ ಪುನಃ ಅವನನ್ನು ಬೆದರಿಸಿ ನಿಲ್ಲು, ನಿಲ್ಲುಎಂದು ಹೇಳುತ್ತಾ ಅವನ ಕಡೆಗೆ ಓಡಿದನು.

ಸೌಭದ್ರೋಽಪಿ ರಣೇ ರಾಜನ್ ಸಿಂಹವದ್ ವಿನದನ್ ಮುಹುಃ ।
ಆರ್ಶ್ಯಶೃಂಗಿಂ ಮಹೇಷ್ವಾಸಂ ಪಿತುರತ್ಯಂತವೈರಿಣಮ್ ॥೯॥

ಎಲೈ ರಾಜನೇ, ಅಭಿಮನ್ಯುವೂ ಸಹ ಸಿಂಹದಂತೆ ಪುನಃ ಪುನಃ ಗರ್ಜಿಸುತ್ತಾ, ತನ್ನ ತಂದೆಗೆ ಪರಮವೈರಿಯಾದ ಮಹಾಧನುರ್ಧಾರಿಯಾದ ಅಲಂಬುಸನ ಕಡೆಗೆ ಓಡಿದನು.

ತತಃ ಸಮೇಯತುಃ ಸಂಖೇ ತ್ವರಿತೌ ನರರಾಕ್ಷಸೌ ।
ರಥಾಭ್ಯಾಂ ರಥಿನಾಂ ಶ್ರೇಷ್ಠೌ ಯಥಾ ವೈ ದೇವದಾನವೌ ।
ಮಾಯಾವೀ ರಾಕ್ಷಸಶ್ರೇಷ್ಠೋ ದಿವ್ಯಾಸ್ತ್ರಜ್ಞಶ್ಚ ಫಾಲ್ಗುನಿಃ ॥೧೦॥

ಅನಂತರ ಮಾಯಾವಿಯಾದ ರಾಕ್ಷಸಶ್ರೇಷ್ಠನೂ ಮತ್ತು ದಿವ್ಯಾಸ್ತ್ರಗಳನ್ನು ತಿಳಿದ ಅಭಿಮನ್ಯುವೂ ರಥಿಕರಲ್ಲಿ ಶ್ರೇಷ್ಠರಾದ ಈ ನರ-ರಾಕ್ಷಸರು ಶೀಘ್ರವಾಗಿ ದೇವ-ದಾನವರಂತೆ ತಮ್ಮ ರಥಗಳಿಂದ ಪರಸ್ಪರವಾಗಿ ಎದುರಿಸಿದರು.

ತತಃ ಕಾರ್ಷ್ಣಿರ್ಮಹಾರಾಜ ನಿಶಿತೈಃ ಸಾಯಕೈಸ್ತ್ರಿಭಿಃ ।
ಆರ್ಶ್ಯಶೃಂಗಿಂ ರಣೇ ವಿದ್ವಾ ಪುನರ್ವಿವ್ಯಾಧ ಪಂಚಭಿಃ ॥೧೧॥

ಎಲೈ ಮಹಾರಾಜನೇ, ಆಗ ಅಭಿಮನ್ಯುವು ಅಲಂಬುಸನನ್ನು ಮೂರು ಬಾಣಗಳಿಂದ ಹೊಡೆದು ಪುನಃ ಐದು ಬಾಣಗಳಿಂದ ಹೊಡೆದನು.

ಅಲಂಬುಸೋಽಪಿ ಸಂಕ್ರುದ್ಧಃ ಕಾರ್ಷ್ಣಿಂ ನವಭಿರಾಶುಗೈಃ ।
ಹೃದಿ ವಿವ್ಯಾಧ ವೇಗೇನ ತೋತ್ತ್ರೈರಿವ ಮಹಾದ್ವಿಪಮ್ ॥೧೨॥

ಅಲಂಬುಸನೂ ಸಹ ಬಹಳ ಕೋಪಗೊಂಡು ವೇಗಶಾಲಿಗಳಾದ ಒಂಬತ್ತು ಬಾಣಗಳಿಂದ ಅಂಕುಶದಿಂದ ಮಹಾಗಜವನ್ನು ಹೊಡೆದಂತೆ ಅಭಿಮನ್ಯುವಿನ ಎದೆಗೆ ಹೊಡೆದನು.

ತತಃ ಶರಸಹಸ್ರೇಣ ಕ್ಷಿಪ್ರಕಾರೀ ನಿಶಾಚರಃ ।
ಅರ್ಜುನಸ್ಯ ಸುತಂ ಸಂಖೇ ಪೀಡಯಾಮಾಸ ಭಾರತ ॥೧೩॥

ಎಲೈ ಭಾರತನೇ, ವೇಗಶಾಲಿಯಾದ ಆ ರಾಕ್ಷಸನು ಅನಂತರ ಒಂದು ಸಹಸ್ರ ಬಾಣಗಳನ್ನು ಪ್ರಯೋಗಿಸಿ ಅರ್ಜುನನ ಪುತ್ರನನ್ನು ಪೀಡಿಸಿದನು.

ಅಭಿಮನ್ಯುಸ್ತತಃ ಕ್ರುದ್ಧೋ ನವತಿಂ ನತಪರ್ವಣಾಮ್ ।
ಚಿಕ್ಷೇಪ ನಿಶಿತಾನ್ ಬಾಣಾನ್ ರಾಕ್ಷಸಸ್ಯ ಮಹೋರಸಿ ॥೧೪॥

ಆಗ ಕೋಪಗೊಂಡ ಅಭಿಮನ್ಯುವು ಬಾಗಿದ ತುದಿಯುಳ್ಳ ಹರಿತವಾದ ತೊಂಬತ್ತು ಬಾಣಗಳನ್ನು ರಾಕ್ಷಸನ ವಿಶಾಲವಾದ ವಕ್ಷಸ್ಥಲದಲ್ಲಿ ಪ್ರಯೋಗಿಸಿದನು.

ತೇ ತಸ್ಯ ವಿವಿಶುಸ್ತೂರ್ಣಂ ಕಾಯಂ ನಿರ್ಭಿದ್ಯ ಮರ್ಮಣಿ ।
ಸ ತೈರ್ವಿಭಿನ್ನಸರ್ವಾಂಗಃ ಶುಶುಭೇ ರಾಕ್ಷಸೋತ್ತಮಃ ।
ಪುಷ್ಪಿತೈಃ ಕಿಂಶುಕೈ ರಾಜನ್ ಸಂಸ್ತೀರ್ಣ ಇವ ಪರ್ವತಃ ॥೧೫॥

ಆ ಬಾಣಗಳು ಶೀಘ್ರವಾಗಿ ಅವನ ಮರ್ಮವನ್ನು ಭೇದಿಸಿ ದೇಹದೊಳಗೆ ಇಳಿದವು. ಆ ಬಾಣಗಳಿಂದ ಗಾಯಗೊಂಡ ಸರ್ವಾಂಗಗಳುಳ್ಳ ಆ ರಾಕ್ಷಸಶ್ರೇಷ್ಠನು ಎಲೈ ರಾಜನೇ, ಪುಷ್ಪಸಹಿತವಾದ ಕಿಂಶುಕವೃಕ್ಷದಿಂದ ತುಂಬಿದ ಪರ್ವತದಂತೆ ಶೋಭಿಸಿದನು.

ಸ ಧಾರಯನ್ ಶರಾನ್ ಹೇಮಪುಂಖಾನಪಿ ಮಹಾಬಲಃ ।
ಏಬಭೌ ರಾಕ್ಷಸಶ್ರೇಷ್ಠಃ ಸಜ್ವಾಲ ಇವ ಪರ್ವತಃ ॥೧೬॥

ಮಹಾಬಲನಾದ ಆ ರಾಕ್ಷಸಶ್ರೇಷ್ಠನು ಹೇಮಪುಂಖಗಳುಳ್ಳ ಬಾಣಗಳನ್ನು ಧರಿಸಿ ಅಗ್ನಿಜ್ವಾಲಾ ಸಹಿತವಾದ ಪರ್ವತದಂತೆ ಶೋಭಿಸಿದನು.

ತತಃ ಕ್ರುದ್ಧೋ ಮಹಾರಾಜ ಆರ್ಶ್ಯಶೃಂಗಿರ್ಮಹಾಬಲಃ ।
ಮಹೇಂದ್ರಪ್ರತಿಮಂ ಕಾರ್ಷ್ಣಿಂ ಛಾದಯಾಮಾಸ ಪತ್ರಿಭಿಃ ॥೧೭॥

ಎಲೈ ಮಹಾರಾಜನೇ, ಆಗ ಮಹಾಬಲನಾದ ಅಲಂಬುಸನು ಕ್ರುದ್ಧನಾಗಿ ಮಹೇಂದ್ರ ಸದೃಶನಾದ ಅಭಿಮನ್ಯುವನ್ನು ಪತ್ರವುಳ್ಳ ತನ್ನ ಬಾಣಗಳಿಂದ ಮುಚ್ಚಿದನು.

ತೇನ ತೇ ವಿಶಿಖಾ ಮುಕ್ತಾ ಯಮದಂಡೋಪಮಾಃ ಶಿತಾಃ ।
ಅಭಿಮನ್ಯುಂ ವಿನಿರ್ಭಿದ್ಯ ಪ್ರಾವಿಶನ್ ಧರಣೀತಳಮ್ ॥೧೮॥

ಅವನಿಂದ ಪ್ರಯುಕ್ತವಾದ ಯಮದಂಡದಂತಿದ್ದ ಆ ತೀಕ್ಷ್ಣವಾದ ಬಾಣಗಳು ಅಭಿಮನ್ಯುವಿನ ಶರೀರವನ್ನು ಭೇದಿಸಿ ಭೂಮಿಯನ್ನು ಪ್ರವೇಶಿಸಿದವು.

ತಥೈವಾರ್ಜುನಿನಿರ್ಮುಕ್ತಾಃ ಶರಾಃ ಕಾಂಚನಭೂಷಣಾಃ ।
ಅಲಂಬುಸಂ ವಿನಿರ್ಭಿದ್ಯ ಪ್ರಾವಿಶಂತ ಧರಾತಳಮ್ ॥೧೯॥

ಹಾಗೆಯೇ, ಅಭಿಮನ್ಯುವು ಪ್ರಯೋಗಿಸಿದ ಸುವರ್ಣಾಲಂಕೃತ ಬಾಣಗಳೂ ಸಹ ಅಲಂಬುಸನನ್ನು ಭೇದಿಸಿ ಭೂತಳದಲ್ಲಿ ಇಳಿದವು.

ಸೌಭದ್ರಸ್ತು ರಣೇ ರಕ್ಷಃ ಶರೈಃ ಸನ್ನತಪರ್ವಭಿಃ ।
ಚಕ್ರೇ ವಿಮುಖಮಾಸಾದ್ಯ ಮಯಂ ಶಕ್ರ ಇವಾಹವೇ ॥೨೦॥

ಅಭಿಮನ್ಯುವಾದರೋ ಯುದ್ಧದಲ್ಲಿ ಮಯನನ್ನು ಇಂದ್ರನು ವಿಮುಖನನ್ನಾಗಿ ಮಾಡಿದಂತೆ ಬಾಗಿದ ತುದಿಯುಳ್ಳ ಬಾಣಗಳಿಂದ ಆ ರಾಕ್ಷಸನನ್ನು ಯುದ್ಧ ವಿಮುಖನನ್ನಾಗಿ ಮಾಡಿದನು.

ವಿಮುಖಂ ಚ ತತೋ ರಕ್ಷೋ ವಧ್ಯಮಾನಂ ರಣೇऽರಿಣಾ ।
ಪ್ರಾದುಶ್ಚಕ್ರೇ ಮಹಾಮಾಯಾಂ ತಾಮಸೀಮರಿಘಾತಿನೀಮ್ ॥೨೧॥

ಯುದ್ಧದಲ್ಲಿ ಶತ್ರುವಿನಿಂದ ಪ್ರಹಾರ ಮಾಡಲ್ಪಟ್ಟು ವಿಮುಖನಾದ ಆ ರಾಕ್ಷಸನು ಶತ್ರುಸಂಹಾರಕವಾದ, ತಮೋರೂಪವಾದ (ಕತ್ತಲೆಯ ರೂಪವಾದ) ಮಹಾಮಾಯೆಯನ್ನು ಅವಿಷ್ಕರಿಸಿದನು.

ತತಸ್ತೇ ತಮಸಾ ಸರ್ವೇ ಹೃತಾ ಹ್ಯಾಸನ್ ಮಹೀತಳೇ ।
ನಾಭಿಮನ್ಯುಮಪಶ್ಯಂತ ನೈವ ಸ್ವಾನ್ನ ಪರಾನ್ ರಣೇ ॥೨೨॥

ಆಗ ಅವರೆಲ್ಲರೂ ಆ ಕತ್ತಲೆಯಿಂದ ಅಪಹೃತರಾದರು. ಅಭಿಮನ್ಯುವನ್ನಾಗಲೀ, ತಮ್ಮವರನ್ನಾಗಲೀ ಅಥವಾ ಶತ್ರುಗಳನ್ನಾಗಲೀ ರಣರಂಗದಲ್ಲಿ ಕಾಣಲಿಲ್ಲ.

ಅಭಿಮನ್ಯುಶ್ಚ ತದ್ ದೃಷ್ಟ್ವಾ ಘೋರರೂಪಂ ಮಹತ್ತಮಃ ।
ಪ್ರಾದುಶ್ಚಕ್ರೇಽಸ್ತ್ರಮತ್ಯುಗ್ರಂ ಭಾಸ್ಕರಂ ಕುರುನಂದನಃ ॥೨೩॥

ಕುರುನಂದನನಾದ ಅಭಿಮನ್ಯುವಾದರೂ ಘೋರವಾದ ಆ ಕತ್ತಲೆಯನ್ನು ನೋಡಿ ಅತಿಭಯಂಕರವಾದ ಸೂರ್ಯಾಸ್ತ್ರವನ್ನು ಪ್ರಾದುರ್ಭಾವಗೊಳಿಸಿದನು.

ತತಃ ಪ್ರಕಾಶಮಭವಜ್ಜಗತ್ ಸರ್ವಂ ಮಹೀಪತೇ ।
ತಾಂ ಚಾಪಿ ಜಘ್ನಿವಾನ್ ಮಾಯಾಂ ರಾಕ್ಷಸಸ್ಯ ದುರಾತ್ಮನಃ ॥೨೪॥

ಎಲೈ ರಾಜನೇ, ಆಗ ಜಗತ್ತಿನಲ್ಲಿ ಎಲ್ಲ ಕಡೆಯಲ್ಲಿಯೂ ಪುನಃ ಪ್ರಕಾಶ ಉಂಟಾಯಿತು. ಮತ್ತು ಆ ಅಸ್ತ್ರವು ದುರಾತ್ಮನಾದ ರಾಕ್ಷಸನ ಮಾಯೆಯನ್ನು ವಿನಾಶಗೊಳಿಸಿತು.

ಸಂಕ್ರುದ್ಧಶ್ಚ ಮಹಾವೀರ್ಯೋ ರಾಕ್ಷಸೇಂದ್ರಂ ನರೋತ್ತಮಃ ।
ಛಾದಯಾಮಾಸ ಸಮರೇ ಶರೈಃ ಸನ್ನತಪರ್ವಭಿಃ ॥೨೫॥

ಬಹಳ ಕೋಪಗೊಂಡ, ಮಹಾಪರಾಕ್ರಮಶಾಲಿಯಾದ, ನರಶ್ರೇಷ್ಠನಾದ ಅಭಿಮನ್ಯುವು ಆ ರಾಕ್ಷಸಶ್ರೇಷ್ಠನಾದ ಅಲಂಬುಸನನ್ನು ಬಾಗಿದ ತುದಿಯುಳ್ಳ ಬಾಣಗಳಿಂದ ರಣರಂಗದಲ್ಲಿ ಮುಚ್ಚಹಾಕಿದನು.

ಬಹ್ವೀಸ್ತಥಾನ್ಯಾ ಮಾಯಾಶ್ಚ ಪ್ರಯುಕ್ತಾಸ್ತೇನ ರಕ್ಷಸಾ ।
ಸರ್ವಾಸ್ತ್ರವಿದಮೇಯಾತ್ಮಾ ವಾರಯಾಮಾಸ ಫಾಲ್ಗುನಿಃ ॥೨೬॥

ಆ ರಾಕ್ಷಸನು ಹಾಗೆಯೇ ಇನ್ನೂ ಅನೇಕ ಮಾಯೆಗಳನ್ನು ಸೃಷ್ಟಿಸಿದನು. ಸರ್ವಾಸ್ತ್ರಗಳನ್ನು ತಿಳಿದ, ಅಪರಿಮಿತವಾದ ಸಾಮರ್ಥ್ಯವುಳ್ಳ ಅಭಿಮನ್ಯುವು ಅವೆಲ್ಲವನ್ನೂ ನಾಶಪಡಿಸಿದನು.

ಹತಮಾಯಂ ತತೋ ರಕ್ಷೋ ವಧ್ಯಮಾನಂ ಚ ಸಾಯಕೈಃ ।
ರಥಂ ತತ್ರೈವ ಸಂತ್ಯಜ್ಯ ಪ್ರಾದ್ರವನ್ ಮಹತೋ ಭಯಾತ್ ॥೨೭॥

ತನ್ನ ಮಾಯೆಗಳು ವಿನಾಶಗೊಂಡು, ತಾನು ಬಾಣಗಳಿಂದ ಹೊಡೆಯಲ್ಪಡುತ್ತಿರಲು ಆ ರಾಕ್ಷಸನು ಭಯಗೊಂಡು ತನ್ನ ರಥವನ್ನು ಅಲ್ಲಿಯೇ ಬಿಟ್ಟು ಓಡಿಹೋದನು.

ತಸ್ಮಿನ್ ವಿನಿರ್ಜಿತೇ ತೂರ್ಣಂ ಕೂಟಯೋಧಿನಿ ರಾಕ್ಷಸೇ ।
ಆರ್ಜುನಿಃ ಸಮರೇ ಸೈನ್ಯಂ ತಾವಕಂ ಸಮ್ಮಮರ್ದ ಹ ।
ಮದಾಂಧೋ ವನ್ಯನಾಗೇಂದ್ರಃ ಸಪದ್ಮಾಂ ಪದ್ಮಿನೀಮಿವ ॥೨೮॥

ಮಾಯಾಯುದ್ಧವನ್ನು ಮಾಡುವ ಆ ರಾಕ್ಷಸನು ಹಾಗೆ ಶೀಘ್ರವಾಗಿ ಪರಾಭವಗೊಳ್ಳುತ್ತಿರಲು ಮದಾಂಧವಾದ ವನಗಜವು ಪದ್ಮ ಸರೋವರವನ್ನು ತುಳಿದು ಕಲಕಿದಂತೆ ಅಭಿಮನ್ಯುವು ನಿನ್ನ ಸೈನ್ಯವನ್ನು ಮರ್ದಿಸಿದನು.

ತತಃ ಶಾಂತನವೋ ಭೀಷ್ಮಃ ಸೈನ್ಯಂ ದೃಷ್ಟ್ವಾಭಿದ್ರುತಮ್ ।
ಮಹತಾ ರಥವಂಶೇನ ಸೌಭದ್ರಂ ಪರ್ಯವಾರಯತ್ ॥೨೯॥

ಅನಂತರ ಶಂತನು ಪುತ್ರರಾದ ಭೀಷ್ಮರು ತಮ್ಮ ಸೈನ್ಯವು ಓಡಿ ಹೋಗುತ್ತಿರುವುದನ್ನು ನೋಡಿ ರಥಗಳ ದೊಡ್ಡ ಸಮೂಹದಿಂದ ಅಭಿಮನ್ಯುವನ್ನು ಸುತ್ತುವರಿದರು.

ಕೋಷ್ಠಕೀಕೃತ್ಯ ತಂ ವೀರಂ ಧಾರ್ತರಾಷ್ಟ್ರಾ ಮಹಾರಥಾಃ ।
ಏಕಂ ಸುಬಹವೋ ಯುದ್ಧೇ ತತಕ್ಷುಃ ಸಾಯಕೈರ್ದೃಢಮ್ ॥೩೦॥

ಮಹಾರಥರಾದ ಧೃತರಾಷ್ಟ್ರಪುತ್ರರು ಎಲ್ಲ ಕಡೆಗಳಿಂದಲೂ ಅವನನ್ನು ಕೂಡಿಹಾಕಿಕೊಂಡು ಅನೇಕರಾದ ಅವರು ಏಕಾಕಿಯಾದ ಅಭಿಮನ್ಯುವನ್ನು ತಮ್ಮ ಬಾಣಗಳಿಂದ ದೃಢವಾಗಿ ಗಾಯಗೊಳಿಸಿದರು.

ಸ ತೇಷಾಂ ರಥಿನಾಂ ವೀರಃ ಪಿತುಸ್ತುಲ್ಯಪರಾಕ್ರಮಃ ।
ಸದೃಶೋ ವಾಸುದೇವಸ್ಯ ವಿಕ್ರಮೇಣ ಬಲೇನ ಚ ॥೩೧॥

ಉಭಯೋಃ ಸದೃಶಂ ಕರ್ಮ ಸ ಪಿತುರ್ಮಾತುಲಸ್ಯ ಚ ।
ರಣೇ ಬಹುವಿಧಂ ಚಕ್ರೇ ಸರ್ವಶಸ್ತ್ರಭೃತಾಂ ವರಃ ॥೩೨॥

ರಥಿಶ್ರೇಷ್ಠನೂ, ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನೂ, ತಂದೆಗೆ ಸಮಾನವಾದ ಪರಾಕ್ರಮವುಳ್ಳವನೂ, ಪರಾಕ್ರಮದಲ್ಲಿಯೂ ಬಲದಲ್ಲಿಯೂ ಕೃಷ್ಣನಿಗೆ ಸದೃಶನಾದವನೂ ಆದ ಅವನು ತನ್ನ ತಂದೆ ಮತ್ತು ಸೋದರಮಾವರಿಬ್ಬರಿಗೂ ಯೋಗ್ಯವಾದ ಕರ್ಮವನ್ನು ಯುದ್ಧದಲ್ಲಿ ಶತ್ರುರಥರ ಮೇಲೆ ಬಹುವಿಧವಾಗಿ ಮಾಡಿದನು.

ತತೋ ಧನಂಜಯೋ ರಾಜನ್ ವಿನಿಘ್ನಂಸ್ತವ ಸೈನಿಕಾನ್ ।
ಆಸಸಾದ ರಣೇ ಭೀಷ್ಮಂ ಪುತ್ರಪ್ರೇಪ್ಸುರಮರ್ಷಣಃ ॥೩೩॥

ಎಲೈ ರಾಜನೇ, ಆಗ ಅರ್ಜುನನು ಕೋಪಗೊಂಡು ಪುತ್ರನನ್ನು ರಕ್ಷಿಸುವ ಸಲುವಾಗಿ ನಿನ್ನ ಸೈನಿಕರನ್ನು ಕೊಲ್ಲುತ್ತಾ ರಣರಂಗದಲ್ಲಿ ಭೀಷ್ಮರ ಸಮೀಪಕ್ಕೆ ಬಂದನು.

ತಥೈವ ಸಮರೇ ರಾಜನ್ ಪಿತಾ ದೇವವ್ರತಸ್ತವ ।
ಆಸಸಾದ ರಣೇ ಪಾರ್ಥಂ ಸ್ವರ್ಭಾನುರಿವ ಭಾಸ್ಕರಮ್ ॥೩೪॥

ಎಲೈ ರಾಜನೇ, ಹಾಗೆಯೇ ದೇವವ್ರತನಾದ ನಿನ್ನ ತಂದೆಯೂ ಸಹ ರಾಹುವು ಸೂರ್ಯನನ್ನು ಸಮೀಪಿಸಿದಂತೆ ರಣರಂಗದಲ್ಲಿ ಅರ್ಜುನನನ್ನು ಸಮೀಪಿಸಿದನು.

ತತಃ ಸರಥನಾಗಾಶ್ವಾಃ ಪುತ್ರಾಸ್ತವ ವಿಶಾಂಪತೇ ।
ಪರಿವವ್ರೂ ರಣೇ ಭೀಷ್ಮಂ ಜುಗುಪುಶ್ಚ ಸಮಂತತಃ ॥೩೫॥

ಎಲೈ ರಾಜನೇ, ಆಗ ರಥಾಶ್ವಗಜಗಳಿಂದ ಸಹಿತರಾದ ನಿನ್ನ ಪುತ್ರರು ರಣರಂಗದಲ್ಲಿ ಭೀಷ್ಮರ ಸುತ್ತಲೂ ನಿಂತು ಎಲ್ಲ ಕಡೆಯಿಂದಲೂ ಅವರನ್ನು ರಕ್ಷಿಸಿದರು.

ತಥೈವ ಹಾಂಡವಾ ರಾಜನ್ ಪರಿವಾರ್ಯ ಧನಂಜಯಮ್ ।
ರಣಾಯ ಮಹತೇ ಯುಕ್ತಾ ದಂಶಿತಾ ಭರತರ್ಷಭ ॥೩೬॥

ಎಲೈ ಭರತಶ್ರೇಷ್ಠನೇ, ರಾಜನೇ, ಹಾಗೆಯೇ ಪಾಂಡವರೆಲ್ಲರೂ ಅರ್ಜುನನನ್ನು ಸುತ್ತುವರಿದು ದೊಡ್ಡ ಯುದ್ಧಕ್ಕೆ ಸನ್ನದ್ಧರಾಗಿ ನಿಂತರು.

ಶಾರದ್ವತಸ್ತತೋ ರಾಜನ್ ಭೀಷ್ಮಸ್ಯ ಪ್ರಮುಖೇ ಸ್ಥಿತಮ್ ।
ಅರ್ಜುನಂ ಪಂಚವಿಂಶತ್ಯಾ ಸಾಯಕಾನಾಂ ಸಮಾಚಿನೋತ್ ॥೩೭॥

ಎಲೈ ರಾಜನೇ, ಆಗ ಭೀಷ್ಮರ ಮುಂಭಾಗದಲ್ಲಿದ್ದ ಕೃಪಾಚಾರ್ಯರು ಅರ್ಜುನನ ಮೇಲೆ ಇಪ್ಪತ್ತೈದು ಬಾಣಗಳನ್ನು ಪ್ರಯೋಗಿಸಿದರು.

ಪ್ರತ್ಯುದ್ಗಮ್ಯಾಥ ವಿವ್ಯಾಧ ಸಾತ್ಯಕಿಸ್ತಂ ಶತೈಃ ಶರೈಃ ।
ಪಾಂಡವಪ್ರಿಯಕಾಮಾರ್ಥಂ ಶಾರ್ದೂಲ ಇವ ಕುಂಜರಮ್ ॥೩೮॥

ಸಾತ್ಯಕಿಯು ಎದ್ದು ಅವರಿಗೆ ಅಭಿಮುಖವಾಗಿ ಹೋಗಿ, ಪಾಂಡವರಿಗೆ ಪ್ರಿಯವನ್ನು ಮಾಡಲು ಬಯಸಿ, ವ್ಯಾಘ್ರವು ಗಜದ ಜೊತೆಯಲ್ಲಿ ಹೋರಾಡಿದಂತೆ ನಿಶಿತವಾದ ಬಾಣಗಳಿಂದ ಅವರ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಗೌತಮೋऽಪಿ ತ್ವರಾಯುಕ್ತೋ ಮಾಧವಂ ನವಭಿಃ ಶರೈಃ ।
ಹೃದಿ ವಿವ್ಯಾಧ ಸಂಕ್ರುದ್ಧಃ ಕಂಕಪತ್ರಪರಿಚ್ಛದೈಃ ॥೩೯॥

ಕೃಪಾಚಾರ್ಯರಾದರೋ ಕೋಪಗೊಂಡು ಶೀಘ್ರವಾಗಿ ಕಂಕಪತ್ರದಿಂದ ಕೂಡಿದ ಒಂಬತ್ತು ಬಾಣಗಳಿಂದ ಮಧುಕುಲದಲ್ಲಿ ಜನಿಸಿದ ಆ ಸಾತ್ಯಕಿಯ ಎದೆಯಲ್ಲಿ ಹೊಡೆದರು.

ಶೈನೇಯೋऽಪಿ ತತಃ ಕ್ರುದ್ಧೋ ಭೃಶಂ ವಿದ್ಧೋ ಮಹಾರಥಃ ।
ಗೌತಮಾಂತಕರಂ ಘೋರಂ ಸಮಾದತ್ತ ಶಿಲೀಮುಖಮ್ ॥೪೦॥

ಮಹಾರಥನಾದ ಸಾತ್ಯಕಿಯಾದರೋ ಬಹಳವಾಗಿ ಗಾಯಗೊಂಡು ಅದರಿಂದ ಬಹಳ ಕ್ರುದ್ಧನಾಗಿ ಗೌತಮರ ನಾಶವನ್ನುಂಟು ಮಾಡುವ ಘೋರವಾದ ಬಾಣವನ್ನು ತೆಗೆದುಕೊಂಡನು.

ತಮಾಪತಂತಂ ವೇಗೇನ ಶಕ್ರಾಶನಿಸಮದ್ಯುತಿಮ್ ।
ದ್ವಿಧಾ ಚಿಚ್ಛೇದ ಸಂಕ್ರುದ್ಧೋ ದ್ರೌಣಿಃ ಪರಮಕೋಪನಃ ॥೪೧॥

ಇಂದ್ರನ ವಜ್ರಾಯುಧಕ್ಕೆ ಸಮಾನವಾದ ಕಾಂತಿಯನ್ನು ಹೊಂದಿ ಕೃಪರ ಕಡೆಗೆ ಸಾಗುತ್ತಿದ್ದ ಆ ಬಾಣವನ್ನು ಪರಮಕೋಪವನ್ನು ಹೊಂದಿದ ಅಶ್ವತ್ಥಾಮರು ಎರಡು ಭಾಗವಾಗಿ ಕತ್ತರಿಸಿದರು.

ಸಮುತ್ಸೃಜ್ಯಾಥ ಶೈನೇಯೋ ಗೌತಮಂ ರಥಿನಾಂ ವರಮ್ ।
ಅಭ್ಯದ್ರವದ್ ರಣೇ ದ್ರೌಣಿಂ ರಾಹುಃ ಖೇ ಶಶಿನಂ ಯಥಾ ॥೪೨॥

ಆಗ ಸಾತ್ಯಕಿಯು ರಥಿಶ್ರೇಷ್ಠರಾದ ಕೃಪಾಚಾರ್ಯರನ್ನು ಬಿಟ್ಟು ಆಕಾಶದಲ್ಲಿ ರಾಹುವು ಚಂದ್ರನ ಕಡೆಗೆ ಓಡಿದಂತೆ ರಣರಂಗದಲ್ಲಿ ಅಶ್ವತ್ಥಾಮರ ಕಡೆಗೆ ಓಡಿದನು.

ತಸ್ಯ ದ್ರೋಣಸುತಶ್ಚಾಪಂ ದ್ವಿಧಾ ಚಿಚ್ಛೇದ ಭಾರತ ।
ಅಥೈನಂ ಛಿನ್ನಧನ್ವಾನಂ ತಾಡಯಾಮಾಸ ಸಾಯಕೈಃ ॥೪೩॥

ಎಲೈ ಭಾರತನೇ, ದ್ರೋಣಪುತ್ರರಾದ ಅಶ್ವತ್ಥಾಮರು ಅವನ ಧನುಸ್ಸನ್ನು ಎರಡು ಭಾಗವಾಗಿ ಕತ್ತರಿಸಿ, ಛಿನ್ನವಾದ ಧನುಸ್ಸುಳ್ಳ ಅವನನ್ನು ಪುನಃ ಬಾಣಗಳಿಂದ ಹೊಡೆದರು.

ಸೋಽನ್ಯತ್ ಕಾರ್ಮುಕಮಾದಾಯ ಶತ್ರುಘ್ನಂ ಭಾರಸಾಧನಮ್ ।
ದ್ರೌಣಿಂ ಷಷ್ಟ್ಯಾ ಮಹಾರಾಜ ಬಾಹ್ವೋರುರಸಿ ಚಾರ್ಪಯತ್ ॥೪೪॥

ಎಲೈ ಮಹಾರಾಜನೇ, ಸಾತ್ಯಕಿಯು ಶತ್ರುನಾಶಕವಾದ ಗುರುತರವಾದ ಕಾರ್ಯವನ್ನು ಮಾಡಲು ಸಮರ್ಥವಾದ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಅರವತ್ತು ಬಾಣಗಳನ್ನು ಹೂಡಿ, ಅಶ್ವತ್ಥಾಮರ ಬಾಹುಗಳಲ್ಲಿಯೂ ಮತ್ತು ಎದೆಯಲ್ಲಿಯೂ ಹೊಡೆದನು.

ಸ ವಿದ್ಧೋ ವ್ಯಥಿತಶ್ಚೈವ ಮುಹೂರ್ತಂ ಕಶ್ಮಲಾಯುತಃ ।
ನಿಷಸಾದ ರಥೋಪಸ್ಥೇ ಧ್ವಜಯಷ್ಟಿಮುಪಾಶ್ರಿತಃ ॥೪೫॥

ಗಾಯಗೊಂಡು ವ್ಯಥೆಯನ್ನು ಹೊಂದಿದ ಅಶ್ವತ್ಥಾಮರು ಕಣ್ಣು ಕತ್ತಲೆಯನ್ನು ಹೊಂದಿ ಧ್ವಜದಂಡವನ್ನು ಹಿಡಿದು ರಥದ ಪೀಠದಲ್ಲಿ ಕುಳಿತರು.

ಪ್ರತಿಲಭ್ಯ ತತಃ ಸಂಜ್ಞಾಂ ದ್ರೋಣಪುತ್ರಃ ಪ್ರತಾಪವಾನ್ ।
ವಾರ್ಷ್ಣೇಯಂ ಸಮರೇ ಕ್ರುದ್ಧೋ ನಾರಾಚೇನ ಸಮರ್ದಯತ್ ॥೪೬॥

ಪ್ರತಾಪಶಾಲಿಗಳಾದ ದ್ರೋಣಪುತ್ರರಾದ ಅವರು ಪುನಃ ಸಂಜ್ಞೆಯನ್ನು ಮರಳಿ ಪಡೆದು ಕ್ರುದ್ಧರಾಗಿ ನಾರಾಚದಿಂದ ಸಾತ್ಯಕಿಯನ್ನು ಹೊಡೆದರು.

ಶೈನೇಯಂ ಸ ತು ನಿರ್ಭಿದ್ಯ ಪ್ರಾವಿಶದ್ ಧರಣೀತಳಮ್ ।
ವಸಂತಕಾಲೇ ಬಲವಾನ್ ಬಿಲಂ ಸರ್ಪಶಿಶುರ್ಯಥಾ ॥೪೭॥

ಆ ನಾರಾಚವು ಸಾತ್ಯಕಿಯನ್ನು ಸೀಳಿಕೊಂಡು, ವಸಂತಕಾಲದಲ್ಲಿ ಬಲವಾದ ಸರ್ಪಶಿಶುವು ಬಿಲವನ್ನು ಪ್ರವೇಶಿಸುವಂತೆ ಭೂಮಿಯನ್ನು ಪ್ರವೇಶಿಸಿತು.

ತತೋऽಪರೇಣ ಭಲ್ಲೇನ ಮಾಧವಸ್ಯ ಧ್ವಜೋತ್ತಮಮ್ ।
ಚಿಚ್ಛೇದ ಸಮರೇ ದ್ರೌಣಿಃ ಸಿಂಹನಾದಂ ನನಾದ ಚ ॥೪೮॥

ಅನಂತರ ಇನ್ನೊಂದು ಭಲ್ಲದಿಂದ ಸಾತ್ಯಕಿಯ ರಥದ ಶ್ರೇಷ್ಠವಾದ ಧ್ವಜವನ್ನು ಕತ್ತರಿಸಿ ಅಶ್ವತ್ಥಾಮರು ರಣರಂಗದಲ್ಲಿ ಸಿಂಹನಾದವನ್ನು ಮಾಡಿದರು.

ಪುನಶ್ಚೈನಂ ಶರೈಘೋರೈಶ್ಛಾದಯಾಮಾಸ ಭಾರತ ।
ನಿದಾಘಾಂತೇ ಮಹಾರಾಜ ಯಥಾ ಮೇಘೋ ದಿವಾಕರಮ್ ॥೪೯॥

ಎಲೈ ಭಾರತನೇ, ಮಹಾರಾಜನೇ, ಬೇಸಿಗೆಯು ಕಳೆದ ಮೇಲೆ ಮೋಡಗಳು ಸೂರ್ಯನನ್ನು ಮುಚ್ಚಿದಂತೆ ಪುನಃ ಘೋರವಾದ ಬಾಣಗಳನ್ನು ಪ್ರಯೋಗಿಸಿ ಸಾತ್ಯಕಿಯನ್ನು ಮುಚ್ಚಿಹಾಕಿದರು.

ಸಾತ್ಯಕಿಶ್ಚ ಮಹಾರಾಜ ಶರಜಾಲಂ ನಿಹತ್ಯ ತತ್ ।
ದ್ರೌಣಿಮಭ್ಯಪತತ್ ತೂರ್ಣಂ ಶರಜಾಲೈರನೇಕಧಾ ॥೫೦॥

ಎಲೈ ಮಹಾರಾಜನೇ, ಸಾತ್ಯಕಿಯೂ ಸಹ ಅಶ್ವತ್ಥಾಮರ ಬಾಣಗಳ ಸಮೂಹಗಳನ್ನು ವಿನಾಶಗೊಳಿಸಿ ತಾನೂ ಅನೇಕ ವಿಧವಾದ ಶರಜಾಲಗಳನ್ನು ಸೃಷ್ಟಿಸಿ ಶೀಘ್ರವಾಗಿ ಅವರ ಮೇಲೆ ಎರಗಿದನು.

ತಾಪಯಾಮಾಸ ಚ ದ್ರೌಣಿಂ ಶೈನೇಯಃ ಪರವೀರಹಾ ।
ವಿಮುಕ್ತೋ ಮೇಘಜಾಲೇನ ಯಥೈವ ತಪನಸ್ತಥಾ ॥೫೧॥

ಮೇಘಮಂಡಲದಿಂದ ಹೊರಗೆ ಬಂದ ಸೂರ್ಯನು ತಾಪವನ್ನು ಕೊಡುವಂತೆ ಪರವೀರಘಾತಕನಾದ ಸಾತ್ಯಕಿಯು ಅಶ್ವತ್ಥಾಮರನ್ನು ಸಂತಾಪಗೊಳಿಸಿದನು.

ಶರಾಣಾಂ ಚ ಸಹಸ್ರೇಣ ಪುನರೇನಂ ಸಮುದ್ಯತಮ್ ।
ಸಾತ್ಯಕಿಶ್ಛಾದಯಾಮಾಸ ನನಾದ ಚ ಮಹಾಬಲಃ ॥೫೨॥

ಪುನಃ ತಮ್ಮ ಧನುಸ್ಸಿನಲ್ಲಿ ಬಾಣವನ್ನು ಹೂಡಲು ಪ್ರಯತ್ನಿಸುತ್ತಿದ್ದ ಅವರ ಮೇಲೆ ಸಾತ್ಯಕಿಯು ಸಾವಿರ ಬಾಣಗಳನ್ನು ಪ್ರಯೋಗಿಸಿ, ಅವರನ್ನು ಮುಚ್ಚಿಹಾಕಿ ಮಹಾಬಲನಾದ ಅವನು ಸಿಂಹನಾದವನ್ನು ಮಾಡಿದನು.

ದೃಷ್ಟ್ವಾ ಪುತ್ರಂ ತಥಾ ಗ್ರಸ್ತಂ ರಾಹುಣೇವ ನಿಶಾಕರಮ್ ।
ಅಭ್ಯದ್ರವತ ಶೈನೇಯಂ ಭಾರದ್ವಾಜಃ ಪ್ರತಾಪವಾನ್ ॥೫೩॥

ತಮ್ಮ ಪುತ್ರನು ರಾಹುವಿನಿಂದ ಚಂದ್ರನು ಗ್ರಸ್ತನಾದಂತೆ ಸಾತ್ಯಕಿಯಿಂದ ಪೀಡಿತನಾಗಿರುವುದನ್ನು ನೋಡಿ ಪ್ರತಾಪಶಾಲಿಗಳಾದ ದ್ರೋಣರು ಸಾತ್ಯಕಿಯ ಮೇಲೆ ಎರಗಿದರು.

ವಿವ್ಯಾಧ ಚ ಪೃಷತ್ಕೇನ ಸುತೀಕ್ಷ್ಣೇನ ಮಹಾಮೃಧೇ ।
ಪರೀಪ್ಸನ್ ಸ್ವಸುತಂ ರಾಜನ್ ವಾಷ್ಣೇಯೇನಾಭಿತಾಪಿತಮ್ ॥೫೪॥

ಎಲೈ ರಾಜನೇ, ಸಾತ್ಯಕಿಯಿಂದ ಬಹಳ ಪೀಡಿತರಾದ ತಮ್ಮ ಪುತ್ರರನ್ನು ರಕ್ಷಿಸಲು ಆ ಮಹಾಯುದ್ಧದಲ್ಲಿ ಸಾತ್ಯಕಿಯ ಮೇಲೆ ಬಹಳ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿದರು.

ಸಾತ್ಯಕಿಸ್ತು ರಣೇ ಜಿತ್ವಾ ಗುರುಪುತ್ರಂ ಮಹಾರಥಮ್ ।
ದ್ರೋಣಂ ವಿವ್ಯಾಧ ವಿಂಶತ್ಯಾ ಸರ್ವಪಾರಶವೈಃ ಶರೈಃ ॥೫೫॥

ಸಾತ್ಯಕಿಯಾದರೋ ಯುದ್ಧದಲ್ಲಿ ಮಹಾರಥರೂ, ಗುರುಪುತ್ರರೂ ಆದ ಅಶ್ವತ್ಥಾಮರನ್ನು ಗೆದ್ದು, ಅಯೋಮಯವಾದ ಇಪ್ಪತ್ತು ಬಾಣಗಳನ್ನು ಪ್ರಯೋಗಿಸಿ ದ್ರೋಣರನ್ನು ವ್ಯಥೆಗೊಳಿಸಿದನು.

ತದಂತರಮಮೇಯಾತ್ಮಾ ಕೌಂತೇಯಃ ಶ್ವೇತವಾಹನಃ ।
ಅಭ್ಯದ್ರವದ್ ರಣೇ ಕ್ರುದ್ಧೋ ದ್ರೋಣಂ ಪ್ರತಿ ಮಹಾರಥಃ ॥೫೬॥

ಆ ಸಮಯದಲ್ಲಿ ಮಹಾರಥನೂ, ಕೌಂತೇಯನೂ, ಅಚಿಂತ್ಯ ಸಾಮರ್ಥ್ಯೋಪೇತನೂ, ಶ್ವೇತಾಶ್ವನೂ ಆದ ಅರ್ಜುನನು ಕ್ರುದ್ಧನಾಗಿ ಯುದ್ಧದಲ್ಲಿ ದ್ರೋಣರ ಕಡೆಗೆ ಧಾವಿಸಿದನು.

ತತೋ ದ್ರೋಣಶ್ಚ ಪಾರ್ಥಶ್ಚ ಸಮೇಯಾತಾಂ ಮಹಾಮೃಧೇ ।
ಯಥಾ ಬುಧಶ್ಚ ಶುಕ್ರಶ್ಚ ಮಹಾರಾಜ ನಭಸ್ತಲೇ ॥೫೭॥

ಎಲೈ ಮಹಾರಾಜನೇ, ಆಗ ಆಕಾಶದಲ್ಲಿ ಬುಧನೂ ಮತ್ತು ಶುಕ್ರನೂ ಸೇರಿದಂತೆ ದ್ರೋಣರೂ ಮತ್ತು ಅರ್ಜುನನೂ ಯುದ್ಧದಲ್ಲಿ ಪರಸ್ಪರ ಸಮಾಗಮವನ್ನು ಹೊಂದಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಅಷ್ಟನವತಿತಮೋऽಧ್ಯಾಯಃ ॥

॥ ಭೀಷ್ಮವಧಪರ್ವಣಿ ಅಷ್ಟಪಂಚಾಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ತೊಂಬತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೊಂಬತ್ತನೆಯ ಅಧ್ಯಾಯ

ದ್ರೋಣಾರ್ಜುನರ ಯುದ್ಧ.
ಭೀಮಸೇನನಿಂದ ಗದೆಯಿಂದ ಗಜಸೇನೆಯ ಮರ್ದನ.

ಧೃತರಾಷ್ಟ್ರಃ

ಕಥಂ ದ್ರೋಣೋ ಮಹೇಷ್ವಾಸಃ ಪಾಂಡವಶ್ಚ ಧನಂಜಯಃ ।
ಸಮೀಯತೂ ರಣೇ ಶೂರೌ ತನ್ಮಾಚಕ್ಷ್ವ ಸಂಜಯ ॥೧॥

ಧೃತರಾಷ್ಟ್ರ- ಎಲೈ ಸಂಜಯನೇ, ಮಹಾಧನುರ್ಧಾರಿಗಳಾದ ದ್ರೋಣರು ಮತ್ತು ಪಾಂಡುಪುತ್ರನಾದ ಅರ್ಜುನನು- ಶೂರರಾದ ಇವರಿಬ್ಬರೂ ಹೇಗೆ ಯುದ್ಧದಲ್ಲಿ ಪರಸ್ಪರ ಸೆಣಸಾಡಿದರು ಎಂದು ನನಗೆ ಹೇಳು.

ಪ್ರಿಯೋ ಹಿ ಪಾಂಡವೋ ನಿತ್ಯಂ ಭಾರದ್ವಾಜಸ್ಯ ಧೀಮತಃ ।
ಆಚಾರ್ಯಶ್ಚ ರಣೇ ನಿತ್ಯಂ ಪ್ರಿಯಃ ಪಾರ್ಥಸ್ಯ ಸಂಜಯ ॥೨॥

ಎಲೈ ಸಂಜಯನೇ, ಮೇಧಾವಿಗಳಾದ ದ್ರೋಣರಿಗೆ ಅರ್ಜುನನು ಯಾವಾಗಲೂ ಪ್ರಿಯನಾದವನಷ್ಟೆ? ದ್ರೋಣರೂ ಸಹ ಯುದ್ಧದಲ್ಲಿ ಯಾವಾಗಲೂ ಅರ್ಜುನನಿಗೆ ಪ್ರಿಯರಾದವರು.

ತಾವುಭೌ ರಥಿನೌ ಸಂಖ್ಯೇ ದೃಪ್ತೌ ಸಿಂಹಾವಿವೋತ್ಕಟೌ ।
ಕಥಂ ಸಮೀಯತುರ್ಯುದ್ಧೇ ಭಾರದ್ವಾಜಧನಂಜಯೌ ॥೩॥

ಎಲೈ ಸಂಜಯನೇ, ದ್ರೋಣ ಮತ್ತು ಅರ್ಜುನರಿಬ್ಬರೂ ಸಿಂಹದಂತೆ ಉತ್ಕಟವಾದ ದರ್ಪವುಳ್ಳ ಮಹಾರಥರು. ಅವರು ಹೇಗೆ ಒಬ್ಬರ ಜೊತೆಯಲ್ಲಿ ಒಬ್ಬರು ಯುದ್ಧವನ್ನು ಮಾಡಿದರು?

ಸಂಜಯಃ

ನ ದ್ರೋಣಃ ಸಮರೇ ಪಾರ್ಥಂ ಜಾನೀತೇ ಪ್ರಿಯಮಾತ್ಮನಃ ।
ಕ್ಷತ್ರಧರ್ಮಂ ಪುರಸ್ಕೃತ್ಯ ಪಾರ್ಥೋ ವಾ ಗುರುಮಾಹವೇ ॥೪॥

ಸಂಜಯ– ದ್ರೋಣರು ಯುದ್ಧದಲ್ಲಿ ಅರ್ಜುನನನ್ನು ತಮಗೆ ಪ್ರಿಯನಾದವನೆಂದು ತಿಳಿಯುವುದಿಲ್ಲ. ಕ್ಷತ್ರಿಯ ಧರ್ಮವನ್ನು ಗೌರವಿಸುವ ಅರ್ಜುನನೂ ಸಹ ಯುದ್ಧದಲ್ಲಿ ದ್ರೋಣರನ್ನು ತನ್ನ ಗುರುಗಳೆಂದು ತಿಳಿಯುವುದಿಲ್ಲ.

ನ ಕ್ಷತ್ರಿಯಾ ರಣೇ ರಾಜನ್ ವರ್ಜಯಂತಿ ಪರಸ್ಪರಮ್ ।
ನಿರ್ಮರ್ಯಾದಂ ಹಿ ಯುಧ್ಯಂತೇ ಪಿತೃಭಿರ್ಭ್ರಾತೃಭಿಃ ಸಹ ॥೫॥

ಎಲೈ ರಾಜನೇ, ಯುದ್ಧದಲ್ಲಿ ಕ್ಷತ್ರಿಯರು ಪರಸ್ಪರವಾಗಿ ಯಾರನ್ನೂ ಬಿಡುವುದಿಲ್ಲ. ಎಲ್ಲ ಎಲ್ಲೆಯನ್ನೂ ಮೀರಿ ತಂದೆಯ ಜೊತೆಯಲ್ಲಿಯೂ, ಸಹೋದರರ ಜೊತೆಯಲ್ಲಿಯೂ ಯುದ್ಧ ಮಾಡುವರಷ್ಟೆ?

ರಣೇ ಭಾರತ ಪಾರ್ಥೇನ ದ್ರೋಣೋ ವಿದ್ಧ್ವಸ್ತ್ರಭಿಃ ಶರೈಃ ।
ನಾಚಿಂತಯತ ತಾನ್ ಬಾಣಾನ್ ಪಾರ್ಥಚಾಪಚ್ಯುತಾನ್ ಯುಧಿ ॥೬॥

ಎಲೈ ಭಾರತನೇ, ಯುದ್ಧದಲ್ಲಿ ಅರ್ಜುನನಿಂದ ಮೂರುಬಾಣಗಳಿಂದ ಹೊಡೆಯಲ್ಪಟ್ಟ ದ್ರೋಣರು ಅರ್ಜುನನು ಪ್ರಯೋಗಿಸಿದ ಬಾಣಗಳನ್ನು ಗಂಭೀರವಾಗಿ ತೆಗೆದುಕೊಳ್ಳಲೇ ಇಲ್ಲ.

ಶರವೃಷ್ಟ್ಯಾ ಪುನಃ ಪಾರ್ಥಶ್ಚಾದಯಾಮಾಸ ತಂ ರಣೇ ।
ಪ್ರಜಜ್ವಾಲ ಚ ರೋಷೇಣ ಗಹನೇऽಗ್ನಿರಿವೋತ್ಥಿತಃ ॥೭॥

ಅರ್ಜುನನು ರಣರಂಗದಲ್ಲಿ ಅವರನ್ನು ಪುನಃ ತನ್ನ ಬಾಣಗಳ ಮಳೆಯಿಂದ ಆಚ್ಛಾದಿಸಿ ಕಾಡಿನಲ್ಲಿ ಉಂಟಾದ ಅಗ್ನಿಯಂತೆ ರೋಷದಿಂದ ಜ್ವಲಿಸಿದನು.

ತತೋऽರ್ಜುನಂ ರಣೇ ದ್ರೋಣಃ ಶರೈಃ ಸನ್ನತಪರ್ವಭಿಃ ।
ವಾರಯಾಮಾಸ ರಾಜೇಂದ್ರ ನಟಿರಾದಿವ ಭಾರತ ॥೮॥

ಎಲೈ ಭಾರತನೇ, ರಾಜೇಂದ್ರನೇ, ಆಗ ದ್ರೋಣರು ಬಾಗಿದ ತುದಿಯುಳ್ಳ ಬಾಣಗಳಿಂದ ಶೀಘ್ರವಾಗಿ ಅರ್ಜುನನನ್ನು ತಡೆದರು.

ತತೋ ದುರ್ಯೋಧನೋ ರಾಜಾ ಸುಶರ್ಮಾಣಮಚೋದಯತ್ ।
ದ್ರೋಣಸ್ಯ ಸಮರೇ ರಾಜನ್ ಪಾರ್ಷ್ಣಿಗ್ರಹಣಕಾರಣಾತ್ ॥೯॥

ಎಲೈ ರಾಜನೇ, ಆಗ ದ್ರೋಣರಿಗೆ ಸಹಾಯವನ್ನು ಮಾಡುವಂತೆ ರಾಜನಾದ ದುರ್ಯೋಧನನು ಸುಶರ್ಮನನ್ನು ಪ್ರಚೋದಿಸಿದನು.

ತ್ರಿಗರ್ತರಾಡಪಿ ಕ್ರುದ್ಧೋ ಭೃಶಮಾಯಮ್ಯ ಕಾರ್ಮುಕಮ್ ।
ಭಾದಯಾಮಾಸ ಸಮರೇ ಪಾರ್ಥಂ ಬಾಣೈರಯೋಮುಖೈಃ ॥೧೦॥

ತ್ರಿಗರ್ತರಾಜನಾದ ಸುಶರ್ಮನೂ ಸಹ ಕೋಪಗೊಂಡು ತನ್ನ ಧನುಸ್ಸನ್ನು ಬಗ್ಗಿಸಿ ಕಬ್ಬಿಣದ ತುದಿಯುಳ್ಳ ಬಾಣಗಳಿಂದ ಯುದ್ಧದಲ್ಲಿ ಅರ್ಜುನನನ್ನು ಆಚ್ಛಾದಿಸಿದನು.

ತಾಭ್ಯಾಂ ಮುಕ್ತಾಃ ಶರಾ ರಾಜನ್ನಂತರಿಕ್ಷೇ ವಿರೇಜಿರೇ ।
ಹಂಸಾ ಇವ ಮಹಾರಾಜ ಶರತ್ಕಾಲೇ ನಭಸ್ತಳೇ ॥೧೧॥

ಎಲೈ ಮಹಾರಾಜನೇ, ಅವರಿಬ್ಬರೂ ಪ್ರಯೋಗಿಸಿದ ಬಾಣಗಳು ಅಂತರಿಕ್ಷದಲ್ಲಿ ಶರತ್ಕಾಲದಲ್ಲಿ ಆಕಾಶದಲ್ಲಿ ತೋರುವ ಹಂಸಪಕ್ಷಿಗಳಂತೆ ಶೋಭಿಸಿದವು.

ತೇ ಶರಾಃ ಪ್ರಾಪ್ಯ ಕೌಂತೇಯಂ ಸಮಸ್ತಾ ವಿವಿಶುಃ ಪ್ರಭೋ ।
ಫಲಭಾರನತಂ ಯದ್ವತ್ ಸ್ವಾದುವೃಕ್ಷಂ ವಿಹಂಗಮಾಃ ॥೧೨॥

ಎಲೈ ಪ್ರಭುವೇ, ಮಧುರವಾದ ಫಲದ ಭಾರದಿಂದ ಬಗ್ಗಿದ ವೃಕ್ಷಗಳನ್ನು ಪಕ್ಷಿಗಳು ಸೇರುವಂತೆ ಆ ಬಾಣಗಳು ಕೌಂತೇಯನಾದ ಅರ್ಜುನನನ್ನು ಸೇರಿದವು.

ಅರ್ಜುನಸ್ತು ರಣೇ ನಾದಂ ವಿನದ್ಯ ರಥಿನಾಂ ವರಃ ।
ತ್ರಿಗರ್ತರಾಜಂ ಸಮರೇ ಸಪುತ್ರಂ ವಿವ್ಯಧೇ ಶರೈಃ ॥೧೩॥

ರಥಿಶ್ರೇಷ್ಠನಾದ ಅರ್ಜುನನು ರಣರಂಗದಲ್ಲಿ ಘೋರವಾದ ನಾದವನ್ನು ಮಾಡಿ ಪುತ್ರಸಹಿತನಾದ ತ್ರಿಗರ್ತರಾಜನನ್ನು ಯುದ್ಧದಲ್ಲಿ ಬಾಣಗಳಿಂದ ಪೀಡಿಸಿದನು.

ತೇ ವಧ್ಯಮಾನಾಃ ಪಾರ್ಥೇನ ಕಾಲೇನೇವ ಯುಗಕ್ಷಯೇ ।
ಪಾರ್ಥಮೇವಾಭ್ಯವರ್ತಂತ ಮರಣೇ ಕೃತನಿಶ್ಚಯಾಃ ।
ಮುಮುಚುಃ ಶರವೃಷ್ಟಿಂ ಚ ಪಾಂಡವಸ್ಯ ರಥಂ ಪ್ರತಿ ॥೧೪॥

ಯುಗಾಂತ ಸಮಯದಲ್ಲಿ ಮೃತ್ಯುವಿನ ಪ್ರಹಾರಕ್ಕೆ ಒಳಗಾದಂತೆ ಅರ್ಜುನನ ಪ್ರಹಾರಕ್ಕೆ ಒಳಗಾದ ಅವರು ಮರಣವನ್ನು ನಿಶ್ಚಯಿಸಿ ಅರ್ಜುನನ ಕಡೆಗೇ ಧಾವಿಸಿದರು. ಮತ್ತು ಅರ್ಜುನನ ರಥದ ಮೇಲೆ ಬಾಣಗಳ ಮಳೆಯನ್ನು ಕರೆದರು.

ಶರವೃಷ್ಟಿಂ ತತಸ್ತಾಂ ತು ಶರವರ್ಷೇಣ ಪಾಂಡವಃ ।
ಪ್ರತಿಜಗ್ರಾಹ ರಾಜೇಂದ್ರ ತೋಯವೃಷ್ಟಿಮಿವಾಚಲಃ ॥೧೫॥

ಎಲೈ ರಾಜೇಂದ್ರನೇ, ಆಗ ಅರ್ಜುನನು ಪರ್ವತವು ಮಳೆಯ ಧಾರೆಯನ್ನು ಸ್ವೀಕರಿಸುವಂತೆ ಆ ಬಾಣಗಳ ಮಳೆಯನ್ನು ಸ್ವೀಕರಿಸಿದನು.

ತತ್ರಾದ್ಭುತಮಪಶ್ಯಾಮ ಬೀಭತ್ಸೋರ್ಹಸ್ತಲಾಘವಮ್ ।
ವಿಮುಕ್ತಾಂ ಬಹುಭಿಃ ಶೂರೈಃ ಶಸ್ತ್ರವೃಷ್ಟಿಂ ದುರಾಸದಾಮ್ ॥೧೬॥

ಯದೇಕೋ ವಾರಯಾಮಾಸ ಮಾರುತೋಽಭ್ರಗಣಾನಿವ ।
ಕರ್ಮಣಾ ತೇನ ಪಾರ್ಥಸ್ಯ ತುತುಷುರ್ದೇವದಾನವಾಃ ॥೧೭॥

ಅನೇಕ ಶೂರರು ಮಾಡಿದ, ಹತ್ತಿರ ಸುಳಿಯಲೂ ಅಸಾಧ್ಯವಾದ ಆ ಬಾಣಗಳ ಮಳೆಯನ್ನು ಬಿರುಗಾಳಿಯು ಮೋಡಗಳನ್ನು ಚದುರಿಸಿದಂತೆ ಒಬ್ಬನೇ ತಡೆದ (ಚದುರಿಸಿದ) ಅರ್ಜುನನ ಆ ಅದ್ಭುತವಾದ ಕ್ಷಿಪ್ರಕಾರಿತ್ವವನ್ನು ನಾವು ನೋಡಿದೆವು. ಅರ್ಜುನನ ಆ ಕಾರ್ಯವನ್ನು ನೋಡಿ ದೇವತೆಗಳು ಮತ್ತು ದಾನವರು ಸಂತೋಷಗೊಂಡರು.

ಅಥ ಕ್ರುದ್ಧೋ ರಣೇ ಪಾರ್ಥಸ್ತ್ರಿಗರ್ತಾನ್ ಪ್ರತಿ ಭಾರತ ।
ಮುಮೋಚಾಸ್ತ್ರಂ ಮಹಾರಾಜ ವಾಯವ್ಯಂ ಪೃತನಾಮುಖೇ ॥೧೮॥

ಎಲೈ ಭಾರತನೇ, ಮಹಾರಾಜನೇ, ಅನಂತರ ಕೋಪಗೊಂಡ ಅರ್ಜುನನು ಸೈನ್ಯದ ಅಗ್ರಭಾಗದಲ್ಲಿ ನಿಂತು ತ್ರಿಗರ್ತರ ಮೇಲೆ ವಾಯವ್ಯಾಸ್ತ್ರವನ್ನು ಪ್ರಯೋಗಿಸಿದನು.

ಪ್ರಾದುರಾಸೀತ್ ತತೋ ವಾಯುಃ ಕ್ಷೋಭಯಾಣೋ ನಭಸ್ತಲಮ್ ।
ಪಾತಯನ್ ವೈ ತರುಗಣಾನ್ ವಿನಿಘ್ನಂಶ್ಚೈವ ಸೈನಿಕಾನ್ ॥೧೯॥

ಆಗ ಅಸ್ತ್ರಸಮೂಹವನ್ನು ಓಡಿಸುತ್ತಾ, ಸೈನಿಕರನ್ನು ಕೆಡವುತ್ತಾ ಆಕಾಶವನ್ನೆಲ್ಲಾ ಕ್ಷೋಭೆಗೊಳಿಸುವ ಬಿರುಗಾಳಿಯು ಉದ್ಭವಿಸಿತು.

ತತೋ ದ್ರೋಣೋಽಭವೀಕ್ಷ್ಯೈವ ವಾಯವ್ಯಾಸ್ತ್ರಂ ಸುದಾರುಣಮ್ ।
ಶೈಲಮನ್ಯನ್ಮಹಾರಾಜ ಘೋರಮಸ್ತ್ರಂ ಮುಮೋಚ ಹ ॥೨೦॥

ಎಲೈ ಮಹಾರಾಜನೇ, ಆಗ ದ್ರೋಣರು ದಾರುಣವಾದ ಆ ವಾಯವ್ಯಾಸ್ತ್ರವನ್ನು ನೋಡಿ ಘೋರವಾದ ಪರ್ವತಾಸ್ತ್ರವನ್ನು ಪ್ರಯೋಗಿಸಿದರು.

ದ್ರೋಣೇನ ಯುಧಿ ನಿರ್ಮುಕ್ತೇ ತಸ್ಮಿನಸ್ತ್ರೇ ಮಹಾಮೃಧೇ ।
ಪ್ರಶಶಾಮ ತತೋ ವಾಯುಃ ಪ್ರಸನ್ನಾಶ್ಚಾಭವನ್ ದಿಶಃ ॥೨೧॥

ಮಹಾಯುದ್ಧದಲ್ಲಿ ದ್ರೋಣರು ಆ ಅಸ್ತ್ರವನ್ನು ಪ್ರಯೋಗಿಸುತ್ತಿರಲು ವಾಯುವು ಶಾಂತವಾಯಿತು ಮತ್ತು ದಿಕ್ಕುಗಳು ಪ್ರಸನ್ನವಾದವು.

ತತಃ ಪಾಂಡುಸುತೋ ವೀರಸ್ತ್ರಿಗರ್ತಸ್ಯ ರಥವ್ರಜಾನ್ ।
ನಿರುತ್ಸಾಹಾನ್ ರಣೇ ಚಕ್ರೇ ವಿಮುಖಾನ್ ವಿಪರಾಕ್ರಮಾನ್ ॥೨೨॥

ಆಗ ಪಾಂಡುಸುತನಾದ ಅರ್ಜುನನು ತ್ರಿಗರ್ತರ ರಥಸಮೂಹಗಳನ್ನು ಉತ್ಸಾಹ, ಪರಾಕ್ರಮಶೂನ್ಯಗಳನ್ನಾಗಿ ಮಾಡಿ ಯುದ್ಧವಿಮುಖಗಳನ್ನಾಗಿ ಮಾಡಿದನು.

ತತೋ ದುರ್ಯೋಧನೋ ರಾಜಾ ಕೃಪಶ್ಚ ರಥಿನಾಂ ವರಃ ।
ಅಶ್ವತ್ಥಾಮಾ ತತಃ ಶಲ್ಯಃ ಕಾಂಬೋಜಶ್ಚ ಸುದಕ್ಷಿಣಃ ॥೨೩॥

ವಿಂದಾನುವಿಂದಾವಾವಂತ್ಯೌ ಬಾಹ್ಲಿಕಶ್ಚ ಸಬಾಹ್ಲಿಕಃ ।
ಮಹತಾ ರಥವಂಶೇನ ಪಾರ್ಥಸ್ಯಾವಾರಯನ್ ದಿಶಃ ॥೨೪॥

ಆಗ ರಾಜನಾದ ದುರ್ಯೋಧನನೂ, ರಥಿಶ್ರೇಷ್ಠರಾದ ಕೃಪರೂ, ಅಶ್ವತ್ಥಾಮರೂ, ಕಾಂಬೋಜ ದೇಶದ ಸುದಕ್ಷಿಣನೂ, ಅವಂತಿದೇಶದ ವಿಂದಾನುವಿಂದರೂ, ಬಾಹ್ಲಿಕ

ಸೇನೆಯಿಂದ ಕೂಡಿದ ಬಾಹ್ಲಿಕ ಇವರೆಲ್ಲರೂ ದೊಡ್ಡ ರಥಸಮೂಹದಿಂದ ಅರ್ಜುನನನ್ನು ಎಲ್ಲ ದಿಕ್ಕುಗಳಿಂದಲೂ ತಡೆದರು.

ತಥೈವ ಭಗದತ್ತಶ್ಚ ಶ್ರುತಾಯುಶ್ಚ ಮಹಾಬಲಃ ।
ಗಜಾನೀಕೇನ ಭೀಮಸ್ಯ ತಾವವಾರಯತಾಂ ದಿಶಃ ॥೨೫॥

ಹಾಗೆಯೇ ಮಹಾಬಲನಾದ ಶ್ರುತಾಯು ಮತ್ತು ಭಗದತ್ತರು ಗಜಸಮೂಹದಿಂದ ಭೀಮನನ್ನು ಎಲ್ಲ ದಿಕ್ಕುಗಳಲ್ಲಿಯೂ ತಡೆದರು.

ಭೂರಿಶ್ರವಾಃ ಶಲಶ್ಚೈವ ಸೌಬಲಶ್ಚ ವಿಶಾಂಪತೇ ।
ಶರೌಘೈರ್ವಿವಿಧೈಸ್ತೂರ್ಣಂ ಮಾದ್ರೀಪುತ್ರಾವವಾರಯನ್ ॥೨೬॥

ಎಲೈ ರಾಜನೇ, ಭೂರಿಶ್ರವ, ಶಲ ಮತ್ತು ಶಕುನಿ- ಇವರು ವಿವಿಧವಾದ ಬಾಣಗಳಿಂದ ಶೀಘ್ರವಾಗಿ ಮಾದ್ರೀಪುತ್ರರನ್ನು ತಡೆದರು.

ಭೀಷ್ಮಸ್ತು ಸಹಿತಃ ಸರ್ವೈರ್ಧಾರ್ತರಾಷ್ಟ್ರಸ್ಯ ಸೈನಿಕೈಃ ।
ಯುಧಿಷ್ಠಿರಂ ಸಮಾಸಾದ್ಯ ಸರ್ವತಃ ಪರ್ಯವಾರಯತ್ ॥೨೭॥

ಭೀಷ್ಮರಾದರೋ ದುರ್ಯೋಧನಾದಿಗಳ ಎಲ್ಲಾ ಸೈನ್ಯದಿಂದಲೂ ಸಹಿತರಾಗಿ ಯುಧಿಷ್ಠಿರನನ್ನು ಸಮೀಪಿಸಿ ಅವನನ್ನು ಎಲ್ಲ ದಿಕ್ಕುಗಳಿಂದಲೂ ತಡೆದರು.

ಆಪತಂತಂ ಗಜಾನೀಕಂ ದೃಷ್ಟ್ವಾ ಪಾರ್ಥೋ ವೃಕೋದರಃ ।
ಲೇಲಿಹನ್ ಸೃಕ್ಕಿಣೀ ವೀರೋ ಮೃಗರಾಡಿವ ಕಾನನೇ ॥೨೮॥

ತತಸ್ತು ರಥಿನಾಂ ಶ್ರೇಷ್ಠೋ ಗದಾಂ ಗೃಹ್ಯ ಮಹಾಹವೇ ।
ಅವಪ್ಲುತ್ಯ ರಥಾತ್ ತೂರ್ಣಂ ತವ ಸೈನ್ಯಮಭೀಷಯತ್ ॥೨೯॥

ತನ್ನ ಬಳಿಗೆ ಬರುತ್ತಿರುವ ಗಜಸಮೂಹವನ್ನು ನೋಡಿದ ವೀರನಾದ, ರಥಿಶ್ರೇಷ್ಠನಾದ ಭೀಮಸೇನನು ಕಾಡಿನಲ್ಲಿ ಸಿಂಹದಂತೆ ಕಟಬಾಯಿಯನ್ನು ಸವರಿಕೊಳ್ಳುತ್ತಾ ಗದೆಯನ್ನು ಹಿಡಿದು ರಥದಿಂದ ಧುಮುಕಿ ನಿನ್ನ ಸೈನ್ಯವನ್ನು ಭಯಕ್ಕೆ ಈಡುಮಾಡಿದನು.

ತಮುದೀಕ್ಷ್ಯ ಗದಾಹಸ್ತಂ ತವಸ್ಥೇ ಗಜಸಾದಿನಃ ।
ಪರಿವವ್ರು ರಣೇ ಯತ್ತಾ ಭೀಮಸೇನಂ ಸಮಂತತಃ ॥೩೦॥

ಕೈಯಲ್ಲಿ ಗದೆಯನ್ನು ಹಿಡಿದ ಭೀಮಸೇನನನ್ನು ನೋಡಿ ನಿನ್ನ ಗಜಯೋಧರು ಪ್ರಯತ್ನಪೂರ್ವಕವಾಗಿ ಭೀಮಸೇನನನ್ನು ಎಲ್ಲ ಕಡೆಗಳಿಂದಲೂ ಸುತ್ತುವರಿದರು.

ಗಜಮಧ್ಯಮನುಪ್ರಾಪ್ತಃ ಪಾಂಡವಶ್ಚ ವ್ಯರಾಜತ ।
ಮೇಘಜಾಲಸ್ಯ ಮಹತೋ ಯಥಾ ಮಧ್ಯಗತೋ ರವಿಃ ॥೩೧॥

ಗಜಮಧ್ಯದಲ್ಲಿ ನಿಂತ ಭೀಮಸೇನನು ದೊಡ್ಡ ಮೋಡಗಳ ಮಧ್ಯದಲ್ಲಿ ನಿಂತ ಸೂರ್ಯನಂತೆ ಕಂಗೊಳಿಸಿದನು.

ವ್ಯಧಮತ್ ಸ ಗಜಾನೀಕಂ ಗದಯಾ ಪಾಂಡವರ್ಷಭಃ ।
ಮಹಾಭ್ರಜಾಲಮತುಲಂ ಮಾತರಿಶ್ವೇವ ಸಂತತಮ್ ॥೩೨॥

ಪಾಂಡವಶ್ರೇಷ್ಠನಾದ ಅವನು ವಾಯುವು ಅಸದೃಶವಾಗಿ ಹಬ್ಬಿದ ಮೋಡದ ಜಾಲವನ್ನು ನಾಶಪಡಿಸುವಂತೆ ಆ ಗಜಸಮೂಹವನ್ನು ಗದೆಯಿಂದ ನಾಶಪಡಿಸಿದನು.

ತೇ ವಧ್ಯಮಾನಾ ಬಲಿನಾ ಭೀಮಸೇನೇನ ದಂತಿನಃ ।
ಆರ್ತನಾದಂ ರಣೇ ಚಕ್ರುರ್ಗರ್ಜಂತೋ ಜಲದಾ ಇವ ॥೩೩॥

ಬಲಿಷ್ಠನಾದ ಭೀಮಸೇನನ ಹೊಡೆತಕ್ಕೆ ಸಿಕ್ಕಿದ ಗಜಗಳು ಮೋಡದಂತೆ ಗರ್ಜಿಸುತ್ತಾ ರಣರಂಗದಲ್ಲಿ ಆರ್ತನಾದವನ್ನು ಮಾಡಿದವು.

ಬಹುಧಾ ದಾರಿತಶ್ಚೈವ ವಿಷಾಣೈಸ್ತತ್ರ ದಂತಿಭಿಃ ।
ಫುಲ್ಲಾಶೋಕನಿಭಃ ಪಾರ್ಥಃ ಶುಶುಭೇ ರಣಮೂರ್ಧನಿ ॥೩೪॥

ಗಜಗಳ ದಂತಗಳಿಂದ ಬಹಳವಾಗಿ ಗಾಯಗೊಂಡ ಭೀಮಸೇನನು ರಣರಂಗದಲ್ಲಿ ಹೂವರಳಿದ ಅಶೋಕವೃಕ್ಷದಂತೆ ಶೋಭಿಸಿದನು.

ಸಾದಿನಾಂ ಶರವೃಷ್ಟಿಂ ಚ ವ್ಯಧಮದ್ ಗದಯಾ ತತಃ ।
ವಾಯುವೇಗಸಮಾಯುಕ್ತೋ ವ್ಯಚರತ್ ಪಾಂಡವೋ ಯುಧಿ ।
ವಿಷಾಣೋಲ್ಲಿಖಿತೈರ್ಗಾತ್ರೈರ್ವಿಷಾಣಾಭಿಹತೋ ಭೃಶಮ್ ॥೩೫॥

ಅಶ್ವಾರೋಹಿಗಳ (ಗಜಾರೋಹಿಗಳ) ಬಾಣಗಳ ಮಳೆಯನ್ನು ಅವನು ತನ್ನ ಗದೆಯಿಂದ ನಾಶಗೊಳಿಸಿದನು. ಗಜದಂತಗಳಿಂದ ಹೊಡೆಯಲ್ಪಟ್ಟು ಅವುಗಳಿಂದ ಗಾಯಗೊಂಡ ಪಾಂಡವನು ಯುದ್ಧದಲ್ಲಿ ವಾಯುವೇಗದಿಂದ ಸಂಚರಿಸಿದನು.

ವಿಷಾಣೇ ದಂತಿನಂ ಗೃಹ್ಯ ನಿರ್ವಿಷಾಣಮಥಾಕರೋತ್ ।
ವಿಷಾಣೇನ ಚ ತೇನೈವ ಕುಂಭೇಽಭ್ಯಾಹತ್ಯ ದಂತಿನಮ್ ।
ಪಾತಯಾಮಾಸ ಸಮರೇ ದಂಡಹಸ್ತ ಇವಾಂತಕಃ ॥೩೬॥

ಗಜವನ್ನು ದಂತದಲ್ಲಿ ಹಿಡಿದು ಎಳೆದು, ಅದನ್ನು ದಂತವಿಲ್ಲದಂತೆ ಮಾಡಿ, ಅದೇ ದಂತದಿಂದ ಗಜವನ್ನು ಕುಂಭಸ್ಥಲದಲ್ಲಿ ಹೊಡೆದು, ದಂಡಹಸ್ತನಾದ ಯಮನಂತೆ ಯುದ್ಧದಲ್ಲಿ ಗಜಗಳನ್ನು ಕೆಡವಿದನು.

ಶೋಣತಾಕ್ತಾಂ ಗದಾಂ ಬಿಭ್ರನ್ಮೇದೋಮಜ್ಜಾಕ್ಷತಚ್ಛವಿಃ ।
ಕೃತಾಂಗದಃ ಶೋಣಿತೇನ ರುದ್ರವತ್ ಪ್ರತ್ಯದೃಶ್ಯತ ॥೩೬॥

ಮೇಧಸ್ಸು ಮತ್ತು ಮಜ್ಜಗಳ ಲೇಪದಿಂದ ಉಂಟಾದ ಕಾಂತಿಯುಳ್ಳವನಾಗಿ ಅಂಗದವನ್ನು ಧರಿಸಿದ ಭೀಮಸೇನನು ರಕ್ತಸಿಕ್ತವಾದ ಗದೆಯನ್ನು ಹಿಡಿದು ರುದ್ರದೇವನಂತೆ ತೋರಿದನು.

ಏವಂ ತೇ ವಧ್ಯಮಾನಾಸ್ತು ಹತಶೇಷಾ ಮಹಾಗಜಾಃ ।
ಪ್ರಾದ್ರವಂತ ದಿಶೋ ರಾಜನ್ ವಿಮೃದ್ನಂತಃ ಸ್ವಕಂ ಬಲಮ್ ॥೩೭॥

ಎಲೈ ರಾಜನೇ, ಹೀಗೆ ಭೀಮಸೇನನಿಂದ ಪ್ರಹಾರಕ್ಕೆ ಒಳಗಾದಾಗ ಉಳಿದ ಮಹಾಗಜಗಳು ತಮ್ಮ ಸೈನ್ಯವನ್ನೇ ತುಳಿಯುತ್ತಾ ದಿಕ್ಕು ದಿಕ್ಕುಗಳಿಗೆ ಓಡಿಹೋದವು.

ದ್ರವದ್ಭಿರ್ಮಹಾನಾಗೈಃ ಸಮಂತಾದ್ ಭರತರ್ಷಭ ।
ದುರ್ಯೋಧನಬಲಂ ಸರ್ವಂ ಪುನರಾಸೀತ್ ಪರಾಙ್ಮುಖಮ್ ॥೩೮॥

ಎಲೈ ಭರತಶ್ರೇಷ್ಠನೇ, ಆ ಮಹಾಗಜಗಳು ಎಲ್ಲವೂ ಓಡಿಹೋಗುತ್ತಿರಲು ದುರ್ಯೋಧನನ ಸೈನ್ಯವೆಲ್ಲವೂ ಪುನಃ ಯುದ್ಧವಿಮುಖವಾಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಏಕೋನಶತತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ನವಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ತೊಂಬತ್ತೊಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರನೆಯ ಅಧ್ಯಾಯ

ಭೀಷ್ಮಾರ್ಜುನರ ಯುದ್ಧ.

ಸಂಜಯಃ

ಮಧ್ಯಾಹ್ನೇ ತು ಮಹಾರಾಜ ಸಂಗ್ರಾಮಃ ಸಮಪದ್ಯತ ।
ಲೋಕಕ್ಷಯಕರೋ ರೌದ್ರೋ ಭೀಷ್ಮಸ್ಯ ಸಹ ಸೋಮಕೈಃ ॥೧॥

ಸಂಜಯ– ಎಲೈ ಮಹಾರಾಜನೇ, ಮಧ್ಯಾಹ್ನದಲ್ಲಿ ಭೀಷ್ಮರಿಗೂ ಮತ್ತು ಸೋಮಕರಿಗೂ ಘೋರವೂ, ಲೋಕನಾಶಕರವೂ ಆದ ಸಂಗ್ರಾಮವು ನಡೆಯಿತು.

ಗಾಂಗೇಯೋ ರಥಿನಾಂ ಶ್ರೇಷ್ಠಃ ಪಾಂಡವಾನಾಮನೀಕಿನೀಮ್ ।
ವ್ಯಧಮನ್ನಿಶಿತೈರ್ಬಾಣೈಃ ಶತಶೋಽಥ ಸಹಸ್ರಶಃ ॥೨॥

ರಥಿಶ್ರೇಷ್ಠರಾದ ಭೀಷ್ಮರು ತಮ್ಮ ತೀಕ್ಷ್ಣವಾದ ಬಾಣಗಳಿಂದ ಪಾಂಡವರ ಸೈನ್ಯವನ್ನು ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ವಿನಾಶಗೊಳಿಸಿದರು.

ಸಂಮಮರ್ದ ಚ ತತ್ಸೈನ್ಯಂ ಪಿತಾ ದೇವವ್ರತಸ್ತವ ।
ಧಾನ್ಯಾನಾಮಿವ ಲೂನಾನಾಂ ಪ್ರಕರಂ ಗೋಗಣಾ ಇವ ॥೩॥

ನಿನ್ನ ತಂದೆಯಾದ ಭೀಷ್ಮರು ಕೊಯ್ದ ಧಾನ್ಯಗಳ ರಾಶಿಯನ್ನು ಗೋವುಗಳು ವಿನಾಶಪಡಿಸಿದಂತೆ ಆ ಸೈನ್ಯವನ್ನು ಮರ್ದಿಸಿದರು.

ಧೃಷ್ಟದ್ಯುಮ್ನಃ ಶಿಖಂಡೀ ಚ ವಿರಾಟೋ ದ್ರುಪದಸ್ತಥಾ ।
ಭೀಷ್ಮಮಾಸಾದ್ಯ ಸಮರೇ ಶರೈರ್ಜಘ್ನುರ್ಮಹಾರಥಮ್ ॥೪॥

ಧೃಷ್ಟದ್ಯುಮ್ನ, ಶಿಖಂಡಿ, ವಿರಾಟ ಮತ್ತು ದ್ರುಪದರು ಯುದ್ಧದಲ್ಲಿ ಭೀಷ್ಮರನ್ನು ಸಮೀಪಿಸಿ ಮಹಾರಥರಾದ ಅವರನ್ನು ಬಾಣಗಳಿಂದ ಹೊಡೆದರು.

ಧೃಷ್ಟದ್ಯುಮ್ನಂ ತತೋ ವಿದ್ವಾ ವಿರಾಟಂ ಚ ತ್ರಿಭಿಃ ಶರೈಃ ।
ದ್ರುಪದಸ್ಯ ಚ ನಾರಾಚಂ ಪ್ರೇಷಯಾಮಾಸ ಭಾರತ ॥೫॥

ಎಲೈ ಭಾರತನೇ, ಭೀಷ್ಮರು ಧೃಷ್ಟದ್ಯುಮ್ನನನ್ನು ಬಾಣದಿಂದ ಹೊಡೆದು, ವಿರಾಟನನ್ನು ಮೂರು ಬಾಣದಿಂದ ಹೊಡೆದು, ದ್ರುಪದನ ಮೇಲೆ ಒಂದು ನಾರಾಚವನ್ನು ಪ್ರಯೋಗಿಸಿದರು.

ತೇನ ವಿದ್ಧಾ ಮಹೇಷ್ವಾಸಾ ಭೀಷ್ಮೇಣಾಮಿತ್ರಕರ್ಶಿನಾ ।
ಚುಕ್ರುಧುಃ ಸಮರೇ ರಾಜನ್ ಪಾದಸ್ಪೃಷ್ಟಾ ಇವೋರಗಾಃ ॥೬॥

ಎಲೈ ರಾಜನೇ, ಶತ್ರುಸಂತಾಪಕರಾದ ಭೀಷ್ಮರಿಂದ ಹೀಗೆ ಹೊಡೆಯಲ್ಪಟ್ಟ ಮಹಾಧನುರ್ಧಾರಿಗಳಾದ ಅವರು ಪಾದದಿಂದ ತುಳಿದ ಸರ್ಪಗಳಂತೆ ಯುದ್ಧದಲ್ಲಿ ಕೋಪಗೊಂಡರು.

ಶಿಖಂಡೀ ತಂ ಚ ವಿವ್ಯಾಧ ಭರತಾನಾಂ ಪಿತಾಮಹಮ್ ।
ಸ್ಮೃತ್ವಾ ಮನಸಾ ಧ್ಯಾತ್ವಾ ನಾಸ್ಯೈ ಪ್ರಾಹರದಚ್ಯುತಃ ॥೭॥

ಶಿಖಂಡಿಯೂ ಸಹ ಭರತರ ಪಿತಾಮಹರಾದ ಭೀಷ್ಮರ ಮೇಲೆ ಬಾಣಗಳನ್ನು ಪ್ರಯೋಗಿಸಿದನು. ಅವನು ಮೊದಲು ಕನ್ಯೆಯಾಗಿದ್ದುದನ್ನು ಮನಸ್ಸಿನಲ್ಲಿ ಸ್ಮರಿಸಿದ, ತಮ್ಮ ಕ್ಷತ್ರಿಯಧರ್ಮದಿಂದ ಚ್ಯುತರಾಗದ ಭೀಷ್ಮರು ಅವನ ಮೇಲೆ ಬಾಣ ಪ್ರಯೋಗವನ್ನು ಮಾಡಲಿಲ್ಲ.

ಧೃಷ್ಟದ್ಯುಮ್ನಸ್ತು ಸಮರೇ ಕ್ರೋಧಾದಗ್ನಿರಿವ ಜ್ವಲನ್ ।
ಪಿತಾಮಹಂ ತ್ರಿಭಿರ್ಬಾಣೈರ್ಬಾಹ್ವೋರುರಸಿ ಚಾರ್ಪಯತ್ ॥೮॥

ಧೃಷ್ಟದ್ಯುಮ್ನನಾದರೋ ಕೋಪದಿಂದ ಅಗ್ನಿಯಂತೆ ಜ್ವಲಿಸುತ್ತಾ ಮೂರು ಬಾಣಗಳಿಂದ ಪಿತಾಮಹರನ್ನು ಅವರ ಬಾಹುಗಳಲ್ಲಿಯೂ ಮತ್ತು ಎದೆಯಲ್ಲಿಯೂ ಹೊಡೆದನು.

ದ್ರುಪದಃ ಪಂಚವಿಂಶತ್ಯಾ ವಿರಾಟೋ ದಶಭಿಃ ಶರೈಃ ।
ಶಿಖಂಡೀ ಪಂಚವಿಂಶತ್ಯಾ ಭೀಷ್ಮಂ ವಿವ್ಯಾಧ ಸಾಯಕೈಃ ॥೯॥

ದ್ರುಪದನು ಇಪ್ಪತ್ತೈದು ಬಾಣಗಳಿಂದಲೂ, ವಿರಾಟನು ಹತ್ತು ಬಾಣಗಳಿಂದಲೂ, ಶಿಖಂಡಿಯು ಇಪ್ಪತ್ತೈದು ಬಾಣಗಳಿಂದಲೂ ಭೀಷ್ಮರನ್ನು ಹೊಡೆದರು.

ಸೋಽತಿವಿದ್ಧೋ ಮಹಾರಾಜ ಭೀಷ್ಮಃ ಸಂಖೇ ಮಹಾತ್ಮಭಿಃ ।
ವಸಂತೇ ಪುಷ್ಪಶಬಲೋ ರಕ್ತಾಶೋಕ ಇವಾಬಭೌ ॥೧೦॥

ಎಲೈ ಮಹಾರಾಜನೇ, ಆ ಮಹಾತ್ಮರಿಂದ ಯುದ್ಧದಲ್ಲಿ ಹಾಗೆ ಪ್ರಹಾರಕ್ಕೆ ಒಳಗಾದ ಭೀಷ್ಮರು ವಸಂತಕಾಲದಲ್ಲಿ ಪುಷ್ಪಗಳು ಅರಳಿದ ರಕ್ತಾಶೋಕ ವೃಕ್ಷದಂತೆ ಕಂಗೊಳಿಸಿದರು.

ತಾನ್ ಪ್ರತ್ಯವಿಧ್ಯದ್ ಗಾಂಗೇಯಸ್ತ್ರಿಭಿಸ್ತ್ರಿಭಿರಜಿಹ್ಮಗೈಃ ।
ದ್ರುಪದಸ್ಯ ಚ ಭಲ್ಲೇನ ಧನುಶ್ಚಿಚ್ಛೇದ ಮಾರಿಷ ॥೧೧॥

ಗಂಗಾಪುತ್ರರಾದ ಭೀಷ್ಮರು ಅವರಲ್ಲಿ ಒಬ್ಬೊಬ್ಬರ ಮೇಲೆಯೂ ನೇರವಾಗಿ ಸಾಗುವ ಮೂರು ಮೂರು ಬಾಣಗಳನ್ನು ಪ್ರಯೋಗಿಸಿದರು. ಎಲೈ ಕ್ರೇಷ್ಟನೇ, ಮತ್ತು ಭಲ್ಲದಿಂದ ದ್ರುಪದನ ಧನುಸ್ಸನ್ನು ಕತ್ತರಿಸಿದರು.

ಸೋಽನ್ಯತ್ಕಾರ್ಮುಕಮಾದಾಯ ಭೀಷ್ಮಂ ವಿವ್ಯಾಧ ಪಂಚಭಿಃ ।
ಸಾರಥಿಂ ಚ ತ್ರಿಭಿರ್ಬಾಣೈಃ ಸುಶಿತೈ ರಣಮೂರ್ಧನಿ ॥೧೨॥

ದ್ರುಪದನಾದರೋ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಐದು ಬಾಣಗಳಿಂದ ಭೀಷ್ಮರನ್ನು ಹೊಡೆದನು ಮತ್ತು ಘೋರ ಸಂಗ್ರಾಮದಲ್ಲಿ ಅವರ ಸಾರಥಿಯನ್ನೂ ತೀಕ್ಷ್ಣವಾದ ಮೂರುಬಾಣದಿಂದ ಹೊಡೆದನು.

ತತೋ ಭೀಮೋ ಮಹಾರಾಜ ದ್ರೌಪದ್ಯಾಃ ಪಂಚ ಜಾತ್ಯಜಾಃ ।
ಕೇಕಯಾ ಭ್ರಾತರಃ ಪಂಚ ಸಾತ್ಯಕಿಶ್ಚೈವ ಸಾತ್ವತಃ ॥೧೩॥

ಅಭ್ಯದ್ರವಂತ ಗಾಂಗೇಯಂ ಯುಧಿಷ್ಠಿರಹಿತೇಪ್ಸಯಾ ।
ರಿರಕ್ಷಿಷಂತಃ ಪಾಂಚಾಲ್ಯಂ ಧೃಷ್ಟದ್ಯುಮ್ನಮುಖಾನ್ ರಣೇ ॥೧೪॥

ಎಲೈ ಮಹಾರಾಜನೇ, ಆಗ ಭೀಮಸೇನ, ದ್ರೌಪದಿಯ ಐವರು ಮಕ್ಕಳು, ಕೇಕಯ ದೇಶದ ಐವರು ಸಹೋದರರು, ಸಾತ್ವತನಾದ ಸಾತ್ಯಕಿ ಇವರೆಲ್ಲರೂ ಯುಧಿಷ್ಠಿರನ ಹಿತದ ಅಪೇಕ್ಷೆಯಿಂದ ದ್ರುಪದನನ್ನೂ, ಧೃಷ್ಟದ್ಯುಮ್ನ ಮೊದಲಾದವರನ್ನೂ ಯುದ್ಧದಲ್ಲಿ ರಕ್ಷಿಸಲು ಬಯಸಿ ಭೀಷ್ಮರ ಕಡೆಗೆ ಧಾಮಿಸಿದರು.

ತಥೈವ ತಾವಕಾಃ ಸರ್ವೇ ಭೀಷ್ಮರಕ್ಷಾರ್ಥಮುದ್ಯತಾಃ ।
ಪ್ರತ್ಯುದ್ಯಯುಃ ಪಾಂಡುಸೇನಾಂ ಸಹಸೈನ್ಯಾ ನರಾಧಿಪ ॥೧೫॥

ಎಲೈ ರಾಜನೇ, ಆಗ ನಿನ್ನವರೆಲ್ಲರೂ ಭೀಷ್ಮರನ್ನು ರಕ್ಷಿಸಲು ಉದ್ಯುಕ್ತರಾಗಿ ತಮ್ಮ ಸೈನ್ಯಗಳ ಜೊತೆಯಲ್ಲಿ ಪಾಂಡವರ ಸೇನೆಯ ಮೇಲೆ ಎರಗಿದರು.

ತತ್ಸಾಽತ್ ಸುಮಹದ್‌ಯುದ್ಧಂ ತವ ತೇಷಾಂ ಚ ಸಂಕುಲಮ್ ।
ನರಾಶ್ವರಥನಾಗಾನಾಂ ಯಮರಾಷ್ಟ್ರವಿವರ್ಧನಮ್ ॥೧೬॥

ಆಗ ನಿನ್ನವರಿಗೂ ಮತ್ತು ಅವರಿಗೂ ನರಾಶ್ವರಥಗಜಗಳಿಂದ ಯಮರಾಷ್ಟ್ರ ವಿವರ್ಧನವಾದ ಸಂಕುಲವಾದ ದೊಡ್ಡ ಯುದ್ಧವು ನಡೆಯಿತು.

ರಥೀ ರಥಿನಮಾಸಾದ್ಯ ಪ್ರಾಹಿಣೋದ್ ಯಮಸಾದನಮ್ ।
ತಥೇತರಾನ್ ಸಮಾಸಾದ್ಯ ನರನಾಗಾಶ್ವಸಾದಿನಃ ॥೧೭॥

ಅನಯನ್ ಪರಲೋಕಾಯ ಶರೈಃ ಸನ್ನತಪರ್ವಭಃ ।
ಅಸ್ತ್ರೈಶ್ಚ ವಿವಿಧೈರ್ಘೋರೈಸ್ತತ್ರ ತತ್ರ ವಿಶಾಂಪತೇ ॥೧೮॥

ಎಲೈ ರಾಜನೇ, ರಥಿಕನು ರಥಿಕನನ್ನು ಸಮೀಪಿಸಿ ಯಮಪಟ್ಟಣಕ್ಕೆ ಕಳುಹಿಸಿದನು. ಹಾಗೆಯೇ, ಯೋಧರು, ಗಜಾರೋಹಿಗಳು ಮತ್ತು ಅಶ್ವಾರೋಹಿಗಳು ತಮ್ಮ ಶತ್ರುಗಳಾದ ಇತರರನ್ನು ಸಮೀಪಿಸಿ ಬಾಗಿದ ತುದಿಯುಳ್ಳ ಬಾಣಗಳಿಂದಲೂ, ಉಳಿದವಾದ ಘೋರವಾದ ಅಸ್ತ್ರಗಳಿಂದಲೂ ಅಲ್ಲಲ್ಲಿ ಯಮಪಟ್ಟಣಕ್ಕೆ ಕಳುಹಿಸಿದರು.

ರಥಾಶ್ಚ ರಥಿಭಿರ್ಹೀನಾ ಹತಸಾರಥಯಸ್ತಥಾ ।
ವಿಪ್ರದ್ರುತಾಶ್ವಾಃ ಸಮರೇ ದಿಶೋ ಜಗ್ಮುಃ ಸಮಂತತಃ ॥೧೯॥

ರಥಿಕರಿಂದ ಹೀನವಾದ, ಸಾರಥಿಗಳಿಂದಲೂ ಹೀನವಾದ ರಥಗಳು ಅಶ್ವಗಳು ಮಾತ್ರ ಓಡಿಹೋಗುತ್ತಿರಲು ರಣರಂಗದಲ್ಲಿ ಎಲ್ಲ ದಿಕ್ಕುಗಳಿಗೂ ಎಳೆಯಲ್ಪಟ್ಟವು.

ಮರ್ದಮಾನಾ ನರಾನ್ ರಾಜನ್ ಹಯಾಂಶ್ಚ ಸುಬಹೂನ್ ರಣೇ ।
ವಾತಾಯಮಾನಾ ದೃಶ್ಯಂತೇ ಗಂಧರ್ವನಗರೋಪಮಾಃ ॥೨೦॥

ಎಲೈ ರಾಜನೇ, ಅಂತಹ ರಥಗಳು ಸೈನಿಕರನ್ನೂ ಮತ್ತು ಅನೇಕ ಅಶ್ವಗಳನ್ನೂ ಯುದ್ಧದಲ್ಲಿ ಮರ್ದಿಸುತ್ತಾ, ವಾಯುವೇಗದಿಂದ ಸಾಗುತಾ, ಗಂಧರ್ವನಗರಗಳಂತೆ ತೋರಿಬಂದವು.

ರಥಿನಶ್ಚ ರಥೈರ್ಹೀನಾ ವರ್ಮಿಣಸ್ತೇಽಸಾ ಯುತಾಃ ।
ಕುಂಡಲೋಷ್ಣೀಷಿಣಃ ಸರ್ವೇ ನಿಷ್ಕಾಂಗದವಿಭೂಷಿತಾಃ ॥೨೧॥

ದೇವಪುತ್ರಸಮಾ ರೂಪೇ ಶೌರ್ಯೇ ಶಕ್ರಸಮಾ ಯುಧಿ ।
ಋದ್ಧ್ಯಾ ವೈಶ್ರವಣಂ ಚಾತಿ ನಯೇನ ಚ ಬೃಹಸ್ಪತಿಮ್ ॥೨೨॥

ಸರ್ವಲೋಕೇಶ್ವರಾಃ ಶೂರಾಸ್ತತ್ರ ತತ್ರ ವಿಶಾಂಪತೇ ।
ವಿಪ್ರದ್ರುತಾ ವ್ಯದೃಶ್ಯಂತ ಪ್ರಾಕೃತಾ ಇವ ಮಾನವಾಃ ॥೨೩॥

ರಥವನ್ನು ಕಳೆದುಕೊಂಡು, ಕವಚವನ್ನು ಧರಿಸಿ, ತೇಜೋಯುಕ್ತರಾಗಿ, ಕುಂಡಲ-ಉಷ್ಣೀಷಗಳನ್ನು ಮತ್ತು ನಿಷ್ಕಾಂಗದಗಳನ್ನು ಧರಿಸಿದ, ರೂಪದಲ್ಲಿ ದೇವಪುತ್ರ ಸಮರಾದ, ಶೌರ್ಯದಲ್ಲಿ ಇಂದ್ರರಿಗೆ ಸಮರಾದ, ಸಮೃದ್ಧಿಯಲ್ಲಿ ಕುಬೇರನನ್ನು ಮೀರಿಸಿದ, ನೀತಿಯಲ್ಲಿ ಬೃಹಸ್ಪತಿಯನ್ನು ಮೀರಿಸಿದ, ಸರ್ವಲೋಕೇಶ್ವರರಾದ ಶೂರರು ಅಲ್ಲಲ್ಲಿ ಪ್ರಾಕೃತ ಜನರಂತೆ ಓಡಿಹೋಗುವುದು ಕಂಡುಬಂದಿತು.

ದಂತಿನಶ್ಚ ನರಶ್ರೇಷ್ಠ ವಿಹೀನಾ ವರಸಾದಿಭಿಃ ।
ಮೃದ್ನಂತಃ ಸ್ವಾನ್ಯನೀಕಾನಿ ನಿಪೇತುಃ ಸರ್ವಶಬ್ದಗಾಃ ॥೨೪॥

ಎಲೈ ನರಶ್ರೇಷ್ಠನೇ, ಗಜಗಳೂ ಸಹ ಗಜಾರೋಹಿಗಳಿಂದ ಸಹಿತವಾಗಿ ಯಾವ ಹಾಹಾಕಾರ ಶಬ್ದವನ್ನೂ ಲೆಕ್ಕಿಸದೇ ತಮ್ಮ ಸೈನ್ಯವನ್ನೇ ಮರ್ದಿಸುತ್ತಾ ಓಡಿದವು.

ವರ್ಮಭಿಶ್ಚಾಮರೈಶ್ಚತ್ರೈಃ ಪತಾಕಾಭಿಶ್ಚ ಮಾರಿಷ ।
ಕ್ಷತ್ಯಾಭರಥ ತೋತ್ರೈಶ್ಚ ಘಂಟಾಭಿಸ್ತೋಮರೈಸ್ತಥಾ ॥೨೫॥

ವಿಶೀರ್ಯಮಾಣಪ್ರಧಾವಂತೋ ದೃಶ್ಯಂತೇ ಸ್ಮ ದಿಶೋ ದಶ ।
ನಗಮೇಘಪ್ರತೀಕಾಶೈರ್ದಲದೋಪಮನಿಸ್ವನೈಃ ॥೨೬॥

ಕವಚಗಳು, ಚಾಮರಗಳು, ಛತ್ರಗಳು, ಪತಾಕೆಗಳು, ಸರಪಳಿಗಳು, ಅಂಕುಶಗಳು, ಗಂಟೆಗಳು, ತೋಮರಗಳು ಎಲೈ ರಾಜನೇ, ಇವೆಲ್ಲವೂ ಛಿನ್ನವಾಗಿ ನಾಶಗೊಳಿಸಲ್ಪಟ್ಟ ಮಹಾಗಜಗಳು ಪರ್ವತಗಳ ಸಮೂಹದಂತೆ, ಮೇಘಗಳಂತೆ ಗರ್ಜಿಸುತ್ತಾ ಮೇಘಮಂಡಲದಂತೆ ದಿಕ್ಕುದಿಕ್ಕುಗಳಿಗೆ ಓಡಿಹೋಗುವುದು ಕಂಡುಬಂದಿತು.

ತಥೈವ ದಂತಿಭಿರ್ಹೀನಾನ್ ಗಜಾರೋಹಾನ್ ವಿಶಾಂಪತೇ ।
ಪ್ರಧಾವಂತೋಽನ್ವಪಶ್ಯಾಮ ತವ ತೇಷಾಂ ಚ ಸಂಕುಲೇ ॥೨೭॥

ಹಾಗೆಯೇ, ಎಲೈ ರಾಜನೇ, ಗಜಗಳನ್ನು ಕಳೆದುಕೊಂಡು ಓಡಿಹೋಗುವ ಗಜಾರೋಹಿಗಳನ್ನು ಆ ಸಂಕುಲ ಯುದ್ಧದಲ್ಲಿ ನಿನ್ನ ಮತ್ತು ಅವರ ಸೈನ್ಯಗಳಲ್ಲಿ ನೋಡಿದೆವು.

ನಾನಾದೇಶಸಮುತ್ಥಾಂಶ್ಚ ತುರಗಾನ್ ಹೇಮಭೂಷಿತಾನ್ ।
ವಾತಾಯಮಾನಾನದ್ರಾಕ್ಷಂ ಶತಶೋಽಥ ಸಹಸ್ರಶಃ ॥೨೮॥

ನಾನಾದೇಶಗಳಲ್ಲಿ ಜನಿಸಿದ, ಸುವರ್ಣಾಲಂಕೃತವಾದ ಅಶ್ವಗಳು ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ವಾಯುವೇಗದಿಂದ ಓಡಿಹೋಗುವುದನ್ನು ನೋಡಿದನು.

ಅಶ್ವಾರೋಹಾನ್ ಹತೈರಶ್ವೈರ್ಗೃಹೀತಾಸೀನ್ ಸಮಂತತಃ ।
ದ್ರವಮಾಣಾನಪಶ್ಯಾಮ ದ್ರಾವ್ಯಮಾಣಾಂಶ್ಚ ಸಂಯುಗೇ ॥೨೯॥

ಅಶ್ವಗಳನ್ನು ಕಳೆದುಕೊಂಡ ಅಶ್ವಾರೋಹಿಗಳು, ಕೈಯಲ್ಲಿ ಖಡ್ಗವನ್ನು ಹಿಡಿದು ಯುದ್ಧದಲ್ಲಿ ತಾವು ಓಡುತ್ತಾ ಶತ್ರುಗಳಿಂದ ಓಡಿಸಲ್ಪಡುವುದನ್ನು ನಾವು ನೋಡಿದೆವು.

ಗಜೋ ಗಜಂ ಸಮಾಸಾದ್ಯ ದ್ರವಮಾಣಂ ಮಹಾರಣೇ ।
ಯಯೌ ವಿಮೃದ್ನಂಸ್ತರಸಾ ಪದಾತೀನ್ ವಾಜಿನಸ್ತಥಾ ॥೩೦॥

ಮಹಾಯುದ್ಧದಲ್ಲಿ ಗಜವು ಓಡುತ್ತಿರುವ ಇನ್ನೊಂದು ಗಜದ ಸಮೀಪಕ್ಕೆ ಓಡುತ್ತಾ ಶೀಘ್ರವಾಗಿ ಪದಾತಿಗಳನ್ನೂ ಮತ್ತು ಅಶ್ವಗಳನ್ನೂ ತುಳಿದು ನಾಶಪಡಿಸುತ್ತಿದ್ದವು.

ತಥೈವ ಚ ರಥಾನ್ ರಾಜನ್ ಸಮ್ಮಮರ್ದ ರಣೇ ಗಜಃ ।
ರಥಶ್ಚೈವ ಸಮಾಸಾದ್ಯ ಪದಾತಿಂ ತುರಗಂ ತಥಾ ॥೩೧॥

ವ್ಯಮೃದ್ನಾತ್ ಸಮರೇ ರಾಜಂಸ್ತುರಗಾಂಶ್ಚ ನರಾನ್ ರಣೇ ।

ಎಲೈ ರಾಜನೇ, ಹಾಗೆಯೇ, ಗಜಗಳು ಯುದ್ಧದಲ್ಲಿ ರಥಗಳನ್ನು ನಾಶಗೊಳಿಸುತ್ತಿದ್ದವು. ಹಾಗೆಯೇ ರಥಗಳು ಪದಾತಿಗಳನ್ನು ಮತ್ತು ಅಶ್ವಗಳನ್ನು ಸಮೀಪಿಸಿ ತುರಗಗಳನ್ನು ಮತ್ತು ಯೋಧರನ್ನು ಯುದ್ಧದಲ್ಲಿ ನಾಶಪಡಿಸುತ್ತಿದ್ದರು.

ಏವಂ ತೇ ಬಹುಧಾ ರಾಜನ್ ಪ್ರಮೃದ್ನಂತಃ ಪರಸ್ಪರಮ್ ।
ದೃಶ್ಯಂತೇ ಸ್ಮ ಮಹಾಬಾಹೋ ತತ್ರತತ್ರ ಮಹಾಬಲಾಃ ॥೩೨॥

ಎಲೈ ಮಹಾಬಾಹುವೇ, ರಾಜನೇ, ಮಹಾಬಲರಾದ ಎರಡೂ ಸೈನ್ಯಗಳ ಯೋಧರು ಪರಸ್ಪರವಾಗಿ ನಾಶಗೊಳಿಸುತ್ತಿರುವುದು ಅಲ್ಲಿ ಅನೇಕ ಪ್ರಕಾರವಾಗಿ ಕಂಡುಬಂದಿತು.

ತಸ್ಮಿನ್ ರೌದ್ರೇ ತಥಾ ಯುದ್ಧೇ ವರ್ತಮಾನೇ ಮಹಾಭಯೇ ।
ಪ್ರಾವರ್ತತ ನದೀ ಘೋರಾ ಶೋಣಿತಾಂತ್ತರಂಗಿಣೇ ॥೩೩॥

ಅಸ್ಥಿಸಂಚಯಸಂಬಾಧಾ ಕೇಶಶೈವಲಶಾದ್ವಲಾ ।
ರಥಹ್ರದಾ ಶರಾವರ್ತಾ ಹಯಮೀನಾ ದುರಾಸದಾ ॥೩೪॥

ಶೀರ್ಷೋಪಲಸಮಾಕೀರ್ಣಾ ಹಸ್ತಿಗ್ರಾಹಸಮಾಕುಲಾ ।
ಕವಚೋಷ್ಣೀಷಫೇನಾಢ್ಯಾ ಧನುರ್ದ್ವೀಪಾಸಿಕಚ್ಛಪಾ ।
ಶಂಖಿಚಕ್ರೌಘಸಂಪೂರ್ಣಾ ಛತ್ರಕೂರ್ಮಾ ರಥೋಡುಪಾ ॥೩೫॥

ಪತಾಕಾಧ್ವಜವೃಕ್ಷಾಢ್ಯಾ ಮರ್ತ್ಯಕೂಲಾಪಹಾರಿಣೀ ।
ಕ್ರವ್ಯಾದಸಂಘಸಂಕೀರ್ಣಾ ಯಮರಾಷ್ಟ್ರವಿವರ್ಧಿನೀ ॥೩೬॥

ಅಂತಹ ಘೋರವು ಮತ್ತು ಭಯಂಕರವಾದ ಯುದ್ಧವು ರಕ್ತ ಮತ್ತು ಕರುಳುಗಳ ತರಂಗವುಳ್ಳ ಅಸ್ಥಿಸಂಚಯವೆಂಬ ಗೆಡ್ಡೆಗಳುಳ್ಳ, ಕೇಶವೆಂಬ ಕೈವಲದಿಂದ ಕೂಡಿದ ಮೃದು ಪ್ರದೇಶವುಳ್ಳ, ರಥಗಳೆಂಬ ಮೃಗಗಳಿಂದಲೂ, ಬಾಣಗಳೆಂಬ

ಸುಳಿಗಳಿಂದಲೂ, ಅಶ್ವಗಳೆಂಬ ಮೀನುಗಳಿಂದಲೂ ದುರಾಸದವಾದ, ಶಿರಸ್ಸುಗಳೆಂಬ ಕಲ್ಲುಗಳಿಂದ ಕೂಡಿದ, ಗಜಗಳೆಂಬ ಮೊಸಳೆಗಳಿಂದ ಕೂಡಿದ, ಕವಚ ಮತ್ತು ಉಷ್ಣೀಷವೆಂಬ ನೊರೆಗಳಿಂದ ಕೂಡಿದ, ಧನುಸ್ಸುಗಳೆಂಬ ದ್ವೀಪವುಳ್ಳ, ಕತ್ತಿಗಳೆಂಬ ಕೂರ್ಮಗಳುಳ್ಳ, ಶಂಖ ಸಮೂಹಗಳೆಂಬ ವೇಗದಿಂದ ಕೂಡಿದ, ಛತ್ರಗಳೆಂಬ ಕೂರ್ಮಗಳಿಂದಲೂ, ರಥಗಳೆಂಬ ಚಂದ್ರನಿಂದಲೂ, ಪತಾಕೆಗಳು ಮತ್ತು ಧ್ವಜಗಳೆಂಬ ವೃಕ್ಷಗಳಿಂದಲೂ ಕೂಡಿದ, ಯೋಧರೆಂಬ ತೀರವನ್ನು ನಾಶಗೊಳಿಸುವ ಮಾಂಸಾಹಾರಿ ಪ್ರಾಣಿಗಳ ಸಮೂಹದಿಂದ ನಿಬಿಡವಾದ, ಯಮರಾಷ್ಟ್ರಪೋಷಕವಾದ ಘೋರವಾದ ನದಿಯು ಹರಿಯಿತು.

ತಾಂ ನದೀಂ ಕ್ಷತ್ರಿಯಾಃ ಶೂರಾ ಹಯನಾಗರಥಪ್ಲವೈಃ ।
ಪ್ರತೇರುರ್ಬಹವೋ ರಾಜನ್ ಭಯಂ ತ್ಯಕ್ತ್ವಾ ಮಹಾಹವೇ ॥೩೭॥

ಎಲೈ ರಾಜನೇ, ಆ ಮಹಾಯುದ್ಧದಲ್ಲಿ ಶೂರರಾದ ಅನೇಕ ಕ್ಷತ್ರಿಯರು ಭಯವನ್ನು ತೊರೆದು ಹಯ-ಗಜ-ರಥಗಳೆಂಬ ದೋಣಿಗಳಿಂದ ಆ ನದಿಯನ್ನು ದಾಟಿದರು.

ಅಪೋವಾಹ ರಣೇ ಭೀರೂನ್ ಕಶ್ಮಲೇನಾಭಸಂವೃತಾನ್ ।
ಯಥಾ ವೈತರಣೀ ಪ್ರೇತಾನ್ ಪ್ರೇತರಾಜಪುರಂ ಪ್ರತಿ ॥೩೮॥

ವೈತರಣಿಯು ಮೃತರಾದವರನ್ನು ಯಮಪಟ್ಟಣಕ್ಕೆ ಸೆಳೆದುಕೊಂಡು ಹೋಗುವಂತೆ ಆ ನದಿಯು ಭಯಗ್ರಸ್ತರನ್ನೂ, ಮನೋದೌರ್ಬಲ್ಯಕ್ಕೆ ಒಳಗಾದವರನ್ನೂ ರಣರಂಗದಿಂದ ಸೆಳೆದು (ಯಮಪಟ್ಟಣಕ್ಕೆ) ಕೊಂಡೊಯ್ಯಿತು.

ಪ್ರಾಕ್ರೋಶನ್ ಕ್ಷತ್ರಿಯಾಸ್ತತ್ರ ದೃಷ್ಟ್ವಾ ತದ್ವೈಶಸಂ ಮಹತ್ ।
ದುರ್ಯೋಧನಾಪರಾಧೇನ ಕ್ಷಯಂ ಗಚ್ಛಂತಿ ಕೌರವಾಃ ॥೩೯॥

ಗುಣವತ್ಸು ಕಥಂ ದ್ವೇಷಂ ಧಾರ್ತರಾಷ್ಟ್ರೋ ಜನೇಶ್ವರಃ ।
ಕೃತವಾನ್ ಪಾಂಡುಪುತ್ರೇಷು ಪಾಪಾತ್ಮಾ ಲೋಭಮೋಹಿತಃ ॥೪೦॥

ಆ ದೊಡ್ಡ ಹಿಂಸೆಯನ್ನು ನೋಡಿದ ಕ್ಷತ್ರಿಯರು ದುರ್ಯೋಧನನ ಅಪರಾಧದಿಂದ ಕೌರವರು ನಾಶಗೊಳ್ಳುತ್ತಿದ್ದಾರೆ. ಪಾಪಾತ್ಮನಾದ ರಾಜನಾದ ದುರ್ಯೋಧನನು

ಲೋಭಕ್ಕೆ ಒಳಗಾಗಿ ಗುಣವಂತರಾದ ಪಾಂಡವರಲ್ಲಿ ಹೇಗೆ ದ್ವೇಷವನ್ನು ಮಾಡಿದನು ಎಂದು ಶಪಿಸುತ್ತಿದ್ದರು.

ಏವಂ ಬಹುವಿಧಾ ವಾಚಃ ಶ್ರೂಯಂತೇ ಸ್ಮಾತ್ರ ಭಾರತ ।
ಪಾಂಡವಸ್ತವಸಂಯುಕ್ತಾಃ ಪುತ್ರಾಣಾಂ ತೇ ಸುದಾರುಣಾಃ ॥೪೧॥

ಎಲೈ ಭಾರತನೇ, ಹೀಗೆ ಪಾಂಡವರ ಪ್ರಶಂಸಾ ಸಹಿತವಾದ ನಿನ್ನ ಪುತ್ರನ ಕಿವಿಗಳಿಗೆ ದಾರುಣವಾದ ಅನೇಕ ಮಾತುಗಳು ಅಲ್ಲಿ ಕೇಳಿಬರುತ್ತಿದ್ದವು.

ತಾ ನಿಶಮ್ಯ ತದಾ ವಾಚಃ ಸರ್ವಯೋಧೈರುದಾಹೃತಾಃ ।
ಆಗಸೃತ್ ಸರ್ವಲೋಕಸ್ಯ ಪುತ್ರೋ ದುರ್ಯೋಧನಸ್ತವ ॥೪೨॥

ಭೀಷ್ಮಂ ದ್ರೋಣಂ ಕೃಪಂ ಚೈವ ಶಲ್ಯಂ ಚೋವಾಚ ಭಾರತ ।
ಯುಧ್ಯಧ್ವಮನಹಂಕಾರಾಃ ಕಿಂ ಚಿರಂ ಕುರುಥೇತಿ ಚ ।
ಇತಿ ದುರ್ಯೋಧನೋತ್ಸೃಷ್ಟಾಃ ಸರ್ವೇ ಯುಯುಧಿರೇ ನೃಪಾಃ ॥೪೩॥

ಸರ್ವಯೋಧರು ಹೇಳುವ ಆ ಮಾತುಗಳನ್ನು ಕೇಳಿ, ಸರ್ವಲೋಕಕ್ಕೂ ಅಪಚಾರವನ್ನು ಮಾಡಿದ ನಿನ್ನ ಪುತ್ರನಾದ ದುರ್ಯೋಧನನು ಭೀಷ್ಮ-ದ್ರೋಣ-ಕೃಪ-ಶಲ್ಯರನ್ನು ಸಮೀಪಿಸಿ, ಅಹಂಕಾರವನ್ನು ಬಿಟ್ಟು ಯುದ್ಧವನ್ನು ಮಾಡಿ, ಏಕೆ ವಿಳಂಬವನ್ನು ಮಾಡುತ್ತಿದ್ದೀರಿ ಎಂದು ಹೇಳಿದನು. ಎಲೈ ಭಾರತನೇ, ದುರ್ಯೋಧನನಿಂದ ಪ್ರಚೋದಿಸಲ್ಪಟ್ಟು ಎಲ್ಲ ರಾಜರೂ ಯುದ್ಧವನ್ನು ಮಾಡಿದರು.

ತತಃ ಪ್ರವವೃತೇ ಯುದ್ಧಂ ಕುರೂಣಾಂ ಪಾಂಡವೈಃ ಸಹ ।
ಅಕ್ಷದ್ಯೂತಕೃತಂ ರಾಜನ್ ಸುಘೋರಂ ವೈಶಸಂ ತದಾ ॥೪೪॥

ಎಲೈ ರಾಜನೇ, ಆಗ ಕೌರವರಿಗೂ ಮತ್ತು ಪಾಂಡವರಿಗೂ ಅಕ್ಷದ್ಯೂತವನ್ನು ನಿಮಿತ್ತೀಕರಿಸಿದ ಘೋರವಾದ ಯುದ್ಧವು ಜರುಗಿತು.

ಯತ್ ಪುರಾ ನ ನಿಗೃಹ್ಣೀಷೇ ವಾರ್ಯಮಾಣೋ ಮಹಾತ್ಮಭಿಃ ।
ವೈಚಿತ್ರವೀರ್ಯ ತಸ್ಯೇದಂ ಫಲಂ ಪಶ್ಯ ತಥಾವಿಧಮ್ ॥೪೫॥

ಎಲೈ ವಿಚಿತ್ರವೀರ್ಯಪುತ್ರನಾದ ಧೃತರಾಷ್ಟ್ರನೇ, ಮಹಾತ್ಮರು ನಿಷೇಧಿಸಿದರೂ ನೀನು ಹಿಂದೆ ಯಾವ ಅಕೃದ್ಯೂತವನ್ನು ತಡೆಯಲಿಲ್ಲವೋ, ಅದರ ಈ ಫಲವು ಹೇಗಿದೆ ಎಂಬುದನ್ನು ನೋಡು.

ನ ಹಿ ಪಾಂಡುಸುತಾ ರಾಜನ್ ಸಸೈನ್ಯಾಃ ಸಪದಾನುಗಾಃ ।
ರಕ್ಷಂತಿ ಸಮರೇ ಪ್ರಾಣಾನ್ ಕೌರವಾ ವಾ ವಿಶಾಂಪತೇ ॥೪೬॥

ಎಲೈ ರಾಜನೇ, ಸೈನ್ಯ ಮತ್ತು ಪದಾತಿಗಳಿಂದ ಕೂಡಿದ ಪಾಂಡವರಾಗಲೀ, ಕೌರವರಾಗಲೀ ಯುದ್ಧದಲ್ಲಿ ತಮ್ಮ ಪ್ರಾಣಗಳನ್ನು ರಕ್ಷಿಸಿಕೊಳ್ಳುವುದಿಲ್ಲ.

ವಿತಸಾತ್ ಕಾರಣಾದ್ ಘೋರೋ ವರ್ತತೇ ಸ್ಮ ಜನಕ್ಷಯಃ ।
ದೈವಾದ್ ವಾ ಪುರುಷವ್ಯಾಘ್ರ ತವ ಚಾಪನಯಾನ್ನೃಪ ॥೪೭॥

ಎಲೈ ಪುರುಷವ್ಯಾಘ್ರನೇ, ಆ ಕಾರಣದಿಂದ ದೇವಸಂಕಲ್ಪದಂತೆ ಅಥವಾ ನಿನ್ನ ದುರ್ನೀತಿಯ ಕಾರಣದಿಂದ ಘೋರವಾದ ಜನಕ್ಷಯವು ಉಂಟಾಗುತ್ತಿದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ಭೀಷ್ಮಪರ್ವಣಿ ಶತತಮೋಽಧ್ಯಾಯಃ ॥
॥ ಭೀಷ್ಮವಧಪರ್ವಣಿ ಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಒಂದನೆಯ ಅಧ್ಯಾಯ

ದ್ರೋಣಾರ್ಜುನರ ಮತ್ತು ಭೀಷ್ಮ-ಸಾತ್ಯಕಿಗಳ ಯುದ್ಧ.

ಸಂಜಯಃ

ಅರ್ಜುನಸ್ತು ನರವ್ಯಾಘ್ರ ಸುಶರ್ಮಪ್ರಮುಖಾನ್ ನೃಪಾನ್ ।
ಅನಯತ್ ಪ್ರೇತರಾಜಸ್ಯ ಭವನಂ ಸಾಯಕೈಃ ಶಿತೈಃ ॥೧॥

ಸಂಜಯ– ಎಲೈ ನರಶ್ರೇಷ್ಠನೇ, ಅರ್ಜುನನಾದರೋ ತನ್ನ ಹರಿತವಾದ ಬಾಣಗಳಿಂದ ಸುಶರ್ಮ ಮೊದಲಾದ ರಾಜರನ್ನು ಯಮದೇವರ ಮನೆಗೆ ಕಳುಹಿಸಿದನು.

ಸುಶರ್ಮಾಪಿ ತತೋ ಬಾಣೈಃ ಪಾರ್ಥಂ ಏವ್ಯಾಧ ಸಂಯುಗೇ ।
ವಾಸುದೇವಂ ಚ ಸಪ್ತತ್ಯಾ ಪಾರ್ಥಂ ಚ ನವಭಿಃ ಪುನಃ ॥೨॥

ಸುಶರ್ಮನು ಯುದ್ಧದಲ್ಲಿ ತನ್ನ ಬಾಣಗಳಿಂದ ಅರ್ಜುನನನ್ನು ಹೊಡೆದು, ಪುನಃ ಕೃಷ್ಣನ ಮೇಲೆ ಎಪ್ಪತ್ತು ಬಾಣಗಳನ್ನೂ, ಅರ್ಜುನನ ಮೇಲೆ ಒಂಬತ್ತು ಬಾಣಗಳನ್ನೂ ಪ್ರಯೋಗಿಸಿದನು.

ತಾನ್ ನಿವಾರ್ಯ ಶರೌಘೇಣ ಶಕ್ರಸೂನುರ್ಮಹಾರಥಃ ।
ಸುಶರ್ಮಣೋ ರಣೇ ಯೋಧಾನ್ ಪ್ರಾಹಿಣೋದ್ ಯಮಸಾದನಮ್ ॥

ಇಂದ್ರಪುತ್ರನೂ, ಮಹಾರಥನೂ ಆದ ಅರ್ಜುನನು ತನ್ನ ಶರಸಮೂಹದಿಂದ ಆ ಬಾಣಗಳನ್ನು ನಿವಾರಿಸಿ ಸುಶರ್ಮನ ಸೈನಿಕರನ್ನು ಯಮಪಟ್ಟಣಕ್ಕೆ ಕಳುಹಿಸಿದನು.

ತೇ ವಧ್ಯಮಾನಾಃ ಪಾರ್ಥೇನ ಕಾಲೇನೇವ ಯುಗಕ್ಷಯೇ ।
ವ್ಯದ್ರವಂತ ರಣೇ ರಾಜನ್ ಭಯೇ ಜಾತೇ ಮಹಾರಥಾಃ ॥೪॥

ಎಲೈ ರಾಜನೇ, ಯುಗಾಂತಕಾಲದ ಯಮನಂತೆ ಪಾರ್ಥನಿಂದ ಪ್ರಹಾರಕ್ಕೆ ಒಳಗಾದ ಮಹಾರಥರಾದ ಅವರು ಅಂತಹ ಭಯವುಂಟಾಗಲು ರಣಭೂಮಿಯಿಂದ ಓಡಿಹೋದರು.

ಉತ್ಸೃಜ್ಯ ತುರಗಾನ್ ಕೇಚಿದ್ ರಥಾನ್ ಕೇಚಿತ್ಸ ಮಾರಿಷ ।
ಗಜಾನನ್ಯೇ ಸಮುತ್ಸೃಜ್ಯ ಪ್ರಾದ್ರವಂತ ದಿಶೋ ದಶ ॥೫॥

ಎಲೈ ಪೂಜ್ಯನೇ, ಕೆಲವರು ಅಶ್ವಗಳನ್ನು, ಕೆಲವರು ರಥಗಳನ್ನು, ಕೆಲವರು ಗಜಗಳನ್ನು ಬಿಟ್ಟು ಹತ್ತುದಿಕ್ಕುಗಳಿಗೆ ಓಡಿಹೋದರು.

ಅಪರೇ ತುದ್ಯಮಾನಾಸ್ತು ವಾಜಿನಾಗರಥಾ ರಣಾತ್ ।
ತ್ವರಯಾ ಪರಯಾ ಯುಕ್ತಾಃ ಪ್ರಾದ್ರವಂತ ವಿಶಾಂಪತೇ ॥೬॥

ಎಲೈ ರಾಜನೇ, ಅರ್ಜುನನ ಬಾಣಗಳಿಂದ ಪೀಡಿಸಲ್ಪಟ್ಟ ಅಶ್ವ-ಗಜ-ರಥಗಳು ಬಹಳ ವೇಗವಾಗಿ ರಣಭೂಮಿಯಿಂದ ಓಡಿಹೋದವು.

ಪಾದಾತಾಶ್ಚಾಪಿ ಶಸ್ತ್ರಾಣಿ ಸಮುತ್ಸೃಜ್ಯ ಮಹಾರಣೇ ।
ನಿರಪೇಕ್ಷಾ ವ್ಯಧಾವಂತ ತೇನ ತೇನ ಸ್ಮ ಭಾರತ ॥೭॥

ಎಲೈ ಭಾರತನೇ, ಪದಾತಿಗಳೂ ಸಹ ಆ ಮಹಾರಣದಲ್ಲಿ ತಮ್ಮ ಶಸ್ತ್ರಗಳನ್ನು ಬಿಸುಟು ಯಾವುದರ ಅಪೇಕ್ಷೆಯೂ ಇಲ್ಲದೆ ಮನಸ್ಸಿಗೆ ಬಂದ ಕಡೆಗೆ ಓಡಿಹೋದರು.

ವಾರ್ಯಮಾಣಾಃ ಸ್ಮ ಬಹುಶಸ್ತ್ರಿಗರ್ತೇನ ಸುಶರ್ಮಣಾ ।
ತಥಾನ್ಯೈಃ ಪಾರ್ಥಿವಶ್ರೇಷ್ಠೈರ್ನ ವ್ಯತಿಷ್ಠಂತ ಸಂಯುಗೇ ॥೮॥

ತ್ರಿಗರ್ತಾಧಿಪತಿಯಾದ ಸುಶರ್ಮನಿಂದಲೂ ಮತ್ತು ಉಳಿದ ರಾಜರಿಂದಲೂ ನಿಷೇಧಿಸಲ್ಪಟ್ಟರೂ ಸಹ ಅವರು ರಣರಂಗದಲ್ಲಿ ನಿಲ್ಲಲಿಲ್ಲ.

ತದ್ಬಲಂ ಪ್ರದ್ರುತಂ ದೃಷ್ಟ್ವಾ ಪುತ್ರೋ ದುರ್ಯೋಧನಸ್ತವ ।
ಪುರಸ್ಕೃತ್ಯ ರಣೇ ಭೀಷ್ಮಂ ಸರ್ವಸೈನ್ಯಪುರಸ್ಕೃತಮ್ ॥೯॥

ಸರ್ವೋದ್ಯೋಗೇನ ಮಹತಾ ಧನಂಜಯಮುಪಾದ್ರವತ್ ।
ತ್ರಿಗರ್ತಾಧಿಪತೇರರ್ಥೇ ಜೀವಿತಸ್ಯ ವಿಶಾಂಪತೇ ॥೧೦॥

ಎಲೈ ರಾಜನೇ, ತನ್ನ ಸೈನ್ಯವು ಓಡಿಹೋಗುತ್ತಿರುವುದನ್ನು ನೋಡಿದ ನಿನ್ನ ಪುತ್ರನಾದ ದುರ್ಯೋಧನನು ಸರ್ವಸೈನ್ಯದ ಮುಂಭಾಗದಲ್ಲಿದ್ದ ಭೀಷ್ಮರನ್ನು ರಣರಂಗದಲ್ಲಿ ಮುಂದೆ ಮಾಡಿಕೊಂಡು, ತನ್ನ ಎಲ್ಲಾ ಪ್ರಯತ್ನವನ್ನು ಮಾಡಿ, ತ್ರಿಗರ್ತಾಧಿಪತಿಯಾದ ಸುಶರ್ಮನ ಪ್ರಾಣವನ್ನು ಉಳಿಸಲು ಅರ್ಜುನನ ಕಡೆಗೆ ಧಾವಿಸಿದನು.

ಸ ಏಕಃ ಸಮರೇ ತಸ್ಥೌ ಕಿರನ್ ಬಹುವಿಧಾನ್ ಶರಾನ್ ।
ಭ್ರಾತೃಭಿಃ ಸಹಿತಃ ಸರ್ವೈಃ ಶೇಷಾ ವಿಪ್ರದ್ರುತಾ ನರಾಃ ॥೧೧॥

ತನ್ನ ತಮ್ಮಂದಿರಿಂದ ಸಹಿತನಾದ ದುರ್ಯೋಧನನೊಬ್ಬನೇ ಅನೇಕ ವಿಧವಾದ ಬಾಣಗಳನ್ನು ಪ್ರಯೋಗಿಸುತ್ತಾ ಯುದ್ಧದಲ್ಲಿ ನಿಂತನು. ಉಳಿದ ಯೋಧರು ಓಡಿಹೋದರು.

ತಥೈವ ಪಾಂಡವಾ ರಾಜನ್ ಸರ್ವೋದ್ಯೋಗೇನ ದಂಶಿತಾಃ ।
ಪ್ರಯಯುಃ ಫಲ್ಗುನಾರ್ಥಾಯ ಯತ್ರ ಭೀಷ್ಮೋ ವ್ಯವಸ್ಥಿತಃ ॥೧೨॥

ರಾಜನೇ, ಹಾಗೆಯೇ ಪಾಂಡವರೂ ಸಹ ಸನ್ನದ್ಧರಾಗಿ, ಅರ್ಜುನನ ರಕ್ಷಣೆಗಾಗಿ ತಮ್ಮ ಸರ್ವಪ್ರಯತ್ನದಿಂದ ಭೀಷ್ಮರಿದ್ದ ಕಡೆಗೆ ಧಾವಿಸಿದರು.

ಜಾನಂತೋಽಪಿ ರಣೇ ಶೌರ್ಯಂ ಘೋರಂ ಗಾಂಡೀವಧನ್ವನಃ ।
ಹಾಹಾಕಾರಕೃತೋತ್ಸಾಹಾ ಭೀಷ್ಮಂ ಜಗ್ಮುಃ ಸಮಂತತಃ ॥೧೩॥

ಗಾಂಡೀವಧನುರ್ಧಾರಿಯಾದ ಅರ್ಜುನನ ಘೋರವಾದ ರಣಪರಾಕ್ರಮವನ್ನು ತಿಳಿದಿದ್ದರೂ ಸಹ ಸೈನ್ಯದ ಹಾಹಾಕಾರದಿಂದ ಉಂಟಾದ ಉತ್ಸಾಹವುಳ್ಳವರಾಗಿ ಎಲ್ಲ ಕಡೆಯಿಂದಲೂ ಭೀಷ್ಮರ ಬಳಿಗೆ ಸಮೀಪಿಸಿದರು.

ತತಸ್ತಾಳಧ್ವಜಃ ಶೂರಃ ಪಾಂಡವಾನಾಮನೀಕಿನೀಮ್ ।
ಘಾದಯಾಮಾಸ ಸಮರೇ ಶರೈಃ ಸನ್ನತಪರ್ವಭಿಃ ॥೧೪॥

ಆಗ ಶೂರರೂ, ತಾಳಧ್ವಜರೂ ಆದ ಭೀಷ್ಮರು ಬಾಗಿದ ತುದಿಯುಳ್ಳ ಬಾಣಗಳಿಂದ ರಣರಂಗದಲ್ಲಿ ಪಾಂಡವರ ಸೈನ್ಯವನ್ನು ಮುಚ್ಚಹಾಕಿದರು.

ಏಕೀಭೂತಾಸ್ತತಃ ಸರ್ವೇ ಕುರವಃ ಪಾಂಡವೈಃ ಸಹ ।
ಅಯುಧ್ಯಂತ ಮಹಾರಾಜ ಮಧ್ಯಂ ಪ್ರಾಪ್ತೇ ದಿವಾಕರೇ ॥೧೫॥

ಎಲೈ ಮಹಾರಾಜನೇ, ಸೂರ್ಯನು ದಿವಸದ ಮಧ್ಯಭಾಗಕ್ಕೆ ಬರುತ್ತಿರಲು ಪಾಂಡವರು ಕೌರವರೆಲ್ಲರೂ ಒಂದೇ ಕಡೆಯಲ್ಲಿ ಸೇರಿ ಪರಸ್ಪರವಾಗಿ ಯುದ್ಧವನ್ನು ಮಾಡಿದರು.

ಸಾತ್ಯಕಿಃ ಕೃತವರ್ಮಾಣಂ ವಿದ್ಧ್ವಾ ಪಂಚಭಿರಾಯಸೈಃ ।
ಅತಿಷ್ಠದಾಹವೇ ಶೂರಃ ಕಿರನ್ ಬಾಣಾನ್ ಸಹಸ್ರಶಃ ॥೧೬॥

ಶೂರನಾದ ಸಾತ್ಯಕಿಯು ಐದು ಕಬ್ಬಿಣದ ಬಾಣಗಳಿಂದ ಕೃತವರ್ಮನನ್ನು ಹೊಡೆದು ಪುನಃ ಸಹಸ್ರಾರು ಬಾಣಗಳನ್ನು ಪ್ರಯೋಗಿಸುತ್ತಾ ರಣರಂಗದಲ್ಲಿ ನಿಂತನು.

ತಥೈವ ದ್ರುಪದೋ ರಾಜಾ ದ್ರೋಣಂ ವಿದ್ಧ್ವಾ ಶಿತೈಃ ಶರೈಃ ।
ಪುನರ್ವಿವ್ಯಾಧ ಸಪ್ತತ್ಯಾ ಸಾರಥಿಂ ಚಾಸ್ಯ ಸಪ್ತಭಿಃ ॥೧೭॥

ಹೀಗೆಯೇ, ದುಷ್ಪರಿಣಾಮ ಈ ದೃಗ್ಗಾದ ಮೇರೆ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿ ಧ್ವಜ ಅದರ ಮೇರೆ ಎಪ್ಪತ್ತು ಬಾಣಗಳನ್ನೂ, ಅದರ ಸಾರಥಿಯ ಮೇರೆ ಏಳು ಬಾಣಗಳನ್ನೂ ಪ್ರಯೋಗಿಸಿದನು.

ಧೃಷ್ಟಕೇತುವ್ಯ ರಾಜಾಯಂ ಬಾಹ್ಲೀಂ ಪ್ರತಿಷಾದಯತ್ ।
ವಿಕ್ಷ್ಯಾಧಿಪಮಪಿ ಮಹಾಬಾಹುಂ ಶರೈರಾಶು ಜಘಾನಹ ॥೧೧೫॥

ಧೃಷ್ಟಕೇತುವಾದರೋ ಶತ್ರು ಪ್ರತಿಷಾದನವಾದ ಬಾಹ್ಲಿಕರಾಜನನ್ನು ಬಾಣಗಳಿಂದ ಹೊಡೆದು ಅವನಲ್ಲಿಗೆ ಹರಿಯಂತೆ ಮಹಾಆಕ್ರಮಣವನ್ನು ಮಾಡಿದನು.

ಅಥಾಸಾಧ್ಯಶ್ವಕರ್ಣೇನ ವಿದ್ಧಃ ಪಾರ್ಥಾಯಸಾಯಕೈಃ ।
ಚಕ್ರರಕ್ಷೌ ಪ್ರತಿಜಗ್ಮೌ ಪಾಂಡವಾನಾಂ ಭಯಾವಹೌ ॥೧೧೬॥

ಅಥವಾಸಾಧ್ಯ ಚಕ್ರರಕ್ಷಕರಿಂದ ದೇಗಾಪಾರಿಗಾದ ಅನಂತ ಬಾಣಗಳಿಂದ ಹೊಡೆಯಲ್ಪಟ್ಟು ಚಕ್ರರಕ್ಷಕರ ಹೃದಯದಲ್ಲಿ ಮೂರು ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿದನು.

ಸುಬಾಹೌ ತೌ ಮಹಾ ರಾಜೇ ವ್ಯದೀರ್ಯೇತಾಮಥೋ ಭೃಶಮ್ ।
ಯಥಾ ದಿವಿ ಮಹಾಘೋರೌ ರಾಹುಶ್ಚಂದ್ರಾರ್ಕಮರ್ದಿನೌ ॥೧೧೭॥

ಎಲೈ ರಾಜನೇ, ಒಬ್ಬರ ಹೊಡೆಯಲ್ಲಿ ಒಬ್ಬರು ಸೆಣಸುವ ಆ ಇಬ್ಬರು ಪ್ರಧಾನರು ಆಕಾಶದಲ್ಲಿ ಮಹಾಘೋರರಾದ ಚಂದ್ರ-ಸೂರ್ಯ ಸಮಾಗಮದಂತೆ ತೋರಿದರು.

ಶಾಕ್ಯಾನಾಮೃಷಭೋ ಜಜ್ಞೇ ಸೂರ್ಯಂ ಚ ಸಮರೇ ಶತ್ರುಃ ।
ಯೋಧಯನ್ ಬಲವಾನ್ಪಾರ್ಥಂ ಶೌರಿಸ್ತು ಬಲವೀರಹಾ ॥೧೧೮॥

ಬಲವೀರಘಾತಕನಾದ ಅಧಮಸ್ಥಿತ ಚಕ್ರರಕ್ಷನ ರಥದ ಸಾಲ್ವ ಕುದುರೆಗಳನ್ನು ಕೊಂದು, ಸಾರಥಿಯ ಮೇರೆ ಒಂಬತ್ತು ಬಾಣಗಳನ್ನು ಪ್ರಯೋಗಿಸಿ, ಬಲವಾದ ಸಂಹಾರವನ್ನು ಮಾಡಿದನು.

ಹತಾಶ್ವೌ ತು ರಥೌ ತೌಸ್ಮ ಸೋಪಾಸ್ಯೇತಾಂ ಮಹಾರಥೌ ।
ಅಥರೋಷಾತ್ ರಥಂ ತೂರ್ಣಂ ಮಮಾರುಹ್ಯ ವಿಷಾದತೇ ॥೧೧೯॥

ಎಲೈ ರಾಜನೇ, ಮಹಾರಥನಾದ ಚಿತ್ರಸೇನನು ಅಶ್ವವು ನಷ್ಟವಾದ ತನ್ನ ರಥದಿಂದ ತೀಕ್ಷ್ರವಾಗಿ ಕೆಳಗೆ ಹಾರಿ ಅಷ್ಟೇ ತೀಕ್ಷ್ರವಾಗಿ ದುರ್ಮುಖನ ರಥವನ್ನು ಏರಿದನು.

ದ್ರೋಣಶ್ಚ ದ್ರುಪದಂ ವಿದ್ಧ್ವಾ ತಥೈಃ ಸನ್ನತಪರ್ವಭಿಃ ।
ಸಾರಥಿಂ ಚಾಸ್ಯ ವಿವ್ಯಾಧ ಕ್ಷುರಾಭ್ಯಾಂ ಪರಾಸ್ರಮೀ ॥೨೩॥

ಪರಾಕ್ರಮಶಾಲಿಗಳಾದ ದ್ರೋಣರಾದರೋ ಬಾಗಿದ ತುದಿಯುಳ್ಳ ಬಾಣಗಳಿಂದ ದ್ರುಪದನನ್ನು ಹೊಡೆದು ಅವನ ಸಾರಥಿಯ ಮೇಲೆಯೂ ತೀಕ್ಷ್ರವಾಗಿ ಬಾಣಗಳನ್ನು ಪ್ರಯೋಗಿಸಿದರು.

ಪೀಡ್ಯಮಾನಸ್ತತೋ ರಾಜಾ ದ್ರುಪದೋ ವಾಹಿನೀಮುಖೇ ।
ಅಪಾಯಾಜ್ಜವಸೈರಶ್ವೈಃ ಪೂರ್ವವೈರಮನುಸ್ಮರನ್ ॥೨೪॥

ಸೇನಾಮುಖದಲ್ಲಿ ದ್ರೋಣರಿಂದ ಪೀಡಿತನಾದ ದ್ರುಪದನು ಹಿಂದಿನ ವೈರವನ್ನು ಸ್ಮರಿಸುತ್ತಾ ವೇಗಶಾಲಿಯಾದ ಅಶ್ವಗಳಿಂದ ರಣರಂಗದಿಂದ ಹೊರಗೆ ಹೋದನು.

ಭೀಮಸೇನಸ್ತು ರಾಜಾನಂ ಮುಹೂರ್ತಾದಿವ ಬಾಹ್ಲಿಕಮ್ ।
ದೃಷ್ಟ್ವಾಽಽತರಥಂ ಚಕ್ರೇ ಸರ್ವಸೈನ್ಯಸ್ಯ ಪಶ್ಯತಃ ॥೨೫॥

ಭೀಮಸೇನನಾದರೋ ಒಂದು ಮುಹೂರ್ತದಷ್ಟು ಸಮಯದಲ್ಲಿ ಎಲ್ಲ ಸೈನ್ಯಗಳೂ ನೋಡುತ್ತಿರುವಂತೆ ಬಾಹ್ಲಿಕ ರಾಜನ ರಥದ ಅಶ್ವಗಳನ್ನು ಮತ್ತು ಸಾರಥಿಯನ್ನು ಕೊಂದನು.

ಸಸಂಭ್ರಮೋ ಮಹಾರಾಜ ಸಂಶಯಂ ಪರಮಂ ಗತಃ ।
ಅವಪ್ಲುತ್ಯ ತತೋ ವಾಹಾದ್ ಬಾಹ್ಲಿಕಃ ಪುರುಷೋತ್ತಮಃ ।
ಆರುರೋಹ ರಥಂ ತೂರ್ಣಂ ಲಕ್ಷ್ಮಣಸ್ಯ ಮಹಾರಥಃ ॥೨೬॥

ಎಲೈ ಮಹಾರಾಜನೇ, ಪ್ರಾಣಸಂಶಯವನ್ನು ಹೊಂದಿದ, ಪುರುಷಶ್ರೇಷ್ಠನಾದ ಬಾಹ್ಲಿಕನು ಗಾಬರಿಯಿಂದ ತನ್ನ ರಥದಿಂದ ಕೆಳಗೆ ಹಾರಿ ತೀಕ್ಷ್ರವಾಗಿ ದುರ್ಯೋಧನನ ಪುತ್ರನಾದ ಲಕ್ಷ್ಮಣನ ರಥವನ್ನು ಏರಿದನು.

ಸಾತ್ಯಕಿಃ ಕೃತವರ್ಮಾಣಂ ವಾರಯಿತ್ವಾ ಮಹಾರಥಃ ।
ಶರೈರ್ಬಹುವಿಧೈ ರಾಜನ್ನಾಸಸಾದ ಪಿತಾಮಹಮ್ ॥೨೭॥

ಮಹಾರಥನಾದ ಸಾತ್ಯಕಿಯು ಅನೇಕ ವಿಧವಾದ ಬಾಣಗಳಿಂದ ಕೃತವರ್ಮನನ್ನು ತಡೆದು ಭೀಷ್ಮ-ಪಿತಾಮಹರ ಸಮೀಪಕ್ಕೆ ಬಂದರು.

ಸ ವಿದ್ಧ್ವಾ ಭಾರತಂ ಷಷ್ಟ್ಯಾ ನಿಶಿತೈರ್ಲೋಮವಾಹಿಭಃ ।
ನನರ್ತೇವ ರಥೋಪಸ್ಥೇ ವಿಧುನ್ವಾನೋ ಮಹದ್ಧನುಃ ॥೨೮॥

ಭರತಶ್ರೇಷ್ಠರಾದ ಅವರನ್ನು ಅವನು ಕೂದಲನ್ನೂ ಸೀಳುವಂಥ ಹರಿತವಾದ ಅರವತ್ತು ಬಾಣಗಳಿಂದ ಹೊಡೆದು ತನ್ನ ದೊಡ್ಡ ಧನುಸ್ಸನ್ನು ಕುಣಿಸುತ್ತಾ, ರಥಪೀಠದಲ್ಲಿ ನರ್ತಿಸುವವನಂತೆ ತೋರಿದನು.

ತಸ್ಯಾಯಸೀಂ ಮಹಾಶಕ್ತಿಂ ಚಿಕ್ಷೇಪಾಥ ಪಿತಾಮಹಃ ।
ಹೇಮಚಿತ್ರಾಂ ಮಹಾವೇಗಾಂ ನಾಗಕನ್ಯೋಪಮಾಂ ಶುಭಾಮ್ ॥೨೯॥

ಪಿತಾಮಹರಾದ ಭೀಷ್ಮರು ಅವನ ಮೇಲೆ ಸುವರ್ಣಾಲಂಕೃತವಾದ, ಮಹಾವೇಗಶಾಲಿಯಾದ, ನಾಗಕನ್ಯೆಯಂತಿದ್ದ, ಸ್ವಚ್ಛವಾದ, ಕಬ್ಬಿಣದಿಂದ ಮಾಡಿದ ಮಹಾಶಕ್ತ್ಯಾಯುಧವನ್ನು ಎಸೆದರು.

ತಾಮಾಪತಂತೀಂ ಸಹಸಾ ಮೃತ್ಯುಕಲ್ಪಾಂ ಸುತೇಜನಾಮ್ ।
ಧ್ವಂಸಯಾಮಾಸ ವಾರ್ಷ್ಣೇಯೋ ಲಾಘವೇನ ಮಹಾಯಶಾಃ ॥೩೦॥

ಮಹಾಕೀರ್ತಿಶಾಲಿಯಾದ ಸಾತ್ಯಕಿಯು ತನ್ನ ಕಡೆಗೆ ಮೃತ್ಯುವಿನಂತೆ ಕ್ಷಿಪ್ರವಾಗಿ ಬರುತ್ತಿದ್ದ ತೇಜೋಮಯವಾದ ಆ ಶಕ್ತಿಯನ್ನು ತನ್ನ ಚುರುಕುತನದಿಂದ ನಾಶಗೊಳಿಸಿದನು.

ಅನಾಸಾದ್ಯ ತು ವಾರ್ಷ್ಣೇಯಂ ಶಕ್ತಿಃ ಪರಮದಾರುಣಾ ।
ನ್ಯಪತದ್ ಧರಣೀಪೃಷ್ಠೇ ಮಹೋಲ್ಕೇವ ಗತಪ್ರಭಾ ॥೩೧॥

ಪರಮಘೋರವಾದ ಆ ಶಕ್ತಿಯು ಸಾತ್ಯಕಿಯನ್ನು ತಲುಪದೆಯೇ ತನ್ನ ಕಾಂತಿಯನ್ನು ಕಳೆದುಕೊಂಡು ದೊಡ್ಡ ಉಲ್ಕೆಯಂತೆ ಭೂಮಿಯ ಮೇಲೆ ಬಿದ್ದಿತು.

ವಾರ್ಷ್ಣೇಯಸ್ತು ತತೋ ರಾಜನ್ ಸ್ವಾಂ ಶಕ್ತಿಂ ಘೋರದರ್ಶನಾಮ್ ।
ವೇಗವದ್ ಗೃಹ್ಯ ಚಿಕ್ಷೇಪ ಪಿತಾಮಹರಥಂ ಪ್ರತಿ ॥೩೨॥

ಎಲೈ ರಾಜನೇ, ಅನಂತರ ಸಾತ್ಯಕಿಯಾದರೋ ಘೋರವಾಗಿ ತೋರುತ್ತಿದ್ದ ತನ್ನ ಶಕ್ತ್ಯಾಯುಧವನ್ನು ಹಿಡಿದು ಅದನ್ನು ಪಿತಾಮಹರ ರಥದ ಮೇಲೆ ವೇಗವಾಗಿ ಎಸೆದನು.

ವಾರ್ಷ್ಣೇಯಭುಜವೇಗೇನ ಪ್ರಣುನ್ನಾ ಸಾ ಮಹಾಹವೇ ।
ಅಭಿದುದ್ರಾವ ವೇಗೇನ ಕಾಲರಾತ್ರಿರ್ಯಥಾ ನರಮ್ ॥೩೩॥

ಸಾತ್ಯಕಿಯ ಭುಜವೇಗದಿಂದ ಪ್ರೇರಿತವಾದ ಶಕ್ತಿಯು ಆ ದೊಡ್ಡ ರಣರಂಗದಲ್ಲಿ ಮನುಷ್ಯನ ಬಳಿಗೆ ಕಾಲರಾತ್ರಿಯು ಬರುವಂತೆ ವೇಗವಾಗಿ ಬಂದಿತು.

ತಾಮಾಪತಂತೀಂ ಸಹಸಾ ದ್ವಿಧಾ ಚಿಚ್ಛೇದ ಭಾರತ ।
ಕ್ಷುರಪ್ರಾಭ್ಯಾಂ ಸುತೀಕ್ಷ್ಣಾಭ್ಯಾಂ ಸಾऽನ್ತರೀರ್ಯತ ಭೂತಳೇ ॥೩೪॥

ಎಲೈ ಭಾರತನೇ, ತನ್ನ ಕಡೆಗೆ ಬರುತ್ತಿದ್ದ ಆ ಶಕ್ತಿಯನ್ನು ಭೀಷ್ಮರು ತಕ್ಷಣ ಹರಿತವಾದ ಎರಡು ಕ್ಷುರಪ್ರದಿಂದ ಎರಡು ಭಾಗವಾಗಿ ಕತ್ತರಿಸಿದರು. ಅದು ಭೂಮಿಯಲ್ಲಿ ಬಿದ್ದು ವಿನಾಶವನ್ನು ಹೊಂದಿತು.

ಛಿತ್ತ್ವಾ ತು ಶಕ್ತಿಂ ಗಾಂಗೇಯಃ ಸಾತ್ಯಕಿಂ ನವಭಿಃ ಶರೈಃ ।
ಆಜಘಾನೋರಸಿ ಕ್ರುದ್ಧಃ ಪ್ರಹಸನ್ ಶತ್ರುಕರ್ಶನಃ ॥೩೫॥

ಶತ್ರುಸೂದನರಾದ ಭೀಷ್ಮರು ಆ ಶಕ್ತಿಯನ್ನು ನಾಶಗೊಳಿಸಿ, ಕೋಪಗೊಂಡು ಸಾತ್ಯಕಿಯ ವಕ್ಷಸ್ಥಲದಲ್ಲಿ ಒಂಭತ್ತು ಬಾಣಗಳನ್ನು ಪ್ರಯೋಗಿಸಿದರು.

ತತಃ ಸರಥನಾಗಾಶ್ವಾಃ ಪಾಂಡವಾಃ ಪಾಂಡುಪೂರ್ವಜ ।
ಪರಿವವ್ರುಃ ರಣೇ ಭೀಷ್ಮಂ ಮಾಧವತ್ರಾಣಕಾರಣಾತ್ ॥೩೬॥

ಎಲೈ ಪಾಂಡುವಿನ ಅಣ್ಣನೇ, ಆಗ ಸಾತ್ಯಕಿಯನ್ನು ರಕ್ಷಿಸುವ ಕಾರಣದಿಂದ ತಮ್ಮ ರಥ-ಗಜಾಶ್ವದಿಂದ ಸಹಿತರಾದ ಪಾಂಡವರು ರಣರಂಗದಲ್ಲಿ ಭೀಷ್ಮರನ್ನು ಸುತ್ತುವರಿದರು.

ತತಃ ಪ್ರವವೃತೇ ಯುದ್ಧಂ ತುಮುಲಂ ಲೋಮಹರ್ಷಣಮ್ ।
ಪಾಂಡವಾನಾಂ ಕುರೂಣಾಂ ಚ ಸಮರೇ ವಿಜಯೈಷಿಣಾಮ್ ॥೩೭॥

ಅನಂತರ ಯುದ್ಧದಲ್ಲಿ ಜಯವನ್ನು ಬಯಸುವ ಪಾಂಡವರಿಗೂ ಮತ್ತು ಕೌರವರಿಗೂ ತೀವ್ರವೂ ಮತ್ತು ರೋಮಾಂಚಕಾರಿಯೂ ಆದ ಯುದ್ಧವು ಜರುಗಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಏಕಾಧಿಕಶತತಮೋऽಧ್ಯಾಯಃ ॥

॥ ಭೀಷ್ಮವಧಪರ್ವಣಿ ಏಕಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನೂರ ಒಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎರಡನೆಯ ಅಧ್ಯಾಯ

ಭೀಷ್ಮರ ಸಹಾಯಕ್ಕಾಗಿ ದುರ್ಯೋಧನನಿಂದ ದುಶ್ಶಾಸನನ ಪ್ರೇಷಣ.
ಪಾಂಡವರಿಂದ ಕೌರವರ ಅಶ್ವಾರೋಹಿಗಳ ವಿನಾಶ.
ಶಲ್ಯ ಮತ್ತು ಪಾಂಡವರ ಯುದ್ಧ.

ಸಂಜಯಃ

ದೃಷ್ಟ್ವಾ ಭೀಷ್ಮಂ ರಣೇ ಕ್ರುದ್ಧಂ ಪಾಂಡವೈರಭಿಸಂವೃತಮ್ ।
ಯಥಾ ಮೇಘೈರ್ಮಹಾರಾಜ ತಪಾಂತೇ ದಿವಿ ಭಾಸ್ಕರಮ್ ॥೧॥

ದುರ್ಯೋಧನೋ ಮಹಾರಾಜ ದುಃಶಾಸನಮಭಾಷತ ।

ಸಂಜಯ– ಎಲೈ ಮಹಾರಾಜನೇ, ರಣದಲ್ಲಿ ಕ್ರೋಧಗೊಂಡ ಭೀಷ್ಮರು ಬೇಸಿಗೆಯ ಅನಂತರ ಆಕಾಶದಲ್ಲಿ ಮೋಡಗಳು ಸೂರ್ಯನನ್ನು ಮುಚ್ಚಿದಂತೆ ಪಾಂಡವರಿಂದ ಸುತ್ತುವರಿಯಲ್ಪಟ್ಟುದನ್ನು ನೋಡಿದ ದುರ್ಯೋಧನನು ದುಶ್ಶಾಸನನನ್ನು ಕುರಿತು ಮಾತನಾಡಿದನು.

ಏಷ ಶೂರೋ ಮಹೇಷ್ವಾಸೋ ಭೀಷ್ಮಃ ಶತ್ರುನಿಷೂದನಃ ॥೨॥

ಧಾದಿತಃ ಪಾಂಡವೈಃ ಶೂರೈಃ ಸಮಂತಾದ್ ಭರತರ್ಷಭ ।
ತಸ್ಯ ಕಾರ್ಯಂ ತ್ವಯಾ ವೀರ ರಕ್ಷಣಂ ಸುಮಹಾತ್ಮನಃ ॥೩॥

ಎಲೈ ಭರತಶ್ರೇಷ್ಠನೇ, ಮಹಾಧನುರ್ಧಾರಿಗಳೂ, ಶತ್ರುಸಂಹಾರಕರೂ, ಶೂರರೂ ಆದ ಈ ಭೀಷ್ಮರು ಶೂರರಾದ ಪಾಂಡವರಿಂದ ಸುತ್ತುವರಿಯಲ್ಪಟ್ಟಿದ್ದಾರೆ. ಎಲೈ ವೀರನೇ, ನೀನು ಮಹಾತ್ಮರಾದ ಅವರ ರಕ್ಷಣೆಯನ್ನು ಮಾಡಬೇಕು.

ರಕ್ಷ್ಯಮಾಣೋ ಹಿ ಸಮರೇ ಭೀಷ್ಮೋಽಸ್ಮಾಕಂ ಪಿತಾಮಹಃ ।
ನಿಹನ್ಯಾತ್ ಸಮರೇ ಯತ್ತಾನ್ ಪಾಂಚಾಲಾನ್ ಪಾಂಡವೈಃ ಸಹ ॥೪॥

ನಮ್ಮ ಪಿತಾಮಹರಾದ ಭೀಷ್ಮರನ್ನು ರಕ್ಷಿಸಿದರೆ ಅವರು ಯುದ್ಧದಲ್ಲಿ ಪ್ರಯತ್ನಶೀಲರಾದ ಪಾಂಚಾಲರನ್ನು ಪಾಂಡವರ ಜೊತೆಯಲ್ಲಿ ಕೊಂದಾರು.

ತತ್ರ ಕಾರ್ಯತಮಂ ಮನ್ಯೇ ಭೀಷ್ಮಸ್ಯೈವಾಭಿರಕ್ಷಣಮ್ ।
ಗೋಪ್ತಾ ಹ್ಯೇಷ ಮಹೇಷ್ವಾಸೋ ಭೀಷ್ಮೋಽಸ್ಮಾಕಂ ಪಿತಾಮಹಃ ॥೫॥

ಆ ವಿಷಯದಲ್ಲಿ ಭೀಷ್ಮರ ರಕ್ಷಣೆಯೇ ನಾವು ಮಾಡಬೇಕಾದ ಕಾರ್ಯವೆಂದು ಭಾವಿಸುತ್ತೇನೆ. ಮಹಾಧನುರ್ಧಾರಿಗಳಾದ ನಮ್ಮ ಪಿತಾಮಹರಾದ ಈ ಭೀಷ್ಮರು ನಮ್ಮನ್ನು ರಕ್ಷಿಸುವರು.

ಸ ಭವಾನ್ ಸರ್ವಸೈನ್ಯೇನ ಪರಿವಾರ್ಯ ಪಿತಾಮಹಮ್ ।
ಸಮರೇ ದುಷ್ಕರಂ ಕರ್ಮ ಕುರ್ವಾಣಂ ಪರಿರಕ್ಷತು ॥೬॥

ನೀನು ಯುದ್ಧದಲ್ಲಿ ದುಷ್ಕರವಾದ ಕಾರ್ಯವನ್ನು ಮಾಡುತ್ತಿರುವ ಪಿತಾಮಹರನ್ನು ಸರ್ವಸೈನ್ಯದಿಂದ ಸುತ್ತುವರಿದು ರಕ್ಷಿಸು (ಎಂದು ಹೇಳಿದನು).

ಏವಮುಕ್ತಸ್ತು ಸಮರೇ ಪುತ್ರೋ ದುಃಶಾಸನಸ್ತವ ।
ಪರಿವಾರ್ಯ ಸ್ಥಿತೋ ಭೀಷ್ಮಂ ಸೈನ್ಯೇನ ಮಹತಾ ವೃತಃ ॥೭॥

ಹೀಗೆ ಹೇಳಲ್ಪಟ್ಟ ನಿನ್ನ ಪುತ್ರನಾದ ದುಶ್ಶಾಸನನು ದೊಡ್ಡ ಸೈನ್ಯದಿಂದ ಕೂಡಿ ರಣರಂಗದಲ್ಲಿ ಭೀಷ್ಮರನ್ನು ಸುತ್ತುವರಿದು ನಿಂತನು.

ತತಃ ಶತಸಹಸ್ರೇಣ ಹಯಾನಾಂ ಸುಬಲಾತ್ಮಜಃ ।
ವಿಮಲಪ್ರಾಸಹಸ್ತಾನಾಮೃಷ್ಟಿತೋಮರಧಾರಿಣಾಮ್ ॥೮॥

ದರ್ಪಿತಾನಾಂ ಸುವೇಗಾನಾಂ ಬಲಸ್ಥಾನಾಂ ಪತಾಕಿನಾಮ್ ।
ಶಿಕ್ಷಿತೈರ್ಯುದ್ಧಕುಶಲೈರುಪೇತಾನಾಂ ನರೋತ್ತಮೈಃ ॥೯॥

ನಕುಲಂ ಸಹದೇವಂ ಚ ಧರ್ಮರಾಜಂ ಚ ಪಾಂಡವಮ್ ।
ನ್ಯವಾರಯನ್ ನರಶ್ರೇಷ್ಠಂ ಪರಿವಾರ್ಯ ಸಮಂತತಃ ॥೧೦॥

ಆಗ ಸುಬಲಾತ್ಮಜನಾದ ಶಕುನಿಯ ದರ್ಪಿಷ್ಠವಾದ, ಒಳ್ಳೆಯ ವೇಗಶಾಲಿಯಾದ, ಯೌವನಾವಸ್ಥೆಯನ್ನು ಹೊಂದಿರುವ, ಪತಾಕೆಗಳನ್ನು ಧರಿಸಿದ, ಹೊಳೆಯುವ ಪ್ರಾಸ, ಋಷ್ಟಿ, ತೋಮರಗಳನ್ನು ಧರಿಸಿದ, ಯುದ್ಧಕುಶಲರಾದ ಸುಶಿಕ್ಷಿತರಾದ ನರೋತ್ತಮರಿಂದ ಏರಲ್ಪಟ್ಟ ಹತ್ತುಸಹಸ್ರ ಅಶ್ವಗಳಿಂದ ನರಶ್ರೇಷ್ಠರಾದ ಭೀಷ್ಮರನ್ನು ಸುತ್ತುವರಿದು, ಪಾಂಡುಪುತ್ರರಾದ ನಕುಲ-ಸಹದೇವ ಮತ್ತು ಯುಧಿಷ್ಠಿರರನ್ನು ಎಲ್ಲ ಕಡೆಗಳಿಂದಲೂ ತಡೆದನು.

ತತೋ ದುರ್ಯೋಧನೋ ರಾಜಾ ಶೂರಾಣಾಂ ಹಯಸಾದಿನಾಮ್ ।
ಅಯುತಂ ಪ್ರೇಷಯಾಮಾಸ ಪಾಂಡವಾನಾಂ ನಿವಾರಣೇ ॥೧೧॥

ಆಗ ದುರ್ಯೋಧನನು ಪಾಂಡವರನ್ನು ತಡೆಯಲು ಶೂರರಾದ ಹತ್ತು ಸಹಸ್ರ ಅಶ್ವಾರೋಹಿಗಳನ್ನು ಕಳುಹಿಸಿದನು.

ತೈಃ ಪ್ರವಿಷ್ಟೈರ್ಮಹಾವೇಗೈರ್ಗರುತ್ವದ್ಭಿರಿವಾಹವೇ ।
ಖುರಾಹತಾ ಧರಾ ರಾಜಂಶ್ಚಕಂಪೇ ಚ ನನಾದ ಚ ॥೧೨॥

ಎಲೈ ರಾಜನೇ, ಯುದ್ಧದಲ್ಲಿ ಗರುಡನಂತೆ ಮಹಾವೇಗಶಾಲಿಗಳಾದ ಆ ಅಶ್ವಗಳು ಪ್ರವೇಶಿಸುತ್ತಿರಲು ಅವುಗಳ ಖುರಗಳ ಘಾತದಿಂದ ಪೀಡಿತವಾದ ಭೂಮಿಯಲ್ಲಿ ಭೂಕಂಪವೂ ಮತ್ತು ಗರ್ಜನೆಯೂ ಉಂಟಾಯಿತು.

ಖುರಶಬ್ದಶ್ಚ ಸುಮಹಾನ್ ವಾಜಿನಾಂ ಶುಶ್ರುವೇ ತದಾ ।
ಮಹಾವಂಶವನಸ್ಯೇವ ದಹ್ಯಮಾನಸ್ಯ ಪರ್ವತೇ ॥೧೩॥

ಪರ್ವತದಲ್ಲಿ ಕಾಡ್ಗಿಚ್ಚಿನಿಂದ ಉರಿಯುವ ದೊಡ್ಡ ಬಿದಿರಿನ ಸಮೂಹದ ಶಬ್ದದಂತೆ ಆ ಅಶ್ವಗಳ ದೊಡ್ಡ ಖುರ ಶಬ್ದವು ಆಗ ಕೇಳಿಬಂದಿತು.

ಉತ್ಪತದ್ಭಿಶ್ಚ ತೈಸ್ತತ್ರ ಸಮುದ್ಧೂತಂ ಮಹದ್ರಜಃ ।
ದಿವಾಕರಪಥಂ ಪ್ರಾಪ್ಯ ಛಾದಯಾಮಾಸ ಭಾಸ್ಕರಮ್ ॥೧೪॥

ಮೇಲೆ ನೆಗೆಯುವ ಅಶ್ವಗಳಿಂದ ಎದ್ದ ದೊಡ್ಡ ಧೂಳು ಸೂರ್ಯಮಾರ್ಗವನ್ನು ಸೇರಿ ಸೂರ್ಯನನ್ನು ಮರೆಮಾಡಿತು.

ವೇಗವದ್ಭಿರ್ಹಯೈಸ್ತೈಸ್ತು ಕ್ಷೋಭಿತಂ ಪಾಂಡವಂ ಬಲಮ್ ।
ನಿಪತದ್ಭಿರ್ಮಹಾವೇಗೈರ್ಹಂಸೈರಿವ ಮಹತ್ಸರಃ ॥೧೫॥

ಮಹಾವೇಗವುಳ್ಳ ಹಂಸಗಳು ದೊಡ್ಡ ಸರೋವರವಿದ್ದಲ್ಲಿ ಬಿದ್ದಂತೆ ವೇಗವುಳ್ಳ ಆ ಅಶ್ವಗಳಿಂದ ಪಾಂಡವರ ಸೈನ್ಯವು ಕ್ಷೋಭೆಗೊಂಡಿತು.

ಹೇಷತಾಂ ಚೈವ ಶಬ್ದೇನ ನ ಪ್ರಾಜ್ಞಾಯತ ಕಿಂಚನ ।
ಅಂತರ್ದಧೇ ಮಹಾನ್ ಶಬ್ದಸ್ತೇನ ಶಬ್ದೇನ ಮೋಹಿತಃ ॥೧೬॥

ಆ ಅಶ್ವಗಳ ಹೇಷಾರವಶಬ್ದದಿಂದ ಯಾವುದೂ ತಿಳಿದುಬರುತ್ತಿರಲಿಲ್ಲ. ಆ ದೊಡ್ಡ ಶಬ್ದದಿಂದ ಪರಾಭೂತವಾದ ಉಳಿದ ಸೈನ್ಯದ ದೊಡ್ಡ ಶಬ್ದವು ಅಂತರ್ಧಾನವನ್ನು ಹೊಂದಿತು.

ತತೋ ಯುಧಿಷ್ಠಿರೋ ರಾಜಾ ಮಾದ್ರೀಪುತ್ರೌ ಚ ಪಾಂಡವೌ ।
ಪ್ರತ್ಯಘ್ನನ್ ತರಸಾ ವೇಗಂ ಸಮರೇ ಹಯಸಾದಿನಾಮ್ ॥೧೭॥

ಆಗ ರಾಜನಾದ ಯುಧಿಷ್ಠಿರನೂ, ಪಾಂಡುಪುತ್ರರಾದ ನಕುಲ-ಸಹದೇವರೂ ಶೀಘ್ರವಾಗಿ ರಣರಂಗದಲ್ಲಿ ಅಶ್ವಾರೋಹಿಗಳ ವೇಗವನ್ನು ಅಡ್ಡಿಪಡಿಸಿದರು.

ಉದ್ವೃತ್ತಸ್ಯ ಮಹಾರಾಜ ಪ್ರಾವೃಟ್‌ಕಾಲೇನ ಪೂರ್ಯತಃ ।
ಪೌರ್ಣಮಾಸ್ಯಾಮಂಬುವೇಗಂ ಯಥಾ ವೇಲಾ ಮಹೋದಧೇಃ ॥೧೮॥

ಎಲೈ ಮಹಾರಾಜನೇ, ಮಳೆಗಾಲದಲ್ಲಿ ತುಂಬುವ ಮಹಾಸಮುದ್ರದ ಹುಣ್ಣಿಮೆಯ ಜಲವೇಗವನ್ನು ತೀರವು ತಡೆದಂತೆ ಧರ್ಮರಾಜ, ನಕುಲ ಮತ್ತು ಸಹದೇವರು ಅಶ್ವಗಳ ವೇಗವನ್ನು ತಡೆದರು.

ತತಸ್ತೇ ರಥಿನೋ ರಾಜನ್ ಶರೈಃ ಸನ್ನತಪರ್ವಭಿಃ ।
ಸ್ಕಂಧಸನ್ಥಮಾಂಗಾನಿ ಜಹ್ರುರೇಷಾಂ ಹಯಸಾದಿನಾಮ್ ॥೧೯॥

ಎಲೈ ರಾಜನೇ, ಆಗ ಅವರು ಬಾಗಿದ ತುದಿಯನ್ನು ಹೊಂದಿದ ಬಾಣಗಳಿಂದ ಅಶ್ವಾರೋಹಿಗಳ ಶರೀರದಿಂದ ಅವರ ಶಿರಸ್ಸುಗಳನ್ನು ಕತ್ತರಿಸಿದರು.

ತೇ ನಿಪೇತುರ್ಮಹಾರಾಜ ನಿಹತಾ ದೃಢಧನ್ವಿಭಿಃ ।
ನಾಗೈರಿವ ಮಹಾನಾಗಾ ಯಥಾ ಸ್ಯುರ್ಗಿರಿಗಹ್ವರೇ ॥೨೦॥

ಎಲೈ ಮಹಾರಾಜನೇ, ದೃಢವಾದ ಧನುರ್ಧಾರಿಗಳಿಂದ ಹೊಡೆಯಲ್ಪಟ್ಟ ಅವರು ಗಿರಿಗಹ್ವರದಲ್ಲಿ ಗಜಗಳಿಂದ ಹೊಡೆಯಲ್ಪಟ್ಟ ಮಹಾಗಜಗಳಂತೆ ಬಿದ್ದರು.

ತೇऽಪಿ ಪ್ರಾಸೈಃ ಸುನಿಶಿತೈಃ ಶರೈಃ ಸನ್ನತಪರ್ವಭಿಃ ।
ಸ್ಕಂಧಸನ್ಥಮಾಂಗಾನಿ ವಿಚರಂತೋ ದಿಶೋ ದಶ ॥೨೧॥

ಅವರೂ ಸಹ ಹತ್ತುದಿಕ್ಕುಗಳಲ್ಲಿಯೂ ಸಂಚರಿಸುತ್ತಾ, ಬಾಗಿದ ತುದಿಯುಳ್ಳ ತೀಕ್ಷ್ಣವಾದ ಬಾಣಗಳಿಂದ ಪಾಂಡವ ಸೈನಿಕರ ಶಿರಸ್ಸುಗಳನ್ನು ಕತ್ತರಿಸಿದರು.

ಅಶ್ವಾಸನ್ನಾ ಹಯಾರೋಹಾ ಋಷ್ಟಿಭಿರ್ಭರತರ್ಷಭ ।
ಅಚ್ಛಿನನ್ವನ್ತಮಾಂಗಾನಿ ಫಲಾನೀವ ಮಹಾದ್ರುಮಾತ್ ॥೨೨॥

ಎಲೈ ಭರತಶ್ರೇಷ್ಠನೇ, ಸಮೀಪಕ್ಕೇ ಬಂದ ಅಶ್ವಾರೋಹಿಗಳು ದೊಡ್ಡ ವೃಕ್ಷದಿಂದ ಫಲಗಳನ್ನು ಕೆಡವಿದಂತೆ ಋಷ್ಟಿಗಳಿಂದ ಯೋಧರ ಶಿರಸ್ಸುಗಳನ್ನು ಕತ್ತರಿಸಿದರು.

ಸಾದಿನೋ ಹಯಾ ರಾಜಂಸ್ತತ್ರ ತತ್ರ ನಿಪೂದಿತಾಃ ।
ಪತಿತಾಃ ಪಾತ್ಯಮಾನಾಶ್ಚ ಶತಶೋऽಥ ಸಹಸ್ರಶಃ ॥೨೩॥

ಎಲೈ ರಾಜನೇ, ಅಲ್ಲಲ್ಲಿ ಅಶ್ವಾರೋಹಿಗಳಿಂದ ಸಹಿತವಾದ ಅಶ್ವಗಳು ಕೊಲ್ಲಲ್ಪಟ್ಟು ಬಿದ್ದಿರುವುದು ಮತ್ತು ಓಡುತ್ತಿರುವುದು ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ಕಂಡುಬಂದವು.

ವಧ್ಯಮಾನಾ ಹಯಾಸ್ತೇ ತು ಪ್ರಾದ್ರವಂತ ಭಯಾರ್ದಿತಾಃ ।
ಯಥಾ ಸಿಂಹಾನ್ ಸಮಾಸಾದ್ಯ ಮೃಗಾಃ ಪ್ರಾಣಪರಾಯಣಾಃ ॥೨೪॥

ಹೀಗೆ ಹೊಡೆಯಲ್ಪಟ್ಟ ಆ ಅಶ್ವಗಳು ಭಯಗ್ರಸ್ತಗಳಾಗಿ ಸಿಂಹಗಳ ಸಮೀಪಕ್ಕೆ ಬಂದು ಪ್ರಾಣವನ್ನು ಉಳಿಸಿಕೊಳ್ಳುವ ಇಚ್ಛೆಯುಳ್ಳ ಜಿಂಕೆಗಳಂತೆ ಓಡಿಹೋದವು.

ಪಾಂಡವಾಸ್ತು ಮಹಾರಾಜ ಜಿತ್ವಾ ಶತ್ರೂನ್ ಮಹಾಹವೇ ।
ದಧ್ಮುಃ ಶಂಖಾಂಶ್ಚ ಭೇರೀಶ್ಚ ತಾಡಯಾಮಾಸುರಾಹವೇ ॥೨೫॥

ಎಲೈ ಮಹಾರಾಜನೇ, ಪಾಂಡವರಾದರೋ ದೊಡ್ಡ ಯುದ್ಧದಲ್ಲಿ ಶತ್ರುಗಳನ್ನು ಗೆದ್ದು ಶಂಖಗಳನ್ನು ಊದಿ, ಭೇರಿಗಳನ್ನು ಬಾರಿಸಿದರು.

ತತೋ ದುರ್ಯೋಧನೋ ದೃಷ್ಟ್ವಾ ದೀನಂ ಸೈನ್ಯಮವಸ್ಥಿತಮ್ ।
ಅಬ್ರವೀದ್ ಭರತಶ್ರೇಷ್ಠ ಮದ್ರರಾಜಮಿದಂ ವಚಃ ॥೨೬॥

ಎಲೈ ಭರತಶ್ರೇಷ್ಠನೇ, ಆಗ ದುರ್ಯೋಧನನು ತನ್ನ ಸೈನ್ಯದ ದೈನ್ಯಾವಸ್ಥೆಯನ್ನು ನೋಡಿ ಮದ್ರರಾಜನಾದ ಶಲ್ಯನನ್ನು ಕುರಿತು ಈ ಮಾತನ್ನಾಡಿದನು.

ಏಷ ಪಾಂಡುಸುತೋ ಜ್ಯೇಷ್ಠೋ ಜಿತ್ವಾ ಮಾತುಲ ಮಾಮಕಾನ್ ।
ಪಶ್ಯತಾಂ ನೋ ಮಹಾಬಾಹೋ ಸೇನಾಂ ದ್ರಾವಯತೇ ಬಲೀ ॥೨೭॥

ಎಲೈ ಮಹಾಬಾಹುವೇ, ಸೋದರಮಾವನೇ, ಪಾಂಡುವಿನ ಹಿರಿಯ ಮಗನಾದ ಬಲಿಷ್ಠನಾದ ಯುಧಿಷ್ಠಿರನು ನಾವು ನೋಡುತ್ತಿರುವಂತೆಯೇ ನಮ್ಮವರನ್ನು ಗೆದ್ದು ನಮ್ಮ ಸೈನ್ಯವನ್ನು ಓಡಿಸುತ್ತಿದ್ದಾನೆ.

ತಂ ವಾರಯ ಮಹಾಬಾಹೋ ವೇಲೇವ ಮಕರಾಲಯಮ್ ।
ತ್ವಂ ಹಿ ಸಂಶ್ರೂಯಸೇಽತ್ಯರ್ಥಮಸಹ್ಯಬಲವಿಕ್ರಮಃ ॥೨೮॥

ಎಲೈ ಮಹಾಬಾಹುವೇ, ನೀನು ಅಪರಿಮಿತವಾದ ಬಲಪರಾಕ್ರಮವುಳ್ಳವನು ಎಂದು ಒಳ್ಳೆಯ ಪ್ರಸಿದ್ಧಿ ಇದೆ. ಆದ್ದರಿಂದ ತೀರವು ಸಮುದ್ರವನ್ನು ತಡೆದಂತೆ ಅವನನ್ನು ತಡೆ.

ಪುತ್ರಸ್ಯ ತವ ತದ್ವಾಕ್ಯಂ ಶ್ರುತ್ವಾ ಶಲ್ಯಃ ಪ್ರತಾಪವಾನ್ ।
ಪ್ರಯಯೌ ರಥವಂಶೇನ ಯತ್ರ ರಾಜಾ ಯುಧಿಷ್ಠಿರಃ ॥೨೯॥

ನಿನ್ನ ಪುತ್ರನ ಆ ಮಾತುಗಳನ್ನು ಕೇಳಿ ಪ್ರತಾಪಶಾಲಿಯಾದ ಶಲ್ಯನು ರಾಜನಾದ ಯುಧಿಷ್ಠಿರನಿದ್ದೆಡೆಗೆ ರಥಸಮೂಹದಿಂದ ಹೊರಟನು.

ತದಾಪತದ್ ವೈ ಸಹಸಾ ಶಲ್ಯಸ್ಯ ಸುಮಹದ್ಬಲಮ್ ।
ಮಹೌಘವೇಗಂ ಸಮರೇ ವಾರಯಾಮಾಸ ಪಾಂಡವಃ ॥೩೦॥

ಶಲ್ಯನ ದೊಡ್ಡ ಸೈನ್ಯವು ಇದ್ದಕ್ಕಿದ್ದಂತೆಯೇ ತನ್ನ ಕಡೆಗೆ ಬರುತ್ತಿರುವುದನ್ನು ನೋಡಿ ಪಾಂಡುಪುತ್ರನಾದ ಯುಧಿಷ್ಠಿರನು ಮಹಾಜಲಪ್ರವಾಹದ ವೇಗವನ್ನು ಹೊಂದಿದ್ದ ಯುದ್ಧದಲ್ಲಿ ಆ ದೊಡ್ಡ ಸೈನ್ಯವನ್ನು ತಡೆದನು.

ಮದ್ರರಾಜಂ ಚ ಸಮರೇ ಧರ್ಮರಾಜೋ ಮಹಾರಥಃ ।
ದಶಭಿಃ ಸಾಯಕೈಸ್ತೂರ್ಣಮಾಜಘಾನ ಸ್ತನಾಂತರೇ ।
ನಕುಲಃ ಸಹದೇವಶ್ಚ ತ್ರಿಭಿಸ್ತ್ರಿಭಿರಜಿಹ್ಮಗೈಃ ॥೩೧॥

ಮಹಾರಥನಾದ ಧರ್ಮರಾಜನು ಯುದ್ಧದಲ್ಲಿ ಮದ್ರರಾಜನಾದ ಶಲ್ಯನನ್ನು ಹತ್ತುಬಾಣಗಳಿಂದ ಶೀಘ್ರವಾಗಿ ಅವನ ಸ್ತನಗಳ ಮಧ್ಯದಲ್ಲಿ ಹೊಡೆದನು. ನಕುಲ-ಸಹದೇವರೂ ಸಹ ನೇರವಾಗಿ ಸಾಗುವ ಮೂರು-ಮೂರು ಬಾಣಗಳಿಂದ ಅವನನ್ನು ಹೊಡೆದರು.

ಮದ್ರರಾಜೋऽಪಿ ತಾನ್ ಸರ್ವಾನಾಜಘಾನ ತ್ರಿಭಿಸ್ತ್ರಿಭಿಃ ।
ಯುಧಿಷ್ಠಿರಂ ಪುನಃ ಷಷ್ಟ್ಯಾ ವಿವ್ಯಾಧ ನಿಶಿತೈಃ ಶರೈಃ ।
ಮಾದ್ರೀಪುತ್ರೌ ಚ ಸಂರಬ್ಧೌ ದ್ವಾಭ್ಯಾಂ ದ್ವಾಭ್ಯಾಮತಾಡಯತ್ ॥೩೨॥

ಮದ್ರರಾಜನೂ ಸಹ ಅವರೆಲ್ಲರನ್ನೂ ಮೂರು-ಮೂರು ಬಾಣಗಳಿಂದ ಹೊಡೆದು ಪುನಃ ಯುಧಿಷ್ಠಿರನ ಮೇಲೆ ತೀಕ್ಷ್ಣವಾದ ಅರವತ್ತು ಬಾಣಗಳನ್ನು ಪ್ರಯೋಗಿಸಿದನು. ಕೋಪಗೊಂಡ ಮಾದ್ರೀಪುತ್ರರನ್ನೂ ಸಹ ಎರಡೆರಡು ಬಾಣಗಳಿಂದ ಹೊಡೆದನು.

ತತೋ ಭೀಮೋ ಮಹಾಬಾಹುರ್ದಶ್ವಾ ರಾಜಾನಮಾಹವೇ ।
ಮದ್ರರಾಜವಶಂ ಪ್ರಾಪ್ತಂ ಮೃತ್ಯೋರಾಸ್ಯಗತಂ ಯಥಾ ।
ಅಭ್ಯದ್ರವತ ಸಂಗ್ರಾಮೇ ಯುಧಿಷ್ಠಿರಮಮಿತ್ರಜಿತ್ ॥೩೩॥

ಆಗ ಶತ್ರುಗಳನ್ನು ಜಯಿಸುವ ಮಹಾಬಾಹುವಾದ ಭೀಮಸೇನನು ಯುದ್ಧದಲ್ಲಿ ರಾಜನು ಮೃತ್ಯುವಿನ ಬಾಯಿಗೆ ಸಿಲುಕಿದಂತೆ ಮದ್ರರಾಜನ ವಶವಾಗಿರುವುದನ್ನು ನೋಡಿ ಯುಧಿಷ್ಠಿರನ ಕಡೆಗೆ ಧಾವಿಸಿ ಬಂದನು.

ಆಪತನ್ನೇವ ಭೀಮಸ್ತು ಮದ್ರರಾಜಮತಾಡಯತ್ ।
ಸರ್ವಪಾರಶವೈಸ್ತೀಕ್ಷ್ಣೈರ್ನಾರಾಚೈರ್ಮರ್ಮಭೇದಿಭಃ ॥೩೪॥

ಭೀಮನಾದರೋ ಬರುತ್ತಲೇ ಮದ್ರರಾಜನ ಮೇಲೆ ಅಯೋಮಯವಾದ, ತೀಕ್ಷ್ಣವಾದ, ಮರ್ಮಭೇದಿಗಳಾದ ನಾರಾಚಗಳನ್ನು ಪ್ರಯೋಗಿಸಿದನು.

ತತೋ ಭೀಷ್ಮಶ್ಚ ದ್ರೋಣಶ್ಚ ಸೈನ್ಯೇನ ಮಹತಾ ವೃತೌ ।
ರಾಜಾನಮಭ್ಯಪದ್ಯೇತಾಮಂಜಸಾ ಶರವರ್ಷಿಣೌ ॥೩೫॥

ಆಗ ಭೀಷ್ಮರು ಮತ್ತು ದ್ರೋಣರು ದೊಡ್ಡ ಸೈನ್ಯದಿಂದ ಕೂಡಿ ಬಾಣಗಳ ಒಳ್ಳೆಯ ಮಳೆಯನ್ನು ಸುರಿಸುತ್ತಾ ರಾಜನಾದ ಯುಧಿಷ್ಠಿರನನ್ನು ಸಮೀಪಿಸಿದರು.

ತತೋ ಯುದ್ಧಂ ಮಹಾಘೋರಂ ಪ್ರಾವರ್ತತ ಸುದಾರುಣಮ್ ।
ಅಪರಾಂ ದಿಶಮಾಸ್ಥಾಯ ದ್ಯೋತಮಾನೇ ದಿವಾಕರೇ ॥೩೬॥

ಅನಂತರ ಸೂರ್ಯನು ಪಶ್ಚಿಮದಿಕ್ಕಿನಲ್ಲಿ ಪ್ರಕಾಶಿಸುತ್ತಿರಲು ಮಹಾಘೋರವೂ, ಭಯಂಕರವೂ ಆದ ಯುದ್ಧವು ನಡೆಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ದ್ವ್ಯಧಿಕಶತತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ದ್ವಿಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನೂರ ಎರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯ - ೨೫ನೇ ಅಧ್ಯಾಯ

ಯುಧಿಷ್ಠಿರೋ ಭೀಷ್ಮಪರಾಕ್ರಮೇಣ
ಭೀತೋ ಭೀಷ್ಮಂ ಸ್ವವಧೋಪಾಯಮೇವ ।
ಪ್ರಷ್ಟುಂ ಯಯೌ ನಿಶಿ ಕೃಷ್ಣೋಽನುಜಾಶ್ಚ
ತಸ್ಮಾನ್ನಯುಸ್ತಂ ಸ ಪಿತಾಮಹೋ ಯತ್ ॥೧೧೪॥

ಯುಧಿಷ್ಠಿರ ಭೀಷ್ಮರ ಪರಾಕ್ರಮದಿಂದ ಭೀತನಾಗಿ ಅವನ ವಧೆಗೆ ಉಪಾಯವನ್ನು ಅವನಲ್ಲಿಯೇ ಕೇಳುವುದಕ್ಕಾಗಿ ಅವರು ಪಿತಾಮಹರಾದುದರಿಂದ ರಾತ್ರಿಯಲ್ಲಿ ಅವರ ಶಿಬಿರಕ್ಕೇ ನಡೆದ. ಅವನ ತಮ್ಮಂದಿರೂ ಕೃಷ್ಣನೂ ಅವನನ್ನು ಹಿಂಬಾಲಿಸಿದರು.

ಭೀಮಾರ್ಜುನೌ ಶಕ್ನುವಂತಾಪಿ ಸ್ಮ
ನತ್ಯೇಽನುಜ್ಞಾಂ ಹಂತುಮಿಮಂ ತದೈಚ್ಛತಾಮ್ ।
ಪೂಜ್ಯೋ ಯತೋ ಭೀಷ್ಮ ಉದಾರಕರ್ಮಾ
ಕೃಷ್ಣೋಽಪ್ಯಯಾತ್ ತೇನ ಹಿ ಪಾಂಡವಾರ್ಥೇ ॥೧೧೫॥

ಭೀಮಾರ್ಜುನರು ಭೀಷ್ಮರನ್ನು ಕೊಲ್ಲಲು ಶಕ್ತರಾಗಿದ್ದರೂ ಅವರ ಅನುಜ್ಞೆ ಇಲ್ಲದೆ ಅವರನ್ನು ಕೊಲ್ಲಲು ಬಯಸಲಿಲ್ಲ. ಏಕೆಂದರೆ ಉತ್ತಮ ಕರ್ಮವನ್ನೇ ಮಾಡುತ್ತಿದ್ದ ಭೀಷ್ಮರು ಅವರಿಗೆ ಪೂಜ್ಯರಾಗಿದ್ದರು. ಆದ್ದರಿಂದಲೇ ಕೃಷ್ಣನೂ ಪಾಂಡವರಿಗಾಗಿ ಅಲ್ಲಿಗೆ ಬಂದಿದ್ದ.

★ ★ ★ ★ ★

ನೂರ ಮೂರನೆಯ ಅಧ್ಯಾಯ

ಯುದ್ಧದಲ್ಲಿ ಭೀಷ್ಮರ ಪ್ರತಾಪ. ಕೋಪಗೊಂಡ ಕೃಷ್ಣನಿಂದ ರಥದಿಂದ ಇಳಿದು ಭೀಷ್ಮರ ರಥದ ಕಡೆಗೆ ಓಟ. ಅರ್ಜುನನಿಂದ ಸಮಾಧಾನ ಮಾಡಿ ಹಿಂದಕ್ಕೆ ಕರೆತರುವಿಕೆ. ಅರ್ಜುನನಿಗೆ ಯುಧಿಷ್ಠಿರನ ಆದೇಶ. ಎರಡೂ ಸೈನ್ಯಗಳ ಆಯಾಸ.

ಸಂಜಯಃ

ತತಃ ಪಿತಾ ತವ ಕ್ರುದ್ಧೋ ನಿಶಿತೈಃ ಸಾಯಕೋತ್ತಮೈಃ ।
ಆಜಘಾನ ರಣೇ ಪಾರ್ಥಾನ್ ಸಹಸೇನಾನ್ ಸಮಂತತಃ ॥೧॥

ಸಂಜಯ– ಆಗ ಕ್ರುದ್ಧನಾದ ನಿನ್ನ ತಂದೆಯು ತೀಕ್ಷ್ಣವಾದ ಮತ್ತು ಶ್ರೇಷ್ಠವಾದ ಬಾಣಗಳಿಂದ ಎಲ್ಲ ಕಡೆಯಲ್ಲಿಯೂ ಸೈನ್ಯ ಸಹಿತರಾದ ಪಾಂಡವರನ್ನು ಹೊಡೆದನು.

ಭೀಮಂ ದ್ವಾದಶಭಿರ್ವಿದ್ಧ್ವಾ ಸಾತ್ಯಕಿಂ ನವಭಿಃ ಶರೈಃ ।
ನಕುಲಂ ಚ ತ್ರಿಭಿರ್ಬಾಣೈಃ ಸಹದೇವಂ ಚ ಸಪ್ತಭಿಃ ॥೨॥

ಯುಧಿಷ್ಠಿರಂ ದ್ವಾದಶಭಿರ್ಬಾಹ್ವೋರುರಸಿ ಚಾರ್ಪಯತ್ ।
ಧೃಷ್ಟದ್ಯುಮ್ನಂ ತತೋ ವಿದ್ಧ್ವಾ ವಿನನಾದ ಮಹಾಬಲಃ ॥೩॥

ಮಹಾಬಲರಾದ ಅವರು ಭೀಮನನ್ನು ಹತ್ತುಬಾಣಗಳಿಂದಲೂ, ಸಾತ್ಯಕಿಯನ್ನು ಒಂಬತ್ತು ಬಾಣಗಳಿಂದಲೂ, ನಕುಲನನ್ನು ಮೂರು ಬಾಣಗಳಿಂದಲೂ, ಸಹದೇವನನ್ನು ಏಳು ಬಾಣಗಳಿಂದಲೂ, ಯುಧಿಷ್ಠಿರನನ್ನು ಹನ್ನೆರಡು ಬಾಣಗಳಿಂದಲೂ ಬಾಹುಗಳಲ್ಲಿಯೂ, ವಕ್ಷಸ್‌ಸ್ಥಲದಲ್ಲಿಯೂ ಹೊಡೆದು, ಅನಂತರ ಧೃಷ್ಟದ್ಯುಮ್ನನನ್ನು ಹೊಡೆದು ಸಿಂಹನಾದವನ್ನು ಮಾಡಿದರು.

ತಂ ದ್ವಾದಶಾರ್ಧೇನ್ದುಕುಲೋ ಮಾಧವಶ್ಚ ತ್ರಿಭಿಃ ಶರೈಃ ।
ಧೃಷ್ಟದ್ಯುಮ್ನಶ್ಚ ಸಪ್ತತ್ಯಾ ಭೀಮಸೇನಶ್ಚ ಪಂಚಭಿಃ ।
ಯುಧಿಷ್ಠಿರೋ ದ್ವಾದಶಭಿಃ ಪ್ರತ್ಯವಿಧ್ಯತ್ ಪಿತಾಮಹಮ್ ॥೪॥

ಪಿತಾಮಹರಾದ ಅವರನ್ನು ನಕುಲನು ಆರು ಬಾಣಗಳಿಂದಲೂ, ಸಾತ್ಯಕಿಯು ಮೂರು ಬಾಣಗಳಿಂದಲೂ, ಧೃಷ್ಟದ್ಯುಮ್ನನು ಎಪ್ಪತ್ತು ಬಾಣಗಳಿಂದಲೂ,

ಭೀಮಸೇನನು ಐದು ಬಾಣಗಳಿಂದಲೂ ಮತ್ತು ಯುಧಿಷ್ಠಿರನು ಹನ್ನೆರಡು ಬಾಣಗಳಿಂದಲೂ ಪ್ರತಿಯಾಗಿ ಹೊಡೆದರು.

ದ್ರೋಣಸ್ತು ಸಾತ್ಯಕಿಂ ವಿದ್ಧ್ವಾ ಭೀಮಸೇನಮವಿಧ್ಯತ ।
ಏಕೈಕಂ ಪಂಚಭಿರ್ಬಾಣೈರ್ಯಮದಂಡೋಪಮೈಃ ಶಿತೈಃ ॥೫॥

ದ್ರೋಣರಾದರೋ ಒಂದೊಂದೂ ಯಮದಂಡದಂತೆ ತೀಕ್ಷ್ಣವಾಗಿದ್ದ ಐದು ಬಾಣಗಳಿಂದ ಸಾತ್ಯಕಿಯನ್ನು ಹೊಡೆದು ಭೀಮಸೇನನನ್ನೂ ಹೊಡೆದರು.

ತೌ ಚ ತಂ ಪ್ರತ್ಯವಿಧ್ಯೇತಾಂ ತ್ರಿಭಿಸ್ತ್ರಿಭಿರಜಿಹ್ಮಗೈಃ ।
ತೋತ್ತ್ರೈರಿವ ಮಹಾನಾಗಂ ದ್ರೋಣಂ ಬ್ರಾಹ್ಮಣಪುಂಗವಮ್ ॥೬॥

ಅವರಿಬ್ಬರೂ ನೇರವಾಗಿ ಸಾಗುವ ಮೂರು-ಮೂರು ಬಾಣಗಳಿಂದ ಅಂಕುಶಗಳಿಂದ ಮಹಾಗಜವನ್ನು ಹೊಡೆದಂತೆ ಬ್ರಾಹ್ಮಣೋತ್ತಮರಾದ ದ್ರೋಣರನ್ನು ಪ್ರತಿಯಾಗಿ ಹೊಡೆದರು.

ಸೌವೀರಾಃ ಕಿತವಾಃ ಪ್ರಾಚ್ಯಾಃ ಪ್ರತೀಚ್ಯೋದೀಚ್ಯಮಾಲವಾಃ ।
ಅಭೀಷಾಹಾಃ ಶೂರಸೇನಾಃ ಶಿಬಯೋऽಥ ವಸಾತಯಃ ।
ಸಂಗ್ರಾಮೇ ನಾಜಹುರ್ಭೀಷ್ಮಂ ವಧ್ಯಮಾನಾಃ ಶಿತೈಃ ಶರೈಃ ॥೭॥

ಸೌವೀರರು, ಕಿತವರು, ಪೂರ್ವದಿಕ್ಕಿನವರು, ಪಶ್ಚಿಮದಿಕ್ಕಿನವರು, ಉತ್ತರ ದಿಕ್ಕಿನವರು, ಮಾಲವರು, ಅಭೀಷಾಹರು, ಶೂರಸೇನರು, ಶಿಬಿಗಳು, ವಸಾತಿಗಳು ಇಷ್ಟು ಯೋಧರು ತೀಕ್ಷ್ಣವಾದ ಬಾಣಗಳಿಂದ ಹೊಡೆಯಲ್ಪಡುತ್ತಿದ್ದರೂ ಯುದ್ಧದಲ್ಲಿ ಭೀಷ್ಮರನ್ನು ಬಿಟ್ಟುಕದಲಲಿಲ್ಲ.

ತಥೈವಾನ್ಯೇ ವಧ್ಯಮಾನಾಃ ಪಾಂಡವೇಯೈರ್ಮಹಾತ್ಮಭಿಃ ।
ಪಾಂಡವಾನಭ್ಯವರ್ತಂತ ವಿವಿಧಾಯುಧಪಾಣಯಃ ।
ತಥೈವ ಪಾಂಡವಾ ರಾಜನ್ ಪರಿವವ್ರುಃ ಪಿತಾಮಹಮ್ ॥೮॥

ಮಹಾತ್ಮರಾದ ಪಾಂಡವರಿಂದ ಹೊಡೆಯಲ್ಪಡುತ್ತಿದ್ದ ಇನ್ನಿತರರು ಕೈಯಲ್ಲಿ ಅನೇಕ ಆಯುಧಗಳನ್ನು ಹಿಡಿದು ಪಾಂಡವರಲ್ಲಿಗೇ ಸಾಗಿಬಂದರು. ಪಾಂಡವರೂ ಹಾಗೆಯೇ ಪಿತಾಮಹರನ್ನು ಸುತ್ತುವರಿದರು.

ಸ ಸಮಂತಾತ್ ಪರಿವೃತೋ ರಥೌಘೈರಪರಾಜಿತಃ ।
ಗಹನೇಽಗ್ನಿರಿವೋತ್ಸೃಷ್ಟಃ ಪ್ರಜಜ್ವಾಲ ದಹನ್ ಪರಾನ್ ॥೯॥

ಯುದ್ಧದಲ್ಲಿ ಎಂದೂ ಸೋಲದ ಭೀಷ್ಮರು ಎಲ್ಲ ಕಡೆಗಳಿಂದಲೂ ಸುತ್ತುವರಿಯಲ್ಪಟ್ಟು ಕಾಡಿನಲ್ಲಿ ಬಿದ್ದ ಅಗ್ನಿಯಂತೆ ಶತ್ರುಗಳನ್ನು ಸುಡುತ್ತಾ ಪ್ರಜ್ವಲಿಸಿದರು.

ರಥಾಗ್ನ್ಯಗಾರಶಾಪಾರ್ಚಿರಸಿಶಕ್ತಿಗದೇಂಧನಃ ।
ಶರಸ್ಫುಲಿಂಗೋ ಭೀಷ್ಮಾಗ್ನಿರ್ದದಾಹ ಕ್ಷತ್ರಿಯರ್ಷಭಾನ್ ॥೧೦॥

ರಥವೆಂಬ ಅಗ್ನಿಕುಟೀರದಿಂದಲೂ, ಧನುಸ್ಸುಗಳೆಂಬ ಜ್ವಾಲೆಗಳಿಂದಲೂ, ಖಡ್ಗ-ಗದಾ-ಶಕ್ತಿಗಳೆಂಬ ಕಟ್ಟಿಗೆಗಳಿಂದಲೂ, ಬಾಣಗಳೆಂಬ ಕಿಡಿಗಳಿಂದಲೂ ಕೂಡಿದ ಭೀಷ್ಮಾಗ್ನಿಯು ಕ್ಷತ್ರಿಯರನ್ನು ಸುಟ್ಟುಹಾಕಿತು.

ಯಥಾ ಹಿ ಸುಮಹಾನಗ್ನಿಃ ಕಕ್ಷೇ ಚರತಿ ಸಾನಿಲಃ ।
ತಥಾ ಭೀಷ್ಮೋ ಮಹಾರಾಜ ದಿವ್ಯಮಸ್ತ್ರಮುದೀರಯನ್ ॥೧೧॥

ಸುವರ್ಣಪುಂಖೈರಿಷುಭಿರ್ಗಾರ್ಧ್ರಪಕ್ಷೈಃ ಸುತೇಜನೈಃ ।
ಕರ್ಣನಾಲೀಕನಾರಾಚೈಶ್ಚಾದಯಾಮಾಸ ತದ್ಬಲಮ್ ॥೧೨॥

ಎಲೈ ಮಹಾರಾಜನೇ, ಹುಲ್ಲುಗಾವಲಿನಲ್ಲಿ ಬಿದ್ದ ವಾಯುಸಹಿತವಾದ ದೊಡ್ಡ ಅಗ್ನಿಯು ಸಂಚರಿಸಿದಂತೆ ಭೀಷ್ಮರು ದಿವ್ಯಾಸ್ತ್ರಗಳನ್ನು ಪ್ರಾದುರ್ಭವಿಸಿ ಸುವರ್ಣ ಪುಂಖಗಳನ್ನೂ, ಪಕ್ಷಿಗಳ ಗರಿಗಳನ್ನೂ ಹೊಂದಿದ ವೇಗಶಾಲಿಗಳಾದ ಬಾಣಗಳಿಂದ, ಕರ್ಣಗಳಿಂದ, ನಾಲೀಕ-ನಾರಾಚಗಳಿಂದ ಪಾಂಡವರ ಸೈನ್ಯವನ್ನು ಮುಚ್ಚಿಹಾಕಿದರು.

ಅಪಾತಯದ್ ಧ್ವಜಾಂಶ್ಚೈವ ರಥಿನಶ್ಚ ಶಿತೈಃ ಶರೈಃ ।
ಮುಂಡತಾಳವನಾನೀವ ಚಕಾರ ಸ ರಥವ್ರಜಾನ್ ॥೧೩॥

ತಮ್ಮ ತೀಕ್ಷ್ಣವಾದ ಬಾಣಗಳಿಂದ ಧ್ವಜಗಳನ್ನು ಮತ್ತು ರಥಿಕರನ್ನು ಉರುಳಿಸಿದರು. ರಥಸಮೂಹಗಳನ್ನು ಶಿರೋಭಾಗವನ್ನು ಕತ್ತರಿಸಿದ ತಾಳವೃಕ್ಷದ ವನಗಳಂತೆ ಮಾಡಿದರು.

ನಿರ್ಮನುಷ್ಯಾನ್ ರಥಾನ್ ರಾದನ್ ಗಜಾನಶ್ವಾಂಶ್ಚ ಸಂಯುಗೇ ।
ಅಕರೋತ್ಸ ಮಹಾಬಾಹುಃ ಸರ್ವಶಸ್ತ್ರಭೃತಾಂ ವರಃ ॥೧೪॥

ಎಲೈ ರಾಜನೇ, ಮಹಾಬಾಹುಗಳೂ, ಶಸ್ತ್ರಧಾರಿಗಳೆಲ್ಲರಲ್ಲಿಯೂ ಶ್ರೇಷ್ಠರೂ ಆದ ಅವರು ಯುದ್ಧದಲ್ಲಿ ರಥಗಳನ್ನು ಮತ್ತು ಗಜಾಶ್ವಗಳನ್ನು ಮನುಷ್ಯರಹಿತಗಳನ್ನಾಗಿ ಮಾಡಿದರು.

ತಸ್ಯ ಜ್ಯಾತಳನಿರ್ಘೋಷಂ ವಿಸೃಜ್ಯಂತಮಿವಾಶನೇಃ ।
ನಿಶಮ್ಯ ಸರ್ವಭೂತಾನಿ ಸಮಕಂಪಂತ ಭಾರತ ॥೧೫॥

ಎಲೈ ಭಾರತನೇ, ಸಿಡಿಲಿನ ಸ್ಫೋಟದಂತಿದ್ದ ಅವರ ಹೆದೆಯ ನಿರ್ಘೋಷವನ್ನು ಕೇಳಿದ ಎಲ್ಲ ಪ್ರಾಣಿಗಳೂ ನಡುಗಿ ಹೋದವು.

ಅಮೋಘಾ ಹ್ಯಪತನ್ ಬಾಣಾಃ ಪಿತುಸ್ತೇ ಭರತರ್ಷಭ ।
ನಾಸಜ್ಜಂತ ತನುತ್ರೇಷು ಭೀಷ್ಮಚಾಪಚ್ಯುತಾಃ ಶರಾಃ ॥೧೬॥

ಎಲೈ ಭರತಶ್ರೇಷ್ಠನೇ, ನಿನ್ನ ತಂದೆಯ ಬಾಣಗಳು ಗುರಿಯನ್ನು ತಪ್ಪಿ ಎಂದೂ ವ್ಯರ್ಥವಾಗಲಿಲ್ಲ. ಭೀಷ್ಮರ ಧನುಸ್ಸಿನಿಂದ ಹೊರಹೊಮ್ಮಿದ ಬಾಣಗಳು ಕವಚಗಳಲ್ಲಿಯೇ ನಿಲ್ಲಲಿಲ್ಲ (ಕವಚವನ್ನು ಭೇದಿಸಿ ಶರೀರಗಳಲ್ಲಿ ಇಳಿದವು).

ಹತವೀರಾನ್ ರಥಾನ್ ರಾಜನ್ ಸಂಯುಕ್ತಾನ್ ಜವನೈರ್ಹಯೈಃ ।
ಅಪಶ್ಯಾಮ ಮಹಾರಾಜ ಹ್ರಿಯಮಾಣಾನ್ ರಣಾಜಿರೇ ॥೧೭॥

ಎಲೈ ಮಹಾರಾಜನೇ, ರಣರಂಗದಲ್ಲಿ ವೀರರನ್ನು ಕಳೆದುಕೊಂಡು ವೇಗಶಾಲಿಗಳಾದ ಅಶ್ವಗಳಿಂದ ಎಳೆಯಲ್ಪಡುವ ಬರಿಯ ರಥಗಳನ್ನು ನೋಡಿದೆವು.

ಚೇದಿಕಾಶಿಕರೂಷಾಣಾಂ ಸಹಸ್ರಾಣಿ ಚತುರ್ದಶ ।
ಮಹಾರಥಾಃ ಸಮಾಖ್ಯಾತಾಃ ಕುಲಪುತ್ರಾಸ್ತನುತ್ಯಜಃ ।
ಅಪರಾವರ್ತಿನಃ ಸರ್ವೇ ಸುವರ್ಣವಿಕೃತಧ್ವಜಾಃ ॥೧೮॥

ಸಂಗ್ರಾಮೇ ಭೀಷ್ಮಮಾಸಾದ್ಯ ವ್ಯಾದಿತಾಸ್ಯಮಿವಾಂತಕಮ್ ।
ನಿಮಗ್ನಾಃ ಪರಲೋಕಾಯ ಸವಾಜಿರಥಕುಂಜರಾಃ ॥೧೯॥

ಸುವರ್ಣಾಲಂಕೃತ ಧ್ವಜವುಳ್ಳವರೂ, ಯುದ್ಧದಲ್ಲಿ ಹಿಮ್ಮೆಟ್ಟದವರೂ, ಪ್ರಾಣ-ತ್ಯಾಗವನ್ನು ಮಾಡಲು ಸಿದ್ಧರಾದವರೂ, ಕುಲಪುತ್ರರೂ ಆದ ಚೇದಿ-ಕಾಶಿ- ಕರೂಷರ

ಹದಿನಾಲ್ಕು ಸಾವಿರ ಮಹಾರಥರು ಸಂಗ್ರಾಮದಲ್ಲಿ ಬಾಯಿತೆರೆದ ಮೃತ್ಯುವಿನಂತಿದ್ದ ಭೀಷ್ಮರನ್ನು ಸಮೀಪಿಸಿ ತಮ್ಮ ರಥಾಶ್ವಗಜಗಳೊಡನೆ ಪರಲೋಕಕ್ಕೆ ಹೋಗಿ ನೆಲೆಸಿದರು.

ಭಗ್ನಾಕ್ಷೋಪಸ್ಕರಾನ್ ಕಾಂಶ್ಚಿದ್ ಭಗ್ನಚಕ್ರಾಂಶ್ಚ ಸರ್ವಶಃ ।
ಅಪಶ್ಯಾಮ ರಥಾನ್ ರಾಜನ್ ಶತಶೋಽಥ ಸಹಸ್ರಶಃ ॥೨೦॥

ಎಲೈ ರಾಜನೇ, ಅಕ್ಷ ಮತ್ತು ಉಳಿದ ಸಾಮಗ್ರಿಗಳು ಮುರಿದ ಕೆಲವು ರಥಗಳನ್ನು, ಚಕ್ರಗಳು ಮುರಿದ ಕೆಲವು ರಥಗಳನ್ನು ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ನೋಡಿದೆವು.

ಸವರೂಥೈ ರಥೈರ್ಭಗ್ನೈ ರಥಿಭಿಶ್ಚ ನಿಪಾತಿತೈಃ ।
ಶರೈಃ ಸುಕವಚೈಶ್ಛಿನ್ನೈಃ ಪಟ್ಟಿಶೈಶ್ಚ ವಿಶಾಂಪತೇ ॥೨೧॥

ಗದಾಭಿರ್ಮುಸಲೈಶ್ಚೈವ ನಿಸ್ತ್ರಿಂಶೈಶ್ಚ ಶಿಲೀಮುಖೈಃ ।
ಅನುಕರ್ಷೈರುಪಾಸಂಗೈಶ್ಚಕ್ರೈರ್ಭಗ್ನೈಶ್ಚ ಮಾರಿಷ ॥೨೨॥

ಬಾಹುಭಿಃ ಕಾರ್ಮುಕೈಃ ಖಡ್ಗೈಃ ಶಿರೋಭಿಶ್ಚ ಸಕುಂಡಲೈಃ ।
ತಳತ್ರೈರಂಗುಲಿತ್ರೈಶ್ಚ ಧ್ವಜೈಶ್ಚ ವಿನಿಪಾತಿತೈಃ ।
ಚಾಪೈಶ್ಚ ಬಹುಧಾ ಭಿನ್ನೈಃ ಸಮಾಸ್ತೀರ್ಯತ ಮೇದಿನೀ ॥೨೩॥

ಎಲೈ ಶ್ರೇಷ್ಠನೇ, ರಕ್ಷೆಗಳಿಂದ ಕೂಡಿದ ಭಗ್ನವಾದ ರಥಗಳಿಂದಲೂ, ಬಾಣಗಳಿಂದಲೂ ಪಟ್ಟಿಶಗಳಿಂದಲೂ ಭಿನ್ನವಾದ ಕವಚಗಳುಳ್ಳ ಭೂಮಿಯ ಮೇಲೆ ಬಿದ್ದ ರಥಿಕರಿಂದಲೂ, ನೆಲದ ಮೇಲೆ ಬಿದ್ದ ಗಜಗಳು, ಒನಕೆಗಳು, ಖಡ್ಗಗಳು, ಬಾಣಗಳು, ಬತ್ತಳಿಕೆಗಳು, ಭಗ್ನವಾದ ಚಕ್ರಗಳು, ಕತ್ತರಿಸಲ್ಪಟ್ಟ ಬಾಹುಗಳು, ಬಿಲ್ಲುಗಳು, ಕುಂಡಲಸಹಿತವಾದ ಶಿರಸ್ಸುಗಳು, ಹಸ್ತರಕ್ಷೆಗಳು, ಅಂಗುಲಿ ರಕ್ಷಗಳು, ಕೆಳಗೆ ಬಿದ್ದ ಧ್ವಜಗಳು, ಕತ್ತರಿಸಲ್ಪಟ್ಟ ಚಾಕುಗಳು- ಇವುಗಳಿಂದಲೂ ಭೂಮಿಯು ಹರಡಿ ತುಂಬಿಹೋಯಿತು.

ಹತಾರೋಹಾ ಗಜಾ ರಾಜನ್ ಹಯಾಶ್ಚ ಹತಸಾದಿನಃ ।
ಪರಿಪೇತುರ್ದ್ರುತಂ ತತ್ರ ಶತಶೋಽಥ ಸಹಸ್ರಶಃ ॥೨೪॥

ಎಲೈ ರಾಜನೇ, ಗಜಗಳು ಗಜಾರೋಹಿಗಳನ್ನು ಕಳೆದುಕೊಂಡು, ಅಶ್ವಗಳು ಅಶ್ವಾರೋಹಿಗಳನ್ನು ಕಳೆದುಕೊಂಡು ನೂರರ, ಸಾವಿರದ ಸಂಖ್ಯೆಯಲ್ಲಿ ಶೀಘ್ರವಾಗಿ ಬಿದ್ದವು.

ಯತಮಾನಾಶ್ಚ ತೇ ವೀರಾ ದ್ರವಮಾಣಾನ್ ಮಹಾರಥಾನ್ ।
ನಾಶಕ್ನುವನ್ ವಾರಯಿತುಂ ಭೀಷ್ಮಬಾಣಪ್ರಪೀಡಿತಾನ್ ॥೨೫॥

ವೀರರಾದ ಪಾಂಡವ ಯೋಧರು ಪ್ರಯತ್ನಪಟ್ಟರೂ ಭೀಷ್ಮರ ಬಾಣಗಳಿಂದ ಪೀಡಿತರಾಗಿ ಓಡಿಹೋಗುತ್ತಿದ್ದ ಮಹಾರಥರನ್ನು ನಿಲ್ಲಿಸಲು ಸಾಧ್ಯವಾಗಲಿಲ್ಲ.

ಮಹೇಂದ್ರಸಮವೀರ್ಯೇಣ ವಧ್ಯಮಾನಾ ಮಹಾಚಮೂಃ ।
ಅಭವತ್ಕ ಮಹಾರಾಜ ನ ಚ ದ್ವೌ ಸಹ ಧಾವತಃ ॥೨೬॥

ಎಲೈ ಮಹಾರಾಜನೇ, ಇಂದ್ರನಿಗೆ ಸಮಾನವಾದ ಸಾಮರ್ಥ್ಯವುಳ್ಳ ಭೀಷ್ಮರಿಂದ ಪ್ರಹಾರಕ್ಕೆ ಒಳಗಾದ ಆ ದೊಡ್ಡ ಸೈನ್ಯವು ಭಗ್ನವಾಯಿತು. ಯಾರಿಬ್ಬರೂ ಜೊತೆಯಲ್ಲಿ ಓಡುತ್ತಿರಲಿಲ್ಲ.

ಆವಿದ್ಧರಥನಾಗಾಶ್ವಂ ಪತಿತಧ್ವಜಕೂಬರಮ್ ।
ಅನೀಕಂ ಪಾಂಡುಪುತ್ರಾಣಾಂ ಹಾಹಾಭೂತಮಚೇತನಮ್ ॥೨೭॥

ಚೆನ್ನಾಗಿ ಪೆಟ್ಟುತಿಂದ ರಥಗಜಾಶ್ವಗಳು, ಕೆಳಗೆ ಬಿದ್ದ ಧ್ವಜಕೂಬರಗಳುಳ್ಳ ರಥಗಳು ಇವುಗಳಿಂದ ಪಾಂಡುಪುತ್ರರ ಸೈನ್ಯವು ಕರ್ತವ್ಯಪ್ರಜ್ಞೆಯನ್ನು ಕಳೆದುಕೊಂಡು ಹಾಹಾಕಾರವನ್ನು ಮಾಡಿತು.

ಜಘಾನಾತ್ರ ಪಿತಾ ಪುತ್ರಂ ಪುತ್ರಶ್ಚ ಪಿತರಂ ತಥಾ ।
ಪ್ರಿಯಂ ಸಖಾಯಂ ಚಾಕ್ರಂದೇ ಸಖಾ ದೈವಬಲಾತ್ಕೃತಃ ॥೨೮॥

ಅಂತಹ ತೀವ್ರವಾದ ಯುದ್ಧದಲ್ಲಿ ವಿಧಿಗೆ ವಶರಾಗಿ ತಂದೆಯು ಮಗನನ್ನೂ, ಮಗನು ತಂದೆಯನ್ನೂ, ಮಿತ್ರನು ಮಿತ್ರನನ್ನೂ ಕೊಂದರು.

ಏಮುಚ್ಯ ಕವಚಾನನ್ಯೇ ಪಾಂಡುಪುತ್ರಸ್ಯ ಸೈನಿಕಾಃ ।
ಪ್ರಕೀರ್ಯ ಕೇಶಾನ್ ಧಾವಂತಃ ಪ್ರತ್ಯದೃಶ್ಯಂತ ಭಾರತ ॥೨೯॥

ಎಲೈ ಭಾರತನೇ, ಇನ್ನು ಕೆಲವು ಪಾಂಡವರ ಸೈನಿಕರು ಕವಚಗಳನ್ನು ಬಿಚ್ಚಿ ತದೆಗೂದಲುಗಳನ್ನು ಕೆದರಿಕೊಂಡು ಓಡುತ್ತಿರುವುದು ಕಂಡುಬಂದಿತು.

ತದ್ಗೋಕುಲಮಿವೋದ್ಭ್ರಾಂತಮುದ್ಭ್ರಾಂತರಥಕುಂಜರಮ್ ।
ದದೃಶೇ ಪಾಂಡುಪುತ್ರಸ್ಯ ಸೈನ್ಯಮಾರ್ತಸ್ವರಂ ತದಾ ॥೩೦॥

ಗಾಬರಿಗೊಂಡ ರಥ-ಗಜಗಳಿಂದ ಕೂಡಿದ ಪಾಂಡುಪುತ್ರರ ಸೈನ್ಯವು ಗಾಬರಿಗೊಂಡ ಗೋಸಮೂಹದಂತೆ ಆರ್ತಸ್ವರದಿಂದ ಕೂಡಿದುದು ಆಗ ಕಂಡುಬಂದಿತು.

ಪ್ರಭಜ್ಯಮಾನಂ ಸೈನ್ಯಂ ತು ದೃಷ್ಟ್ವಾ ಯಾದವನಂದನಃ ।
ಉವಾಚ ಪಾರ್ಥಂ ಬೀಭತ್ಸುಂ ನಿಗೃಹ್ಯ ರಥಮುತ್ತಮಮ್ ॥೩೧॥

ತಮ್ಮ ಸೈನ್ಯವು ಭಗ್ನಗೊಳ್ಳುತ್ತಿರುವುದನ್ನು ನೋಡಿದ ಯಾದವ ನಂದನನಾದ ಕೃಷ್ಣನು ತನ್ನ ಶ್ರೇಷ್ಠವಾದ ರಥವನ್ನು ನಿಲ್ಲಿಸಿ ಅರ್ಜುನನನ್ನು ಕುರಿತು ಹೇಳಿದನು.

ಅಯಂ ಸ ಕಾಲಃ ಸಂಪ್ರಾಪ್ತಃ ಪಾರ್ಥ ಯಃ ಕಾಂಕ್ಷಿತಸ್ತವ ।
ಪ್ರಹರಾಸ್ಮೈ ನರವ್ಯಾಘ್ರ ನ ಚೇನ್ಮೋಹಾತ್ ಪ್ರಮುಹ್ಯಸೇ ॥೩೨॥

ಎಲೈ ಪಾರ್ಥನೇ, ನೀನು ಬಹಳ ಸಮಯದಿಂದ ಬಯಸಿದ ಆ ಕಾಲವು ಈಗ ಪ್ರಾಪ್ತವಾಗಿದೆ. ನರವ್ಯಾಘ್ರನೇ, ನೀನು ಮೋಹಕ್ಕೆ ಒಳಗಾಗದಿದ್ದರೆ ಭೀಷ್ಮರ ಮೇಲೆ ಪ್ರಹಾರವನ್ನು ಮಾಡು.

ಯತ್ ಪುರಾ ಕಥಿತಂ ವೀರ ತ್ವಯಾ ರಾಜ್ಞಾಂ ಸಮಾಗಮೇ ।
ವಿರಾಟನಗರೇ ಪಾರ್ಥ ಸಂಜಯಸ್ಯ ಸಮೀಪತಃ ॥೩೩॥

ಭೀಷ್ಮದ್ರೋಣಮುಖಾನ್ ಸರ್ವಾನ್ ಧಾರ್ತರಾಷ್ಟ್ರಸ್ಯ ಸೈನಿಕಾನ್ ।
ಸಾನುಬಂಧಾನ್ ಹನಿಷ್ಯಾಮಿ ಯೇ ಮಾಂ ಯೋತ್ಸ್ಯಂತಿ ಸಂಯುಗೇ ॥

ಇತಿ ತತ್ಕುರು ಕೌಂತೇಯ ಸತ್ಯಂ ವಾಕ್ಯಮರಿಂದಮ ।
ಕ್ಷತ್ರಧರ್ಮಮನುಸ್ಮೃತ್ಯ ಯುಧ್ಯಸ್ವ ಭರತರ್ಷಭ ॥೩೪॥

ಎಲೈ ವೀರನೇ, ಅರ್ಜುನನೇ, ನೀನು ಹಿಂದೆ ವಿರಾಟನಗರದಲ್ಲಿ ರಾಜರುಗಳ ಸಮಾಗಮವುಂಟಾದಾಗ ಸಂಜಯನ ಎದುರಿನಲ್ಲಿ, ನನ್ನ ಜೊತೆಯಲ್ಲಿ ಯುದ್ಧವನ್ನು ಮಾಡುವ ಭೀಷ್ಮ-ದ್ರೋಣರೇ ಮೊದಲಾದ ದುರ್ಯೋಧನನ ಎಲ್ಲಾ ಸೈನಿಕರನ್ನು ಅವರ ಪರಿವಾರದ ಜೊತೆಯಲ್ಲಿ ಕೊಲ್ಲುವೆನು ಎಂದು ಏನು ಪ್ರತಿಜ್ಞೆಯನ್ನು ಮಾಡಿದ್ದೆಯೋ, ಎಲೈ ಕೌಂತೇಯನೇ, ಅರಿಂದಮನೇ, ಆ ವಾಕ್ಯವನ್ನು ಸತ್ಯವನ್ನಾಗಿ ಮಾಡು. ಎಲೈ ಭರತಶ್ರೇಷ್ಠನೇ, ಕ್ಷತ್ರಿಯ ಧರ್ಮವನ್ನು ಅನುಸರಿಸಿ ಯುದ್ಧವನ್ನು ಮಾಡು.

ಇತ್ಯುಕ್ತೋ ವಾಸುದೇವೇನ ತಿರ್ಯಗ್‌ದೃಷ್ಟಿರಧೋಮುಖಃ ।
ಅಕಾಮ ಇವ ಬೀಭತ್ಸುರಿದಂ ವಚನಮಬ್ರವೀತ್ ॥೩೬॥

ಹೀಗೆ ಕೃಷ್ಣನಿಂದ ಹೇಳಲ್ಪಟ್ಟ ಅರ್ಜುನನು ಮುಖವನ್ನು ಕೆಳಗೆ ಮಾಡಿ ದೃಷ್ಟಿಯನ್ನು ತಿರುಗಿಸಿ ಮನಸ್ಸಿಲ್ಲದವನಂತೆ ಮಾತನಾಡಿದನು.

ಅವಧ್ಯಾನಾಂ ವಧಂ ಕೃತ್ವಾ ರಾಜ್ಯಂ ವಾ ನರಕೋತ್ತರಮ್ ।
ದುಃಖಾನಿ ವನವಾಸೇ ವಾ ಕಿಂ ನು ಮೇ ಸುಕೃತಂ ಭವೇತ್ ॥೩೭॥

ಕೊಲ್ಲಬಾರದವರನ್ನು ಕೊಂದು ನರಕವೇ ಮುಂದಿರುವ ರಾಜ್ಯವಾಗಲೀ ಅಥವಾ ವನವಾಸ ದುಃಖವಾಗಲೀ ಇವುಗಳಲ್ಲಿ ಯಾವುದು ಒಳ್ಳೆಯದು ಎಂದು ನನಗೆ ತಿಳಿಯುವುದಿಲ್ಲ.

ಚೋದಯಾಶ್ವಾನ್ ಯತೋ ಭೀಷ್ಮಃ ಕರಿಷ್ಯೇ ವಚನಂ ತವ ।
ಪಾತಯಿಷ್ಯಾಮಿ ದುರ್ಧರ್ಷಂ ವೃದ್ಧಂ ಕುರುಪಿತಾಮಹಮ್ ॥೩೮॥

ನನ್ನ ಅಶ್ವಗಳನ್ನು ಭೀಷ್ಮರಿದ್ದ ಕಡೆಗೆ ಹೊಡೆಯುವವನಾಗು. ನಿನ್ನ ಮಾತನ್ನು ನಾನು ನಡೆಸುವೆನು. ಸೋಲಿಸಲು ಅಸಾಧ್ಯರೂ, ವೃದ್ಧರೂ, ಕುರುಪಿತಾಮಹರೂ ಆದ ಭೀಷ್ಮರನ್ನು ನಾನು ಉರುಳಿಸುವೆನು (ಎಂದು ಹೇಳಿದನು).

ತತೋSಶ್ವಾನ್ ರಜತಪ್ರಖ್ಯಾನ್ ಚೋದಯಾಮಾಸ ಮಾಧವಃ ।
ಯತೋ ಭೀಷ್ಮಸ್ತತೋ ರಾಜನ್ ದುಷ್ಪ್ರೇಕ್ಷ್ಯೋ ರಶ್ಮಿಮಾನಿವ ॥೩೯॥

ಎಲೈ ರಾಜನೇ, ಕೃಷ್ಣನು ಬೆಳ್ಳಿಯ ಬಣ್ಣದ ಕುದುರೆಗಳನ್ನು ಹೊಂದಿದ ಅರ್ಜುನನ ರಥವನ್ನು ತಮ್ಮ ತೇಜಸ್ಸಿನಿಂದ ಸೂರ್ಯನಂತೆ ನೋಡಲು ಅಸಾಧ್ಯನಾದ ಭೀಷ್ಮರಿದ್ದ ಕಡೆಗೆ ಪ್ರಚೋದಿಸಿದನು.

ತತಸ್ತತ್ಪುನರಾವೃತ್ತಂ ಯುಧಿಷ್ಠಿರಬಲಂ ಮಹತ್ ।
ದೃಷ್ಟ್ವಾ ಪಾರ್ಥಂ ಮಹಾಬಾಹುಂ ಭೀಷ್ಮಾಯೋದ್ಯಂತಮಾಹವೇ ॥೪೦॥

ಮಹಾಬಾಹುವಾದ ಅರ್ಜುನನು ಯುದ್ಧದಲ್ಲಿ ಭೀಷ್ಮರ ಕಡೆಗೆ ಹೋಗುತ್ತಿರುವುದನ್ನು ನೋಡಿ ಧರ್ಮರಾಜನ ಆ ದೊಡ್ಡ ಸೈನ್ಯವು ಆಗ ಹಿಂದಿರುಗಿತು.

ತತೋ ಭೀಷ್ಮಃ ಕುರುಶ್ರೇಷ್ಠಃ ಸಿಂಹವದ್ ವಿನದನ್ ಮುಹುಃ ।
ಧನಂಜಯರಥಂ ಶೀಘ್ರಂ ಶರವರ್ಷೈರವಾಕಿರತ್ ॥೪೧॥

ಆಗ ಕುರುಶ್ರೇಷ್ಠರಾದ ಭೀಷ್ಮರು ಪುನಃ ಪುನಃ ಸಿಂಹನಾದವನ್ನು ಮಾಡುತ್ತಾ ಅರ್ಜುನನ ರಥದ ಮೇಲೆ ಶೀಘ್ರವಾಗಿ ಬಾಣಗಳ ಮಳೆಯನ್ನು ಕರೆದರು.

ಕ್ಷಣೇನ ಸ ರಥಸ್ತಸ್ಯ ಸಹಯಃ ಸಹಸಾರಥಿಃ ।
ಶರವರ್ಷೇಣ ಮಹತಾ ನ ಪ್ರಾಜ್ಞಾಯತ ಕಿಂಚನ ॥೪೨॥

ಒಂದು ಕ್ಷಣದಲ್ಲಿ ಅಶ್ವ-ಸಾರಥಿಗಳಿಂದ ಕೂಡಿದ ಅರ್ಜುನನ ಆ ರಥವು ದೊಡ್ಡ ಬಾಣಗಳ ಮಳೆಗೆ ಸಿಲುಕಿ ಯಾವುದೂ ಕಾಣಲಿಲ್ಲ.

ವಾಸುದೇವಸ್ತ್ವನಂಭ್ರಾಂತೋ ಧೈರ್ಯಮಾಸ್ಥಾಯ ಸಾತ್ವತಃ ।
ಚೋದಯಾಮಾಸ ತಾನಶ್ವಾನ್ ವಿತುನ್ನಾನ್ ಭೀಷ್ಮಸಾಯಕೈಃ ॥೪೩॥

ಸಾತ್ವತನಾದ ಕೃಷ್ಣನು ಧೈರ್ಯವನ್ನು ಹೊಂದಿ, ಗಾಬರಿಗೊಳ್ಳದೆ ಭೀಷ್ಮರ ಬಾಣಗಳಿಂದ ಪೀಡಿಸಲ್ಪಟ್ಟ ಆ ಅಶ್ವಗಳನ್ನು ಪ್ರಚೋದಿಸಿದನು.

ತತಃ ಪಾರ್ಥೋ ಧನುರ್ಗೃಹ್ಯ ದಿವ್ಯಂ ಜಲದನಿಸ್ವನಮ್ ।
ಪಾತಯಾಮಾಸ ಭೀಷ್ಮಸ್ಯ ಧನುಶ್ಚಿತ್ತ್ವಾ ಶಿತೈಃ ಶರೈಃ ॥೪೪॥

ಆಗ ಅರ್ಜುನನು ಮೇಘದಂತೆ ಗರ್ಜಿಸುವ ದಿವ್ಯವಾದ ಧನುಸ್ಸನ್ನು ಹಿಡಿದು ತೀಕ್ಷ್ಣವಾದ ಬಾಣಗಳಿಂದ ಭೀಷ್ಮರ ಧನುಸ್ಸನ್ನು ಕತ್ತರಿಸಿ ಕೆಡವಿದನು.

ಸ ಚ್ಛಿನ್ನಧನ್ವಾ ಕೌರವ್ಯಃ ಪುನರನ್ಯನ್ಮಹದ್ಧನುಃ ।
ನಿಮೇಷಾಂತರಮಾತ್ರೇಣ ಸಜ್ಯಂ ಚಕ್ರೇ ಪಿತಾ ತವ ॥೪೫॥

ತಮ್ಮ ಧನುವು ಕತ್ತರಿಸಲ್ಪಡುತ್ತಿರಲು ಕೌರವ್ಯನಾದ ನಿನ್ನ ತಂದೆಯು ಇನ್ನೊಂದು ದೊಡ್ಡ ಧನುಸ್ಸನ್ನು ತೆಗೆದುಕೊಂಡು ಕಣ್ಣುಮುಚ್ಚಿ ಬಿಡುವಷ್ಟರಲ್ಲಿ ಹೆದೆ ಏರಿಸಿದರು.

ವಿಚಕರ್ಷ ತತೋ ದೋರ್ಭ್ಯಾಂ ಧನುರ್ಜಲದನಿಸ್ವನಮ್ ।
ಅಥಾಸ್ಯ ತದಪಿ ಕ್ರುದ್ಧಶ್ಚಿಚ್ಛೇದ ಧನುರರ್ಜುನಃ ॥೪೬॥

ಮೇಘಗರ್ಜನೆಯಂತೆ ಗರ್ಜಿಸುವ ತಮ್ಮ ಧನುಸ್ಸನ್ನು ಭೀಷ್ಮರು ಪುನಃ ಎಳೆದರು. ಆಗ ಅರ್ಜುನನು ಕೋಪಗೊಂಡು ಆ ಧನುಸ್ಸನ್ನೂ ಕತ್ತರಿಸಿದನು.

ತಸ್ಯ ತತ್ಕ್ರೂಜಯಾಮಾಸ ಲಾಘವಂ ಶಂತನೋಃ ಸುತಃ ।
ಸಾಧು ಪಾರ್ಥ ಮಹಾಬಾಹೋ ಸಾಧು ಕುಂತೀಸುತೇತಿ ಚ ॥೪೭॥

ಅರ್ಜುನನ ಆ ಕ್ಷಿಪ್ರಕಾರಿತ್ವವನ್ನು ನೋಡಿ ಶಂತನು ಪುತ್ರರಾದ ಭೀಷ್ಮರು ಪಾರ್ಥನೇ, ಮಹಾಬಾಹುವೇ, ಕುಂತೀಪುತ್ರನೇ, ಸಾಧು-ಸಾಧು ಎಂದು ಪ್ರಶಂಸಿಸಿದರು.

ಸಮಾಧಾಸ್ಯೈನಮಪರಂ ಪ್ರಗೃಹ್ಯ ರುಚಿರಂ ಧನುಃ ।
ಮುಮೋಚ ಸಮರೇ ಭೀಷ್ಮಃ ಶರಾನ್ ಪಾರ್ಥರಥಂ ಪ್ರತಿ ॥೪೮॥

ಅರ್ಜುನನನ್ನು ಕುರಿತು ಹೀಗೆ ಮಾತನಾಡಿ, ಇನ್ನೊಂದು ಸುಂದರವಾದ ಧನುಸ್ಸನ್ನು ತೆಗೆದುಕೊಂಡು ಅರ್ಜುನನ ರಥದ ಮೇಲೆ ಬಾಣಗಳನ್ನು ಪ್ರಯೋಗಿಸಿದರು.

ಅದರ್ಶಯದ್ ವಾಸುದೇವೋ ಹಯಯಾನೇ ಪರಂ ಬಲಮ್ ।
ಮೋಘಾನ್ ಕುರ್ವನ್ ಶರಾಂಸ್ತಸ್ಯ ಮಂಡಲಾನಿ ವಿದರ್ಶಯನ್॥೪೯॥

ಕೃಷ್ಣನು ಯುದ್ಧಕಾಲದಲ್ಲಿ ರಥವನ್ನು ಮಂಡಲಗಳಲ್ಲಿ ತಿರುಗಿಸುತ್ತಾ, ಭೀಷ್ಮರ ಬಾಣಪ್ರಯೋಗವನ್ನು ವ್ಯರ್ಥಗೊಳಿಸಿ, ಸಾರಥ್ಯದಲ್ಲಿ ತನಗಿರುವ ಪರಮ ಕೌಶಲವನ್ನು ವ್ಯಕ್ತಪಡಿಸಿದನು.

ಶುಶುಭಾತೇ ನರವ್ಯಾಘ್ರೌ ಭೀಷ್ಮಪಾರ್ಥೌ ಶರಕ್ಷತೌ ।
ಗೋವೃಷಾವಿವ ಸಂರಬ್ಧೌ ವಿಷಾಣೋಲ್ಲಿಖಿತಾಂಕಿತೌ ॥೫೦॥

ನರಶ್ರೇಷ್ಠರಾದ ಭೀಷ್ಮಾರ್ಜುನರಿಬ್ಬರೂ ಕ್ರೋಧಗೊಂಡು ತಮ್ಮ ಕೊಂಬುಗಳಿಂದ ತಿವಿದು ಗಾಯಗೊಂಡ ಎರಡು ಗೋ-ವೃಷಭಗಳಂತೆ ಬಾಣಗಳ ಪ್ರಹಾರದಿಂದ ಉಂಟಾದ ಗಾಯಗಳಿಂದ ಶೋಭಿಸಿದರು.

ವಾಸುದೇವಸ್ತು ಸಂಪ್ರೇಕ್ಷ್ಯ ಪಾರ್ಥಸ್ಯ ಮೃದುಯುದ್ಧತಾಮ್ ।
ಭೀಷ್ಮಂ ಚ ಶರವರ್ಷಾಣಿ ಸೃಜಂತಮನಿಶಂ ಯುಧಿ ॥೫೧॥

ಪ್ರತಪಂತಮಿವಾದಿತ್ಯಂ ಮಧ್ಯಮಾಸಾದ್ಯ ಸೇನಯೋಃ ।
ವರಾನ್ವರಾನ್ ವಿನಿಘ್ನಂತಂ ಪಾಂಡುಪುತ್ರಸ್ಯ ಸೈನಿಕಾನ್ ॥೫೨॥

ಯುಗಾಂತಮಿವ ಕುರ್ವಾಣಂ ಭೀಷ್ಮಂ ಯೌಧಿಷ್ಠಿರೇ ಬಲೇ ।
ನಾಮೃಷ್ಯತ ಮಹಾಬಾಹುರ್ಮಾಧವಃ ಪರವೀರಹಾ ॥೫೩॥

ಅರ್ಜುನನು ಮೃದುವಾಗಿ ಯುದ್ಧಮಾಡುವುದನ್ನೂ, ಭೀಷ್ಮರು ಸತತವಾಗಿ ಯುದ್ಧದಲ್ಲಿ ಬಾಣಗಳ ಮಳೆಯನ್ನು ಸೃಷ್ಟಿ ಮಾಡಿ, ಪಾಂಡವರ ಸೈನಿಕರಲ್ಲಿ ಶ್ರೇಷ್ಠರಾದವರನ್ನು ಆರಿಸಿ ಆರಿಸಿ ಕೊಲ್ಲುತ್ತಾ, ಎರಡು ಸೇನೆಯ ಮಧ್ಯದಲ್ಲಿ ಸೂರ್ಯನಂತೆ ಜ್ವಲಿಸಿ, ಯುಧಿಷ್ಠಿರನ ಸೈನ್ಯದಲ್ಲಿ ಯುಗಾಂತದಂತಹ ಪರಿಸ್ಥಿತಿಯನ್ನು ಉಂಟುಮಾಡುತ್ತಿದ್ದ ಭೀಷ್ಮರನ್ನೂ ನೋಡಿ ಪರವೀರಘಾತಕನೂ, ಮಹಾಬಾಹುವೂ ಆದ ಕೃಷ್ಣನು ಆದ ಅವನು ಸಹಿಸಲಿಲ್ಲ.

ಉತ್ಪ್ಲುತ್ಯ ರಜತಪ್ರಖ್ಯಾನ್ ಹಯಾನ್ ಪಾರ್ಥಸ್ಯ ಮಾರಿಷ ।
ಕ್ರುದ್ಧೋ ನಾಮ ಮಹಾಯೋಗೀ ಪ್ರಚಸ್ಕಂದ ಮಹಾರಥಾತ್ ।
ಅಭಿದುದ್ರಾವ ಭೀಷ್ಮಂ ಸ ಭುಜಪ್ರಹರಣೋ ಬಲೀ ॥೫೪॥

ಎಲೈ ಪೂಜ್ಯನೇ, ಬಲಿಷ್ಠನಾದ ಅವನು ಅರ್ಜುನನ ರಥದ ಶ್ವೇತಾಶ್ವಗಳ ಕಡಿವಾಣವನ್ನು ಎಸೆದು ಕ್ರುದ್ಧನಾಗಿ, ಮಹಾರಥದಿಂದ ಇಳಿದು ಮಹಾಯೋಗಿಯಾದ ಅವನು ಕೇವಲ ಭುಜಾಯುಧನಾಗಿ ಭೀಷ್ಮರ ಕಡೆಗೆ ಓಡಿದನು.

ಪ್ರತೋದಪಾಣಿಸ್ತೇಜಸ್ವೀ ಸಿಂಹವದ್ ವಿನದನ್ ಮುಹುಃ ।
ದಾರಯನ್ನಿವ ಪದ್ಭ್ಯಾಂ ಸ ಜಗತೀಂ ಜಗತೀಶ್ವರಃ ॥೫೫॥

ಕ್ರೋಧತಾಮ್ರೇಕ್ಷಣಃ ಕೃಷ್ಣೋ ಜಘ್ನಾಂಸುರಮಿತದ್ಯುತಿಃ ।
ಗ್ರಸನ್ನಿವ ಚ ಚೇತಾಂಸಿ ತಾವಕಾನಾಂ ಮಹಾಹವೇ ॥೫೬॥

ಅಮಿತದ್ಯುತಿಯೂ, ಜಗದೀಶ್ವರನೂ ಆದ ಕೃಷ್ಣನು ಕೈಯಲ್ಲಿ ಕೇವಲ ಚಾವಟಿಯನ್ನು ಹಿಡಿದು ಸಿಂಹದಂತೆ ಪುನಃ ಪುನಃ ಗರ್ಜಿಸುತ್ತಾ ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ ತನ್ನ ಪಾದನ್ಯಾಸಗಳಿಂದ ಭೂಮಿಯನ್ನು ಸೀಳುವವನಂತೆ, ಭೀಷ್ಮರನ್ನು ಕೊಲ್ಲಲು ಬಯಸಿದವನಂತೆ, ನಿನ್ನ ಸೈನಿಕರ ಮನಸ್ಸುಗಳನ್ನು ನುಂಗುವವನಂತೆ ಓಡಿದನು.

ದೃಷ್ಟ್ವಾ ಮಾಧವಮಾಕ್ರಂದೇ ಭೀಷ್ಮಾಯೋದ್ಯಂತಮಾಹವೇ ।
ಹತೋ ಭೀಷ್ಮೋ ಹತೋ ಭೀಷ್ಮ ಇತಿ ತತ್ರ ಸ್ಮ ಸೈನಿಕಾಃ ।
ಕ್ರೋಶಂತಃ ಪ್ರಾದ್ರವನ್ ಸರ್ವೇ ವಾಸುದೇವಭಯಾನ್ನರಾಃ ॥೫೭॥

ರಣರಂಗದಲ್ಲಿ ಭೀಷ್ಮರ ಕಡೆಗೆ ವಧೋದ್ಯುಕ್ತನಾಗಿ ಹೋಗುತ್ತಿರುವ ಕೃಷ್ಣನನ್ನು ನೋಡಿ ನಿನ್ನ ಸೈನಿಕರು ಭೀಷ್ಮರು ಮೃತರಾದರು, ಭೀಷ್ಮರು ಮೃತರಾದರು ಎಂದು ಕಿರುಚುತ್ತಾ ಕೃಷ್ಣನ ಭಯದಿಂದ ಎಲ್ಲರೂ ಓಡಿಹೋದರು.

ಪೀತಕೌಶೇಯಸಂವೀತೋ ಮಣಿಶ್ಯಾಮೋ ಜನಾರ್ದನಃ ।
ಶುಶುಭೇ ವಿದ್ರವನ್ ಭೀಷ್ಮಂ ವಿದ್ಯುನ್ಮಾಲೀ ಯಥಾಂಬುದಃ ॥೫೮॥

ಪೀತಾಂಬರವನ್ನು ಧರಿಸಿ, ಮರಕತ ಮಣಿಯ ಕಾಂತಿಯನ್ನು ಹೊಂದಿದ ಜನಾರ್ದನನು ಭೀಷ್ಮರ ಕಡೆಗೆ ಓಡುತ್ತಾ, ಮಿಂಚುಗಳ ಮಾಲೆಯನ್ನು ಧರಿಸಿದ ಮೇಘದಂತೆ ಕಂಗೊಳಿಸಿದನು.

ಸ ಸಿಂಹ ಇವ ಮಾತಂಗಂ ಯೂಥರ್ಷಭ ಇವರ್ಷಭಮ್ ।
ಅಭಿದುದ್ರಾವ ತೇಜಸ್ವೀ ವಿನದನ್ ಯಾದವರ್ಷಭಃ ॥೫೯॥

ತೇಜಸ್ವಿಯಾದ ಯಾದವ ಶ್ರೇಷ್ಠನಾದ ಅವನು ಸಿಂಹವು ಗಜದ ಕಡೆಗೆ ಓಡಿದಂತೆ ಗುಂಪಿನ ನಾಯಕನಾದ ವೃಷಭವು ಇನ್ನೊಂದು ವೃಷಭದ ಕಡೆಗೆ ಓಡಿದಂತೆ ಸಿಂಹನಾದವನ್ನು ಮಾಡುತ್ತಾ ಭೀಷ್ಮರ ಕಡೆಗೆ ಓಡಿದನು.

ತಮಾಪತಂತಂ ಸಂಪ್ರೇಕ್ಷ್ಯ ಪುಂಡರೀಕಾಕ್ಷಮಾಹವೇ ।
ಅಸಂಭ್ರಮಂ ರಣೇ ಭೀಷ್ಮೋ ವಿಚಕರ್ಷ ಮಹದ್ಧನುಃ ।
ಉವಾಚ ಚೈನಂ ಗೋವಿಂದಮಸಂಭ್ರಾಂತೇನ ಚೇತಸಾ ॥೬೦॥

ರಣರಂಗದಲ್ಲಿ ತನ್ನ ಮೇಲೆ ಎರಗಿ ಬರುತ್ತಿರುವ ಪುಂಡರೀಕಾಕ್ಷನಾದ ಕೃಷ್ಣನನ್ನು ನೋಡಿ ಏನೂ ಗಾಬರಿಗೊಳ್ಳದೆ ತಮ್ಮ ದೊಡ್ಡ ಧನುಸ್ಸನ್ನು ಎಳೆದು ಸಮಾಧಾನಚಿತ್ತದಿಂದ ಈ ಗೋವಿಂದನನ್ನು ಕುರಿತು ಮಾತನಾಡಿದರು.

ಏಹ್ಯೇಹಿ ಪುಂಡರೀಕಾಕ್ಷ ದೇವದೇವ ನಮೋಽಸ್ತು ತೇ ।
ಮಾಮದ್ಯ ಸಾತ್ವತಶ್ರೇಷ್ಠ ಪಾತಯಸ್ವ ಮಹಾಹವೇ ॥೬೧॥

ಪುಂಡರೀಕಾಕ್ಷನೇ ಬಾ, ಬಾ. ದೇವದೇವನೇ, ನಿನಗೆ ನಮಸ್ಕಾರಗಳು. ಸಾತ್ವತ ಶ್ರೇಷ್ಠನೇ, ಈ ದಿನ ಯುದ್ಧದಲ್ಲಿ ನನ್ನನ್ನು ಕೆಡವುವವನಾಗು.

ತ್ವಯಾ ಹಿ ದೇವ ಸಂಗ್ರಾಮೇ ಹತಸ್ಯಾಪಿ ಮಮಾನಘ ।
ಶ್ರೇಯ ಏವ ಪರಂ ಕೃಷ್ಣ ಲೋಕೇಽಮುಷ್ಮಿನ್ನಿಹೈವ ಚ ॥೬೨॥

ಎಲೈ ದೇವನೇ, ನಿರ್ದೋಷನೇ, ಕೃಷ್ಣನೇ, ಯುದ್ಧದಲ್ಲಿ ನಿನ್ನಿಂದ ಹತನಾದರೂ ನನಗೆ ಪರಲೋಕದಲ್ಲಿ ಶ್ರೇಷ್ಠವಾದ ಶ್ರೇಯಸ್ಸೂ ಮತ್ತು ಈ ಲೋಕದಲ್ಲಿ ಶ್ರೇಷ್ಠವಾದ ಕೀರ್ತಿಯೂ ಉಂಟಾಗುವುದು.

ಪ್ರಹರಸ್ವ ಯಥೇಷ್ಟಂ ವೈ ದಾಸೋಽಸ್ಮಿ ತವ ಚಾನಘ ।
ಸಂಭಾವಿತೋಽಸ್ಮಿ ಗೋವಿಂದ ತ್ರೈಲೋಕ್ಯೇನಾದ್ಯ ಸಂಯುಗೇ ॥೬೩॥

ಎಲೈ ನಿರ್ದೋಷನೇ, ನಿನ್ನ ಮನಸ್ಸಿಗೆ ಬಂದಂತೆ ದಾಸನಾದ ನನ್ನ ಮೇಲೆ ಪ್ರಹಾರವನ್ನು ಮಾಡು. ಗೋವಿಂದನೇ, ಈ ದಿನ ಯುದ್ಧದಲ್ಲಿ ನಾನು ಮೂರು ಲೋಕಗಳಿಂದಲೂ ಗೌರವಿಸಲ್ಪಟ್ಟಿದ್ದೇನೆ (ಎಂದು ಹೇಳಿದರು).

ಅನ್ವಗೇವ ತತಃ ಪಾರ್ಥಸ್ತಮನುದ್ಯತ್ಯ ಕೇಶವಮ್ ।
ನಿಜಗ್ರಾಹ ಮಹಾಬಾಹುರ್ಬಾಹುಭ್ಯಾಂ ಪರಿಗೃಹ್ಯ ವೈ ॥೬೪॥

ಮಹಾಬಾಹುವಾದ ಅರ್ಜುನನಾದರೋ ಕೃಷ್ಣನ ಹಿಂದೆಯೇ ಓಡಿಬಂದು ಅವನ ಬಾಹುಗಳನ್ನು ಹಿಡಿದು ನಿಲ್ಲಿಸಿದನು.

ನಿಗೃಹ್ಯಮಾಣಃ ಪಾರ್ಥೇನ ಕೃಷ್ಣೋ ರಾಜೀವಲೋಚನಃ ।
ಜಗಾಮ ಚೈನಮಾದಾಯ ವೇಗೇನ ಪುರುಷೋತ್ತಮಃ ॥೬೫॥

ಪಾರ್ಥನಿಂದ ಹಿಡಿಯಲ್ಪಟ್ಟ ರಾಜೀವಲೋಚನನೂ, ಪುರುಷೋತ್ತಮನೂ ಆದ ಕೃಷ್ಣನು ತನ್ನ ವೇಗದಿಂದ ಅವನನ್ನೂ ಎಳೆದುಕೊಂಡು ಸಾಗಿದನು.

ಪಾರ್ಥಸ್ತು ವಿಷ್ಣುಂ ಬಲಾಚ್ಚರಣೌ ಪರವೀರಹಾ ।
ನಿಜಗ್ರಾಹ ಹೃಷೀಕೇಶಂ ಕಥಂಚಿದ್ ದಶಮೇ ಪದೇ ॥೬೬॥

ಪರವೀರಘಾತಕನಾದ ಅರ್ಜುನನಾದರೋ ತನ್ನ ಎಲ್ಲಾ ಸಾಮರ್ಥ್ಯದಿಂದ ಕಾಲುಗಳನ್ನು ಗಟ್ಟಿಯಾಗಿ ಊರಿ ಹತ್ತನೆಯ ಹೆಜ್ಜೆಯಲ್ಲಿ ಪ್ರಯಾಸದಿಂದ ಕೃಷ್ಣನನ್ನು ನಿಲ್ಲಿಸಿದನು.

ತತ ವಿನಮುವಾಚಾರ್ತಃ ಕ್ರೋಧಪರ್ಯಾಕುಲೇಕ್ಷಣಮ್ ।
ನಿಶ್ವಸಂತಂ ಯಥಾ ನಾಗಮರ್ಜುನಃ ಪರವೀರಹಾ ॥೬೭॥

ಅನಂತರ ಪರವೀರಘಾತಕನಾದ ಅರ್ಜುನನು ಆರ್ತನಾಗಿ, ಕ್ರೋಧದಿಂದ ಕದಡಿದ ಕಣ್ಣುಳ್ಳ ಮತ್ತು ಸರ್ಪದಂತೆ ನಿಶ್ವಾಸವನ್ನು ಬಿಡುತ್ತಿದ್ದ ಕೃಷ್ಣನನ್ನು ಕುರಿತು ಮಾತನಾಡಿದನು.

ನಿವರ್ತಸ್ವ ಮಹಾಬಾಹೋ ನಾನೃತಂ ಕರ್ತುಮರ್ಹಸಿ ।
ಯತ್ ತ್ವಯಾ ಕಥಿತಂ ಪೂರ್ವಂ ನ ಯೋತ್ಸ್ಯೇಮೀತಿ ಕೇಶವ ॥೬೮॥

ಎಲೈ ಮಹಾಬಾಹುವೇ, ಹಿಂದಿರುಗು. ಎಲೈ ಕೇಶವನೇ, ನಾನು ಯುದ್ಧವನ್ನು ಮಾಡುವುದಿಲ್ಲ ಎಂದು ಹಿಂದೆ ಏನು ನುಡಿದಿದ್ದೆಯೋ ಅದನ್ನು ಸತ್ಯವನ್ನಾಗಿ ಮಾಡು.

ಮಿಥ್ಯಾವಾದೀತಿ ಲೋಕಸ್ತ್ವಾಂ ಕಥಯಿಷ್ಯತಿ ಮಾಧವ ।
ಮಯೈಷ ಭಾರಃ ಸುಮಹಾನ್ ಹಿ ಹನಿಷ್ಯಾಮಿ ಯಥಾವ್ರತಮ್ ॥೬೯॥

ಎಲೈ ಮಾಧವನೇ, ಇಲ್ಲಿದ್ದರೆ ಜನರು ನಿನ್ನನ್ನು ಮಿಥ್ಯಾವಚನನೆಂದು ಹೇಳುವರು. ಈ ಯುದ್ಧದಲ್ಲಿ ಎಲ್ಲ ಭಾರವೂ ನನ್ನ ಮೇಲೆಯೇ ಇದೆ. ಭೀಷ್ಮರನ್ನು ಕೊಲ್ಲುವೆನು.

ತಸ್ಮಾನ್ ಮಾಧವ ಸುಖೇನ ಸ್ಥೀಯತಾಂ ಸುಖಮೇವ ಚ ।
ಅಂತಂ ಯಥಾ ಗಮಿಷ್ಯಾಮಿ ಕುರೂಣಾಂ ಕಲ್ಮಷಸ್ಯ ಚ ॥೭೦॥

ಎಳ್ಳ ಮಾಧವನೇ, ಕಬ್ಬುಹಿಲಿಯನೇ, ಜಾಣ ಮಲ್ಲ ಶ್ರೀಪತಿ ಮೋಲ, ಚಿಕ್ಕದ ಮೇಲೆ ಮತ್ತು ಸನ್ನ ಪ್ರಾಣದ ಮೇಲೆ ಆಸೆಯನ್ನು ಮಾಡಿ ಹೋಗುತ್ತಿದ್ದಳೆ. ಜಾಣ ಕಬ್ಬುಗಳ ವಿಚಾರವನ್ನು ಮಾಡುವನು.

ಅಧ್ಯಪ ಚಿಕ್ಕ ಮಧುರಾಣಿ ಚಿಕ್ಕಮಾಡಿ ಮಾಡಿಸುವಾ ।
ಖಾದಾಚಿಮಿಯಾಪ್ತಾಣಾಗಾಂಡಿಯಾರೆ ಮಾಡ್ಡುವಾ ೩೭೦೫

ಈ ದಿನವೇ ಅಂಕ್ಷಣಾಂದಲ್ಲಿ ಚಂದ್ರಮಂತ ಬಿಳಿಯನ್ನು ಪೂರ್ಣವಾದ, ಮಹಾತ್ಮರಾದ, ಸೋರಿಸಲು ಶಕ್ತವಾದ್ದರಾದ ಧಗಣನು ದೃಢವ ಇಚ್ಛೆಗ ಅನುಗುಣವಾಗಿ ದೀಪವನ್ನು ನೋಡು (ಎಂದು ಹೇಳಿದನು).

ಮಾಧವನ್ನ ದೂರ ಶ್ರೀಪ್ಪ ಶಿಲ್ಪಾಪ್ಪ ಮಾಡಿಪ್ಪಾ ।
ಆಧವಾ ಪರಮಪ್ಪಿಗೇ ಪ್ಪಾಪ್ಪಾ ಪಾಪ್ಪಾಗ್ಳ ವಿಚಾರವಾ ।
ಸಂಬಂಧಿಪ್ಪಾ ಪ್ಪಿಪ್ಪಾಗ್ಳ ಆಧಾರೀಂಗ ರಥಂ ಶ್ರೀಪ ೩೭೦೬

ಮಹಾತ್ಮರಾದ ಆಚಾರ್ಯರ ಮಹಿಮೆಯನ್ನು ಕೇಳ ಮಾಧವನು ಆಚಾರ್ಯರ ದರ್ಶನವನ್ನು ಪಡೆದು ಬಹಳ ಸಂತೋಷಗೊಂಡನು. ಎಷ ಮಾಡಿದರೂ ಪ್ರಿಯಾಧರಿಂದರಲೇ ಒಂದಿಲ್ಲ ಒಂದು ಶ್ರೀಪ ರಥವನ್ನು ಬಂದನು

ಜೀ ರಥಕ್ಕೆ ಪಡ್ಡಾಗ್ಳಿಕ್ಕೆ ಧಗಣ್ಣ ಪಾಂಡವರ ಶ್ರೀಪ ।
ಪಾಂಡವ ಪರಮಪ್ಪಿಗಾಗ ಮೋಹೀಂ ಶ್ರೀಪ್ಪ ಪಡ್ಡಾಪ್ಪಿಗೆ ೩೭೦೭

ಆ ಇಬ್ಬರು ಸಹೋದರರು ರಥವನ್ನು ಏರಿದ ಮೇಲೆ ಅವರು ಶ್ರೀಪ್ರವಾದ ಧಗಣನು ಎರಡು ಪರ್ವತಗಳ ಮೇಲೆ ಮೇಘವು ಮಳೆಯನ್ನು ಸುರಿಸುವಂತೆ ಬಾಣಗಳ ಮಳೆಯನ್ನು ಸುರಿಸಿದರು

ಪ್ರಾಣಾಂತ್ಯಾಪ್ತ ಪೋಧಾಣಾಂ ಪೂರ ದೇವಪ್ಪಿಪ್ಪಾ ।
ಗಾಪ್ಪಾರಿಪಾಪಿಪ್ಪಿಗೇಣಾಂ ಪಿಪಾಪ್ಪಿಯೇ ೩೭೦೮

ಪಿಂಡವರು ಅಂಕ್ಷಣಾಪ್ಪಿಗಳು ಸೂರ್ಯನು ಚಿಕ್ಕ ಕಿರಣಗಳಿಂದ ಜಗತ್ತಿನ ಕೀರ್ತಿಯನ್ನು ಪರಿಪಾಲಿಸುವಂತೆ ದೇವತೆಗಳಿಂದ ನಿಷ್ಕ ಪೂಜಿಸಲ್ಪಟ್ಟ ಧಗಣನ ಪ್ರಾಣಗಳನ್ನು ರಕ್ಷಿಸಿದರು.

ಯಥಾ ಕುರೂಣಾಂ ಸೈನ್ಯಾನಿ ಬಭಂಜ ಯುಧಿ ಪಾಂಡವಃ ।
ತಥಾ ಪಾಂಡವಸೈನ್ಯಾನಿ ಬಭಂಜ ಯುಧಿ ತೇ ಪಿತಾ ॥೭೫॥

ಹೇಗೆ ಅರ್ಜುನನು ಕೌರವ ಸೈನ್ಯಗಳನ್ನು ಮುರಿದನೋ, ಹಾಗೆಯೇ ಯುದ್ಧದಲ್ಲಿ ನಿನ್ನ ತಂದೆಯು ಪಾಂಡವರ ಸೈನ್ಯಗಳನ್ನು ಭಗ್ನಗೊಳಿಸಿದನು.

ಹತವಿದ್ರುತಸೈನ್ಯಾಸ್ತು ನಿರುತ್ಸಾಹಾ ವಿಚೇತಸಃ ।
ನಿರೀಕ್ಷಿತುಂ ನ ಶೇಕುಸ್ತೇ ಭೀಷ್ಮಮಪ್ರತಿಮಂ ರಣೇ ।
ಮಧ್ಯಂಗತಮಿವಾದಿತ್ಯಂ ಪ್ರತಪಂತಂ ಸ್ವತೇಜಸಾ ॥೭೬॥

ಕೆಲವರು ಹತರಾಗಿ, ಇನ್ನು ಕೆಲವರು ಓಡಿಹೋದ ಪಾಂಡವರ ಸೈನ್ಯಗಳು ಕರ್ತವ್ಯ ಪ್ರಜ್ಞಾಶೂನ್ಯಗಳಾಗಿ, ಉತ್ಸಾಹವನ್ನು ಕಳೆದುಕೊಂಡು ತನ್ನ ತೇಜಸ್ಸಿನಿಂದ ಉರಿಯುವ ಮಧ್ಯಾಹ್ನದ ಸೂರ್ಯನಂತೆ ಅಸದೃಶವಾಗಿ ಯುದ್ಧದಲ್ಲಿ ಜ್ವಲಿಸುವ ಭೀಷ್ಮರನ್ನು ನೋಡಲೂ ಸಾಧ್ಯವಾಗಲಿಲ್ಲ.

ತೇ ವಧ್ಯಮಾನಾ ಭೀಷ್ಮೇಣ ಕಾಲೇನೇವ ಯುಗಕ್ಷಯೇ ।
ಕುರ್ವಾಣಂ ಸಮರೇ ಕರ್ಮಾಣ್ಯತಿಮಾನುಷವಿಕ್ರಮಮ್ ॥೭೭॥

ತಥಾ ಪಾಂಡವಸೈನ್ಯಾನಿ ದ್ರಾವ್ಯಮಾಣಾನಿ ಭಾರತ ।
ವೀಕ್ಷಾಂಚಕ್ರುರ್ಮಹಾರಾಜ ಪಾಂಡವಾ ಭಯಪೀಡಿತಾಃ ॥೭೮॥

ಎಲೈ ಭಾರತನೇ, ಮಹಾರಾಜನೇ, ಯುಗಾಂತದ ಮೃತ್ಯುವಿನಂತೆ ಭೀಷ್ಮರಿಂದ ಕೊಲ್ಲಲ್ಪಡುವ ತಮ್ಮ ಸೈನ್ಯವನ್ನೂ, ಮನುಷ್ಯರಿಗೆ ಮೀರಿದ ಪರಾಕ್ರಮವನ್ನು ಯುದ್ಧದಲ್ಲಿ ತೋರಿಸುತ್ತಿದ್ದ ಭೀಷ್ಮರನ್ನೂ ಮತ್ತು ಪಾಂಡವರ ಸೈನ್ಯಗಳು ಓಡಿಹೋಗುತ್ತಿರುವುದನ್ನೂ ಭಯಪೀಡಿತರಾದ ಪಾಂಡವರು ನೋಡಿದರು.

ತ್ರಾತಾರಂ ನಾಧ್ಯಗಚ್ಛಂತ ಗಾವಃ ಪಂಕಗತಾ ಇವ ।
ಪಿಪೀಲಿಕಾ ಇವ ಕ್ಷುಣ್ಣಾ ದುರ್ಬಲಾ ಬಲಿನಾ ರಣೇ ॥೭೯॥

ದುರ್ಬಲರಾದ ಪಾಂಡವರು ಬಲಿಷ್ಠರಾದ ಭೀಷ್ಮರಿಂದ ವಿನಾಶಗೊಳಿಸಲ್ಪಟ್ಟು ಕೆಸರಿನಲ್ಲಿ ಮುಳುಗಿದ ಗೋವುಗಳಂತೆ, ತುಳಿತಕ್ಕೆ ಸಿಲುಕಿದ ಇರುವೆಗಳಂತೆ ರಕ್ಷಕನನ್ನು ಕಾಣಲಿಲ್ಲ.

ತಥೈವ ಯೋಧಾ ರಾಜೇಂದ್ರ ಭೀಷ್ಮೇಣಾಮಿತ್ರಘಾತಿನಾ ।
ಸಮರೇ ಮೃದಿತಾಃ ಸರ್ವೇ ಪಾಂಡವಾಃ ಸಹ ಸೃಂಜಯೈಃ ॥೮೦॥

ಮಹಾರಥಂ ಭಾರತ ದುಷ್ಪ್ರಧರ್ಷಂ
ಶರೌಘಿಣಂ ಪ್ರತಪಂತಂ ನರೇಂದ್ರಾನ್ ।
ಭೀಷ್ಮಂ ನ ಶೇಕುಃ ಪ್ರತಿವೀಕ್ಷಿತುಂ ತೇ
ಶರಾರ್ಚಿಷಂ ಸೂರ್ಯಮಿವಾತಪಂತಮ್ ॥೮೧॥

ಎಲೈ ರಾಜೇಂದ್ರನೇ, ಶತ್ರುಘಾತಿಯಾದ ಭೀಷ್ಮರಿಂದ ಯುದ್ಧದಲ್ಲಿ ವಿನಾಶಗೊಳಿಸಲ್ಪಡುತ್ತಿದ್ದ ಪಾಂಡವ ಮತ್ತು ಸೃಂಜಯ ಸೈನಿಕರು ಬಾಣಗಳ ಮಳೆಯನ್ನು ಸುರಿಸುತ್ತಿದ್ದ, ರಾಜರುಗಳನ್ನು ದಹಿಸುತ್ತಿದ್ದ, ಸೋಲಿಸಲು ಅಸಾಧ್ಯರಾಗಿದ್ದ, ಬಾಣಗಳೆಂಬ ಕಿರಣಗಳುಳ್ಳ ಸೂರ್ಯನಂತೆ ಜ್ವಲಿಸುತ್ತಿದ್ದ ಮಹಾರಥರಾದ ಭೀಷ್ಮರನ್ನು ನೋಡಲೂ ಸಮರ್ಥರಾಗಲಿಲ್ಲ.

ವಿಮೃದ್ನತಸ್ತಸ್ಯ ತು ಪಾಂಡುಸೇನಾಮ್
ಅಸ್ತಂ ಜಗಾಮಾಥ ಸಹಸ್ರರಶ್ಮಿಃ ।
ತತೋऽಪಿ ಭೀಷ್ಮಃ ಸಬಲಃ ಸ್ವಸೈನ್ಯಾನ್
ನ್ಯವಾರಯತ್ ಪಾಂಡುಸುತಾನ್ ಶರೌಘೈಃ ॥೮೨॥

ಪಾಂಡವರ ಸೇನೆಯನ್ನು ಭೀಷ್ಮರು ಹೀಗೆ ಮರ್ದಿಸುತ್ತಿರಲು ಸಹಸ್ರರಶ್ಮಿಯಾದ ಸೂರ್ಯನು ಅಸ್ತವನ್ನು ಹೊಂದಿದನು. ಆದರೂ ಭೀಷ್ಮರು ತಮ್ಮ ಬಾಣಗಳ ಸಮೂಹದಿಂದ ತಮ್ಮ ಸೈನ್ಯಸಹಿತರಾಗಿ ಸೈನ್ಯದಿಂದ ಒಡಗೂಡಿದ ಪಾಂಡವರನ್ನು ತಡೆದರು.

ಜಘಾನ ಚೈತಾನ್ ಸುಭೃಶಂ ಮಹಾಬಲೋ
ಮಹಾವ್ರತಃ ಪಾಂಡುಸುತಾನ್ ಮಹಾತ್ಮಾ ।
ರಣೇ ಕರೂಷಾಧಿಪಚೇದಿಪೈರ್ಬಲೈಃ
ವೃತಾನ್ ಸದಾ ಚಕ್ರಧರಸ್ಯ ಪಶ್ಯತಃ ।
ತತೋ ಬಲಾನಾಂ ಶ್ರಮಕರ್ಶಿತಾನಾಂ
ಮನೋऽವಹಾರಂ ಪ್ರತಿ ಸಂಬಭೂವ ॥೮೩॥

ಮಹಾತ್ಮರೂ, ಮಹಾರಥರೂ, ಮಹಾಬಲವುಳ್ಳವರೂ ಆದ ಭೀಷ್ಮರು ಕರೂಷ ಮತ್ತು ಚೇದಿರಾಜ್ಯದ ಸೈನ್ಯದಿಂದ ಸಹಿತರಾದ ಪಾಂಡವಯೋಧರನ್ನು ಚಕ್ರಧರನಾದ ಕೃಷ್ಣನು ನೋಡುತ್ತಿರುವಂತೆಯೇ ವಧಿಸಿದರು. ಆಗ ದಣಿದ ಸೈನ್ಯಗಳಿಗೆ ಸೈನ್ಯವನ್ನು ಹಿಂದಕ್ಕೆ ತೆಗೆದುಕೊಳ್ಳುವ (ಯುದ್ಧವಿರಾಮವನ್ನು ಮಾಡುವ) ಬುದ್ಧಿಯುಂಟಾಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ತ್ರ್ಯಧಿಕಶತತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ತ್ರಿಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನೂರ ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಾಲ್ಕನೆಯ ಅಧ್ಯಾಯ

ಭೀಷ್ಮರ ಪ್ರತಾಪವನ್ನು ನೋಡಿ ಯುಧಿಷ್ಠಿರನಿಂದ ಕೃಷ್ಣನ ಮುಂದೆ ಪ್ರಲಾಪ. ಕೃಷ್ಣನ ಸಮಾಧಾನ ವಚನ. ಭೀಷ್ಮರ ಬಳಿಗೆ ಹೋಗಿ ಅವರ ವಧೋಪಾಯ ಪ್ರಶ್ನೆ. ಶಿಖಂಡಿಯನ್ನು ಮುಂದೆ ಮಾಡಿಕೊಂಡು ಯುದ್ಧ ಮಾಡುವಂತೆ ಅವರ ಸಲಹೆ.

ಸಂಜಯಃ

ಯುಧ್ಯತಾಮೇವ ತೇಷಾಂ ತು ಭಾಸ್ಕರೇಽಸ್ತಮುಪಾಗತೇ ।
ಸಂಧ್ಯಾ ಸಮಭವದ್ ಘೋರಾ ನಾಪಶ್ಯಾಮ ತತೋ ರಣಮ್ ॥೧॥

ಸಂಜಯ– ಎರಡು ಸೈನ್ಯಗಳು ಯುದ್ಧ ಮಾಡುತ್ತಿರುವಂತೆಯೇ ಸೂರ್ಯನು ಅಸ್ತಂಗತನಾಗಿ ಘೋರವಾದ ಸಂಧ್ಯಾಕಾಲವಾಯಿತು. ಅನಂತರ ನಮಗೆ ಯುದ್ಧವು ಕಾಣಲಿಲ್ಲ.

ತತೋ ಯುಧಿಷ್ಠಿರೋ ರಾಜಾ ಸಂಧ್ಯಾಂ ಸಂದೃಶ್ಯ ಭಾರತ ।
ವಧ್ಯಮಾನಂ ಬಲಂ ಚಾಪಿ ಭೀಷ್ಮೇಣಾಮಿತ್ರಘಾತಿನಾ ॥೨॥

ಮುಕ್ತಶಸ್ತ್ರಂ ಪರಾವೃತ್ತಂ ಪಲಾಯನಪರಾಯಣಮ್ ।
ಭೀಷ್ಮಂ ಚ ಯುಧಿ ಸಂರುದ್ಧಮನುಯಾಂತಂ ಮಹಾರಥಾನ್ ॥೩॥

ಸೋಮಕಾಂಶ್ಚ ಜಿತಾನ್ ದೃಷ್ಟ್ವಾ ನಿರುತ್ಸಾಹಾನ್ ಮಹಾರಥಾನ್ ।
ನಿಶಾಮುಖಂ ಚ ಸಂಪ್ರೇಕ್ಷ್ಯ ಘೋರರೂಪಂ ಭಯಾನಕಮ್ ।
ಚಿಂತಯಿತ್ವಾ ಚಿರಂ ಧ್ಯಾತ್ವಾ ಅವಹಾರಮಘೋಷಯತ್ ॥೪॥

ಎಲೈ ಭಾರತನೇ, ಆಗ ಯುಧಿಷ್ಠಿರನು ಸಂಧ್ಯಾಕಾಲವನ್ನೂ ಶತ್ರುಕರ್ಶನರಾದ ಭೀಷ್ಮರಿಂದ ತಮ್ಮ ಸೈನ್ಯವು ವಧಿಸಲ್ಪಡುತ್ತಿರುವುದನ್ನೂ, ತಮ್ಮ ಸೈನ್ಯವು ಶಸ್ತ್ರವನ್ನು ತ್ಯಜಿಸಿ ಯುದ್ಧದಿಂದ ವಿಮುಖವಾಗಿ ಪಲಾಯನಪರವಾಗಿರುವುದನ್ನೂ, ಭೀಷ್ಮರು ಯುದ್ಧದಲ್ಲಿ ಕೋಪದಿಂದ ಮಹಾರಥರನ್ನು ಹಿಂಬಾಲಿಸುವುದನ್ನೂ, ಮಹಾರಥರಾದ ಸೋಮಕರು ಪರಾಜಿತರಾಗಿ ಉತ್ಸಾಹಶೂನ್ಯರಾಗಿರುವುದನ್ನೂ, ಭಯಂಕರವೂ ಘೋರವೂ ಆದ ನಿಶ್ಯಾಮವು ಪ್ರಾಪ್ತವಾದುದನ್ನೂ ನೋಡಿ, ಚಿಂತಿಸಿ, ಬಹಳ ಕಾಲ ಯೋಚಿಸಿ ಸೈನ್ಯದ ಅವಹಾರವನ್ನು ಬಯಸಿದನು.

ತತೋऽವಹಾರಂ ಸೈನ್ಯಾನಾಂ ಚಕ್ರೇ ರಾಜಾ ಯುಧಿಷ್ಠಿರಃ ।
ತಥೈವ ತವ ಸೈನ್ಯಾನಾಮವಹಾರೋ ಹ್ಯಭೂತ್ ತದಾ ॥೫॥

ಅನಂತರ ರಾಜನಾದ ಯುಧಿಷ್ಠಿರನು ತನ್ನ ಸೈನ್ಯದ ಅವಹಾರವನ್ನು ಮಾಡಿದನು. ಹಾಗೆಯೇ ಆಗ ನಿನ್ನ ಸೈನ್ಯಗಳ ಅವಹಾರವೂ ಆಯಿತು.

ತತೋऽವಹಾರಂ ಸೈನ್ಯಾನಾಂ ಕೃತ್ವಾ ತತ್ರ ಮಹಾರಥಾಃ ।
ನ್ಯವಿಶಂತ ಕುರುಶ್ರೇಷ್ಠ ಸಂಗ್ರಾಮೇ ಕ್ಷತವಿಕ್ಷತಾಃ ॥೬॥

ಎಲೈ ಕುರುಶ್ರೇಷ್ಠನೇ, ಆಗ ಸೈನ್ಯಗಳ ಅವಹಾರವನ್ನು ಮಾಡಿ, ಬಾಣಗಳಿಂದ ಬಹಳ ಗಾಯಗೊಂಡ ಮಹಾರಥರು ವಿಶ್ರಾಂತಿಯನ್ನು ಪಡೆದರು.

ಭೀಷ್ಮಸ್ಯ ಸಮರೇ ಕರ್ಮ ಚಿಂತಯಾನಾಸ್ತು ಪಾಂಡವಾಃ ।
ನಾಲಭಂತ ತದಾ ಶಾಂತಿಂ ಭೃಶಂ ಭೀಷ್ಮೇಣ ಪೀಡಿತಾಃ ॥೭॥

ಭೀಷ್ಮರಿಂದ ಬಹಳವಾಗಿ ಪೀಡಿತರಾದ ಪಾಂಡವರು ಯುದ್ಧದಲ್ಲಿ ಭೀಷ್ಮರ ಕರ್ಮಗಳನ್ನು ಚಿಂತಿಸುತ್ತಾ ಸಮಾಧಾನವನ್ನು ಹೊಂದಲಿಲ್ಲ.

ಭೀಷ್ಮೋऽಪಿ ಸಮರೇ ಜಿತ್ವಾ ಪಾಂಡವಾನ್ ಸಹ ಸೃಂಜಯೈಃ ।
ಪೂಜ್ಯಮಾನಸ್ತವ ಸುತೈರ್ವಂದ್ಯಮಾನಶ್ಚ ಭಾರತ ॥೮॥

ಸ್ಮವಿತ್ ಕುರುಭಿಃ ಸಾರ್ಧಂ ಹೃಷ್ಟರೂಪೈಃ ಸಮಂತತಃ ।
ತತೋ ರಾತ್ರಿಃ ಸಮಭವತ್ ಸರ್ವಭೂತಪ್ರಮೋಹಿನೀ ॥೯॥

ಎಲೈ ಭಾರತನೇ, ಭೀಷ್ಮರೂ ಸಹ ಪಾಂಡವರನ್ನು ಮತ್ತು ಸೃಂಜಯರನ್ನು ಯುದ್ಧದಲ್ಲಿ ಗೆದ್ದು ನಿನ್ನ ಪುತ್ರರಿಂದ ನಮಸ್ಕರಿಸಲ್ಪಟ್ಟು ಮತ್ತು ಗೌರವಿಸಲ್ಪಟ್ಟು ಎಲ್ಲ ಕಡೆಗಳಲ್ಲಿಯೂ ಸಂತೋಷಗೊಂಡ ಕುರುಸೈನ್ಯದ ಜೊತೆಯಲ್ಲಿ ವಿಶ್ರಾಂತಿಯನ್ನು ಪಡೆದರು. ಆಗ ಎಲ್ಲ ಪ್ರಾಣಿಗಳ ಜ್ಞಾನಗಳನ್ನು ಅಳಿಸುವ ರಾತ್ರಿಯುಂಟಾಯಿತು.

ತಸ್ಮಿನ್ ರಾತ್ರಿಮುಖೇ ಘೋರೇ ಪಾಂಡವಾ ವೃಷ್ಣಿಭಿಃ ಸಹ ।
ಸೃಂಜಯಾಶ್ಚ ದುರಾಧರ್ಷಾ ಮಂತ್ರಾಯ ಸಮುಪಾವಿಶನ್ ॥೧೦॥

ಆ ಘೋರವಾದ ರಾತ್ರಿಯ ಆರಂಭಕಾಲದಲ್ಲಿ ವೃಷ್ಣಿಗಳ ಜೊತೆಯಲ್ಲಿ ಸೇರಿದ ಪಾಂಡವರು ಮತ್ತು ಸೋಲಿಸಲು ಕಷ್ಟಸಾಧ್ಯರಾದ ಸೃಂಜಯರು ಮಂತ್ರಾಲೋಚನೆಗಾಗಿ ಕುಳಿತರು.

ಆತ್ಮನಿಶ್ರೇಯಸಂ ಸರ್ವೇ ಪ್ರಾಪ್ತಕಾಲಂ ಮಹಾಬಲಾಃ ।
ಮಂತ್ರಯಾಮಾಸುರವ್ಯಗ್ರಾ ಮಂತ್ರನಿಶ್ಚಯಕೋವಿದಾಃ ॥೧೧॥

ಮಂತ್ರನಿಶ್ಚಯದಲ್ಲಿ ಪಾರಂಗತರಾದ, ಮಹಾಬಲರಾದ ಅವರೆಲ್ಲರೂ ಸಮಾಧಾನ ಉಳ್ಳ ಮನಸ್ಸಿನಿಂದ ಆ ಸಮಯದಲ್ಲಿ ಅನುಸರಿಸಬೇಕಾದ ತಮ್ಮ ಶ್ರೇಯೋಮಾರ್ಗವನ್ನು ಕುರಿತು ಚಿಂತಿಸಿದರು.

ತತೋ ಯುಧಿಷ್ಠಿರೋ ರಾಜಾ ಮಂತ್ರಯಿತ್ವಾ ಚಿರಂ ನೃಪ ।
ವಾಸುದೇವಂ ಸಮುದ್ವೀಕ್ಷ್ಯ ವಾಕ್ಯಮೇತದುವಾಚ ಹ ॥೧೨॥

ಎಲೈ ರಾಜನೇ, ಆಗ ರಾಜನಾದ ಯುಧಿಷ್ಠಿರನು ದೀರ್ಘಕಾಲ ಮಂತ್ರಾಲೋಚನೆಯನ್ನು ಮಾಡಿ ಕೃಷ್ಣನನ್ನು ನೋಡಿ ಈ ಮಾತುಗಳನ್ನು ಆಡಿದನು.

ಪಶ್ಯ ಕೃಷ್ಣ ಮಹಾತ್ಮಾನಂ ಭೀಷ್ಮಂ ಭೀಮಪರಾಕ್ರಮಮ್ ।
ಗಜಂ ನಲವನಾನೀವ ವಿಮೃದ್ನಂತಂ ಬಲಂ ಮಮ ॥೧೩॥

ಕೃಷ್ಣನೇ, ಮಹಾತ್ಮರೂ, ಭಯಂಕರ ಪರಾಕ್ರಮವುಳ್ಳವರೂ ಆದ ಭೀಷ್ಮರು ಆನೆಗಳು ಕಮಲ ವನಗಳನ್ನು ಮರ್ದಿಸಿದಂತೆ ನನ್ನ ಸೈನ್ಯವನ್ನು ಮರ್ದಿಸುತ್ತಿರುವುದನ್ನು ನೋಡು.

ನ ಚೈವೈನಂ ಮಹಾತ್ಮಾನಮುತ್ಸಹಾಮೋ ನಿರೀಕ್ಷಿತುಮ್ ।
ಲೇಲಿಹ್ಯಮಾನಂ ಸೈನ್ಯೇಷು ಪ್ರವೃದ್ಧಮಿವ ಪಾವಕಮ್ ॥೧೪॥

ಅಭಿವೃದ್ಧಿಗೊಂಡ ಅಗ್ನಿಯಂತೆ ನಮ್ಮ ಸೈನ್ಯಗಳನ್ನು ನುಂಗುತ್ತಿರುವ ಈ ಮಹಾತ್ಮರನ್ನು ನಾವು ಕಣ್ಣಿನಿಂದ ನೋಡಲೂ ಸಾಧ್ಯವಾಗುತ್ತಿಲ್ಲ.

ಯಥಾ ಘೋರೋ ಮಹಾನಾಗಸ್ತಕ್ಷಕೋ ವೈ ವಿಷೋಲ್ಬಣಃ ।
ತಥಾ ಭೀಷ್ಮೋ ರಣೇ ಕೃಷ್ಣ ತೀಕ್ಷ್ಣಶಸ್ತ್ರಃ ಪ್ರತಾಪವಾನ್ ॥೧೫॥

ಎಲೈ ಕೃಷ್ಣನೇ, ಘೋರವಾದ ಮಹಾಸರ್ಪವಾದ ವಿಷಪೂರಿತನಾದ ತಕ್ಷಕನಂತೆ ತೀಕ್ಷ್ಣಶಾಸ್ತ್ರಗಳುಳ್ಳ ಭೀಷ್ಮರು ಯುದ್ಧದಲ್ಲಿ ಪ್ರತಾಪಶಾಲಿಗಳಾಗಿದ್ದಾರೆ.

ಗೃಹೀತಚಾಪಃ ಸಮರೇ ವಿಮುಂಚಂಶ್ಚ ಶಿತಾನ್ ಶರಾನ್ ।
ಶಕ್ಯೋ ಜೇತುಂ ಯಮಃ ಕ್ರುದ್ಧೋ ವಜ್ರಪಾಣಿಶ್ಚ ದೇವರಾಟ್ ॥೧೬॥

ವರುಣಃ ಪಾಶಭೃದ್ ವಾಪಿ ಸಗದೋ ವಾ ಧನೇಶ್ವರಃ ।
ನ ತು ಭೀಷ್ಮಃ ಸುಸಂಕ್ರುದ್ಧಃ ಶಕ್ಯೋ ಜೇತುಂ ಮಹಾಹವೇ ॥೧೭॥

ಕ್ರುದ್ಧನಾದ ಯಮನನ್ನೂ ಜಯಿಸಬಹುದು, ವಜ್ರಪಾಣಿಯಾದ ದೇವೇಂದ್ರನನ್ನು ಜಯಿಸಬಹುದು, ಪಾಶಧರಿಸಿದ ವರುಣನನ್ನಾಗಲೀ ಅಥವಾ ಗದಾಧಾರಿಯಾದ ಕುಬೇರನನ್ನಾಗಲೀ ಜಯಿಸಬಹುದು. ಆದರೆ ಯುದ್ಧದಲ್ಲಿ ಬಿಲ್ಲನ್ನು ಹಿಡಿದು ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸುವ ಬಹಳ ಕೋಪಗೊಂಡ ಭೀಷ್ಮರನ್ನು ಜಯಿಸಲು ಸಾಧ್ಯವಿಲ್ಲ.

ಸೋಽಹಮೇವಂಗತೇ ಕೃಷ್ಣ ನಿಮಗ್ನಃ ಶೋಕಸಾಗರೇ ।
ಆತ್ಮನೋ ಬುದ್ಧಿದೌರ್ಬಲ್ಯಾದ್ ಭೀಷ್ಮಮಾಸಾದ್ಯ ಸಂಯುಗೇ ॥೧೮॥

ಎಲೈ ಕೃಷ್ಣನೇ, ಪರಿಸ್ಥಿತಿಯು ಹೀಗಿರುವಾಗ ಅಂತಹ ನಾನು ಯುದ್ಧದಲ್ಲಿ ಭೀಷ್ಮರನ್ನು ಎದುರಿಸಿ ನನ್ನ ಬುದ್ಧಿದೌರ್ಬಲ್ಯದಿಂದ ಶೋಕಸಾಗರದಲ್ಲಿ ಮುಳುಗಿದ್ದೇನೆ.

ವನಂ ಯಾಸ್ಯಾಮಿ ದುರ್ಧರ್ಷ ಶ್ರೇಯೋ ಮೇ ತತ್ರ ವೈ ಗತಮ್ ।
ನ ಯುದ್ಧಂ ರೋಚಯೇ ಕೃಷ್ಣ ಹಂತಿ ಭೀಷ್ಮೋ ಹಿ ನಃ ಸದಾ ॥೧೯॥

ಎಲೈ ದುರ್ಧರ್ಷನೇ, ಕಾಡಿಗೆ ಹೋಗುವೆನು. ನನಗೆ ವನಗಮನವೇ ಶ್ರೇಯಸ್ಕರವಾಗಿರುತ್ತದೆ. ಕೃಷ್ಣನೇ, ನಾನು ಯುದ್ಧವನ್ನು ಮಾಡಲಾರೆ. ಭೀಷ್ಮರು ಯಾವಾಗಲೂ ನಮ್ಮನ್ನು ಕೊಲ್ಲುತ್ತಿದ್ದಾರೆ.

ಯಥಾ ಪ್ರಜ್ವಲಿತಂ ವಹ್ನಿಂ ಪತಂಗಃ ಸಮಭಿದ್ರವನ್ ।
ಏಕತೋ ಮೃತ್ಯುಮಭ್ಯೇತಿ ತಥಾಹಂ ಭೀಷ್ಮಮೀಯಿವಾನ್ ॥೨೦॥

ಜ್ವಲಿಸುವ ಅಗ್ನಿಯನ್ನು ಪ್ರವೇಶಿಸುವ ಪತಂಗವು ಹೇಗೆ ನಿಯಮೇನ ಮೃತ್ಯುವನ್ನು ಹೊಂದುವುದೋ ಹಾಗೆ ನಾನು ಭೀಷ್ಮರನ್ನು ಹೊಂದಿದ್ದೇನೆ.

ಕ್ಷಯಂ ನೀತೋಽಸ್ಮಿ ವಾರ್ಷ್ಣೇಯ ರಾಜ್ಯಹೇತೋಃ ಪರಾಕ್ರಮೀ ।
ಭ್ರಾತರಶ್ಚೈವ ಮೇ ಶೂರಾಃ ಸಾಯಕೈರ್ಭೃಶಪೀಡಿತಾಃ ॥೨೧॥

ಎಲೈ ವಾರ್ಷ್ಣೇಯನೇ, ರಾಜ್ಯದ ನಿಮಿತ್ತದಿಂದಾಗಿ ನಾನು ಪರಾಕ್ರಮಶಾಲಿಯಾದ ನಾನು ವಿನಾಶವನ್ನು ಹೊಂದಿದ್ದೇನೆ. ಶೂರರಾದ ನನ್ನ ಸಹೋದರರೂ ಸಹ ಬಹಳವಾಗಿ ಗಾಯಗೊಂಡಿದ್ದಾರೆ.

ಮತ್ಕೃತೇ ಭ್ರಾತೃಸೌಹಾರ್ದಾದ್ ರಾಜ್ಯಾತ್ ಪ್ರಭ್ರಂಶನಂ ಗತಾಃ ।
ಪರಿಕ್ಲಿಷ್ಟಾ ತಥಾ ಕೃಷ್ಣಾ ಮತ್ಕೃತೇ ಮಧುಸೂದನ ॥೨೨॥

ಎಲೈ ಕೃಷ್ಣನೇ, ಅವರು ನನ್ನ ನಿಮಿತ್ತದಿಂದಾಗಿ ಮತ್ತು ನನ್ನ ಮೇಲಿನ ಸ್ನೇಹದಿಂದಾಗಿ ರಾಜ್ಯಭ್ರಷ್ಟರಾಗಿದ್ದಾರೆ. ಎಲೈ ಮಧುಸೂದನನೇ, ನನ್ನ ನಿಮಿತ್ತದಿಂದಾಗಿಯೇ ದ್ರೌಪದಿಯು ಅಂತಹ ಕ್ಲೇಶವನ್ನು ಅನುಭವಿಸಿದಳು.

ಜೀವಿತಂ ಬಹು ಮನ್ಯೇಽಹಂ ಜೀವಿತಂ ಹ್ಯದ್ಯ ದುರ್ಲಭಮ್ ।
ಜೀವಿತಸ್ಯಾದ್ಯ ಶೇಷೇಣ ಚರಿಷ್ಯೇ ಧರ್ಮಮುತ್ತಮಮ್ ॥೨೩॥

ಬದುಕಿರುವುದೇ ದೊಡ್ಡದೆಂದು ನನಗೆ ತೋರುತ್ತದೆ. ಆದರೆ ಅಂತಹ ಜೀವನವು ಈ ದಿನ ದುರ್ಲಭವಾಗಿದೆ. ನನ್ನ ಜೀವನದ ಉಳಿದ ಭಾಗದಿಂದ ನಾನು ಶ್ರೇಷ್ಠವಾದ ಧರ್ಮಾಚರಣೆಯನ್ನು ಮಾಡುವೆನು.

ಯದಿ ತೇಽಹಮನುಗ್ರಾಹ್ಯೋ ಭ್ರಾತೃಭಿಃ ಸಹ ಕೇಶವ ।
ಸ್ವಧರ್ಮಸ್ಯಾವಿರೋಧೇನ ತದುದಾಹರ ಕೇಶವ ॥೨೪॥

ಎಲೈ ಕೇಶವನೇ, ನಾನು ಮತ್ತು ನನ್ನ ತಮ್ಮಂದಿರು ನಿನ್ನ ಅನುಗ್ರಹಕ್ಕೆ ಪಾತ್ರರಾಗಿದ್ದರೆ ನಮ್ಮ ಧರ್ಮಕ್ಕೆ ವಿರೋಧವಿಲ್ಲದಂತೆ ನಾವು ಈ ದಿನ ಏನು ಮಾಡಬಹುದೆಂದು ಹೇಳು (ಎಂದು ಹೇಳಿದನು).

ವಿತಥ್ಯೀತ್ವಾ ವಚಸ್ತಸ್ಯ ಕಾರುಣ್ಯಾದ್ ಬಹುವಿಸ್ತರಮ್ ।
ಪ್ರತ್ಯುವಾಚ ತತಃ ಕೃಷ್ಣಃ ಸಾಂತ್ವಯಾನೋ ಯುಧಿಷ್ಠಿರಮ್ ॥೨೫॥

ಅವನ ವಿಸ್ತಾರವಾದ, ಕರುಣೆಯಿಂದ ಕೂಡಿದ ಈ ಮಾತುಗಳನ್ನು ಕೇಳಿ ಕೃಷ್ಣನು ಯುಧಿಷ್ಠಿರನನ್ನು ಸಮಾಧಾನಪಡಿಸುತ್ತಾ ಅವನಿಗೆ ಉತ್ತರವನ್ನು ನೀಡಿದನು.

ಧರ್ಮಪುತ್ರ ವಿಷಾದಂ ತ್ವಂ ಮಾ ಕೃಥಾಃ ಸತ್ಯಸಂಗರ ।
ಯಸ್ಯ ತೇ ಭ್ರಾತರಃ ಶೂರಾ ದುರ್ಜಯಾಃ ಶತ್ರುಸೂದನಾಃ ॥೨೬॥

ಎಲೈ ಧರ್ಮಪುತ್ರನೇ, ಸತ್ಯಸಂಗರನೇ, ಯುದ್ಧದಲ್ಲಿ ದುರ್ಜಯರೂ, ಶತ್ರುಸೂದನರೂ, ಶೂರರೂ ಆದ ಸಹೋದರರು ಇರುವಾಗ ನೀನು ವಿಷಾದವನ್ನು ಮಾಡಬೇಡ.

ಅರ್ಜುನೋ ಭೀಮಸೇನಶ್ಚ ವಾಯ್ವಗ್ನಿಸಮತೇಜಸೌ ।
ಮಾದ್ರೀಪುತ್ರೌ ಚ ವಿಕ್ರಾಂತೌ ತ್ರಿದಶಾನಾಮಿವೇಶ್ವರೌ ॥೨೭॥

ಅರ್ಜುನ ಮತ್ತು ಭೀಮಸೇನರು ಅಗ್ನಿ-ವಾಯುಗಳಿಗೆ ಸಮವಾದ ಸಾಮರ್ಥ್ಯವುಳ್ಳವರು. ಮಾದ್ರೀಪುತ್ರರು ಪರಾಕ್ರಮದಲ್ಲಿ ಸ್ವರ್ಗದ ಪ್ರಭುವಾದ ಇಂದ್ರನಂತಿದ್ದಾರೆ.

ಮಾಂ ವಾ ನಿಯುಂಕ್ಷ್ವ ಸೌಹಾರ್ದಾದ್
ಯೋತ್ಸ್ಯೇ ಭೀಷ್ಮೇಣ ಪಾಂಡವ ।
ಕ್ಷತ್ರಬಂಧೋ ಹ್ಯಹಂ ರಾಜನ್ ಕಿಂ
ನ ಕುರ್ಯಾಂ ಮಹಾಹವೇ ॥೨೮॥

ಎಲೈ ಪಾಂಡವನೇ, ನನ್ನನ್ನಾದರೂ ನೀನು ಪ್ರೀತಿಯಿಂದ ನಿಯೋಜಿಸು. ಭೀಷ್ಮರ ಜೊತೆಯಲ್ಲಿ ಯುದ್ಧವನ್ನು ಮಾಡುವೆನು. ಎಲೈ ರಾಜನೇ, ನೀನು ಹೇಳಿದರೆ ಯುದ್ಧದಲ್ಲಿ ನಾನು ಯಾವ ಕಾರ್ಯವನ್ನು ಮಾಡದೇ ಇರಬಲ್ಲೆ?

ಹನಿಷ್ಯಾಮಿ ರಣೇ ಭೀಷ್ಮಮಾಹೂಯ ಪುರುಷರ್ಷಭಮ್ ।
ಪಶ್ಯತಾಂ ಧಾರ್ತರಾಷ್ಟ್ರಾಣಾಂ ಯದಿ ನೇಚ್ಛತಿ ಫಲ್ಗುನಃ ॥೨೯॥

ಅರ್ಜುನನಿಗೆ ಭೀಷ್ಮರನ್ನು ಕೊಲ್ಲುವುದು ಇಷ್ಟವಿಲ್ಲದಿದ್ದರೆ ನಾನೇ ಪುರುಷಶ್ರೇಷ್ಠರಾದ ಭೀಷ್ಮರನ್ನು ಆಹ್ವಾನಿಸಿ, ದುರ್ಯೋಧನಾದಿಗಳ ಎದುರಿಗೇ ಯುದ್ಧದಲ್ಲಿ ಅವರನ್ನು ಕೊಲ್ಲುವೆನು.

ಯದಿ ಭೀಷ್ಮೇ ಹತೇ ರಾಜನ್ ಜಯಂ ಪಶ್ಯಸಿ ಪಾಂಡವ ।
ಹಂತಾಸ್ಮ್ಯೇಕರಥೇನಾದ್ಯ ಕುರುವೃದ್ಧಂ ಪಿತಾಮಹಮ್ ॥೩೦॥

ಎಲೈ ರಾಜನೇ, ಪಾಂಡವನೇ, ಭೀಷ್ಮರು ಹತರಾದರೆ ಜಯವನ್ನು ಪಡೆಯುವಿಯಾದರೆ ನಾನು ಈ ದಿನ ಒಂದು ರಥದಿಂದ ಕುರುವೃದ್ಧರಾದ ಪಿತಾಮಹರನ್ನು ಕೊಲ್ಲುವೆನು.

ಪಶ್ಯ ಮೇ ವಿಕ್ರಮಂ ರಾಜನ್ ಮಹೇಂದ್ರಸ್ಯೇವ ಸಂಯುಗೇ ।
ವಿಮುಂಚಂತಂ ಮಹಾಸ್ತ್ರಾಣಿ ಪಾತಯಿಷ್ಯಾಮಿ ತಂ ರಥಾತ್ ॥೩೧॥

ಎಲೈ ರಾಜನೇ, ಯುದ್ಧದಲ್ಲಿ ಮಹೇಂದ್ರನ ಪರಾಕ್ರಮದಂತಿರುವ ನನ್ನ ಪರಾಕ್ರಮವನ್ನು ನೋಡು. ಮಹಾಸ್ತ್ರಗಳನ್ನು ಪ್ರಯೋಗಿಸುವ (ನನ್ನನ್ನು ನೋಡು). ಭೀಷ್ಮರನ್ನು ರಥದಿಂದ ಕೆಳಗೆ ಉರುಳಿಸುವೆನು.

ಯಃ ಶತ್ರುಃ ಪಾಂಡುಪುತ್ರಾಣಾಂ ಮಚ್ಛತ್ರುಃ ಸ ನ ಸಂಶಯಃ ।
ಮದರ್ಥಾ ಭವದರ್ಥಾ ಯೇ ಯೇ ಮದೀಯಾಸ್ತವೈವ ತೇ ॥೩೨॥

ಪಾಂಡವರಿಗೆ ಯಾರು ಶತ್ರುವೋ ಅವನು ನಿಸ್ಸಂಶಯವಾಗಿ ನನಗೂ ಶತ್ರು. ಯಾರು ನಿಮ್ಮ ಪರವಾಗಿದ್ದಾರೆಯೋ, ಅವರು ನನ್ನ ಪರವಾಗಿಯೂ ಇದ್ದಾರೆ. ಯಾರು ನನ್ನವರೋ ಅವರೆಲ್ಲರೂ ನಿನ್ನವರು. ಇದರಲ್ಲಿ ಸಂಶಯವಿಲ್ಲ.

ತವ ಭ್ರಾತಾ ಮಮ ಸಖಾ ಸಂಬಂಧೀ ಶಿಷ್ಯ ಏವ ಚ ।
ಮಾಂಸಾನ್ಯುತೃತ್ಯ ವೈ ದದ್ಯಾಮರ್ಜುನಾರ್ಥೇ ಮಹೀಪತೇ ॥೩೩॥

ಎಲೈ ರಾಜನೇ, ನಿನ್ನ ತಮ್ಮನು ನನಗೆ ಸ್ನೇಹಿತ, ಬಂಧು ಮತ್ತು ಶಿಷ್ಯ. ಅರ್ಜುನನ ಸಲುವಾಗಿ ನಾನು ನನ್ನ ಮಾಂಸವನ್ನಾದರೂ ಕಿತ್ತುಕೊಟ್ಟೇನು.

ಏಷ ಚಾಪಿ ನರವ್ಯಾಘ್ರೋ ಮತ್ಕೃತೇ ಜೀವಿತಂ ತ್ಯಜೇತ್ ।
ಏಷ ನಃ ಸಮಯಸ್ತಾತ ತಾರಯೇಮ ಪರಸ್ಪರಮ್ ।
ಸ ಮಾಂ ನಿಯುಂಕ್ಷ್ವ ರಾಜೇಂದ್ರ ಯಾವದ್ ದ್ವೀಪೋ ಭವಾಮ್ಯಹಮ್ ॥

ಈ ನರವ್ಯಾಘ್ರನಾದರೂ ಸಹ ನನ್ನ ಸಲುವಾಗಿ ಜೀವಿತವನ್ನು ತೊರೆದಾನು! ಪ್ರೀತಿಪಾತ್ರನೇ, ಇದು ನಾವಿಬ್ಬರೂ ಪರಸ್ಪರವಾಗಿ ಮಾಡಿಕೊಂಡಿರುವ ಒಪ್ಪಂದ. ರಾಜೇಂದ್ರನೇ, ನೀನು ನನಗೆ ಅಂತಹ ಆದೇಶವನ್ನು ಕೊಡು. ನಾನು ನಿಮ್ಮನ್ನು ಈ ಸಂಕಟದಿಂದ ಪಾರುಮಾಡುವ ದ್ವೀಪವಾಗುತ್ತೇನೆ.

ಪ್ರತಿಜ್ಞಾತಮುಪಪ್ಲಾವ್ಯೇ ಯತ್ತತ್ ಪಾರ್ಥೇನ ಪೂರ್ವತಃ ।
ಘಾತಯಿಷ್ಯಾಮಿ ಗಾಂಗೇಯಮಿತ್ಯುಲೂಕಸ್ಯ ಸನ್ನಿಧೌ ॥೩೫॥

ಪರಿರಕ್ಷ್ಯಂ ಚ ಮಮ ತದ್ವಚಃ ಪಾರ್ಥಸ್ಯ ಧೀಮತಃ ।
ಅನುಜ್ಞಾತಂ ತು ಪಾರ್ಥೇನ ಮಯಾ ಕಾರ್ಯಂ ನ ಸಂಶಯಃ ॥೩೬॥

ಹಿಂದೆ ಉಪಪ್ಲಾವ್ಯನಗರದಲ್ಲಿ ಶಕುನಿಯ ಮಗನಾದ ಉಲೂಕನ ಸನ್ನಿಧಿಯಲ್ಲಿ ನಾನು ಗಾಂಗೇಯರನ್ನು ಕೊಲ್ಲುವೆನು ಎಂದು ಮೇಧಾವಿಯಾದ ಪಾರ್ಥನು ಯಾವ ಮಾತನ್ನು ಆಡಿದನೋ ಅದನ್ನು ನಾನು ರಕ್ಷಿಸಬೇಕು. ಅರ್ಜುನನ ಅನುಮತಿಯನ್ನು ಪಡೆದಾದರೂ ನಾನು ಆ ಕಾರ್ಯವನ್ನು ಮಾಡಬೇಕು. ಇದರಲ್ಲಿ ಸಂಶಯವಿಲ್ಲ.

ಅಥ ವಾ ಫಲ್ಗುನಸ್ಯೈಷ ಭಾರಃ ಪರಿಮಿತೋ ರಣೇ ।
ನಿಹನಿಷ್ಯತಿ ಸಂಗ್ರಾಮೇ ಭೀಷ್ಮಂ ಪರಪುರಂಜಯಮ್ ॥೩೭॥

ಅಥವಾ ಭೀಷ್ಮರನ್ನು ಯುದ್ಧದಲ್ಲಿ ಕೊಲ್ಲುವ ಭಾರವು ಅರ್ಜುನನದೆಂದು ನಿಶ್ಚಿತವಾಗಿದೆ. ಪರಪುರಂಜಯರಾದ ಭೀಷ್ಮರನ್ನು ಯುದ್ಧದಲ್ಲಿ ಅವನ ಕೊಲ್ಲುವನು.

ಅಶಕ್ಯಮಪಿ ಕುರ್ಯಾದ್ಧಿ ರಣೇ ಪಾರ್ಥಃ ಸಮುದ್ಯತಃ ।
ತ್ರಿದಶಾನ್ ವಾ ಸಮುದ್ಯುಕ್ತಾನ್ ಸಹಿತಾನ್ ದೈತ್ಯದಾನವೈಃ ।
ನಿಹನ್ಯಾದರ್ಜುನಃ ಸಂಖೇ ಕಿಮು ಭೀಷ್ಮಂ ನರಾಧಿಪ ॥೩೮॥

ಅರ್ಜುನನು ರಣದಲ್ಲಿ ಚೆನ್ನಾಗಿ ಉದ್ಯತನಾದರೆ ಅಸಾಧ್ಯವಾದ ಕಾರ್ಯವನ್ನೂ ಮಾಡಿಯಾನು. ಅರ್ಜುನನು ದೈತ್ಯ-ದಾನವರಿಂದ ಸಹಿತರಾದ, ಯುದ್ಧಸನ್ನದ್ಧರಾದ ದೇವತೆಗಳನ್ನೂ ಕೊಂದಾನು. ಎಲೈ ರಾಜನೇ, ಯುದ್ಧದಲ್ಲಿ ಭೀಷ್ಮರನ್ನು ಕೊಲ್ಲುವುದು ಯಾವ ದೊಡ್ಡ ವಿಷಯ?

ವಿಪರೀತೋ ಮಹಾವೀರ್ಯೋ ಗತಸತ್ತ್ವೋಽಲ್ಪಜೀವಿತಃ ।
ಭೀಷ್ಮಃ ಶಾಂತನವೋ ನೂನಂ ಕರ್ತವ್ಯಂ ನಾವಬುಧ್ಯತೇ ॥೩೯॥

ಮಹಾಪರಾಕ್ರಮಶಾಲಿಗಳಾದ, ಶಂತನುಪುತ್ರರಾದ ಭೀಷ್ಮರು ವಿಶೇಷವಾಗಿ ವಿಧಿವಶರಾಗಿ, ತಮ್ಮ ಸಾಮರ್ಥ್ಯವನ್ನು ಕಳೆದುಕೊಂಡು ಅಲ್ಪಜೀವನವನ್ನು ಹೊಂದಿದ್ದಾರೆ. ಅವರು ಮಾಡಬೇಕಾದ ಕರ್ತವ್ಯವನ್ನು ತಿಳಿಯುತ್ತಿಲ್ಲ.

ಯುಧಿಷ್ಠಿರಃ

ಏವಮೇತನ್ಮಹಾಬಾಹೋ ಯಥಾ ವದಸಿ ಮಾಧವ ।
ಸರ್ವೇ ಹ್ಯೇತೇ ನ ಪರ್ಯಾಪ್ತಾಸ್ತವ ವೇಗನಿವಾರಣೇ ॥೪೦॥

ಯುಧಿಷ್ಠಿರ– ಎಲೈ ಮಾಧವನೇ, ಮಹಾಬಾಹುವೇ, ಎಲ್ಲವೂ ನೀನು ಹೇಳಿದಂತೆಯೇ ಸರಿ. ನಿನ್ನ ವೇಗವನ್ನು ನಿವಾರಿಸಲು ಇವರೆಲ್ಲರೂ ಸಹಿತರಾಗಿಯೂ ಶಕ್ತರಾಗುವುದಿಲ್ಲ.

ನಿಯತಂ ಸಮವಾಪ್ಸ್ಯಾಮಿ ಸರ್ವಮೇವ ಯಥೇಪ್ಸಿತಮ್ ।
ಯಸ್ಯ ಮೇ ಪುರುಷವ್ಯಾಘ್ರ ಭವಾನ್ ನಾಥೋ ಮಹಾಬಲಃ ॥೪೧॥

ಎಲೈ ಪುರುಷವ್ಯಾಘ್ರನೇ, ಯಾವ ನನಗೆ ಮಹಾಬಲನಾದ ನೀನು ಒಡೆಯನಾಗಿದ್ದೀಯೋ ಅಂತಹ ನಾನು ಅಭೀಪ್ಸಿತವಾದ ಎಲ್ಲವನ್ನೂ ಖಂಡಿತವಾಗಿ ಸಂಪಾದಿಸುವೆನು.

ಸೇಂದ್ರಾನಪಿ ರಣೇ ದೇವಾನ್ ಜಯೇಯಂ ಜಯತಾಂ ವರ ।
ತ್ವಯಾ ನಾಥೇನ ಗೋವಿಂದ ಕಿಮು ಭೀಷ್ಮಂ ಮಹಾಹವೇ ॥೪೨॥

ಎಲೈ ಜಯಿಸುವವರಲ್ಲಿ ಶ್ರೇಷ್ಠನೇ, ಗೋವಿಂದನೇ, ನಿನ್ನಂತಹ ನಾಥನಿರುವಾಗ ನಾನು ಯುದ್ಧದಲ್ಲಿ ಇಂದ್ರ ಸಹಿತರಾದ ದೇವತೆಗಳನ್ನೂ ಗೆದ್ದೇನು. ಇನ್ನು ಭೀಷ್ಮರನ್ನು ಯುದ್ಧದಲ್ಲಿ ಕೊಲ್ಲುವುದು ಯಾವ ದೊಡ್ಡ ವಿಷಯ?

ನ ತು ತ್ವಾಮನೃತಂ ಕರ್ತುಮುತ್ಸಹೇ ಸ್ವಾರ್ಥಗೌರವಾತ್ ।
ಅಯುಧ್ಯಮಾನಃ ಸಾಹಾಯ್ಯಂ ಯಥೋಕ್ತಂ ಕುರು ಮಾಧವ ॥೪೩॥

ನಾನು ನನ್ನ ಸ್ವಾರ್ಥದ ಸಲುವಾಗಿ ನಿನ್ನ ಮಾತನ್ನು ಸುಳ್ಳು ಮಾಡಲು ಬಯಸುವುದಿಲ್ಲ. ಎಲೈ ಮಾಧವನೇ, ಯುದ್ಧವನ್ನು ಮಾಡದೆ ನಿಮಗೆ ಸಹಾಯವನ್ನು ಮಾಡುವೆನು ಎಂದು ಹಿಂದೆ ನೀನು ಹೇಳಿದ ಮಾತನ್ನು ಸತ್ಯವನ್ನಾಗಿ ಮಾಡು.

ಸಮಯಸ್ತು ಕೃತಃ ಕಶ್ಚಿದ್ ಭೀಷ್ಮೇಣ ಮಮ ಮಾಧವ ।
ಮಂತ್ರಯಿಷ್ಯೇ ತವಾರ್ಥಾಯ ನ ತು ಯೋತ್ಸ್ಯೇ ಕಥಂಚನ ।
ದುರ್ಯೋಧನಾರ್ಥೇ ಯೋತ್ಸ್ಯಾಮಿ ಸತ್ಯಮೇತದಿತಿ ಪ್ರಭೋ ॥೪೪॥

ಎಲೈ ಪ್ರಭುವೇ, ಮಾಧವನೇ, ಭೀಷ್ಮರ ಜೊತೆಯಲ್ಲಿ ಒಂದು ಒಪ್ಪಂದ ಮಾಡಿಕೊಂಡಿದ್ದೇನೆ. ನಾನು ನಿನಗಾಗಿ ಮಂತ್ರಾಲೋಚನೆಯನ್ನು ಮಾಡುವೆನು. ಆದರೆ ಎಂದೂ ನಿನ್ನ ಪರವಾಗಿ ಯುದ್ಧವನ್ನು ಮಾಡುವುದಿಲ್ಲ. ದುರ್ಯೋಧನನ ಸಲುವಾಗಿ ಯುದ್ಧವನ್ನು ಮಾಡುವೆನು. ಈ ಮಾತು ಸತ್ಯವಾದುದು ಎಂದು (ಒಪ್ಪಂದವನ್ನು ಮಾಡಿಕೊಂಡಿದ್ದೇನೆ).

ಸ ಹಿ ರಾಜ್ಯಸ್ಯ ನೋ ದಾತಾ ಮಂತ್ರಸ್ಯೈವ ಚ ಮಾಧವ ।
ತಸ್ಮಾದ್ ದೇವವ್ರತಂ ಭೂಯೋ ವಧೋಪಾಯಾರ್ಥಮಾತ್ಮನಃ ।
ಭವತಾ ಸಹಿತಾಃ ಸರ್ವೇ ಪೃಚ್ಛಾಮೋ ಮಧುಸೂದನ ॥೪೫॥

ಎಲೈ ಮಾಧವನೇ, ಭೀಷ್ಮರು ನಮಗೆ ರಾಜ್ಯವನ್ನು ಕೊಡುವುದಿಲ್ಲ. ಸೂಕ್ತವಾದ ಸಲಹೆಯನ್ನು ಮಾತ್ರ ಕೊಡುತ್ತಾರೆ. ಎಲೈ ಮಧುಸೂದನನೇ, ಆದ್ದರಿಂದ ನಾವೆಲ್ಲರೂ ಜೊತೆಯಲ್ಲಿ ಹೋಗಿ ಭೀಷ್ಮರನ್ನೇ ಅವರ ವಧೋಪಾಯವನ್ನು ಪುನಃ ಕೇಳೋಣ.

ತದ್ ವಯಂ ಸಹಿತಾ ಗತ್ವಾ ಭೀಷ್ಮಮಾಶು ನರೋತ್ತಮಮ್ ।
ರುಚಿತೇ ತವ ವಾರ್ಷ್ಣೇಯ ಮಂತ್ರಂ ಶ್ರಾವ್ಯಾಮ ಕೌರವಮ್ ॥೪೬॥

ಎಲೈ ವಾರ್ಷ್ಣೇಯನೇ, ನಾವೆಲ್ಲರೂ ಶೀಘ್ರವಾಗಿ ನರಶ್ರೇಷ್ಠರ ಬಳಿಗೆ ಹೋಗಿ ನಿನಗೆ ಒಪ್ಪಿಗೆ ಇದ್ದರೆ ಕೌರವರಾದ ಅವರನ್ನು ಮಂತ್ರವನ್ನು ಕೇಳೋಣ (ಅವರ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡೋಣ).

ಸ ವಕ್ಷ್ಯತಿ ಹಿತಂ ವಾಕ್ಯಂ ತಥ್ಯಂ ಚೈವ ಜನಾರ್ದನ ।
ಯಥಾ ಸ ವಕ್ಷ್ಯತೇ ಕೃಷ್ಣ ತಥಾ ಕರ್ತಾऽಸ್ಮಿ ಸಂಯುಗೇ ॥೪೭॥

ಎಲೈ ಜನಾರ್ದನನೇ, ಅವರು ಹಿತವೂ ಮತ್ತು ಸತ್ಯವೂ ಆದ ಮಾತನ್ನು ಆಡುವರು. ಕೃಷ್ಣನೇ, ಅವರು ಏನು ಹೇಳುವರೋ ಅದರಂತೆ ನಾನು ಯುದ್ಧದಲ್ಲಿ ಮಾಡುವವನಾಗುವೆನು.

ಸ ನೋ ಜಯಸ್ಯ ದಾತಾ ಚ ಮಂತ್ರಸ್ಯ ಚ ಧೃತವ್ರತಃ ।
ಬಾಲಾಃ ಪಿತ್ರಾ ವಿಹೀನಾಶ್ಚ ತೇನ ಸಂವರ್ಧಿತಾ ವಯಮ್ ॥೪೮॥

ವ್ರತವನ್ನು ಧರಿಸಿದ ಅವರು ನಮಗೆ ಜಯವನ್ನೂ ಮತ್ತು ಮಂತ್ರವನ್ನೂ ಕೊಡುವರು. ಬಾಲಕರೂ, ಪಿತೃಹೀನರೂ ಆದ ನಮ್ಮನ್ನು ಅವರು ಬೆಳೆಸಿದ್ದಾರೆ.

ತಂ ಚೇತ್ ಪಿತಾಮಹಂ ವೃದ್ಧಂ ಹಂತುಮಿಚ್ಛಾಮಿ ಮಾಧವ ।
ಪಿತುಃ ಪಿತರಮಿಷ್ಟಂ ವೈ ಧಿಗಸ್ತು ಕ್ಷತ್ರಜೀವಿಕಾಮ್ ॥೪೯॥

ಎಲೈ ಮಾಧವನೇ, ಅಂತಹ ತಂದೆಯ ತಂದೆಯಾದ, ನಮಗೆ ಇಷ್ಟರಾದ, ವೃದ್ಧರಾದ ಪಿತಾಮಹರನ್ನು ಕೊಲ್ಲಲು ನಾವು ಬಯಸುವುದಾದರೆ ಕ್ಷತ್ರಿಯಜೀವನಕ್ಕೆ ಧಿಕ್ಕಾರವಿರಲಿ.

ಸಂಜಯಃ

ತತೋऽಬ್ರವೀನ್ಮಹಾರಾಜ ವಾರ್ಷ್ಣೇಯಃ ಕುರುನಂದನಮ್ ।
ರೋಚತೇ ಮೇ ಮಹಾಬಾಹೋ ಸತತಂ ತವ ಭಾಷಿತಮ್ ॥೫೦॥

ಸಂಜಯ– ಎಲೈ ಮಹಾರಾಜನೇ, ಆಗ ವೃಷ್ಣಿಕುಲೋತ್ಪನ್ನನಾದ ಕೃಷ್ಣನು ಕುರುನಂದನನಾದ ಧರ್ಮರಾಜನನ್ನು ಕುರಿತು ಎಲೈ ಮಹಾಬಾಹುವೇ, ನಿನ್ನ ಮಾತುಗಳು ನನಗೆ ಯಾವಾಗಲೂ ಇಷ್ಟವಾಗುತ್ತವೆ ಎಂದು ಹೇಳಿದನು.

ದೇವವ್ರತಃ ಕೃತೀ ಭೀಷ್ಮಃ ಪ್ರೇಕ್ಷಿತೇನಾಪಿ ನಿರ್ದಹೇತ್ ।
ಗಮ್ಯತಾಂ ಸ ವಧೋಪಾಯಂ ಪ್ರಷ್ಟುಂ ಸಾಗರಗಾಸುತಃ ।
ವಕ್ತುಮರ್ಹತಿ ಸತ್ಯಂ ಸ ತ್ವಯಾ ಪೃಷ್ಟೋ ವಿಶೇಷತಃ ॥೫೧॥

ದೇವವ್ರತರಾದ ಭೀಷ್ಮರು ಕುಶಲರು. ಅವರು ತಮ್ಮ ದೃಷ್ಟಿಪಾತದಿಂದಲೂ ಸೈನ್ಯವನ್ನು ಸುಟ್ಟಾರು. ನದೀಪುತ್ರರಾದ ಅವರನ್ನು ಅವರ ವಧೋಪಾಯವನ್ನು ಕೇಳಲು ನಾವೆಲ್ಲರೂ ಹೋಗೋಣ. ವಿಶೇಷವಾಗಿ ನೀನು ಕೇಳಿದ ಮೇಲೆ ಅವರು ಸತ್ಯವನ್ನೇ ನುಡಿಯುತ್ತಾರೆ.

ಯುಧಿಷ್ಠಿರಃ

ತೇ ವಯಂ ತತ್ರ ಗಚ್ಛಾಮಃ ಪ್ರಷ್ಟುಂ ಕುರುಪಿತಾಮಹಮ್ ।
ಪ್ರಣಮ್ಯ ಶಿರಸಾ ಚೈನಂ ಮಂತ್ರಂ ಪೃಚ್ಛಾಮ ಮಾಧವ ।
ಸ ನೋ ದಾಸ್ಯತಿ ಯಂ ಮಂತ್ರಂ ತೇನ ಯೋತ್ಸ್ಯಾಮಹೇ ಪರಾನ್ ॥

ಯುಧಿಷ್ಠಿರ– ಅಂತಹ ನಾವು ಕುರುಪಿತಾಮಹರನ್ನು ಕೇಳಲು ಅವರ ಬಳಿಗೆ ಹೋಗೋಣ. ಎಲೈ ಮಾಧವನೇ, ಅವರನ್ನು ಶಿರಸಾ ನಮಸ್ಕರಿಸಿ ಮಂತ್ರವನ್ನು ಕೇಳೋಣ. ಅವರು ನಮಗೆ ಯಾವ ಸಲಹೆಯನ್ನು ಕೊಡುವರೋ ಅದರಂತೆ ನಾವು ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡುವೆವು.

ಸಂಜಯಃ

ಏವಂ ಸಮ್ಮಂತ್ರ್ಯ ವೈ ವೀರಾಃ ಪಾಂಡವಾಃ ಪಾಂಡುಪೂರ್ವಜ ।
ಜಗ್ಮುಸ್ತೇ ಸಹಿತಾಃ ಸರ್ವೇ ವಾಸುದೇವಶ್ಚ ವೀರ್ಯವಾನ್ ।
ವಿಮುಕ್ತಶಸ್ತ್ರಕವಚಾ ಭೀಷ್ಮಸ್ಯ ಸದನಂ ಪ್ರತಿ ॥೫೨॥

ಸಂಜಯ– ಎಲೈ ಪಾಂಡುವಿನ ಅಗ್ರಜನೇ, ಹೀಗೆ ಮಂತ್ರಾಲೋಚನೆಯನ್ನು ಮಾಡಿ, ವೀರರಾದ ಪಾಂಡವರೆಲ್ಲರೂ ತಮ್ಮ ಶಸ್ತ್ರ-ಕವಚಗಳನ್ನು ಕಳಚಿ, ಜೊತೆಯಲ್ಲಿ ಭೀಷ್ಮರ ಶಿಬಿರದ ಕಡೆಗೆ ಹೊರಟರು. ಪರಾಕ್ರಮಶಾಲಿಯಾದ ಕೃಷ್ಣನೂ ಹೊರಟನು.

ಪ್ರವಿಶ್ಯ ಚ ತದಾ ಭೀಷ್ಮಂ ಶಿರೋಭಿಃ ಪ್ರತಿಪೇದಿರೇ ।
ಪೂಜಯಂತೋ ಮಹಾರಾಜ ಪಾಂಡವಾ ಭರತರ್ಷಭ ।
ಪ್ರಣಮ್ಯ ಶಿರಸಾ ಚೈನಂ ಭೀಷ್ಮಂ ಶರಣಮನ್ವಯುಃ ॥೫೪॥

ಎಲೈ ಭರತಶ್ರೇಷ್ಠನೇ, ಭೀಷ್ಮರ ಶಿಬಿರವನ್ನು ಪ್ರವೇಶಿಸಿ ಅವರಿಗೆ ಶಿರಸಾ ನಮಸ್ಕಾರವನ್ನು ಮಾಡಿದರು. ಎಲೈ ಮಹಾರಾಜನೇ, ಭರತಶ್ರೇಷ್ಠನೇ, ಅವರು ಭೀಷ್ಮರನ್ನು ಗೌರವಿಸುತ್ತಾ ಶಿರಸಾ ನಮಸ್ಕರಿಸಿ ಅವರಿಗೆ ಶರಣಾಗತರಾದರು.

ತಾನುವಾಚ ಮಹಾಬಾಹುರ್ಭೀಷ್ಮಃ ಕುರುಪಿತಾಮಹಃ ।
ಸ್ವಾಗತಂ ತವ ವಾರ್ಷ್ಣೇಯ ಸ್ವಾಗತಂ ತೇ ಧನಂಜಯ ।
ಸ್ವಾಗತಂ ಧರ್ಮಪುತ್ರಾಯ ಭೀಮಾಯ ಯಮಯೋಸ್ತಥಾ ॥೫೫॥

ಕುರುಪಿತಾಮಹರೂ, ಮಹಾಬಾಹುಗಳೂ ಆದ ಭೀಷ್ಮರು ಅವರನ್ನು ಕುರಿತು ಮಾತನಾಡಿದರು. ಕೃಷ್ಣನೇ ನಿನಗೆ ಸ್ವಾಗತ. ಅರ್ಜುನನೇ ನಿನಗೆ ಸ್ವಾಗತ. ಧರ್ಮಪುತ್ರನಿಗೂ, ಭೀಮನಿಗೂ ಮತ್ತು ನಕುಲ-ಸಹದೇವರಿಗೂ ಸ್ವಾಗತ.

ಕಿಂ ಕಾರ್ಯಂ ವಃ ಕರೋಮ್ಯದ್ಯ ಯುಷ್ಮತ್ಪ್ರೀತಿವಿವರ್ಧನಮ್ ।
ಸರ್ವಾತ್ಮನಾ ಚ ಕರ್ತಾಸ್ಮಿ ಯದ್ಯಪಿ ಸ್ಯಾತ್ ಸುದುಷ್ಕರಮ್ ॥೫೬॥

ನಿಮ್ಮ ಸಂತೋಷವನ್ನು ಹೆಚ್ಚಿಸುವ ಯಾವ ಕಾರ್ಯವನ್ನು ನಾನು ಈ ದಿನ ಮಾಡಲಿ? ಅದು ಎಷ್ಟೇ ಕಷ್ಟಸಾಧ್ಯವಾದರೂ ನಾನು ಅದನ್ನು ಸರ್ವಪ್ರಯತ್ನದಿಂದಲೂ ಮಾಡುವೆನು (ಎಂದು ಹೇಳಿದರು).

ತಥಾ ಬ್ರುವಾಣಂ ಗಾಂಗೇಯಂ ಪ್ರೀತಿಯುಕ್ತಂ ಪುನಃ ಪುನಃ ।
ಉವಾಚ ವಾಕ್ಯಂ ದೀನಾತ್ಮಾ ಧರ್ಮಪುತ್ರೋ ಯುಧಿಷ್ಠಿರಃ ॥೫೭॥

ಹಾಗೆ ಪುನಃ ಪುನಃ ಪ್ರೀತಿಯಿಂದ ಮಾತನಾಡುತ್ತಿದ್ದ ಭೀಷ್ಮರನ್ನು ಕುರಿತು ಧರ್ಮಪುತ್ರನಾದ ಯುಧಿಷ್ಠಿರನು ದೈನ್ಯದಿಂದ ಕೂಡಿದ ಮನಸ್ಸುಳ್ಳವನಾಗಿ ಮಾತನಾಡಿದನು.

ಕಥಂ ಜಯೇಮ ಧರ್ಮಜ್ಞ ಕಥಂ ರಾಜ್ಯಂ ಲಭೇಮಹಿ ।
ಪ್ರಜಾನಾಂ ಸಂಕ್ಷಯೋ ನ ಸ್ಯಾತ್ ಕಥಂ ತನ್ಮೇ ವದಾಭಿಭೋ ॥೫೮॥

ಎಲೈ ಧರ್ಮಜ್ಞರೇ, ಜಯಶೀಲರೇ, ನಾವು ಹೇಗೆ ಜಯವನ್ನು ಪಡೆದು ರಾಜ್ಯವನ್ನು ಹೊಂದೇವು? ಹೇಗೆ ಮಾಡಿದರೆ ಪ್ರಜೆಗಳ ವಿನಾಶವು ಉಂಟಾಗಲಾರದು ಎಂಬುದನ್ನು ನನಗೆ ಹೇಳಿ.

ಭವಾನ್ ಹಿ ನೋ ವಧೋಪಾಯಂ ಬ್ರವೀತು ಸ್ವಯಮಾತ್ಮನಃ ।
ಭವಂತಂ ಸಮರೇ ರಾಜನ್ ವಿಷಹೇಮ ಕಥಂ ವಯಮ್ ॥೫೯॥

ನಿಮ್ಮ ವಧೋಪಾಯವನ್ನು ಸ್ವತಃ ನೀವೇ ನಮಗೆ ಹೇಳಿ. ಎಲೈ ರಾಜರೇ, ಯುದ್ಧದಲ್ಲಿ ನಾವು ನಿಮ್ಮನ್ನು ತಡೆಯುವ ಬಗೆಯು ಹೇಗೆ?

ನ ಹಿ ತೇ ಸೂಕ್ಷ್ಮಮಪ್ಯಸ್ತಿ ರಂಧ್ರಂ ಕುರುಪಿತಾಮಹ ।
ಮಂಡಲೇನೈವ ಧನುಷಾ ಸದಾ ದೃಶ್ಯೋಽಸಿ ಸಂಯುಗೇ ॥೬೦॥

ಎಲೈ ಕುರುಪಿತಾಮಹರೇ, ನೀವು ನಮಗೆ ಸೂಕ್ಷ್ಮವಾದ ಒಂದು ಸಣ್ಣ ಅವಕಾಶವನ್ನೂ ಕೊಡುತ್ತಿಲ್ಲ. ಯುದ್ಧದಲ್ಲಿ ನೀವು ಯಾವಾಗಲೂ ಮಂಡಲಾಕಾರವಾದ ಧನುಸ್ಸಿನ ಜೊತೆಯಲ್ಲಿಯೇ ಕಾಣುತ್ತೀರಿ.

ನಾದದಾನಂ ಸಂದಧಾನಂ ವಿಕರ್ಷಂತಂ ಧನುರ್ಜ್ಯ ಚ ।
ಪಶ್ಯಾಮಸ್ತ್ವಾ ಮಹಾಬಾಹೋ ರಥೇ ಸೂರ್ಯಮಿವ ಚ್ಯುತಮ್ ॥೬೧॥

ಎಲೈ ಮಹಾಬಾಹುವೇ, ರಥದಲ್ಲಿ ಸೂರ್ಯನಂತೆ ಇರುವ ನೀವು ಬಾಣವನ್ನು ತೆಗೆದುಕೊಳ್ಳುವುದನ್ನಾಗಲೀ, ಹೂಡುವುದನ್ನಾಗಲೀ, ಬಿಲ್ಲನ್ನು ಎಳೆಯುವುದನ್ನಾಗಲೀ ನಾವು ನೋಡುತ್ತಿಲ್ಲ.

ನರಾಶ್ವರಥನಾಗಾನಾಂ ಹಂತಾರಂ ಪರವೀರಹನ್ ।
ಕ ಇವೋತ್ಸಹತೇ ಹಂತುಂ ತ್ವಾಂ ಪುಮಾನ್ ಭರತರ್ಷಭ ॥೬೨॥

ಎಲೈ ಶತ್ರುವೀರಘಾತಕರೇ, ಪುರುಷಶ್ರೇಷ್ಠರೇ, ನರ-ಗಜಾಶ್ವ-ರಥಗಳನ್ನು ಕೊಲ್ಲುವ ನಿಮ್ಮನ್ನು ಕೊಲ್ಲಲು ಯಾವ ಪುರುಷನು ಸಾಹಸವನ್ನು ಮಾಡುತ್ತಾನೆ?

ವರ್ಷತಾ ಶರವರ್ಷಾಣಿ ಮಹಾಂತಿ ಪುರುಷೋತ್ತಮ ।
ಕ್ಷಯಂ ನೀತಾ ಹಿ ಪೃತನಾ ಭವತಾ ಮಹತೀ ಮಮ ॥೬೩॥

ಎಲೈ ಪುರುಷಶ್ರೇಷ್ಠರೇ, ದೊಡ್ಡ ಬಾಣಗಳ ಮಳೆಯನ್ನು ಕರೆಯುವ ನಿಮ್ಮಿಂದ ನನ್ನ ದೊಡ್ಡ ಸೈನ್ಯವು ವಿನಾಶವನ್ನು ಹೊಂದಿದೆ.

ಯಥಾ ಯುಧಿ ಜಯೇಯಂ ತ್ವಾಂ ಯಥಾ ರಾಜ್ಯಂ ಭವೇನ್ಮಮ ।
ಭವೇತ್ ಸೈನ್ಯಸ್ಯ ವಾ ಶಾಂತಿಸ್ತನ್ಮೇ ಬ್ರೂಹಿ ಪಿತಾಮಹ ॥೬೪॥

ಎಲೈ ಪಿತಾಮಹರೇ, ನಾವು ಹೇಗೆ ನಿಮ್ಮನ್ನು ಯುದ್ಧದಲ್ಲಿ ಜಯಿಸಿಯೇವು? ನನಗೆ ಹೇಗೆ ರಾಜ್ಯವು ದೊರಕೀತು? ಸೈನ್ಯಕ್ಕೆ ಹೇಗೆ ಶಾಂತಿಯುಂಟಾದೀತು? ಎಂಬುದನ್ನು ನನಗೆ ಹೇಳಿ (ಎಂದು ಹೇಳಿದನು).

ತತೋऽಬ್ರವೀಚ್ಛಂತನವಃ ಪಾಂಡವಾನ್ ಪಾಂಡುಪೂರ್ವಜ ।
ನ ಕಥಂಚನ ಕೌಂತೇಯ ಮಯಿ ಜೀವತಿ ಸಂಯುಗೇ ।
ಯುಷ್ಮಾಸು ದೃಶ್ಯತೇ ವೃದ್ಧಿಃ ಸತ್ಯಮೇತದ್ ಬ್ರವೀಮಿ ವಃ । ॥೬೫॥

ಎಲೈ ಪಾಂಡುವಿನ ಅಣ್ಣನೇ, ಆಗ ಶಂತನು ಪುತ್ರರಾದ ಭೀಷ್ಮರು ಪಾಂಡವರನ್ನು ಕುರಿತು ಮಾತನಾಡಿದರು. ಎಲೈ ಕೌಂತೇಯನೇ, ನಾನು ಜೀವಿಸಿರುವವರೆಗೆ ಯುದ್ಧದಲ್ಲಿ ಯಾವ ರೀತಿಯಿಂದಲೂ ನಿಮಗೆ ಅಭ್ಯುದ್ಧಿಯುಂಟಾಗುವುದಿಲ್ಲ. ಈ ಮಾತನ್ನು ನಿಮಗೆ ಸತ್ಯವಾಗಿ ಹೇಳುತ್ತಿದ್ದೇನೆ.

ನಿರ್ಜಿತೇ ಮಯಿ ಯುದ್ಧೇ ತು ಧ್ರುವಂ ಜೇಷ್ಯಥ ಕೌರವಾನ್ ।
ಕ್ಷಿಪ್ರಂ ಮಯಿ ಪ್ರಹರತ ಯದೀಚ್ಛಥ ರಣೇ ಜಯಮ್ ।
ಅನುಜಾನಾಮಿ ವಃ ಪಾರ್ಥಾಃ ಪ್ರಹರಧ್ವಂ ಯಥಾಸುಖಮ್ ॥೬೬॥

ನಾನು ಯುದ್ಧದಲ್ಲಿ ಪರಾಜಿತನಾದರೆ ನೀವು ಖಂಡಿತವಾಗಿ ಕೌರವರನ್ನು ಗೆಲ್ಲುವಿರಿ. ಯುದ್ಧದಲ್ಲಿ ಜಯವನ್ನು ಅಪೇಕ್ಷಿಸುವುದಾದರೆ ನೀವು ನನ್ನ ಮೇಲೆ ಪ್ರಹಾರವನ್ನು ಮಾಡಿ. ಎಲೈ ಪಾಂಡವರೇ, ನಿಮಗೆ ಅನುಮತಿಯನ್ನು ಕೊಟ್ಟಿದ್ದೇನೆ. ಯಾವ ಸಂಕೋಚವೂ ಇಲ್ಲದೆ ಪ್ರಹಾರವನ್ನು ಮಾಡಿ.

ಏವಂ ಹಿ ಸುಕೃತಂ ಮನ್ಯೇ ಭವತಾಂ ವಿದಿತೋ ಹ್ಯಹಮ್ ।
ಹತೇ ಮಯಿ ಹತಂ ಸರ್ವಂ ತಸ್ಮಾದೇವಂ ವಿಧೀಯತಾಮ್ ॥೬೭॥

ಹೀಗೆ ಮಾಡಿದರೆ ಒಳ್ಳೆಯದಾಗುತ್ತದೆ ಎಂದು ನಾನು ಧಾಮಿಸುತ್ತೇನೆ. ನೀವು ನನ್ನನ್ನು ಚೆನ್ನಾಗಿ ತಿಳಿದಿದ್ದೀರಷ್ಟೆ? ನಾನು ಹತನಾದರೆ ಕೌರವ ಸೈನ್ಯವೆಲ್ಲವೂ ಹತವಾಗುತ್ತದೆ. ಆದ್ದರಿಂದ ಹೀಗೆ ಮಾಡಿ.

ಯುಧಿಷ್ಠಿರಃ

ಬ್ರೂಹಿ ತಸ್ಮಾದುಪಾಯಂ ನೋ ಯಥಾ ಯುದ್ಧೇ ಜಯೇಮಹಿ ।
ಭವಂತಂ ಸಮರೇ ಕ್ರುದ್ಧಂ ದಂಡಪಾಣಮಿವಾಂತಕಮ್ ॥೬೮॥

ಯುಧಿಷ್ಠಿರ– ಹಾಗಾದರೆ ಯುದ್ಧದಲ್ಲಿ ಕ್ರುದ್ಧರಾಗಿ ದಂಡಹಸ್ತನಾದ ಯಮನಂತೆ ಇರುವ ನಿಮ್ಮನ್ನು ಕೊಲ್ಲುವ ಉಪಾಯವನ್ನು ನೀವೇ ಹೇಳಿ.

ಶಕ್ಯೋ ವಜ್ರಧರೋ ಜೇತುಂ ವರುಣೋಽಥ ಯಮಸ್ತಥಾ ।
ನ ಭವಾನ್ ಸಮರೇ ಶಕ್ಯಃ ಸೇಂದ್ರೈರಪಿ ಸುರಾಸುರೈಃ ॥೬೯॥

ವಜ್ರಧರನಾದ ಇಂದ್ರನನ್ನು ಯುದ್ಧದಲ್ಲಿ ಗೆಲ್ಲಲು ಸಾಧ್ಯ. ವರುಣನನ್ನು ಅಥವಾ ಯಮನನ್ನು ಗೆಲ್ಲಬಹುದು. ಆದರೆ ಇಂದ್ರಸಹಿತರಾದ ಸುರಾಸುರರಿಂದಲೂ ಯುದ್ಧದಲ್ಲಿ ನಿಮ್ಮನ್ನು ಗೆಲ್ಲಲು ಸಾಧ್ಯವಿಲ್ಲ.

ಭೀಷ್ಮಃ

ಸತ್ಯಮೇತನ್ಮಹಾಬಾಹೋ ಯಥಾ ವದಸಿ ಪಾಂಡವ ।
ನಾಹಂ ಶಕ್ಯೋ ರಣೇ ಜೇತುಂ ಸೇಂದ್ರೈರಪಿ ಸುರಾಸುರೈಃ ॥೭೦॥

ಆತ್ತಶಸ್ತ್ರೋ ರಣೇ ಯತ್ತೋ ಗೃಹೀತವರಕಾರ್ಮುಕಃ ।
ನ್ಯಸ್ತಶಸ್ತ್ರಂ ತು ಮಾಂ ರಾಜನ್ ಹನ್ಯುರ್ಯುಧಿ ಮಹಾರಥಾಃ ॥೭೧॥

ಭೀಷ್ಮ– ಎಲೈ ಮಹಾಬಾಹುವೇ, ಪಾಂಡವನೇ, ನೀನು ಹೇಳಿದಂತೆಯೇ ಎಲ್ಲವೂ ಸತ್ಯವೇ ಸರಿ. ಯುದ್ಧದಲ್ಲಿ ಶಸ್ತ್ರಗಳನ್ನು ಧರಿಸಿ, ಧನುಸ್ಸನ್ನು ಹಿಡಿದ ನನ್ನನ್ನು ಇಂದ್ರನಿಂದ ಸಹಿತರಾದ ಸುರಾಸುರರೂ ಸಹ ಗೆಲ್ಲಲಾರರು. ರಾಜನೇ, ಆದರೆ ನಾನು ಶಸ್ತ್ರಾಸ್ತ್ರವನ್ನು ಮಾಡಿದರೆ ಮಹಾರಥರು ಯುದ್ಧದಲ್ಲಿ ನನ್ನನ್ನು ಕೊಲ್ಲಬಹುದು.

ನಿಕ್ಷಿಪ್ತಶಸ್ತ್ರೇ ಪತಿತೇ ವಿಮುಕ್ತಕವಚಧ್ವಜೇ ।
ದ್ರವಮಾಣೇ ಚ ಭೀತೇ ಚ ತವಾಸ್ಮೀತಿ ಚ ವಾದಿನಿ ॥೭೨॥

ಸ್ತ್ರೀಜಿತೇ ಸ್ತ್ರೀಪ್ರಧಾನೇ ಚ ಸ್ತ್ರೀಪ್ರಧಾಯಿನಿ ಧರ್ಮಜ ।
ಸ್ತ್ರಿಯಾಂ ಸ್ತ್ರೀನಾಮಧೇಯೇ ಚ ಏಕಲೇ ಚೈಕಪುತ್ರಕೇ ।
ಅಪ್ರಸೂತೇ ಚ ಷಂಡೇನ ನ ಯುದ್ಧಂ ರೋಚತೇ ಮಮ ॥೭೩॥

ಎಲೈ ಧರ್ಮರಾಜನೇ, ಶಸ್ತ್ರಸಂನ್ಯಾಸ ಮಾಡಿದವನ, ಬಿದ್ದವನ, ಕವಚಧ್ವಜವನ್ನು ಕಳೆದುಕೊಂಡವನ, ಓಡುವವನ, ಭಯಗೊಂಡವನ, ನಿನ್ನ ದಾಸನಾಗಿದ್ದೇನೆ ಎಂದು ಹೇಳುವವನ, ಸ್ತ್ರೀಜಿತನಾದವನ, ಸ್ತ್ರೀಗೆ ವಶನಾದವನ, ವನಿತೆಯ, ಸ್ತ್ರೀ ನಾಮಧೇಯವನ್ನು ಧರಿಸಿದವನ, ಹೀನಾಂಗನ, ಏಕಮಾತ್ರ ಪುತ್ರನ, ಇನ್ನೂ ಮಕ್ಕಳಿಲ್ಲದವನ ಮತ್ತು ನಪುಂಸಕನ ಜೊತೆಯಲ್ಲಿ ನನಗೆ ಯುದ್ಧವು ಇಷ್ಟವಾಗುವುದಿಲ್ಲ.

ಇಮಂ ಚ ಶೃಣು ಮೇ ಪಾರ್ಥ ಸಂಕಲ್ಪಂ ಪೂರ್ವಚಿಂತಿತಮ್ ।
ಅಮಂಗಲ್ಯಧ್ವಜಂ ದೃಷ್ಟ್ವಾ ನ ಯುಧ್ಯೇಯಂ ಕಥಂಚನ ॥೭೪॥

ಎಲೈ ಪಾರ್ಥನೇ, ನಾನು ಹಿಂದೆ ಮಾಡಿದ ನನ್ನ ಈ ಸಂಕಲ್ಪವನ್ನು ಕೇಳು. ಅಮಂಗಳ ಧ್ವಜವನ್ನು ಎಂದರೆ ಸ್ತ್ರೀತ್ವ, ಸ್ತ್ರೀ ನಾಮಧೇಯ, ನಪುಂಸಕತ್ವಾದಿಗಳನ್ನು ಹೊಂದಿದವನನ್ನು ನೋಡಿದರೆ ನಾನು ಯಾವ ಕಾರಣದಿಂದಲೂ ಯುದ್ಧವನ್ನು ಮಾಡಲಾರೆ.

ಯ ಏಷ ದ್ರೌಪದೋ ರಾಜಂಸ್ತವ ಸೈನ್ಯೇ ಮಹಾರಥಃ ।
ಶಿಖಂಡೀ ಸಮರಾಕಾಂಕ್ಷೀ ಶೂರಶ್ಚ ಸಮಿತಿಂಜಯಃ ॥೭೫॥

ಯಥಾಭವಚ್ಚ ಸ್ತ್ರೀ ಪೂರ್ವಂ ಪಶ್ಚಾತ್ ಪುಂಸ್ತ್ವಮುಪಾಗತಃ ।
ಜಾನಂತಿ ಚ ಭವಂತೋಽಪಿ ಸರ್ವಮೇತದ್ ಯಥಾತಥಮ್ ॥೭೬॥

ಎಲೈ ರಾಜನೇ, ನಿನ್ನ ಸೈನ್ಯದಲ್ಲಿ ಇರುವ ದ್ರುಪದನ ಪುತ್ರನಾದ, ಮಹಾರಥನಾದ ಯುದ್ಧಪ್ರಿಯನೂ, ಶೂರನೂ ಮತ್ತು ಶತ್ರುಗಳನ್ನು ಜಯಿಸುವವನೂ ಆದ ಶಿಖಂಡಿಯು ಮೊದಲು ಹೇಗೆ ಸ್ತ್ರೀಯಾಗಿ ಜನಿಸಿದ, ಅನಂತರ ಹೇಗೆ ಪುರುಷತ್ವವನ್ನು ಪಡೆದ ಎಂಬ ಎಲ್ಲಾ ವಿಷಯಗಳನ್ನೂ ನೀವೂ ಸಹ ಚೆನ್ನಾಗಿ ತಿಳಿದಿದ್ದೀರಿ.

ಅರ್ಜುನಃ ಸಮರೇ ಶೂರಃ ಪುರಸ್ಕೃತ್ಯ ಶಿಖಂಡಿನಮ್ ।
ಮಾಮೇವ ವಿಶಿಖೈಸ್ತೂರ್ಣಮಭಿದ್ರವತು ದಂಶಿತಃ ॥೭೭॥

ಸಮರಶೂರನಾದ ಅರ್ಜುನನು ಶಿಖಂಡಿಯನ್ನು ಮುಂದೆ ಮಾಡಿಕೊಂಡು ಶಸ್ತ್ರಾದಿಗಳನ್ನು ಧರಿಸಿ ನನ್ನ ಮೇಲೆಯೇ ಬಾಣಗಳಿಂದ ಶೀಘ್ರವಾಗಿ ಪ್ರಹರಿಸಲಿ.

ಅಮಂಗಲ್ಯಧ್ವಜೇ ತಸ್ಮಿನ್ ಸ್ತ್ರೀಪೂರ್ವೇ ಚ ವಿಶೇಷತಃ ।
ನ ಪ್ರಹರ್ತುಮಭೀಪ್ಸಾಮಿ ಗೃಹೀತೇಷುಂ ಕಥಂಚನ ॥೭೮॥

ಸ್ತ್ರೀ ನಾಮಧೇಯನು ಅಥವಾ ನಪುಂಸಕನು ಅಥವಾ ಮೊದಲು ಸ್ತ್ರೀಯಾಗಿದ್ದವನು ಕೈಯಲ್ಲಿ ಬಾಣವನ್ನು ಹಿಡಿದುದನ್ನು ನೋಡಿದರೆ ನಾನು ಅವನನ್ನು ಹೊಡೆಯಲು ಬಯಸುವುದಿಲ್ಲ.

ತದಂತರಂ ಸಮಾಸಾದ್ಯ ಪಾಂಡವೋ ಮಾಂ ಧನಂಜಯಃ ।
ಶರೈರ್ಘಾತಯತು ಕ್ಷಿಪ್ರಂ ಸಮಂತಾದ್ ಭರತರ್ಷಭ ॥೭೯॥

ಎಲೈ ಭರತಶ್ರೇಷ್ಠನೇ, ಆ ಅವಕಾಶವನ್ನು ಪಡೆದು ಅರ್ಜುನನು ಶೀಘ್ರವಾಗಿ ನನ್ನ ಮೇಲೆ ಎಲ್ಲ ಕಡೆಗಳಿಂದಲೂ ಪ್ರಹಾರ ಮಾಡಲಿ.

ನ ತಂ ಪಶ್ಯಾಮಿ ಲೋಕೇಷು ಯೋ ಮಾಂ ಹನ್ಯಾತ್ ಸಮುದ್ಯತಮ್।
ಋತೇ ಕೃಷ್ಣಾನ್ನಹಾಭಾಗಾತ್ ಪಾಂಡವಾದ್ ವಾ ಧನಂಜಯಾತ್॥೮೦॥

ನಾನು ಯುದ್ಧೋದ್ಯುಕ್ತನಾದರೆ ಮಹಾನುಭಾವನಾದ ಕೃಷ್ಣನನ್ನು ಬಿಟ್ಟು ಮತ್ತು ಪಾಂಡುಪುತ್ರನಾದ ಧನಂಜಯನನ್ನು ಬಿಟ್ಟು ನನ್ನನ್ನು ಕೊಲ್ಲುವ ಸಾಮರ್ಥ್ಯವಿರುವ ಬೇರೆ ಯಾವನನ್ನೂ ನಾನು ಲೋಕಗಳಲ್ಲಿ ಕಾಣುವುದಿಲ್ಲ.

ಏಷ ತಸ್ಮಾತ್ ಪುರೋಧಾಯ ಕಂಚಿದನ್ಯಂ ಮಮಾಗ್ರತಃ ।
ಮಾಂ ಪಾತಯತು ಬೀಭತ್ಸುರೇವಂ ತೇ ವಿಜಯೋ ಭವೇತ್ ॥೮೧॥

ಆದ್ದರಿಂದ ಅರ್ಜುನನು ಬೇರೆ ಅಂತಹ ಯಾವನನ್ನಾದರೂ ನನ್ನ ಮುಂದೆ ಇಟ್ಟು ನನ್ನನ್ನು ಕೆಡವಲಿ. ಹಾಗೆ ಮಾಡಿದರೆ ನಿಮಗೆ ಜಯವುಂಟಾದೀತು.

ಏತತ್ಕುರುಷ್ವ ಕೌಂತೇಯ ಯಥೋಕ್ತಂ ವಚನಂ ಮಮ ।
ತತೋ ಜೇಷ್ಯಸಿ ಸಂಗ್ರಾಮೇ ಧಾರ್ತರಾಷ್ಟ್ರಾನ್ ಸಮಾಗತಾನ್ ॥೮೨॥

ಎಲೈ ಕೌಂತೇಯನೇ, ನಾನು ಹೇಳಿದಂತೆ ನೀನು ಇದನ್ನು ಮಾಡು. ಅನಂತರ ಯುದ್ಧದಲ್ಲಿ ಪ್ರಾಪ್ತರಾದ ದುರ್ಯೋಧನಾದಿಗಳನ್ನು ಗೆಲ್ಲುವಿ.

ಸಂಜಯಃ

ತೇಽನುಜ್ಞಾತಾಸ್ತತಃ ಪಾರ್ಥಾ ಜಗ್ಮುಃ ಸ್ವಶಿಬಿರಂ ಪ್ರತಿ ।
ಅಭಿವಾದ್ಯ ಮಹಾತ್ಮಾನಂ ಭೀಷ್ಮಂ ಕುರುಪಿತಾಮಹಮ್ ॥೮೩॥

ಸಂಜಯ– ಹೀಗೆ ಭೀಷ್ಮರ ಅನುಮತಿಯನ್ನು ಪಡೆದ ಪಾಂಡವರು ಕುರುಪಿತಾಮಹರಾದ ಆ ಮಹಾತ್ಮರಿಗೆ ನಮಸ್ಕಾರವನ್ನು ಮಾಡಿ ತಮ್ಮ ಶಿಬಿರಕ್ಕೆ ಹೋದರು.

ತಥೋಕ್ತವತಿ ಗಾಂಗೇಯೇ ಪರಲೋಕಾಯ ದೀಕ್ಷಿತೇ ।
ಅರ್ಜುನೋ ದುಃಖಸಂತಪ್ತಃ ಸವ್ರೀಡಮಿದಮಬ್ರವೀತ್ ॥೮೪॥

ಗಂಗಾಪುತ್ರರಾದ ಭೀಷ್ಮರು ತಮ್ಮ ಪರಲೋಕ ಯಾತ್ರೆಯನ್ನು ನಿಶ್ಚಯಿಸಿ ಹಾಗೆ ಹೇಳುತ್ತಿರಲು ದುಃಖತಪ್ತನಾದ ಅರ್ಜುನನು ನಾಚಿಕೆಯಿಂದ ಹೀಗೆ ಮಾತನಾಡಿದನು.

ಗುರುಣಾ ಕುಲವೃದ್ಧೇನ ಕೃತಪ್ರಜ್ಞೇನ ಧೀಮತಾ ।
ಪಿತಾಮಹೇನ ಸಂಗ್ರಾಮೇ ಕಥಂ ಯೋತ್ಸ್ಯಾಮಿ ಮಾಧವ ॥೮೫॥

ಎಲೈ ಮಾಧವನೇ, ಗುರುಗಳೂ, ಕುಲವೃದ್ಧರೂ, ಶಾಸ್ತ್ರಸಂಪನ್ನರೂ, ಮೇಧಾವಿಗಳೂ ಆದ ಪಿತಾಮಹರ ಜೊತೆಯಲ್ಲಿ ಹೇಗೆ ಯುದ್ಧವನ್ನು ಮಾಡಲಿ?

ಕ್ರೀಡತಾ ಹಿ ಮಯಾ ಬಾಲ್ಯೇ ವಾಸುದೇವ ಮಹಾಮನಾಃ ।
ಪಾಂಸುರೂಪಿತಗಾತ್ರೇಣ ಮಹಾತ್ಮಾ ಪರುಷೀಕೃತಃ ॥೮೬॥

ಎಲೈ ವಾಸುದೇವನೇ, ನಾನು ಬಾಲ್ಯದಲ್ಲಿ ಶರೀರಕ್ಕೆಲ್ಲಾ ಧೂಳನ್ನು ಲೇಪಿಸಿಕೊಂಡು ಆಟವಾಡುತ್ತಾ ಧೈರ್ಯಶಾಲಿಗಳೂ ಮತ್ತು ಮಹಾತ್ಮರೂ ಆದ ಅವರನ್ನು ಮಲಿನಗೊಳಿಸಿದ್ದೇನೆ.

ಯಸ್ಯಾಹಮಧಿರುಹ್ಯಾಂಕಂ ಬಾಲಃ ಕಿಲ ಗದಾಗ್ರಜ ।
ಪ್ರತೇತ್ಯವೋಚಂ ಪಿತರಂ ಪಿತುಃ ಪಾಂಡೋರ್ಮಹಾತ್ಮನಃ ॥೮೭॥

ನಾಹಂ ತಾತಸ್ತವ ಪಿತುಸ್ತಾತೋಽಸ್ಮಿ ತವ ಭಾರತ ।
ಇತಿ ಮಾಮಬ್ರವೀದ್ ಬಾಲ್ಯೇ ಯಃ ಸ ವಧ್ಯಃ ಕಥಂ ಮಯಾ ॥೮೮॥

ಎಲೈ ಗದಾಗ್ರಜನೇ, ಮಹಾತ್ಮರಾದ ಪಾಂಡುವಿನ ತಂದೆಯಾದ ಅವರ ತೊಡೆಯನ್ನೇರಿ ಬಾಲಕನಾಗಿದ್ದಾಗ ನಾನು ಅಪ್ಪ ಎಂದು ಕರೆದಾಗ ನನ್ನನ್ನು ಕುರಿತು ಎಲೈ ಭಾರತನೇ, ನಾನು ನಿನ್ನ ತಂದೆಯಲ್ಲ, ನಿನ್ನ ತಂದೆಯ ತಂದೆ ಎಂದು ಯಾರು ಹೇಳಿದರೋ ಅವರನ್ನು ಬಾಣಗಳಿಂದ ಹೇಗೆ ಹೊಡೆಯಲಿ?

ಕಾಮಂ ವಧ್ಯತು ಮೇ ಸೈನ್ಯಂ ನಾಹಂ ಯೋತ್ಸ್ಯೇ ಮಹಾತ್ಮನಾ ।
ಜಯೋ ವಾಸ್ತು ವಧೋ ವಾ ಮೇ ಕಥಂ ವಾ ಕೃಷ್ಣ ಮನ್ಯಸೇ ॥೮೯॥

ಕೌರವ ಸೈನ್ಯವು ನನಗೆ ಬೇಕಾದಂತೆ ಹೊಡೆಯಲಿ. ನಾನು ಮಹಾತ್ಮರಾದ ಭೀಷ್ಮರ ಜೊತೆಯಲ್ಲಿ ಯುದ್ಧವನ್ನು ಮಾಡಲಾರೆ. ಜಯವಾಗಲಿ ಅಥವಾ ನನ್ನ ವಧೆಯಾಗಲಿ, ಕೃಷ್ಣನೇ, ನಿನ್ನ ಅಭಿಪ್ರಾಯವೇನು?

ಶ್ರೀಕೃಷ್ಣಃ

ಪ್ರತಿಜ್ಞಾಯ ವಧಂ ಜಿಷ್ಣೋ ಪುರಾ ಭೀಷ್ಮಸ್ಯ ಸಂಯುಗೇ ।
ಕ್ಷತ್ರಧರ್ಮೇ ಸ್ಥಿತಃ ಪಾರ್ಥ ಕಥಂ ನೈನಂ ಹನಿಷ್ಯಸಿ ॥೯೦॥

ಶ್ರೀಕೃಷ್ಣ- ಎಲೈ ಜಿಷ್ಣುವೇ, ಯುದ್ಧದಲ್ಲಿ ಭೀಷ್ಮರನ್ನು ಕೊಲ್ಲುವೆನು ಎಂದು ಹಿಂದೆ ಪ್ರತಿಜ್ಞೆಯನ್ನು ಮಾಡಿ, ಕ್ಷತ್ರಿಯಧರ್ಮದಲ್ಲಿ ನಿರತನಾದ ನೀನು ಅವರನ್ನು ಹೇಗೆ ಕೊಲ್ಲದೇ ಇರಲು ಸಾಧ್ಯ ?

ಪಾತಯೈನಂ ರಥಾತ್ ಪಾರ್ಥ ವಜ್ರಾಹತಮಿವ ದ್ರುಮಮ್ ।
ನಾಹತ್ವಾ ಯುಧಿ ಗಾಂಗೇಯಂ ವಿಜಯಸ್ತೇ ಭವಿಷ್ಯತಿ ॥೯೧॥

ಎಲೈ ಪಾರ್ಥನೇ, ವಜ್ರದಿಂದ ಹೊಡೆಯಲ್ಪಟ್ಟ ವೃತ್ರನಂತೆ ಅವರನ್ನು ರಥದಿಂದ ಬೀಳಿಸು. ಯುದ್ಧದಲ್ಲಿ ಗಂಗಾಪುತ್ರರನ್ನು ಬೀಳಿಸದೆ ನಿನಗೆ ಜಯವು ಉಂಟಾಗುವುದಿಲ್ಲ.

ದಿಷ್ಟಮೇತತ್ ಪುರಾ ದೇವೈರ್ಭವಿಷ್ಯತ್ಯವಶಸ್ಯ ತೇ ।
ಹಂತಾ ಭೀಷ್ಮಸ್ಯ ಪೂರ್ವೇಂದ್ರ ಇತಿ ತನ್ನ ತದನ್ಯಥಾ ॥೯೨॥

ಇದನ್ನು ದೇವತೆಗಳು ಹಿಂದೆಯೇ ಸಂಕಲ್ಪಿಸಿದ್ದಾರೆ. ನೀನು ಅವಶನಾಗಿಯಾದರೂ ಭೀಷ್ಮರನ್ನು ಕೊಲ್ಲುವಿ. ಇಂದ್ರಪುತ್ರನೇ, ಇದು ಬೇರೆ ರೀತಿಯಲ್ಲಿ ಆಗಲು ಸಾಧ್ಯವಿಲ್ಲ.

ನ ಹಿ ಭೀಷ್ಮಂ ದುರಾಧರ್ಷಂ ವ್ಯಾತ್ತಾನನಮಿವಾಂತಕಮ್ ।
ತ್ವದನ್ಯಃ ಶಕ್ನುಯಾದ್ ಹಂತುಮಪಿ ವಜ್ರಧರಃ ಸ್ವಯಮ್ ॥೯೩॥

ಸೋಲಿಸಲು ಅಸಾಧ್ಯರಾದ, ಬಾಯನ್ನು ತೆರೆದ ಮೃತ್ಯುವಾದ ಭೀಷ್ಮರನ್ನು ನೀನಲ್ಲದೆ ವಜ್ರಪಾಣಿಯಾದ ಇಂದ್ರನು ಸ್ವತಃ ಬಂದರೂ ಕೊಲ್ಲಲಾರ.

ಜಹಿ ಭೀಷ್ಮಂ ಮಹಾಬಾಹೋ ಶೃಣು ಚೇದಂ ವಚೋ ಮಮ ।
ಯಥೋವಾಚ ಪುರಾ ಶಕ್ರಂ ಮಹಾಬುದ್ಧಿರ್ಬೃಹಸ್ಪತಿಃ ॥೯೪॥

ಎಲೈ ಮಹಾಬಾಹುವೇ, ಹಿಂದೆ ಮಹಾಬುದ್ಧಿಯುಳ್ಳ ಬೃಹಸ್ಪತಿಯು ಇಂದ್ರನನ್ನು ಕುರಿತು ಹೇಳಿದಂತೆ ಭೀಷ್ಮರನ್ನು ಗೆಲ್ಲುವವನಾಗು. ಈ ನನ್ನ ಮಾತನ್ನು ಕೇಳು.

ಜ್ಯಾಯಾಂಸಮಪಿ ಚೇಚ್ಛಕ್ರ ಗುಣೈರಪಿ ಸಮನ್ವಿತಮ್ ।
ಆತತಾಯಿನಮಾಮಂತ್ರ್ಯ ಹನ್ಯಾದ್ ಘಾತಕಮಾಗತಮ್ ॥೯೫॥

ಎಲೈ ಇಂದ್ರನೇ, ಗುಣಗಳಿಂದ ಕೂಡಿದ ಶ್ರೇಷ್ಠನಾದವನು ಕೈಯಲ್ಲಿ ಶಸ್ತ್ರವನ್ನು ಹಿಡಿದು ಕೊಲ್ಲಲು ಬಂದಾಗ ಅವನನ್ನೂ ಕೊಲ್ಲಬೇಕು (ಎಂದು ಬೃಹಸ್ಪತಿಗಳು ಹೇಳಿದರು).

ಶಾಶ್ವತೋಽಯಂ ಮತೋ ಧರ್ಮಃ ಕ್ಷತ್ರಿಯಾಣಾಂ ಧನಂಜಯ ।
ಯೋದ್ಧವ್ಯಂ ರಕ್ಷಿತವ್ಯಂ ಚ ಯಷ್ಟವ್ಯಂ ಚಾನಸೂಯುಭಿಃ ॥೯೬॥

ಎಲೈ ಧನಂಜಯನೇ, ಇದು ಕ್ಷತ್ರಿಯರ ಶಾಶ್ವತವಾದ ಧರ್ಮ. ಅವರು ಯಾವ ಅಸೂಯೆಯೂ ಇಲ್ಲದೆ ಯುದ್ಧವನ್ನು ಮಾಡಬೇಕು, ಪ್ರಜೆಗಳನ್ನು ರಕ್ಷಿಸಬೇಕು ಮತ್ತು ಯಜ್ಞಗಳನ್ನು ಮಾಡಬೇಕು.

ಅರ್ಜುನಃ

ಶಿಖಂಡೀ ನಿಧನಂ ಕೃಷ್ಣ ಭೀಷ್ಮಸ್ಯ ಭವಿತಾ ಧ್ರುವಮ್ ।
ದೃಷ್ಟ್ವಾ ಹಿ ಸದಾ ಭೀಷ್ಮಃ ಸ್ತ್ರಾಂಜಾಲ್ಯಂ ವಿನಿವರ್ತತೇ ॥೯೭॥

ಅರ್ಜುನ– ಎಲೈ ಕೃಷ್ಣನೇ, ಶಿಖಂಡಿಯು ನಿಶ್ಚಿತವಾಗಿ ಭೀಷ್ಮರ ಮೃತ್ಯುವಾಗುವನು. ಭೀಷ್ಮರು ಅವನನ್ನು ನೋಡಿದಾಗಲೆಲ್ಲಾ ಯುದ್ಧದಿಂದ ನಿವೃತ್ತರಾಗುತ್ತಾರೆ.

ತೇ ವಯಂ ಪ್ರಮುಖೇ ತಸ್ಯ ಸ್ಥಾಪಯಿತ್ವಾ ಶಿಖಂಡಿನಮ್ ।
ಗಾಂಗೇಯಂ ಪಾತಯಿಷ್ಯಾಮ ಉಪಾಯೇನೇತಿ ಮೇ ಮತಿಃ ॥೯೮॥

ಅಂತಹ ನಾವು ಅವರ ಎದುರಿನಲ್ಲಿ ಶಿಖಂಡಿಯನ್ನು ನಿಲ್ಲಿಸಿ, ಭೀಷ್ಮರನ್ನು ಉಪಾಯದಿಂದ ಕೆಡವುವೆವು ಎಂದು ನನ್ನ ಅಭಿಪ್ರಾಯ.

ಅಹಮನ್ಯಾನ್ಹನಿಷ್ಯಾಮಿ ವಾರಯಿಷ್ಯಾಮಿ ಸಾಯಕೈಃ ।
ಶಿಖಂಡ್ಯಪಿ ಯುಧಾಂ ಶ್ರೇಷ್ಠೋ ಭೀಷ್ಮಮೇವಾಭಯಾಸ್ಯತು ॥೯೯॥

ನಾನು ನನ್ನ ಬಾಣಗಳಿಂದ ಉಳಿದ ಧನುಷ್ಧರನ್ನು ತಡೆಯುವೆನು. ಯೋಧರಲ್ಲಿ ಶ್ರೇಷ್ಠನಾದ ಶಿಖಂಡಿಯಾದರೂ ಭೀಷ್ಮರ ಮೇಲೆಯೇ ಎರಗಲಿ.

ಶ್ರುತಂ ತೇ ಕುರುಮುಖ್ಯಸ್ಯ ನಾಹಂ ಹನ್ಯಾಂ ಶಿಖಂಡಿನಮ್ ।
ಕನ್ಯಾ ಹ್ಯೇಷಾ ಪುರಾ ಜಾತಾ ಪುರುಷಃ ಸಮಪದ್ಯತ ॥೧೦೦॥

ನಾನು ಶಿಖಂಡಿಯನ್ನು ಕೊಲ್ಲಲಾರೆ. ಅವನು ಮೊದಲು ಸ್ತ್ರೀಯಾಗಿ ಜನಿಸಿದವನು, ಅನಂತರ ಪುರುಷನಾದವನು ಎಂಬ ಕುರುಶ್ರೇಷ್ಠರಾದ ಭೀಷ್ಮರ ಮಾತನ್ನು ನೀನು ಕೇಳಿದ್ದೀಯೆ.

ಇತ್ಯೇವಂ ನಿಶ್ಚಯಂ ಕೃತ್ವಾ ಪಾಂಡವಾಃ ಸಹಮಾಧವಾಃ ।
ಶಯನಾನಿ ಯಥಾಸ್ವಾನಿ ಭೇಜಿರೇ ಪುರುಷರ್ಷಭಾಃ ॥೧೦೧॥

ಹೀಗೆ ನಿಶ್ಚಯವನ್ನು ಮಾಡಿ, ಕೃಷ್ಣನಿಂದ ಒಡಗೂಡಿದ, ಪುರುಷಶ್ರೇಷ್ಠರಾದ ಪಾಂಡವರು ತಮ್ಮ ತಮ್ಮ ಶಯನಗಳಿಗೆ ಹೋದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಚತುರಧಿಕಶತತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಚತುಷ್ಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನೂರ ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯ - ೨೫ನೇ ಅಧ್ಯಾಯ

ಪ್ರಾಪ್ಯಾನುಜ್ಞಾಂ ಭೀಷ್ಮತಸ್ತೇ ವಧಾಯ
ಶಿಖಂಡಿನಂ ತದ್ಬಚಸಾऽಗ್ರಯಾಯಿನಮ್ ।
ಕೃತ್ವಾ ಪರೇದ್ಯುರ್ಯುಧಯೇ ವಿನಿರ್ಗತಾ
ಭೀಷ್ಮಂ ಪುರಸ್ಕೃತ್ಯ ತಥಾ ಪರೇऽಪಿ ॥೧೧೬॥

ಪಾಂಡವರು ಭೀಷ್ಮರಿಂದ ಅವರ ವಧೆಗೆ ಅನುಜ್ಞೆ ಪಡೆದು, ಮರುದಿನ ಅವನ ಮಾತಿನಂತೆ ಶಿಖಂಡಿಯನ್ನು ಮುಂದೆ ಮಾಡಿಕೊಂಡು, ಯುದ್ಧಕ್ಕೆ ಹೊರಟರು. ಕೌರವರೂ ಭೀಷ್ಮರನ್ನು ಮುಂದೆ ಮಾಡಿಕೊಂಡು ಯುದ್ಧಕ್ಕೆ ಹೊರಟರು.

ಶಿಖಂಡಿನೋ ರಕ್ಷಕಃ ಫಲ್ಗುನೋऽಭೂದ್
ಭೀಷ್ಮಸ್ಯ ದುಃಶಾಸನ ಆಸ ಚಾಗ್ರೇ ।
ಅನ್ಯೇ ಚ ಸರ್ವೇ ಜುಗುಪುರ್ಭೀಷ್ಮಮೇವ
ನ್ಯವಾರಯನ್ ಭೀಮಸೇನಾದಯಸ್ತಾನ್ ॥೧೧೭॥

ಶಿಖಂಡಿಗೆ ರಕ್ಷಕನಾಗಿ ಅರ್ಜುನ ಹಿಂದೆ ನಿಂತ. ಭೀಷ್ಮರ ರಕ್ಷಕನಾಗಿ ದುಶ್ಶಾಸನ ಮುಂದೆ ನಿಂತ. ಬೇರೆ ಎಲ್ಲ ಕೌರವ ಸೈನಿಕರೂ ಭೀಷ್ಮರ ರಕ್ಷಣೆಗೆ ನಿಂತರು. ಭೀಮಸೇನ ಮುಂತಾದವರು ಅವರನ್ನು ಎದುರಿಸಿದರು.

ಭೀಷ್ಮಾಯ ಯಾಂತಂ ಯುಯುಧಾನಮಾಜೌ
ನ್ಯವಾರಯದ್ ರಾಕ್ಷಸೋऽಲಂಬುಸೋऽಥ ।
ತಂ ವಜ್ರಕಲ್ಪೈರತುದದ್ ವೃಷ್ಣಿವೀರಃ
ಶರೈಃ ಸ ಮಾಯಾಮಸೃಜತ್ ತದೋಗ್ರಾಮ್ ॥೧೧೮॥

ಯುದ್ಧದಲ್ಲಿ ಭೀಷ್ಮರ ಮೇಲೇರಿ ಬರುತ್ತಿದ್ದ ಸಾತ್ಯಕಿಯನ್ನು ಅಲಂಬುಸ ರಾಕ್ಷಸ ತಡೆದ. ವೀರಸಾತ್ಯಕಿ ಅವನನ್ನು ವಜ್ರಾಯುಧದಂಥ ಬಾಣಗಳಿಂದ ಗಾಯಗೊಳಿಸಿದ. ಆಗ ರಾಕ್ಷಸ ಭಯಂಕರವಾದ ಮಾಯೆಯನ್ನು ನಿರ್ಮಿಸಿದ.

ಅಸ್ತ್ರೇಣ ಮಾಯಾಮಹನದ್ಯ ವೀರೋ
ವ್ಯದ್ರಾವಯದ್ ರಾಕ್ಷಸಂ ಸಾತ್ಯಕಿಸ್ತಮ್ ।

ತಸ್ಮಿನ್ ಗತೇ ಯುಯುಧಾನೋ ರಥೇನ
ಯಯೌ ಭೀಷ್ಮಂ ಪಾರ್ಥಮನ್ವೇವ ಧನ್ವೀ ॥೧೧೯॥

ವೀರಸಾತ್ಯಕಿ ಅಸ್ತ್ರದಿಂದ ಮಾಯೆಯನ್ನು ದೂರ ಮಾಡಿ ರಾಕ್ಷಸನನ್ನು ಓಡಿಸಿದ. ರಾಕ್ಷಸ ಓಡಿಹೋದಾಗ ಧನುರ್ಧಾರಿಯಾದ ಸಾತ್ಯಕಿ ಅರ್ಜುನನಿಗೆ ಸಹಾಯಕನಾಗಿ ರಥದಿಂದ ಭೀಷ್ಮರ ಬಳಿಗೆ ಹೋದ.

ದ್ರೋಣೋ ದ್ರೌಣಿರ್ಧಾರ್ತರಾಷ್ಟ್ರಶ್ಚ ರಾಜಾ
ಭೂರಿಶ್ರವಾ ಭಗದತ್ತಃ ಕೃಪಶ್ಚ ।
ಶಲ್ಯೋ ಬಾಹ್ಲೀಕಃ ಕೃತವರ್ಮಾ ಸುಶರ್ಮಾ
ಸರ್ವಾಶ್ಚ ಸೇನಾ ವಾರಿತಾ ವಾಯುಜೇನ ॥೧೨೦॥

ದ್ರೋಣ-ಅಶ್ವತ್ಥಾಮರು, ದುರ್ಯೋಧನ-ಭೂರಿಶ್ರವ, ಭಗದತ್ತ-ಕೃಪರು, ಶಲ್ಯ-ಬಾಹ್ಲೀಕ, ಕೃತವರ್ಮ-ಸುಶರ್ಮರನ್ನೂ ಎಲ್ಲಸೈನ್ಯಗಳನ್ನೂ ಭೀಮ ತಡೆದ.

ಸ ತಾನ್ ಮುಹುರ್ವಿರಥೀಕೃತ್ಯ ವೀರಃ
ಪ್ರಾಗ್ಜ್ಯೋತಿಷಂ ಸಗಜಂ ದ್ರಾವಯಿತ್ವಾ ।
ನ್ಯವಾರಯತ್ ಫಲ್ಗುನಂ ರೋದ್ಧುಕಾಮಂ
ಪಾರ್ಥಶ್ಚ ದೇವವ್ರತಮಾಸಸಾದ ॥೧೨೧॥

ವೀರ ಭೀಮಸೇನ ಅವರನ್ನು ಪುನಃ ಪುನಃ ವಿರಥರನ್ನಾಗಿ ಮಾಡಿ ಓಡಿಸಿ, ಅರ್ಜುನನನ್ನು ತಡೆಯಲು ಬಯಸಿದ ಭಗದತ್ತನನ್ನೂ ಆನೆ ಸಹಿತವಾಗಿ ತಡೆದ, ಓಡಿಸಿದ. ಅದರಿಂದ ಅರ್ಜುನ ನಿರಾತಂಕವಾಗಿ ಭೀಷ್ಮರೊಡನೆ ಹೋರಾಡಿದ.

ಯುಧಿಷ್ಠಿರಂ ಭೀಷ್ಮಮಭಿಪ್ರಯಾಂತಂ
ಮಾದ್ರೀಸುತಾಭ್ಯಾಂ ಸಹಿತಂ ನೃವೀರಮ್ ।
ನ್ಯವಾರಯತ್ ಶಕುನಿಃ ಸಾದಿನಾಂ ಚ
ಯುತೋಽಯುತೇನೈವ ವರಾಶ್ವಗೇನ ॥೧೨೨॥

ನಕುಲ-ಸಹದೇವರ ಸಮೇತನಾಗಿ ಭೀಷ್ಮರ ಮೇಲೇರಿ ಹೋಗುತ್ತಿದ್ದ ವೀರ ಯುಧಿಷ್ಠಿರನನ್ನು ಹತ್ತು ಸಾವಿರ ಅಶ್ವಸೈನಿಕರಿಂದ ಯುಕ್ತನಾದ ಶಕುನಿ ತಡೆದ.

ತಾನ್ ಸಾದಿನೋಽಶ್ವಾಂಶ್ಚ ನಿಹತ್ಯ
ಸರ್ವಾನ್ ವಿಜಿತ್ಯ ತಂ ಶಕುನಿಂ ಪಾಂಡವಾಸ್ತೇ ।
ಪ್ರಾಪುರ್ಭೀಷ್ಮಂ ದ್ರೌಪದೇಯಾಶ್ಚ ಸರ್ವೇ
ತಥಾ ವಿರಾಟದ್ರುಪದೌ ಕುಂತಿಭೋಜಃ ॥೧೨೩॥

ಯುಧಿಷ್ಠಿರ, ನಕುಲ-ಸಹದೇವರು ಆ ಅಶ್ವಸೈನಿಕರನ್ನೂ ಕುದುರೆಗಳನ್ನೂ ಕೊಂದು ಶಕುನಿಯನ್ನೂ ಪರಾಭವಗೊಳಿಸಿ ಭೀಷ್ಮರ ಬಳಿಗೆ ಬಂದರು. ಹಾಗೇ ದ್ರೌಪದೀ ಪುತ್ರರು, ವಿರಾಟ-ದ್ರುಪದರು, ಕುಂತಿಭೋಜ ಎಲ್ಲರೂ ಬಂದರು.

ಧೃಷ್ಟದ್ಯುಮ್ನಂ ಭೀಷ್ಮಮಭಿಪ್ರಯಾಂತಂ
ನ್ಯವಾರಯತ್ ಸೈಂಧವಸ್ತಂ ಸ ಬಾಣೈಃ ।
ಹತಾಶ್ವಸೂತಂ ಸಗಣಂ ದ್ರಾವಯಿತ್ವಾ
ಸಮಾಸದದ್ ಭೀಷ್ಮಮೇವಾಶು ವೀರಃ ॥೧೨೪॥

ಭೀಷ್ಮರಿಗೆ ಎದುರಾಗಿ ಹೋಗುತ್ತಿದ್ದ ಧೃಷ್ಟದ್ಯುಮ್ನನನ್ನು ಜಯದ್ರಥ ತಡೆದ. ವೀರ ಧೃಷ್ಟದ್ಯುಮ್ನ ಬಾಣಗಳಿಂದ ಅವನ ಕುದುರೆಗಳನ್ನೂ ಸಾರಥಿಯನ್ನೂ ಕೊಂದು, ಅವರನ್ನು ಪರಿವಾರಸಮೇತವಾಗಿ ಓಟ್ಟಬೇಗನೆ ಭೀಷ್ಮರ ಬಳಿಗೆ ಬಂದ.

ಗುಪ್ತೋಽಥ ಪಾರ್ಥೇನ ರಣೇ ಶಿಖಂಡೀ
ಭೀಷ್ಮಂ ಸಮಾಸಾದ್ಯ ಶರೈರತಾಡಯತ್ ।
ಭೀಷ್ಮಃ ಸ್ತ್ರೀತ್ವಂ ತಸ್ಯ ಜ್ಞಾನನ್ನ ತಸ್ಮೈ
ಮುಮೋಚ ಬಾಣಾನ್ ಸ ತು ತಂ ತುತೋದ ॥೧೨೫॥

ಯುದ್ಧದಲ್ಲಿ ಅರ್ಜುನನಿಂದ ರಕ್ಷಿತನಾದ ಶಿಖಂಡಿ ಭೀಷ್ಮರ ಎದುರಿಗೆ ಹೋಗಿ ಬಾಣಗಳಿಂದ ಹೊಡೆದ. ಆದರೆ ಹಿಂದೆ ಶಿಖಂಡಿ ಹೆಣ್ಣಾಗಿದ್ದುದನ್ನು ತಿಳಿದಿರುವ ಭೀಷ್ಮ ಅವನಿಗೆ ಪ್ರತಿಯಾಗಿ ಬಾಣಗಳನ್ನು ಎಸೆಯಲಿಲ್ಲ. ಅದರಿಂದ ಶಿಖಂಡಿ ಭೀಷ್ಮರನ್ನು ನಿರಾತಂಕವಾಗಿ ಪೀಡಿಸತೊಡಗಿದ.

ಶಿಖಂಡಿನಂ ವಾರಯಾಮಾಸ ಬಾಣೈಃ
ದುರ್ಮರ್ಷಣೋಽಮರ್ಷಣವಿಹ್ವಲೇಕ್ಷಣಃ ।

ನಾತ್ಯೇತುಮೇನಮಶಕತ್ ಶಿಖಂಡೀ
ದುಃಶಾಸನಃ ಪಾರ್ಥಮವಾರಯತ್ ತದಾ ॥೧೨೬॥

ದುರ್ಮರ್ಷಣ ಕೋಪದಿಂದ ಕಣ್ಣುತಿರುಗಿಸುತ್ತ ಬಾಣಗಳಿಂದ ಶಿಖಂಡಿಯನ್ನು ತಡೆದ. ಅವನನ್ನು ದಾಟಿ ಹೋಗಲು ಶಿಖಂಡಿ ಶಕ್ತನಾಗಲಿಲ್ಲ. ಅರ್ಜುನನನ್ನೂ ದುಶ್ಶಾಸನ ತಡೆದ.

ಸ ಲೋಕವೀರೋಽಪಿ ದುರಾತ್ಮನಾಽಮುನಾ
ರುದ್ಧೋಽಶಕನ್ನೈನಮತೀತ್ಯ ಯಾತುಮ್ ।
ಭೀಷ್ಮಂ ಪಾರ್ಥಃ ಸಾಯಕಾಶ್ಚಾಸ್ಯ ತೂರ್ಣ್
ಸಪಚ್ಛಿದೇ ಪರ್ವತೇಷ್ವಕ್ಷತಾಃ ॥೧೨೭॥

ದುರಾತ್ಮನಾದ ದುಶ್ಶಾಸನ ತಡೆದಾಗ ಅವನನ್ನು ದಾಟಿ ಭೀಷ್ಮರ ಬಳಿಗೆ ಹೋಗಲು ಲೋಕೈಕ ವೀರನಾದ ಅರ್ಜುನನೂ ಶಕ್ತನಾಗಲಿಲ್ಲ. ಪರ್ವತವನ್ನೂ ಛೇದಿಸಿಕೊಂಡು ಹೋಗಬಲ್ಲ ಅವನ ಬಾಣಗಳೂ ದುಶ್ಶಾಸನನ ಮೈಗೆ ತಾಗಿ ನಿಂತನೇ ಹೊರತು ಛೇದಿಸಲಿಲ್ಲ.

ಅಮರ್ಷಯುಕ್ತೌ ಚಿರಮೇವ ವೀರೌ
ಅಯುಧ್ಯತಾಮರ್ಜುನಧಾರ್ತರಾಷ್ಟ್ರೌ ।
ಸಮಂ ತದಾಽನ್ಯಹದದ್ಭುತಂ ಚ
ದಿವೌಕಸಾಂ ಪಶ್ಯತಾಂ ಭೂಭೃತಾಂ ಚ ॥೧೨೮॥

ವೀರರಾದ ಅರ್ಜುನ-ದುಶ್ಶಾಸನರು ಕೋಪಯುಕ್ತರಾಗಿ ದೀರ್ಘಕಾಲ ಯುದ್ಧ ಮಾಡಿದರು. ಯುದ್ಧ ಸಮವಾಗಿಯೇ ಇದ್ದಿತು. ನೋಡುವ ದೇವತೆಗಳಿಗೂ ರಾಜರಿಗೂ ಅದು ಮಹಾ ಅದ್ಭುತವೆನಿಸಿತು.

ತದಾ ವಿರಾಟದ್ರುಪದೌ ಕುಂತಿಭೋಜಂ
ಕೃಷ್ಣಸುತಾನ್ ಕೇಕಯಾಂಶ್ಚೇತಿತಾನಮ್ ।
ಭೂರಿಃ ಶಲಃ ಸೋಮದತ್ತೋ ವಿಕರ್ಣಃ
ಸಹೇಕಯಾ ವಾರಯಾಮಾಸುರುಚ್ಚೈಃ ॥೧೨೯॥

ಆಗಲೇ ವಿರಾಟ ದ್ರುಪದ ಕುಂತಿಭೋಜ ದ್ರೌಪದಿ ಪುತ್ರರು ಕೈಕಯರು ಚೇಕಿತಾನ ಇವರನ್ನು ಭೂರಿ ಶಲ ಸೋಮದತ್ತ ವಿಕರ್ಣ ಕೈಕಯರು ಬಲವಾಗಿ ತಡೆದರು.

ಜಿತ್ವೈವ ತಾಂಶ್ತೇऽಭಿಯಯುಃ ಪ್ರ ಭೀಷ್ಮಂ
ತತೋऽರ್ಜುನೋऽತೀತ್ಯ ದುಃಶಾಸನಂ ಚ ।
ಭೀಷ್ಮಂ ಶರೈರಾರ್ಧದರಿತ್ರಮಾಥಿಭಿಃ
ಶಿಖಂಡಿನಂ ಧಾರ್ತರಾಷ್ಟ್ರಾದ್ ವಿಮುಚ್ಯ ॥೧೩೦॥

ಅವರನ್ನು ಪರಾಭವಗೊಳಿಸಿ ವಿರಾಟ ಮುಂತಾದವರು ಭೀಷ್ಮರ ಬಳಿಗೆ ಬಂದರು. ಆಗಲೇ ಅರ್ಜುನನೂ ದುಶ್ಶಾಸನನನ್ನು ದಾಟಿ ಬಂದು, ಶಿಖಂಡಿಯನ್ನು ದುರ್ಮರ್ಷಣನಿಂದ ಬಿಡಿಸಿ ಶತ್ರುನಾಶಕವಾದ ಬಾಣಗಳಿಂದ ಭೀಷ್ಮರನ್ನು ಪೀಡಿಸಿದ.

ಸ ತೈಃ ಸಮಸ್ತೈರ್ಬಹುಶಸ್ತ್ರಪೂಗೈಃ
ಭೃಶಂ ಮರ್ಮಸ್ಥರ್ದಿತಶ್ಚಾಪಮುಕ್ತೈಃ ।
ಶರೈಃ ಸಮಸ್ತಾನ್ ವಿರಥಾಂಶ್ಚಕಾರ
ಪೈತೇಯಪಾಂಚಾಲಯುಧಿಷ್ಠಿರಾದ್ಯಾನ್ ॥೧೩೧॥

ಯುಧಿಷ್ಠಿರಾದಿ ಸಮಸ್ತ ವೀರರ ನಾನಾ ಬಗೆಯ ಆಯುಧ ಸಮೂಹಗಳಿಂದ ಭೀಷ್ಮರ ಮರ್ಮಸ್ಥಳಗಳಲ್ಲಿ ಪೀಡಿತನಾದರೂ ಬಿಲ್ಲಿನಿಂದ ಬಾಣಗಳನ್ನೆಸೆದು ಸಾತ್ಯಕಿ ದ್ರುಪದ ಯುಧಿಷ್ಠಿರ ಮುಂತಾದ ಎಲ್ಲರನ್ನೂ ವಿರಥರನ್ನಾಗಿ ಮಾಡಿದ.

ಸ ಚೇದಿಪಾಂಚಾಲಕರೂಷಮುಖ್ಯಾನ್
ರಥೋತ್ತಮಾನ್ ಪಂಚವಿಂಶತ್ ಸಹಸ್ರಾನ್ ।
ಸಂಪ್ರೇಷಯಾಮಾಸ ಯಮಾಯ ಬಾಣೈಃ
ಯುಗಾಂತಕಾಲಾಗ್ನಿರಿವ ಪ್ರವೃದ್ಧಃ ॥೧೩೨॥

ಭೀಷ್ಮ ಧಗಧಗಿಸುವ ಪ್ರಳಯಕಾಲದ ಅಗ್ನಿಯಂತಾಗಿ ಚೇದಿ, ಪಾಂಚಾಲ ಕರೂಷರಲ್ಲಿ ಮುಖ್ಯರಾದ ಇಪ್ಪತ್ತೈದು ಸಾವಿರ ಶ್ರೇಷ್ಠ ರಥಿಕರನ್ನು ಬಾಣಗಳಿಂದ ಯಮನಿಗೆ ಕಳಿಸಿಕೊಟ್ಟ.

ನಿರೀಕ್ಷ್ಯ ತಂ ಸೂರ್ಯಮಿವಾತಪಂತಂ
ಸಂಚೋದಿತೋ ವಾಸುದೇವೇನ ಪಾರ್ಥಃ ।
ಚಿಚ್ಛೇದ ತತ್ಕಾರ್ಮುಕಂ ಲೋಕವೀರೋ
ರಣೇऽರ್ಧಚಂದ್ರೇಣ ಸ ಚಾನ್ಯದಾದದೇ ॥೧೩೩॥

ಭೀಷ್ಮರು ರಣರಂಗದಲ್ಲಿ ಸೂರ್ಯನಂತೆ ಉರಿಯುತ್ತಿದ್ದುದನ್ನು ಕಂಡು ಶ್ರೀಕೃಷ್ಣನಿಂದ ಪ್ರೇರಿತನಾದ, ಲೋಕವೀರ ಅರ್ಜುನ ಅವನ ಬಿಲ್ಲನ್ನು ಒಂದು ಅರ್ಧಚಂದ್ರ ಬಾಣದಿಂದ ಕತ್ತರಿಸಿದ. ಒಡನೆ ಅವನು ಇನ್ನೊಂದು ಬಿಲ್ಲನೆತ್ತಿಕೊಂಡ.

ಚಿಚ್ಛೇದ ತಚ್ಚೈವಮಹೋ ಧನೂಂಷಿ
ಶಕ್ತಿಂ ಚ ಚರ್ಮಾಸಿವರಂ ಪರಾಣಿ ಚ ।
ಧನೂಂಷಿ ದತ್ತಾನಿ ನೃಭರ್ನೃಪಸ್ಯ
ಸರ್ವಾಣಿ ಚಿಚ್ಛೇದ ಸ ಪಾಕಶಾಸನಿಃ ॥೧೩೪॥

ಆ ಬಿಲ್ಲನ್ನೂ ಅರ್ಜುನ ಕತ್ತರಿಸಿದ. ಹೀಗೇ ಎಂಟು ಬಿಲ್ಲುಗಳನ್ನೂ ಶಕ್ತ್ಯಾಯುಧವನ್ನೂ ಶ್ರೇಷ್ಠವಾದ ಖಡ್ಗ-ಚರ್ಮಗಳನ್ನೂ ಕತ್ತರಿಸಿದ. ದುರ್ಯೋಧನನ ಭೃತ್ಯರು ಕೊಟ್ಟ ಬೇರೆ ಎಲ್ಲ ಬಿಲ್ಲುಗಳನ್ನೂ ಕತ್ತರಿಸಿದ.

ತತಃ ಶರೈಃ ಸೂರ್ಯಕರಪ್ರಕಾಶೈಃ
ವಿವ್ಯಾಧ ಸರ್ವೇ ಚ ಯುಧಿಷ್ಠಿರಾದ್ಯಾಃ ।
ತೈರರ್ದಿತೋ ನ್ಯಪತದ್ ಭೂತಳೇ ಸಃ
ಪ್ರಾಣಾನ್ ದಧಾರಾಪಿ ತಥೋತ್ತರಾಯಣಾತ್ ॥೧೩೫॥

ಬಳಿಕ ಸೂರ್ಯಕಿರಣಗಳಂತೆ ಹೊಳೆವ ಬಾಣಗಳಿಂದ ಅರ್ಜುನ ಭೀಷ್ಮರನ್ನು ಹೊಡೆದ. ಯುಧಿಷ್ಠಿರ ಮುಂತಾದವರೆಲ್ಲರೂ ಹೊಡೆದರು. ಅವರಿಂದ ಪೀಡಿತನಾದ ಭೀಷ್ಮರು ನೆಲದ ಮೇಲೆ ಬಿದ್ದರು. ಉತ್ತರಾಯಣದವರೆಗೆ ಪ್ರಾಣಧಾರಣ ಮಾಡಿದ.

ನಿಪಾತಿತೇऽಸ್ಮಿನ್ ಮಾರುತಿರ್ದ್ರೋಣಮುಖ್ಯಾನ್
ವಿದ್ರಾಪ್ಯ ತತ್ರಾಗಮದಾಶು ತೇऽಪಿ ।
ತದಾಯುಧಾನಿ ಪ್ರಣಿಧಾಯ ವೀರಾಃ
ಪಾರ್ಥಾಃ ಪರೇ ಚೈನಮುಪಾಸದನ್ ಸ್ಮ ॥೧೩೬॥

ಭೀಷ್ಮರು ಪತನ ಹೊಂದಿದಾಗ ಭೀಮಸೇನ ದ್ರೋಣಾದಿಗಳನ್ನು ಓಡಿಸಿ ಭೀಷ್ಮರು ಬಿದ್ದ ಸ್ಥಳಕ್ಕೆ ಬೇಗನೆ ಬಂದ. ಆಯುಧಗಳನ್ನು ಕೆಳಗಿಟ್ಟು ಅವರೂ ಅಲ್ಲಿಗೆ ಬಂದರು. ಪಾಂಡವರೂ ಕೌರವರೂ ಎಲ್ಲ ವೀರರೂ ಭೀಷ್ಮರ ಬಳಿಗೆ ಬಂದು ಸೇರಿದರು.

ಪ್ರಣಮ್ಯಂ ತಂ ತದ್ವಚನಾದ್ ಸಮೀಯುಃ
ತಸ್ಮಿನ್ ದಿನೇ ಶಿಬಿರಾಣ್ಯೇವ ಸರ್ವೇ ।
ಪರೇ ದಿನೇ ಸರ್ವ ಏವೋಪತಸ್ಥುಃ
ಭೀಷ್ಮಂ ಯದೂನಾಂಪತಿನಾ ಸಹೈವ ॥೧೩೭॥

ಎಲ್ಲರೂ ಭೀಷ್ಮರನ್ನು ನಮಸ್ಕರಿಸಿ, ಅವರ ಮಾತಿನಿಂದ ಆ ದಿನದಲ್ಲಿ ಶಿಬಿರಕ್ಕೆ ಹಿಂದಿರುಗಿದರು. ಮರುದಿನ ಶ್ರೀಕೃಷ್ಣನೊಂದಿಗೆ ಎಲ್ಲರೂ ಭೀಷ್ಮರ ಬಳಿಗೆ ಬಂದರು.

ಸ ಪೂರ್ವದಿವಸೇ ಪಾರ್ಥದತ್ತಬಾಣೋಪಬರ್ಹಣಃ ।
ತದಾऽಪಿ ತೃಟ್‌ಪರೀತಾತ್ಮಾ ಯೋಗ್ಯಂ ಪೇಯಮಯಾಚತ ॥೧೩೮॥

ಭೀಷ್ಮರು ಹಿಂದಿನ ದಿನ ಅರ್ಜುನ ನೀಡಿದ ಬಾಣಗಳ ತಲೆದಿಂಬನ್ನು ಸ್ವೀಕರಿಸಿದ್ದರು. ಈಗಲೂ ತೃಷೆಯಿಂದ ಪೀಡಿತರಾಗಿ ಯೋಗ್ಯವಾದ ಪಾನೀಯವನ್ನು ಬೇಡಿದರು.

ಧಾರ್ತರಾಷ್ಟ್ರೈರವಿಜ್ಞಾತಂ ತದಭಿಜ್ಞಾಯ ವಾಸವಿಃ ।
ವಾರುಣಾಸ್ತ್ರೇಣ ಭಿತ್ವಾ ಚ ಭೂಮಿಂ ವಾರಿ ಸುಗಂಧಿ ಚ ।
ಊರ್ಧ್ವಧಾರಮಧಾದಾಸ್ಯೇ ತರ್ಪಿತೋऽನೇನ ಸೋऽವದತ್ ॥೧೩೯॥

ಭೀಷ್ಮರಿಗೆ ಯೋಗ್ಯವಾದ ನೀರು ಯಾವುದೆಂದು ಕೌರವರಿಗೆ ತಿಳಿಯಲಿಲ್ಲ. ಅರ್ಜುನ ತಿಳಿದು ವಾರುಣಾಸ್ತ್ರದಿಂದ ಭೂಮಿಯನ್ನು ಭೇದಿಸಿ ಮೇಲ್ಮುಖ ಧಾರೆಯಾಗಿ ಬಂದ ಸುಗಂಧಯುಕ್ತವಾದ ನೀರನ್ನು ಮೇಲಿಂದ ಧಾರಾಕಾರವಾಗಿ ಭೀಷ್ಮರ ಬಾಯಿಯಲ್ಲಿ ಬೀಳಿಸಿದ. ಅದರಿಂದ ತೃಪ್ತರಾದ ಭೀಷ್ಮರು ನುಡಿದರು.

ಯಾದೃಶ್ಯಸ್ತ್ರಜ್ಞತಾ ಪಾರ್ಥೇ ದೃಷ್ಟಾऽತ್ರ ಕುರುನಂದನಾಃ ।
ಯಾದೃಗ್ ಬಾಹುಬಲಂ ಭೀಮೇ ಸಂಯುಗೇಷು ಪುನಃ ಪುನಃ ॥೧೪೦॥

ಯಾದೃಶಂ ಚೈವ ಮಾಹಾತ್ಮ್ಯಮನಂತಮಜರಂ ಹರೇಃ ।
ವಿಜ್ಞಾತಂ ಸರ್ವಲೋಕಸ್ಯ ಸಭಾಯಾಂ ದೃಷ್ಟಮೇವ ಚ ॥೧೪೧॥

ಕೌರವರೇ, ಅರ್ಜುನನಲ್ಲಿ ಎಂಥ ಅಸ್ತ್ರಜ್ಞಾನವಿದೆ ಎಂಬುದನ್ನು ನೀವು ಈಗ ಕಂಡಿರಿ. ಯುದ್ಧಗಳಲ್ಲಿ ಭೀಮನ ಬಾಹುಬಲ ಎಂಥದೆಂಬುದನ್ನೂ ಹೆಜ್ಜೆಹೆಜ್ಜೆಗೂ ಕಂಡಿರುವಿರಿ. ಶ್ರೀಕೃಷ್ಣನ ಅಮಿತವಾದ ಮುಪ್ಪಿಲ್ಲದ ಮಾಹಾತ್ಮ್ಯವೂ ಎಂಥದೆಂಬುದನ್ನು ತಿಳಿದಿರುವಿರಿ. ಸಭೆಯಲ್ಲಿ ಎಲ್ಲ ಜನರ ಮಧ್ಯದಲ್ಲಿ ಅದನ್ನು ಪ್ರತ್ಯಕ್ಷವಾಗಿಯೂ ಕಂಡಿರುವಿರಿ.

ಉಪಾರಮತ ತದ್ ಯುದ್ಧಂ ಸುಖಿನಃ ಸಂತು ಭೂಮಿಪಾಃ ।
ಯಥೋಚಿತವಿಭಕ್ತಾಂ ಚ ಭುಜ್ಯಾಂ ಭೂಮಾಃ ಸದಾ ಭುವಮ್ ॥

ಆದರಿಂದ ರಾಜರುಗಳೇ, ಇನ್ನಾದರೂ ಈ ಯುದ್ಧವನ್ನು ನಿಲ್ಲಿಸಿರಿ. ಸುಖಿಗಳಾಗಿರಿ. ನೆಲವನ್ನು ಯಥೋಚಿತವಾಗಿ ಭಾಗಮಾಡಿ, ನಿಮ್ಮ ಪಾಲಿಗೆ ಬಂದುದನ್ನು ನೀವು ಅನುಭವಿಸಿರಿ ಎಂದರು ಭೀಷ್ಮರು.

ಇತ್ಯುಕ್ತಃ ಪ್ರಯಯೌ ತೂಷ್ಣೀಂ ಧಾರ್ತರಾಷ್ಟ್ರಃ ಸ್ವಕಂ ಗೃಹಮ್ ॥೧೪೩॥

ಭೀಷ್ಮರು ಹೀಗೆ ಹೇಳಿದಾಗ ದುರ್ಯೋಧನ ಏನೂ ಮಾತನಾಡದೆ ತನ್ನ ಮನೆಗೆ ಹೊರಟು ಹೋದ.

ವ್ಯಾಸದತ್ತೋರುವಿಜ್ಞಾನಾತ್ ಸಂಜಯಾದಖಿಲಂ ಪಿತಾ ।
ಶ್ರುತ್ವಾ ತದಾ ಪರ್ಯತಪ್ಯತ್ ಪಾಂಡವಾಃ ಕೃಷ್ಣದೇವತಾಃ ।
ಮುಮುದುಃ ಶಿಬಿರಂ ಪ್ರಾಪ್ಯ ಸರ್ವೇ ಕೃಷ್ಣಸು ಮೋದಿತಾಃ ॥೧೪೪॥

ವೇದವ್ಯಾಸರು ನೀಡಿದ ದಿವ್ಯಜ್ಞಾನಶಕ್ತಿ ಉಳ್ಳ ಸಂಜಯನಿಂದ ಈ ಎಲ್ಲ ವೃತ್ತಾಂತವನ್ನೂ ಕೇಳಿ ತಂದೆಯಾದ ಧೃತರಾಷ್ಟ್ರ ಪರಿತಪಿಸಿದ. ಕೃಷ್ಣನನ್ನೇ ದೇವತೆ ಎಂದು ಬಗೆದು, ಅವನಿಂದಲೇ ಮಾರ್ಗದರ್ಶನ ಪಡೆದ ಪಾಂಡವರು ಎಲ್ಲರೂ ಶಿಬಿರಕ್ಕೆ ಹೋಗಿ ಆನಂದಪಟ್ಟರು.

★ ★ ★ ★ ★

ನೂರ ಐದನೆಯ ಅಧ್ಯಾಯ

ಹತ್ತನೆಯ ದಿವಸದ ಯುದ್ಧದ ಪ್ರಾರಂಭ. ಭೀಷ್ಮರ ಪ್ರತಾಪ. ಶಿಖಂಡಿಯನ್ನು ಮುಂದೆ ಮಾಡಿಕೊಂಡು ರಣರಂಗದಲ್ಲಿ ಅರ್ಜುನನ ಪ್ರವೇಶ.

ಧೃತರಾಷ್ಟ್ರಃ

ಕಥಂ ಶಿಖಂಡೀ ಗಾಂಗೇಯಮಭ್ಯವರ್ತತ ಸಂಯುಗೇ ।
ಪಾಂಡವಾಶ್ಚ ತಥಾ ಭೀಷ್ಮಂ ತನ್ಮಾಚಕ್ಷ್ವ ಸಂಜಯ ॥೧॥

ಧೃತರಾಷ್ಟ್ರ- ಎಲೈ ಸಂಜಯನೇ, ಯುದ್ಧದಲ್ಲಿ ಶಿಖಂಡಿಯು ಹೇಗೆ ಭೀಷ್ಮರ ಮೇಲೆ ಎರಗಿದನು? ಪಾಂಡವರೂ ಸಹ ಭೀಷ್ಮರ ಜೊತೆಯಲ್ಲಿ ಹೇಗೆ ಹೋರಾಡಿದರು ಎಂಬುದನ್ನು ನನಗೆ ಹೇಳು.

ಸಂಜಯಃ

ತತಃ ಪ್ರಭಾತೇ ವಿಮಲೇ ಸೂರ್ಯಸ್ಯೋದಯನಂ ಪ್ರತಿ ।
ವಾದ್ಯಮಾನಾಸು ಭೇರೀಷು ಮೃದಂಗೇಷ್ವಾನಕೇಷು ಚ ॥೨॥

ಧ್ಮಾಯತ್ಸು ದಧಿವರ್ಣೇಷು ಜಲಜೇಷು ಸಮಂತತಃ ।
ಶಿಖಂಡಿನಂ ಪುರಸ್ಕೃತ್ಯ ನಿರ್ಯಾತಾಃ ಪಾಂಡವಾ ಯುಧಿ ॥೩॥

ಸಂಜಯ– ಸೂರ್ಯೋದಯದ ವೇಳೆಗೆ ಶುಭ್ರವಾದ ಪ್ರಾತಃಕಾಲವು ಉಂಟಾಗುತ್ತಿರಲು ಭೇರಿಗಳು, ಮೃದಂಗಗಳು ಮತ್ತು ಆನಕಗಳು ಮೊಳಗುತ್ತಿರಲು ಮೊಸರಿನ ಬಣ್ಣದ ಶಂಖಗಳು ಎಲ್ಲ ಕಡೆಗಳಲ್ಲಿಯೂ ಊದಲ್ಪಡುತ್ತಿರಲು ಶಿಖಂಡಿಯನ್ನು ಮುಂದೆ ಮಾಡಿಕೊಂಡು ಪಾಂಡವರು ಯುದ್ಧಕ್ಕೆ ಹೊರಟರು.

ಕೃತ್ವಾ ವ್ಯೂಹಂ ಮಹಾರಾಜ ಸರ್ವಶತ್ರುನಿಬರ್ಹಣಮ್ ।
ಶಿಖಂಡೀ ಸರ್ವಸೈನ್ಯಾನಾಮಗ್ರ ಆಸೀದ್ ವಿಶಾಂಪತೇ ॥೪॥

ಎಲೈ ಮಹಾರಾಜನೇ, ಸರ್ವಶತ್ರುಸಂಹಾರಕವಾದ ವ್ಯೂಹವನ್ನು ರಚಿಸಿ ಶಿಖಂಡಿಯು ಎಲ್ಲಾಸೈನ್ಯಗಳ ಮುಂಭಾಗದಲ್ಲಿ ಇದ್ದನು.

ಚಕ್ರರಕ್ಷೌ ತತಸ್ತಸ್ಯ ಭೀಮಸೇನಧನಂಜಯೌ ।
ಪೃಷ್ಠತೋ ದ್ರೌಪದೇಯಾಶ್ಚ ಸೌಭದ್ರಶ್ಚೈವ ವೀರ್ಯವಾನ್ ॥೫॥

ಭೀಮಸೇನ ಮತ್ತು ಅರ್ಜುನರು ಅವನ ರಥದ ಎರಡು ಪಾರ್ಶ್ವಗಳ ರಕ್ಷಕರಾಗಿದ್ದರು. ಅವನ ಹಿಂಭಾಗದಲ್ಲಿ ದ್ರೌಪದಿಯ ಏವರು ಮಕ್ಕಳು ಮತ್ತು ಪರಾಕ್ರಮಶಾಲಿಯಾದ ಅಭಿಮನ್ಯುವು ಇದ್ದರು.

ಸಾತ್ಯಕಿಶ್ಚೇಕಿತಾನಶ್ಚ ತೇಷಾಂ ಗೋಪ್ತಾ ಮಹಾರಥಃ ।
ಧೃಷ್ಟದ್ಯುಮ್ನಸ್ತತಃ ಪಶ್ಚಾತ್ ಪಾಂಚಾಲೈರಭಿರಕ್ಷಿತಃ ॥೬॥

ಮಹಾರಥರಾದ ಸಾತ್ಯಕಿ ಮತ್ತು ಚೇಕಿತಾನರು ಅವರಿಗೆ ರಕ್ಷಕರಾಗಿದ್ದರು. ಅವರ ಹಿಂದೆ ಪಾಂಚಾಲರಿಂದ ರಕ್ಷಿತನಾದ ಧೃಷ್ಟದ್ಯುಮ್ನನಿದ್ದನು.

ತತೋ ಯುಧಿಷ್ಠಿರೋ ರಾಜಾ ಯಮಾಭ್ಯಾಂ ಸಹಿತಃ ಪ್ರಭುಃ ।
ಪ್ರಯಯೌ ಸಿಂಹನಾದೇನ ನಾದಯನ್ ಭರತರ್ಷಭ ॥೭॥

ಎಲೈ ಭರತಶ್ರೇಷ್ಠನೇ, ಅವರ ಹಿಂದೆ ನಕುಲ-ಸಹದೇವರಿಂದ ಸಹಿತನಾದ, ಪ್ರಭುವಾದ ಯುಧಿಷ್ಠಿರ ರಾಜನು ಸಿಂಹನಾದವನ್ನು ಮಾಡುತ್ತಾ ಹೊರಟನು.

ವಿರಾಟಸ್ತು ತತಃ ಪಶ್ಚಾತ್ ಸ್ವೇನ ಸೈನ್ಯೇನ ಸಂವೃತಃ ।
ದ್ರುಪದಶ್ಚ ಮಹಾರಾಜ ತತಃ ಪಶ್ಚಾದುಪಾದ್ರವತ್ ॥೮॥

ಎಲೈ ಮಹಾರಾಜನೇ, ಅವನ ಹಿಂದೆ ತನ್ನ ಸೈನ್ಯದಿಂದ ಪರಿವೃತನಾದ ವಿರಾಟನೂ, ಅವನ ಹಿಂದೆ ದ್ರುಪದನೂ ಹೊರಟರು.

ಕೇಕಯಾ ಭ್ರಾತರಃ ಪಂಚ ಧೃಷ್ಟಕೇತುಶ್ಚ ವೀರ್ಯವಾನ್ ।
ಜಘನಂ ಪಾಲಯಾಮಾಸ ಪಾಂಡುಸೈನ್ಯಸ್ಯ ಭಾರತ ॥೯॥

ಎಲೈ ಭಾರತನೇ, ಕೇಕಯದೇಶದ ಏವರು ಸಹೋದರರು ಮತ್ತು ಪರಾಕ್ರಮಶಾಲಿಯಾದ ಧೃಷ್ಟಕೇತು ಪಾಂಡವ ಸೈನ್ಯದ ಹಿಂಭಾಗವನ್ನು ರಕ್ಷಿಸಿದರು.

ಏವಂ ವ್ಯೂಹ್ಯ ಮಹತ್ಸೈನ್ಯಂ ಪಾಂಡವಾಸ್ತವ ವಾಹಿನೀಮ್ ।
ಅಭ್ಯದ್ರವಂತ ಸಂಗ್ರಾಮೇ ತ್ಯಕ್ತ್ವಾ ಜೀವಿತಮಾತ್ಮನಃ ॥೧೦॥

ಹೀಗೆ ಪಾಂಡವರು ತಮ್ಮ ದೊಡ್ಡ ಸೈನ್ಯವನ್ನು ವ್ಯೂಹವಾಗಿ ರಚಿಸಿ ಯುದ್ಧದಲ್ಲಿ ಪ್ರಾಣದ ಆಸೆಯನ್ನು ತೊರೆದು ನಿನ್ನ ಸೈನ್ಯದ ಕಡೆಗೆ ಮುನ್ನುಗ್ಗಿದರು.

ತಥೈವ ಕುರವೋ ರಾಜನ್ ಭೀಷ್ಮಂ ಕೃತ್ವಾ ಮಹಾಬಲಮ್ ।
ಅಗ್ರತಃ ಸರ್ವಸೈನ್ಯಾನಾಂ ಪ್ರಯಯುಃ ಪಾಂಡವಾನ್ ಪ್ರತಿ ॥೧೧॥

ಎಲೈ ರಾಜನೇ, ಹಾಗೆಯೇ ಕುರುಗಳೂ ಸಹ ಮಹಾಬಲರಾದ ಭೀಷ್ಮರನ್ನು ಎಲ್ಲ ಸೈನ್ಯಗಳ ಮುಂಭಾಗದಲ್ಲಿಟ್ಟುಕೊಂಡು ಪಾಂಡವರ ಕಡೆಗೆ ಹೊರಟರು.

ಪುತ್ರೈಸ್ತವ ದುರಾಧರ್ಷೈ ರಕ್ಷಿತಃ ಸುಮಹಾಬಲೈಃ ।
ತತೋ ದ್ರೋಣೋ ಮಹೇಷ್ವಾಸಃ ಪುತ್ರಶ್ಚಾಸ್ಯ ಮಹಾರಥಃ ॥೧೨॥

ಅವರ ಹಿಂದೆ ನಿನ್ನ ಮಹಾಬಲಿಷ್ಠರಾದ, ಪುತ್ರರಿಂದ ರಕ್ಷಿತರಾದ, ಮಹಾಧನುರ್ಧಾರಿಗಳಾದ ದ್ರೋಣರೂ ಮತ್ತು ಅವರ ಪುತ್ರರಾದ ಅಶ್ವತ್ಥಾಮರೂ ಇದ್ದರು.

ಭಗದತ್ತಸ್ತತಃ ಪಶ್ಚಾದ್ ಗಜಾನೀಕೇನ ಸಂವೃತಃ ।
ಕೃಪಶ್ಚ ಕೃತವರ್ಮಾ ಚ ಭಗದತ್ತಮನುವ್ರತೌ ॥೧೩॥

ಅವರ ಹಿಂದೆ ತನ್ನ ಗಜಸೇನೆಯಿಂದ ಪರಿವೃತನಾದ ಭಗದತ್ತನೂ ಮತ್ತು ಭಗದತ್ತನ ಹಿಂದೆ ಕೃಪ ಮತ್ತು ಕೃತವರ್ಮರೂ ಇದ್ದರು.

ಕಾಂಬೋಜರಾಜೋ ಬಲವಾಂಸ್ತತಃ ಪಶ್ಚಾತ್ ಸುದಕ್ಷಿಣಃ ।
ಮಾಗಧಶ್ಚ ಜಯತ್ಸೇನಃ ಸೌಬಲಶ್ಚ ಬೃಹದ್ಬಲಃ ॥೧೪॥

ಅವರ ಹಿಂದೆ ಕಾಂಬೋಜರಾಜ, ಬಲಿಷ್ಠನಾದ ಸುದಕ್ಷಿಣ, ಮಗಧ ದೇಶದ ಜಯತ್ಸೇನ ಮತ್ತು ಸೌಬಲದೇಶದ ಬೃಹದ್ಬಲರಿದ್ದರು.

ತಥೇತರೇ ಮಹೇಷ್ವಾಸಾಃ ಸುಶರ್ಮಪ್ರಮುಖಾ ನೃಪಾಃ ।
ಜಘನಂ ಪಾಲಯಾಮಾಸುಸ್ತವ ಸೈನ್ಯಸ್ಯ ಭಾರತ ॥೧೫॥

ಎಲೈ ಭಾರತನೇ, ಹಾಗೆಯೇ ಸುಶರ್ಮ ಮೊದಲಾದ ಮಹಾಧನುರ್ಧಾರಿಗಳಾದ ರಾಜರು ನಿನ್ನ ಸೈನ್ಯದ ಹಿಂಭಾಗವನ್ನು ರಕ್ಷಿಸಿದರು.

ದಿವಸೇ ದಿವಸೇ ಹ್ಯಸ್ಮೇ ಭೀಷ್ಮಃ ಶಾಂತನವೋ ಯುಧಿ ।
ಆಸುರಾನಕರೋದ್ ವ್ಯೂಹಾನ್ ಪೈಶಾಚಾನಥ ರಾಕ್ಷಸಾನ್ ॥೧೬॥

ದಿವಸಗಳು ಕಳೆದಂತೆ ಕಳೆದಂತೆ ಶಂತನುಪುತ್ರರಾದ ಭೀಷ್ಮರು ಯುದ್ಧದಲ್ಲಿ ಅಸುರವ್ಯೂಹಗಳನ್ನೂ, ಪಿಶಾಚವ್ಯೂಹಗಳನ್ನೂ ಮತ್ತು ರಾಕ್ಷಸ ವ್ಯೂಹಗಳನ್ನೂ ರಚಿಸಿದರು.

ತತಃ ಪ್ರವವೃತೇ ಯುದ್ಧಂ ತವ ತೇಷಾಂ ಚ ಭಾರತ ।
ಅನ್ಯೋನ್ಯಂ ನಿಘ್ನತಾಂ ರಾಜನ್ ಯಮರಾಷ್ಟ್ರವಿವರ್ಧನಮ್ ॥೧೭॥

ಎಲೈ ಭಾರತನೇ, ರಾಜನೇ, ಅನಂತರ ನಿನ್ನ ಸೈನ್ಯಕ್ಕೂ ಅವರಿಗೂ ಪರಸ್ಪರವಾಗಿ ಸಂಹಾರ ಮಾಡುವ ಯಮರಾಷ್ಟ್ರವನ್ನು ವರ್ಧಿಸುವ ಯುದ್ಧವು ಪ್ರವೃತ್ತವಾಯಿತು.

ಅರ್ಜುನಪ್ರಮುಖಾಃ ಪಾರ್ಥಾಃ ಪುರಸ್ಕೃತ್ಯ ಶಿಖಂಡಿನಮ್ ।
ಭೀಷ್ಮಂ ಯುದ್ಧೇಽಭ್ಯವರ್ತಂತ ಕಿರಂತೋ ವಿವಿಧಾನ್ ಶರಾನ್ ॥೧೮॥

ಅರ್ಜುನ ಮೊದಲಾದ ಪಾಂಡವರು ಶಿಖಂಡಿಯನ್ನು ಮುಂದ ಮಾಡಿಕೊಂಡು ಅನೇಕ ವಿಧವಾದ ಬಾಣಗಳನ್ನು ಪ್ರಯೋಗಿಸುತ್ತಾ ಯುದ್ಧದಲ್ಲಿ ಭೀಷ್ಮರ ಕಡೆಗೆ ನುಗ್ಗಿದರು.

ತತ್ರ ಭಾರತ ಭೀಮೇನ ಪೀಡಿತಾಸ್ತಾವಕಾಃ ಶರೈಃ ।
ರುಧಿರೌಘಪರಿಕ್ಲಿನ್ನಾಃ ಪರಲೋಕಂ ಯಯುಸ್ತದಾ ॥೧೯॥

ಎಲೈ ಭಾರತನೇ, ಆಗ ಭೀಮಸೇನನ ಬಾಣಗಳಿಂದ ಪೀಡಿತರಾದ ನಿನ್ನ ಸೈನಿಕರು ರಕ್ತಸಮೂಹದಿಂದ ಒದ್ದೆಯಾಗಿ ಪರಲೋಕವನ್ನು ಹೊಂದಿದರು.

ನಕುಲಃ ಸಹದೇವಶ್ಚ ಸಾತ್ಯಕಿಶ್ಚ ಮಹಾರಥಃ ।
ತವ ಸೈನ್ಯಂ ಸಮಾಸಾದ್ಯ ಪೀಡಯಾಮಾಸುರೋಜಸಾ ॥೨೦॥

ಮಹಾರಥರಾದ ನಕುಲ-ಸಹದೇವ ಮತ್ತು ಸಾತ್ಯಕಿ ಇವರು ನಿನ್ನ ಸೈನ್ಯವನ್ನು ತಲುಪಿ ತಮ್ಮ ಸಾಮರ್ಥ್ಯದಿಂದ ಪೀಡಿಸಿದರು.

ತೇ ವಧ್ಯಮಾನಾಃ ಸಮರೇ ತಾವಕಾ ಭರತರ್ಷಭ ।
ನಾಶಕ್ನುವನ್ ವಾರಯಿತುಂ ಪಾಂಡವಾನಾಂ ಮಹದ್ಬಲಮ್ ॥೨೧॥

ಎಲೈ ಭರತಶ್ರೇಷ್ಠನೇ, ಅವರಿಂದ ಯುದ್ಧದಲ್ಲಿ ವಧಿಸಲ್ಪಡುತ್ತಿದ್ದ ನಿನ್ನವರು ಪಾಂಡವರ ದೊಡ್ಡ ಸೈನ್ಯವನ್ನು ತಡೆಯಲು ಶಕ್ತರಾಗಲಿಲ್ಲ.

ತತಸ್ತು ತಾವಕಂ ಸೈನ್ಯಂ ವಧ್ಯಮಾನಂ ಸಮಂತತಃ ।
ಸಂಪ್ರಾದ್ರವದ್ ದಿಶೋ ರಾಜನ್ ಕಾಲ್ಯಮಾನಂ ಮಹಾರಥೈಃ ॥೨೨॥

ಆಗ ಎಲೈ ರಾಜನೇ, ಪಾಂಡವರ ಸೈನ್ಯದ ಮಹಾರಥರಿಂದ ಕಲಕಾಡಲ್ಪಟ್ಟು ವಧಿಸಲ್ಪಡುತ್ತಿದ್ದ ನಿನ್ನ ಸೈನ್ಯವು ಎಲ್ಲ ಕಡೆಗಳಲ್ಲಿಯೂ ದಿಕ್ಕು-ದಿಕ್ಕುಗಳಿಗೆ ಓಡಿಹೋಯಿತು.

ತ್ರಾತಾರಂ ನಾಧ್ಯಗಚ್ಛಂತ ತಾವಕಾ ಭರತರ್ಷಭ ।
ವಧ್ಯಮಾನಾಃ ಶಿತೈರ್ಬಾಣೈಃ ಪಾಂಡವೈಃ ಸಹಸೃಂಜಯೈಃ ॥೨೩॥

ಎಲೈ ಭರತಶ್ರೇಷ್ಠನೇ, ಪಾಂಡವರ ಮತ್ತು ಸೃಂಜಯರ ತೀಕ್ಷ್ಣವಾದ ಬಾಣಗಳಿಂದ ಪ್ರಹಾರಕ್ಕೆ ಒಳಗಾದ ನಿನ್ನವರು ಯಾವ ರಕ್ಷಕನನ್ನೂ ಹೊಂದಲಿಲ್ಲ.

ಧೃತರಾಷ್ಟ್ರಃ

ಪೀಡ್ಯಮಾನಂ ಬಲಂ ಪಾರ್ಥೈರ್ದೃಷ್ಟ್ವಾ ಭೀಷ್ಮಃ ಪರಾಕ್ರಮೀ ।
ಯದಕಾರ್ಷೀದ್ ರಣೇ ಕ್ರುದ್ಧಸ್ತನ್ಮಮಾಚಕ್ಷ್ವ ಸಂಜಯ ॥೨೪॥

ಧೃತರಾಷ್ಟ್ರ– ಎಲೈ ಸಂಜಯನೇ, ತಮ್ಮ ಸೈನ್ಯವು ಪಾಂಡವರಿಂದ ಪೀಡಿಸಲ್ಪಡುತ್ತಿರುವುದನ್ನು ನೋಡಿ ಪರಾಕ್ರಮಶಾಲಿಗಳಾದ ಭೀಷ್ಮರು ಕ್ರುದ್ಧರಾಗಿ ಯುದ್ಧದಲ್ಲಿ ಏನು ಮಾಡಿದರೆಂದು ನನಗೆ ಹೇಳು.

ಕಥಂ ವಾ ಪಾಂಡವಾನ್ ಯುದ್ಧೇ ಪ್ರತ್ಯುದ್ಯಾತಃ ಪರಂತಪಃ ।
ವಿನಿಘ್ನನ್ ಸೋಮಕಾನ್ ವೀರಾಂಸ್ತನ್ಮಮಾಚಕ್ಷ್ವ ಸಂಜಯ ॥೨೫॥

ಎಲೈ ಸಂಜಯನೇ, ಶತ್ರುತಾಪಕರಾದ ಅವರು ಸೋಮಕವೀರರನ್ನು ಸಂಹರಿಸುತ್ತಾ ಯುದ್ಧದಲ್ಲಿ ಪಾಂಡವರ ಮೇಲೆ ಹೇಗೆ ಮುನ್ನುಗ್ಗಿದರು ಎಂಬುದನ್ನು ನನಗೆ ಹೇಳು.

ಸಂಜಯಃ

ಆಚಕ್ಷೇ ತೇ ಮಹಾರಾಜ ಯದಕಾರ್ಷೀತ್ ಪಿತಾಮಹಃ ।
ಪೀಡಿತೇ ತವ ಪುತ್ರಸ್ಯ ಸೈನ್ಯೇ ಪಾಂಡವಸೃಂಜಯೈಃ ॥೨೬॥

ಸಂಜಯ– ಎಲೈ ಮಹಾರಾಜನೇ, ಪಾಂಡವರಿಂದ ಮತ್ತು ಸೃಂಜಯರಿಂದ ನಿನ್ನ ಸೈನ್ಯವು ಪೀಡಿತವಾದಾಗ ಪಿತಾಮಹರು ಏನು ಮಾಡಿದರೆಂದು ನಿನಗೆ ಹೇಳುತ್ತೇನೆ.

ಪ್ರಹೃಷ್ಟಮನಸಃ ಶೂರಾಃ ಪಾಂಡವಾಃ ಪಾಂಡುಪೂರ್ವಜ ।
ಅಭ್ಯವರ್ತಂತ ನಿಘ್ನಂತಸ್ತವ ಪುತ್ರಸ್ಯ ವಾಹಿನೀಮ್ ॥೨೬॥

ಎಲೈ ಪಾಂಡುವಿನ ಅಣ್ಣನೇ, ಶೂರರಾದ ಪಾಂಡವರು ಸಂತೋಷಗೊಂಡ ಮನಸ್ಸಿನಿಂದ ಕೂಡಿದವರಾಗಿ ನಿನ್ನ ಪುತ್ರರ ಸೈನ್ಯವನ್ನು ಸಂಹರಿಸುತ್ತಾ ಮುಂದುನುಗ್ಗಿದರು.

ತಂ ವಿನಾಶಂ ಮನುಷ್ಯೇಂದ್ರ ನರವಾರಣವಾಜಿನಾಮ್ ।
ನಾಮೃಷ್ಯತ ತದಾ ಭೀಷ್ಮಃ ಸೈನ್ಯಘಾತಂ ರಣೇ ಪರೈಃ ॥೨೮॥

ಎಲೈ ಮನುಷ್ಯೇಂದ್ರನೇ, ಯುದ್ಧದಲ್ಲಿ ಪರರಿಂದ ಉಂಟಾಗುತ್ತಿರುವ ಯೋಧ, ಗಜ, ಅಶ್ವಗಳ ಸೈನ್ಯದ ವಧೆಯನ್ನು ಭೀಷ್ಮರು ಸಹಿಸಲಿಲ್ಲ.

ಸ ಪಾಂಡವಾನ್ ಮಹೇಷ್ವಾಸಃ ಪಾಂಚಾಲಾಂಶ್ಚ ಸಸೃಂಜಯಾನ್ ।
ಅಭ್ಯದ್ರವತ ದುರ್ಧರ್ಷಸ್ತ್ಯಕ್ತ್ವಾ ಜೀವಿತಮಾತ್ಮನಃ ॥೨೯॥

ಮಹಾಧನುರ್ಧಾರಿಗಳೂ, ಸೋಲಿಸಲು ಕಷ್ಟಸಾಧ್ಯರೂ ಆದ ಅವರು ತಮ್ಮ ಜೀವಿತದ ಹಂಗನ್ನು ತೊರೆದು ಪಾಂಡವರ, ಪಾಂಚಾಲರ ಮತ್ತು ಸೃಂಜಯರ ಕಡೆಗೆ ನುಗ್ಗಿದರು.

ಸ ಪಾಂಡವಾನಾಂ ಪ್ರವರಾನ್ ಪಂಚ ರಾಜನ್ ಮಹಾರಥಾನ್ ।
ಆತತಶಸ್ತ್ರಾನ್ ರಣೇ ಯತ್ತಾನ್ ವಾರಯಾಮಾಸ ಸಾಯಕೈಃ ।
ನಾರಾಚೈರ್ವತ್ಸದಂತೈಶ್ಚ ಶಿತೈರಂಜಲಿಕೈಸ್ತಥಾ ॥೩೦॥

ಎಲೈ ರಾಜನೇ, ಅವರು ಕೈಯಲ್ಲಿ ಶಸ್ತ್ರವನ್ನು ಹಿಡಿದ, ಯುದ್ಧೋದ್ಯುಕ್ತರಾದ ಪಾಂಡವರ ಐವರು ಮಹಾರಥಶ್ರೇಷ್ಠರನ್ನು ತಮ್ಮ ಬಾಣಗಳಿಂದಲೂ, ನಾರಾಚಗಳಿಂದಲೂ, ವತ್ಸದಂತಗಳಿಂದಲೂ, ತೀಕ್ಷ್ಣವಾದ ಅಂಜಲಿಗಳಿಂದಲೂ ತಡೆದರು.

ನಿಜಘ್ನೇ ಸಮರೇ ಕ್ರುದ್ಧೋ ಹಸ್ಮಶ್ವಮಮಿತಂ ಬಹು ।
ರಥಿನೋऽಪಾತಯದ್ ರಾಜನ್ ರಥೇಭ್ಯಃ ಪುರುಷರ್ಷಭಃ ॥೩೧॥

ಕ್ರುದ್ಧರಾದ ಭೀಷ್ಮರು ಯುದ್ಧದಲ್ಲಿ ಅಮಿತವಾದ ಅಶ್ವ-ಗಜಗಳನ್ನು ಕೊಂದರು. ಪುರುಷಶ್ರೇಷ್ಠರಾದ ಅವರು ಎಲೈ ರಾಜನೇ, ರಥಗಳಿಂದ ರಥಿಕರನ್ನು ಉರುಳಿಸಿದರು.

ಸಾದಿನಶ್ಚಾಶ್ವಶೇಭ್ಯಃ ಪದಾತೀಂಶ್ಚ ಸಮಾಗತಾನ್ ।
ಗಜಾರೋಹಾನ್ ಗಜೇಭ್ಯಶ್ಚ ಪರೇಷಾಂ ವಿದಧದ್ ಭಯಮ್ ॥೩೨॥

ಅಶ್ವಗಳಿಂದ ಅಶ್ವಾರೋಹಿಗಳನ್ನೂ, ಹತ್ತಿರ ಬಂದ ಪದಾತಿಗಳನ್ನೂ, ಗಜಗಳಿಂದ ಗಜಾರೋಹಿಗಳನ್ನೂ ಉರುಳಿಸುತ್ತಾ ಅವರು ಶತ್ರುಗಳಿಗೆ ಭಯವನ್ನು ಉಂಟು ಮಾಡಿದರು.

ತಮೇಕಂ ಸಮರೇ ಭೀಷ್ಮಂ ತ್ವರಮಾಣಂ ಮಹಾರಥಮ್ ।
ಪಾಂಡವಾಃ ಸಮವರ್ತಂತ ವಜ್ರಪಾಣಿಮಿವಾಸುರಾಃ ॥೩೩॥

ಯುದ್ಧದಲ್ಲಿ ತ್ವರಮಾಡಿ ಕಾರ್ಯವನ್ನು ಮಾಡುತ್ತಿದ್ದ ಮಹಾರಥರಾದ ಒಬ್ಬ ಭೀಷ್ಮರ ಮೇಲೆ ವಜ್ರಪಾಣಿಯಾದ ಇಂದ್ರನ ಮೇಲೆ ಅಸುರರು ಮುನ್ನುಗ್ಗಿದಂತೆ ಪಾಂಡವರು ನುಗ್ಗಿದರು.

ಶಕ್ರಾಶನಿಸಮಸ್ಪರ್ಶಾನ್ ವಿಮುಂಚನ್ ನಿಶಿತಾನ್ ಶರಾನ್ ।
ದಿಕ್ಷ್ವದೃಶ್ಯತ ಸರ್ವಾಸು ಘೋರಂ ಸಂಧಾರಯನ್ ವಪುಃ ॥೩೪॥

ಭೀಷ್ಮರು ಇಂದ್ರನ ವಜ್ರಾಯುಧಕ್ಕೆ ಸಮಾನವಾದ ಸ್ಪರ್ಶವುಳ್ಳ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸುತ್ತಾ ಘೋರವಾದ ಶರೀರವನ್ನು ಧರಿಸಿ ಎಲ್ಲ ದಿಕ್ಕುಗಳಲ್ಲಿಯೂ ಕಂಡುಬಂದರು.

ಮಂಡಲೀಕೃತಮೇವಾಸ್ಯ ನಿತ್ಯಂ ಧನುರದೃಶ್ಯತ ।
ಸಂಗ್ರಾಮೇ ಯುಧ್ಯಮಾನಸ್ಯ ಶಕ್ರಾಶನಿಸಮಂ ಮಹತ್ ॥೩೫॥

ರಣರಂಗದಲ್ಲಿ ಯುದ್ಧವನ್ನು ಮಾಡುವ ಅವರ ಇಂದ್ರನ ಧನುಸ್ಸಿನ ಕಾಂತಿಯನ್ನು ಹೊಂದಿದ ದೊಡ್ಡ ಧನುಸ್ಸು ಯಾವಾಗಲೂ ಮಂಡಲಾಕಾರವಾಗಿರುವುದೇ ಕಂಡು ಬರುತ್ತಿದ್ದಿತು.

ತದ್ ದೃಷ್ಟ್ವಾ ಸಮರೇ ಕರ್ಮ ತವ ಪುತ್ರಾ ವಿಶಾಂಪತೇ ।
ವಿಸ್ಮಯಂ ಪರಮಂ ಪ್ರಾಪ್ತಾಃ ಪಿತಾಮಹಮಪೂಜಯನ್ ॥೩೬॥

ಎಲೈ ರಾಜನೇ, ರಣರಂಗದಲ್ಲಿ ಭೀಷ್ಮರ ಆ ಕಾರ್ಯವನ್ನು ನೋಡಿ ನಿನ್ನ ಪುತ್ರರು ಬಹಳ ವಿಸ್ಮಯವನ್ನು ಹೊಂದಿ ಪಿತಾಮಹರನ್ನು ಪೂಜಿಸಿದರು.

ಪಾರ್ಥಾ ವಿಮನಸೋ ಭೂತ್ವಾ ಪ್ರೈಕ್ಷಂತ ಪಿತರಂ ತವ ।
ಯುಧ್ಯಮಾನಂ ರಣೇ ಶೂರಂ ವಿಪ್ರಚಿತ್ತಿಮಿವಾಮರಾಃ ।
ನ ಚೈನಂ ವಾರಯಾಮಾಸುರ್ಮೃತ್ಯಾನನಮಿವಾಂತಕಮ್ ॥೩೭॥

ಪಾಂಡವರು ಯುದ್ಧದಲ್ಲಿ ಶೂರನಾದ ವಿಪ್ರಚಿತ್ತಿಯನ್ನು ದೇವತೆಗಳು ನೋಡಿದಂತೆ ಯುದ್ಧವನ್ನು ಮಾಡುತ್ತಿದ್ದ ನಿನ್ನ ತಂದೆಯಾದ ಭೀಷ್ಮರನ್ನು ವಿಷಣ್ಣವಾದ ಮನಸ್ಸಿನಿಂದ ನೋಡಿದರು. ಬಾಯ್ತೆರೆದ ಮೃತ್ಯುವಿನಂತಿದ್ದ ಅವರನ್ನು ತಡೆಯಲು ಅವರಿಗೆ ಸಾಧ್ಯವಾಗಲಿಲ್ಲ.

ದಶಮೇಽಹನಿ ಸಂಪ್ರಾಪ್ತೇ ರಥಾನೀಕಂ ಶಿಖಂಡಿನಃ ।
ಅದಹನ್ ನಿಶಿತೈರ್ಬಾಣೈಃ ಕೃಷ್ಣವರ್ತ್ಮೇವ ಕಾನನಮ್ ॥೩೮॥

ಹತ್ತನೆಯ ದಿನವು ಪ್ರಾಪ್ತವಾಗಿರಲು ಶಿಖಂಡಿಯ ರಥಸಮೂಹವನ್ನು ಭೀಷ್ಮರು ತಮ್ಮ ತೀಕ್ಷ್ಣವಾದ ಬಾಣಗಳಿಂದ ಅಗ್ನಿಯು ಕಾಡನ್ನು ಸುಡುವಂತೆ ಸುಟ್ಟುಹಾಕಿದರು.

ತಂ ಶಿಖಂಡೀ ತ್ರಿಭಿರ್ಬಾಣೈರಭ್ಯವಿಧ್ಯತ್ ಸ್ತನಾಂತರೇ ।
ಆಶೀವಿಷಮಿವ ಕ್ರುದ್ಧಂ ಕಾಲಸೃಷ್ಟಮಿವಾಂತಕಮ್ ॥೩೯॥

ಸರ್ಪದಂತೆ ಕ್ರುದ್ಧರಾದ, ಯುಗಾಂತಕಾಲದಲ್ಲಿ ಸೃಷ್ಟನಾದ ಯಮನಂತಿರುವ ಭೀಷ್ಮರಿಗೆ ಶಿಖಂಡಿಯು ಮೂರು ಬಾಣಗಳಿಂದ ಅವರ ಸ್ತನಗಳ ಮಧ್ಯದಲ್ಲಿ ಹೊಡೆದನು.

ಸ ತೇನಾತಿಭೃಶಂ ವಿದ್ಧಃ ಪ್ರೇಕ್ಷ್ಯ ಭೀಷ್ಮಃ ಶಿಖಂಡಿನಮ್ ।
ಅನಿಚ್ಛನ್ನಪಿ ಸಂಕ್ರುದ್ಧಃ ಪ್ರಹಸನ್ನಿದಮಬ್ರವೀತ್ ॥೪೦॥

ಆ ಬಾಣಗಳಿಂದ ಗಾಢವಾಗಿ ಗಾಯಗೊಂಡ ಭೀಷ್ಮರು ಶಿಖಂಡಿಯನ್ನು ನೋಡಿ ಕ್ರುದ್ಧರಾಗಿ ಅವನ ಜೊತೆಯಲ್ಲಿ ಯುದ್ಧವನ್ನು ಮಾಡುವ ಇಚ್ಛೆಯಿಲ್ಲದೆ ನಗುತ್ತಾ ಹೀಗೆ ಮಾತನಾಡಿದರು.

ಕಾಮಮಭ್ಯಸ ವಾ ಮಾ ವಾ ನ ತ್ವಾಂ ಯೋತ್ಸ್ಯೇ ಕಥಂಚನ ।
ಯೈವ ಹಿ ತ್ವಂ ಕೃತಾ ಧಾತ್ರಾ ಸೈವ ಹಿ ತ್ವಂ ಶಿಖಂಡಿನೀ ॥೪೧॥

ನೀನು ನಿನ್ನ ಮನಸ್ಸಿಗೆ ಬಂದಂತೆ ನನ್ನ ಮೇಲೆ ಬಾಣಗಳನ್ನು ಬಿಡು ಅಥವಾ ಸುಮ್ಮನಿರು. ಏನಾದರೂ ನಾನು ನಿನ್ನ ಜೊತೆಯಲ್ಲಿ ಯುದ್ಧವನ್ನು ಮಾಡುವುದಿಲ್ಲ. ಹಿಂದೆ ಬ್ರಹ್ಮದೇವರು ನಿನ್ನನ್ನು ಯಾವ ಸ್ತ್ರೀಯಾಗಿ ಸೃಷ್ಟಿಸಿದರೋ ನೀನು ಅಂತಹ ಸ್ತ್ರೀಯಾಗಿದ್ದೀಯೆ (ಎಂದು ಹೇಳಿದರು).

ತಸ್ಯ ತದ್ವಚನಂ ಶ್ರುತ್ವಾ ಶಿಖಂಡೀ ಕ್ರೋಧಮೂರ್ಚ್ಛಿತಃ ।
ಉವಾಚ ಭೀಷ್ಮಂ ಸಮರೇ ಶಕ್ಟಿನೇ ಪರಿಲೇಲಿಹನ್ ॥೪೨॥

ಅವರ ಆ ಮಾತನ್ನು ಕೇಳಿ ಕ್ರೋಧಮೂರ್ಛಿತನಾದ ಶಿಖಂಡಿಯು ತನ್ನ ಕಟಬಾಯಿಯನ್ನು ಸವರಿಕೊಳ್ಳುತ್ತಾ ರಣರಂಗದಲ್ಲಿ ಭೀಷ್ಮರನ್ನು ಕುರಿತು ಹೇಳಿದನು.

ಜಾನಾಮಿ ತ್ವಾಂ ಮಹಾಬಾಹೋ ಕ್ಷತ್ರಿಯಾಣಾಂ ಕ್ಷಯಂಕರಮ್ ।
ಮಯಾ ಶ್ರುತಂ ಚ ತೇ ಯುದ್ಧಂ ಜಾಮದಗ್ನ್ಯೇನ ವೈ ಸಹ ॥೪೩॥

ಎಲೈ ಮಹಾಬಾಹುವೇ, ನೀವು ಕ್ಷತ್ರಿಯರ ವಿನಾಶಕರು ಎಂದು ನಾನು ತಿಳಿದಿದ್ದೇನೆ. ನೀವು ಪರಶುರಾಮರ ಜೊತೆಯಲ್ಲಿ ಮಾಡಿದ ಯುದ್ಧವನ್ನೂ ನಾನು ಕೇಳಿದ್ದೇನೆ.

ದಿವ್ಯಶ್ಚ ತೇ ಪ್ರಭಾವೋಽಯಂ ಸ ಮಯಾ ಬಹುಶಃ ಶ್ರುತಃ ।
ಜಾನನ್ನಪಿ ಪ್ರಭಾವಂ ತೇ ಯೋತ್ಸ್ಯೇಽದ್ಯಾಹಂ ತ್ವಯಾ ಸಹ ॥೪೪॥

ನೀವು ದಿವ್ಯಸಾಮರ್ಥ್ಯವುಳ್ಳವರು. ಅದನ್ನು ನಾನು ಅನೇಕ ಬಾರಿ ಕೇಳಿದ್ದೇನೆ. ನಿಮ್ಮ ಸಾಮರ್ಥ್ಯವನ್ನು ತಿಳಿದಿದ್ದರೂ ಸಹ ನಾನು ಈ ದಿನ ನಿಮ್ಮ ಜೊತೆಯಲ್ಲಿ ಯುದ್ಧವನ್ನು ಮಾಡುವೆನು.

ಪಾಂಡವಾನಾಂ ಪ್ರಿಯಂ ಕುರ್ವನ್ನಾತ್ಮನಶ್ಚ ನರೋತ್ತಮ ।
ಅದ್ಯ ತ್ವಾ ಯೋಧಯಿಷ್ಯಾಮಿ ರಣೇ ಪುರುಷಸತ್ತಮ ॥೪೫॥

ಎಲೈ ಪುರುಷಶ್ರೇಷ್ಠರೇ, ಪಾಂಡವರಿಗೂ ಮತ್ತು ನನಗೂ ಹಿತವನ್ನು ಉಂಟುಮಾಡುತ್ತಾ ಈ ದಿನ ರಣರಂಗದಲ್ಲಿ ನಿಮ್ಮ ಜೊತೆಯಲ್ಲಿ ಯುದ್ಧವನ್ನು ಮಾಡುವೆನು.

ಧ್ರುವಂ ಚ ತ್ವಾ ಹನಿಷ್ಯಾಮಿ ಶಪೇ ಸತ್ಯೇನ ತೇऽಗ್ರತಃ ।
ಏತಚ್ಛ್ರುತ್ವಾ ವಚೋ ಮಹ್ಯಂ ಯತ್ ಕ್ಷಮಂ ತತ್ ಸಮಾಚರ ॥೪೬॥

ನಿಶ್ಚಿತವಾಗಿ ನಿಮ್ಮನ್ನು ಕೊಲ್ಲುವೆನು. ನಿಮ್ಮ ಮುಂದೆ ಇದನ್ನು ಸತ್ಯಶಪಥವನ್ನು ಮಾಡಿ ಹೇಳುತ್ತಿದ್ದೇನೆ. ಈ ನನ್ನ ಮಾತನ್ನು ಕೇಳಿ ನಿಮಗೆ ಹೇಗೆ ತೋರುತ್ತದಯೋ ಹಾಗೆ ಮಾಡಿ.

ಕಾಮಮಭ್ಯಸ ವಾ ಮಾ ವಾ ನ ಮೇ ಜೀವನ್ ವಿಮೋಕ್ಷ್ಯಸೇ ।
ಸುದೃಷ್ಟಃ ಕ್ರಿಯತಾಂ ಭೀಷ್ಮ ಲೋಕೋऽಯಂ ಸಮಿತಿಂಜಯ ॥೪೭॥

ನೀವು ನನ್ನ ಮೇಲೆ ಬೇಕಾದರೆ ಬಾಣವನ್ನು ಪ್ರಯೋಗಿಸಿ ಅಥವಾ ಸುಮ್ಮನಿರಿ. ಆದರೆ ಈ ದಿನ ನೀವು ಜೀವಸಹಿತವಾಗಿ ಇಲ್ಲಿಂದ ಹೋಗುವುದಿಲ್ಲ. ಎಲೈ ಸೈನ್ಯವನ್ನು ಜಯಿಸುವ ಭೀಷ್ಮರೇ, ಈ ಲೋಕವನ್ನು ಚೆನ್ನಾಗಿ ನೋಡಿ.

ಏವಮುಕ್ತ್ವಾ ತತೋ ಭೀಷ್ಮಂ ಪಂಚಭಿರ್ನತಪರ್ವಭಿಃ ।
ಅವಿಧ್ಯತ ರಣೇ ರಾಜನ್ ಪ್ರಣುನ್ನಂ ವಾಕ್ಯಸಾಯಕೈಃ ॥೪೮॥

ಎಲೈ ರಾಜನೇ, ಹೀಗೆ ಹೇಳಿ ತನ್ನ ವಾಗ್ಬಾಣಗಳಿಂದ ಗಾಯಗೊಂಡ ಭೀಷ್ಮರ ಮೇಲೆ ಬಾಗಿದ ತುದಿಯುಳ್ಳ ಐದುಬಾಣಗಳನ್ನು ಪ್ರಯೋಗಿಸಿದನು.

ತಸ್ಯ ತದ್ವಚನಂ ಶ್ರುತ್ವಾ ಸವ್ಯಸಾಚೀ ಪರಂತಪಃ ।
ಕಾಲೋऽಯಮಿತಿ ಸಂಚಿಂತ್ಯ ಶಿಖಂಡಿನಮಚೋದಯತ್ ॥೪೯॥

ಶಿಖಂಡಿಯ ಆ ಮಾತುಗಳನ್ನು ಕೇಳಿ ಪರಂತಪನಾದ ಅರ್ಜುನನು ಇದೇ ಸರಿಯಾದ ಕಾಲವೆಂದು ತಿಳಿದು ಶಿಖಂಡಿಯನ್ನು ಪ್ರಚೋದಿಸಿದನು.

ಅಹಂ ತ್ವಾಮನುಯಾಸ್ಯಾಮಿ ಪರಾನ್ ವಿದ್ರಾವಯನ್ ಶರೈಃ ।
ಅಭದ್ರವ ಸುಸಂರಬ್ಧೋ ಭೀಷ್ಮಂ ಭೀಮಪರಾಕ್ರಮಮ್ ॥೫೦॥

ನಾನು ನನ್ನ ಬಾಣಗಳಿಂದ ಶತ್ರುಗಳನ್ನು ಓಡಿಸುತ್ತಾ ನಿನ್ನ ಹಿಂದೆ ಬರುವೆನು. ನೀನು ಬಹಳ ಕೋಪದಿಂದ ಕೂಡಿದವನಾಗಿ ಭಯಂಕರ ಪರಾಕ್ರಮವುಳ್ಳ ಭೀಷ್ಮರ ಮೇಲೆ ಎರಗುವವನಾಗು.

ನ ಹಿ ತೇ ಸಂಯುಗೇ ಪೀಡಾಂ ಶಕ್ತಃ ಕರ್ತುಂ ಮಹಾಬಲಃ ।
ತಸ್ಮಾದದ್ಯ ಮಹಾಬಾಹೋ ವೀರ ಭೀಷ್ಮಮಭಿದ್ರವ ॥೫೧॥

ಮಹಾಬಲರಾದ ಭೀಷ್ಮರು ಯುದ್ಧದಲ್ಲಿ ನಿನಗೆ ಪೀಡೆಯನ್ನು ಕೊಡಲು ಶಕ್ತರಲ್ಲ. ಆದ್ದರಿಂದ ವೀರನೇ, ಮಹಾಬಾಹುವೇ, ಈ ದಿನ ಭೀಷ್ಮರ ಕಡೆಗೆ ನುಗ್ಗುವವನಾಗು.

ಅಹತ್ವಾ ಸಮರೇ ಭೀಷ್ಮಂ ಯದಿ ಯಾಸ್ಯಸಿ ಮಾರಿಷ ।
ಅವಹಾಸ್ಯೋಽಸ್ಯ ಲೋಕಸ್ಯ ಭವಿಷ್ಯಸಿ ಮಯಾ ಸಹ ॥೫೨॥

ಎಲೈ ಶ್ರೇಷ್ಠನೇ, ಈ ದಿನ ಭೀಷ್ಮರನ್ನು ಕೊಲ್ಲದೆ ಹಿಂದಿರುಗಿದರೆ ನನ್ನ ಜೊತೆಯಲ್ಲಿ ನೀನು ಲೋಕದ ಅಪಹಾಸ್ಯಕ್ಕೆ ಗುರಿಯಾಗುವಿ.

ನಾವಹಾಸ್ಯಾ ಯಥಾ ವೀರ ಭವೇಮ ಪರಮಾಹವೇ ।
ತಥಾ ಕುರು ರಣೇ ಯತ್ನಂ ಸಾಧಯಸ್ವ ಪಿತಾಮಹಮ್ ॥೫೩॥

ಎಲೈ ವೀರನೇ, ನಾವು ಈ ದೊಡ್ಡ ಯುದ್ಧದಲ್ಲಿ ಲೋಕಕ್ಕೆ ಹಾಸ್ಯಾಸ್ಪದರಾಗದಂತೆ ಯುದ್ಧವನ್ನು ಮಾಡಿ ಭೀಷ್ಮರನ್ನು ಕೊಲ್ಲುವವನಾಗು.

ಅಹಂ ತೇ ರಕ್ಷಣಂ ಯುದ್ಧೇ ಕರಿಷ್ಯಾಮಿ ಪರಂತಪ ।
ವಾರಯನ್ ರಥಿನಃ ಸರ್ವಾನ್ ಸಾಧಯಸ್ವ ಪಿತಾಮಹಮ್ ॥೫೪॥

ಎಲೈ ಪರಂತಪನೇ, ಯುದ್ಧದಲ್ಲಿ ನಾನು ಎಲ್ಲ ರಥಿಕರನ್ನೂ ತಡೆಯುತ್ತಾ ನಿನ್ನ ರಕ್ಷಣೆಯನ್ನು ಮಾಡುವೆನು. ಭೀಷ್ಮರನ್ನು ಸಂಹರಿಸುವವನಾಗು.

ದ್ರೋಣಂ ಚ ದ್ರೋಣಪುತ್ರಂ ಚ ಕೃಪಂ ಚಾಥ ಸುಯೋಧನಮ್ ।
ಚಿತ್ರಸೇನಂ ವಿಕರ್ಣಂ ಚ ಸೈಂಧವಂ ಚ ಜಯದ್ರಥಮ್ ॥೫೫॥

ವಿಂದಾನುವಿಂದಾವಾವಂತ್ಯೌ ಕಾಂಬೋಜಂ ಚ ಸುದಕ್ಷಿಣಮ್ ।
ಭಗದತ್ತಂ ತಥಾ ಶೂರಂ ಮಾಗಧಂ ಚ ಮಹಾರಥಮ್ ॥೫೬॥

ಸೌಮದತ್ತಿಂ ರಣೇ ಶೂರಮಾರ್ಶ್ಯಶೃಂಗಿಂ ಚ ರಾಕ್ಷಸಮ್ ।
ತ್ರಿಗರ್ತರಾಜಂ ಚ ರಣೇ ಸಹ ಸರ್ವೈರ್ಮಹಾರಥೈಃ ।
ಅಹಮಾವಾರಯಿಷ್ಯಾಮಿ ವೇಲೇವ ಮಕರಾಲಯಮ್ ॥೫೭॥

ದ್ರೋಣರು, ದ್ರೋಣಪುತ್ರರಾದ ಅಶ್ವತ್ಥಾಮರು, ಕೃಪರು, ಸುಯೋಧನ, ಚಿತ್ರಸೇನ, ವಿಕರ್ಣ, ಸಿಂಧುದೇಶದ ಜಯದ್ರಥ, ಅವಂತಿದೇಶದ ವಿಂದಾನುವಿಂದರು, ಕಾಂಬೋಜದೇಶದ ಸುದಕ್ಷಿಣ, ಭಗದತ್ತ, ಮಗಧದೇಶದ ಶೂರನಾದ ಮಹಾರಥ, ಯುದ್ಧದಲ್ಲಿ ಶೂರನಾದ ಭೂರಿಶ್ರವ, ರಾಕ್ಷಸನಾದ ಅಲಂಬುಸ, ತ್ರಿಗರ್ತರಾಜನಾದ ಸುಶರ್ಮ ಇವರೆಲ್ಲರನ್ನೂ, ಉಳಿದ ಎಲ್ಲಾ ಮಹಾರಥರ ಜೊತೆಯಲ್ಲಿ ತೀರವು ಸಮುದ್ರವನ್ನು ತಡೆದಂತೆ ನಾನು ತಡೆಯುವೆನು.

ಕುರೂಂಶ್ಚ ಸಹಿತಾನ್ ಸರ್ವಾನ್ ಯೇ ಚೈಷಾಂ ಸೈನಿಕಾಃ ಸ್ಥಿತಾಃ ।
ನಿವಾರಯಿಷ್ಯಾಮಿ ರಣೇ ಸಾಧಯಸ್ವ ಪಿತಾಮಹಮ್ ॥೫೮॥

ಒಟ್ಟಾದ ಎಲ್ಲಾ ಕುರುಗಳನ್ನೂ ಮತ್ತು ಅವರ ಯೋಧರನ್ನೂ ನಾನು ನಿವಾರಿಸುವೆನು. ಯುದ್ಧದಲ್ಲಿ ಪಿತಾಮಹರನ್ನು ಕೊಲ್ಲುವವನಾಗು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಪಂಚಾಧಿಕಶತತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಪಂಚಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನೂರ ಐದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಆರನೆಯ ಅಧ್ಯಾಯ

ಹತ್ತನೆಯ ದಿವಸದ ಯುದ್ಧ. ಭೀಷ್ಮರ ಪ್ರತಾಪ.

ಧೃತರಾಷ್ಟ್ರಃ

ಕಥಂ ಶಿಖಂಡೀ ಗಾಂಗೇಯಮಭ್ಯಧಾವತ್ ಪಿತಾಮಹಮ್ ।
ಪಾಂಚಾಲ್ಯಃ ಸಮರೇ ಕ್ರುದ್ಧೋ ಧರ್ಮಾತ್ಮಾನಂ ಯತವ್ರತಮ್ ॥೧॥

ಧೃತರಾಷ್ಟ್ರ- ಪಾಂಚಾಲ ದೇಶದವನೂ, ಯುದ್ಧದಲ್ಲಿ ಕ್ರುದ್ಧನೂ ಆದ ಶಿಖಂಡಿಯು ನಿಯತವ್ರತವುಳ್ಳವರೂ, ಧರ್ಮಾತ್ಮರೂ ಆದ ಭೀಷ್ಮಪಿತಾಮಹರನ್ನು ಹೀಗೆ ಸೆಣೆಸಿದನು?

ಕೇಽರಕ್ಷನ್ ಪಾಂಡವಾನೀಕೇ ಶಿಖಂಡಿನಮುದಾಯುಧಮ್ ।
ತ್ವರಮಾಣಾಸ್ತ್ವರಾಕಾಲೇ ಜಿಗೀಷಂತೋ ಮಹಾರಥಾಃ ॥೨॥

ಜಾಗ್ರತೆಯಾಗಿ ಕಾರ್ಯವನ್ನು ಮಾಡಬೇಕಾದ ಕಾಲದಲ್ಲಿ ಭೀಷ್ಮರನ್ನು ಗೆಲ್ಲಲು ಬಯಸಿದ ಪಾಂಡವ ಸೈನ್ಯದ ಯಾವ ಮಹಾರಥರು ಕೈಯಲ್ಲಿ ಆಯುಧವನ್ನು ಹಿಡಿದ ಶಿಖಂಡಿಯನ್ನು ರಕ್ಷಿಸಿದರು?

ಕಥಂ ಶಾಂತನವೋ ಭೀಷ್ಮಃ ಸ ತಸ್ಮಿನ್ ದಶಮೇಽಹನಿ ।
ಅಯುಧ್ಯತ ಮಹಾವೀರ್ಯಃ ಪಾಂಡವೈಃ ಸಹಸೃಂಜಯೈಃ ॥೩॥

ಆ ಹತ್ತನೆಯ ದಿವಸದಲ್ಲಿ ಮಹಾಸಾಮರ್ಥ್ಯವುಳ್ಳವರೂ, ಶಂತನುಪುತ್ರರೂ ಆದ ಆ ಭೀಷ್ಮರು ಪಾಂಡವರ ಮತ್ತು ಸೃಂಜಯರ ಜೊತೆಯಲ್ಲಿ ಹೇಗೆ ಯುದ್ಧವನ್ನು ಮಾಡಿದರು?

ನ ಮೃಷ್ಯಾಮಿ ರಣೇ ಭೀಷ್ಮಂ ಪ್ರತ್ಯುದ್ಯಾತಂ ಶಿಖಂಡಿನಮ್ ।
ಕಚ್ಚಿನ್ನ ರಥಭಂಗೋಽಸ್ಯ ಧನುರ್ವಾಽಶೀರ್ಯತಾಸ್ಯತಃ ॥೪॥

ರಣರಂಗದಲ್ಲಿ ಶಿಖಂಡಿಯು ಭೀಷ್ಮರ ಕಡೆಗೆ ಮುನ್ನುಗ್ಗಿದನು ಎಂಬುದನ್ನೂ ನಾನು ಸಹಿಸಲಾರೆ. ಭೀಷ್ಮರ ರಥವು ಭಗ್ನವಾಯಿತೇ? ಅಥವಾ ಬಾಣಪ್ರಯೋಗವಾಗುವಾಗ ಅವರ ಧನುಸ್ಸು ಮುರಿಯಿತೇ?

ಸಂಜಯಃ

ನಾಶೀರ್ಯತ ಧನುಸ್ತಸ್ಯ ರಥಭಂಗೋ ನ ಚಾಭವತ್ ।
ಯುಧ್ಯಮಾನಸ್ಯ ಸಂಗ್ರಾಮೇ ಭೀಷ್ಮಸ್ಯ ಭರತರ್ಷಭ ।
ನಿಘ್ನತಃ ಸಮರೇ ಶತ್ರೂನ್ ಶರೈಃ ಸನ್ನತಪರ್ವಭಿಃ ॥೫॥

ಸಂಜಯ- ಎಲೈ ಭರತಶ್ರೇಷ್ಠನೇ, ರಣರಂಗದಲ್ಲಿ ತಮ್ಮ ಬಾಗಿದ ತುದಿಯುಳ್ಳ ಬಾಣಗಳಿಂದ ಶತ್ರುಗಳನ್ನು ಸಂಹರಿಸುತ್ತಾ ಯುದ್ಧಮಾಡುವ ಭೀಷ್ಮರ ಧನುಸ್ಸೂ ಮುರಿಯಲಿಲ್ಲ, ರಥವೂ ಭಗ್ನವಾಗಲಿಲ್ಲ.

ಅನೇಕಶತಸಾಹಸ್ರಾಸ್ತಾವಕಾನಾಂ ಮಹಾರಥಾಃ ।
ರಥದಂತಿಗಣಾ ರಾಜನ್ ಹಯಾಶ್ಚೈವ ಸುಸಜ್ಜಿತಾಃ ।
ಅಭ್ಯವರ್ತಂತ ಯುದ್ಧಾಯ ಪುರಸ್ಕೃತ್ಯ ಪಿತಾಮಹಮ್ ॥೬॥

ಎಲೈ ರಾಜನೇ, ನಿನ್ನವರಾದ ಅನೇಕ ಲಕ್ಷ ಮಹಾರಥರು, ರಥ-ಗಜಗಳ ಸಮೂಹಗಳು, ಸುಸಜ್ಜಿತವಾದ ಅಶ್ವಗಳು ಪಿತಾಮಹರನ್ನು ಮುಂದೆ ಮಾಡಿಕೊಂಡು ಯುದ್ಧಕ್ಕೆ ಹೊರಟವು.

ಯಥಾಪ್ರತಿಜ್ಞಂ ಕೌರವ್ಯ ಸ ಚಾಪಿ ಸಮಿತಿಂಜಯಃ ।
ಪಾರ್ಥಾನಾಮಕರೋದ್ ಭೀಷ್ಮಃ ಸತತಂ ಸಮಿತಿಕ್ಷಯಮ್ ॥೭॥

ಎಲೈ ಕೌರವ್ಯನೇ, ತಮ್ಮ ಪ್ರತಿಜ್ಞೆಗೆ ಅನುಗುಣವಾಗಿ ಯುದ್ಧದಲ್ಲಿ ಜಯಶೀಲರಾದ ಭೀಷ್ಮರು ಪಾಂಡವರ ಸೈನ್ಯವನ್ನು ಸತತವಾಗಿ ನಾಶಮಾಡಿದರು.

ಯುಧ್ಯಮಾನಂ ಮಹೇಷ್ವಾಸಂ ವಿನಿಘ್ನಂತಂ ಪರಾನ್ ಶರೈಃ ।
ಪಾಂಚಾಲಾಃ ಪಾಂಡವೈಃ ಸಾರ್ಧಂ ಸರ್ವ ಏವಾಭ್ಯವಾರಯನ್ ॥೮॥

ತಮ್ಮ ಬಾಣಗಳಿಂದ ಶತ್ರುಗಳನ್ನು ಕೊಲ್ಲುತ್ತಾ ಯುದ್ಧ ಮಾಡುವ ಮಹಾಧನುರ್ಧಾರಿಗಳಾದ ಭೀಷ್ಮರನ್ನು ಪಾಂಡವರಿಂದ ಕೂಡಿದ ಪಾಂಚಾಲರೆಲ್ಲರೂ ತಡೆದರು.

ದಶಮೇಽಹನಿ ಸಂಪ್ರಾಪ್ತೇ ತತಾಪ ರಿಪುವಾಹಿನೀಮ್ ।
ಕೀರ್ಯಮಾಣಾಂ ಶಿತೈರ್ಬಾಣೈಃ ಶತಶೋಽಥ ಸಹಸ್ರಶಃ ॥೯॥

ಹತ್ತನೆಯ ದಿವಸವು ಪ್ರಾಪ್ತವಾದಾಗ ಶತಸಂಖ್ಯೆಯಲ್ಲಿ, ಸಹಸ್ರ ಸಂಖ್ಯೆಯಲ್ಲಿ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿ ಭೀಷ್ಮರು ಚದುರಿ ಹೋಗುತ್ತಿದ್ದ ಶತ್ರುಸೈನ್ಯವನ್ನು ತಾಪಗೊಳಿಸಿದರು.

ನ ಹಿ ಭೀಷ್ಮಂ ಮಹೇಷ್ವಾಸಂ ಪಾಂಡವಾಃ ಪಾಂಡುಪೂರ್ವಜ ।
ಅಶಕ್ನುವನ್ ರಣೇ ಜೇತುಂ ಪಾಶಹಸ್ತಮಿವಾಂತಕಮ್ ॥೧೦॥

ಎಲೈ ಪಾಂಡುವಿನ ಅಣ್ಣನೇ, ಪಾಶಹಸ್ತನಾದ ಯಮನಂತೆ ಯುದ್ಧದಲ್ಲಿ ಮಹಾಧನುರ್ಧಾರಿಗಳಾದ ಭೀಷ್ಮರನ್ನು ಗೆಲ್ಲಲು ಪಾಂಡವರು ಸಮರ್ಥರಾಗಲಿಲ್ಲ.

ಅಥೋಪಾಯಾನ್ಮಹಾರಾಜ ಸವ್ಯಸಾಚೀ ಪರಂತಪಃ ।
ತ್ರಾಸಯನ್ ರಥಿನಃ ಸರ್ವಾನ್ ಬೀಭತ್ಸುರಪರಾಜಿತಃ ॥೧೧॥

ಸಿಂಹವದ್ ವಿನದನ್ಬಭ್ರ್ಧನುರ್ಜ್ಯಾಂ ವಿಕ್ಷಿಪನ್ ಮುಹುಃ ।
ಶರೌಘಾನ್ ವಿಸೃಜನ್ ಪಾರ್ಥೋ ವ್ಯಚರತ್ ಕಾಲವದ್ ರಣೇ ॥೧೨॥

ಎಲೈ ಮಹಾರಾಜನೇ, ಆಗ ಪರಂತಪನಾದ, ಅಪರಾಜಿತನಾದ, ಸವ್ಯಸಾಚಿಯಾದ ಅರ್ಜುನನು ಎಲ್ಲ ರಥರನ್ನೂ ಭಯಗೊಳಿಸುತ್ತಾ, ಗಟ್ಟಿಯಾಗಿ ಸಿಂಹನಾದವನ್ನು ಮಾಡುತ್ತಾ, ಧನುಸ್ಸಿನ ಹೆದೆಯನ್ನು ಮತ್ತೆ ಮತ್ತೆ ಮೀಟಿ ಬಾಣಗಳ ಸಮೂಹವನ್ನು ಪ್ರಯೋಗಿಸುತ್ತಾ, ಸಮೀಪಕ್ಕೆ ಬಂದು ಮೃತ್ಯುವಿನಂತೆ ರಣರಂಗದಲ್ಲಿ ತಿರುಗಾಡಿದನು.

ತಸ್ಯ ಶಬ್ದೇನ ವಿತ್ರಸ್ತಾಸ್ತವಕಾ ಭರತರ್ಷಭ ।
ಸಿಂಹಸ್ಯೇವ ಮೃಗಾ ರಾಜನ್ ವ್ಯದ್ರವಂತ ಮಹಾಭಯಾತ್ ॥೧೩॥

ಎಲೈ ಭರತಶ್ರೇಷ್ಠನೇ, ಗಾಂಡೀವ ಧನುಸ್ಸಿನ ಶಬ್ದದಿಂದ ಹೆದರಿದ ನಿನ್ನ ಸೈನಿಕರು ಸಿಂಹದ ಎದುರಿನಲ್ಲಿ ಮಹಾಭಯದಿಂದ ಓಡುವ ಜಿಂಕೆಗಳಂತೆ ಹೆದರಿ ಓಡಿ ಹೋದರು.

ಜಯಂತಂ ಪಾಂಡವಂ ದೃಷ್ಟ್ವಾ ತ್ವತ್ಸೈನ್ಯಂ ಚಾಭಿಪೀಡಿತಮ್ ।
ದುರ್ಯೋಧನಸ್ತತೋ ಭೀಷ್ಮಮಬ್ರವೀದ್ ಭೃಶಪೀಡಿತಃ ॥೧೪॥

ಜಯಿಸುತ್ತಿದ್ದ ಅರ್ಜುನನನ್ನೂ ಮತ್ತು ಪೀಡಿತವಾದ ನಿನ್ನ ಸೈನ್ಯವನ್ನೂ ನೋಡಿ ಬಹಳ ಪೀಡಿತನಾದ ದುರ್ಯೋಧನನು ಆಗ ಭೀಷ್ಮರನ್ನು ಕುರಿತು ಮಾತನಾಡಿದನು.

ಏಷ ಪಾಂಡುಸುತಸ್ತಾತ ಶ್ವೇತಾಶ್ವಃ ಕೃಷ್ಣಸಾರಥಿಃ ।
ದಹತೇ ಮಾಮಕಾನ್ ಸರ್ವಾನ್ ಕೃಷ್ಣವರ್ತ್ಮೇವ ಕಾನನಮ್ ॥೧೫॥

ಎಲೈ ಪ್ರೀತಿಪಾತ್ರರೇ, ಶ್ವೇತಾಶ್ವನೂ, ಕೃಷ್ಣಸಾರಥಿಯೂ ಆದ ಪಾಂಡುಸುತನಾದ ಈ ಅರ್ಜುನನು ಅಗ್ನಿಯು ವನವನ್ನು ಸುಡುವಂತೆ ನನ್ನವರೆಲ್ಲರನ್ನೂ ಸುಡುತ್ತಿದ್ದಾನೆ.

ಪಶ್ಯ ಸೈನ್ಯಾನಿ ಗಾಂಗೇಯ ದ್ರವಮಾಣಾನಿ ಸರ್ವಶಃ ।
ಪಾಂಡವೇನ ಯುಧಾಂಶ್ರೇಷ್ಠ ಕಾಲ್ಯಮಾನಾನಿ ಸಂಯುಗೇ ॥೧೬॥

ಎಲೈ ಗಾಂಗೇಯರೇ, ಯುದ್ಧಮಾಡುವವರಲ್ಲಿ ಶ್ರೇಷ್ಠರಾದವರೇ, ಯುದ್ಧದಲ್ಲಿ ಅರ್ಜುನನಿಂದ ಚದುರಿಸಲ್ಪಟ್ಟು ಎಲ್ಲ ಕಡೆಗಳಲ್ಲಿಯೂ ಓಡುತ್ತಿರುವ ನನ್ನ ಸೈನ್ಯಗಳನ್ನು ನೋಡಿ.

ಯಥಾ ಪಶುಗಣಾನ್ ಪಾಲಃ ಸಂಕಾಲಯತಿ ಕಾನನೇ ।
ತಥೇದಂ ಮಾಮಕಂ ಸೈನ್ಯಂ ಕಾಲ್ಯತೇ ಶತ್ರುತಾಪನ ॥೧೭॥

ಎಲೈ ಶತ್ರುತಾಪನರೇ, ಕಾಡಿನಲ್ಲಿ ಪಶುಪಾಲಕನು ಪಶುಗಳನ್ನು ಅಟ್ಟಾಡುವಂತೆ ಈ ನನ್ನ ಸೈನ್ಯವು ಅಟ್ಟಸಲ್ಪಡುತ್ತಿದೆ.

ಧನಂಜಯಶರೈರ್ಭಗ್ನಂ ದ್ರವಮಾಣಮಿತಸ್ತತಃ ।
ಭೀಮೋ ಹ್ಯೇಷ ದುರಾಧರ್ಷೋ ವಿದ್ರಾವಯತಿ ಮೇ ಬಲಮ್ ॥೧೮॥

ಅರ್ಜುನನ ಬಾಣಗಳಿಂದ ಭಗ್ನವಾಗಿ ಇಲ್ಲಿಂದಲ್ಲಿಗೆ ಓಡುತ್ತಿರುವ ನನ್ನ ಸೈನ್ಯವನ್ನು ಈ ದುರಾಧರ್ಷನಾದ ಭೀಮನು ಇನ್ನೂ ಓಡಿಸುತ್ತಿದ್ದಾನೆ.

ಸಾತ್ಯಕಿಶ್ಚೇಕಿತಾನಶ್ಚ ಮಾದ್ರೀಪುತ್ರೌ ಚ ಪಾಂಡವೌ ।
ಅಭಿಮನ್ಯುಶ್ಚ ವಿಕ್ರಾಂತೋ ವಾಹಿನೀಂ ದಹತೇ ಮಮ ॥೧೯॥

ಸಾತ್ಯಕಿ, ಚೇಕಿತಾನ, ಪಾಂಡುಪುತ್ರರಾದ ನಕುಲ-ಸಹದೇವರು, ಪರಾಕ್ರಮಶಾಲಿಯಾದ ಅಭಿಮನ್ಯು ಇವರು ನನ್ನ ಸೈನ್ಯವನ್ನು ದಹಿಸುತ್ತಿದ್ದಾರೆ.

ಧೃಷ್ಟದ್ಯುಮ್ನಸ್ತಥಾ ಶೂರೋ ರಾಕ್ಷಸಶ್ಚ ಘಟೋತ್ಕಚಃ ।
ವ್ಯದ್ರಾವಯೇತಾಂ ಸಹಸಾ ಸೈನ್ಯಂ ಮಮ ಮಹಾಬಲೌ ॥೨೦॥

ಮಹಾಬಲರಾದ, ಶೂರನಾದ ಧೃಷ್ಟದ್ಯುಮ್ನ ಮತ್ತು ರಾಕ್ಷಸನಾದ ಘಟೋತ್ಕಚರು ನನ್ನ ಸೈನ್ಯವನ್ನು ಓಡಿಸುತ್ತಿದ್ದಾರೆ.

ವಧ್ಯಮಾನಸ್ಯ ಸೈನ್ಯಸ್ಯ ಸರ್ವೈರೇತೈರ್ಮಹಾಬಲೈಃ ।
ನಾನ್ಯಾಂ ಗತಿಂ ಪ್ರಪಶ್ಯಾಮಿ ಸ್ಥಾನೇ ಯುದ್ಧೇ ಚ ಭಾರತ ॥೨೧॥

ಋತೇ ತ್ವಾಂ ಪುರುಷವ್ಯಾಘ್ರ ದೇವತುಲ್ಯಪರಾಕ್ರಮ ।
ಪರ್ಯಾಪ್ತಶ್ಚ ಭವಾನ್ ಕ್ಷಿಪ್ರಂ ಪೀಡಿತಾನಾಂ ಗತಿರ್ಭವ ॥೨೨॥

ಎಲೈ ಪುರುಷವ್ಯಾಘ್ರರೇ, ದೇವತೆಗಳಿಗೆ ಸಮಾನವಾದ ಪರಾಕ್ರಮವುಳ್ಳವರೇ, ಭಾರತರೇ, ಎಲ್ಲ ಮಹಾಬಲರಿಂದ ಪೀಡಿಸಲ್ಪಡುತ್ತಿರುವ ನನ್ನ ಸೈನ್ಯವು ಯುದ್ಧದಲ್ಲಿ ನಿಲ್ಲುವಂತೆ ಮಾಡಲು ನಿಮ್ಮನ್ನು ಬಿಟ್ಟು ಬೇರೆ ಯಾರನ್ನೂ ಕಾಣುತ್ತಿಲ್ಲ. ನೀವೊಬ್ಬರು ಸಮರ್ಥರಾಗಿದ್ದೀರಿ. ಪೀಡಿತವಾದ ನನ್ನ ಸೈನ್ಯಗಳಿಗೆ ಶೀಘ್ರವಾಗಿ ನೀವು ರಕ್ಷಕರಾಗಿ.

ಏವಮುಕ್ತೋ ಮಹಾರಾಜ ಪಿತಾ ದೇವವ್ರತಸ್ತವ ।
ಚಿಂತಯಿತ್ವಾ ಮುಹೂರ್ತಂ ತು ಕೃತ್ವಾ ನಿಶ್ಚಯಮಾತ್ಮನಃ ।
ತವ ಸಂಧರಯನ್(?) ಪುತ್ರಮಬ್ರವೀತ್ ಶಂತನೋಃ ಸುತಃ ॥೨೩॥

ಎಲೈ ಮಹಾರಾಜನೇ, ಹೀಗೆ ಹೇಳಲ್ಪಟ್ಟ ನಿನ್ನ ತಂದೆಯಾದ ದೇವವ್ರತರಾದ ಭೀಷ್ಮರು ಒಂದು ಮುಹೂರ್ತದ ಕಾಲ ಆಲೋಚನೆಯನ್ನು ಮಾಡಿ ಮನಸ್ಸಿನಲ್ಲಿ ತಮ್ಮ ಕಾರ್ಯವನ್ನು ನಿಶ್ಚಯಿಸಿ ನಿನ್ನ ಪುತ್ರನನ್ನು ಸಮಾಧಾನ ಮಾಡುತ್ತಾ ಮಾತನಾಡಿದರು.

ದುರ್ಯೋಧನ ವಿಜಾನೀಹಿ ಸ್ಥಿರೋ ಭವ ವಿಶಾಂಪತೇ ।
ಪಾತಯಿಷ್ಯೇ ರಿಪೂನನ್ಯಾನ್ ಪಾಂಡವಾನ್ ಪ್ರತಿಪಾಲಯನ್ ॥೨೪॥

ಎಲೈ ದುರ್ಯೋಧನನೇ, ಇದನ್ನು ತಿಳಿ. ರಾಜನೇ, ಮನಸ್ಸನ್ನು ಸ್ಥಿರವನ್ನಾಗಿ ಮಾಡು. ಪಾಂಡವರನ್ನಾದರೂ ನೋಡುತ್ತಾ ನಾನು ಬೇರೆ ಶತ್ರುಗಳನ್ನು ಕೆಡವುವೆನು.

ಪ್ರತಿಜ್ಞಾತೋ ಜಯೋ ಹ್ಯದ್ಯ ಪಾಂಡವಾನಾಂ ಮಹಾತ್ಮನಾಮ್ ।
ಪೂರ್ವಕಾಲಂ ತವ ಮಯಾ ಪ್ರತಿಜ್ಞಾತಂ ಮಹಾಬಲ ।
ಹತ್ವಾ ದಶ ಸಹಸ್ರಾಣಿ ಕ್ಷತ್ರಿಯಾಣಾಂ ಮಹಾತ್ಮನಾಮ್ ॥೨೫॥

ಸಂಗ್ರಾಮಾದ್ ವ್ಯಪಯಾತವ್ಯಮೇತತ್ ಕರ್ಮ ಮಮಾಹ್ನಿಕಮ್ ।
ಇತಿ ತತ್ಕೃತವಾಂಶ್ಚಾಹಂ ಯಥೋಕ್ತಂ ಭರತರ್ಷಭ ॥೨೬॥

ಈ ದಿನ ಮಹಾತ್ಮರಾದ ಪಾಂಡವರಿಗೆ ಜಯವು ಪ್ರತಿಜ್ಞಾತವಾಗಿದೆ. ಎಲೈ ಮಹಾಬಲನೇ, ನಾನು ಹಿಂದೆ ನಿನ್ನ ಬಳಿಯಲ್ಲಿ ಮಹಾತ್ಮರಾದ ಹತ್ತು ಸಹಸ್ರ ಕ್ಷತ್ರಿಯರನ್ನು ಕೊಲ್ಲದೇ ಯುದ್ಧದಿಂದ ಹಿಂದಿರುಗುವುದಿಲ್ಲ, ಇದು ನನ್ನ ಪ್ರತಿದಿನದ ಕರ್ಮ ಎಂದು ಪ್ರತಿಜ್ಞೆಯನ್ನು ಮಾಡಿದೆ. ಎಲೈ ಭರತಶ್ರೇಷ್ಠನೇ, ನಾನು ಪ್ರತಿಜ್ಞೆಯನ್ನು ಮಾಡಿದಂತೆ ಕಾರ್ಯವನ್ನು ಮಾಡಿದ್ದೇನೆ.

ಅದ್ಯ ಚಾಪಿ ಮಹತ್ಕರ್ಮ ಪ್ರಕರಿಷ್ಯೇ ಮಹಾಹವೇ ।
ಅಹಂ ವಾ ನಿಹತಃ ಶೇಷ್ಯೇ ಹನಿಷ್ಯೇ ವಾಽದ್ಯ ಪಾಂಡವಾನ್ ॥೨೭॥

ಈ ದಿನವೂ ಸಹ ದೊಡ್ಡ ಯುದ್ಧದಲ್ಲಿ ಮಹಾಕಾರ್ಯವನ್ನು ಮಾಡುವೆನು. ನಾನಾದರೂ ಹತನಾಗಿ ಭೂಮಿಯ ಮೇಲೆ ಮಲಗುವೆನು ಅಥವಾ ಈ ದಿನ ಪಾಂಡವರನ್ನು ಕೊಲ್ಲುವೆನು.

ಅಶಕ್ಯಾ ಪಾಂಡವಾ ಜೇತುಂ ದೇವೈರಪಿ ಸವಾಸವೈಃ ।
ಕಿಂ ಪುನರ್ಮರ್ತ್ಯಧರ್ಮೇಣ ಕ್ಷತ್ರಿಯೇಣ ಮಹಾಬಲ ॥೨೮॥

ಪಾಂಡವರನ್ನು ಇಂದ್ರನಿಂದ ಕೂಡಿದ ದೇವತೆಗಳೂ ಯುದ್ಧದಲ್ಲಿ ಗೆಲ್ಲಲಾರರು. ಎಲೈ ಮಹಾಬಲನೇ, ಇನ್ನು ಮರಣಶೀಲವಾದ ದೇಹವುಳ್ಳ ಕ್ಷತ್ರಿಯನು ಹೇಗೆ ಗೆದ್ದಾನು?

ಅದ್ಯ ತೇ ಪುರುಷವ್ಯಾಘ್ರ ಪ್ರತಿಮೋಕ್ಷ್ಯೇ ಋಣಂ ಮಹತ್ ।
ಭರ್ತೃಪಿಂಡಕೃತಂ ರಾಜನ್ ನಿಹತಃ ಪೃತನಾಮುಖೇ ॥೨೯॥

ಎಲೈ ಪುರುಷವ್ಯಾಘ್ರನೇ, ಎಲೈ ರಾಜನೇ, ಈ ದಿನ ಸೇನಾಗ್ರದಲ್ಲಿ ಹತನಾಗಿ ನಾನು ಸ್ವಾಮಿಯ ಅನ್ನವನ್ನು ತಿಂದ ದೊಡ್ಡ ಋಣವನ್ನು ತೀರಿಸುವೆನು.

ಇತ್ಯುಕ್ತ್ವಾ ಭರತಶ್ರೇಷ್ಠ ಕ್ಷತ್ರಿಯಾನ್ ಪ್ರತಪನ್ ಶರೈಃ ।
ಆಸಸಾದ ದುರಾಧರ್ಷಃ ಪಾಂಡವಾನಾಮನೀಕಿನೀಮ್ ॥೩೦॥

ಹೀಗೆ ಹೇಳಿ ಭರತಶ್ರೇಷ್ಠರೂ, ಯುದ್ಧದಲ್ಲಿ ಸಮೀಪಕ್ಕೆ ಸುಳಿಯಲು ಸಾಧ್ಯವಿಲ್ಲದವರೂ ಆದ ಅವರು ತಮ್ಮ ಬಾಣಗಳಿಂದ ಕ್ಷತ್ರಿಯರನ್ನು ತಾಪಗೊಳಿಸುತ್ತಾ ಪಾಂಡವರ ಸೈನ್ಯದ ಸಮೀಪಕ್ಕೆ ಬಂದರು.

ಅನೀಕಮಧ್ಯೇ ತಿಷ್ಠಂತಂ ಗಾಂಗೇಯಂ ಭರತರ್ಷಭ ।
ಆಶೀವಿಷಮಿವ ಕ್ರುದ್ಧಂ ಪಾಂಡವಾಃ ಪರ್ಯವಾರಯನ್ ॥೩೧॥

ಎಲೈ ಭರತಶ್ರೇಷ್ಠನೇ, ತನ್ನ ಸೈನ್ಯದ ಮಧ್ಯದಲ್ಲಿ ನಿಂತು ಸರ್ಪದಂತೆ ಕ್ರುದ್ಧರಾದ ಭೀಷ್ಮರನ್ನು ಪಾಂಡವರು ಸುತ್ತುವರಿದರು.

ದಶಮೇಽಹನಿ ತಸ್ಮಿಂಸ್ತು ದರ್ಶಯನ್ ಶಕ್ತಿಮಾತ್ಮನಃ ।
ರಾಜನ್ ಶತಸಹಸ್ರಾಣಿ ಸೋಽವಧೀತ್ ಕುರುನಂದನ ॥೩೨॥

ಎಲೈ ಕುರುನಂದನೇ, ಆ ಹತ್ತನೆಯ ದಿವಸದಲ್ಲಿ ತಮ್ಮ ಶಕ್ತಿಯನ್ನು ತೋರಿಸುತ್ತಾ ಒಂದು ಲಕ್ಷ ಕ್ಷತ್ರಿಯರನ್ನು ಭೀಷ್ಮರು ಕೊಂದರು.

ಪಾಂಚಾಲಾನಾಂ ಚ ಯೇ ಶ್ರೇಷ್ಠಾ ರಾಜಪುತ್ರಾ ಮಹಾಬಲಾಃ ।
ತೇಷಾಮಾದತ್ತ ತೇಜಾಂಸಿ ಜಲಂ ಸೂರ್ಯ ಇವಾಂಶುಭಿಃ ॥೩೩॥

ಪಾಂಚಾಲರಲ್ಲಿ ಶ್ರೇಷ್ಠರೂ, ಮಹಾಬಲರೂ ಆದ ರಾಜಪುತ್ರರು ಯಾರಿದ್ದಾರೆಯೋ ಅವರ ತೇಜಸ್ಸೆಲ್ಲವನ್ನೂ ಸೂರ್ಯನು ತನ್ನ ಕಿರಣಗಳಿಂದ ಜಲವನ್ನು ಹೀರುವಂತೆ ಹೀರಿದರು.

ಹತ್ವಾ ದಶ ಸಹಸ್ರಾಣಿ ಕುಂಜರಾಣಾಂ ತರಸ್ವಿನಾಮ್ ।
ಸಾರೋಹಾಣಾಂ ಮಹಾರಾಜ ಹಯಾನಾಂ ಚಾಯುತಂ ಪುನಃ ॥೩೪॥

ಪೂರ್ಣೇ ಶತಸಹಸ್ರೇ ದ್ವೇ ಪದಾತೀನಾಂ ನರೋತ್ತಮಃ ।
ಪ್ರಜಜ್ವಾಲ ರಣೇ ಭೀಷ್ಮೋ ವಿಧೂಮ ಇವ ಪಾವಕಃ ॥೩೫॥

ಎಲೈ ಮಹಾರಾಜನೇ, ವೇಗಶಾಲಿಗಳಾದ ಹತ್ತುಸಹಸ್ರ ಗಜಗಳನ್ನು ಗಜಾರೋಹಿಗಳ ಜೊತೆಯಲ್ಲಿ ಕೊಂದು, ಹತ್ತು ಸಹಸ್ರ ಅಶ್ವಗಳನ್ನು ಕೊಂದು, ಪೂರ್ಣವಾದ ಎರಡು ಲಕ್ಷ ಪದಾತಿಗಳನ್ನು ಕೊಂದು, ನರಶ್ರೇಷ್ಠರಾದ ಭೀಷ್ಮರು ರಣರಂಗದಲ್ಲಿ ಧೂಮರಹಿತವಾದ ಅಗ್ನಿಯಂತೆ ಜ್ವಲಿಸಿದರು.

ನ ಚೈನಂ ಪಾಂಡವೇಯಾನಾಂ ಕೇಚಿಚ್ಚೇಕುರ್ನಿರೀಕ್ಷಿತುಮ್ ।
ಉತ್ತರಂ ಮಾರ್ಗಮಾಸ್ಥಾಯ ತಪಂತಮಿವ ಭಾಸ್ಕರಮ್ ॥೩೬॥

ಉತ್ತರಾಯಣ ಕಾಲದಲ್ಲಿ ಜ್ವಲಿಸುವ ಸೂರ್ಯನಂತಿದ್ದ ಅವರನ್ನು ನೋಡಲು ಪಾಂಡವರ ಸೈನ್ಯದಲ್ಲಿ ಯಾರೂ ಸಮರ್ಥರಾಗಲಿಲ್ಲ.

ತೇ ಪಾಂಡವೇಯಾಃ ಸಂರಬ್ಧಾ ಮಹೇಷ್ವಾಸೇನ ಪೀಡಿತಾಃ ।
ವಧಾಯಾಭ್ಯದ್ರವನ್ ಭೀಷ್ಮಂ ಸೃಂಜಯಾಶ್ಚ ಮಹಾರಥಾಃ ॥೩.೭॥

ಮಹಾಧನುರ್ಧಾರಿಗಳಾದ ಭೀಷ್ಮರಿಂದ ಪೀಡಿತರಾಗಿ ಕೋಪಗೊಂಡ ಆ ಪಾಂಡುಪುತ್ರರು ಮತ್ತು ಮಹಾರಥರಾದ ಸೃಂಜಯರು ಸಹ ವಧೆಯನ್ನು ಮಾಡುವುದಕ್ಕಾಗಿ ಭೀಷ್ಮರ ಕಡೆಗೆ ಧಾವಿಸಿದರು.

ಸ ಯುಧ್ಯಮಾನೋ ಬಹುಭಿರ್ಭೀಷ್ಮಃ ಶಾಂತನವಸ್ತದಾ ।
ಅವಕೀರ್ಣೋ ಮಹಾಬಾಹುಃ ಶೈಲೋ ಮೇಘೈರಿವಾಸಿತೈಃ ॥೩.೮॥

ಶಂತನು ಪುತ್ರರಾದ, ಮಹಾಬಾಹುವಾದ ಭೀಷ್ಮರು ಆಗ ಅನೇಕ ಯೋಧರ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಾ ಕಪ್ಪು ಮೋಡಗಳಿಂದ ಮುಚ್ಚಲ್ಪಟ್ಟ ಪರ್ವತದಂತೆ ಎಲ್ಲ ಕಡೆಗಳಲ್ಲಿಯೂ ಬಾಣ ಪ್ರಯೋಗಕ್ಕೆ ಒಳಗಾದರು.

ಪುತ್ರಾಸ್ತು ತವ ಗಾಂಗೇಯಂ ಸಮಂತಾತ್ ಪರ್ಯವಾರಯನ್ ।
ಮಹತ್ಯಾ ಸೇನಯಾ ಸಾರ್ಧಂ ತತೋ ಯುದ್ಧಮವರ್ತತ ॥೩.೯॥

ನಿನ್ನ ಪುತ್ರರು ಎಲ್ಲ ಕಡೆಗಳಿಂದಲೂ ದೊಡ್ಡ ಸೈನ್ಯದ ಜೊತೆಯಲ್ಲಿ ಅವರನ್ನು ರಕ್ಷಿಸಿದರು. ಆನಂತರ ಯುದ್ಧವು ನಡೆಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಷಡಧಿಕಶತತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಷಟ್‌ಸಪ್ತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನೂರ ಆರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಏಳನೆಯ ಅಧ್ಯಾಯ

ಪಾಂಡವರಿಂದ ಮತ್ತು ಎಲ್ಲಾ ಮಹಾರಥರಿಂದ ಭೀಷ್ಮರ ಕಡೆಗೆ ಧಾವನ. ಭೀಷ್ಮರ ರಥದ ಸಮೀಪದಲ್ಲಿ ಅರ್ಜುನ-ದುಶ್ಶಾಸನರ ಯುದ್ಧ.

ಸಂಜಯಃ

ಅರ್ಜುನಸ್ತು ರಣೇ ರಾಜನ್ ದೃಷ್ಟ್ವಾ ಭೀಷ್ಮಸ್ಯ ವಿಕ್ರಮಮ್ ।
ಶಿಖಂಡಿನಮಥೋವಾಚ ಸಮಭ್ಯೇಹಿ ಪಿತಾಮಹಮ್ ॥೧॥

ಸಂಜಯ– ಎಲೈ ರಾಜನೇ, ಅರ್ಜುನನಾದರೋ ಯುದ್ಧದಲ್ಲಿ ಭೀಷ್ಮರ ಪರಾಕ್ರಮವನ್ನು ನೋಡಿ ಶಿಖಂಡಿಯನ್ನು ಕುರಿತು, ಪಿತಾಮಹರನ್ನು ಎದುರಿಸುವವನಾಗು ಎಂದು ಹೇಳಿದನು.

ನ ಚಾಪಿ ಭೀಸ್ತ್ವಯಾ ಕಾರ್ಯಾ ಭೀಷ್ಮಾದದ್ಯ ಕಥಂಚನ ।
ಅಹಮೇನಂ ಶರೈಸ್ತೀಕ್ಷ್ಣೈಃ ಪಾತಯಿಷ್ಯೇ ರಥೋತ್ತಮಾತ್ ॥೨॥

ನೀನು ಈ ದಿನ ಭೀಷ್ಮರಿಂದ ಯಾವ ರೀತಿಯಿಂದಲೂ ಭಯಪಡುವ ಕಾರಣವಿಲ್ಲ. ನಾನು ಅವರನ್ನು ನನ್ನ ತೀಕ್ಷ್ಣವಾದ ಬಾಣಗಳಿಂದ ಅವರ ಶ್ರೇಷ್ಠರಥದಿಂದ ಉರುಳಿಸುವೆನು (ಎಂದು ಹೇಳಿದನು).

ಏವಮುಕ್ತಸ್ತು ಪಾರ್ಥೇನ ಶಿಖಂಡೀ ಭರತರ್ಷಭ ।
ಅಭ್ಯದ್ರವತ ಗಾಂಗೇಯಂ ಶ್ರುತ್ವಾ ಪಾರ್ಥಸ್ಯ ಭಾಷಿತಮ್ ॥೩॥

ಎಲೈ ಭರತಶ್ರೇಷ್ಠನೇ, ಅರ್ಜುನನಿಂದ ಹೀಗೆ ಹೇಳಲ್ಪಟ್ಟ ಶಿಖಂಡಿಯು ಅರ್ಜುನನ ಮಾತುಗಳನ್ನು ಕೇಳಿ ಭೀಷ್ಮರ ಕಡೆಗೆ ನುಗ್ಗಿದನು.

ಧೃಷ್ಟದ್ಯುಮ್ನಸ್ತಥಾ ರಾಜನ್ ಸೌಭದ್ರಶ್ಚ ಮಹಾರಥಃ ।
ಹೃಷ್ಟಾವಾದ್ರವತಾಂ ಭೀಷ್ಮಂ ಶ್ರುತ್ವಾ ಪಾರ್ಥಸ್ಯ ಭಾಷಿತಮ್ ॥೪॥

ಎಲೈ ರಾಜನೇ, ಅರ್ಜುನನ ಮಾತನ್ನು ಕೇಳಿ ಹಾಗೆಯೇ ಧೃಷ್ಟದ್ಯುಮ್ನನೂ, ಮಹಾರಥನಾದ ಅಭಿಮನ್ಯುವೂ ಸಂತೋಷದಿಂದ ಭೀಷ್ಮರ ಕಡೆಗೆ ನುಗ್ಗಿದರು.

ವಿರಾಟದ್ರುಪದೌ ವೃದ್ಧೌ ಕುಂತಿಭೋಜಶ್ಚ ದಂಶಿತಃ ।
ಅಭ್ಯದ್ರವತ ಗಾಂಗೇಯಂ ಪುತ್ರಸ್ಯ ತವ ಪಶ್ಯತಃ ॥೫॥

ವೃದ್ಧರಾದ ವಿರಾಟ-ದ್ರುಪದರು ಮತ್ತು ಸನ್ನದ್ಧನಾದ ಕುಂತಿಭೋಜ ಇವರೂ ನಿನ್ನ ಪುತ್ರರು ನೋಡುತ್ತಿರುವಂತೆಯೇ ಭೀಷ್ಮರ ಕಡೆಗೆ ಧಾವಿಸಿದರು.

ನಕುಲಃ ಸಹದೇವಶ್ಚ ಧರ್ಮರಾಜಶ್ಚ ವೀರ್ಯವಾನ್ ।
ತಥೇತರಾಣಿ ಸೈನ್ಯಾನಿ ಸರ್ವಾಣ್ಯೇವ ವಿಶಾಂಪತೇ ।
ಸಮಾದ್ರವಂತ ಗಾಂಗೇಯಂ ಶ್ರುತ್ವಾ ಪಾರ್ಥಸ್ಯ ಭಾಷಿತಮ್ ॥೬॥

ಎಲೈ ರಾಜನೇ, ನಕುಲ-ಸಹದೇವರು, ಪರಾಕ್ರಮಶಾಲಿಯಾದ ಯುಧಿಷ್ಠಿರ ಮತ್ತು ಇತರ ಎಲ್ಲಾ ಸೈನ್ಯಗಳು ಅರ್ಜುನನ ಮಾತನ್ನು ಕೇಳಿ ಭೀಷ್ಮರ ಕಡೆಗೆ ಮುನ್ನುಗ್ಗಿದರು.

ಪ್ರತ್ಯುದ್ಯಯುಸ್ತಾವಕಾಶ್ಚ ಸಮೇತಾಸ್ತಾನ್ ಮಹಾರಥಾನ್ ।
ಯಥಾಶಕ್ತಿ ಯಥೋತ್ಸಾಹಂ ತನ್ಮೇ ನಿಗದತಃ ಶೃಣು ॥೭॥

ನಿನ್ನವರೂ ಸಹ ಜೊತೆಯಾಗಿ ಬರುತ್ತಿದ್ದ ಆ ಮಹಾರಥರಿಗೆ ಅಭಿಮುಖವಾಗಿ ತಮ್ಮ ಶಕ್ತಿ ಮತ್ತು ಉತ್ಸಾಹಗಳಿಗೆ ಅನುಗುಣವಾಗಿ ಹೊರಟರು. ಅದನ್ನು ನನ್ನಿಂದ ಕೇಳು.

ಚಿತ್ರಸೇನೋ ಮಹಾರಾಜ ಚೇಕಿತಾನಂ ಸಮಭ್ಯಯಾತ್ ।
ಭೀಷ್ಮಪ್ರೇಷ್ಣುಂ ರಣೇ ಯಾಂತಂ ವೃಷಂ ವ್ಯಾಘ್ರಶಿಶುರ್ಯಥಾ ॥೮॥

ಎಲೈ ಮಹಾರಾಜನೇ, ಭೀಷ್ಮರ ಸಮೀಪಕ್ಕೆ ಹೋಗಲು ಯತ್ನಿಸಿದ ಚೇಕಿತಾನನನ್ನು ವ್ಯಾಘ್ರಶಿಶುವು ವೃಷಭವನ್ನು ಸಮೀಪಿಸಿದಂತೆ ಚಿತ್ರಸೇನನು ಸಮೀಪಿಸಿದನು.

ಧೃಷ್ಟದ್ಯುಮ್ನಂ ಮಹಾರಾಜ ಭೀಷ್ಮಾಂತಿಕಮುಪಾಗತಮ್ ।
ತ್ವರಮಾಣೋ ರಣೇ ಯತ್ತಂ ಕೃತವರ್ಮಾ ನ್ಯವಾರಯತ್ ॥೯॥

ಎಲೈ ಮಹಾರಾಜನೇ, ಭೀಷ್ಮರ ಸಮೀಪಕ್ಕೆ ಬಂದ ಸನ್ನದ್ಧನಾದ ಧೃಷ್ಟದ್ಯುಮ್ನನನ್ನು ಕೃತವರ್ಮನು ಕ್ಷಿಪ್ರವಾಗಿ ರಣರಂಗದಲ್ಲಿ ತಡೆದನು.

ಭೀಮಸೇನಂ ಸುಸಂಕ್ರುದ್ಧಂ ಗಾಂಗೇಯಸ್ಯ ವಧೈಷಿಣಮ್ ।
ತ್ವರಮಾಣೋ ಮಹಾರಾಜ ಸೌಮದತ್ತಿರ್ನ್ಯವಾರಯತ್ ॥೧೦॥

ಎಲೈ ಮಹಾರಾಜನೇ, ಭೀಷ್ಮರ ವಧೆಯನ್ನು ಬಯಸಿದ, ಬಹಳವಾಗಿ ಕೋಪಗೊಂಡ ಭೀಮಸೇನನನ್ನು ಭೂರಿಶ್ರವನು ತ್ವರೆಯಿಂದ ತಡೆದನು.

ತಥೈವ ನಕುಲಂ ವೀರಂ ಕಿರಂತಂ ಸಾಯಕಾನ್ ಬಹೂನ್ ।
ವಿಕರ್ಣೋ ವಾರಯಾಮಾಸ ಇಚ್ಛನ್ ಭೀಷ್ಮಸ್ಯ ಜೀವಿತಮ್ ॥೧೧॥

ಹಾಗೆಯೇ ಅನೇಕ ಬಾಣಗಳನ್ನು ಪ್ರಯೋಗಿಸುತ್ತಿದ್ದ ವೀರನಾದ ನಕುಲನನ್ನು ಭೀಷ್ಮರ ಪ್ರಾಣವನ್ನು ಉಳಿಸಲು ಬಯಸಿದ ವಿಕರ್ಣನು ತಡೆದನು.

ಸಹದೇವಂ ತಥಾऽऽಯಾಂತಂ ಯತ್ತಂ ಭೀಷ್ಮರಥಂ ಪ್ರತಿ ।
ವಾರಯಾಮಾಸ ಸಂಕ್ರುದ್ಧಃ ಕೃಪಃ ಶಾರದ್ವತೋ ಯುಧಿ ॥೧೨॥

ಹಾಗೆಯೇ ಭೀಷ್ಮರ ರಥದ ಕಡೆಗೆ ಬರುತ್ತಿದ್ದ ಸಹದೇವನನ್ನು ಯುದ್ಧದಲ್ಲಿ ಕ್ರುದ್ಧರಾದ ಕೃಪಾಚಾರ್ಯರು ತಡೆದರು.

ರಾಕ್ಷಸಂ ಕ್ರೂರಕರ್ಮಾಣಂ ಭೈಮಸೇನಿಂ ಮಹಾಬಲಮ್ ।
ಭೀಷ್ಮಸ್ಯ ನಿಧನಂ ಪ್ರೇಪ್ಸುಂ ದುರ್ಮುಖೋऽಭ್ಯದ್ರವದ್ ಬಲೀ ॥೧೩॥

ಭೀಷ್ಮರ ವಧೆಯನ್ನು ಬಯಸಿ ಅವರನ್ನು ಹಿಡಿಯಲು ಬರುತ್ತಿದ್ದ ಮಹಾಬಲನೂ, ಕ್ರೂರಕರ್ಮನೂ ಆದ ಘಟೋತ್ಕಚರಾಕ್ಷಸನನ್ನು ಬಲಿಷ್ಠನಾದ ದುರ್ಮುಖನು ಎದುರಿಸಿದನು.

ಸಾತ್ಯಕಿಂ ಸಮರೇ ಕ್ರುದ್ಧಮಾರ್ಶ್ಯಶೃಂಗಿರವಾರಯತ್ ।
ಭೀಷ್ಮಸ್ಯ ವಧಮಿಚ್ಛಂತಂ ಪಾಂಡವಪ್ರೀತಿಕಾಮ್ಯಯಾ ॥೧೪॥

ಪಾಂಡವರ ಪ್ರೀತಿಯನ್ನು ಬಯಸಿ, ಭೀಷ್ಮರ ವಧೆಯನ್ನು ಇಚ್ಛಿಸಿ, ಯುದ್ಧದಲ್ಲಿ ಕ್ರುದ್ಧನಾಗಿ ಬರುತ್ತಿದ್ದ ಸಾತ್ಯಕಿಯನ್ನು ಅಲಂಬುಸನು ತಡೆದನು.

ಅಭಿಮನ್ಯುಂ ಮಹಾರಾಜ ಯಾಂತಂ ಭೀಷ್ಮರಥಂ ಪ್ರತಿ ।
ಸುದಕ್ಷಿಣೋ ಮಹಾರಾಜ ಕಾಂಬೋಜಃ ಪ್ರತ್ಯವಾರಯತ್ ॥೧೫॥

ಎಲೈ ಮಹಾರಾಜನೇ, ಭೀಷ್ಮರ ರಥದ ಕಡೆಗೆ ಹೋಗುತ್ತಿದ್ದ ಅಭಿಮನ್ಯುವನ್ನು ಕಾಂಬೋಜರಾಜನಾದ ಸುದಕ್ಷಿಣನು ತಡೆದನು.

ವಿರಾಟದ್ರುಪದೌ ವೃದ್ಧೌ ಸಮೇತಾವರಿಮರ್ದನೌ ।
ಅಶ್ವತ್ಥಾಮಾ ತತಃ ಕ್ರುದ್ಧೋ ವಾರಯಾಮಾಸ ಭಾರತ ॥೧೬॥

ಎಲೈ ಭಾರತನೇ, ಆಗ ಕೋಪಗೊಂಡ ಅಶ್ವತ್ಥಾಮರು ವೃದ್ಧರೂ ಮತ್ತು ಶತ್ರು ಮರ್ದನರೂ ಆಗಿ ಜೊತೆಯಲ್ಲಿ ಬರುತ್ತಿದ್ದ ವಿರಾಟ-ದ್ರುಪದರನ್ನು ತಡೆದರು.

ತಥಾ ಪಾಂಡುಸುತಂ ಜ್ಯೇಷ್ಠಂ ಭೀಷ್ಮಸ್ಯ ವಧಕಾಂಕ್ಷಿಣಮ್ ।
ಭಾರದ್ವಾಜೋ ರಣೇ ಯತ್ತೋ ಧರ್ಮಪುತ್ರಮವಾರಯತ್ ॥೧೭॥

ಹಾಗೆಯೇ, ಭೀಷ್ಮರ ವಧೆಯನ್ನು ಬಯಸಿ ಸನ್ನದ್ಧನಾಗಿದ್ದ ಪಾಂಡುವಿನ ಜ್ಯೇಷ್ಠ ಪುತ್ರನಾದ ಯುಧಿಷ್ಠಿರನನ್ನು ದ್ರೋಣರು ಯುದ್ಧದಲ್ಲಿ ತಡೆದರು.

ಅರ್ಜುನಂ ರಭಸಂ ಯುದ್ಧೇ ಪುರಸ್ಕೃತ್ಯ ಶಿಖಂಡಿನಮ್ ।
ಭೀಷ್ಮಪ್ರೇಪ್ಸುಂ ಮಹಾರಾಜ ತಾಪಯಂತಂ ದಿಶೋ ದಶ ।
ದುಃಶಾಸನೋ ಮಹೇಷ್ವಾಸೋ ವಾರಯಾಮಾಸ ಸಂಯುಗೇ ॥೧೮॥

ಎಲೈ ಮಹಾರಾಜನೇ, ಭೀಷ್ಮರನ್ನು ಕೊಲ್ಲಲು ಬಯಸಿ, ಶಿಖಂಡಿಯನ್ನು ಮುಂದಿಟ್ಟುಕೊಂಡು ಹತ್ತು ದಿಕ್ಕುಗಳಲ್ಲಿಯೂ ಶತ್ರುಗಳನ್ನು ತಾಪಗೊಳಿಸುತ್ತಿದ್ದ ವೇಗಶಾಲಿಯಾದ ಅರ್ಜುನನನ್ನು ಮಹಾಧನುರ್ಧಾರಿಯಾದ ದುಶ್ಶಾಸನನು ಯುದ್ಧದಲ್ಲಿ ತಡೆದನು.

ಅನ್ಯೇ ಚ ತಾವಕಾ ಯೋಧಾಃ ಪಾಂಡವಾನಾಂ ಮಹಾರಥಾನ್ ।
ಭೀಷ್ಮಾಯಾಭಿಮುಖಂ ಯಾತಾನ್ ವಾರಯಾಮಾಸುರಾಹವೇ ॥೧೯॥

ನಿನ್ನ ಉಳಿದ ಯೋಧರು ಭೀಷ್ಮರ ಅಭಿಮುಖವಾಗಿ ಹೋಗುತ್ತಿದ್ದ ಪಾಂಡವರ ಮಹಾರಥರನ್ನು ರಣರಂಗದಲ್ಲಿ ತಡೆದರು.

ಧೃಷ್ಟದ್ಯುಮ್ನಸ್ತು ಸೈನ್ಯಾನಿ ಪ್ರಾಕ್ರೋಶತ ಪುನಃ ಪುನಃ ।
ಅಭಿದ್ರವತ ಸಂರಬ್ಧಾ ಭೀಷ್ಮಮೇಕಂ ಮಹಾಬಲಮ್ ॥೨೦॥

ಧೃಷ್ಟದ್ಯುಮ್ನಾದರೋ ಪುನಃ ಪುನಃ ಕಿರುಚಿ ಎಲ್ಲರೂ ಕ್ರುದ್ಧರಾಗಿ ಮಹಾಬಲರಾದ ಭೀಷ್ಮರೊಬ್ಬರ ಮೇಲೆಯೇ ಎರಗಿ ಎಂದು ಸೈನ್ಯಗಳಿಗೆ ಹೇಳುತ್ತಿದ್ದನು.

ಏಷೋಽರ್ಜುನೋ ರಣೇ ಭೀಷ್ಮಂ ಪ್ರಯಾತಿ ಕುರುನಂದನಃ ।
ಅಭದ್ರಮತ ಮಾ ಭೈಷ್ಟ ಭೀಷ್ಮೋ ನ ಪ್ರಾಪ್ಸ್ಯತೇ ಹಿ ವಃ ॥೨೧॥

ಕುರುನಂದನನಾದ ಈ ಅರ್ಜುನನು ಯುದ್ಧದಲ್ಲಿ ಭೀಷ್ಮರ ಮೇಲೆ ಹೋಗುತ್ತಿದ್ದಾನೆ. ನೀವೂ ಧಾವಿಸಿ, ಹೆದರಬೇಡಿ. ಭೀಷ್ಮರು ನಿಮ್ಮನ್ನು ಮುಟ್ಟಲಾರರು.

ಅರ್ಜುನಂ ಸಮರೇ ಯೋದ್ಧುಂ ನೋತ್ಸಹೇತಾಪಿ ವಾಸವಃ ।
ಕಿಮು ಭೀಷ್ಮೋ ರಣೇ ವೀರಾ ಗತಸತ್ತ್ವೋಽಲ್ಪಜೀವಿತಃ ॥೨೨॥

ಇಂದ್ರನೂ ಸಹ ಅರ್ಜುನನನ್ನು ಯುದ್ಧದಲ್ಲಿ ಎದುರಿಸಲಾರ. ಎಲೈ ವೀರರೇ, ಹೀಗಿರುವಾಗ ತಮ್ಮ ಶಕ್ತಿಯನ್ನು ಕಳೆದುಕೊಂಡು ಅಲ್ಪಜೀವನವನ್ನು ಹೊಂದಿರುವ ಭೀಷ್ಮರು ಹೇಗೆ ಎದುರಿಸಬಹುದು? (ಎಂದು ಹೇಳುತ್ತಿದ್ದನು)

ಇತಿ ಸೇನಾಪತೇಃ ಶ್ರುತ್ವಾ ಪಾಂಡವಾನಾಂ ಮಹಾರಥಾಃ ।
ಅಭದ್ರವಂತ ಸಂಹೃಷ್ಟಾ ಗಾಂಗೇಯಸ್ಯ ರಥಂ ಪ್ರತಿ ॥೨೩॥

ಪಾಂಡವರ ಮಹಾರಥರು ಸೇನಾಪತಿಯ ಈ ರೀತಿಯ ಮಾತುಗಳನ್ನು ಕೇಳಿ ಸಂತೋಷಗೊಂಡವರಾಗಿ ಭೀಷ್ಮರ ರಥದ ಕಡೆಗೆ ಮುನ್ನುಗ್ಗಿದರು.

ಆಗಚ್ಛತಸ್ತಾನ್ ಸಮರೇ ವಾರ್ಯೋಘಾನ್ ಪ್ರಬಲಾನಿವ ।
ನ್ಯವಾರಯಂತ ಸಂಹೃಷ್ಟಾಸ್ತಾವಕಾಃ ಪುರುಷರ್ಷಭಾಃ ॥೨೪॥

ಭೀಷ್ಮರ ಕಡೆಗೆ ಬರುತ್ತಿದ್ದ ಅವರನ್ನು ನಿನ್ನ ಸೈನ್ಯದ ಪುರುಷಶ್ರೇಷ್ಠರು ಹರ್ಷಗೊಂಡವರಾಗಿ ಜಲಪ್ರವಾಹವನ್ನು ಪರ್ವತವು ತಡೆದಂತೆ ರಣರಂಗದಲ್ಲಿ ತಡೆದರು.

ದುಃಶಾಸನೋ ಮಹಾರಾಜ ಭಯಂ ತ್ಯಕ್ತ್ವಾ ಮಹಾರಥಃ ।
ಭೀಷ್ಮಸ್ಯ ಜೀವಿತಾಕಾಂಕ್ಷೀ ಧನಂಜಯಮುಪಾದ್ರವತ್ ॥೨೫॥

ಎಲೈ ಮಹಾರಾಜನೇ, ಮಹಾರಥನಾದ ದುಶ್ಶಾಸನನು ಭಯವನ್ನು ತೊರೆದು ಭೀಷ್ಮರ ಜೀವಿತವನ್ನು ಬಯಸಿ ಅರ್ಜುನನ ಮೇಲೆ ಎರಗಿದನು.

ತಥೈವ ಪಾಂಡವಾಃ ಶೂರಾ ಗಾಂಗೇಯಸ್ಯ ರಥಂ ಪ್ರತಿ ।
ಅಭ್ಯದ್ರವಂತ ಸಂಗ್ರಾಮೇ ತವ ಪುತ್ರಾನ್ ಮಹಾರಥಾನ್ ॥೨೬॥

ಹಾಗೆಯೇ, ಶೂರರಾದ ಪಾಂಡವರು ಭೀಷ್ಮರ ರಥದ ಬಳಿ ಇದ್ದ ಮಹಾರಥರಾದ ನಿನ್ನ ಪುತ್ರರ ಮೇಲೆ ರಣರಂಗದಲ್ಲಿ ಎರಗಿದರು.

ತತ್ರಾದ್ಭುತಮಪಶ್ಯಾಮ ಚಿತ್ರರೂಪಂ ವಿಶಾಂಪತೇ ।
ದುಃಶಾಸನರಥಂ ಪ್ರಾಪ್ತೋ ಯತ್ ಪಾರ್ಥೋ ನಾತ್ಯವರ್ತತ ॥೨೭॥

ಎಲೈ ರಾಜನೇ, ದುಶ್ಶಾಸನನ ರಥದ ಸಮೀಪಕ್ಕೆ ಬಂದ ಅರ್ಜುನನು ಅವನನ್ನು ದಾಟ ಹೋಗಲಾರದ ಅದ್ಭುತವಾದ ಮತ್ತು ವಿಚಿತ್ರವಾದ ಘಟನೆಯನ್ನು ನಾನು ನೋಡಿದೆನು.

ಯಥಾ ವಾರಯತೇ ವೇಲಾ ಕ್ಷುಭಿತಂ ವೈ ಮಹಾರ್ಣವಮ್ ।
ತಥೈವ ಪಾಂಡವಂ ಕ್ರುದ್ಧಂ ತವ ಪುತ್ರೋ ನ್ಯವಾರಯತ್ ॥೨೮॥

ಸಮುದ್ರ ತೀರವು ಕ್ಷೋಭೆಗೊಂಡ ಮಹಾಸಮುದ್ರವನ್ನು ತಡೆದಂತೆ ನಿನ್ನ ಪುತ್ರನಾದ ದುಶ್ಶಾಸನನು ಕೋಪಗೊಂಡ ಅರ್ಜುನನನ್ನು ತಡೆದನು.

ಉಭೌ ಹಿ ರಥಿನಾಂ ಶ್ರೇಷ್ಠಾವುಭೌ ಭಾರತ ದುರ್ಜಯೌ ।
ಉಭೌ ಚಂದ್ರಾರ್ಕಸದೃಶೌ ಕಾಂತ್ಯಾ ದೀಪ್ತ್ಯಾ ಚ ಭಾರತ ॥೨೯॥

ಎಲೈ ಭಾರತನೇ, ಇಬ್ಬರೂ ರಥಿಶ್ರೇಷ್ಠರು, ಇಬ್ಬರೂ ದುರ್ಜಯರು, ಕಾಂತಿಯಿಂದಲೂ ಮತ್ತು ದೀಪ್ತಿಯಿಂದಲೂ ಇಬ್ಬರೂ ಚಂದ್ರ-ಸೂರ್ಯರಿಗೆ ಸದೃಶರಾದವರು.

ತೌ ತಥಾ ಜಾತಸಂರಂಭಾವನ್ಯೋನ್ಯವಧಕಾಂಕ್ಷಿಣೌ ।
ಸಮೀಯತುರ್ಮಹಾಸಂಖೇ ಮಯಶಕ್ರೌ ಯಥಾ ಪುರಾ ॥೩೦॥

ಅವನಿ ಅಮರ್ಪುದು ಕೊಂಡೊಯಂದಮರಾಂ ಅಟ್ಟಿಸಲ್ಕೆ ಪಡೆಯಂ ಬಲಂ
ಬಿಂದ ಮಂತ್ರಿ ಸ್ವಯಂ ಕೆಲಂದಿಂ ಮಾಯಾಯುದ್ಧಮಂ ಸಮ್ಮತಿಸಿ ಎಚಂಸಿದಂ.

ಮಾಯಾಯೋಧ ಮಾಯಾಯಾ ಮಾಯಯಾ ವಿಸೃಜೇದ್ಧಿ ಸಃ ।
ಮಾಯಾವಿನಂ ಸ ವಿಜ್ಞೇಯಃ ಮಾಯಾಯುದ್ಧಸ್ಯ ಯೋಜಕಃ ॥೬.೦॥

ಎಲ್ಲ ಮಾಯಾವಿಯು, ಮಾಯೆಯಿಂ ಮೂಲ ಮಾಯೆಯಿಂದ ಅಮಾಯೆಯಿಂ
ಮೂಲಿಸಿ ಮಾಯೆಯಿಂ ಪ್ರಯೋಗಿಸಿ ಇತ್ತ ಮಾಯೆಯಿಂ ಹೊಡೆದಿಸು.

ಮಾಯೋಪಾಧಿಭಿರ್ ಮಾಯಾಮಾಯಾಕೃತಂ ನಿಷ್ಫ ಮಾಯಯಾ ।
ಮಾಯಾಯಾ ಸೃಜಮಾನೆ ಮಾಯಾಯಾಯಾ ಮಾಯಯಾ ॥೬.೧॥

ಆಗ ಪ್ರತಿಯಾಗಿ ಮುದ್ಗಲಾದಿಯು ಅಮೃತದ ಅಮಾಯೆಯು ಭ್ರಷ್ಟಿಂ
ಮಾಡಿಸಿಯಾಯಮನ್ನು ಹೊಂದಿ ಎಲ್ಲ ರಾಜರು. ಮಾಯೆಯಿಂ ಮುಂದ ಹೊರ
ಹಾಯಿಸಿಗಳನ್ನು ಕಡೆಗಾಸಿಯು (ಮುದ್ಗಲಾದಿ ಶಬ್ದ ಅಮಾಯೆಯಿಂ
ಅಮಾಯೆಯ ಹೊಡೆಂಡಿ ಎಲ್ಲಾಯಿಂ)

ಕೇ ಚಿತ್ ಮಾಯಾ ಧಿಕ್ಕೃತ್ಯ ಮಾಯಾ ಹೊಂಗಾಯಾಯಾಯಾಃ ।
ಮಾಯಾಯಿ ಮಾಯಾ ರಾಯಾ ಮಾಯಾ ಧೃತಾ ಮಾಯಾ ॥೬.೨॥

ಎಲ್ಲ ರಾಯಿಂ, ಆ ಹಾಯಿಸಿಗಳು ಅವರ ಸಮಯವು ಧೀರಿಸಿ ರಾಯಿಂದ
ಹೊರಗಿನ ಮಾಯೆಯಿಂಗೆ ರಾಯಿಂದ ಅವರ ಹೊರಯಿಸಿಗೆ ಇಂದು ಅವರ
ಧೃತಿಯು ಬಂದಿಸಿ.

ಮಾಯಾಯಿಭ್ಯಃ ಧೃತ್ಯ ಮಾಯಾಂ ನಿಷ್ಕೃತ್ಯ ಮಾಯಯಾ ।
ರಾಯಾಯಿ ಧೃತ್ಯೈಸ್ಮ ಸೃಜ ಸೃಜಾಯಾಯಾಃ ॥೬.೪॥

ಎಲ್ಲ ಧೃತ್ಯೈಸ್ಮರು, ಆಗ ರಾಯಿಂದು ಧೃತ್ಯೆಯಾ ಅಮಾಯೆಯನ್ನು ಅವರ
ಹೊರಯಿಸಿಗೆ ರಾಯಿಂದ ಸಿಂಯಾಳ್ಳ ಅವ ರಾಯಿಂದ ಹೊಡೆದಿಸು.

ರಾಯಾಯೈಸ್ಮಾ ಧೈಸ್ಮಾಸೃಜ ಮಾಯಾ ಹೊಂಗಾಯಾಯಾಃ ।
ಮಾಯಾ ಹೊಂಗಾಯಾಯಾಃ ಧೃತ್ಯೈಸ್ಮಾಸೃಜಾಯಾಯೈಸ್ಮ ॥೬.೫॥

ಎಲೈ ಮಹಾರಾಜನೇ, ಪಾಂಡವಶ್ರೇಷ್ಠನಾದ ಅರ್ಜುನನು ತನ್ನ ಹಣೆಯಲ್ಲಿ ನೆಟ್ಟ ಆ ಬಾಣಗಳಿಂದ ಎತ್ತರವಾದ ಶೃಂಗಗಳಿಂದ ಕೂಡಿದ ಮೇರುಪರ್ವತದಂತೆ ಕೋಭಿಸಿದನು

ಸೋಽತಿವಿದ್ಧೋ ಮಹೇಷ್ವಾಸಃ ಪುತ್ರೇಣ ತವ ಧನ್ವಿನಾ ।
ವ್ಯರಾಜತ ರಣೇ ಪಾರ್ಥಃ ಕಿಂಶುಕಃ ಪುಷ್ಪವಾನಿವ ॥೩೬॥

ಧನುರ್ಧಾರಿಯಾದ ನಿನ್ನ ಪುತ್ರನಿಂದ ಬಹಳವಾಗಿ ಗಾಯಗೊಂಡ ಮಹಾಧನುರ್ಧಾರಿಯಾದ ಅರ್ಜುನನು ಪುಷ್ಪಭರಿತವಾದ ಕಿಂಶುಕವೃಕ್ಷದಂತೆ ರಣದಲ್ಲಿ ಕೋಭಿಸಿದನು

ದುಃಶಾಸನಂ ತತಃ ಕ್ರುದ್ಧಃ ಪೀಡಯಾಮಾಸ ಪಾಂಡವಃ ।
ಪರ್ವಣೀವ ಸುಸಂಕ್ರುದ್ಧೋ ರಾಹುರುಗ್ರೋ ನಿಶಾಕರಮ್ ॥೩೭॥

ಅನಂತರ ಕೋಪಗೊಂಡ ಅರ್ಜುನನು ಪರ್ವಕಾಲದಲ್ಲಿ ಬಹಳ ಕೋಪಗೊಂಡ ಘೋರವಾದ ರಾಹುವು ಚಂದ್ರನನ್ನು ಪೀಡಿಸುವಂತೆ ದುಃಶಾಸನನನ್ನು ಪೀಡಿಸಿದನು.

ಪೀಡ್ಯಮಾನೋ ಬಲವತಾ ಪುತ್ರಸ್ತವ ವಿಶಾಂಪತೇ ।
ವಿವ್ಯಾಧ ಸಮರೇ ಪಾರ್ಥಂ ಕಂಕಪತ್ರೈಃ ಶಿಲಾಶಿತೈಃ ॥೩೮॥

ಎಲೈ ರಾಜನೇ, ಬಲಿಷ್ಠನಾದ ಅರ್ಜುನನಿಂದ ಪೀಡಿಸಲ್ಪಟ್ಟ ನಿನ್ನ ಪುತ್ರನು ಕಂಕಪತ್ರವನ್ನು ಹೊಂದಿದ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಬಾಣಗಳಿಂದ ಯುದ್ಧದಲ್ಲಿ ಅರ್ಜುನನನ್ನು ಹೊಡೆದನು.

ತಸ್ಯ ಪಾರ್ಥೋ ಧನುಶ್ಛಿತ್ತ್ವಾ ತ್ವರಮಾಣಃ ಪರಾಕ್ರಮೀ ।
ಆಜಘಾನ ತತಃ ಪಶ್ಚಾತ್ ಪುತ್ರಂ ತೇ ನವಭಿಃ ಶರೈಃ ॥೩೯॥

ಪರಾಕ್ರಮಶಾಲಿಯಾದ ಅರ್ಜುನನು ತ್ವರೆ ಮಾಡುತ್ತಾ, ನಿನ್ನ ಪುತ್ರನ ಧನುಸ್ಸನ್ನು ಕತ್ತರಿಸಿ, ಅನಂತರ ಒಂಬತ್ತು ಬಾಣಗಳಿಂದ ಅವನನ್ನು ಹೊಡೆದನು.

ಸೋಽನ್ಯತ್ ಕಾರ್ಮುಕಮಾದಾಯ ಭೀಷ್ಮಸ್ಯ ಪ್ರಮುಖೇ ಸ್ಥಿತಃ ।
ಅರ್ಜುನಂ ಪಂಚವಿಂಶತ್ಯಾ ಬಾಣ್ಯೋರುರಸಿ ಚಾರ್ಪಯತ್ ॥೪೦॥

ಭೀಷ್ಮರ ಎದುರಿನಲ್ಲಿ ನಿಂತಿದ್ದ ದುಶ್ಶಾಸನನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಇಪ್ಪತ್ತೈದು ಬಾಣಗಳಿಂದ ಅರ್ಜುನನನ್ನು ಬಾಹುಗಳಲ್ಲಿ ಮತ್ತು ವಕ್ಷಸ್ಥಲದಲ್ಲಿ ಹೊಡೆದನು.

ತಸ್ಯ ಕ್ರುದ್ಧೋ ಮಹಾರಾಜ ಪಾಂಡವಃ ಶತ್ರುಕರ್ಶನಃ ।
ಅಪೈಷೀದ್ ವಿಶಿಖಾನ್ ಘೋರಾನ್ ಯಮದಂಡೋಪಮಾನ್ ಬಹೂನ್॥

ಎಲೈ ಮಹಾರಾಜನೇ, ಶತ್ರುಕರ್ಶನನಾದ ಪಾಂಡವನು ಬಹಳ ಕೋಪಗೊಂಡು ಅವನ ಮೇಲೆ ಯಮದಂಡದಂತಿದ್ದ ಅನೇಕ ಬಾಣಗಳನ್ನು ಪ್ರಯೋಗಿಸಿದನು.

ಅಪ್ರಾಪ್ತಾನೇವ ತಾನ್ ಬಾಣಾಂಶ್ಚಿಚ್ಛೇದ ತನಯಸ್ತವ ।
ಯತಮಾನಸ್ಯ ಪಾರ್ಥಸ್ಯ ತದದ್ಭುತಮಿವಾಭವತ್ ।
ಪಾರ್ಥಂ ಚ ನಿಶಿತೈರ್ಬಾಣೈಕರವಿಧ್ಯತ್ತನಯಸ್ತವ ॥೪೨॥

ನಿನ್ನ ಪುತ್ರನು ತನ್ನ ಬಳಿಗೆ ಬರುವುದಕ್ಕಿಂತ ಮೊದಲೇ ಪ್ರಯತ್ನಶಾಲಿಯಾದ ಅರ್ಜುನನ ಆ ಬಾಣಗಳನ್ನು ಕತ್ತರಿಸಿದನು. ಅದು ಅದ್ಭುತವಾಗಿದ್ದಿತು ಮತ್ತು ನಿನ್ನ ಪುತ್ರನು ತೀಕ್ಷ್ಣವಾದ ಬಾಣಗಳಿಂದ ಅರ್ಜುನನನ್ನು ಹೊಡೆದನು.

ತತಃ ಕ್ರುದ್ಧೋ ರಣೇ ಪಾರ್ಥಃ ಶರಾನ್ ಸಂಧಾಯ ಕಾರ್ಮುಕೇ ।
ಪ್ರೇಷಯಾಮಾಸ ಸಮರೇ ಸ್ವರ್ಣಪುಂಖಾನ್ ಶಿಲಾಶಿತಾನ್ ॥೪೩॥

ಆಗ ಅರ್ಜುನನು ಯುದ್ಧದಲ್ಲಿ ಕೋಪಗೊಂಡು, ಸ್ವರ್ಣಪುಂಖಗಳನ್ನು ಹೊಂದಿ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಬಾಣಗಳನ್ನು ಧನುಸ್ಸಿನಲ್ಲಿ ಹೂಡಿ ಪ್ರಯೋಗಿಸಿದನು.

ನ್ಯಮಜ್ಜಂಸ್ತೇ ಮಹಾರಾಜ ತಸ್ಯ ಕಾಯೇ ಮಹಾತ್ಮನಃ ।
ಯಥಾ ಹಂಸಾ ಮಹಾರಾಜ ತಡಾಗಂ ಪ್ರಾಪ್ಯ ಭಾರತ ॥೪೪॥

ಎಲೈ ಭಾರತನೇ, ಮಹಾರಾಜನೇ, ಹಂಸಗಳು ತಟಾಕವನ್ನು ಪ್ರವೇಶಿಸುವಂತೆ ಮಹಾತ್ಮನಾದ ದುಶ್ಶಾಸನನ ಶರೀರವನ್ನು ಅವು ಪ್ರವೇಶಿಸಿದವು.

ಪೀಡಿತಶ್ಚೈವ ಪುತ್ರಸ್ತೇ ಪಾಂಡವೇನ ಮಹಾತ್ಮನಾ ।
ಹಿತ್ವಾ ಪಾರ್ಥಂ ರಣೇ ತೂರ್ಣಂ ಭೀಷ್ಮಸ್ಯ ರಥಮಾಶ್ರಯತ್ ।
ಅಗಾಧೇ ಮಜ್ಜತಶ್ಚಸ್ಯ ದ್ವೀಪೋ ಭೀಷ್ಮೋಽಭವತ್ ತದಾ ॥೪೫॥

ಮಹಾತ್ಮನಾದ ಅರ್ಜುನನಿಂದ ಹೀಗೆ ಪೀಡಿತನಾದ ನಿನ್ನ ಪುತ್ರನು ಶೀಘ್ರವಾಗಿ ತನ್ನ ರಥವನ್ನು ಬಿಟ್ಟು ಭೀಷ್ಮರ ರಥವನ್ನು ಆಶ್ರಯಿಸಿದನು. ಅಗಾಧವಾದ ನೀರಿನಲ್ಲಿ ಮುಳುಗುವ ಅವನಿಗೆ ಆಗ ಭೀಷ್ಮರು ದ್ವೀಪವಾದರು.

ಪ್ರತಿಲಭ್ಯ ತತಃ ಸಂಜ್ಞಾಂ ಪುತ್ರಸ್ತವ ವಿಶಾಂಪತೇ ।
ಅವಾರಯತ್ ತತಃ ಶೂರೋ ಭೂಯ ಏವ ಪರಾಕ್ರಮೀ ॥೪೬॥

ಶರೈಃ ಸುನಿಶಿತೈಃ ಪಾರ್ಥಂ ಯಥಾ ವೃತ್ರಃ ಪುರಂದರಮ್ ।
ನಿರ್ಬಿಭೇದ ಮಹಾವೀರ್ಯೋ ವಿವ್ಯಥೇ ನೈವ ಚಾರ್ಜುನಾತ್ ॥೪೭॥

ಎಲೈ ರಾಜನೇ, ನಿನ್ನ ಪುತ್ರನು ಪುನಃ ಪ್ರಜ್ಞೆಯನ್ನು ಪಡೆದು ಶೂರನೂ, ಪರಾಕ್ರಮಶಾಲಿಯೂ ಆದ ಅವನು ಪುನಃ ವೃತ್ರಾಸುರನು ಇಂದ್ರನನ್ನು ಭೇದಿಸಿದಂತೆ ಅರ್ಜುನನನ್ನು ತೀಕ್ಷ್ಣವಾದ ಬಾಣಗಳಿಂದ ಭೇದಿಸಿದನು. ಮಹಾಪರಾಕ್ರಮಶಾಲಿಯಾದ ಅವನು ಅರ್ಜುನನಿಗೆ ಹೆದರಲಿಲ್ಲ (ವ್ಯಥೆ ಹಡಲಿಲ್ಲ).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಸಪ್ತಾಧಿಕಶತತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಸಪ್ತಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನೂರ ಏಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಟನೆಯ ಅಧ್ಯಾಯ

ಅಲಂಬುಸಾದಿಗಳ ಜೊತೆಯಲ್ಲಿ ಸಾತ್ಯಕಿ ಮೊದಲಾದವರ ಯುದ್ಧ.

ಸಂಜಯಃ

ಸಾತ್ಯಕಿಂ ದಂಶಿತಂ ಯುದ್ಧೇ ಭೀಷ್ಮಾಯಾಭ್ಯುದ್ಯತಂ ತದಾ ।
ಆರ್ಶ್ಯಶೃಂಗಿರ್ಮಹೇಷ್ವಾಸೋ ವಾರಯಾಮಾಸ ಸಂಯುಗೇ ॥೧॥

ಸಂಜಯ– ಯುದ್ಧದಲ್ಲಿ ಸನ್ನದ್ಧನಾಗಿ ಭೀಷ್ಮರ ಜೊತೆಯಲ್ಲಿ ಹೋರಾಡಲು ಉದ್ಯುಕ್ತನಾದ ಸಾತ್ಯಕಿಯನ್ನು ಮಹಾಧನುರ್ಧರಿಯಾದ ಅಲಂಬುಸನು ತಡೆದನು.

ಮಾಧವಸ್ತು ಸುಸಂಕ್ರುದ್ಧೋ ರಾಕ್ಷಸಂ ನವಭಿಃ ಶರೈಃ ।
ಆಜಘಾನ ರಣೇ ರಾಜನ್ ಪ್ರಹಸನ್ನಿವ ಭಾರತ ॥೨॥

ಎಲೈ ರಾಜನೇ, ಭಾರತನೇ, ಬಹಳ ಕೋಪಗೊಂಡ ಸಾತ್ಯಕಿಯಾದರೋ ನಗುವವನಂತೆ ಅಲಂಬುಸ ರಾಕ್ಷಸನನ್ನು ಒಂಬತ್ತು ಬಾಣಗಳಿಂದ ಹೊಡೆದನು.

ತಥೈವ ರಾಕ್ಷಸೋ ರಾಜನ್ ಮಾಧವಂ ನಿಶಿತೈಃ ಶರೈಃ ।
ಅರ್ದಯಾಮಾಸ ರಾಜೇಂದ್ರ ಸಂಕ್ರುದ್ಧಃ ಶಿನಿಪುಂಗವಮ್ ॥೩॥

ಎಲೈ ರಾಜೇಂದ್ರನೇ, ಹಾಗೆಯೇ ರಾಕ್ಷಸನೂ ಸಹ ಕೋಪಗೊಂಡು ತೀಕ್ಷ್ಣವಾದ ಬಾಣಗಳಿಂದ ಶಿನಿಪುಂಗವನಾದ ಸಾತ್ಯಕಿಯನ್ನು ಮರ್ದಿಸಿದನು.

ಶೈನೇಯಃ ಶರಸಂಘಂ ತು ಪ್ರೇಷಯಾಮಾಸ ಸಂಯುಗೇ ।
ರಾಕ್ಷಸಾಯ ಸುಸಂಕ್ರುದ್ಧೋ ಮಾಧವಃ ಪರವೀರಹಾ ॥೪॥

ಪರವೀರಘಾತಕನಾದ ಶಿನಿಪುತ್ರನಾದ ಸಾತ್ಯಕಿಯು ಯುದ್ಧದಲ್ಲಿ ಬಹಳ ಕ್ರುದ್ಧನಾಗಿ ರಾಕ್ಷಸನ ಮೇಲೆ ಬಾಣಗಳ ಸಮೂಹಗಳನ್ನು ಪ್ರಯೋಗಿಸಿದನು.

ತತೋ ರಕ್ಷೋ ಮಹಾಬಾಹುಂ ಸಾತ್ಯಕಿಂ ಸತ್ಯವಿಕ್ರಮಮ್ ।
ಏವ್ಯಾಧ ನಿಶಿತೈಃ ಶ್ಲಕ್ಷ್ಣೈಃ ಸಿಂಹನಾದಂ ನನಾದ ಚ ॥೫॥

ಆಗ ರಾಕ್ಷಸನಾದ ಅಲಂಬುಸನು ಸತ್ಯವಿಕ್ರಮನೂ, ಮಹಾಬಾಹುವೂ ಆದ ಸಾತ್ಯಕಿಯನ್ನು ತೀಕ್ಷ್ಣವಾದ ಬಾಣಗಳಿಂದ ಹೊಡೆದು ಸಿಂಹನಾದವನ್ನು ಮಾಡಿದನು.

ಮಾಧವಸ್ತು ಭೃಶಂ ವಿದ್ಧೋ ರಾಕ್ಷಸೇನ ರಣೇ ತದಾ ।
ಧೈರ್ಯಮಾಲಂಬ್ಯ ತೇಜಸ್ವೀ ಜಹಾಸ ಚ ನನಾದ ಚ ॥೬॥

ಮಧುಕುಲೋತ್ಪನ್ನನಾದ, ತೇಜಸ್ವಿಯಾದ ಸಾತ್ಯಕಿಯಾದರೋ ಯುದ್ಧದಲ್ಲಿ ರಾಕ್ಷಸನಿಂದ ಗಾಯಗೊಳಿಸಲ್ಪಟ್ಟರೂ ಧೈರ್ಯವನ್ನು ಅವಲಂಬಿಸಿ, ನಕ್ಕು ಸಿಂಹನಾದವನ್ನು ಮಾಡಿದನು.

ಭಗದತ್ತಸ್ತತಃ ಕ್ರುದ್ಧೋ ಮಾಧವಂ ನಿಶಿತೈಃ ಶರೈಃ ।
ತಾಡಯಾಮಾಸ ಸಮರೇ ತೋತ್ತ್ರೈರಿವ ಮಹಾಗಜಮ್ ॥೭॥

ಅನಂತರ ಕೋಪಗೊಂಡ ಭಗದತ್ತನು ಅಂಕುಶದಿಂದ ಮಹಾಗಜವನ್ನು ಹೊಡೆದಂತೆ ತೀಕ್ಷ್ಣವಾದ ಬಾಣಗಳಿಂದ ರಣರಂಗದಲ್ಲಿ ಸಾತ್ಯಕಿಯನ್ನು ಹೊಡೆದನು.

ವಿಹಾಯ ರಾಕ್ಷಸಂ ಯುದ್ಧೇ ಶೈನೇಯೋ ರಥಿನಾಂವರಃ ।
ಪ್ರಾಗ್ಜ್ಯೋತಿಷಾಯ ಚಿಕ್ಷೇಪ ಶರಾನ್ ಸನ್ನತಪರ್ವಣಃ ॥೮॥

ರಥಿಶ್ರೇಷ್ಠನಾದ ಸಾತ್ಯಕಿಯು ಯುದ್ಧದಲ್ಲಿ ಅಲಂಬುಸ ರಾಕ್ಷಸನನ್ನು ಬಿಟ್ಟು ಪ್ರಾಗ್ಜ್ಯೋತಿಷಾಧಿಪತಿಯಾದ ಭಗದತ್ತನ ಮೇಲೆ ಬಾಗಿದ ತುದಿಯುಳ್ಳ ಬಾಣಗಳನ್ನು ಪ್ರಯೋಗಿಸಿದನು.

ತಸ್ಯ ಪ್ರಾಗ್ಜ್ಯೋತಿಷೋ ರಾಜಾ ಮಾಧವಸ್ಯ ಮಹದ್ಧನುಃ ।
ಚಿಚ್ಛೇದ ಶಿತಧಾರೇಣ ಭಲ್ಲೇನ ಕೃತಹಸ್ತವತ್ ॥೯॥

ಪ್ರಾಗ್ಜ್ಯೋತಿಷಾಧಿಪತಿಯಾದ ಭಗದತ್ತರಾಜನು ಸಾತ್ಯಕಿಯ ದೊಡ್ಡ ಧನುಸ್ಸನ್ನು ತೀಕ್ಷ್ಣವಾದ ಧಾರೆಯುಳ್ಳ ತನ್ನ ಭಲ್ಲದಿಂದ ಸಿದ್ಧಹಸ್ತನಂತೆ ಕತ್ತರಿಸಿದನು.

ಅಥಾನ್ಯದ್ ಧನುರಾದಾಯ ವೇಗವತ್ ಪರವೀರಹಾ ।
ಭಗದತ್ತಂ ರಣೇ ಕ್ರುದ್ಧೋ ವಿವ್ಯಾಧ ನಿಶಿತೈಃ ಶರೈಃ ॥೧೦॥

ಪರವೀರಘಾತಕನಾದ ಸಾತ್ಯಕಿಯು ವೇಗಶಾಲಿಯಾದ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಕೋಪಗೊಂಡು ತೀಕ್ಷ್ಣವಾದ ಬಾಣಗಳಿಂದ ಭಗದತ್ತನನ್ನು ಹೊಡೆದನು.

ಸೋಽತಿವಿದ್ಧೋ ಮಹೇಷ್ವಾಸಃ ಸೃಕ್ಕಿಣೀ ಸಂಲಿಹನ್ ಮುಹುಃ ।
ಶಕ್ತಿಂ ಕನಕವೈಡೂರ್ಯಭೂಷಿತಾಮಾಯಸೀಂ ದೃಢಾಮ್ ।
ಯಮದಂಡೋಪಮಾಂ ಘೋರಾಂ ಪ್ರಾಹಿಣೋತ್ ಸಾತ್ಯಕಾಯ ವೈ ॥

ಬಹಳ ಗಾಯಗೊಂಡ ಮಹಾಧನುರ್ಧಾರಿಯಾದ ಭಗದತ್ತನು ತನ್ನ ಕಟಬಾಯಿಯನ್ನು ಪುನಃ ಪುನಃ ಸವರಿಕೊಳ್ಳುತ್ತಾ ಸುವರ್ಣವೈಡೂರ್ಯಗಳಿಂದ ಅಲಂಕೃತವಾದ, ಅಯೋಮಯವಾದ, ಯಮದಂಡದಂತೆ ಘೋರವಾದ ಶಕ್ತ್ಯಾಯುಧವನ್ನು ಸಾತ್ಯಕಿಯ ಮೇಲೆ ಎಸೆದನು.

ತಾಮಾಪತಂತೀಂ ಸಹಸಾ ತಸ್ಯ ಬಾಹೋರ್ಬಲೇರಿತಾಮ್ ।
ಸಾತ್ಯಕಿಃ ಸಮರೇ ರಾಜನ್ ತ್ರಿಧಾ ಚಿಚ್ಛೇದ ಸಾಯಕೈಃ ।
ಸಾ ಪಪಾತ ತದಾ ಭೂಮೌ ಮಹೋಲ್ಕೇವ ಹತಪ್ರಭಾ ॥೧೨॥

ಎಲೈ ರಾಜನೇ, ಅವನ ಬಾಹುಬಲದಿಂದ ಎಸೆಯಲ್ಪಟ್ಟು ತನ್ನ ಕಡೆಗೆ ವೇಗದಿಂದ ಬರುತ್ತಿದ್ದ ಆ ಶಕ್ತಿಯನ್ನು ಸಾತ್ಯಕಿಯು ರಣರಂಗದಲ್ಲಿ ಮೂರು ಬಾಣಗಳಿಂದ ಕತ್ತರಿಸಿದನು. ಆ ಶಕ್ತಿಯು ಕಾಂತಿಹೀನವಾಗಿ ದೊಡ್ಡ ಉಲ್ಕೆಯಂತೆ ಭೂಮಿಯ ಮೇಲೆ ಬಿದ್ದಿತು.

ಶಕ್ತಿಂ ವಿನಿಹತಾಂ ದೃಷ್ಟ್ವಾ ಪುತ್ರಸ್ತವ ವಿಶಾಂಪತೇ ।
ಮಹತಾ ರಥವಂಶೇನ ವಾರಯಾಮಾಸ ಮಾಧವಮ್ ॥೧೩॥

ಶಕ್ತಿಯು ವಿನಾಶ ಹೊಂದಿದುದನ್ನು ನೋಡಿ ಎಲೈ ರಾಜನೇ, ನಿನ್ನ ಪುತ್ರನು (ದುಶ್ಶಾಸನನು) ದೊಡ್ಡ ರಥಸಮೂಹದಿಂದ ಸಾತ್ಯಕಿಯನ್ನು ತಡೆದನು.

ತಥಾ ಪರಿವೃತಂ ದೃಷ್ಟ್ವಾ ವಾರ್ಷ್ಣೇಯಾನಾಂ ಮಹಾರಥಮ್ ।
ದುರ್ಯೋಧನೋ ಭೃಶಂ ಹೃಷ್ಟೋ ಭ್ರಾತೄನ್ ಸರ್ವಾನುವಾಚ ಹ ॥

ವಾರ್ಷ್ಣೇಯರ ಮಹಾರಥನಾದ ಸಾತ್ಯಕಿಯು ಹಾಗೆ ಸುತ್ತುವರಿಯಲ್ಪಟ್ಟುದನ್ನು ನೋಡಿ ದುರ್ಯೋಧನನು ಬಹಳ ಸಂತೋಷಗೊಂಡು ತನ್ನ ಸಹೋದರನನ್ನು ಕುರಿತು ಹೇಳಿದನು.

ತಥಾ ಕುರುತ ಕೌರವ್ಯಾ ಯಥಾ ವಃ ಸಾತ್ಯಕೋ ಯುಧಿ ।
ನ ಜೀವನ್ ಪ್ರತಿನಿರ್ಯಾತಿ ಮಹತೋಽಸ್ಮಾದ್ ರಥವ್ರಜಾತ್ ।
ಅಸ್ಮಿನ್ ಹತೇ ಹತಂ ಮನ್ಯೇ ಪಾಂಡವಾನಾಂ ಮಹದ್ಬಲಮ್ ॥೧೫॥

ಎಲೈ ಕೌರವ್ಯರೇ, ಈ ದಿನ ಸಾತ್ಯಕಿಯು ನಮ್ಮ ದೊಡ್ಡ ರಥಸಮೂಹದಿಂದ ತಪ್ಪಿಸಿಕೊಂಡು ಜೀವಸಹಿತವಾಗಿ ಹೊರಗೆ ಹೋಗದಂತೆ ಮಾಡಿ. ಇವನು ಹತನಾದರೆ ಪಾಂಡವರ ದೊಡ್ಡ ಸೈನ್ಯವು ಹತವಾಯಿತೆಂದು ನಾನು ಭಾವಿಸುತ್ತೇನೆ (ಎಂದು ಹೇಳಿದನು).

ತತ್ತಥೇತಿ ವಚಸ್ತಸ್ಯ ಪರಿಗೃಹ್ಯ ಮಹಾರಥಾಃ ।
ಶೈನೇಯಂ ಯೋಧಯಾಮಾಸುರ್ಭೀಷ್ಮಸ್ಯ ಪ್ರಮುಖೇ ತದಾ ॥೧೬॥

ಹಾಗೆಯೇ ಆಗಲಿ ಎಂದು ಅವನ ಮಾತನ್ನು ಸ್ವೀಕರಿಸಿ ಮಹಾರಥರು ಭೀಷ್ಮರ ಮುಂಭಾಗದಲ್ಲಿ ಸಾತ್ಯಕಿಯ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ಅಭಿಮನ್ಯುಂ ತದಾऽऽಯಾಂತಂ ಭೀಷ್ಮಾಯಾಭ್ಯುದ್ಯತಂ ಮೃಧೇ ।
ಕಾಂಬೋಜರಾಜೋ ಬಲವಾನ್ ವಾರಯಾಮಾಸ ಸಂಯುಗೇ ॥೧೭॥

ಆಗ ಯುದ್ಧದಲ್ಲಿ ಭೀಷ್ಮರ ಮೇಲೆ ಎರಗಲು ಬರುತ್ತಿದ್ದ ಅಭಿಮನ್ಯುವನ್ನು ಬಲಿಷ್ಠನಾದ ಕಾಂಬೋಜರಾಜನು ತಡೆದನು.

ಆರ್ಜುನಿರ್ನೃಪತಿಂ ವಿದ್ವಾ ಶರೈಃ ಸನ್ನತಪರ್ವಭಿಃ ।
ಪುನರೇವ ಚತುಃಷಷ್ಟ್ಯಾ ರಾಜನ್ ವಿವ್ಯಾಧ ತಂ ನೃಪಮ್ ॥೧೮॥

ಅರ್ಜುನ ಪುತ್ರನಾದ ಅಭಿಮನ್ಯುವು ಕಾಂಬೋಜರಾಜನನ್ನು ಬಾಗಿದ ತುದಿಯುಳ್ಳ ಬಾಣಗಳಿಂದ ಹೊಡೆದು ಎಲೈ ರಾಜನೇ, ಪುನಃ ಅರವತ್ತನಾಲ್ಕು ಬಾಣಗಳಿಂದ ಆ ರಾಜನನ್ನು ಮರ್ದಿಸಿದನು.

ಸುದಕ್ಷಿಣಸ್ತು ಸಮರೇ ಕಾರ್ಷ್ಣಿಂ ವಿವ್ಯಾಧ ಪಂಚಭಿಃ ।
ಸಾರಥಿಂ ಚಾಸ್ಯ ನವಭಿರಿಚ್ಛನ್ ಭೀಷ್ಮಸ್ಯ ಜೀವಿತಮ್ ॥೧೯॥

ಸುದಕ್ಷಿಣನಾದರೋ ಭೀಷ್ಮರ ಪ್ರಾಣವನ್ನು ಉಳಿಸಲು ಇಚ್ಛಿಸುತ್ತಾ ಅಭಿಮನ್ಯುವನ್ನು ಐದು ಬಾಣಗಳಿಂದ ಹೊಡೆದು ಅವನ ಸಾರಥಿಯನ್ನು ಒಂಬತ್ತು ಬಾಣಗಳಿಂದ ಹೊಡೆದನು.

ತದ್ಯುದ್ಧಮಾಸೀತ್ ಸುಮಹತ್ ತಯೋಸ್ತತ್ರ ಪರಾಕ್ರಮೇ ।
ಯದಭ್ಯಧಾವದ್ ಗಾಂಗೇಯಂ ಶಿಖಂಡೀ ಶತ್ರುತಾಪನಃ ॥೨೦॥

ಅವರಿಬ್ಬರ ಸಮಾಗಮವಾದಾಗ ದೊಡ್ಡ ಯುದ್ಧವು ಜರುಗಿತು. ಆ ಸಮಯದಲ್ಲಿ ಶತ್ರುತಾಪನನಾದ ಶಿಖಂಡಿಯು ಭೀಷ್ಮರ ಕಡೆಗೆ ನುಗ್ಗಿದನು.

ವಿರಾಟದ್ರುಪದೌ ವೃದ್ಧೌ ವಾರಯಂತೌ ಮಹಾಚಮೂಮ್ ।
ಭೀಷ್ಮಂ ಚ ಯುಧಿ ಸಂರಬ್ಧಾವಾದ್ರವಂತೌ ಮಹಾರಥೌ ॥೨೧॥

ವೃದ್ಧರೂ, ಮಹಾರಥರೂ ಆದ ವಿರಾಟ-ದ್ರುಪದರು ಯುದ್ಧದಲ್ಲಿ ಕೋಪಗೊಂಡು ಕೌರವರ ದೊಡ್ಡ ಸೈನ್ಯವನ್ನು ನಿವಾರಿಸಿಕೊಂಡು ಭೀಷ್ಮರ ಕಡೆಗೆ ಧಾವಿಸಿದರು.

ಅಶ್ವತ್ಥಾಮಾ ತತಃ ಕ್ರುದ್ಧಃ ಸಮಾಯಾದ್ ರಥಸತ್ತಮಃ ।
ತತಃ ಪ್ರವವೃತೇ ಯುದ್ಧಂ ತವ ತೇಷಾಂ ಚ ಭಾರತ ॥೨೨॥

ಆಗ ರಥಶ್ರೇಷ್ಠರಾದ ಅಶ್ವತ್ಥಾಮರು ಕ್ರುದ್ಧರಾಗಿ ಅಲ್ಲಿಗೆ ಬಂದರು. ಎಲೈ ಭಾರತನೇ, ಅನಂತರ ಅವರಿಗೂ ಮತ್ತು ನಿಮ್ಮವರಿಗೂ ಯುದ್ಧವು ನಡೆಯಿತು.

ವಿರಾಟೋ ದಶಭಿರ್ಭಲ್ಲೈರಾಜಘಾನ ಪರಂತಪ ।
ಯತಮಾನಂ ಮಹೇಷ್ವಾಸಂ ದ್ರೌಣಿಮಾಹವಶೋಭಿನಮ್ ॥೨೩॥

ಎಲೈ ಪರಂತಪನೇ, ಮಹಾಧನುರ್ಧಾರಿಗಳೂ, ಪ್ರಯತ್ನಶೀಲರೂ, ಯುದ್ಧದಲ್ಲಿ ಶೋಭಿಸುವವರೂ ಆದ ಅಶ್ವತ್ಥಾಮರನ್ನು ವಿರಾಟನು ಹತ್ತು ಭಲ್ಲಗಳಿಂದ ಹೊಡೆದನು.

ದ್ರುಪದಶ್ಚ ತ್ರಿಭಿರ್ಬಾಣೈರ್ವಿವ್ಯಾಧ ನಿಶಿತೈಸ್ತಥಾ ।
ಗುರುಪುತ್ರಂ ಸಮಾಸಾದ್ಯ ಭೀಷ್ಮಸ್ಯ ಪುರತಃ ಸ್ಥಿತಮ್ ॥೨೪॥

ಭೀಷ್ಮರ ಮುಂಭಾಗದಲ್ಲಿ ನಿಂತಿದ್ದ ಗುರುಪುತ್ರರಾದ ಅಶ್ವತ್ಥಾಮರನ್ನು ಸಮೀಪಿಸಿ ದ್ರುಪದನೂ ಸಹ ಮೂರು ತೀಕ್ಷ್ಣವಾದ ಬಾಣಗಳಿಂದ ಅವರನ್ನು ಹೊಡೆದನು.

ಅಶ್ವತ್ಥಾಮಾ ತತಸ್ತೌ ತು ವಿವ್ಯಾಧ ದಶಭಿಃ ಶರೈಃ ।
ವಿರಾಟದ್ರುಪದೌ ವೃದ್ಧೌ ಭೀಷ್ಮಂ ಪ್ರತಿ ಸಮುದ್ಯತೌ ॥೨೫॥

ಅಶ್ವತ್ಥಾಮರು ಭೀಷ್ಮರ ಮೇಲೆ ಸಾಗಿ ಬರುತ್ತಿದ್ದ ವೃದ್ಧರಾದ ಆ ವಿರಾಟ-ದ್ರುಪದರನ್ನು ಹತ್ತು ಬಾಣಗಳಿಂದ ಹೊಡೆದರು.

ತತ್ರಾದ್ಭುತಮಪಶ್ಯಾಮ ವೃದ್ಧಯೋಶ್ಚರಿತಂ ಮಹತ್ ।
ಯದ್ ದ್ರೋಣೇಃ ಸಾಯಕಾನ್ ಘೋರಾನ್ ಪ್ರತ್ಯವಾರಯತಾಂ ಯುಧಿ ॥

ಅಶ್ವತ್ಥಾಮರ ಘೋರವಾದ ಬಾಣಗಳನ್ನು ಯುದ್ಧದಲ್ಲಿ ನಿವಾರಿಸಿದ, ವೃದ್ಧರಾದ ಅವರಿಬ್ಬರ ದೊಡ್ಡದಾದ ಮತ್ತು ಅದ್ಭುತವಾದ ಚರ್ಯೆಯನ್ನು ನಾವು ಅಲ್ಲಿ ನೋಡಿದೆವು.

ಸಹದೇವಂ ತಥಾऽऽಯಾಂತಂ ಕೃಪಃ ಶಾರದ್ವತೋऽಭ್ಯಯಾತ್ ।
ಯಥಾ ನಾಗೋ ವನೇ ನಾಗಂ ಮತ್ತೋ ಮತ್ತಮುಪಾದ್ರವತ್ ॥೨೬॥

ಭೀಷ್ಮರ ಕಡೆಗೆ ಬರುತ್ತಿದ್ದ ಸಹದೇವನನ್ನು ನೋಡಿ ಶಾರದ್ವತರಾದ ಕೃಪರು ಕಾಡಿನಲ್ಲಿ ಮದಗಜವು ಇನ್ನೊಂದು ಮದಗಜದ ಕಡೆಗೆ ಧಾವಿಸಿದಂತೆ ಧಾವಿಸಿ ಬಂದರು.

ಕೃಪಶ್ಚ ಸಮರೇ ರಾಜನ್ ಮಾದ್ರೀಪುತ್ರಂ ಮಹಾರಥಮ್ ।
ಆಜಘಾನ ಶರೈಸ್ತೂರ್ಣಂ ಸಪ್ತತ್ಯಾ ರುಗ್ಮಭೂಷಣೈಃ ॥೨೮॥

ಎಲೈ ರಾಜನೇ, ಕೃಪರು ಯುದ್ಧದಲ್ಲಿ ಮಹಾರಥನಾದ ಮಾದ್ರೀಪುತ್ರನಾದ ಸಹದೇವನನ್ನು ಸುವರ್ಣಭೂಷಿತವಾದ ಎಪ್ಪತ್ತು ಬಾಣಗಳಿಂದ ಶೀಘ್ರವಾಗಿ ಹೊಡೆದರು.

ತಸ್ಯ ಮಾದ್ರೀಸುತಶ್ಚಾಪಂ ದ್ವಿಧಾ ಚಿಚ್ಛೇದ ಸಾಯಕೈಃ ।
ಅಥೈನಂ ಛಿನ್ನಧನ್ವಾನಂ ವಿವ್ಯಾಧ ನವಭಿಃ ಶರೈಃ ॥೨೯॥

ಮಾದ್ರೀಪುತ್ರನಾದ ಸಹದೇವನು ಅವರ ಧನುಸ್ಸನ್ನು ತನ್ನ ಬಾಣಗಳಿಂದ ಎರಡು ಭಾಗವಾಗಿ ಕತ್ತರಿಸಿದನು. ಅನಂತರ ಅವರ ಧನುಸ್ಸು ಕತ್ತರಿಸಲ್ಪಟ್ಟ ಮೇಲೆ ಒಂಬತ್ತು ಬಾಣಗಳನ್ನು ಪ್ರಯೋಗಿಸಿದರು.

ಸೋऽನ್ಯತ್ಕಾರ್ಮುಕಮಾದಾಯ ಸಮರೇ ಭಾರಸಾಧನಮ್ ।
ಮಾದ್ರೀಪುತ್ರಂ ಸುಸಂಹೃಷ್ಟೋ ದಶಭಿರ್ನಿಶಿತೈಃ ಶರೈಃ ।
ಆಜಘಾನೋರಸಿ ಕ್ರುದ್ಧ ಇಚ್ಛನ್ ಭೀಷ್ಮಸ್ಯ ಜೀವಿತಮ್ ॥೩೦॥

ಕೃಪರು ಯುದ್ಧದಲ್ಲಿ ಗುರುತರ ಕಾರ್ಯವನ್ನು ಮಾಡುವ ಸಾಮರ್ಥ್ಯವನ್ನು ಹೊಂದಿದ ಇನ್ನೊಂದು ಬಿಲ್ಲನ್ನು ತೆಗೆದುಕೊಂಡು ಬಹಳ ಸಂತೋಷದಿಂದ ಕೂಡಿದವರಾಗಿ, ಭೀಷ್ಮರ ಪ್ರಾಣವನ್ನು ಉಳಿಸಲು ಬಯಸಿ, ಕ್ರುದ್ಧರಾಗಿ ತೀಕ್ಷ್ಣವಾದ ಹತ್ತು ಬಾಣಗಳಿಂದ ಸಹದೇವನನ್ನು ಎದೆಯಲ್ಲಿ ಹೊಡೆದರು.

ತಥೈವ ಪಾಂಡವೋ ರಾಜನ್ ಶಾರದ್ವತಮಮರ್ಷಣಮ್ ।
ಆದಘಾನೋರಸಿ ಕ್ರುದ್ಧೋ ಭೀಷ್ಮಸ್ಯ ವಧಕಾಂಕ್ಷಯಾ ।
ತಯೋರ್ಯುದ್ಧಂ ಸಮಭವದ್ ಘೋರರೂಪಂ ಭಯಾವಹಮ್ ॥

ಎಲೈ ರಾಜನೇ, ಹಾಗೆಯೇ ಪಾಂಡವನಾದ ಸಹದೇವನು ಭೀಷ್ಮರ ವಧೆಯನ್ನು ಉದ್ದೇಶಿಸಿ ಕ್ರುದ್ಧನಾಗಿ ವ್ಯದ್ಧರಾದ ಕೃಪರನ್ನು ಅವರ ವಕ್ಷಸ್ಥಲದಲ್ಲಿ ಹೊಡೆದನು. ಅವರಿಬ್ಬರಿಗೂ ಘೋರವೂ ಮತ್ತು ಭಯಂಕರವೂ ಆದ ಯುದ್ಧವು ನಡೆಯಿತು.

ನಕುಲಂ ತು ರಣೇ ಕ್ರುದ್ಧಂ ವಿಕರ್ಣಃ ಶತ್ರುತಾಪನಃ ।
ವಿವ್ಯಾಧ ಸಾಯಕೈಃ ಷಷ್ಟ್ಯಾ ರಕ್ಷನ್ ಭೀಷ್ಮಸ್ಯ ಜೀವಿತಮ್ ॥೩೨॥

ಶತ್ರುತಾಪನನಾದ ವಿಕರ್ಣನು ಭೀಷ್ಮರ ಜೀವಿತವನ್ನು ರಕ್ಷಿಸುತ್ತಾ ಯುದ್ಧದಲ್ಲಿ ಕೋಪಗೊಂಡ ನಕುಲನನ್ನು ಅರವತ್ತು ಬಾಣಗಳಿಂದ ಹೊಡೆದನು.

ನಕುಲೋऽಪಿ ಭೃಶಂ ವಿದ್ಧಸ್ತವ ಪುತ್ರೇಣ ಧನ್ವಿನಾ ।
ವಿಕರ್ಣಂ ಸಪ್ತಸಪ್ತತ್ಯಾ ನಿರ್ಬಿಭೇದ ಶಿಲೀಮುಖೈಃ ॥೩೩॥

ಧನುರ್ಧಾರಿಯಾದ ನಿನ್ನ ಪುತ್ರನಿಂದ ಗಾಢವಾಗಿ ಗಾಯಗೊಂಡ ನಕುಲನೂ ಸಹ ಎಪ್ಪತ್ತೇಳು ಬಾಣಗಳಿಂದ ವಿಕರ್ಣನನ್ನು ಭೇದಿಸಿದನು.

ತತ್ರ ತೌ ನರಶಾರ್ದೂಲೌ ಭೀಷ್ಮಹೇತೋಃ ಪರಂತಪೌ ।
ಅನ್ಯೋನ್ಯಂ ಜಘ್ನತುರ್ವೀರೌ ಗೋಷ್ಠೇ ಗೋವೃಷಭಾವಿವ ॥೩೪॥

ಅಲ್ಲಿ ಆ ಇಬ್ಬರು ವೀರರೂ ಮತ್ತು ನರಶಾರ್ದೂಲರೂ ಕೊಟ್ಟಿಗೆಯಲ್ಲಿ ಗೂಳಿಗಳಂತೆ ಪರಸ್ಪರವಾಗಿ ಹೊಡೆದಾಡಿದರು.

ಘಟೋತ್ಕಚಂ ರಣೇ ಯತ್ತಂ ನಿಘ್ನಂತಂ ತವ ವಾಹಿನೀಮ್ ।
ದುರ್ಮುಖಃ ಸಮರೇ ತ್ರಾಯಾದ್ ಭೀಷ್ಮಹೇತೋಃ ಪರಾಕ್ರಮೀ ॥೩೫॥

ನಿನ್ನ ಸೈನ್ಯವನ್ನು ಕೊಲ್ಲುತ್ತಿದ್ದ ಪ್ರಯತ್ನಶೀಲನಾದ ಘಟೋತ್ಕಚನನ್ನು ಕುರಿತು ಭೀಷ್ಮರನ್ನು ರಕ್ಷಿಸುವ ನಿಮಿತ್ತದಿಂದಾಗಿ ಪರಾಕ್ರಮಶಾಲಿಯಾದ ದುರ್ಮುಖನು ಯುದ್ಧದಲ್ಲಿ ಅವನ ಕಡೆಗೆ ಹೋದನು.

ಹೈಡಿಂಬಸ್ತು ತತೋ ರಾಜನ್ ದುರ್ಮುಖಂ ಶತ್ರುತಾಪನಮ್ ।
ಆಜಘಾನೋರಸಿ ಕ್ರುದ್ಧೋ ನವತ್ಯಾ ನಿಶಿತೈಃ ಶರೈಃ ॥೩೬॥

ಎಲೈ ರಾಜನೇ, ಘಟೋತ್ಕಚನಾದರೋ ಕ್ರುದ್ಧನಾಗಿ ಆಗ ಶತ್ರುತಾಪನನಾದ ದುರ್ಮುಖನನ್ನು ತೊಂಬತ್ತು ತೀಕ್ಷ್ಣವಾದ ಬಾಣಗಳಿಂದ ವಕ್ಷಸ್ಥಲದಲ್ಲಿ ಹೊಡೆದನು.

ಭೀಮಸೇನಸುತಂ ಚಾಪಿ ದುರ್ಮುಖಃ ಸುಮುಖೈಃ ಶರೈಃ ।
ಷಷ್ಟ್ಯಾ ವೀರೋ ನದನ್ ಹೃಷ್ಟೋ ವಿವ್ಯಾಧ ರಣಮೂರ್ಧನಿ ॥೩೭॥

ವೀರನಾದ ದುರ್ಮುಖನೂ ಸಹ ಸಂತೋಷಗೊಂಡು ಶ್ರೇಷ್ಠವಾದ ಆ ರಣದಲ್ಲಿ ಸಿಂಹನಾದವನ್ನು ಮಾಡುತ್ತಾ, ಅರವತ್ತು ಬಾಣಗಳಿಂದ ಭೀಮಸೇನಸುತನಾದ ಘಟೋತ್ಕಚನನ್ನು ಹೊಡೆದನು.

ಧೃಷ್ಟದ್ಯುಮ್ನಂ ರಣೇ ಯಾಂತಂ ಭೀಷ್ಮಸ್ಯ ವಧಕಾಂಕ್ಷಿಣಮ್ ।
ಹಾರ್ದಿಕ್ಯೋ ವಾರಯಾಮಾಸ ರಕ್ಷನ್ ಭೀಷ್ಮಸ್ಯ ಜೀವಿತಮ್ ॥೩೮॥

ಭೀಷ್ಮರ ವಧೆಯನ್ನು ಆಶಿಸಿ ಅವರ ಬಳಿಗೆ ಸಾಗುತ್ತಿದ್ದ ಧೃಷ್ಟದ್ಯುಮ್ನನನ್ನು ಭೀಷ್ಮರ ಜೀವಿತವನ್ನು ರಕ್ಷಿಸುತ್ತಾ ಕೃತವರ್ಮನು ತಡೆದನು.

ವಾರ್ಷ್ಣೇಯಃ ಪಾರ್ಷತಂ ಶೂರಂ ವಿದ್ವಾ ಪಂಚಭಿರಾಯಸೈಃ ।
ಪುನಃ ಪಂಚಾಶತಾ ತೂರ್ಣಂ ತಿಷ್ಠತಿಷ್ಠೇತಿ ಚಾಬ್ರವೀತ್ ।
ಆಜಘಾನ ಮಹಾಬಾಹುಃ ಪಾರ್ಷತಂ ತಂ ಮಹಾರಥಮ್ ॥೩೯॥

ಕೃತವರ್ಮನು ಶೂರನಾದ ಧೃಷ್ಟದ್ಯುಮ್ನನನ್ನು ಐದು ಕಬ್ಬಿಣದ ಬಾಣಗಳಿಂದ ಹೊಡೆದು ಮಹಾಶೀಘ್ರವಾಗಿ ಐದು ನೂರು ಬಾಣಗಳನ್ನು ಪ್ರಯೋಗಿಸಿ ನಿಲ್ಲು, ನಿಲ್ಲು ಎಂದು ಹೇಳಿದನು. ಮಹಾಬಾಹುವಾದ ಅವನು ಮಹಾರಥನಾದ ಆ ಧೃಷ್ಟದ್ಯುಮ್ನನನ್ನು ಪುನಃ ಬಾಣಗಳಿಂದ ಹೊಡೆದನು.

ತಥೈವ ಪಾರ್ಷತೋ ರಾಜನ್ ಹಾರ್ದಿಕ್ಯಂ ನವಭಿಃ ಶರೈಃ ।
ವಿವ್ಯಾಧ ನಿಶಿತೈಸ್ತೀಕ್ಷ್ಣೈಃ ಕಂಕಪತ್ರಪರಿಚ್ಛದೈಃ ॥೪೦॥

ಎಲೈ ರಾಜನೇ, ಹಾಗೆಯೇ ಧೃಷ್ಟದ್ಯುಮ್ನನೂ ಸಹ ಕಂಕಪತ್ರದಿಂದ ಕೂಡಿದ ತೀಕ್ಷ್ಣವಾದ ಒಂಬತ್ತು ಬಾಣಗಳಿಂದ ಕೃತವರ್ಮನನ್ನು ಹೊಡೆದನು.

ತಯೋಃ ಸಮಭವದ್ ಯುದ್ಧಂ ಭೀಷ್ಮಹೇತೋರ್ಮಹಾರಣೇ ।
ಅನ್ಯೋನ್ಯಾತಿಶಯೈರ್ಯುಕ್ತಂ ಯಥಾ ವೃತ್ರಮಹೇಂದ್ರಯೋಃ ॥೪೧॥

ವೃತ್ರ-ಮಹೇಂದ್ರರಂತೆ ಒಬ್ಬರಿಗಿಂತ ಒಬ್ಬರು ಅತಿಶಯವನ್ನು ಮಾಡುತ್ತಿದ್ದ ಅವರಿಗೆ ಭೀಷ್ಮರ ಕಾರಣದಿಂದಾಗಿ ಮಾಡಿದ ಆ ಮಹಾಯುದ್ಧವು ನಡೆಯಿತು.

ಭೀಮಸೇನಮಥಾಯಾಂತಂ ಭೀಷ್ಮಂ ಪ್ರತಿ ಮಹಾಬಲಮ್ ।
ಭೂರಿಶ್ರವಾಭ್ಯಯಾತ್ ತೂರ್ಣಂ ತಿಷ್ಠತಿಷ್ಠೇತಿ ಚಾಬ್ರವೀತ್ ॥೪೨॥

ಅನಂತರ ಭೀಷ್ಮರ ಕಡೆಗೆ ಬರುತ್ತಿದ್ದ ಮಹಾಬಲನಾದ ಭೀಮಸೇನನನ್ನು ಭೂರಿಶ್ರವನು ಶೀಘ್ರವಾಗಿ ಸಮೀಪಿಸಿ ನಿಲ್ಲು, ನಿಲ್ಲು ಎಂದು ಹೇಳಿದನು.

ಸೌಮದತ್ತಿರಥೋ ಭೀಮಮಾಜಘಾನ ಸ್ತನಾಂತರೇ ।
ನಾರಾಚೇನ ಸುತೀಕ್ಷ್ಣೇನ ರುಗ್ಮಪುಂಖೇನ ಸಂಯುಗೇ ॥೪೩॥

ಅನಂತರ ಸೋಮದತ್ತನ ಪುತ್ರನಾದ ಭೂರಿಶ್ರವನು ರಣರಂಗದಲ್ಲಿ ಸುವರ್ಣ ಪುಂಖವನ್ನು ಹೊಂದಿದ ತೀಕ್ಷ್ಣವಾದ ನಾರಾಚದಿಂದ ಭೀಮಸೇನನನ್ನು ಸ್ತನಗಳ ಮಧ್ಯದಲ್ಲಿ ಹೊಡೆದನು.

ಉರಸ್ಥೇನ ಬಭೌ ತೇನ ಭೀಮಸೇನಃ ಪ್ರತಾಪವಾನ್ ।
ಸ್ಕಂದಶಕ್ತ್ಯಾ ಯಥಾ ಕ್ರೌಂಚಃ ಪುರಾ ನೃಪತಿಸತ್ತಮ ॥೪೪॥

ಎಲೈ ರಾಜಶ್ರೇಷ್ಠನೇ, ಪ್ರತಾಪಶಾಲಿಯಾದ ಭೀಮಸೇನನು ವಕ್ಷಸ್ಥಲದಲ್ಲಿ ನಾಟಿದ ಆ ನಾರಾಚದಿಂದ ಹಿಂದೆ ಸ್ಕಂದನು ಪ್ರಯೋಗಿಸಿದ್ದ ಶಕ್ತಿಯು ನಾಟಿದ ಕ್ರೌಂಚ ಪರ್ವತದಂತೆ ಶೋಭಿಸಿದನು.

ತೌ ಶರಾನ್ ಸೂರ್ಯಸಂಕಾಶಾನ್ ಕರ್ಮಾರಪರಿಮಾರ್ಜಿತಾನ್ ।
ಅನ್ಯೋನ್ಯಸ್ಯ ರಣೇ ಕ್ರುದ್ಧೌ ಚಿಕ್ಷಿಪಾತೇ ಮುಹುರ್ಮುಹುಃ ॥೪೫॥

ಅವರಿಬ್ಬರೂ ಕ್ರುದ್ಧರಾಗಿ ಕಮ್ಮಾರರು ಚೆನ್ನಾಗಿ ತಯಾರಿಸಿದ, ಸೂರ್ಯನಂತೆ ಹೊಳೆಯುವ ಬಾಣಗಳನ್ನು ಪುನಃ ಪುನಃ ಪರಸ್ಪರವಾಗಿ ಪ್ರಯೋಗಿಸಿದರು.

ಭೀಮೋ ಭೀಷ್ಮವಧಾಕಾಂಕ್ಷೀ ಸೌಮದತ್ತಿಂ ಮಹಾರಥಮ್ ।
ತಥಾ ಭೀಷ್ಮಜಯೇ ಗೃಧ್ನುಃ ಸೌಮದತ್ತಿಶ್ಚ ಪಾಂಡವಮ್ ।
ಕೃತಪ್ರತಿಕೃತೇ ಯತ್ತೌ ಯೋಧಯಾಮಾಸತೂ ರಣೇ ॥೪೬॥

ಭೀಷ್ಮರ ವಧಾಕಾಂಕ್ಷಿಯಾದ ಭೀಮನು ಮಹಾರಥನಾದ ಭೂರಿಶ್ರವಸನ್ನೂ ಹಾಗೆಯೇ ಭೀಷ್ಮರ ಜಯದಲ್ಲಿ ಆಸೆಯುಳ್ಳ ಭೂರಿಶ್ರವನು ಭೀಮಸೇನನನ್ನೂ ಯುದ್ಧದಲ್ಲಿ ಒಬ್ಬರು ಮಾಡಿದುದಕ್ಕೆ ಇನ್ನೊಬ್ಬರು ಪ್ರತೀಕಾರವನ್ನು ಮಾಡುತ್ತಾ ಪ್ರಯತ್ನಶೀಲರಾಗಿ ಯುದ್ಧವನ್ನು ಮಾಡಿದರು.

ಯುಧಿಷ್ಠಿರಂ ಮಹಾರಾಜ ಮಹತ್ಯಾ ಸೇನಯಾ ವೃತಮ್ ।
ಭೀಷ್ಮಾಯಾಭಿಮುಖಂ ಯಾಂತಂ ಭಾರದ್ವಾಜೋ ನ್ಯವಾರಯತ್ ॥೪೭॥

ಎಲೈ ಮಹಾರಾಜನೇ, ತನ್ನ ದೊಡ್ಡ ಸೇನೆಯಿಂದ ಸಹಿತನಾಗಿ ಭೀಷ್ಮರಿಗೆ ಅಭಿಮುಖವಾಗಿ ಹೋಗುತ್ತಿದ್ದ ಯುಧಿಷ್ಠಿರನನ್ನು ದ್ರೋಣರು ತಡೆದರು.

ದ್ರೋಣಸ್ಯ ರಥನಿರ್ಘೋಷಂ ಪರ್ಜನ್ಯನಿನದೋಪಮಮ್ ।
ಶ್ರುತ್ವಾ ಪ್ರಭದ್ರಕಾ ರಾಜನ್ ಸಮಕಂಪಂತ ಮಾರಿಷ ॥೪೮॥

ಎಲೈ ರಾಜನೇ, ಪೂಜ್ಯನೇ, ಪರ್ಜನ್ಯ ಘೋಷದಂತೆ ಇದ್ದ ದ್ರೋಣರ ರಥದ ಘೋಷವನ್ನು ಕೇಳಿ ಪ್ರಭದ್ರಕರು ನಡುಗಿ ಹೋದರು.

ಸಾ ಸೇನಾ ಮಹತೀ ರಾಜನ್ ಪಾಂಡುಪುತ್ರಸ್ಯ ಸಂಯುಗೇ ।
ದ್ರೋಣೇನ ವಾರಿತಾ ಯತ್ತಾ ನ ಚಚಾಲ ಪದಾತ್ಪದಮ್ ॥೪೯॥

ಎಲೈ ರಾಜನೇ, ಯುದ್ಧದಲ್ಲಿ ಪಾಂಡುಪುತ್ರನ ದೊಡ್ಡ ಸೇನೆಯು ದ್ರೋಣರಿಂದ ತಡೆಯಲ್ಪಟ್ಟರೂ ಪ್ರಯತ್ನಪಟ್ಟರೂ ಒಂದು ಹೆಜ್ಜೆ ಮುಂದಿಡಲಾಗಲಿಲ್ಲ.

ಚೇಕಿತಾನಂ ರಣೇ ಕ್ರುದ್ಧಂ ಭೀಷ್ಮಂ ಪ್ರತಿ ಜನೇಶ್ವರ ।
ಚಿತ್ರಸೇನಸ್ತವ ಸುತಃ ಕ್ರುದ್ಧರೂಪಮವಾರಯತ್ ॥೫೦॥

ಎಲೈ ರಾಜನೇ, ಭೀಷ್ಮರ ಮೇಲೆ ಕೋಪಗೊಂಡ ಚೇಕಿತಾನನನ್ನು ನಿನ್ನ ಪುತ್ರನಾದ ಚಿತ್ರಸೇನನು ರಣರಂಗದಲ್ಲಿ ತಡೆದನು.

ಭೀಷ್ಮಹೇತೋಃ ಪರಾಕ್ರಾಂತಶ್ಚಿತ್ರಸೇನೋ ಮಹಾರಥಃ ।
ಚೇಕಿತಾನಂ ಪರಂ ಶಕ್ತ್ಯಾ ಯೋಧಯಾಮಾಸ ಭಾರತ ॥೫೧॥

ಎಲೈ ಭಾರತನೇ, ಭೀಷ್ಮರ ಸಲುವಾಗಿ ಪರಾಕ್ರಮವನ್ನು ತೋರಿಸಿದ ಮಹಾರಥನಾದ ಚಿತ್ರಸೇನನು ತನ್ನ ಶಕ್ತಿಯನ್ನು ಮೀರಿ ಚೇಕಿತಾನನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ತಥೈವ ಚೇಕಿತಾನೋಽಪಿ ಚಿತ್ರಸೇನಮಯೋಧಯತ್ ।
ತದ್ಯುದ್ಧಮಾಸೀತ್ ಸುಮಹತ್ ತಯೋಸ್ತತ್ರ ಪರಾಕ್ರಮೇ ॥೫೨॥

ಹಾಗೆಯೇ ಚೇಕಿತಾನನೂ ಸಹ ಚಿತ್ರಸೇನನ ಜೊತೆಯಲ್ಲಿ ಯುದ್ಧವನ್ನು ಮಾಡಿದನು. ಅವರಿಬ್ಬರ ಸಮಾಗಮ ಉಂಟಾದಾಗ ದೊಡ್ಡ ಯುದ್ಧವು ನಡೆಯಿತು.

ಅರ್ಜುನೋ ವಾರ್ಯಮಾಣಸ್ತು ಬಹುಶಸ್ತನಯೇನ ತೇ ।
ವಿಮುಖೀಕೃತ್ಯ ಪುತ್ರಂ ತೇ ತವ ಸೇನಾಂ ಮಮರ್ದ ಹ ॥೫೩॥

ಅರ್ಜುನನನ್ನು ನಿನ್ನ ಪುತ್ರನು ಅನೇಕ ಬಾರಿ ತಡೆದರೂ ಅವನನ್ನು ಯುದ್ಧ ವಿಮುಖನನ್ನಾಗಿ ಮಾಡಿ ಅರ್ಜುನನು ನಿನ್ನ ಸೇನೆಯನ್ನು ಮರ್ದಿಸಿದನು.

ದುಃಶಾಸನೋಽಪಿ ಪರಯಾ ಶಕ್ತ್ಯಾ ಪಾರ್ಥಮವಾರಯತ್ ।
ಕಥಂ ಭೀಷ್ಮಂ ಪರೋ ಹನ್ಯಾದಿತಿ ನಿಶ್ಚಿತ್ಯ ಭಾರತ ॥೫೪॥

ಎಲೈ ಭಾರತನೇ, ನಿನ್ನ ಪುತ್ರನಾದ ದುಶ್ಶಾಸನನೂ ಸಹ ಭೀಷ್ಮರನ್ನು ಇನ್ನೊಬ್ಬನು ಹೇಗೆ ಕೊಲ್ಲಲು ಸಾಧ್ಯ ಎಂದು ನಿಶ್ಚಯಿಸಿ ತನ್ನ ಪರಮಶಕ್ತಿಯಿಂದ ಅರ್ಜುನನನ್ನು ತಡೆದನು.

ಸಾ ವಧ್ಯಮಾನಾ ಸಮರೇ ಪುತ್ರಸ್ಯ ತವ ವಾಹಿನೀ ।
ಲೋಡ್ಯತೇ ರಥಿಭಿಃ ಶ್ರೇಷ್ಠೈಸ್ತತ್ರ ತತ್ರೈವ ಭಾರತ ॥೫೫॥

ಎಲೈ ಭಾರತನೇ, ಪಾಂಡವರಿಂದ ವಧಿಸಲ್ಪಡುತ್ತಿದ್ದ ನಿನ್ನ ಪುತ್ರರ ಸೈನ್ಯವು ಅಲ್ಲಲ್ಲಿಯೇ ಶ್ರೇಷ್ಠರಥಿಕರಿಂದ ಮರ್ದಿಸಲ್ಪಟ್ಟಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸ್ಕ್ಯಾಂ ಭೀಷ್ಮಪರ್ವಣಿ ಅಷ್ಟಾಧಿಕಶತತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಅಷ್ಟಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನೂರ ಎಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಒಂಬತ್ತನೆಯ ಅಧ್ಯಾಯ

ದುರ್ನಿಮಿತ್ತಗಳನ್ನು ನೋಡಿ ದ್ರೋಣರಿಂದ ಅಶ್ವತ್ಥಾಮರ ಪ್ರಚೋದನೆ.

ಸಂಜಯಃ

ಅಥ ವೀರೋ ಮಹೇಷ್ವಾಸೋ ಮತ್ತವಾರಣವಿಕ್ರಮಃ ।
ಸಮಾದಾಯ ಮಹಚ್ಚಾಪಂ ಮತ್ತವಾರಣವಾರಣಮ್ ॥೧॥

ವಿಧುನ್ವಾನೋ ಧನುಶ್ರೇಷ್ಠಂ ದ್ರಾವಯಾಣೋ ಮಹಾರಥಾನ್ ।
ಘ್ನತಾಂ ಪಾಂಡವೇಯಾನಾಂ ಶಾತಯಾನೋ ಮಹಾರಥಃ ॥೨॥

ನಿಮಿತ್ತಾನಿ ನಿಮಿತ್ತಜ್ಞಃ ಸರ್ವತೋ ವೀಕ್ಷ್ಯ ವೀರ್ಯವಾನ್ ।
ಪ್ರತಪಂತಮನೀಕಾನಿ ದ್ರೋಣಃ ಪುತ್ರಮಭಾಷತ ॥೩॥

ಸಂಜಯ– ಆಗ ಮತ್ತಗಜಪರಾಕ್ರಮವುಳ್ಳವರೂ, ಮಹಾಧನುರ್ಧಾರಿಗಳೂ, ಮಹಾರಥರೂ, ವೀರಶಾಲಿಗಳೂ ಆದ ದ್ರೋಣರು ಮದಗಜಗಳನ್ನು ನಿವಾಯುವಂಥ ದೊಡ್ಡ ಧನುಸ್ಸನ್ನು ಕೈಯಲ್ಲಿ ಹಿಡಿದು, ಆ ಶ್ರೇಷ್ಠ ಧನುಸ್ಸನ್ನು ಎಳೆದು, ಮಹಾರಥರನ್ನು ಓಡಿಸುತ್ತಾ ಪಾಂಡವ ಸೇನೆಯನ್ನು ಧ್ವಂಸ ಮಾಡುತ್ತಾ ನಿಮಿತ್ತಗಳನ್ನು ತಿಳಿದ ಅವರು, ಎಲ್ಲ ಕಡೆಗಳಲ್ಲಿಯೂ ದುರ್ನಿಮಿತ್ತಗಳನ್ನು ನೋಡಿ, ಪಾಂಡವರ ಸೇನೆಯನ್ನು ದಹಿಸುತ್ತಿದ್ದ ಪುತ್ರರಾದ ಅಶ್ವತ್ಥಾಮರನ್ನು ಕುರಿತು ಮಾತನಾಡಿದರು.

ಅಯಂ ಸ ದಿವಸಸ್ತಾತ ಯತ್ರ ಪಾರ್ಥೋ ಮಹಾರಥಃ ।
ಜಘಾಂಸುಃ ಸಮರೇ ಭೀಷ್ಮಂ ಪರಂ ಯತ್ನಂ ಕರಿಷ್ಯತಿ ॥೪॥

ಎಲೈ ಶ್ವೇತವಾಹನನೇ, ಇದು ಮಹಾರಥನಾದ ಪಾರ್ಥನು ಯುದ್ಧದಲ್ಲಿ ಭೀಷ್ಮರನ್ನು ಕೊಲ್ಲಲು ಪರಮ ಪ್ರಯತ್ನವನ್ನು ಮಾಡುವ ದಿವಸ.

ಉತ್ಪತಂತಿ ಹಿ ಮೇ ಬಾಣಾ ಧನುಃ ಪ್ರಸ್ಫುರತೀವ ಮೇ ।
ಯೋಗಮಾಸ್ಥಾಯ ಗಚ್ಛಂತಿ ಕ್ರೂರೇ ಮೇ ವರ್ತತೇ ಮತಿಃ ॥೫॥

ನನ್ನ ಬಾಣಗಳು ಭತ್ತಳಿಕೆಯಿಂದ ತಾವೇ ಮೇಲೆ ಬರುತ್ತಿವೆ. ಮನಸ್ಸು ಅದುರುತ್ತಿದೆ. ದಿವ್ಯಾಸ್ತ್ರಗಳು ನನ್ನ ಬುದ್ಧಿಯೋಗವನ್ನು ಹೊಂದುತ್ತಿವೆ. ನನ್ನ ಮನಸ್ಸು ಕ್ರೂರವಾಗಿದೆ.

ದಿಕ್ಷ್ವಶಾಂತಾನಿ ಘೋರಾಣಿ ವ್ಯಾಹರಂತಿ ಮೃಗದ್ವಿಜಾಃ ।
ನೀಚೈರ್ಗೃಧ್ರಾ ನಿಲೀಯಂತೇ ಭಾರತಾನಾಂ ಚಮೂಂ ಪ್ರತಿ ॥೬॥

ಮೃಗ-ಪಕ್ಷಿಗಳು ದಿಕ್ಕುಗಳಲ್ಲಿ ಅಶಾಂತವಾದ ಘೋರಶಬ್ದಗಳನ್ನು ಮಾಡುತ್ತಿವೆ. ಹದ್ದುಗಳು ಕೌರವರ ಸೇನೆಯ ಮೇಲೆ ಬಹಳ ಕೆಳಗೆ ಬಂದು ಅಡಗಿಕೊಳ್ಳುತ್ತಿವೆ.

ಸಪ್ರಭಶ್ಚ ಇವಾದಿತ್ಯಃ ಸರ್ವತೋ ಲೋಹಿತಾ ದಿಶಃ ।
ರಸತೇ ವ್ಯಥತೇ ಭೂಮಿಃ ಕಂಪತೀವ ಚ ಸರ್ವಶಃ ॥೭॥

ಸೂರ್ಯನು ತನ್ನ ಪ್ರಭೆಯನ್ನು ಕಳೆದುಕೊಂಡಿದ್ದಾನೆ. ಎಲ್ಲ ದಿಕ್ಕುಗಳೂ ಕೆಂಪಾಗಿವೆ. ಭೂಮಿಯು ಗುಡುಗುತ್ತಿದೆ ಮತ್ತು ಎಲ್ಲ ಕಡೆಗಳಲ್ಲಿಯೂ ಕಂಪಿಸುವಂತೆ ತೋರುತ್ತಿದೆ.

ಕಂಕಾ ಗೃಧ್ರಾ ಬಲಾಕಾಶ್ಚ ವ್ಯಾಹರಂತಿ ಮುಹುರ್ಮುಹುಃ ।
ಶಿವಾಶ್ಚಾಶಿವನಿರ್ಘೋಷಾ ವೇದಯಂತ್ಯೋ ಮಹದ್ಭಯಮ್ ॥೮॥

ಕಂಕಗಳು, ಹದ್ದುಗಳು ಮತ್ತು ಬಲಾಕಗಳು ಪುನಃ ಪುನಃ ಕೂಗುತ್ತಿವೆ. ಹೆಣ್ಣು ನರಿಗಳು ದೊಡ್ಡ ಭಯವನ್ನು ಸೂಚಿಸುತ್ತಾ ಅಮಂಗಳವಾದ ಶಬ್ದಗಳನ್ನು ಮಾಡುತ್ತಿವೆ.

ಪತಾತ ಮಹತೀ ಚೋಲ್ಕಾ ಮಧ್ಯೇನಾದಿತ್ಯಮಂಡಲಾತ್ ।
ಸಕಬಂಧಃ ಸಪರಿಘೋ ಭಾನುಮಾವೃತ್ಯ ತಿಷ್ಠತಿ ॥೯॥

ದೊಡ್ಡ ಉಲ್ಕೆಯು ಆದಿತ್ಯಮಂಡಲದ ಮಧ್ಯದಲ್ಲಿ ಬಿದ್ದಿತು. ಪರಿಘರೂಪವಾದ ಆಯುಧದಿಂದ ಸಹಿತನಾದ ರಾಹುರೂಪವಾದ ಕಬಂಧವು ಸೂರ್ಯನನ್ನು ಆವರಿಸಿದೆ.

ಪರಿವೇಷಸ್ತಥಾ ಘೋರಶ್ಚಂದ್ರಭಾಸ್ಕರಯೋರಭೂತ್ ।
ವೇದಯಾನೋ ಭಯಂ ಘೋರಂ ರಾಜ್ಞಾಂ ದೇಹಾವಕರ್ತನಮ್ ॥

ರಾಜರ ದೇಹದ ಛೇದರೂಪವಾದ ಘೋರವಾದ ಭಯವನ್ನು ಸೂಚಿಸುತ್ತಾ ಸೂರ್ಯ-ಚಂದ್ರರಿಗಿಬ್ಬರಿಗೂ ಘೋರವಾದ ಪರಿವೇಷ ಉಂಟಾಯಿತು.

ದೇವತಾಯತನಸ್ಥಾಶ್ಚ ಕೌರವೇಂದ್ರಸ್ಯ ದೇವತಾಃ ।
ಕಂಪಂತೇ ಚ ಹಸಂತೇ ಚ ನೃತ್ಯಂತಿ ಚ ರುದಂತಿ ಚ ॥೧೧॥

ದೇವಾಲಯಗಳಲ್ಲಿರುವ ದುರ್ಯೋಧನನ ದೇವತಾ ಪ್ರತಿಮೆಗಳು ಕಂಪಿಸುತ್ತಿವೆ, ನಗುತ್ತಿವೆ, ನೃತ್ಯವನ್ನು ಮಾಡುತ್ತಿವೆ ಮತ್ತು ಅಳುತ್ತಿವೆ.

ಅಪಸವ್ಯಂ ಗ್ರಹಾಶ್ಚಕ್ರುರಲಕ್ಷ್ಮಾಣಂ ನಿಶಾಕರಮ್ ।
ಅವಾಕ್‌ಶಿರಾಶ್ಚ ಭಗವಾನುದತಿಷ್ಠತ ಚಂದ್ರಮಾಃ ॥೧೨॥

ಗ್ರಹಗಳು ಅಪಸವ್ಯದಲ್ಲಿ ತಿರುಗುತ್ತಿವೆ. ಚಂದ್ರನು ಶಶಚಿಹ್ನೆಯಿಂದ ರಹಿತನಾಗಿ ಉದಯಿಸುತ್ತಿದ್ದಾನೆ. ಪೂಜ್ಯನಾದ ಚಂದ್ರನು ತಲೆಕೆಳಗಾಗಿ ಉದಯಿಸಿದ್ದಾನೆ.

ವಪೂಂಷಿ ಚ ನರೇಂದ್ರಾಣಾಂ ವಿಗತಾನೀವ ಲಕ್ಷಯೇ ।
ಧಾರ್ತರಾಷ್ಟ್ರಸ್ಯ ಸೈನ್ಯೇಷು ನ ಚ ಭ್ರಾಜಂತಿ ದಂಪತಾಃ ॥೧೩॥

ನರೇಂದ್ರರ ದೇಹಗಳು ಕಾಂತಿಹೀನವಾಗಿರುವುದನ್ನು ನೋಡುತ್ತಿದ್ದೇನೆ. ದುರ್ಯೋಧನನ ಸೈನ್ಯಗಳಲ್ಲಿ ಶಸ್ತ್ರಕವಚ ಸನ್ನದ್ಧರಾದ ಯೋಧರು ಪ್ರಕಾಶಿಸುತ್ತಿಲ್ಲ.

ಸೇನಯೋರುಭಯೋಶ್ಚೈವ ಸಮಂತಾತ್ ಶ್ರೂಯತೇ ಮಹಾನ್ ।
ಪಾಂಚಜನ್ಯಸ್ಯ ನಿರ್ಘೋಷೋ ಗಾಂಡೀವಸ್ಯ ಚ ನಿಸ್ವನಃ ॥೧೪॥

ಪಾಂಚಜನ್ಯದ ನಿರ್ಘೋಷವೂ, ಗಾಂಡೀವದ ಮಹಾಸ್ವನವೂ ಎರಡು ಸೈನ್ಯಗಳಲ್ಲಿಯೂ ಎಲ್ಲ ಕಡೆಗಳಿಂದಲೂ ಕೇಳಿಬರುತ್ತಿದೆ.

ಧ್ರುವಮಾಸ್ಥಾಯ ಬೀಭತ್ಸುರುತ್ತಮಾಸ್ತ್ರಾಣಿ ಸಂಯುಗೇ ।
ಅಪಾಸ್ಯಾನ್ಯಾನ್ ರಣೇ ಯೋಧಾನಭ್ಯಸ್ಯತಿ ಪಿತಾಮಹಮ್ ॥೧೫॥

ಎಲೈ ಪ್ರತಿವಾತ್ಸನೇ, ಇದು ಮಹಾರಥನಾದ ಪಾರ್ಥನು ಯುದ್ಧದಲ್ಲಿ ಭೀಷ್ಮರನ್ನು ಕೊಲ್ಲಲು ಪರಮ ಪ್ರಯತ್ನವನ್ನು ಮಾಡುವ ದಿವಸ.

ಉತ್ಪತಂತಿ ಹಿ ಮೇ ಬಾಣಾ ಧನುಃ ಪ್ರಸ್ಫುರತೀವ ಮೇ ।
ಯೋಗಮಸ್ಯಾಗ್ನೇ ಗುಹ್ಯೇ ಕ್ರೂರೇ ಮೇ ವರ್ತತೇ ಮತಿಃ ॥೫॥

ನನ್ನ ಬಾಣಗಳು ಭುಜಕೀರ್ತಿಯಿಂದ ತಾವೇ ಮೇಲೆ ಬರುತ್ತಿವೆ. ಮನಸ್ಸು ಅದುರುತ್ತಿದೆ. ದಿವ್ಯಾಸ್ತ್ರಗಳು ನನ್ನ ಬುದ್ಧಿಯೋಗವನ್ನು ಹೊಂದುತ್ತಿವೆ. ನನ್ನ ಮನಸ್ಸು ಕ್ರೂರವಾಗಿದೆ.

ದಿಕ್ಷ್ವಶಾಂತಾನಿ ಘೋರಾಣಿ ವ್ಯಾಹರಂತಿ ಮೃಗದ್ವಿಜಾಃ ।
ಸೇಚ್ಛಗ್ರ್ಗಧ್ರಾ ನಿಲೀಯಂತೇ ಭಾರತಾನಾಂ ಚಮೂಂ ಪ್ರತಿ ॥೬॥

ಮೃಗ-ಪಕ್ಷಿಗಳು ದಿಕ್ಕುಗಳಲ್ಲಿ ಅಶಾಂತವಾದ ಘೋರಶಬ್ದಗಳನ್ನು ಮಾಡುತ್ತಿವೆ. ಹದ್ದುಗಳು ಕೌರವರ ಸೇನೆಯ ಮೇಲೆ ಬಹಳ ಕೆಳಗೆ ಬಂದು ಅಡಗಿಕೊಳ್ಳುತ್ತಿವೆ.

ನಷ್ಟಪ್ರಭ ಇವಾದಿತ್ಯಃ ಸರ್ವತೋ ರೋಹಿತಾ ದಿಶಃ ।
ರಸತೇ ವ್ಯಥತೇ ಭೂಮಿಃ ಕಂಪತೀವ ಚ ಸರ್ವಶಃ ॥೭॥

ಸೂರ್ಯನು ತನ್ನ ಪ್ರಭೆಯನ್ನು ಕಳೆದುಕೊಂಡಿದ್ದಾನೆ. ಎಲ್ಲ ದಿಕ್ಕುಗಳೂ ಕೆಂಪಾಗಿವೆ. ಭೂಮಿಯು ಗುಡುಗುಡುತ್ತಿದೆ ಮತ್ತು ಎಲ್ಲ ಕಡೆಗಳಲ್ಲಿಯೂ ಕಂಪಿಸುವಂತೆ ತೋರುತ್ತಿದೆ.

ಕಂಕಾ ಗೃಧ್ರಾ ಬಲಾಶಾಶ್ಚ ವ್ಯಾಹರಂತಿ ಮುಹುರ್ಮುಹುಃ ।
ಶಿವಾಶ್ಚಾಶಿವನಿರ್ಘೋಷಾ ವೇದಯಂತ್ಯೋ ಮಹದ್ಭಯಮ್ ॥೮॥

ಕಂಕಗಳು, ಹದ್ದುಗಳು ಮತ್ತು ಬಲಾಕಗಳು ಪುನಃ ಪುನಃ ಕೂಗುತ್ತಿವೆ. ಹೆಣ್ಣು ನರಿಗಳು ದೊಡ್ಡ ಭಯವನ್ನು ಸೂಚಿಸುತ್ತಾ ಅಮಂಗಳವಾದ ಶಬ್ದಗಳನ್ನು ಮಾಡುತ್ತಿವೆ.

ಪಪಾತ ಮಹತೀ ಚೋಲ್ಕಾ ಮಧ್ಯೇನಾದಿತ್ಯಮಂಡಲಾತ್ ।
ಸಬಂಧಃ ಸಪರಿಘೋ ಭಾನುಮಾವೃತ್ಯ ತಿಷ್ಠತಿ ॥೯॥

ದೊಡ್ಡ ಉಲ್ಕೆಯು ಆದಿತ್ಯಮಂಡಲದ ಮಧ್ಯದಲ್ಲಿ ಬಿದ್ದಿತು. ಪರಿಘರೂಪವಾದ ಆಯುಧದಿಂದ ಸಹಿತನಾದ ರಾಹುರೂಪವಾದ ಕಬಂಧವು ಸೂರ್ಯನನ್ನು ಆವರಿಸಿದೆ.

ಪರಿವೇಷಸ್ತಥಾ ಘೋರಶ್ಚಂದ್ರಭಾಸ್ಕರಯೋರಭೂತ್ ।
ವೇದಯಾನೋ ಭಯಂ ಘೋರಂ ರಾಜ್ಞಾಂ ದೇಹಾವಕರ್ತನಮ್ ॥

ರಾಜರ ದೇಹದ ಛೇದರೂಪವಾದ ಘೋರವಾದ ಭಯವನ್ನು ಸೂಚಿಸುತ್ತಾ ಸೂರ್ಯ-ಚಂದ್ರರಿಗಿಬ್ಬರಿಗೂ ಘೋರವಾದ ಪರಿವೇಷ ಉಂಟಾಯಿತು.

ದೇವತಾಯತನಸ್ಥಾಶ್ಚ ಕೌರವೇಂದ್ರಸ್ಯ ದೇವತಾಃ ।
ಕಂಪಂತೇ ಚ ಹಸಂತೇ ಚ ನೃತ್ಯಂತಿ ಚ ರುದಂತಿ ಚ ॥೧೧॥

ದೇವಾಲಯಗಳಲ್ಲಿರುವ ದುರ್ಯೋಧನನ ದೇವತಾ ಪ್ರತಿಮೆಗಳು ಕಂಪಿಸುತ್ತಿವೆ, ನಗುತ್ತಿವೆ, ನೃತ್ಯವನ್ನು ಮಾಡುತ್ತಿವೆ ಮತ್ತು ಅಳುತ್ತಿವೆ.

ಅಪಸವ್ಯಂ ಗ್ರಹಾಶ್ಚಕ್ರುರಲಕ್ಷ್ಮಾಣಂ ನಿಶಾಕರಮ್ ।
ಅವಾಕ್‌ಶಿರಾಶ್ಚ ಭಗವಾನುದತಿಷ್ಠತ ಚಂದ್ರಮಾಃ ॥೧೨॥

ಗ್ರಹಗಳು ಅಪಸವ್ಯದಲ್ಲಿ ತಿರುಗುತ್ತಿವೆ. ಚಂದ್ರನು ಶಶಚಿಹ್ನೆಯಿಂದ ರಹಿತನಾಗಿ ಉದಯಿಸುತ್ತಿದ್ದಾನೆ. ಪೂಜ್ಯನಾದ ಚಂದ್ರನು ತಲೆಕೆಳಗಾಗಿ ಉದಯಿಸಿದ್ದಾನೆ.

ವಪೂಂಷಿ ಚ ನರೇಂದ್ರಾಣಾಂ ವಿಗತಾನೀವ ಲಕ್ಷಯೇ ।
ಧಾರ್ತರಾಷ್ಟ್ರಸ್ಯ ಸೈನ್ಯೇಷು ನ ಚ ಭ್ರಾಜಂತಿ ದಂಸಿತಾಃ ॥೧೩॥

ನರೇಂದ್ರರ ದೇಹಗಳು ಕಾಂತಿಹೀನವಾಗಿರುವುದನ್ನು ನೋಡುತ್ತಿದ್ದೇನೆ. ದುರ್ಯೋಧನನ ಸೈನ್ಯಗಳಲ್ಲಿ ಶಸ್ತ್ರಕವಚ ಸನ್ನದ್ಧರಾದ ಯೋಧರು ಪ್ರಕಾಶಿಸುತ್ತಿಲ್ಲ.

ಸೇನಯೋರುಭಯೋಶ್ಚೈವ ಸಮಂತಾತ್ ಶ್ರೂಯತೇ ಮಹಾನ್ ।
ಪಾಂಚಜನ್ಯಸ್ಯ ನಿರ್ಘೋಷೋ ಗಾಂಡೀವಸ್ಯ ಚ ನಿಸ್ವನಃ ॥೧೪॥

ಪಾಂಚಜನ್ಯದ ನಿರ್ಘೋಷವೂ, ಗಾಂಡೀವದ ಮಹಾಸ್ವನವೂ ಎರಡು ಸೈನ್ಯಗಳಲ್ಲಿಯೂ ಎಲ್ಲಕಡೆಗಳಿಂದಲೂ ಕೇಳಿಬರುತ್ತಿದೆ.

ಧ್ರುವಮಾಸ್ಥಾಯ ಬೀಭತ್ಸುರುತ್ತಮಾಸ್ತ್ರಾಣಿ ಸಂಯುಗೇ ।
ಅಪಾಸ್ಯಾನ್ಯಾನ್ ರಣೇ ಯೋಧಾನಭ್ಯಸ್ಯತಿ ಪಿತಾಮಹಮ್ ॥೧೫॥

ಎಲೈ ಪ್ರೀತಿಪಾತ್ರನೇ, ಇದು ಮಹಾರಥನಾದ ಪಾರ್ಥನು ಯುದ್ಧದಲ್ಲಿ ಭೀಷ್ಮರನ್ನು ಕೊಲ್ಲಲು ಪರಮ ಪ್ರಯತ್ನವನ್ನು ಮಾಡುವ ದಿವಸ.

ಉತ್ಪತಂತಿ ಹಿ ಮೇ ಬಾಣಾ ಧನುಃ ಪ್ರಸ್ಫುರತೀವ ಮೇ ।
ಯೋಗಮಸ್ಯಾಗೆ ಗಚ್ಛಂತಿ ಕ್ರೂರೇ ಮೇ ವರ್ತತೇ ಮತಿಃ ॥೫॥

ನನ್ನ ಬಾಣಗಳು ಭತ್ತಳಿಕೆಯಿಂದ ತಾವೇ ಮೇಲೆ ಬರುತ್ತಿವೆ. ಮನಸ್ಸು ಅದುರುತ್ತಿದೆ. ದಿವ್ಯಾಸ್ತ್ರಗಳು ನನ್ನ ಬುದ್ಧಿಯೋಗವನ್ನು ಹೊಂದುತ್ತಿವೆ. ನನ್ನ ಮನಸ್ಸು ಕ್ರೂರವಾಗಿದೆ.

ದಿಕ್ಷ್ವಶಾಂತಾನಿ ಘೋರಾಣಿ ವ್ಯಾಹರಂತಿ ಮೃಗದ್ವಿಜಾಃ ।
ನೀಚೈರ್ಗೃಧ್ರಾ ನಿಲೀಯಂತೇ ಭಾರತಾನಾಂ ಚಮೂಂ ಪ್ರತಿ ॥೬॥

ಮೃಗ-ಪಕ್ಷಿಗಳು ದಿಕ್ಕುಗಳಲ್ಲಿ ಅಶಾಂತವಾದ ಘೋರಶಬ್ದಗಳನ್ನು ಮಾಡುತ್ತಿವೆ. ಹದ್ದುಗಳು ಕೌರವರ ಸೇನೆಯ ಮೇಲೆ ಬಹಳ ಕೆಳಗೆ ಬಂದು ಅಡಗಿಕೊಳ್ಳುತ್ತಿವೆ.

ನಷ್ಟಪ್ರಭ ಇವಾದಿತ್ಯಃ ಸರ್ವತೋ ಲೋಹಿತಾ ದಿಶಃ ।
ರಸತೇ ವ್ಯಥತೇ ಭೂಮಿಃ ಕಂಪತೀವ ಚ ಸರ್ವಶಃ ॥೭॥

ಸೂರ್ಯನು ತನ್ನ ಪ್ರಭೆಯನ್ನು ಕಳೆದುಕೊಂಡಿದ್ದಾನೆ. ಎಲ್ಲ ದಿಕ್ಕುಗಳೂ ಕೆಂಪಾಗಿವೆ. ಭೂಮಿಯು ಗುಡುಗುತ್ತಿದೆ ಮತ್ತು ಎಲ್ಲ ಕಡೆಗಳಲ್ಲಿಯೂ ಕಂಪಿಸುವಂತೆ ತೋರುತ್ತಿದೆ.

ಕಂಕಾ ಗೃಧ್ರಾ ಬಲಾಕಾಶ್ಚ ವ್ಯಾಹರಂತಿ ಮುಹುರ್ಮುಹುಃ ।
ಶಿವಾಶ್ಚಾಶಿವನಿರ್ಘೋಷಾ ವೇದಯಂತ್ಯೋ ಮಹದ್ಭಯಮ್ ॥೮॥

ಕಂಕಗಳು, ಹದ್ದುಗಳು ಮತ್ತು ಬಲಾಕಗಳು ಪುನಃ ಪುನಃ ಕೂಗುತ್ತಿವೆ. ಹೆಣ್ಣು ನರಿಗಳು ದೊಡ್ಡ ಭಯವನ್ನು ಸೂಚಿಸುತ್ತಾ ಅಮಂಗಳವಾದ ಶಬ್ದಗಳನ್ನು ಮಾಡುತ್ತಿವೆ.

ಪಪಾತ ಮಹತೀ ಚೋಲ್ಕಾ ಮಧ್ಯೇನಾದಿತ್ಯಮಂಡಲಾತ್ ।
ಸಕಬಂಧಃ ಸಪರಿಘೋ ಭಾನುಮಾವೃತ್ಯ ತಿಷ್ಠತಿ ॥೯॥

ದೊಡ್ಡ ಉಲ್ಕೆಯು ಆದಿತ್ಯಮಂಡಲದ ಮಧ್ಯದಲ್ಲಿ ಬಿದ್ದಿತು. ಪರಿಘರೂಪವಾದ ಆಯುಧದಿಂದ ಸಹಿತನಾದ ರಾಹುರೂಪವಾದ ಕಬಂಧವು ಸೂರ್ಯನನ್ನು ಆವರಿಸಿದೆ.

ಪರಿವೇಷಸ್ತಥಾ ಘೋರಶ್ಚಂದ್ರಭಾಸ್ಕರಯೋರಭೂತ್ ।
ವೇದಯಾನೋ ಭಯಂ ಘೋರಂ ರಾಷ್ಟ್ರಾಂ ದೇಹಾವಕರ್ತನಮ್ ॥

ರಾಜರ ದೇಹದ ಛೇದರೂಪವಾದ ಘೋರವಾದ ಭಯವನ್ನು ಸೂಚಿಸುತ್ತಾ ಸೂರ್ಯ-ಚಂದ್ರರಿಗಿಬ್ಬರಿಗೂ ಘೋರವಾದ ಪರಿವೇಷ ಉಂಟಾಯಿತು.

ದೇವತಾಯತನಸ್ಥಾಶ್ಚ ಕೌರವೇಂದ್ರಸ್ಯ ದೇವತಾಃ ।
ಕಂಪಂತೇ ಚ ಹಸಂತೇ ಚ ನೃತ್ಯಂತಿ ಚ ರುದಂತಿ ಚ ॥೧೧॥

ದೇವಾಲಯಗಳಲ್ಲಿರುವ ದುರ್ಯೋಧನನ ದೇವತಾ ಪ್ರತಿಮೆಗಳು ಕಂಪಿಸುತ್ತಿವೆ, ನಗುತ್ತಿವೆ, ನೃತ್ಯವನ್ನು ಮಾಡುತ್ತಿವೆ ಮತ್ತು ಅಳುತ್ತಿವೆ.

ಅಪಸವ್ಯಂ ಗ್ರಹಾಶ್ಚಕ್ರುರಲಕ್ಷ್ಯಾಣಂ ನಿಶಾಕರಮ್ ।
ಅವಾಕ್‌ಶಿರಾಶ್ಚ ಭಗವಾನುದತಿಷ್ಠತ ಚಂದ್ರಮಾಃ ॥೧೨॥

ಗ್ರಹಗಳು ಅಪಸವ್ಯದಲ್ಲಿತಿರುಗುತ್ತಿವೆ. ಚಂದ್ರನು ಶಶಚಿಹ್ನೆಯಿಂದ ರಹಿತನಾಗಿ ಉದಯಿಸುತ್ತಿದ್ದಾನೆ. ಪೂಜ್ಯನಾದ ಚಂದ್ರನು ತಲೆಕೆಳಗಾಗಿ ಉದಯಿಸಿದ್ದಾನೆ.

ವಪೂಂಷಿ ಚ ನರೇಂದ್ರಾಣಾಂ ವಿಗತಾನೀವ ಲಕ್ಷಯೇ ।
ಧಾರ್ತರಾಷ್ಟ್ರಸ್ಯ ಸೈನ್ಯೇಷು ನ ಚ ಭ್ರಾಜಂತಿ ದಂಶಿತಾಃ ॥೧೩॥

ನರೇಂದ್ರರ ದೇಹಗಳು ಕಾಂತಿಹೀನವಾಗಿರುವುದನ್ನು ನೋಡುತ್ತಿದ್ದೇನೆ. ದುರ್ಯೋಧನನ ಸೈನ್ಯಗಳಲ್ಲಿ ಶಸ್ತ್ರಕವಚ ಸನ್ನದ್ಧರಾದ ಯೋಧರು ಪ್ರಕಾಶಿಸುತ್ತಿಲ್ಲ.

ಸೇನಯೋರುಭಯೋಶ್ಚೈವ ಸಮಂತಾತ್ ಶ್ರೂಯತೇ ಮಹಾನ್ ।
ಪಾಂಚಜನ್ಯಸ್ಯ ನಿರ್ಘೋಷೋ ಗಾಂಡೀವಸ್ಯ ಚ ನಿಸ್ವನಃ ॥೧೪॥

ಪಾಂಚಜನ್ಯದ ನಿರ್ಘೋಷವೂ, ಗಾಂಡೀವದ ಮಹಾಸ್ವನವೂ ಎರಡು ಸೈನ್ಯಗಳಲ್ಲಿಯೂ ಎಲ್ಲ ಕಡೆಗಳಿಂದಲೂ ಕೇಳಿಬರುತ್ತಿದೆ.

ಧ್ರುವಮಾಸ್ಥಾಯ ಬೀಭತ್ಸುರುತ್ತಮಾಸ್ತ್ರೋ ಸಂಯುಗೇ ।
ಅಪಾಸ್ಯಾನ್ಸಾನ್ ರಣೇ ಯೋಧಾನ್ಹನ್ಯಾತ ಪಿತಾಮಹಮ್ ॥೧೫॥

ಈ ದಿನ ನಿಶ್ಚಿತವಾಗಿ ಅರ್ಜುನನು ಯುದ್ಧದಲ್ಲಿ ಉತ್ತಮಾಸ್ತ್ರಗಳನ್ನು ಆಶ್ರಯಿಸಿ ದೇರೆ ಯೋಧರನ್ನು ದೂರ ಸರಿಸಿ, ಪಿತಾಮಹರ ಮೇಲೆ ಬಾಣ ಪ್ರಯೋಗವನ್ನು ಮಾಡುತ್ತಾನೆ.

ಹೃಷ್ಯಂತಿ ರೋಮಕೂಪಾನಿ ಸೀದತೀವ ಚ ಮೇ ಮನಃ ।
ಚಿಂತಯಿತ್ವಾ ಮಹಾಬಾಹೋ ಭೀಷ್ಮಾರ್ಜುನಸಮಾಗಮಮ್ ॥೧೬॥

ಎಲೈ ಮಹಾಬಾಹುವೇ, ಭೀಷ್ಮಾರ್ಜುನರ ಸಮಾಗಮವನ್ನು ಯೋಚಿಸಿ ನನಗೆ ರೋಮಾಂಚವಾಗುತ್ತಿದೆ. ನನ್ನ ಮನಸ್ಸು ಕುಸಿದು ಹೋಗುವಂತೆ ತೋರುತ್ತಿದೆ.

ತಂ ಚೈವ ನಿಕೃತಿಪ್ರಜ್ಞಂ ಪಾಂಚಾಲ್ಯಂ ಪಾಪಚೇತಸಮ್ ।
ಪುರಸ್ಕೃತ್ಯ ರಣೇ ಪಾರ್ಥೋ ಭೀಷ್ಮಸ್ಯಾಯೋಧನಂ ಗತಃ ॥೧೭॥

ಅರ್ಜುನನಾದರೋ ಆ ಮೋಸದ ಬುದ್ಧಿಯುಳ್ಳವನೂ, ಪಾಪಮನಸ್ಸುಳ್ಳವನೂ ಆದ, ಪಾಂಚಾಲದೇಶದ ಶಿಖಂಡಿಯನ್ನು ಯುದ್ಧದಲ್ಲಿ ಮುಂದೆ ಮಾಡಿಕೊಂಡು ಭೀಷ್ಮರ ಜೊತೆಯಲ್ಲಿ ಯುದ್ಧವನ್ನು ಮಾಡಲು ರಣರಂಗಕ್ಕೆ ಹೋಗಿದ್ದಾನೆ.

ಅಬ್ರವೀಚ್ಚ ಪುರಾ ಭೀಷ್ಮೋ ನಾಹಂ ಹನ್ಯಾಂ ಶಿಖಂಡಿನಮ್ ।
ಸ್ತ್ರೀ ಹ್ಯೇಷಾ ವಿಹಿತಾ ಧಾತ್ರಾ ದೈವಾಚ್ಚ ಸ ಪುನಃ ಪುಮಾನ್ ॥೧೮॥

ಭೀಷ್ಮರು ಹಿಂದೆಯೇ ನಾನು ಶಿಖಂಡಿಯ ಜೊತೆಯಲ್ಲಿ ಯುದ್ಧವನ್ನು ಮಾಡುವುದಿಲ್ಲ. ಬ್ರಹ್ಮನಿಂದ ಸ್ತ್ರೀಯಾಗಿ ಸೃಷ್ಟಿಸಲ್ಪಟ್ಟ ಅವನು ದೈವಬಲದಿಂದ ಪುನಃ ಪುರುಷನಾಗಿದ್ದಾನೆ ಎಂದು ಹೇಳಿದ್ದಾರೆ.

ಅಮಂಗಲ್ಯಧ್ವಜಶ್ಚೈವ ಯಾಜ್ಞಸೇನಿರ್ಮಹಾರಥಃ ।
ನ ಚಾಮಂಗಲಕೇತೋಃ ಸ ಪ್ರಹರೇದಾಪಗಾಸುತಃ ॥೧೯॥

ಮಹಾರಥನಾದ ಶಿಖಂಡಿಯು ಅಮಂಗಳ ಚಿಹ್ನೆಯುಳ್ಳವನು. ಗಂಗಾಸುತರಾದ ಭೀಷ್ಮರು ಅಮಂಗಳ ಚಿಹ್ನೆಯನ್ನು ಧರಿಸಿದ ಅವನ ಮೇಲೆ ಪ್ರಹಾರ ಮಾಡುವುದಿಲ್ಲ.

ಏತದ್ ವಿಚಿಂತಯಾನಸ್ಯ ಪ್ರಜ್ಞಾ ಸೀದತಿ ಮೇ ಭೃಶಮ್ ।
ಅದ್ಯೈವ ತು ರಣೇ ಪಾರ್ಥಃ ಕುರುವೃದ್ಧಮುಪಾದ್ರವತ್ ॥೨೦॥

ಇದನ್ನು ಚಿಂತನೆ ಮಾಡುವ ನನಗೆ ನನ್ನ ಪ್ರಜ್ಞೆಯು ಬಹಳವಾಗಿ ಕುಸಿಯುತ್ತಿದೆ. ಈ ದಿನವೇ ಅರ್ಜುನನು ಯುದ್ಧದಲ್ಲಿ ಕುರುವೃದ್ಧರಾದ ಭೀಷ್ಮರ ಮೇಲೆ ಎರಗಲಿದ್ದಾನೆ.

ಯುಧಿಷ್ಠಿರಸ್ಯ ಚ ಕ್ರೋಧೋ ಭೀಷ್ಮಾರ್ಜುನಸಮಾಗಮಃ ।
ಮಮ ಚಾಸ್ತ್ರಾಭಿಸಂರಂಭಃ ಪ್ರಜಾನಾಮಶುಭಂ ಧ್ರುವಮ್ ॥೨೧॥

ಯುಧಿಷ್ಠಿರನ ಕೋಪ, ಭೀಷ್ಮಾರ್ಜುನರ ಸಮಾಗಮ, ನನ್ನ ಅಸ್ತ್ರಗಳ ಸಂಚಲನೆ ಇವೆಲ್ಲವೂ ನಿಶ್ಚಿತವಾಗಿ ಪ್ರಜೆಗಳಿಗೆ ಅಶುಭವನ್ನುಂಟು ಮಾಡುತ್ತವೆ.

ಮನಸ್ವೀ ಬಲವಾನ್ ಶೂರಃ ಕೃತಾಸ್ತ್ರೋ ದೃಢವಿಕ್ರಮಃ ।
ದೂರಪಾತೀ ದೃಢೇಷುಶ್ಚ ನಿಮಿತ್ತಜ್ಞಶ್ಚ ಪಾಂಡವಃ ॥೨೨॥

ಪಾಂಡುಪುತ್ರನಾದ ಅರ್ಜುನನು ಧೈರ್ಯಶಾಲಿ, ಬಲಿಷ್ಠ, ಶೂರ, ಅಸ್ತ್ರಜ್ಞ, ದೃಢಪರಾಕ್ರಮಿ, ದೂರದಿಂದಲೂ ಹೊಡೆಯುವವನು, ದೃಢವಾದ ಬಾಣವುಳ್ಳವನು ಮತ್ತು ಶಕುನಗಳನ್ನು ತಿಳಿದವನು.

ಅಜೇಯಃ ಸಮರೇ ಚೈವ ದೇವೈರಪಿ ಸವಾಸವೈಃ ।
ಬಲವಾನ್ ಬುದ್ಧಿಮಾಂಶ್ಚೈವ ಜಿತಕ್ಲೇಶೋ ಯುಧಾಂವರಃ ॥೨೩॥

ಇಂದ್ರನಿಂದ ಕೂಡಿದ ದೇವತೆಗಳಿಂದಲೂ ಅವನು ಅಜೇಯನಾದವನು. ಅವನು ಬಲಿಷ್ಠನಾದವನು ಮೇಧಾವಿ, ದಣಿವಿಲ್ಲದವನು ಮತ್ತು ಯೋಧರಲ್ಲಿ ಶ್ರೇಷ್ಠನಾದವನು.

ಏಜಯೀ ಚ ರಣೇ ನಿತ್ಯಂ ಭೈರವಾಸ್ತ್ರಶ್ಚ ಪಾಂಡವಃ ।
ತಸ್ಯ ಮಾರ್ಗಂ ಪರಿಹರನ್ ದ್ರುತಂ ಗಚ್ಛ ಯತವ್ರತಮ್ ॥೨೪॥

ಪಾಂಡುಪುತ್ರನಾದ ಅವನು ಯುದ್ಧದಲ್ಲಿ ಯಾವಾಗಲೂ ಗೆಲ್ಲುವವನು ಮತ್ತು ಭಯಂಕರವಾದ ಅಸ್ತ್ರವನ್ನು ಹೊಂದಿರುವವನು. ಅವನ ಮಾರ್ಗವನ್ನು ತಡೆಯುತ್ತಾ ಶೀಘ್ರವಾಗಿ ನೀನು ಭೀಷ್ಮರ ಬಳಿಗೆ ಹೋಗು.

ಪಶ್ಯ ಚೈತನ್ಮಹಾಬಾಹೋ ವೈಶಸಂ ಸಮುಪಸ್ಥಿತಮ್ ।
ಹೇಮಚಿತ್ರಾಣಿ ಶೂರಾಣಾಂ ಮಹಾಂತಿ ಚ ಶುಭಾನಿ ಚ ॥೨೫॥

ಕವಚಾನ್ಯವದೀರ್ಯಂತೇ ಶರೈಃ ಸನ್ನತಪರ್ವಭಿಃ ।
ಧ್ವಜಾಶ್ಚ ಧ್ವಜಿನಾಂ ತೋಮರಾಣಿ ಧನೂಂಷಿ ಚ ॥೨೬॥

ಪ್ರಾಸಾಶ್ಚ ವಿಮಲಾಸ್ತೀಕ್ಷ್ಣಾಃ ಶಕ್ತಯಶ್ಚ ಕನಕೋಜ್ಜ್ವಲಾಃ ।
ವೈಜಯಂತ್ಯಶ್ಚ ನಾಗಾನಾಂ ಸಂಕ್ರುದ್ಧೇನ ಕಿರೀಟಿನಾ ॥೨೭॥

ಎಲೈ ಮಹಾಬಾಹುವೇ, ಘೋರವಾದ ಹಿಂಸೆಯು ಪ್ರಾಪ್ತವಾಗಿರುವುದನ್ನು ನೋಡು. ಸುವರ್ಣಾಲಂಕೃತವಾದ ಶೂರರ ದೊಡ್ಡ ಶುಭಕವಚಗಳು ಬಾಗಿದ ತುದಿಯುಳ್ಳ ಬಾಣಗಳಿಂದ ಸೀಳಲ್ಪಡುತ್ತಿವೆ. ಧ್ವಜದ ಮೇಲ್ಭಾಗಗಳು, ತೋಮರಗಳು ಮತ್ತು ಧನುಸ್ಸುಗಳು ಕತ್ತರಿಸಲ್ಪಡುತ್ತಿವೆ. ಬಹಳ ಕೋಪಗೊಂಡ ಅರ್ಜುನನು ಶುದ್ಧವಾದ ತೀಕ್ಷ್ಣವಾದ ಪ್ರಾಸಗಳನ್ನೂ, ಕನಕಭೂಷಿತವಾದ ಶಕ್ತಿಗಳನ್ನೂ, ಗಜಗಳ ವೈಜಯಂತಿ ಮಾಲೆಗಳನ್ನೂ ಕತ್ತರಿಸುತ್ತಿದ್ದಾನೆ.

ನಾಯಂ ಸಂರಕ್ಷಿತುಂ ಕಾಲಃ ಪ್ರಾಣಾನ್ ಪುತ್ರೋಪಜೀವಿಭಿಃ ।
ಯಾಹಿ ಸ್ವರ್ಗಂ ಪುರಸ್ಕೃತ್ಯ ಯಶಸೇ ವಿಜಯಾಯ ಚ ॥೨೮॥

ಎಲೈ ಪುತ್ರನೇ, ಇನ್ನೊಬ್ಬರನ್ನು ಉಪಜೀವಿಸುವವರು ಇದು ತಮ್ಮ ಪ್ರಾಣಗಳನ್ನು ಉಳಿಸಿಕೊಳ್ಳುವ ಕಾಲವಲ್ಲ. ಸ್ವರ್ಗವನ್ನು ಮುಂದೆ ಮಾಡಿಕೊಂಡು ಕೀರ್ತಿಗಾಗಿ ಮತ್ತು ವಿಜಯಕ್ಕಾಗಿ ಭೀಷ್ಮರ ಬಳಿಗೆ ಹೋಗು.

ಹಯನಾಗರಥಾವರ್ತಾಂ ಮಹಾಘೋರಾಂ ಸುದುಸ್ತರಾಮ್ ।
ರಥೇನ ಸಂಗ್ರಾಮನದೀಂ ತರತ್ಯೇಷ ಕಪಿಧ್ವಜಃ ॥೨೯॥

ಗಜಾಶ್ವರಥಗಳೆಂಬ ಸುಳಿಗಳಿಂದ ಕೂಡಿದ, ಮಹಾಘೋರವಾದ, ದಾಟಲು ಅಸಾಧ್ಯವಾದ ಸಂಗ್ರಾಮದ ನದಿಯನ್ನು ಕಪಿಧ್ವಜನಾದ ಈ ಅರ್ಜುನನು ರಥದಿಂದ ದಾಟುತ್ತಿದ್ದಾನೆ.

ಬ್ರಹ್ಮಣ್ಯತಾ ದಮೋ ದಾನಂ ತಪಶ್ಚ ಚರಿತಂ ಮಹತ್ ।
ಇಚ್ಛೈವ ದೃಶ್ಯತೇ ರಾಜ್ಞೋ ಭ್ರಾತಾ ಯಸ್ಯ ಧನಂಜಯಃ ॥೩೦॥

ಯಾವನಿಗೆ ಅರ್ಜುನನು ತಮ್ಮನಾಗಿದ್ದಾನೆಯೋ ಅಂತಹ ರಾಜನ ಬ್ರಾಹ್ಮಣ ವಾತ್ಸಲ್ಯ, ಇಂದ್ರಿಯನಿಗ್ರಹ, ದಾನ, ತಪಸ್ಸು, ಸಚ್ಚರಿತ ಇವು ಇಲ್ಲಿ ಕಂಡು ಬರುತ್ತಿವೆ.

ಭೀಮಸೇನಶ್ಚ ಬಲವಾನ್ ಮಾದ್ರೀಪುತ್ರೌ ಚ ಪಾಂಡವೌ ।
ವಾಸುದೇವಶ್ಚ ವಾರ್ಷ್ಣೇಯೋ ಯಸ್ಯ ನಾಥೋ ವ್ಯವಸ್ಥಿತಃ ॥೩೧॥

ಬಲಿಷ್ಠನಾದ ಭೀಮಸೇನನೂ, ಪಾಂಡುಪುತ್ರರಾದ ನಕುಲ-ಸಹದೇವರೂ (ಅವನ ಜೊತೆಗೆ ಇದ್ದಾರೆ). ವೃಷ್ಣಿಕುಲದಲ್ಲಿ ಅವತರಿಸಿದ ವಾಸುದೇವನು ಅವನಿಗೆ ಸ್ವಾಮಿಯಾಗಿ ನಿಂತಿದ್ದಾನೆ.

ತಸ್ಯೈಷ ಮನ್ಯುಪ್ರಭವೋ ಧಾರ್ತರಾಷ್ಟ್ರಸ್ಯ ದುರ್ಮತೇಃ ।
ತಪೋದಗ್ಧಶರೀರಸ್ಯ ಕೋಪೋ ದಹತಿ ಭಾರತಾನ್ ॥೩೨॥

ಅಂತಹ ತಪಸ್ಸಿನಿಂದ ಕೃಶವಾದ ಶರೀರವುಳ್ಳ ಧರ್ಮರಾಜನ ಕ್ಲೇಶದಿಂದ ಉಂಟಾದ ಕೋಪವು ದುರ್ಮತಿಯಾದ ದುರ್ಯೋಧನನಿಗೆ ಸೇರಿದ ಭಾರತರ ಸೇನೆಯನ್ನು ಸುಡುತ್ತಿದೆ.

ಏಷ ಸಂದೃಶ್ಯತೇ ಪಾರ್ಥೋ ವಾಸುದೇವವ್ಯಪಾಶ್ರಯಃ ।
ದಾರಯನ್ ಸರ್ವಸೈನ್ಯಾನಿ ಧಾರ್ತರಾಷ್ಟ್ರಾಣಿ ಸರ್ವಶಃ ॥೩೩॥

ಕೃಷ್ಣನನ್ನು ಆಶ್ರಯಿಸಿ ದುರ್ಯೋಧನನ ಎಲ್ಲ ಸೈನ್ಯಗಳನ್ನೂ ಎಲ್ಲ ಕಡೆಗಳಲ್ಲಿಯೂ ಸೀಳುತ್ತಿರುವ ಈ ಅರ್ಜುನನು ಕಾಣುತ್ತಿದ್ದಾನೆ.

ಏತದಾಲೋಕ್ಯತೇ ಸೈನ್ಯಂ ಕ್ಷೋಭ್ಯಮಾಣಂ ಕಿರೀಟಿನಾ ।
ಮಹೋರ್ಮಿನದ್ಧಂ ಸುಮಹತ್ ತಿಮಿನೇವ ನದೀಮುಖಮ್ ॥೩೪॥

ತಿಮಿಂಗಿಲವು ಅನೇಕ ಅಲೆಗಳಿಂದ ಕೂಡಿದ ನದೀಮುಖವನ್ನು ನೋಡಿದಂತೆ ಅರ್ಜುನನು ಕ್ಷೋಭೆಗೊಳಗಾದ ಈ ಸೈನ್ಯವನ್ನು ನೋಡುತ್ತಿದ್ದಾನೆ.

ಹಾಹಾಕಿಲಕಿಲಾಶಬ್ದಾಃ ಶ್ರೂಯಂತೇ ಚ ಚಮೂಮುಖೇ ।
ಯಾಹಿ ಪಾಂಚಾಲದಾಯಾದಮಹಂ ಯಾಸ್ಯೇ ಯುಧಿಷ್ಠಿರಮ್ ॥೩೫॥

ಹಾಹಾಕಾರವೂ ಮತ್ತು ಕಿಲಕಿಲ ಗಾಬರಿ ಶಬ್ದವೂ ಸೇನೆಯ ಮುಂಭಾಗದಲ್ಲಿ ಕೇಳಿಬರುತ್ತಿವೆ. ಆದ್ದರಿಂದ ನೀನು ಶಿಖಂಡಿಯ ಬಳಿಗೆ ಹೋಗು. ನಾನು ಯುಧಿಷ್ಠಿರನ ಬಳಿಗೆ ಹೋಗುವೆನು.

ದುರ್ಲಭಂ ಖ್ವಂತರಂ ರಾಜ್ಞೋ ವ್ಯೂಹಸ್ಯಾಮಿತತೇಜಸಃ ।
ಸಮುದ್ರಕುಕ್ಷಿಸದೃಶಮಂ ಸರ್ವತೋऽತಿರಥೈಃ ಸ್ಥಿತೈಃ ॥೩೬॥

ಅಮಿತ ಪರಾಕ್ರಮಿಯಾದ ಧರ್ಮರಾಜನ ಸಮುದ್ರಕುಕ್ಷಿಯಂತಿರುವ, ಎಲ್ಲ ಕಡೆಗಳಿಂದಲೂ ಅತಿರಥರು ನಿಂತಿರುವ, ವ್ಯೂಹವು ಭೇದಿಸಲು ಅವಕಾಶವನ್ನು ಪಡೆಯಲು ದುರ್ಲಭವಾದುದು.

ಸಾತ್ಯಕಿಶ್ಚಾಭಿಮನ್ಯುಶ್ಚ ಧೃಷ್ಟದ್ಯುಮ್ನವೃಕೋದರೌ ।
ಪರಿರಕ್ಷಂತಿ ರಾಜಾನಂ ಯಮೌ ಚ ಮನುಜೇಶ್ವರಮ್ ॥೩೭॥

ಸಾತ್ಯಕಿ, ಅಭಿಮನ್ಯು, ಧೃಷ್ಟದ್ಯುಮ್ನ, ಭೀಮಸೇನ ಮತ್ತು ನಕುಲ-ಸಹದೇವರು ರಾಜನಾದ ಯುಧಿಷ್ಠಿರನನ್ನು ರಕ್ಷಿಸುತ್ತಿದ್ದಾರೆ.

ಉಪೇಂದ್ರಸದೃಶಃ ಶ್ಯಾಮೋ ಮಹಾಸಾಲ ಇವೋದ್ಗತಃ ।
ವಿಷ ಗಚ್ಛತ್ಯನೀಕಾನಿ ದ್ವಿತೀಯ ಇವ ಫಲ್ಗುನಃ ॥೩೮॥

ಉಪೇಂದ್ರನಂತೆ ಶ್ಯಾಮವರ್ಣದವನೂ, ಮಹಾಸಾಲವೃಕ್ಷದಂತೆ ಎತ್ತರನಾದವನು ಆದ ಈ ಅಭಿಮನ್ಯುವು ಎರಡನೆಯ ಅರ್ಜುನನಂತೆ ನಮ್ಮ ಸೈನ್ಯದ ಕಡೆಗೆ ಹೋಗುತ್ತಿದ್ದಾನೆ.

ಉತ್ತಮಾಸ್ತ್ರೀ ಚಾದತ್ಸ್ವ ಗೃಹೀತ್ವಾಸ್ತ್ರಾಣ್ಯಹದ್ದನುಃ ।
ಪಾರ್ಶ್ವತೋ ಯಾಹಿ ರಾಜಾನಂ ಯುಧ್ಯಸ್ವ ಚ ವೃಕೋದರಮ್ ॥೩೯॥

ಬೇರೆ ದೊಡ್ಡ ಧನುಸ್ಸನ್ನು ತೆಗೆದುಕೊಂಡು ಉತ್ತಮಾಸ್ತ್ರಗಳನ್ನು ತೆಗೆದುಕೊ. ಧರ್ಮರಾಜನ ಪಾರ್ಶ್ವದಲ್ಲಿ ಹೋಗಿ ಭೀಮಸೇನನ ಜೊತೆಯಲ್ಲಿ ಯುದ್ಧವನ್ನು ಮಾಡು.

ಕೋ ಹಿ ನೇಚ್ಛೇತ್ ಪ್ರಿಯಂ ಪುತ್ರಂ ಜೀವಂತಂ ಶಾಶ್ವತೀಃ ಸಮಾಃ ।
ಕ್ಷತ್ರಧರ್ಮಂ ಪುರಸ್ಕೃತ್ಯ ತತಸ್ತ್ವಾ ವಿನಿಯುಜ್ಮಹೇ ॥೪೦॥

ತನ್ನ ಪ್ರಿಯನಾದ ಪುತ್ರನು ಬಹುಕಾಲ ಬದುಕಿರುವುದನ್ನು ಯಾವನು ಇಚ್ಛಿಸುವುದಿಲ್ಲ? ಆದರೆ ಕ್ಷತ್ರಿಯ ಧರ್ಮವನ್ನು ಪುರಸ್ಕರಿಸಿ ನಾನು ನಿನಗೆ ಆದೇಶವನ್ನು ಮಾಡುತ್ತಿದ್ದೇನೆ.

ಏಷ ಚಾಪಿ ರಣೇ ಭೀಷ್ಮೋ ದಹತೇ ವೈ ಮಹಾಚಮೂಮ್ ।
ಯುದ್ಧೇ ಸುಸದೃಶಸ್ತಾತ ಯಮಸ್ಯ ವರುಣಸ್ಯ ಚ ॥೪೧॥

ಎಲೈ ಪ್ರೀತಿಪಾತ್ರನೇ, ಯುದ್ಧದಲ್ಲಿ ಯಮನಿಗೂ ಮತ್ತು ವರುಣನಿಗೂ ಬಹಳ ಸದೃಶರಾದ ಈ ಭೀಷ್ಮರೂ ಪಾಂಡವರ ಮಹಾಸೈನ್ಯವನ್ನು ದಹಿಸುತ್ತಿದ್ದಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ನವಾಧಿಕಶತತಮೋऽಧ್ಯಾಯಃ ॥

॥ ಭೀಷ್ಮವಧಪರ್ವಣಿ ಏಕೋನಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನೂರ ಒಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹತ್ತನೆಯ ಅಧ್ಯಾಯ

ಭೀಮಸೇನನ ಪರಾಕ್ರಮ.

ಸಂಜಯಃ

ಪುತ್ರಂ ಸಮನುಶಾಸ್ಯೈವಂ ಭಾರದ್ವಾಜಃ ಪ್ರತಾಪವಾನ್ ।
ಮಹಾರಣೇ ಮಹಾರಾಜ ಧರ್ಮರಾಜಮಯೋಧಯತ್ ॥೧॥

ಸಂಜಯ– ಎಲೈ ಮಹಾರಾಜನೇ, ಹೀಗೆ ತಮ್ಮ ಪುತ್ರನಿಗೆ ಆದೇಶವನ್ನು ನೀಡಿ ಪ್ರತಾಪಶಾಲಿಯಾದ ದ್ರೋಣರು ಮಹಾರಣದಲ್ಲಿ ಧರ್ಮರಾಜನ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ಭಗದತ್ತಃ ಕೃಪಃ ಶಲ್ಯಃ ಕೃತವರ್ಮಾ ಚ ಸಾತ್ವತಃ ।
ವಿಂದಾನುವಿಂದಾವಾವಂತ್ಯೌ ಸೈಂಧವಶ್ಚ ಜಯದ್ರಥಃ ॥೨॥

ಚಿತ್ರಸೇನೋ ವಿಕರ್ಣಶ್ಚ ತಥಾ ದುರ್ಮರ್ಷಣೋ ಯುವಾ ।
ದಶೈತೇ ತಾವಕಾ ಯೋಧಾ ಭೀಮಸೇನಮಯೋಧಯನ್ ॥೩॥

ಮಹತ್ಯಾ ಸೇನಯಾ ಯುಕ್ತಾ ನಾನಾದೇಶಸಮುತ್ಥಯಾ ।
ಭೀಷ್ಮಸ್ಯ ಸಮರೇ ರಾಜನ್ ಪ್ರಾರ್ಥಯಾನಾ ಮಹದ್ಯಶಃ ॥೪॥

ಭಗದತ್ತ, ಕೃಪರು, ಶಲ್ಯ, ಸಾತ್ವತಕುಲದ ಕೃತವರ್ಮ, ಅವಂತಿ ದೇಶದ ವಿಂದಾನುವಿಂದರು, ಸಿಂಧುದೇಶದ ಜಯದ್ರಥ, ಚಿತ್ರಸೇನ, ವಿಕರ್ಣ ಮತ್ತು ಯುವಕನಾದ ದುರ್ಮರ್ಷಣ ನಿನ್ನ ಈ ಹತ್ತು ಯೋಧರು ನಾನಾದೇಶಗಳಿಂದ ಬಂದ ದೊಡ್ಡ ಸೈನ್ಯದಿಂದ ಕೂಡಿದವರಾಗಿ ಭೀಷ್ಮರ ಈ ಕಾಳಗದಲ್ಲಿ ದೊಡ್ಡ ಕೀರ್ತಿಯನ್ನು ಆಶಿಸುತ್ತಾ ಎಲೈ ರಾಜನೇ, ಭೀಮಸೇನನ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ಶಲ್ಯಸ್ತು ನವಭಿರ್ಬಾಣೈರ್ಭೀಮಸೇನಮತಾಡಯತ್ ।
ಕೃತವರ್ಮಾ ತ್ರಿಭಿರ್ಬಾಣೈಃ ಕೃಪಶ್ಚ ನವಭಿಃ ಶರೈಃ ॥೫॥

ಶಲ್ಯನು ಒಂಬತ್ತು ಬಾಣಗಳಿಂದಲೂ, ಕೃತವರ್ಮನು ಮೂರು ಬಾಣಗಳಿಂದಲೂ, ಕೃಪರು ಒಂಬತ್ತು ಬಾಣಗಳಿಂದಲೂ ಭೀಮಸೇನನನ್ನು ಹೊಡೆದರು.

ಚಿತ್ರಸೇನೋ ವಿಕರ್ಣಶ್ಚ ಭಗದತ್ತಶ್ಚ ಮಾರಿಷ ।
ದಶಭಿರ್ದಶಭಿರ್ಭಲ್ಲೈರ್ಭೀಮಸೇನಮತಾಡಯನ್ ॥೬॥

ಎಲೈ ಶ್ರೇಷ್ಠನೇ, ಚಿತ್ರಸೇನ, ವಿಕರ್ಣ ಮತ್ತು ಭಗದತ್ತರು ಹತ್ತು-ಹತ್ತು ಭಲ್ಲಗಳಿಂದ ಭೀಮಸೇನನನ್ನು ಹೊಡೆದರು.

ಸೈಂಧವಶ್ಚ ತ್ರಿಭಿರ್ಬಾಣೈರ್ಜತ್ರುದೇಶೇऽಭ್ಯತಾಡಯತ್ ।
ವಿಂದಾನುವಿಂದಾವಾವಂತ್ಯೌ ಪಂಚಭಿಃ ಪಂಚಭಿಃ ಶರೈಃ ।
ದುರ್ಮರ್ಷಣಶ್ಚ ವಿಂಶತ್ಯಾ ಪಾಂಡವಂ ನಿಶಿತೈಃ ಶರೈಃ ॥೭॥

ಸೈಂಧವನು ಮೂರು ಬಾಣಗಳಿಂದ ಭೀಮಸೇನನನ್ನು ಭುಜಸಂಧಿ ಪ್ರದೇಶದಲ್ಲಿ ಹೊಡೆದನು. ಅವಂತಿದೇಶದ ವಿಂದಾನುವಿಂದರು ಐದೈದು ಬಾಣಗಳಿಂದಲೂ, ದುರ್ಮರ್ಷಣನು ಇಪ್ಪತ್ತು ತೀಕ್ಷ್ಣವಾದ ಬಾಣಗಳಿಂದಲೂ ಪಾಂಡವನಾದ ಭೀಮಸೇನನನ್ನು ಹೊಡೆದರು.

ಸ ತಾನ್ ಸರ್ವಾನ್ ಮಹಾರಾಜ ಭ್ರಾಜಮಾನಾನ್ ಪೃಥಕ್‌ಪೃಥಕ್ ।
ಪ್ರವೀರಾನ್ ಸರ್ವಲೋಕಸ್ಯ ಧಾರ್ತರಾಷ್ಟ್ರಾನ್ ಮಹಾರಥಾನ್ ।
ವಿವ್ಯಾಧ ಬಹುಭಿರ್ಬಾಣೈರ್ಭೀಮಸೇನೋ ಮಹಾಬಲಃ ॥೮॥

ಎಲೈ ಮಹಾರಾಜನೇ, ಕಾಂತಿಯುಕ್ತರಾದ, ದುರ್ಯೋಧನನ ಮಹಾರಥರಾದ, ಸರ್ವಲೋಕವೀರರಾದ ಅವರೆಲ್ಲರನ್ನೂ ಮಹಾಬಲನಾದ ಭೀಮಸೇನನು ಬೇರೆ ಬೇರೆಯಾಗಿ ಅನೇಕ ಬಾಣಗಳಿಂದ ಹೊಡೆದನು.

ಶಲ್ಯಂ ಪಂಚಾಶತಾ ವಿದ್ಧ್ವಾ ಕೃತವರ್ಮಾಣಮಷ್ಟಭಿಃ ।
ಕೃಪಸ್ಯ ಸಶರಂ ಚಾಪಂ ಮಧ್ಯೇ ಚಿಚ್ಛೇದ ಭಾರತ ।
ಅಥೈನಂ ಛಿನ್ನಧನ್ವಾನಂ ಪುನರ್ವಿವ್ಯಾಧ ಪಂಚಭಿಃ ॥೯॥

ಎಲೈ ಭಾರತನೇ, ಶಲ್ಯನನ್ನು ಐವತ್ತು ಬಾಣಗಳಿಂದಲೂ, ಕೃತವರ್ಮನನ್ನು ಎಂಟು ಬಾಣಗಳಿಂದಲೂ ಹೊಡೆದು, ಕೃಪರ ಧನುಸ್ಸನ್ನು ಬಾಣ ಸಹಿತವಾಗಿ ಮಧ್ಯದಲ್ಲಿ ಕತ್ತರಿಸಿದನು. ಅವರ ಧನುಸ್ಸು ಕತ್ತರಿಸಲ್ಪಟ್ಟ ಮೇಲೆ ಪುನಃ ಅವರ ಮೇಲೆ ಐದು ಬಾಣಗಳನ್ನು ಪ್ರಯೋಗಿಸಿದನು.

ವಿಂದಾನುವಿಂದೌ ಚ ತಥಾ ತ್ರಿಭಿಸ್ತ್ರಿಭಿರತಾಡಯತ್ ।
ದುರ್ಮರ್ಷಣಂ ಚ ವಿಂಶತ್ಯಾ ಚಿತ್ರಸೇನಂ ಚ ಪಂಚಭಿಃ ॥೧೦॥

ವಿಕರ್ಣಂ ದಶಭಿರ್ಬಾಣೈಃ ಪಂಚಭಿಶ್ಚ ಜಯದ್ರಥಮ್ ।
ವಿದ್ಧ್ವಾ ಭೀಮೋऽನದದ್ ಹೃಷ್ಟಃ ಸೈಂಧವಂ ಚ ಪುನಸ್ತ್ರಿಭಿಃ ॥೧೧॥

ಹಾಗೆಯೇ ವಿಂದಾನುವಿಂದರನ್ನು ಮೂರು-ಮೂರು ಬಾಣಗಳಿಂದಲೂ, ದುರ್ಮರ್ಷಣನನ್ನು ಇಪ್ಪತ್ತು ಬಾಣಗಳಿಂದಲೂ, ಚಿತ್ರಸೇನನನ್ನು ಐದು ಬಾಣಗಳಿಂದಲೂ, ವಿಕರ್ಣನನ್ನು ಹತ್ತು ಬಾಣಗಳಿಂದಲೂ, ಜಯದ್ರಥನನ್ನು ಐದು ಬಾಣಗಳಿಂದಲೂ ಹೊಡೆದು ಸಂತೋಷಗೊಂಡು, ಸಿಂಹನಾದವನ್ನು ಮಾಡಿ ಭೀಮಸೇನನು ಸೈಂಧವನನ್ನು ಪುನಃ ಮೂರು ಬಾಣಗಳಿಂದ ಹೊಡೆದನು.

ಅಥಾನ್ಯದ್ ಧನುರಾದಾಯ ಗೌತಮೋ ರಥಿನಾಂ ವರಃ ।
ಭೀಮಂ ವಿವ್ಯಾಧ ಸಂರಬ್ಧೋ ದಶಭಿರ್ನಿಶಿತೈಃ ಶರೈಃ ॥೧೨॥

ರಥಿಶ್ರೇಷ್ಠರಾದ ಕೃಪರು ಅನಂತರ ಕೋಪಗೊಂಡು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಭೀಮನನ್ನು ಹತ್ತು ತೀಕ್ಷ್ಣವಾದ ಬಾಣಗಳಿಂದ ಹೊಡೆದರು.

ಸ ಏದ್ಧೋ ಬಹುಭಿರ್ಬಾಣೈಸ್ತೋತ್ತ್ರೈರಿವ ಮಹಾದ್ವಿಪಃ ।
ತತಃ ಕ್ರುದ್ಧೋ ಮಹಾಬಾಹುರ್ಭೀಮಸೇನಃ ಪ್ರತಾಪವಾನ್ ।
ಗೌತಮಂ ತಾಡಯಾಮಾಸ ಶರೈರ್ಬಹುಭಿರಾಹವೇ ॥೧೩॥

ಅಂಕುಶದಿಂದ ಹೊಡೆದ ಮಹಾಗಜದಂತೆ ಅನೇಕ ಬಾಣಗಳಿಂದ ಹೊಡೆಯಲ್ಪಟ್ಟ ಪ್ರತಾಪಶಾಲಿಯೂ, ಮಹಾಬಾಹುವೂ ಆದ ಭೀಮಸೇನನು ಕ್ರುದ್ಧನಾಗಿ ರಣರಂಗದಲ್ಲಿ ಅನೇಕ ಬಾಣಗಳಿಂದ ಕೃಪರನ್ನು ಹೊಡೆದನು.

ಸೈಂಧವಸ್ಯ ತಥಾಶ್ವಾಂಶ್ಚ ಸಾರಥಿಂ ಚ ತ್ರಿಭಿಃ ಶರೈಃ ।
ಪ್ರಾಹಿಣೋತ್ ಮೃತ್ಯುಲೋಕಾಯ ಕಾಲಾಂತಕಸಮದ್ಯುತಿಃ ॥೧೪॥

ಹಾಗೆಯೇ ಸೈಂಧವನ ಅಶ್ವಗಳನ್ನು ಮತ್ತು ಸಾರಥಿಯನ್ನು ಕಾಲಾಂತಕನಿಗೆ ಸಮನಾದ ಕಾಂತಿಯುಳ್ಳ ಭೀಮಸೇನನು ಮೂರು ಬಾಣಗಳಿಂದ ಮೃತ್ಯುಲೋಕಕ್ಕೆ ಕಳುಹಿಸಿದನು.

ಹತಾಶ್ವಾತ್ ತು ರಥಾತ್ ತೂರ್ಣಮವಪ್ಲುತ್ಯ ಮಹಾರಥಃ ।
ಶರಾಂಶ್ಚಿಕ್ಷೇಪ ನಿಶಿತಾನ್ ಭೀಮಸೇನಸ್ಯ ಸಂಯುಗೇ ॥೧೫॥

ಮಹಾರಥನಾದ ಸೈಂಧವನು ಅಶ್ವಗಳು ಮೃತವಾದ ರಥದಿಂದ ಶೀಘ್ರವಾಗಿ ಕೆಳಗೆ ಹಾರಿ, ಯುದ್ಧದಲ್ಲಿ ಭೀಮಸೇನನ ಮೇಲೆ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿದನು.

ತಸ್ಯ ಭೀಮೋ ಧನುರ್ಮಧ್ಯೇ ದ್ವಾಭ್ಯಾಂ ಚಿಚ್ಛೇದ ಭಾರತ ।
ಭಲ್ಲಾಭ್ಯಾಂ ಭರತಶ್ರೇಷ್ಠ ಸೈಂಧವಸ್ಯ ಮಹಾತ್ಮನಃ ॥೧೬॥

ಎಲೈ ಭರತಶ್ರೇಷ್ಠನೇ, ಭಾರತನೇ, ಮಹಾತ್ಮನಾದ ಸೈಂಧವನ ಧನುಸ್ಸನ್ನು ಭೀಮಸೇನನು ಎರಡು ಭಲ್ಲಗಳಿಂದ ಮಧ್ಯದಲ್ಲಿ ಕತ್ತರಿಸಿದನು.

ಸ ಚ್ಛಿನ್ನಧನ್ವಾ ವಿರಥೋ ಹತಾಶ್ವೋ ಹತಸಾರಥಿಃ ।
ಚಿತ್ರಸೇನರಥಂ ರಾಜನ್ನಾರುರೋಹ ತ್ವರಾನ್ವಿತಃ ॥೧೭॥

ಎಲೈ ರಾಜನೇ, ಅವನು ತನ್ನ ಧನುಸ್ಸು ಕತ್ತರಿಸಲ್ಪಟ್ಟು ಅಶ್ವಗಳು ಮತ್ತು ಸಾರಥಿಯು ಹತರಾಗಿ ವಿರಥನಾಗಿ ತ್ವರೆಯಿಂದ ಕೂಡಿ ಚಿತ್ರಸೇನನ ರಥವನ್ನು ಏರಿದನು.

ಅತ್ಯದ್ಭುತಂ ರಣೇ ಕರ್ಮ ಕೃತವಾಂಸ್ತತ್ರ ಪಾಂಡವಃ ।
ಮಹಾರಥಾನ್ ಶರೈರ್ವಿದ್ಧ್ವಾ ವಾರಯಿತ್ವಾ ಮಹಾರಥಃ ।
ವಿರಥಂ ಸೈಂಧವಂ ಚಕ್ರೇ ಸರ್ವಲೋಕಸ್ಯ ಪಶ್ಯತಃ ॥೧೮॥

ಪಾಂಡವನಾದ ಭೀಮಸೇನನು ಅಲ್ಲಿ ಯುದ್ಧದಲ್ಲಿ ಬಹಳ ಅದ್ಭುತವಾದ ಕಾರ್ಯವನ್ನು ಮಾಡಿದನು. ಮಹಾರಥನಾದ ಅವನು ಮಹಾರಥರನ್ನು ಬಾಣಗಳಿಂದ ಹೊಡೆದು, ತಡೆದು ಎಲ್ಲ ಲೋಕವೂ ನೋಡುತ್ತಿರುವಂತೆಯೇ ಸೈಂಧವನನ್ನು ರಥಹೀನನನ್ನಾಗಿ ಮಾಡಿದನು.

ನಾತೀವ ಮಮೃಷೇ ಶಲ್ಯೋ ಭೀಮಸೇನಸ್ಯ ವಿಕ್ರಮಮ್ ।
ಸ ಸಂಧಾಯ ಶರಾಂಸ್ತೀಕ್ಷ್ಣಾನ್ ಕರ್ಮಾರಪರಿಮಾರ್ಜಿತಾನ್ ।
ಭೀಮಂ ವಿವ್ಯಾಧ ಸಪ್ತತ್ಯಾ ತಿಷ್ಠತಿಷ್ಠೇತಿ ಚಾಬ್ರವೀತ್ ॥೧೯॥

ಶಲ್ಯನು ಭೀಮಸೇನನ ಪರಾಕ್ರಮವನ್ನು ನೋಡಿ ಬಹಳವಾಗಿ ಸಹಿಸಲಿಲ್ಲ. ಅವನು ಕಮ್ಮಾರರು ಪರಿಷ್ಕರಿಸಿದ ತೀಕ್ಷ್ಣವಾದ ಎಪ್ಪತ್ತು ಬಾಣಗಳನ್ನು ಧನುಸ್ಸಿನಲ್ಲಿ ಹೂಡಿ ಭೀಮಸೇನನಿಗೆ ಹೊಡೆದು ನಿಲ್ಲು-ನಿಲ್ಲು ಎಂದು ಹೇಳಿದನು.

ಕೃಪಶ್ಚ ಕೃತವರ್ಮಾ ಚ ಭಗದತ್ತಶ್ಚ ಮಾರಿಷ ।
ವಿಂದಾನುವಿಂದಾವಾವಂತ್ಯೌ ಚಿತ್ರಸೇನಶ್ಚ ಸಂಯುಗೇ ॥೨೦॥

ದುರ್ಮರ್ಷಣೋ ವಿಕರ್ಣಶ್ಚ ಸಿಂಧುರಾಜಶ್ಚ ವೀರ್ಯವಾನ್ ।
ಭೀಮಂ ತೇ ವಿವ್ಯಧುಸ್ತೂರ್ಣಂ ಶಲ್ಯಹೇತೋರರಿಂದಮಾಃ ॥೨೧॥

ಎಲೈ ಪೂಜ್ಯನೇ, ಕೃಪರು, ಕೃತವರ್ಮ, ಭಗದತ್ತ, ಅವಂತಿದೇಶದ ವಿಂದಾನುವಿಂದರು, ಚಿತ್ರಸೇನ, ದುರ್ಮರ್ಷಣ, ವಿಕರ್ಣ, ಪರಾಕ್ರಮಶಾಲಿಯಾದ ಸೈಂಧವ- ಅರಿಂದಮರಾದ ಇವರೆಲ್ಲರೂ ಯುದ್ಧದಲ್ಲಿ ಶಲ್ಯನನ್ನು ರಕ್ಷಿಸುವ ಸಲುವಾಗಿ ಶೀಘ್ರವಾಗಿ ಭೀಮಸೇನನನ್ನು ಬಾಣಗಳಿಂದ ಹೊಡೆದರು.

ಸ ತು ತಾನ್ ಪ್ರತಿವಿವ್ಯಾಧ ಪಂಚಭಿಃ ಪಂಚಭಿಃ ಶರೈಃ ।
ಶಲ್ಯಂ ವಿವ್ಯಾಧ ಸಪ್ತತ್ಯಾ ಪುನಶ್ಚ ದಶಭಿಃ ಶರೈಃ ॥೨೨॥

ಭೀಮಸೇನನು ಅವರೆಲ್ಲರನ್ನೂ ಏದ್ದೆದು ಬಾಣಗಳಿಂದ ಹೊಡೆದನು. ಶಲ್ಯನನ್ನು ಎಪ್ಪತ್ತು ಬಾಣಗಳಿಂದ ಹೊಡೆದು ಪುನಃ ಹತ್ತು ಬಾಣಗಳಿಂದ ಹೊಡೆದನು.

ತಂ ಶಲ್ಯೋ ನವಭಿರ್ವಿದ್ಧ್ವಾ ಪುನರ್ವಿವ್ಯಾಧ ಪಂಚಭಿಃ ।
ಸಾರಥಿಂ ಚಾಸ್ಯ ಭಲ್ಲೇನ ಗಾಢಂ ವಿವ್ಯಾಧ ಮರ್ಮಣಿ ॥೨೩॥

ಶಲ್ಯನು ಭೀಮಸೇನನನ್ನು ಒಂಬತ್ತು ಬಾಣಗಳಿಂದ ಹೊಡೆದು ಪುನಃ ಐದು ಬಾಣಗಳಿಂದ ಹೊಡೆದನು ಮತ್ತು ಭಲ್ಲದಿಂದ ಅವನ ಸಾರಥಿಯನ್ನು ಮರ್ಮಗಳಲ್ಲಿ ಗಾಢವಾಗಿ ಹೊಡೆದು ಗಾಯಗೊಳಿಸಿದನು.

ವಿಶೋಕಂ ವೀಕ್ಷ್ಯ ನಿರ್ಭಿನ್ನಂ ಭೀಮಸೇನಃ ಪ್ರತಾಪವಾನ್ ।
ಮದ್ರರಾಜಂ ತ್ರಿಭಿರ್ಬಾಣೈರ್ಬಾಹ್ವೋರುರಸಿ ಚಾರ್ಪಯತ್ ॥೨೪॥

ತನ್ನ ಸಾರಥಿಯಾದ ವಿಶೋಕನು ಗಾಯಗೊಂಡುದನ್ನು ನೋಡಿ ಪ್ರತಾಪಶಾಲಿಯಾದ ಭೀಮಸೇನನು ಶಲ್ಯನನ್ನು ಮೂರು ಬಾಣಗಳಿಂದ ಅವನ ಬಾಹುಗಳಲ್ಲಿ ಮತ್ತು ವಕ್ಷಸ್ಥಲದಲ್ಲಿ ಹೊಡೆದನು.

ತಥೇತರಾನ್ ಮಹೇಷ್ವಾಸಾನ್ ತ್ರಿಭಿಸ್ತ್ರಿಭಿರಜಿಹ್ಮಗೈಃ ।
ತಾಡಯಾಮಾಸ ಸಮರೇ ಸಿಂಹವಚ್ಚ ನನಾದ ಚ ॥೨೫॥

ಹಾಗೆಯೇ ಇತರ ಮಹಾಧನುರ್ಧಾರಿಗಳನ್ನು ಯುದ್ಧದಲ್ಲಿ ನೇರವಾಗಿ ಸಾಗುವ ಮೂರು-ಮೂರು ಬಾಣಗಳಿಂದ ಹೊಡೆದು ಸಿಂಹದಂತೆ ಗರ್ಜಿಸಿದನು.

ತೇ ಹಿ ಯತ್ತಾ ಮಹೇಷ್ವಾಸಾಃ ಪಾಂಡವಂ ಯುದ್ಧದುರ್ಮದಮ್ ।
ತ್ರಿಭಿಸ್ತ್ರಿಭಿರಜಿಹ್ಮಾಗ್ರೈರ್ಭೃಶಂ ಮರ್ಮಸ್ವತಾಡಯನ್ ॥೨೬॥

ಪ್ರಯತ್ನಶೀಲರಾದ ಆ ಮಹಾಧನುರ್ಧಾರಿಗಳು ಯುದ್ಧದುರ್ಮದನಾದ ಭೀಮಸೇನನನ್ನು ತೀಕ್ಷ್ಣವಾದ ತುದಿಗಳನ್ನು ಹೊಂದಿದ ಮೂರು-ಮೂರು ಬಾಣಗಳಿಂದ ಮರ್ಮಸ್ಥಾನಗಳಲ್ಲಿ ಚೆನ್ನಾಗಿ ಹೊಡೆದರು.

ಸೋಽತಿವಿದ್ಧೋ ಮಹೇಷ್ವಾಸೋ ಭೀಮಸೇನೋ ನ ವಿವ್ಯಥೇ ।
ಪರ್ವತೋ ವಾರಿಧಾರಾಭಿರ್ವರ್ಷಮಾಣೈರಿವಾಂಬುದೈಃ ॥೨೭॥

ಶತ್ರುಗಳಿಂದ ಬಹಳವಾಗಿ ಹೊಡೆಯಲ್ಪಟ್ಟ ಮಹಾಧನುರ್ಧಾರಿಯಾದ ಭೀಮಸೇನನು ಮೋಡಗಳು ಮಳೆಗಳ ಧಾರೆಗಳನ್ನು ಸುರಿಸಿದ ಪರ್ವತದಂತೆ ವ್ಯಥೆಯನ್ನು ಹೊಂದಲಿಲ್ಲ.

ಸ ತು ಕ್ರೋಧಸಮಾವಿಷ್ಟೋ ಭೀಮಸೇನೋ ಮಹಾಬಲಃ ।
ಮದ್ರೇಶ್ವರಂ ತ್ರಿಭಿರ್ಬಾಣೈರ್ಭರ್ತ್ಸಯಂ ವಿದ್ವಾ ಮಹಾಯಶಾಃ ।
ಪ್ರಾಗ್ಜ್ಯೋತಿಷಂ ಶತೇನಾಜೌ ರಾಜನ್ ವಿವ್ಯಾಧ ವೈ ದೃಢಮ್ ॥೨೮॥

ಮಹಾಬಲನೂ, ಕ್ರೋಧಾವಿಷ್ಟನೂ, ಮಹಾಕೀರ್ತಿಶಾಲಿಯೂ ಆದ ಭೀಮಸೇನನಾದರೋ ಮದ್ರಾಧಿಪತಿಯಾದ ಶಲ್ಯನನ್ನು ಮೂರು ಬಾಣಗಳಿಂದ ಗಾಢವಾಗಿ ಹೊಡೆದು, ಪುನಃ ಒಂಬತ್ತು ಬಾಣಗಳಿಂದ ಗಾಢವಾಗಿ ಹೊಡೆದು ಪ್ರಾಗ್ಜ್ಯೋತಿಷಾಧಿಪತಿಯಾದ ಭಗದತ್ತನನ್ನು ಮೂರು ಬಾಣಗಳಿಂದ ದೃಢವಾಗಿ ಹೊಡೆದನು.

ತತಸ್ತು ಸಶರಂ ಚಾಪಂ ಸಾತ್ವತಸ್ಯ ಮಹಾತ್ಮನಃ ।
ಕ್ಷುರಪ್ರೇಣ ಸುತೀಕ್ಷ್ಣೇನ ಚಿಚ್ಛೇದ ಕೃತಹಸ್ತವತ್ ॥೨೯॥

ಅನಂತರ ಅವನು ಮಹಾತ್ಮನಾದ ಸಾತ್ವತಕುಲದ ಕೃತವರ್ಮನ ಧನುಸ್ಸನ್ನು ಸಿದ್ಧಹಸ್ತನಂತೆ ಬಹಳ ತೀಕ್ಷ್ಣವಾದ ಕ್ಷುರಪ್ರದಿಂದ ಕತ್ತರಿಸಿದನು.

ಅಥಾನ್ಯದ್ ಧನುರಾದಾಯ ಕೃತವರ್ಮಾ ವೃಕೋದರಮ್ ।
ಆಜಘಾನ ಭ್ರುವೋರ್ಮಧ್ಯೇ ನಾರಾಚೇನ ಪರಂತಪ ॥೩೦॥

ಎಲೈ ಪರಂತಪನೇ, ಆಗ ಕೃತವರ್ಮನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ನಾರಾಚವನ್ನು ಹೂಡಿ ವೃಕೋದರನನ್ನು ಅವನ ಹುಬ್ಬುಗಳ ಮಧ್ಯದಲ್ಲಿ ಹೊಡೆದನು.

ಭೀಮಸ್ತು ಸಮರೇ ವಿದ್ವಾ ಶಲ್ಯಂ ನವಭಿರಾಯಸೈಃ ।
ಭಗದತ್ತಂ ತ್ರಿಭಿಶ್ಚೈವ ಕೃತವರ್ಮಾಣಮಷ್ಟಭಿಃ ॥೩೧॥

ದ್ವಾಭ್ಯಾಂ ದ್ವಾಭ್ಯಾಂ ಚ ವಿವ್ಯಾಧ ಗೌತಮಪ್ರಮುಖಾನ್ ರಥಾನ್ ।
ತೇ ತು ತಂ ಸಮರೇ ರಾಜನ್ ವಿವ್ಯಧುರ್ನಿಶಿತೈಃ ಶರೈಃ ॥೩೨॥

ಭೀಮಸೇನನು ಯುದ್ಧದಲ್ಲಿ ಒಂಬತ್ತು ಕಬ್ಬಿಣದ ಬಾಣಗಳಿಂದ ಶಲ್ಯನನ್ನು ಹೊಡೆದು, ಭಗದತ್ತನನ್ನು ಮೂರು ಬಾಣಗಳಿಂದಲೂ, ಕೃತವರ್ಮನನ್ನು ಎಂಟು ಬಾಣಗಳಿಂದಲೂ ಹೊಡೆದು, ಕೃಪರೇ ಮೊದಲಾದವರನ್ನು ಎರಡೆರಡು ಬಾಣಗಳಿಂದ ಹೊಡೆದನು. ಎಲೈ ರಾಜನೇ, ಅವರೂ ಸಹ ತೀಕ್ಷ್ಣವಾದ ಬಾಣಗಳಿಂದ ರಣರಂಗದಲ್ಲಿ ಭೀಮಸೇನನನ್ನು ಹೊಡೆದರು.

ಸ ತಥಾ ಪೀಡ್ಯಮಾನೋಽಪಿ ಸರ್ವತಸ್ತೈರ್ಮಹಾರಥೈಃ ।
ಮತ್ವಾ ತೃಣೇನ ತಾಂಸ್ತುಲ್ಯಾನ್ ವಿಚಚಾರ ಗತವ್ಯಥಃ ॥೩೩॥

ಆ ಮಹಾರಥರಿಂದ ಎಲ್ಲ ದಿಕ್ಕುಗಳಿಂದಲೂ ಹೀಗೆ ಪೀಡಿಸಲ್ಪಟ್ಟರೂ ಸಹ ಭೀಮಸೇನನು ಯಾವ ವ್ಯಥೆಯೂ ಇಲ್ಲದೆ ಅವರನ್ನು ತೃಣಕ್ಕೆ ಸಮಾನರೆಂದು ಪರಿಗಣಿಸಿ ರಣಭೂಮಿಯಲ್ಲಿ ಸಂಚರಿಸಿದನು.

ತೇ ಚಾಪಿ ರಥಿನಾಂ ತ್ರೇಷ್ಠಾ ಭೀಮಾಯ ನಿಶಿತಾನ್ ಶರಾನ್ ।
ಪ್ರೇಷಯಾಮಾಸುರವ್ಯಗ್ರಾಃ ಶತತೋಽಥ ಸಹಸ್ರತಃ ॥೩೪॥

ಆ ರಥಿತ್ರೇಷ್ಠರಾದರೋ ಎಚ್ಚರಿಕೆಯಿಂದ ಕೂಡಿ ಭೀಮಸೇನನ ಮೇಲೆ ತೀಕ್ಷ್ಣವಾದ ಬಾಣಗಳನ್ನು ನೂರರ ಸಂಖ್ಯೆಯಲ್ಲಿ ಮತ್ತು ಸಾವಿರದ ಸಂಖ್ಯೆಯಲ್ಲಿ ಕಳುಹಿಸಿದರು.

ತಸ್ಯ ಶಕ್ತಿಂ ಮಹಾವೇಗಾಂ ಭಗದತ್ತೋ ಮಹಾರಥಃ ।
ಚಿಕ್ಷೇಪ ಸಮರೇ ವೀರಃ ಸ್ವರ್ಣದಂಡಾಂ ಮಹಾಘನಾಮ್ ॥೩೫॥

ಮಹಾರಥನೂ, ವೀರನೂ ಆದ ಭಗದತ್ತನು ಭೀಮಸೇನನ ಮೇಲೆ ಸ್ವರ್ಣದಂಡವುಳ್ಳ, ಬಹಳ ಗಟ್ಟಿಯಾದ, ಮಹಾವೇಗವುಳ್ಳ ಶಕ್ತ್ಯಾಯುಧವನ್ನು ಎಸೆದನು.

ತೋಮರಂ ಸೈಂಧವೋ ರಾಜಾ ಪಟ್ಟಿಶಂ ಚ ಮಹಾಭುಜಃ ।
ಶತಘ್ನೀಂ ಚ ಕೃಪೋ ರಾಜನ್ ಶರಂ ಶಲ್ಯಶ್ಚ ಸಂಯುಗೇ ॥೩೬॥

ಎಲೈ ರಾಜನೇ, ಮಹಾಭುಜನಾದ ಸಿಂಧುರಾಜನು ತೋಮರ ಮತ್ತು ಪಟ್ಟಿಶಗಳನ್ನೂ, ಕೃಪರು ಶತಘ್ನಿಯನ್ನೂ, ಶಲ್ಯನು ಬಾಣವನ್ನೂ ಭೀಮಸೇನನ ಮೇಲೆ ಪ್ರಯೋಗಿಸಿದರು.

ಅಥೇತರೇ ಮಹೇಷ್ವಾಸಾಃ ಪಂಚ ಪಂಚ ಶಿಲೀಮುಖಾನ್ ।
ಭೀಮಸೇನಂ ಸಮುದ್ದಿಶ್ಯ ಪ್ರೇಷಯಾಮಾಸುರೋಜಸಾ ॥೩೭॥

ಆಗ ಉಳಿದ ಧನುರ್ಧಾರಿಗಳು ಭೀಮಸೇನನನ್ನು ಉದ್ದೇಶಿಸಿ ಐದೈದು ಬಾಣಗಳನ್ನು ತಮ್ಮ ಸಾಮರ್ಥ್ಯದಿಂದ ಅವನ ಮೇಲೆ ಪ್ರಯೋಗಿಸಿದರು.

ತೋಮರಂ ಸ ದ್ವಿಧಾ ಚಕ್ರೇ ಕ್ಷುರಪ್ರೇಣಾನಿಲಾತ್ಮಜಃ ।
ಪಟ್ಟಶಂ ಚ ತ್ರಿಭಿರ್ಬಾಣೈಶ್ಚಿಚ್ಛೇದ ತಿಲಕಾಂಡವತ್ ॥೩೮॥

ಅನಿಲಪುತ್ರನಾದ ಭೀಮಸೇನನು ಕ್ಷುರಪ್ರದಿಂದ ತೋಮರವನ್ನು ಎರಡು ಭಾಗವಾಗಿ ಕತ್ತರಿಸಿದನು. ಮೂರು ಬಾಣಗಳನ್ನು ಪ್ರಯೋಗಿಸಿ ಪಟ್ಟಶವನ್ನು ಎಳ್ಳಿನ ಗಿಡದ ಕಾಂಡದಂತೆ ಕತ್ತರಿಸಿದನು.

ಸ ಬಿಭೇದ ಶತಘ್ನೀಂ ಚ ನವಭಿಃ ಕಂಕಪತ್ರಿಭಿಃ ।
ಮದ್ರರಾಜಪ್ರಯುಕ್ತಂ ಚ ಶರಂ ಛಿತ್ತ್ವಾ ಮಹಾಬಲಃ ॥೩೯॥

ಶಕ್ತಿಂ ಚಿಚ್ಛೇದ ಸಹಸಾ ಭಗದತ್ತೇರಿತಾಂ ರಣೇ ।
ತಥೇತರಾನ್ ಶರಾನ್ ಘೋರಾನ್ ಶರೈಃ ಸನ್ನತಪರ್ವಭಿಃ ॥೪೦॥

ಭೀಮಸೇನೋ ರಣಶ್ಲಾಘೀ ತ್ರಿಧೈಕೈಕಂ ಸಮಾಚ್ಛಿನತ್ ।
ತಾಂಶ್ಚ ಸರ್ವಾನ್ ಮಹೇಷ್ವಾಸಾನ್ ತ್ರಿಭಿಸ್ತ್ರಿಭಿರತಾಡಯತ್ ॥೪೧॥

ಅವನು ಕಂಕಪತ್ರವನ್ನು ಹೊಂದಿದ ಒಂಬತ್ತು ಬಾಣಗಳಿಂದ ಶತಘ್ನಿಯನ್ನು ಕತ್ತರಿಸಿದನು. ಮಹಾಬಲನಾದ ಅವನು ಮದ್ರರಾಜನು ಪ್ರಯೋಗಿಸಿದ ಶರವನ್ನು ಕತ್ತರಿಸಿ ಯುದ್ಧದಲ್ಲಿ ಭಗದತ್ತನಿಂದ ಪ್ರಯೋಗಿಸಲ್ಪಟ್ಟ ಶಕ್ತಿಯನ್ನು ತಕ್ಷಣ ಕತ್ತರಿಸಿದನು. ಹಾಗೆಯೇ ಉಳಿದ ಘೋರವಾದ ಬಾಣಗಳನ್ನು ಬಾಗಿದ ತುದಿಯುಳ್ಳ ತನ್ನ ಬಾಣಗಳಿಂದ ರಣಶ್ಲಾಘಿಯಾದ ಭೀಮಸೇನನು ಒಂದೊಂದನ್ನೂ ಮೂರು ಭಾಗವಾಗಿ ಕತ್ತರಿಸಿದನು. ಮತ್ತು ಆ ಎಲ್ಲ ಧನುರ್ಧಾರಿಗಳನ್ನು ಮೂರು-ಮೂರು ಬಾಣಗಳಿಂದ ಹೊಡೆದನು.

ತತೋ ಧನಂಜಯಸ್ತತ್ರ ವರ್ತಮಾನೇ ಮಹಾರಣೇ ।
ಜಗಾಮ ಸ ರಥೇನಾಜೌ ಭೀಮಂ ದೃಷ್ಟ್ವಾ ಮಹಾರಥಮ್ ।
ನಿಘ್ನಂತಂ ಸಮರೇ ಶತ್ರೂನ್ ಯೋಧಯಾನಂ ಚ ಸಾಯಕೈಃ ॥೪೨॥

ಭೀಮಸೇನನು ಶತ್ರುಗಳನ್ನು ಕೊಲ್ಲುತ್ತಿರುವುದನ್ನೂ, ಬಾಣಗಳಿಂದ ಯುದ್ಧ ಮಾಡುತ್ತಿರುವುದನ್ನೂ ನೋಡಿದ ಅರ್ಜುನನು ಆ ಮಹಾರಣವು ನಡೆಯುತ್ತಿದ್ದಾಗ ತನ್ನ ರಥದಿಂದ ಅಲ್ಲಿಗೆ ಬಂದನು.

ತೌ ತು ತತ್ರ ಮಹಾತ್ಮಾನೌ ಸಮೇತೌ ವೀಕ್ಷ್ಯ ಪಾಂಡವೌ ।
ನಾಶಶಂಸುರ್ಜಯಂ ತತ್ರ ತಾವಕಾಃ ಪುರುಷರ್ಷಭ ॥೪೩॥

ಎಲೈ ಪುರುಷಶ್ರೇಷ್ಠನೇ, ಮಹಾತ್ಮರಾದ ಆ ಇಬ್ಬರು ಪಾಂಡುಪುತ್ರರು ಸೇರಿದುದನ್ನು ನೋಡಿ ನಿನ್ನವರು ಅಲ್ಲಿ ಜಯದ ಆಸೆಯನ್ನು ತೊರೆದರು.

ಅಥಾರ್ಜುನೋ ರಣೇ ಭೀಷ್ಮಂ ಯೋಧಯನ್ ವೈ ಮಹಾರಥಮ್ ।
ಭೀಷ್ಮಸ್ಯ ನಿಧನಾಕಾಂಕ್ಷೀ ಪುರಸ್ಕೃತ್ಯ ಶಿಖಂಡಿನಮ್ ।
ಆಸಸಾದ ರಣೇ ಯೋಧಾನ್ ತಾವಕಾನ್ ದಶ ಭಾರತ ॥೪೪॥

ಯೇ ಸ್ಮ ಭೀಮಂ ರಣೇ ರಾಜನ್ ಯೋಧಯಂತೋ ವ್ಯವಸ್ಥಿತಾಃ ।
ಬೀಭತ್ಸುಸ್ತಾನಥಾವಿಧ್ಯದ್ ಭೀಮಸ್ಯ ಪ್ರಿಯಕಾಮ್ಯಯಾ ॥೪೫॥

ಎಲೈ ಭಾರತನೇ, ರಾಜನೇ, ಅನಂತರ ಅರ್ಜುನನು ಮಹಾರಥರಾದ ಭೀಷ್ಮರ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಾ ಅವರ ನಿಧನವನ್ನು ಬಯಸಿ, ಶಿಖಂಡಿಯನ್ನು ಮುಂದೆ ಮಾಡಿಕೊಂಡು, ಯಾರು ಭೀಮಸೇನನ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಿದ್ದರೋ ಅಂತಹ ನಿನ್ನ ಹತ್ತು ಯೋಧರನ್ನು ಸಮೀಪಿಸಿ, ಭೀಮನಿಗೆ ಪ್ರಿಯವನ್ನು ಮಾಡುವ ಇಚ್ಛೆಯಿಂದ ಅವನು ಅವರಿಗೆಲ್ಲಾ ಹೊಡೆದನು.

ತತೋ ದುರ್ಯೋಧನೋ ರಾಜಾ ಸುಶರ್ಮಾಣಮಚೋದಯತ್ ।
ಅರ್ಜುನಸ್ಯ ವಧಾರ್ಥಾಯ ಭೀಮಸೇನಸ್ಯ ಚೋಭಯೋಃ ॥೪೬॥

ಆಗ ರಾಜನಾದ ದುರ್ಯೋಧನನು ಅರ್ಜುನ ಮತ್ತು ಭೀಮಸೇನರಿಬ್ಬರ ವಧೆಗಾಗಿ ಸುಶರ್ಮನನ್ನು ಪ್ರಚೋದಿಸಿದನು.

ಸುಶರ್ಮನ್ ಗಚ್ಛ ಶೀಘ್ರಂ ತ್ವಂ ಬಲೌಘೈಃ ಪರಿವಾರಿತಃ ।
ಜಹಿ ಪಾಂಡುಸುತಾವೇತೌ ಧನಂಜಯವೃಕೋದರೌ ॥೪೭॥

ಎಲೈ ಸುಶರ್ಮನೇ, ನೀನು ಶೀಘ್ರವಾಗಿ ಸೇನಾಸಮೂಹದಿಂದ ಪರಿವೃತನಾಗಿ ಹೋಗಿ ಪಾಂಡುಸುತರಾದ ಈ ಅರ್ಜುನ-ಭೀಮಸೇನರಿಬ್ಬರನ್ನೂ ಕೊಲ್ಲು (ಎಂದು ಹೇಳಿದನು).

ತಚ್ಛ್ರುತ್ವಾ ಶಾಸನಂ ತಸ್ಯ ತ್ರಿಗರ್ತಃ ಪ್ರಸ್ಥಲಾಧಿಪಃ ।
ಅಭಿದ್ರುತ್ಯ ರಣೇ ಭೀಮಮರ್ಜುನಂ ಚೈವ ಧನ್ವಿನೌ ॥೪೮॥

ರಥೈರನೇಕಸಾಹಸ್ರೈಃ ಪರಿವವ್ರೇ ಸಮಂತತಃ ।
ತತಃ ಪ್ರವವೃತೇ ಯುದ್ಧಮರ್ಜುನಸ್ಯ ಪರೈಃ ಸಹ ॥೪೯॥

ಆ ಶಾಸನವನ್ನು ಕೇಳಿದ ತ್ರಿಗರ್ತಾಧಿಪತಿಯೂ, ಪ್ರಸ್ಥಲಾಧಿಪನೂ ಆದ ಸುಶರ್ಮನು ಧನುರ್ಧಾರಿಗಳಾದ ಭೀಮಾರ್ಜುನರ ಬಳಿಗೆ ರಣರಂಗದಲ್ಲಿ ಧಾವಿಸಿ ಅನೇಕ ಸಹಸ್ರ ರಥಗಳಿಂದ ಅವರಿಬ್ಬರನ್ನೂ ಸುತ್ತುವರಿದನು. ಅನಂತರ ಅರ್ಜುನನಿಗೂ ಅವನ ಶತ್ರುಗಳಿಗೂ ಯುದ್ಧವು ಜರುಗಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ದಶಾಧಿಕಶತತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನೂರ ಹತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹನ್ನೊಂದನೆಯ ಅಧ್ಯಾಯ

ಕೌರವರ ಜೊತೆಯಲ್ಲಿ ಭೀಮಾರ್ಜುನರ ಯುದ್ಧ.

ಸಂಜಯಃ

ಅರ್ಜುನಸ್ತು ರಣೇ ಶಲ್ಯಂ ಯತಮಾನಂ ಮಹಾರಥಮ್ ।
ಛಾದಯಾಮಾಸ ಸಮರೇ ಶರೈಃ ಸನ್ನತಪರ್ವಭಿಃ ॥೧॥

ಸಂಜಯ– ಅರ್ಜುನನಾದರೋ ಯುದ್ಧದಲ್ಲಿ ಪ್ರಯತ್ನಶೀಲನಾಗಿದ್ದ ಮಹಾರಥನಾದ ಶಲ್ಯನನ್ನು ಬಾಗಿದ ತುದಿಯುಳ್ಳ ಬಾಣಗಳಿಂದ ಮುಚ್ಚಹಾಕಿದನು.

ಸುಶರ್ಮಾಣಂ ಕೃಪಂ ಚೈವ ತ್ರಿಭಿಸ್ತ್ರಿಭಿರವಿಧ್ಯತ ।
ಪ್ರಾಗ್ಜ್ಯೋತಿಷಂ ಚ ಸಮರೇ ಸೈಂಧವಂ ಚ ಜಯದ್ರಥಮ್ ॥೨॥

ಸುಶರ್ಮ, ಕೃಪರು, ಪ್ರಾಗ್ಜ್ಯೋತಿಷನಾದ ಭಗದತ್ತ ಮತ್ತು ಸೈಂಧವನಾದ ಜಯದ್ರಥನನ್ನು ರಣರಂಗದಲ್ಲಿ ಮೂರು-ಮೂರು ಬಾಣಗಳಿಂದ ಹೊಡೆದನು.

ಚಿತ್ರಸೇನಂ ವಿಕರ್ಣಂ ಚ ಕೃತವರ್ಮಾಣಮೇವ ಚ ।
ದುರ್ಮರ್ಷಣಂ ಚ ರಾಜೇಂದ್ರ ಆವಂತ್ಯೌ ಚ ಮಹಾರಥೌ ॥೩॥

ಏಕೈಕಂ ತ್ರಿಭಿರಾನರ್ಚ್ಛತ್ ಕಂಕಬರ್ಹಿಣವಾಜಿತೈಃ ।
ಶರೈರತಿರಥೋ ಯುದ್ಧೇ ಪೀಡಯನ್ ವಾಹಿನೀಂ ತವ ॥೪॥

ಎಲೈ ರಾಜೇಂದ್ರನೇ, ಅತಿರಥನಾದ ಅರ್ಜುನನು ಯುದ್ಧದಲ್ಲಿ ನಿನ್ನ ಸೈನ್ಯವನ್ನು ಪೀಡಿಸುತ್ತಾ ಚಿತ್ರಸೇನ, ವಿಕರ್ಣ, ಕೃತವರ್ಮ, ದುರ್ಮರ್ಷಣ, ಅವಂತಿಯ ಇಬ್ಬರು ಮಹಾರಥರು ಇವರಲ್ಲಿ ಒಬ್ಬೊಬ್ಬರನ್ನೂ ಕಂಕಪತ್ರವನ್ನು ಹೊಂದಿದ ಮೂರು-ಮೂರು ಬಾಣಗಳಿಂದ ಹೊಡೆದನು.

ಜಯದ್ರಥೋ ರಣೇ ಪಾರ್ಥಂ ಭಿತ್ತ್ವಾ ಭಾರತ ಸಾಯಕೈಃ ।
ಭೀಮಂ ವಿವ್ಯಾಧ ತರಸಾ ಚಿತ್ರಸೇನರಥೇ ಸ್ಥಿತಃ ॥೫॥

ಎಲೈ ಭಾರತನೇ, ಜಯದ್ರಥನು ಚಿತ್ರಸೇನನ ರಥದಲ್ಲಿ ಇದ್ದು ಯುದ್ಧದಲ್ಲಿ ಅರ್ಜುನನನ್ನು ಮೂರು ಬಾಣಗಳಿಂದ ಭೇದಿಸಿ ಶೀಘ್ರವಾಗಿ ಭೀಮಸೇನನ ಮೇಲೆ ಬಾಣ ಪ್ರಯೋಗವನ್ನು ಮಾಡಿದನು.

ಶಲ್ಯಶ್ಚ ಸಮರೇ ಜಿಷ್ಣುಂ ಕೃಪಶ್ಚ ರಥಿನಾಂ ವರಃ ।
ವಿವ್ಯಧಾತೇ ಮಹಾಬಾಹುಂ ಬಹುಧಾ ಮರ್ಮಭೇದಿಭಿಃ ॥೬॥

ರಥಿಶ್ರೇಷ್ಠರಾದ ಶಲ್ಯ ಮತ್ತು ಕೃಪರು ಯುದ್ಧದಲ್ಲಿ ಮಹಾಬಾಹುವಾದ ಅರ್ಜುನನನ್ನು ಮರ್ಮಭೇದಿಗಳಾದ ಬಾಣಗಳಿಂದ ಬಹುಪ್ರಕಾರದಿಂದ ಹೊಡೆದರು.

ಚಿತ್ರಸೇನಾದಯಶ್ಚೈವ ಪುತ್ರಾಸ್ತವ ವಿಶಾಂಪತೇ ।
ಪಂಚಭಿಃ ಪಂಚಭಿಸ್ತೂರ್ಣಂ ಸಂಯುಗೇ ನಿಶಿತೈಃ ಶರೈಃ ।
ಆಜಘ್ನುರರ್ಜುನಂ ಸಂಖೇ ಭೀಮಸೇನಂ ಚ ಮಾರಿಷ ॥೭॥

ಎಲೈ ರಾಜನೇ, ಪೂಜ್ಯನೇ, ಚಿತ್ರಸೇನ ಮೊದಲಾದ ನಿನ್ನ ಪುತ್ರರು ತೀಕ್ಷ್ಣವಾದ ಐದೈದು ಬಾಣಗಳಿಂದ ಯುದ್ಧದಲ್ಲಿ ಶೀಘ್ರವಾಗಿ ಅರ್ಜುನನನ್ನು ಮತ್ತು ಭೀಮಸೇನನನ್ನು ಹೊಡೆದರು.

ತೌ ತತ್ರ ರಥಿನಾಂ ಶ್ರೇಷ್ಠೌ ಕೌಂತೇಯೌ ಭರತರ್ಷಭೌ ।
ಅಪೀಡಯೇತಾಂ ಸಮರೇ ತ್ರಿಗರ್ತಾನಾಂ ಮಹದ್ಬಲಮ್ ॥೮॥

ಅಲ್ಲಿ ರಥಿಶ್ರೇಷ್ಠರೂ, ಭರತಶ್ರೇಷ್ಠರೂ ಆದ, ಕುಂತೀಪುತ್ರರಾದ ಭೀಮಾರ್ಜುನರು ತ್ರಿಗರ್ತರ ಮಹಾಸೈನ್ಯವನ್ನು ಯುದ್ಧದಲ್ಲಿ ಪೀಡಿಸಿದರು.

ಸುಶರ್ಮಾಪಿ ರಣೇ ಪಾರ್ಥಂ ವಿದ್ವಾ ಬಹುಭರಾಯಸೈಃ ।
ನನಾದ ಬಲವನ್ನಾದಂ ನಾದಯನ್ ವೈ ನಭಸ್ತಳಮ್ ॥೯॥

ಸುಶರ್ಮನೂ ಸಹ ಯುದ್ಧದಲ್ಲಿ ಅನೇಕ ಕಬ್ಬಿಣದ ಬಾಣಗಳಿಂದ ಅರ್ಜುನನನ್ನು ಹೊಡೆದು ನಭಸ್ತಳವು ಪ್ರತಿಧ್ವನಿಸುವಂತೆ ಬಲವಾದ ನಾದವನ್ನು ಮಾಡಿದನು.

ಅನ್ಯೇ ಚ ರಥಿನಃ ಶೂರಾ ಭೀಮಸೇನಧನಂಜಯೌ ।
ವಿವ್ಯಧುರ್ನಿಶಿತೈರ್ಬಾಣೈ ರುಗ್ಮಪುಂಖೈರಜಿಹ್ಮಗೈಃ ॥೧೦॥

ಉಳಿದ ಶೂರರಾದ ರಥಿಕರೂ ಸಹ ಸುವರ್ಣಪುಂಖಿಗಳನ್ನು ಹೊಂದಿದ, ನೇರವಾಗಿ ಸಾಗುವ ತೀಕ್ಷ್ಣವಾದ ಬಾಣಗಳಿಂದ ಭೀಮಾರ್ಜುನರನ್ನು ಹೊಡೆದರು.

ತೇಷಾಂ ತು ರಥಿನಾಂ ಮಧ್ಯೇ ಕೌಂತೇಯೌ ರಥಿನಾಂ ವರೌ ।
ಕ್ರೀಡಮಾನೌ ರಥೋದಾರೌ ಚಿತ್ರರೂಪೌ ವ್ಯರೋಚತಾಮ್ ।
ಆಮಿಷೇಪ್ಸೂ ಗವಾಂ ಮಧ್ಯೇ ಸಿಂಹಾವಿವ ಬಲೋತ್ಕಟೌ ॥೧೧॥

ಆ ರಥಿಕರ ಮಧ್ಯೆ ರಥಿಶ್ರೇಷ್ಠರಾದ ಕುಂತೀಪುತ್ರರು ಬಲೋತ್ಕಟವಾದ, ಮಾಂಸ ಅಭಿಲಾಷೆಯುಳ್ಳ ಸಿಂಹಗಳು ಗೋವುಗಳ ಮಧ್ಯದಲ್ಲಿ ಸಂಚರಿಸಿದಂತೆ ವಿಚಿತ್ರರೂಪವನ್ನು ಧರಿಸಿ, ಶ್ರೇಷ್ಠವಾದ ರಥದಲ್ಲಿದ್ದು ಆಟವಾಡುತ್ತಾ ಶೋಭಿಸಿದರು.

ಛಿತ್ತ್ವಾ ಧನೂಂಷಿ ವೀರಾಣಾಂ ಶರಾಂಶ್ಚ ಬಹುಧಾ ರಣೇ ।
ಪಾತಯಾಮಾಸತುರ್ವೀರೌ ಶಿರಾಂಸಿ ಶತಶೋ ನೃಣಾಮ್ ॥೧೨॥

ವೀರರಾದ ಅವರು ಯುದ್ಧದಲ್ಲಿ ಶತ್ರುವೀರರ ಧನುಸ್ಸುಗಳನ್ನು ಮತ್ತು ಬಾಣಗಳನ್ನು ಅನೇಕ ರೀತಿಯಾಗಿ ಕತ್ತರಿಸಿ, ಯೋಧರ ಶಿರಸ್ಸುಗಳನ್ನು ನೂರರ ಸಂಖ್ಯೆಯಲ್ಲಿ ಉರುಳಿಸಿದರು.

ರಥಾಶ್ಚ ಬಹವೋ ಭಗ್ನಾ ಹಯಾಶ್ಚ ಶತಶೋ ಹತಾಃ ।
ಗಜಾಶ್ಚ ಸಗಜಾರೋಹಾಃ ಪೇತುರುರ್ವ್ಯಾಂ ಮಹಾಮೃಧೇ ॥೧೩॥

ಅನೇಕ ರಥಗಳು ಭಗ್ನವಾದವು. ನೂರಾರು ಅಶ್ವಗಳು ಹತವಾದವು. ಆ ದೊಡ್ಡ ಯುದ್ಧದಲ್ಲಿ ಗಜಾರೋಹಿಗಳಿಂದ ಸಹಿತವಾದ ಗಜಗಳು ಭೂಮಿಯ ಮೇಲೆ ಉರುಳಿದವು.

ರಥಿನಃ ಸಾದಿನಶ್ಚೈವ ತತ್ರ ತತ್ರ ನಿಪೂದಿತಾಃ ।
ದೃಶ್ಯಂತೇ ಬಹುಧಾ ರಾಜನ್ ವೇಷ್ಟಮಾನಾಃ ಸಮಂತತಃ ॥೧೪॥

ಎಲೈ ರಾಜನೇ, ರಥಿಕರು ಮತ್ತು ಅಶ್ವಾರೋಹಿಗಳು ಪ್ರಹಾರವನ್ನು ಹೊಂದಿ ಅಲ್ಲಲ್ಲಿ ಎಲ್ಲಾ ಕಡೆಗಳಲ್ಲಿಯೂ ಹೊರಳಾಡುತ್ತಿರುವುದು ಅನೇಕ ಪ್ರಕಾರದಲ್ಲಿ ಕಂಡಿತು.

ಹತೈರ್ಗಜಪದಾತ್ಯೋಘೈರ್ವಾಜಿಭಿಶ್ಚ ನಿಪೂದಿತೈಃ ।
ರಥೈಶ್ಚ ಬಹುಧಾ ಭಗ್ನೈಃ ಸಮಾಸ್ತೀರ್ಯತ ಮೇದಿನೀ ॥೧೫॥

ಹತವಾದ ಗಜ-ಪದಾತಿಗಳ ಸಮೂಹದಿಂದಲೂ, ಹತವಾದ ಅಶ್ವಗಳಿಂದಲೂ, ಅನೇಕ ರೀತಿಯಲ್ಲಿ ಭಗ್ನವಾದ ರಥಗಳಿಂದಲೂ ರಣಭೂಮಿಯು ಹರಡಲ್ಪಟ್ಟಿತು.

ಛತ್ರೈಶ್ಚ ಬಹುಧಾ ಛಿನ್ನೈರ್ಧ್ವಜೈಶ್ಚ ವಿನಿಪಾತಿತೈಃ ।
ಅಂಕುಶೈರಪವಿದ್ಧೈಶ್ಚ ಪರಿಸ್ತೋಮೈಶ್ಚ ಭಾರತ ॥೧೬॥

ಕೇಯೂರೈರಂಗದೈರ್ಹಾರೈ ರಾಂಕವೈರ್ಮರ್ಮಭಿತ್ತೈಸ್ತಥಾ ।
ಉಷ್ಣೀಷೈರಪವಿದ್ಧೈಶ್ಚ ಚಾಮರವ್ಯಜನೈರಪಿ ॥೧೭॥

ತತ್ರ ತತ್ರಾಪವಿದ್ಧೈಶ್ಚ ಬಾಹುಭಿಶ್ಚಂದನೋಕ್ಷಿತೈಃ ।
ಊರುಭಿಶ್ಚ ನರೇಂದ್ರಾಣಾಂ ಸಮಾಸ್ತೀರ್ಯತ ಮೇದಿನೀ ॥೧೮॥

ಎಲೈ ಭಾರತನೇ, ಅನೇಕ ರೀತಿಯಲ್ಲಿ ಹರಿದ ಛತ್ರಗಳು, ಬಿದ್ದ ಧ್ವಜಗಳು, ಎಸೆದ ಅಂಕುಶಗಳು ಮತ್ತು ಪರಿಸ್ತೋಮಗಳು, ಕೇಯೂರಾಂಗದ-ಹಾರಗಳು, ತುಳಿಯಲ್ಪಟ್ಟ ಶಾಲು, ಹಾಸುಗಳು, ಎಸೆದ ಉಷ್ಣೀಷಗಳು ಮತ್ತು ಚಾಮರ-ವ್ಯಜನಗಳು, ಅಲ್ಲಲ್ಲಿ ಪರಿತ್ಯಜಿಸಿದ ಚಂದನಲೇಪಿತವಾದ ಬಾಹುಗಳು, ನರೇಂದ್ರರ ತೊಡೆಗಳು ಇವುಗಳಿಂದ ಭೂಮಿಯು ಹರಡಿ ಹೋಯಿತು.

ತತ್ರಾದ್ಭುತಮಪಶ್ಯಾಮ ರಣೇ ಪಾರ್ಥಸ್ಯ ವಿಕ್ರಮಮ್ ।
ಶರೈಃ ಸಂವಾರ್ಯ ತಾನ್ ವೀರಾನ್ ನಿಜಘಾನ ಬಲಂ ತವ ॥೧೯॥

ಅಲ್ಲಿ ಎಲ್ಲ ವೀರರನ್ನು ತನ್ನ ಬಾಣಗಳಿಂದ ತಡೆದು, ನಿನ್ನ ಸೈನ್ಯವನ್ನು ಸಂಹರಿಸುತ್ತಿದ್ದ ಅರ್ಜುನನ ಅದ್ಭುತವಾದ ರಣವಿಕ್ರಮವನ್ನು ನಾವು ನೋಡಿದೆವು.

ಪುತ್ರಸ್ತು ತವ ತಂ ದೃಷ್ಟ್ವಾ ಭೀಮಾರ್ಜುನಸಮಾಗಮಮ್ ।
ಗಾಂಗೇಯಸ್ಯ ರಥಾಭ್ಯಾಶಮುಪಜಗ್ಮೇ ಮಹಾಭಯೇ ॥೨೦॥

ನಿನ್ನ ಪುತ್ರನು ಭೀಮಾರ್ಜುನರ ಆ ಸಮಾಗಮವನ್ನು ನೋಡಿ ಮಹಾಭಯವು ಉಂಟಾಗುತ್ತಿರಲು ಭೀಷ್ಮರ ರಥದ ಸಮೀಪಕ್ಕೆ ಬಂದನು.

ಕೃಪಶ್ಚ ಕೃತವರ್ಮಾ ಚ ಸೈಂಧವಶ್ಚ ಜಯದ್ರಥಃ ।
ವಿಂದಾನುವಿಂದಾವಾವಂತ್ಯಾವಾಜಗ್ಮುಃ ಸಂಯುಗಂ ತದಾ ॥೨೧॥

ಆಗ ಕೃಪರು, ಕೃತವರ್ಮ, ಸೈಂಧವನಾದ ಜಯದ್ರಥ, ಅವಂತಿಯ ವಿಂದಾನುವಿಂದರು ಆ ಯುದ್ಧದ ಸ್ಥಳಕ್ಕೆ ಬಂದರು.

ತತೋ ಭೀಮೋ ಮಹೇಷ್ವಾಸಃ ಫಲ್ಗುನಶ್ಚ ಮಹಾರಥಃ ।
ಕೌರವಾಣಾಂ ಚಮೂಂ ಘೋರಾಂ ಭೃಶಂ ದುದ್ರುವತೂ ರಣೇ ॥೨೨॥

ಆಗ ಮಹಾಧನುರ್ಧಾರಿಯಾದ ಭೀಮನೂ, ಮಹಾರಥನಾದ ಅರ್ಜುನನೂ ಕೌರವರ ಘೋರವಾದ ಸೇನೆಯ ಕಡೆಗೆ ಯುದ್ಧದಲ್ಲಿ ವೇಗದಿಂದ ಧಾವಿಸಿದರು.

ತತೋ ಬರ್ಹಿಣವಾಜಾನಾಮಯುತಾನ್ಯರ್ಬುದಾನಿ ಚ ।
ಧನಂಜಯರಥೇ ತೂರ್ಣಂ ಪಾತಯಂತಿ ಸ್ಮ ಸಂಯುಗೇ ॥೨೩॥

ಆಗ ನಿನ್ನ ಯೋಧರು ನವಿಲುಗರಿಯ ರೆಕ್ಕೆಗಳನ್ನು ಹೊಂದಿದ್ದ ಹತ್ತುಸಾವಿರ ಬಾಣಗಳನ್ನು ಅರ್ಜುನನ ರಥದ ಮೇಲೆ ಶೀಘ್ರವಾಗಿ ಪ್ರಯೋಗಿಸಿ ಬೀಳಿಸಿದರು.

ತತಸ್ತಾನ್ ಶರಜಾಲೇನ ಸನ್ನಿವಾರ್ಯ ಮಹಾರಥಾನ್ ।
ಪಾರ್ಥಃ ಸಮಂತಾತ್ ಸಮರೇ ಪ್ರೇಷಯಾಮಾಸ ಮೃತ್ಯವೇ ॥೨೪॥

ಆಗ ಅರ್ಜುನನು ಆ ಎಲ್ಲ ಮಹಾರಥರನ್ನು ತನ್ನ ಬಾಣ ಸಮೂಹದಿಂದ ನಿವಾರಿಸಿ ಎಲ್ಲ ಕಡೆ ಇದ್ದ ಯೋಧರನ್ನು ಮೃತ್ಯುಲೋಕಕ್ಕೆ ಕಳುಹಿಸಿದನು.

ಶಲ್ಯಸ್ತು ಸಮರೇ ಜಿಷ್ಣುಂ ಕ್ರೀಡನ್ನಿವ ಮಹಾರಥಃ ।
ಆಜಘಾನೋರಸಿ ಕ್ರುದ್ಧೋ ಭಲ್ಲೈಃ ಸನ್ನತಪರ್ವಭಿಃ ॥೨೫॥

ಮಹಾರಥನೂ, ಕ್ರುದ್ಧನೂ ಆದ ಶಲ್ಯನಾದರೋ ಆಡುವವನಂತೆ ಯುದ್ಧದಲ್ಲಿ ಅರ್ಜುನನಿಗೆ ಬಾಗಿದ ತುದಿಯುಳ್ಳ ಭಲ್ಲಗಳಿಂದ ಅವನ ವಕ್ಷಸ್ಥಲದಲ್ಲಿ ಹೊಡೆದನು.

ತಸ್ಯ ಪಾರ್ಥೋ ಧನುಶ್ಛಿತ್ತ್ವಾ ಹಸ್ತಾವಾಪಂ ಚ ಪಂಚಭಿಃ ।
ಅಥೈನಂ ಸಾಯಕೈಸ್ತೀಕ್ಷ್ಣೈರ್ಭೃಶಂ ವಿವ್ಯಾಧ ಮರ್ಮಣಿ ॥೨೬॥

ಅರ್ಜುನನು ಐದು ಬಾಣಗಳಿಂದ ಅವನ ಧನುಸ್ಸನ್ನೂ ಮತ್ತು ಬತ್ತಳಿಕೆಯನ್ನೂ ಕತ್ತರಿಸಿ, ಅನಂತರ ತೀಕ್ಷ್ಣವಾದ ಬಾಣಗಳಿಂದ ಅವನನ್ನು ಮರ್ಮಗಳಲ್ಲಿ ಚೆನ್ನಾಗಿ ಹೊಡೆದನು.

ಅಥಾನ್ಯದ್ ಧನುರಾದಾಯ ಸಮರೇ ಭಾರಸಾಧನಮ್ ।
ಮದ್ರೇಶ್ವರೋ ರಣೇ ಜಿಷ್ಣುಂ ತಾಡಯಾಮಾಸ ರೋಷಿತಃ ॥೨೭॥

ತ್ರಿಭಿಃ ಶರೈರ್ಮಹಾರಾಜ ವಾಸುದೇವಂ ಚ ಪಂಚಭಿಃ ।
ಭೀಮಸೇನಂ ಚ ನವಭಿರ್ಬಾಹ್ವೋರುರಸಿ ಚಾರ್ಪಯತ್ ॥೨೮॥

ಎಲೈ ಮಹಾರಾಜನೇ, ಆಗ ಮದ್ರಾಧಿಪತಿಯಾದ ಶಲ್ಯನು ಯುದ್ಧದಲ್ಲಿ ಬಹುಕಾರ್ಯವನ್ನು ಮಾಡುವ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ರೋಷದಿಂದ ಕೂಡಿದವನಾಗಿ ಅರ್ಜುನನನ್ನು ಮೂರು ಬಾಣಗಳಿಂದಲೂ, ಕೃಷ್ಣನನ್ನು ಐದು ಬಾಣಗಳಿಂದಲೂ ಮತ್ತು ಭೀಮಸೇನನನ್ನು ಒಂಬತ್ತು ಬಾಣಗಳಿಂದಲೂ ಬಾಹುಗಳಲ್ಲಿಯೂ ಮತ್ತು ಎದೆಯಲ್ಲಿಯೂ ಹೊಡೆದನು.

ತತೋ ದ್ರೋಣೋ ಮಹಾರಾಜ ಮಾಗಧಶ್ಚ ಮಹಾರಥಃ ।
ದುರ್ಯೋಧನಸಮಾದಿಷ್ಟೌ ತಂ ದೇಶಮುಪಜಗ್ಮತುಃ ॥೨೯॥

ಯತ್ರ ಪಾರ್ಥೋ ಮಹಾರಾಜ ಭೀಮಸೇನಶ್ಚ ಪಾಂಡವಃ ।
ಕೌರವ್ಯಸ್ಯ ಮಹಾಸೇನಾಂ ಜಘ್ನತುಸ್ತೌ ಮಹಾರಥೌ ॥೩೦॥

ಎಲೈ ಮಹಾರಾಜನೇ, ಆಗ ದ್ರೋಣರು ಮತ್ತು ಮಹಾರಥನಾದ ಮಾಗಧನೂ ಸಹ ದುರ್ಯೋಧನನಿಂದ ಆಜ್ಞಪ್ತರಾಗಿ ಎಲ್ಲಿ ಮಹಾರಥರಾದ ಭೀಮಾರ್ಜುನರು ಕೌರವರ ಮಹಾಸೇನೆಯನ್ನು ನಾಶಮಾಡುತ್ತಿದ್ದರೋ ಆ ಸ್ಥಳಕ್ಕೆ ಬಂದರು.

ಜಯತ್ಸೇನಸ್ತು ಸಮರೇ ಭೀಮಂ ಭೀಮಾಯುಧಂ ಯುವಾ ।
ವಿವ್ಯಾಧ ನಿಶಿತೈರ್ಬಾಣೈರಷ್ಟಭಿರ್ಭರತರ್ಷಭ ॥೩೧॥

ಎಲೈ ಭರತಶ್ರೇಷ್ಠನೇ, ಮಾಗಧ ರಾಜನೂ, ಯುವಕನೂ ಆದ ಜಯತ್ಸೇನನು ಯುದ್ಧದಲ್ಲಿ ಭಯಂಕರವಾದ ಆಯುಧವನ್ನು ಹೊಂದಿದ್ದ ಭೀಮನನ್ನು ತೀಕ್ಷ್ಣವಾದ ಎಂಟು ಬಾಣಗಳಿಂದ ಹೊಡೆದನು.

ತಂ ಭೀಮೋ ದಶಭಿರ್ವಿದ್ಧ್ವಾ ಪುನರ್ವಿವ್ಯಾಧ ಸಪ್ತಭಿಃ ।
ಸಾರಥಿಂ ಚಾಸ್ಯ ಭಲ್ಲೇನ ರಥನೀಡಾದಪಾಹರತ್ ॥೩೨॥

ಭೀಮನು ಹತ್ತು ಬಾಣಗಳಿಂದ ಅವನನ್ನು ಹೊಡೆದು ಪುನಃ ಏಳು ಬಾಣಗಳಿಂದ ಹೊಡೆದನು. ಅವನ ಸಾರಥಿಯನ್ನು ಭಲ್ಲದಿಂದ ರಥದ ಮುಂಭಾಗದಿಂದ ಕೆಡವಿದನು.

ಉದ್ಭ್ರಾಂತೈಸ್ತುರಗೈಃ ಸೋಽಥ ದ್ರವಮಾಣೈಃ ಸಮಂತತಃ ।
ಮಾಗಧೋಽಪಹೃತೋ ರಾಜಾ ಸರ್ವಸೈನ್ಯಸ್ಯ ಪಶ್ಯತಃ ॥೩೩॥

ಗಾಬರಿಗೊಂಡ ಅವನ ಅಶ್ವಗಳು ಎಲ್ಲಕಡೆಗಳಲ್ಲಿಯೂ ಓಡುತ್ತಿರಲು ಮಾಗಧನಾದ ಬೃಹದ್ಬಲನು ಎಲ್ಲ ಸೈನ್ಯವು ನೋಡುತ್ತಿರುವಂತೆಯೇ ಅಶ್ವಗಳಿಂದ ದೂರ ಎಳೆಯಲ್ಪಟ್ಟನು.

ದ್ರೋಣಸ್ತು ವಿವರಂ ಲಬ್ಧ್ವಾ ಭೀಮಸೇನಂ ಶಿಲೀಮುಖೈಃ ।
ವಿವ್ಯಾಧ ಬಾಹ್ಯೈಃ ಸುಶಿತೈಃ ಪಂಚಭಿಷ್ಪ್ಯಾ ತಮಾಯಸೈಃ ॥೩೪॥

ದ್ರೋಣರಾದರೋ ಒಂದು ಅವಕಾಶವನ್ನು ಹೊಂದಿ ಭೀಮಸೇನನನ್ನು ಅಯೋಮುಖವಾದ ಮತ್ತು ತೀಕ್ಷ್ಣವಾದ ತಿರೀಮುಖವುಳ್ಳ ಬಾಣಗಳಿಂದ ಹೊಡೆದರು.

ತಂ ಭೀಮಃ ಸಮರಶ್ಲಾಘೀ ಗುರುಂ ಪಿತೃಸಮಂ ರಣೇ ।
ವಿವ್ಯಾಧ ಸಪ್ತಧಾರೈಶ್ಚ ಹಸ್ತ್ಯಶ್ವ ಚ ಭಾರತ ॥೩೫॥

ಎಲೈ ಧಾರತನೇ, ಯುದ್ಧವನ್ನು ಹೊಗಳುವ ಭೀಮಸೇನನು ಪಿತೃಸಮರೂ ಮತ್ತು ಗುರುಗಳೂ ಆದ ಅವರನ್ನು ಏಂಟು ಭಲ್ಲಗಳಿಂದ ಹೊಡೆದು, ಪುನಃ ಅರವತ್ತು ಭಲ್ಲಗಳಿಂದ ಹೊಡೆದನು.

ಅರ್ಜುನಸ್ತು ಸುಷರ್ಮಾಣಂ ವಿದ್ಧ್ವಾ ಬಹುಭಿರಾಯಸೈಃ ।
ದೃಢಮಶ್ವ ಕ್ಷಪ್ತ್ವಾ ಚೈವ ಸೂತಾಪ್ತಾಗಂ ಯಥಾನಿಲಃ ॥೩೬॥

ಅರ್ಜುನನಾದರೋ ಅನೇಕ ಕಬ್ಬಿಣದ ಬಾಣಗಳಿಂದ ಸುಶರ್ಮನನ್ನು ಹೊಡೆದು ದೃಢವಾಗಿಯು ಮಹಾವೇಗದಿಂದ ಹಾರುವಂತೆ ಅವನ ಕೈಗವನ್ನು ಹಾರಿಸಿದನು.

ತತೋ ಭೀಷ್ಮಶ್ಚ ರಾಜಾ ಚ ಸೌಬಲಶ್ಚ ಬೃಹದ್ಬಲಃ ।
ಅಭ್ಯದ್ರವಂತ ಸಂಕ್ರುದ್ಧಾ ಭೀಮಸೇನಪುರಂದಯೆ ॥೩೭॥

ಅನಂತರ ಭೀಷ್ಮರೂ ಮತ್ತು ಕೋಸಲರಾಜನಾದ ಬೃಹದ್ಬಲನೂ ಬಹಳ ಕ್ರುದ್ಧರಾಗಿ ಭೀಮಾರ್ಜುನರ ಕಡೆಗೆ ಧಾವಿಸಿದರು.

ತತೋ ಪಾಂಡವಾಃ ಶೂರಾ ಧೃಷ್ಟದ್ಯುಮ್ನಶ್ಚ ಪಾರ್ಷತಃ ।
ಅಭ್ಯದ್ರವನ್ ರಣೇ ಭೀಷ್ಮಂ ವ್ಯಾದಿತಾಸ್ಯಮಿವಾಂತಕಮ್ ॥೩೮॥

ಆಗಲೇ ಶೂರರಾದ ಪಾಂಡವರೂ ಮತ್ತು ಪಾರ್ಷತನಾದ ಧೃಷ್ಟದ್ಯುಮ್ನನೂ ಬಾಯನ್ನು ತೆರೆದ ಯಮನಂತಿದ್ದ ಭೀಷ್ಮರ ಕಡೆಗೆ ರಣರಂಗದಲ್ಲಿ ಧಾವಿಸಿದರು.

ತಮಿಂದೀ ಪು ಸಮಾಜಾದ್ಯ ಭಾರತಾನಾಂ ಪಿತಾಮಹಮ್ ।
ಅಭ್ಯದ್ರವನ್ ಸಂಯುಗೇಷ್ಟ ಧಯಂ ತ್ಯಕ್ತ್ವಾ ಯತವ್ರತಮ್ ॥೩೯॥

ಶಿಖಂಡಿಯು ಸಂತೋಷಗೊಂಡು, ಭಯವನ್ನು ತ್ಯಜಿಸಿ ನಿಯತವ್ರತರಾದ ಭಾರತ ಪಿತಾಮಹರ ಕಡೆಗೆ ಧಾವಿಸಿ ಅಲ್ಲಿಸೇರಿದನು.

ಯುಧಿಷ್ಠಿರಮುಖಾಃ ಪಾರ್ಥಾಃ ಪುರಸ್ಕೃತ್ಯ ಶಿಖಂಡಿನಮ್ ।
ಅಯೋಧಯನ್ ರಣೇ ಭೀಷ್ಮಂ ಸಂಹತಾಃ ಸಹ ಸೃಂಜಯೈಃ ॥೪೦॥

ಯುಧಿಷ್ಠಿರ ಮೊದಲಾದ ಪಾಂಡವರು ಶಿಖಂಡಿಯನ್ನು ಮುಂದೆ ಮಾಡಿಕೊಂಡು ಸೃಂಜಯರಿಂದ ಸಹಿತರಾಗಿ ಭೀಷ್ಮರ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ತಥೈವ ತಾವಕಾಃ ಸರ್ವೇ ಪುರಸ್ಕೃತ್ಯ ಯತವ್ರತಮ್ ।
ಶಿಖಂಡಿಪ್ರಮುಖಾನ್ ಪಾರ್ಥಾನ್ ಯೋಧಯಂತಿ ಸ್ಮ ಸಂಯುಗೇ ॥

ಹಾಗೆಯೇ ನಿನ್ನವರೆಲ್ಲರೂ ಯತವ್ರತರಾದ ಭೀಷ್ಮರನ್ನು ಮುಂದೆ ಮಾಡಿಕೊಂಡು, ಶಿಖಂಡಿಯನ್ನು ಮುಂದೆ ಮಾಡಿಕೊಂಡ ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ತತಃ ಪ್ರವವೃತೇ ಯುದ್ಧಂ ಕೌರವಾಣಾಂ ಭಯಾವಹಮ್ ।
ತತ್ರ ಪಾಂಡುಸುತೈಃ ಸಾರ್ಧಂ ಭೀಷ್ಮಸ್ಯ ವಿಜಯಂ ಪ್ರತಿ ॥೪೨॥

ಅನಂತರ ಭೀಷ್ಮರ ವಿಜಯದ ವಿಷಯದಲ್ಲಿ ಪಾಂಡವರಿಗೂ ಮತ್ತು ಕೌರವರಿಗೂ ಭಯಂಕರವಾದ ಯುದ್ಧವು ನಡೆಯಿತು.

ತಾವಕಾನಾಂ ರಣೇ ಭೀಷ್ಮೋ ಗ್ಲಹ ಆಸೀದ್ ವಿಶಾಂಪತೇ ।
ತತ್ರ ಹಿ ದ್ಯೂತಮಾಯತ್ತಂ ವಿಜಯಾಯೇತರಾಯ ವಾ ॥೪೩॥

ಎಲೈ ರಾಜನೇ, ನಿನ್ನವರಿಗೆ ಯುದ್ಧದಲ್ಲಿ ಭೀಷ್ಮರೇ ಪಣವಾಗಿದ್ದರು. ಯುದ್ಧವೆಂಬ ದ್ಯೂತವು ಸೋಲು-ಗೆಲುವಿಗಾಗಿ ಅವರನ್ನೇ ಅವಲಂಬಿಸಿದ್ದಿತು.

ಧೃಷ್ಟದ್ಯುಮ್ನೋ ಮಹಾರಾಜ ಸರ್ವಸೈನ್ಯಾನ್ಯಚೋದಯತ್ ।
ಅಭಿದ್ರವತ ಗಾಂಗೇಯಂ ಮಾ ಭೈಷ್ಟ ನರಸತ್ತಮಾಃ ॥೪೪॥

ಎಲೈ ಮಹಾರಾಜನೇ, ಧೃಷ್ಟದ್ಯುಮ್ನನು ಎಲ್ಲಸೈನ್ಯವನ್ನು ಕುರಿತು ಎಲೈ ನರಶ್ರೇಷ್ಠರೇ, ಭೀಷ್ಮರ ಕಡೆಗೆ ಮುನ್ನುಗ್ಗಿ, ಹೆದರಬೇಡಿ ಎಂದು ಪ್ರಚೋದಿಸಿದನು.

ಸೇನಾಪತಿವಚಃ ಶ್ರುತ್ವಾ ಪಾಂಡವಾನಾಂ ವರೂಥಿನೀ ।
ಭೀಷ್ಮಮೇವಾಭ್ಯಯಾತ್ ತೂರ್ಣಂ ಪ್ರಾಣಾಂಸ್ಯಕ್ತ್ವಾ ಮಹಾಹವೇ ॥

ಸೇನಾಪತಿಯ ಮಾತುಗಳನ್ನು ಕೇಳಿ ಪಾಂಡವರ ಸೈನ್ಯವು ಆ ದೊಡ್ಡ ಯುದ್ಧದಲ್ಲಿ ಪ್ರಾಣಗಳ ಹಂಗನ್ನು ತೊರೆದು ಭೀಷ್ಮರ ಕಡೆಗೇ ಶೀಘ್ರವಾಗಿ ಮುನ್ನುಗ್ಗಿದವು.

ಭೀಷ್ಮೋಽಪಿ ರಥಿನಾಂ ಶ್ರೇಷ್ಠಃ ಪ್ರತಿಜಗ್ರಾಹ ತಾಂ ಚಮೂಮ್ ।
ಆಪತಂತೀಂ ಮಹಾರಾಜ ವೇಲಾಮಿವ ಮಹೋದಧೇಃ ॥೪೬॥

ಎಲೈ ಮಹಾರಾಜನೇ, ಭೀಷ್ಮರೂ ಸಹ ತನ್ನ ಕಡೆಗೆ ಬರುತ್ತಿದ್ದ ಆ ಸೈನ್ಯವನ್ನು ಮಹೋದಧಿಯ ಜಲಪ್ರವಾಹವನ್ನು ತೀರವು ಸ್ವೀಕರಿಸಿದಂತೆ ಆ ಸೈನ್ಯವನ್ನು ಸ್ವೀಕರಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಏಕಾದಶಾಧಿಕಶತತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಏಕಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನೂರ ಹನ್ನೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹನ್ನೆರಡನೆಯ ಅಧ್ಯಾಯ

ಭೀಷ್ಮರಿಗೆ ಯುದ್ಧದಲ್ಲಿ ನಿರ್ವೇದ. ಯುಧಿಷ್ಠಿರನನ್ನು ಕುರಿತು ಅದರ ಸೂಚನೆ. ಘೋರವಾದ ಯುದ್ಧ.

ಧೃತರಾಷ್ಟ್ರಃ

ಕಥಂ ಶಾಂತನವೋ ಭೀಷ್ಮೋ ದಶಮೇಽಹನಿ ಸಂಜಯ ।
ಅಯುಧ್ಯತ ಮಹಾವೀರ್ಯೈಃ ಪಾಂಡವೈಃ ಸಹಸೃಂಜಯೈಃ ॥೧॥

ಕುರಮಶ್ಚ ಕಥಂ ಯುದ್ಧೇ ಪಾಂಡವಾನ್ ಪ್ರತ್ಯವಾರಯನ್ ।
ಆಚಕ್ಷ್ವ ಮೇ ಮಹಾಯುದ್ಧಂ ಭೀಷ್ಮಸ್ಯಾಹವಶೋಭನಃ ॥೨॥

ಧೃತರಾಷ್ಟ್ರ- ಎಲೈ ಸಂಜಯನೇ, ಹತ್ತನೆಯ ದಿವಸದಲ್ಲಿ ಮಹಾವರಾಕ್ರಮ-ಶಾಲಿಗಳಾದ, ಶಂತನುಪುತ್ರರಾದ ಭೀಷ್ಮರು ಪಾಂಡವರ ಮತ್ತು ಸೃಂಜಯರ ಜೊತೆಯಲ್ಲಿ ಹೇಗೆ ಯುದ್ಧವನ್ನು ಮಾಡಿದರು? ಕುರುಗಳೂ ಸಹ ಯುದ್ಧದಲ್ಲಿ ಹೇಗೆ ಪಾಂಡವರನ್ನು ತಡೆದರು? ಯುದ್ಧದಲ್ಲಿ ಶೋಭಿಸುವ ಭೀಷ್ಮರ ಮಹಾಯುದ್ಧವನ್ನು ನನಗೆ ಹೇಳು.

ಸಂಜಯಃ

ಕುರವಃ ಪಾಂಡವೈಃ ಸಾರ್ಧಂ ಯಥಾಯುದ್ಧಂತ ಭಾರತ ।
ಯಥಾ ಚ ತದಭೂದ್ ಯುದ್ಧಂ ತತ್ತೇ ವಕ್ಷ್ಯಾಮಿ ಶೃಣ್ವತಃ ॥೩॥

ಸಂಜಯ- ಎಲೈ ಭಾರತನೇ, ಕುರುಗಳು ಪಾಂಡವರ ಜೊತೆಯಲ್ಲಿ ಹೇಗೆ ಯುದ್ಧವನ್ನು ಮಾಡಿದರು ಮತ್ತು ಆ ಯುದ್ಧವು ಹೇಗೆ ನಡೆಯಿತು ಎಂದು ನಿನಗೆ ನಾನು ಹೇಳುವೆನು, ಕೇಳುಮನವಾಗು.

ಪ್ರೇಷಿತಾಃ ಪರಲೋಕಾಯ ಪರಮಾಸ್ತ್ರೈಃ ಕಿರೀಟಿನಾ ।
ಅಹನ್ಯಹನಿ ಸಂಪ್ರಾಪ್ತಾಸ್ತವಕಾನಾಂ ರಥವ್ರಜಾಃ ॥೪॥

ಪ್ರತಿದಿನವೂ ತನ್ನ ಬಳಿಗೆ ಬಂದ ನಿನ್ನ ರಥಸಮೂಹಗಳನ್ನು ಅರ್ಜುನನು ಪರಮಾಸ್ತ್ರಗಳಿಂದ ಪರಲೋಕಕ್ಕೆ ಕಳುಹಿಸಿದನು.

ಯಥಾಪ್ರತಿಜ್ಞಂ ಕೌರವ್ಯಃ ಸ ಚಾಪಿ ಸಮಿತಿಂಜಯಃ ।
ಪಾರ್ಥಾನಾಮಕರೋದ್ ಭೀಷ್ಮಃ ಸತತಂ ಸಮಿತಿಕ್ಷಯಮ್ ॥೫॥

ತಮ್ಮ ಪ್ರತಿಜ್ಞೆಗೆ ಅನುಗುಣವಾಗಿ ಸೈನ್ಯಕ್ಷಯಕಾರಿಯಾದ ಕೌರವ್ಯರಾದ ಆ ಭೀಷ್ಮರೂ ಸಹ ಸತತವಾಗಿ ಪಾಂಡವರ ಸೇನೆಯನ್ನು ನಾಶಮಾಡಿದರು.

ಕುರುಭಿಃ ಸಹಿತಂ ಭೀಷ್ಮಂ ಯುಧ್ಯಮಾನಂ ಮಹಾರಥಮ್ ।
ಅರ್ಜುನಂ ಚ ಸಪಾಂಚಾಲ್ಯಂ ದೃಷ್ಟ್ವಾ ಸಂಶಯಿತಾ ಜನಾಃ ॥೬॥

ಕೌರವರ ಜೊತೆಯಲ್ಲಿ ಯುದ್ಧ ಮಾಡುವ ಭೀಷ್ಮರನ್ನೂ, ಪಾಂಚಾಲರ ಜೊತೆಯಲ್ಲಿ ಯುದ್ಧ ಮಾಡುವ ಮಹಾರಥನಾದ ಅರ್ಜುನನನ್ನೂ ನೋಡಿ ಜನರಿಗೆ ಯಾರಿಗೆ ಜಯ ಎಂಬ ವಿಷಯದಲ್ಲಿ ಸಂಶಯವುಂಟಾಯಿತು.

ದಶಮೇಽಹನಿ ತಸ್ಮಿಂಸ್ತು ಭೀಷ್ಮಾರ್ಜುನಸಮಾಗಮೇ ।
ಅವರ್ತತ ಮಹಾರೌದ್ರಃ ಸತತಂ ಸಮಿತಿಕ್ಷಯಃ ॥೭॥

ಆ ಹತ್ತನೆಯ ದಿವಸದಲ್ಲಿ ಭೀಷ್ಮಾರ್ಜುನರ ಸಮಾಗಮವಾಗುತ್ತಿರಲು ಸತತವಾಗಿ ಮಹಾಘೋರವಾದ ಸೇನಾಕ್ಷಯ ಉಂಟಾಯಿತು.

ತಸ್ಮಿನ್ನಯುತಶೋ ರಾಜನ್ ಭೂಯಶ್ಚ ಸ ಪರಂತಪಃ ।
ಭೀಷ್ಮಃ ಶಾಂತನವೋ ಯೋಧಾನ್ ಜಘಾನ ಪರಮಾಸ್ತ್ರವಿತ್ ॥೮॥

ಎಲೈ ರಾಜನೇ, ಆ ಯುದ್ಧದಲ್ಲಿ ಪರಮಾಸ್ತ್ರವೇತ್ತರಾದ, ಪರಂತಪರಾದ, ಶಂತನು ಪುತ್ರರಾದ ಭೀಷ್ಮರು ಹತ್ತಾರು ಸಾವಿರ ಸಂಖ್ಯೆಯಲ್ಲಿ ಯೋಧರನ್ನು ಪುನಃ ಕೊಂದರು.

ಯೇಷಾಮಜ್ಞಾತಕಲ್ಪಾನಿ ನಾಮಗೋತ್ರಾಣಿ ಪಾರ್ಥಿವ ।
ತೇ ಹತಾಸ್ತತ್ರ ಭೀಷ್ಮೇಣ ಶೂರಾಃ ಸರ್ವೇಽನಿವರ್ತಿನಃ ॥೯॥

ಎಲೈ ರಾಜನೇ, ಯಾವ ಯೋಧರ ನಾಮ-ಗೋತ್ರಗಳು ತಿಳಿದಿರಲಿಲ್ಲವೋ ಅಂತಹ ಯುದ್ಧದಲ್ಲಿ ಹಿಮ್ಮೆಟ್ಟದಿರುವ ಎಲ್ಲಾ ಶೂರರು ಅಲ್ಲಿ ಭೀಷ್ಮರಿಂದ ಹತರಾದರು.

ದಶಾಹಾನಿ ತತಸ್ತಪ್ತ್ವಾ ಭೀಷ್ಮಃ ಪಾಂಡವವಾಹಿನೀಮ್ ।
ನಿರವಿದ್ಯತ ಧರ್ಮಾತ್ಮಾ ಜೀವಿತೇನ ಪರಂತಪಃ ॥೧೦॥

ಧರ್ಮಾತ್ಮರೂ, ಪರಂತಪರೂ ಆದ ಭೀಷ್ಮರು ಪಾಂಡವಸೈನ್ಯವನ್ನು ಹತ್ತು ದಿವಸಗಳವರೆಗೆ ದಹಿಸಿ, ಅನಂತರ ತಮ್ಮ ಜೀವಿತದಲ್ಲಿಯೇ ವೈರಾಗ್ಯವನ್ನು ಹೊಂದಿದರು.

ಸ ಕ್ಷಿಪ್ರಂ ವಧಮನ್ವಿಚ್ಛನ್ನಾತ್ಮನೋಽಭಿಮುಖಂ ರಣೇ ।
ನ ಹನ್ಯಾಂ ಮಾನವಶ್ರೇಷ್ಠಾನ್ ಸಂಗ್ರಾಮೇಽಭಿಮುಖಾನಿತಿ ॥೧೧॥

ಚಿಂತಯಿತ್ವಾ ಮಹಾಬಾಹುಃ ಪಿತಾ ದೇವವ್ರತಸ್ತವ ।
ಅಭ್ಯಾಶಸ್ಥಂ ಮಹಾರಾಜ ಪಾಂಡವಂ ವಾಕ್ಯಮಬ್ರವೀತ್ ॥೧೨॥

ಅವರು ಕ್ಷಿಪ್ರವಾಗಿ ತಮ್ಮ ವಧೆಯನ್ನು ಬಯಸಿ ಸಂಗ್ರಾಮದಲ್ಲಿ ಎದುರಿಗೆ ಬಂದ ಮಾನವಶ್ರೇಷ್ಠರನ್ನು ಕೊಲ್ಲುವುದಿಲ್ಲ ಎಂದು ನಿಶ್ಚಯಿಸಿ, ಎಲೈ ಮಹಾರಾಜನೇ, ನಿನ್ನ

ತಂದೆಯಾದ, ಮಹಾಬಾಹುವಾದ ಭೀಷ್ಮರು ಯುದ್ಧದಲ್ಲಿ ಸಮೀಪದಲ್ಲಿ ಎದುರಿಗಿದ್ದ ಧರ್ಮರಾಜನನ್ನು ಕುರಿತು ಮಾತನಾಡಿದರು.

ಯುಧಿಷ್ಠಿರ ಮಹಾಪ್ರಾಜ್ಞ ಸರ್ವಶಾಸ್ತ್ರವಿಶಾರದ ।
ಶೃಣು ಮೇ ವಚನಂ ತಾತ ಧರ್ಮ್ಯಂ ಸ್ವರ್ಗ್ಯಂ ಚ ಜಲ್ಪತಃ ॥೧೩॥

ಎಲೈ ಯುಧಿಷ್ಠಿರನೇ, ಮಹಾಪ್ರಾಜ್ಞನೇ, ಸರ್ವಶಾಸ್ತ್ರವಿಶಾರದನೇ, ಪ್ರೀತಿಪಾತ್ರನೇ, ನಾನು ಮಾತನಾಡುವ ಧರ್ಮಸಹಿತವಾದ, ಸ್ವರ್ಗಸಾಧನವಾದ ಮಾತುಗಳನ್ನು ಕೇಳು.

ನಿರ್ವಿಣ್ಣೋಽಸ್ಮಿ ಭೃಶಂ ತಾತ ದೇಹೇನಾನೇನ ಭಾರತ ।
ಘ್ನತಶ್ಚ ಮೇ ಗತಃ ಕಾಲಃ ಸುಬಹೂನ್ ಪ್ರಾಣಿನೋ ರಣೇ ॥೧೪॥

ಪ್ರೀತಿಪಾತ್ರನೇ, ಭಾರತನೇ, ಈ ನನ್ನ ದೇಹದಲ್ಲಿ ನನಗೆ ವೈರಾಗ್ಯ ಉಂಟಾಗಿದೆ. ಯುದ್ಧದಲ್ಲಿ ಅನೇಕ ಯೋಧರನ್ನು ಮತ್ತು ಪ್ರಾಣಿಗಳನ್ನು ಕೊಲ್ಲುವ ನನಗೆ ಬಹಳ ಕಾಲವು ಕಳೆದುಹೋಯಿತು.

ತಸ್ಮಾತ್ ಪಾರ್ಥಂ ಪುರೋಧಾಯ ಪಾಂಚಾಲಾನ್ ಸೃಂಜಯಾಂಸ್ತಥಾ ।
ಮದ್ವಧೇ ಕ್ರಿಯತಾಂ ಯತ್ನೋ ಮಮ ಚೇದಿಚ್ಛಸಿ ಪ್ರಿಯಮ್ ॥೧೫॥

ಆದ್ದರಿಂದ ಎಲೈ ಪಾರ್ಥನೇ, ನನಗೆ ಪ್ರಿಯವನ್ನು ಮಾಡಲು ಬಯಸುವುದಾದರೆ ಪಾಂಚಾಲರನ್ನೂ ಮತ್ತು ಸೃಂಜಯರನ್ನೂ ಮುಂದೆ ಮಾಡಿಕೊಂಡು ನನ್ನ ವಧೆಯ ಪ್ರಯತ್ನವನ್ನು ಮಾಡು (ಎಂದು ಹೇಳಿದರು).

ತಸ್ಯ ತನ್ಮತಮಾಜ್ಞಾಯ ಪಾಂಡವಃ ಸತ್ಯದರ್ಶನಃ ।
ಭೀಷ್ಮಂ ಪ್ರತಿಯಯೌ ಯತ್ತಃ ಸಂಗ್ರಾಮೇ ಸಹ ಸೃಂಜಯೈಃ ॥೧೬॥

ಅವರ ಅಭಿಪ್ರಾಯವನ್ನು ತಿಳಿದ ಸತ್ಯದರ್ಶನನಾದ ಯುಧಿಷ್ಠಿರನು ಯುದ್ಧದಲ್ಲಿ ಸೃಂಜಯರ ಜೊತೆಯಲ್ಲಿ ಪ್ರಯತ್ನ ಪೂರ್ವಕವಾಗಿ ಅವರ ಕಡೆಗೆ ಮುನ್ನುಗ್ಗಿದನು.

ಧೃಷ್ಟದ್ಯುಮ್ನಪ್ರತೋ ರಾಜನ್ ಪಾಂಡವಶ್ಚ ಯುಧಿಷ್ಠಿರಃ ।
ಶ್ರುತ್ವಾ ಭೀಷ್ಮಸ್ಯ ತಾಂ ವಾಚಂ ಚೋದಯಾಮಾಸತುರ್ಬಲಮ್ ॥೧೭॥

ಎಲೈ ರಾಜನೇ, ಆಗ ಧೃಷ್ಟದ್ಯುಮ್ನನೂ ಮತ್ತು ಪಾಂಡುಪುತ್ರನಾದ ಯುಧಿಷ್ಠಿರನೂ ಭೀಷ್ಮರ ಆ ಮಾತನ್ನು ಕೇಳಿ ತಮ್ಮ ಸೈನ್ಯವನ್ನು ಪ್ರಚೋದಿಸಿದರು.

ಅಭಿದ್ರವತ ಯುಧ್ಯಧ್ವಂ ಭೀಷ್ಮಂ ಜಯತ ಸಂಯುಗೇ ।
ರಕ್ಷಿತಾಃ ಸತ್ಯಸಂಧೇನ ಜಿಷ್ಣುನಾ ರಿಪುಜಿಷ್ಣುನಾ ॥೧೮॥

ಶತ್ರುಗಳನ್ನು ಜಯಿಸುವ ಸತ್ಯಸಂಧನಾದ ಅರ್ಜುನನಿಂದ ರಕ್ಷಿತರಾಗಿ ಮುಂದೆ ಸಾಗಿ ಯುದ್ಧವನ್ನು ಮಾಡಿ, ಯುದ್ಧದಲ್ಲಿ ಭೀಷ್ಮರನ್ನು ಜಯಿಸಿ.

ಅಯಂ ಚಾಪಿ ಮಹೇಷ್ವಾಸಃ ಪಾರ್ಷತೋ ವಾಹಿನೀಪತಿಃ ।
ಭೀಮಸೇನಶ್ಚ ಸಮರೇ ಪಾಲಯಿಷ್ಯತಿ ವೋ ಧ್ರುವಮ್ ॥೧೯॥

ಸೇನಾಪತಿಯಾದ, ಮಹಾಧನುರ್ಧಾರಿಯಾದ ಈ ಧೃಷ್ಟದ್ಯುಮ್ನನೂ ಮತ್ತು ಭೀಮಸೇನನೂ ಯುದ್ಧದಲ್ಲಿ ನಿಶ್ಚಿತವಾಗಿ ನಿಮ್ಮನ್ನು ರಕ್ಷಿಸುವರು.

ನ ವೈ ಭೀಷ್ಮಾದ್ ಭಯಂ ಕಿಂಚಿತ್ ಕರ್ತವ್ಯಂ ಯುಧಿ ಸೃಂಜಯಾಃ ।
ಧ್ರುವಂ ಭೀಷ್ಮಂ ವಿಜೇಷ್ಯಾಮಃ ಪುರಸ್ಕೃತ್ಯ ಶಿಖಂಡಿನಮ್ ॥೨೦॥

ಎಲೈ ಸೃಂಜಯರೇ, ಯುದ್ಧದಲ್ಲಿ ಭೀಷ್ಮರಿಗೆ ಹೆದರಬೇಕಾದ ಯಾವ ಕಾರಣವೂ ಇಲ್ಲ. ಶಿಖಂಡಿಯನ್ನು ಮುಂದೆ ಮಾಡಿಕೊಂಡು ನಾವು ಖಂಡಿತವಾಗಿ ಭೀಷ್ಮರನ್ನು ಗೆಲ್ಲುವೆವು (ಎಂದು ಹೇಳಿದನು).

ತಥಾ ತು ಸಮಯಂ ಕೃತ್ವಾ ದಶಮೇऽಹನಿ ಪಾಂಡವಾಃ ।
ಬ್ರಹ್ಮಲೋಕಪರಾ ಭೂತ್ವಾ ಸಂದಗ್ಧುಃ ಕ್ರೋಧಮೂರ್ಚಿತಾಃ ॥೨೧॥

ಹಾಗೆ ಒಪ್ಪಂದವನ್ನು ಮಾಡಿಕೊಂಡು ಹತ್ತನೆಯ ದಿವಸದಲ್ಲಿ ಪಾಂಡವರು ಬ್ರಹ್ಮಲೋಕವನ್ನು ಹೊಂದುವ ಇಚ್ಛೆಯುಳ್ಳವರಾಗಿ, ಕ್ರೋಧಪೂರ್ಣರಾಗಿ ಯುದ್ಧಕ್ಕೆ ಹೊರಟರು.

ಶಿಖಂಡಿನಂ ಪುರಸ್ಕೃತ್ಯ ಪಾಂಡವಂ ಚ ಧನಂಜಯಮ್ ।
ಭೀಷ್ಮಸ್ಯ ಪಾತನೇ ಯತ್ನಂ ಪರಮಂ ತೇ ಸಮಾಸ್ಥಿತಾಃ ॥೨೨॥

ಶಿಖಂಡಿಯನ್ನೂ ಮತ್ತು ಪಾಂಡುಪುತ್ರನಾದ ಅರ್ಜುನನನ್ನೂ ಮುಂದೆ ಮಾಡಿಕೊಂಡು ಅವರು ಭೀಷ್ಮರನ್ನು ಕೆಡವುವ ವಿಷಯದಲ್ಲಿ ಪರಮ ಪ್ರಯತ್ನವನ್ನು ಮಾಡಿದರು.

ತತಸ್ತವ ಸುತಾದಿಷ್ಟಾ ನಾನಾಜನಪದೇಶ್ವರಾಃ ।
ದ್ರೋಣೇನ ಸಹಪುತ್ರೇಣ ಸಹಸೇನಾ ಮಹಾಬಲಾಃ ॥೨೩॥

ದುಃಶಾಸನಶ್ಚ ಬಲವಾನ್ ಸಹ ಸರ್ವೈಃ ಸಹೋದರೈಃ ।
ಭೀಷ್ಮಂ ಸಮರಮಧ್ಯಸ್ಥಂ ಪಾಲಯಾಂಚಕ್ರಿರೇ ತದಾ ॥೨೪॥

ಆಗ ನಿನ್ನ ಪುತ್ರರಿಂದ ಆಜ್ಞಪ್ತರಾದ, ನಾನಾ ಜನಪದೇಶ್ವರರಾದ ಮಹಾಬಲರಾದ ರಾಜರು ತಮ್ಮ ಸೇನೆಯಿಂದ ಸಹಿತರಾಗಿ, ಪುತ್ರಸಹಿತರಾದ ದ್ರೋಣರಿಂದಲೂ ಸಹಿತರಾಗಿ (ಭೀಷ್ಮರನ್ನು ರಕ್ಷಿಸಿದರು). ಬಲಿಷ್ಠನಾದ ದುರ್ಯೋಧನನೂ ಸಹ ತನ್ನ ಎಲ್ಲ ಸಹೋದರರಿಂದೊಡಗೂಡಿ ಯುದ್ಧಮಧ್ಯದಲ್ಲಿದ್ದ ಭೀಷ್ಮರನ್ನು ರಕ್ಷಿಸಿದನು.

ತತಸ್ತು ತಾವಕಾಃ ಶೂರಾಃ ಪುರಸ್ಕೃತ್ಯ ಯತವ್ರತಮ್ ।
ಶಿಖಂಡಿಪ್ರಮುಖಾನ್ ಪಾರ್ಥಾನ್ ಯೋಧಯಂತಿ ಸ್ಮ ಸಂಯುಗೇ ॥

ಆಗ ನಿನ್ನ ಸೈನ್ಯದ ಶೂರರು ಭೀಷ್ಮರನ್ನು ಮುಂದೆ ಮಾಡಿಕೊಂಡು ಶಿಖಂಡಿಯನ್ನು ಮುಂದಿಟ್ಟುಕೊಂಡ ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ಚೇದಿಭಿಶ್ಚ ಸಪಾಂಚಾಲ್ಯೈಃ ಸಹಿತೋ ವಾನರಧ್ವಜಃ ।
ಯಯೌ ಶಾಂತನವಂ ಭೀಷ್ಮಂ ಪುರಸ್ಕೃತ್ಯ ಶಿಖಂಡಿನಮ್ ॥೨೬॥

ಚೇದಿಗಳಿಂದ ಮತ್ತು ಪಾಂಚಾಲರಿಂದ ಸಹಿತನಾದ ವಾನರಧ್ವಜನಾದ ಅರ್ಜುನನು ಶಿಖಂಡಿಯನ್ನು ಮುಂದೆ ಮಾಡಿಕೊಂಡು ಶಂತನುಪುತ್ರರಾದ ಭೀಷ್ಮರ ಕಡೆಗೆ ಸಾಗಿದನು.

ದ್ರೋಣಪುತ್ರಂ ಶಿನೇರ್ನಪ್ತಾ ಧೃಷ್ಟಕೇತುಸ್ತು ಪೌರವಮ್ ।
ಯುಧಾಮನ್ಯುಃ ಸಹಾಮಾತ್ಯಂ ದುರ್ಯೋಧನಮಯೋಧಯತ್ ॥

ಅಶ್ವತ್ಥಾಮರು ಶಿನಿಯ ಮೊಮ್ಮಗನಾದ ಸಾತ್ಯಕಿಯ ಜೊತೆಯಲ್ಲಿಯೂ, ಧೃಷ್ಟಕೇತುವು ಪೌರವನ ಜೊತೆಯಲ್ಲಿಯೂ, ಯುದಾಮನ್ಯುವು ಅಮಾತ್ಯ ಸಹಿತನಾದ ದುರ್ಯೋಧನನ ಜೊತೆಯಲ್ಲಿಯೂ ಯುದ್ಧವನ್ನು ಮಾಡಿದರು.

ವಿರಾಟಸ್ತು ಸಹಾಮಿತ್ರಃ ಸಹಸೇನಂ ಜಯದ್ರಥಮ್ ।
ವೃದ್ಧಕ್ಷತ್ರಸ್ಯ ದಾಯಾದಮಾಪತಂತಂ ಪರಂತಪಃ ॥೨೮॥

ಪರಂತಪನಾದ ವಿರಾಟನು ತನ್ನ ಸೈನ್ಯದೊಂದಿಗೆ ತನ್ನ ಸೈನ್ಯದಿಂದ ಸಹಿತನಾದ ವೃದ್ಧಕ್ಷತ್ರನ ಪುತ್ರನಾದ ಜಯದ್ರಥನನ್ನು ಎದುರಿಸಿದನು.

ಮದ್ರರಾಜಂ ಮಹೇಷ್ವಾಸಂ ಸಹಸೈನ್ಯಂ ಯುಧಿಷ್ಠಿರಃ ।
ಭೀಮಸೇನಾಭಿಗುಪ್ತಶ್ಚ ನಾಗಾನೀಕಮುಪಾದ್ರವತ್ ॥೨೯॥

ಭೀಮಸೇನನಿಂದ ರಕ್ಷಿತನಾದ ಯುಧಿಷ್ಠಿರನು ಸೈನ್ಯಸಹಿತನಾದ, ಮಹಾಧನುರ್ಧಾರಿಯಾದ, ಗಜಸೇನೆಯನ್ನು ಹೊಂದಿದ, ಮದ್ರರಾಜನಾದ ಶಲ್ಯನ ಮೇಲೆ ಎರಗಿದನು.

ಅಪ್ರಧೃಷ್ಯಮಣಾಮಾರ್ಯಂ ಸರ್ವಶಸ್ತ್ರಭೃತಾಂ ವರಮ್ ।
ದ್ರೋಣಂ ಪ್ರತಿ ಯಯೌ ಯತ್ತಃ ಪಾಂಚಾಲ್ಯಃ ಸಹ ಸೋಮಕೈಃ ॥೩೦॥

ಸೋಲಿಸಲು ಅಸಾಧ್ಯರಾದವರೂ, ತಡೆಯಲೂ ಅಸಾಧ್ಯರಾದವರೂ, ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠರೂ ಆದ ದ್ರೋಣರನ್ನು ಕುರಿತು ಸೋಮಕರಿಂದ ಒಡಗೂಡಿದ ಪಾಂಚಾಲ ದೇಶದವನಾದ ಧೃಷ್ಟದ್ಯುಮ್ನನು ಪ್ರಯತ್ನಪೂರ್ವಕವಾಗಿ ಸಾಗಿದನು.

ಕರ್ಣಕಾರಧ್ವಜಂ ಚಾಪಿ ಸಿಂಹಕೇತುರರಿಂದಮಃ ।
ಪ್ರತ್ಯುದ್ಯಾಯಾಮ ಸೌಭದ್ರಂ ರಾಜಪುತ್ರೋ ಬೃಹದ್ಬಲಃ ॥೩೧॥

ಸಿಂಹಧ್ವಜವುಳ್ಳ, ಅರಿಂದಮನಾದ, ರಾಜಪುತ್ರನಾದ ಬೃಹದ್ಬಲನು ಕರ್ಣಕಾರ ಧ್ವಜವನ್ನು ಹೊಂದಿದ ಅಭಿಮನ್ಯುವಿನ ಮೇಲೆ ಎರಗಿದನು.

ಶಿಖಂಡಿನಂ ಚ ಪುತ್ರಾಸ್ತೇ ಪಾಂಡವಂ ಚ ಧನಂಜಯಮ್ ।
ರಾಜಭಿಃ ಸಮರೇ ಸಾರ್ಧಮಭಿಜಗ್ಮುರ್ದಿಶಾಂಪತಯಃ ॥೩೨॥

ನಿನ್ನ ಪುತ್ರರು ರಾಜರಿಂದ ಸಹಿತರಾಗಿ ಯುದ್ಧದಲ್ಲಿ ಶಿಖಂಡಿಯನ್ನು ಮತ್ತು ಪಾಂಡವನಾದ ಅರ್ಜುನನನ್ನು ಕೊಲ್ಲುವ ಇಚ್ಛೆಯನ್ನು ಹೊಂದಿ ಅವರ ಮೇಲೆ ಎರಗಿದರು.

ತಸ್ಮಿನ್ನತಿಮಹಾಭೀಮೇ ಸೇನಯೋರ್ವೈ ಪರಾಕ್ರಮೇ ।
ಸಂಪ್ರಧಾವತ್ಸು ನೀಕೇಷು ಮೇದಿನೀ ಸಮಕಂಪತ ॥೩೩॥

ಆ ಮಹಾಭಯಂಕರವಾದ ಯುದ್ಧದಲ್ಲಿ ಎರಡು ಸೇನೆಗಳೂ ಪರಾಕ್ರಮವನ್ನು ತೋರಿಸುತ್ತಾ ಓಡುತ್ತಿರಲು ಭೂಮಿಯು ನಡುಗಿತು.

ತಾನ್ಯನೀಕಾನ್ಯನೀಕೇಷು ಸಮಸಜ್ಜಂತ ಭಾರತ ।
ತಾವಕಾನಾಂ ಪರೇಷಾಂ ಚ ದೃಷ್ಟ್ವಾ ಶಾಂತನವಂ ರಣೇ ॥೩೪॥

ಎಲೈ ಭಾರತನೇ, ರಣರಂಗದಲ್ಲಿ ಭೀಷ್ಮರನ್ನು ನೋಡಿ ನಿನ್ನ ಮತ್ತು ಪರರ ಸೈನ್ಯಗಳು ಪರಸ್ಪರವಾಗಿ ಒಂದನ್ನೊಂದು ಸಂಧಿಸಿದವು.

ತತಸ್ತೇಷಾಂ ಪ್ರಯತತಾಮನ್ಯೋನ್ಯಮಭಿಧಾವತಾಮ್ ।
ಪ್ರಾದುರಾಸೀನ್ಮಹಾನ್ ಶಬ್ದೋ ದಿಕ್ಷು ಸರ್ವಾಸು ಭಾರತ ॥೩೫॥

ಎಲೈ ಭಾರತನೇ, ಅನಂತರ ಪ್ರಯತ್ನಶಾಲಿಗಳಾಗಿ ಪರಸ್ಪರವಾಗಿ ಅಭಿಮುಖವಾಗಿ ಓಡಾಡುವ ಆ ಸೈನ್ಯಗಳಿಂದ ಎಲ್ಲ ದಿಕ್ಕುಗಳಲ್ಲಿಯೂ ದೊಡ್ಡ ಶಬ್ದ ಉಂಟಾಯಿತು.

ಶಂಖದುಂದುಭಿಘೋಷೈಶ್ಚ ವಾರಣಾನಾಂ ಚ ಬೃಂಹಿತೈಃ ।
ಸಿಂಹನಾದೈಶ್ಚ ಸೈನ್ಯಾನಾಂ ದಾರುಣಃ ಸಮಪದ್ಯತ ॥೩೬॥

ಶಂಖ-ದುಂದುಭಿ ಘೋಷಗಳಿಂದಲೂ, ಗಜಗಳ ಬೃಂಹಣಗಳಿಂದಲೂ, ಯೋಧರ ಸಿಂಹನಾದದಿಂದಲೂ ಸಹಿತವಾದ ಆ ಶಬ್ದವು ದಾರುಣವಾಯಿತು.

ಸಾ ಚ ಸರ್ವನರೇಂದ್ರಾಣಾಂ ಚಂದ್ರಾರ್ಕಸದೃಶೀ ಪ್ರಭಾ ।
ವೀರಾಂಗದಕಿರೀಟೇಷು ನಿಷ್ಪ್ರಭಾ ಸಮಪದ್ಯತ ॥೩೭॥

ಎಲ್ಲ ರಾಜರ ಭುಜಕೀರ್ತಿ ಮತ್ತು ಕಿರೀಟಗಳಲ್ಲಿ ಇದ್ದ ಸೂರ್ಯ-ಚಂದ್ರರಿಗೆ ಸಮಾನವಾದ ಕಾಂತಿಯು ನಾಶವನ್ನು ಹೊಂದಿತು.

ರಜೋಮೇಘಾಶ್ಚ ಸಂಜಜ್ಞುಃ ಶಸ್ತ್ರವಿದ್ಯುದ್ವಿರಾವೃತಾಃ ।
ಧನುಷಾಂ ಚೈವ ನಿರ್ಘೋಷೋ ದಾರುಣಃ ಸಮಪದ್ಯತ ॥೩೮॥

ಶಸ್ತ್ರಗಳೆಂಬ ಮಿಂಚುಗಳಿಂದ ಕೂಡಿದ ಧೂಳಿನ ಮೇಘಗಳು ಉಂಟಾದವು. ಧನುಸ್ಸುಗಳ ಶಬ್ದವು ದಾರುಣವಾದವು.

ಬಾಣಶಂಖಿಪ್ರಣಾದಾಶ್ಚ ಭೇರೀಣಾಂ ಚ ಮಹಾಸ್ವನಾಃ ।
ರಥಘೋಷಾಶ್ಚ ಸಂಜಗ್ಮುಃ ಸೇನಯೋರುಭಯೋರಪಿ ॥೩೯॥

ಎರಡು ಸೇನೆಗಳಲ್ಲಿಯೂ ಬಾಣ ಮತ್ತು ಶಂಖಗಳ ನಾದಗಳೂ, ಭೇರಿಗಳ ಮಹಾನಾದಗಳೂ, ರಥಘೋಷಗಳೂ ಉಂಟಾದವು.

ಪ್ರಾಸಶಕ್ತ್ಯೃಷ್ಟಿಸಂಘೈಶ್ಚ ಬಾಣೌಘೈಶ್ಚ ಸಮಾಕುಲಮ್ ।
ನಿಷ್ಪ್ರಕಾಶಮಿವಾಕಾಶಂ ಸೇನಯೋಃ ಸಮಪದ್ಯತ ॥೪೦॥

ಪ್ರಾಸ, ಶಕ್ತಿ, ಋಷ್ಟಿ ಸಮೂಹಗಳಿಂದಲೂ ಬಾಣ ಸಮೂಹಗಳಿಂದಲೂ ನಿಬಿಡವಾದ ಎರಡು ಸೇನೆಗಳ ಮೇಲಿನ ಆಕಾಶವು ಪ್ರಕಾಶಶೂನ್ಯವಾಯಿತು.

ಅನ್ಯೋನ್ಯಂ ರಥಿನಃ ಪೇತುರ್ವಾಜಿನಶ್ಚ ಮಹಾಹವೇ ।
ಕುಂಜರಾಃ ಕುಂಜರಾನ್ ಜಘ್ನುಃ ಪದಾತೀಂಶ್ಚ ಪದಾತಯಃ ॥೪೧॥

ಆ ಮಹಾಯುದ್ಧದಲ್ಲಿ ರಥಿಕರು ಮತ್ತು ಅಶ್ವಾರೋಹಿಗಳು ಪರಸ್ಪರವಾಗಿ ಎರಗಿದರು. ಗಜಗಳು ಗಜಗಳನ್ನು, ಪದಾತಿಗಳು ಪದಾತಿಗಳನ್ನು ಕೊಂದರು.

ತದಾಸೀತ್ ಸುಮಹದ್ ಯುದ್ಧಂ ಕುರೂಣಾಂ ಪಾಂಡವೈಃ ಸಹ ।
ಭೀಷ್ಮಹೇತೋರ್ನರವ್ಯಾಘ್ರ ಶ್ಯೇನಯೋರಾಮಿಷೇ ಯಥಾ ॥೪೨॥

ಎಲೈ ನರವ್ಯಾಘ್ರನೇ, ಭೀಷ್ಮರ ಸಲುವಾಗಿ ಕೌರವರಿಗೂ ಮತ್ತು ಪಾಂಡವರಿಗೂ ಮಾಂಸದ ತುಂಡಿನ ಸಲುವಾಗಿ ಹದ್ದುಗಳಿಗೆ ಉಂಟಾದಂತೆ, ಬಹಳ ಘೋರವಾದ ಯುದ್ಧವು ಉಂಟಾಯಿತು.

ತಯೋಃ ಸಮಾಗಮೋ ಘೋರೋ ಬಭೂವ ಯುಧಿ ಭಾರತ ।
ಅನ್ಯೋನ್ಯಸ್ಯ ವಧಾರ್ಥಾಯ ಜಿಗೀಷೂಣಾಂ ರಣಾಜಿರೇ ॥೪೩॥

ಎಲೈ ಭಾರತನೇ, ರಣರಂಗದಲ್ಲಿ ಜಯವನ್ನು ಬಯಸಿದ ಅವರಿಬ್ಬರಿಗೆ ಪರಸ್ಪರ ವಧೆಯ ಸಲುವಾಗಿ ಘೋರವಾದ ಸಂಘರ್ಷವು ಉಂಟಾಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ದ್ವಾದಶಾಧಿಕಶತತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ದ್ವಾಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನೂರ ಹನ್ನೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿಮೂರನೆಯ ಅಧ್ಯಾಯ

ಘೋರ ಯುದ್ಧದಲ್ಲಿ ಭೀಷ್ಮರ ಪ್ರತಾಪ.

ಸಂಜಯಃ

ಅಭಿಮನ್ಯುರ್ಮಹಾರಾಜ ತವ ಪುತ್ರಮಯೋಧಯತ್ ।
ಮಹತ್ಯಾ ಸೇನಯಾ ಯುಕ್ತೋ ಭೀಷ್ಮಹೇತೋಃ ಪರಾಕ್ರಮೀ ॥೧॥

ಸಂಜಯ– ಎಲೈ ಮಹಾರಾಜನೇ, ಪರಾಕ್ರಮಶಾಲಿಯಾದ ಅಭಿಮನ್ಯುವು ದೊಡ್ಡ ಸೇನೆಯಿಂದ ಕೂಡಿದವನಾಗಿ ಭೀಷ್ಮರ ನಿಮಿತ್ತದಿಂದಾಗಿ ನಿನ್ನ ಪುತ್ರನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ದುರ್ಯೋಧನೋ ರಣೇ ಕಾರ್ಷ್ಣಿಂ ನವಭಿರ್ನತಪರ್ವಭಿಃ ।
ಆಜಘಾನ ರಣೇ ಕ್ರುದ್ಧಃ ಪುನಶ್ಚೈನಂ ತ್ರಿಭಿಃ ಶರೈಃ ॥೨॥

ಎಲೈ ರಾಜನೇ, ದುರ್ಯೋಧನನು ಯುದ್ಧದಲ್ಲಿ ಅಭಿಮನ್ಯುವನ್ನು ಬಾಗಿದ ತುದಿಯುಳ್ಳ ಒಂಬತ್ತು ಬಾಣಗಳಿಂದ ಹೊಡೆದು ಪುನಃ ಕ್ರುದ್ಧನಾಗಿ ಅವನನ್ನು ಮೂರು ಬಾಣಗಳಿಂದ ಹೊಡೆದನು.

ತಸ್ಯ ಶಕ್ತಿಂ ರಣೇ ಕಾರ್ಷ್ಣಿರ್ಮೃತ್ಯೋಃಘೋರಾಮಿವ ಸ್ವಸಾಮ್ ।
ಪ್ರೇಷಯಾಮಾಸ ಸಂಕ್ರುದ್ಧೋ ದುರ್ಯೋಧನರಥಂ ಪ್ರತಿ ॥೩॥

ಅಭಿಮನ್ಯುವು ಬಹಳ ಕೋಪಗೊಂಡು ಮೃತ್ಯುವಿನ ತಂಗಿಯಂತಿದ್ದ ಘೋರವಾದ ಶಕ್ತಿಯನ್ನು ಯುದ್ಧದಲ್ಲಿ ದುರ್ಯೋಧನನ ರಥದ ಮೇಲೆ ಎಸೆದನು.

ತಾಮಾಪತಂತೀಂ ಸಹಸಾ ಘೋರರೂಪಾಂ ವಿಶಾಂಪತೇ ।
ದ್ವಿಧಾ ಚಿಚ್ಛೇದ ತೇ ಪುತ್ರಃ ಕ್ಷುರಪ್ರೇಣ ಮಹಾರಥಃ ॥೪॥

ಎಲೈ ರಾಜನೇ, ಮಹಾರಥನಾದ ನಿನ್ನ ಪುತ್ರನು ತನ್ನ ಕಡೆಗೆ ಬರುತ್ತಿದ್ದ ಘೋರ ರೂಪವಾದ ಆ ಶಕ್ತಿಯನ್ನು ತಕ್ಷಣ ಕ್ಷುರಪ್ರದಿಂದ ಕತ್ತರಿಸಿದನು.

ತಾಂ ಶಕ್ತಿಂ ಪತಿತಾಂ ದೃಷ್ಟ್ವಾ ಕಾರ್ಷ್ಣಿಃ ಪರಮಕೋಪನಃ ।
ದುರ್ಯೋಧನಂ ತ್ರಿಭಿರ್ಬಾಣೈರ್ಬಾಹ್ವೋರುರಸಿ ಚಾರ್ಪಯತ್ ॥೫॥

ಆ ಶಕ್ತಿಯು ಕೆಳಗೆ ಬಿದ್ದುದನ್ನು ನೋಡಿ ಅಭಿಮನ್ಯುವು ಬಹಳ ಕೋಪಗೊಂಡು ದುರ್ಯೋಧನನನ್ನು ಮೂರು ಬಾಣಗಳಿಂದ ಅವನ ಬಾಹುಗಳಲ್ಲಿ ಮತ್ತು ವಕ್ಷಸ್ಥಲದಲ್ಲಿ ಹೊಡೆದನು.

ಪುನಶ್ಚೈನಂ ಶರೈಘೋರೈರಾಜಘಾನ ಸ್ತನಾಂತರೇ ।
ದಶಭಿರ್ಭರತಶ್ರೇಷ್ಠ ದುರ್ಯೋಧನಮಮರ್ಷಣಮ್ ॥೬॥

ಎಲೈ ಭರತಶ್ರೇಷ್ಠನೇ, ಅವನು ಪುನಃ ಕ್ರೋಧಶೀಲನಾದ ದುರ್ಯೋಧನನನ್ನು ಘೋರವಾದ ಹತ್ತು ಬಾಣಗಳಿಂದ ಸ್ತನಗಳ ಮಧ್ಯದಲ್ಲಿ ಹೊಡೆದನು.

ತದ್ ಯುದ್ಧಮಭವದ್ ಘೋರಂ ಚಿತ್ರರೂಪಂ ಚ ಭಾರತ ।
ಈಕ್ಷಿತೃಪ್ರೀತಿಜನನಂ ಸರ್ವಪಾರ್ಥಿವಪೂಜಿತಮ್ ॥೭॥

ಎಲೈ ಭಾರತನೇ, ಅವರಿಬ್ಬರಿಗೂ ನಡೆದ ಘೋರವಾದ ಮತ್ತು ವಿಚಿತ್ರವಾದ ಯುದ್ಧವು ನೋಡುವವರಿಗೆ ಸಂತೋಷಜನಕವೂ ಮತ್ತು ಸರ್ವರಾಜರಿಂದ ಪೂಜಿತವೂ ಆಗಿದ್ದಿತು.

ಭೀಷ್ಮಸ್ಯ ನಿಧನಾರ್ಥಾಯ ಪಾರ್ಥಸ್ಯ ವಿಜಯಾಯ ಚ ।
ಯುಯುಧಾತೇ ರಣೇ ವೀರೌ ಸೌಭದ್ರಕುರುಪುಂಗವೌ ॥೮॥

ಭೀಷ್ಮರ ವಿಜಯವನ್ನೂ ಮತ್ತು ಅರ್ಜುನನ ವಿಜಯವನ್ನೂ ಉದ್ದೇಶಿಸಿ ವೀರರಾದ ಅಭಿಮನ್ಯು ಮತ್ತು ಕುರುಶ್ರೇಷ್ಠನಾದ ದುರ್ಯೋಧನರು ಯುದ್ಧವನ್ನು ಮಾಡಿದರು.

ಸಾತ್ಯಕಿಂ ರಭಸಂ ಯುದ್ಧೇ ದ್ರೌಣಿರ್ಬ್ರಾಹ್ಮಣಪುಂಗವಃ ।
ಆಜಘಾನೋರಸಿ ಕ್ರುದ್ಧೋ ನಾರಾಚೇನ ಪರಂತಪಃ ॥೯॥

ಬ್ರಾಹ್ಮಣ ಶ್ರೇಷ್ಠರಾದ, ಪರಂತಪರೂ, ಕೋಪಗೊಂಡವರೂ ಆದ ಅಶ್ವತ್ಥಾಮರು ಯುದ್ಧದಲ್ಲಿ ವೇಗಶಾಲಿಯಾಗಿರುವ ಸಾತ್ಯಕಿಯನ್ನು ನಾರಾಚದಿಂದ ವಕ್ಷಸ್ಥಲದಲ್ಲಿ ಹೊಡೆದರು.

ಶೈನೇಯೋಽಪಿ ಗುರೋಃ ಪುತ್ರಂ ಸರ್ವಮರ್ಮಸು ಭಾರತ ।
ಅತಾಡಯದಮೇಯಾತ್ಮಾ ನವಭಿಃ ಕಂಕಪತ್ರಿಭಿಃ ॥೧೦॥

ಎಲೈ ಭಾರತನೇ, ಅಚಿಂತ್ಯ ಪ್ರಭಾವವುಳ್ಳ ಸಾತ್ಯಕಿಯೂ ಸಹ ಕಂಕಪತ್ರವನ್ನು ಹೊಂದಿದ್ದ ಒಂಬತ್ತು ಬಾಣಗಳಿಂದ ಗುರುಪುತ್ರರಾದ ಅಶ್ವತ್ಥಾಮರನ್ನು ಎಲ್ಲ ಮರ್ಮಸ್ಥಾನಗಳಲ್ಲಿ ಹೊಡೆದನು.

ಅಶ್ವತ್ಥಾಮಾ ತು ಸಮರೇ ಸಾತ್ಯಕಿಂ ನವಭಿಃ ಶರೈಃ ।
ತ್ರಿಂಶತಾ ಚ ಪುನಸ್ತೂರ್ಣಂ ಬಾಹ್ವೋರುರಸಿ ಚಾರ್ದಯತ್ ॥೧೧॥

ಅಶ್ವತ್ಥಾಮರಾದರೋ ಯುದ್ಧದಲ್ಲಿ ಸಾತ್ಯಕಿಯನ್ನು ಒಂಬತ್ತು ಬಾಣಗಳಿಂದ ಹೊಡೆದು ಪುನಃ ಶೀಘ್ರವಾಗಿ ಮೂವತ್ತು ಬಾಣಗಳಿಂದ ಅವನ ಬಾಹುಗಳಲ್ಲಿ ಮತ್ತು ವಕ್ಷಸ್ಥಲದಲ್ಲಿ ಹೊಡೆದರು.

ಸೋಽತಿವಿದ್ಧೋ ಮಹೇಷ್ವಾಸೋ ದ್ರೋಣಪುತ್ರೇಣ ಸಾತ್ವತಃ ।
ದ್ರೋಣಪುತ್ರಂ ತ್ರಿಭಿರ್ಬಾಣೈರಾಜಘಾನ ಮಹಾಯಶಾಃ ॥೧೨॥

ದ್ರೋಣಪುತ್ರರಿಂದ ಗಾಢವಾಗಿ ಗಾಯಗೊಂಡ ಮಹಾಕೀರ್ತಿವಂತನೂ, ಮಹಾಧನುರ್ಧಾರಿಯೂ ಆದ ಸಾತ್ವತನಾದ ಸಾತ್ಯಕಿಯು ಅವರನ್ನು ಮೂರು ಬಾಣಗಳಿಂದ ಹೊಡೆದನು.

ಪೌರವೋ ಧೃಷ್ಟಕೇತುಂ ಚ ಶರೈರಾಸಾದ್ಯ ಸಂಯುಗೇ ।
ಬಹುಧಾ ದಾರಯಾಂಚಕ್ರೇ ಮಹೇಷ್ವಾಸಂ ಮಹಾರಥಮ್ ॥೧೩॥

ರಣರಂಗದಲ್ಲಿ ಪೌರವನು ಧೃಷ್ಟಕೇತುವನ್ನು ಬಾಣಗಳಿಂದ ತಲುಪಿ, ಮಹಾಧನುರ್ಧಾರಿಯೂ, ಮಹಾರಥನೂ ಆದ ಅವನನ್ನು ಬಹುರೀತಿಯಲ್ಲಿ ಗಾಯಗೊಳಿಸಿದನು.

ಶಕ್ರೈವ ಪೌರವಂ ಯುದ್ಧೇ ಧೃಷ್ಟಕೇತುರ್ಮಹಾರಥಃ ।
ತ್ರಿಂಶತಾ ನಿಶಿತೈರ್ಬಾಣೈರ್ವಿವ್ಯಾಧ ಸುಮಹಾಬಲಃ ॥೧೪॥

ಹಾಗೆಯೇ ಮಹಾಬಲಿಷ್ಠನೂ ಮತ್ತು ಮಹಾರಥನೂ ಆದ ಧೃಷ್ಟಕೇತುವು ಪೌರವನನ್ನು ತೀಕ್ಷ್ಣವಾದ ಮೂವತ್ತು ಬಾಣಗಳಿಂದ ಹೊಡೆದನು.

ಪೌರವಸ್ತು ಧನುಶ್ಛಿತ್ವಾ ಧೃಷ್ಟಕೇತೋರ್ಮಹಾರಥಃ ।
ನನಾದ ಬಲವನ್ನಾದಂ ವಿವ್ಯಾಧ ದಶಭಿಃ ಶರೈಃ ॥೧೫॥

ಮಹಾರಥನಾದ ಪೌರವನಾದರೋ ಧೃಷ್ಟಕೇತುವಿನ ಧನುಸ್ಸನ್ನು ಕತ್ತರಿಸಿ, ಬಲವಾದ ನಾದವನ್ನು ಮಾಡಿ ಪುನಃ ಹತ್ತು ಬಾಣಗಳಿಂದ ಹೊಡೆದನು.

ಸೋಽನ್ಯಶ್ ಕಾರ್ಮುಕಮಾದಾಯ ಪೌರವಂ ನಿಶಿತೈಃ ಶರೈಃ ।
ಅಜಘಾನ ಮಹಾರಾಜ ತ್ರಿಸಪ್ತತ್ಯಾ ಶಿಲೀಮುಖೈಃ ॥೧೬॥

ಎಲೈ ಮಹಾರಾಜನೇ, ಧೃಷ್ಟಕೇತುವಾದರೋ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ತೀಕ್ಷ್ಣವಾದ ಎಪ್ಪತ್ತಮೂರು ಬಾಣಗಳಿಂದ ಪೌರವನನ್ನು ಹೊಡೆದನು.

ತೌ ತು ತತ್ರ ಮಹೇಷ್ವಾಸೌ ಮಹಾಮಾತ್ರೌ ಮಹಾರಥೌ ।
ಮಹತಾ ಶರವರ್ಷೇಣ ಪರಸ್ಪರಮವರ್ಷತಾಮ್ ॥೧೭॥

ಮಹಾಧನುರ್ಧಾರಿಗಳೂ, ಪ್ರಧಾನರೂ ಮತ್ತು ಮಹಾರಥರೂ ಆದ ಅವರಿಬ್ಬರೂ ಪರಸ್ಪರವಾಗಿ ಬಾಣಗಳ ದೊಡ್ಡ ಮಳೆಯನ್ನು ಕರೆದರು.

ಅನ್ಯೋನ್ಯಸ್ಯ ಧನುಶ್ಚಿತ್ತ್ವಾ ಹಯಾನ್ ಹತ್ವಾ ಚ ಭಾರತ ।
ವಿರಥಾವಪಿಯುದ್ಧಾಯ ಸಂಗತೌ ತೌ ಮಹಾರಥೌ ॥೧೮॥

ಎಲೈ ಭಾರತನೇ, ಮಹಾರಥರಾದ ಅವರು ಪರಸ್ಪರವಾಗಿ ಧನುಸ್ಸುಗಳನ್ನು ಕತ್ತರಿಸಿ, ಅಶ್ವಗಳನ್ನು ಕೊಂದು, ರಥಹೀನರಾಗಿ, ಖಡ್ಗ ಯುದ್ಧಕ್ಕಾಗಿ ಸಂಗತರಾದರು.

ಆರ್ಷಭೇ ಚರ್ಮಣೇ ಚಿತ್ರೇ ಶತಚಂದ್ರಪರಿಷ್ಕೃತೇ ।
ತಾರಕಾಶತಚಿತ್ರೌ ಚ ನಿಸ್ತ್ರಿಂಶೌ ಸುಮಹಾಪ್ರಭೌ ॥೧೯॥

ಪ್ರಗೃಹ್ಯ ವಿಮಲೌ ರಾಜನ್ ತಾವನ್ಯೋನ್ಯಮಭಿದ್ರುತೌ ।
ವಾಸಿತಾಸಂಗಮೇ ಯತ್ತೌ ಸಿಂಹಾವಿವ ಮಹಾವನೇ ॥೨೦॥

ವೃಷಭ ಚರ್ಮದಿಂದ ಮಾಡಿದ ಶತಚಂದ್ರಗಳಿಂದ ಭೂಷಿತವಾದ ವಿಚಿತ್ರವಾದ ಗುರಾಣಿಗಳನ್ನೂ, ನೂರು ನಕ್ಷತ್ರಗಳ ಚಿಹ್ನೆಯಿಂದ ಅಲಂಕೃತವಾದ ವಿಮಲವಾದ ಖಡ್ಗಗಳನ್ನೂ ಹಿಡಿದು ಎಲೈ ರಾಜನೇ, ಅವರು ಕಾಡಿನಲ್ಲಿ ಹೆಣ್ಣಾನೆಯ ಸಂಗಮದ ಸಲುವಾಗಿ ಪ್ರಯತ್ನಶೀಲವಾದ ಸಿಂಹಗಳಂತೆ ಪರಸ್ಪರವಾಗಿ ಧಾವಿಸಿದರು.

ಮಂಡಲಾನಿ ವಿಚಿತ್ರಾಣಿ ಗತಪ್ರತ್ಯಾಗತಾನಿ ಚ ।
ಚೇರತುರ್ದರ್ಶಯಂತೌ ಚ ಪ್ರಾರ್ಥಯಂತೌ ಪರಸ್ಪರಮ್ ॥೨೧॥

ಪರಸ್ಪರವಾಗಿ ಆಹ್ವಾನವನ್ನು ಮಾಡುತ್ತಾ, ವಿಚಿತ್ರವಾದ ಮಂಡಲಗಳನ್ನೂ, ಮುಂದೆ ಹೋಗಿ ಹಿಂದೆ ಬರುವ ಕ್ರಮಗಳನ್ನೂ ತೋರಿಸುತ್ತಾ ಅವರು ಸಂಚರಿಸಿದರು.

ಪೌರವೋ ಧೃಷ್ಟಕೇತುಂ ತು ಶಂಖದೇಶೇ ಮಹಾಸಿನಾ ।
ತಾಡಯಾಮಾಸ ಸಂಕ್ರುದ್ಧಸ್ತಿಷ್ಠತಿಷ್ಠೇತಿ ಚಾಬ್ರವೀತ್ ॥೨೨॥

ಪೌರವನು ತನ್ನ ದೊಡ್ಡ ಶಕ್ತಿಯಿಂದ ಶಂಖದೇಶದಲ್ಲಿ ಧೃಷ್ಟಕೇತುವನ್ನು ಹೊಡೆದು ಕೋಪಗೊಂಡು ನಿಲ್ಲು-ನಿಲ್ಲು ಎಂದು ಹೇಳಿದನು.

ಚೇದಿರಾಜೋऽಪಿ ಸಮರೇ ಪೌರವಂ ಪುರುಷರ್ಷಭಮ್ ।
ಆಜಘಾನ ಶಿತಾಗ್ರೇಣ ಜತ್ರುದೇಶೇ ಮಹಾಸಿನಾ ॥೨೩॥

ಚೇದಿರಾಜನಾದ ಧೃಷ್ಟಕೇತುವೂ ಸಹ ಯುದ್ಧದಲ್ಲಿ ಪುರುಷಶ್ರೇಷ್ಠನಾದ ಪೌರವನನ್ನು ತೀಕ್ಷ್ಣವಾದ ಅಲುಬುಳ್ಳ ತನ್ನ ದೊಡ್ಡ ಖಡ್ಗದಿಂದ ಭುಜಸಂಧಿ ಪ್ರದೇಶದಲ್ಲಿ ಹೊಡೆದನು.

ತಾವನ್ಯೋನ್ಯಂ ಮಹಾರಾಜ ಸಮಾಸಾದ್ಯ ಮಹಾಹವೇ ।
ಅನ್ಯೋನ್ಯವೇಗಾಭಿಹತೌ ನಿಪೇತತುರರಿಂದಮೌ ॥೨೪॥

ಎಲೈ ಮಹಾರಾಜನೇ, ಅರಿಂದಮರಾದ ಅವರಿಬ್ಬರೂ ಆ ದೊಡ್ಡ ಯುದ್ಧದಲ್ಲಿ ಪರಸ್ಪರವಾಗಿ ಸಂಧಿಸಿ, ಪರಸ್ಪರ ಖಡ್ಗವೇಗದಿಂದ ತಾಡಿತರಾಗಿ ಭೂಮಿಯ ಮೇಲೆ ಬಿದ್ದರು.

ತತಃ ಸ್ವರಥಮಾರೋಪ್ಯ ಪೌರವಂ ತನಯಸ್ತವ ।
ಜಯತ್ಸೇನೋ ರಥೇ ರಾಜನ್ನಪೋವಾಹ ರಣಾಜಿರಾತ್ ॥೨೫॥

ಎಲೈ ರಾಜನೇ, ಆಗ ನಿನ್ನ ಪುತ್ರನಾದ ಜಯತ್ಸೇನನು ಪೌರವನನ್ನು ತನ್ನ ರಥಕ್ಕೆ ಏರಿಸಿಕೊಂಡು ರಣಭೂಮಿಯಿಂದ ದೂರ ಕರೆದುಕೊಂಡು ಹೋದನು.

ಧೃಷ್ಟಕೇತುಂ ಚ ಸಮರೇ ಮಾದ್ರೀಪುತ್ರಃ ಪರಂತಪಃ ।
ಅಪೋವಾಹ ರಣೇ ರಾಜನ್ ಸಹದೇವಃ ಪ್ರತಾಪವಾನ್ ॥೨೬॥

ಎಲೈ ರಾಜನೇ, ಮಾದ್ರೀಪುತ್ರನೂ, ಪರಂತಪನೂ, ಪ್ರತಾಪಶಾಲಿಯೂ ಆದ ಸಹದೇವನು ಧೃಷ್ಟಕೇತುವನ್ನು ತನ್ನ ರಥದಲ್ಲಿ ಏರಿಸಿಕೊಂಡು ರಣರಂಗದಿಂದ ಹೊರಗೆ ದೂರ ಕರೆದುಕೊಂಡು ಹೋದನು.

ಚಿತ್ರಸೇನಃ ಸುಶರ್ಮಾಣಂ ವಿದ್ಧ್ವಾ ನವಭಿರಾಶುಗೈಃ ।
ಪುನರ್ವಿವ್ಯಾಧ ತಂ ಹಿತ್ವಾ ಪುನಶ್ಚ ನವಭಿಃ ಶರೈಃ ॥೨೭॥

ಚಿತ್ರಸೇನನು ಸುಶರ್ಮನನ್ನು ಶೀಘ್ರಗಾಮಿಗಳಾದ ಒಂಬತ್ತು ಬಾಣಗಳಿಂದ ಹೊಡೆದು, ಪುನಃ ಅರವತ್ತು ಬಾಣಗಳಿಂದ ಹೊಡೆದು, ಪುನಃ ಒಂಬತ್ತು ಬಾಣಗಳಿಂದ ಹೊಡೆದನು (ಈ ಸುಶರ್ಮನು ತ್ರಿಗರ್ತರಾಜನಲ್ಲ).

ಸುಶರ್ಮಾ ತು ರಣೇ ಕ್ರುದ್ಧಸ್ತವ ಪುತ್ರಂ ವಿಶಾಂಪತೇ ।
ದಶಭಿರ್ದಶಭಿಶ್ಚೈವ ವಿವ್ಯಾಧ ನಿಶಿತೈಃ ಶರೈಃ ॥೨೮॥

ಎಲೈ ರಾಜನೇ, ಸುಶರ್ಮನಾದರೋ ಯುದ್ಧದಲ್ಲಿ ಕ್ರುದ್ಧನಾಗಿ ನಿನ್ನ ಪುತ್ರನ ಮೇಲೆ ತೀಕ್ಷ್ಣವಾದ ಹತ್ತು-ಹತ್ತು ಬಾಣಗಳನ್ನು ಪ್ರಯೋಗಿಸಿದನು.

ಚಿತ್ರಸೇನಶ್ಚ ತಂ ರಾಜನ್ ತ್ರಿಂಶತಾ ನತಪರ್ವಣಾಮ್ ।
ಆಜಘಾನ ರಣೇ ಕ್ರುದ್ಧಃ ಸ ಚ ತಂ ಪ್ರತ್ಯವಿಧ್ಯತ ।
ಭೀಷ್ಮಸ್ಯ ಸಮರೇ ರಾಜನ್ ಯಶೋ ಮಾನಂ ಚ ವರ್ಧಯನ್ ॥೨೯॥

ಎಲೈ ರಾಜನೇ, ಚಿತ್ರಸೇನನಾದರೋ ಬಾಗಿದ ತುದಿಯುಳ್ಳ ಮೂವತ್ತು ಬಾಣಗಳಿಂದ ಯುದ್ಧದಲ್ಲಿ ಕ್ರುದ್ಧನಾಗಿ ಸುಶರ್ಮನನ್ನು ಹೊಡೆದನು. ಸುಶರ್ಮನೂ ಪ್ರತಿಯಾಗಿ ಯುದ್ಧದಲ್ಲಿ ಭೀಷ್ಮರ ಕೀರ್ತಿ ಮತ್ತು ಮರ್ಯಾದೆಯನ್ನು ಹೆಚ್ಚಿಸುತ್ತಾ ಅವನಿಗೆ ಪ್ರತಿಯಾಗಿ ಹೊಡೆದನು.

ಸೌಭದ್ರೋ ರಾಜಪುತ್ರಂ ತು ಬೃಹದ್ಬಲಮಯೋಧಯತ್ ।
ಆರ್ಜುನಿಂ ಕೋಸಲೇಂದ್ರಸ್ತು ವಿದ್ಧ್ವಾ ಪಂಚಭಿರಾಯಸೈಃ ।
ಪುನರ್ವಿವ್ಯಾಧ ವಿಂಶತ್ಯಾ ಶರೈಃ ಸನ್ನತಪರ್ವಭಿಃ ॥೩೦॥

ಅಭಿಮನ್ಯುವು ರಾಜಪುತ್ರನಾದ ಬೃಹದ್ಬಲನ ಜೊತೆಯಲ್ಲಿ ಯುದ್ಧವನ್ನು ಮಾಡಿದನು, ಕೋಸಲಾಧಿಪತಿಯಾದ ಬೃಹದ್ಬಲನು ಅಭಿಮನ್ಯುವನ್ನು ಐದು ಕಬ್ಬಿಣದ ಬಾಣಗಳಿಂದ ಹೊಡೆದು ಪುನಃ ಬಾಗಿದ ತುದಿಯುಳ್ಳ ಇಪ್ಪತ್ತು ಬಾಣಗಳಿಂದ ಅವನನ್ನು ಹೊಡೆದನು.

ಬೃಹದ್ಬಲಂ ಚ ಸೌಭದ್ರೋ ವಿದ್ಧ್ವಾ ನವಭಿರಾಯಸೈಃ ।
ನಾಕಂಪಯತ ಸಂಗ್ರಾಮೇ ವಿವ್ಯಾಧ ಚ ಪುನಃ ಪುನಃ ॥೩೧॥

ಅಭಿಮನ್ಯುವು ಬೃಹದ್ಬಲನನ್ನು ಕಬ್ಬಿಣದ ಒಂಬತ್ತು ಬಾಣಗಳಿಂದ ಹೊಡೆದರೂ ಯುದ್ಧದಲ್ಲಿ ಅವನನ್ನು ಅಲುಗಾಡಿಸಲು ಸಾಧ್ಯವಾಗಲಿಲ್ಲ. ಆಗ ಅವನು ಪುನಃ ಪುನಃ ಬಾಣಗಳಿಂದ ಹೊಡೆದನು.

ಕೌಸಲ್ಯಸ್ಯ ಪುನಶ್ಚಾಪಿ ಧನುಶ್ಚಿಚ್ಛೇದ ಫಾಲ್ಗುನಿಃ ।
ಆಜಘಾನ ಶರೈಶ್ಚೈವ ತ್ರಿಂಶತಾ ಕಂಕಪತ್ರಿಭಿಃ ॥೩೨॥

ಅರ್ಜುನನ ಮಗನಾದ ಅಭಿಮನ್ಯುವು ಪುನಃ ಕೋಸಲಾಧಿಪತಿಯಾದ ಬೃಹದ್ಬಲನ ಧನುಸ್ಸನ್ನು ಕತ್ತರಿಸಿದನು ಮತ್ತು ಕಂಕಪತ್ರವನ್ನು ಧರಿಸಿದ ಮೂವತ್ತು ಬಾಣಗಳಿಂದ ಅವನನ್ನು ಹೊಡೆದನು.

ಸೋಽನ್ಯತ್ ಕಾರ್ಮುಕಮಾದಾಯ ರಾಜಪುತ್ರೋ ಬೃಹದ್ಬಲಃ ।
ಫಾಲ್ಗುನಿಂ ಸಮರೇ ಕ್ರುದ್ಧೋ ವಿವ್ಯಾಧ ಬಹುಭಿಃ ಶರೈಃ ॥೩೩॥

ರಾಜಪುತ್ರನಾದ ಬೃಹದ್ಬಲನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಯುದ್ಧದಲ್ಲಿ ಕ್ರುದ್ಧನಾಗಿ ಅಭಿಮನ್ಯುವನ್ನು ಅನೇಕ ಬಾಣಗಳಿಂದ ಹೊಡೆದನು.

ತಯೋರ್ಯುದ್ಧಂ ಸಮಭವದ್ ಭೀಷ್ಮಹೇತೋಃ ಪರಂತಪ ।
ಸಂರಬ್ಧಯೋರ್ಮಹಾರಾಜ ಸಮರೇ ಚಿತ್ರಯೋಧಿನೋಃ ।
ಯಥಾ ದೇವಾಸುರೇ ಯುದ್ಧೇ ಮಯವಾಸವಯೋರಭೂತ್ ॥೩೪॥

ಎಲೈ ಪರಂತಪನೇ, ಮಹಾರಾಜನೇ, ಭೀಷ್ಮರ ಕಾರಣದಿಂದಾಗಿ ಕೋಪಗೊಂಡು ವಿಚಿತ್ರವಾಗಿ ಯುದ್ಧವನ್ನು ಮಾಡುವ ಅವರಿಬ್ಬರಿಗೆ ದೇವಾಸುರ ಯುದ್ಧದಲ್ಲಿ ಮಯ ಮತ್ತು ಇಂದ್ರರಿಗೆ ನಡೆದಂತೆ ಘೋರವಾದ ಯುದ್ಧವು ನಡೆಯಿತು.

ಭೀಮಸೇನೋ ಗಜಾನೀಕಂ ಯೋಧಯನ್ ಬಹ್ವಶೋಭತ ।
ಯಥಾ ಶಕ್ರೋ ವಜ್ರಪಾಣಿರ್ದಾರಯನ್ ಪರ್ವತೋತ್ತಮಾನ್ ॥೩೫॥

ಭೀಮಸೇನನು ಗಜಸಮೂಹದ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಾ, ವಜ್ರಪಾಣಿಯಾದ ಇಂದ್ರನು ಶ್ರೇಷ್ಠ ಪರ್ವತಗಳನ್ನು ಸೀಳಿದಂತೆ ಬಹಳವಾಗಿ ಶೋಭಿಸಿದನು.

ತೇ ವಧ್ಯಮಾನಾ ಭೀಮೇನ ಮಾತಂಗಾ ಗಿರಿಸನ್ನಿಭಾಃ ।
ನಿಪೇತುರುರ್ವ್ಯಾಂ ಸಹಿತಾ ನಾದಯಂತೋ ವಸುಂಧರಾಮ್ ॥೩೬॥

ಭೀಮನಿಂದ ಕೊಲ್ಲಲ್ಪಡುವ ಪರ್ವತ ಸದೃಶವಾದ ಗಜಗಳು ಭೂಮಿಯಲ್ಲಿ ನಾದವನ್ನು ಮಾಡುತ್ತಾ ಜೊತೆಜೊತೆಯಾಗಿ ಭೂಮಿಯ ಮೇಲೆ ಬಿದ್ದವು.

ಗಿರಿಮಾತ್ರಾ ಹಿ ತೇ ನಾಗಾ ಭಿನ್ನಾಂಜನಚಯೋಪಮಾಃ ।
ವಿರೇಜುರ್ವಸುಧಾಂ ಪ್ರಾಪ್ಯ ವಿಕೀರ್ಣಾ ಇವ ಪರ್ವತಾಃ ॥೩೭॥

ಕಾಡಿಗೆಯ ರಾಶಿಯಂತಿದ್ದ ಗಿರಿಪ್ರಮಾಣದ ಭಿನ್ನವಾದ ಆ ಗಜಗಳು ಬಿರಿದ ಪರ್ವತಗಳಂತೆ ಭೂಮಿಯ ಮೇಲೆ ಬಿದ್ದು ಕಂಗೊಳಿಸಿದವು.

ಯುಧಿಷ್ಠಿರೋ ಮಹೇಷ್ವಾಸೋ ಮದ್ರರಾಜಾನಮಾಹವೇ ।
ಮಹತ್ಯಾ ಸೇನಯಾ ಗುಪ್ತಂ ಪೀಡಯಾಮಾಸ ಸಂಗತಃ ॥೩೮॥

ಮಹಾಧನುರ್ಧಾರಿಯಾದ ಯುಧಿಷ್ಠಿರನು ಯುದ್ಧದಲ್ಲಿ ದೊಡ್ಡ ಸೇನೆಯಿಂದ ರಕ್ಷಿತವಾದ ಮದ್ರರಾಜನಾದ ಶಲ್ಯನ ಜೊತೆಯಲ್ಲಿ ಸಂಗತನಾಗಿ ಯುದ್ಧದಲ್ಲಿ ಅವನನ್ನು ಪೀಡಿಸಿದನು.

ಮದ್ರೇಶ್ವರಶ್ಚ ಸಮರೇ ಧರ್ಮಪುತ್ರಂ ಮಹಾರಥಮ್ ।
ಪೀಡಯಾಮಾಸ ಸಂರಬ್ಧೋ ಭೀಷ್ಮಹೇತೋಃ ಪರಾಕ್ರಮೀ ॥೩೯॥

ಪರಾಕ್ರಮಿಯಾದ ಮದ್ರರಾಜನೂ ಸಹ ಮಹಾರಥನಾದ ಯುಧಿಷ್ಠಿರನನ್ನು ಭೀಷ್ಮರ ಸಲುವಾಗಿ ಕೋಪಗೊಂಡು ಪೀಡಿಸಿದನು.

ವಿರಾಟಂ ಸೈಂಧವೋ ರಾಜಾ ವಿದ್ಧ್ವಾ ಸನ್ನತಪರ್ವಭಿಃ ।
ನವಭಿಃ ಸಾಯಕೈಸ್ತೀಕ್ಷ್ಣೈಸ್ತ್ರಿಂಶತಾ ಪುನರರ್ದಯತ್ ॥೪೦॥

ರಾಜನಾದ ಸೈಂಧವನು ವಿರಾಟನನ್ನು ಬಾಗಿದ ತುದಿಯುಳ್ಳ ಒಂಬತ್ತು ತೀಕ್ಷ್ಣವಾದ ಬಾಣಗಳಿಂದ ಹೊಡೆದು, ಪುನಃ ಮೂವತ್ತು ಬಾಣಗಳಿಂದ ಹೊಡೆದನು.

ವಿರಾಟಶ್ಚ ಮಹಾರಾಜ ಸೈಂಧವಂ ವಾಹಿನೀಮುಖೇ ।
ತ್ರಿಂಶತಾ ನಿಶಿತೈರ್ಬಾಣೈರಾಜಘಾನ ಸ್ತನಾಂತರೇ ॥೪೧॥

ಎಲೈ ಮಹಾರಾಜನೇ, ವಿರಾಟನೂ ಸಹ ಸೇನಾಮುಖದಲ್ಲಿ ಸೈಂಧವನನ್ನು ಮೂವತ್ತು ತೀಕ್ಷ್ಣವಾದ ಬಾಣಗಳಿಂದ ಸ್ತನಗಳ ಮಧ್ಯದಲ್ಲಿ ಹೊಡೆದನು.

ಚಿತ್ರಕಾರ್ಮುಕನಿಸ್ತ್ರಿಂಶೌ ಚಿತ್ರವರ್ಮಾಯುಧಧ್ವಜೌ ।
ರೇಜತುಶ್ಚಿತ್ರರೂಪೌ ತೌ ಸಂಗ್ರಾಮೇ ಮತ್ಸ್ಯಸೈಂಧವೌ ॥೪೨॥

ಮತ್ಸರಾಜನಾದ ವಿರಾಟನೂ ಮತ್ತು ಸಿಂಧುರಾಜನಾದ ಜಯದ್ರಥನೂ ವಿಚಿತ್ರವಾದ ಧನುಸ್ಸು ಮತ್ತು ಖಡ್ಗಗಳನ್ನು ಧರಿಸಿ, ವಿಚಿತ್ರವಾದ ಕವಚ, ಆಯುಧ ಮತ್ತು ಧ್ವಜಗಳನ್ನು ಹೊಂದಿ, ವಿಚಿತ್ರರೂಪವನ್ನು ಧರಿಸಿ ಸಂಗ್ರಾಮದಲ್ಲಿ ಶೋಭಿಸಿದರು.

ದ್ರೋಣಃ ಪಾಂಚಾಲಪುತ್ರೇಣ ಸಮಾಗಮ್ಯ ಮಹಾರಣೇ ।
ಮಹಾಸಮುದಯಂ ಚಕ್ರೇ ಶರೈಃ ಸನ್ನತಪರ್ವಭಿಃ ॥೪೩॥

ದ್ರೋಣರು ಮಹಾಯುದ್ಧದಲ್ಲಿ ಪಾಂಚಾಲ ಪುತ್ರನಾದ ಧೃಷ್ಟದ್ಯುಮ್ನನಿಂದ ಸಂಗತರಾಗಿ ಬಾಗಿದ ತುದಿಯುಳ್ಳ ಬಾಣಗಳಿಂದ ಘೋರವಾದ ಯುದ್ಧವನ್ನು ಮಾಡಿದರು.

ತತೋ ದ್ರೋಣೋ ಮಹಾರಾಜ ಪಾರ್ಷತಸ್ಯ ಮಹದ್ಧನುಃ ।
ಛಿತ್ತ್ವಾ ಪಂಚಾಶತೇಷೂಣಾಂ ಪಾರ್ಷತಂ ಸಮವಿಧ್ಯತ ॥೪೪॥

ಎಲೈ ಮಹಾರಾಜನೇ, ಅನಂತರ ದ್ರೋಣರು ಧೃಷ್ಟದ್ಯುಮ್ನನ ದೊಡ್ಡ ಧನುಸ್ಸನ್ನು ಕತ್ತರಿಸಿ ಐವತ್ತು ಬಾಣಗಳಿಂದ ಅವನನ್ನು ಹೊಡೆದರು.

ಸೋಽನ್ಯತ್ಕಾರ್ಮುಕಮಾದಾಯ ಪಾರ್ಷತಃ ಪರವೀರಹಾ ।
ದ್ರೋಣಸ್ಯ ಮಿಷತೋ ಯುದ್ಧೇ ಪ್ರೇಷಯಾಮಾಸ ಸಾಯಕಾನ್ ॥೪೫॥

ಪರವೀರಘಾತಕನಾದ ಧೃಷ್ಟದ್ಯುಮ್ನನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ದ್ರೋಣರು ನೋಡುತ್ತಿರುವಂತೆಯೇ ಯುದ್ಧದಲ್ಲಿ ಅವರ ಮೇಲೆ ಬಾಣಗಳನ್ನು ಪ್ರಯೋಗಿಸಿದನು.

ತಾನ್ ಶರಾನ್ ಶರಸಂಘೈಸ್ತು ಸನ್ನಿವಾರ್ಯ ಮಹಾರಥಃ ।
ದ್ರೋಣೋ ದ್ರುಪದಪುತ್ರಾಯ ಪ್ರಾಹಿಣೋತ್ ಪಂಚ ಸಾಯಕಾನ್ ॥

ಮಹಾರಥರಾದ ದ್ರೋಣರು ತಮ್ಮ ಬಾಣ ಸಮೂಹಗಳಿಂದ ಆ ಬಾಣಗಳನ್ನು ನಿವಾರಿಸಿ ಧೃಷ್ಟದ್ಯುಮ್ನನ ಮೇಲೆ ಐದು ಬಾಣಗಳನ್ನು ಕಳುಹಿಸಿದರು.

ತಸ್ಯ ಕ್ರುದ್ಧೋ ಮಹಾರಾಜ ಪಾರ್ಷತಃ ಪರವೀರಹಾ ।
ದ್ರೋಣಾಯ ಚಿಕ್ಷೇಪ ಗದಾಂ ಯಮದಂಡೋಪಮಾಂ ರಣೇ ॥೪೭॥

ಎಲೈ ಮಹಾರಾಜನೇ, ದ್ರೋಣರ ಮೇಲೆ ಕೋಪಗೊಂಡ ಪರವೀರಘಾತಕನಾದ ಧೃಷ್ಟದ್ಯುಮ್ನನು ಯಮದಂಡದಂತಿದ್ದ ತನ್ನ ಗದೆಯನ್ನು ಯುದ್ಧದಲ್ಲಿ ಅವರ ಮೇಲೆ ಎಸೆದನು.

ತಾಮಾಪತಂತೀಂ ಸಹಸಾ ಹೇಮಪಟ್ಟವಿಭೂಷಿತಾಮ್ ।
ಶರೈಃ ಪಂಚಾಶತಾ ದ್ರೋಣೋ ವಾರಯಾಮಾಸ ಸಂಯುಗೇ ॥೪೮॥

ಸುವರ್ಣಪಟ್ಟಗಳಿಂದ ಭೂಷಿತವಾದ ತಮ್ಮ ಕಡೆಗೆ ವೇಗವಾಗಿ ಬರುತ್ತಿದ್ದ ಆ ಗದೆಯನ್ನು ದ್ರೋಣರು ಐವತ್ತು ಬಾಣಗಳನ್ನು ಪ್ರಯೋಗಿಸಿ ನಿವಾರಿಸಿದರು.

ಸಾ ಛಿನ್ನಾ ಬಹುಧಾ ರಾಜನ್ ದ್ರೋಣಚಾಪಚ್ಯುತೈಃ ಶರೈಃ ।
ಚೂರ್ಣೀಕೃತಾ ವಿಶೀರ್ಯಂತೀ ಪಪಾತ ವಸುಧಾತಲೇ ॥೪೯॥

ಎಲೈ ರಾಜನೇ, ದ್ರೋಣರ ಬಿಲ್ಲಿನಿಂದ ಹೊರಹೊಮ್ಮಿದ ಬಾಣಗಳಿಂದ ಬಹು ರೀತಿಯಾಗಿ ಕತ್ತರಿಸಲ್ಪಟ್ಟ ಆ ಗದೆಯು ಬಿರಿದು ಪುಡಿಯಾಗಿ ಭೂಮಿಯ ಮೇಲೆ ಬಿದ್ದಿತು.

ಗದಾಂ ವಿನಿಹತಾಂ ದೃಷ್ಟ್ವಾ ಪಾರ್ಷತಃ ಶತ್ರುಸೂದನಃ ।
ದ್ರೋಣಾಯ ಶಕ್ತಿಂ ಚಿಕ್ಷೇಪ ಸರ್ವಪಾರಶವೀಂ ಶುಭಾಮ್ ॥೫೦॥

ಗದೆಯು ವಿನಾಶ ಹೊಂದಿದುದನ್ನು ನೋಡಿ ಶತ್ರುಸೂದನನಾದ ಧೃಷ್ಟದ್ಯುಮ್ನನು ಕಬ್ಬಣದಿಂದ ಮಾಡಿದ ಶುಭವಾದ ಶಕ್ತ್ಯಾಯುಧವನ್ನು ದ್ರೋಣರ ಮೇಲೆ ಎಸೆದನು.

ತಾಂ ದ್ರೋಣೋ ನವಭಿರ್ಬಾಣೈಶ್ಚಿಚ್ಛೇದ ಯುಧಿ ಭಾರತ ।
ಪಾರ್ಷತಂ ಚ ಮಹೇಷ್ವಾಸಂ ಪೀಡಯಾಮಾಸ ಸಂಯುಗೇ ॥೫೧॥

ಎಲೈ ಭಾರತನೇ, ದ್ರೋಣರು ಆ ಶಕ್ತಿಯನ್ನು ಒಂಬತ್ತು ಬಾಣಗಳಿಂದ ಕತ್ತರಿಸಿದರು ಮತ್ತು ಯುದ್ಧದಲ್ಲಿ ಮಹಾಧನುರ್ಧಾರಿಯಾದ ಧೃಷ್ಟದ್ಯುಮ್ನನನ್ನು ಪೀಡಿಸಿದರು.

ಏವಮೇತನ್ಮಹದ್ ಯುದ್ಧಂ ದ್ರೋಣಪಾರ್ಷತಯೋರಭೂತ್ ।
ಭೀಷ್ಮಂ ಪ್ರತಿ ಮಹಾರಾಜ ಘೋರರೂಪಂ ಭಯಾನಕಮ್ ॥೫೨॥

ಹೀಗೆ ಭೀಷ್ಮರನ್ನು ಉದ್ದೇಶಿಸಿ ದ್ರೋಣ ಮತ್ತು ಧೃಷ್ಟದ್ಯುಮ್ನರಿಗೆ ಎಲೈ ಮಹಾರಾಜನೇ, ಘೋರವೂ ಭಯಂಕರವೂ ಆದ ದೊಡ್ಡ ಯುದ್ಧವು ನಡೆಯಿತು.

ಅರ್ಜುನಃ ಪ್ರಾಪ್ಯ ಗಾಂಗೇಯಂ ಪೀಡಯನ್ ನಿಶಿತೈಃ ಶರೈಃ ।
ಅಭ್ಯದ್ರವತ ಸಂಯತ್ತಂ ವನೇ ಮತ್ತಮಿವ ದ್ವಿಪಮ್ ॥೫೩॥

ಅರ್ಜುನನು ಭೀಷ್ಮರನ್ನು ತೀಕ್ಷ್ಣವಾದ ಬಾಣಗಳಿಂದ ಪೀಡಿಸುತ್ತಾ ಕಾಡಿನಲ್ಲಿ ಗಜವು ಪ್ರತಿಗಜದ ಕಡೆಗೆ ಧಾವಿಸುವಂತೆ ಪ್ರಯತ್ನಶೀಲರಾದ ಭೀಷ್ಮರ ಕಡೆಗೆ ಧಾವಿಸಿದನು.

ಪ್ರತ್ಯುದ್ಯಯೌ ಚ ತಂ ಪಾರ್ಥಂ ಭಗದತ್ತಃ ಪ್ರತಾಪವಾನ್ ।
ತ್ರಿಧಾ ಭಿನ್ನೇನ ನಾಗೇನ ಮದಾಂಧೇನ ಮಹಾಬಲಃ ॥೫೪॥

ಪ್ರತಾಪಶಾಲಿಯೂ, ಮಹಾಬಲನೂ ಆದ ಭಗದತ್ತನು ಮೂರುಧಾರೆಗಳಲ್ಲಿ ಮದೋದಕವನ್ನು ಸುರಿಸುತ್ತಿದ್ದ ಮದಾಂಧವಾದ ತನ್ನ ಗಜದ ಜೊತೆಯಲ್ಲಿ ಅರ್ಜುನನನ್ನು ಎದುರಿಸಿದನು.

ತಮಾಪತಂತಂ ಸಹಸಾ ಮಹೇಂದ್ರಗಜಸನ್ನಿಭಮ್ ।
ಪರಂ ಯತ್ನಂ ಸಮಾಸ್ಥಾಯ ಬೀಭತ್ಸುಃ ಪ್ರತ್ಯಪದ್ಯತ ॥೫೫॥

ಇದ್ದಕ್ಕಿದ್ದಂತೆಯೇ ತನ್ನ ಕಡೆಗೆ ಬರುತ್ತಿದ್ದ ಮಹೇಂದ್ರನ ಐರಾವತದ ಕಾಂತಿಯನ್ನು ಹೊಂದಿದ ಆ ಗಜದ ಸಮೀಪಕ್ಕೆ ಅರ್ಜುನನು ಪರಮ ಪ್ರಯತ್ನಪೂರ್ವಕವಾಗಿ ಬಂದನು.

ತತೋ ಗಜಗತೋ ರಾಜಾ ಭಗದತ್ತಃ ಪ್ರತಾಪವಾನ್ ।
ಅರ್ಜುನಂ ಶರವರ್ಷೇಣ ವಾರಯಾಮಾಸ ಸಂಯುಗೇ ॥೫೬॥

ಆಗ ಗಜದ ಮೇಲಿದ್ದ ಪ್ರತಾಪಶಾಲಿಯಾದ ಭಗದತ್ತ ರಾಜನು ಯುದ್ಧದಲ್ಲಿ ಬಾಣಗಳ ಮಳೆಯಿಂದ ಅರ್ಜುನನನ್ನು ತಡೆದನು.

ಅರ್ಜುನಸ್ತು ರಣೇ ನಾಗಮಾಯಾಂತಂ ರಜತೋಪಮಮ್ ।
ವಿಮಲೈರಾಯಸೈಸ್ತೀಕ್ಷ್ಣೈರವಿಧ್ಯತ ಮಹಾರಣೇ ॥೫೭॥

ಅರ್ಜುನನಾದರೋ ಯುದ್ಧಭೂಮಿಯಲ್ಲಿ ರಜತರಾಶಿಯಂತೆ ತನ್ನ ಕಡೆಗೆ ಬರುತ್ತಿದ್ದ ಆ ಗಜವನ್ನು ವಿಮಲವಾದ ಅಯೋಮಯವಾದ ತೀಕ್ಷ್ಣವಾದ ಬಾಣಗಳಿಂದ ಹೊಡೆದನು.

ಶಿಖಂಡಿನಂ ಚ ಕೌಂತೇಯೋ ಯಾಹಿ ಯಾಹೀತ್ಯಚೋದಯತ್ ।
ಭೀಷ್ಮಂ ಪ್ರತಿ ಮಹಾರಾಜ ಜಹ್ಯೇನಮಿತಿ ಚಾಬ್ರವೀತ್ ॥೫೮॥

ಎಲೈ ಮಹಾರಾಜನೇ, ಮತ್ತು ಅರ್ಜುನನು ಶಿಖಂಡಿಯನ್ನು ಕುರಿತು, ಭೀಷ್ಮರ ಕಡೆಗೆ ಹೋಗು-ಹೋಗು, ಅವರನ್ನು ಕೊಲ್ಲು ಎಂದು ಹೇಳಿ ಪ್ರಚೋದಿಸಿದನು.

ಪ್ರಾಗ್ಜ್ಯೋತಿಷಸ್ತತೋ ಹಿತ್ವಾ ಪಾಂಡವಂ ಪಾಂಡುಪೂರ್ವಜ ।
ಪ್ರಯಯೌ ತ್ವರಿತೋ ರಾಜನ್ ದ್ರುಪದಸ್ಯ ರಥಂ ಪ್ರತಿ ॥೫೯॥

ಎಲೈ ಪಾಂಡುವಿನ ಅಣ್ಣನೇ, ಪ್ರಾಗ್ಜ್ಯೋತಿಷಾಧಿಪತಿಯಾದ ಭಗದತ್ತನು ಆಗ ಅರ್ಜುನನನ್ನು ಬಿಟ್ಟು ಶೀಘ್ರವಾಗಿ ದ್ರುಪದನ ರಥದ ಕಡೆಗೆ ಹೋದನು.

ತತೋಽರ್ಜುನೋ ಮಹಾರಾಜ ಭೀಷ್ಮಮಭ್ಯದ್ರವದ್ ದ್ರುತಮ್ ।
ಶಿಖಂಡಿನಂ ಪುರಸ್ಕೃತ್ಯ ತತೋ ಯುದ್ಧಮವರ್ತತ ॥೬೦॥

ಎಲೈ ಮಹಾರಾಜನೇ, ಆಗ ಅರ್ಜುನನು ಶಿಖಂಡಿಯನ್ನು ಮುಂದೆ ಮಾಡಿಕೊಂಡು ಶೀಘ್ರವಾಗಿ ಭೀಷ್ಮರ ಕಡೆಗೆ ಧಾವಿಸಿದನು. ಅನಂತರ ಯುದ್ಧವು ಜರುಗಿತು.

ತತಸ್ತೇ ತಾವಕಾಃ ಶೂರಾಃ ಪಾಂಡವಂ ರಭಸಂ ರಣೇ ।
ಸರ್ವೇಽಭ್ಯಧಾವನ್ ಕ್ರೋಶಂತಸ್ತದದ್ಭುತಮಿವಾಭವತ್ ॥೬೧॥

ಆಗ ನಿನ್ನ ಶೂರರೆಲ್ಲರೂ ಕಿರುಚುತ್ತಾ ಯುದ್ಧದಲ್ಲಿ ವೇಗಶಾಲಿಯಾದ ಪಾಂಡವನಾದ ಅರ್ಜುನನ ಕಡೆಗೆ ಧಾವಿಸಿದರು. ಅದು ಅದ್ಭುತವಾಗಿದ್ದಿತು.

ನಾನಾವಿಧಾನ್ಯನೀಕಾನಿ ಪುತ್ರಾಣಾಂ ತೇ ಜನಾಧಿಪ ।
ಅರ್ಜುನೋ ವ್ಯಧಮತ್ ಕಾಲೇ ದಿವೀವಾಭ್ರಾಣಿ ಮಾರುತಃ ॥೬೨॥

ಎಲೈ ರಾಜನೇ, ನಿನ್ನ ಪುತ್ರರ ನಾನಾವಿಧವಾದ ಸೇನೆಗಳನ್ನು ಅರ್ಜುನನು ವಾಯುವು ಆಕಾಶದಲ್ಲಿ ಮೋಡಗಳನ್ನು ಹಾರಿಸುವಂತೆ ಹಾರಿಸಿ ನಾಶವನ್ನು ಮಾಡಿದನು.

ಶಿಖಂಡೀ ತು ಸಮಾಸಾದ್ಯ ಭರತಾನಾಂ ಪಿತಾಮಹಮ್ ।
ಇಷುಭಿಸ್ತೂರ್ಣಮವ್ಯಗ್ರೋ ಬಹುಭಿಃ ಸ ಸಮಾಚಿನೋತ್ ॥೬೩॥

ಶಿಖಂಡಿಯಾದರೋ ಭರತರ ಪಿತಾಮಹರಾದ ಭೀಷ್ಮರನ್ನು ಸಮೀಪಿಸಿ ಎಚ್ಚರಿಕೆಯಿಂದ ಅನೇಕ ಬಾಣಗಳನ್ನು ಶೀಘ್ರವಾಗಿ ಅವರ ಮೇಲೆ ಪ್ರಯೋಗಿಸಿದನು.

ಸೋಮಕಾಂಶ್ಚ ರಣೇ ಭೀಷ್ಮೋ ಜಘ್ನೇ ಪಾರ್ಥಪದಾನುಗಾನ್ ।
ನ್ಯವಾರಯತ ಸೈನ್ಯಂ ಚ ಪಾಂಡವಾನಾಂ ಮಹಾರಥಃ ॥೬೪॥

ಮಹಾರಥರಾದ ಭೀಷ್ಮರು ಅರ್ಜುನನ ಅನುಯಾಯಿಗಳಾಗಿದ್ದ ಸೋಮಕರನ್ನು ಯುದ್ಧದಲ್ಲಿ ಕೊಂದು ಪಾಂಡವರ ಸೈನ್ಯವನ್ನೂ ನಿವಾರಿಸಿದರು.

ರಥಾಗ್ನ್ಯಗಾರಶ್ಚಾಪಾರ್ಚಿರಸಿಶಕ್ತಿಗದೇಂಧನಃ ।
ಶರಸಂಘಮಹಾಜ್ವಾಲಃ ಕ್ಷತ್ರಿಯಾನ್ ಸಮರೇऽದಹತ್ ॥೬೫॥

ರಥವೆಂಬ ಅಗ್ನಿಶಾಲೆಗಳಿಂದಲೂ, ಚಾಪವೆಂಬ ಸಣ್ಣ ಜ್ವಾಲೆಗಳಿಂದಲೂ, ಖಡ್ಗ-ಶಕ್ತಿ-ಗದೆಗಳೆಂಬ ಇಂಧನಗಳಿಂದಲೂ, ಬಾಣಗಳ ಸಮೂಹವೆಂಬ ಮಹಾಜ್ವಾಲೆಗಳಿಂದಲೂ ಕೂಡಿದ ಯುದ್ಧಾಗ್ನಿಯು ಕ್ಷತ್ರಿಯರನ್ನು ಸುಟ್ಟುಹಾಕಿತು.

ಯಥಾ ಹಿ ಸುಮಹಾನಗ್ನಿಃ ಕಕ್ಷೇ ಚರತಿ ಸಾನಿಲಃ ।
ತಥಾ ಜಜ್ವಾಲ ಭೀಷ್ಮೋऽಪಿ ದಿವ್ಯಾನ್ಯಸ್ತ್ರಾಣ್ಯುದೀರಯನ್ ॥೬೬॥

ದೊಡ್ಡ ಅಗ್ನಿಯು ವಾಯುವಿನಿಂದ ಕೂಡಿ ಕಾಡಿನಲ್ಲಿ ಸಂಚರಿಸುವಂತೆ ಭೀಷ್ಮರೂ ಸಹ ದಿವ್ಯಾಸ್ತ್ರಗಳನ್ನು ಪ್ರಯೋಗಿಸುತ್ತಾ ಜ್ವಲಿಸಿದರು.

ಸುವರ್ಣಪುಂಖೈರಿಷುಭಿಃ ಶಿತೈಃ ಸನ್ನತಪರ್ವಭಿಃ ।
ನಾದಯನ್ ಸ ದಿಶೋ ಭೀಷ್ಮಃ ಪ್ರದಿಶಶ್ಚ ಮಹಾಯಶಾಃ ॥೬೭॥

ಪಾತಯನ್ ರಥಿನೋ ರಾಜನ್ ಗಜಾಂಶ್ಚ ಸಹ ಸಾದಿಭಿಃ ।
ಮುಂಡತಾಳವನಾನೀವ ಚಕಾರ ಸ ರಥವ್ರಜಾನ್ ॥೬೮॥

ಮಹಾಕೀರ್ತಿಶಾಲಿಗಳಾದ ಭೀಷ್ಮರು ಬಾಗಿದ ತುದಿಗಳುಳ್ಳ, ಸುವರ್ಣ ಪುಂಖಿಗಳುಳ್ಳ ಬಾಣಗಳಿಂದ ದಿಕ್ಕು ಮತ್ತು ಎದಿಕ್ಕುಗಳನ್ನು ಪ್ರಜ್ವಲಿಸುತ್ತಾ, ರಥಗಳಿಂದ ರಥಿಕರನ್ನು ಕೆಡವುತ್ತಾ, ಗಜಾರೋಹಿಗಳ ಜೊತೆಯಲ್ಲಿ ಗಜಗಳನ್ನು ಉರುಳಿಸುತ್ತಾ ರಥಸಮೂಹಗಳನ್ನು ತುದಿಯ ಭಾಗವನ್ನು ಕತ್ತರಿಸಿದ ತಾಳವನದಂತೆ ಮಾಡಿದರು.

ನಿರ್ಮನುಷ್ಯಾನ್ ರಥಾನ್ ರಾಜನ್ ಗಜಾನಶ್ವಾಂಶ್ಚ ಸಂಯುಗೇ ।
ಚಕಾರ ಸ ತದಾ ಭೀಷ್ಮಃ ಸರ್ವಶಸ್ತ್ರಭೃತಾಂ ವರಃ ॥೬೯॥

ಎಲೈ ರಾಜನೇ, ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ ಭೀಷ್ಮರು ಆಗ ರಥಗಳನ್ನೂ, ಗಜಗಳನ್ನೂ ಮತ್ತು ಅಶ್ವಗಳನ್ನೂ ಯುದ್ಧದಲ್ಲಿ ಮನುಷ್ಯಹೀನಗಳನ್ನಾಗಿ ಮಾಡಿದರು.

ತಸ್ಯ ಜ್ಯಾತಳನಿರ್ಘೋಷಂ ವಿಸೃಜ್ಯಂತಮಿವಾಶನೇಃ ।
ನಿಶಮ್ಯ ಸರ್ವತೋ ರಾಜನ್ ಸಮಕಂಪಂತ ಸೈನಿಕಾಃ ॥೭೦॥

ಎಲೈ ರಾಜನೇ, ಸಿಡಿಲಿನ ಆರ್ಭಟದಂತಿದ್ದ ಅವರ ಜ್ಯಾತಳ ನಿರ್ಘೋಷಗಳನ್ನು ಕೇಳಿ ಸೈನಿಕರು ಎಲ್ಲ ಕಡೆಗಳಲ್ಲಿಯೂ ನಡುಗಿದರು.

ಅಮೋಘಾ ಹ್ಯಪತನ್ ಬಾಣಾಃ ಪಿತುಸ್ತೇ ಮನುಜೇಶ್ವರ ।
ನಾಸಜ್ಜಂತ ಶರೀರೇಷು ಭೀಷ್ಮಚಾಪಚ್ಯುತಾಃ ಶರಾಃ ॥೭೧॥

ಎಲೈ ರಾಜನೇ, ನಿನ್ನ ತಂದೆಯು ಪ್ರಯೋಗಿಸಿದ ಬಾಣಗಳು ಅಮೋಘವಾಗಿದ್ದವು. ಭೀಷ್ಮರ ಬಿಲ್ಲಿನಿಂದ ಹೊರಟ ಬಾಣಗಳು ಶರೀರಗಳಲ್ಲೇ ನಾಟಿ ಉಳಿಯಲಿಲ್ಲ (ಶರೀರಗಳನ್ನು ಭೇದಿಸಿ ಭೂಮಿಯಲ್ಲಿ ಇಳಿದವು).

ನಿರ್ಮನುಷ್ಯಾನ್ ರಥಾನ್ ರಾಜನ್ ಸುಯುಕ್ತಾನ್ ಜವನೈರ್ಹಯೈಃ ।
ವಾತಾಯಮಾನಾನ್ ಪಶ್ಯಾಮ ಹ್ರಿಯಮಾಣಾನ್ ವಿಶಾಂಪತೇ ॥೭೨॥

ಎಲೈ ರಾಜನೇ, ಮನುಷ್ಯರಿಲ್ಲದ ರಥಗಳು ಚೆನ್ನಾಗಿ ಹೂಡಿದ ಒಳ್ಳೆಯ ಕುದುರೆಗಳಿಂದ ಬಿರುಗಾಳಿಯಿಂದಲೋ ಎಂಬಂತೆ ಅಲ್ಲಲ್ಲಿ ಎಳೆಯಲ್ಪಡುವುದನ್ನು ನಾವು ನೋಡಿದೆವು.

ಚೇದಿಕಾಶಿಕರೂಷಾಣಾಂ ಸಹಸ್ರಾಣಿ ಚತುರ್ದಶ ।
ಮಹಾರಥಾಃ ಸಮಾಖ್ಯಾತಾಃ ಕುಲಪುತ್ರಾಸ್ತನುತ್ಯಜಃ ॥೭೩॥

ಅಪರಾವರ್ತಿನಃ ಶೂರಾಃ ಸುವರ್ಣವಿಕೃತಧ್ವಜಾಃ ।
ಸಂಗ್ರಾಮೇ ಭೀಷ್ಮಮಾಸಾದ್ಯ ಸವಾಜಿರಥಕುಂಜರಾಃ ।
ಜಗ್ಮುಸ್ತೇ ಪರಲೋಕಾಯ ವ್ಯಾದಿತಾಸ್ಯಮಿವಾಂತಕಮ್ ॥೭೪॥

ಚೇದಿ-ಕಾಶಿ-ಕರೂಷರ ಹದಿನಾಲ್ಕು ಸಾವಿರ ಮಹಾರಥರೂ, ಕುಲಪುತ್ರರೂ, ಶರೀರತ್ಯಾಗಿಗಳೂ, ಯುದ್ಧದಲ್ಲಿ ಹಿಂದಿರುಗದವರೂ, ಶೂರರೂ, ಸುವರ್ಣಾಲಂಕೃತವಾದ ಧ್ವಜವುಳ್ಳವರೂ ಆದ ಯೋಧರು ಬಾಯಿತೆರೆದ ಯಮನಂತಿರುವ ಭೀಷ್ಮರನ್ನು ಸಮೀಪಿಸಿ ತಮ್ಮ ಅಶ್ವ-ಗಜ-ರಥಗಳ ಜೊತೆಯಲ್ಲಿ ಪರಲೋಕಕ್ಕೆ ಹೋದರು.

ನ ತತ್ರಾಸೀನ್ಮಹಾರಾಜ ಸೋಮಕಾನಾಂ ಮಹಾರಥಃ ।
ಯಃ ಸಂಪ್ರಾಪ್ಯ ರಣೇ ಭೀಷ್ಮಂ ಜೀವಿತೇ ಸ್ಮ ಮನೋ ದಧೇ ॥೭೫॥

ಎಲೈ ಮಹಾರಾಜನೇ, ಅಲ್ಲಿ ಭೀಷ್ಮರನ್ನು ಸಮೀಪಿಸಿ ಬದುಕಲು ಆಸೆಯನ್ನು ಮಾಡುವ ಸೋಮಕರ ಯಾವ ಮಹಾರಥನೂ ಇರಲಿಲ್ಲ.

ತಾಂಶ್ಚ ಸರ್ವಾನ್ ರಣೇ ಯೋಧಾನ್ ಪ್ರೇತರಾಜಪುರಂ ಪ್ರತಿ ।
ನೀತಾನಮನ್ಯಂತ ಜನಾ ದೃಷ್ಟ್ವಾ ಭೀಷ್ಮಸ್ಯ ವಿಕ್ರಮಮ್ ॥೭೬॥

ನ ಕಶ್ಚಿದೇನಂ ಸಮರೇ ಪ್ರತ್ಯುದ್ಯಾತಿ ಮಹಾರಥಃ ।
ಋತೇ ಪಾಂಡುಸುತಂ ವೀರಂ ಶ್ವೇತಾಶ್ವಂ ಕೃಷ್ಣಸಾರಥಿಮ್ ।
ಶಿಖಂಡಿನಂ ಚ ಸಮರೇ ಪಾಂಡವ್ಯಮಮಿತೌಜಸಮ್ ॥೭೭॥

ಭೀಷ್ಮರ ವಿಕ್ರಮವನ್ನು ನೋಡಿದ ಜನರು ಯುದ್ಧದಲ್ಲಿ ಭೀಷ್ಮರ ಎದುರಿಗಿದ್ದ ಎಲ್ಲ ಯೋಧರೂ ಯಮಪಟ್ಟಣಕ್ಕೆ ಹೋಗಿದ್ದಾರೆ ಎಂದೇ ತಿಳಿದರು. ಶ್ವೇತಾಶ್ವನೂ, ಕೃಷ್ಣಸಾರಥಿಯೂ, ವೀರನೂ ಆದ ಅರ್ಜುನನನ್ನು ಬಿಟ್ಟು ಅಮಿತಪರಾಕ್ರಮಿಯಾದ ಪಾಂಚಾಲ ದೇಶದ ಶಿಖಂಡಿಯನ್ನು ಬಿಟ್ಟು, ಯಾವ ಮಹಾರಥನೂ ಭೀಷ್ಮರ ಎದುರಿಗೆ ಬರಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ತ್ರಯೋದಶಾಧಿಕಶತತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ತ್ರಿಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನೂರ ಹದಿಮೂರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನಾಲ್ಕನೆಯ ಅಧ್ಯಾಯ

ಅರ್ಜುನ ಮತ್ತು ಭೀಷ್ಮರ ಪರಾಕ್ರಮ.

ಸಂಜಯಃ

ಶಿಖಂಡೀ ತು ರಣೇ ಭೀಷ್ಮಮಾಸಾದ್ಯ ಭರತರ್ಷಭ ।
ದಶಭಿರ್ದಶಭಿರ್ಬಾಣೈರಾಜಘಾನ ಮಹಾಹವೇ ॥೧॥

ಸಂಜಯ– ಎಲೈ ಭರತಶ್ರೇಷ್ಠನೇ, ಶಿಖಂಡಿಯು ಯುದ್ಧದಲ್ಲಿ ಭೀಷ್ಮರನ್ನು ಸಮೀಪಿಸಿ ಹತ್ತು-ಹತ್ತು ಬಾಣಗಳಿಂದ ಅವರನ್ನು ಹೊಡೆದನು.

ಶಿಖಂಡಿನಂ ತು ಗಾಂಗೇಯಃ ಕ್ರೋಧದೀಪ್ತೇನ ಚಕ್ಷುಷಾ ।
ಅವೈಕ್ಷತ ಕಟಾಕ್ಷೇಣ ನಿರ್ದಹನ್ನಿವ ಭಾರತ ॥೨॥

ಎಲೈ ಭಾರತನೇ, ಗಂಗಾಪುತ್ರರಾದ ಭೀಷ್ಮರು ಕ್ರೋಧದೀಪ್ತವಾದ ಕಡೆಗಣ್ಣಿನಿಂದ ಶಿಖಂಡಿಯನ್ನು ಸುಟ್ಟುಬಿಡುವವರಂತೆ ನೋಡಿದರು.

ಸ್ತ್ರೀತ್ವಂ ತತ್ಸಂಸ್ಮರನ್ ರಾಜನ್ ಸರ್ವಲೋಕಸ್ಯ ಪಶ್ಯತಃ ।
ನ ಜಘಾನ ರಣೇ ಭೀಷ್ಮಃ ಸ ಚ ತಂ ನಾವಬುದ್ಧವಾನ್ ॥೩॥

ಎಲೈ ರಾಜನೇ, ಅವನ ಸ್ತ್ರೀತ್ವವನ್ನು ಸ್ಮರಿಸಿ ಸರ್ವಲೋಕವು ನೋಡುತ್ತಿರುವಂತೆ ಯುದ್ಧದಲ್ಲಿ ಅವನನ್ನು ಹೊಡೆಯಲಿಲ್ಲ. ಆದರೆ ಶಿಖಂಡಿಗೆ ಅದು ತಿಳಿಯಲಿಲ್ಲ.

ಅರ್ಜುನಸ್ತು ಮಹಾರಾಜ ಶಿಖಂಡಿನಮಭಾಷತ ।
ಅಭಿತ್ವರಸ್ವ ತ್ವರಿತೋ ಜಹಿ ಚೈನಂ ಪಿತಾಮಹಮ್ ॥೪॥

ಎಲೈ ಮಹಾರಾಜನೇ, ಅರ್ಜುನನು ಶಿಖಂಡಿಯನ್ನು ಕುರಿತು ಮಾತನಾಡಿದನು. ತ್ವರೆಮಾಡು, ಶೀಘ್ರವಾಗಿ ಈ ಪಿತಾಮಹರನ್ನು ಕೊಲ್ಲು.

ಕಿಂ ತೇ ವಿವಕ್ಷಯಾ ವೀರ ಜಹಿ ಭೀಷ್ಮಂ ಮಹಾರಥಮ್ ।
ನ ಹ್ಯನ್ಯಮನುಪಶ್ಯಾಮಿ ಕಂಚಿದ್ ಯೋಧಿಷ್ಠಿರೇ ಬಲೇ ॥೫॥

ಯಃ ಶಕ್ತಃ ಸಮರೇ ಭೀಷ್ಮಂ ಯೋಧಯೇತ ಪಿತಾಮಹಮ್ ।
ಋತೇ ತ್ವಾಂ ಪುರುಷವ್ಯಾಘ್ರ ಸತ್ಯಮೇತದ್ ಬ್ರವೀಮಿ ತೇ ॥೬॥

ನಿನ್ನ ಮನಸ್ಸಿನಲ್ಲಿ ಏನನ್ನು ಯೋಚಿಸುತ್ತಿದ್ದೀಯೆ? ಮಹಾರಥರಾದ ಭೀಷ್ಮರನ್ನು ಕೊಲ್ಲು. ಯುಧಿಷ್ಠಿರ ಸೈನ್ಯದಲ್ಲಿ ಪಿತಾಮಹರಾದ ಭೀಷ್ಮರ ಜೊತೆಯಲ್ಲಿ ಪುರುಷ ವ್ಯಾಘ್ರನಾದ ನಿನ್ನನ್ನು ಬಿಟ್ಟು ಯುದ್ಧ ಮಾಡಲು ಸಮರ್ಥರಾದ ಬೇರೆ ಯಾರನ್ನೂ ನಾನು ಕಾಣುತ್ತಿಲ್ಲ. ಇದನ್ನು ಸತ್ಯವಾಗಿ ನಿನಗೆ ಹೇಳುತ್ತಿದ್ದೇನೆ (ಎಂದು ಹೇಳಿದನು).

ಏವಮುಕ್ತಸ್ತು ಪಾರ್ಥೇನ ಶಿಖಂಡೀ ಭರತರ್ಷಭ ।
ಶರೈರ್ನಾನಾವಿಧೈಸ್ತೂರ್ಣಂ ಪಿತಾಮಹಮುಪಾದ್ರವತ್ ॥೭॥

ಎಲೈ ಭರತಶ್ರೇಷ್ಠನೇ, ಅರ್ಜುನನಿಂದ ಹೀಗೆ ಹೇಳಲ್ಪಟ್ಟ ಶಿಖಂಡಿಯು ಶೀಘ್ರವಾಗಿ ನಾನಾ ವಿಧವಾದ ಬಾಣಗಳನ್ನು ಪ್ರಯೋಗಿಸುತ್ತಾ ಪಿತಾಮಹರ ಕಡೆಗೆ ಮುನ್ನುಗ್ಗಿದನು.

ಅಚಿಂತಯಿತ್ವಾ ತಾನ್ ಬಾಣಾನ್ ಪಿತಾ ದೇವವ್ರತಸ್ತವ ।
ಅರ್ಜುನಂ ಸಮರೇ ಕ್ರುದ್ಧಂ ವಾರಯಾಮಾಸ ಸಾಯಕೈಃ ॥೮॥

ನಿನ್ನ ತಂದೆಯಾದ ಭೀಷ್ಮರು ಆ ಬಾಣಗಳನ್ನು ಗಣನೆಗೇ ತಂದುಕೊಳ್ಳದೇ ಕ್ರುದ್ಧರಾಗಿ ಯುದ್ಧದಲ್ಲಿ ಅರ್ಜುನನನ್ನು ತಮ್ಮ ಬಾಣಗಳಿಂದ ತಡೆದರು.

ತಥೈವ ಚ ಚಮೂಂ ಸರ್ವಾಂ ಪಾಂಡವಾನಾಂ ಮಹಾರಥಃ ।
ಅಪ್ರೈಷೀತ್ ಸಮರೇ ತೀಕ್ಷ್ಣೈಃ ಪರಲೋಕಾಯ ಮಾರಿಷ ॥೯॥

ಎಲೈ ಶ್ರೇಷ್ಠನೇ, ಹಾಗೆಯೇ ಮಹಾರಥರಾದ ಅವರು ತಮ್ಮ ತೀಕ್ಷ್ಣವಾದ ಬಾಣಗಳಿಂದ ಪಾಂಡವರ ಸೈನ್ಯವನ್ನೆಲ್ಲಾ ಪರಲೋಕಕ್ಕೆ ಕಳುಹಿಸಿದರು.

ತಥೈವ ಪಾಂಡವಾ ರಾಜನ್ ಸೈನ್ಯೇನ ಮಹತಾ ವೃತಾಃ ।
ಭೀಷ್ಮಂ ಪ್ರಚ್ಛಾದಯಾಮಾಸುರ್ಮೇಘಾ ಇವ ದಿವಾಕರಮ್ ॥೧೦॥

ಎಲೈ ರಾಜನೇ, ಹಾಗೆಯೇ ಪಾಂಡವರೂ ಸಹ ದೊಡ್ಡ ಸೈನ್ಯದಿಂದ ಕೂಡಿದವರಾಗಿ ಮೋಡಗಳು ಸೂರ್ಯನನ್ನು ಮುಚ್ಚಿದಂತೆ ತಮ್ಮ ಬಾಣಗಳಿಂದ ಭೀಷ್ಮರನ್ನು ಮುಚ್ಚಿದರು.

ಸ ಸಮಂತಾತ್ ಪರಿವೃತೋ ಭಾರತೋ ಭರತರ್ಷಭ ।
ನಿರ್ದದಾಹ ರಣೇ ಶೂರಾನ್ ವನಂ ವಹ್ನಿರಿವ ಜ್ವಲನ್ ॥೧೧॥

ಎಲೈ ಭರತಶ್ರೇಷ್ಠನೇ, ಎಲ್ಲಕಡೆಯಿಂದಲೂ ಸುತ್ತುವರಿಯಲ್ಪಟ್ಟ ಭೀಷ್ಮ ಕಾಡಿನಲ್ಲಿ ಅಗ್ನಿಯಂತೆ ಜ್ವಲಿಸುತ್ತಾ ಯುದ್ಧದಲ್ಲಿ ಶತ್ರುಗಳನ್ನು ದಹಿಸಿದರು.

ತತ್ರಾದ್ಭುತಮಪಶ್ಯಾಮ ತವ ಪುತ್ರಸ್ಯ ಪೌರುಷಮ್ ।
ಅಯೋಧಯತ ಯತ್ ಪಾರ್ಥಂ ಜುಗೋಪ ಚ ಯತವ್ರತಮ್ ॥೧೨॥

ಅಲ್ಲಿ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಿ ಭೀಷ್ಮರನ್ನು ರಕ್ಷಿಸುತ್ತಿದ್ದ ನಿನ್ನ ಪುತ್ರನ ಅದ್ಭುತವಾದ ಪರಾಕ್ರಮವನ್ನು ನಾವು ನೋಡಿದೆವು.

ಕರ್ಮಣಾ ತೇನ ಸಮರೇ ತವ ಪುತ್ರಸ್ಯ ಧನ್ವಿನಃ ।
ದುಃಶಾಸನಸ್ಯ ತುತುಷುಃ ಸರ್ವೇ ಲೋಕಾ ಮಹಾತ್ಮನಃ ॥೧೩॥

ಧನುರ್ಧಾರಿಯೂ, ಮಹಾತ್ಮನೂ ಆದ, ನಿನ್ನ ಪುತ್ರನಾದ ದುಶ್ಶಾಸನನ ಆ ಯುದ್ಧಕರ್ಮದಿಂದ ಎಲ್ಲ ಜನರೂ ಸಂತೋಷಗೊಂಡರು.

ಯದೇಕಃ ಸಮರೇ ಪಾರ್ಥಾನ್ ಸಾನುಗಾನ್ ಸಮಯೋಧಯತ್ ।
ನ ಚೈನಂ ಪಾಂಡವಾ ಯುದ್ಧೇ ವಾರಯಾಮಾಸುರುಲ್ಬಣಮ್ ॥೧೪॥

ಏಕೆಂದರೆ ಅವನು ಒಬ್ಬನೇ ಅನುಚರರಿಂದ ಸಹಿತರಾದ ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡಿದನು. ಯುದ್ಧದಲ್ಲಿ ಉಲ್ಬಣನಾಗಿದ್ದ ಅವನನ್ನು ಪಾಂಡವರು ತಡೆಯಲು ಸಾಧ್ಯವಾಗಲಿಲ್ಲ.

ದುಃಶಾಸನೇನ ಸಮರೇ ರಥಿನೋ ವಿರಥೀಕೃತಾಃ ।
ಸಾದಿನಶ್ಚ ಮಹಾರಾಜ ದಂತಿನಶ್ಚ ಮಹಾಬಲಾಃ ॥೧೫॥

ವಿನಿರ್ಭಿನ್ನಾಃ ಶರೈಸ್ತೀಕ್ಷ್ಣೈರ್ನಿಪೇತುರ್ಧರಣೀತಳೇ ।
ಶರಾತುರಾಸ್ತಥೈವಾನ್ಯೇ ದಂತಿನೋ ವಿದ್ರುತಾ ದಿಶಃ ॥೧೬॥

ಎಲೈ ಮಹಾರಾಜನೇ, ದುಶ್ಶಾಸನನಿಂದ ಯುದ್ಧದಲ್ಲಿ ರಥಿಕರು ರಥಹೀನರಾಗಿ ಮಾಡಲ್ಪಟ್ಟರು. ಮಹಾಬಲವುಳ್ಳ ಅಶ್ವಾರೋಹಿಗಳು ಮತ್ತು ಗಜಾರೋಹಿಗಳು ತೀಕ್ಷ್ಣವಾದ ಬಾಣಗಳಿಂದ ಭೇದಿಸಲ್ಪಟ್ಟು ಭೂತಳದಲ್ಲಿ ಬಿದ್ದರು. ಶರಪೀಡಿತವಾದ ಇನ್ನು ಕೆಲವು ಗಜಗಳು ದಿಕ್ಕು-ದಿಕ್ಕುಗಳಿಗೆ ಓಡಿಹೋದವು.

ಯಥಾಗ್ನಿರಿಂಧನಂ ಪ್ರಾಪ್ಯ ಜ್ವಲೇದ್ ದೀಪ್ತಾರ್ಚಿರುಲ್ಬಣಃ ।
ತಥಾ ಜಜ್ವಾಲ ಪುತ್ರಸ್ತೇ ಪಾಂಡವಾನ್ ವೈ ವಿನಿರ್ದಹನ್ ॥೧೭॥

ಹೇಗೆ ಅಗ್ನಿಯು ಇಂಧನವನ್ನು ಹೊಂದಿ ಪ್ರಕಾಶಮಾನವಾದ ಜ್ವಾಲೆಗಳಿಂದ ಉಲ್ಬಣವಾಗಿ ಜ್ವಲಿಸುತ್ತದೆಯೋ ಅದರಂತೆ ನಿನ್ನ ಪುತ್ರನು ಪಾಂಡವ ಸೈನ್ಯವನ್ನು ದಹಿಸುತ್ತಾ ಜ್ವಲಿಸಿದನು.

ತಂ ಭಾರತಮಹಾಮಾತ್ರಂ ಪಾಂಡವಾನಾಂ ಮಹಾರಥಃ ।
ಜೇತುಂ ನೋತ್ಸಹತೇ ಕಶ್ಚಿನ್ನಾಪ್ಯುದ್ಯಾತುಂ ಕಥಂಚನ ।
ಋತೇ ಮಹೇಂದ್ರತನಯಂ ಶ್ವೇತಾಶ್ವಂ ಕೃಷ್ಣಸಾರಥಿಮ್ ॥೧೮॥

ಮಹೇಂದ್ರಪುತ್ರನೂ, ಕೃಷ್ಣಸಾರಥಿಯೂ ಆದ ಅರ್ಜುನನೊಬ್ಬನನ್ನು ಬಿಟ್ಟು ಭಾರತಪ್ರಧಾನನಾದ ದುಶ್ಶಾಸನನನ್ನು ಗೆಲ್ಲಲು ಅಥವಾ ಅವನ ಮೇಲೆ ಎರಗಲು ಪಾಂಡವರ ಯಾವ ಮಹಾರಥನೂ ಬಯಸಲಿಲ್ಲ.

ಸ ಹಿ ತಂ ಸಮರೇ ರಾಜನ್ ವಿಜಿತ್ಯ ವಿಜಯೋಽರ್ಜುನಃ ।
ಭೀಷ್ಮಮೇವಾಭಿದುದ್ರಾವ ಸರ್ವಸೈನ್ಯಸ್ಯ ಪಶ್ಯತಃ ॥೧೯॥

ಎಲೈ ರಾಜನೇ, ವಿಜಯನಾದ ಅರ್ಜುನನಾದರೋ ಯುದ್ಧದಲ್ಲಿ ಅವನನ್ನು ಗೆದ್ದು ಎಲ್ಲಸೈನ್ಯವೂ ನೋಡುತ್ತಿರುವಂತೆಯೇ ಭೀಷ್ಮರ ಕಡೆಗೆ ಧಾವಿಸಿದನು.

ವಿಜಿತಸ್ತವ ಪುತ್ರೋಽಪಿ ಭೀಷ್ಮಬಾಹುವ್ಯಪಾಶ್ರಯಃ ।
ಪುನಃ ಪುನಃ ಸಮಾಶ್ವಸ್ಯ ಪ್ರಾಯುದ್ಧತ ರಣೋತ್ಕಟಃ ।
ಅರ್ಜುನಂ ಚ ರಣೇ ರಾಜನ್ ಯೋಧಯನ್ ಸ ವ್ಯರಾಜತ ॥೨೦॥

ಪರಾಜಿತನಾದ ನಿನ್ನ ಪುತ್ರನೂ ಸಹ ಭೀಷ್ಮರ ಬಾಹುಗಳನ್ನು ಆಶ್ರಯಿಸಿದವನಾಗಿ ಪುನಃ ಪುನಃ ಸುಧಾರಿಸಿಕೊಂಡು, ರಣೋತ್ಕಟನಾಗಿ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಿದನು. ರಾಜನೇ, ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಾ ಅವನು ಶೋಭಿಸಿದನು.

ಶಿಖಂಡೀ ತು ರಣೇ ರಾಜನ್ ವಿವ್ಯಾಧೈವ ಪಿತಾಮಹಮ್ ।
ಶರೈರಶನಿಸಂಸ್ಪರ್ಶೈಸ್ತಥಾ ಸರ್ಪವಿಷೋಪಮೈಃ ॥೨೧॥

ಎಲೈ ರಾಜನೇ, ಶಿಖಂಡಿಯಾದರೋ ವಜ್ರದ ಸ್ಪರ್ಶದಂತಿದ್ದ ಸರ್ಪವಿಷದಂತಿದ್ದ ಬಾಣಗಳಿಂದ ಪಿತಾಮಹರನ್ನು ಹೊಡೆದೇ ಹೊಡೆದನು.

ನ ಚ ತೇಽಸ್ಯ ರುಜಂ ಚಕ್ರುಃ ಪಿತುಸ್ತವ ಜನೇಶ್ವರ ।
ಸ್ಮಯಮಾನಶ್ಚ ಗಾಂಗೇಯಸ್ತಾನ್ ಬಾಣಾನ್ ಜಗೃಹೇ ತದಾ ॥೨೨॥

ಎಲೈ ರಾಜನೇ, ಆ ಬಾಣಗಳು ನಿನ್ನ ತಂದೆಯಾದ ಭೀಷ್ಮರನ್ನು ವ್ಯಥೆ ಪಡಿಸಲಿಲ್ಲ. ಗಂಗಾಪುತ್ರರಾದ ಅವರು ನಗುತ್ತಲೇ ಆ ಬಾಣಗಳನ್ನು ಸ್ವೀಕರಿಸಿದರು.

ಉಷ್ಣಾರ್ತೋ ಹಿ ನರೋ ಯದ್ವಜ್ಜಲಧಾರಾಃ ಪ್ರತೀಚ್ಛತಿ ।
ತಥಾ ಜಗ್ರಾಹ ಗಾಂಗೇಯಃ ಶರಧಾರಾಃ ಶಿಖಂಡಿನಃ ॥೨೩॥

ಉಷ್ಣಾರ್ತನಾದ (ಬಿಸಿಲಿಗೆ ಬಳಲಿದ) ಮನುಷ್ಯನು ಹೇಗೆ ಜಲಧಾರೆಗಳನ್ನು ಸ್ವೀಕರಿಸುತ್ತಾನೆಯೋ ಹಾಗೆ ಭೀಷ್ಮರು ಶಿಖಂಡಿಯ ಶರಧಾರೆಗಳನ್ನು ಸ್ವೀಕರಿಸಿದರು.

ತಂ ಕ್ಷತ್ರಿಯಾ ಮಹಾರಾಜ ದದೃಶುರ್ಭೀಮಮಾಹವೇ ।
ಭೀಷ್ಮಂ ದಹಂತಂ ಸೈನ್ಯಾನಿ ಪಾಂಡವಾನಾಂ ಮಹಾತ್ಮನಾಮ್ ॥೨೪॥

ಎಲೈ ಮಹಾರಾಜನೇ, ಯುದ್ಧದಲ್ಲಿ ಮಹಾತ್ಮರಾದ ಪಾಂಡವರ ಸೈನ್ಯಗಳನ್ನು ದಹಿಸುತ್ತಿದ್ದ ಘೋರರಾದ ಭೀಷ್ಮರನ್ನು ಕ್ಷತ್ರಿಯರು ನೋಡಿದರು.

ತತೋಽಬ್ರವೀತ್ ತವ ಸುತಃ ಸರ್ವಸೈನ್ಯಾನಿ ಮಾರಿಷ ।
ಆಧಿದ್ರವತ ಸಂಗ್ರಾಮೇ ಫಲ್ಗುನಂ ಸರ್ವತೋ ರಥೈಃ ॥೨೫॥

ಭೀಷ್ಮೋ ವಃ ಸಮರೇ ಸರ್ವಾನ್ ಪಾಲಯಿಷ್ಯತಿ ಧರ್ಮವಿತ್ ।
ತೇ ಭಯಂ ಸುಮಹತ್ ತ್ಯಕ್ತ್ವಾ ಪಾಂಡವಾನ್ ಪ್ರತಿಯುಧ್ಯತ ॥೨೬॥

ಎಲೈ ಶ್ರೇಷ್ಠನೇ, ಆಗ ನಿನ್ನ ಪುತ್ರನು ಎಲ್ಲಾ ಸೈನ್ಯಗಳನ್ನು ಕುರಿತು, ಯುದ್ಧದಲ್ಲಿ ಎಲ್ಲರೂ ನಿಮ್ಮ ರಥಗಳಿಂದ ಎಲ್ಲ ಕಡೆಗಳಿಂದಲೂ ಅರ್ಜುನನ ಕಡೆಗೆ ಧಾವಿಸಿ. ನಿಮ್ಮೆಲ್ಲರನ್ನೂ ಧರ್ಮಜ್ಞರಾದ ಭೀಷ್ಮರು ಯುದ್ಧದಲ್ಲಿ ರಕ್ಷಿಸುವರು ಎಂದು ಹೇಳಿದನು. ಅವರು ತಮ್ಮ ದೊಡ್ಡ ಭಯವನ್ನು ತ್ಯಜಿಸಿ ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ಏಷ ತಾಲೇನ ದೀಪ್ತೇನ ಭೀಷ್ಮಃಶತ್ರು ಪಾಲಯನ್ ।
ಸರ್ವೇಷಾಂ ಧಾರ್ತರಾಷ್ಟ್ರಾಣಾಂ ರಣೇ ಶರ್ಮ ಚ ವರ್ಮ ಚ ॥೨೭॥

ಪ್ರಕಾಶಮಾನವಾದ ತಾಳಧ್ವಜದಿಂದ ಕೂಡಿದ ಭೀಷ್ಮರು ನಿಮ್ಮನ್ನು ರಕ್ಷಿಸುತ್ತಾ ಎಲ್ಲ ಧೃತರಾಷ್ಟ್ರ ಪುತ್ರರಿಗೂ ಯುದ್ಧದಲ್ಲಿ ಸುಖವನ್ನು ಮತ್ತು ರಕ್ಷಣೆಯನ್ನು ಕೊಡುತ್ತಿದ್ದಾರೆ.

ತ್ರಿದಶಾಪಿ ಸಮುದ್ಯುಕ್ತಾ ನಾಲಂ ಭೀಷ್ಮಂ ಸಮಾಸಿತುಮ್ ।
ತಮು ತಾರ್ತಾ ಮಹಾತ್ಮಾನಂ ಮರ್ತ್ಯಭೂತಾಸ್ತಥಾऽಬಲಾಃ ।
ತಸ್ಮಾದ್ ದ್ರವತ ಹೇ ಯೋಧಾಃ ಫಲ್ಗುನಂ ಪ್ರಾಪ್ಯ ಸಂಯುಗೇ ॥೨೮॥

ದೇವತೆಗಳು ಒಳ್ಳೆಯ ಪ್ರಯತ್ನವನ್ನು ಮಾಡಿದರೂ ಭೀಷ್ಮರ ಜೊತೆಯಲ್ಲಿ ಯುದ್ಧವನ್ನು ಮಾಡಲಾರರು. ಇನ್ನು ಮರ್ತ್ಯರೂ, ಅಬಲರೂ ಆದ ಪಾಂಡವರು ಮಹಾತ್ಮರಾದ ಭೀಷ್ಮರ ಜೊತೆಯಲ್ಲಿ ಹೇಗೆ ಯುದ್ಧವನ್ನು ಮಾಡಿಯಾರು? ಆದ್ದರಿಂದ ಎಲೈ ಯೋಧರೇ, ಅರ್ಜುನನನ್ನು ಉದ್ದೇಶಿಸಿ ಯುದ್ಧದಲ್ಲಿ ಅವನ ಕಡೆಗೆ ಧಾವಿಸಿ.

ಅಹಮದ್ಯ ರಣೇ ಯತ್ತೋ ಯೋಧಯಿಷ್ಯಾಮಿ ಫಲ್ಗುನಮ್ ।
ಸಹಿತಃ ಸರ್ವತೋ ಯತ್ತೈರ್ಭವದ್ಭಿರ್ವಸುಧಾಧಿಪಾಃ ॥೨೯॥

ಎಲೈ ರಾಜರೇ, ಪ್ರಯತ್ನಶೀಲರಾದ ನಿಮ್ಮೆಲ್ಲರಿಂದಲೂ ಸಹಿತನಾಗಿ ನಾನು ಈ ದಿನ ಜಾಗರೂಕನಾಗಿ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡುವೆನು (ಎಂದು ದುರ್ಯೋಧನನು ಹೇಳಿದನು).

ತಚ್ಛ್ರುತ್ವಾ ತು ವಚೋ ರಾಜಂಸ್ತವ ಪುತ್ರಸ್ಯ ಧನ್ವಿನಃ ।
ಅರ್ಜುನಂ ಪ್ರತಿ ಸಂಯತ್ತಾ ಬಲವಂತೋ ಮಹಾರಥಾಃ ॥೩೦॥

ತೇ ವಿದೇಹಾಃ ಕಳಿಂಗಾಶ್ಚ ದಾಶೇರಕಗಣೈಃ ಸಹ ।
ಅಭಿಪೇತುರ್ನಿಷಾದಾಶ್ಚ ಸೌವೀರಾಶ್ಚ ಮಹಾರಣೇ ॥೩೧॥

ಎಲೈ ರಾಜನೇ, ಧನುರ್ಧಾರಿಯಾದ ನಿನ್ನ ಪುತ್ರನ ಆ ಮಾತುಗಳನ್ನು ಕೇಳಿ ಬಲಿಷ್ಠರಾದ ಮಹಾರಥರಾದ ವಿದೇಹರು ಮತ್ತು ಕಳಿಂಗರು ದಾಶೇರಕಗಣಗಳ ಜೊತೆಯಲ್ಲಿ ಅರ್ಜುನನ ಮೇಲೆ ಎರಗಿದರು. ನಿಷಾದರೂ ಮತ್ತು ಸೌವೀರರೂ ಮಹಾಯುದ್ಧದಲ್ಲಿ ಅರ್ಜುನನ ಮೇಲೆ ಎರಗಿದರು.

ಬಾಹ್ಲಿಕಾ ದರದಾಶ್ಚೈವ ಪ್ರಾಚ್ಯೋದೀಚ್ಯಾಶ್ಚ ಮಾಲವಾಃ ।
ಅಭೀಷಾಹಾಃ ಶೂರಸೇನಾಃ ಶಿಬಯೋಽಥ ವಸಾತಯಃ ॥೩೨॥

ಸಾಲ್ವಾಶ್ರಯಾಸ್ತ್ರಿಗರ್ತಾಶ್ಚ ಅಂಬಷ್ಠಾಃ ಕೇಕಯೈಃ ಸಹ ।
ಅಭಿಪೇತೂ ರಣೇ ಪಾರ್ಥಂ ಪತಂಗಾ ಇವ ಪಾವಕಮ್ ॥೩೩॥

ಬಾಹ್ಲಿಕರು, ದರದರು, ಪೂರ್ವ ಮತ್ತು ಉತ್ತರ ದಿಕ್ಕಿನವರು, ಮಾಲವರು, ಅಭೀಷಾಹರು, ಶೂರಸೇನರು, ವಸಾತಿಗಳು, ಸಾಲ್ವನನ್ನು ಆಶ್ರಯಿಸಿದವರು, ತ್ರಿಗರ್ತರು, ಕೇಕಯರ ಜೊತೆಯಲ್ಲಿ ಸೇರಿದ ಅಂಬಷ್ಠರು- ಎಲ್ಲರೂ ಪತಂಗಗಳು ಅಗ್ನಿಯ ಮೇಲೆ ಬೀಳುವಂತೆ ಯುದ್ಧದಲ್ಲಿ ಅರ್ಜುನನ ಮೇಲೆ ಬಿದ್ದರು.

ಸ ತಾನ್ ಸರ್ವಾನ್ ಸಹಾನೀಕಾನ್ ಮಹಾರಾಜ ಮಹಾರಥಾನ್ ।
ದಿವ್ಯಾನ್ಯಸ್ತ್ರಾಣಿ ಸಂಚಿಂತ್ಯ ಪ್ರಸಂಧಾಯ ಧನಂಜಯಃ ॥೩೪॥

ಸ ತೈರಸ್ತ್ರೈರ್ಮಹಾವೇಗೈರ್ದದಾಹಾಶು ಮಹಾಬಲಃ ।
ಶರಪ್ರತಾಪೈರ್ಬಿಭೃತ್ಸುಃ ಪತಂಗಾನಿವ ಪಾವಕಃ ॥೩೫॥

ಎಲೈ ಮಹಾರಾಜನೇ, ಧನಂಜಯನಾದರೋ ದಿವ್ಯಾಸ್ತ್ರಗಳನ್ನು ಧ್ಯಾನ ಮಾಡಿ ಧನುಸ್ಸಿನಲ್ಲಿ ಹೂಡಿ ಆ ಎಲ್ಲ ಮಹಾರಥರನ್ನೂ ಮಹಾಬಲನಾದ ಅವನು ಅಗ್ನಿಯು ಪತಂಗಗಳನ್ನು ದಹಿಸುವಂತೆ ಮಹಾವೇಗವುಳ್ಳ ತನ್ನ ಅಸ್ತ್ರಗಳ ಮತ್ತು ಬಾಣಗಳ ಪ್ರತಾಪದಿಂದ ಶೀಘ್ರವಾಗಿ ದಹಿಸಿದನು.

ತಸ್ಯ ಬಾಣಸಹಸ್ರಾಣಿ ಸೃಜತೋ ದೃಢಧನ್ವಿನಃ ।
ದೀಪ್ಯಮಾನಮಿವಾಕಾಶೇ ಗಾಂಡೀವಂ ಸಮದೃಶ್ಯತ ॥೩೬॥

ದೃಢವಾದ ಧನುಸ್ಸನ್ನು ಹೊಂದಿ, ಸಹಸ್ರಾರು ಬಾಣಗಳನ್ನು ಸೃಷ್ಟಿಸುವ ಅವನ ಗಾಂಡೀವ ಧನುಸ್ಸು ಆಕಾಶದಲ್ಲಿ ಹೊಳೆಯುವಂತೆ ತೋರುತ್ತಿದ್ದಿತು.

ತೇ ಶರಾರ್ತಾ ಮಹಾರಾಜ ವಿಪ್ರಕೀರ್ಣರಥಧ್ವಜಾಃ ।
ನಾಭ್ಯವರ್ತಂತ ರಾಜಾನಃ ಸಹಿತಾ ವಾನರಧ್ವಜಮ್ ॥೩೭॥

ಎಲೈ ಮಹಾರಾಜನೇ, ಬಾಣಗಳ ಹೊಡೆತಕ್ಕೆ ಸಿಕ್ಕಿ ತಮ್ಮ ರಥ-ಧ್ವಜಗಳನ್ನು ಭಗ್ನಗೊಳಿಸಿಕೊಂಡ ರಾಜರು ತಾವೂ ಸಹಿತರಾಗಿ ಕಪಿಧ್ವಜನಾದ ಅರ್ಜುನನ ಬಳಿಗೆ ಬರಲಿಲ್ಲ.

ಸಧ್ವಜಾ ರಥಿನಃ ಪೇತುರ್ಹಯಾರೋಹಾ ಹಯೈಃ ಸಹ ।
ಗಜಾಃ ಸಹ ಗಜಾರೋಹೈಃ ಕಿರೀಟಿಶರತಾಡಿತಾಃ ॥೩೮॥

ಅರ್ಜುನನ ಬಾಣಗಳಿಂದ ತಾಡಿತರಾಗಿ ಧ್ವಜಸಹಿತರಾದ ರಥಿಕರು, ಅಶ್ವಗಳಿಂದ ಸಹಿತರಾದ ಅಶ್ವಾರೋಹಿಗಳು, ಗಜಗಳಿಂದ ಸಹಿತರಾದ ಗಜಾರೋಹಿಗಳು ನೆಲದ ಮೇಲೆ ಉರುಳಿದರು.

ತತೋಽರ್ಜುನಭುಜೋತ್ಸೃಷ್ಟೈರಾವೃತಾऽऽಸೀದ್ ವಸುಂಧರಾ ।
ವಿದ್ರವದ್ಭಿಶ್ಚ ಬಹುಧಾ ಬಲೈ ರಾಜ್ಞಾಂ ಸಮಂತತಃ ॥೩೯॥

ಆಗ ಅರ್ಜುನನ ಭುಜಗಳಿಂದ ಪ್ರಯೋಗಿಸಲ್ಪಟ್ಟ ಬಾಣಗಳಿಂದ ಪೀಡಿತವಾಗಿ ಅನೇಕ ವಿಧವಾಗಿ ಓಡಿಹೋಗುವ ರಾಜರ ಸೇನೆಗಳಿಂದ ರಣಭೂಮಿಯು ಎಲ್ಲಾ ಕಡೆಯಲ್ಲಿಯೂ ತುಂಬಿಹೋಯಿತು.

ಅಥ ಪಾರ್ಥೋ ಮಹಾಬಾಹುರ್ದ್ರಾವಯಿತ್ವಾ ವರೂಥಿನೀಮ್ ।
ದುಃಶಾಸನಾಯ ಸಮರೇ ಪ್ರೇಷಯಾಮಾಸ ಸಾಯಕಾನ್ ॥೪೦॥

ಅನಂತರ ಮಹಾಬಾಹುವಾದ ಅರ್ಜುನನು ಕೌರವಸೇನೆಯನ್ನು ಓಡಿಸಿ ದುಶ್ಶಾಸನನ ಮೇಲೆ ಬಾಣಗಳನ್ನು ಪ್ರಯೋಗಿಸಿದನು.

ತೇ ತು ಭಿತ್ತ್ವಾ ತವ ಸುತಂ ದುಃಶಾಸನಮಯೋಮುಖಾಃ ।
ಧರಣೀಂ ವಿವಿಶುಃ ಸರ್ವೇ ವಲ್ಮೀಕಮಿವ ಪನ್ನಗಾಃ ।
ಹಯಾಂಶ್ಚಾಸ್ಯ ತತೋ ಜಘ್ನೇ ಸಾರಥಿಂ ಚ ನ್ಯಹಾತಯತ್ ॥೪೧॥

ಅಯೋಮುಖವನ್ನು ಹೊಂದಿದ ಆ ಬಾಣಗಳೆಲ್ಲವೂ ನಿನ್ನ ಪುತ್ರನಾದ ದುಶ್ಶಾಸನನನ್ನು ಭೇದಿಸಿ, ಸರ್ಪಗಳು ಹುತ್ತದೊಳಗೆ ಹೋಗುವಂತೆ ಭೂಮಿಯನ್ನು ಪ್ರವೇಶಿಸಿದವು. ಅನಂತರ ಅರ್ಜುನನು ದುಶ್ಶಾಸನನ ರಥದ ಅಶ್ವಗಳನ್ನು ಮತ್ತು ಸಾರಥಿಯನ್ನು ಉರುಳಿಸಿದನು.

ವಿವಿಂಶತಿಂ ಚ ವಿಂಶತ್ಯಾ ವಿರಥಂ ಕೃತವಾನ್ ಪ್ರಭೋ ।
ಆಜಘಾನ ಭೃಶಂ ಚೈವ ಪಂಚಭಿರ್ನತಪರ್ವಭಿಃ ॥೪೨॥

ಎಲೈ ಪ್ರಭುವೇ, ಇಪ್ಪತ್ತು ಬಾಣಗಳನ್ನು ಪ್ರಯೋಗಿಸಿ ವಿವಿಂಶತಿಯನ್ನು ರಥಹೀನನನ್ನಾಗಿ ಮಾಡಿದನು. ಮತ್ತು ಬಾಗಿದ ತುದಿಯುಳ್ಳ ಐದು ಬಾಣಗಳಿಂದ ಅವನನ್ನೂ ಚೆನ್ನಾಗಿ ಹೊಡೆದನು.

ಕೃಪಂ ಶಲ್ಯಂ ವಿಕರ್ಣಂ ಚ ವಿದ್ಧ್ವಾ ಬಹುಭಿರಾಯಸೈಃ ।
ಚಕಾರ ವಿರಥಾಂಶ್ಚೈವ ಕೌಂತೇಯಃ ಶ್ವೇತವಾಹನಃ ॥೪೩॥

ಕುಂತೀಪುತ್ರನೂ, ಶ್ವೇತವಾಹನನೂ ಆದ ಅರ್ಜುನನು ಕೃಪರು, ಶಲ್ಯ, ವಿಕರ್ಣ ಇವರನ್ನು ಅನೇಕ ಅಯೋಮಯವಾದ ಬಾಣಗಳಿಂದ ಹೊಡೆದು ಅವರನ್ನು ರಥಹೀನರನ್ನಾಗಿ ಮಾಡಿದನು.

ಏವಂ ತೇ ವಿರಥಾಃ ಪಂಚ ಕೃಪಃ ಶಲ್ಯಶ್ಚ ಮಾರಿಷ ।
ದುಃಶಾಸನೋ ವಿಕರ್ಣಶ್ಚ ತಥೈವ ಚ ವಿವಿಂಶತಿಃ ।
ಸಂಪ್ರಾದ್ರವಂತ ಸಮರೇ ನಿರ್ಜಿತಾಃ ಸವ್ಯಸಾಚಿನಾ ॥೪೪॥

ಎಲೈ ಪೂಜ್ಯನೇ, ಹೀಗೆ ಕೃಪರು, ಶಲ್ಯ, ದುಶ್ಶಾಸನ, ವಿಕರ್ಣ ಮತ್ತು ವಿವಿಂಶತಿ ಈ ಐವರು ರಥವನ್ನು ಕಳೆದುಕೊಂಡು ಯುದ್ಧದಲ್ಲಿ ಅರ್ಜುನನಿಂದ ಪರಾಜಿತರಾಗಿ ಓಡಿಹೋದರು.

ಪೂರ್ವಾಹ್ಣೇ ತು ತಥಾ ರಾಜನ್ ಪರಾಜಿತ್ಯ ಮಹಾರಥಾನ್ ।
ಪ್ರಜಜ್ವಾಲ ರಣೇ ಪಾರ್ಥೋ ವಿಧೂಮ ಇವ ಪಾವಕಃ ॥೪೫॥

ಎಲೈ ರಾಜನೇ, ಆ ದಿನದ ಪೂರ್ವಾಹ್ಣದಲ್ಲಿ ಅರ್ಜುನನು ಹಾಗೆ ಮಹಾರಥರನ್ನು ಪರಾಜಯಗೊಳಿಸಿ ಧೂಮರಹಿತವಾದ ಅಗ್ನಿಯಂತೆ ರಣರಂಗದಲ್ಲಿ ಪ್ರಜ್ವಲಿಸಿದನು.

ತಥೈವ ಶರವರ್ಷೇಣ ಭಾಸ್ಕರೋ ರಶ್ಮಿವಾನಿವ ।
ಅನ್ಯಾನಪಿ ಮಹಾರಾಜ ಪಾತಯಾಮಾಸ ಪಾರ್ಥಿವಾನ್ ॥೪೬॥

ಎಲೈ ಮಹಾರಾಜನೇ, ಹಾಗೆಯೇ ರಶ್ಮಿಸಹಿತನಾದ ಆದಿತ್ಯನಂತೆ ಉಳಿದ ರಾಜರುಗಳನ್ನೂ ಉರುಳಿಸಿದನು.

ಪರಾಙ್ಮುಖೀಕೃತ್ಯ ತದಾ ಶರವರ್ಷೈರ್ಮಹಾರಥಾನ್ ।
ಪ್ರಾವರ್ತಯತ ಸಂಗ್ರಾಮೇ ಶೋಣಿತೋದಾಂ ಮಹಾನದೀಮ್ ।
ಮಧ್ಯೇನ ಕುರುಸೈನ್ಯಾನಾಂ ಪಾಂಡವಾನಾಂ ಚ ಭಾರತ ॥೪೭॥

ಎಲೈ ಭಾರತನೇ, ಆಗ ತನ್ನ ಬಾಣಗಳ ಮಳೆಯಿಂದ ಮಹಾರಥರನ್ನು ಯುದ್ಧ ವಿಮುಖರನ್ನಾಗಿ ಮಾಡಿ, ಕೌರವರ ಮತ್ತು ಪಾಂಡವರ ಸೈನ್ಯದ ಮಧ್ಯದಲ್ಲಿ ರಣರಂಗದಲ್ಲಿ ರಕ್ತೋದಕದ ಮಹಾನದಿಯನ್ನು ಹರಿಸಿದನು.

ತಸ್ಮಿನ್ನತಿಮಹಾಭೀಮೇ ರಾಜನ್ ವೀರವರಕ್ಷಯೇ ।
ಭೀಷ್ಮಂ ಪ್ರತಿ ಪರಾಕ್ರಾಂತಾಃ ಪಾಂಡವಾಃ ಸಹ ಸೃಂಜಯೈಃ ॥೪೮॥

ಎಲೈ ರಾಜನೇ, ಶ್ರೇಷ್ಠರಾದ ವೀರರನ್ನು ವಿನಾಶಗೊಳಿಸುವ ಅತಿ ಮಹಾಭಯಂಕರವಾದ ಆ ಯುದ್ಧದಲ್ಲಿ ಪಾಂಡವರು ಸೃಂಜಯರ ಜೊತೆ ಸೇರಿ ಭೀಷ್ಮರ ಮೇಲೆ ಎರಗಿದರು.

ತೇ ಪರಾಕ್ರಾಂತಮಾಲೋಕ್ಯ ಯುಧಿ ರಾಜನ್ ಪಿತಾಮಹಮ್ ।
ನ ನ್ಯವರ್ತಂತ ತೇ ಪುತ್ರಾ ಬ್ರಹ್ಮಲೋಕಪುರಸ್ಕೃತಾಃ ॥೪೯॥

ಎಲೈ ರಾಜನೇ, ಅವರು ಪಿತಾಮಹರ ಮೇಲೆ ಎರಗುತ್ತಿರುವುದನ್ನು ನೋಡಿ ನಿನ್ನ ಪುತ್ರರು ಬ್ರಹ್ಮಲೋಕವನ್ನು ಪುರಸ್ಕರಿಸಿ ಹಿಮ್ಮೆಟ್ಟಲಿಲ್ಲ.

ಇಚ್ಛಂತೋ ನಿಧನಂ ಯುದ್ಧೇ ಸ್ವರ್ಗಲೋಕಪರಾಯಣಾಃ ।
ಪಾಂಡವಾನಭ್ಯವರ್ತಂತ ತಾವಕಾ ಯುದ್ಧದುರ್ಮದಾಃ ॥೫೦॥

ಸ್ವರ್ಗಲೋಕ ಪರಾಯಣರಾಗಿ ಯುದ್ಧದಲ್ಲಿ ಮರಣವನ್ನು ಬಯಸುತ್ತಾ ಯುದ್ಧ ದುರ್ಮದರಾದ ನಿನ್ನ ಪುತ್ರರು ಪಾಂಡವರ ಮೇಲೆಯೇ ಎರಗಿದರು.

ಪಾಂಡವಾಶ್ಚ ಮಹಾರಾಜ ಸ್ಮರಂತೋ ವಿವಿಧಾನ್ ಬಹೂನ್ ।
ಕ್ಲೇಶಾನ್ ಕೃತಾನ್ ಸಪುತ್ರೇಣ ತ್ವಯಾ ಪೂರ್ವಂ ನರಾಧಿಪ ॥೫೧॥

ಭಯಂ ತ್ಯಕ್ತ್ವಾ ರಣೇ ಶೂರಾಃ ಸ್ವರ್ಗಲೋಕಪುರಸ್ಕೃತಾಃ ।
ತಾವಕಾನ್ ತವ ಪುತ್ರಾಂಶ್ಚ ಯೋಧಯಂತಿ ಸ್ಮ ಹೃಷ್ಟವತ್ ॥೫೨॥

ಎಲೈ ಮಹಾರಾಜನೇ, ಪಾಂಡವರಾದರೋ ನಿನ್ನ ಮತ್ತು ನಿನ್ನ ಪುತ್ರರಿಂದ ಹಿಂದೆ ಉಂಟಾದ ಬಹುವಿಧವಾದ ಅನೇಕ ಕ್ಲೇಶಗಳನ್ನು ಸ್ಮರಿಸುತ್ತಾ, ಸ್ವರ್ಗಲೋಕವನ್ನು ಪುರಸ್ಕರಿಸಿ ಸಮರಶೂರರಾದ ಅವರು ಭಯವನ್ನು ತ್ಯಜಿಸಿ, ನಿನ್ನ ಯೋಧರ ಮತ್ತು ಪುತ್ರರ ಜೊತೆಯಲ್ಲಿ ಸಂತೋಷದಿಂದ ಯುದ್ಧವನ್ನು ಮಾಡಿದರು.

ಗಜಾಶ್ಚ ರಥಸಂಘಾಶ್ಚ ಬಹುಧಾ ರಥಿಭಿರ್ಹತಾಃ ।
ರಥಾಶ್ಚ ನಿಹತಾ ನಾಗೈರ್ನಾಗಾ ಹಯಪದಾತಿಭಿಃ ॥೫೩॥

ಗಜಗಳು ಮತ್ತು ರಥಸಮೂಹಗಳು ರಥಿಕರಿಂದ ಅನೇಕ ವಿಧವಾಗಿ ಹತವಾದವು. ರಥಗಳೂ ಗಜಗಳಿಂದ ನಾಶವನ್ನು ಹೊಂದಿದವು. ಗಜಗಳೂ ಸಹ ಹಯ-ಪದಾತಿಗಳಿಂದ ನಾಶವನ್ನು ಹೊಂದಿದವು.

ಅಂತರಾ ಭಿದ್ಯಮಾನಾನಿ ಶರೀರಾಣಿ ಶಿರಾಂಸಿ ಚ ।
ನಿಪೇತುರ್ದಿಕ್ಷು ಸರ್ವಾಸು ಗಜಾಶ್ವರಥಯೋಧಿನಾಮ್ ॥೫೪॥

ಮಧ್ಯದಲ್ಲಿ ಕತ್ತರಿಸಲ್ಪಟ್ಟ ಗಜಾಶ್ವರಥಯೋಧಿಗಳ ಶರೀರಗಳು ಮತ್ತು ಶಿರಸ್ಸುಗಳು ಎಲ್ಲ ದಿಕ್ಕುಗಳಲ್ಲಿಯೂ ಭೂಮಿಯ ಮೇಲೆ ಉರುಳಿದವು.

ಛನ್ನಮಾಯೋಧನಂ ರೇಜೇ ಕುಂಡಲಾಂಗದಧಾರಿಭಿಃ ।
ಪತಿತೈಃ ಪಾತ್ಯಮಾನೈಶ್ಚ ರಾಜಪುತ್ರೈರ್ಮಹಾರಥೈಃ ॥೫೫॥

ನೆಲದ ಮೇಲೆ ಬಿದ್ದಿರುವ ಮತ್ತು ಬೀಳುತ್ತಿರುವ ಕುಂಡಲಾಂಗದ ಧಾರಿಗಳಾದ ಮಹಾರಥರಾದ ರಾಜಪುತ್ರರಿಂದ ಆವರಿಸಲ್ಪಟ್ಟ ರಣರಂಗವು ಶೋಭಿಸಿತು.

ರಥನೇಮಿನಿಕೃತ್ತಾಶ್ಚ ಗಜೈಶ್ಚೈವಾವಪೋಥಿತಾಃ ।
ಪಾದಾತಾಶ್ಚಾಪ್ಯದೃಶ್ಯಂತ ಸಾಶ್ವಾಃ ಸಹಯಸಾದಿನಃ ॥೫೬॥

ರಥದ ಚಕ್ರಗಳಿಗೆ ಸಿಲುಕಿ ಜಜ್ಜಿಹೋದ, ಗಜಗಳ ತುಳಿತಕ್ಕೆ ಸಿಕ್ಕಿ ಭಗ್ನರಾದ ಪದಾತಿಗಳೂ, ಅಶ್ವಾರೋಹಿಗಳಿಂದ ಸಹಿತವಾದ ಅಶ್ವಗಳೂ ಕಂಡುಬಂದವು.

ಗಜಾಶ್ವರಥಸಂಘಾಶ್ಚ ಪರಿಪೇತುಃ ಸಮಂತತಃ ।
ವಿಶೀರ್ಣಾಶ್ಚ ರಥಾ ಭೂಮೌ ಭಗ್ನಚಕ್ರಯುಗಧ್ವಜಾಃ ॥೫೭॥

ಗಜಾಶ್ವ-ರಥ ಸಮೂಹಗಳು ಎಲ್ಲ ಕಡೆಗಳಲ್ಲಿಯೂ ಬಿದ್ದವು. ರಥಗಳ ಚಕ್ರ, ನೊಗ ಮತ್ತು ಧ್ವಜಗಳು ಭಗ್ನವಾಗಿ, ರಥಗಳೂ ನಾಶಹೊಂದಿ ಭೂಮಿಯ ಮೇಲೆ ಬಿದ್ದವು.

ತದ್ಗಜಾಶ್ವರಥೌಘಾನಾಂ ರುಧಿರೇಣ ಸಮುಕ್ಷಿತಮ್ ।
ಛನ್ನಮಾಯೋಧನಂ ರೇಜೇ ರಕ್ತಾಭ್ರಮಿವ ಶಾರದಮ್ ॥೫೮॥

ಗಜಾಶ್ವ-ರಥ ಸಮೂಹಗಳ ರಕ್ತದಿಂದ ಒದ್ದೆಯಾಗಿ ಆವರಿಸಲ್ಪಟ್ಟ ರಣರಂಗವು ಶರತ್ಕಾಲದ ಕೆಂಪು ಮೋಡದಂತೆ ಕಂಗೊಳಿಸಿತು.

ಶ್ವಾನಃ ಕಾಕಾಶ್ಚ ಗೃಧ್ರಾಶ್ಚ ವೃಕಾ ಗೋಮಾಯುಭಿಃ ಸಹ ।
ಪ್ರಣೇದುರ್ಭಕ್ಷ್ಯಮಾಸಾದ್ಯ ವಿಕೃತಾಶ್ಚ ಮೃಗದ್ವಿಜಾಃ ॥೫೯॥

ನಾಯಿಗಳು, ಕಾಗೆಗಳು, ಹದ್ದುಗಳು, ತೋಳಗಳು ಮತ್ತು ನರಿಗಳು ಹಾಗೂ ವಿಕಾರವನ್ನು ಹೊಂದಿದ ಮೃಗ-ಪಕ್ಷಿಗಳು ತಮ್ಮ ಭಕ್ಷ್ಯವನ್ನು ನೋಡಿ ದೊಡ್ಡನಾದವನ್ನು ಮಾಡಿದವು.

ವವುರ್ಬಹುವಿಧಾಶ್ಚೈವ ದಿಕ್ಷು ಸರ್ವಾಸು ಮಾಯಾಃ ।
ದೃಶ್ಯಮಾನೇಷು ರಕ್ಷಃಸು ಭೂತೇಷು ವಿನದತ್ಸು ಚ ॥೬೦॥

ಎಲ್ಲ ದಿಕ್ಕುಗಳಲ್ಲಿಯೂ ರಾಕ್ಷಸರು ಮತ್ತು ಭೂತಗಳು ಗರ್ಜನೆಯನ್ನು ಮಾಡುತ್ತಿರಲು ಬಹುವಿಧವಾದ ಒರಟಾದ ಗಾಳಿಯು ಬೀಸಿತು.

ಕಾಂಚನಾನಿ ಚ ದಾಮಾನಿ ಪತಾಕಾಶ್ಚ ಮಹಾಧನಾಃ ।
ಧೂಮಾಯಮಾನಾ ದೃಶ್ಯಂತೇ ಸಹಸಾ ಮಾರುತೇರಿತಾಃ ॥೬೧॥

ವಾಯುವಿನ ಹೊಡೆತಕ್ಕೆ ಸಿಕ್ಕಿದ ಸುವರ್ಣಮಯವಾದ ದಾಮಗಳು (ಹಗ್ಗಗಳು, ಸರಪಣಿಗಳು) ಮತ್ತು ಮಹಾಬೆಲೆಬಾಳುವ ಪತಾಕೆಗಳು ಧೂಮದಂತೆ ಕಾಣುತ್ತಿದ್ದವು.

ಶ್ವೇತಚ್ಛತ್ರಸಹಸ್ರಾಣಿ ಸಧ್ವಜಾಶ್ಚ ಮಹಾರಥಾಃ ।
ವಿನಿರ್ಗಾಃ ಸ್ಮ ದೃಶ್ಯಂತೇ ತತೋಽಥ ಸಹಸ್ರತಃ ।
ಸಪತಾಕಾಶ್ಚ ಮಾತಂಗಾ ದಿಶೋ ಜಗ್ಮುಃ ಶರಾತುರಾಃ ॥೬೨॥

ಸಹಸ್ರಾರು ಶ್ವೇತಚ್ಛತ್ರಗಳೂ, ಧ್ವಜಗಳಿಂದ ಕೂಡಿದ ಮಹಾರಥಗಳೂ ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ಭೂಮಿಯ ಮೇಲೆ ಬಲ್ಲಾಟ್ಲಿಯಾಗಿ ಬಿದ್ದುದು ಕಂಡುಬಂದಿತು. ಪತಾಕೆಗಳಿಂದ ಸಹಿತವಾದ ಗಜಗಳು ಬಾಣಗಳ ಏಟನ್ನು ತಡೆಯಲಾಗದೆ ದಿಕ್ಕು- ದಿಕ್ಕುಗಳಿಗೆ ಓಡಿಹೋದವು.

ಕ್ಷತ್ರಿಯಾಶ್ಚ ಮನುಷ್ಯೇಂದ್ರ ಗದಾಶಕ್ತಿಧನುರ್ಧರಾಃ ।
ಸಮಂತತೋ ವ್ಯದೃಶ್ಯಂತ ಪತಿತಾ ಧರಣೀತಲೇ ॥೬೩॥

ಎಲೈ ಮನುಷ್ಯೇಂದ್ರನೇ, ಗದಾ-ಶಕ್ತಿ-ಧನುಸ್ಸುಗಳನ್ನು ಹಿಡಿದ ಕ್ಷತ್ರಿಯರು ಭೂಮಿಯ ಮೇಲೆ ಬಿದ್ದಿರುವುದು ಎಲ್ಲೆಡೆಯಲ್ಲಿಯೂ ಕಂಡುಬಂದಿತು.

ತತೋ ಭೀಷ್ಮೋ ಮಹಾರಾಜ ದಿವ್ಯಮಸ್ತ್ರಮುದೀರಯನ್ ।
ಅಭ್ಯಧಾವತ ಕೌಂತೇಯಂ ಮಿಷತಾಂ ಸರ್ವಧನ್ವಿನಾಮ್ ॥೬೪॥

ಎಲೈ ಮಹಾರಾಜನೇ, ಆಗ ಭೀಷ್ಮರು ದಿವ್ಯಾಸ್ತ್ರಗಳನ್ನು ಪ್ರಾದುರ್ಭಾವಗೊಳಿಸುತ್ತಾ ಎಲ್ಲ ಧನುರ್ಧಾರಿಗಳು ನೋಡುತ್ತಿರುವಂತೆ ಅರ್ಜುನನ ಕಡೆಗೆ ಧಾವಿಸಿದರು.

ತಂ ಶಿಖಂಡೀ ರಣೇ ಯತ್ತಮಭ್ಯಧಾವತ ದಂಸಿತಃ ।
ಸಂಜಹಾರ ತತೋ ಭೀಷ್ಮಸ್ತದಸ್ತ್ರಂ ಪಾವಕೋಪಮಮ್ ॥೬೫॥

ಶಸ್ತ್ರ-ಕವಚಗಳನ್ನು ಧರಿಸಿದ ಶಿಖಂಡಿಯು ಎಚ್ಚರಿಕೆಯಿಂದ ಅವರ ಕಡೆಗೆ ಧಾವಿಸಿದನು. ಆಗ ಭೀಷ್ಮರು ಅಗ್ನಿ ಸದೃಶವಾದ ಆ ಅಸ್ತ್ರವನ್ನು ಹಿಂದಕ್ಕೆ ತೆಗೆದುಕೊಂಡರು.

ಏತಸ್ಮಿನ್ನೇವ ಕಾಲೇ ತು ಕೌಂತೇಯಃ ಶ್ವೇತವಾಹನಃ ।
ನಿಜಘ್ನೇ ತಾವಕಂ ಸೈನ್ಯಂ ಮೋಹಯಿತ್ವಾ ಪಿತಾಮಹಮ್ ॥೬೬॥

ಅದೇ ಕಾಲದಲ್ಲಿ ಕುಂತೀಪುತ್ರನಾದ ಅರ್ಜುನನು ಪಿತಾಮಹರಾದ ಭೀಷ್ಮರನ್ನು ಮರುಳುಗೊಳಿಸಿ ನಿನ್ನ ಸೈನ್ಯವನ್ನು ಸಂಹರಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಚತುರ್ದಶಾಧಿಕಶತತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಚತುಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನೂರ ಹದಿನಾಲ್ಕನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನೈದನೆಯ ಅಧ್ಯಾಯ

ಭೀಷ್ಮರ ಮತ್ತು ಅರ್ಜುನನ ಪ್ರತಾಪ. ಪಾಂಡವಸೇನೆಯಿಂದ
ಸಮಗ್ರವಾಗಿ ಭೀಷ್ಮರ ಕಡೆಗೆ ಅಭಿಧಾವನೆ.

ಸಂಜಯಃ

ಏವಂ ವ್ಯೂಢೇಷ್ವನೀಕೇಷು ಭೂಯಿಷ್ಠಮನುವರ್ತಿಷು ।
ಬ್ರಹ್ಮಲೋಕಪರಾಃ ಸರ್ವೇ ಸಮಪದ್ಯಂತ ಭಾರತ ॥೧॥

ಸಂಜಯ– ಸೈನ್ಯಗಳು ವ್ಯೂಹಗೊಂಡು ಯೋಧರು ಪರಾಕ್ರಮಶಾಲಿಗಳನ್ನು ಹಿಂಬಾಲಿಸುತ್ತಿರಲು ಎಲೈ ಭಾರತನೇ, ಎಲ್ಲರೂ ಬ್ರಹ್ಮಲೋಕಪರಾಯಣರಾದರು.

ನ ಹ್ಯನೀಕಮನೀಕೇನ ಸಮಸಜ್ಜತ ಸಂಕುಲೇ ।
ನ ರಥಾ ರಥಿಭಿಃ ಸಾರ್ಧಂ ನ ಪದಾತಾಃ ಪದಾತಿಭಿಃ ॥೨॥

ಸಂಕುಲ ಯುದ್ಧದಲ್ಲಿ ಸೈನ್ಯವು ಸೈನ್ಯದಿಂದಾಗಲಿ, ರಥಿಕರು ರಥಿಕರಿಂದಾಗಲೀ, ಪದಾತಿಗಳು ಪದಾತಿಗಳಿಂದಾಗಲೀ ಸರಿಯಾಗಿ ಸೇರಲಿಲ್ಲ.

ಅಶ್ವಾ ನಾಶ್ವೈರಯುಧ್ಯಂತ ನ ಗಜಾ ಗಜಯೋಧಿಭಃ ।
ಮಹಾನ್ವ್ಯತಿಕರೋ ರೌದ್ರಃ ಸೇನಯೋಃ ಸಮಪದ್ಯತ ॥೩॥

ಅಶ್ವಗಳು ಅಶ್ವಗಳ ಜೊತೆಯಲ್ಲಿ ಹೋರಾಡಲಿಲ್ಲ. ಗಜಾರೋಹಿಗಳು ಗಜಾರೋಹಿಗಳ ಜೊತೆಯಲ್ಲಿ ಹೋರಾಡಲಿಲ್ಲ. ಎಲೈ ಭಾರತನೇ, ಮಹಾರಾಜನೇ, ಅಲ್ಲಿ ಹುಚ್ಚರಂತೆ ಯುದ್ಧ ಮಾಡಲು ಪ್ರಾರಂಭಿಸಿದರು. ಎರಡು ಸೈನ್ಯಗಳಿಗೆ ಭಯಂಕರವಾದ ಮಿಶ್ರಣ ಉಂಟಾಯಿತು.

ನರನಾಗರಥೇಷ್ವೇವಂ ವ್ಯವಕೀರ್ಣೇಷು ಸರ್ವತಃ ।
ಕ್ಷಯೇ ತಸ್ಮಿನ್ ಮಹಾರೌದ್ರೇ ನಿರ್ವಿಶೇಷಮಜಾಯತ ॥೪॥

ಯೋಧರು, ಗಜಗಳು ಮತ್ತು ರಥಗಳು ಹೀಗೆ ಎಲ್ಲ ಕಡೆಗಳಲ್ಲಿಯೂ ಮಿಶ್ರಣಗೊಂಡಿರಲು ಭಯಂಕರವಾದ ಆ ವೀರಕ್ಷಯದಲ್ಲಿ ಎರಡು ಸೈನ್ಯಗಳಲ್ಲಿ ಯಾವ ವ್ಯತ್ಯಾಸವೂ ಕಾಣಲಿಲ್ಲ.

ತತಃ ಶಲ್ಯಃ ಕೃಪಶ್ಚೈವ ಚಿತ್ರಸೇನಶ್ಚ ಭಾರತ ।
ದುಃಶಾಸನೋ ವಿಕರ್ಣಶ್ಚ ರಥಾನಾಸ್ಥಾಯ ಸತ್ವರಾಃ ।
ಪಾಂಡವಾನಾಂ ರಣೇ ಶೂರಾ ಧ್ವಜಿನೀಂ ಸಮಕಂಪಯನ್ ॥೫॥

ಎಲೈ ಭಾರತನೇ, ಆಗ ಶಲ್ಯ, ಕೃಪರು, ಚಿತ್ರಸೇನ, ದುಶ್ಶಾಸನ ಮತ್ತು ವಿಕರ್ಣರು ಜಾಗ್ರತೆಯಾಗಿ ತಮ್ಮ ರಥಗಳನ್ನು ಏರಿ, ರಣರಂಗದಲ್ಲಿ ಪಾಂಡವರ ಸೈನ್ಯವನ್ನು ನಡುಗಿಸಿದರು.

ಸಾ ವಧ್ಯಮಾನಾ ಸಮರೇ ಪಾಂಡುಸೇನಾ ಮಹಾತ್ಮಭಿಃ ।
ತ್ರಾತಾರಂ ನಾಧ್ಯಗಚ್ಛದ್ ವೈ ಮಜ್ಜಮಾನೇವ ನೌರ್ಜಲೇ ॥೬॥

ಮಹಾತ್ಮರಾದ ಅವರಿಂದ ಯುದ್ಧದಲ್ಲಿ ವಧಿಸಲ್ಪಡುತ್ತಿದ್ದ ಪಾಂಡವರ ಸೈನ್ಯವು ನೀರಿನಲ್ಲಿ ಮುಳುಗುವ ಹಡಗಿನಂತೆ ರಕ್ಷಕರನ್ನು ಕಾಣಲಿಲ್ಲ.

ಯಥಾ ಹಿ ಶೈಶಿರಃ ಕಾಲೋ ಗವಾಂ ಮರ್ಮಾಣಿ ಕೃಂತತಿ ।
ತಥಾ ಪಾಂಡುಸುತಾನಾಂ ವೈ ಭೀಷ್ಮೋ ಮರ್ಮಾಣ್ಯಕೃಂತತ ॥೭॥

ಶಿಶಿರ ಋತುವು ಗೋವುಗಳ ಮರ್ಮವನ್ನು ಛೇದಿಸಿದಂತೆ ಭೀಷ್ಮರು ಪಾಂಡವರ ಸೈನ್ಯದ ಮರ್ಮಸ್ಥಾನಗಳನ್ನು ಕತ್ತರಿಸಿದರು.

ತಥೈವ ತವ ಸೈನ್ಯಸ್ಯ ಪಾರ್ಥೇನ ಚ ಮಹಾತ್ಮನಾ ।
ನಗಮೇಘಪ್ರತೀಕಾಶಾಃ ಪಾತಿತಾ ಬಹುಧಾ ಗಜಾಃ ॥೮॥

ಮಹಾತ್ಮನಾದ ಅರ್ಜುನನಿಂದ ನಿನ್ನ ಸೈನ್ಯದ ಪರ್ವತದಂತೆ, ಮೇಘದಂತೆ ಶೋಭಿಸುವ ಗಜಗಳು ಅನೇಕ ರೀತಿಯಲ್ಲಿ ಉರುಳಿಸಲ್ಪಟ್ಟವು.

ಮೃದ್ಯಮಾನಾಶ್ಚ ದೃಶ್ಯಂತೇ ಪಾರ್ಥೇನ ನರಯೂಥಪಾಃ ।
ಇಷುಭಿಸ್ತಾಡ್ಯಮಾನಾಶ್ಚ ನಾರಾಚೈಶ್ಚ ಸಹಸ್ರಶಃ ॥೯॥

ಯೋಧಶ್ರೇಷ್ಠರು ಬಾಣಗಳಿಂದ ಹೊಡೆಯಲ್ಪಟ್ಟು ಸಹಸ್ರಾರು ನಾರಾಚಗಳಿಂದ ಹೊಡೆಯಲ್ಪಟ್ಟು ಅರ್ಜುನನಿಂದ ಮರ್ದಿಸಲ್ಪಡುವುದು ಕಂಡುಬರುತ್ತಿದ್ದಿತು.

ಪೇತುರಾರ್ತಸ್ವರಂ ಕೃತ್ವಾ ತತ್ರ ತತ್ರ ಮಹಾಗಜಾಃ ।

ಮಹಾಗಜಗಳು ಅಲ್ಲಲ್ಲಿ ಆರ್ತನಾದವನ್ನು ಮಾಡಿ ಬೀಳುತ್ತಿದ್ದವು.

ಆಬದ್ಧಾಭರಣೈಃ ಕಾಯೈರ್ನಿಹತಾನಾಂ ಮಹಾತ್ಮನಾಮ್ ॥೧೦॥

ಧನ್ವಮಾಯೋಧನಂ ರೇಜೇ ಶಿರೋಭಿಶ್ಚ ಸಕುಂಡಲೈಃ ।
ತಸ್ಮಿನ್ನತಿಮಹಾಭೀಮೇ ರಾಜನ್ ವೀರವರಕ್ಷಯೇ ।
ಭೀಷ್ಮೇ ಚ ಯುಧಿ ವಿಕ್ರಾಂತೇ ಪಾಂಡವೇ ಚ ಧನಂಜಯೇ ॥೧೧॥

ಆಭರಣಗಳನ್ನು ಧರಿಸಿ, ಕುಂಡಲಗಳನ್ನು ಧರಿಸಿ, ಕತ್ತರಿಸಲ್ಪಟ್ಟ ಮಹಾತ್ಮರ ಕೆಳಗುರುಳಿದ ದೇಹಗಳಿಂದ ಮತ್ತು ಶಿರಸ್ಸುಗಳಿಂದ ರಣರಂಗವು ಆವೃತವಾಗಿ

ಶೋಭಿಸಿತು. ಎಲೈ ರಾಜನೇ, ವೀರವರರ ವಿನಾಶವನ್ನು ಮಾಡುವ ಅತ್ಯಂತ ಭಯಂಕರವಾದ ಆ ಯುದ್ಧದಲ್ಲಿ ಪಾಂಡುಸುತನಾದ ಅರ್ಜುನನೂ ಮತ್ತು ಭೀಷ್ಮರೂ ಯುದ್ಧದಲ್ಲಿ ಪರಾಕ್ರಮವನ್ನು ತೋರಿಸುತ್ತಿರಲು (ರಣಭೂಮಿಯು ಶೋಭಿಸಿತು).

ಸೇನಾಪತಿಸ್ತು ಸಮರೇ ಪ್ರಾಹ ಸೇನಾಂ ಮಹಾರಥಃ ।
ಅಭಿದ್ರವತ ಗಾಂಗೇಯಂ ಸೋಮಕಾಃ ಸೃಂಜಯೈಃ ಸಹ ॥೧೨॥

ಮಹಾರಥನೂ, ಸೇನಾಪತಿಯೂ ಆದ ಧೃಷ್ಟದ್ಯುಮ್ನನು ಯುದ್ಧದಲ್ಲಿ ತನ್ನ ಸೇನೆಯನ್ನು ಕುರಿತು ಎಲೈ ಸೋಮಕರೇ, ಸೃಂಜಯರ ಜೊತೆಯಲ್ಲಿ ಭೀಷ್ಮರ ಮೇಲೆ ಹೋಗುವವರಾಗಿ ಎಂದು ಹೇಳಿದನು.

ಸೇನಾಪತಿವಚಃ ಶ್ರುತ್ವಾ ಸೋಮಕಾಃ ಸಹ ಸೃಂಜಯೈಃ ।
ಅಭ್ಯದ್ರವಂತ ಗಾಂಗೇಯಂ ಶಸ್ತ್ರವೃಷ್ಟ್ಯಾ ಸಮಂತತಃ ॥೧೩॥

ಸೇನಾಪತಿಯ ಮಾತುಗಳನ್ನು ಕೇಳಿ ಸೃಂಜಯರಿಂದ ಸಹಿತರಾಗಿ ಸೋಮಕರು ಎಲ್ಲ ಕಡೆಗಳಲ್ಲಿಯೂ ಶಸ್ತ್ರಗಳ ಮಳೆಯನ್ನು ಕರೆಯುತ್ತಾ ಭೀಷ್ಮರ ಬಳಿಗೆ ಓಡಿದರು.

ವಧ್ಯಮಾನಸ್ತತೋ ರಾಜನ್ ಪಿತಾ ಶಾಂತನವಸ್ತವ ।
ಅಮರ್ಷವಶಮಾಪನ್ನೋ ಯೋಧಯಾಮಾಸ ಸೃಂಜಯಾನ್ ॥೧೪॥

ಎಲೈ ರಾಜನೇ, ಆಗ ಅವರಿಂದ ಹೊಡೆಯಲ್ಪಟ್ಟ ನಿನ್ನ ತಂದೆಯಾದ ಭೀಷ್ಮರು ಕ್ರೋಧವಶರಾಗಿ ಸೃಂಜಯರ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ತಸ್ಯ ಕೀರ್ತಿಮತಸ್ತಾತ ಪುರಾ ರಾಮೇಣ ಧೀಮತಾ ।
ಸಂಪ್ರದತ್ತಾಸ್ತ್ರಶಿಕ್ಷಾ ವೈ ಪರಾನೀಕವಿನಾಶಿನೀ ॥೧೫॥

ಎಲೈ ಪ್ರೀತಿಪಾತ್ರನೇ, ಕೀರ್ತಿಶಾಲಿಗಳಾದ ಅವರಿಗೆ ಹಿಂದೆ ಮೇಧಾವಿಗಳಾದ ಪರಶುರಾಮರು ಪ್ರೀತಿಪೂರ್ವಕವಾಗಿ ಕೊಟ್ಟ ಅಸ್ತ್ರವಿದ್ಯೆಯು ಶತ್ರುಸೈನ್ಯಗಳನ್ನು ನಾಶಮಾಡಿತು.

ಸ ತಾಂ ಶಿಕ್ಷಾಮಧಿಷ್ಠಾಯ ಕೃತ್ವಾ ಪರಬಲಕ್ಷಯಮ್ ।
ಅಹನ್ಯಹನಿ ಪಾರ್ಥಾನಾಂ ವೃದ್ಧಃ ಕುರುಪಿತಾಮಹಃ ।
ಭೀಷ್ಮೋ ದಶ ಸಹಸ್ರಾಣಿ ದಶಾನ ಪರವೀರಹಾ ॥೧೬॥

ವೃದ್ಧರೂ, ಕುರುಪಿತಾಮಹರೂ, ಪರವೀರಘಾತಕರೂ ಆದ ಭೀಷ್ಮರು ಆ ವಿದ್ಯೆಯನ್ನು ಅವಲಂಬಿಸಿ, ಶತ್ರುಸೈನ್ಯದ ಕ್ಷಯವನ್ನು ಉಂಟುಮಾಡಿ, ಪ್ರತಿದಿವಸವೂ ಪಾಂಡವರ ಸೇನೆಯಲ್ಲಿ ಹತ್ತು ಸಹಸ್ರ ಯೋಧರನ್ನು ಕೊಂದರು.

ತಸ್ಮಿಂಸ್ತು ದಿವಸೇ ಪ್ರಾಪ್ತೇ ದಶಮೇ ಭರತರ್ಷಭ ।
ಭೀಷ್ಮೇಣೈಕೇನ ಮತ್ಸ್ಯೇಷು ಪಾಂಚಾಲೇಷು ಚ ಸಂಯುಗೇ ।
ಗಜಾಶ್ವಮಮಿತಂ ಹತ್ವಾ ಹತಾಃ ಸಪ್ತ ಮಹಾರಥಾಃ ॥೧೭॥

ಎಲೈ ಭರತಶ್ರೇಷ್ಠನೇ, ಆ ಹತ್ತನೆಯ ದಿವಸವು ಪ್ರಾಪ್ತವಾಗುತ್ತಿರಲು ಭೀಷ್ಮರೊಬ್ಬರೇ ಮತ್ಸ್ಯ ಮತ್ತು ಪಾಂಚಾಲರ ಜೊತೆ ಯುದ್ಧದಲ್ಲಿ ಅಪರಿಮಿತವಾದ ಗಜಾಶ್ವಗಳನ್ನು ಕೊಂದು, ಏಳು ಮಹಾರಥರನ್ನೂ ಕೊಂದರು.

ಹತ್ವಾ ಪಂಚ ಸಹಸ್ರಾಣಿ ರಥಿನಾಂ ಪ್ರಪಿತಾಮಹಃ ।
ನರಾಣಾಂ ಚ ಮಹಾಯುದ್ಧೇ ಸಹಸ್ರಾಣಿ ಚತುರ್ದಶ ॥೧೮॥

ಪ್ರಪಿತಾಮಹರಾದ ಭೀಷ್ಮರು ಐದು ಸಹಸ್ರ ರಥಿಕರನ್ನು ಕೊಂದು, ಆ ಮಹಾಯುದ್ಧದಲ್ಲಿ ಹದಿನಾಲ್ಕು ಸಾವಿರ ಯೋಧರನ್ನೂ ಕೊಂದರು.

ತಥಾ ದಂತಿಸಹಸ್ರಂ ಚ ಹಯಾನಾಮಯುತಂ ಪುನಃ ।
ಶಿಕ್ಷಾಬಲೇನ ನಿಹತಂ ಪಿತ್ರಾ ತವ ವಿಶಾಂಪತೇ ॥೧೯॥

ಎಲೈ ರಾಜನೇ, ವಿದ್ಯಾಭ್ಯಾಸ ಬಲದಿಂದ ನಿನ್ನ ತಂದೆಯಾದ ಅವರು ಸಹಸ್ರ ಗಜಗಳನ್ನೂ ಮತ್ತು ಹತ್ತು ಸಾವಿರ ಅಶ್ವಗಳನ್ನೂ ಕೊಂದರು.

ತತಃ ಸರ್ವಮಹೀಪಾನಾಂ ಕ್ಷೋಭಯಿತ್ವಾ ವರೂಥಿನೀಮ್ ।
ವಿರಾಟಸ್ಯ ಪ್ರಿಯೋ ಭ್ರಾತಾ ಶತಾನೀಕೋ ನಿಪಾತಿತಃ ॥೨೦॥

ನಂತರ ಸರ್ವರಾಜರ ಸೈನ್ಯವನ್ನು ಕ್ಷೋಭೆಗೊಳಿಸಿ ವಿರಾಟನ ಪ್ರಿಯ ಸಹೋದರನಾದ ಶತಾನೀಕನನ್ನು ಕೊಂದರು.

ಶತಾನೀಕಂ ಚ ಸಮರೇ ಹತ್ವಾ ಭೀಷ್ಮಃ ಪ್ರತಾಪವಾನ್ ।
ಸಹಸ್ರಾಣಿ ಮಹಾರಾಜ ರಾಜ್ಞಾಂ ಭಲ್ಲೈರ್ನ್ಯಪಾತಯತ್ ॥೨೧॥

ಎಲೈ ಮಹಾರಾಜನೇ, ಶತಾನೀಕನನ್ನು ಯುದ್ಧದಲ್ಲಿ ಕೊಂದು ಪ್ರತಾಪಶಾಲಿಗಳಾದ ಭೀಷ್ಮರು ಒಂದು ಸಹಸ್ರ ರಾಜರನ್ನು ಭಲ್ಲಗಳಿಂದ ಭೂಮಿಯ ಮೇಲೆ ಉರುಳಿಸಿದರು.

ಯೇ ಚ ಕೇಚನ ಪಾರ್ಥಾನಾಮಭಯಾತಾ ಧನಂಜಯಮ್ ।
ರಾಜಾನೋ ಭೀಷ್ಮಮಾಸಾದ್ಯ ಗತಾಸ್ತೇ ಯಮಸಾದನಮ್ ॥೨೨॥

ಯಾರು ಯಾರು ಅರ್ಜುನನನ್ನು ಹಿಂಬಾಲಿಸಿ ಯುದ್ಧವನ್ನು ಮಾಡುತ್ತಿದ್ದರೋ ಅಂತಹ ರಾಜರೆಲ್ಲರೂ ಭೀಷ್ಮರನ್ನು ಸಮೀಪಿಸಿ ಯಮಪಟ್ಟಣಕ್ಕೆ ಹೋದರು.

ಏವಂ ದಶ ದಿಶೋ ಭೀಷ್ಮಃ ಶರಜಾಲೈಃ ಸಮಂತತಃ ।
ಅತೀತ್ಯ ಸೇನಾಂ ಪಾರ್ಥಾನಾಮವತಸ್ಥೇ ಚಮೂಮುಖೇ ॥೨೩॥

ಹೀಗೆ ಭೀಷ್ಮರು ಹತ್ತು ದಿಕ್ಕುಗಳನ್ನು ತಮ್ಮ ಬಾಣಸಮೂಹಗಳಿಂದ ಹರಡಿ, ತಮ್ಮ ಸೇನೆಯನ್ನು ದಾಟಿ ಪಾಂಡವರ ಸೇನಾಮುಖದಲ್ಲಿ ನಿಂತರು.

ಸ ಕೃತ್ವಾ ಸುಮಹತ್ಕರ್ಮ ತಸ್ಮಿನ್ ವೈ ದಶಮೇಽಹನಿ ।
ಸೇನಯೋರಂತರೇ ತಿಷ್ಠನ್ ಪ್ರಗೃಹೀತಶರಾಸನಃ ॥೨೪॥

ಆ ಹತ್ತನೆಯ ದಿವಸದಲ್ಲಿ ಬಹಳ ದೊಡ್ಡ ಕಾರ್ಯವನ್ನು ಮಾಡಿ, ಕೈಯಲ್ಲಿ ಧನುಸ್ಸನ್ನು ಹಿಡಿದು ಅವರು ಎರಡು ಸೈನ್ಯಗಳ ಮಧ್ಯದಲ್ಲಿ ನಿಂತರು.

ನ ಚೈನಂ ಪಾರ್ಥಿವಾ ರಾಜನ್ ಶೇಕುಃ ಕೇಚಿನ್ನಿರೀಕ್ಷಿತುಮ್ ।
ಮಧ್ಯಂ ಪ್ರಾಪ್ತಂ ಯಥಾ ಗ್ರೀಷ್ಮೇ ತಪಂತಂ ಭಾಸ್ಕರಂ ದಿವಿ ॥೨೫॥

ಎಲೈ ರಾಜನೇ, ಗ್ರೀಷ್ಮಕಾಲದಲ್ಲಿ ಆಕಾಶಮಧ್ಯದಲ್ಲಿ ಜ್ವಲಿಸುವ ಸೂರ್ಯನಂತಿದ್ದ ಅವರನ್ನು ನೋಡಲು ಯಾವ ರಾಜರಿಗೂ ಸಾಧ್ಯವಾಗಲಿಲ್ಲ.

ಯಥಾ ದೈತ್ಯಚಮೂಂ ಶಕ್ರಸ್ತಾಪಯಾಮಾಸ ಸಂಯುಗೇ ।
ತಥಾ ಭೀಷ್ಮಃ ಪಾಂಡವೇಯಾಂಸ್ತಾಪಯಾಮಾಸ ಭಾರತ ॥೨೬॥

ಎಲೈ ಭಾರತನೇ, ಹೇಗೆ ದೇವಾಸುರ ಯುದ್ಧದಲ್ಲಿ ಇಂದ್ರನು ದೈತ್ಯಸೇನೆಯನ್ನು ತಾಪಗೊಳಿಸಿದನೋ ಹಾಗೆ ಭೀಷ್ಮರು ಪಾಂಡವ ಸೈನ್ಯವನ್ನು ತಾಪಗೊಳಿಸಿದರು.

ತಥಾ ಚ ತಂ ಪರಾಕ್ರಾಂತಮಾಲೋಕ್ಯ ಮಧುಸೂದನಃ ।
ಉವಾಚ ದೇವಕೀಪುತ್ರಃ ಪ್ರೀಯಮಾಣೋ ಧನಂಜಯಮ್ ॥೨೭॥

ಅವರು ಹಾಗೆ ಪರಾಕ್ರಮವನ್ನು ತೋರಿಸುತ್ತಿರುವುದನ್ನು ನೋಡಿ ದೇವಕೀಪುತ್ರನಾದ ಮಧುಸೂದನನು ಸಂತೋಷಗೊಂಡು ಅರ್ಜುನನನ್ನು ಕುರಿತು ಮಾತನಾಡಿದನು.

ಏಷ ಶಾಂತನವೋ ಭೀಷ್ಮಃ ಸೇನಯೋರಂತರೇ ಸ್ಥಿತಃ ।
ನಾನಿಹತ್ಯ ಬಲಾದೇನಂ ವಿಜಯಸ್ತೇ ಭವಿಷ್ಯತಿ ॥೨೮॥

ಶಂತನುಪುತ್ರರಾದ ಈ ಭೀಷ್ಮರು ಎರಡು ಸೈನ್ಯಗಳ ಮಧ್ಯದಲ್ಲಿ ನಿಂತಿದ್ದಾರೆ. ನಿನ್ನ ಸಾಮರ್ಥ್ಯದಿಂದ ಇವರನ್ನು ಕೊಲ್ಲದೆ ನಿನಗೆ ಜಯವುಂಟಾಗುವುದಿಲ್ಲ.

ಯತ್ತಃ ಸಂಸ್ತಂಭಯಸ್ವೈನಂ ಯತ್ಕೃಷ್ಣಾ ಭಿದ್ಯತೇ ಚಮೂಃ ।
ನ ಹಿ ಭೀಷ್ಮಶರಾನನ್ಯಃ ಸೋಢುಮುತ್ಸಹತೇ ವಿಭೋ ॥೨೯॥

ನಿನ್ನ ಸೈನ್ಯವು ಭಗ್ನವಾಗುತ್ತಿರುವ ಕಡೆಯಲ್ಲಿ ಪ್ರಯತ್ನಪೂರ್ವಕವಾಗಿ ಅವರನ್ನು ಸ್ತಂಭನಗೊಳಿಸು. ಎಲೈ ವಿಭುವೇ, ನಿನ್ನನ್ನು ಬಿಟ್ಟು ಬೇರೆ ಯಾರೂ ಭೀಷ್ಮರ ಬಾಣಗಳನ್ನು ಸಹಿಸಲಾರರು (ಎಂದು ಹೇಳಿದನು).

ತತಸ್ತಸ್ಮಿನ್ ಕ್ಷಣೇ ರಾಜನ್ ಚೋದಿತೋ ವಾನರಧ್ವಜಃ ।
ಸಧ್ವಜಂ ಸರಥಂ ಸಾಶ್ವಂ ಭೀಷ್ಮಮಂತರ್ದಧೇ ಶರೈಃ ॥೩೦॥

ಎಲೈ ರಾಜನೇ, ಹೀಗೆ ಕೃಷ್ಣನಿಂದ ಪ್ರೇರಿತನಾದ ಕಪಿಧ್ವಜನಾದ ಅರ್ಜುನನು ಆ ಕ್ಷಣದಲ್ಲಿ ಧ್ವಜಾಶ್ವರಥಗಳಿಂದ ಸಹಿತರಾದ ಭೀಷ್ಮರನ್ನು ತನ್ನ ಬಾಣಗಳಿಂದ ಅಂತರ್ಧಾನಗೊಳಿಸಿದನು.

ಸ ಚಾಪಿ ಕುರುಮುಖ್ಯಾನಾಮೃಷಭಃ ಪಾಂಡವೇರಿತಾನ್ ।
ಶರವ್ರಾತೈಃ ಶರವ್ರಾತಾನ್ ಬಹುಧಾ ವಿದುಧಾವ ತಾನ್ ॥೩೧॥

ಕುರುಶ್ರೇಷ್ಠರಲ್ಲಿ ಶ್ರೇಷ್ಠರಾದ ಅವರು ಪಾಂಡವನು ಪ್ರಯೋಗಿಸಿದ ಬಾಣ ಸಮೂಹಗಳನ್ನು ತಮ್ಮ ಬಾಣಸಮೂಹಗಳಿಂದ ಬಹುವಿಧವಾಗಿ ಭಗ್ನಗೊಳಿಸಿದರು.

ತೇನ ಪಾಂಚಾಲರಾಜಶ್ಚ ಧೃಷ್ಟಕೇತುಶ್ಚ ವೀರ್ಯವಾನ್ ।
ಪಾಂಡವೋ ಭೀಮಸೇನಶ್ಚ ದ್ರುಪದ್ಯುಮ್ನಶ್ಚ ಪಾರ್ಷತಃ ॥೩೨॥

ಯಮೌ ಚ ಚೇಕಿತಾನಶ್ಚ ಕೇಕಯಾಃ ಪಂಚ ಚೈವ ಹ ।
ಸಾತ್ಯಕಿಶ್ಚ ಮಹಾರಾಜ ಸೌಭದ್ರೋಽಥ ಘಟೋತ್ಕಚಃ ॥೩೩॥

ದ್ರೌಪದೇಯಾಃ ಶಿಖಂಡೀ ಚ ಕುಂತಿಭೋಜಶ್ಚ ವೀರ್ಯವಾನ್ ।
ಸುಶರ್ಮಾ ಚ ವಿರಾಟಶ್ಚ ಪಾಂಡವೇಯಾ ಮಹಾಬಲಾಃ ॥೩೪॥

ಏತೇ ಚಾನ್ಯೇ ಚ ಬಹವಃ ಪೀಡಿತಾ ಭೀಷ್ಮಸಾಯಕೈಃ ।
ಸಮುದ್ಭ್ರತಾಃ ಫಲ್ಗುನೇನ ನಿಮಗ್ನಾಃ ಶೋಕಸಾಗರೇ ॥೩೫॥

ಪಾಂಚಾಲರಾಜ, ಪರಾಕ್ರಮಶಾಲಿಯಾದ ಧೃಷ್ಟಕೇತು, ಪಾಂಡವನಾದ ಭೀಮಸೇನ, ದ್ರುಪದ ಪುತ್ರನಾದ ಧೃಷ್ಟದ್ಯುಮ್ನ, ನಕುಲ-ಸಹದೇವರು, ಚೇಕಿತಾನ, ಕೇಕಯ ಪಂಚ ಸಹೋದರರು, ಸಾತ್ಯಕಿ, ಅಭಿಮನ್ಯು, ಘಟೋತ್ಕಚ, ದ್ರೌಪದಿಯ ಐವರು ಮಕ್ಕಳು, ಶಿಖಂಡಿ, ಪರಾಕ್ರಮಶಾಲಿಯಾದ ಕುಂತಿಭೋಜ, ಸುಶರ್ಮ, ವಿರಾಟ, ಪಾಂಡವಸೈನ್ಯದ ಮಹಾಬಲಿಷ್ಠರು- ಎಲೈ ಮಹಾರಾಜನೇ, ಭೀಷ್ಮ ಬಾಣಗಳಿಂದ ಪೀಡಿತರಾಗಿ, ಶೋಕ ಸಾಗರದಲ್ಲಿ ಮುಳುಗಿದ ಇವರೆಲ್ಲರೂ ಮತ್ತು ಇನ್ನೂ ಅನೇಕರೂ ಅರ್ಜುನನಿಂದ ಉದ್ಧರಿಸಲ್ಪಟ್ಟರು.

ತತಃ ಶಿಖಂಡೀ ವೇಗೇನ ಪ್ರಗೃಹ್ಯ ಪರಮಾಯುಧಮ್ ।
ಭೀಷ್ಮಮೇವಾಭಿದುದ್ರಾವ ರಕ್ಷ್ಯಮಾಣಃ ಕಿರೀಟಿನಾ ॥೩೬॥

ಆಗ ಶಿಖಂಡಿಯು ಶ್ರೇಷ್ಠವಾದ ಆಯುಧವನ್ನು ಹಿಡಿದು, ಅರ್ಜುನನಿಂದ ರಕ್ಷಿತನಾಗಿ ಭೀಷ್ಮರನ್ನೇ ಉದ್ದೇಶಿಸಿ ವೇಗವಾಗಿ ಓಡಿದನು.

ತತೋಽಸ್ಯಾನುಚರಾನ್ ಹತ್ವಾ ಸರ್ವಾನ್ ರಣವಿಭಾಗವಿತ್ ।
ಭೀಷ್ಮಮೇವಾಭಿದುದ್ರಾವ ಬೀಭತ್ಸುರಪರಾಜಿತಃ ॥೩೭॥

ಆಗ ರಣವಿಭಾಗವನ್ನು ತಿಳಿದ ಅರ್ಜುನನು ಭೀಷ್ಮರ ಅನುಚರರೆಲ್ಲರನ್ನೂ ಕೊಂದು, ಅಪರಾಜಿತನಾಗಿ ಭೀಷ್ಮರ ಕಡೆಗೇ ಧಾವಿಸಿದನು.

ಸಾತ್ಯಕಿಶ್ಚೇಕಿತಾನಶ್ಚ ಧೃಷ್ಟದ್ಯುಮ್ನಶ್ಚ ಪಾರ್ಷತಃ ।
ವಿರಾಟೋ ದ್ರುಪದಶ್ಚೈವ ಮಾದ್ರೀಪುತ್ರೌ ಚ ಪಾಂಡವೌ ।
ದುದ್ರುವುರ್ಭೀಷ್ಮಮೇವಾಜೌ ರಕ್ಷಿತಾ ದೃಢಧನ್ವನಾ ॥೩೮॥

ಸಾತ್ಯಕಿ, ಚೇಕಿತಾನ, ಪಾರ್ಷತನಾದ ಧೃಷ್ಟದ್ಯುಮ್ನ, ವಿರಾಟ, ದ್ರುಪದ, ಪಾಂಡವರಾದ ನಕುಲ-ಸಹದೇವರು ಎಲ್ಲರೂ ದೃಢವಾದ ಧನುಸ್ಸನ್ನು ಹೊಂದಿದ ಅರ್ಜುನನಿಂದ ರಕ್ಷಿತರಾಗಿ ಭೀಷ್ಮರ ಮೇಲೆಯೇ ಎರಗಿದರು.

ಅಭಿಮನ್ಯುಶ್ಚ ಸಮರೇ ದ್ರೌಪದ್ಯಾಃ ಪಂಚ ಚಾತ್ಮಜಾಃ ।
ದುದ್ರುವುಃ ಸಮರೇ ಭೀಷ್ಮಂ ಸಮುದ್ಯತಮಹಾಯುಧಾಃ ॥೩೯॥

ಅಭಿಮನ್ಯು, ದ್ರೌಪದಿಯ ಐದು ಜನ ಪುತ್ರರು ಯುದ್ಧದಲ್ಲಿ ತಮ್ಮ ಆಯುಧಗಳನ್ನು ಎತ್ತಿ ಹಿಡಿದು ಭೀಷ್ಮರ ಕಡೆಗೆ ಓಡಿದರು.

ತೇ ಸರ್ವೇ ದೃಢಧನ್ವಾನಃ ಸಂಯುಗೇಷ್ವಪಲಾಯಿನಃ ।
ಬಹುಧಾ ಭೀಷ್ಮಮಾರ್ಚ್ಛನ್ ಮಾರ್ಗಣೈಃ ಕೃತಮಾರ್ಗಣಾಃ ॥೪೦॥

ದೃಢವಾದ ಧನುಸ್ಸುಳ್ಳವರೂ, ಯುದ್ಧದಲ್ಲಿ ಹಿಮ್ಮೆಟ್ಟದವರೂ, ಧನುರ್ವಿದ್ಯೆಯನ್ನು ಚೆನ್ನಾಗಿ ಅಭ್ಯಾಸವನ್ನು ಮಾಡಿದವರೂ ಆದ ಅವರೆಲ್ಲರೂ ತಮ್ಮ ಬಾಣಗಳಿಂದ ಭೀಷ್ಮರನ್ನು ಅನೇಕ ರೀತಿಯಲ್ಲಿ ಪೀಡಿಸಿದರು.

ವಿಧೂಯ ತಾನ್ ಬಾಣಗಣಾನ್ ಯೇ ಮುಖ್ಯಾಃ ಪಾರ್ಥಿವೋತ್ತಮೈಃ ।
ಪಾಂಡವಾನಾಮದೀನಾತ್ಮಾ ವ್ಯಗಾಹತ ವರೂಥಿನೀಮ್ ।
ಕೃತ್ವಾ ಶರವಿಘಾತಂ ಚ ಕ್ರೀಡನ್ನಿವ ಪಿತಾಮಹಃ ॥೪೧॥

ಗಾಬರಿಗೊಳ್ಳದ ಭೀಷ್ಮರು ಶ್ರೇಷ್ಠರಾದ ರಾಜರುಗಳಿಂದ ಪ್ರಯೋಗಿಸಲ್ಪಟ್ಟ ಆ ಬಾಣಸಮೂಹಗಳನ್ನು ನಾಶಪಡಿಸಿ, ಆಟವಾಡುವವರಂತೆ ಶರವಿಘಾತವನ್ನು ಮಾಡಿ ಪಾಂಡವರ ಸೈನ್ಯವನ್ನು ಪ್ರವೇಶಿಸಿದರು.

ನಾಭಿಸಂಧತ್ತ ಪಾಂಚಾಲ್ಯಂ ಸ್ಮಯಮಾನೋ ಮುಹುರ್ಮುಹುಃ ।
ಸ್ತ್ರೀತ್ವಂ ತಸ್ಯಾನುಸಂಸ್ಮೃತ್ಯ ಭೀಷ್ಮೋ ಬಾಣಾನ್ ಶಿಖಂಡಿನಃ ।
ಜಘಾನ ದ್ರುಪದಾನೀಕೇ ರಥಾನ್ ಸಪ್ತ ಮಹಾರಥಃ ॥೪೨॥

ಭೀಷ್ಮರು ಶಿಖಂಡಿಯನ್ನು ನೋಡಿ ಅವನ ಸ್ತ್ರೀತ್ವವನ್ನು ಸ್ಮರಿಸುತ್ತಾ, ನಗುತ್ತಾ ಅವನ ಮೇಲೆ ಬಾಣಗಳನ್ನೇ ಹೂಡಲಿಲ್ಲ. ದ್ರುಪದನ ಸೈನ್ಯದಲ್ಲಿ ಮಹಾರಥರಾದ ಅವರು ಏಳು ರಥರನ್ನು ಕೊಂದರು.

ತತಃ ಕಿಲಕಿಲಾಶಬ್ದಃ ಕ್ಷಣೇನ ಸಮಪದ್ಯತ ।
ಮತ್ಸ್ಯಪಾಂಚಾಲಚೇದೀನಾಂ ತಮೇಕಮಭಿಧಾವತಾಮ್ ॥೪೩॥

ಆಗ ಭೀಷ್ಮರೊಬ್ಬರ ಕಡೆಗೇ ಸಾಗುವ ಮತ್ಸ್ಯ-ಪಾಂಚಾಲ-ಚೇದಿಗಳಲ್ಲಿ ಒಂದು ಕ್ಷಣದಲ್ಲಿ ಹಾಹಾಕಾರ ಶಬ್ದ ಉಂಟಾಯಿತು.

ತೇ ವರಾಶ್ವರಥವ್ರಾತೈರ್ವಾರಣೈಃ ಸಪದಾತಿಭಃ ।
ತಮೇಕಂ ಛಾದಯಾಮಾಸುರ್ಮೇಘಾ ಇವ ದಿವಾಕರಮ್ ।
ಭೀಷ್ಮಂ ಭಾಗೀರಥೀಪುತ್ರಂ ಪ್ರತಪಂತಂ ರಣೇ ರಿಪೂನ್ ॥೪೪॥

ಅವರು ಪದಾತಿಗಳಿಂದ ಕೂಡಿದ ಅಶ್ವ-ರಥ-ಗಜ ಸಮೂಹಗಳಿಂದ ಮಧ್ಯಾಹ್ನದಲ್ಲಿ ಪ್ರಕಾಶಿಸುವ ಸೂರ್ಯನನ್ನು ಮೋಡಗಳು ಮುಚ್ಚಿದಂತೆ ಯುದ್ಧದಲ್ಲಿ ದಿಕ್ಕುಗಳನ್ನು ದಹಿಸುತ್ತಿದ್ದ ಭಾಗೀರಥೀ ಪುತ್ರರಾದ ಭೀಷ್ಮರನ್ನು ಮುಚ್ಚಿದರು.

ತತಸ್ತಸ್ಯ ಚ ತೇಷಾಂ ಚ ಯುದ್ಧೇ ದೇವಾಸುರೋಪಮೇ ।
ಕಿರೀಟೀ ಭೀಷ್ಮಮಾನರ್ಚ್ಛತ್ ಪುರಸ್ಕೃತ್ಯ ಶಿಖಂಡಿನಮ್ ॥೪೫॥

ಆಗ ಅವರಿಗೂ ಮತ್ತು ಪಾಂಡವರಿಗೂ ನಡೆದ ದೇವಾಸುರ ಯುದ್ಧಕ್ಕೆ ಸಮವಾದ ಯುದ್ಧದಲ್ಲಿ ಅರ್ಜುನನು ಶಿಖಂಡಿಯನ್ನು ಮುಂದೆ ಮಾಡಿಕೊಂಡು ಭೀಷ್ಮರ ಮೇಲೆ ಬಾಣ ಪ್ರಯೋಗವನ್ನು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಪಂಚದಶಾಧಿಕಶತತಮೋऽಧ್ಯಾಯಃ ॥

॥ ಭೀಷ್ಮವಧಪರ್ವಣಿ ಪಂಚಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನೂರ ಹದಿನೈದನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನಾರನೆಯ ಅಧ್ಯಾಯ

ಭೀಷ್ಮರ ಪತ.

ಸಂಜಯಃ

ಏವಂ ತೇ ಪಾಂಡವಾಃ ಸರ್ವೇ ಪುರಸ್ಕೃತ್ಯ ಶಿಖಂಡಿನಮ್ ।
ವ್ಯಧುಃ ಸಮರೇ ಭೀಷ್ಮಂ ಪರಿವಾರ್ಯ ಸಮಂತತಃ ॥೧॥

ಸಂಜಯ- ಹೀಗೆ ಆ ಪಾಂಡವರೆಲ್ಲರೂ ಶಿಖಂಡಿಯನ್ನು ಮುಂದೆ ಮಾಡಿಕೊಂಡು ಯುದ್ಧದಲ್ಲಿ ಎಲ್ಲ ಕಡೆಗಳಿಂದಲೂ ಭೀಷ್ಮರನ್ನು ಸುತ್ತುವರಿದು ಅವರ ಮೇಲೆ ಪ್ರಹಾರವನ್ನು ಮಾಡಿದರು.

ಶತಘ್ನೀಭಿಃ ಸುಘೋರಾಭಿಃ ಪಟ್ಟಿಶೈಃ ಸಪರಶ್ವಧೈಃ ।
ಮುದ್ಗರೈರ್ಮುಸಲೈಃ ಪ್ರಾಸೈಃ ಕ್ಷೇಪಣೀಭಿಶ್ಚ ಸರ್ವಶಃ ॥೨॥

ಶರೈಃ ಕನಕಪುಂಖೈಶ್ಚ ಶಕ್ತಿತೋಮರಕಂಪನೈಃ ।
ನಾರಾಚೈರ್ವತ್ಸದಂತೈಶ್ಚ ಭುಶುಂಡೀಭಿಶ್ಚ ಭಾರತ ।
ಆತಾಡಯನ್ ರಣೇ ಭೀಷ್ಮಂ ಸಹಿತಾಃ ಸರ್ವಸೃಂಜಯಾಃ ॥೩॥

ಎಲೈ ಭಾರತನೇ, ಸೃಂಜಯರೆಲ್ಲರೂ ಒಟ್ಟಿಗೆ ಸೇರಿ ಯುದ್ಧದಲ್ಲಿ ಭೀಷ್ಮರ ಮೇಲೆ ಘೋರವಾದ ಶತಘ್ನಿಗಳಿಂದಲೂ, ಪರಶು ಸಹಿತವಾದ ಪಟ್ಟಿಶಗಳಿಂದಲೂ, ಮುದ್ಗರ, ಮುಸಲ, ಪ್ರಾಸಗಳಿಂದಲೂ, ಕ್ಷೇಪಣಿಗಳಿಂದಲೂ, ಸುವರ್ಣ ಪುಂಖವನ್ನು ಹೊಂದಿದ ಬಾಣಗಳಿಂದಲೂ, ಶಕ್ತಿ-ತೋಮರ-ಕಂಪನಗಳಿಂದಲೂ, ನಾರಾಚ-ವತ್ಸದಂತಗಳಿಂದಲೂ, ಭುಶುಂಡಿಗಳಿಂದಲೂ ಪ್ರಹಾರ ಮಾಡಿದರು.

ಸ ವಿಶೀರ್ಣತನುತ್ರಾಣಃ ಪೀಡಿತೋ ಬಹುಭಿಸ್ತದಾ ।
ವ್ಯಥೇ ನೈವ ಗಾಂಗೇಯೋ ಭಿದ್ಯಮಾನೇಷು ಮರ್ಮಸು ॥೪॥

ಗಾಂಗೇಯರು ಬಹುಯೋಧರಿಂದ ಪೀಡಿತರಾಗಿ ಮರ್ಮಗಳಲ್ಲಿ ಭೇದಿಸಲ್ಪಟ್ಟು ಕವಚವು ಹರಿದು ಹೋದರೂ ವ್ಯಥೆ ಪಡಲಿಲ್ಲ.

ಸ ದೀಪ್ತಶರಚಾಪಾರ್ಚಿರಸ್ತ್ರಪ್ರಸೃತಮಾರುತಃ ।
ನೇಮಿನಿರ್ಹ್ರಾದಸನ್ನಾದೋ ಮಹಾಸ್ಯೋದಯಪಾವಕಃ ॥೫॥

ಚಿತ್ರಚಾಪಮಹಾಜ್ವಾಲೋ ವೀರಕ್ಷಯಮಹೇಂಧನಃ ।
ಯುಗಾಂತಾಗ್ನಿಸಮೋ ಭೀಷ್ಮಃ ಪರೇಷಾಂ ಸಮಪದ್ಯತ ॥೬॥

ಆ ಭೀಷ್ಮರು ಶತ್ರುಗಳಿಗೆ ದೀಪ್ತವಾದ ಬಿಲ್ಲುಬಾಣಗಳೆಂಬ ಸಣ್ಣ ಜ್ವಾಲೆಗಳಿಂದ ಕೂಡಿದ, ಅಸ್ತ್ರಗಳಿಂದ ಉಂಟಾದ ವಾಯುವಿನಿಂದ ಕೂಡಿದ, ರಥನೇಮಿಗಳ ದೊಡ್ಡ ಶಬ್ದವೆಂಬ ಘೋಷದಿಂದ ಕೂಡಿದ, ಮಹಾಸ್ತ್ರಗಳ ಉಗಮ ಎಂಬ ಪಾವಕದಿಂದ ಕೂಡಿದ, ವಿಚಿತ್ರ ಧನುಸ್ಸುಗಳೆಂಬ ಮಹಾಜ್ವಾಲೆಗಳಿಂದ ಕೂಡಿದ, ವೀರಕ್ಷಯ ಎಂಬ ದೊಡ್ಡ ಇಂಧನದಿಂದ ಕೂಡಿದವರಾಗಿ ಯುಗಾಂತಾಗ್ನಿಗೆ ಸಮರಾದರು.

ನಿಪತ್ಯ ರಥಸಂಘಾನಾಮಂತರೇಣ ವಿನಿಃಸೃತಃ ।
ದೃಶ್ಯತೇ ಸ್ಮ ನರೇಂದ್ರಾಣಾಂ ಪುನರ್ಮಧ್ಯಗತಶ್ಚರನ್ ॥೭॥

ಅವರು ರಥಸಮೂಹದ ಮಧ್ಯದಲ್ಲಿ ಪ್ರವೇಶಿಸಿ, ಪುನಃ ಹೊರಗೆ ಬಂದು, ಪುನಃ ಶತ್ರುರಾಜರ ಮಧ್ಯದಲ್ಲಿ ಸಂಚರಿಸುವುದು ಕಂಡುಬರುತ್ತಿದ್ದಿತು.

ತತಃ ಪಾಂಚಾಲರಾಜಂ ಚ ಧೃಷ್ಟಕೇತುಮಥೇತ್ಯ ಚ ।
ಪಾಂಡವಾನೀಕಿನೀಮಧ್ಯಮಾಸಸಾದ ಸ ವೇಗಿತಃ ॥೮॥

ಆಗ ಅವರು ಪಾಂಚಾಲರಾಜನಾದ ದ್ರುಪದನನ್ನು ಮತ್ತು ಧೃಷ್ಟಕೇತುವನ್ನು ದಾಟಿ ವೇಗವಾಗಿ ಪಾಂಡವರ ಸೈನ್ಯದ ಮಧ್ಯಭಾಗವನ್ನು ತಲುಪಿದರು.

ತತಃ ಸಾತ್ಯಕಿಭೀಮೌ ಚ ಪಾಂಡವಂ ಚ ಧನಂಜಯಮ್ ।
ದ್ರುಪದಂ ಚ ವಿರಾಟಂ ಚ ಧೃಷ್ಟದ್ಯುಮ್ನಂ ಚ ಪಾರ್ಷತಮ್ ॥೯॥

ಭೀಮಘೋಷೈರ್ಮಹಾವೇಗೈರ್ವೈರಿವಾರಣಭೇದಿಭಿಃ ।
ಷಡೇತಾನ್ ಷಡ್ವಿರಾನರ್ಚ್ಚದ್ ಭಾಸ್ಕರಪ್ರತಿಮೈಃ ಶರೈಃ ॥೧೦॥

ಆಗ ಸಾತ್ಯಕಿ, ಪಾಂಡವರಾದ ಭೀಮಸೇನ ಮತ್ತು ಅರ್ಜುನ, ದ್ರುಪದ, ವಿರಾಟ ಮತ್ತು ಪಾರ್ಷತನಾದ ಧೃಷ್ಟದ್ಯುಮ್ನ- ಈ ಆರು ಯೋಧರನ್ನು ಭಯಂಕರವಾದ ಘೋಷವುಳ್ಳ, ವೇಗವುಳ್ಳ, ಶತ್ರು ಗಜಗಳನ್ನು ಭೇದಿಸಲು ಸಮರ್ಥವಾದ, ಸೂರ್ಯನಂತೆ ಪ್ರಕಾಶಿಸುವ ಆರು ಬಾಣಗಳಿಂದ ಹೊಡೆದರು.

ತಸ್ಯ ತೇ ನಿಶಿತಾನ್ ಬಾಣಾನ್ ಸನ್ನಿವಾರ್ಯ ಮಹಾರಥಾಃ ।
ದಶಭಿರ್ದಶಭಿರ್ಭೀಷ್ಮಮರ್ದಯಾಮಾಸುರೋಜಸಾ ॥೧೧॥

ಮಹಾರಥರಾದ ಅವರು ಭೀಷ್ಮರ ಆ ತೀಕ್ಷ್ಣವಾದ ಬಾಣಗಳನ್ನು ನಿವಾರಿಸಿಕೊಂಡು ಹತ್ತು-ಹತ್ತು ಬಾಣಗಳನ್ನು ಪ್ರಯೋಗಿಸಿ, ತಮ್ಮ ಸಾಮರ್ಥ್ಯದಿಂದ ಭೀಷ್ಮರನ್ನು ಹಿಂಸಿಸಿದರು.

ಶಿಖಂಡೀ ತು ರಣೇ ಬಾಣಾನ್ ಯಾನ್ ಮುಮೋಚ ಮಹಾವ್ರತೇ ।
ತೇ ಭೀಷ್ಮಂ ವಿವಿಶುಸ್ತೂರ್ಣಂ ಸ್ವರ್ಣಪುಂಖಾಃ ಶಿಲಾಶಿತಾಃ ॥೧೨॥

ಯುದ್ಧದಲ್ಲಿ ಭೀಷ್ಮರ ಮೇಲೆ ಶಿಖಂಡಿಯು ಪ್ರಯೋಗಿಸಿದ ಸ್ವರ್ಣಪುಂಖವುಳ್ಳ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಬಾಣಗಳು ಶೀಘ್ರವಾಗಿ ಅವರ ಶರೀರವನ್ನು ಪ್ರವೇಶಿಸಿದವು.

ತತಃ ಕಿರೀಟೀ ಸಂರಬ್ಧೋ ಭೀಷ್ಮಮೇವಾಭ್ಯವರ್ತತ ।
ಶಿಖಂಡಿನಂ ಪುರಸ್ಕೃತ್ಯ ಧನುಶ್ಚಾಸ್ಯ ಸಮಾಚ್ಛಿನತ್ ॥೧೩॥

ಆಗ ಕೋಪಗೊಂಡ ಅರ್ಜುನನು ಶಿಖಂಡಿಯನ್ನು ಮುಂದೆ ಮಾಡಿಕೊಂಡು ಭೀಷ್ಮರ ಮೇಲೆ ಎರಗಿ ಅವರ ಧನುಸ್ಸನ್ನು ಕತ್ತರಿಸಿದನು.

ಭೀಷ್ಮಸ್ಯ ಧನುಷಶ್ಚೇದಂ ನಾಮೃಷ್ಯಂತ ಮಹಾರಥಾಃ ।
ದ್ರೋಣಶ್ಚ ಕೃತವರ್ಮಾ ಚ ಸೈಂಧವಶ್ಚ ಜಯದ್ರಥಃ ॥೧೪॥

ಭೂರಿಶ್ರವಾಃ ಶಲಃ ಶಲ್ಯೋ ಭಗದತ್ತಸ್ತಥೈವ ಚ ।
ಸಪ್ತೈತೇ ಪರಮಕ್ರುದ್ಧಾಃ ಕಿರೀಟಿನಮಭಿದ್ರುತಾಃ ॥೧೫॥

ದ್ರೋಣರು, ಕೃತವರ್ಮ, ಸೈಂಧವನಾದ ಜಯದ್ರಥ, ಭೂರಿಶ್ರವ, ಶಲ, ಶಲ್ಯ ಮತ್ತು ಭಗದತ್ತ ಈ ಏಳು ಮಹಾರಥರು ಬಹಳವಾಗಿ ಕೋಪಗೊಂಡು ಭೀಷ್ಮರ ಧನುಸ್ಸಿನ ಛೇದನವನ್ನು ಸಹಿಸದೆ ಅರ್ಜುನನ ಮೇಲೆ ಧಾವಿಸಿದರು.

ಉತ್ತಮಾಸ್ತ್ರಾಣಿ ದಿವ್ಯಾನಿ ದರ್ಶಯಂತೋ ಮಹಾರಥಾಃ ।
ಅಭಿಪೇತುರ್ಭೃಶಂ ಕ್ರುದ್ಧಾಶ್ಚಾದಯಂತಃ ಸ್ಮ ಪಾಂಡವಾನ್ ॥೧೬॥

ಮಹಾರಥರಾದ ಅವರು ಉತ್ತಮವಾದ ತಮ್ಮ ದಿವ್ಯಾಸ್ತ್ರಗಳನ್ನು ಪ್ರದರ್ಶಿಸುತ್ತಾ ಬಹಳ ಕ್ರುದ್ಧರಾಗಿ ಅವುಗಳಿಂದ ಪಾಂಡವರನ್ನು ಮುಚ್ಚುತ್ತಾ ಅರ್ಜುನನ ಮೇಲೆ ಎರಗಿದರು.

ತೇಷಾಮಾಪತತಾಂ ಶಬ್ದಃ ಶುಶ್ರುವೇ ಫಲ್ಗುನಂ ಪ್ರತಿ ।
ಉದ್‌ವೃತ್ತಾನಾಂ ಯಥಾ ಶಬ್ದಃ ಸಮುದ್ರಾಣಾಂ ಯುಗಕ್ಷಯೇ ॥೧೭॥

ಅರ್ಜುನನ ಮೇಲೆ ಧಾವಿಸಿ ಬರುತ್ತಿರುವ ಅವರಿಂದ ಉಂಟಾದ ಶಬ್ದವು ಯುಗಾಂತದಲ್ಲಿ ಕ್ಷೋಭೆಗೊಂಡ ಸಮುದ್ರದ ಘೋಷದಂತೆ ಇದ್ದಿತು.

ಹತಾನಯತ ಗೃಹ್ಣೀತ ಯುಧ್ಯತಾಪಿ ಚ ಕೃಂತತ ।
ಇತ್ಯಾಸೀತ್ ತುಮುಲಃ ಶಬ್ದಃ ಫಲ್ಗುನಸ್ಯ ರಥಂ ಪ್ರತಿ ॥೧೮॥

ಅರ್ಜುನನ ರಥದ ಸಮೀಪದಲ್ಲಿ ಕೊಲ್ಲಿ, ಎಳೆದು ತನ್ನಿ, ಹಿಡಿಯಿರಿ, ಯುದ್ಧವನ್ನು ಮಾಡಿ, ಕತ್ತರಿಸಿ ಎಂಬ ತೀವ್ರವಾದ ಶಬ್ದಗಳು ಉಂಟಾದವು.

ತಂ ಶಬ್ದಂ ತುಮುಲಂ ಶ್ರುತ್ವಾ ಪಾಂಡವಾನಾಂ ಮಹಾರಥಾಃ ।
ಅಭ್ಯಧಾವನ್ ಪರೀಪ್ಸಂತಃ ಫಲ್ಗುನಂ ಭರತರ್ಷಭ ॥೧೯॥

ಎಲೈ ಭರತಶ್ರೇಷ್ಠನೇ, ಆ ಘೋರವಾದ ಶಬ್ದವನ್ನು ಕೇಳಿದ ಪಾಂಡವ ಮಹಾರಥರು ಅರ್ಜುನನನ್ನು ರಕ್ಷಿಸಲು ಬಯಸಿ ಅವನ ಬಳಿಗೆ ಓಡಿದರು.

ಸಾತ್ಯಕಿರ್ಭೀಮಸೇನಶ್ಚ ಧೃಷ್ಟದ್ಯುಮ್ನಶ್ಚ ಪಾರ್ಷತಃ ।
ವಿರಾಟದ್ರುಪದೌ ಚೋಭೌ ರಾಕ್ಷಸಶ್ಚ ಘಟೋತ್ಕಚಃ ॥೨೦॥

ಅಭಿಮನ್ಯುಶ್ಚ ಸಂಕ್ರುದ್ಧಃ ಸಪ್ತತೇ ಕ್ರೋಧಮೂರ್ಚ್ಛಿತಾಃ ।
ಸಮಭ್ಯಧಾವಂಶ್ಚ ರಿತಾಶ್ಚಿತ್ರಕಾರ್ಮುಕಧಾರಿಣಃ ॥೨೧॥

ಸಾತ್ಯಕಿ, ಭೀಮಸೇನ, ಧೃಷ್ಟದ್ಯುಮ್ನ, ವಿರಾಟ-ದ್ರುಪದರು, ರಾಕ್ಷಸನಾದ ಘಟೋತ್ಕಚ ಮತ್ತು ಅಭಿಮನ್ಯು ಈ ಏಳು ವೀರರು ಬಹಳ ಕೋಪಗೊಂಡು ಕ್ರೋಧ ಮೂರ್ಛಿತರಾಗಿ ವಿಚಿತ್ರವಾದ ಧನುಸ್ಸುಗಳನ್ನು ಹಿಡಿದು ತೀಕ್ಷ್ಣವಾಗಿ ಅರ್ಜುನನ ಕಡೆಗೆ ಧಾವಿಸಿದರು.

ತೇಷಾಂ ಸಮಭವದ್ ಯುದ್ಧಂ ತುಮುಲಂ ರೋಮಹರ್ಷಣಮ್ ।
ಸಂಗ್ರಾಮೇ ಭರತಶ್ರೇಷ್ಠ ದೇವಾನಾಂ ದಾನವೈರಿವ ॥೨೨॥

ಎಲೈ ಭರತಶ್ರೇಷ್ಠನೇ, ದೇವ-ದಾನವರಿಗೆ ನಡೆದಂತೆ ಅವರಿಗೆ ತೀವ್ರವೂ ಮತ್ತು ರೋಮಾಂಚಕಾರಿಯೂ ಆದ ಯುದ್ಧವು ನಡೆಯಿತು.

ಶಿಖಂಡೀ ತು ರಥಶ್ರೇಷ್ಠೋ ರಕ್ಷ್ಯಮಾಣಃ ಕಿರೀಟಿನಾ ।
ಅವಿಧ್ಯದ್ ದಶಭಿರ್ಭೀಷ್ಮಂ ಛಿನ್ನಧನ್ವಾನಮಾಹವೇ ।
ಸಾರಥಿಂ ದಶಭಿಶ್ಚಾಸ್ಯ ಧ್ವಜಂ ಚೈಕೇನ ಚಿಚ್ಛೇದ ॥೨೩॥

ಅರ್ಜುನನಿಂದ ರಕ್ಷಿಸಲ್ಪಡುತ್ತಿದ್ದ ರಥಶ್ರೇಷ್ಠನಾದ ಶಿಖಂಡಿಯು ಧನುಸ್ಸು ಕತ್ತರಿಸಲ್ಪಟ್ಟ ಭೀಷ್ಮರನ್ನು ಹತ್ತು ಬಾಣಗಳಿಂದ ಹೊಡೆದು, ಅವರ ಸಾರಥಿಯನ್ನೂ ಹತ್ತು ಬಾಣಗಳಿಂದ ಹೊಡೆದು, ಒಂದು ಬಾಣದಿಂದ ಅವರ ರಥದ ಧ್ವಜವನ್ನು ಕತ್ತರಿಸಿದನು.

ಸೋಽನ್ಯತ್ ಕಾರ್ಮುಕಮಾದಾಯ ಗಾಂಗೇಯೋ ವೇಗವತ್ತರಮ್ ।
ತದಪ್ಯಸ್ಯ ಶಿತೈರ್ಭಲ್ಲೈಸ್ತ್ರಿಧಾ ಚಿಚ್ಛೇದ ಫಲ್ಗುನಃ ॥೨೪॥

ಆ ಭೀಷ್ಮರು ಬಹಳ ವೇಗಶಾಲಿಯಾದ ಇನ್ನೊಂದು ಧನುಸ್ಸನ್ನು ತೆಗೆದುಕೊಂಡರು. ಅರ್ಜುನನು ಅದನ್ನೂ ಸಹ ತೀಕ್ಷ್ಣವಾದ ಭಲ್ಲಗಳಿಂದ ಮೂರು ಭಾಗಗಳಾಗಿ ಕತ್ತರಿಸಿದನು.

ಏವಂ ಸ ಪಾಂಡವಃ ಕ್ರುದ್ಧ ಆತ್ತಮಾತ್ತಂ ಪುನಃ ಪುನಃ ।
ಧನುರ್ಭೀಷ್ಮಸ್ಯ ಚಿಚ್ಛೇದ ಸವ್ಯಸಾಚೀ ಪರಂತಪಃ ॥೨೫॥

ಹೀಗೆ ಸವ್ಯಸಾಚಿಯೂ, ಪರಂತಪನೂ ಆದ ಅರ್ಜುನನು ಭೀಷ್ಮರು ಪುನಃ ಪುನಃ ತೆಗೆದುಕೊಂಡ ಧನುಸ್ಸುಗಳನ್ನು ಕ್ರುದ್ಧನಾಗಿ ಕತ್ತರಿಸಿದನು.

ಸ ಛಿನ್ನಧನ್ವಾ ಸಂಕ್ರುದ್ಧಃ ಶಕ್ತಿನೇ ಪರಿಸಂಲಿಹನ್ ।
ಶಕ್ತಿಂ ಜಗ್ರಾಹ ಸಂಕ್ರುದ್ಧೋ ಗಿರೀಣಾಮಪಿ ದಾರಣೀಮ್ ।
ತಾಂ ಚ ಚಿಕ್ಷೇಪ ಸಂಕ್ರುದ್ಧಃ ಫಲ್ಗುನಸ್ಯ ರಥಂ ಪ್ರತಿ ॥೨೬॥

ತಮ್ಮ ಧನುಸ್ಸು ಕತ್ತರಿಸಲ್ಪಟ್ಟ ಭೀಷ್ಮರು ಬಹಳ ಕೋಪಗೊಂಡು ಕಟಬಾಯಿಯನ್ನು ಸವರಿಕೊಳ್ಳುತ್ತಾ, ಪರ್ವತವನ್ನು ಭೇದಿಸುವಂತಹ ಶಕ್ತ್ಯಾಯುಧವನ್ನು ತೆಗೆದುಕೊಂಡು ಅದನ್ನೂ ಅರ್ಜುನನ ರಥದ ಮೇಲೆ ಎಸೆದರು.

ತಾಮಾಪತಂತೀಂ ಸಂಪ್ರೇಕ್ಷ್ಯ ಜ್ವಲಂತೀಮಶನೀಮಿವ ।
ಸಮಾದತ್ತ ಶಿತಾನ್ ಭಲ್ಲಾನ್ ಪಂಚ ಪಾಂಡವನಂದನಃ ॥೨೭॥

ಉರಿಯುವ ಸಿಡಿಲಿನಂತೆ ತನ್ನ ಬಳಿಗೆ ಬರುತ್ತಿದ್ದ ಆ ಶಕ್ತಿಯನ್ನು ನೋಡಿ ಪಾಂಡವನಂದನನಾದ ಅರ್ಜುನನು ತೀಕ್ಷ್ಣವಾದ ಐದು ಭಲ್ಲಗಳನ್ನು ತೆಗೆದುಕೊಂಡನು.

ತಸ್ಯ ಚಿಚ್ಛೇದ ತಾಂ ಶಕ್ತಿಂ ಪಂಚಧಾ ಪಂಚಭಿಃ ಶರೈಃ ।
ಸಂಕ್ರುದ್ಧೋ ಭರತಶ್ರೇಷ್ಠ ಭೀಷ್ಮಬಾಹುಬಲೇರಿತಾಮ್ ॥೨೮॥

ಎಲೈ ಭರತಶ್ರೇಷ್ಠನೇ, ಕೋಪಗೊಂಡ ಅರ್ಜುನನು ಭೀಷ್ಮರ ಬಾಹುಬಲದಿಂದ ಪ್ರೇರಿಸಲ್ಪಟ್ಟ ಆ ಶಕ್ತಿಯನ್ನು ಐದು ಬಾಣಗಳಿಂದ ಐದು ಭಾಗಗಳಾಗಿ ಕತ್ತರಿಸಿದನು.

ಸಾ ಪಪಾತ ಪರಿಚ್ಛಿನ್ನಾ ಸಂಕ್ರುದ್ಧೇನ ಕಿರೀಟಿನಾ ।
ಮೇಘವೃಂದಪರಿಭ್ರಷ್ಟಾ ವಿಚ್ಛಿನ್ನೇವ ಶತಹ್ರದಾ ॥೨೯॥

ಆ ಶಕ್ತಿಯು ಕೋಪಗೊಂಡ ಅರ್ಜುನನಿಂದ ಕತ್ತರಿಸಲ್ಪಟ್ಟು ಮೇಘವೃಂದದಿಂದ ಕತ್ತರಿಸಲ್ಪಟ್ಟ ಮಿಂಚಿನಂತೆ ಬಿದ್ದಿತು.

ಛಿನ್ನಾಂ ತಾಂ ಶಕ್ತಿಮಾಲೋಕ್ಯ ಭೀಷ್ಮಃ ಕ್ರೋಧಸಮನ್ವಿತಃ ।
ಅಚಿಂತಯದ್ ರಣೇ ವೀರೋ ಬುದ್ಧ್ಯಾ ಪರಪುರಂಜಯಃ ॥೩೦॥

ಆ ಶಕ್ತಿಯು ಕತ್ತರಿಸಲ್ಪಟ್ಟುದನ್ನು ನೋಡಿ ಪರಪುರಂಜಯರಾದ, ವೀರರಾದ ಭೀಷ್ಮರು ಕ್ರೋಧದಿಂದ ಕೂಡಿದವರಾಗಿ ತಮ್ಮ ಬುದ್ಧಿಯಿಂದ ಆಲೋಚಿಸಿದರು.

ಶಕ್ತೋಽಹಂ ಧನುಷೈಕೇನ ನಿಹಂತುಂ ಸರ್ವಪಾಂಡವಾನ್ ।
ಯದ್ಯೇಷಾಂ ನ ಭವೇದ್ ಗೋಪ್ತಾ ವಿಷ್ಣುಸ್ತೇನೋ ಮಹಾಬಲಃ ।
ಅಜಯ್ಯಶ್ಚೈವ ಸರ್ವೇಷಾಂ ಲೋಕಾನಾಮಿತಿ ಮೇ ಮತಿಃ ॥೩೧॥

ಮಹಾಬಲನಾದ, ವಿಷ್ವಕ್ಸೇನನಾದ ಕೃಷ್ಣನು ಅವರಿಗೆ ರಕ್ಷಕನಾಗಿರದಿದ್ದರೆ ನಾನು ಎಲ್ಲ ಪಾಂಡವರನ್ನೂ ಒಂದು ಧನುಸ್ಸಿನಿಂದ ಕೊಲ್ಲಲು ಸಮರ್ಥನಾಗಿರುತ್ತಿದ್ದೆ. ಆದರೆ ಆ ಕೃಷ್ಣನು ಎಲ್ಲ ಲೋಕಗಳಿಂದಲೂ ಅಜೇಯನಾದವನು ಎಂದು ನನ್ನ ಅಭಿಪ್ರಾಯ.

ಕಾರಣದ್ವಯಮಾಸ್ಥಾಯ ನಾಹಂ ಯೋತ್ಸ್ಯಾಮಿ ಪಾಂಡವೈಃ ।
ಅವಧ್ಯತ್ವಾಚ್ಚ ಪಾಂಡೂನಾಂ ಸ್ತ್ರೀಭಾವಾಚ್ಚ ಶಿಖಂಡಿನಃ ॥೩೨॥

ಪಾಂಡವರು ಅವಧ್ಯರಾದವರು ಮತ್ತು ಶಿಖಂಡಿಯು ಸ್ತ್ರೀಯಾದವನು. ಈ ಎರಡು ಕಾರಣದಿಂದಾಗಿ ನಾನು ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡುವುದಿಲ್ಲ.

ಪಿತ್ರಾ ತುಷ್ಟೇನ ಮೇ ಪೂರ್ವಂ ಯದಾ ಕಾಳೀಮುದಾವಹತ್ ।
ಸ್ವಚ್ಛಂದಮರಣಂ ದತ್ತಮವಧ್ಯತ್ವಂ ರಣೇ ತಥಾ ।
ತಸ್ಮಾನ್ನೃತ್ಯುಮಹಂ ಮನ್ಯೇ ಪ್ರಾಪ್ತಕಾಲಮಿವಾತ್ಮನಃ ॥೩೩॥

ನನ್ನ ತಂದೆಯು ಕಾಳಿಯನ್ನು ವಿವಾಹ ಮಾಡಿಕೊಂಡಾಗ ಸಂತುಷ್ಟರಾಗಿ ನನಗೆ ಸ್ವಚ್ಛಂದ ಮರಣ ಮತ್ತು ಯುದ್ಧದಲ್ಲಿ ಅವಧ್ಯತ್ವ ಎಂಬ ಎರಡು ವರಗಳನ್ನು ಕೊಟ್ಟನು. ಆದ್ದರಿಂದ ನಾನು ಈಗ ನನ್ನ ಮರಣಕಾಲವು ಪ್ರಾಪ್ತವಾಗಿದೆ ಎಂದು ಭಾವಿಸುತ್ತೇನೆ.

ಏವಂ ಜ್ಞಾತ್ವಾ ವ್ಯವಸಿತಂ ಭೀಷ್ಮಸ್ಯಾಮಿತತೇಜಸಃ ।
ಋಷಯೋ ವಸವಶ್ಚೈವ ವಿಯತ್ಸ್ಥಾ ಭೀಷ್ಮಮಬ್ರುವನ್ ॥೩೪॥

ಅಮಿತಪರಾಕ್ರಮಿಗಳಾದ ಭೀಷ್ಮರ ಈ ನಿಶ್ಚಯವನ್ನು ತಿಳಿದ ಋಷಿಗಳೂ ಮತ್ತು ವಸುಗಳೂ ಆಕಾಶದಲ್ಲಿ ನಿಂತು ಭೀಷ್ಮರಿಗೆ ಹೇಳಿದರು.

ಯತ್ತೇ ವ್ಯವಸಿತಂ ವೀರ ಅಸ್ಮಾಕಂ ಸುಮಹತ್ಪ್ರಿಯಮ್ ।
ತತ್ಕುರುಷ್ವ ಮಹೇಷ್ವಾಸ ಯುದ್ಧಾದ್ ಬುದ್ಧಿಂ ನಿವರ್ತಯ । ॥೩೫॥

ಎಲೈ ವೀರನೇ, ನೀನು ಏನು ನಿಶ್ಚಯಿಸಿದ್ದೀಯೋ ಅದು ನಮಗೆ ಬಹಳ ಪ್ರಿಯವಾದುದು. ಎಲೈ ಮಹಾಧನುರ್ಧಾರಿಯೇ, ಅದನ್ನು ಮಾಡು. ನಿನ್ನ ಬುದ್ಧಿಯನ್ನು ಯುದ್ಧದಿಂದ ಹಿಂದಿರುಗಿಸು (ಎಂದು ಹೇಳಿದರು).

ತಸ್ಯ ವಾಕ್ಯಸ್ಯ ನಿಧನೇ ಪ್ರಾದುರಾಸೀಚ್ಛಿವೋಽನಿಲಃ ।
ಅನುಲೋಮಃ ಸುಗಂಧೀ ಚ ಪೃಷತೈಶ್ಚ ಸಮನ್ವಿತಃ ॥೩೬॥

ಋಷಿಗಳು ಮತ್ತು ವಸುಗಳು ಆ ಮಾತುಗಳನ್ನು ಮುಗಿಸುತ್ತಿದ್ದಂತೆ ಮಂಗಳಕರವಾದ ವಾಯುವು ಬೀಸಿತು. ಅದು ಅನುಕೂಲವಾಗಿ ಸುಗಂಧಯುಕ್ತವಾಗಿ ಜಲಕಣಗಳಿಂದ ಕೂಡಿದ್ದಿತು.

ದೇವದುಂದುಭಯಶ್ಚೈವ ಸಂಪ್ರಣೇದುರ್ಮಹಾಸ್ವನಾಃ ।
ಪಪಾತ ಪುಷ್ಪವೃಷ್ಟಿಶ್ಚ ಭೀಷ್ಮಸ್ಯೋಪರಿ ಪಾರ್ಥಿವ ॥೩೭॥

ಶಂಖ-ದುಂದುಭಿಗಳು ಆಕಾಶದಲ್ಲಿ ದೊಡ್ಡ ಶಬ್ದವನ್ನು ಮಾಡಿದವು. ಎಲೈ ರಾಜನೇ, ಭೀಷ್ಮರ ಮೇಲೆ ಪುಷ್ಪವೃಷ್ಟಿಯೂ ಬಿದ್ದಿತು.

ನ ಚ ತಚ್ಚುಶ್ರುವೇ ಕಶ್ಚಿತ್ ತೇಷಾಂ ಸಂವದತಾಂ ನೃಪ ।
ಋತೇ ಭೀಷ್ಮಂ ಮಹಾಬಾಹುಂ ಮಾಂ ಚಾಪಿ ಮುನಿತೇಜಸಾ ॥೩೮॥

ಎಲೈ ರಾಜನೇ, ಭೀಷ್ಮರ ಮತ್ತು ವಸುಗಳ ಸಂವಾದವನ್ನು ಮಹಾಬಾಹುಗಳಾದ ಭೀಷ್ಮರನ್ನು ಬಿಟ್ಟು ಮತ್ತು ವೇದವ್ಯಾಸರ ಅನುಗ್ರಹಕ್ಕೆ ಪಾತ್ರನಾದ ನನ್ನನ್ನು ಬಿಟ್ಟು ಬೇರೆ ಯಾರೂ ಕೇಳಲಿಲ್ಲ.

ಸಂಭ್ರಮಶ್ಚ ಮಹಾನಾಸೀತ್ ತ್ರಿದಶಾನಾಂ ವಿಶಾಂಪತೇ ।
ಪತಿಷ್ಯತಿ ರಥಾದ್ ಭೀಷ್ಮೇ ಸರ್ವಲೋಕಪ್ರಿಯೇ ತದಾ ॥೩೯॥

ಎಲೈ ರಾಜನೇ, ಸರ್ವಲೋಕಪ್ರಿಯರಾದ ಭೀಷ್ಮರು ರಥದಿಂದ ತಮ್ಮ ಪಾತವನ್ನು ನಿರ್ಧರಿಸಿರಲು ದೇವತೆಗಳಿಗೆ ದೊಡ್ಡ ಸಂಭ್ರಮ ಉಂಟಾಯಿತು.

ಇತಿ ದೇವಗಣಾನಾಂ ಚ ಶ್ರುತ್ವಾ ವಾಕ್ಯಂ ಮಹಾಮನಾಃ ।
ತತಃ ಶಾಂತನವೋ ಭೀಷ್ಮೋ ಬೀಭತ್ಸುಂ ನಾಭ್ಯವರ್ತತ ।
ಭಿದ್ಯಮಾನಃ ಶಿತೈರ್ಬಾಣೈಃ ಸರ್ವಾವರಣಭೇದಿಭಿಃ ॥೪೦॥

ದೇವತೆಗಳ ಈ ಮಾತುಗಳನ್ನು ಕೇಳಿದ ಧೈರ್ಯಶಾಲಿಗಳಾದ ಶಂತನು ಪುತ್ರರಾದ ಭೀಷ್ಮರು ಅರ್ಜುನನಿಂದ ನಿಶಿತವಾದ ಬಾಣಗಳಿಂದ ತಮ್ಮ ಎಲ್ಲಾ ಕವಚವೂ ಭೇದಿಸಲ್ಪಡುತ್ತಿದ್ದರೂ ಅರ್ಜುನನ ಮೇಲೆ ಬಾಣ ಪ್ರಯೋಗವನ್ನು ಮಾಡಲಿಲ್ಲ.

ಶಿಖಂಡೀ ತು ಮಹಾರಾಜ ಭರತಾನಾಂ ಪಿತಾಮಹಮ್ ।
ಆಜಘಾನೋರಸಿ ಕ್ರುದ್ಧೋ ನವಭಿರ್ನಿಶಿತೈಃ ಶರೈಃ ॥೪೧॥

ಎಲೈ ಮಹಾರಾಜನೇ, ಆದರೆ ಶಿಖಂಡಿಯಾದರೋ ಕೋಪಗೊಂಡು ಭರತರ ಪಿತಾಮಹರಾದ ಭೀಷ್ಮರನ್ನು ಒಂಬತ್ತು ತೀಕ್ಷ್ಣವಾದ ಬಾಣಗಳಿಂದ ಅವರ ಎದೆಯಲ್ಲಿ ಹೊಡೆದನು.

ಸ ತೇನಾಭಿಹತಃ ಸಂಖ್ಯೇ ಭೀಷ್ಮಃ ಕುರುಪಿತಾಮಹಃ ।
ನಾಕಂಪತ ಮಹಾರಾಜ ಕ್ಷಿತಿಕಂಪೇ ಯಥಾಚಲಃ ॥೪೨॥

ಎಲೈ ಮಹಾರಾಜನೇ, ಯುದ್ಧದಲ್ಲಿ ಶಿಖಂಡಿಯಿಂದ ಹೊಡೆಯಲ್ಪಟ್ಟ ಕುರುಪಿತಾಮಹರಾದ ಭೀಷ್ಮರು ಭೂಕಂಪವಾದಾಗ ಅಲುಗಾಡದ ಪರ್ವತದಂತೆ ಸ್ಥಿರವಾಗಿ ನಿಂತರು.

ತತಃ ಪ್ರಹಸ್ಯ ಬೀಭತ್ಸುರ್ವ್ಯಾಕ್ಷಿಪನ್ ಗಾಂಡಿವಂ ಧನುಃ ।
ಗಾಂಗೇಯಂ ಪಂಚವಿಂಶತ್ಯಾ ಕ್ಷುದ್ರಕಾಣಾಂ ಸಮರ್ಪಯತ್ ॥೪೩॥

ಆಗ ಅರ್ಜುನನು ನಕ್ಕು ಗಾಂಡೀವ ಧನುಸ್ಸನ್ನು ಓಲಾಡಿಸುತ್ತಾ ಭೀಷ್ಮರ ಮೇಲೆ ಇಪ್ಪತ್ತೈದು ಸಣ್ಣ ಬಾಣಗಳನ್ನು ಪ್ರಯೋಗಿಸಿದನು.

ಪುನಃ ಶರಶತೇನೈನಂ ತ್ವರಮಾಣೋ ಧನಂಜಯಃ ।
ಸರ್ವಗಾತ್ರೇಷು ಸಂಕ್ರುದ್ಧಃ ಸರ್ವಮರ್ಮಸ್ವತಾಡಯತ್ ॥೪೪॥

ಪುನಃ ಅರ್ಜುನನು ತ್ವರೆ ಮಾಡಿ ಕೋಪದಿಂದ ನೂರು ಬಾಣಗಳನ್ನು ಅವರ ಸರ್ವಶರೀರದಲ್ಲಿ ಸರ್ವ ಮರ್ಮಸ್ಥಾನಗಳಲ್ಲಿ ಹೊಡೆದನು.

ತಾನ್ಯಪ್ಯಾಶು ಶರೈರ್ಭೀಷ್ಮಃ ಪ್ರವಿವ್ಯಾಧ ಮಹಾರಥಃ ।
ತೈಶ್ಚ ಮುಕ್ತಾನ್ ಶರಾನ್ ಭೀಷ್ಮೋ ಯುಧಿ ಸತ್ಯಪರಾಕ್ರಮಃ ॥೪೫॥

ಮಹಾರಥರೂ, ಸತ್ಯಪರಾಕ್ರಮರೂ ಆದ ಭೀಷ್ಮರು ಆ ಬಾಣಗಳನ್ನೂ, ಉಳಿದ ಯೋಧರು ಪ್ರಯೋಗಿಸಿದ ಬಾಣಗಳನ್ನೂ ರಣರಂಗದಲ್ಲಿ ತಮ್ಮ ಬಾಣಗಳಿಂದ ನಿವಾರಿಸಿದರು.

ನಿವಾರಯಾಮಾಸ ಶರೈಃ ಸಮಂ ಸನ್ನತಪರ್ವಭಿಃ ।
ಶಿಖಂಡೀ ತು ರಣೇ ಬಾಣಾನ್ ಯಾನ್ ಮುಮೋಚ ಮಹಾರಥಃ ॥

ಮಹಾರಥನಾದ ಶಿಖಂಡಿಯು ಯುದ್ಧದಲ್ಲಿ ಯಾವ ಬಾಣಗಳನ್ನು ಅವರ ಮೇಲೆ ಪ್ರಯೋಗಿಸಿದನೋ ಅವುಗಳನ್ನೂ ಬಾಗಿದ ತುದಿಯುಳ್ಳ ತಮ್ಮ ಬಾಣಗಳಿಂದ ನಿವಾರಿಸಿದರು.

ಏವಮನ್ಯೈರಪಿ ಭೃಶಂ ವಧ್ಯಮಾನೋ ಮಹಾರಣೇ ।
ನ ಚಕ್ರುಸ್ತೇ ರುಜಂ ತಸ್ಯ ರುಗ್ಮಪುಂಖಾಃ ಶಿಲಾಶಿತಾಃ ॥೪೭॥

ಹೀಗೆ ಉಳಿದವರಿಂದಲೂ ಮಹಾಯುದ್ಧದಲ್ಲಿ ತೀವ್ರವಾಗಿ ಹೊಡೆಯಲ್ಪಟ್ಟು ಸುವರ್ಣಪುಂಖಗಳನ್ನು ಹೊಂದಿ ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಆ ಬಾಣಗಳು ಅವರಿಗೆ ಯಾವ ವ್ಯಥೆಯನ್ನೂ ಮಾಡಲಿಲ್ಲ.

ತತಃ ಕಿರೀಟೀ ಸಂರಬ್ಧೋ ಭೀಷ್ಮಮೇವಾಭ್ಯವರ್ತತ ।
ಶಿಖಂಡಿನಂ ಪುರಸ್ಕೃತ್ಯ ಧನುಶ್ಚಾಸ್ಯ ಸಮಾಚ್ಛಿನತ್ ॥೪೮॥

ಆಗ ಕೋಪಗೊಂಡ ಅರ್ಜುನನು ಶಿಖಂಡಿಯನ್ನು ಮುಂದೆ ಮಾಡಿಕೊಂಡು ಭೀಷ್ಮರ ಮೇಲೆ ಎರಗಿ ಅವರ ಧನುಸ್ಸನ್ನು ಕತ್ತರಿಸಿದನು.

ಅಥೈನಂ ದಶಭಿರ್ವಿದ್ಧ್ವಾ ಧ್ವಜಮೇಕೇನ ಚಿಚ್ಛೇದ ।
ಸಾರಥಿಂ ವಿಶಿಖೈಶ್ಚಾಸ್ಯ ದಶಭಿಃ ಸಮಕಂಪಯತ್ ॥೪೯॥

ಅನಂತರ ಅವನು ಭೀಷ್ಮರನ್ನು ಹತ್ತು ಬಾಣಗಳಿಂದ ಹೊಡೆದು ಒಂದು ಬಾಣದಿಂದ ಅವರ ಧ್ವಜವನ್ನು ಕತ್ತರಿಸಿದನು ಮತ್ತು ಅವರ ಸಾರಥಿಯನ್ನು ಹತ್ತು ಬಾಣಗಳಿಂದ ಮರ್ದಿಸಿದನು.

ಸೋಽನ್ಯತ್ ಕಾರ್ಮುಕಮಾದತ್ತ ಗಾಂಗೇಯೋ ಬಲವತ್ತರಮ್ ।
ತದಪ್ಯಸ್ಯ ಶಿತೈರ್ಭಲ್ಲೈಶ್ಚಿತ್ತ್ವಾ ತ್ರಿಭಿರಪಾನುದತ್ ।
ನಿಮೇಷಾಂತರಮಾತ್ರೇಣ ಆತ್ತಮಾತ್ತಂ ಮಹಾರಣೇ ॥೫೦॥

ಭೀಷ್ಮರು ಬಲವಾದ ಇನ್ನೊಂದು ಬಿಲ್ಲನ್ನು ತೆಗೆದುಕೊಂಡರು. ಅದನ್ನೂ ಹಾಗೆಯೇ ಪುನಃ ಪುನಃ ತೆಗೆದುಕೊಂಡ ಬಿಲ್ಲುಗಳನ್ನೂ ಅರ್ಜುನನು ಕಣ್ಣುಮುಚ್ಚಿ ಬಿಡುವಷ್ಟರಲ್ಲಿ ತೀಕ್ಷ್ಣವಾದ ಮೂರು ಭಲ್ಲಗಳಿಂದ ಮೂರು ಭಾಗಗಳಾಗಿ ಕತ್ತರಿಸಿದನು.

ವಿಧಮಸ್ಯ ಧನೂಂಷ್ಯಾಜೌ ಚಿಚ್ಛೇದ ಸುಬಹೂನ್ಯಪಿ ।
ತತಃ ಶಾಂತನವೋ ಭೀಷ್ಮೋ ಬೀಭತ್ಸುಂ ನಾಭ್ಯವರ್ತತ ॥೫೧॥

ಹೀಗೆ ಯುದ್ಧದಲ್ಲಿ ಅವರ ಅನೇಕ ಧನುಸ್ಸುಗಳನ್ನು ಅರ್ಜುನನು ಕತ್ತರಿಸಿದನು. ಅನಂತರ ಶಂತನುಪುತ್ರರಾದ ಭೀಷ್ಮರು ಅರ್ಜುನನ ಮೇಲೆ ಬಾಣ ಪ್ರಯೋಗವನ್ನು ಮಾಡಲಿಲ್ಲ.

ಅಥೈನಂ ಪಂಚವಿಂಶತ್ಯಾ ಕ್ಷುದ್ರಕಾಣಾಂ ಸಮರ್ದಯತ್ ।
ಸೋಽತಿವಿದ್ಧೋ ಮಹೇಷ್ವಾಸೋ ದುಃಶಾಸನಮಭಾಷತ ॥೫೨॥

ಅನಂತರ ಅರ್ಜುನನು ಇಪ್ಪತ್ತೈದು ಸಣ್ಣಬಾಣಗಳಿಂದ ಭೀಷ್ಮರನ್ನು ಘಾಸಿಗೊಳಿಸಿದನು. ಬಹಳ ಗಾಯಗೊಂಡ ಮಹಾಧನುರ್ಧಾರಿಗಳಾದ ಭೀಷ್ಮರು ದುಶ್ಶಾಸನನನ್ನು ಕುರಿತು ಮಾತನಾಡಿದರು.

ಏಷ ಪಾರ್ಥೋ ರಣೇ ಕ್ರುದ್ಧಃ ಪಾಂಡವಾನಾಂ ಮಹಾರಥಃ ।
ಶರೈರನೇಕಸಾಹಸ್ರೈರ್ಮಾಮೇವಾಭ್ಯಸ್ಯತೇ ರಣೇ ॥೫೩॥

ಪಾಂಡವರ ಮಹಾರಥನಾದ, ಕ್ರುದ್ಧನಾದ ಈ ಅರ್ಜುನನು ಯುದ್ಧದಲ್ಲಿ ನನ್ನ ಮೇಲೆಯೇ ಅನೇಕ ಸಹಸ್ರ ಬಾಣಗಳನ್ನು ಬಿಡುತ್ತಿದ್ದಾನೆ.

ನ ಚೈಷ ಶಕ್ಯಃ ಸಮರೇ ಜೇತುಂ ವಜ್ರಭೃತಾ ಅಪಿ ।
ನ ಚಾಪಿ ಸಹಿತಾ ವೀರಾ ದೇವದಾನವರಾಕ್ಷಸಾಃ ।
ಮಾಂ ಚೈವ ಶಕ್ತಾ ನಿರ್ಜೇತುಂ ಕಿಮು ಮರ್ತ್ಯಾ ಸುದುರ್ಬಲಾಃ ॥೫೪॥

ಇವನನ್ನು ಇಂದ್ರನೂ ಯುದ್ಧದಲ್ಲಿ ಗೆಲ್ಲಲು ಸಾಧ್ಯವಿಲ್ಲ. ದೇವ-ದಾನವ-ರಾಕ್ಷಸರಿಂದ ಸಹಿತರಾದ ವೀರರು ಯುದ್ಧದಲ್ಲಿ ನನ್ನನ್ನೂ ಗೆಲ್ಲಲಾರರು. ಇನ್ನು ದುರ್ಬಲರಾದ ಮನುಷ್ಯರ ಮಾತೇನು? (ಎಂದು ಹೇಳಿದರು).

ಏವಂ ತಯೋಃ ಸಂವದತೋಃ ಫಲ್ಗುನೋ ನಿಶಿತೈಃ ಶರೈಃ ।
ಶಿಖಂಡಿನಂ ಪುರಸ್ಕೃತ್ಯ ಭೀಷ್ಮಂ ವಿವ್ಯಾಧ ಸಂಯುಗೇ ॥೫೫॥

ಹೀಗೆ ಅವರು ಮಾತನಾಡುತ್ತಿರುವಾಗ ಅರ್ಜುನನು ಶಿಖಂಡಿಯನ್ನು ಮುಂದೆ ಮಾಡಿಕೊಂಡು ತೀಕ್ಷ್ಣವಾದ ಬಾಣಗಳಿಂದ ರಣರಂಗದಲ್ಲಿ ಭೀಷ್ಮರನ್ನು ಹೊಡೆದನು.

ತತೋ ದುಃಶಾಸನಂ ಭೂಯಃ ಸ್ಥಯಮಾನೋಽಭ್ಯಭಾಷತ ।
ಅತಿವಿದ್ಧಃ ಶಿತೈರ್ಬಾಣೈರ್ಭೃಶಂ ಗಾಂಡೀವಧನ್ವನಾ ॥೫೬॥

ಆಗ ಗಾಂಡೀವ ಧನುರ್ಧಾರಿಯಾದ ಅರ್ಜುನನಿಂದ ತೀಕ್ಷ್ಣವಾದ ಬಾಣಗಳಿಂದ ಬಹಳವಾಗಿ ಹೊಡೆಯಲ್ಪಟ್ಟ ಭೀಷ್ಮರು ನಗುತ್ತಾ ಪುನಃ ದುಶ್ಶಾಸನನನ್ನು ಕುರಿತು ಮಾತನಾಡಿದರು.

ವಜ್ರಾಶನಿಸಮಸ್ಪರ್ಶಾಃ ಶಿತಾಗ್ರಾಃ ಸಂಪ್ರವೇಪಿತಾಃ ।
ವಿಮುಕ್ತಾ ಅವ್ಯವಚ್ಛಿನ್ನಾ ನೇಮೇ ಬಾಣಾಃ ಶಿಖಂಡಿನಃ ॥೫೭॥

ವಜ್ರಾಯುಧಕ್ಕೆ ಮತ್ತು ಸಿಡಿಲಿಗೆ ಸಮಾನವಾದ ಸ್ಪರ್ಶವುಳ್ಳ, ತೀಕ್ಷ್ಣವಾದ ತುದಿಯನ್ನು ಹೊಂದಿರುವ, ಸತತವಾಗಿ ಪ್ರಯೋಗಿಸಲ್ಪಡುತ್ತಿರುವ, ನನ್ನ ದೇಹದೊಳಗೆ ನಾಟುತ್ತಿರುವ ಈ ಬಾಣಗಳು ಶಿಖಂಡಿಯ ಬಾಣಗಳಲ್ಲ.

ನಿಕೃಂತಮಾನಾ ಮರ್ಮಾಣಿ ದೃಢಾವರಣಭೇದಿನಃ ।
ಮುಸಲಾನೀವ ಮೇ ಘ್ನಂತಿ ನೇಮೇ ಬಾಣಾಃ ಶಿಖಂಡಿನಃ ॥೫೮॥

ನನ್ನ ಮರ್ಮಗಳನ್ನು ಕತ್ತರಿಸುತ್ತಾ, ದೃಢವಾದ ಕವಚಗಳನ್ನು ಭೇದಿಸುತ್ತಾ, ಒನಕೆಗಳಂತೆ ನನ್ನನ್ನು ಹೊಡೆಯುವ ಈ ಬಾಣಗಳು ಶಿಖಂಡಿಯ ಬಾಣಗಳಲ್ಲ.

ಬ್ರಹ್ಮದಂಡಸಮಸ್ಪರ್ಶಾ ವಜ್ರವೇಗಾ ದುರಾಸದಾಃ ।
ಮಮ ಪ್ರಾಣಾನಾರುಜಂತಿ ನೇಮೇ ಬಾಣಾಃ ಶಿಖಂಡಿನಃ ॥೫೯॥

ಬ್ರಹ್ಮದಂಡಕ್ಕೆ ಸಮಾನವಾದ ಸ್ಪರ್ಶವುಳ್ಳ, ವಜ್ರಾಯುಧದ ವೇಗವುಳ್ಳ, ಸಮೀಪ ಸುಳಿಯಲೂ ಶಕ್ಯವಲ್ಲದ ಈ ಬಾಣಗಳು ನನ್ನ ಪ್ರಾಣಗಳನ್ನು ಹಿಂಸಿಸುತ್ತಿವೆ. ಈ ಬಾಣಗಳು ಶಿಖಂಡಿಯ ಬಾಣಗಳಲ್ಲ.

ಭುಜಗಾ ಇವ ಸಂಕ್ರುದ್ಧಾ ಲೇಲಿಹಾನಾ ವಿಷೋಲ್ಬಣಾಃ ।
ಮಮಾವಿಶಂತಿ ಮರ್ಮಾಣಿ ನೇಮೇ ಬಾಣಾಃ ಶಿಖಂಡಿನಃ ॥೬೦॥

ಕೋಪಗೊಂಡು ನಾಲಿಗೆಗಳನ್ನು ಹೊರಗೆ ಚಾಚುವ ವಿಷಪೂರಿತವಾದ ಸರ್ಪಗಳಂತೆ ಇರುವ ನನ್ನ ಮರ್ಮಗಳನ್ನು ಪ್ರವೇಶಿಸುತ್ತಿರುವ ಇವು ಶಿಖಂಡಿಯ ಬಾಣಗಳಲ್ಲ.

ನಾಶಯಂತೀವ ಮೇ ಪ್ರಾಣಾನ್ ಯಮದೂತಾ ಇವಾಹಿತಾಃ ।
ಗದಾಪರಿಘಸಂಸ್ಪರ್ಶಾ ನೇಮೇ ಬಾಣಾಃ ಶಿಖಂಡಿನಃ ॥೬೧॥

ನನ್ನ ಮೇಲೆ ಪ್ರಯೋಗಿಸಲ್ಪಟ್ಟ ಗದಾ-ಪರಿಘಗಳ ಸ್ಪರ್ಶದಂತೆ ಸ್ಪರ್ಶವುಳ್ಳ ಇವು ಯಮದೂತರಂತೆ ನನ್ನ ಪ್ರಾಣಗಳನ್ನು ನಾಶಗೊಳಿಸುತ್ತಿವೆ. ಇವು ಶಿಖಂಡಿಯ ಬಾಣಗಳಲ್ಲ.

ಕೃಂತಂತಿ ಮಮ ಗಾತ್ರಾಣಿ ಮಾಘಮಾ ಸೇಗವಾಮಿವ ।
ಅರ್ಜುನಸ್ಯ ಇಮೇ ಬಾಣಾ ನೇಮೇ ಬಾಣಾಃ ಶಿಖಂಡಿನಃ ॥೬೨॥

ಚೇಳಿನ ಮರಿಯು ತಾಯಿ ಚೇಳನ್ನು ಭೇದಿಸಿದಂತೆ ಅರ್ಜುನನ ಈ ಬಾಣಗಳು ನನ್ನನ್ನು ಭೇದಿಸುತ್ತಿವೆ, ಇವು ಶಿಖಂಡಿಯ ಬಾಣಗಳಲ್ಲ (ಲಕ್ಷಾಲಂಕಾರ).

ಸರ್ವೇ ಹ್ಯಪಿ ನ ಮೇ ದುಃಖಂ ಕುರ್ಯುರನ್ಯೇ ನರಾಧಿಪಾಃ ।
ವೀರಂ ಗಂಡೀವಧನ್ವಾನಮೃತೇ ಜಿಷ್ಣುಂ ಕಪಿಧ್ವಜಮ್ ॥೬೩॥

ಗಾಂಡೀವ ಧನುರ್ಧಾರಿಯಾದ, ಕಪಿಧ್ವಜನಾದ, ವೀರನಾದ ಜಯಶೀಲನಾದ ಅರ್ಜುನನೊಬ್ಬನನ್ನು ಬಿಟ್ಟು ಉಳಿದ ಎಲ್ಲಾ ರಾಜರು ಸೇರಿದರೂ ನನಗೆ ಯಾವ ದುಃಖವನ್ನೂ ಉಂಟು ಮಾಡಲಾರರು.

ಇತಿ ಬ್ರುವನ್ ಶಾಂತನವೋ ದಿಧಕ್ಷುರಿವ ಪಾಂಡವಮ್ ।
ಸವಿಸ್ಫುಲಿಂಗಾಂ ದೀಪ್ತಾಗ್ರಾಂ ಶಕ್ತಿಂ ಚಿಕ್ಷೇಪ ಭಾರತ ॥೬೪॥

ಎಲೈ ಭಾರತನೇ, ಹೀಗೆ ಹೇಳುತ್ತಾ ಭೀಷ್ಮರು ಪಾಂಡುನಂದನನಾದ ಅರ್ಜುನನನ್ನು ಸುಡುವಂತೆ ಕಿಡಿಗಳಿಂದ ಸಹಿತವಾದ, ಜ್ವಲಿಸುವ ಅಗ್ರಭಾಗವುಳ್ಳ ಶಕ್ತಿಯನ್ನು ಅರ್ಜುನನ ಮೇಲೆ ಎಸೆದರು.

ತಾಮಸ್ಯ ವಿಶಿಖೈಶ್ಚಿತ್ತ್ವಾ ತ್ರಿಧಾ ತ್ರಿಭರಪಾತಯತ್ ।
ಪಶ್ಯತಾಂ ಕುರುವೀರಾಣಾಂ ಸರ್ವೇಷಾಂ ತತ್ರ ಭಾರತ ॥೬೫॥

ಎಲೈ ಭಾರತನೇ, ಕುರುವೀರರು ಎಲ್ಲರೂ ನೋಡುತ್ತಿರುವಂತೆಯೇ ಆ ಶಕ್ತಿಯನ್ನು ಅರ್ಜುನನು ಮೂರು ಬಾಣಗಳಿಂದ ಮೂರು ಭಾಗವಾಗಿ ಕತ್ತರಿಸಿ ಕೆಡವಿದನು.

ಚರ್ಮಾಥಾದತ್ತ ಗಾಂಗೇಯೋ ಜಾತರೂಪಪರಿಷ್ಕೃತಮ್ ।
ಖಡ್ಗಂ ಚಾನ್ಯತರಂ ಪ್ರೇಪ್ಸುರ್ಮೃತ್ಯೋರಗ್ರೇ ಜಯದ್ರಥಃ ॥೬೬॥

ಆಗ ಜಯಿಸುವ ರಥವುಳ್ಳ ಭೀಷ್ಮರು ಮೃತ್ಯುವನ್ನಾಗಲೀ ಅಥವಾ ಜಯವನ್ನಾಗಲೀ ಪಡೆಯಲು ಬಯಸಿ, ಸುವರ್ಣಾಲಂಕೃತವಾದ ಗುರಾಣಿಯನ್ನೂ ಮತ್ತು ಖಡ್ಗವನ್ನೂ ತೆಗೆದುಕೊಂಡರು (ಲಕ್ಷಾಲಂಕಾರ).

ತಸ್ಯ ತಚ್ಛತಧಾ ಚರ್ಮ ವ್ಯಧಮದ್ ದಂಶಿತಾತ್ಮನಃ ।
ರಥಾದನವರೂಢಸ್ಯ ತದದ್ಭುತಮಿವಾಭವತ್ ॥೬೭॥

ಅರ್ಜುನನು ಅವರು ರಥದಿಂದ ಇಳಿಯುವುದಕ್ಕಿಂತ ಮೊದಲೇ ಆ ಗುರಾಣಿಯನ್ನು ನೂರು ಚೂರುಗಳನ್ನಾಗಿ ನಾಶ ಮಾಡಿದನು. ಅದು ಅದ್ಭುತವಾಗಿದ್ದಿತು.

ವಿನದ್ಯೋಚ್ಚೈಃ ಸಿಂಹ ಇವ ಸ್ವಾನ್ಯನೀಕಾನ್ಯಚೋದಯತ್ ।
ಅಭಿದ್ರವತ ಗಾಂಗೇಯಂ ಮಾ ವೋಽಸ್ತು ಭಯಮಣ್ವಪಿ ॥೬೮॥

ಸಿಂಹದಂತೆ ಗರ್ಜನೆಯನ್ನು ಮಾಡಿ, ಅರ್ಜುನನು ತನ್ನ ಸೈನ್ಯಗಳನ್ನು ಕುರಿತು, ಭೀಷ್ಮರ ಮೇಲೆ ಎರಗಿ, ನಿಮಗೆ ಸ್ವಲ್ಪವೂ ಭಯಬೇಡ ಎಂದು ಪ್ರಚೋದಿಸಿದನು.

ಅಥ ತೇ ತೋಮರೈಃ ಪ್ರಾಸೈರ್ಬಾಣೌಘೈಶ್ಚ ಸಮಂತತಃ ।
ಪಟ್ಟಶೈಶ್ಚ ಸನಿಸ್ತ್ರಿಂಶೈರ್ನಾನಾಪ್ರಹರಣೈಸ್ತಥಾ ॥೬೯॥

ವತ್ಸದಂತೈಶ್ಚ ಭಲ್ಲೈಶ್ಚ ತಮೇಕಮಭಿದುದ್ರುವುಃ ।
ಸಿಂಹನಾದಸ್ತತೋ ಘೋರಃ ಪಾಂಡವಾನಾಮಜಾಯತ ॥೭೦॥

ಆಗ ಅವರು ಎಲ್ಲ ಕಡೆಗಳಲ್ಲಿಯೂ ತೋಮರಗಳು, ಪ್ರಾಸಗಳು, ಬಾಣ ಸಮೂಹಗಳು, ಪಟ್ಟಶಗಳು, ಖಡ್ಗಗಳು, ವತ್ಸದಂತಗಳು, ಭಲ್ಲಗಳು ಮೊದಲಾದ

ನಾನಾ ವಿಧವಾದ ಆಯುಧಗಳಿಂದ ಭೀಷ್ಮರೊಬ್ಬರ ಮೇಲೆಯೇ ಎರಗಿದರು. ಪಾಂಡವರ ಸೈನ್ಯದಲ್ಲಿ ಆಗ ಘೋರವಾದ ಸಿಂಹನಾದವು ಉಂಟಾಯಿತು.

ತಥೈವ ತವ ಪುತ್ರಾಶ್ಚ ರಾಜನ್ ಭೀಷ್ಮಜಯೈಷಿಣಃ ।
ತಮೇಕಮಭ್ಯವರ್ತಂತ ಸಿಂಹನಾದಾಂಶ್ಚ ನೇದಿರೇ ॥೭೧॥

ಎಲೈ ರಾಜನೇ, ಹಾಗೆಯೇ ಭೀಷ್ಮರ ಜಯವನ್ನು ಬಯಸಿದ ನಿನ್ನ ಪುತ್ರರು ಅವರೊಬ್ಬರನ್ನೇ ರಕ್ಷಿಸುತ್ತಾ ಸಿಂಹನಾದಗಳನ್ನು ಮಾಡಿದರು.

ತತ್ರಾಸೀತ್ ತುಮುಲಂ ಯುದ್ಧಂ ತಾವಕಾನಾಂ ಪರೈಃ ಸಹ ।
ದಶಮೇಽಹನಿ ರಾಜೇಂದ್ರ ಭೀಷ್ಮಾರ್ಜುನಸಮಾಗಮೇ ॥೭೨॥

ಎಲೈ ರಾಜೇಂದ್ರನೇ, ಹತ್ತನೆಯ ದಿವಸ ಭೀಷ್ಮಾರ್ಜುನರ ಸಮಾಗಮ ಉಂಟಾಗುತ್ತಿರಲು ನಿನ್ನವರಿಗೂ ಮತ್ತು ಪರರಿಗೂ ಘೋರವಾದ ಯುದ್ಧ ಉಂಟಾಯಿತು.

ಆಸೀದ್ ಗಾಂಗ ಇವಾವರ್ತೋ ಮುಹೂರ್ತಮುದಧೇರಿವ ।
ಸೈನ್ಯಾನಾಂ ಯುಧ್ಯಮಾನಾನಾಂ ನಿಘ್ನತಾಮಿತರೇತರಮ್ ॥೭೩॥

ಪರಸ್ಪರವಾಗಿ ಯುದ್ಧ ಮಾಡಿ ಹೊಡೆಯುವಾಗ ಪರಸ್ಪರವಾಗಿ ಆ ಸೈನ್ಯಗಳಿಗೆ ಒಂದು ಮುಹೂರ್ತದ ಕಾಲ ಗಂಗೆಯ ಸುಳಿಯಂತೆ, ಸಮುದ್ರದ ಸುಳಿಯಂತೆ ಸೇನೆಗಳು ಮಿಶ್ರಣಗೊಂಡವು.

ಅಗಮ್ಯರೂಪಾ ಪೃಥಿವೀ ಶೋಣಿತಾಕ್ತಾ ತದಾಭವತ್ ।
ಸಮಂ ಚ ವಿಷಮಂ ಚೈವ ನ ಪ್ರಾಜ್ಞಾಯತ ಕಿಂಚನ ॥೭೪॥

ಆಗ ರಕ್ತದಿಂದ ನೆನೆದ ಭೂಮಿಯು ನಡೆಯಲು ಅಸಾಧ್ಯವಾಗಿ ಪರಿಣಮಿಸಿತು. ಸಮವಾದ ಪ್ರದೇಶವಾಗಲೀ, ವಿಷಮವಾದ ಪ್ರದೇಶವಾಗಲೀ, ಯಾವುದೂ ತಿಳಿಯಲಿಲ್ಲ.

ಯೋಧಾನಾಮಯುತಂ ಹತ್ವಾ ತಸ್ಮಿನ್ ಸ ದಶಮೇಽಹನಿ ।
ಅತಿಷ್ಠದಾಹವೇ ಭೀಷ್ಮೋ ಭಿದ್ಯಮಾನೇಷು ಮರ್ಮಸು ॥೭೫॥

ತಮ್ಮ ಮರ್ಮಗಳು ಭೇದಿಸಲ್ಪಡುತ್ತಿದ್ದರೂ ಭೀಷ್ಮರು ಆ ಹತ್ತನೆಯ ದಿವಸ ಹತ್ತು ಸಹಸ್ರ ಯೋಧರನ್ನು ಕೊಂದು ರಣರಂಗದಲ್ಲಿ ಸ್ಥಿರವಾಗಿ ನಿಂತರು.

ತತಃ ಸೇನಾಮುಖೇ ತಸ್ಮಿನ್ ಸ್ಥಿತಃ ಪಾರ್ಥೋ ಧನಂಜಯಃ ।
ಮಧ್ಯೇನ ಕುರುಸೈನ್ಯಾನಾಂ ದ್ರಾವಯಾಮಾಸ ವಾಹಿನೀಮ್ ॥೭೬॥

ಆಗ ಸೇನೆಯ ಮುಂಭಾಗದಲ್ಲಿ ನಿಂತ ಅರ್ಜುನನು ಕುರುಸೈನ್ಯದ ಮಧ್ಯವನ್ನು ಪ್ರವೇಶಿಸಿ ಅದನ್ನು ಚದುರಿಸಿದನು.

ತತ್ರಾದ್ಭುತಮಪಶ್ಯಾಮ ಪಾಂಡವಾನಾಂ ಪರಾಕ್ರಮಮ್ ।
ದ್ರಾವಯಾಮಾಸುರಿಷುಭಿಃ ಸರ್ವಾನ್ ಭೀಷ್ಮಪದಾನುಗಾನ್ ॥೭೭॥

ಭೀಷ್ಮರ ಅನುಯಾಯಿಗಳಾದ ಎಲ್ಲರನ್ನೂ ತಮ್ಮ ಬಾಣಗಳಿಂದ ದೂರ ಓಡಿಸಿದ ಪಾಂಡವರ ಅದ್ಭುತವಾದ ಪರಾಕ್ರಮವನ್ನು ನಾವು ಅಲ್ಲಿ ನೋಡಿದೆವು.

ವಯಂ ಶ್ವೇತಹಯಾದ್ ಭೀತಾಃ ಕುಂತೀಪುತ್ರಾದ್ ಧನಂಜಯಾತ್ ।
ಪೀಡ್ಯಮಾನಾಃ ಶಿತೈಃ ಶಸ್ತ್ರೈಃ ಪ್ರದ್ರವಾಮ ಮಹಾರಣಾತ್ ॥೭೮॥

ನಾವು ಕುಂತೀಪುತ್ರನೂ, ಶ್ವೇತಾಶ್ವನೂ ಆದ ಅರ್ಜುನನಿಂದ ಭೀತರಾಗಿ ತೀಕ್ಷ್ಣವಾದ ಶಸ್ತ್ರಗಳಿಂದ ಪೀಡಿಸಲ್ಪಟ್ಟು ರಣರಂಗದಿಂದ ಹೊರಗೆ ಓಡಿ ಹೋದೆವು.

ಪಾಂಡವೈಃ ಪಂಚಭಿಃ ಸಾರ್ಧಂ ಸಾತ್ಯಕೇನ ಚ ಧನ್ವಿನಾ ।
ಧೃಷ್ಟದ್ಯುಮ್ನಮುಖೈಃ ಸರ್ವೈಃ ಪಾಂಚಾಲೈಶ್ಚ ಸಮಂತತಃ ॥೭೯॥

ಭಿದ್ಯಮಾನಾ ಶರೈಸ್ತೀಕ್ಷ್ಣೈಃ ಸರ್ವೈಃ ಕಾರ್ಷ್ಣಿಪುರೋಗಮೈಃ ।
ದ್ರೋಣದ್ರೌಣಿಕೃಪೈಃ ಸಾರ್ಧಂ ಸರ್ವೇ ಶಲ್ಯಕೃಪಾದಯಃ ।
ತಾವಕಾ ಸಮರೇ ರಾಜನ್ ಜಹುರ್ಭೀಷ್ಮಂ ಮಹಾಮೃಧೇ ॥೮೦॥

ಎಲೈ ರಾಜನೇ, ಧನುರ್ಧಾರಿಗಳಾದ, ಸಾತ್ಯಕಿಸಹಿತರಾದ ಪಂಚಪಾಂಡವರಿಂದಲೂ, ಧೃಷ್ಟದ್ಯುಮ್ನ ಮೊದಲಾದ ಎಲ್ಲ ಪಾಂಚಾಲರಿಂದಲೂ ಮತ್ತು ಅಭಿಮನ್ಯುವೇ ಮೊದಲಾದವರಿಂದಲೂ ಎಲ್ಲ ಕಡೆಯಿಂದಲೂ ತೀಕ್ಷ್ಣವಾದ ಬಾಣಗಳಿಂದ ದಹಿಸಲ್ಪಡುತ್ತಿದ್ದ ನಿನ್ನ ಸೈನ್ಯದವರಾದ ಶಲ್ಯ, ಕೃಪ ಮೊದಲಾದವರೆಲ್ಲರೂ

ದ್ರೋಣರು, ಅಶ್ವತ್ಥಾಮರ ಜೊತೆಯಲ್ಲಿ ಸೇರಿ ಆ ದೊಡ್ಡ ಯುದ್ಧದಲ್ಲಿ ಭೀಷ್ಮರನ್ನು ಏಕಾಕಿಯಾಗಿ ಮಾಡಿ ತ್ಯಜಿಸಿದರು.

ಸೌವೀರಾಃ ಕಿತವಾಃ ಪ್ರಾಚ್ಯಾಃ ಪ್ರತೀಚ್ಯೋದೀಚ್ಯಮಾಲವಾಃ ।
ಅಭೀಷಾಹಾಃ ಶೂರಸೇನಾಃ ಶಿಬಯೋಽಥ ವಸಾತಯಃ ॥೮೧॥

ಸಾಲ್ವಾಶ್ರಯಾಸ್ತ್ರಿಗರ್ತಾಶ್ಚ ಅಂಬಷ್ಠಾಃ ಕೇಕಯೈಃ ಸಹ ।
ದ್ವಾದಶೈತೇ ಜನಪದಾಃ ಶರಾರ್ತಾ ವ್ರಣಪೀಡಿತಾಃ ।
ಸಂಗ್ರಾಮೇ ನ ಜಹುರ್ಭೀಷ್ಮಂ ಯುಧ್ಯಮಾನಂ ಕಿರೀಟಿನಾ ॥೮೨॥

ಸೌವೀರರು, ಕಿತವರು, ಪೂರ್ವ-ಪಶ್ಚಿಮ-ಉತ್ತರ ದಿಕ್ಕಿನವರು, ಮಾಲವರು, ಅಭೀಷಾಹರು, ಶೂರಸೇನರು, ಶಿಬಿಗಳು, ವಸಾತಿಗಳು, ಸಾಲ್ವಾಶ್ರಯರು, ತ್ರಿಗರ್ತರು, ಕೇಕಯ ಸಹಿತರಾದ ಅಂಬಷ್ಠರು ಈ ಹನ್ನೆರಡು ದೇಶದವರು ಮಾತ್ರ ಬಾಣಗಳ ಏಟನ್ನು ತಿಂದು, ಗಾಯಗಳಿಂದ ಪೀಡಿತರಾಗಿದ್ದರೂ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಿದ್ದ ಭೀಷ್ಮರನ್ನು ರಣರಂಗದಲ್ಲಿ ತ್ಯಜಿಸಲಿಲ್ಲ.

ತತಸ್ತಮೇಕಂ ಬಹವಃ ಪರಿವಾರ್ಯ ಸಮಂತತಃ ।
ಪರಿಕಾಲ್ಯ ಕುರೂನ್ ಸರ್ವಾನ್ ಶರವರ್ಷೈರವಾಕಿರನ್ ॥೮೩॥

ಆಗ ಪಾಂಡವರ ಬಹುಯೋಧರು ಭೀಷ್ಮರೊಬ್ಬರನ್ನು ಸುತ್ತುಗಟ್ಟಿ, ಉಳಿದ ಎಲ್ಲಾ ಕುರುಗಳನ್ನೂ ದೂರ ಓಡಿಸಿ, ಭೀಷ್ಮರ ಮೇಲೆ ಬಾಣಗಳ ಮಳೆಯನ್ನು ಕರೆದರು.

ನಿಪಾತಯತ ಗೃಹ್ಣೀತ ವಿಧ್ಯತಾಥ ಚ ಕರ್ಷತ ।
ಇತ್ಯಾಸೀತ್ ತುಮುಲಃ ಶಬ್ದೋ ರಾಜನ್ ಭೀಷ್ಮರಥಂ ಪ್ರತಿ ॥೮೪॥

ಎಲೈ ರಾಜನೇ, ಕೆಳಗೆ ಉರುಳಿಸಿ, ಹಿಡಿಯಿರಿ, ಗಾಯಗೊಳಿಸಿ, ಎಳೆಯಿರಿ ಮೊದಲಾದ ತೀವ್ರವಾದ ಶಬ್ದಗಳು ಭೀಷ್ಮರ ರಥದ ಬಳಿಯಲ್ಲಿ ಕೇಳಿಬಂದವು.

ಅಭಿಹತ್ಯ ಶರೌಘೈಸ್ತಂ ಶತಶೋಽಥ ಸಹಸ್ರಶಃ ।
ನ ತಸ್ಯಾಸೀದನಿರ್ಭಿನ್ನಂ ಗಾತ್ರೇಷ್ವಂಗುಲಮಾತ್ರಕಮ್ ॥೮೫॥

ಭೀಷ್ಮರನ್ನು ನೂರಾರು, ಸಹಸ್ರಾರು ಬಾಣಗಳಿಂದ ಅವರು ಹೊಡೆದರು. ಅವರ ಶರೀರದಲ್ಲಿ ಬಾಣಗಳಿಂದ ಭೇದಿಸಲ್ಪಡದ ಒಂದು ಅಂಗುಲದ ಸ್ಥಳವೂ ಉಳಿದಿರಲಿಲ್ಲ.

ಏವಂ ವಿಭೋ ತವ ಪಿತಾ ಶರೈರ್ವಿಶಕಲೀಕೃತಃ ।
ಶಿತಾಗ್ರೈಃ ಫಲ್ಗುನೇನಾಜೌ ಪ್ರಾಕ್ ಶಿರಾಃ ಪ್ರಾಪತದ್ ರಥಾತ್ ।
ಕಿಂಚಿಚ್ಛೇಷೇ ದಿನಕರೇ ಪುತ್ರಾಣಾಂ ತವ ಪಶ್ಯತಾಮ್ ॥೮೬॥

ಎಲೈ ವಿಭುವೇ, ಹೀಗೆ ಬಾಣಗಳಿಂದ ಭೇದಿಸಲ್ಪಟ್ಟ ನಿನ್ನ ತಂದೆಯು ರಣರಂಗದಲ್ಲಿ ತೀಕ್ಷ್ಣವಾದ ಅಗ್ರವುಳ್ಳ ಬಾಣಗಳಿಂದ ಅರ್ಜುನನಿಂದ ಹೊಡೆಯಲ್ಪಟ್ಟವರಾಗಿ, ಸೂರ್ಯನು ಇನ್ನೂ ಸ್ವಲ್ಪ ಕಾಲ ಇರುವಾಗಲೇ, ನಿನ್ನ ಪುತ್ರರು ನೋಡುತ್ತಿರುವಂತೆಯೇ ಪೂರ್ವದಿಕ್ಕಿಗೆ ಶಿರಸ್ಸನ್ನು ಮಾಡಿ ರಥದಿಂದ ಬಿದ್ದರು.

ಹಾ ಹೇತಿ ದಿವಿ ದೇವಾನಾಂ ಪಾರ್ಥಿವಾನಾಂ ಚ ಸರ್ವಶಃ ।
ಪತಮಾನೇ ರಥಾದ್ ಭೀಷ್ಮೇ ಬಭೂವ ಸುಮಹಾನ್ ಸ್ವನಃ ॥೮೭॥

ಭೀಷ್ಮರು ರಥದಿಂದ ಬೀಳುತ್ತಿರಲು ಆಕಾಶದಲ್ಲಿ ಮತ್ತು ಭೂಮಿಯಲ್ಲಿ ದೇವತೆಗಳ ಮತ್ತು ರಾಜರ ಹಾಹಾಕಾರದ ದೊಡ್ಡ ಶಬ್ದವು ಉಂಟಾಯಿತು.

ತಂ ಪತಂತಮಭಿಪ್ರೇಕ್ಷ್ಯ ಮಹಾತ್ಮಾನಂ ಪಿತಾಮಹಮ್ ।
ಸಹ ಭೀಷ್ಮೇಣ ಸರ್ವೇಷಾಂ ಪ್ರಾಪತನ್ ಹೃದಯಾನಿ ನಃ ॥೮೮॥

ರಥದಿಂದ ಬೀಳುತ್ತಿರುವ ಮಹಾತ್ಮರಾದ ಪಿತಾಮಹರನ್ನು ನೋಡಿ ಅವರ ಜೊತೆಯಲ್ಲಿಯೇ ನಮ್ಮೆಲ್ಲರ ಹೃದಯಗಳೂ ಬಿದ್ದುಹೋದವು.

ಸ ಪಪಾತ ಮಹಾಬಾಹುರ್ವಸುಧಾಮನುನಾದಯನ್ ।
ಇಂದ್ರಧ್ವಜ ಇವೋತ್ಸೃಷ್ಟಃ ಕೇತುಃ ಸರ್ವಧನುಷ್ಮತಾಮ್ ।
ಧರಣೀಂ ನಾಸ್ಪೃಶಚ್ಚಾಪಿ ಶರಸಂಘೈಃ ಸಮಾಚಿತಃ ॥೮೯॥

ಮಹಾಬಾಹುಗಳೂ, ಸರ್ವಧನುರ್ಧಾರಿಗಳಿಗೆ ಶಿರೋಪ್ರಾಯರೂ ಆದ ಭೀಷ್ಮರು ಕೈಬಿಟ್ಟ ಇಂದ್ರಧ್ವಜದಂತೆ ಭೂಮಿಯ ಮೇಲೆ ದೊಡ್ಡ ಸದ್ದನ್ನು ಮಾಡುತ್ತಾ ಬಿದ್ದರು.

ಆದರೆ ದೇಹದಲ್ಲೆಲ್ಲಾ ಬಾಣಸಮೂಹಗಳು ನಾಟಿದುದರಿಂದ ಅವರು ಭೂಮಿಯನ್ನು ಮುಟ್ಟಲಿಲ್ಲ (ತಲ್ಪಾಕಾರವಾದ ಶರಗಳ ಮೇಲೆ ಮಲಗಿದರು).

ಶರತಲ್ಪೇ ಮಹೇಷ್ವಾಸಂ ಶಯಾನಂ ಪುರುಷರ್ಷಭಮ್ ।
ರಥಾತ್ ಪ್ರಪತಿತಂ ಚೈನಂ ದಿವ್ಯೋ ಭಾವಃ ಸಮಾವಿಶತ್ ॥೯೦॥

ರಥದಿಂದ ಬಿದ್ದು ಶರತಲ್ಪದಲ್ಲಿ ಮಲಗಿದ, ಮಹಾಧನುರ್ಧಾರಿಗಳಾದ ಅವರಿಗೆ ದಿವ್ಯವಾದ ಅಭಿಪ್ರಾಯಗಳು ಮೂಡಿಬಂದವು (ದೇವಭಾವ ಉಂಟಾಯಿತು).

ಅಭ್ಯವರ್ಷತ ಪರ್ಜನ್ಯಃ ಪ್ರಾಕಂಪತ ಚ ಮೇದಿನೀ ।
ಪತನ್ ಸ ದದೃಶೇ ಚಾಪಿ ಖಿರ್ವಿತಂ ಚ ದಿವಾಕರಮ್ ॥೯೧॥

ಪರ್ಜನ್ಯನು ಮಳೆಯನ್ನು ಸುರಿಸಿದನು. ಭೂಮಿಯು ನಡುಗಿತು. ಬೀಳುತ್ತಾ ಅವರು ಕಪ್ಪು ಪರಿವೇಷವನ್ನು ಹೊಂದಿದ ಸೂರ್ಯನನ್ನು ನೋಡಿದರು.

ಸಂಜ್ಞಾಂ ಚೈವಾಲಭದ್ ವೀರಃ ಕಾಲಂ ಸಂಚಿಂತ್ಯ ಭಾರತ ।
ಅಂತರಿಕ್ಷೇ ಚ ಶುಶ್ರಾವ ದಿವ್ಯಾಂ ವಾಚಂ ಸಮಂತತಃ ॥೯೨॥

ಎಲೈ ಭಾರತನೇ, ವೀರರಾದ ಅವರು ತಮ್ಮ ಮರಣಕಾಲವನ್ನು ಚಿಂತಿಸಿ ಸಂಜ್ಞೆಯನ್ನು ಪುನಃ ಪಡೆದರು ಮತ್ತು ಅಂತರಿಕ್ಷದಲ್ಲಿ ಎಲ್ಲ ಕಡೆಗಳಿಂದಲೂ ದಿವ್ಯವಾದ ಮಾತುಗಳನ್ನು ಕೇಳಿದರು.

ಕಥಂ ಮಹಾತ್ಮಾ ಗಾಂಗೇಯಃ ಸರ್ವಶಸ್ತ್ರಭೃತಾಂ ವರಃ ।
ಕಾಲಂ ಕರ್ತಾ ನರವ್ಯಾಘ್ರಃ ಸಂಪ್ರಾಪ್ತೇ ದಕ್ಷಿಣಾಯನೇ ॥೯೩॥

ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ, ನರವ್ಯಾಘ್ರರಾದ, ಮಹಾತ್ಮರಾದ ಭೀಷ್ಮರು ದಕ್ಷಿಣಾಯನವು ಪ್ರಾಪ್ತವಾಗಿರುವಾಗ ಅದನ್ನು ಹೇಗೆ ತಮ್ಮ ಮರಣಕಾಲವನ್ನಾಗಿ ಸ್ವೀಕರಿಸುತ್ತಾರೆ? (ಎಂಬ ಮಾತುಗಳು ಕೇಳಿಬಂದವು).

ಸ್ಥಿತೋಽಸ್ಮೀತಿ ಚ ಗಾಂಗೇಯಸ್ತಚ್ಛ್ರುತ್ವಾ ವಾಕ್ಯಮಬ್ರವೀತ್ ।
ಧಾರಯಾಮಾಸ ಚ ಪ್ರಾಣಾನ್ ಪತಿತೋಽಪಿ ಹಿ ಭೂತಳೇ ।
ಉತ್ತರಾಯಣಮನ್ವಿಚ್ಛನ್ ಭೀಷ್ಮಃ ಕುರುಪಿತಾಮಹಃ ॥೯೪॥

ಕುರುಪಿತಾಮಹರಾದ ಭೀಷ್ಮರು ಆ ಮಾತುಗಳನ್ನು ಕೇಳಿ ಭೂತಳದಲ್ಲಿ ಬಿದ್ದಿದ್ದರೂ ನಾನು ಹೀಗೆಯೇ ಇರುತ್ತೇನೆ ಎಂದು ಹೇಳುತ್ತಾ, ಉತ್ತರಾಯಣವನ್ನು ಬಯಸುತ್ತಾ ಅಲ್ಲಿಯವರೆಗೆ ತಮ್ಮ ಪ್ರಾಣಗಳನ್ನು ಹಿಡಿದುಕೊಂಡರು.

ತಸ್ಯ ತನ್ಮತಮಾಜ್ಞಾಯ ಗಂಗಾ ಹಿಮವತಃ ಸುತಾ ।
ಮಹರ್ಷೀನ್ ಹಂಸರೂಪೇಣ ಪ್ರೇಷಯಾಮಾಸ ತತ್ರ ವೈ ॥೯೫॥

ಅವರ ಆ ಅಭಿಪ್ರಾಯವನ್ನು ತಿಳಿದ ಹಿಮಾಲಯದ ಸುತಳಾದ ಗಂಗೆಯು ಭೀಷ್ಮರು ಬಿದ್ದಲ್ಲಿಗೆ ಹಂಸರೂಪದಿಂದ ಮಹರ್ಷಿಗಳನ್ನು ಕಳುಹಿಸಿದಳು.

ತತಃ ಸಂಪಾತಿನೋ ಹಂಸಾಸ್ತ್ವರಿತಾ ಮಾನಸೌಕಸಃ ।
ಆಜಗ್ಮುಃ ಸಹಿತಾ ದ್ರಷ್ಟುಂ ಭೀಷ್ಮಂ ಕುರುಪಿತಾಮಹಮ್ ।
ಯತ್ರ ಶೇತೇ ನರಶ್ರೇಷ್ಠಃ ಶರತಲ್ಪೇ ಪಿತಾಮಹಃ ॥೯೬॥

ಆಗ ಮಾನಸಸರೋವರದಲ್ಲಿ ವಾಸಿಸುವ ದೂರ ಹಾರುವ ಹಂಸಗಳು ಶೀಘ್ರವಾಗಿ ನರಶ್ರೇಷ್ಠರಾದ ಪಿತಾಮಹರು ಎಲ್ಲಿ ಬಿದ್ದಿದ್ದಾರೆಯೋ ಅಲ್ಲಿ ಅವರನ್ನು ನೋಡಲು ಜೊತೆಯಾಗಿ, ತ್ವರಿತವಾಗಿ ಬಂದವು.

ತೇ ತು ಭೀಷ್ಮಂ ಸಮಾಸಾದ್ಯ ಮುನಯೋ ಹಂಸರೂಪಿಣಃ ।
ಅಪಶ್ಯನ್ ಶರತಲ್ಪಸ್ಥಂ ಭೀಷ್ಮಂ ಕುರುಪಿತಾಮಹಮ್ ॥೯೭॥

ಹಂಸರೂಪವನ್ನು ಧರಿಸಿದ ಆ ಋಷಿಗಳು ಭೀಷ್ಮರ ಸಮೀಪಕ್ಕೆ ಬಂದು ಶರತಲ್ಪದಲ್ಲಿದ್ದ ಕುರುಪಿತಾಮಹರಾದ ಅವರನ್ನು ನೋಡಿದರು.

ತೇ ತಂ ದೃಷ್ಟ್ವಾ ಮಹಾತ್ಮಾನಂ ಕೃತ್ವಾ ಚಾಪಿ ಪ್ರದಕ್ಷಿಣಮ್ ।
ಗಾಂಗೇಯಂ ಭರತಶ್ರೇಷ್ಠಂ ದಕ್ಷಿಣೇನ ಚ ಭಾಸ್ಕರಮ್ ॥೯೮॥

ಇತರೇತರಮಾಮಂತ್ರ್ಯ ಪ್ರಾಹುಸ್ತತ್ರ ಮನೀಷಿಣಃ ।
ಭೀಷ್ಮ ಏವ ಮಹಾತ್ಮಾ ಸನ್ ಸಂಸ್ಥಿತೋ ದಕ್ಷಿಣಾಯನೇ ॥೯೯॥

ಭರತಶ್ರೇಷ್ಠರೂ, ಮಹಾತ್ಮರೂ ಆದ ಭೀಷ್ಮರು ಶರತಲ್ಪದಲ್ಲಿ ಮಲಗಿರುವುದನ್ನು ನೋಡಿ ಅವರಿಗೆ ಪ್ರದಕ್ಷಿಣೆಯನ್ನು ಮಾಡಿ, ಸೂರ್ಯನು ದಕ್ಷಿಣಾಯನದಲ್ಲಿ

ಇರುವುದನ್ನು ನೋಡಿ, ಮೇಧಾವಿಗಳಾದ ಆ ಋಷಿಗಳು ಪರಸ್ಪರವಾಗಿ ಮಾತನಾಡಿಕೊಂಡು, ಅಲ್ಲಿ ಭೀಷ್ಮರು ಮಹಾತ್ಮರಾದರೂ ದಕ್ಷಿಣಾಯನದಲ್ಲಿ ಪ್ರಯಾಣ ಮಾಡುತ್ತಿದ್ದಾರೆ ಎಂದು ಹೇಳಿದರು.

ಇತ್ಯುಕ್ತ್ವಾ ಪ್ರಸ್ಥಿತಾನ್ ಹಂಸಾನ್ ದಕ್ಷಿಣಾಮಭಿತೋ ದಿಶಮ್ ।
ಸಂಪ್ರೇಕ್ಷ್ಯ ವೈ ಮಹಾಬುದ್ಧಿಶ್ಚಿಂತಯಿತ್ವಾ ಚ ಭಾರತ ॥೧೦೦॥

ತಾನ್ಪ್ರವೀಮ್ಯಂತನವೋ ನಾಹಂ ಗಂತಾ ಕಥಂಚನ ।
ದಕ್ಷಿಣಾವೃತ್ತ ಆದಿತ್ಯೇ ಏತನ್ಮೇ ಮನಸಿ ಸ್ಥಿತಮ್ ॥೧೦೧॥

ಎಲೈ ಭಾರತನೇ, ಹೀಗೆ ಹೇಳಿ ದಕ್ಷಿಣಾಭಿಮುಖವಾಗಿ ಹೊರಟ ಆ ಹಂಸಗಳನ್ನು ನೋಡಿ ಮಹಾಬುದ್ಧಿಯುಳ್ಳ ಭೀಷ್ಮರು ಮನಸ್ಸಿನಲ್ಲಿ ಚಿಂತಿಸಿ, ಅವರನ್ನು ಕುರಿತು, ಸೂರ್ಯನು ದಕ್ಷಿಣಾಯನದಲ್ಲಿರುವಾಗ ನಾನು ಖಂಡಿತವಾಗಿ ಪ್ರಯಾಣ ಮಾಡುವುದಿಲ್ಲ. ಇದು ನನ್ನ ಮನಸ್ಸಿನ ಅಭಿಪ್ರಾಯವಾಗಿದೆ ಎಂದು ಹೇಳಿದರು.

ಗಮಿಷ್ಯಾಮಿ ಸ್ವಕಂ ಸ್ಥಾನಮಾಸೀದ್ಯನ್ಮೇ ಪುರಾತನಮ್ ।
ಉದಗಾವೃತ್ತ ಆದಿತ್ಯೇ ಹಂಸಾಃ ಸತ್ಯಂ ಬ್ರವೀಮಿ ವಃ ॥೧೦೨॥

ನನಗೆ ಹಿಂದೆ ಯಾವ ಸ್ಥಾನವಿದ್ದಿತೋ ಅದೇ ಸ್ಥಾನಕ್ಕೆ ಸೂರ್ಯನು ಉತ್ತರಾಯಣಕ್ಕೆ ತಿರುಗಿದ ಮೇಲೆ ನಾನು ಹೋಗುವೆನು. ಎಲೈ ಹಂಸಗಳೇ, ನಾನು ನಿಮಗೆ ಸತ್ಯವನ್ನು ಹೇಳುತ್ತಿದ್ದೇನೆ.

ಧಾರಯಿಷ್ಯಾಮ್ಯಹಂ ಪ್ರಾಣಾನುತ್ತರಾಯಣಕಾಂಕ್ಷಯಾ ।
ಐಶ್ವರ್ಯಭೂತಃ ಪ್ರಾಣಾನಾಮುತ್ಸರ್ಗೇ ನಿಯತೋ ಹ್ಯಹಮ್ ।
ತಸ್ಮಾತ್ ಪ್ರಾಣಾನ್ ಧಾರಯಿಷ್ಯೇ ಮುಮೂರ್ಷುರುದಗಾಯನೇ ॥

ನಾನು ಉತ್ತರಾಯಣವನ್ನು ಬಯಸುತ್ತಾ ನನ್ನ ಪ್ರಾಣಗಳನ್ನು ಧರಿಸುವೆನು. ನಾನು ನನ್ನ ಪ್ರಾಣವನ್ನು ಬಿಡುವ ವಿಷಯದಲ್ಲಿ, ಶಂತನುವಿನ ಅನುಗ್ರಹದಿಂದ ಇಚ್ಛಿಸಿದಾಗ ಪ್ರಾಣಗಳನ್ನು ತೊರೆಯುವ ಸಾಮರ್ಥ್ಯವನ್ನು ಹೊಂದಿದ್ದೇನೆ. ಆದ್ದರಿಂದ ಮರಣವು ಸನ್ನಿಹಿತವಾಗಿದ್ದರೂ ಉತ್ತರಾಯಣದವರೆಗೆ ಪ್ರಾಣಗಳನ್ನು ಧರಿಸುವೆನು.

ಯಶ್ಚ ದತ್ತೋ ವರೋ ಮಹ್ಯಂ ಪಿತ್ರಾ ತೇನ ಮಹಾತ್ಮನಾ ।
ಛಂದತೋ ಮೃತ್ಯುರಿತ್ಯೇವಂ ತಸ್ಯ ಚಾಸ್ತು ವರಸ್ತಥಾ ॥೧೦೪॥

ನನ್ನ ಮಹಾತ್ಮನಾದ ತಂದೆಯು ನನಗೆ ಸ್ವಚ್ಛಂದ ಮೃತ್ಯುರೂಪವಾದ ಯಾವ ವರವನ್ನು ಕೊಟ್ಟಿದ್ದಾನೆಯೋ ಆ ವರವು ಹಾಗೆಯೇ ಆಗಲಿ.

ಧಾರಯಿಷ್ಯೇ ತತಃ ಪ್ರಾಣಾನುತ್ಸರ್ಗೇ ನಿಯತೇ ಸತಿ ।
ಇತ್ಯುಕ್ತ್ವಾ ತಾಂಸ್ತದಾ ಹಂಸಾನಶೇತ ಶರತಲ್ಪಗಃ ॥೧೦೫॥

ಆದ್ದರಿಂದ ಪ್ರಾಣಗಳನ್ನು ಬಿಡುವುದು ನನ್ನ ಅಧೀನವಾಗಿರುವುದರಿಂದ ನಾನು ಉತ್ತರಾಯಣದವರೆಗೆ ಬದುಕಿರುವೆನು ಎಂದು ಆ ಹಂಸಗಳನ್ನು ಕುರಿತು ಹೇಳಿ ಭೀಷ್ಮರು ಶರಕಲ್ಪದಲ್ಲಿ ಮಲಗಿದರು.

ಏವಂ ಕುರೂಣಾಂ ಪತಿತೇ ಶೃಂಗೇ ಭೀಷ್ಮೇ ಮಹೌಜಸಿ ।
ಪಾಂಡವಾಃ ಸೃಂಜಯಾಶ್ಚೈವ ಸಿಂಹನಾದಂ ಪ್ರಚಕ್ರಿರೇ ॥೧೦೬॥

ಹೀಗೆ ಕುರುಗಳಿಗೆ ಶಿರಃಪ್ರಾಯರಾದ, ಮಹಾಸಾಮರ್ಥ್ಯವುಳ್ಳ ಭೀಷ್ಮರು ಬೀಳುತ್ತಿರಲು ಪಾಂಡವರೂ ಮತ್ತು ಸೃಂಜಯರೂ ಸಿಂಹನಾದವನ್ನು ಮಾಡಿದರು.

ತಸ್ಮಿನ್ ಹತೇ ಮಹಾಸತ್ತ್ವೇ ಭರತಾನಾಮಮಧ್ಯಪೇ ।
ನ ಕಿಂಚಿತ್ ಪ್ರತ್ಯಪದ್ಯಂತ ಪುತ್ರಾಸ್ತೇ ಭರತರ್ಷಭ ।
ಸಮ್ಮೋಹಶ್ಚೈವ ತುಮುಲಃ ಕುರೂಣಾಮಭವತ್ ತದಾ ॥೧೦೭॥

ಎಲೈ ಭರತಶ್ರೇಷ್ಠನೇ, ಭರತರಲ್ಲಿ ಮಹಾವ್ರತವನ್ನು ಧರಿಸಿದ ಕಾರಣದಿಂದ ಮದ್ಯಪಾನವನ್ನು ಮಾಡದ, ಮಹಾಬಲಶಾಲಿಗಳಾದ ಅವರು ಬೀಳುತ್ತಿರಲು ನಿನ್ನ ಪುತ್ರರಿಗೆ ಏನು ಮಾಡಬೇಕೆಂದು ತೋಚಲಿಲ್ಲ. ಕುರುಗಳೆಲ್ಲರಿಗೂ ಆಗ ತೀವ್ರವಾದ ಮೌಢ್ಯ ಉಂಟಾಯಿತು.

ನೃಪಾ ದುರ್ಯೋಧನಮುಖಾ ನಿಃಶ್ವಸ್ಯ ರುರುದುಸ್ತತಃ ।
ವಿಷಾದಾಚ್ಚ ಚಿರಂ ಕಾಲಮತಿಷ್ಠನ್ ವಿಗತೇಂದ್ರಿಯಾಃ ॥೧೦೮॥

ದುರ್ಯೋಧನನೇ ಮೊದಲಾದ ರಾಜರು ನಿಟ್ಟುಸಿರನ್ನು ಬಿಟ್ಟು ಆಗ ಅತ್ತರು. ವಿಷಾದದಿಂದ ಬಹುಕಾಲದವರೆಗೆ ಯಾವ ಇಂದ್ರಿಯ ವ್ಯಾಪಾರವೂ ಇಲ್ಲದೆ ನಿಂತರು.

ದಧ್ಮುಶ್ಚೈವ ಮಹಾರಾಜ ನ ಯುದ್ಧೇ ದಧಿರೇ ಮನಃ ।
ಊರುಗ್ರಾಹಗೃಹೀತಾಶ್ಚ ನಾಭ್ಯಧಾವಂತ ಪಾಂಡವಾನ್ ॥೧೦೯॥

ಎಲೈ ಮಹಾರಾಜನೇ, ಅವರು ಚಿಂತಾಕ್ರಾಂತರಾದರು. ಯುದ್ಧದಲ್ಲಿ ಮನಸ್ಸನ್ನು ಮಾಡಲಿಲ್ಲ. ತೊಡೆಗಳು ಸ್ತಂಭಿತವಾದುದರಿಂದ ಪಾಂಡವರ ಕಡೆಗೆ ಧಾವಿಸಲಿಲ್ಲ.

ಅವಧ್ಯೇ ಶಂತನೋಃ ಪುತ್ರೇ ಹತೇ ಭೀಷ್ಮೇ ಮಹೌಜಸಿ ।
ದುಃಖಾರ್ತಾಸ್ತೇ ತತೋ ರಾಜನ್ ಕುರೂಣಾಂ ಪತಯೋಽಭವನ್ ।
ಅಭಾವಃ ಸುಮಹಾನ್ ರಾಜನ್ ಕುರೂಣಾಗಾದತಂದ್ರಿತಃ ॥೧೧೦॥

ಎಲೈ ರಾಜನೇ, ಶಂತನುಪುತ್ರರಾದ, ಮಹಾಬಲಶಾಲಿಗಳಾದ, ಅವಧ್ಯರಾದ ಭೀಷ್ಮರು ಹತರಾಗುತ್ತಿರಲು ಕುರುಪುತ್ರರೆಲ್ಲರೂ ಆಗ ದುಃಖಾರ್ತರಾದರು. ಎಲೈ ರಾಜನೇ, ಕುರುಗಳಿಗೆ ಯಾವ ವಿಳಂಬವೂ ಇಲ್ಲದೇ ದೊಡ್ಡ ವಿನಾಶವು ಪ್ರಾಪ್ತವಾಯಿತು.

ಹತಪ್ರವೀರಾಶ್ಚ ವಯಂ ನಿಕೃತ್ತಾಶ್ಚ ಶಿತೈಃ ಶರೈಃ ।
ಕರ್ತವ್ಯಂ ನಾಭಿಜಾನೀಮೋ ನಿರ್ಜಿತಾಃ ಸವ್ಯಸಾಚಿನಾ ॥೧೧೧॥

ಅರ್ಜುನನಿಂದ ಪರಾಜಿತರಾಗಿ, ಶ್ರೇಷ್ಠ ವೀರರನ್ನು ಕಳೆದುಕೊಂಡು, ತೀಕ್ಷ್ಣವಾದ ಬಾಣಗಳಿಂದ ಗಾಯಗೊಂಡ ದೇಹಗಳುಳ್ಳ ನಮಗೆ ನಾವು ಏನು ಮಾಡಬೇಕೆಂದು ತಿಳಿಯುತ್ತಿಲ್ಲ(ಎಂದು ಚಿಂತಿಸಿದರು).

ಪಾಂಡವಾಸ್ತು ಜಯಂ ಲಬ್ಧ್ವಾ ಪರತ್ರ ಚ ಪರಾಂ ಗತಿಮ್ ।
ಸರ್ವೇ ದಧ್ಮುರ್ಮಹಾಶಂಖಾನ್ ಶೂರಾಃ ಪರಿಘಬಾಹವಃ ।
ಸೋಮಕಾಶ್ಚ ಸಪಂಚಾಲಾಃ ಪ್ರಾಹೃಷ್ಯಂತ ಜನೇಶ್ವರ ॥೧೧೨॥

ಶೂರರೂ, ಪರಿಘಬಾಹುಗಳೂ ಆದ ಪಾಂಡವರು ಈ ಲೋಕದಲ್ಲಿ ಜಯವನ್ನೂ, ಪರಲೋಕದಲ್ಲಿ ಶ್ರೇಷ್ಠ ಗತಿಯನ್ನೂ ಸಂಪಾದಿಸಿ, ತಮ್ಮ ಮಹಾಶಂಖಗಳನ್ನು ಎಲ್ಲರೂ ಊದಿದರು. ಎಲೈ ರಾಜನೇ, ಸೋಮಕರು ಮತ್ತು ಪಾಂಚಾಲರು ಹರ್ಷಗೊಂಡರು.

ತತಸ್ತೂರ್ಯಸಹಸ್ರೇಷು ನದತ್ಸು ಸುಮಹಾಬಲಃ ।
ಆಸ್ಫೋಟಯಾಮಾಸ ಭೃಶಂ ಭೀಮಸೇನೋ ನನಾದ ಚ ॥೧೧೩॥

ಆಗ ಸಹಸ್ರ ಸೂರ್ಯಗಳು ಮೊಳಗುತ್ತಿರಲು, ಅತ್ಯಂತ ಬಲಶಾಲಿಯಾದ ಭೀಮಸೇನನು ಗಟ್ಟಿಯಾಗಿ ತೊಡೆಗಳನ್ನು ತಟ್ಟನಾದನವನ್ನು ಮಾಡಿದನು.

ಸೇನಯೋರುಭಯೋಶ್ಚಾಪಿ ಗಾಂಗೇಯೇ ವಿನಿಪಾತಿತೇ ।
ಸನ್ನಹ್ಯ ವೀರಾಃ ಶಸ್ತ್ರಾಣಿ ಪ್ರಾಧ್ಯಾಯಂತ ಸಮಂತತಃ ॥೧೧೪॥

ಭೀಷ್ಮರು ಬೀಳುತ್ತಿರಲು ಎರಡು ಸೈನ್ಯಗಳ ವೀರರೂ ಸಹ ಶಸ್ತ್ರಗಳನ್ನು ಬಿಸುಟು ಎಲ್ಲ ಕಡೆಗಳಲ್ಲಿಯೂ ಚಿಂತಾಕ್ರಾಂತರಾದರು.

ಪ್ರಾಕ್ರೋಶನ್ ಪ್ರಾಪತಂಶ್ಚಾನ್ಯೇ ಜಗ್ಮುರ್ಮೋಹಂ ತಥಾಪರೇ ।
ಕ್ಷತ್ರಂ ಚಾನ್ಯೇಽಭ್ಯನಿಂದಂತ ಭೀಷ್ಮಂ ಚೈಕೇಽಭ್ಯಪೂಜಯನ್ ॥೧೧೫॥

ಕೆಲವರು ಕಿರುಚಿದರು, ಕೆಲವರು ಬಿದ್ದರು, ಇನ್ನು ಕೆಲವರು ಮೂರ್ಛೆ ಹೋದರು, ಇನ್ನು ಕೆಲವರು ಕ್ಷತ್ರಿಯ ಧರ್ಮವನ್ನು ನಿಂದಿಸುತ್ತಾ ಭೀಷ್ಮರನ್ನು ಹೊಗಳಿದರು.

ಋಷಯಃ ಪಿತರಶ್ಚೈವ ಪ್ರಶಶಂಸುರ್ಮಹಾವ್ರತಮ್ ।
ಭರತಾನಾಂ ಚ ಯೇ ಪೂರ್ವೇ ತೇ ಚೈನಂ ಪ್ರಶಶಂಸಿರೇ ॥೧೧೬॥

ಋಷಿಗಳು ಮತ್ತು ಪಿತೃಗಳು ಮಹಾವ್ರತರಾದ ಭೀಷ್ಮರನ್ನು ಹೊಗಳಿದರು. ಭರತವಂಶದ ಪೂರ್ವಜರೂ ಸಹ ಭೀಷ್ಮರನ್ನು ಹೊಗಳಿದರು.

ಮಹೋಪನಿಷದಂ ಚೈವ ಯೋಗಮಾಸ್ಥಾಯ ವೀರ್ಯವಾನ್ ।
ಜಪನ್ ಶಾಂತನವೋ ಧೀಮಾನ್ ಕಾಲಾಕಾಂಕ್ಷೀ ಸ್ಥಿತೋಽಭವತ್ ॥

ವೀರ್ಯಶಾಲಿಗಳಾದ, ಶಂತನುಪುತ್ರರಾದ, ಮೇಧಾವಿಗಳಾದ ಭೀಷ್ಮರು ಯೋಗವನ್ನು ಧರಿಸಿ ಉಪನಿಷತ್ತುಗಳನ್ನು ಜಪಿಸುತ್ತಾ, ಉತ್ತರಾಯಣಕಾಲವನ್ನು ನಿರೀಕ್ಷಿಸುತ್ತಾ ಶರತಲ್ಪದಲ್ಲಿಯೇ ಇದ್ದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಷೋಡಶಾಧಿಕಶತತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಷಟ್‌ಸಪ್ತತಿತಮೋಽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನೂರ ಹದಿನಾರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನೇಳನೆಯ ಅಧ್ಯಾಯ

ಅರ್ಜುನನಿಂದ ಭೀಷ್ಮರಿಗೆ ತಲೆದಿಂಬಿನ ವ್ಯವಸ್ಥೆ.
ಭೀಷ್ಮರಿಂದ ಅರ್ಜುನನ ಪ್ರಶಂಸೆ.

ಧೃತರಾಷ್ಟ್ರಃ

ಕಥಮಾಸಂಸ್ತದಾ ಯೋಧಾ ಹೀನಾ ಭೀಷ್ಮೇಣ ಸಂಜಯ ।
ಬಲಿನಾ ದೇವಕಲ್ಪೇನ ಗುರ್ವರ್ಥೇ ಬ್ರಹ್ಮಚಾರಿಣಾ ॥೧॥

ಧೃತರಾಷ್ಟ್ರ– ಎಲೈ ಸಂಜಯನೇ, ಬಲಿಷ್ಠರೂ, ದೇವತೆಗಳಿಗೆ ಸಮಾನರಾದವರೂ, ತಂದೆಯ ಸಲುವಾಗಿ ಬ್ರಹ್ಮಚರ್ಯವನ್ನು ಧರಿಸಿದವರೂ ಆದ ಭೀಷ್ಮರಿಂದ ಹೀನರಾದ ಯೋಧರು ಹೇಗಿದ್ದರು?

ತದೈವ ನಿಹತಾನ್ ಮನ್ಯೇ ಕುರೂನನ್ಯಾಂಶ್ಚ ಪಾರ್ಥಿವಾನ್ ।
ನ ಪ್ರಾಹರದ್ ಯದಾ ಭೀಷ್ಮೋ ಶಿಖಂಡ್ಯಾದ್ ದ್ರುಪದಾತ್ಮಜೇ ॥೨॥

ಭೀಷ್ಮರು ದಯೆಯಿಂದ ಕೂಡಿದವರಾಗಿ ಶಿಖಂಡಿಯ ಮೇಲೆ ಬಾಣ ಪ್ರಯೋಗವನ್ನು ಮಾಡದಿದ್ದಾಗಲೇ ಕುರುಗಳು ಮತ್ತು ಇತರ ರಾಜರು ಹತರಾದರು ಎಂದು ನಾನು ಭಾವಿಸುತ್ತೇನೆ.

ತತೋ ದುಃಖತರಂ ಮನ್ಯೇ ಕಿಮನ್ಯತ್ ಪ್ರಭವಿಷ್ಯತಿ ।
ಯದದ್ಯ ಪಿತರಂ ಶ್ರುತ್ವಾ ನಿಹತಂ ಮಮ ದುರ್ಮತೇಃ ॥೩॥

ಈ ದಿನ ತಂದೆಯ ಪಾತದ ವಾರ್ತೆಯನ್ನು ಕೇಳಿದ ದುರ್ಮತಿಯಾದ ನನಗೆ ಇದಕ್ಕಿಂತ ಅಧಿಕವಾದ ಇನ್ನೊಂದು ದುಃಖವು ಏನು ಕಾದಿದೆಯೋ ಎಂದು ಭಾವಿಸುತ್ತೇನೆ.

ಅಶ್ಮಸಾರಮಯಂ ನೂನಂ ಹೃದಯಂ ಮಮ ಸಂಜಯ ।
ಶ್ರುತ್ವಾ ವಿನಿಹತಂ ಭೀಷ್ಮಂ ಶತಧಾ ಯನ್ನ ದೀರ್ಯತೇ ॥೪॥

ಎಲೈ ಸಂಜಯನೇ, ತಂದೆಯಾದ ಭೀಷ್ಮರ ನಿಧನವನ್ನು ಕೇಳಿಯೂ ನೂರು ಹೋಳುಗಳಾಗಿ ಬಿರಿದು ಹೋಗದಿರುವ ನನ್ನ ಹೃದಯವು ಖಂಡಿತವಾಗಿ ಕಲ್ಲಿನ ಸಾರದಿಂದ ಮಾಡಲ್ಪಟ್ಟಿದೆ.

ಯದದ್ಯ ನಿಹತೇನಾಜೌ ಭೀಷ್ಮೇಣ ಜಯಮಿಚ್ಛತಾ ।
ಚೇಷ್ಟಿತಂ ನರಸಿಂಹೇನ ತನ್ಮೇ ಕಥಯ ಸಂಜಯ ॥೫॥

ಎಲೈ ಸಂಜಯನೇ, ನರಶ್ರೇಷ್ಠರಾದ ಭೀಷ್ಮರು ಜಯವನ್ನು ಬಯಸಿ ಈ ದಿನ ಯುದ್ಧದಲ್ಲಿ ಏನು ಮಾಡಿದರೆಂಬುದನ್ನು ನನಗೆ ಹೇಳು.

ಸಂಜಯಃ

ಪುನಃ ಪುನರ್ನ ಮೃಷ್ಯಾಮಿ ಹತಂ ದೇವವ್ರತಂ ರಣೇ ।
ನ ಹತೋ ಜಾಮದಗ್ನ್ಯೇನ ದಿವ್ಯೈರಸ್ತ್ರೈಃ ಸ್ಮ ಯಃ ಪುರಾ ॥೬॥

ಸಂಜಯ– ಯಾವ ಭೀಷ್ಮರು ಹಿಂದೆ ಪರಶುರಾಮರ ದಿವ್ಯಾಸ್ತ್ರಗಳಿಂದಲೂ ಹತರಾಗಲಿಲ್ಲವೋ ಅಂತಹ ಅವರು ಯುದ್ಧದಲ್ಲಿ ಹತರಾದರೆಂದು ಕೇಳಿ ನಾನು ಪುನಃ ಪುನಃ ಅದನ್ನು ಸಹಿಸುತ್ತಿಲ್ಲ.

ಸಾಯಾಹ್ನೇ ನ್ಯಪತದ್ ಭೂಮೌ ಧಾರ್ತರಾಷ್ಟ್ರಾನ್ ವಿಷಾದಯನ್ ।
ಪಾಂಚಾಲಾನಾಂ ದದದ್ ಹರ್ಷಂ ಕುರುವೃದ್ಧಃ ಪಿತಾಮಹಃ ॥೭॥

ಕುರುವೃದ್ಧರೂ, ಪಿತಾಮಹರೂ ಆದ ಭೀಷ್ಮರು ಸಾಯಂಕಾಲದ ಸಮಯದಲ್ಲಿ ದುರ್ಯೋಧನಾದಿಗಳಿಗೆ ವಿಷಾದವನ್ನುಂಟು ಮಾಡುತ್ತಾ, ಪಾಂಚಾಲರಿಗೆ ಸಂತೋಷವನ್ನುಂಟು ಮಾಡುತ್ತಾ ಭೂಮಿಯಲ್ಲಿ ಬಿದ್ದರು.

ಸ ಶೇತೇ ಶರತಲ್ಪಸ್ಥೋ ಮೇದಿನೀಮಸ್ಪೃಶಂಸ್ತದಾ ।
ಭೀಷ್ಮೋ ರಥಾತ್ ಪ್ರಪತಿತಃ ಪ್ರಚ್ಯುತೋ ಧರಣೀತಳೇ ॥೮॥

ರಥದಿಂದ ಜಾರಿ ಭೂಮಿಯ ಮೇಲೆ ಬಿದ್ದ ಭೀಷ್ಮರು ಭೂಮಿಯ ಸ್ಪರ್ಶವನ್ನು ಮಾಡದೆ ಆಗ ಶರತಲ್ಪದಲ್ಲಿ ಮಲಗಿದರು.

ಹಾ ಹೇತಿ ತುಮುಲಃ ಶಬ್ದೋ ಭೂತಾನಾಂ ಸಮಪದ್ಯತ ।
ಸೀಮಾವೃಕ್ಷೇ ನಿಪತಿತೇ ಕುರೂಣಾಂ ಸಮಿತಿಕ್ಷಯೇ ।
ಉಭಯೋಃ ಸೇನಯೋ ರಾಜನ್ ಕ್ಷತ್ರಿಯಾನ್ ಭಯಮಾವಿಶತ್ ॥೯॥

ಆಗ ಎಲ್ಲ ಪ್ರಾಣಿಗಳಿಗೂ ತೀವ್ರವಾದ ಹಾಹಾಕಾರ ಉಂಟಾಯಿತು. ಶತ್ರುವಿನಾಶದ ವಿಷಯದಲ್ಲಿ ಕುರುಗಳಿಗೆ ಮರ್ಯಾದಾ ಪುರುಷರ ಸ್ಥಾನದಲ್ಲಿದ್ದ ಭೀಷ್ಮರು ಬೀಳುತ್ತಿರಲು ಎಲೈ ರಾಜನೇ, ಎರಡು ಸೇನೆಯ ಕ್ಷತ್ರಿಯರನ್ನೂ ಭಯವು ಆವರಿಸಿತು.

ಭೀಷ್ಮಂ ಶಾಂತನವಂ ದೃಷ್ಟ್ವಾ ವಿಶೀರ್ಣಕವಚಧ್ವಜಮ್ ।
ಕುರವಃ ಪರ್ಯವರ್ತಂತ ಪಾಂಡವಾಶ್ಚ ವಿಶಾಂಪತೇ ॥೧೦॥

ಎಲೈ ರಾಜನೇ, ಶಂತನುಪುತ್ರರಾದ ಭೀಷ್ಮರ ಕವಚ-ಧ್ವಜಗಳು ಛಿನ್ನ-ಭಿನ್ನವಾಗಿರುವುದನ್ನು ನೋಡಿದ ಕೌರವರು ಮತ್ತು ಪಾಂಡವರು ಅವರ ಸಮೀಪಕ್ಕೆ ಬಂದರು.

ಖಂ ತಮೋವೃತಮಾಸೀಚ್ಚ ನಾಸೀದ್ ಭಾನುಮತಃ ಪ್ರಭಾ ।
ರರಾಸ ಪೃಥಿವೀ ಚೈವ ಭೀಷ್ಮೇ ಶಾಂತನವೇ ಹತೇ ॥೧೧॥

ಶಂತನು ಪುತ್ರರಾದ ಭೀಷ್ಮರು ಹತರಾಗುತ್ತಿರಲು ಆಕಾಶವು ಕತ್ತಲಿನಿಂದ ಆವರಿಸಲ್ಪಟ್ಟಿತು. ಸೂರ್ಯನಲ್ಲಿ ಪ್ರಭೆಯು ಕಾಣಲಿಲ್ಲ, ಭೂಮಿಯು ಗುಡುಗಿತು.

ಅಯಂ ಬ್ರಹ್ಮವಿದಾಂ ಶ್ರೇಷ್ಠೋ ಅಯಂ ಬ್ರಹ್ಮವಿದಾಂ ಗತಿಃ ।
ಇತ್ಯಭಾಷಂತ ಭೂತಾನಿ ಶಯಾನಂ ಭರತರ್ಷಭಮ್ ॥೧೨॥

ಮಲಗಿದ್ದ ಭರತಶ್ರೇಷ್ಠರನ್ನು ನೋಡಿ ಇವರು ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರು, ಇವರು ಬ್ರಹ್ಮಜ್ಞಾನಿಗಳಲ್ಲಿ ಗತಿಯಾದವರು ಎಂದು ಮನುಷ್ಯರು ಮಾತನಾಡಿಕೊಂಡರು.

ಅಯಂ ಪಿತರಮಾಜ್ಞಾಯ ಕಾಮಾರ್ತಂ ಶಂತನುಂ ಪುರಾ ।
ಊರ್ಧ್ವರೇತಸಮಾತ್ಮಾನಂ ಚಕಾರ ಪುರುಷರ್ಷಭಃ ॥೧೩॥

ಈ ಪುರುಷಶ್ರೇಷ್ಠರು ತಮ್ಮ ತಂದೆಯಾದ ಶಂತನುವು ಕಾಮಾರ್ತನಾಗಿರುವುದನ್ನು ತಿಳಿದು ಹಿಂದೆಯೇ ಊರ್ಧ್ವರೇತಸ್ಕರಾದರು.

ಇತಿ ಸ್ಮ ಶರತಲ್ಪಸ್ಥಂ ಭರತಾನಾಮಮದ್ಯಪಮ್ ।
ಋಷಯಃ ಪರ್ಯಧಾವಂತ ಸಹಿತಾಃ ಸಿದ್ಧಚಾರಣೈಃ ॥೧೪॥

ಭರತರ ವಂಶದಲ್ಲಿ ಮದ್ಯಪಾನವನ್ನು ಮಾಡದೆ, ಶರತಲ್ಪದಲ್ಲಿ ಮಲಗಿದ ಭೀಷ್ಮರ ವಿಷಯದಲ್ಲಿ ಹೀಗೆ ಚಿಂತಿಸಿ, ಸಿದ್ಧ-ಚಾರಣರಿಂದ ಸಹಿತರಾಗಿ ಋಷಿಗಳು ಅಲ್ಲಿಗೆ ಬಂದರು.

ಹತೇ ಶಾಂತನವೇ ಭೀಷ್ಮೇ ಭರತಾನಾಂ ಪಿತಾಮಹೇ ।
ನ ಕಿಂಚಿತ್ ಪ್ರತ್ಯಪದ್ಯಂತ ಪುತ್ರಾಸ್ತವ ಚ ಭಾರತ ॥೧೫॥

ಎಲೈ ಭಾರತನೇ, ಭರತರ ಪಿತಾಮಹರಾದ ಭೀಷ್ಮರು ಹತರಾಗುತ್ತಿರಲು ನಿನ್ನ ಪುತ್ರರಿಗೆ ಏನು ಮಾಡಬೇಕೆಂದು ತೋಚಲಿಲ್ಲ.

ವಿವರ್ಣವದನಾಶ್ಚಾಸನ್ ಗತಶ್ರೀಕಾಶ್ಚ ಭಾರತ ।
ಅತಿಷ್ಠನ್ ವ್ರೀಡಿತಾಶ್ಚೈವ ಹ್ರಿಯಾ ಯುಕ್ತಾ ಹ್ಯಧೋಮುಖಾಃ ॥೧೬॥

ಎಲೈ ಭಾರತನೇ, ಮುಖದ ಕಾಂತಿಯನ್ನೂ, ತೇಜಸ್ಸನ್ನೂ ಕಳೆದುಕೊಂಡು ನಾಚಿಕೆಯಿಂದ ಮುಖವನ್ನು ತಗ್ಗಿಸಿ ನಿಂತರು.

ಪಾಂಡವಾಶ್ಚ ಜಯಂ ಲಬ್ಧ್ವಾ ಸಂಗ್ರಾಮಶಿರಸಿ ಸ್ಥಿತಾಃ ।
ಸರ್ವೇ ದಧ್ಮುರ್ಮಹಾಶಂಖಾನ್ ಹೇಮಜಾಲಪರಿಷ್ಕೃತಾನ್ ॥೧೭॥

ಪಾಂಡವರಾದರೋ ಸಂಗ್ರಾಮ ಶಿರಸ್ಸಿನಲ್ಲಿ ಜಯವನ್ನು ಪಡೆದವರಾಗಿ, ಎಲ್ಲರೂ ಸುವರ್ಣಾಲಂಕೃತವಾದ ಮಹಾಶಂಖಗಳನ್ನು ಊದಿದರು.

ಭೃಶಂ ತೂರ್ಯನಿನಾದೇಷು ವಾದ್ಯಮಾನೇಷು ಚಾನಘ ।
ಅಪಶ್ಯಾಮ ರಣೇ ರಾಜನ್ ಭೀಮಸೇನಂ ಮಹಾಬಲಮ್ ।
ಆಕ್ರೀಡಮಾನಂ ಕೌಂತೇಯಂ ಹರ್ಷೇಣ ಮಹತಾ ಯುತಮ್ ॥೧೮॥

ಎಲೈ ಅನಘನೇ, ತೂರ್ಯಾದಿ ವಾದ್ಯಗಳು ಬಹಳವಾಗಿ ಮೊಳಗುತ್ತಿರಲು ಮಹಾಬಲನಾದ, ಕುಂತೀಪುತ್ರನಾದ ಭೀಮಸೇನನು ಬಹಳ ಸಂತೋಷದಿಂದ ಕೂಡಿದವನಾಗಿ ಲೀಲೆಯಿಂದ ರಣರಂಗದಲ್ಲಿ ಆಟವಾಡುವುದನ್ನು ನಾವು ನೋಡಿದೆವು.

ನಿಹತ್ಯ ಸಮರೇ ಶತ್ರೂನ್ ಮಹಾಬಲಸಮನ್ವಿತಾನ್ ।
ಸಮ್ಮೋಹಶ್ಚಾಪಿ ತುಮುಲಃ ಕುರೂಣಾಮಭವತ್ ತದಾ ॥೧೯॥

ಮಹಾಬಲದಿಂದ ಕೂಡಿದ ಶತ್ರುಗಳನ್ನು ರಣರಂಗದಲ್ಲಿ ಕೊಂದ ಕುರುಗಳಿಗೂ ಸಹ ಆಗ ತೀವ್ರವಾದ ಕರ್ತವ್ಯಮೌಢ್ಯ ಉಂಟಾಯಿತು.

ಕರ್ಣದುರ್ಯೋಧನೌ ಚಾಪಿ ನಿಃಶ್ವಸೇತಾಂ ಮುಹುರ್ಮುಹುಃ ।
ತಥಾ ನಿಶ್ವಸತೀ ಭೀಷ್ಮೇ ಕೌರವಾಣಾಂ ಧುರಂಧರೇ ।
ಹಾಹಾಕಾರಮಭೂತ್ ಸರ್ವಂ ನಿರ್ಮರ್ಯಾದಮವರ್ತತ ॥೨೦॥

ಕೌರವರ ಧುರಂಧರರಾದ ಭೀಷ್ಮರು ಹಾಗೆ ಬೀಳುತ್ತಿರಲು ಕರ್ಣ-ದುರ್ಯೋಧನರೂ ಸಹ ಪುನಃ ಪುನಃ ನಿಟ್ಟುಸಿರನ್ನು ಬಿಟ್ಟರು. ಎಲ್ಲ ಕಡೆಗಳಲ್ಲಿಯೂ ಹಾಹಾಕಾರ ಉಂಟಾಯಿತು ಮತ್ತು ಪರಿಸ್ಥಿತಿಯು ಎಲ್ಲ ಎಲ್ಲೆಗಳನ್ನೂ ಮೀರಿತು.

ದೃಷ್ಟ್ವಾ ಚ ಪತಿತಂ ಭೀಷ್ಮಂ ಪುತ್ರೋ ದುಃಶಾಸನಸ್ತವ ।
ಉತ್ತಮಂ ಜವಮಾಸ್ಥಾಯ ದ್ರೋಣಾನೀಕಂ ಸಮಾದ್ರವತ್ ॥೨೧॥

ಭೀಷ್ಮರು ಬಿದ್ದುದನ್ನು ನೋಡಿ ನಿನ್ನ ಪುತ್ರನಾದ ದುಶ್ಶಾಸನನು ದ್ರೋಣರ ಸೇನೆಯ ಕಡೆಗೆ ಓಡಿದನು.

ಭ್ರಾತ್ರಾ ಹ್ರಸ್ವಾಪಿತೋ ವೀರಃ ಸ್ವೇನಾನೀಕೇನ ದಂಶಿತಃ ।
ಪ್ರಯಯೌ ಪುರುಷವ್ಯಾಘ್ರಃ ಶಸ್ತ್ರೌಘಮಭಿವೋದಯನ್ ॥೨೨॥

ಅಣ್ಣನಿಂದ ಕಳುಹಿಸಲ್ಪಟ್ಟ ವೀರನೂ, ಪುರುಷವ್ಯಾಘ್ರನೂ, ಕವಚಾದಿಗಳನ್ನು ಧರಿಸಿದವನೂ ಆದ ಅವನು ತನ್ನ ಸೈನ್ಯವನ್ನು ಪ್ರಚೋದಿಸುತ್ತಾ, ಅದರ ಜೊತೆಯಲ್ಲಿ ದ್ರೋಣರ ಕಡೆಗೆ ಹೊರಟನು.

ತಮಾಯಾಂತಮಭಿಪ್ರೇಕ್ಷ್ಯ ಕುರವಃ ಪರ್ಯವಾರಯನ್ ।
ದುಃಶಾಸನಂ ಮಹಾರಾಜ ಕಿಮಯಂ ವಕ್ಷ್ಯತೀತಿ ವೈ ॥೨೩॥

ಎಲೈ ಮಹಾರಾಜನೇ, ಅವನು ಬರುತ್ತಿರುವುದನ್ನು ನೋಡಿ, ಇವನು ಏನು ಹೇಳುವನೋ ಎಂದು ದ್ರೋಣರ ಸೇನೆಯಲ್ಲಿದ್ದ ಕುರುಗಳು ದುಶ್ಶಾಸನನನ್ನು ಸುತ್ತುವರಿದರು.

ತತೋ ದ್ರೋಣಾಯ ನಿಹತಂ ಭೀಷ್ಮಮಾಚಷ್ಟ ಕೌರವಃ ।
ದ್ರೋಣಸ್ತದಪ್ರಿಯಂ ಶ್ರುತ್ವಾ ಸಹಸಾ ನ್ಯಪತದ್ ರಥಾತ್ ॥೨೪॥

ಆಗ ಕೌರವನಾದ ದುಶ್ಶಾಸನನು ದ್ರೋಣರಿಗೆ ಭೀಷ್ಮರ ಪಾತವನ್ನು ತಿಳಿಸಿದನು. ಆ ಅಪ್ರಿಯವಾದ ವಾರ್ತೆಯನ್ನು ಕೇಳಿದ ದ್ರೋಣರು ತಕ್ಷಣ ರಥದಿಂದ ಕುಸಿದು ಬಿದ್ದರು.

ಸ ಸಂಜ್ಞಾಮುಪಲಭ್ಯಾಥ ಭಾರದ್ವಾಜಃ ಪ್ರತಾಪವಾನ್ ।
ನಿವಾರಯಾಮಾಸ ತದಾ ಸ್ವಾನ್ಯನೀಕಾನಿ ಮಾರಿಷ ॥೨೫॥

ಎಲೈ ಶ್ರೇಷ್ಠನೇ, ಪ್ರತಾಪಶಾಲಿಗಳಾದ ದ್ರೋಣರು ಪುನಃ ಸಂಜ್ಞೆಯನ್ನು ಪಡೆದು ತಮ್ಮ ಸೇನೆಗಳಿಗೆ ಯುದ್ಧವನ್ನು ನಿಲ್ಲಿಸಿ ಎಂದು ನಿವಾರಣೆಯನ್ನು ಮಾಡಿದರು.

ವಿನಿವೃತ್ತಾನ್ ಕುರೂನ್ ದೃಷ್ಟ್ವಾ ಪಾಂಡವಾಪಿ ಸ್ವಸೈನಿಕಾನ್ ।
ದೂತೈಃ ಶೀಘ್ರಾಶ್ವಸಂಯುಕ್ತೈಃ ಸಮಂತಾತ್ ಪರ್ಯವಾರಯನ್ ॥೨೬॥

ಕುರುಗಳು ಯುದ್ಧದಿಂದ ನಿವೃತ್ತರಾದುದನ್ನು ನೋಡಿ ಪಾಂಡವರೂ ಸಹ ಶೀಘ್ರಾಶ್ವ ಸಹಿತರಾದ ತಮ್ಮ ದೂತರಿಂದ ಸುತ್ತಲೂ ಇದ್ದ ಎಲ್ಲಾ ಸೈನಿಕರಿಗೂ ಯುದ್ಧವನ್ನು ನಿಲ್ಲಿಸಿ ಎಂದು ಹೇಳಿದರು.

ವಿನಿವೃತ್ತೇಷು ಸೈನ್ಯೇಷು ಪಾರಂಪರ್ಯೇಣ ಸರ್ವಶಃ ।
ವಿಮುಕ್ತಕವಚಾಃ ಸರ್ವೇ ಭೀಷ್ಮಮೀಯುರ್ನರಾಧಿಪಾಃ ॥೨೭॥

ಒಬ್ಬರಿಂದೊಬ್ಬರು ವಾರ್ತೆಯನ್ನು ಕೇಳಿ ಎಲ್ಲ ಸೈನ್ಯಗಳೂ ನಿವೃತ್ತವಾಗುತ್ತಿರಲು ತಮ್ಮ ಕವಚಗಳನ್ನು ಬಿಚ್ಚಿ ಎಲ್ಲ ರಾಜರೂ ಭೀಷ್ಮರ ಸಮೀಪಕ್ಕೆ ಬಂದರು.

ವ್ಯುಪಾರಮ್ಯ ತತೋ ಯುದ್ಧಾದ್ ಯೋಧಾಃ ಶತಸಹಸ್ರಶಃ ।
ಉಪತಸ್ಥುರ್ಮಹಾತ್ಮಾನಂ ಪ್ರಜಾಪತಿಮಿವಾಮರಾಃ ॥೨೮॥

ಯುದ್ಧದಿಂದ ವಿರಮಿಸಿ ಯೋಧರು ಶತಸಹಸ್ರ ಸಂಖ್ಯೆಗಳಲ್ಲಿ ದೇವತೆಗಳು ಬ್ರಹ್ಮದೇವರ ಬಳಿಗೆ ಬಂದಂತೆ ಮಹಾತ್ಮರಾದ ಭೀಷ್ಮರ ಬಳಿಯಲ್ಲಿ ಬಂದು ನಿಂತರು.

ತೇ ತು ಭೀಷ್ಮಂ ಸಮಾಸಾದ್ಯ ಶಯಾನಂ ಭರತರ್ಷಭಮ್ ।
ಅಭಿವಾದ್ಯ ವ್ಯತಿಷ್ಠಂತ ಪಾಂಡವಾಃ ಕುರುಭಿಃ ಸಹ ॥೨೯॥

ಆ ಪಾಂಡವರಾದರೋ ಮಲಗಿದ ಭರತಶ್ರೇಷ್ಠರನ್ನು ಸಮೀಪಿಸಿ, ನಮಸ್ಕರಿಸಿ ಕೌರವರ ಜೊತೆಯಲ್ಲಿ ನಿಂತರು.

ಅಥ ಪಾಂಡೂನ್ ಕುರೂಂಶ್ಚೈವ ಪ್ರಗೇವಾಗ್ರತಃ ಸ್ಥಿತಾನ್ ।
ಅಭ್ಯಭಾಷತ ಧರ್ಮಾತ್ಮಾ ಭೀಷ್ಮಃ ಶಾಂತನವಸ್ತದಾ ॥೩೦॥

ಆಗ ನಮಸ್ಕಾರವನ್ನು ಮಾಡಿ ಎದುರಿಗೆ ನಿಂತಿದ್ದ ಪಾಂಡವರನ್ನೂ ಮತ್ತು ಕೌರವರನ್ನೂ ಕುರಿತು ಧರ್ಮಾತ್ಮರೂ, ಶಂತನುಪುತ್ರರೂ ಆದ ಭೀಷ್ಮರು ಮಾತನಾಡಿದರು.

ಸ್ವಾಗತಂ ವೋ ಮಹಾಭಾಗಾಃ ಸ್ವಾಗತಂ ವೋ ಮಹಾರಥಾಃ ।
ತುಷ್ಯಾಮಿ ದರ್ಶನಾದ್ಯೂಯಂ ಯುಷ್ಮಾಕಮಮರೋಪಮಾಃ ॥೩೧॥

ಎಲೈ ಮಹಾನುಭಾವರೇ ನಿಮಗೆ ಸ್ವಾಗತ. ಎಲೈ ಮಹಾರಥರೇ ನಿಮಗೆ ಸ್ವಾಗತ. ದೇವತೆಗಳಂತಿರುವ ನಿಮ್ಮ ದರ್ಶನದಿಂದ ನಾನು ಸಂತೋಷಗೊಂಡಿದ್ದೇನೆ.

ಅಭಿನಂದ್ಯ ಸ ತಾನೇವಂ ಶಿರಸಾ ಲಂಬತಾऽಬ್ರವೀತ್ ।
ಶಿರೋ ಮೇ ಲಂಬತೇऽತ್ಯರ್ಥಮುಪಧಾನಂ ಪ್ರದೀಯತಾಮ್ ॥೩೨॥

ಅವರನ್ನು ಈ ರೀತಿಯಾಗಿ ಅಭಿನಂದಿಸಿ ಜೋಲುತ್ತಿದ್ದ ಶಿರಸ್ಸಿನಿಂದ ಕೂಡಿದ ಅವರು, ನನ್ನ ಶಿರಸ್ಸು ಬಹಳವಾಗಿ ಜೋಲುತ್ತಿದೆ. ಒಂದು ದಿಂಬನ್ನು ಕೊಡಿ ಎಂದು ಕೇಳಿದರು.

ತತೋ ನೃಪಾಃ ಸಮಾಜಹ್ರುಸ್ತೂನಿ ಚ ಮೃದೂನಿ ಚ ।
ಉಪಧಾನಾನಿ ಮುಖ್ಯಾನಿ ನೈಚ್ಛತ್ ತಾನಿ ಪಿತಾಮಹಃ ॥೩೩॥

ಆಗ ರಾಜರು ತೆಳುವಾದ ಮತ್ತು ಮೃದುವಾದ ಹಾಗೂ ಶ್ರೇಷ್ಠವಾದ ತಲೆದಿಂಬುಗಳನ್ನು ತಂದರು. ಪಿತಾಮಹರು ಅವುಗಳನ್ನು ಒಪ್ಪಲಿಲ್ಲ.

ಅಬ್ರವೀಚ್ಚ ನರವ್ಯಾಘ್ರಃ ಪ್ರಹಸನ್ನಿವ ತಾನ್ ನೃಪಾನ್ ।
ನೈತಾನಿ ವೀರಶಯ್ಯಾಸು ಯುಕ್ತರೂಪಾಣಿ ಪಾರ್ಥಿವಾಃ ॥೩೪॥

ನರವ್ಯಾಘ್ರರಾದ ಅವರು ನಗುವವರಂತೆ ಆ ರಾಜರನ್ನು ಕುರಿತು ಎಲೈ ರಾಜರೇ, ವೀರಶಯ್ಯೆಯಲ್ಲಿ ಮಲಗಿದವರಿಗೆ ಇವು ಉಚಿತವಾದವುಗಳಲ್ಲ ಎಂದು ಹೇಳಿದರು.

ತತೋ ವೀಕ್ಷ್ಯ ನರಶ್ರೇಷ್ಠಮಬ್ರವೀಚ್ಚಾಪತ ಪಾಂಡವಮ್ ।
ಧನಂಜಯಂ ದೀರ್ಘಬಾಹುಂ ಸರ್ವಲೋಕಮಹಾರಥಮ್ ॥೩೫॥

ಅನಂತರ ನರಶ್ರೇಷ್ಠನೂ, ದೀರ್ಘಬಾಹುವೂ, ಸರ್ವಲೋಕ ಮಹಾರಥನೂ, ಪಾಂಡುಪುತ್ರನೂ ಆದ ಅರ್ಜುನನನ್ನು ನೋಡಿ ಮಾತನಾಡಿದರು.

ಧನಂಜಯ ಮಹಾಬಾಹೋ ಶಿರಸೋ ಮೇಽಸ್ಯ ಲಂಬತಃ ।
ದೀಯತಾಮುಪಧಾನಂ ವೈ ಯದ್ ಯುಕ್ತಮಿಹ ಮನ್ಯಸೇ ॥೩೬॥

ಎಲೈ ಮಹಾಬಾಹುವೇ, ಜೋಲುಬೀಳುತ್ತಿರುವ ನನ್ನ ಶಿರಸ್ಸಿಗೆ ನೀನು ಉಚಿತವೆಂದು ಭಾವಿಸುವ ಒಂದು ದಿಂಬನ್ನು ಕೊಡು (ಎಂದು ಹೇಳಿದರು).

ಸ ಸನ್ನಮ್ಯ ಮಹಚ್ಚಾಪಮಭಿವಾದ್ಯ ಪಿತಾಮಹಮ್ ।
ನೇತ್ರಾಭ್ಯಾಮಶ್ರುಪೂರ್ಣಾಭ್ಯಾಮಿದಂ ವಚನಮಬ್ರವೀತ್ ॥೩೭॥

ಅರ್ಜುನನು ತನ್ನ ದೊಡ್ಡ ಧನುಸ್ಸನ್ನು ತ್ಯಜಿಸಿ, ಪಿತಾಮಹರಿಗೆ ನಮಸ್ಕಾರವನ್ನು ಮಾಡಿ ಕಣ್ಣೀರಿನಿಂದ ತುಂಬಿದ ಕಣ್ಣಿನಿಂದ ಸಹಿತನಾಗಿ ಈ ಮಾತನ್ನು ಆಡಿದನು.

ಆಜ್ಞಾಪಯ ಕುರುಶ್ರೇಷ್ಠ ಸರ್ವಶಸ್ತ್ರಭೃತಾಂ ವರ ।
ಪ್ರೇಷ್ಯೋಽಹಂ ತವ ದುರ್ಧರ್ಷ ಕ್ರಿಯತಾಂ ಕಿಂ ಪಿತಾಮಹ ॥೩೮॥

ಕುರುಶ್ರೇಷ್ಠರೇ, ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠರೇ, ಪಿತಾಮಹರೇ, ದುರ್ಧರ್ಷರೇ, ನಾನು ನಿಮ್ಮ ಸೇವಕ. ನನಗೆ ಆಜ್ಞೆಯನ್ನು ಮಾಡಿ. ನಾನು ನಿಮಗೆ ಏನು ಮಾಡಲಿ?

ತಮಬ್ರವೀಚ್ಛಾಂತನವಃ ಶಿರೋ ಮೇ ತಾತ ಲಂಬತೇ ।
ಉಪಧಾನಂ ಕುರುಶ್ರೇಷ್ಠ ಫಲ್ಗುನೋಪನಯಸ್ವ ಮೇ ।
ಶಯಾನಸ್ಯಾನುರೂಪಂ ಹಿ ಶೀಘ್ರಂ ವೀರ ಪ್ರಯಚ್ಛ ಮೇ ॥೩೯॥

ಅವನನ್ನು ಕುರಿತು ಶಂತನುಪುತ್ರರಾದ ಭೀಷ್ಮರು, ಪ್ರೀತಿಪಾತ್ರನೇ, ನನ್ನ ಶಿರಸ್ಸು ಜೋಲುತ್ತಿದೆ. ಕುರುಶ್ರೇಷ್ಠನಾದ ಅರ್ಜುನನೇ, ವೀರನೇ, ವೀರಶಯ್ಯೆಯಲ್ಲಿ ಮಲಗಿದವನಿಗೆ ಯೋಗ್ಯವಾದ ತಲೆದಿಂಬನ್ನು ಶೀಘ್ರವಾಗಿ ನನಗೆ ಕೊಡು.

ತ್ವಂ ಹಿ ಪಾರ್ಥ ಮಹಾಬಾಹೋ ಶ್ರೇಷ್ಠಃ ಸರ್ವಧನುಷ್ಮತಾಮ್ ।
ಕ್ಷತ್ರಧರ್ಮಸ್ಯ ವೇತ್ತಾ ಚ ಬುದ್ಧಿಸತ್ತ್ವಗುಣಾನ್ವಿತಃ ॥೪೦॥

ಎಲೈ ಮಹಾಬಾಹುವಾದ ಅರ್ಜುನನೇ, ನೀನು ಸರ್ವಧನುರ್ಧಾರಿಗಳಲ್ಲಿ ಶ್ರೇಷ್ಠನಾದವನು. ಕ್ಷತ್ರಿಯ ಧರ್ಮವನ್ನು ತಿಳಿದವನು ಮತ್ತು ಬುದ್ಧಿ-ಬಲ ಮೊದಲಾದ ಗುಣಗಳಿಂದ ಕೂಡಿದವನು (ಎಂದು ಹೇಳಿದರು).

ಫಲ್ಗುನಸ್ತು ತಥೇತ್ಯುಕ್ತ್ವಾ ವ್ಯವಸಾಯಪುರೋಜವಃ ।
ಪ್ರಗೃಹ್ಯಾಮಂತ್ರ್ಯ ಗಾಂಡೀವಂ ಶರಾಂಶ್ಚ ನತಪರ್ವಣಃ ॥೪೧॥

ಅನುಮಾನ್ಯ ಮಹಾತ್ಮಾನಂ ಭರತಾನಾಮಮದ್ಯಪಮ್ ।
ತ್ರಿಭಿಸ್ತೀಕ್ಷ್ಣೈರ್ಮಹಾವೇಗೈರುದಗೃಹ್ಣಚ್ಛರಃ ಶರೈಃ ॥೪೨॥

ಅರ್ಜುನನಾದರೋ ಹಾಗೆಯೇ ಆಗಲಿ ಎಂದು ಹೇಳಿ, ಏನು ಮಾಡಬೇಕೆಂದು ನಿಶ್ಚಯಿಸಿ ಭೀಷ್ಮರ ಅನುಮತಿಯನ್ನು ಪಡೆದು ಗಾಂಡೀವ ಧನುಸ್ಸನ್ನು ಮತ್ತು ಬಾಗಿದ ತುದಿಯುಳ್ಳ ಬಾಣಗಳನ್ನು ಅಭಿಮಂತ್ರಿಸಿ, ಪುನಃ ಮಹಾತ್ಮರಾದ, ಮದ್ಯಪಾನವನ್ನು ಮಾಡದ ಭರತರಾದ ಭೀಷ್ಮರ ಅನುಮತಿಯನ್ನು ಪಡೆದು ತೀಕ್ಷ್ಣವಾದ ಮತ್ತು ವೇಗಶಾಲಿಯಾದ ಮೂರು ಬಾಣಗಳನ್ನು ಪ್ರಯೋಗಿಸಿ ಅವುಗಳಿಂದ ಭೀಷ್ಮರ ತಲೆಯನ್ನು ಎತ್ತಿದನು.

ಅಭಿಪ್ರಾಯೇ ತು ವಿದಿತೇ ಧರ್ಮಾತ್ಮಾ ಸವ್ಯಸಾಚಿನಾ ।
ತುಷ್ಟಾವ ಭರತಶ್ರೇಷ್ಠೋ ಭೀಷ್ಮೋ ಧರ್ಮಾರ್ಥತತ್ತ್ವವಿತ್ ॥೪೩॥

ಅರ್ಜುನನಿಗೆ ತಮ್ಮ ಅಭಿಪ್ರಾಯವು ತಿಳಿಯುತ್ತಿರಲು ಧರ್ಮಾರ್ಥ ತತ್ತ್ವಗಳನ್ನು ಚೆನ್ನಾಗಿ ತಿಳಿದ ಭರತಶ್ರೇಷ್ಠರಾದ ಧರ್ಮಾತ್ಮರಾದ ಭೀಷ್ಮರು ಸಂತೋಷಪಟ್ಟರು.

ಉಪಧಾನೇನ ದತ್ತೇನ ಪ್ರತ್ಯನಂದದ್ ಧನಂಜಯಮ್ ।
ಕುಂತೀಪುತ್ರಂ ಯುಧಾಂ ಶ್ರೇಷ್ಠಂ ಸುಹೃದಾಂ ಪ್ರೀತಿವರ್ಧನಮ್ ॥೪೪॥

ಅವನು ಕೊಟ್ಟ ತಲೆದಿಂಬಿನಿಂದ ಯುದ್ಧಮಾಡುವವರಲ್ಲಿ ಶ್ರೇಷ್ಠನೂ, ಸುಹೃದರಿಗೆ ಸಂತೋಷವುಂಟು ಮಾಡುವವನೂ, ಕುಂತೀಪುತ್ರನೂ ಆದ ಅರ್ಜುನನನ್ನು ಅಭಿನಂದಿಸಿದರು.

ಅನುರೂಪಂ ಶಯಾನಸ್ಯ ಪಾಂಡವೋಪಹಿತಂ ತ್ವಯಾ ।
ಯದ್ಯನ್ಯಥಾ ಪ್ರವರ್ತೇಥಾಃ ಶಪೇಯಂ ತ್ವಾಮಹಂ ರುಷಾ ॥೪೫॥

ಏವಮೇತನ್ಮಹಾಬಾಹೋ ಧರ್ಮೇಷು ಪರಿನಿಷ್ಠಿತಮ್ ।
ಸ್ವಪ್ತವ್ಯಂ ಕ್ಷತ್ರಿಯೇಣಾಜೌ ಶರತಲ್ಪಗತೇನ ವೈ ॥೪೬॥

ಎಲೈ ಅರ್ಜುನನೇ, ವೀರಶಯ್ಯೆಯಲ್ಲಿ ಮಲಗಿರುವ ನನಗೆ ಅನುರೂಪವಾದ ತಲೆದಿಂಬನ್ನು ನೀನು ನೀಡಿದ್ದೀಯೆ. ನೀನು ಬೇರೆ ರೀತಿಯಲ್ಲಿ ಪ್ರವೃತ್ತನಾಗಿದ್ದರೆ ನಾನು ಕೋಪದಿಂದ ನಿನಗೆ ಶಾಪವನ್ನು ಕೊಡುತ್ತಿದ್ದೆ. ಎಲೈ ಮಹಾಬಾಹುವೇ, ರಣರಂಗದಲ್ಲಿ ಶರತಲ್ಪದಲ್ಲಿ ಮಲಗಿದ ಕ್ಷತ್ರಿಯನು ಧರ್ಮಲೋಪವಾಗದಂತೆ ಹೀಗೆಯೇ ಮಲಗಬೇಕು.

ಏವಮುಕ್ತ್ವಾ ತು ಬೀಭತ್ಸುಂ ಸರ್ವಾನ್ ತಾನಬ್ರವೀದ್ ವಚಃ ।
ರಾಜ್ಞಶ್ಚ ರಾಜಪುತ್ರಾಂಶ್ಚ ಪಾಂಡವೇನಾಭಿಸಂಸ್ಕೃತಾನ್ ॥೪೭॥

ಅರ್ಜುನನನ್ನು ಕುರಿತು ಹೀಗೆ ಹೇಳಿ ಪಾಂಡವನಾದ ಅರ್ಜುನನ ಸುತ್ತಲೂ ಇದ್ದ ರಾಜರನ್ನೂ ಮತ್ತು ರಾಜಪುತ್ರರನ್ನೂ ಕುರಿತು ಭೀಷ್ಮರು ಮಾತನಾಡಿದರು.

ಪಶ್ಯಧ್ವಮುಪಧಾನಂ ಮೇ ಪಾಂಡವೇನಾಭಿಸಂಧಿತಮ್ ।
ಶಯೇಯಮಸ್ಯಾಂ ಶಯ್ಯಾಯಾಂ ಯಾವದಾವರ್ತನಂ ರವೇಃ ।
ಯೇ ತದಾ ಪಾರಯಿಷ್ಯಂತಿ ತೇ ಮಾಂ ದ್ರಕ್ಷ್ಯಂತಿ ವೈ ನೃಪಾಃ ॥೪೮॥

ಅರ್ಜುನನು ನನಗೆ ನೀಡಿದ ತಲೆದಿಂಬನ್ನು ನೋಡಿ. ನಾನು ಈ ಶಯನದಲ್ಲಿ ಸೂರ್ಯನು ಉತ್ತರಾಯಣಕ್ಕೆ ತಿರುಗುವವರೆಗೆ ಮಲಗಿರುವೆನು. ಅಲ್ಲಿಯವರೆಗೆ ಬದುಕುವ ರಾಜರು ನನ್ನನ್ನು ನೋಡುವರು.

ದಿಶಂ ವೈಶ್ರವಣಾಕ್ರಾಂತಾಂ ಯದಾ ಗಂತಾ ದಿವಾಕರಃ ।
ಅರ್ಚಿಷ್ಮಾನ್ ಪ್ರತಪನ್ ಲೋಕಾನ್ ರಥೇನೋತ್ತಮತೇಜಸಾ ।
ವಿಮೋಕ್ಷ್ಯೇಽಹಂ ತದಾ ಪ್ರಾಣಾನ್ ಸುಹೃದಃ ಸುಪ್ರಿಯಾನಪಿ ॥೪೯॥

ಯಾವಾಗ ತನ್ನ ಕಿರಣಗಳಿಂದ ಲೋಕಗಳನ್ನು ದಹಿಸುವ ಸೂರ್ಯನು ಉತ್ತಮ ತೇಜಸ್ಸಿನಿಂದ ಕೂಡಿ ತನ್ನ ರಥದಲ್ಲಿ ಕುಬೇರನಿಂದ ಆಶ್ರಿತವಾದ ಉತ್ತರದಿಕ್ಕಿಗೆ ಹೋಗುವನೋ ಆಗ ಎಲ್ಲೆ ವಿಶ್ವಾಸಪಾತ್ರರೇ, ಅತ್ಯಂತ ಪ್ರಿಯವಾದ ನನ್ನ ಪ್ರಾಣಗಳನ್ನು ನಾನು ತ್ಯಜಿಸುವೆನು.

ಪರಿಷಜ್ಯಮ್ಮತಾಮತ್ರ ಮಮಾವಸದನೇ ನೃಪಾಃ ।
ಉಪಾಸಿಷ್ಯೇ ವಿವಸ್ವಂತಮೇವಂ ಶರಶತಾಚಿತಃ ।
ಉಪಾರಮಧ್ವಂ ಸಂಗ್ರಾಮಾದ್ ವೈರಾಣ್ಯುತ್ಸೃಜ್ಯ ಪಾರ್ಥಿವಾಃ ॥೫೦॥

ಎಲ್ಲೆ ರಾಜರೇ, ನನ್ನ ಅವಸಾನದಿಂದ ಈ ಯುದ್ಧಸಭೆಯು ವಿರಮಿಸಲಿ ಹೊಂದಲಿ (ತನ್ನ ಪ್ರಯಾಣ ಕಾಲದಲ್ಲಿ ಎಲ್ಲರೂ ಸುತ್ತ ನಿಂತು ಗಾಬರಿಪಡಬೇಡಿ). ಹೀಗೆ ನೂರಾರು ಬಾಣಗಳು ಮೈಯಲ್ಲಿನೆಟ್ಟನಾನು ಸೂರ್ಯನನ್ನು ಉಪಾಸನೆ ಮಾಡುವೆನು. ಎಲ್ಲೆ ರಾಜರೇ, ವೈರಗಳನ್ನು ತೊರೆದು ಯುದ್ಧದಿಂದ ನಿವೃತ್ತರಾಗಿ.

ಉಪಾತಿಷ್ಠನ್ನಥೋ ವೈದ್ಯಾಃ ಶಲ್ಯೋದ್ಧರಣಕೋವಿದಾಃ ।
ಸರ್ವೋಪಕರಣೈರ್ಯುಕ್ತಾಃ ಕುಶಲಾಸ್ತೇ ಸುಶಿಕ್ಷಿತಾಃ ॥೫೧॥

ಅನಂತರ ಬಾಣಗಳನ್ನು ತೆಗೆಯುವುದರಲ್ಲಿ ಕೋವಿದರಾದ, ಕುಶಲರೂ, ಸುಶಿಕ್ಷಿತರೂ ಆದ ವೈದ್ಯರು ತಮ್ಮ ಎಲ್ಲಾ ಉಪಕರಣಗಳ ಜೊತೆಯಲ್ಲಿ ಭೀಷ್ಮರ ಬಳಿಗೆ ಬಂದರು.

ತಾನ್ ದೃಷ್ಟ್ವಾ ಜಾಹ್ನವೀಪುತ್ರಃ ಪ್ರೋವಾಚ ವಚನಂ ತದಾ ।
ದತ್ತದೇಯಾ ವಿಸೃಜ್ಯಂತಾಂ ಪೂಜಯಿತ್ವಾ ಚಿಕಿತ್ಸಕಾಃ ॥೫೨॥

ಅವರನ್ನು ನೋಡಿದ ಭೀಷ್ಮರು ಈ ವೈದ್ಯರಿಗೆ ಸಂಭಾವನೆಯನ್ನು ಕೊಟ್ಟು ಗೌರವಿಸಿ ಕಳುಹಿಸಿ ಎಂದು ಹೇಳಿದರು.

ಏವಂಗತೇ ನ ಹೀದಾನೀಂ ವೈದ್ಯೈಃ ಕಾರ್ಯಮಿಹಾಸ್ತಿ ಮೇ ।
ಕ್ಷತ್ರಧರ್ಮಪ್ರಶಸ್ತಾಂ ಹಿ ಪ್ರಾಪ್ತೋಽಸ್ಮಿ ಪರಮಾಂ ಗತಿಮ್ ॥೫೩॥

ಪರಿಸ್ಥಿತಿಯು ಹೀಗಿರುವಾಗ ನನಗೆ ಈಗ ವೈದ್ಯರಿಂದ ಆಗಬೇಕಾದ ಯಾವ ಕಾರ್ಯವೂ ಇಲ್ಲ. ಕ್ಷತ್ರಿಯ ಧರ್ಮಕ್ಕೆ ಅನುಗುಣವಾದ, ಪ್ರಶಸ್ತವಾದ, ಶ್ರೇಷ್ಠವಾದ ಗತಿಯನ್ನು ನಾನು ಹೊಂದಿದ್ದೇನೆ.

ನೈಷ ಧರ್ಮೋ ಮಹೀಪಾಲಾಃ ಶರತಲ್ಪಗತಸ್ಯ ಮೇ ।
ಏತೈರೇವ ಶರೈಶ್ಚಾಹಂ ದಗ್ಧವ್ಯೋಽಂತೇ ನರಾಧಿಪಾಃ ॥೫೪॥

ಎಲೈ ರಾಜರೇ, ಶರತಲ್ಪದಲ್ಲಿ ಮಲಗಿದವನಿಗೆ ಇದು ಧರ್ಮವಲ್ಲ. ಎಲೈ ರಾಜರೇ, ಕೊನೆಯಲ್ಲಿ ಈ ಶರತಲ್ಪದ ಬಾಣಗಳಿಂದಲೇ ನನ್ನ ಶರೀರವನ್ನು ದಹಿಸಬೇಕು.

ತಚ್ಛ್ರುತ್ವಾ ವಚನಂ ತಸ್ಯ ಪುತ್ರೋ ದುರ್ಯೋಧನಸ್ತವ ।
ವೈದ್ಯಾನ್ ವಿಸರ್ಜಯಾಮಾಸ ಪೂಜಯಿತ್ವಾ ಯಥಾರ್ಹತಃ ॥೫೫॥

ಭೀಷ್ಮರ ಆ ಮಾತುಗಳನ್ನು ಕೇಳಿ ನಿನ್ನ ಪುತ್ರನಾದ ದುರ್ಯೋಧನನು ವೈದ್ಯರನ್ನು ಯೋಗ್ಯವಾಗಿ ಗೌರವಿಸಿ ಕಳುಹಿಸಿಕೊಟ್ಟನು.

ತತಸ್ತೇ ವಿಸ್ಮಯಂ ಜಗ್ಮುರ್ನಾನಾಜನಪದೇಶ್ವರಾಃ ।
ಸ್ಥಿತಿಂ ಧರ್ಮೇ ಪರಾಂ ದೃಷ್ಟ್ವಾ ಭೀಷ್ಮಸ್ಯಾಮಿತತೇಜಸಃ ॥೫೬॥

ಅಮಿತ ಪರಾಕ್ರಮಿಗಳಾದ ಭೀಷ್ಮರ ಧರ್ಮನಿಷ್ಠೆಯನ್ನು ನೋಡಿ ನಾನಾ ದೇಶದ ರಾಜರು ವಿಸ್ಮಯವನ್ನು ಹೊಂದಿದರು.

ಉಪಧಾನಂ ತತೋ ದತ್ತ್ವಾ ಪಿತುಸ್ತವ ಜನೇಶ್ವರ ।
ಸಹಿತಾಃ ಪಾಂಡವಾಃ ಸರ್ವೇ ಕುರವಶ್ಚ ಮಹಾರಥಾಃ ॥೫೭॥

ಉಪಗಮ್ಯ ಮಹಾತ್ಮಾನಂ ಶಯಾನಂ ಶಯನೇ ಶುಭೇ ।
ತೇಽಭವಾದ್ಯ ತತೋ ಭೀಷ್ಮಂ ಕೃತ್ವಾ ಚಾಭಿಪ್ರದಕ್ಷಿಣಮ್ ॥೫೮॥

ವಿಧಾಯ ರಕ್ಷಾಂ ಭೀಷ್ಮಸ್ಯ ಸರ್ವ ಏವ ಸಮಂತತಃ ।
ವೀರಾಃ ಸ್ವಶಿರಾಸ್ಯೇವ ಧ್ಯಾಯಂತಃ ಪರಮಾತುರಾಃ ।
ನಿವೇಶಾಯಾಭ್ಯುಪಾಗಚ್ಛನ್ ಸಾಯಾಹ್ನೇ ರುಧಿರೋಕ್ಷಿತಾಃ ॥೫೯॥

ಎಲೈ ರಾಜನೇ, ನಿನ್ನ ತಂದೆಗೆ ತಲೆದಿಂಬನ್ನು ಕೊಟ್ಟು, ಮಹಾರಥರಾದ ಕೌರವ ಪಾಂಡವರೆಲ್ಲರೂ ಜೊತೆಯಲ್ಲಿ ಮಹಾತ್ಮರಾದ ಭೀಷ್ಮರು ಮಲಗಿದ ಶುಭ ಶಯನದ ಬಳಿಗೆ ಬಂದು, ಅವರಿಗೆ ಪ್ರದಕ್ಷಿಣೆಯನ್ನು ಮತ್ತು ನಮಸ್ಕಾರವನ್ನು ಮಾಡಿ, ಅವರ ರಕ್ಷಣೆಗೆ ಬೇಕಾದ ಎಲ್ಲಾ ವ್ಯವಸ್ಥೆಯನ್ನೂ ಮಾಡಿ, ಅವರನ್ನೇ ಚಿಂತಿಸುತ್ತಾ ಪರಮ ದುಃಖದಿಂದ ಕೂಡಿದ, ರಕ್ತದಿಂದ ತೊಯ್ದ ಅವರು ಸಾಯಂಕಾಲದಲ್ಲಿ ವಿಶ್ರಾಂತಿಗಾಗಿ ತಮ್ಮ ಶಿಬಿರಗಳಿಗೆ ಹೋದರು.

ನಿವಿಷ್ಟಾನ್ ಪಾಂಡವಾಂಶ್ಚಾಪಿ ಪ್ರೀಯಮಾಣಾನ್ ಮಹಾರಥಾನ್ ।
ಭೀಷ್ಮಸ್ಯ ಪತನಾದ್ ಹೃಷ್ಟಾನುಪಗಮ್ಯ ಮಹಾರಥಾನ್ ।
ಉವಾಚ ಯಾದವಃ ಕಾಲೇ ಧರ್ಮಪುತ್ರಂ ಯುಧಿಷ್ಠಿರಮ್ ॥೬೦॥

ವಿಶ್ರಾಂತಿ ಪಡೆಯುತ್ತಿದ್ದ ಮಹಾರಥರೂ, ಭೀಷ್ಮರ ಪತನದಿಂದ ಸಂತೋಷಗೊಂಡವರೂ ಆದ ಪಾಂಡವರ ಬಳಿಗೆ ಬಂದು ಯಾದವ ಕೃಷ್ಣನು ಆ ಕಾಲದಲ್ಲಿ ಧರ್ಮಪುತ್ರನಾದ ಯುಧಿಷ್ಠಿರನನ್ನು ಕುರಿತು ಮಾತನಾಡಿದನು.

ದಿಷ್ಟ್ಯಾ ಜಯಸಿ ಕೌರವ್ಯ ದಿಷ್ಟ್ಯಾ ಭೀಷ್ಮೋ ನಿಪಾತಿತಃ ।
ಅವಧ್ಯೋ ಮಾನುಷೈರೇಷ ಸತ್ಯಸಂಧೋ ಮಹಾರಥಃ ॥೬೧॥

ಎಲೈ ಕೌರವ್ಯನೇ, ದೇವರ ದಯೆಯಿಂದ ನೀನು ಜಯಿಸಿದ್ದೀಯೆ. ದೇವರ ದಯೆಯಿಂದಲೇ ಭೀಷ್ಮರು ಬಿದ್ದಿದ್ದಾರೆ. ಸತ್ಯಸಂಧರೂ, ಮಹಾರಥರೂ ಆದ ಅವರು ಮನುಷ್ಯರಿಂದ ಅವಧ್ಯರಾದವರು.

ಅಥವಾ ದೈವತೈಃ ಪಾರ್ಥ ಸರ್ವಶಸ್ತ್ರಾಸ್ತ್ರಪಾರಗಃ ।
ತ್ವಾಂ ತು ಚಕ್ಷುರ್ಹಣಂ ಪ್ರಾಪ್ಯ ದಗ್ಧೋ ಘೋರೇಣ ಚಕ್ಷುಷಾ ॥೬೨॥

ಅಥವಾ ಎಲೈ ಅರ್ಜುನನೇ, ದೇವತೆಗಳು ಚಕ್ಷುಸ್ಸಿನಿಂದಲೇ ಕೊಲ್ಲುವ ನಿನ್ನಲ್ಲಿ ಆಶ್ರಿತರಾಗಿ ತಮ್ಮ ಘೋರವಾದ ಚಕ್ಷುಸ್ಸಿನಿಂದ ಸರ್ವಶಸ್ತ್ರಾಸ್ತ್ರ ಪಾರಂಗತರಾದ ಭೀಷ್ಮರನ್ನು ದಹಿಸಿದರು (ಎಂದು ತಿಳಿಯುತ್ತೇನೆ).

ಏವಮುಕ್ತೋ ಧರ್ಮರಾಜಃ ಪ್ರತ್ಯುವಾಚ ಜನಾರ್ದನಮ್ ।
ತವ ಪ್ರಸಾದಾದ್ ವಿಜಯಃ ಕ್ರೋಧಾತ್ ತವ ಪರಾಜಯಃ ।
ತ್ವಂ ಹಿ ನಃ ಶರಣಂ ಕೃಷ್ಣ ಭಕ್ತಾನಾಮಭಯಂಕರಃ ॥೬೩॥

ಹೀಗೆ ಹೇಳಿದಾಗ ಧರ್ಮರಾಜನು ಕೃಷ್ಣನನ್ನು ಕುರಿತು ಮಾತನಾಡಿದನು. ಎಲೈ ಕೃಷ್ಣನೇ, ನಿನ್ನ ಅನುಗ್ರಹದಿಂದ ವಿಜಯವು ಮತ್ತು ನಿನ್ನ ಕ್ರೋಧದಿಂದ ಪರಾಜಯವು ಉಂಟಾಗುತ್ತದೆ. ಕೃಷ್ಣನೇ, ಭಕ್ತರಿಗೆ ಅಭಯಂಕರನಾದ ನೀನೇ ನಮಗೆ ಸರ್ವದಾ ರಕ್ಷಕನಾಗಿದ್ದೀಯೆ.

ಅನಾಶ್ಚರ್ಯೋ ಜಯಸ್ತೇಷಾಂ ಯೇಷಾಂ ತ್ವಮಸಿ ಕೇಶವ ।
ರಕ್ತಿತಾ ಸಮರೇ ನಿತ್ಯಂ ನಿತ್ಯಂ ಚಾಪಿ ಹಿತೇ ರತಃ ।
ಸರ್ವಥಾ ತ್ವಾಂ ಸಮಾಸಾದ್ಯ ನಾಶ್ಚರ್ಯಮಿತಿ ಮೇ ಮತಿಃ ॥೬೪॥

ಎಲೈ ಕೇಶವನೇ, ಯಾರಿಗೆ ನೀನು ನಿತ್ಯವೂ ಯುದ್ಧದಲ್ಲಿ ರಕ್ಷಕನಾಗಿಯೂ, ಹಿತಚಿಂತಕನಾಗಿಯೂ ಇರುವಿಯೋ ಅಂತಹವರಿಗೆ ಜಯವು ಆಶ್ಚರ್ಯಕರವಲ್ಲ. ನಿನ್ನನ್ನು ಸರ್ವಪ್ರಕಾರದಿಂದಲೂ ಆಶ್ರಯಿಸಿದವರಿಗೆ ಯಾವುದೂ ಆಶ್ಚರ್ಯವಲ್ಲವೆಂದು ನನ್ನ ಅಭಿಪ್ರಾಯ.

ಏವಮುಕ್ತಃ ಪ್ರತ್ಯುವಾಚ ಸ್ಮಯಮಾನೋ ಜನಾರ್ದನಃ ।
ತವೈಮೇವೈತದ್ ಯುಕ್ತರೂಪಂ ವಚನಂ ಪಾರ್ಥಿವೋತ್ತಮ ॥೬೫॥

ಹೀಗೆ ಹೇಳಲ್ಪಟ್ಟ ಕೃಷ್ಣನು ನಗುತ್ತಾ ಎಲೈ ಪಾರ್ಥಿವಶ್ರೇಷ್ಠನೇ, ಇವು ನಿನಗೇ ಯೋಗ್ಯವಾದ ಮಾತುಗಳು ಎಂದು ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸ್ಕ್ಯಾಂ
ಭೀಷ್ಮಪರ್ವಣಿ ಸಪ್ತದಶಾಧಿಕಶತತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಸಪ್ತಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನೂರ ಹದಿನೇಳನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನೆಂಟನೆಯ ಅಧ್ಯಾಯ

ಅರ್ಜುನನಿಂದ ಬಾಯಾರಿದ ಭೀಷ್ಮರಿಗೆ ಜಲದಾನ. ಪಾಂಡವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಳ್ಳುವಂತೆ ದುರ್ಯೋಧನನಿಗೆ ಭೀಷ್ಮರ ಉಪದೇಶ.

ಸಂಜಯಃ

ವ್ಯುಷ್ಟಾಯಾಂ ತು ಮಹಾರಾಜ ರಜನ್ಯಾಂ ಸರ್ವಪಾರ್ಥಿವಾಃ ।
ಪಾಂಡವಾ ಧಾರ್ತರಾಷ್ಟ್ರಾಶ್ಚ ಅಭಿಜಗ್ಮುಃ ಪಿತಾಮಹಮ್ ॥೧॥

ಸಂಜಯ– ಎಲೈ ಮಹಾರಾಜನೇ, ರಾತ್ರಿಯು ಕಳೆಯುತ್ತಿರಲು ಎಲ್ಲ ರಾಜರೂ, ಪಾಂಡವರೂ ಮತ್ತು ಕೌರವರೂ ಪಿತಾಮಹರ ಬಳಿಗೆ ಬಂದರು.

ತಂ ವೀರಶಯನೇ ವೀರಂ ಶಯಾನಂ ಕುರುಸತ್ತಮಮ್ ।
ಅಭಿವಾದ್ಯೋಪತಸ್ಥುರ್ವೈ ಕ್ಷತ್ರಿಯಾಃ ಕ್ಷತ್ರಿಯರ್ಷಭಮ್ ॥೨॥

ವೀರಶಯನದಲ್ಲಿ ಮಲಗಿದ, ವೀರರೂ, ಕ್ಷತ್ರಿಯರೂ, ಕುರುಶ್ರೇಷ್ಠರೂ ಆದ ಭೀಷ್ಮರಿಗೆ ನಮಸ್ಕರಿಸಿ ಕ್ಷತ್ರಿಯರೆಲ್ಲರೂ ಸಮೀಪದಲ್ಲಿ ನಿಂತರು.

ಕನ್ಯಾಶ್ಚಂದನಚೂರ್ಣೈಶ್ಚ ಲಾಜೈರ್ಮಾಲ್ಯೈಶ್ಚ ಸರ್ವಶಃ ।
ಅವಾಕಿರನ್ ಶಾಂತನವಂ ತತ್ರ ಗತ್ವಾ ಸಹಸ್ರಶಃ ॥೩॥

ಕನ್ಯೆಯರು ಸಹಸ್ರ ಸಂಖ್ಯೆಯಲ್ಲಿ ಅಲ್ಲಿಗೆ ಹೋಗಿ ಭೀಷ್ಮರ ಮೇಲೆ ಚಂದನ ಚೂರ್ಣಗಳನ್ನೂ, ಲಾಜಗಳನ್ನೂ ಮತ್ತು ಪುಷ್ಪಮಾಲೆಗಳನ್ನೂ ಸುರಿಸಿದರು.

ಸ್ತ್ರಿಯೋ ಬಾಲಾಸ್ತಥಾ ವೃದ್ಧಾಃ ಪ್ರೇಕ್ಷಕಾಶ್ಚ ಪೃಥಗ್ ಜನಾಃ ।
ಸಮಭ್ಯಯುಃ ಶಾಂತನವಂ ಭೂತಾನೀವ ತಮೋನುದಮ್ ॥೪॥

ಸ್ತ್ರೀಯರು, ಬಾಲಕರು, ವೃದ್ಧರು ಮತ್ತು ನೋಡಲು ಉತ್ಸುಕರಾದ ಸಾಮಾನ್ಯ ಜನರು, ಪ್ರಾಣಿಗಳು ಸೂರ್ಯನನ್ನು ನೋಡುವಂತೆ ಭೀಷ್ಮರ ಬಳಿಗೆ ಬಂದರು.

ತೂರ್ಯಾಣಿ ಗಣಿಕಾ ವಾರಾಸ್ತಥೈವ ನಟನರ್ತಕಾಃ ।
ಉಪಾನೃತ್ಯನ್ ಜಗುಶ್ಚೈವ ವೃದ್ಧಂ ಕುರುಪಿತಾಮಹಮ್ ॥೫॥

ವೃದ್ಧರಾದ ಕುರುಪಿತಾಮಹರ ಬಳಿ ಮಂಗಳವಾದ್ಯಗಳು ಮೊಳಗಿದವು. ಗಣಿಕೆಯರು, ವಾರಾಂಗನೆಯರು, ನಟರು ನರ್ತನವನ್ನು ಮತ್ತು ಗಾಯನವನ್ನು ಮಾಡಿದರು.

ಉಪಾರಮ್ಯ ಚ ಯುದ್ಧೇಭ್ಯಃ ಸನ್ನಾಹಾನ್ ವಿಪ್ರಮುಚ್ಯ ಚ ।
ಆಯುಧಾನಿ ಚ ನಿಕ್ಷಿಪ್ಯ ಸಹಿತಾಃ ಕುರುಪಾಂಡವಾಃ ॥೬॥

ಅನ್ವಾಸತ ದುರಾಧರ್ಷಂ ದೇವವ್ರತಮರಿಂದಮಮ್ ।
ಅನ್ಯೋನ್ಯಂ ಪ್ರೀತಿಮಂತಸ್ತೇ ಯಥಾಪೂರ್ವಂ ಯಥಾವಯಃ ॥೭॥

ಯುದ್ಧದಿಂದ ವಿರಾಮವನ್ನು ಹೊಂದಿ, ತಮ್ಮ ಶಸ್ತ್ರವಚವಗಳನ್ನು ತ್ಯಜಿಸಿ ಕುರು-ಪಾಂಡವರು ಮೊದಲಿನಂತೆಯೇ ಅವರ ವಯಸ್ಸಿಗೆ ಅನುಗುಣವಾಗಿ ಅನ್ಯೋನ್ಯ ಪ್ರೀತಿಯುಳ್ಳವರಾಗಿ ಅರಿಂದಮರೂ, ದುರಾಧರ್ಷರೂ ಆದ ಭೀಷ್ಮರ ಬಳಿ ನಿಂತರು.

ಸಾ ಪಾರ್ಥಿವಶತಾಕೀರ್ಣಾ ಸಮಿತಿರ್ಭೀಷ್ಮಶೋಭಿತಾ ।
ಶುಶುಭೇ ಭಾರತೀ ದೀಪ್ತಾ ದಿವೀವಾದಿತ್ಯಮಂಡಲಮ್ ॥೮॥

ನೂರಾರು ರಾಜರಿಂದ ತುಂಬಿದ, ಭೀಷ್ಮರಿಂದ ಶೋಭಿತವಾದ ಆ ಭಾರತರ ದೀಪ್ತವಾದ ಸಭೆಯು ಆಕಾಶದಲ್ಲಿನ ಆದಿತ್ಯಮಂಡಲದಂತೆ ಶೋಭಿಸಿತು.

ವಿಬಭೌ ಚ ನೃಪಾಣಾಂ ಸಾ ಪಿತಾಮಹಮುಪಾಸತಾಮ್ ।
ದೇವಾನಾಮಿವ ದೇವೇಶಂ ಪಿತಾಮಹಮುಪಾಸತಾಮ್ ॥೯॥

ಪಿತಾಮಹರ ಸಮೀಪದಲ್ಲಿ ನಿಂತ ರಾಜರ ಆ ಸಭೆಯು ದೇವೇಶರಾದ ಪಿತಾಮಹರಾದ ಬ್ರಹ್ಮದೇವರ ಸಮೀಪದಲ್ಲಿ ನಿಂತ ದೇವತೆಗಳ ಸಭೆಯಂತೆ ಶೋಭಿಸಿತು.

ಭೀಷ್ಮಸ್ತು ವೇದನಾಂ ಧೈರ್ಯಾನ್ನಿಗೃಹ್ಯ ಭರತರ್ಷಭ ।
ಅಭಿತಪ್ತಃ ಶರೈಶ್ಚೈವ ನಾತಿಹೃಷ್ಟಮನಾಬ್ರವೀತ್ ॥೧೦॥

ಎಲೈ ಭರತಶ್ರೇಷ್ಠನೇ, ಭೀಷ್ಮರಾದರೋ (ತಮ್ಮ ದೇಹದಲ್ಲಿ ನಾಟಿದ) ಬಾಣಗಳಿಂದ ತಾಡಗೊಂಡು, ಆ ವೇದನೆಯನ್ನು ಧೈರ್ಯದಿಂದ ತಡೆದುಕೊಳ್ಳದ ಬಹಳ ಸಂತೋಷಗೊಂಡ ಮನಸ್ಸಿನಿಂದ ಹೇಳಿದರು.

ಶರಾಭಿತಪ್ತಕಾಯೋಽಹಂ ಶರಸಂತಾಪಮೂರ್ಚ್ಛಿತಃ ।
ಪಾನೀಯಮಭಿಕಾಂಕ್ಷೇಽಹಂ ರಾಜ್ಞಸ್ತಾನ್ ಪ್ರತ್ಯಭಾಷತ ॥೧೧॥

ಬಾಣಗಳಿಂದ ಗಾಯಗೊಂಡ ಶರೀರವುಳ್ಳ ನಾನು ಅವುಗಳಿಂದ ಉಂಟಾದ ಸಂತಾಪದಿಂದ ಮೂರ್ಛಿತನಾಗಿದ್ದೇನೆ. ನನಗೆ ನೀರು ಬೇಕಾಗಿದೆ ಎಂದು ಆ ರಾಜರಿಗೆ ಹೇಳಿದರು.

ತತಸ್ತೇ ಕ್ಷತ್ರಿಯಾ ರಾಜನ್ ಸಮಾಜಹ್ರುಃ ಸಮಂತತಃ ।
ಭಕ್ಷ್ಯಾನುಚ್ಚಾವಚಾಂಸ್ತತ್ರ ವಾರಿಕುಂಭಾಂಶ್ಚ ಶೀತಲಾನ್ ॥೧೨॥

ಎಲೈ ರಾಜನೇ, ಆಗ ಆ ಕ್ಷತ್ರಿಯರು ಎಲ್ಲ ಕಡೆಗಳಿಂದಲೂ ಅನೇಕ ವಿಧವಾದ ಭಕ್ಷ್ಯಗಳನ್ನೂ, ಶೀತಲವಾದ ನೀರಿನಿಂದ ಕೂಡಿದ ಕುಂಭಗಳನ್ನೂ ತಂದರು.

ಉಪನೀತಂ ಚ ತದ್ ದೃಷ್ಟ್ವಾ ಭೀಷ್ಮಃ ಶಾಂತನವೋಽಬ್ರವೀತ್ ।
ನಾದ್ಯ ತಾತ ಮಯಾ ಶಕ್ಯಂ ಭೋಗಾನ್ ಕಾಂಶ್ಚನ ಮಾನುಷಾನ್ ॥

ಉಪಭೋಕ್ತುಂ ಮನುಷ್ಯೇಭ್ಯಃ ಶರಶಯ್ಯಾಗತೋ ಹ್ಯಹಮ್ ।
ಪ್ರತೀಕ್ಷಮಾಣಸ್ತಿಷ್ಠಾಮಿ ನಿವೃತ್ತಿಂ ಶಶಿಸೂರ್ಯಯೋಃ ॥೧೪॥

ತರಲ್ಪಟ್ಟ ಅವುಗಳನ್ನು ನೋಡಿ ಶಂತನು ಪುತ್ರರಾದ ಭೀಷ್ಮರು ಪ್ರೀತಿಪಾತ್ರನೇ, ನಾನು ಈ ದಿನ ಮನುಷ್ಯರಿಂದ ತರಲ್ಪಟ್ಟ ಯಾವ ಮಾನುಷಭೋಗವನ್ನೂ ಉಪಭೋಗಿಸಲು ಸಾಧ್ಯವಿಲ್ಲ. ಶರತಲ್ಪದಲ್ಲಿ ಮಲಗಿದ ನಾನು ಚಂದ್ರ-ಸೂರ್ಯರ ನಿವೃತ್ತಿಯನ್ನು ನಿರೀಕ್ಷಿಸುತ್ತಾ (ದಿನಗಳನ್ನು ಎಣಿಸುತ್ತಾ ಇದ್ದೇನೆ) ಎಂದು ಹೇಳಿದರು.

ಏವಮುಕ್ತ್ವಾ ತತೋವಾಚ ಭೀಷ್ಮಃ ಶರಶತೈಶ್ಚಿತಃ ।
ಪಯಃ ಪಾಸ್ಯಾಮಿ ಗೋಪಾಲಾ ಗೋಮಯಂ ನ ತು ಗೋಮಯಮ್ ॥

ಹೀಗೆ ಹೇಳಿ ನೂರಾರು ಬಾಣಗಳು ನೆಟ್ಟ ಭೀಷ್ಮರು ಪುನಃ ಹೇಳಿದರು. ಎಲೈ ಭೂಮಿಪಾಲರೇ, ನಾನು ಭೂಮಿಯಿಂದ ಹೊಸದಾಗಿ ಮೇಲೆ ಬಂದ ನೀರನ್ನು ಕುಡಿಯಲು ಇಚ್ಛಿಸುತ್ತೇನೆ. ಗೋವುಗಳಿಂದ ಉಂಟಾದ ಕ್ಷೀರವನ್ನಾಗಲೀ ಅಥವಾ ಕೂಪಾದಿಗಳಿಂದ ಉದ್ಧೃತವಾದ ಜಲವನ್ನಾಗಲೀ ಕುಡಿಯುವುದಿಲ್ಲ (ಎಂದು ಹೇಳಿದರು).

ಏವಮುಕ್ತ್ವಾ ಶಾಂತನವೋ ನಿಂದನ್ ವಾಕ್ಯೇನ ಪಾರ್ಥಿವಾನ್ ।
ಧನಂಜಯಂ ಮಹಾಬಾಹುಮಭ್ಯಭಾಷತ ಭಾರತ ॥೧೬॥

ಎಲೈ ಭಾರತನೇ, ಶಂತನು ಪುತ್ರರಾದ ಭೀಷ್ಮರು ಹೀಗೆ ಹೇಳಿ, ತನ್ನ ಮಾತಿನಿಂದ ಉಳಿದ ರಾಜರನ್ನು ನಿಂದಿಸಿ, ಮಹಾಬಾಹುವಾದ ಅರ್ಜುನನನ್ನು ಕುರಿತು ಹೇಳಿದರು.

ಅಥೋಪೇತ್ಯ ಮಹಾಬಾಹುರಭಿವಾದ್ಯ ಪಿತಾಮಹಮ್ ।
ಅತಿಷ್ಠತ್ ಪ್ರಾಂಜಲಿಃ ಪ್ರಹ್ವಃ ಕಿಂ ಕರೋಮೀತಿ ಚಾಬ್ರವೀತ್ ॥೧೭॥

ಆಗ ಮಹಾಬಾಹುವಾದ ಅರ್ಜುನನು ಭೀಷ್ಮರ ಸಮೀಪಕ್ಕೆ ಬಂದು, ಅವರಿಗೆ ನಮಸ್ಕಾರವನ್ನು ಮಾಡಿ, ಕೈಗಳನ್ನು ಮುಗಿದು ಏನು ಮಾಡಲಿ ಎಂದು ವಿನಯದಿಂದ ಕೇಳಿದನು.

ತಂ ದೃಷ್ಟ್ವಾ ಪಾಂಡವಂ ರಾಜನ್ನಭಿವಾದ್ಯಾಗ್ರತಃ ಸ್ಥಿತಮ್ ।
ಅಭ್ಯಭಾಷತ ಧರ್ಮಾತ್ಮಾ ಭೀಷ್ಮಃ ಪ್ರೀತೋ ಧನಂಜಯಮ್ ॥೧೮॥

ಎಲೈ ರಾಜನೇ, ನಮಸ್ಕಾರವನ್ನು ಮಾಡಿ ಎದುರಿಗೆ ನಿಂತ ಅರ್ಜುನನನ್ನು ನೋಡಿ ಸಂತೋಷಗೊಂಡ ಧರ್ಮಾತ್ಮರಾದ ಭೀಷ್ಮರು ಅವನನ್ನು ಕುರಿತು ಹೇಳಿದರು.

ದಹ್ಯತೇऽದಃ ಶರೀರಂ ಮೇ ಸಂಸ್ಕೃತೋऽಸ್ಮಿ ಮಹೇಷುಭಿಃ ।
ಮರ್ಮಾಣಿ ಪರಿದೂಯಂತೇ ವದನಂ ಮಮ ಶುಷ್ಯತಿ ॥೧೯॥

ಈ ನನ್ನ ಶರೀರವು ಸುಡುತ್ತಿದೆ. ದೊಡ್ಡ ಬಾಣಗಳಿಂದ ಪೋಣಿಸಲ್ಪಟ್ಟಿದ್ದೇನೆ. ಮರ್ಮಗಳು ನೋವಿನಿಂದ ಕೂಡಿವೆ. ನನ್ನ ಬಾಯಿಯು ಒಣಗುತ್ತಿದೆ.

ಹ್ಲಾದನಾರ್ಥಂ ಶರೀರಸ್ಯ ಪ್ರಯಚ್ಛಾಪೋ ಮಮಾರ್ಜುನ ।
ತ್ವಂ ಹಿ ಶಕ್ತೋ ಮಹೇಷ್ವಾಸ ದಾತುಮಂಭೋ ಯಥಾವಿಧಿ ॥೨೦॥

ಎಲೈ ಅರ್ಜುನನೇ, ದೇಹವನ್ನು ರಕ್ಷಿಸಲು ನನಗೆ ಸ್ವಲ್ಪ ನೀರನ್ನು ಕೊಡು. ಎಲೈ ಮಹಾಧನುರ್ಧಾರಿಯೇ, ಶಾಸ್ತ್ರವಿಧಿಯಂತೆ ನನಗೆ ನೀರನ್ನು ಕೊಡಲು ನೀನೊಬ್ಬನೇ ಸಮರ್ಥನಾಗಿದ್ದೀಯೆ.

ಅರ್ಜುನಸ್ತು ತಥೇತ್ಯುಕ್ತ್ವಾ ರಥಮಾರುಹ್ಯ ವೀರ್ಯವಾನ್ ।
ಅಧಿಜ್ಯಂ ಬಲವತ್ಕೃತ್ವಾ ಗಾಂಡೀವಂ ವ್ಯಾಕ್ಷಿಪದ್ ಧನುಃ ॥೨೦॥

ಪರಾಕ್ರಮಶಾಲಿಯಾದ ಅರ್ಜುನನಾದರೋ ಹಾಗೆಯೇ ಆಗಲಿ ಎಂದು ಹೇಳಿ ರಥವನ್ನು ಏರಿ, ಗಾಂಡೀವ ಧನುಸ್ಸಿನ ಹೆದೆಯನ್ನು ಬಿಗಿಯಾಗಿ ಏರಿಸಿ ಧನುಸ್ಸಿನ ಹೆದೆಯನ್ನು ಎಳೆದನು.

ತಸ್ಯ ಜ್ಯಾತಳನಿರ್ಘೋಷಂ ವಿಸೂರ್ಜಿತಮಿವಾಶನೇಃ ।
ವಿತ್ರೇಸುಃ ಸರ್ವಭೂತಾನಿ ಶ್ರುತ್ವಾ ಸರ್ವೇ ಚ ಪಾರ್ಥಿವಾಃ ॥೨೨॥

ಸಿಡಿಲಿನ ಆರ್ಭಟದಂತಿದ್ದ ಅವನ ಹೆದೆಯ ಘೋಷವನ್ನು ಕೇಳಿ ಎಲ್ಲ ಪ್ರಾಣಿಗಳೂ ಮತ್ತು ರಾಜರೂ ಹೆದರಿ ಹೋದರು.

ತತಃ ಪ್ರದಕ್ಷಿಣಂ ಕೃತ್ವಾ ರಥೇನ ರಥಿನಾಂ ವರಃ ।
ಶಯಾನಂ ಭರತಶ್ರೇಷ್ಠಂ ಸರ್ವಶಸ್ತ್ರಭೃತಾಂ ವರಮ್ ॥೨೩॥

ಸಂಧಾಯ ಚ ಶರಂ ದೀಪ್ತಮಭಿಮಂತ್ರ್ಯ ಮಹಾಯಶಾಃ ।
ಪರ್ಜನ್ಯಾಸ್ತ್ರೇಣ ಸಂಯೋಜ್ಯ ಸರ್ವಲೋಕಸ್ಯ ಪಶ್ಯತಃ ।
ಅವಿಧ್ಯತ್ ಪೃಥಿವೀಂ ಪಾರ್ಥಃ ಪಾರ್ಶ್ವೇ ಭೀಷ್ಮಸ್ಯ ದಕ್ಷಿಣೇ ॥೨೪॥

ಅನಂತರ ರಥಿಶ್ರೇಷ್ಠನೂ, ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನೂ ಆದ ಅವನು ಮಲಗಿದ ರಥದಿಂದ ಭೀಷ್ಮರಿಗೆ ಪ್ರದಕ್ಷಿಣೆಯನ್ನು ಮಾಡಿ ಹೊಳೆಯುತ್ತಿದ್ದ ಬಾಣವನ್ನು ಹೂಡಿ, ಅಭಿಮಂತ್ರಣ ಮಾಡಿ, ಪರ್ಜನ್ಯಾಸ್ತ್ರದಿಂದ ಸಂಯೋಜಿಸಿ ಎಲ್ಲರೂ ನೋಡುತ್ತಿರುವಂತೆಯೇ ಮಹಾಕೀರ್ತಿವಂತನಾದ ಅರ್ಜುನನು ಭೀಷ್ಮರ ಬಲಭಾಗದಲ್ಲಿ ಭೂಮಿಯಲ್ಲಿ ಆ ಬಾಣವನ್ನು ಪ್ರಯೋಗಿಸಿದನು.

ಉತ್ಪಪಾತ ತತೋ ಧಾರಾ ವಿಮಲಾ ವಾರಿಣಃ ಶಿವಾ ।
ಶೀತಸ್ಯಾಮೃತಕಲ್ಪಸ್ಯ ದಿವ್ಯಗಂಧರಸಸ್ಯ ಚ ॥೨೫॥

ಅನಂತರ ದಿವ್ಯಗಂಧಯುಕ್ತವಾದ, ಅಮೃತದಂತಿದ್ದ, ಮಂಗಳವಾದ, ಸ್ವಚ್ಛವಾದ ಜಲಧಾರೆಯು ಅಲ್ಲಿಂದ ಮೇಲಕ್ಕೆ ಚಿಮ್ಮಿತು.

ಅತರ್ಪಯತ್ ತತಃ ಪಾರ್ಥಃ ಶೀತಯಾ ವಾರಿಧಾರಯಾ ।
ಭೀಷ್ಮಂ ಕುರೂಣಾಮೃಷಭಂ ದಿವ್ಯಕರ್ಮಪರಾಕ್ರಮಃ ॥೨೬॥

ದಿವ್ಯಕರ್ಮಪರಾಕ್ರಮವುಳ್ಳ ಅರ್ಜುನನು ಆ ಶೀತಲ ಜಲಧಾರೆಯಿಂದ ಕುರುಶ್ರೇಷ್ಠರಾದ ಭೀಷ್ಮರನ್ನು ತೃಪ್ತಿಪಡಿಸಿದನು.

ಕರ್ಮಣಾ ತೇನ ಪಾರ್ಥಸ್ಯ ಶಕ್ರಸ್ಯೇವ ವಿಕುರ್ವತಃ ।
ವಿಸ್ಮಯಂ ಪರಮಂ ಜಗ್ಮುಸ್ತತಸ್ತೇ ವಸುಧಾಧಿಪಾಃ ॥೨೭॥

ಇಂದ್ರನಂತೆ ವಿಚಿತ್ರವಾದ ಕರ್ಮಗಳನ್ನು ಮಾಡುವ ಅರ್ಜುನನ ಆ ಕಾರ್ಯವನ್ನು ನೋಡಿ ಎಲ್ಲ ರಾಜರೂ ಪರಮವಿಸ್ಮಿತರಾದರು.

ತತ್ಕರ್ಮ ಪ್ರೇಕ್ಷ್ಯ ಬೀಭತ್ಸೋರತಿಮಾನುಷಮದ್ಭುತಮ್ ।
ಸಂಪ್ರಾವೇಪಂತ ಕುರವೋ ಗಾವಃ ಶೀತಾರ್ದಿತಾ ಇವ ॥೨೮॥

ಅರ್ಜುನನ ಮನುಷ್ಯರನ್ನು ಮೀರಿದ ಅದ್ಭುತವಾದ ಆ ಕಾರ್ಯವನ್ನು ನೋಡಿ ಕುರುಗಳು ಶೀತಕ್ಕೆ ನಡುಗುವ ಗೋವುಗಳಂತೆ ನಡುಗಿಹೋದರು.

ವಿಸ್ಮಯಾಚ್ಚೋತ್ತರೀಯಾಣಿ ವ್ಯಾವಿಧ್ಯನ್ ಸರ್ವತೋ ನೃಪಾಃ ।
ಶಂಖದುಂದುಭಿನಿರ್ಘೋಷ್ಯಸ್ತುಮುಲಂ ಸರ್ವತೋಽಭವತ್ ॥೨೯॥

ವಿಸ್ಮಯಗೊಂಡ ರಾಜರುಗಳು ಮಾತ್ರ ಎಲ್ಲ ಕಡೆಗಳಲ್ಲಿಯೂ ತಮ್ಮ ಉತ್ತರೀಯಗಳನ್ನು ಬೀಸಿದರು. ಶಂಖ-ದುಂದುಭಿಗಳ ನಾದದಿಂದ ಎಲ್ಲ ಕಡೆಗಳಲ್ಲಿಯೂ ತೀವ್ರವಾದ ಶಬ್ದವುಂಟಾಯಿತು.

ತೃಪ್ತಃ ಶಾಂತನವಶ್ಚಾಪಿ ರಾಜನ್ ಬೀಭತ್ಸುಮಬ್ರವೀತ್ ।
ಸರ್ವಪಾರ್ಥಿವವೀರಾಣಾಂ ಸನ್ನಿಧೌ ಪೂಜಯನ್ನಿವ ॥೩೦॥

ಎಲೈ ರಾಜನೇ, ತೃಪ್ತಿಗೊಂಡ ಭೀಷ್ಮರು ಭೂಮಿಯ ಎಲ್ಲ ರಾಜರ ಸನ್ನಿಧಿಯಲ್ಲಿ ಅರ್ಜುನನನ್ನು ಪೂಜಿಸುವವರಂತೆ ಮಾತನಾಡಿದರು.

ನೈತಚ್ಚಿತ್ರಂ ಮಹಾಬಾಹೋ ತ್ವಯಿ ಕೌರವನಂದನ ।
ಕಥಿತೋ ನಾರದೇನಾಸಿ ಪೂರ್ವಮೇರಮಿತದ್ಯುತಿಃ ॥೩೧॥

ಎಲೈ ಮಹಾಬಾಹುವೇ, ಕೌರವನಂದನನೇ, ಇದು ನಿನ್ನಲ್ಲಿ ಆಶ್ಚರ್ಯಕರವಲ್ಲ. ನೀನು ಹಿಂದೆ ಅಮಿತ ತೇಜಸ್ಸುಳ್ಳ ಋಷಿಯಾಗಿದ್ದಿ ಎಂದು ನಾರದರು ಹೇಳಿದ್ದಾರೆ.

ವಾಸುದೇವಸಹಾಯಸ್ತ್ವಂ ಮಹತ್ಕರ್ಮ ಕರಿಷ್ಯಸಿ ।
ಯಸ್ಮೋತ್ತಪತಿ ದೇವೇಂದ್ರಃ ಸಹ ದೇವೈರಪಿ ಧ್ರುವಮ್ ॥೩೨॥

ಕೃಷ್ಣನ ಸಹಾಯವನ್ನು ಹೊಂದಿದ ನೀನು ದೇವತೆಗಳಿಂದ ಕೂಡಿದ ದೇವೇಂದ್ರನೂ ಮಾಡಲು ಯೋಚಿಸದ ದೊಡ್ಡ ಕಾರ್ಯಗಳನ್ನು ಖಂಡಿತವಾಗಿ ಮಾಡುವಿ.

ವಿದುಸ್ತ್ವಂ ನಿಧನಂ ಪಾರ್ಥ ಸರ್ವಕ್ಷತ್ರಸ್ಯ ತದ್ವಿದಃ ।
ಧನುರ್ಧರಾಣಾಮೇಕಸ್ತ್ವಂ ಪೃಥಿವ್ಯಾಂ ಪ್ರವರೋ ನೃಷು ॥೩೩॥

ಎಲೈ ಪಾರ್ಥನೇ, ನೀನು ಸರ್ವಕ್ಷತ್ರಿಯರ ವಿನಾಶಕಾರಣನೆಂದು ತಿಳಿದವರು ಹೇಳುತ್ತಾರೆ. ನೀನು ಧನುರ್ಧಾರಿಗಳಲ್ಲಿ ಶ್ರೇಷ್ಠನಾದವನು. ಭೂಮಿಯಲ್ಲಿರುವ ಮನುಷ್ಯರಲ್ಲಿಯೂ ಶ್ರೇಷ್ಠನಾದವನು.

ಮನುಷ್ಯಾ ಜಗತಿ ಶ್ರೇಷ್ಠಾಃ ಪಕ್ಷಿಣಾಂ ಗರುಡೋ ವರಃ ।
ಸರಸಾಂ ಸಾಗರಃ ಶ್ರೇಷ್ಠೋ ಗೌರ್ವರಿಷ್ಠಾ ಚತುಷ್ಪದಾಮ್ ॥೩೪॥

ಆದಿತ್ಯತೇಜಸಾಂ ಶ್ರೇಷ್ಠೋ ಗಿರೀಣಾಂ ಹಿಮವಾನ್ ವರಃ ।
ಜಾತೀನಾಂ ಬ್ರಾಹ್ಮಣಃ ಶ್ರೇಷ್ಠಃ ಶ್ರೇಷ್ಠಸ್ತ್ವಮಸಿ ಧನ್ವಿನಾಮ್ ॥೩೫॥

ಅನೇಕ ಪ್ರಾಣಿಗಳಿರುವ ಜಗತ್ತಿನಲ್ಲಿ ಮನುಷ್ಯರು ಶ್ರೇಷ್ಠರು. ಪಕ್ಷಿಗಳಲ್ಲಿ ಗರುಡನು ಶ್ರೇಷ್ಠನು. ಸರೋವರಗಳಲ್ಲಿ ಸಾಗರವು ಶ್ರೇಷ್ಠವಾದುದು. ನಾಲ್ಕುಕಾಲಿನ ಪ್ರಾಣಿಗಳಲ್ಲಿ ಗೋವು ಶ್ರೇಷ್ಠವಾದುದು. ಪ್ರಕಾಶವುಳ್ಳ ವಸ್ತುಗಳಲ್ಲಿ ಸೂರ್ಯನು ಶ್ರೇಷ್ಠನಾದವನು. ಪರ್ವತಗಳಲ್ಲಿ ಹಿಮಾಲಯವು ಶ್ರೇಷ್ಠವಾದುದು. ಜಾತಿಗಳಲ್ಲಿ ಬ್ರಾಹ್ಮಣನು ಶ್ರೇಷ್ಠನಾದವನು. ಸರ್ವಧನುರ್ಧಾರಿಗಳಲ್ಲಿ ನೀನು ಶ್ರೇಷ್ಠನಾದವನು.

ನ ವೈ ಶ್ರುತಂ ಧಾರ್ತರಾಷ್ಟ್ರೇಣ ವಾಕ್ಯಂ
ಸಂಬೋಧ್ಯಮಾನಂ ವಿದುರೇಣ ಚೈವ ।
ದ್ರೋಣೇನ ರಾಮೇಣ ಜನಾರ್ದನೇನ
ಮುಹುರ್ಮುಹುಃ ಸಂಜಯೇನಾಪಿ ಚೋಕ್ತಮ್ ॥೩೬॥

ವಿದುರನು, ದ್ರೋಣರು, ಪರಶುರಾಮನು, ಕೃಷ್ಣನು, ಸಂಜಯನು ಪುನಃ ಪುನಃ ದುರ್ಯೋಧನನನ್ನು ಸಂಬೋಧಿಸಿ ಹೇಳಿದ ಮಾತುಗಳನ್ನು ಅವನು ಕೇಳಲೇ ಇಲ್ಲ.

ಪರೀತಬುದ್ಧಿರ್ಹಿ ವಿಸಂಜ್ಞಕಲ್ಪೋ
ದುರ್ಯೋಧನೋ ನಾಭ್ಯನಂದದ್ ವಚೋ ಮೇ ।
ಸ ಶೇಷ್ಯತೇ ವೈ ನಿಹತಶ್ಚಿರಾಯ
ಶಾಸ್ತ್ರಾತಿಗೋ ಭೀಮಬಲಾಭಿಭೂತಃ ॥೩೭॥

ವಿಪರೀತ (ವಿರುದ್ಧ) ಬುದ್ಧಿಯುಳ್ಳವನೂ, ಜ್ಞಾನಶೂನ್ಯನಂತೆ ಇರುವವನೂ ಆದ ದುರ್ಯೋಧನನು ನನ್ನ ಮಾತುಗಳನ್ನೂ ಕೇಳಲಿಲ್ಲ. ಶಾಸ್ತ್ರವನ್ನು ಮೀರಿದ ಅವನು ಭೀಮಸೇನನ ಬಲಕ್ಕೆ ವಶನಾಗಿ, ಮೃತನಾಗಿ, ಶಾಶ್ವತವಾಗಿ ಮಲಗುವನು (ಎಂದು ಹೇಳಿದರು).

ತತಃ ಶ್ರುತ್ವಾ ತದ್ವಚಃ ಕೌರವೇಂದ್ರೋ
ದುರ್ಯೋಧನೋ ದೀನಮನಾ ಬಭೂವ ।
ತಮಬ್ರವೀಚ್ಚಾಂತನವೋಽಭಿವೀಕ್ಷ್ಯ
ನಿಬೋಧ ರಾಜನ್ ಭವ ವೀತಮನ್ಯುಃ ॥೩೮॥

ಕೌರವೇಂದ್ರನಾದ ದುರ್ಯೋಧನನು ಆ ಮಾತುಗಳನ್ನು ಕೇಳಿ ದೀನ ಮನಸ್ಕನಾದನು. ಅವನನ್ನು ನೋಡಿ ಭೀಷ್ಮರು ಹೇಳಿದರು– ರಾಜನೇ, ನಾನು ಹೇಳುವುದನ್ನು ಕೇಳು, ಕೋಪವನ್ನು ಬಿಡು.

ದೃಷ್ಟಂ ದುರ್ಯೋಧನೇದಂ ತೇ ಯಥಾ ಪಾರ್ಥೇನ ಧೀಮತಾ ।
ಜಲಸ್ಯ ಧಾರಾ ಜನಿತಾ ಶೀತಸ್ಯಾಮೃತಗಂಧಿನಃ ।
ಏತಸ್ಯ ಕರ್ತಾ ಲೋಕೇಽಸ್ಮಿನ್ ನಾನ್ಯಃ ಕಶ್ಚನ ವಿದ್ಯತೇ ॥೩೯॥

ಎಲೈ ದುರ್ಯೋಧನನೇ, ಮೇಧಾವಿಯಾದ ಅರ್ಜುನನು ಹೇಗೆ ಅಮೃತಗಂಧವುಳ್ಳ ಶೀತಲವಾದ ಜಲದ ಧಾರೆಯನ್ನು ಉಂಟುಮಾಡಿದನು ಎಂಬುದನ್ನು ನೀನು ನೋಡಿದ್ದೀಯೆ. ಇಂತಹ ಕಾರ್ಯವನ್ನು ಮಾಡುವವನು ಲೋಕದಲ್ಲಿ ಬೇರೆ ಯಾವನೂ ಇಲ್ಲ.

ಆಗ್ನೇಯಂ ವಾರುಣಂ ಸೌಮ್ಯಂ ವಾಯವ್ಯಮಥ ವೈಷ್ಣವಮ್ ।
ಐಂದ್ರಂ ಪಾಶುಪತಂ ಬ್ರಾಹ್ಮಂ ಪಾರಮೇಷ್ಠ್ಯಂ ಪ್ರಜಾಪತೇಃ ।
ಧಾತುಸ್ತ್ವಷ್ಟುಶ್ಚ ಸವಿತುರ್ದಿವ್ಯಾನ್ಯಸ್ತ್ರಾಣಿ ಸರ್ವಶಃ ॥೪೦॥

ಸರ್ವಸ್ಮಿನ್ ಮಾನುಷೇ ಲೋಕೇ ವೇತ್ತೈಕೋ ಹಿ ಧನಂಜಯಃ ।
ಕೃಷ್ಣೋ ವಾ ದೇವಕೀಪುತ್ರೋ ನಾನ್ಯೋ ವೈ ವೇದ ಕಶ್ಚನ ।
ನ ಶಕ್ಯಾಃ ಪಾಂಡವಾಸ್ತಾತ ಯುದ್ಧೇ ಜೇತುಂ ಕಥಂಚನ ॥೪೧॥

ಆಗ್ನೇಯ, ವಾರುಣ, ಚಾಂದ್ರ, ವಾಯುವ್ಯ, ವೈಷ್ಣವ, ಐಂದ್ರ, ಪಾಶುಪತ, ಬ್ರಾಹ್ಮ, ಪ್ರಜಾಪತಿಯ ಪಾರಮೇಷ್ಠ್ಯ, ಧಾತೃವಿನ ಅಸ್ತ್ರ, ತ್ವಷ್ಟುವಿನ ಅಸ್ತ್ರ ಸೂರ್ಯನ ಅಸ್ತ್ರ- ಎಲ್ಲ ದಿವ್ಯಾಸ್ತ್ರಗಳನ್ನೂ ಮನುಷ್ಯಲೋಕದಲ್ಲಿ ಅರ್ಜುನನೊಬ್ಬನೇ ತಿಳಿದಿದ್ದಾನೆ ಅಥವಾ ದೇವಕೀ ಪುತ್ರನಾದ ಕೃಷ್ಣನು ತಿಳಿದಿದ್ದಾನೆ. ಇನ್ನು ಯಾರೂ ಇವುಗಳನ್ನು ತಿಳಿದಿಲ್ಲ. ಎಲೈ ಪ್ರೀತಿಪಾತ್ರನೇ, ಪಾಂಡವರನ್ನು ಯಾವ ರೀತಿಯಿಂದಲೂ ಯುದ್ಧದಲ್ಲಿ ಗೆಲ್ಲಲು ಸಾಧ್ಯವಿಲ್ಲ.

ಅಮಾನುಷಾಣಿ ಕರ್ಮಾಣಿ ಯಸ್ಯೈತಾನಿ ಮಹಾತ್ಮನಃ ।
ತೇನ ಸತ್ತ್ವವತಾ ಸಂಖೇ ಶೂರೇಣಾಹವಶೋಭಿನಾ ।
ಕೃತಿನಾ ಸಮರೇ ರಾಜನ್ ಸಂಧಿಸ್ತೇ ತಾತ ಯುಜ್ಯತಾಮ್ ॥೪೨॥

ಎಲೈ ಪ್ರೀತಿಪಾತ್ರನೇ, ರಾಜನೇ, ಯಾವ ಮಹಾತ್ಮನು ಇಂತಹ ಅಮಾನುಷ ಕರ್ಮಗಳನ್ನು ಮಾಡುವನೋ ಅಂತಹ ಬಲಶಾಲಿಯಾದ, ಯುದ್ಧದಲ್ಲಿ ಶೂರನಾದ, ಯುದ್ಧದಲ್ಲಿ ಶೋಭಿಸುವ, ಯುದ್ಧದಲ್ಲಿ ಕುಶಲನಾದ ಅರ್ಜುನನ ಜೊತೆಯಲ್ಲಿ ನಿನಗೆ ಸಂಧಿ ಉಂಟಾಗಲಿ.

ಯಾವತ್ ಕೃಷ್ಣೋ ಮಹಾಬಾಹುಃ ಸ್ವಾಧೀನಃ ಕುರುಸಂಸದಿ ।
ತಾವತ್ ಪಾರ್ಥೇನ ಶೂರೇಣ ಸಂಧಿಸ್ತೇ ತಾತ ಯುಜ್ಯತಾಮ್ ॥೪೩॥

ಎಲೈ ಕುರುಶ್ರೇಷ್ಠನೇ, ಎಲ್ಲಿಯವರೆಗೆ ಮಹಾಬಾಹುವಾದ ಕೃಷ್ಣನು ಶೂರನಾದ ಅರ್ಜುನನಿಗೆ ಅಧೀನನಾಗಿರುತ್ತಾನೆಯೋ ಅಷ್ಟರೊಳಗೆ ಪ್ರೀತಿಪಾತ್ರನೇ ಸಂಧಿಯನ್ನು ಮಾಡಿಕೋ.

ಯಾವಚ್ಚಮೂಂ ನ ತೇ ಶೇಷಾಂ ಶರೈಃ ಸನ್ನತಪರ್ವಭಿಃ ।
ನಾಶಯತ್ಯರ್ಜುನಸ್ತಾವತ್ ಸಂಧಿಸ್ತೇ ತಾತ ಯುಜ್ಯತಾಮ್ ॥೪೪॥

ಎಲೈ ಪ್ರೀತಿಪಾತ್ರನೇ, ಅರ್ಜುನನು ಬಾಗಿದ ತುದಿಯುಳ್ಳ ತನ್ನ ಬಾಣಗಳಿಂದ ನಿನ್ನ ಉಳಿದ ಸೈನ್ಯವನ್ನು ನಾಶಮಾಡುವುದಕ್ಕಿಂತ ಮೊದಲೇ ಅವನ ಜೊತೆಯಲ್ಲಿ ಸಂಧಿಯನ್ನು ಮಾಡಿಕೋ.

ಯಾವತ್ ತಿಷ್ಠಂತಿ ಸಮರೇ ಹತಶೇಷಾಃ ಸಹೋದರಾಃ ।
ನೃಪಾಶ್ಚ ಬಹವೋ ರಾಜನ್ ತಾವತ್ಸಂಧಿಃ ಪ್ರಯುಜ್ಯತಾಮ್ ॥೪೫॥

ಎಲೈ ರಾಜನೇ, ಯುದ್ಧದಲ್ಲಿ ಹತರಾಗಿ ಉಳಿದ ನಿನ್ನ ಸಹೋದರರು ಮತ್ತು ಅನೇಕ ರಾಜರು ಇರುವಾಗಲೇ ನೀನು ಸಂಧಿಯನ್ನು ಮಾಡಿಕೋ.

ನ ನಿರ್ದಹತಿ ತೇ ಯಾವತ್ಕ್ರೋಧದೀಪ್ತೇಕ್ಷಣಶ್ಚಮೂಮ್ ।
ಯುಧಿಷ್ಠಿರೋ ಹಿ ತಾವದ್ವೈ ಸಂಧಿಸ್ತೇ ತಾತ ಯುಜ್ಯತಾಮ್ ॥೪೬॥

ಎಲೈ ಪ್ರೀತಿಪಾತ್ರನೇ, ಯುಧಿಷ್ಠಿರನು ಕೋಪಯುಕ್ತವಾದ ತನ್ನ ಕಣ್ಣುಗಳಿಂದ ನೋಡಿ ನಿನ್ನ ಸೈನ್ಯವನ್ನು ದಹಿಸುವುದಕ್ಕಿಂತ ಮೊದಲೇ ಸಂಧಿಯನ್ನು ಮಾಡಿಕೋ

ನಕುಲಃ ಸಹದೇವಶ್ಚ ಭೀಮಸೇನಶ್ಚ ಪಾಂಡವಃ ।
ಯಾವಚ್ಚಮೂಂ ಮಹಾರಾಜ ನಾಶಯಂತಿ ನ ಸರ್ವಶಃ ।
ತಾವತ್ ತೇ ಪಾಂಡವೈಃ ಸಾರ್ಧಂ ಸೌಭ್ರಾತ್ರಂ ತಾತ ರೋಚಿತಾಮ್ ॥

ಎಲೈ ಪ್ರೀತಿಪಾತ್ರನೇ, ಮಹಾರಾಜನೇ, ನಕುಲ-ಸಹದೇವರು, ಪಾಂಡುಪುತ್ರವಾದ ಭೀಮಸೇನ ಇವರು ಎಲ್ಲ ಕಡೆಗಳಿಂದಲೂ ನಿನ್ನ ಸೈನ್ಯವನ್ನು ನಾಶಮಾಡುವುದಕ್ಕಿಂತ ಮೊದಲೇ ಪಾಂಡವರ ಜೊತೆಯಲ್ಲಿ ಒಳ್ಳೆಯ ಸಹೋದರಭಾವವನ್ನು ಬಯಸುವವನಾಗು.

ಯುದ್ಧಂ ಮದಂತಮೇವಾಸ್ತು ತಾತ ಸಂತಾಮ್ಯ ಪಾಂಡವೈಃ ।
ವಿತತ್ ತೇ ರೋಚಿತಾಂ ವಾಕ್ಯಂ ಯದುಕ್ತೋಽಸಿ ಮಯಾನಘ ।
ವಿತತ್ಕ್ಷೇಮಮಹಂ ಮನ್ಯೇ ತವ ಚೈವ ಕುಲಸ್ಯ ಚ ॥೪೮॥

ಪ್ರೀತಿಪಾತ್ರನೇ, ಯುದ್ಧವು ನನ್ನಲ್ಲಿಯೇ ಕೊನೆಯಾಗಲಿ. ಪಾಂಡವರ ಜೊತೆಯಲ್ಲಿ ಶಾಂತಿಯುಂಟಾಗಿರು. ಎಲೈ ಅನಘನೇ, ನಾನು ಹೇಳಿದ ಮಾತುಗಳು ನಿನಗೆ ಇಷ್ಟವಾಗಲಿ. ಇದರಿಂದ ನಿನಗೂ ಮತ್ತು ಕುಲಕ್ಕೂ ಕ್ಷೇಮವಾಗುವುದೆಂದು ಭಾವಿಸುತ್ತೇನೆ.

ಕೃತ್ವಾ ಮಯ್ಯುಪಶಾಮ್ಯಸ್ತು ಹಾರ್ದ್ದಿ:
ಪರ್ಯಾಪ್ತಮೇತದ್ ಯತ್ಕೃತಂ ಫಲ್ಗುನೇನ ।
ಭೀಷ್ಮಾಣಾದಸ್ತು ವಃ ಸೌಹೃದಂ ವಾ
ಸಂಶ್ಲೇಷಃ ಸಾಧು ರಾಜನ್ ಪ್ರಸೀದ ॥೪೯॥

ಕೋಪವನ್ನು ಬಿಟ್ಟು ಪಾಂಡವರ ಜೊತೆಯಲ್ಲಿ ಶಾಂತಿಯನ್ನು ಹೊಂದು. ಅರ್ಜುನನು ಇರುವರೆಗೆ ಮಾಡಿರುವ ಈ ವಿನಾಶವು ಸಾಕು. ಭೀಷ್ಮನಾದ ನನ್ನ ಅಂತದಿಂದಾಗಿ ನಿಮಗೆ ಸೌಹಾರ್ದವೂ, ಪರಸ್ಪರ ಸಂಶ್ಲೇಷವೂ ಚೆನ್ನಾಗಿ ಉಂಟಾಗಲಿ. ರಾಜನೇ, ಪ್ರಸನ್ನನಾಗು.

ರಾಜ್ಯಸ್ಯಾರ್ಧಂ ದೀಯತಾಂ ಪಾಂಡವಾನಾಮ್
ಇಂದ್ರಪ್ರಸ್ಥಂ ಧರ್ಮರಾಜೋಽನುಶಾಸ್ತು ।
ಮಾ ಮಿತ್ರದ್ರುಹ್ ಪಾರ್ಥಿವಾನಾಂ ಜಘನ್ಯಃ
ಪಾಪಾಂ ಕೀರ್ತಿಂ ಪ್ರಾಪ್ತವೇ ಕೌರವೇಂದ್ರ ॥೫೦॥

ಪಾಂಡವರಿಗೆ ಅರ್ಧರಾಜ್ಯವನ್ನು ಕೊಡು. ಧರ್ಮರಾಜನು ಇಂದ್ರಪ್ರಸ್ಥವನ್ನು ಆಳಲಿ. ಮಿತ್ರದ್ರೋಹವನ್ನು ಮಾಡಿ ರಾಜರಲ್ಲಿ ನೀಚನಾಗಬೇಡ. ಎಲೈ ಕೌರವೇಂದ್ರನೇ, ಇಲ್ಲದಿದ್ದರೆ ನೀನು ಅಪಕೀರ್ತಿಯನ್ನು ಹೊಂದುವಿ.

ಮದೂಪಶಾನಾದ್ಭೂತಿರಸ್ತು ಪ್ರಜಾನಾಂ
ಸಂಗಚ್ಛಂತಾಂ ಪಾರ್ಥಿವಾಃ ಪ್ರೀತಿಮಂತಃ ।
ಪಿತಾ ಪುತ್ರಂ ಮಾತುಲಂ ಭಾಗಿನೇಯೋ
ಭ್ರಾತಾ ಭ್ರಾತಾ ಭ್ರಾತರಂ ಪ್ರೈತು ರಾಜನ್ ॥೫೧॥

ನನ್ನ ಅವಸಾನದಿಂದ ಪ್ರಜೆಗಳಿಗೆ ಶಾಂತಿಯುಂಟಾಗಲಿ. ರಾಜರು ಸಂತೋಷದಿಂದ ಪರಸ್ಪರವಾಗಿ ಬೆರೆಯಲಿ. ಎಲೈ ರಾಜನೇ, ತಂದೆಯು ಮಗನನ್ನೂ ಸೋದರಳಿಯನು ಸೋದರಮಾವನನ್ನೂ, ಸಹೋದರನು ಸಹೋದರನನ್ನೂ ಸೇರಲಿ.

ನ ಚೇದೇವಂ ಪ್ರಾಪ್ತಕಾಲಂ ವಚೋ ಮೇ
ಮೋಹಾವಿಷ್ಟಃ ಪ್ರತಿಪತ್ಸ್ಯಸ್ಯಬುದ್ಧ್ಯಾ ।
ಭೀಷ್ಮಸ್ಯಾಂತಾದೇತದಂತಾಃ ಸ್ಮ ಸರ್ವೇ
ಸತ್ಯಮೇತಾಂ ಭಾರತೀಮೀರಯಾಮಿ ॥೫೨॥

ಮೋಹಾವಿಷ್ಟನಾಗಿ ನೀನು ಬುದ್ಧಿಯಿಲ್ಲದೆ ಈ ಕಾಲದಲ್ಲಿ ಅನುಸರಿಸಲು ಯೋಗ್ಯವಾದ ನನ್ನ ಮಾತನ್ನು ಸ್ವೀಕರಿಸದಿದ್ದರೆ ಭೀಷ್ಮರ ಅವಸಾನದಿಂದ ನಿಮ್ಮೆಲ್ಲರ ಅವಸಾನವೂ ಉಂಟಾಗುತ್ತದೆ. ನಾನು ಈ ಮಾತನ್ನು ಸತ್ಯವಾಗಿ ಹೇಳುತ್ತಿದ್ದೇನೆ.

ಏತದ್ ವಾಕ್ಯಂ ಸೌಹೃದಾದಾಪಗೇಯೋ
ಮಧ್ಯೇ ರಾಜ್ಞಾಂ ಭಾರತಂ ಶ್ರಾವಯಿತ್ವಾ ।
ತೂಷ್ಣೀಮಾಸೀಚ್ಛಲ್ಯಸಂತಪ್ತಮರ್ಮಾ
ಯತ್ನಾತ್ತಾನಂ ವೇದನಾಂ ಸನ್ನಿಗೃಹ್ಯ ॥೫೩॥

ಗಂಗಾಸುತರಾದ ಭೀಷ್ಮರು ಎಲ್ಲ ರಾಜರ ಮಧ್ಯದಲ್ಲಿ ಈ ಮಾತುಗಳನ್ನು ದುರ್ಯೋಧನನಿಗೆ ಹೇಳಿ, ಬಾಣಗಳಿಂದ ಪೀಡಿತವಾದ ಮರ್ಮಗಳುಳ್ಳ ಅವರು ಪ್ರಯತ್ನಪೂರ್ವಕವಾಗಿ ತಮ್ಮ ವೇದನೆಯನ್ನು ಸಹಿಸಿಕೊಂಡು ಸುಮ್ಮನಾದರು.

ಧರ್ಮಾರ್ಥಸಂಹಿತಂ ವಾಕ್ಯಂ ಶ್ರುತ್ವಾ ಹಿತಮನಾಮಯಮ್ ।
ನಾರೋಚಯತ ಪುತ್ರಸ್ತೇ ಮುಮೂರ್ಷುರಿವ ಭೇಷಜಮ್ ॥೫೪॥

ಧರ್ಮಾರ್ಥಸಮ್ಮತವೂ, ಹಿತವೂ, ನಿರ್ದುಷ್ಟವೂ ಆದ ಅವರ ವಾಕ್ಯಗಳನ್ನು ಕೇಳಿ ನಿನ್ನ ಪುತ್ರನಾದ ದುರ್ಯೋಧನನು, ಮರಣವು ಸನ್ನಿಹಿತನಾದವನು ಔಷಧವನ್ನು ಇಷ್ಟಪಡದಂತೆ ಆ ಮಾತುಗಳನ್ನು ಇಷ್ಟಪಡಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಅಷ್ಟದಶಾಧಿಕಶತತಮೋऽಧ್ಯಾಯಃ ॥
॥ ಭೀಷ್ಮವಧಪರ್ವಣಿ ಅಷ್ಟಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನೂರ ಹದಿನೆಂಟನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹತ್ತೊಂಬತ್ತನೆಯ ಅಧ್ಯಾಯ

ಭೀಷ್ಮ-ಕರ್ಣರ ಸಮಾಗಮ ಮತ್ತು ಸಂವಾದ.

ಸಂಜಯಃ

ತತಸ್ತೇ ಪಾರ್ಥಿವಾಃ ಸರ್ವೇ ಜಗ್ಮುಃ ಸ್ವಾನಾಲಯಾನ್ ಪುನಃ ।
ತೂಷ್ಣೀಂಭೂತೇ ಮಹಾರಾಜ ಭೀಷ್ಮೇ ಶಂತನುನಂದನೇ ॥೧॥

ಸಂಜಯ– ಎಲೈ ಮಹಾರಾಜನೇ, ಆಗ ಶಂತನುಪುತ್ರರಾದ ಭೀಷ್ಮರು ಸುಮ್ಮನಾಗುತ್ತಿರಲು ಎಲ್ಲರಾಜರೂ ಪುನಃ ತಮ್ಮ ಶಿಬಿರಗಳಿಗೆ ಹೋದರು.

ಶ್ರುತ್ವಾ ತು ನಿಹತಂ ಭೀಷ್ಮಂ ರಾಧೇಯಃ ಪುರುಷರ್ಷಭಃ ।
ಈಷದಾಗತಸಂತ್ರಾಸಃ ತ್ವರಯೋಪಜಗಾಮ ಹ ॥೨॥

ಭೀಷ್ಮರು ನಿಹತರಾದುದನ್ನು ಕೇಳಿ ಪುರುಷಶ್ರೇಷ್ಠನಾದ ಕರ್ಣನು ಸ್ವಲ್ಪ ಭಯವನ್ನು ಹೊಂದಿ ತ್ವರೆಯಿಂದ ಅಲ್ಲಿಗೆ ಬಂದನು.

ಸ ದದರ್ಶ ಮಹಾತ್ಮಾನಂ ಶರತಲ್ಪಗತಂ ತದಾ ।
ಜನ್ಮಶಯ್ಯಾಗತಂ ದೇವಂ ಕಾರ್ತಿಕೇಯಮಿವ ಪ್ರಭುಮ್ ॥೩॥

ಅವನು ಜನ್ಮಕಾಲದ ತೊಟ್ಟಿಲಿನಲ್ಲಿ ಮಲಗಿದ ಷಣ್ಮುಖನಂತಿದ್ದ ಪ್ರಭುವೂ, ವೀರರೂ, ಮಹಾತ್ಮರೂ ಆದ ಭೀಷ್ಮರು ಶರತಲ್ಪದಲ್ಲಿ ಇದ್ದುದನ್ನು ನೋಡಿದನು.

ನಿಮೀಲಿತಾಕ್ಷಂ ತಂ ವೀರಂ ಸಾಶ್ರುಕಂಠಸ್ತದಾ ವೃಷಃ ।
ಅಭ್ಯೇತ್ಯ ಪಾದಯೋಸ್ತಸ್ಯ ನಿಪಪಾತ ಮಹಾದ್ಯುತಿಃ ॥೪॥

ಮಹಾದ್ಯುತಿಯುಳ್ಳ ಕರ್ಣನು ಅವರ ಸಮೀಪಕ್ಕೆ ಬಂದು, ಅಶ್ರುಸಹಿತವಾದ ಕಂಠದಿಂದ ಕಣ್ಣನ್ನು ಮುಚ್ಚಿದ ಆ ವೀರರ ಪಾದದ ಮೇಲೆ ಬಿದ್ದನು.

ರಾಧೇಯೋಽಹಂ ಕುರುಶ್ರೇಷ್ಠ ನಿತ್ಯಂ ಚಾಕ್ಷಿಗತಸ್ತವ ।
ದ್ವೇಷ್ಯೋಽತ್ಯಂತಮನಾಗಾಃ ಸನ್ನಿತಿ ಚೈನಮುವಾಚ ಹ ॥೫॥

ಎಲೈ ಕುರುಶ್ರೇಷ್ಠರೇ, ನಾನು ರಾಧೇಯನಾದ ಕರ್ಣ. ಯಾವಾಗಲೂ ನಿನ್ನ ಕಣ್ಣೆದುರಿನಲ್ಲಿ ಇರುವವನು. ನಿರಪರಾಧಿಯಾದರೂ ನಿನ್ನ ದ್ವೇಷಕ್ಕೆ ಗುರಿಯಾದವನು ಎಂದು ಅವರನ್ನು ಕುರಿತು ಹೇಳಿದನು.

ತಚ್ಛ್ರುತ್ವಾ ಕುರುವೃದ್ಧಃ ಸ ಶರೈಃ ಸಂವೃತ್ತಲೋಚನಃ ।
ಶನೈರುದ್ವೀಕ್ಷ್ಯ ಸಸ್ನೇಹಮಿದಂ ವಚನಮಬ್ರವೀತ್ ॥೬॥

ಅದನ್ನು ಕೇಳಿದ ಕುರುವೃದ್ಧರಾದ ಭೀಷ್ಮರು ಬಾಣದ ಹೊಡೆತಗಳಿಂದ ಮುಚ್ಚಿದ ಕಣ್ಣುಗಳನ್ನು ನಿಧಾನವಾಗಿ ಸ್ವಲ್ಪತೆಗೆದು ಸ್ನೇಹಪೂರ್ವಕವಾಗಿ ಮಾತನಾಡಿದರು.

ಏಹ್ಯೇಹಿ ಮೇ ವಿಪ್ರತೀಪ ಸ್ಪರ್ಧಸೇ ತ್ವಂ ಮಯಾ ಸಹ ।
ರಹಿತಂ ಧಿಷ್ಣ್ಯಮಾಲೋಕ್ಯ ಸಮುತ್ಸಾರ್ಯ ಚ ರಕ್ಷಿಣಃ ।
ಪಿತೇವ ಪುತ್ರಂ ಗಾಂಗೇಯಃ ಪರಿಷ್ವಜ್ಯೈಕಬಾಹುನಾ ॥೭॥

ನನ್ನ ವಿರೋಧಿಯೇ, ಬಾ, ಬಾ. ಯಾವಾಗಲೂ ನನ್ನ ಜೊತೆಯಲ್ಲಿ ಸ್ಪರ್ಧೆಯನ್ನು ಮಾಡುತ್ತೀಯೆ ಎಂದು ಹೇಳಿ, ಆ ಸ್ಥಾನವು ಶೂನ್ಯವಾಗಿರುವುದನ್ನು ನೋಡಿ ಕಾವಲುಗಾರನನ್ನು ದೂರ ಸರಿಸಿ ತಂದೆಯು ಮಗನನ್ನು ಆಲಿಂಗಿಸಿದಂತೆ ಭೀಷ್ಮರು ಒಂದೇ ಬಾಹುವಿನಿಂದ ಅವನನ್ನು ಆಲಿಂಗಿಸಿದರು.

ಯದಿ ಮಾಂ ನಾಭಿಗಚ್ಛೇಥಾ ನ ತೇ ಶ್ರೇಯೋ ಭವೇದ್ ಧ್ರುವಮ್ ॥
ಕೌಂತೇಯಸ್ತ್ವಂ ನ ರಾಧೇಯೋ ವಿದಿತೋ ನಾರದಾನ್ಮಮ ।
ಕೃಷ್ಣದ್ವೈಪಾಯನಾಚ್ಚೈವ ಕೇಶವಾಚ್ಚ ನ ಸಂಶಯಃ ॥೯॥

ನೀನು ನನ್ನ ಬಳಿಗೆ ಬರದಿದ್ದರೆ ಖಂಡಿತವಾಗಿ ನಿನಗೆ ಶ್ರೇಯಸ್ಸಾಗುತ್ತಿರಲಿಲ್ಲ. ನೀನು ಕುಂತಿಯ ಪುತ್ರ. ರಾಧೆಯ ಮಗನಲ್ಲ. ಇದನ್ನು ನಾನು ನಾರದರಿಂದಲೂ, ಕೃಷ್ಣದ್ವೈಪಾಯನರಿಂದಲೂ, ಕೃಷ್ಣನಿಂದಲೂ ತಿಳಿದಿದ್ದೇನೆ. ಈ ವಿಷಯದಲ್ಲಿ ಸಂಶಯವಿಲ್ಲ.

ನ ಚ ದ್ವೇಷೋಽಸ್ತಿ ಮೇ ತಾತ ತ್ವಯಿ ಸತ್ಯಂ ಬ್ರವೀಮಿ ತೇ ।
ತೇಜೋವಧನಿಮಿತ್ತಂ ತು ಪರುಷಾಣ್ಯಹಮುಕ್ತವಾನ್ ॥೧೦॥

ಎಲೈ ಪ್ರೀತಿಪಾತ್ರನೇ, ನನಗೆ ನಿನ್ನಲ್ಲಿ ದ್ವೇಷವಿಲ್ಲ. ಇದನ್ನು ಸತ್ಯವಾಗಿ ನಿನಗೆ ಹೇಳುತ್ತಿದ್ದೇನೆ. ನಿನ್ನ ತೇಜೋವಧೆಯನ್ನು ಮಾಡುವ ಸಲುವಾಗಿ ನಾನು ಉಗ್ರವಾದ ಮಾತುಗಳನ್ನು ಆಡಿದೆ.

ಅಕಸ್ಮಾತ್ ಪಾಂಡವಾನ್ ಹಿ ತ್ವಂ ದ್ವಿಷೀತಿ ಮತಿರ್ಮಮ ।
ಯೇನಾಸಿ ಬಹುಶೋ ರೂಕ್ಷಂ ಚೋದಿತಃ ಸೂರ್ಯನಂದನ ॥೧೧॥

ನೀನು ನಿಷ್ಕಾರಣವಾಗಿ ಪಾಂಡವರನ್ನು ದ್ವೇಷಿಸುತ್ತಿದ್ದೀಯೆ ಎಂದು ನನ್ನ ಅಭಿಪ್ರಾಯ. ಎಲೈ ಸೂರ್ಯನಂದನನೇ, ಆ ಕಾರಣದಿಂದಾಗಿ ನೀನು ಅನೇಕ ಬಾರಿ ನನ್ನಿಂದ ಉಗ್ರವಾದ ವಚನಗಳನ್ನು ಕೇಳಿದ್ದೀಯೆ.

ಜಾನಾಮಿ ಸಮರೇ ವೀರ್ಯಂ ಶತ್ರುಭಿರ್ದುಃಸಹಂ ತವ ।
ಬ್ರಹ್ಮಣ್ಯತಾಂ ಚ ಶೌರ್ಯಂ ಚ ದಾನೇ ಚ ಪರಮಾಂ ಗತಿಮ್ ॥೧೨॥

ಶತ್ರುಗಳಿಗೆ ಸಹಿಸಲು ಅಸಾಧ್ಯವಾದ ನಿನ್ನ ಯುದ್ಧಪರಾಕ್ರಮವನ್ನೂ, ಬ್ರಾಹ್ಮಣ ವಾತ್ಸಲ್ಯವನ್ನೂ, ಶೌರ್ಯವನ್ನೂ, ದಾನದಲ್ಲಿ ಪರಮಶ್ರದ್ಧೆಯನ್ನೂ ನಾನು ತಿಳಿದಿದ್ದೇನೆ.

ನ ತ್ವಯಾ ಸದೃಶಃ ಕಶ್ಚಿತ್ಪುರುಷೇಷ್ವಮರೋಪಮ ।
ಕುಲಭೇದಂ ಚ ಮತ್ವಾಹಂ ಸದಾ ಪರುಷಮುಕ್ತವಾನ್ ॥೧೩॥

ಎಲೈ ದೇವತೆಯಂತೆ ಇರುವವನೇ, ನಿನಗೆ ಸದೃಶನಾದ ಪುರುಷನು ಯಾವನೂ ಇಲ್ಲ. ಕುಲಭೇದವಾಗಬಾರದು ಎಂದು ಚಿಂತಿಸಿ ನಾನು ಯಾವಾಗಲೂ ಕ್ರೂರವಾದ ಮಾತುಗಳನ್ನಾಡಿದೆ.

ಇಷ್ವಸ್ತ್ರೇ ಭಾರಸಂಧಾನೇ ಲಾಘವೇಽಸ್ತ್ರಬಲೇ ತಥಾ ।
ಸದೃಶಃ ಫಲ್ಗುನೇನಾಸಿ ಕೃಷ್ಣೇನ ಚ ಮಹಾತ್ಮನಾ ॥೧೪॥

ಬಾಣಗಳನ್ನು ಪ್ರಯೋಗಿಸುವುದರಲ್ಲಿಯೂ, ಗುರುತರವಾದ ಕಾರ್ಯವನ್ನು ಮಾಡುವುದರಲ್ಲಿಯೂ, ಕ್ಷಿಪ್ರತೆಯಲ್ಲಿಯೂ, ಅಸ್ತ್ರದ ಬಲದಲ್ಲಿಯೂ ನೀನು ಅರ್ಜುನನಿಗೂ, ಮಹಾತ್ಮನಾದ ಕೃಷ್ಣನಿಗೂ ಸದೃಶನಾಗಿದ್ದೀಯೆ.

ಕರ್ಣ ಕಾಶಿಪುರಂ ಗತ್ವಾ ತ್ವಯೈಕೇನ ಧನುಷ್ಮತಾ ।
ತಸ್ಯಾರ್ಥೇ ಕುರುರಾಜಸ್ಯ ರಾಜಾನೋ ಮೃದಿತಾ ಯುಧಿ ॥೧೫॥

ಎಲೈ ಕರ್ಣನೇ, ಕುರುರಾಜನಾದ ದುರ್ಯೋಧನನ ಸಲುವಾಗಿ ನೀನು ಧನುರ್ಧಾರಿಯಾಗಿ ಒಬ್ಬನೇ ಕಾಶೀಪಟ್ಟಣಕ್ಕೆ ಹೋಗಿ ಯುದ್ಧದಲ್ಲಿ ಅನೇಕ ರಾಜರನ್ನು ಮರ್ದಿಸಿದೆ.

ತಥಾ ಚ ಬಲವಾನ್ ರಾಜಾ ಜರಾಸಂಧೋ ದುರಾಸದಃ ।
ಸಮರೇ ಸಮರಶ್ಲಾಘೀ ತ್ವಯಾ ನ ಸದೃಶೋಽಭವತ್ ॥೧೬॥

ಹಾಗೆಯೇ ಯಾರೂ ಸಮೀಪದಲ್ಲಿ ಸುಳಿಯಲು ಅಸಾಧ್ಯನಾದ, ಬಲಿಷ್ಠನಾದ, ಯಾವಾಗಲೂ ಯುದ್ಧವನ್ನು ಪ್ರಶಂಸಿಸುವ ಜರಾಸಂಧರಾಜನೂ ನಿನಗೆ ಸದೃಶನಾಗಲಿಲ್ಲ.

ಬ್ರಹ್ಮಣ್ಯಃ ಸತ್ಯವಾದೀ ಚ ತೇಜಸಾಽರ್ಕ ಇವಾಪರಃ ।
ದೇವಗರ್ಭೋಽಜಿತಃ ಸಂಖೇ ಮನುಷ್ಯೈರಧಿಕೋ ಭುವಿ ॥೧೭॥

ನೀನು ಬ್ರಾಹ್ಮಣ ವತ್ಸಲನಾದವನು, ಸತ್ಯವಚನನು ಮತ್ತು ದೀಪ್ತಿಯಿಂದ ಇನ್ನೊಬ್ಬ ಸೂರ್ಯನಂತೆ ಇರುವವನು. ದೇವತೆಯಿಂದ ಜನಿಸಿದವನು, ಯುದ್ಧದಲ್ಲಿ ಅಪರಾಜಿತನು ಮತ್ತು ಭೂಮಿಯಲ್ಲಿರುವ ಎಲ್ಲ ಮನುಷ್ಯರಿಗಿಂತಲೂ ಶ್ರೇಷ್ಠನಾದವನು.

ವ್ಯಪನೀತೋಽದ್ಯ ಮನ್ಯುರ್ಮೇ ಯಸ್ತ್ವಾಂ ಪ್ರತಿ ಪುರಾ ಕೃತಃ ।
ದೈವಂ ಪುರುಷಕಾರೇಣ ನ ಶಕ್ಯಮತಿವರ್ತಿತುಮ್ ॥೧೮॥

ನಿನ್ನ ಮೇಲೆ ನನಗೆ ಹಿಂದೆ ಇದ್ದ ಕೋಪವು ಈ ದಿನ ಹೊರಟುಹೋಗಿದೆ. ದೈವಸಂಕಲ್ಪವನ್ನು ಪುರುಷ ಪ್ರಯತ್ನದಿಂದ ಮೀರಲು ಸಾಧ್ಯವಿಲ್ಲ.

ಸೋದರ್ಯಾಃ ಪಾಂಡವಾ ವೀರಾ ಭ್ರಾತರಸ್ತೇಽರಿಸೂದನ ।
ಸಂಗಚ್ಛ ತೈರ್ಮಹಾಬಾಹೋ ಮಮ ಚೇದಿಚ್ಛಸಿ ಪ್ರಿಯಮ್ ॥೧೯॥

ಎಲೈ ವೀರನೇ, ಶತ್ರುಸೂದನನೇ, ವೀರರಾದ ಪಾಂಡವರು ನಿನ್ನ ಸಹೋದರರು. ಎಲೈ ಮಹಾಬಾಹುವೇ, ನನಗೆ ನೀನು ಪ್ರಿಯವನ್ನು ಮಾಡಲು ಬಯಸುವುದಾದರೆ ಅವರ ಜೊತೆಯಲ್ಲಿ ಸ್ನೇಹ ಸಮಾಗಮವನ್ನು ಹೊಂದು.

ಮಯಾ ಭವತು ನಿರ್ವೃತ್ತಂ ವೈರಮಾದಿತ್ಯನಂದನ ।
ಪೃಥಿವ್ಯಾಂ ಸರ್ವರಾಜಾನೋ ಭವಂತ್ವದ್ಯ ನಿರಾಮಯಾಃ ॥೨೦॥

ಎಲೈ ಸೂರ್ಯನಂದನನೇ, ನನ್ನ ಜೊತೆಯಲ್ಲಿಯೇ ಈ ವೈರವು ಕೊನೆಗೊಳ್ಳಲಿ. ಭೂಮಿಯಲ್ಲಿರುವ ಎಲ್ಲ ರಾಜರೂ ಈ ದಿನ ನಿಶ್ಚಿಂತೆಯಿಂದ ಇರಲಿ.

ಕರ್ಣಃ

ಜಾನಾಮ್ಯಹಂ ಮಹಾಪ್ರಾಜ್ಞ ಸರ್ವಮೇತನ್ನ ಸಂಶಯಃ ।
ಯಥಾ ವದಸಿ ದುರ್ಧರ್ಷ ಕೌಂತೇಯೋಽಹಂ ನ ಸೂತಜಃ ।
ವಸುದೇವಸುತೋ ಯದ್ವತ್ ಪಾಂಡವಾಯ ದೃಢವ್ರತಃ ॥೨೧॥

ಕರ್ಣ– ಮಹಾಪ್ರಾಜ್ಞರೇ, ಇದೆಲ್ಲವನ್ನೂ ನಾನು ತಿಳಿದಿದ್ದೇನೆ. ಇದರಲ್ಲಿ ಸಂಶಯವಿಲ್ಲ. ಎಲೈ ದುರ್ಧರ್ಷರೇ, ನೀವು ಹೇಳುವಂತೆ ನಾನು ಕುಂತೀಪುತ್ರ, ಸೂತಪುತ್ರನಲ್ಲ. ವಸುದೇವ ಸುತನಾದ ಕೃಷ್ಣನು ಪಾಂಡವರ ಹಿತದಲ್ಲಿ ದೃಢ ದೀಕ್ಷೆಯನ್ನು ಹೊಂದಿದಂತೆ (ನಾನು ದುರ್ಯೋಧನನ ಹಿತದಲ್ಲಿ ದೀಕ್ಷೆಯನ್ನು ಹೊಂದಿದ್ದೇನೆ).

ಅವಕೀರ್ಣಸ್ತ್ವಹಂ ಕುಂತ್ಯಾ ಸೂತೇನ ಚ ವಿವರ್ಧಿತಃ ।
ಭುಕ್ತ್ವಾ ದುರ್ಯೋಧನೈಶ್ವರ್ಯಂ ನ ಮಿಥ್ಯಾ ಕರ್ತುಮುತ್ಸಹೇ ॥೨೨॥

ನಾನು ಕುಂತಿಯಿಂದ ಪರಿತ್ಯಾಗ ಮಾಡಲ್ಪಟ್ಟು ಸೂತನಿಂದ ಬೆಳೆಸಲ್ಪಟ್ಟೆ. ದುರ್ಯೋಧನನ ಐಶ್ವರ್ಯವನ್ನು ಭೋಗಿಸಿ ಈಗ ಅದನ್ನು ಸುಳ್ಳು ಮಾಡಲಾರೆ.

ವಸು ಚೈವ ಶರೀರಂ ಚ ಯದುದಾರಂ ತಥಾ ಯಶಃ ।
ಸರ್ವಂ ದುರ್ಯೋಧನಸ್ಯಾರ್ಥೇ ತ್ಯಕ್ತಂ ಮೇ ಭೂರಿದಕ್ಷಿಣ ॥೨೩॥

ಎಲೈ ಭೂರಿದಕ್ಷಿಣರೇ, ನನ್ನ ಸಂಪತ್ತು, ನನ್ನ ಶರೀರ, ನನ್ನ ಅಪಾರವಾದ ಕೀರ್ತಿ ಎಲ್ಲವನ್ನೂ ನಾನು ದುರ್ಯೋಧನನ ಸಲುವಾಗಿ ತ್ಯಾಗ ಮಾಡಿದ್ದೇನೆ.

ಮಾ ಚೈತದ್ ವ್ಯಾಧಿಮರಣಂ ಕ್ಷತ್ರಂ ಸ್ಯಾದಿತಿ ಕೌರವ ।
ಕೋಪಿತಾಃ ಪಾಂಡವಾ ನಿತ್ಯಂ ಮಯಾಽಽಶ್ರಿತ್ಯ ಸುಯೋಧನಮ್ ॥

ಎಲೈ ಕೌರವರೇ, ಕ್ಷತ್ರಿಯರಿಗೆ ವ್ಯಾಧಿಯಿಂದ ಮರಣವುಂಟಾಗುವುದು ಬೇಡ ಎಂದು ಉದ್ದೇಶಿಸಿ, ನಾನು ಸುಯೋಧನನನ್ನು ಆಶ್ರಯಿಸಿ, ಯಾವಾಗಲೂ ಪಾಂಡವರಿಗೆ ಕೋಪವನ್ನು ಉಂಟುಮಾಡಿದೆ.

ಅವಶ್ಯಭಾವೀ ವೈ ಯೋಽರ್ಥೋ ನ ಸ ಶಕ್ಯೋ ನಿವರ್ತಿತುಮ್ ।
ದೈವಂ ಪುರುಷಕಾರೇಣ ಕೋ ನಿವರ್ತಿತುಮುತ್ಸಹೇತ್ ॥೨೫॥

ಅವಶ್ಯವಾಗಿ ನಡೆಯಲೇಬೇಕಾದ ಕಾರ್ಯವನ್ನು ಬದಲಾಯಿಸಲು ಸಾಧ್ಯವಿಲ್ಲ. ದೈವ ಸಂಕಲ್ಪವನ್ನು ಪುರುಷಪ್ರಯತ್ನದಿಂದ ಯಾವನು ತಡೆದಾನು?

ಪೃಥಿವೀಕ್ಷಯಶಂಸೀನಿ ನಿಮಿತ್ತಾನಿ ಪಿತಾಮಹ ।
ಭವದ್ಭಿರುಪಲಬ್ಧಾನಿ ಕಥಿತಾನಿ ಚ ಸಂಸದಿ ॥೨೬॥

ಎಲೈ ಪಿತಾಮಹರೇ, ಪೃಥಿವಿಯ ಕ್ಷಯವನ್ನು ಸೂಚಿಸುವ ಅಪಶಕುನಗಳನ್ನು ನೀವು ನೋಡಿದ್ದೀರಿ ಮತ್ತು ಸಭೆಯಲ್ಲಿ ಹೇಳಿದ್ದೀರಿ.

ಪಾಂಡವಾ ವಾಸುದೇವಶ್ಚ ವಿದಿತಾ ಮಮ ಸರ್ವಶಃ ।
ಅಜೇಯಾಃ ಪುರುಷೈರನ್ಯೈರಿತಿ ತಾಂಶ್ಚೋತ್ಸಹಾಮಹೇ ॥೨೭॥

ಪಾಂಡವರನ್ನು ಮತ್ತು ಕೃಷ್ಣನನ್ನು ನಾನು ಎಲ್ಲ ರೀತಿಯಿಂದಲೂ ತಿಳಿದಿದ್ದೇನೆ. ಅವರು ಬೇರೆ ಯಾವ ಪುರುಷರಿಂದಲೂ ಅಜೇಯರು ಎಂದು ತಿಳಿದೂ ಅವರ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸುತ್ತೇನೆ.

ವಿಜಯಿಷ್ಯೇ ರಣೇ ಪಾಂಡೂನಿತಿ ಮೇ ನಿಶ್ಚಿತಂ ಮನಃ ।
ನ ಚೇಚ್ಛಕ್ಯಮವಪ್ತುಂ ವೈರಮೇತತ್ ಸುದಾರುಣಮ್ ।
ಧನಂಜಯೇನ ಯೋತ್ಸ್ಯೇಽಹಂ ಸ್ವಧರ್ಮಪ್ರೀತಿಮಾನಸಃ ॥೨೮॥

ಪಾಂಡವರನ್ನು ಯುದ್ಧದಲ್ಲಿ ಗೆಲ್ಲುವೆನು, ಇದು ನನ್ನ ನಿಶ್ಚಿತವಾದ ಅಭಿಪ್ರಾಯ. ಈ ಘೋರವಾದ ವೈರವನ್ನು ಪರಿತ್ಯಾಗ ಮಾಡುವುದು ಅಶಕ್ಯವಾದರೆ ನಾನು ನನ್ನ ಕ್ಷತ್ರಿಯಧರ್ಮದಲ್ಲಿಯೇ ಪ್ರೀತಿಯುಳ್ಳಮನಸ್ಸಿಂದ ಅರ್ಜುನನ ಜೊತೆಯಲ್ಲಿ ಯುದ್ಧ ಮಾಡುವೆನು.

ಅನುಜಾನೀಷ್ವ ಮಾಂ ತಾತ ಯುದ್ಧೇ ಪ್ರೀತಮನಾಃ ಸದಾ ।
ಅನುಜ್ಞಾತಸ್ತ್ವಯಾ ವೀರ ಯುದ್ಧೇಯಮಿತಿ ಮೇ ಮತಿಃ ॥೨೯॥

ಯುದ್ಧದಲ್ಲಿ ಯಾವಾಗಲೂ ಪ್ರೀತಿಯುಳ್ಳ ತಂದೆಯೇ, ನನಗೆ ಅನುಮತಿಯನ್ನು ನೀಡಿ. ಎಲೈ ವೀರರೇ, ನಿಮ್ಮಿಂದ ಅನುಮತಿಯನ್ನು ಪಡೆದು ಯುದ್ಧವನ್ನು ಮಾಡುವೆನು ಎಂದು ನನ್ನ ಅಭಿಪ್ರಾಯ.

ದುರುಕ್ತಂ ವಿಪ್ರತೀಪಂ ವಾ ಸಂರಂಭಾಚ್ಚಾಪಲಾತ್ ತಥಾ ।
ಯನ್ಮಯಾऽಪಕೃತಂ ಕಿಂಚಿತ್ ತದನುಕ್ಷಂತುಮರ್ಹಸಿ ॥೩೦॥

ನಾನು ಕೋಪದಿಂದ ಅಥವಾ ಚಾಪಲ್ಯದಿಂದ ಯಾವ ಕೆಟ್ಟ ಮಾತುಗಳನ್ನು, ವಿರೋಧ ಮಾತುಗಳನ್ನು ಆಡಿ ಸ್ವಲ್ಪ ಅಪಕಾರವನ್ನು ಮಾಡಿದ್ದೇನೆಯೋ ಅದನ್ನು ನೀವು ಕ್ಷಮಿಸಬೇಕು.

ಭೀಷ್ಮಃ

ನ ಚೇಚ್ಛಕ್ಯಮಧೋತ್ಕ್ಷ್ಟುಂ ವೈರಮೇತತ್ಸುದಾರುಣಮ್ ।
ಅನುಜಾನಾಮಿ ಕರ್ಣ ತ್ವಾಂ ಯುಧ್ಯಸ್ವ ಸ್ವರ್ಗಕಾಮ್ಯಯಾ ॥೩೧॥

ಭೀಷ್ಮ- ಎಲೈ ಕರ್ಣನೇ, ಈ ದಾರುಣವಾದ ವೈರವನ್ನು ಪರಿತ್ಯಾಗ ಮಾಡುವುದು ಅಶಕ್ಯವಾದರೆ ನಿನಗೆ ಅನುಮತಿಯನ್ನು ನೀಡುತ್ತಿದ್ದೇನೆ. ಸ್ವರ್ಗವನ್ನು ಬಯಸಿ ಯುದ್ಧವನ್ನು ಮಾಡು.

ವಿಮನ್ಯುರ್ಗತಸಂರಂಭಃ ಕುರು ಕರ್ಮ ನೃಪಸ್ಯ ಹಿ ।
ಯಥಾಶಕ್ತಿ ಯಥೋತ್ಸಾಹಂ ಸತಾಂ ವೃತ್ತೇಷು ವೃತ್ತವಾನ್ ॥೩೨॥

ಕ್ರೋಧವನ್ನು ತಡೆದು, ನಿನ್ನ ಶಕ್ತಿಗೆ ಮತ್ತು ಉತ್ಸಾಹಕ್ಕೆ ಅನುಗುಣವಾಗಿ ಸಜ್ಜನರ ಮಾರ್ಗದಲ್ಲಿ ನಡೆಯುತ್ತಾ ದುರ್ಯೋಧನನಿಗೆ ಉಪಕಾರವನ್ನು ಮಾಡು.

ಅಹಂ ತ್ವಾಮನುಜಾನಾಮಿ ಯದಿಚ್ಛಸಿ ತದಾಪ್ನುಹಿ ।
ಕ್ಷತ್ರಧರ್ಮಜಿತಾನ್ ಲೋಕಾನ್ ಸಂಪ್ರಾಪ್ಸ್ಯಸಿ ನ ಸಂಶಯಃ ॥೩೩॥

ನಾನು ನಿನಗೆ ಅನುಮತಿಯನ್ನು ನೀಡುತ್ತಿದ್ದೇನೆ. ನೀನು ಏನನ್ನು ಬಯಸುತ್ತೀಯೋ ಅದನ್ನು ಪಡೆಯುವವನಾಗು. ನೀನು ಕ್ಷತ್ರಿಯಧರ್ಮದಿಂದ ಸಂಪಾದಿಸಿದ ಲೋಕಗಳನ್ನು ಹೊಂದುವಿ, ಇದರಲ್ಲಿ ಸಂಶಯವಿಲ್ಲ.

ಯುಧ್ಯಸ್ವ ನಿರಹಂಕಾರೋ ಬಲವೀರ್ಯವ್ಯಪಾಶ್ರಯಃ ।
ಧರ್ಮೋ ಹಿ ಯುದ್ಧಾತ್ ಶ್ರೇಯೋಽನ್ಯತ್ ಕ್ಷತ್ರಿಯಸ್ಯ ನ ವಿದ್ಯತೇ ॥

ಅಹಂಕಾರವನ್ನು ತೊರೆದು, ನಿನ್ನ ಬಲ-ವೀರ್ಯಗಳನ್ನು ಅವಲಂಬಿಸಿ ಯುದ್ಧವನ್ನು ಮಾಡು. ಕ್ಷತ್ರಿಯನಿಗೆ ಯುದ್ಧಕ್ಕಿಂತ ದೊಡ್ಡದಾದ ಶ್ರೇಯಸ್ಕರವಾದ ಧರ್ಮವು ಇನ್ನೊಂದು ಇರುವುದಿಲ್ಲ.

ಪ್ರಶಮೇ ಹಿ ಕೃತೋ ಯತ್ನಃ ಸುಚಿರಾತ್ ಸುಚಿರಂ ಮಯಾ ।
ನ ಚೈವ ಶಕ್ತಿತಃ ಕರ್ತುಂ ಯತೋ ಧರ್ಮಸ್ತತೋ ಜಯಃ ॥೩೫॥

ನಾನು ಬಹಳ ಬಹಳ ಸಮಯದವರೆಗೆ ಸಂಧಿಗಾಗಿ ಪ್ರಯತ್ನವನ್ನು ಮಾಡಿದೆ. ಆದರೆ ಅದು ನನ್ನಿಂದ ಸಾಧ್ಯವಾಗಲಿಲ್ಲ. ಎಲ್ಲಿ ಧರ್ಮವಿದೆಯೋ ಅಲ್ಲಿ ಜಯವಿದೆ.

ಸಂಜಯಃ

ಏವಂ ಬ್ರುವಂತಂ ಗಾಂಗೇಯಮಭಿವಾದ್ಯ ಪ್ರಸಾದ್ಯ ಚ ।
ರಾಧೇಯೋ ರಥಮಾರುಹ್ಯ ಪ್ರಾಯಾತ್ ತವ ಸುತಂ ಪ್ರತಿ ॥೩೬॥

ಹೀಗೆ ಮಾತನಾಡಿದ ಭೀಷ್ಮರನ್ನು ಕರ್ಣನು ನಮಸ್ಕರಿಸಿ, ಪ್ರಸನ್ನಗೊಳಿಸಿ, ರಥವನ್ನೇರಿ ನಿನ್ನ ಪುತ್ರನ ಬಳಿಗೆ ಹೊರಟನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಏಕೋನವಿಂಶಾಧಿಕಶತತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಏಕೋನಾಶೀತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನೂರ ಹತ್ತೊಂಬತ್ತನೆಯ
ಅಧ್ಯಾಯ ಮುಗಿಯಿತು.

॥ಸಮಾಪ್ತಂ ಭೀಷ್ಮವಧಪರ್ವ ॥

॥ ಸಮಾಪ್ತಂ ಭೀಷ್ಮಪರ್ವ ॥

॥ಶ್ರೀಮದ್ಭೀಷ್ಮಾರ್ಪಣಮಸ್ತು ॥

★ ★ ★ ★ ★